1937

8 JAN - 1937

ಓಟುಗಳಿಗೆ ಜಟಾಪಟಿ

[illegible] ಚಂದ್ರ [illegible] ಗಳಲ್ಲಿ [illegible] ಬಂದು ಸೂರಿ [illegible] ಎಂದು [illegible]ಯರಂತೆ [illegible] ಗ [illegible], ಅದರಿಂದ ಎಲ್ಲೆಲ್ಲ ಎಲ್ಲಾ [illegible] ತಮ್ಮದೊಂದು ಭಾಗ [illegible] ಈ [illegible] ನಮ್ಮ ಅವಸ್ಥೆಯು [illegible]ಯುತ್ತಿರುವಾಗ, ನಮ್ಮ ಜಿಲ್ಲೆಯನ್ನು ಅವ ಹಾಸ್ಯಕ್ಕೆ ಗುರಿಮಾಡಿ ಬಳಲುತ್ತಿರುವ ಬಡ ಬಾಂಧವರ ಹೊಟ್ಟೆಗೆ ಮಣ್ಣೆರಚುವ ಸಾಹಸ ದಲ್ಲಿ ತೊಡಗಿರುವ ನಮ್ಮ ಕೆಲ ಉಮೇದ್ವಾರೀ ಬಾಂಧವರ ಮೂರ್ಖತನವನ್ನು ಎಷ್ಟು ನಿಂದಿಸಿ ದರೂ ಸಾಲದಾಗಿದೆ. ಇವರಲ್ಲಿ ಕೆಲವರು ಬಲವಾದ ಬಂಡವಾಳದ ಬೆಂಬಲವಿದ್ದವರು. ಕೆಲವರು ಬಂಡವಾಳವಿದ್ದರೂ, ಅದನ್ನು ಹೊರ ತರಬಯಸದೇ, ಈಗಿನ ಚುನಾವಣೆಯಲ್ಲಿ ಗೆದ್ದು ಅದರಿಂದ ಇನ್ನೂ ಸ್ವಲ್ಪ ಗಂಟನ್ನು ದೊಡ್ಡ ದಾಗಿರಿಸೋಣ—ತಮ್ಮ ಪ್ರೀತಿಯ ಮಕ್ಕಳುಮರಿ ಗಳಿಗಾಗಿ—ಎಂಬ ಈ ಆಶೆ ಕೆಲವರಿಗೆ. ಕಾಂಗ್ರೆಸನ್ನು ಕಂಡರಾಗದವರು, ಈಗ ಅದನ್ನು ಉದ್ಧಾರಮಾಡಲು ಅವತಾರವೆತ್ತಿದವರಂತೆ ಅದರ ಕಡೆ ಸೇರಿ ಹಾಗಾದರೂ ತಮ್ಮ ಹಿತವನ್ನು ಸಾಧಿಸಲು ಪ್ರಯತ್ನಪಡುತ್ತಿರುತ್ತಾರೆ. ಈಗಿನ ಪರಿಸ್ಥಿತಿಯ ಪೈಪೋಟಿಯನ್ನು ನೋಡಿದರೆ ದೇಶ ಸೇವೆಯ ಉತ್ಸಾಹವು ಮಿತಿಮೀರಿದಂತೆ ಕಾಣುತ್ತದೆ. ಆದರೆ ಇವರ ಹೃದಯದ ಆಳವನ್ನೂ, ಇವರು ಮುಂಚೆ ನಮ್ಮ ಜಿಲ್ಲೆಗೆ ಮಾಡಿದ ಅನೇಕಾನೇಕ ಉದ್ಧಾರ ಕಾರ್ಯಗಳನ್ನು (ಅದರ ಸ್ಮರಣೆಯು ಇನ್ನೂ ನಮಗಿದೆ) ಯೋಚಿಸಿದರೆ, "ಸಾಕಪ್ಪಾ, ಇವರು ದೇಶಸೇವೆ ಮಾಡಿ ಬಹಳ ದಣಿದಿರುವರು, ಇವರಿಗೆ ಓಟು ಕೊಟ್ಟು ಇವರನ್ನು ಪುನಃ ದಣಿಸಿ ಸಾಯಿಸುವುದು ಬೇಡ" ಎಂಬ ಕೃತಜ್ಞತಾ ಪೂರ್ವಕವಾದ ಉದ್ಗಾರವು ನಮ್ಮ ಬಾಯಿಂದ ಬರುತ್ತದೆ.

ವಾರೇ ವಾ! ಎಂತಹ ಪಾರ್ಟಿಗಳಿಲ್ಲಾ! ಕಾಫಿ ಪಾರ್ಟಿ; ಟೀ ಪಾರ್ಟಿ; ಅವುಗಳಂತೆ, ಜಸ್ಟಿಸ್ ಪಾರ್ಟಿ, ಕಾಂಗ್ರೆಸ್ ಪಾರ್ಟಿ, ಸಿವಲ್ಸ್ ಪಾರ್ಟಿ, ಸ್ವತಂತ್ರ ಪಾರ್ಟಿಗಳು. ಆ ಮೇಲೆ ಆ ಜಾತಿ ಪಾರ್ಟಿ, ಈ ಜಾತಿ ಪಾರ್ಟಿ, ಮತ್ತೊಂದು ಜಾತಿ ಪಾರ್ಟಿ ಮತ್ತು ವ್ಯಕ್ತಿ ದ್ವೇಷ ಸಾಧನೆ ಪಾರ್ಟಿ, ಎಂಬ ಒಂದು ಪಾರ್ಟಿಯೂ ಇದೆ.

"ಜಸ್ಟಿಸ್ ಪಾರ್ಟಿ" ಎಂದರೆ ನ್ಯಾಯ ದೇವತೆಯ ಭಕ್ತರು. ದೇಶಕ್ಕೆ ನ್ಯಾಯವಾದುದನ್ನೆ ಮಾಡುವವರು, ಚೆನ್ನಾಗಿ ತಿಳಿಯಿರಿ. ಕಾಂಗ್ರೆಸ್ ಪಾರ್ಟಿ ಎಂದರೆ ಪರಮ ದೇಶ ಭಕ್ತರ ಪಂಗಡ. ಕಾಂಗ್ರೆಸ್ ಚಳವಳ ಕಾಲದಲ್ಲಿ ಸರಕಾರಕ್ಕೆ ಜೈಲುಗಳ ಅನಾನುಕೂಲತೆಯನ್ನು ಕಲ್ಪಿಸಲಿಕ್ಕೆ, ಮನೆಯ ಒಳಗೇನೇ ಕೂತುಕೊಂಡವರು. ಗೊತ್ತಾಯಿತೇ? ಮನೆ ಮುಂದೆ ಬಡವರು ಹೋದರೆ 'ಹೊಡೆದೋಡಿಸಿರೊ' ಎನ್ನುವವರು ಆದೂತಿಳಿದಿರಲಿ. ಸಿವಲ್ಸ ಪಾರ್ಟಿ ಎಂದರೆ ತಮ್ಮನ್ನಷ್ಟಕ್ಕೆ ಪ್ರಜೆಗಳ ಪ್ರತಿನಿಧಿಗಳೆಂದು ತಿಳಿದು ಕೆಲಸ ಮಾಡುವ ಪಂಗಡ. 'ಹಣವಿಲ್ಲವೆ ಹೆಣದಿಂದ ಓಟು ಕೊಡಿಸೆವು' ಎಂಬ ಅಭಿಪ್ರಾಯವಿದ್ದಂತೆ ಕಾಣುವ ಪಾರ್ಟಿ ಸ್ವತಂತ್ರ ಪಾರ್ಟಿ. ಈ ವಿಷಯಗಳನ್ನು ನಮ್ಮ ಜಿಲ್ಲೆಯ [illegible]ದರು ತಿಳಿದು ಯುಕ್ತಾಯುಕ್ತವನ್ನು ಯೋಚಿಸಿ ತಮ್ಮ ಓಟನ್ನು ಯಾವ ಪಾರ್ಟಿಗಾಗಲಿ ಕೊಡಬಹುದು.

ಆದರೆ ಪ್ರಿಯ ಬಾಂಧವರೇ ನೀವು ಮಾತ್ರ ಯಾವ ಪಾರ್ಟಿಯ ಸೆಳತಕ್ಕೂ ಬಲಿಬೀಳಬೇಡಿರಿ. ಮೊದಲೇ ನಮಗೆ 'ಪರಂಗಿಯರು ಕುರಿ ಜನರು' ಅನ್ನುತ್ತಾರೆ, ಅದರ ಮೇಲೆ ಈ ಪಾರ್ಟಿಗಳ ಧ್ಯೇಯ [illegible] ತಿಳಿಕೊಳ್ಳದೆ ಅವರು ಪ್ರದರ್ಶಿಸುವ ಆದರಕ್ಕೆ ಮೋಸಹೋಗಿ ಕುರಿ ಎಂಬ ಹೆಸರನ್ನು ಸಾರ್ಥಕ ಮಾಡದಿರಿ. ಯಾವ ಪಾರ್ಟಿಯವರಾದರೇನು, ಯಾವ ಪಂಗಡದವರಾದರೇನು? ಅವರ ಜಾತಿಮತಗಳ್ಯಾವದಾದರೇನು? ನೀವುಗಳು ಓಟು ಕೊಡುವ ಉಮೇದ್ವಾರರನ್ನು ಚೆನ್ನಾಗಿ ತಿಳಿಕೊಳ್ಳಿರಿ. ಅವರ ಪೂರ್ವಾಪರಗಳನ್ನು ವಿಚಾರಿಸಿರಿ. ದೇವರು ನಮಗೆಲ್ಲರಿಗೂ ಶ್ರೇಷ್ಠವಾದ ಬುದ್ಧಿಯನ್ನು ಕೊಟ್ಟಿರುವನಲ್ಲವೆ? ಅದನ್ನು ಸ್ವಲ್ಪ ಖರ್ಚು ಮಾಡಿಕೊಂಡು ನಡೆಯಿರಿ.

ಈಗ ನಾವು ಯೋಚಿಸಬೇಕಾದ್ದೇನು ವಿಚಾರ? ಇಷ್ಟೆ. ನಮ್ಮ ಘನ ಸರಕಾರದವರು, ಹೊಸ ರಾಜಶಾಸನ ಪ್ರಕಾರ ನಮಗೆ ಮತಾಧಿಕಾರ ಮತ್ತು ವೋಟಿನ ಸ್ವಾತಂತ್ರವನ್ನು ಕೊಟ್ಟಿರುವರು. ಅವುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಂಡು, ನಮಗೆ ಮತ್ತು ನಮ್ಮಂತೆ ಅರೆ ಹೊಟ್ಟೆಯಿಂದ ಬಳಲುವ ಮಿಲಿಯಾವಧಿ ಬಾಂಧವರಿಗೆ ಯಾರು ತುಸು ಸಹಾಯಕರಾಗುವರೊ ಅಂಥಾ ಉಮೇದುವಾರರನ್ನೇ ನಾವು ವೋಟು ಕೊಟ್ಟು ಚುನಾಯಿಸಬೇಕಲ್ಲದೆ, ಸಿಳ್ಳಾ ಬಟ್ಟೆ ಚಿಕ್ಕಾಸಿನ ಪ್ರಯೋಜನಕ್ಕೆ ಬೀಳದವರನ್ನು ಚುನಾಯಿಸುವುದಕ್ಕಿಂತಲೂ ಆತ್ಮಹತ್ಯವು ಲೇಸು. ಕಾರಣ ಈಗ ನಾವೇನೊ ಕೆಲ ಪಾರ್ಟಿಯವರು ಆಶೆತೋರಿಸುವ ಒಂದೆರಡು ಬೆಳ್ಳಿ ನಾಣ್ಯಗಳಿಗೆ ಮನಸೋತರೆ ನಾಳೆ ಅವರು ಶಾಸನಸಭಾ ಸದಸ್ಯರಾದ ಮೇಲೆ ಅಲ್ಲಿ ತಮ್ಮ ಸ್ವಾರ್ಥ ಸಾಧನೆ ಮಾಡುವ ಕೆಲ ಕಾರ್ಯಗಳಿಂದ ನಮ್ಮ ಮಕ್ಕಳು ಮರಿಗಳ ಮೇಲೆ ಬರುವ [illegible] ಘೋರ ಸಂಕಷ್ಟವನ್ನು ತಂದೊಡ್ಡಿದಂತಾಗುವುದು? ಅದನ್ನು ಮೊದಲು ತಿಳಿಯಿರಿ.

ಹಾಗಾದರೆ ಉಮೇದುವಾರರ ಯೋಗ್ಯಾಯೋಗ್ಯತೆಗಳನ್ನು ತಿಳಿಕೊಳ್ಳುವ ಬಗೆ ಎಂತು? ಅದು ಬಹಳ ಸುಲಭ. ಈ ಉಮೇದುವಾರರನ್ನು ನಾವು ಬಲ್ಲೆವೇ ಸಾಪ ಸಾಪ ಸಿದವಾಗಿ ಬಲ್ಲೆವು—ಮುಂಚೆ ಜವಾಬುದಾರಿ ಹುದ್ದೆಗಳಲ್ಲಾಗ ಈ ಉಮೇದುವಾರರು ಯಾವ ಶ್ಲಾಘ್ಯವಾದ ಕಾರ್ಯವನ್ನು ಮಾಡಿರುವರು? ನಮ್ಮ ಎಷ್ಟು ಹಳ್ಳಿಗಳಲ್ಲಿ ಇವರು ಉದಾರ ಕಾರ್ಯವನ್ನು ಮಾಡಿರುವರು? ನಮ್ಮ ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿಗೆ ಇವರು ಮಾಡಿದ್ದೇನು? ಎಷ್ಟು ಸಾರ್ವಜನಿಕ ಧರ್ಮ ಕಾರ್ಯಗಳಲ್ಲಿ ಇವರು ಆಸಕ್ತಿಯನ್ನು ತೋರಿದ್ದಾರೆ? ಇವರ ದೇಶ ಭೂಷಣಗಳು ಯಾವ ಧ್ಯೇಯವನ್ನಾದರೂ ತೋರಿಸುವುವು? ನಮ್ಮಗಳ ಸಮಾಜದಲ್ಲಿ ಇವರು ಮಾಡಿದ ಸುಧಾರಣೆಗಳ ಲೆಕ್ಕವಾದರೂ ಇಟ್ಟುಕೊಂಡಿದ್ದಾರೆಯೆ? ದೇಶಸೇವೆಯ ಆದರ್ಶವನ್ನು ಈ ಉಮೇದುವಾರರಲ್ಲಿ ಎಷ್ಟು ಮಂದಿಗಳು ತೋರಿಸಿಕೊಟ್ಟು, ಎಷ್ಟು ತರುಣ ಸಂಘಗಳನ್ನು ನಡೆಸಿರುವರು? ಇವಿಷ್ಟರ ಲೆಕ್ಕ ಮೊದಲು ಬರಲಿ ಆ ಮೇಲೆ ನೋಡೋಣ ವೋಟಿನ ವಿಚಾರ. ಹೀಗೆ ನಾವೆಲ್ಲರೂ ದೃಢನಿರ್ಧಾರಮಾಡಿಕೊಂಡರೆಂದರೆ ಈ ಬಜಾರಿನ ದೇಶಭಕ್ತ ಶಿರೋಮಣಿಗಳ ಬೆಳೆ ಕಾಳು ಹೊರಬೀಳುವುದು. ಇಷ್ಟೆಲ್ಲಾ ಯಾಕೆ? ಮೇಲಿನ ಪ್ರಶ್ನೆಗಳಲ್ಲಿ ಒಂದಕ್ಕಾದರೂ ಜವಾಬು ಕೊಡುವ ಧೈರ್ಯದ ಉಮೇದುವಾರರಿಗೆ 'ತಮಗೇನೇ ಈ ವೋಟು ಕೊಡಿ' ಎಂಬ ಜಾಹೀರಾತು ಯಾಕೆ? ಇವರು ಮಾಡಿದ ದೇಶಸೇವೆಯಿಂದ ಜನರು ಇವರಿಗೆ ಮೆಚ್ಚಿ ಇವರ ಕಾಲಡಿಗೆ ತಂದು ವೋಟನ್ನು ಕೊಡುವುದಿಲ್ಲವೇ? ಜನತೆಯು ಅಂಥವರು ಉಮೇದುವಾರರಾಗಿ ನಿಲ್ಲಲಿಕ್ಕೆ ಮನಸ್ಸಿಲ್ಲದಿದ್ದರೂ ಒತ್ತಾಯದಿಂದಾದರೂ ನಿಲ್ಲಿಸದೆ ಬಿಡಲಿಕ್ಕಿಲ್ಲ. ಇವರೇ ದೇಶ ಸೇವೆಗೆ ಯೋಗ್ಯರು. ಇಂಥವರಿಂದಲೇ ದೇಶಕ್ಕೆ ಕಲ್ಯಾಣವಾಗುತ್ತದೆ ಎಂಬುದು ಜನತೆಗೆ ತಿಳಿಯದೊ? ಜವಾಹರಲಾಲರನ್ನು ಬಲತ್ಕಾರದಿಂದ ರಾಷ್ಟ್ರಪತಿಗಳನ್ನಾಗಿ ಜನರು ಆರಿಸಿದುದೇಕೆ?

ಬಾಂಧವರೇ ವಿವೇಕಿಗಳಾಗಿರಿ. ಬೆಳ್ಳಿ ನಾಣ್ಯಕ್ಕೂ ಬಿಳಿ ಟೋಪಿಗೂ ಮೋಸಹೋಗದಿರಿ. ನಮ್ಮ ಮಕ್ಕಳ ಭಾವಿ ಜನಾಂಗದ, ಹೊಟ್ಟೆಗೆ ನಾವೇ ಕಲ್ಲು ಹಾಕುವ ಸಾಧನೆಯ

(ಎನೇ ಕಲಂನ್ನು ನೋಡಿರಿ.)

ಮೊರಾಟಕ್ಕಿಳಿದ ಮಹಾತ್ಮರು

ಪ್ರಸಿದ್ಧ ವ್ಯಾಪಾರಿಗಳಾದ ಬನಿಯಾ ಪಂಗಡದಲ್ಲಿ ಹುಟ್ಟಿದವರಾದರೂ ಮಹಾತ್ಮರು ಗ್ರಾಮ ಕೈಗಾರಿಕೆ ವಸ್ತುಗಳ ವ್ಯಾಪಾರದಿಂದ ರಾಷ್ಟ್ರೋದ್ಧಾರವನ್ನು ಹೇಗೆ ಮಾಡಬಹುದೆಂದು ಮೊನ್ನೆ ತಿಲಕ ನಗರದಲ್ಲಿ ನಡೆದ ಗ್ರಾಮ ಕೈಗಾರಿಕಾ ಪ್ರದರ್ಶನ ಕಾಲದಲ್ಲಿ ಕೊಟ್ಟ ಒಂದು ಭಾಷಣದಲ್ಲಿ ತಿಳಿಸಿದರು. ಹಳ್ಳಿಗರಿಂದ ತಯಾರಿಸಲ್ಪಟ್ಟ ವಸ್ತುಗಳ ಅಂದವನ್ನು ಅವುಗಳ ಕಲಾಕೌಶಲ್ಯವನ್ನು ತಿಳಿಸಿ ಪ್ರೋತ್ಸಾಹವನ್ನು ಕೋರಿದರು. ಮಹಾತ್ಮರು ಕೊಟ್ಟ ಉಜ್ವಲ ಭಾಷಣದ ಸಾರಾಂಶವು ಹೀಗಿತ್ತು:—ಹಿಂದೂ ದೇಶ ಒಂದು ಬಡತನದ ತವರು ಮನೆ. ನಮ್ಮ ಹಳ್ಳಿಗಳಲ್ಲಿ ದಾರಿದ್ರ್ಯ ದೇವತೆಯು ನೆಲೆಮಾಡಿದ್ದಾಳೆ. ದೊಡ್ಡ ದೊಡ್ಡ ನಗರಗಳಲ್ಲಿನ ಜನರು ಬಡ ಹಳ್ಳಿಗರ ದುಡಿತದಿಂದ ಜೀವಿಸುತ್ತಾರೆಂದರೆ ಅತಿಶಯೋಕ್ತಿಯಾಗಲಾರದು. ಹಳ್ಳಿಗಳ ಈ ಅರೆಹೊಟ್ಟೆ ಮಿಲಿಯಾದಿಗಳನ್ನು ಉದ್ಧರಿಸುವುದು ನಮ್ಮೆಲ್ಲರ ಕರ್ತವ್ಯ. ಅವರಿಗೆ ದಿನ ಕೂಲಿಯವರಿಗೆ ಮೂರಾಣೆ ಸಿಗುವಂತೆ ಮಾಡುವುದೆಂದರೆ ಸ್ವರಾಜ್ಯ ಕೊಡಿಸಿದಂತಾಗುವುದು. ಅಷ್ಟು ಅವರಿಗೆ ದೊರೆತರೆ ಭಾರತಮಾತೆಯೇ ಉದ್ಧಾರವಾಗುತ್ತಾಳೆ. ಆದಕ್ಕಾಗಿ ಗ್ರಾಮ ಕೈಗಾರಿಕೆಗಳನ್ನು ನಾವು ಪ್ರೋತ್ಸಾಹಿಸಬೇಕು. ಇದಕ್ಕೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಇರುವುದಿಲ್ಲ. ಫೈಜಪುರದಂತೆ ಎಲ್ಲಾ ಹಳ್ಳಿಗಳಲ್ಲಿ ಇದೇ ರೀತಿ ನಡೆದು ಬಂದರೆ ಹಳ್ಳಿಗರ ಉದ್ಧಾರವಾಗುವುದು ಖಂಡಿತ (ಒಂದು ಕಬ್ಬಿಣದ ಸಾಮಾನನ್ನು ತೋರಿಸಿ) ಇದು ಇಲ್ಲಿಯೇ ತಯಾರಾದದ್ದು, ಪ್ರೋತ್ಸಾಹ ಸಿಕ್ಕಿದಲ್ಲಿ ಪರದೇಶಿ ಸಾಮಾನುಗಳನ್ನು [illegible] ವಸ್ತುಗಳನ್ನಿಲ್ಲಿ ತಯಾರಿಸಬಹುದು. ಇಂಥಾ ವಸ್ತು ಪ್ರದರ್ಶನಗಳಿಂದ ನಾವುಗಳು ಅನೇಕ ಸಂಗತಿಗಳನ್ನು ಕಲಿಯಬಹುದು. ನಿಮ್ಮಲ್ಲಿ ಯಾರಾದರೂ ಒಂದು 'ಟೂತ್ ಬ್ರಶ್' ಬೇಕೆಂದು ಕೇಳಿದರೆ, ಹಳ್ಳಿಗರು ನಿಮ್ಮನ್ನು ಬೇವಿನ ಕಡ್ಡಿಗಳಿಂದ ಹಲ್ಲು ತಿಕ್ಕುವ ವಿಧಾನವನ್ನು ತಿಳಿಸುವರು. ಇಲ್ಲಿ ಜಾತಿಮತಗಳ ಬೇಧವಿಲ್ಲ. ಮಕ್ಕಳಿಂದ ಮುದುಕರ ವರೆಗೆ ಎಲ್ಲರೂ ಈ ಕೈಗಾರಿಕೆಯಿಂದ ತಮ್ಮ ಜೀವನವನ್ನು ಘನವಾಗಿ ಸಾಗಿಸಬಹುದು. (ಅಕ್ಕಿಯನ್ನು ತೋರಿಸಿ) ಇದು ಯಂತ್ರ ತಯಾರಿಕೆಯಲ್ಲವಾದರೂ ಶುಚಿಯಾಗಿದ್ದು, ದೇಹಕ್ಕೆ ಆರೋಗ್ಯಕರವಾಗಿರುತ್ತದೆ ರಾಷ್ಟ್ರಪತಿಗಳ ಎತ್ತಿನ ರಥದ ಮೆರವಣಿಗೆಯು

ಹಳ್ಳಿಯ ಸರಳ ಜೀವನದ ಒಂದು ಕುರುಹು. ಹಳ್ಳಿಯಲ್ಲಿ ಒಂದು ಕಾಂಗ್ರೆಸ್ ಅಧಿವೇಶನವೆಂದರೆ ಅದೊಂದು ತೀರ್ಥಕ್ಷೇತ್ರದಂತೆ. ಅನಿರೀಕ್ಷಿತವಾಗಿ ಬಂದ ಜನಸಂದಣಿಯು ತಮಗಾದ ಅನಾನುಕೂಲತೆಗಳನ್ನು ಮನ್ನಿಸಬೇಕು. ಯಾಕೆಂದರೆ ಫೈಜಪುರವು ಬರೀ ಒಂದು ಹಳ್ಳಿ. ಹಳ್ಳಿಗಳಲ್ಲಿ ಜಾತಿಮತ ಬೇಧವಿಲ್ಲದೆ, ಬಡ ಬಾಗ್ಯರನ್ನು ಏಕರೀತಿಯಲ್ಲಿ ಎಲ್ಲರನ್ನೂ ಆಧರಿಸುತ್ತಾರೆ. ನಗರಗಳಲ್ಲಿ ಇದಕ್ಕೆ ಲೋಪವಿದೆ. ಕಾಂಗ್ರೆಸ್ ಮುಖಂಡರಿಂದ ಸಮಸ್ತರೂ ಒಂದೇ ರೀತಿಯ ಸಂಕಷ್ಟಗಳನ್ನು ಅನುಭವಿಸಬೇಕು. ಹಳ್ಳಿ ಜೀವನ ಹಾಗಿದೆ. ಹಳ್ಳಿಗಳಲ್ಲಿ ಹಾವುಗಳು ಹೆಚ್ಚೆಂದು ಹಲವರು ಎಚ್ಚರಿಕೆ ಕೊಡುತ್ತಾರೆ. ಆದರೆ ನಾನೂ ನನ್ನ ಬಿಡಾರದವರೂ ನೆಲದ ಮೇಲೆಯೇ ಮಲಗಿದ್ದವಾದರೂ, ನಮಗೇನಾಗಲಿಲ್ಲ. ಇಲ್ಲಿದ್ದ ಎರಡು ಭಾವಿಗಳಿಂದ ನೆರೆದ ಅಗಾಧ ಜನಸ್ತೋಮವು ನೀರಿನ ಅನುಕೂಲತೆಯನ್ನು ಮಾಡಿಕೊಳ್ಳಬೇಕಾದರೂ, ಇಲ್ಲಿಯ ಹವೆಯು ಉತ್ತಮವಾದ್ದು. ಇನ್ನು ಮುಂದಿನ ರಾಷ್ಟ್ರ ಸಭಾಧಿವೇಶನಗಳು ಹಳ್ಳಿಗಳಲ್ಲೆ ಜರಗುವವೆಂದು ನಾನು ನಂಬುತ್ತೇನೆ. ಇದರಿಂದ ಹಳ್ಳಿಗರಿಗೆ ಹೆಚ್ಚು ಅನುಭವ ಬರುವುದು. (ಅಷ್ಟರೊಳಗೆ ಒಬ್ಬರು ಒಂದು ಕಬ್ಬಿಣ ದೀವಿಗೆಯನ್ನು ತಂದು ಮಹಾತ್ಮರ ಕೈಗೆ ಕೊಟ್ಟರು. (ಜ.ನೆಹರುಗಳು ಅದನ್ನು ಉರಿಸಿದರು.) ರಾಷ್ಟ್ರಪತಿಗಳು ಹೆಚ್ಚಿದ ಈ ದಿವ್ಯ ಜ್ಯೋತಿಯು ಅನಂತವೂ ಉರಿಯುತ್ತಿರಲಿ ಎಂದು ತಮ್ಮ ಭಾಷಣವನ್ನು ಪೂರೈಸಿದರು. ಜಯಕಾರಗಳು ದಿಗಂತವನ್ನು ಮುಟ್ಟಿದುವು. ಹಳ್ಳಿಗರ ಉದ್ಧಾರಕ್ಕೆ ಹೊರಟ ಮಹಾತ್ಮನೇ ನಿನ್ನ ಸ್ವದೇಶಾಭಿಮಾನಕ್ಕೆ ಅನಂತ ವಂದನೆಗಳು.

ನಮ್ಮಿಂದಲೇ ನಡೆಯದಿರಲಿ. ಕೃತಕ ಕಾಂಗ್ರೆಸವಾಲರಿಗಾಗಲೀ ತೋರಿಕೆಯ ಜಸ್ಟಿಸ್ ಪಾರ್ಟಿಯವರಿಗಾಗಲೀ, ಗುರಿ ಅರಿಯದ ಸಿವಲ ಪಂಗಡವಾಲರಿಗಾಗಲೀ, ಅಥವಾ ನಿಷ್ಪ್ರಯೋಜಕ ಸ್ವತಂತ್ರ ಪಾರ್ಟಿಗಾಗಲೀ ಎಂದು ನಿಮ್ಮ ಘನವಾದ ವೋಟನ್ನು ಕೊಡಬೇಡಿರಿ.

ಜವಾಹರಲಾಲರಂಥಾ ತ್ಯಾಗಮೂರ್ತಿ ಭಾರತಪುತ್ರರ ಮುಂದಾಳತ್ವದಲ್ಲಿ ಸ್ವಾತಂತ್ರ್ಯ ಮಾರ್ಗವನ್ನು ಹಿಡಿದಿರುವ ಕಾಂಗ್ರೆಸಿನಂಥಾ ಮಹಾ ಜನಪ್ರಿಯ ಸಂಸ್ಥೆಯನ್ನು ಸೇರಿರುವ ಕೆಲ ಉಮೇದುವಾರರೂ ನಮ್ಮ ಜಿಲ್ಲೆಯಲ್ಲಿದ್ದಾರೆ. ಇವರು ಶಾಸನ ಸಭೆಗಳಲ್ಲಿ ಯಾವ ರೀತಿಯಲ್ಲಿ ವರ್ತಿಸಬೇಕೆಂಬುದನ್ನು ಕಾಂಗ್ರೆಸು ಸೂಚಿಸಿರುತ್ತದೆ ಈ ಕಾಂಗ್ರೆಸ್ ಕರ್ತೃಗಳ [illegible] ತಮಗೂ ತಮ್ಮ ಕುಟುಂಬಕ್ಕೂ, ಅಲ್ಲದೆ ದೇಶಕ್ಕೂ ಕಳಂಕವನ್ನು ತಂದೊಡ್ಡಲಾರರೆಂದು ಹಾರೈಕೆಯಾಗಿದೆ. ಜಸ್ಟಿಸ್ ಪಾರ್ಟಿಯವರ ಧ್ಯೇಯಗಳನ್ನು ವಿವರಿಸಬೇಕಾಗಿಲ್ಲ [illegible] ಇವರಿಗೆ ಸ್ವಲ್ಪ ಸಿಟ್ಟು ಬರುತ್ತದೆ ನಾವು ಹಾಗೆ ಅನ್ನದಿರೋಣ. ಇವರಲ್ಲಿ [illegible] ತನದಿಂದ ದೇಶದಲ್ಲಿ, ಜಾತಿಮತ ದ್ವೇಷಗಳು, ಮೇಲು ಕೀಳು ಭಾವನೆಗಳು ಹೆಚ್ಚಿದ್ದು, ನಮ್ಮ ಘನಮಾನ್ಯ ಸರಕಾರದವರಿಗೂ ಇವರಿಂದ ತೊಂದರೆಗಳಾಗಿವೆ. ಕಾರಣ ಸರಕಾರವು ಏನಾದರೂ ಒಳ್ಳೆದು ಮಾಡಲಿಕ್ಕೆ ಹೋದರೆ ಇವರು ಶಾಸನ ಸಭೆಗಳಲ್ಲಿ ಅದಕ್ಕೆ ವಿರುದ್ಧ ನಿಲ್ಲುತ್ತಾರೆ. ಇವರಿಂದಲೇ ಸರಕಾರದವರಿಗೂ, ಕಾಂಗ್ರೆಸಿಗೂ ತಿಳುವಳಿಕೆ ಬೇಧಗಳಾಗಲು ಕಾರಣವಾಯಿತೆಂದು ಹಲವು ವಿಷಯಗಳಿಂದ ಗೊತ್ತಾಗುತ್ತದೆ. ಅದನ್ನು ಇಲ್ಲಿ ವಿವರಿಸಲು ಶಕ್ಯವಿಲ್ಲ. ಅಂತೂ ಕಾಂಗ್ರೆಸ್‌ಗಾಗಿ ತಾಗಿರುವವರು ಹೆಚ್ಚಿನವರು. ಮುಂಚೆ ಯಾರೂ ಮೋಸ ಮಾಡಲಿಲ್ಲವಾದುದರಿಂದ ಯೋಗ್ಯ ಕಾಂಗ್ರೆಸ್ ಉಮೇದುವಾರರಿಗೇನೇ ಈ ಸಮಯದಲ್ಲಿ ಚುನಾಯಿಸುವುದು ಯೋಗ್ಯವೆಂದು ತೋರುತ್ತದೆ. ಯಾಕೆಂದರೆ ಘನ ಸರಕಾರವು ಕ್ರೀಡಾಪ್ರಿಯ (sports-loving) ವಾದುದರಿಂದ ಅದು ಹೇಡಿಗೆಳೆಯನಿಗಿಂತಲೂ (ಜಸ್ಟಿಸ್) ಧೈರ್ಯಶಾಲಿ ಶತ್ರು (ಕಾಂಗ್ರೆಸ್)ವನ್ನು ಮನ್ನಿಸದಿರದು. "(Bold enemy is preferable to a coward friend.)

ಪಥ್ಯ

ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಇನ್ನೊಬ್ಬ ಮುದುಕಿ – ಮಹಾ ಚೋರಿ

ಇಂದಿಗೆ ಎಪ್ಪತ್ತು ವರ್ಷಗಳಿಂದಲೂ ದಿನ ನಿತ್ಯವೂ ಕಳವು ಮಾಡುತ್ತಲಿದ್ದ ೮೨ ವರ್ಷದ ಮುದುಕಿಯನ್ನು ಯುಗೊಸ್ಲೇವಿಯದ ಕಚೆ: ಎಂಬಲ್ಲಿ ಹಿಡಿದಿದ್ದಾರೆ. ಹಳ್ಳಿ ಹೆಂಗಸರ ಹಣದ ಚೀಲವನ್ನು ಹೊಡೆಯುವುದೇ ಇವಳ ಕೆಲಸ– ೩೦೦ ಪದನುಗಳನ್ನು ಇಷ್ಟರ ವರೆಗೆ ಕೀಳಾಸಿರುವಳು. "ಈಗ ಪ್ರಾಯವಾಗಿದೆ. ಕೈಯು ಸರಿಯಾಗಿ ಕೆಲಸ ಮಾಡುವುದಿಲ್ಲ" ಇಷ್ಟೇ ಅವಳ ಮಾತುಗಳು. ಕೈ ಚೆನ್ನಾಗಿರುತ್ತಿದ್ದರೆ ಪೋಲೀಸರಿಗೆ ಅವಳು ಸಿಗುತ್ತಿರಲಿಲ್ಲ.



ಭಯಂಕರ ವಿಷಹಾರಿ!

ಸರ್ಪದ ವಿಷವು ತಕ್ಷಣ ಮರಣವನ್ನುಂಟುಮಾಡುತ್ತದೆ ದೌರ್ಬಲ್ಯವು ಅಷ್ಟೇ ಹಾನಿಕರ ವಾದದ್ದು. ಇದು ಕ್ರಮೇಣ ಮಾನುಷಿಕ ದೇಹ ನಿರ್ಮಾಣವನ್ನು ಸೂರೆಗೈಯ್ಯುತ್ತದೆ ಸರ್ಪ ಕಡಿತಕ್ಕೆ ಯಾವ ಗುಣಕಾರಿಯೂ ಇಲ್ಲ ಆದರೆ ಅದೃಷ್ಟವಶಾತ್ ದೌರ್ಬಲ್ಯತೆಗೆ ಒಂದೇ ಔಷಧ ಇದೆ ಅದೇ

ಅಮೃತ

ಇದು ದೌರ್ಬಲ್ಯತೆಯನ್ನು ಮೈಲಿಗೆಗಳನ್ನು ದೂರಮಾಡಿ, ಉತ್ತಮ ದೇಹಶಕ್ತಿಯನ್ನೂ ಮಾನಸಿಕ ಶಕ್ತಿಯನ್ನೂ ಕೊಡುತ್ತದೆ

ಅಮೃತವು ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುತ್ತದೆ

ತಯಾರಿಸುವವರು- ಕೇಸರಿ ಕುಟೀರ ಎಗ್ಮೋರ್, ಮದರಾಸು

TEST YOUR EYES

By the Electro Ophthalmoscope





All Varities of Frames & Lenses.

AT

The Mangalore Trading Association Ltd

Sight Testing Ophthalmic Opticians,

Car Street, MANGALORE

ನಿಮಗೆ ತಿಳಿದಿರುವುದೇ

ಮಂಜುವಿನ ನೀರನ್ನು ಕುಡಿದರೆ ಕಾಲುಗಳು ಸ್ವಲ್ಪ ಸಣ್ಣದಾಗುತ್ತವಂತೆ ಕಾಫಿಯನ್ನು ಕುಡಿದೊಡನೆ ಅವು ಸ್ವಲ್ಪ ದಪ್ಪವಾಗುತ್ತವಂತೆ.

ಸಯಾಮು ದೇಶದಲ್ಲಿ ವಿಶೇಷ ಜೂಜಾಟವಿದೆ. ಮೀನುಗಳ ಜಗಳ ಒಂದು ಜೂಜಾಟವಾಗಿ ಉಪಯೋಗಿಸುತ್ತಿದ್ದಾರೆ. ಜಗಳವಾಡುವ ಎರಡು ಮೀನುಗಳನ್ನು ಗಾಜಿನ ಪಾತ್ರದಲ್ಲಿರುವ ನೀರಿನಲ್ಲಿ ಹಾಕುವರು. ಅವುಗಳು ಜಗಳವಾಡುತ್ತಿರುವಾಗ ಪಂಥ ಹಾಕುವುದು ಈ ಜೂಜಾಟದ ಕ್ರಮವಂತೆ

ರೇಡಿಯೋ ನಮಗೆ ನವೀನವಾಗಿದ್ದರೂ, ಚಿಟ್ಟೆಹುಳ, ಇತ್ಯಾದಿ ಕೆಲವು ಸಣ್ಣ ಹಾರುವ ಜೀವಿಗಳಿಗೆ ಅದು ಬರೇ ಹಳೆದಂತೆ ಬಹಳ ದೂರವಿರುವ ತನ್ನ ಒಡನಾಡಿಗಳು ಕಳುಹಿಸುವ ವಾರ್ತೆಗಳನ್ನು ತಿಳಿಯುವ ರೇಡಿಯೋ ತರದ ಒಂದು ಇಂದ್ರಿಯವು ಇವುಗಳಲ್ಲಿದೆ.

೮೦ ರಾತ್ತಲು ಭಾರವಿರುವ ಡಬ್ಬಲ್ ತೆಂಗಿನಕಾಯಿಗಳನ್ನು ಕೊಡುವ ಕೋಕೊಡಿಮರ್ ತೆಂಗುವೊಂದು ಅಫ್ರಿಕದ ಹತ್ತಿರವಿರುವ ಮದ್ಗಾಸ್ಕಾರ್ ದ್ವೀಪದ ಹತ್ತಿರವಿರುವ ಸಿಚೆಲೆಸ್ ದ್ವೀಪಗಳಲ್ಲಿದೆ ಎಂದು ತಿಳಿದುಬರುತ್ತದೆ

BEHAR CHEMICAL WORKS, BHAGALPUR.

ಬಿ. ಸಿ ರಸಾಯನಿಕ ವೈದ್ಯಶಾಲೆಯ

ಚ್ಯವನ ಪ್ರಾಸ ಲೇಹ್ಯ.

ದುರ್ಬಲ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ

ನೆಗಡಿ ಕೆಮ್ಮು ಗೂರಲು ಸ್ವರಭಂಗ ಎದೆಯ ನೋವು ಕ್ಷಯ ರೋಗದ ಮೇಲೆ ಈ ದಿವ್ಯೌಷಧಿಯು ವಿಶೇಷವಾಗಿ ಆದರ ಋಷಿಗಳು ಇದರ ಗುಣವನ್ನು ಬಹುಶ್ರೇಷ್ಠವಾಗಿ ಮನ್ನಿಸಿರುವುದರಿಂದಲೂ ... ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಇದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣಕಂಡ ದಾಖಲೆಗಳನ್ನು ಕಳಿಸಿರುವುದರಿಂದಲೂ ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇಬೇಕು

1 ತಿಂಗಳ ಉಪಯೋಗದ ಸೀಸೆ 1ಕ್ಕೆ ರೂ 1 8 0

ಏಜೆಂಟರು — ಷಾ ಕಂಪೆನಿ,

ಗವರ್ನಮೆಂಟ್ ಕೊಲೆಜ್ ಎದುರು

ಮಂಗಳೂರು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ~~ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.~~

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗಿದೆ.

ನಮ್ಮ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿ, ವ್ಯವಹಾರಕುಶಲರಾದ ಯೋಗ್ಯ ಏಜಂಟರು ಬೇಕು!

ಇವರಿಗೆ ಪ್ರತಿ ತಿಂಗಳಿಗೆ 80 ರೂಪಾಯಿಗಳ ವೇತನವು ದೊರೆಯುವುದು.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ— ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಹಾತ್ಮರ ಹಿಂದೂ ಮತತತ್ವಾರ್ಥ

ಹಿಂದೂಸ್ಥಾನದಲ್ಲಿ ಸಂಚಾರಕ್ಕೆ ಬಂದಿದ್ದ ಅಮೇರಿಕನ್ ಮಹಿಳೆಯೊಬ್ಬಳು ಹಿಂದೂ ಮತ ತತ್ವವೇನೆಂದು ಕೇಳಿದಾಗ ಮಹಾತ್ಮರು ಸಂಕ್ಷೇಪವಾಗಿ ಅದನ್ನು ಹೀಗೆ ಹೇಳಿದರು:-

"ಸಕಲ ಚರಾಚರ ಜೀವಿಗಳಿಗೆ ಆಧಾರಭೂತವಾದೊಂದು ಶಕ್ತಿಯಿರುವುದು. ಅದೇ ದೇವರೆನ್ನುತ್ತಾರೆ. ಅದು ಅನಂತವೂ, ನಿರಾಕಾರವೂ, ಸರ್ವಾಕಾರವೂ, ಸಾಮರಸ್ಯವೂ ಆಗಿರುತ್ತದೆ. ಅದನ್ನು ಎರಡೆಂದೆನಿಸದೆ ಏನನ್ನು ಹೆಸರಿಸಿದರೂ ಸಂಬೋಧಿಸಬಹುದು.

ಎಲ್ಲ ಜೀವಿಗಳ ಐಕ್ಯತೆಯೇ ಹಿಂದೂ ಧರ್ಮದ ಮುಖ್ಯ ತತ್ವ. ಜೀವಿಗಳೆಂದರೆ ಮನುಷ್ಯಮಾತ್ರರೆ ಅಲ್ಲ—ಅಣುರೇಣು ತೃಣಕಾಷ್ಠದಲ್ಲಿರುವ ಪ್ರತಿಯೊಂದೂ ಜೀವಾಣುವೆಂದರ್ಥ. ಮನುಷ್ಯನು ಯಾವುದರಿಂದಲೂ ಸೃಷ್ಟಿ ನಿಯಾಮಕನಾಗಲಾರನು. ಆದರೆ ಅವನ ಕ್ರಮವು ಅವನನ್ನು ಸೃಷ್ಟಿಯ ಆರಾಧಕ ಸೇವಕನಾಗಿ ಮಾಡಬಲ್ಲದು ಅಷ್ಟೆ. ಮಾನವನಿಗಾಗಿ ಸಕಲ ಸೃಷ್ಟಿಯ ಇತರ ವಸ್ತುಗಳು ಮಾಡಲ್ಪಟ್ಟಿವೆ ಎಂಬ ಈ ತತ್ವವು ಹಿಂದೂಮತದಲ್ಲಿಲ್ಲ. 'ಸಕಲ ಜೀವಿಗಳ ಒಳಿತಿಗೆ ಮಾಡಬೇಕಾಗುವ ತ್ಯಾಗಕ್ಕೆ ಹಿಂದೂಧರ್ಮದಲ್ಲಿ ಮೇರೆ ಇಲ್ಲ. ಏನನ್ನು ಮಾಡಬಹುದು ಈ ತತ್ವವು ಈಗಿನ ನಾಗರೀಕ ತತ್ವಕ್ಕೆ ಸರಿಯಾಗಿ ವಿರೋಧವಾಗಿದೆ. ಈಗಿನ ನಾಗರೀಕತೆಯು ಮನುಷ್ಯನ ಕೋರಿಕೆಗಳನ್ನು ಹೆಚ್ಚಿಸಬೇಕೆನ್ನುತ್ತದೆ. ಹೆಚ್ಚು ಕೋರಿಕೆ ಎಂದರೆ ದೇವರನ್ನು ತಿಳಿಕೊಳ್ಳುವ ಹೆಚ್ಚಿನ ಜ್ಞಾನ ಕಾತುರತೆಯೆಂತೆ. ಆದರೆ ನಮ್ಮ ಹಿಂದೂ ತತ್ವವು ಅದಕ್ಕೆ ವಿರೋಧ. ಕೋರಿಕೆಗಳು ಒಬ್ಬನನ್ನು ಭೋಗದಲ್ಲಿ ಮುಳುಗಿಸುವುದರಿಂದ ಅವನಿಗೆ ವಿಶ್ವವನ್ನು ತಿಳಿಕೊಳ್ಳುವ ಮತ್ತು ಅದರ ಜೀವಗಳೊಂದಿಗೆ ಕೂಡುವ ಸಂದರ್ಭ ದೊರಕಲಾರದು

ಪಾತಾಳ ದ್ವಾರಿ

ಇಂಗ್ಲೆಂಡಿನಿಂದ ಫ್ರಾನ್ಸಿಗೆ ನೀರಡಿಯಿಂದ ನೆಲಗಳ ಗುಹಾ ಮಾರ್ಗವನ್ನು ರಚಿಸಬೇಕೆಂಬುದರ ಕುರಿತು ಹುಂಬಾಗಿ ಯೋಚನೆಯಾಗಿತ್ತು. ಆದರೆ ಈಗಿನ ಭಯಾನಕ ರಾಜಕೀಯ ವಾತಾವರಣದಲ್ಲಿ ಅಂತಹ ಪಾತಾಳಮಾರ್ಗವು ವಿವೇಕಿಯಲ್ಲವೆಂದು ಲಾರ್ಡ್ ಅರ್ನರು ತಿಳಿಸುತ್ತಾರೆ. ಯುದ್ಧ ಸಮಯದಲ್ಲಿ ಅದನ್ನು ಕಾಯುವುದಕ್ಕೇನೇ ಇಂಗ್ಲೆಂಡಿನ ಹೆಚ್ಚಿನ ಯುದ್ಧ ಹಡಗುಗಳನ್ನು ಇಡಬೇಕಾಗುತ್ತದೆ. ಇದರಿಂದ ರಕ್ಷಣೋಪಾಯಕ್ಕೆ ಕುಂದುಂಟಾಗುತ್ತದೆಂದು ಅವರ ಅಂಬೋಣ.

ಕುದುರೆ ರೋಮಕ್ಕೆ ಬೆಲೆ

ರಷ್ಯದಲ್ಲಿರುವ ಎಲ್ಲಾ ಕುದುರೆಗಳ ರೋಮವನ್ನು ಕತ್ತರಿಸಿ ಒಟ್ಟುಗೂಡಿಸಬೇಕೆಂದೂ ಅದಕ್ಕೆ ತಕ್ಕುದಾದ ಬೆಲೆಯು ಸರಕಾರದಿಂದ ಕೊಡುತ್ತದಾಗಿಯೂ, ರಷ್ಯಾ ಸರಕಾರವು ಅಪ್ಪಣೆ ಹೊರಡಿಸಿದೆ. ಕತ್ತಿನ ಮತ್ತು ಬಾಲದ ಕೂದಲಿಗೂ ಒಳ್ಳೆ ಬೆಲೆ ಸಿಗುವುದಂತೆ. ಕುದುರೆಯನ್ನು ಮಾಲೀಸು ಮಾಡುವಾಗಾಗಲೀ ಅಥವಾ ಕೂದಲು ಕತ್ತರಿಸುವಾಗಾಗಲೀ ಒಂದಿಷ್ಟನ್ನೂ ಹಾಳುಮಾಡಬಾರದಾಗಿಯೂ ಕಟ್ಟಪ್ಪಣೆ ಮಾಡಿದ್ದಾರೆ. ಕುದುರೆಯ ಕೂದಲು ಒಂದು ಒಳ್ಳೆ ಅವಶ್ಯ ಪದಾರ್ಥವಾಗಿದ್ದು ಅನೇಕ ಕೈಗಾರಿಕೆಗಳಲ್ಲಿ ಉಪಯೋಗವಾಗುತ್ತದಂತೆ.

ವಿಶ್ವ ವಸ್ತ್ರಪ್ರದರ್ಶನ

ಇಟೇಲಿಯಲ್ಲಿ ೧೯೩೮ನೇ ಇಸವಿಯಲ್ಲಿ ಏರ್ಪಡಿಸುವುದಾಗಿ ನಿಶ್ಚಿತವಾಗಿರುತ್ತದೆ.

ರಾಷ್ಟ್ರಪತಿಗಳಿಗೆ ಕವಿವರ್ಯರ ಪತ್ರ:

ನಿರ್ಭಾಗ್ಯ ಮಿಲಿಯಾವಧಿ ಭಾರತೀಯರಿಗಾಗಿ ದುಡಿಯಲು ಜವಾಹರಲಾಲರಂಥಾ ಮುಂದಾಳುಗಳನ್ನು ಪಡೆದುದು ಭಾರತ ಮಾತೆಯ ಪುಣ್ಯೋದಯವಾದಂತೆಯೇ ಸರಿ. ಧೈರ್ಯದಿಂದ ಬಾಳುವ ಮತ್ತು ವಿವೇಕದಿಂದ ಯೋಚಿಸುವ ಹಕ್ಕನ್ನು ಅವರು ಸ್ವತಃ ತೋರಿಸಿ ಮಹದುಪಕಾರವನ್ನು ಮಾಡಿರುವರು. ದೇಶದ ಪೂರ್ವ ವಿಧಿಗಾಗಿ ಧೈರ್ಯ ಸ್ಥೈರ್ಯಗಳನ್ನು ಕದಲಿಸದೆ ಸೂರೆಗೆ ಬಲಿಯಾದ ದೇಶಬಾಂಧವರ ಸಂತಾಪದ ಕುರುಹುಳ್ಳ ವಿಜಯ ಪತಾಕೆಯನ್ನು ತನ್ನದೇ ಎಂದು ಕೆಲಸಗೈಯುವ ಆ ಸ್ವದೇಶಾಭಿಮಾನಿಗೆ ನಾನು ದೇಶಬಾಂಧವರೊಂದಿಗೆ ನನ್ನ ಪ್ರೀತಿಪೂರ್ವಕವಾದ ಕಾಣಿಕೆಯನ್ನು ಅರ್ಪಿಸುವೆನು.

ರವೀಂದ್ರನಾಥ ಟಾಗೂರ್

ರಷ್ಯದ ರಕ್ಷಣೆಗಾಗಿ

ಆ ಕಡೆ ಜಪಾನ್ ಜರ್ಮನಿಗಳ ಸಂಧಾನವಾಗುತ್ತಿದ್ದ ಹಾಗೆ ಈ ಕಡೆ ರಷ್ಯವು ತನ್ನ ಗಡಿಗಳನ್ನು ಭದ್ರಪಡಿಸುವ ಏರ್ಪಾಡು ಮಾಡುತ್ತದೆ. ತನ್ನ ಪೂರ್ವ ಪಶ್ಚಿಮ ಗಡಿಗಳಲ್ಲಿ ಎರಡು ಸಹಸ್ರ ಮೈಲುಗಳುದ್ದಕ್ಕೆ ಶತ್ರುಗಳಿಗೆ ಅಭೇದ್ಯವಾದ ಒಂದು ಕೋಟೆಯನ್ನು ಕಟ್ಟಿಸುತ್ತದಂತೆ. ಇದಕ್ಕೆ ಫ್ರಾನ್ಸು ಸಹಾಯಮಾಡುತ್ತದೆ. ನೆಲದಡಿಯಲ್ಲಿ ಭದ್ರವಾಗಿರುವ ಈ ಕೋಟೆಯಲ್ಲಿ ೩ ಮಿಲಿಯ ಸೈನಿಕರಿಗೆ ಸ್ಥಳವಿದ್ದು ಎಲ್ಲಾ ಯುದ್ಧ ಮತ್ತು ಆಹಾರ ಸಾಮಗ್ರಿಗಳನ್ನು ಕೂಡ ಹಾಕಲ್ಪಡುತ್ತವೆ. ಫ್ರಾನ್ಸಿನಲ್ಲಿಯೂ ಇಂಥಾದ್ದೆ ಒಂದು ಕೋಟೆ ಇರುವುದರಿಂದ ಫ್ರೆಂಚ್ ಇಂಜಿನಿಯರರನ್ನು ಫ್ರಾನ್ಸು ಅದರ ನಕಾಶೆಯೊಂದಿಗೆ ರಷ್ಯಕ್ಕೆ ಕಳುಹಿಸಿರುತ್ತದೆ. ಒಂದು ಮಿಲಿಯ ಕೆಲಸಗಾರರು ಐದು ವರ್ಷಗಳ ವರೆಗೆ ದುಡಿಯಬೇಕಾಗಿದೆ

ಶಿಷ್ಯನನ್ನು ಕೊಂದ ಗುರು

(ಬಿಹಾರ ಸರಕಾರದ ಖೂನಿಗಳ ವರದಿಯಿಂದ) ಒಬ್ಬ ಮಾಧ್ಯಮಿಕ ಶಾಲಾ ಮಾಸ್ತರನು ಹುಡುಗರೊಂದಿಗೆ ರೈಲುಪ್ರಯಾಣಗೈಯುತಿದ್ದಾಗ, ಅವನ ದೃಷ್ಟಿಯು ಒಬ್ಬ ಎಳೇ ಹುಡುಗನ ಕಂಠದಲ್ಲಿದ್ದ ಒಂದು ಚೈನ್ ಮೇಲೆ ಬಿತ್ತು. ಬಲಾತ್ಕಾರದಿಂದ ಆ ಹುಡುಗನ ಕೈಗಳನ್ನು ಕಟ್ಟಿ, ಹಾದುಹೋಗುವ ನದಿಯಲ್ಲಿ ಅವನನ್ನು ಬಿಸುಟನಂತೆ. ಯಾರೊ ಪುಣ್ಯಾತ್ಮರು ಹುಡುಗನನ್ನು ರಕ್ಷಿಸಿದರು. ಮಾಸ್ತರನಿಗೆ ಹಿಡಿದರು. ಈಗ ಮಾಸ್ತರನ ಕೈಗಳನ್ನೂ ಕಟ್ಟಿದ್ದಾರೆ

ಜಮೀನ್ದಾರರು ಗುಂಡು ಹಾರಿಸಿದರು

ದರ್ಭಾಂಗದಲ್ಲಿ ಒಬ್ಬ ಜಮೀನುದಾರನಿಗೂ ಆತನ ಒಕ್ಕಲುಗಳಿಗೂ ಜಗಳವಾಗಿ, ಜಮೀನುದಾರನು ಗುಂಡನ್ನು ಹಾರಿಸಿ ಕೆಲವರನ್ನು ಕೊಂದನಂತೆ. ಒಕ್ಕಲಿಗರು ಹುಶಾರಾಗಿರಿ.

ಕಪ್ಪು ಹೋಗಿ ಬಿಳಿ

ವಿಲ್‌ಪಿಕನ್ಸ್ ವ್ಯಾಟ್ ಎಂಬ ೬೮ ವರುಷದ ನಿಗ್ರೊ ಒಬ್ಬನು, ರಾತ್ರಿ ಮಲಗುವಾಗ ಕಪ್ಪಾಗಿಯೇ ಇದ್ದನು. ಆದರೆ ಮರುದಿನ ಬೆಳಗ್ಗೆ ಏಳುವಾಗ ಸಂಪೂರ್ಣ ಬಿಳಿಯಾಗಿದ್ದನು. ಇದೂ ಒಂದು ಆಶ್ಚರ್ಯ. ಆದರೆ ನಿಗ್ರೋಗಳಲ್ಲಿ ಇಂಥಾ ವ್ಯತ್ಯಾಸವು ಆಗಾಗ್ಗೆ ಆಗುತ್ತಿರುತ್ತದೆ. ಅವರು ಬಿಳಿಯಾದ ಚರ್ಮಭಾಗವನ್ನು ಕೆಲವು ಬಣ್ಣಗಳಿಂದ ಲೇಪಿಸಿ ಕಪ್ಪು ಮಾಡುತ್ತಿದ್ದರು. ಆದರೆ ನಾವು ಮೇಲೆ ಹೇಳಿದ ಮುದುಕನು ಹಾಗೆ ಮಾಡಲೊಪ್ಪುವುದಿಲ್ಲ. 'ದೇವರ ಮಹಿಮೆಯು ಎಲ್ಲರಿಗೂ ತಿಳಿಯಲಿ' ಎಂದು ಹೇಳುತ್ತಾನೆ.

(1936) ಗತವರ್ಷದ ಘಟನಾವಳಿಗಳು

ಜನವರಿ

ಅಂಬೇಡ್ಕರರ ಮತಾಂತರ ಗಲಭೆ.

ಇರಾಕ್, ಟರ್ಕಿ, ಇರಾನ್ ರಾಜ್ಯಗಳ ಐಕ್ಯತೆ ಒಪ್ಪಂದ.

ಲಂಡನ್ ನೌಕಾ ಸಮ್ಮೇಲನದಿಂದ ಜಪಾನು ಹಿಂತೆರಳಿತು.

ಪ್ರಸಿದ್ಧ ಆಂಗ್ಲಕವಿ ಎಡ್ವಾರ್ಡ್ ಕಿಪ್ಲಿಂಗರ ಮರಣ.

ಪಂಚಮ ಜಾರ್ಜರ ನಿಧನ.

ಅಷ್ಟಮ ಎಡ್ವಾರ್ಡರ ಪಟ್ಟಾಭಿಷೇಕ.

ಜನಾಂಗ ಸಭೆಯಿಂದ ಅಬಿಸೀನಿಯಾಕ್ಕೆ ಮೋಸ ತೀರ್ಮಾನ

ಫೆಬ್ರವರಿ

ನವರಾಜಶಾಸನ ಪ್ರಚಾರ.

ಸ್ಪೈಯಿನಿನಲ್ಲಿ ವೈಶಮ್ಯಾರಂಭ.

ಜಪಾನಿನಲ್ಲಿ ಮಿಲಿಟರಿ ದಂಗೆ—ರಾಜಮಂತ್ರಿಗಳ ಕೊಲೆ

ಫ್ರಾನ್ಸ್—ರಷ್ಯ ಒಪ್ಪಂದ

ಮಾರ್ಚಿ

ಕಮಲಾ ನೆಹರುಗಳ ನಿಧನ

ಶ್ವೇತಪತ್ರ ಪ್ರಕಟಣೆ—ಇಂಗ್ಲೆಂಡಿನ ಸಮರ ಸಿದ್ಧತೆಗಾರಂಭ

ಜರ್ಮನ್ ಸೈನಿಕರು ತಾವು ಯುದ್ಧದಲ್ಲಿ ಕಳಕೊಂಡ ರ್‍ಯಾನ್ ಪ್ರದೇಶವನ್ನು ಪುನಃ ಹಿಡಿಯುವರು

ಇಂಗ್ಲೆಂಡ್ ಫ್ರಾನ್ಸ್ ಅಮೇರಿಕಗಳೊಳಗೆ ನೌಕಾ ಒಪ್ಪಂದ

ಎಪ್ರಿಲ್

ಲಕ್ನೋ ಕಾಂಗ್ರೆಸ್- ಅಧ್ಯಕ್ಷ ನೆಹರುಗಳು

ಜರ್ಮನಿಯು ಲೊಕೊರ್ನೊ ಒಪ್ಪಂದವನ್ನು ಅದು ಜರ್ಮನಿಗೆ ಸಮಾನತೆಯನ್ನು ಕೊಡುವುದಿಲ್ಲವೆಂದು ನಿರಾಕರಿಸಿತು

ಈಜಿಪ್ತ ಅರಸರಾದ ಫುವಾದ್ ಫೋಡ್‌ರ ಮರಣ

ಮೇ

ಇಟೇಲಿಯಾನರಿಂದ ಅಬಿಸೀನಿಯಾ ಆಕ್ರಮಣ

ಆಸ್ಟ್ರಿಯಾದಲ್ಲಿ ಡಾ। ಶುಚನಿಗರ ಸರ್ವಾಧಿಕಾರ ಸ್ಥಾಪನೆ

ಜೂನ್

ಚೀನಾದಲ್ಲಿ ಅಂತರಕಲಹದ ಕಳವಳ

ಜುಲೈ

ಆಸ್ಟ್ರಿಯಾ ಜರ್ಮನಿಯೊಳಗೆ ಒಪ್ಪಂದ ಆಸ್ಟ್ರಿಯಾವು ಒಂದು ಜರ್ಮನ್ ಸ್ವತಂತ್ರ ರಾಷ್ಟ್ರವಾಗಿ ಸಾರಲ್ಪಟ್ಟಿತು

ಸ್ಪೈಯಿನಿನಲ್ಲಿ ದಂಗೆಯ ಕುರುಹುಗಳು ಮೊರೊಕ್ಕೊದಲ್ಲಿ ದಂಗೆ

ಆಗೋಸ್ತು

ಹಿಂದೂಸ್ಥಾನದಲ್ಲಿ ನೆರೆಹಾವಳಿ.

ರಷ್ಯ ಜರ್ಮನಿಯಲ್ಲಿ ಸಮರ ಸಿದ್ಧತೆ.

ಆಂಗ್ಲ ಈಜಿಪ್ತ ಒಪ್ಪಂದ ಸಹಿ.

ಸಪ್ಟಂಬರ

ರಾಷ್ಟ್ರಪತಿಗಳ ಸಂಚಾರ

ನಾಣ್ಯ ಬೆಲೆ ವ್ಯತ್ಯಾಸ ಪ್ರಕರಣ ಟರ್ಕಿಯ ಅನುಸರಣೆ.

ಅಷ್ಟಮ ಎಡ್ವರ್ಡರು ಯೂರೋಪಿನ ಪ್ರವಾಸದಿಂದ ಹಿಂತಿರುಗಿದರು.

ಒಕ್ಟೋಬರ

ಮಹಾತ್ಮರ ಜನ್ಮದಿನ. ಖಾದಿಪ್ರಚಾರ

ಬೊಂಬಾಯಿಯಲ್ಲಿ ಹಿಂದೂ ಮುಸ್ಲಿಂ ಗಲಾಟೆ.

ಅರಬರ ದಂಗೆ ಶಾಂತಿ—ಬೆಲ್ಜಿಯಮ್ಮಿನ ತಟಸ್ಥ ಧೋರಣೆ ಯೂರೋಪನ್ನು ಹೆದರಿಸಿತು

ಇರಾಕಿನಲ್ಲಿ ನವರಾಜ್ಯಾಂಗ ಮಂಡಳಿ.

ನವೆಂಬರ

ಎಂ. ಎನ್. ರಾಯರ ಬಿಡುಗಡೆ.

ಅಧ್ಯಕ್ಷ ರೂಸವೆಲ್ಟರ ಪುನಃಚುನಾವಣೆ

ದಿಸೆಂಬರ್

ಫೈಜಪುರ್ ಕಾಂಗ್ರೆಸ್—ಪಂಡಿತ ಜವಾಹರಲಾಲ ನೆಹರುಗಳು ಮೂರನೇ ಸಲಕ್ಕೆ

ಅಷ್ಟಮ ಎಡ್ವರ್ಡರ ಪಟ್ಟ ಪರಿತ್ಯಾಗ

ಷಷ್ಠಮ ಜಾರ್ಜರ ಸಿಂಹಾಸನಾರೋಹಣ.

ಚೀನಾ ಜಪಾನ್ ವೈಶಮ್ಯ ಬೆಳವಣಿಗೆ

ಮಾತಾಡುವ ರೋಗ

ದೇಹದೊಳಗಿನ ಕೆಲವು ನ್ಯೂನತೆಗಳಿಂದ ಬಿಡುವಿಲ್ಲದೆ ಮಾತಾಡುವ ರೋಗವೊಂದು ಉಂಟಾಗುತ್ತದೆ. ಮೆಂಫಿಸ್ ನಗರದ ಎಮಿ ವಿಲ್ಸನ್ ಎಂಬೊಬ್ಬ ೮ ವರ್ಷದ ಮಗುವಿಗೆ ಆ ರೋಗವು ಪ್ರಾರಂಭವಾಗಿದೆ. ಇಂದಿಗೆ ೩ ವಾರಗಳಿಂದ ಆತನು ಒಂದು ಕ್ಷಣವೂ ಬಿಡದೆ ಮಾತನ್ನಾಡುತ್ತಿರುವನು. ಮಾತಿನ ವಿಚಾರ ಇಂಥದ್ದೆ ಅಂತ ಇಲ್ಲ. ಅವನಿಗೆ ಗೊತ್ತಿದ್ದ ಎಲ್ಲಾ ವಿಚಾರವನ್ನು ಮಾತಾಡುವನು. ಗಟ್ಟಿಮುಟ್ಟಾಗಿದ್ದ ಆ ಮಗುವೀಗ ಬರೀ ೨೦ ರಾತ್ತಲಿಗೆ ಬಂದಿರುತ್ತದೆ. ಇನ್ನು ಅವನು ಮಾತಿನಿಂದಲೇ ಸಾಯುತ್ತಾನೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರು

ಸಾಯುವಾಗ ಪ್ರಣಯ—ಖೂನಿ

ಯುಗೋಸ್ಲೊವಿಯಾದ ಬ್ರಿಲ್ಕೊ ಎಂಬ ಹಳ್ಳಿಯಲ್ಲಿ ಮಾರ್ಟಿನ್ ಚಿಟ್ಕ್ ಎಂಬ ೬೮ ವರ್ಷದ ಮುದುಕ. ಅವನ ೫೫ ವರುಷದ ಹೆಂಡತಿಯು ಆತನೊಡನೆ ಜಗಳವಾಡಿ ಅವನನ್ನು ಬಿಟ್ಟು ಗಿಸ್ಕಿರಾ ಡಿಲಿತ್ರಮೊವಿಚ್ ಎಂಬ ಓರ್ವ ಬಾಲಬ್ರಹ್ಮಚಾರಿಯನ್ನು ಸೇರಿದಳು. ೪೦ ವರ್ಷದಿಂದ ಇವರೊಳಗೆ ಸ್ನೇಹವಿತ್ತು. ಇದು ಗಂಡನಿಗೆ ತಿಳಿಯಿತು—ಬ್ರಹ್ಮಚಾರಿಗೂ ಸಂಸಾರಿಗೂ ಜಗಳ ಹತ್ತಿತು. ರೇಗಿದ ಬ್ರಹ್ಮಚಾರಿಯು ಕೊಡಲಿಯಿಂದ ತನ್ನ ಸ್ನೇಹಿತಳ ಗಂಡನನ್ನು ಕೊಂದನು. ಏನು ಮುದುಕರಬುದ್ಧಿಗಳ ಸೊಕ್ಕು.

ವಾಶಿಂಗ್ಟನ್ನಿನ ೬೭ ವರ್ಷ ಪ್ರಾಯದ ಮುದುಕನೊಬ್ಬನು ೬೦ ಅಡಿಯ ಒಂದು ನಾವೆಯನ್ನು ಕಟ್ಟುತ್ತಲಿರುವನು. ದೇವತೆಗಳು, ಅವನಿಗೆ ೧೯೩೭ರಲ್ಲಿ ಜಲಪ್ರಳಯವಾಗುವುದೆಂದು ಕನಸಿನಲ್ಲಿ ತಿಳಿಸಿರುವರಂತೆ. ಅವನ ಈಗ ಅದಕ್ಕೆ ಸಿದ್ಧಪಡಿಸಿಕೊಳ್ಳುತ್ತಾನೆ. ಜಲಪ್ರಳಯದ ಮೇಲೂ ಬದುಕುವ ಯೋಚನೆ

ಶೋಧ

ಪಾಟ್ನದ ಹತ್ತಿರ ಮೌರ್ಯ ಸಾಮ್ರಾಜ್ಯ ಕಾಲದಲ್ಲಿ ಕಟ್ಟಿದ ಸಿಹಿ ನೀರಿನ ಬಾವಿಗಳನ್ನು ಕಂಡುಹಿಡಿದಿದ್ದಾರೆ

ಕಸಕ್ಕೆ ಕಾಸು

'ಕ್ರಿಶ್ಚಿಯನ್ ಸಾಯನ್ಸ್ ಮೊನಿಟರ್' ಪತ್ರಿಕೆಯಲ್ಲಿ ಬರೆಯುತ್ತಾ ಡಾ। ಗಿಲ್ಬರ್ಟ್ ಜೆ. ಫೌಲರ್‌ರವರು ಮಹಾತ್ಮಾ ಗಾಂಧಿಯವರನ್ನು ಬಹಳ ಶ್ಲಾಘಿಸಿರುವರು. 'ಅವರ ರಾಜಕೀಯ ವಿಚಾರವು ಹೇಗೆ ಇರಲಿ ಅವರು ಕೈಕೊಂಡ ಗ್ರಾಮ ಪುನರುದ್ಧಾರ ಕಾರ್ಯವು ಬಹಳ ಸ್ತುತ್ಯವಾದುದು. ಚೀನಾ ಜಪಾನುಗಳಲ್ಲಿ ಒಂದು ಚೂರು ಕಸವನ್ನಾದರೂ ಉಪಯೋಗಿಸದೆ ಬಿಡುವುದಿಲ್ಲ. ಬಹಳ ಬಡ ಹಳ್ಳಿಗಳ ನಾಡಾದ ಹಿಂದೂ ದೇಶದಲ್ಲಿನ 700,000 ಹಳ್ಳಿಗಳಲ್ಲಿ ಜನರು ಬಹಳ ಕೀಳಾವಸ್ಥೆಯಲ್ಲಿದ್ದಾರೆ. ಕೆಲಸಕ್ಕೆ ಬಾರದ ಕೆಲ ರಾಜರುಗಳೂ, ದೊಡ್ಡ ದೊಡ್ಡ ವ್ಯಾಪಾರಿಗಳೂ ಕೆಲವರಿದ್ದಾರೆ. ಆದರೆ ಏನೂ ಪ್ರಯೋಜನವಿಲ್ಲ. ಅದರಿಂದ ಮಹಾತ್ಮರು ಇಂಥಾ ಹಳ್ಳಿಗರಿಗೆ ವಸ್ತುಗಳ ಉಪಯೋಗವನ್ನು ಸರಿಯಾಗಿ ತಿಳಿಸಿ ಅವುಗಳ ಸದುಪಯೋಗವನ್ನು ಮಾಡು

THE
Northern India Insurance Co., Ltd., Lahore.

Wanted ambitious and influential young men in all Districts of Karnataka Province wishing to enter the Insurance profession to accept our representation and undergo necessary training. Qualified Agent will have opportunities of occupying higher posts.

Apply to:—
T. H. RAGHAVENDRA RAO,
Secretary, Madras Branch.
Triplicane, MADRAS.

ಡಾಕ್ಟರ ವಾಮನ ಗೋಪಾಳರವರ



ಬಿಓಡಾಯಿನ್ಲ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ
೫೫ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟೋಕಿಸ್ಟು—ಶಾ ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯ.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

೫ ಅಂಕಗಳ್ಳುಳ್ಳ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ.

ಬರೆದವರು:—ಶ್ರೀ ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.
ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—
"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನೀಶ್ವರಾ।" ॥
ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣಿರಿ! ಮರಾಟಿ ಬಾಲನ ಮನೋಹರವಾದ ೩೫ ಗೀತಗಳವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣಿರಿ! ಬೆಲೆ—೧೨ ಆಣೆ.
ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯಾಡ್ ಪಬ್ಲಿಷಿಂಗ್ ಹೌಸ್, ಸ್ಟೇಶನ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೭ನೆಯ ಧಾತು ಸಂವತ್ಸರದ ಮಾರ್ಗಶಿರ ಬ॥೧೨, ಶನಿವಾರದಿಂದ ಪುಷ್ಯ ಶು॥ ೩ ಶುಕ್ರವಾರದ ವರೆಗಿನ ಪಂಚಾಂಗ.(೧೯೩೬ನೇಯ ವೃಶ್ಚಿಕ ಪೆರಾರ್ದ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
9	ಶನಿ	೧೨	೩೩	ಅ.ರಾಧ	೧೭	೨೫	
10	ರವಿ	೧೩	೩೬	ಜ್ಯೇಷ್ಠ	೨೫	೨೬	
11	ಸೋ.	೧೪	೪೦	ಮೂಲ	೨೬	೨೭	ಅಮಾವಾಸ್ಯೆ
12	ಕುಜ	೩೦	೪೧	ಪೂ.ಷಾಢ	೨೯	೨೮	
13	ಬುಧ*	೧	೪೧	ಉ.ಷಾಢ	೩೧	೨೯	
14	ಗುರು	೨	೪೦	ಶ್ರವಣ	೩೨	೧	
15	ಶುಕ್ರ	೩	೩೮	ಧನಿಷ್ಠ	೩೧	೨	

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 6	3—10
ಮುಷ್ಟಿ ...	3— 4	4— 4
ಗುಡ್ಡ ಸುಗ್ಗಿ ...	3—10	3—14
ಊರ ಅಪ್ಪಲ್ ಬೆಳ್ತಿಗೆ ...	4— 4	4—12
ರಂಗೂನು ಬೆ. ಗೋ. ಗಳ್ಳಿ ...	6— 2	7— 0
ಎಲ್ಲೂರು ಬೆ. ಮು. ಗಳ್ಳಿ ...	4— 6	4— 2
ಗೋಧಿ ಗೋಣಿ ಗಳ್ಳಿ ...	10— 0	11— 0
ತೊಗರಿ ಗೋಣಿ ಗಳ್ಳಿ ...	9—0	9— 8
ಹುರುಳಿ ಗೋಣಿ ಗಳ್ಳಿ ...	5— 0	5— 2
ಕಡಲೆ ಗೋಣಿ ಗಳ್ಳಿ ...	7—10	9— 0
ತೊಗರಿಬೇಳೆ ಗೋಣಿಗಳ್ಳಿ ...	11— 0	19— 0
ಉದ್ದು ಗೋಣಿ ಗಳ್ಳಿ ...	9— 0	3— 8
ಹೆಸರು ಗೋಣಿ ಗಳ್ಳಿ ...	6—12	7— 0
ಊರುಬೆಲ್ಲ ಖಂಡಿ ಗಳ್ಳಿ ...	30— 0	32— 8
ಉಪ್ಪು ಗೋಣಿ ಗಳ್ಳಿ ...	4— 4	4—12
ಕೊಬ್ರಿ ಖಂಡಿ ಗಳ್ಳಿ ...	75— 0	84— 0
ಕೊಬ್ರಿ ಹಿಂಡಿ ಖಂಡಿ ಗಳ್ಳಿ ...	30— 0	30— 8
ಎಳ್ಳಿಂಡಿ ಖಂಡಿ ಗಳ್ಳಿ ...	25— 0	26— 4
ಕೊಬ್ರಿ ಎಣ್ಣೆ ಮುಡಿ ಗಳ್ಳಿ ...	5— 0	5—12
ಎಳ್ಳೆಣ್ಣೆ ಮುಡಿ ಗಳ್ಳಿ ...	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳಿ ...	6— 5	7— 5
ಮೋರಿಸ ಸಕ್ಕರೆ ಮು. ಗಳ್ಳಿ ...	3— 2	3— 4
ಮೆಣಸು ...	2— 8	4— 8
ಸಾಸಿವೆ ಮುಡಿ ಗಳ್ಳಿ ...	5— 4	6— 0
ಕಾಳುಮೆಣಸು ಖ. ಗಳ್ಳಿ ...	100— 0	120— 0
ಮೇಲಕ್ಕಿ ಬೀಜ ಮಣಗಳ್ಳಿ ...	70— 0	75— 0
ಗೇರುಬೀಜ ಮು. ಗಳ್ಳಿ ...	3— 0	3— 8
ಕಬ್ಬಿಣ ಖಂಡಿ ಗಳ್ಳಿ ...	35— 0	37— 8
ತಾಂಬ್ರ ತಗಡು ಮ. ಗಳ್ಳಿ ...	12— 4	12— 8
ತಾಂಬ್ರ ಪಾತ್ರಗಳು ಮ. ಗಳ್ಳಿ	12— 8	14— 0
ಟೀಕಬೆಳ್ಳಿ ಸೇರು ಗಳ್ಳಿ ...	13— 8	15— 0
ಹಿತ್ತಾಳೆ ತಗಡು ಮ. ಗಳ್ಳಿ ...	10— 0	10— 8
ತವರು ಗಳ್ಳಿ ...	22— 7	22— 8
ಹುಣಸೆ ಹುಳಿ ಖಂಡಿ ಗಳ್ಳಿ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳಿ	145— 0	150— 0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳಿ ...	175— 0	195— 0
ಮಡಿಕೇರಿ ಏಲಕ್ಕಿ ...	50— 0	55—

Break Chill

Take To-Night
Prepared by a Sage out of Amber Saffron Gold Musk with Himalayan Drugs restore lost energy Strength Nervous Debility and all Disorders in Spinal Cord. Regains lost vitality Gives marvellous effect. 60 Pills Rs. 5. Sample 30 Pills Rs. 3. List Free.
Dr. A. S. MURTHI, CHICACOLE.

ಹೊಟ್ಟೆನೋವಿನಿಂದ ಬಳಲುತ್ತಿದ್ದವನು ಇತರರಿಗೆ ಹೇಳುವ ಜಾಗ್ರತೆ!

ಈ ಮೆಕ್ ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಅಪೂರ್ವ ಗುಣಗಳನ್ನು ಕಂಡು ಬಜಾರಿನಲ್ಲಿ ಈ ಹೆಸರಿನ ನಾನಾ ನಮೂನೆಯ ಮದ್ದನ್ನು ಹೊಟ್ಟೆನೋವಿಗಾಗಿ ಕೊಡುತ್ತಾರೆ. ನಿಜವಾದ ಮೆಕ್ ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಿ ಗುಣಲಾಭ ಪಡೆದ ಮಹನೀಯರು ಇತರ ಬಂಧುಗಳಿಗೆ-ಬೇರೆಯವರ ಮೋಸದ ಹಾಸಿಗೆ ಬಲಿಬೀಳದಂತೆ ಜಾಗ್ರತೆಂತಾಗಿರಿಸುವುದು ಅವರ ಕರ್ತವ್ಯವೇ ಸರಿ. ಮಿ॥ ಎಫ್. ಎಸ್. ಎಲ್. ಎಂಬಾತನು ಹೇಳಿದ ಮಾತುಗಳನ್ನು ಆಲೋಚಿಸಿರಿ. ನೂರು ವರುಷಗಳ ತನಕ ಈ ಉದರವೇದನೆಯಿಂದ ಬಳಲಿ ಕಡೆಗೆ ಈ ಪೌಡರಿನ ಸೇವನೆಯಿಂದಾಗಿ ಪೂರ್ತಿ ಗುಣಹೊಂದಿದನು. ಆದರೆ ದೇಶದಲ್ಲೆಲ್ಲಾ ಈ ಪೌಡರಿನ ಹೆಸರಿನಲ್ಲಿ ಬೇರೆ ಪೌಡರುಗಳನ್ನು ಮಾರಲು ಹಲವು ಕಂಪೆನಿಗಳು ತೊಡಗಿವೆ. ಆದುದರಿಂದ ನನ್ನ ವಿಶ್ವಾಸವೆಂದರೆ ನೀವೂ ಅಂತಹ ಮೋಸಗಳಿಗೊಳಗಾಗದೆ ಖಾತ್ರಿ ಮದ್ದುಗಳನ್ನು ಪಡೆಯಲು ಪ್ರಯತ್ನಿಸಿರಿ.

ಮೆಕ್ ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಂತಹ ಖಾತ್ರಿಯಾಗಿ ಗುಣವನ್ನುಂಟುಮಾಡುವಂತಹ ಔಷಧಿಯಿರುವಾಗ ನೀವು ಅನಾವಶ್ಯಕವಾಗಿ ಬೇರೆ ಔಷಧಿಗಳನ್ನು ಸೇವಿಸಿ ರೋಗವನ್ನು ಇನ್ನೂ ಹೆಚ್ಚಾಗಬಿಡುವುದು ಲೇಸಲ್ಲ. ದೇಹದ ಸುಖವೇ ಆರೋಗ್ಯ. ತದ್ದರಿಂದ ಸದಾವಾಗಲೂ ಸುಖದಿಂದಿರಲು ಇದನ್ನು ಸೇವಿಸಲು ಮರೆಯದಿರಿ. ಮಾತೇಯರ ಮೋಸಕ್ಕೆ ತುತ್ತಾಗದಂತೆ ಜಾಗ್ರತೆಯಾಗಲೂ ಇರುವುದು

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ. ಇಂತಹ ನಮೂನೆಯು ಕಡಿಮೆ ದರದ ಪರಕೀಯ ಡಬ್ಬಲನ್ನು ಪಡೆದು ಮೋಸಹೋಗಬೇಡಿ. ಇದು ಬಿಡಿಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಡಬ್ಬಿಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವಿಕೆ ಕಷ್ಟವಿರುವುದಾದರೆ—
ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
೧೫ ಕೊಂಕಣ್ವಾದಮ ಚೆಟ್ಟಿ ಸ್ಟ್ರೀಟ್, ಮದ್ರಾಸು,
ಇಲ್ಲಿಗೆ ಬರೆಯಿರಿ



ಮದನಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡೀಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ವಶೀಕರಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕಡೆತನಕ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1

ಇದರ ಸಂಗಡ ೧೨ ಪ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 237 ಮದರಾಸ್.

THE COMMON WEALTH ASSURANCE CO., LTD.,
POONA.
CHAIRMAN: Mr. N. C. KELKAR.

On Endowment	Triennial Bonus in	On Whole Life
Rs. 37—8—0 per Thousand	2nd VALUATION	Rs. 45 per Thousand

(1) Low Premium Rates! *(2) Permanent Disability!*
(3) Double Indemnity! *(4) Extended Assurance Benefit.*
(5) HOUSE PURCHASE SCHEME FOR POLICY HOLDERS are the special features
Liberal first year and hereditary renewal commissions for its representatives
Wanted Agents to represent South Kanara.

For further particulars please apply to:-
Messrs GAVANKER & SONS,
CHICKPET, BANGALORE CITY.
Chief Agents for—MYSORE STATE, COORG, SOUTH KANARA AND CEDED DISTRICTS.

ಅಖಿಲಭಾರತದ ಕೆಥೋಲಿಕ ಪರಿಷತ್ತು

ಸಾಮಾಜಿಕ ವ್ಯವಸ್ಥೆಯು ನ್ಯಾಯಸಮ್ಮತವಾಗುವಂತೆ ಕೆಥೋಲಿಕರು ಸಮಾಜವಾದಿಗಳಾಗಬೇಕೆಂಬ ಖಂಡಿತ ನಿರ್ಣಯ

ಕೊಂಗ್ರೆಸ್ ಪಕ್ಷವು ಕೆಥೊಲಿಕರ ಬಲವನ್ನು ಸಂಪಾದಿಸಿಯದೆ.

ಅಖಿಲಭಾರತದ ಕೆಥೋಲಿಕ ಪರಿಷತ್ತಿನ ಐದನೆಯ ಅಧಿವೇಶನವು ತ್ರಿಚೂರಿನಲ್ಲಿ ಸೇರಿ, ಬಹಳ ವಿಜೃಂಭಣೆಯಿಂದ ಜರಗಿ ಯಶಸ್ಸನ್ನು ಸಂಪಾದಿಸಿತು. ಶ್ರೀ| ಜೆ. ಬಿ. ಎಸ್. ಗಿಲಾನಿಯವರು ಅಧ್ಯಕ್ಷರಾಗಿದ್ದರು. ಮಂಗಳೂರಿನ ಪ್ರೊಫೆಸರ್ ಸಾರ್ಕಿಯವರು ಅವರೊಡನೆ ಅಲ್ಲಹಾಬಾದಿನಿಂದ ತ್ರಿಚೂರಿಗೆ ಬಂದಿದ್ದರು.

'ಸುತ್ತಲೂ ಕರ್ಕಶವಾಗಿ ಒಂದಕ್ಕೊಂದು ವಿರುದ್ಧವಾದ ಕೂಗುಗಳು ಕೇಳಿಸಲ್ಪಡುವಾಗ, ಕೆಥೊಲಿಕ ಮತ್ತು ಕ್ರೈಸ್ತ ಧರ್ಮಗಳಿಗೆ ಅನುಸಾರವಾಗಿ ವಿವೇಕದ ಮತ್ತು ಸಕಾರಣವಾದ ಮಾತುಗಳಿಂದ ನಮ್ಮ ಸಹಧರ್ಮಿಗಳಿಗೆಲ್ಲ ವಿನಯದಿಂದ ಒತ್ತಿಹೇಳುತ್ತ ಅವರನ್ನು ನಿಜ ಹಾದಿಗೆ ತರುವ ಸಾಮಾಜಿಕ ಕರ್ತವ್ಯವು ನಮ್ಮನ್ನು ಹೊಂದಿದೆ' ಎಂದು ತ್ರಿಚೂರಿನ ಬಿಷಪರು ಭಾಷಣದಲ್ಲಿ ಹೇಳಿ, ಸಭಾರಂಭವನ್ನು ಮಾಡಿದರು.

ಭಾರತದ ಎಲ್ಲ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ನೆರೆದಿದ್ದ ಈ ಸಭೆಯಲ್ಲಿ ಅಧ್ಯಕ್ಷರು ಮಾಡಿದ ಭಾಷಣವು ಅತ್ಯಪೂರ್ವ ತರಗತಿಯದಾಗಿದ್ದಿತು, ಅದರ ಸಾರಾಂಶ:—

ಕೆಥೊಲಿಕರು ಸ್ವಧರ್ಮವಿಚಾರಗಳಂತೆ ವರ್ತಿಸಲು ಹಿಂದೆಗೆದಾಗಲಿಲ್ಲ, ಧೈರ್ಯದಿಂದ ಸತ್ಯಮಾರ್ಗವನ್ನು ಹೇಳುವ ಮುಖಂಡರು ತಮ್ಮ ಕರ್ತವ್ಯದಲ್ಲಿ ತಪ್ಪಿದರೆ, ಅವರ ಲೋಪದೋಷಗಳ ದೆಸೆಯಿಂದ ಆಗುವ ದುಸ್ಥಿತಿಯನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈಗ ಉಂಟಾಗಿರುವ ಅವ್ಯವಸ್ಥೆಯಿಂದ ತಿಳಿದುಕೊಳ್ಳಬಹುದು ಗುರುಗಳಿಗೂ ಇತರರಿಗೂ ವೈಮನಸ್ಸು ಉಂಟಾಗಿರುವಲ್ಲಿ ಸಮಾಜಧರ್ಮವು ನ್ಯಾಯತಪ್ಪಿ ಹೋಗಿರುವುದು. ಇದಕ್ಕಾಗಿ ಸಾಮಾಜಿಕ ಜಾಗೃತಿಯನ್ನು ಉಂಟುಮಾಡಲು ಕೆಲ ಪ್ರವೀಣರನ್ನು ಅಗತ್ಯವಾಗಿಯೂ ತರಬೇತು ಮಾಡಬೇಕಾಗಿದೆ ಕ್ರೈಸ್ತರ ಮುಖ್ಯ ಕರ್ತವ್ಯವು, ಕಠಿನ ಹೋರಾಟದಲಿ ನ್ಯಾಯ ಸಾಧನೆಗಾಗಿ ಮುಂದೆ ಬರುವುದೇ ಆಗಿದೆ ಎಂದು ಪೋಪ ಸ್ವಾಮಿಯವರು ಅಪ್ಪಣೆಕೊಟ್ಟಿರುವರು ತ್ರಿವಾಂಕೂರು ಮಹಾರಾಜರು ಸಮಸ್ತ ಹಿಂದುಗಳಿಗೆ ಏಕಪ್ರಕಾರವಾಗಿ ಆರಾಧನಾಧಿಕಾರವನ್ನು ಕೊಟ್ಟಿರುವುದು ಹಿಂದೂ ಸಮಾಜದಲ್ಲಿ ನ್ಯಾಯವನ್ನು ಊರ್ಜಿತವಿಡುವುದಾಗಿದೆ ಕೆಥೊಲಿಕರೂ ಹೀಗೆಯೆ ಸಮಸ್ತ ಕೆಥೊಲಿಕರಿಗೆ ಏಕಪ್ರಕಾರವಾಗಿ ಆರಾಧನಾಧಿಕಾರವನ್ನು ಕೊಡಲೇಬೇಕಾಗಿದೆ (ಕೆಲವು ಕಡೆ ಮತಾಂತರಹೊಂದಿದ ಹಿಂದುಳಿದ ಹಿಂದೂ ಜಾತಿಗಳ ಕೆಥೊಲಿಕರಿಗೆ ದೇವಾಲಯಗಳಲ್ಲಿಯೂ ಪ್ರಾರ್ಥನೆಗೆ ಏಕಪ್ರಕಾರವಾಗಿ ಆಸನ ಪಂಕ್ತಿ ದೊರೆವಂತಿಲ್ಲದೆ ಅನ್ಯಾಯವುಂಟಾಗಿದೆ) ದೇವಾಲಯದಲ್ಲಿ ಸರ್ವರೂ ಸಮಾನರು ಈ ವಿಷಯವಾಗಿ ಧೀರವಾಗಿ ನಡೆದ ತ್ರಿಚಿನಾಪಳ್ಳಿ ಬಿಷಪರಿಗೆ ಧನ್ಯವಾದಗಳು

ಸರ್ವರೂ ಸಮಾನರು ಎಂಬುದನ್ನು ನಾವು ಹೇಳುತ್ತೇವೆ, ಹಾಗೆ ನಡೆಯುತ್ತೇವೆಯೋ? ಈ ಮಾತಾದರೂ ಇತ್ತೀಚೆಯ ಜಾಗೃತಿಯಿಂದ ಹೊಸ ಅರ್ಥವನ್ನು ಕೊಡುವುದಾಗಿದೆ ಚರಿತ್ರೆಯನ್ನು ಓದಿದರೆ,—ಸಮಾನತೆಗಾಗಿ ಜನರು ಜಾಗೃತರಾದ ಕೂಡಲೆ, ಇಲ್ಲವೆ ರಾಜ್ಯಭಾರವು ಉತ್ತಮವಾಗುವುದು, ಅಥವಾ ದಂಗೆಗಳುಂಟಾಗುವುದು ಎಂದು ತಿಳಿದುಬರುತ್ತಿದೆ ರಾಜ್ಯದ ಕಾನೂನುಗಳನ್ನೆ ಆದರಿಸಿ ಸಮಾನತೆಯನ್ನು ಅನುಭವಿಸುತ್ತೇವೆ ರಾಜ್ಯಭಾರವಾದರೋ, ಜನರನ್ನು ಆಳುವುದಕ್ಕಾಗಿ ಹೆಚ್ಚಿನ ಮಟ್ಟಿಗೆ ಬಲಪ್ರದರ್ಶನದಿಂದಲೆ ಸಾಗುವುದಾಗಿದೆ ಮತವಿಚಾರಗಳು ಹೃದಯದ ಆಳವನ್ನು ಶೋಧಿಸುತ್ತಿವೆ ಮಾನವನನ್ನು ದೇವರ ಕಡೆಗೆ ನಡೆಯಿಸಿ, ದೇವರೇ ಸಮಸ್ತರ ತಂದೆ ಎಂಬುದನ್ನು ಬೋಧಿಸಿ, ಸರಕಾರವು ಸಮಾನತೆಗಾಗಿ ಒತ್ತಾಯದಿಂದ ಇಂತಹ ಸಮಾನತೆಯನ್ನು ಸ್ಥಾಪಿಸಬೇಕಾಗಿಲ್ಲ ಎಂದು ಮತವು ಕೋರಿಸಿದೆ ಹೇಗಾದರೂ, ಧರ್ಮಕ್ಕನುಸಾರವಾಗಿ ಎಂದೇ ಎಷ್ಟೋ ವೇಳೆ ಸಮಾಜದಲ್ಲಿ ಅನ್ಯಾಯಗಳು ನಡೆವುವಲ್ಲಿ: ಹಾಗೆಂದು ಧರ್ಮವು ನಿಂದನೀಯವಾಗಿಲ್ಲ ಸರಕಾರವು ನೈತಿಕಬಲವುಳ್ಳದಾದಲ್ಲಿ ಅದಕ್ಕೆ ಮತವು ಮುಖ್ಯ ಸಹಾಯಕವಾಗಿದೆ, ಸರಕಾರಕ್ಕೆ ನೈತಿಕಬಲವಿಲ್ಲದಿರುವಲ್ಲಿ, ಮತವು ಜನರಿಂದ ನೀತಿಸ್ಥಾಪನೆಗಾಗಿ ಹೇಚಾಡುವಂತೆ ಪ್ರೇರೇಪಣೆಕೊಡುತ್ತಿದೆ

ಸಮಾನತೆಯ ಮಾತು ವಿಚಾರಗಳೆಲ್ಲರ ಮುಂದೆ ಈಗ ಬಂದಿದೆ ಮಾನವೇತಿಹಾಸದಲ್ಲಿ ಎಂದೂ ಹಿಂದೆ ಉಂಟಾಗಿರದ ಒಂದು ಸಂಧಿಕಾಲವು ಈಗ ಪ್ರಾಪ್ತಿಸಿದೆ ನಾನಾ 'ನೀತಿ'ಗಳ ಕಚ್ಚಾಟದ ದೆಸೆಯಿಂದ ನಿರಾಶವಾದ ಈ ಜಗತ್ತು, ಈಗಲೂ ಭಯಂಕರ ಯುದ್ಧಗಳಿಗೆ ಈಡಾಗಿದೆ ನಾವಿಲ್ಲಿ ಸಭೆಸೇರಿರುವಾಗಲೆ ರಕ್ತವು ಅತ್ತ ಸುರಿಯುತ್ತಲೇ ಇದೆ ಹಿಂಸಾತುರತೆಯೆ ಜೀವನಕ್ರಮವಾಗಿರುವ ರಾಜ್ಯಗಳಲ್ಲಿ ಮಾತ್ರ ಹೀಗೆ ನಡೆಯುತ್ತಲಿದೆ ಎಂದಲ್ಲ ಸಾಂಪತ್ತಿಕ ಸ್ಥಿತಿಯೂ ಕದಡಿದೆ ಮಹಾಕೋಟ್ಯಾಧೀಶರ ಸಂಪತ್ತು ಭೂಕಂಪಕ್ಕೆ ಒಳಪಟ್ಟಂತೆ ನಡುಗುತ್ತಿದೆ ಪರಸ್ಪರ ನಂಬಿಕೆ ವಿಶ್ವಾಸಗಳು ಮಾಯವಾಗಿವೆ, ಅಕ್ರಮವೇ ಜೀವನಕ್ರಮವಾಗುತ್ತ ರೂಢಿಗೆ ಬಂದಿದೆ

ಜೀವನದಲ್ಲಿ ಪ್ರತಿಯೊಬ್ಬರು ಒಂದೊಂದು ಶ್ರೇಣಿಗೆ ಸೇರಿದವರಾಗಿ, ಆ ಶ್ರೇಣಿಗಳೊಳಗೆ ಉಂಟಾಗುವ ಹೋರಾಟವೇ ಈ ನಾನಾ ಹೋರಾಟಗಳಿಗೆ ಕಾರಣವಾಗಿದೆ, ಎನ್ನುವ ಸಮತಾವಾದಿಗಳು ಇರುವರು ಅದರ ನಾನಾ ಶ್ರೇಣಿಗಳು ಇರುವ ಕಾರಣವೆ ಜಗತ್ತು 'ಇಷ್ಟು ದೂರ ಸುಧಾರಣೆಹೊಂದಿದೆ, ಮಾನವಕೋಟಿಗೆ ಉಪಕಾರವನ್ನುಮಾಡಿದೆ ಎಂಬುದನ್ನು ಮರೆಯಲಾಗುವುದಿಲ್ಲ ಪ್ರತಿಯೊಂದು ಶ್ರೇಣಿಯವರಿಗೂ ಅಗತ್ಯ ಕರ್ತವ್ಯಗಳಿದ್ದುವು ಈ ಕರ್ತವ್ಯಗಳಲ್ಲೇನೂ ದ್ವೇಷಭಾವವಿದ್ದಿಲ್ಲ ಕಾರಣವೇನು? ಆಳುವವರು ಆ ಕಾಲದಲ್ಲಿ ನೈತಿಕಬಲದಿಂದ ಆಳುತ್ತಿದ್ದರು ಸಮತಾವಾದಿಗಳು ನೀತಿಯ ಮಾತನ್ನು ಬದಿಗೊತ್ತಿರುವರು, ಆದರೂ ತಮ್ಮ ಕಾರ್ಯಕ್ರಮವೇ ಅತ್ಯುತ್ತಮವೆಂದು ಎಲ್ಲರೂ ನಂಬುವಂತೆ ತೋರಿಸುವರು ಇವರಿಗೆ ಇದಿರಾಡಿದರೆ ಆಗದು ಏಕೆಂದರೆ, ಇತರ ಬೆಂಬಲಕ್ಕೆ ನೈತಿಕ ಬಲವಿಲ್ಲ ನೈತಿಕಬಲವನ್ನು ಅವರು ನಂಬುವುದೂ ಇಲ್ಲ

ದೇವರೇ ಅರಸನಾಗಿ ಅವತರಿಸಿದನೆಂಬ ಭಾವನೆಯನ್ನು ಪಾಶ್ಚಾತ್ಯದಲ್ಲಿ ಬಿತ್ತಿದ ವಿದ್ವಾಂಸರು ಪರಸ್ಪರ ಪರಿವಾರಕ್ಕೆ ಸೇರಿದವರು ಅರಸು ಎಷ್ಟೇ ಹಾಳಾಗಿರಲಿ, ಅವನು ದೇವರಿಂದೇ ಇವರು ಸಾರಿದರು ಆದರೆ, ಈಗ ದಂಗೆಖೋರರು ಅಂತಹ ಅರಸರನ್ನು ಕೆಡವಿದರು. ಅನಂತರ ಈ ಈತತ್ವವು ಅವರಿಂದ ಮಾಯವಾಯಿತು ತರುವಾಯ ಲೋಕ್ ಎಂಬಾತನು ಹೊಸ ಭಾವನೆ ಬಿತ್ತಿದನು ಜನರ ಒಲುಮೆಯಿಂದ ಅರಸು ಆಳಬೇಕು ಎಂಬ ತತ್ವ ಅವನದು ಆದರೆ, ಇವನೊಡನೆ ಸಮಾನಾಧಿಪತ್ಯವಿದ್ದವರು ಮಾತ್ರ ಒಪ್ಪಿದಂತೆ ರಾಜ್ಯವನ್ನಾಳಬೇಕು ಎಂದು ಇವನೆಂದನು ಇದೂ ಐವತ್ತು ವರ್ಷಕಾಲ ನಡೆಯಿತು ನಂತರ ಯಂತ್ರಯುಗವು ಪ್ರಾರಂಭವಿಸಿತು ಬೇರೆ ರಾಜ್ಯಗಳನ್ನು ಗೆಲ್ಲುವ ಪ್ರಯತ್ನಗಳಾದುವು ಪ್ರತಿಯೊಬ್ಬರೂ ಹಣಕೂಡಿಸುವುದಕ್ಕೆ ಅಧಿಕಾರವುಳ್ಳವರೆಂದು ಈ ಯುಗವು ಸೂಚಿಸಿತು. ಧನಸಂಚಯವು ಹೇಗೂ ಆಗಲಿ, ಅದೊಂದು ಪುರುಷಾರ್ಥಸಾಧನೆ ಎಂದಾಯಿತು. ಯಾವುದು ಮಹಾಪಾತಕವೆಂದಿತ್ತೋ ಅದೇ ಸಾಮಾಜಿಕ ಸಲ್ಲಕ್ಷಣಗಳಲ್ಲಿ ಒಂದಾಯಿತು. ಕಾರ್ಖಾನೆ ಮಾಲಿಕರು ಮಾಡಿದ್ದೆಲ್ಲ ದಕ್ಕಿತು ನಿತ್ಯ ಭೂಭಾಗಗಳೆಲ್ಲ ಈ ಕಾರ್ಖಾನೆಗಳಿಂದ ತುಂಬಿ ಸಾಮ್ರಾಜ್ಯಸ್ಥಾಪನೆಗೆ ಕಾರಣವಾಯಿತು ಅನಂತರ ರಾಜ್ಯಭಾರದ ಸಾಮಾಜಿಕ ನೀತಿಯು ಬದಲಾವಣೆಹೊಂದಿತು ಎಡಮ್ ಸ್ಮಿಥನ ಈ ಸಂಪತ್ ಶಾಸ್ತ್ರದ ತತ್ವಗಳ ಫಲವಾಗಿ ಪ್ಲಾಸಿ ಕದನದಲ್ಲಿ ಇಂಗ್ಲೆಂಡು ಗೆದ್ದ ಪರಿಣಾಮವೂ ಆ ತತ್ವಕ್ಕೆ ಅನುಸಾರವಾಗಿಯೆ ಉಂಟಾಯಿತು ಅಂದಿನಿಂದಲೆ ಭಾರತವರ್ಷದಲ್ಲಿ ಸಮಾಜ ಧೋರಣೆಯೂ ಬದಲಾಗುತ್ತ ಬರಲು ಪ್ರಾರಂಭವಾಯಿತು ಅಪ್ಪರಲ್ಲೆ ಹಡಗುಹತ್ತಿ ಇತ್ತ ಬಂದ ಪರದೇಶಿ'ಯರ ವಿಷಯ ಸರ್ವರೂ ತಿಳಿದವರೇ ಇವರು ನಮ್ಮ ದುಡಿತದ ಉಪಾಯಗಳಲ್ಲೆಲ್ಲ ಕೈಯಿಕ್ಕಿ ಪ್ರಪಂಚದಲ್ಲಿ ಕೀರ್ತಿವೆತ್ತ ನಮ್ಮ ಕೈಗಾರಿಕೆಗಳು ಮೂಲೆಪಾಲಾಗುವಂತೆ ಮಾಡಿದರು ಪರದೇಶಗಳಿಗೆ ರಫ್ತು ಮಾಡುವ ಭಾರತವರ್ಷವು ಮುಂದೆ ಆಮದುಮಾಡಲು ತೊಡಗಬೇಕಾಯಿತು ಕೈಗಾರಿಕಾ ಉತ್ಪನ್ನಗಳನ್ನು ನಾವು ರಫ್ತು ಮಾಡುವ ಬದಲು, ಕಚ್ಚಾ ಸರಕುಮಾರುವವರೆಂದಾದೆವು ಕ್ರಮೇಣ ಹಿಂದುಳಿದ ಜನಾಂಗವೆಂತಾದೆವು ಇದಕ್ಕೆಲ್ಲ ಸಂಪತ್ ಶಾಸ್ತ್ರಜ್ಞರ ತತ್ವಗಳನ್ನು ಅಂಗೀಕರಿಸಿ, ಧರ್ಮತತ್ವಗಳನ್ನು ನಿರಾಕರಿಸಿದುದೇ ಕಾರಣವೆನ್ನಬೇಕು ಈ ಶೋಚನೀಯ ವಿಚಾರವನ್ನು ಯಾರೂ ಎಣಿಸುವುದೆ' ಇಲ್ಲ ಇತಿಹಾಸವೆಲ್ಲ ಸುಳ್ಳೆನ್ನುವುದಾದರೆ, ಈ ದುಃಸ್ಥಿತಿಯು ಶೋಚನೀಯವಲ್ಲ ಎನ್ನಬಹುದು

ಧರ್ಮಾಧಿಕಾರಕ್ಕೆ ಮಹತ್ವವನ್ನು ಕೊಡದೆ ಪ್ರೊಟೆಸ್ಟಾಂಟರು ಪೋಪರ ಕೈಗಳಿಂದ ಪ್ರತ್ಯೇಕರಾದರು ಇವರಲ್ಲಿ ಪ್ರತಿಯೊಬ್ಬರ ಕಲೆಯೂ ಸ್ವತಂತ್ರವಾಗಿ ಧರ್ಮಾಧಿಕಾರವನ್ನು ತಳೆದು, ಜನರೆಷ್ಟೋ ಅಷ್ಟೇ ಪೋಪರಾದರು' ಅತ್ಯಸ್ವಾತಂತ್ರ್ಯದ ಕಾರಣದಿಂದ ಪ್ರತಿಯೊಬ್ಬರು ಸ್ವಾರ್ಥಿಗಳಾಗಿಯೂ, ಜಗತ್ತಿಗೆ ತಾವೇ ಕೇಂದ್ರವಾಗಿಯೂ ಬೆಳೆದರು. ಧರ್ಮಾಧಿಕಾರವು ದೂರವಾದುದರಿಂದ ಪ್ರತಿ ವ್ಯಕ್ತಿಗೂ 'ಲೈಸೆನ್ಸು' ದೊರೆತಂತಾಯಿತು.

ಹರ್ಬರ್ಟ ಸ್ಪೆನ್ಸರನು ಈ ದುರವಸ್ಥೆಯನ್ನು ಕಂಡು, ತತ್ವವನ್ನು ಹೊಸತಾಗಿ ಬೆಳಗಿಸಿದನು —'ಅಶಕ್ತರ ಬಡತನ, ಆಲಸಿಗಳ ದರಿದ್ರತೆ ಬಲಿಷ್ಠರ ಕೋಳಿನಿಂದ ದುರ್ಬಲರ ಮರ್ದನ, ಇವುಗಳಿಂದ ಎಷ್ಟು ಅಸಂಖ್ಯಾತ ಜನರು ದುರ್ದೈವಪೀಡಿತರಾಗಿರುವರೆಂದರೆ,— ಮಹನೀಯನಾಗಿರುವ ದೂರದರ್ಶಿಯಾದ ಭಗವಂತನೇ ಈ ದುಃಸ್ಥಿತಿಯನ್ನು ಮೊದಲೇ ಎಣಿಸಿಕೊಂಡು ವಿಧಿಸಿರುವನೆಂದೇ ಹೇಳಬೇಕಾಗಿದೆ ಈ ತತ್ವವೇ ಈಗ ಉದಾರವಾದಿಗಳ ಉದಾರತೆ ಈ ತತ್ವದ ದೆಸೆಯಿಂದಲೆ ದರಿದ್ರರು ದುಡಿಯುತ್ತ ಅವರನ್ನು ಮರ್ದಿಸುವ ಶ್ರೀಮಂತರ ಹೊಟ್ಟೆ ಬೊಕ್ಕಸಗಳನ್ನು ... ಸಹಸವ್ಯವಸ್ಥೆಯ ವೈಪರೀತ್ಯವು ಉಂಟಾಗಿ...

ಇನ್ನೊಂದು ವಿಶೇಷ ಸಂಗತಿಯೆ ದರೆ,— ಜಗತ್ತೆಲ್ಲವೂ ಶೋಚನೀಯ ಸ್ಥಿತಿಯಲ್ಲಿರುವ ಕಾರಣ, ನಾವು ಶೋಚನೀಯ ಸ್ಥಿತಿಯಲ್ಲಿರುವುದು ಅಷ್ಟು ವಿಶೇಷವಲ್ಲ ಎಂದ ವಾದಿಸಿ ಸಮಾಧಾನ ಹೇಳುವುದು! ಇದೂ . ದಾರತೆ ಶ್ರೀಮಂತರ ಕಾರಣದಿಂದ ಉಂಟಾಗಿರುವ ದುಷ್ಪರಿಣಾಮಗಳಿಗೆ ಇದೇ ಸಮಾಧಾನ ಲೋಕವೆಲ್ಲ ಹಾಳಾಗಿದೆ ಎಂದ ಕೂಡಲೆ ನಮ್ಮ ದಾರಿದ್ರ್ಯವನ್ನು ನಾವು ಬಾಯ್ಮುಚ್ಚಿ ಸಹಿಸಿಕೊಳ್ಳಬೇಕು ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳಿಗೆ ಪ್ರತಿವಾರವೂ ಕೊಡುವ ಅಶನಾರ್ಥದ ಹಣವು, ನಮ್ಮಲ್ಲಿ ಇಡೀ ತಿಂಗಳು ದುಡಿಯುವ ಕೂಲಿಗಾರನಿಗೆ ದೊರೆಯುವ ಹಾಗಿಲ್ಲವೆಂದರೆ, ಲೋಕವೆಲ್ಲ ಹಾಳಾಗಿದೆ ಎನ್ನಬಹುದೆ?' ಜಮೀನಿನ ಮೇಲೆಯೆ 800 ಮಿಲಿಯ ಹಿಂದೀಯರು ಆಧರಿಸಿರಬೇಕಾಗಿದೆ, ಆದರೆ ಜಮೀನು ೨೦ ವರ್ಷಗಳ ಹಿಂದೆಯು ಎಷ್ಟು ಉತ್ಪನ್ನ ಮಾಡಬಹುದೋ ಅಷ್ಟನ್ನು ಉತ್ಪನ್ನಮಾಡಿಯೆ ಇದೆ ಇನ್ನು ಹೆಚ್ಚುವಹಾಗಿಲ್ಲ' ಎಂದು ಎಗ್ರಿಕಲ್ಚರಲ್ ಕಮಿಷನು ತರಾ ಬರೆದಿದೆ. 1929 ರಲ್ಲಿ ಗ್ರಾಮಸ್ಥರ ಸಾಲಗಳ ಮೊಬಲಗು 900 ಕೋಟಿ ರೂಪಾಯಿ, ಈಗ 1600 ಕೋಟಿ ರೂಪಾಯಿಯಾಗಿದೆ ಇದಕ್ಕೆ ಸಮಾಧಾನವು ಲೋಕವೆಲ್ಲ ಹಾಳಾಗಿದೆ ಎಂದರಾಯಿತೆ? ಈ ಸಾಲದ ಮೇಲೆ ವಾರ್ಷಿಕವಾಗಿ ಕೊಡಬೇಕಾಗಿರುವ ಬಡ್ಡಿಯು ಇಡೀ ಇಂಡಿಯಾ ಸರಕಾರದ ಆದಾಯದ ಹನ್ನೆರಡು ಪಾಲು ಹೆಚ್ಚಿಗೆ' ಇದೂ ಲೋಕದ ದುಃಸ್ಥಿತಿಯ ಕಾರಣದಿಂದಲೆ? ಹೀಗೆ ಹೇಳಿದ ಕೂಡಲೆ ನಮಗೆ ಸಮಾಧಾನವಾಗಬೇಕೆ?

ಈ ಮಾತುಗಳನ್ನೆಂದ ಕೂಡಲೆ,— ಬೊಲ್ಶೆವಿಕರು ಇವನ್ನೆಲ್ಲ ಆಡಿಸುತ್ತಾರೆಂದೂ, ಎಲ್ಲ ಮನೆಗಳಿಂದ ಕುರ್ಚಿ ಮೇಜುಗಳನ್ನು ಸಹ ಸುಲಿಗೆಮಾಡಲು ಜನರಿಗೆ ಬುದ್ಧಿ ಹೇಳಿಕೊಡುತ್ತಾರೆಂದೂ ದೂರುವ ಜನರಿದ್ದಾರೆ 'ಸ್ವಂತದ ಆಸ್ತಿ, ಸಂಪತ್ತು, ಖಾಸಗಿ ಹಣ' ... ಬ ಮಾತುಗಳು ಆಗಲೇ ಹೊರಡುವುವು ಕ್ರೈಸ್ತಧರ್ಮದ ತತ್ವಗಳನ್ನೂ ಕೆಥೊಲಿಕ್ ನೀತಿಯನ್ನೂ ಮರೆತವರು ಹೀಗಲ್ಲದೆ ಬೇರೆ ಹೇಗೆ ಹೇಳುವರು? ಭಗವಂತನ ಪವಿತ್ರ ಧರ್ಮ ಇಚ್ಛೆಗಳನ್ನು ಮರೆತವರು ಅನೈತಿಕ ಲೋಭಿಗಳ ದಂಡುಗಳನ್ನು ಕಂಡು ಅವೇ ನೈತಿಕವೆಂದು ಗಳಹುವುದು ಹೀಗೆಯೆ

ಇದೊಂದು ದೊಡ್ಡ ಸಮಸ್ಯೆಯಂತೆ' ನಿಜ ಹಣಮಾಡುವುದೇ ಜೀವನೋದ್ದೇಶವಾಗಿರುವ ಬಲಶಾಲಿಗಳು ಹಣದ ಬೆಲೆಯೊಡನೆ ಜೂಗಾರಾಡುವ ಗೊಂದಲವೂ ಈ ಸಮಸ್ಯೆಯಲ್ಲಿ ಸೇರಿಯದೆ ಹಣ ಹುಟ್ಟಿಸುವ ಜಾತಿಯೊಂದಿದೆ ಇವರೇ ಸರಕಾರಗಳನ್ನೂ ಪ್ರಜೆಗಳನ್ನೂ ಏಕಪ್ರಕಾರವಾಗಿ ಪೀಡಿಸುವರು. ಈ ಸಮಸ್ಯೆ ಬಿಡಿಸುವುದು ಸುಲಭವಾಗಿಲ್ಲ 'ಧೀರರಿಲ್ಲದ ಬಂಜೆಯಾದ ಕಾಲವಿದು' ಎಂದ ಪೋಪ್ ಲಿಯೊ XIII ನುಡಿದುದೂ ಇದಕ್ಕಾಗಿಯೆ ಏಕೆಂದರೆ, ಈ ಸಮಸ್ಯೆ ಬಿಡಿಸುವುದು ಯಾರ ಕೈಯಲ್ಲಿದೆಯೋ ಅವರು ಧೀರರಾಗಿಲ್ಲೆಂದು ತಿಳಿದೇ ಪೋಪರು ಹೀಗೆನ ವಿದರು ಅವರ ಕಾಲದ ನಂತರ ಈ ಅಧಿಕಾರವುಳ್ಳ ಹಲವರು ಅಧಿಕಾರತಪ್ಪಿ ಬಿದ್ದಿರುವರ ಕೆಲವರ ಇನ್ನೂ ಉಳಿದಿರುವರು ಇವರಿಂದರೂ ಈಗಲಾದರೂ ಧೀರರಾಗಿದ್ದಾರೆಯೆ? ವಿವೇಕಿಗಳಾಗಿದ್ದಾರೆಯೆ? ಹಾಗೆ ಎನ್ನಬಹುದಾದರ ಎಷ್ಟು ಸಂತೋಷ' 'ಇಲ್ಲ' ಎನ್ನಬರುವಂತಾಗಿರುವ ಕಾರಣವೇ ಅದೆಷ್ಟು ದುಃಖಕರ!

—ಸಂಗ್ರಹಕಾರ

ಉಡುಪಿ ಡಿಸ್ಟ್ರಿಕ್ಟು ಮುನ್ಸಿಫ್ ಕೋರ್ಟಿನಲ್ಲಿ

O P No 96/1936

ಬೀಬಿ ಖಾ_ಅರ್ಜಿದಾರಳ

ಮತ್ತು

ಸಹೀನಾ ಬೀಬಿ_ಯೆದ್ರಿಳು

ಇವರೊಳಗೆ

ಮೇಲ್ಕಂಡ ಅರ್ಜಿ ವ್ಯವಹರಣೆಯ ಅರ್ಜಿದಾರ್ಳಳ ಗಂಡ ಮೃತ I b P ಮಹಮ್ಮದ ಸಾಹೇಬ The Oriental Government Security Life Assurance Company Limited Bombay ಈ ಕಂಪೆನಿಯಲ್ಲಿ Policy Number ... ನೇ ಇನ್ಸೂರು ಮಾಡಿದ ಬಾಬ್ತು ಬಹಾದ್ದೂರ್ 293 11-6 ಮತ್ತು The Oriental Government Security Life Assurance Company Limited Bombay ಈ ಕಂಪೆನಿಯಲ್ಲಿ Policy No 86850ನೇ ಇನ್ಸೂರು ಮಾಡಿದ ಬಾಬ್ತು ಬಹಾ ರೂಪಾಯಿ 47 4—0 ಈ ಹಣ ವಸೂಲು ಪಡೆಯುವರೆ ಸದ್ರಿ ಮಹಮ್ಮದ ಸಾಹೇಬ ವಾರೀಸುದಾರಳು ಮ ಹೆಂಡ್ತಿಯಾದ ಅರ್ಜಿದಾರಳು ವಸೂಲು ಪಡೆಯುವರೆ ಹಕ್ಕುದಾರಳಾಗಿದ್ದು ಆ ಮೇರೆ ಸದ್ರಿ ಐವಜು ವಸೂಲುಪಡೆಯುವರೆ ಸಕ್ಸೆಸರ್ ಸರ್ಟಿಫಿಕೇಟು ಕೊಡಿಸುವಂತೆ ಕೊಟ್ಟ ಸದ್ರಿ ಅರ್ಜಿ ವ್ಯವಹರಣೆಯು ತಾ 25—1—37ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾರೀದು ಮಾಡಿಕೊಳ್ಳತಕ್ಕದ್ದು

1—1—37 ಉಡುಪಿ

P. Padmanabha Rao,
Vakil for Petitioner

ಒಂದು ವರ್ಷದೊಳಗೆ ಸ್ವರಾಜ್ಯ

ಹದಿನಾರು ವರುಷಗಳ ಕೆಳಗೆ ಮಹಾತ್ಮಾ ಗಾಂಧಿಯವರು ಕಲ್ಕತ್ತಾ ಕಾಂಗ್ರೆಸ್‌ನಲ್ಲಿ ಕೆಲವು ಶರ್ತಗಳನ್ನು ಮುಂದಿಟ್ಟು ಅವುಗಳನ್ನು ಕ್ರಮವಾಗಿ ಅನುಸರಿಸಿದರೆ ನಮಗೆ ಒಂದೇ ವರ್ಷದೊಳಗೆ ಸ್ವರಾಜ್ಯ ಸಿಕ್ಕುತ್ತೆಂದು ಹೇಳಿದ್ದರು. ಫೈಜಪುರದ ತಮ್ಮ ಭಾಷಣದಲ್ಲಿ ಅದನ್ನು ಪುನಃ ವಿವರಿಸುತ್ತಾ ಮಹಾತ್ಮರು "ನಾವು ಎಂದಿಗೆ ನಮ್ಮ ಕೈನೂಲಿನ ಕಸಬನ್ನು ಬಿಟ್ಟು, ಲಂಕಶ್ಯಾರಿನ ನೂಲನ್ನು ತರಿಸಲು ಪ್ರಾರಂಭಿಸಿದೆವೊ ಅಂದೇ ನಾವು ಗುಲಾಮರಾಗಿದ್ದೇವೆ. ಈಗಲಾದರೂ ಅದೇನು ಕಠಿಣವಲ್ಲ. ಈಗಲೂ ಎಲ್ಲರೂ ಖಾದಿಯನ್ನೇ ಧರಿಸಿದರೆ ನಾವು ಆರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಹೊಂದಬಹುದು. ನಾವೀಗ ಈ ನೂಲು ಚರಕದ ವಾರ್ತೆಯನ್ನು ಹಳ್ಳಿ ಹಳ್ಳಿಗಳಲ್ಲಿ ಸಾರಿದರೆ ವ್ಯಾಸರಾಯರು ನಮ್ಮಲ್ಲಿಗೆ ಬಂದು "ಇಷ್ಟರ ವರೆಗೆ ನಾನು ತಪ್ಪು ತಿಳಿಕೊಂಡಿದ್ದೆ. ಕಾಂಗ್ರೆಸ್ಸಿನವರು ಭಯಾನಕ ಕೊಟಡವರೆಂದು ತಿಳಿದಿದ್ದೆ. ಈಗ ಭಾರತೀಯರು ಇಷ್ಟನಷ್ಟರೆ ನಾವಿಲ್ಲಿ ಇರುತ್ತೇವೆ. ಇಲ್ಲದಿದ್ದರೆ ನಮ್ಮಿಂದ ಸಾಧ್ಯವಿಲ್ಲ" ಎಂದು ಹೇಳುತ್ತಾರೆ. ಬ್ರಿಟಿಷರಿಗೆ ಎಲ್ಲಿ ಲಾಭ ಕಾಣುವುದಿಲ್ಲವೊ ಅಲ್ಲಿ ಅವರು ನಿಲ್ಲಲಾರರು ಎಂದು ಹೇಳಿದರು.

ರೈತರಿಗೆ ಜವಾಹರಲಾಲರ ಸಂದೇಶ

"ಕಾಂಗ್ರೆಸ್ಸು ಸ್ವರಾಜ್ಯಕ್ಕಾಗಿ ಸಾಧಿಸುತ್ತದೆ. ಸ್ವರಾಜ್ಯ ಸಿಕ್ಕಿದ ಮೇಲೆ ರೈತರ ಆಡಳಿತೆಯು ಪಂಚಾಯತುಗಳಿಂದ ನಡೆಸಲ್ಪಡುತ್ತದೆ. ನಿಮಗೆ ಸ್ವತಂತ್ರವಾಗಿ ನಡೆಸುವ ಸರಕಾರವು ಆಗ ಜಾರಿಯಲ್ಲಿ ಬರುತ್ತದೆ. ಆದರೆ ಆ ಸ್ವರಾಜ್ಯವನ್ನು ಹೇಗೆ ಪಡೆಯಬಹುದು? ನಮ್ಮ ಶಕ್ತಿಯನ್ನು ಬಲಗೊಳಿಸಬೇಕು, ಕಾಂಗ್ರೆಸ್ಸೆಂಬ ಸಂಸ್ಥೆಯು ಇದಕ್ಕಾಗಿ ದೇಶದಲ್ಲಿ ಹರಡಿರುತ್ತದೆ. ಆದುದರಿಂದ ಪ್ರತಿಯೊಬ್ಬ ರೈತನೂ ಕಾಂಗ್ರೆಸ್ ಉಮೇದ್ವಾರರಿಗೇನೇ ವೋಟು ಕೊಟ್ಟು ಚುನಾಯಿಸಬೇಕು. ಈ ವಿಷಯದಲ್ಲಿ ನಿಮ್ಮ ಗ್ರಾಮದ ಅಧಿಕಾರಿಗಳಾರಾದರೂ ನಿಮ್ಮನ್ನು ಹೆದರಿಸಬಹುದು. ಅವರ ಟೊಳ್ಳು ಹೆದರಿಕೆಗೆ ಬೆದರಿ ಮೋಸಹೋಗಬೇಡಿರಿ ಧೈರ್ಯದಿಂದ ಕಾಂಗ್ರೆಸ್ಸಿಗೆ ಓಟು ಕೊಡಿ!' ಅಷ್ಟರಲ್ಲಿ "ಜವಾಹರಲಾಲ ಕೀ ಜೈ" ಎಂಬ ಘೋಷವು ಬಿತ್ತು.

ರೊಮ್ಯಾನ್ ರೊಲೆಂಡರ ಸಂದೇಶ

"ನಾವು ಫ್ರಾನ್ಸಿನಲ್ಲಿಲ್ಲಿ, ಬೇರೆ ಬೇರೆ ಮತದವರಾದಾಗ್ಯೂ, ಫೆಸಿಸಮನ್ನು ಎದುರಿಸಲಿಕ್ಕಾಗಿ ಎಲ್ಲರೂ ಒಟ್ಟಾಗಿದ್ದೇವೆ. ಅದೇ ಪ್ರಕಾರ ನೀವಾದರೂ ಪರದಾಸ್ಯದಿಂದ ಬಳಲಿದ್ದೀರಿ. ನಿಮ್ಮ ನಿಮ್ಮ ವೈಶಮ್ಯಗಳನ್ನು ಬದಿಗಿಟ್ಟು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ವಿಶ್ವಶಾಂತಿಗೆ ಪ್ರಯತ್ನಿಸಿರಿ." ವಿದೇಶಿಯವರಾದರೂ ಭಾರತ ಹಿತೈಷಿಗಳಾದ ಇವರ ಮಾತುಗಳನ್ನಾದರೂ ಕೆಲವು ಪಾರ್ಟಿಯವರು ಮನ್ನಿಸಬಾರದೆ?

ಅವತಾರಿ ಮಗು

ಮೆಹೊ ಫೊಸಿಕ್ ಎಂಬದೊಂದು ಜಾಗ್ರೆಬಿನ 6 ವರುಷದ ಮಗು. ತಂದೆಸಮಗಾರನು. ಮಗುವಿಗೆ ವಿಚಿತ್ರ ಬುದ್ಧಿಶಕ್ತಿ, ಅದಕ್ಕೆ ಓದ ಬರೆಯ ಬರುವುದಿಲ್ಲ. ಅದಕ್ಕೆ ಎಷ್ಟು ಸಂಖ್ಯೆಗಳನ್ನಾದರೂ ಕೂಡಿಸಿ, ಕಳೆದು ಗುಣಿ, ಭಾಗಿಸಲಿಕ್ಕೆ ಹೇಳಿದರೂ ಕ್ಷಣದಲ್ಲಿ ಉತ್ತರ ಕೊಡುತ್ತದೆ. ಒಬ್ಬ ಗಣಿತ ಉಪಾಧ್ಯಾಯರು ಆಡುತ್ತಲಿದ್ದ ಈ ಚಿಕ್ಕ ಹುಡುಗನನ್ನು ನೋಡಿ 'ಮಗು ನನಗೆ ಈ ದಿನಕ್ಕೆ 52 ವರುಷಗಳಾದುವು. ಆದ್ದರಿಂದ ನಾನೆಷ್ಟು ದಿನಗಳು ಬದುಕಿದಂತಾಯಿತು?' ಎಂದು ಕೇಳಿದರಂತೆ. ತಕ್ಷಣವೇ ಮಗುವು 52 ವರುಷಗಳ ಹಿಂದಿನಿಂದಲೂ ಪ್ರತಿ ವರುಷದ ಫೆಬ್ರವರಿ ತಿಂಗಳ ದಿವಸಗಳನ್ನು ಕೂಡ ಲೆಕ್ಕ ಹಾಕಿ ಸರಿಯಾದ ಉತ್ತರವನ್ನು ಕೊಟ್ಟಿತಂತೆ.

ಹೀಗೂ ಉಂಟೆ?

ಮಾಜಿ ಅಕ್ಟಿಂಗ ಗವರ್ನರರಾಗಿದ್ದ ಸರ್ ಮಹಮ್ಮದ್ ಉಸ್ಮಾನರು ಯುರೋಪಿಯರಿಗೆ ಅಮೂಲ್ಯ ಸೂಚನೆ ಕೊಟ್ಟಿದ್ದಾರೆ,—ನೀವೂ ಕಡೆಮೆಯವರಲ್ಲ,—ಒಬ್ಬರಾದರೂ ಮುಂದೆ ಮಂತ್ರಿ ಪದವಿಗೆ ಬರಬಹುದಲ್ಲ!—ಎಂದು.

ಸರ್‌ರು ಜಸ್ಟೀಸ್ ಪಕ್ಷದ ಅಧಿನಾಯಕರು. ಅವರ ಸೂಚನೆಗೆ ಬೆಲೆಯಿದೆ. ಯಾವ ರೀತಿಯಲ್ಲಿ? ಆ ಪಕ್ಷದ ಮುಖ ಪತ್ರಿಕೆಯಲ್ಲಿ ಅವರು ವಿವರಿಸಿದ್ದಾರೆ.

ಸರ್ ಕೆ. ವಿ. ರೆಡ್ಡಿಯವರು ಮಾಜಿ ಆಕ್ಟಿಂಗ ಗವರ್ನರರಾಗಿದ್ದರಷ್ಟೆ. ಅವರೂ ಕೆಲ ಮಟ್ಟಿಗೆ ಇದೇ ಪಕ್ಷವನ್ನ ಸಮರ್ಥಿಸಿ ಅದೇ ಪತ್ರಿಕೆಯಲ್ಲಿ ಸೂಚನೆ ಕೊಟ್ಟಿದ್ದರು. ಈಗ ಅದು ಇವರ ಸರದಿ; ಸರದಿಯಂತೆ ವರದಿ.

ಮಂತ್ರಿ ಕೂಟವು ಸರಿಯಾಗಿ ಸ್ಥಿಮಿತ ಹೊಂದುವ ಹಾಗೆ ಯುರೋಪಿಯನೊಬ್ಬನು ಇರಬೇಕೆಂದು ಇವರ ಬೋಧನೆ, ಉಪಸೂಚನೆ ಇತ್ಯಾದಿ.

ಯುರೋಪಿಯ ಮೆಂಬರರು ಕೆಲವೇ ಮಂದಿಯಾಗಿ ಬರೇ ಗುಲ್ಲು ಎಬ್ಬಿಸಿ ಕೂತಿರುವರೆ? ಅಥವಾ ಮಂತ್ರಿಗಳಲ್ಲಿ ಆದ್ಯರೆನ್ನಿಸಿಕೊಳ್ಳುವ ಆಸೆ ಅವರಲ್ಲಿ ಒಬ್ಬರಿಗೂ ಇಲ್ಲವೆ? ಈಗ ಸರ್‌ರ ಒಂದು ಪ್ರಶ್ನೆ.

ಪ್ರಶ್ನೆಗೆ ಉಪಾಯವನ್ನು ಅವರೇ ಸೂಚಿಸಿದ್ದಾರೆ. ಅದು ಹೀಗೆ:—

ಚುನಾವಣೆಗಳಾದ ಬಳಿಕ, ಯುರೋಪಿಯರ ಅಭಿಪ್ರಾಯಗಳನ್ನು ಸಮರ್ಥಿಸುವ ಯಾವುದೊಂದು ಪಕ್ಷವನ್ನು ಅವರು ಕೌನ್ಸಿಲಿನಲ್ಲಿ ಸೇರಿಕೊಂಡರಾಯಿತು! ಅಷ್ಟೆ. ಗೆದ್ದವರ ಕಡೆಗೆ ಸೇರಿರೆಂದು ಬೋಧಿಸುವ ಈ ಸೂಚನೆ ಹೇಗೆ?

ಚುನಾವಣೆಗಳಾಗುವ ಮೊದಲೇ ಅವರು ಸೇರಿದರಾಗದೆ?

ಬ್ರಿಟಿಷಪಾರ್ಲಿಮೆಂಟಿನ ಚುನಾವಣೆಗಳಲ್ಲಿರುವ ಕ್ರಮವು ಹೀಗೆ:—ಹಲವು ಪಕ್ಷಗಳ ಸದಸ್ಯರು ಸೇರಿ ಮಂತ್ರಿಮಂಡಲವನ್ನು ರೂಪಿಸಿಕೊಳ್ಳುವುದೂ ಇದೆ.

ಇರಲಿ, ಯಾವ ಪಕ್ಷವನ್ನು ಅವರು ಸೇರಬೇಕು? 'ಕೌನ್ಸಿಲಿನ ಕಾರ್ಯಕ್ಕೆ ಆತಂಕಗೊಳಿಸುವವರನ್ನಲ್ಲ,' ಎಂದು ಸರ್‌ರ ಸೂಚನೆ. ಕೌನ್ಸಿಲಿನ ಕಾರ್ಯವು ಸರಾಗವಾಗಿ ಸಾಗುವ ಹಾಗೆ ಯಾರು ಇರುವರೋ ಅವರನ್ನೆ ಸೇರಬೇಕು. ಒಂದು ನಿಷೇದಾರ್ಥ, ಒಂದು ವಿಧ್ಯರ್ಥ, ಎರಡರ ಇತ್ಯರ್ಥವೂ ಒಂದೇ ಬಗೆ. ಯುರೋಪಿಯರು ಜಸ್ಟಿಸ್ ಪಕ್ಷವನ್ನು ಸೇರುವುದೇ ಶ್ರೇಯಸ್ಕರವೆಂದು ತೋರಿಸಲಾಗಿದೆ.

ಆದರೆ, ಜಸ್ಟಿಸ್ ಪಕ್ಷವು ಗೆದ್ದರೆ,—ಇದು ಹೇಗೆಂದು ಲಕ್ಷಣಗಳಾವುವೂ ತೋರಿಲ್ಲವೆಂದು ಪ್ರಮುಖರೇ ಸಂದೇಹಪಡುತ್ತಾರೆ,—ಆ ಪಕ್ಷವು ಇತರ ಎಷ್ಟೋ ಪಕ್ಷಗಳಲ್ಲಿ ಒಂದು ಪಂಗಡ ಮಾತ್ರ, ಈ ಪಕ್ಷಗಳಲ್ಲಿ ಒಂದಕ್ಕೂ ಬಹುಮತವು ದೊರೆವಂತಿಲ್ಲ.

ಜಸ್ಟಿಸ್ ಪಕ್ಷವು ಗೆದ್ದರೆ, ಯುರೋಪಿಯರು ಅದನ್ನೆ ಸೇರಿದರೆ, ಯುರೋಪೀಯನೊಬ್ಬನಾದರೂ ಮಂತ್ರಿಯಾಗದಿರಲಾರನು ಎಂದು ಭವಿಷ್ಯವಾದ.

ಆದರೆ, ಯುರೋಪಿಯರು ಯಾವುದೊಂದು ಪಕ್ಷವನ್ನೂ ಸೇರದಿದ್ದರೂ, ಅಲ್ಪಸಂಖ್ಯಾಕರೆಂಬ ಒಂದೇ ಕಾರಣದಿಂದ ಮಂತ್ರಿಪದಕ್ಕೂ ಅರ್ಹರಾಗಿದ್ದರೆಂದೂ, ಅವರಲ್ಲೊಬ್ಬನಾದರೂ ಮಂತ್ರಿಯಾಗದೆ ಇರಲಾರನೆಂದೂ ಮೊದಲೇ ಅವರಿಗೆ ಗೊತ್ತಿರುವುದು ಸರ್‌ರಿಗೆ ತಿಳಿಯದಿದ್ದುದು ಆಶ್ಚರ್ಯ.

ವ್ಯವಸ್ಥಾ ವಿರೋಧಿಗಳೆಂಬವರನ್ನು ಎದುರಿಸಲು ಈ ಉಪಾಯವು ಮುಖ್ಯವೆಂದು ಚೆನ್ನಾಗಿ ತಿಳಿಸಿದ್ದಾಗಿದೆ. ಇದನ್ನೆ ಇನ್ನೂ ಇನ್ನೂ ತಿಳಿಸುವುದೂ ಅವರ ಪತ್ರಿಕೆಯ ಕರ್ತವ್ಯವಾಗಿದೆ.

ಇದು ವರೆಗೆ ಜಸ್ಟಿಸ್ ಪಕ್ಷದ ಕರ್ತವ್ಯವೇನಾಗಿದ್ದಿತು? ಯುರೋಪಿಯ ಮೆಂಬರರು ಒಂದಾಗಿ, ಸರಕಾರೀ ಮೆಂಬರರೊಡನೆ ವೋಟು ಕೊಟ್ಟಲ್ಲಿ ಮಾತ್ರ ಯಾವುದೊಂದು ಜಸ್ಟಿಸ್ ಪಕ್ಷದ ನಿರ್ಣಯವು ಕೌನ್ಸಿಲಿನಲ್ಲಿ ಮಂಜೂರಾಗುವಂತಾಗುತ್ತಿದ್ದಿತು!

ಈಗ? ಚುನಾವಣೆಗಳ ಮೊದಲೇ, ಯುರೋಪಿಯರು ತಮ್ಮೊಡನೆ ಸೇರಿ ಉಮೇದುವಾರರಾಗಲೆಂದು ಸೂಚಿಸದೆ, ತಾವು ಬಹುಮತಕ್ಕೆ ಯುರೋಪಿಯರು ಮುಂದೆ ತಮ್ಮ ಕಡೆಗೆ ಸೇರಿ ವೋಟು ಕೊಡುವಂತೆ ಆದರೆ ಸಾಕೆಂಬುದೇಕೆ? ಜಸ್ಟಿಸ್ ಪಕ್ಷದ ಧೋರಣೆ ಜಾತಿಕಟ್ಟಿನದೆಂಬ ಮಾತಲ್ಲ, ವ್ಯವಸ್ಥಾ ಪೋಷಕರೆಂಬುದಷ್ಟೆ ಆದರೆ ವ್ಯವಸ್ಥಾ ಪೋಷಣೆಯ ಧ್ಯೇಯಾಭಿಪ್ರಾಯಗಳು ಜಸ್ಟಿಸ್ ಪಕ್ಷದವರವು ಬೇರೆ, ಯುರೋಪೀಯವರವು ಬೇರೆ!

ಯುರೋಪಿಯರ ವಿಚಾರಗಳು ಇದು ವರೆಗೂ ಮುಂದೆಯೂ ಹೀಗೆ,—ತಾವು ಸ್ವತಂತ್ರರು. ಪ್ರತಿಯೊಂದು ವಿಷಯದಲ್ಲಿ ತಮ್ಮ ಧೋರಣೆಯಂತೆ ವರ್ತಿಸುವವರು. ಅವರು ಬೇರೆ ಪಂಗಡ ಕಟ್ಟಿಕೊಂಡವರಲ್ಲ, ಕಟ್ಟಿಕೊಳ್ಳಲಾರರು. ಸರ್‌ರು ಇದನ್ನು ಮರೆತರು. ಹೀಗೆ ಹೇಳಿದರು. ಹೀಗೂ ಉಂಟೆ?

ವಿಚಿತ್ರ ವಿಜ್ಞಾನ

ಯುರೋಪಿನ ಜನರೆಲ್ಲರೂ ಒಟ್ಟುಕೂಡಿ ಎಲ್ಲರೂ ಒಂದೇ ಸಮಯದಲ್ಲಿ ಮಾತನಾಡಿದರೆ ಅಲ್ಲಿ ಒಂದು ಮೋಟಾರು ಸೈಕಲನ್ನು ಓಡಿಸುವಷ್ಟು ಶಕ್ತಿ ಉತ್ಪನ್ನವಾಗುತ್ತದಂತೆ.

o o o o

ನಾವು ಇದನ್ನು ಓದುತ್ತಿದ್ದ ಹಾಗೆ ನಮ್ಮ ಬೆನ್ನ ಮೇಲೆ 1120 ರಾತ್ಲುಗಳ ಗಾಳಿಯ ಒತ್ತಾಟವಿದೆ—ನಮಗದು ತಿಳಿಯುವುದಿಲ್ಲ. ಯಾಕೆ? ಮೇಲಿನಿಂದ ಇದ್ದಂತೆ ಗಾಳಿ ಒತ್ತಾಟವು ಕೆಳಗಿನಿಂದಲೂ ಇರುವುದರಿಂದ.

o o o o

ಇದೇ ಪ್ರಕಾರ ಸೀರಿನಲ್ಲಿಯೂ, ಒಂದು ಮೈಲು ಆಳದಲ್ಲಿ, ಒಂದೊಂದು ಮೀನಿನ ಮೇಲೆ 120 ಟನ್ನುಗಳಷ್ಟು ಭಾರವಿದೆ. ನೀರಿಗೂ ಕೆಳಗಿನಿಂದ ಒತ್ತಾಟವಿದೆ.

o o o o

ನಿಮ್ಮ ಕೋಣೆಯ ಸುತ್ತಲೂ ನೋಡಿರಿ. ಅದರಲ್ಲಿ ನಿಮ್ಮ ಸಮತೂಕವಾದ ಗಾಳಿಯು ಇದೆ.

o o o o

ಒಂದು ಇಲೆಕ್ಟ್ರಿಕ್ ದೀಪವು ಒಂದು ಮಿನಿಟಗೆ ದೊಡ್ಡ ಬಿರುಗಾಳಿಯ ಮಿಂಚಿನಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತದೆ.

o o o o

ನಿಮ್ಮ ಎದೆಯನ್ನು ಮುಟ್ಟಿ ನೋಡಿರಿ. ನಾಡಿ ಹೊಡೆಯುವುದನ್ನು ಕೇಳಬಹುದು. ಶಬ್ದವು ಚಿಕ್ಕದಾದರೂ ಒಂದು ಮಿನಿಟಿಗೆ ಹೊಡೆಯುವ 70–80 ಶಬ್ದಗಳಿಂದ 8 ಗೆಲನುಗಳಷ್ಟು ರಕ್ತವು ಎದೆಗುಂಡಿಯಿಂದ ಹೊರಗೆ ಹೋಗುತ್ತದೆ. ಸಾಧಾರಣ ಒಂದು ನೀರಿನ ಪ್ಯಾಪಿನಿಂದ ಮಿನಿಟಿಗೆ ಬರುವ ನೀರು ಬರೆ 4 ಗೆಲನ್.

o o o o

ಸಾಧಾರಣ ಒಂದು ಮೋಟರು ಇಂಜಿನು ನಾಲ್ಕು ಅಶ್ವಶಕ್ತಿಯುಳ್ಳದ್ದು. ಸೂರ್ಯನಲ್ಲಿ 50,000,000,000,000,000,000,000 ಅಶ್ವಶಕ್ತಿಯಷ್ಟು ಚೇತನವಿದೆ. ಸೂರ್ಯನ ಒಂದು ಅಂಗುಲ ಭಾಗವು 50 ಅಶ್ವಶಕ್ತಿಯನ್ನು ಕೊಡಬಲ್ಲುದಂತೆ.

o o o o

ಚಂದ್ರಲೋಕವು ಮಹಾ ಶೀತ ಪ್ರದೇಶ. ಅಲ್ಲೊಂದು ಆಶ್ಚರ್ಯ ನೋಡಿರಿ. ಅಲ್ಲಿ ಯಾರಾದರೂ ಹೋದವರಿಗೆ ನೀರು ಕಾಯಿಸಬೇಕಾದರೆ ಹೆಚ್ಚು ತೊಂದರೆ ಇಲ್ಲ. ಸ್ವಲ್ಪ ಸಮಯ ಬಿಸಿಲಿಗೆ ಇಟ್ಟರೆ ಸಾಕು. ಅದು ಕುದಿಯಲಾರಂಭಿಸುತ್ತದೆ. ಚಂದ್ರನಲ್ಲಿ ಹಗಲು ಪ್ರಚಂಡ ಬಿಸಿಲೂ, ರಾತ್ರಿ ಪ್ರಚಂಡ ಶೀತವೂ ಇರುತ್ತದೆ.

o o o o

ಮಹಾ ಯುದ್ಧದ ಕಾಲದಲ್ಲಿ ಜರ್ಮನಿಯ ಒಂದು ದೊಡ್ಡ ಫಿರಂಗಿಯು ಪ್ಯಾರಿಸಿನ ಮೇಲೆ ಗುಂಡು ಹಾರಿಸಿತು. 76 ಮೈಲು ದೂರದಿಂದ ಅದು ಒಂದು ಕ್ಷಣದೊಳಗೆ ಹಾರಿದ ಗುಂಡು ಪ್ಯಾರಿಸಿನ ಗಡಿಗಳ ಮೇಲೆ ಬೀಳಬೇಕಾದರೆ 24 ಮೈಲುಗಳ ಎತ್ತರದಿಂದ ಹೋಗಿದೆಯಂತೆ.

o o o o

ಭೂಮಿಯನ್ನು ತೋಡುತ್ತಾ ಹೋದರೆ, ಮಣ್ಣು ಆವೆ ಮಣ್ಣು, ಮರಳು, ಸುಣ್ಣ, ಶಿಲೆ, ಮತ್ತು ಕಬ್ಬಿಣ, ಇವುಗಳ ಪದರುಗಳನ್ನು ದಾಟಿಹೋಗಬೇಕಾಗುವುದು. ಆ ಮೇಲೆ ಕೆಳಗೆ ಉರಿಯುವ ಬೆಂಕಿ ಇದೆ. ಒಂದು ಸೆಕೂಂಡಿಗೆ 80,000 ಟನ್ನುಗಳಷ್ಟು ಕಲ್ಲಿದ್ದಲನ್ನು ಸುಡುವ ಬೆಂಕಿಗೆ ಎಷ್ಟು ಉಷ್ಣವಿರಬಹುದೊ ಅಷ್ಟು ಕಾವು ಪಾತಾಳದ ಬೆಂಕಿಗಿದೆಯಂತೆ.

ನಮ್ಮ ಪರಿಳಿತಗಳು ಒಂದೇ

ಲಾಹೋರದ ಕಾಂಗ್ರೆಸಿನ ಅಧ್ಯಕ್ಷ ಭಾಷಣದ ಒಂದು ಚೂರು; —ಮಾಲವೀಯರಿಂದ.

"ಒಂದಿಷ್ಟು ಹಿಂದುಗಳು ಕೊಂಚಮಂದಿ ಮುಸಲ್ಮಾನ ಬಂದುಗಳ ಮೇಲೂ ಒಂದಿಷ್ಟು ಮುಸಲ್ಮಾನರು ಕೆಲವು ಹಿಂದೂ ಬಾಂಧವರ ಮೇಲೂ ಗೆದ್ದರೆ ಅದರಿಂದಾಗುವ ಭಾಗ್ಯವಾದರೂ ಏನು?

ಹಿಂದೂ ಮುಸಲ್ಮಾನ್, ಪಾರ್ಸಿ ಕ್ರೈಸ್ತರೆಲ್ಲರೂ ಭುಜಕ್ಕೆ ಭುಜಗಳನ್ನು ಕೊಟ್ಟು ಸಹಕರಿಸುವ ದೇಶಾಭಿಮಾನವನ್ನು ನೋಡಲು ಎಷ್ಟು ಗಂಭೀರವಾಗಿರುತ್ತದೆ. ಅದನ್ನು ಬಿಟ್ಟು ನಾವು ನಮ್ಮ ನಮ್ಮ ಜಾತಿಮತಗಳನ್ನು ಹಿಡಿದು ಕೂತುಕೊಳ್ಳುವುದೆಂದರೆ ಅದೆಷ್ಟು ಅಸಹ್ಯವಾಗಿರುತ್ತದೆ.

"ಆದುದರಿಂದ ಪ್ರಿಯ ಬಾಂಧವರೆನಾವು ಹೀಗೆ ಬೇರೆ ಬೇರೆಯಾಗಿದ್ದು ನಮ್ಮ ರಾಷ್ಟ್ರದ ಉದ್ಧಾರವನ್ನೆಂದಿಗೂ ಮಾಡಲಾರೆವು. ನಾವು ಗೆಲ್ಲುವುದಾದರೂ, ಸೋಲುವುದಾದರೂ ಒಂದಾಗಿಯೇ ಆಗಬೇಕು."

ಕಾಂಗ್ರೆಸ್ ಉಮೇದ್ವಾರರಿಗೆ

"ಕೆಲವರನ್ನು ಉಮೇದುವಾರರಾಗಿ ನೇಮಕ ಮಾಡದಿದ್ದಮಾತ್ರಕ್ಕೆ ಇತರರು ಹತಾಶರಾಗಬೇಕೆಂದಿಲ್ಲ. ಶಾಸನ ಸಭೆಗಳಿಗೆ ಕಾಂಗ್ರೆಸ್ ಉಮೇದುವಾರರು ಎಷ್ಟು ಕೆಲಸ ಮಾಡಲಿದೆಯೋ ಅಷ್ಟು ಕೆಲಸವನ್ನು ಹೊರಗಿನಿಂದ ಕಾಂಗ್ರೆಸ್ ಸ್ವಯಂಸೇವಕರಾಗಿ ಮಾಡಬಹುದಾಗಿದೆ"—ರಾಜೇಂದ್ರ ಪ್ರಸಾದ.

ಪೂರ್ವದ ತಲೆ ಹೊಡಕರು

ತಲೆಹೊಡಕ ಸಾಲಿತರುವ ಮಾರ್ವಾಡಿಗಳು ಬಿಗುಪ್ತದಲ್ಲಿ ಇದ್ದರಂತೆ. ಅಲ್ಲಿ ಒಂದು ಪ್ರಾಮಿಸರಿ ನೋಟು ಸಿಕ್ಕಿದೆ ಕೆಲವು ಸಾವಿರ ವರ್ಷಗಳ ಹಿಂದಿನದು. ಅದರಲ್ಲಿ ನೂರಕ್ಕೆ ನೂರು ಬಡ್ಡಿ ತೋರಿಸಿರುತ್ತದೆ.

ಜಪಾನಿನ ನವವರ್ಷದ ಬಜೆಟ್ಟು.

ಜಪಾನೀಯ ಸರಕಾರವು ತಮ್ಮ ಹೊಸ ವರ್ಷದ ಬಜೆಟ್ಟಿನಲ್ಲಿ, ಯುದ್ಧ ಸಿದ್ಧತೆಗಾಗಿ ವಿಶೇಷ ತರದ ಗ್ರಾಂಟುಗಳನ್ನು ಮಾಡಿರುತ್ತದೆ ಯುದ್ಧ ಸಿದ್ಧತೆಗಾಗಿ ವ್ಯಯಿಸುವ ವಿಚಾರದಲ್ಲಿ ಈ ವರ್ಷದ ವ್ಯಯವು ಒಂದು ಮಹಾ ದಾಖ್ಲೆಯಾಗಿರುತ್ತದೆ. ೪೫,೦೦,೦೦೦,೦೦೦ ರೂಪಾಯಿಗಳನ್ನು ಯುದ್ಧ ಸಿದ್ಧತೆಗಾಗಿ ವಿಂಗಡಿಸಲಾಗಿದೆ. ಅಂದರೆ ಸಂಗ್ರಾಮ ಇಲಾಖೆಗಾಗಿ ಸರಕಾರದ ಗ್ರಾಂಟು ಅತಿಶಯವಾಗಿ ಹೆಚ್ಚಿದಂತಾಗಿದೆ. ಭೂಸೇನಾ ಇಲಾಖೆಯಿಂದಲೂ ನೌಕಾಸೇನೆ ಇಲಾಖೆಯಿಂದಲೂ ಹೆಚ್ಚಿನ ಗ್ರಾಂಟುಗಳು ಕೇಳಲಾಗಿದ್ದುವಂತೆ. ಆದರೆ ಸದ್ಯ ಸ್ಥಿತಿಯಲ್ಲಿ ಅವುಗಳನ್ನೆಲ್ಲಾ ಕೊಡಲು ಸರಕಾರಕ್ಕೆ ಸಾಧ್ಯವಿಲ್ಲದುದರಿಂದ ಅವರು ಕೋರಿದ ಗ್ರಾಂಟುಗಳಲ್ಲಿ ಸ್ವಲ್ಪ ಕಡಿಮೆಮಾಡಲಾಗಿದೆ. ಅಂದರೆ ರಷ್ಯಾ ದೇಶದ ಭಯಂಕರ ಸಿದ್ಧತೆಯ ಎದುರು ತಾವು ಹಿಂದುಳಿಯಬಾರದೆಂಬ ಭಾವನೆಯಿಂದ ಜಪಾನು ಹೀಗೆ ವರ್ತಿಸುವುದಾಗಿರಬಹುದು

ಆದುದರಿಂದ ಜಪಾನಿನ ನವ ವರ್ಷದ ಬಜೆಟ್ಟಿನಲ್ಲಿ ವಿಶೇಷ ತರದ ನಷ್ಟವು ಕಾಣಿಸುತ್ತದೆ. ಅದನ್ನು ಭರ್ತಿಮಾಡಲು, ಕೆಲವು ನೂತನ ಕಂದಾಯಗಳನ್ನು ಪ್ರಜೆಗಳ ಮೇಲೆ ಹೊರಿಸಬೇಕಾಗಿದೆ. ಆದರೂ, ಅದನ್ನು ಭರ್ತಿಮಾಡಲು ಸಾಲ ತೆರಬೇಕಾಗುವುದೆಂದು ಸರಕಾರವು ಬೇಗನೇ ಮಹಾ ಸಾಲವನ್ನು ಕರೆಯುವುದಾಗಿ ತಿಳಿದುಬರುತ್ತದೆ

ದೇಶದ ಇತರ ಸಾಮಾಜಿಕ ಅಭ್ಯುದಯವನ್ನು ಬಾಕಿಯಿಟ್ಟು, ಜಪಾನು ಯುದ್ಧಸಿದ್ಧತೆಯ ಕಡೆಗೆ ಹೆಚ್ಚಿನ ಗಮನಕೊಡುತ್ತದೆಂದು ಅಲ್ಲಿನ ಕೆಲವು ನಾಗರೀಕರ ವಿಮರ್ಶೆಯಾಗಿರುತ್ತದೆ

ಸೋವಿಯಟ್‌ನಲ್ಲಿ ಭಾರತೀಯರು.

ಶ್ರೀಮತಿ ಕಮಲಾ ನೆಹರುಗಳವರೊಡನೆ ಪಾಶ್ಚಾತ್ಯಕ್ಕೆ ತೆರಳಿದ ಪ್ರಸಿದ್ಧ ಭಾರತೀಯ ವೈದ್ಯರಾದ ಡಾ। ಎಂ ಅಟಾಲರು, ವೈದ್ಯಕೀಯ ವಿಚಾರಗಳಲ್ಲಿ ಪಾಶ್ಚಾತ್ಯದ ವಿವಿಧ ದೇಶಗಳ ಏರ್ಪಾಡುಗಳ ಕುರಿತು ಜ್ಞಾನಹೊಂದಲು ಅಲ್ಲಿ ಪ್ರವಾಸಮಾಡುತ್ತಿದ್ದವರು ಸೋವಿಯಟ್ ರಷ್ಯಾದ ಮೊಸ್ಕೋವಿಗೆ ತೆರಳಿ ಅಲ್ಲಿ ನಾಲ್ಕು ವಾರಗಳ ತನಕ ಇದ್ದು, ವೈದ್ಯಕೀಯವಿಚಾರಗಳಲ್ಲಿ ಅಲ್ಲಿನ ಅನುಭವಗಳನ್ನು ಹೊಂದುವರಾದರು. ಈ ಸಮಯದಲ್ಲಿ ಡಾ। ಅಟಾಲ ಇವರು ರಷ್ಯಾ ದೇಶದ ಅನೇಕ ಕೇಂದ್ರಗಳನ್ನು ಸಂದರ್ಶಿಸಿದರು. ವೈದ್ಯಕೀಯ ಕೆಲಸ, ಸಾರ್ವಜನಿಕ ಆರೋಗ್ಯ ಮತ್ತು ಸಮಾಜದಭ್ಯುದಯ ಇವುಗಳು ರಷ್ಯಾದಲ್ಲಿ ಹೇಗೆ ನಡೆಯುತ್ತದೆ ಎಂಬುದರ ಕಡೆಗೆ ಡಾ। ಅಟಾಲರು ಹೆಚ್ಚಿನಗಮನವನ್ನು ಕೊಟ್ಟಿದ್ದರು. ಆ ವಿಚಾರದಲ್ಲಿ ರಷ್ಯಾದಲ್ಲಿ ಅನೇಕ ಕಾರ್ಯಕಲಾಪಗಳು ನಡೆಯುತ್ತವೆಂದೂ, ಅವು ಒಳ್ಳೇ ಚೇತನದಿಂದ ನಡೆಯುತ್ತಿದ್ದಾವೆಂದೂ ಅವರ ಅನುಭವ ರಷ್ಯಾ ದೇಶವು ಆ ವಿಚಾರದಲ್ಲಿ ವಿಶೇಷವಾಗಿ ಸುಧಾರಣೆ ಹೊಂದಿರುತ್ತದೆ. ಜನರ ಆರೋಗ್ಯದ ಕಡೆಗೆ, ಅವರ ಶುಚಿತ್ವದ ಕಡೆಗೆ ಹೆಚ್ಚಿನ ಗಮನಕೊಡಲಾಗುತ್ತಿದೆ. ಮಾತೃಗಳನ್ನೂ ಮಕ್ಕಳನ್ನೂ ಬಹಳ ಜಾಗ್ರತೆಯಿಂದ ಸಲಹುತ್ತಿದ್ದಾರಂತೆ. ಆ ಕುರಿತು ವಿಶೇಷ ತರದ ಏರ್ಪಾಡುಗಳಾಗಿವೆ ಮಾತೃಗಳು ಮತ್ತು ಮಕ್ಕಳು ಮುಂದಿನ ಜನಾಂಗದ ಸೋಪಾನಗಳಾಗಿರುವುದರಿಂದ ಅವರು ಆರೋಗ್ಯವಂತರಾಗಿ ಬಾಳುವಂತೆ ಮಾಡುವುದೇ ಆ ದೇಶದ ಮುಖ್ಯ ಗುರಿಯಾಗಿರುತ್ತದೆ

ಈಗ ಡಾ. ಅಟಾಲರು ಜೆಕೊಸ್ಲೊವೇಕಿಯಾದ ಹತ್ತಿರ ಪಿಯಸ್ಟೇನಿ ಎಂಬಲ್ಲಿರುವರು. ಈ ಸ್ಥಳವು ನಿಸರ್ಗದ ಸೌಂದರ್ಯದಿಂದ ಕೂಡಿದಾಗಿದ್ದು, ಬಹಳ ಮನೋಹರವಾಗಿದೆ. ಭಾರತೀಯ ಪ್ರವಾಸಿಗಳು ಹೆಚ್ಚಾಗಿ ಅಲ್ಲಿಗೆ ಬರುತ್ತಿದ್ದಾರೆ. ಅದು ಪಾಶ್ಚಾತ್ಯದಲ್ಲಿನ ಭಾರತೀಯರ ಕೇಂದ್ರವಾಗುತ್ತಾ ಬರುತ್ತಿದೆ, ಅಲ್ಲಿನ ಮನೆಮಠಗಳಲ್ಲಿ ಭಾರತೀಯ ಗಾಯನವೂ ಕೇಳಿಸುತ್ತದಂತೆ.

ಜಪಾನಿನ ನವ ರಾಜಶಾಸನ

ಪ್ರಜಾಪ್ರಭುತ್ವವನ್ನು ನಿರ್ಮೂಲಗೊಳಿಸಿ ಪ್ರಜಾಹಿತ ದೃಷ್ಟಿಯಲ್ಲಿ ಸಾರ್ವಭೌಮ ಶಾಸನವನ್ನು ದೃಢವಾಗಿ ಸ್ಥಾಪಿಸುವ ಉದ್ದೇಶವು ಜಪಾನಿನ ಸಂಗ್ರಾಮಿಗಳಿಗಿರುವುದು. ಪಕ್ಷಗಳಿರುವ ಸರಕಾರಗಳಿರಬಾರದೆಂದು ಸಂಗ್ರಾಮವರ್ಗದ ಮನೋಗತವಾಗಿರುತ್ತದೆ. ಪ್ರಜಾಪ್ರಭುತ್ವವು ಪಾಶ್ಚಾತ್ಯವಾಗಿರುವುದರಿಂದ ಅದು ಅವರ ದೇಶವನ್ನು ಸೇರಬಾರದಂತೆ ಸರಕಾರಕ್ಕೆ ಬೇಕಾದ ಉಚ್ಚ ತರದ ಮೇಧಾವಿಗಳನ್ನುಳಿಸಿ ಅದನ್ನು ನಡೆಯಿಸಬೇಕಂತೆ ಪ್ರಜಾಮತವನ್ನು ತೆಗೆಯಲು ಒಳ್ಳೇ ಸುವ್ಯವಸ್ಥಿತ ಏರ್ಪಾಡುಗಳಾಗಬೇಕಂತೆ

ರಾಜಶಾಸನ ಸುಧಾರಣೆಯು, ಕುರಿತು ಎಲ್ಲ ಪಕ್ಷಗಳ ಪರಿಷತ್ತೊಂದು ಅಲ್ಲಿ ಸದ್ಯದಲ್ಲೇ ನಡೆಯುವುದಂತೆ ಸಂಗ್ರಾಮಿಗಳಿಗೆ ಎಲ್ಲಾ ವಿಚಾರಗಳಲ್ಲಿ ಈಗಿನ ದಿವಸಗಳಲ್ಲಿ ಮೇಲ್ಮಿನ ಕೈಯಿರುವುದರಿಂದ, ತಮ್ಮ ಗತಿಯೇನಾಗುವುದೋ ಎಂಬ ಒಂದು ತರದ ಭೀತಿಯು ಪಾರ್ಲಿಮೆಂಟರಿ ವರ್ಗಗಳಲ್ಲಿ ಉಂಟಾಗಿರುತ್ತದೆ

ಅಮೇರಿಕನ್ ನವ ಜಾಗೃತಿ

'ಪಶ್ಚಿಮ ಭೂವಲಯದಿಂದ ಶಸ್ತ್ರಯುಕ್ತ ಕಲಹಗಳನ್ನು ನಿವಾರಿಸಬಹುದು, ನಿವಾರಿಸಲಾಗುವುದು' ಎಂಬುದನ್ನು ಸಮಸ್ತ ಜಗತ್ತಿಗೆ ಪ್ರದರ್ಶಿಸುವರೆ, ಅಮೇರಿಕಾಗಳಲ್ಲಿ ಒಂದು ಮಹಾ ಯೋಜನೆಯು ಹೊರಟಿರುತ್ತದೆ ಈ ಯೋಜನೆಯ ಮಹತ್ವವನ್ನು ತೋರಿಸುವರೆ ಅಮೇರಿಕಾದ ಎರಡು ಖಂಡಗಳ ವಿವಿಧ ರಾಷ್ಟ್ರಗಳು ಸೇರಿವೆ ಯುದ್ಧದಿಂದ ಬೇಸತ್ತ ಜನಾಂಗಗಳಿಗೆ ಈ ಯೋಜನೆಯ ಮಹತ್ವವನ್ನು ತೋರಿಸುವರೆ ಸಂಯುಕ್ತ ಅಮೇರಿಕಾದ ಅಧ್ಯಕ್ಷರಾದ ರೂಸ್‌ವೆಲ್ಟರ ಅಧ್ಯಕ್ಷತನದಲ್ಲಿ ದಕ್ಷಿಣ ಅಮೇರಿಕಾದ ಬ್ಯೂನಸ್ ಎಯರ್ಸ್ ಎಂಬಲ್ಲಿ ಒಂದು ಮಹಾ ಪರಿಷತ್ತು ಸದ್ಯದಲ್ಲೇ ಜರಗುವುದು. ಅಮೇರಿಕಾದ ೨೧ ರಿಪಬ್ಲಿಕ್‌ಗಳು ಈ ಪರಿಷತ್ತಿನಲ್ಲಿ ಭಾಗವಹಿಸುವರು ಶಾಂತಿಸ್ಥಾಪನೆ ಸಮಸ್ಯೆಗಳು, ಯುದ್ಧ ಸಂಭವದಲ್ಲಿ ತಟಸ್ಥಭಾವ, ಶಸ್ತ್ರಸಿದ್ಧತೆಗೆ ಗಡಿಗಳನ್ನು ಹಾಕುವುದು, ನ್ಯಾಯವಿಚಾರ ಪ್ರಶ್ನೆಗಳು, ಸಾಂಪತ್ತಿಕ ಪ್ರಶ್ನೆಗಳು ಮತ್ತು ಜ್ಞಾನವಿಚಾರ ಪರಸ್ಪರ ಸಹಕಾರ ಇವೇ ಮೊದಲಾದ ವಿಚಾರಗಳು ಅಲ್ಲಿ ಚರ್ಚಿಸಲಾಗಿ ದೃಢವಾದ ನಿರ್ಣಯಗಳ ಮಾಡಲಾಗುವುವು ಸಂಯುಕ್ತ ಅಮೇರಿಕವು ಈ ಪರಿಷತ್ತಿನಲ್ಲಿ ಭಾರೀ ಉತ್ಸಾಹವನ್ನು ವಹಿಸುವುದಾಗಿ ತಿಳಿದುಬರುತ್ತದೆ ಯುರೋಪ್ಯದಲ್ಲಿ ಇನ್ನೊಂದು ಮಹಾಯುದ್ಧವು ಉಂಟಾಗುವುದಾದರೆ ಅದಕ್ಕೆ ಭೂಮಂಡಲದ ಈ ಭಾಗವು ಸಾಂಪತ್ತಿಕ ಅಧಿಕಟ್ಟಾಗದಂತೆ ನಿರ್ಣಯಗಳು ಇಲ್ಲಿ ಮಾಡಲಾಗುವವು ಯುರೋಪ್ಯವು ಈಗ ಮಾಡಲು ಹೊರಟ ಮಹಾಕೊಲೆ ಕೆಲಸದಲ್ಲಿ ಅಮೇರಿಕಾದಿಂದ ಅದಕ್ಕೆ ಯಾವತರ ಸಹಕಾರವು ಸಿಗದಂತೆ ವ್ಯವಸ್ಥೆಮಾಡಲಾಗುವುದು. ಕಳೆದ ಮಹಾಯುದ್ಧದಿಂದಾಗಿ ಅವರಿಗೆ ಆದ ಅನುಭವದಿಂದ, ಅವರು ಒಂದು ಮಹಾಪಾಠವನ್ನು ಕಲಿತಿರುವರು, ಅದರಿಂದ ಅಮೇರಿಕದ ಎರಡು ಖಂಡಗಳಿಗೂ ಮಹಾ ನಷ್ಟವು ಒದಗಿರುತ್ತದೆ ಉಪಕಾರ ಮಾತ್ರ ಏನೂ ಆಗಲಿಲ್ಲ

ಹಿಂದೂದೇಶದಲ್ಲೂ ನಗ್ನತೆ.

ಪಾಶ್ಚಾತ್ಯದ ಅನೇಕ ಕಡೆಗಳಲ್ಲಿ ನಗ್ನತೆಯ ವಿಚಾರ ಅಭಿರುಚಿಯುಂಟಾಗಿದ್ದು, ನಗ್ನವಾಗಿದ್ದು ಸಮಯ ಕಳೆಯಲು ಕೆಲವೊಂದು ಕ್ಲಬ್ಬುಗಳು ಸಂಸ್ಥೆಗಳೂ ಅಲ್ಲಿ ಸ್ಥಾಪನೆಯಾಗಿದ್ದು ಬಹಳ ಯಶಸ್ವಿಯಾಗಿ ಕಾರ್ಯಸುತ್ತವೆ ವಿವಿಧ ದೇಶಗಳಲ್ಲಿನ ಈ ಕ್ಲಬ್ಬುಗಳು ವಿವಿಧ ತರದ ಕ್ರಮಗಳನ್ನಾಚರಿಸುತ್ತವೆ. ಈ ನಗ್ನತೆಯ ಗಾಳಿಯು ಪಾಶ್ಚಾತ್ಯ ದೇಶದಲ್ಲಿ ಪ್ರವಾಸ ಬೆಳೆಸಿಯಿದ ಓರ್ವ ಭಾರತೀಯ ಮಹನೀಯರಿಗೂ ತಗಲಿದಂತೆ ಕಾಣುತ್ತದೆ ಬಿಹಾರದಲ್ಲಿ ಜರ್ಮನ್ ಕ್ರಮಗಳನ್ನನುಸರಿಸಿ ಒಂದು ನಗ್ನ ಕ್ಲಬ್ ಸದ್ಯದಲ್ಲಿ ಸ್ಥಾಪನೆಯಾಗುವುದೆಂಬ ವಾರ್ತೆಯು ಬಂದಿರುತ್ತದೆ.

ಇಟಲಿ ಜರ್ಮನ್—ಜಪಾನ್ ಒಪ್ಪಂದ

ಇಟಲಿ—ಜರ್ಮನ್—ಜಪಾನ್ ಒಪ್ಪಂದವೊಂದಾಯಿತಷ್ಟೆ ಇದರಿಂದ ಫ್ರಾನ್ಸು ಹೇಗೆ ವರ್ತಿಸುತ್ತಿದೆಂಬುದರ ಕುರಿತು ಅನೇಕ ಕಡೆಗಳಲ್ಲಿ ಅನೇಕ ಊಹನೆಗಳಿದ್ದಿದ್ದವು ಮೇಲಿನ ಮೂರು ಜನಾಂಗಗಳು ಕಮ್ಯುನಿಸ್ಟ ರಷ್ಯಕ್ಕೆ ವಿರೋಧವಾಗಿ ಒಪ್ಪಂದ ಮಾಡಿದಾಗಿರುತ್ತದೆ ಮೊನ್ನೆ ನಡೆದ ಫ್ರೆಂಚ ಶಾಸನ ಸಭೆಯ ಅಧಿವೇಶನದಲ್ಲಿ ಮುಖ್ಯ ಮಂತ್ರಿಯರ ಭಾಷಣದಿಂದಲೂ, ಬಹಿರ್ ವ್ಯವಹಾರದ ಇಲಾಖೆಯ ಕಾರ್ಯದರ್ಶಿಯವರ ಭಾಷಣದಿಂದಲೂ ಫ್ರೆಂಚ ಸರಕಾರದ ರಷ್ಯಾದೊಡನೆ ಇರುವ ಬೆಂಬಲವು ಇನ್ನೂ ಹೆಚ್ಚಿಸಲಾಗುವುದೆಂದು ತಿಳಿದುಬರುತ್ತದೆ ಕಮ್ಯುನಿಸ್ಟರಿಗೆ ವಿರೋಧವಾದ, ಇಟಲಿ—ಜರ್ಮನ್ ಪ್ರೇರಣೆಗೊಳಗಾದ ಒಂದು ಪಕ್ಷವು ಫ್ರಾನ್ಸಿನಲ್ಲಿ ಜನ್ಮತೆತ್ತಿದ್ದು ಕಾರ್ಯಸುತ್ತಿದ್ದರೂ ಅವರ ಕಮ್ಯುನಿಸಮಿಗೆ ವಿರೋಧವೆಸಿಸುವ ಕಾರ್ಯಗಳು ಅಷ್ಟು ಯಶಸ್ವಿಯಾಗಿ ನಡೆಯುವುದಿಲ್ಲ

ಜರ್ಮನಿ ಮತ್ತು ಆಸ್ಟ್ರೀಯಾ

ಆಸ್ಟ್ರೀಯಾ—ಜರ್ಮನ್ ಸಂಬಂಧಗಳು ಇತ್ತೀಚೆಗೆ ಭಿನ್ನವಾಗುತ್ತಾ ಬರುತ್ತಿವೆ ಆಸ್ಟ್ರೀಯದ ಅಭ್ಯುದಯಕ್ಕೆ ಮೂರು ಆಭ್ಯಂತರಗಳು ಇರುವವೆಂದೂ, ಅವುಗಳು (೧) ಕೊಮ್ಯುನಿಸಂ (೨) ನಾಜಿಸಂ (ಜರ್ಮನಿಯ ರಾಷ್ಟ್ರೀಯ ಸಮತಾವಾದವು ತಮಗೆ ಬಹಳ ಹಾನಿಕರವೆಂದು ಅವರ ಅಭಿಪ್ರಾಯ) (೩) ಸೋತ ಮನೋವರ್ತನೆ ಜರ್ಮನಿಯ ಪ್ರೇರಣೆಯು ಆಸ್ಟ್ರಿಯವನ್ನು ಸೇರಬಾರದಾಗಿ ಮಾಡುವುದೇ ಅಲ್ಲಿನ ಚಾನ್ಸಲರರ ಮುಖ್ಯ ಉದ್ದೇಶವಾಗಿರುತ್ತದೆ. ಇದರಿಂದಾಗಿ ಜರ್ಮನಿಗೆ ಸ್ವಲ್ಪ ಹೊಟ್ಟೆಯುರಿಯುಂಟಾಗಿದೆ ನಾಜಿಗಳಿಗೆ ವಿರೋಧ ಪ್ರಚಾರ ನಡೆಸಿದುದರ ಕುರಿತು, ಜರ್ಮನಿಯ ರಾಜಧಾನಿಯಾದ ಬರ್ಲಿನ್ ನಗರದಿಂದ ಪ್ರತಿಕೂಲಗಳು ಹೋಗಿವೆ ಆಸ್ಟ್ರಿಯಾಕ್ಕೆ ಸ್ವತಂತ್ರವಾಗಿ ಬಾಳಬೇಕೆಂಬ ಮಹಾ ಆಶೆಯು ಉಂಟಾಗಿರುತ್ತದೆ

ಚೀನಾ ಜಪಾನ್ ಸಮ್ಬಂಧ

ಚೀನಾದಲ್ಲಿ ದಿನೇ ದಿನೇ ಕಮ್ಯುನಿಸ[illegible] ಪ್ರೇರಣೆಯು ಹೆಚ್ಚುತ್ತಾ ಇದೆ ಮೊಂಗೋ[illegible]ಯಾದ ಕೊಮ್ಯುನಿಸ್ಟ ರಾಜ್ಯಗಳ ಹತ್ತಿ[illegible] ಚೀನಾ ದೇಶದ ಕೆಲವು ಪ್ರಾಂತ್ಯಗಳನ್ನು ತ[illegible] ವಶಮಾಡಿಕೊಳ್ಳಲು ಹವಣಿಸುತ್ತಿದ್ದಾರೆ ಮೊಂಗಲಿಯಾದಿಂದ ಕೆಲವು [illegible] ಗಳು ಆ ಪ್ರಾಂತ್ಯಗಳ ಮೇಲೆ ದಂಡೆತ್ತಿ [illegible] ಚೀನಾದಲ್ಲಿ ಕೊಮ್ಯುನಿಸ್ಟ [illegible]ತ್ತಿರುವುದನ್ನು ಕಂಡು ಜಪಾನಿಗೆ ಭೀತಿ[illegible]ಗಿರುತ್ತದೆ ಕೊಮ್ಯುನಿಸ[illegible] ಚೀನಾದಿ[illegible] ಹೊರಗಿಡಲು ಜಪಾನು [illegible]ತ್ತಿದೆ ಜಪಾನಿನ ಸರಕಾರ [illegible]ಯಲ್ಲಿ ಆ ಕುರಿತು ಅನೇಕ [illegible] ವವು ಚೀನಾದೇಶವು [illegible] ಬಿಟ್ಟು ಅನ್ಯ ಜನಾಂಗವಿಂದ [illegible] ಕೈಜೋಡಿಸಬಾರದೆಂದ. ಜಪಾನ [illegible] ಒಂದು ಸೂಚನೆಯ[illegible]ಟ್ಟಿರುತ್ತದೆ [illegible] ಚೀನಾವು ತನಗಾಗಿಯೆ [illegible] ಜಪಾನಿನ ಉದ್ದೇಶ [illegible] ಇಷ್ಟಾರ್ಥವು ನೆರವೇರದೆ [illegible] ತನ್ನ [illegible]ಗಳನ್ನು ನಡೆಸಿ [illegible] ಆದರೆ ಚೀನಾ—ಜಪಾನ್ ಒಪ್ಪಂದವೃ[illegible] ಆಗುವ ಹಾಗೆ ಆ [illegible] ಮಾತು[illegible]ಗಳ ಪ್ರಾರಂಭವಾಗುವವೆ ದ [illegible]

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅವರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು —ಪೊಪ್ಯುಲರ್ ಸ್ಟೋರ್ಸ್,

ರಥಬೀದಿ, ಮಂಗಳೂರು

ಒಂದು ವರ್ಷದೊಳಗೆ ಸ್ವರಾಜ್ಯ

ಹದಿನಾರು ವರುಷಗಳ ಕೆಳಗೆ ಮಹಾತ್ಮಾ ಗಾಂಧಿಯವರು ಕಲ್ಕತ್ತಾ ಕಾಂಗ್ರೆಸ್ಸಿನಲ್ಲಿ ಕೆಲವು ಶರ್ತಗಳನ್ನು ಮುಂದಿಟ್ಟು ಅವುಗಳನ್ನು ಕ್ರಮವಾಗಿ ಅನುಸರಿಸಿದರೆ ನಮಗೆ ಒಂದೇ ವರ್ಷದೊಳಗೆ ಸ್ವರಾಜ್ಯ ಸಿಕ್ಕುತ್ತೆಂದು ಹೇಳಿದ್ದರು. ಫೈಜಪುರದ ತಮ್ಮ ಭಾಷಣದಲ್ಲಿ ಅದನ್ನು ಪುನಃ ವಿವರಿಸುತ್ತಾ ಮಹಾತ್ಮರು "ನಾವು ಎಂದಿಗೆ ನಮ್ಮ ಕೈನೂಲಿನ ಕಸಬನ್ನು ಬಿಟ್ಟು, ಲಿಂಕಶ್ಯಾರಿನ ನೂಲನ್ನು ತರಿಸಲು ಪ್ರಾರಂಭಿಸಿದೆವೊ ಅಂದೇ ನಾವು ಗುಲಾಮರಾಗಿದ್ದೇವೆ. ಈಗಲಾದರೂ ಅದೇನು ಕೆಟ್ಟಿದ್ದಲ್ಲ. ಈಗಲೂ ಎಲ್ಲರೂ ಖಾದಿಯನ್ನೇ ಧರಿಸಿದರೆ ನಾವು ಆರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಹೊಂದಬಹುದು. ನಾವೀಗ ಈ ನೂಲು ಚರಕದ ವಾರ್ತೆಯನ್ನು ಹಳ್ಳಿ ಹಳ್ಳಿಗಳಲ್ಲಿ ಸಾರಿದರೆ ವ್ಯಾಸರಾಯರು ನಮ್ಮಲ್ಲಿಗೆ ಬಂದು "ಇಷ್ಟರ ವರೆಗೆ ನಾನು ತಪ್ಪು ತಿಳಿಕೊಂಡಿದ್ದೆ. ಕಾಂಗ್ರೆಸ್ಸಿನವರು ಭಯಾನಕ ಕೂಟದವರೆಂದು ತಿಳಿದಿದ್ದೆ. ಈಗ ಭಾರತೀಯರು ಇಷ್ಟಪಟ್ಟರೆ ನಾವಿಲ್ಲಿ ಇರುತ್ತೇವೆ. ಇಲ್ಲದಿದ್ದರೆ ನಮ್ಮಿಂದ ಸಾಧ್ಯವಿಲ್ಲ" ಎಂದು ಹೇಳುತ್ತಾರೆ. ಬ್ರಿಟಿಷರಿಗೆ ಎಲ್ಲಿ ಲಾಭ ಕಾಣುವುದಿಲ್ಲವೊ ಅಲ್ಲಿ ಅವರು ನಿಲ್ಲಲಾರರು ಎಂದು ಹೇಳಿದರು.

ರೈತರಿಗೆ ಜವಾಹರಲಾಲರ ಸಂದೇಶ

"ಕಾಂಗ್ರೆಸ್ಸು ಸ್ವರಾಜ್ಯಕ್ಕಾಗಿ ಸಾಧಿಸುತ್ತದೆ. ಸ್ವರಾಜ್ಯ ಸಿಕ್ಕಿದ ಮೇಲೆ ರೈತರ ಆಡಳಿತೆಯು ಪಂಚಾಯತುಗಳಿಂದ ನಡೆಸಲ್ಪಡುತ್ತದೆ. ನಿಮಗೆ ಸ್ವತಂತ್ರವಾಗಿ ನಡೆಸುವ ಸರಕಾರವು ಆಗ ಜಾರಿಯಲ್ಲಿ ಬರುತ್ತದೆ. ಆದರೆ ಆ ಸ್ವರಾಜ್ಯವನ್ನು ಹೇಗೆ ಪಡೆಯಬಹುದು? ನಮ್ಮ ಶಕ್ತಿಯನ್ನು ಬಲಗೊಳಿಸಬೇಕು. ಕಾಂಗ್ರೆಸ್ಸೆಂಬ ಸಂಸ್ಥೆಯು ಇದಕ್ಕಾಗಿ ದೇಶದಲ್ಲಿ ಹರಡಿರುತ್ತದೆ. ಆದುದರಿಂದ ಪ್ರತಿಯೊಬ್ಬ ರೈತನೂ ಕಾಂಗ್ರೆಸ್ ಉಮೇದ್ವಾರರಿಗೇನೇ ವೋಟು ಕೊಟ್ಟು ಚುನಾಯಿಸಬೇಕು. ಈ ವಿಷಯದಲ್ಲಿ ನಿಮ್ಮ ಗ್ರಾಮದ ಅಧಿಕಾರಿಗಳಾರಾದರೂ ನಿಮ್ಮನ್ನು ಹೆದರಿಸಬಹುದು. ಅವರ ಟೊಳ್ಳು ಹೆದರಿಕೆಗೆ ಬೆದರಿ ಮೋಸಹೋಗಬೇಡಿರಿ' ಧೈರ್ಯದಿಂದ ಕಾಂಗ್ರೆಸ್ಸಿಗೆ ಓಟು ಕೊಡಿ!' ಅಷ್ಟರಲ್ಲಿ "ಜವಾಹಿರಲಾಲ ಕೀ ಜೈ" ಎಂಬ ಘೋಷವು ಬಿತ್ತು.

ರೊಮ್ಯಾನ್ ರೊಲೆಂಡರ ಸಂದೇಶ

"ನಾವು ಫ್ರಾನ್ಸಿನಲ್ಲಿಲ್ಲಿ, ಬೇರೆ ಬೇರೆ ಮತದವರಾದಾಗ್ಯೂ, ಫೆಸಿಸಮನ್ನು ಎದುರಿಸಲಿಕ್ಕಾಗಿ ಎಲ್ಲರೂ ಒಟ್ಟಾಗಿದ್ದೇವೆ. ಅದೇ ಪ್ರಕಾರ ನೀವಾದರೂ ಪರದಾಸ್ಯದಿಂದ ಬಳಲಿದ್ದೀರಿ. ನಿಮ್ಮ ನಿಮ್ಮ ವೈಶಮ್ಯಗಳನ್ನು ಬದಿಗಿಟ್ಟು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ವಿಶ್ವಶಾಂತಿಗೆ ಪ್ರಯತ್ನಿಸಿರಿ." ವಿದೇಶಿಯವರಾದರೂ ಭಾರತ ಹಿತೈಷಿಗಳಾದ ಇವರ ಮಾತುಗಳನ್ನಾದರೂ ಕೆಲವು ಪಾರ್ಟಿಯವರು ಮನ್ನಿಸಬಾರದೆ?

ಅವತಾರಿ ಮಗು

ಮೊಹೊ ಪ್ರೊಸಿಕ್ ಎಂಬವನೊಂದು ಜಾಗ್ರೆಬಿನ 6 ವರುಷದ ಮಗು. ತಂದೆ ಸಮಗಾರನು. ಮಗುವಿಗೆ ವಿಚಿತ್ರ ಮಿದುಳುಶಕ್ತಿ, ಆದರೆ ಓದ ಬರೆಯ ಬರುವುದಿಲ್ಲ. ಅದಕ್ಕೆ ಎಷ್ಟು ಸಂಖ್ಯೆಗಳನ್ನಾದರೂ ಕೂಡಿಸಿ, ಕಳೆದು ಗುಣಿ, ಭಾಗಿಸಲಿಕ್ಕೆ ಹೇಳಿದರೂ ಕ್ಷಣದಲ್ಲಿ ಉತ್ತರ ಕೊಡುತ್ತದೆ. ಒಬ್ಬ ಗಣಿತ ಉಪಾಧ್ಯಾಯರು ಆಡುತ್ತಲಿದ್ದ ಈ ಚಿಕ್ಕ ಹುಡುಗನನ್ನು ನೋಡಿ "ಮಗು ನನಗೆ ಈ ದಿನಕ್ಕೆ 52 ವರುಷಗಳಾದುವು. ಅದ್ದರಿಂದ ನಾನೆಷ್ಟು ದಿವಸಗಳು ಬದುಕಿದಂತಾಯಿತು?" ಎಂದು ಕೇಳಿದರಂತೆ. ತಕ್ಷಣವೇ ಮಗುವು 52 ವರುಷಗಳ ಒಂದನಿಂದಲೂ ಪ್ರತಿ ವರುಷದ ಫೆಬ್ರವರಿ ತಿಂಗಳ ದಿವಸಗಳನ್ನು ಕೂಡ ಲೆಕ್ಕ ಹಾಕಿ ಸರಿಯಾದ ಉತ್ತರವನ್ನು ಕೊಟ್ಟಿತಂತೆ.

ಹೀಗೂ ಉಂಟೆ?

ಮಾಜಿ ಆಕ್ಟಿಂಗ ಗವರ್ನರರಾಗಿದ್ದ ಸರ್ ಮಹಮ್ಮದ್ ಉಸ್ಮಾನರು ಯೂರೋಪಿಯರಿಗೆ ಅಮೂಲ್ಯ ಸೂಚನೆ ಕೊಟ್ಟಿದ್ದಾರೆ,—ನೀವೂ ಕಡೆಮೆಯುವರಲ್ಲ,—ಒಬ್ಬರಾದರೂ ಮುಂದೆ ಮಂತ್ರಿ ಪದವಿಗೆ ಬರಬಹುದಲ್ಲ!—ಎಂದು.

ಸರ್‌ರು ಜಸ್ಟೀಸ್ ಪಕ್ಷದ ಅಧಿನಾಯಕರು. ಅವರ ಸೂಚನೆಗೆ ಬೆಲೆಯಿದೆ. ಯಾವ ರೀತಿಯಲ್ಲಿ? ಆ ಪಕ್ಷದ ಮುಖ ಪತ್ರಿಕೆಯಲ್ಲಿ ಅವರು ವಿವರಿಸಿದ್ದಾರೆ.

ಸರ್ ಕೆ. ವಿ. ರೆಡ್ಡಿಯವರು ಮಾಜಿ ಆಕ್ಟಿಂಗ ಗವರ್ನರರಾಗಿದ್ದರಷ್ಟೆ. ಅವರೂ ಕೆಲ ಮಟ್ಟಿಗೆ ಇದೇ ಪಕ್ಷವನ್ನು ಸಮರ್ಥಿಸಿ ಅದೇ ಪತ್ರಿಕೆಯಲ್ಲಿ ಸೂಚನೆ ಕೊಟ್ಟಿದ್ದರು. ಈಗ ಅದು ಇವರ ಸರದಿ; ಸರದಿಯಂತೆ ವರದಿ.

ಮಂತ್ರಿ ಕೂಟವು ಸರಿಯಾಗಿ ಸ್ಥಿಮಿತ ಹೊಂದುವ ಹಾಗೆ ಯುರೋಪಿಯನೊಬ್ಬನು ಇರಬೇಕೆಂದು ಇವರ ಬೋಧನೆ, ಆಸೆ, ಸೂಚನೆ ಇತ್ಯಾದಿ.

ಯೂರೋಪಿಯ ಮೆಂಬರರು ಕೆಲವೇ ಮಂದಿಯಾಗಿ ಬರೀ ಗುಲ್ಲು ಎಬ್ಬಿಸಿ ಕೂತಿರುವರೆ? ಅಥವಾ ಮಂತ್ರಿಗಳಲ್ಲಿ ಅಡ್ಮರೆನ್ನಿಸಿಕೊಳ್ಳುವ ಆಸೆ ಅವರಲ್ಲಿ ಒಬ್ಬರಿಗೂ ಇಲ್ಲವೆ? ಈಗ ಸರ್‌ರ ಒಂದು ಪ್ರಶ್ನೆ.

ಪ್ರಶ್ನೆಗೆ ಉಪಾಯವನ್ನು ಅವರೇ ಸೂಚಿಸಿದ್ದಾರೆ. ಅದು ಹೀಗೆ:—

ಚುನಾವಣೆಗಳಾದ ಬಳಿಕ, ಯುರೋಪಿಯರ ಅಭಿಪ್ರಾಯಗಳನ್ನು ಸಮರ್ಥಿಸುವ ಯಾವುದೊಂದು ಪಕ್ಷವನ್ನು ಅವರು ಕೌನ್ಸಿಲಿನಲ್ಲಿ ಸೇರಿಕೊಂಡರಾಯಿತು! ಅಷ್ಟೆ. ಗೆದ್ದವರ ಕಡೆಗೆ ಸೇರಿರೆಂದು ಬೋಧಿಸುವ ಈ ಸೂಚನೆ ಹೇಗೆ?

ಚುನಾವಣೆಗಳಾಗುವ ಮೊದಲೇ ಅವರು ಸೇರಿದರಾಗದೆ?

ಬ್ರಿಟಿಷಪಾರ್ಲಿಮೆಂಟಿನ ಚುನಾವಣೆಗಳಲ್ಲಿರುವ ಕ್ರಮವು ಹೀಗೆ:—ಹಲವು ಪಕ್ಷಗಳ ಸದಸ್ಯರು ಸೇರಿ ಮಂತ್ರಿಮಂಡಲವನ್ನು ರೂಪಿಸಿಕೊಳ್ಳುವುದೂ ಇದೆ.

ಇರಲಿ, ಯಾವ ಪಕ್ಷವನ್ನು ಅವರು ಸೇರಬೇಕು? 'ಕೌನ್ಸಿಲಿನ ಕಾರ್ಯಕ್ಕೆ ಆತಂಕಗೊಳಿಸುವವರನ್ನಲ್ಲ,' ಎಂದು ಸರ್‌ರ ಸೂಚನೆ. ಕೌನ್ಸಿಲಿನ ಕಾರ್ಯವು ಸರಾಗವಾಗಿ ಸಾಗುವ ಹಾಗೆ ಯಾರು ಇರುವರೋ ಅವರನ್ನೆ ಸೇರಬೇಕು. ಒಂದು ನಿಷೇದಾರ್ಥ, ಒಂದು ವಿಧ್ಯರ್ಥ, ಎರಡರ ಇತ್ಯರ್ಥವೂ ಒಂದೇ ಬಗೆ. ಯೂರೋಪಿಯರು ಜಸ್ಟಿಸ್ ಪಕ್ಷವನ್ನು ಸೇರುವುದೇ ಶ್ರೇಯಸ್ಕರವೆಂದು ತೋರಿಸಲಾಗಿದೆ.

ಆದರೆ, ಜಸ್ಟಿಸ್ ಪಕ್ಷವು ಗೆದ್ದರೆ,—ಇದು ಹೇಗೆಂದು ಲಕ್ಷಣಗಳಾವುವೂ ತೋರಿಲ್ಲವೆಂದು ಪ್ರಮುಖರೇ ಸಂದೇಹಪಡುತ್ತಾರೆ,—ಆ ಪಕ್ಷವು ಇತರ ಎಷ್ಟೋ ಪಕ್ಷಗಳಲ್ಲಿ ಒಂದು ಪಂಗಡ ಮಾತ್ರ, ಈ ಪಕ್ಷಗಳಲ್ಲಿ ಒಂದಕ್ಕೂ ಬಹುಮತವು ದೊರೆವಂತಿಲ್ಲ.

ಜಸ್ಟಿಸ್ ಪಕ್ಷವು ಗೆದ್ದರೆ, ಯೂರೋಪಿಯರು ಅದನ್ನೆ ಸೇರಿದರೆ, ಯೂರೋಪೀಯನೊಬ್ಬನಾದರೂ ಮಂತ್ರಿಯಾಗದಿರಲಾರನು ಎಂದು ಭವಿಷ್ಯವಾದ.

ಆದರೆ, ಯೂರೋಪಿಯರು ಯಾವುದೊಂದು ಪಕ್ಷವನ್ನೂ ಸೇರದಿದ್ದರೂ, ಅಲ್ಪಸಂಖ್ಯಾಕರೆಂಬ ಒಂದೇ ಕಾರಣದಿಂದ ಮಂತ್ರಿಪದಕ್ಕೂ ಅರ್ಹರಾಗಿದ್ದರೆಂದೂ, ಅವರಲ್ಲೊಬ್ಬನಾದರೂ ಮಂತ್ರಿಯಾಗದೆ ಇರಲಾರನೆಂದೂ ಮೊದಲೇ ಅವರಿಗೆ ಗೊತ್ತಿರುವುದು ಸರ್‌ರಿಗೆ ತಿಳಿಯದಿದ್ದುದು ಆಶ್ಚರ್ಯ.

ವ್ಯವಸ್ಥಾ ವಿರೋಧಿಗಳೆಂಬವರನ್ನು ಎದುರಿಸಲು ಈ ಉಪಾಯವು ಮುಖ್ಯವೆಂದು ಚೆನ್ನಾಗಿ ತಿಳಿಸಿದ್ದಾಗಿದೆ. ಇದನ್ನೆ ಇನ್ನೂ ಇನ್ನೂ ತಿಳಿಸುವುದೂ ಅವರ ಪತ್ರಿಕೆಯ ಕರ್ತವ್ಯವಾಗಿದೆ.

ಇದು ವರೆಗೆ ಜಸ್ಟಿಸ್ ಪಕ್ಷದ ಕರ್ತವ್ಯವೇನಾಗಿದ್ದಿತು? ಯೂರೋಪಿಯ ಮೆಂಬರರು ಒಂದಾಗಿ, ಸರಕಾರೀ ಮೆಂಬರರೊಡನೆ ವೋಟು ಕೊಟ್ಟಲ್ಲಿ ಮಾತ್ರ ಯಾವುದೊಂದು ಜಸ್ಟಿಸ್ ಪಕ್ಷದ ನಿರ್ಣಯವು ಕೌನ್ಸಿಲಿನಲ್ಲಿ ಮಂಜೂರಾಗುವಂತಾಗುತ್ತಿದ್ದಿತು!

ಈಗ? ಚುನಾವಣೆಗಳ ಮೊದಲೇ, ಯೂರೋಪಿಯರು ತಮ್ಮೊಡನೆ ಸೇರಬೇಕೆಂದು ಸೂಚಿಸದೆ, ತಾವು ತಮಷ್ಟಕ್ಕೆ ಯೂರೋಪಿಯರು ಮುಂದೆ ತಮ್ಮ ಕಡೆಗೆ ಸೇರಿ ವೋಟು ಕೊಡುವಂತೆ ಆದರೆ ಸಾಕೆಂಬುದೇಕೆ? ಜಸ್ಟಿಸ್ ಪಕ್ಷದ ಧೋರಣೆ ಜಾತಿಕಟ್ಟಿನದೆಂಬ ಮಾತಲ್ಲ, ವ್ಯವಸ್ಥಾಪೋಷಕರೆಂಬುದಷ್ಟೆ ಆದರೆ ವ್ಯವಸ್ಥಾ ಪೋಷಣೆಯ ಧ್ಯೇಯಾಭಿಪ್ರಾಯಗಳು ಜಸ್ಟಿಸ್ ಪಕ್ಷದ ವರವು ಬೇರೆ, ಯುರೋಪೀಯವರವು ಬೇರೆ!

ಯುರೋಪಿಯರ ವಿಚಾರಗಳು ಇದು ವರೆಗೂ ಮುಂದೆಯೂ ಹೀಗೆ,—ತಾವು ಸ್ವತಂತ್ರರು. ಪ್ರತಿಯೊಂದು ವಿಷಯದಲ್ಲಿ ತಮ್ಮ ಧೋರಣೆಯಂತೆ ವರ್ತಿಸುವವರು. ಅವರು ಬೇರೆ ಪಂಗಡ ಕಟ್ಟಿಕೊಂಡವರಲ್ಲ, ಕಟ್ಟಿಕೊಳ್ಳಲಾರರು. ಸರ್‌ರು ಇದನ್ನು ಮರೆತರು. ಹೀಗೆ ಹೇಳಿದರು. ಹೀಗೂ ಉಂಟೆ?

ವಿಚಿತ್ರ ವಿಜ್ಞಾನ

ಯೂರೋಪಿನ ಜನರೆಲ್ಲರೂ ಒಟ್ಟುಕೂಡಿ ಎಲ್ಲರೂ ಒಂದೇ ಸಮಯದಲ್ಲಿ ಮಾತನಾಡಿದರೆ ಅಲ್ಲಿ ಒಂದು ಮೋಟಾರು ಸೈಕಲನ್ನು ಓಡಿಸುವಷ್ಟು ಶಕ್ತಿ ಉತ್ಪನ್ನವಾಗುತ್ತದಂತೆ.

o o o o

ನಾವು ಇದನ್ನು ಓದುತ್ತಿದ್ದ ಹಾಗೆ ನಮ್ಮ ಬೆನ್ನ ಮೇಲೆ 1120 ರಾತ್ತಲುಗಳ ಗಾಳಿಯ ಒತ್ತಾಟವಿದೆ—ನಮಗದು ತಿಳಿಯುವುದಿಲ್ಲ. ಯಾಕೆ? ಮೇಲಿನಿಂದ ಇದ್ದಂತೆ ಗಾಳಿ ಒತ್ತಾಟವು ಕೆಳಗಿನಿಂದಲೂ ಇರುವುದರಿಂದ.

o o o o

ಇದೇ ಪ್ರಕಾರ ನೀರಿನಲ್ಲಿಯೂ, ಒಂದು ಮೈಲು ಆಳದಲ್ಲಿ, ಒಂದೊಂದು ಇಂಚಿನ ಮೇಲೆ 120 ಟನ್ನುಗಳಷ್ಟು ಭಾರವಿದೆ. ನೀರಿಗೂ ಕೆಳಗಿನಿಂದ ಒತ್ತಾಟವಿದೆ.

o o o o

ನಿಮ್ಮ ಕೋಣೆಯ ಸುತ್ತಲೂ ನೋಡಿರಿ. ಅದರಲ್ಲಿ ನಿಮ್ಮ ಸಮತೂಕವಾದ ಗಾಳಿಯು ಇದೆ.

o o o o

ಒಂದು ಇಲೆಕ್ಟ್ರಿಕ್ ದೀಪವು ಒಂದು ಮಿನಿಟಿಗೆ ದೊಡ್ಡ ಬಿರುಗಾಳಿಯ ಮಿಂಚಿನಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತದೆ.

o o o o

ನಿಮ್ಮ ಎದೆಯನ್ನು ಮುಟ್ಟಿ ನೋಡಿರಿ. ನಾಡಿ ಹೊಡೆಯುವುದನ್ನು ಕೇಳಬಹುದು. ಶಬ್ದವು ಚಿಕ್ಕದಾದರೂ ಒಂದು ಮಿನಿಟಿಗೆ ಹೊಡೆಯುವ 70–80 ಶಬ್ದಗಳಿಂದ 8 ಗೆಲನುಗಳಷ್ಟು ರಕ್ತವು ಎದೆಗುಂಡಿಯಿಂದ ಹೊರಗೆ ಹೋಗುತ್ತದೆ. ಸಾಧಾರಣ ಒಂದು ನೀರಿನ ಪ್ಯಾಪಿನಿಂದ ಮಿನಿಟಿಗೆ ಬರುವ ನೀರು ಬರೆ 4 ಗೆಲನ್.

o o o o

ಸಾಧಾರಣ ಒಂದು ಮೋಟರು ಇಂಜಿನು ನಾಲ್ಕು ಅಶ್ವಶಕ್ತಿಯುಳ್ಳದ್ದು. ಸೂರ್ಯನಲ್ಲಿ 50,000,000,000,000,000,000,000 ಅಶ್ವಶಕ್ತಿಯಷ್ಟು ಚೇತನವಿದೆ. ಸೂರ್ಯನ ಒಂದು ಅಂಗುಲ ಭಾಗವು 50 ಅಶ್ವ ಶಕ್ತಿಯನ್ನು ಕೊಡಬಲ್ಲುದಂತೆ.

o o o o

ಚಂದ್ರಲೋಕವು ಮಹಾ ಶೀತ ಪ್ರದೇಶ. ಅಲ್ಲೊಂದು ಆಶ್ಚರ್ಯ ನೋಡಿರಿ. ಅಲ್ಲಿ ಯಾರಾದರೂ ಹೋದವರಿಗೆ ನೀರು ಕಾಯಿಸಬೇಕಾದರೆ ಹೆಚ್ಚು ತೊಂದರೆ ಇಲ್ಲ. ಸ್ವಲ್ಪ ಸಮಯ ಬಿಸಿಲಿಗೆ ಇಟ್ಟರೆ ಸಾಕು. ಅದು ಕುದಿಯಲಾರಂಭಿಸುತ್ತದೆ. ಚಂದ್ರನಲ್ಲಿ ಹಗಲು ಪ್ರಚಂಡ ಬಿಸಿಲೂ, ರಾತ್ರಿ ಪ್ರಚಂಡ ಶೀತವೂ ಇರುತ್ತದೆ.

o o o o

ಮಹಾ ಯುದ್ಧದ ಕಾಲದಲ್ಲಿ ಜರ್ಮನಿಯ ಒರದು ದೊಡ್ಡ ಫಿರಂಗಿಯು ಪ್ಯಾರಿಸಿನ ಮೇಲೆ ಗುಂಡು ಹಾರಿಸಿತು. 76 ಮೈಲು ದೂರದಿಂದ ಅದು ಒಂದು ಕ್ಷಣದೊಳಗೆ, ಹಾರಿದ ಗುಂಡು ಪ್ಯಾರಿಸಿನ ಗಡಿಗಳ ಮೇಲೆ ಬೀಳಬೇಕಾದರೆ 24 ಮೈಲುಗಳ ಎತ್ತರದಿಂದ ಹೋಗಿದೆಯಂತೆ.

o o o o

ಭೂಮಿಯನ್ನು ತೋಡುತ್ತಾ ಹೋದರೆ, ಮಣ್ಣು ಆವೆ ಮಣ್ಣು, ಮರಳು, ಸುಣ್ಣ, ಶಿಲೆ, ಮತ್ತು ಕಬ್ಬಿಣ, ಇವುಗಳ ಪದರುಗಳನ್ನು ದಾಟಿಹೋಗಬೇಕಾಗುವುದು. ಆ ಮೇಲೆ ಕೆಳಗೆ ಉರಿಯುವ ಬೆಂಕಿ ಇದೆ. ಒಂದು ಸೆಕುಂಡಿಗೆ 80,000 ಟನ್ನುಗಳಷ್ಟು ಕಲ್ಲಿದ್ದಲನ್ನು ಸುಡುವ ಬೆಂಕಿಗೆ ಎಷ್ಟು ಉಷ್ಣವಿರಬಹುದೊ ಅಷ್ಟು ಕಾವು ಪಾತಾಳದ ಬೆಂಕಿಗಿದೆಯಂತೆ.

ನಮ್ಮ ಪರಿಣಿತಗಳು ಒಂದೇ

ಲಾಹೋರದ ಕಾಂಗ್ರೆಸಿನ ಅಧ್ಯಕ್ಷ ಭಾಷಣದ ಒಂದು ಚೂರು;—ಪಟ್ಟಾಭಿಯವರಿಂದ.

"ಒಂದಿಷ್ಟು ಹಿಂದುಗಳು ಕೊಂಚವೂ ಮುಸಲ್ಮಾನ ಬಂದುಗಳ ಮೇಲೂ ಒಂದಿಷ್ಟು ಮುಸಲ್ಮಾನರು ಕೆಲವು ಹಿಂದೂ ಭಾಂಧವರ ಮೇಲೂ ಗೆದ್ದರೆ ಅದರಿಂದಾಗುವ ಭಾಗ್ಯವಾದರೂ ಏನು?

ಹಿಂದೂ ಮುಸಲ್ಮಾನ್, ಪಾರ್ಸಿ ಕ್ರೈಸ್ತರೆಲ್ಲರೂ ಭುಜಕ್ಕೆ ಭುಜಗಳನ್ನು ಕೊಟ್ಟು ಸಹಕರಿಸುವ ದೇಶಾಭಿಮಾನವನ್ನು ನೋಡಲು ಎಷ್ಟು ಗಂಭೀರವಾಗಿರುತ್ತದೆ. ಅದನ್ನು ಬಿಟ್ಟು ನಾವು ನಮ್ಮ ನಮ್ಮ ಜಾತಿಮತಗಳನ್ನು ಹಿಡಿದು ಕೂತುಕೊಳ್ಳುವುದೆಂದರೆ ಅದೆಷ್ಟು ಅಸಹ್ಯವಾಗಿರುತ್ತದೆ.

"ಆದುದರಿಂದ ಪ್ರಿಯ ಬಾಂಧವರೆ ನಾವು ಹೀಗೆ ಬೇರೆ ಬೇರೆಯಾಗಿದ್ದು ನಮ್ಮ ರಾಷ್ಟ್ರದ ಉದ್ಧಾರವನ್ನೆಂದಿಗೂ ಮಾಡಲಾರೆವು. ನಾವು ಗೆಲ್ಲುವುದಾದರೂ, ಸೋಲುವುದಾದರೂ ಒಂದಾಗಿಯೇ ಆಗಬೇಕು."

ಕಾಂಗ್ರೆಸ್ ಉಮೇದ್ವಾರರಿಗೆ

"ಕೆಲವರನ್ನು ಉಮೇದುವಾರರಾಗಿ ನೇಮಕ ಮಾಡದಿದ್ದ ಮಾತ್ರಕ್ಕೆ ಇತರರು ಹತಾಶರಾಗಬೇಕೆಂದಿಲ್ಲ. ಶಾಸನ ಸಭೆಗಳಿಗೆ ಕಾಂಗ್ರೆಸ್ ಉಮೇದುವಾರರು ಎಷ್ಟು ಕೆಲಸ ಮಾಡಲಿದೆಯೋ ಅಷ್ಟೆ ಕೆಲಸವನ್ನು ಹೊರಗಿನಿಂದ ಕಾಂಗ್ರೆಸ್ ಸ್ವಯಂಸೇವಕರಾಗಿ ಮಾಡಬಹುದಾಗಿದೆ"—ರಾಜೇಂದ್ರ ಪ್ರಸಾದ.

ಪೂರ್ವದ ತಲೆ ಹೊಡಕರು

ತಲೆಹೊಡಕ ಸಾಲಕರುವ ಮಾರ್ವಾಡಿಗಳು ಬಗುಪ್ತದಲ್ಲಿ ಇದ್ದರಂತೆ. ಅಲ್ಲಿ ಒಂದು ಪ್ರಾಮಿಸರಿ ನೋಟು ಸಿಕ್ಕದೆ ಕೆಲವು ಸಾವಿರ ವರ್ಷಗಳ ಹಿಂದಿನದು, ಅದರಲ್ಲಿ ನೂರಕ್ಕೆ ನೂರು ಬಡ್ಡಿ ತೋರಿಸಿರುತ್ತದೆ.

ಜಪಾನಿನ ನವವರ್ಷದ ಬಜೆಟ್ಟು.

ಜಪಾನೀಯ ಸರಕಾರವು ತಮ್ಮ ಹೊಸ ವರ್ಷದ ಬಜ್ಜೇಟಿನಲ್ಲಿ, ಯುದ್ಧ ಸಿದ್ಧತೆಗಾಗಿ ವಿಶೇಷ ತರದ ಗ್ರಾಂಟುಗಳನ್ನ ಮಾಡಿರುತ್ತದೆ. ಯುದ್ಧ ಸಿದ್ಧತೆಗಾಗಿ ವ್ಯಯಿಸುವ ವಿಚಾರದಲ್ಲಿ ಈ ವರ್ಷದ ವ್ಯಯವು ಒಂದು ಮಹಾ ದಾಖ್ಲೆಯಾಗಿರುತ್ತದೆ. ೪೫,೦೦,೦೦೦,೦೦೦ ರೂಪಾಯಿಗಳನ್ನು ಯುದ್ಧ ಸಿದ್ಧತೆಗಾಗಿ ವಿಂಗಡಿಸಲಾಗಿದೆ. ಅಂದರೆ ಸಂಗ್ರಾಮ ಇಲಾಖೆಗಾಗಿ ಸರಕಾರದ ಗ್ರಾಂಟು ಅತಿಶಯವಾಗಿ ಹೆಚ್ಚಿದಂತಾಗಿದೆ. ಭೂಸೇನಾ ಇಲಾಖೆಯಿಂದಲೂ ನೌಕಾಸೇನೆ ಇಲಾಖೆಯಿಂದಲೂ ಹೆಚ್ಚಿನ ಗ್ರಾಂಟುಗಳು ಕೇಳಲಾಗಿದ್ದುವಂತೆ. ಆದರೆ ಸದ್ಯಸ್ಥಿತಿಯಲ್ಲಿ ಅವುಗಳನ್ನೆಲ್ಲಾ ಕೊಡಲು ಸರಕಾರಕ್ಕೆ ಸಾಧ್ಯವಿಲ್ಲದುದರಿಂದ ಅವರು ಕೋರಿದ ಗ್ರಾಂಟುಗಳಲ್ಲಿ ಸ್ವಲ್ಪ ಕಡಿಮೆಮಾಡಲಾಗಿದೆ. ಅಂದರೆ ರಷ್ಯಾ ದೇಶದ ಭಯಂಕರ ಸಿದ್ಧತೆಯ ಎದುರು ತಾವು ಹಿಂದುಳಿಯಬಾರದೆಂಬ ಭಾವನೆಯಿಂದ ಜಪಾನು ಹೀಗೆ ವರ್ತಿಸುವುದಾಗಿರಬಹುದು.

ಆದುದರಿಂದ ಜಪಾನಿನ ನವ ವರ್ಷದ ಬಜ್ಜೇಟಿನಲ್ಲಿ ವಿಶೇಷ ತರದ ನಷ್ಟವು ಕಾಣಿಸುತ್ತದೆ. ಅದನ್ನು ಭರ್ತಿಮಾಡಲು, ಕೆಲವು ನೂತನ ಕಂದಾಯಗಳನ್ನು ಪ್ರಜೆಗಳ ಮೇಲೆ ಹೊರಿಸಬೇಕೆಂದಾಗಿದೆ. ಆದರೂ, ಅದನ್ನು ಭರ್ತಿಮಾಡಲು ಸಾಲ ತೆರಬೇಕಾಗುವುದೆಂದು ಸರಕಾರವು ಬೇಗನೇ ಮಹಾ ಸಾಲವನ್ನು ಕರೆಯುವುದಾಗಿ ತಿಳಿದುಬರುತ್ತದೆ.

ದೇಶದ ಇತರ ಸಾಮಾಜಿಕ ಅಭ್ಯುದಯವನ್ನು ಬಾಕಿಯಿಟ್ಟು, ಜಪಾನು ಯುದ್ಧಸಿದ್ಧತೆಯ ಕಡೆಗೆ ಹೆಚ್ಚಿನ ಗಮನಕೊಡುತ್ತದೆಂದು ಅಲ್ಲಿನ ಕೆಲವು ನಾಗರೀಕರ ವಿಮರ್ಶೆಯಾಗಿರುತ್ತದೆ.

ಸೋವಿಯಟ್‌ನಲ್ಲಿ ಭಾರತೀಯರು.

ಶ್ರೀಮತಿ ಕಮಲಾ ನೆಹರುಗಳವರೊಡನೆ ಪಾಶ್ಚಾತ್ಯಕ್ಕೆ ತೆರಳಿದ ಪ್ರಸಿದ್ಧ ಭಾರತೀಯ ವೈದ್ಯರಾದ ಡಾ। ಎಂ ಅಟಾಲರು, ವೈದ್ಯಕೀಯ ವಿಚಾರಗಳಲ್ಲಿ ಪಾಶ್ಚಾತ್ಯದ ವಿವಿಧ ದೇಶಗಳ ಏರ್ಪಾಡುಗಳ ಕುರಿತು ಜ್ಞಾನಹೊಂದಲು ಅಲ್ಲಿ ಪ್ರವಾಸಮಾಡುತ್ತಿದ್ದವರು ಸೋವಿಯಟ್ ರಷ್ಯಾದ ಮೊಸ್ಕೋವಿಗೆ ತೆರಳಿ ಅಲ್ಲಿ ನಾಲ್ಕು ವಾರಗಳ ತನಕ ಇದ್ದು, ವೈದ್ಯಕೀಯ ವಿಚಾರಗಳಲ್ಲಿ ಅಲ್ಲಿನ ಅನುಭವಗಳನ್ನು ಹೊಂದುವವರಾದರು. ಈ ಸಮಯದಲ್ಲಿ ಡಾ। ಅಟಾಲ ಇವರು ರಷ್ಯಾ ದೇಶದ ಅನೇಕ ಕೇಂದ್ರಗಳನ್ನು ಸಂದರ್ಶಿಸಿದರು. ವೈದ್ಯಕೀಯ ಕೆಲಸ, ಸಾರ್ವಜನಿಕ ಆರೋಗ್ಯ ಮತ್ತು ಸಮಾಜದಭ್ಯುದಯ ಇವುಗಳು ರಷ್ಯಾದಲ್ಲಿ ಹೇಗೆ ನಡೆಯುತ್ತವೆ ಎಂಬುದರ ಕಡೆಗೆ ಡಾ। ಅಟಾಲರು ಹೆಚ್ಚಿನಗಮನವನ್ನು ಕೊಟ್ಟಿದ್ದರು. ಆ ವಿಚಾರದಲ್ಲಿ ರಷ್ಯಾದಲ್ಲಿ ಅನೇಕ ಕಾರ್ಯಕಲಾಪಗಳು ನಡೆಯುತ್ತವೆಂದೂ, ಅವು ಒಳ್ಳೇ ಚೇತನದಿಂದ ನಡೆಯುತ್ತಿದ್ದಾವೆಂದೂ ಅವರ ಅನುಭವ. ರಷ್ಯಾ ದೇಶವು ಆ ವಿಚಾರದಲ್ಲಿ ವಿಶೇಷವಾಗಿ ಸುಧಾರಣೆ ಹೊಂದಿರುತ್ತದೆ. ಜನರ ಆರೋಗ್ಯದ ಕಡೆಗೆ, ಅವರ ಶುಚಿತ್ವದ ಕಡೆಗೆ ಹೆಚ್ಚಿನ ಗಮನಕೊಡಲಾಗುತ್ತಿದೆ. ಮಾತೃಗಳನ್ನೂ ಮಕ್ಕಳನ್ನೂ ಬಹಳ ಜಾಗ್ರತೆಯಿಂದ ಸಲಹುತ್ತಿದ್ದಾರಂತೆ. ಆ ಕುರಿತು ವಿಶೇಷ ತರದ ಏರ್ಪಾಡುಗಳಾಗಿವೆ. ಮಾತೃಗಳು ಮತ್ತು ಮಕ್ಕಳು ಮುಂದಿನ ಜನಾಂಗದ ಸೋಪಾನಗಳಾಗಿರುವುದರಿಂದ ಅವರು ಆರೋಗ್ಯವಂತರಾಗಿ ಬಾಳುವಂತೆ ಮಾಡುವುದೇ ಆ ದೇಶದ ಮುಖ್ಯ ಗುರಿಯಾಗಿರುತ್ತದೆ.

ಈಗ ಡಾ. ಅಟಾಲರು ಜೆಕೊಸ್ಲೊವೇಕಿಯಾದ ಹತ್ತಿರ ಪಿಯಸ್ಟೇನಿ ಎಂಬಲ್ಲಿರುವರು. ಈ ಸ್ಥಳವು ನಿಸರ್ಗದ ಸೌಂದರ್ಯದಿಂದ ಕೂಡಿದಾಗಿದ್ದು, ಬಹಳ ಮನೋಹರವಾಗಿದೆ. ಭಾರತೀಯ ಪ್ರವಾಸಿಗಳು ಹೆಚ್ಚಾಗಿ ಅಲ್ಲಿಗೆ ಬರುತ್ತಿದ್ದಾರೆ. ಅದು ಪಾಶ್ಚಾತ್ಯದಲ್ಲಿನ ಭಾರತೀಯರ ಕೇಂದ್ರವಾಗುತ್ತಾ ಬರುತ್ತಿದೆ, ಅಲ್ಲಿನ ಮನೆಮಠಗಳಲ್ಲಿ ಭಾರತೀಯ ಗಾಯನವೂ ಕೇಳಿಸುತ್ತದಂತೆ.

ಜಪಾನಿನ ನವ ರಾಜಶಾಸನ

ಪ್ರಜಾಪ್ರಭುತ್ವವನ್ನು ನಿರ್ಮೂಲಗೊಳಿಸಿ ಪ್ರಜಾಹಿತ ದೃಷ್ಟಿಯಲ್ಲಿ ಸಾರ್ವಭೌಮ ಶಾಸನವನ್ನು ದೃಢವಾಗಿ ಸ್ಥಾಪಿಸುವ ಉದ್ದೇಶವು ಜಪಾನಿನ ಸಂಗ್ರಾಮಿಗಳಿಗಿರುವುದು. ಪಕ್ಷಗಳಿರುವ ಸರಕಾರಗಳಿರಬಾರದೆಂದು ಸಂಗ್ರಾಮ ವರ್ಗದ ಮನೋಗತವಾಗಿರುತ್ತದೆ. ಪ್ರಜಾಪ್ರಭುತ್ವವು ಪಾಶ್ಚಾತ್ಯವಾಗಿರುವುದರಿಂದ ಅದು ಅವರ ದೇಶವನ್ನು ಸೇರಬಾರದಂತೆ. ಸರಕಾರಕ್ಕೆ ಬೇಕಾದ ಉಚ್ಚ ತರದ ಮೇಧಾವಿಗಳನ್ನಾರಿಸಿ ಅದನ್ನು ನಡೆಯಿಸಬೇಕಂತೆ. ಪ್ರಜಾಮತವನ್ನು ತೆಗೆಯಲು ಒಳ್ಳೇ ಸುವ್ಯವಸ್ಥಿತ ಏರ್ಪಾಡುಗಳಾಗಬೇಕಂತೆ.

ರಾಜಶಾಸನ ಸುಧಾರಣೆಯು, ಕುರಿತು ಎಲ್ಲ ಪಕ್ಷಗಳ ಸಂಪತ್ತೊಂದು ಅಲ್ಲಿ ಸದ್ಯದಲ್ಲೇ ನಡೆಯುವುದಂತೆ. ಸಂಗ್ರಾಮಿಗಳಿಗೆ ಎಲ್ಲಾ ವಿಚಾರಗಳಲ್ಲಿ ಈಗಿನ ದಿವಸಗಳಲ್ಲಿ ಮೇಲ್ಕೈಯಿರುವುದರಿಂದ, ತಮ್ಮ ಗತಿಯೇನಾಗುವುದೋ ಎಂಬ ಒಂದು ತರದ ಭೀತಿಯು ಪಾರ್ಲಿಮೆಂಟರಿ ವರ್ಗಗಳಲ್ಲಿ ಉಂಟಾಗಿರುತ್ತದೆ.

ಅಮೇರಿಕನ್ ನವ ಜಾಗೃತಿ

'ಪಶ್ಚಿಮ ಭೂವಲಯದಿಂದ ಶಸ್ತ್ರಯುತ ಕಲಹಗಳನ್ನು ನಿವಾರಿಸಬಹುದು, ನಿವಾರಿಸಲಾಗುವುದು' ಎಂಬುದನ್ನು ಸಮಸ್ತ ಜಗಕ್ಕೆ ಪ್ರದರ್ಶಿಸುವರೆ, ಅಮೇರಿಕಾಗಳಲ್ಲಿ ಒಂದು ಮಹಾ ಯೋಜನೆಯು ಹೊರಟಿರುತ್ತದೆ. ಈ ಯೋಜನೆಯ ಮಹತ್ವವನ್ನು ತೋರಿಸುವರೆ, ಅಮೇರಿಕಾದ ಎರಡು ಖಂಡಗಳ ವಿವಿಧ ರಾಷ್ಟ್ರಗಳು ಸೇರಿವೆ. ಯುದ್ಧದಿಂದ ಬೇಸತ್ತ ಜನಾಂಗಗಳಿಗೆ ಈ ಯೋಜನೆಯ ಮಹತ್ವವನ್ನು ತೋರಿಸುವರೆ ಸಂಯುಕ್ತ ಅಮೇರಿಕಾದ ಅಧ್ಯಕ್ಷರಾದ ರೂಸ್‌ವೆಲ್ಟರ ಅಧ್ಯಕ್ಷತನದಲ್ಲಿ ದಕ್ಷಿಣ ಅಮೇರಿಕಾದ ಬ್ಯೂನಸ್ ಎಯರ್ಸ್ ಎಂಬಲ್ಲಿ ಒಂದು ಮಹಾ ಪರಿಷತ್ತು ಸದ್ಯದಲ್ಲೇ ಜರಗುವುದು. ಅಮೇರಿಕಾದ ೨೧ ರಿಪಬ್ಲಿಕ್‌ಗಳು ಈ ಪರಿಷತ್ತಿನಲ್ಲಿ ಭಾಗವಹಿಸುವರು. ಶಾಂತಿಸ್ಥಾಪನೆ ಸಮಸ್ಯೆಗಳು, ಯುದ್ಧ ಸಂಭವದಲ್ಲಿ ತಟಸ್ಥ ಭಾವ, ಶಸ್ತ್ರಸಿದ್ಧತೆಗೆ ಗಡಿಗಳನ್ನು ಹಾಕುವುದು, ನ್ಯಾಯವಿಚಾರ ಪ್ರಶ್ನೆಗಳು, ಸಾಂಪತ್ತಿಕ ಪ್ರಶ್ನೆಗಳು ಮತ್ತು ಜ್ಞಾನವಿಚಾರ ಪರಸ್ಪರ ಸಹಕಾರ ಇವೇ ಮೊದಲಾದ ವಿಚಾರಗಳು ಅಲ್ಲಿ ಚರ್ಚಿಸಲಾಗಿ ದೃಢವಾದ ನಿರ್ಣಯಗಳು ಮಾಡಲಾಗುವುವು. ಸಂಯುಕ್ತ ಅಮೇರಿಕವು ಈ ಪರಿಷತ್ತಿನಲ್ಲಿ ಭಾರೀ ಉತ್ಸಾಹವನ್ನು ವಹಿಸುವುದಾಗಿ ತಿಳಿದುಬರುತ್ತದೆ. ಯುರೋಪ್ಯದಲ್ಲಿ ಇನ್ನೊಂದು ಮಹಾಯುದ್ಧವು ಉಂಟಾಗುವುದಾದರೆ ಅದಕ್ಕೆ ಭೂಮಂಡಲದ ಈ ಭಾಗವು ಸಾಂಪತ್ತಿಕ ಆಧಿಕ್ಯಾಗದಂತೆ ನಿರ್ಣಯಗಳು ಇಲ್ಲಿ ಮಾಡಲಾಗುವವು. ಯುರೋಪ್ಯವು ಈಗ ಮಾಡಲು ಹೊರಟ ಮಹಾಕೊಲೆ ಕೆಲಸದಲ್ಲಿ ಅಮೇರಿಕಾದಿಂದ ಅದಕ್ಕೆ ಯಾವತ್ತೂ ಸಹಕಾರವು ಸಿಗದಂತೆ ವ್ಯವಸ್ಥೆ ಮಾಡಲಾಗುವುದು. ಕಳೆದ ಮಹಾಯುದ್ಧದಿಂದಾಗಿ ಅವರಿಗೆ ಆದ ಅನುಭವದಿಂದ, ಅವರು ಒಂದು ಮಹಾಪಾಠವನ್ನು ಕಲಿತಿರುವರು, ಅದರಿಂದ ಅಮೇರಿಕದ ಎರಡು ಖಂಡಗಳಿಗೂ ಮಹಾ ನಷ್ಟವು ಒದಗಿರುತ್ತದೆ. ಉಪಕಾರ ಮಾತ್ರ ಏನೂ ಆಗಲಿಲ್ಲ.

ಹಿಂದೂದೇಶದಲ್ಲೂ ನಗ್ನತೆ.

ಪಾಶ್ಚಾತ್ಯದ ಅನೇಕ ಕಡೆಗಳಲ್ಲಿ ನಗ್ನತೆಯ ವಿಚಾರ ಅಭಿರುಚಿಯುಂಟಾಗಿದ್ದು, ನಗ್ನವಾಗಿದ್ದು ಸಮಯ ಕಳೆಯಲು ಕೆಲವೊಂದು ಕ್ಲಬ್ಬುಗಳು ಸಂಸ್ಥೆಗಳೂ ಅಲ್ಲಿ ಸ್ಥಾಪನೆಯಾಗಿದ್ದು ಬಹಳ ಯಶಸ್ವಿಯಾಗಿ ಕಾರ್ಯಗೈಯುತ್ತವೆ. ವಿವಿಧ ದೇಶಗಳಲ್ಲಿನ ಈ ಕ್ಲಬ್ಬುಗಳು ವಿವಿಧ ತರದ ಕ್ರಮಗಳನ್ನಾಚರಿಸುತ್ತವೆ. ಈ ನಗ್ನತೆಯ ಗಾಳಿಯು ಪಾಶ್ಚಾತ್ಯ ದೇಶದಲ್ಲಿ ಪ್ರವಾಸ ಬೆಳೆಸಿಯದ ಓರ್ವ ಭಾರತೀಯ ಮಹನೀಯರಿಗೂ ತಗಲಿದಂತೆ ಕಾಣುತ್ತದೆ. ಬಿಹಾರದಲಿ ಜರ್ಮನ್ ಕ್ರಮಗಳನ್ನನುಸರಿಸಿ ಒಂದು ನಗ್ನ ಕ್ಲಬ್ ಸದ್ಯದಲ್ಲೆ ಸ್ಥಾಪನೆಯಾಗುವುದೆಂಬ ವಾರ್ತೆಯು ಬಂದಿರುತ್ತದೆ.

ಇಟೆಲಿ ಜರ್ಮನ್ — ಜಪಾನ್ ಒಪ್ಪಂದ.

ಇಟೆಲಿ-ಜರ್ಮನ್—ಜಪಾನ್ ಒಪ್ಪಂದವೊಂದಾಯಿತಷ್ಟೆ. ಇದರಿಂದ ಫ್ರಾನ್ಸು ಹೇಗೆ ವರ್ತಿಸುತ್ತದೆಂಬುದರ ಕುರಿತು ಅನೇಕ ಕಡೆಗಳಲ್ಲಿ ಅನೇಕ ಊಹನೆಗಳಿದ್ದುವು. ಮೇಲಿನ ಮೂರು ಜನಾಂಗಗಳು ಕೊಮ್ಯುನಿಷ್ಟ ರಷ್ಯಕ್ಕೆ ವಿರೋಧವಾಗಿ ಒಪ್ಪಂದ ಮಾಡಿದಾಗಿರುತ್ತದೆ. ಮೊನ್ನೆ ನಡೆದ ಫ್ರೆಂಚ ಶಾಸನ ಸಭೆಯ ಅಧಿವೇಶನದಲ್ಲಿ ಮುಖ್ಯ ಮಂತ್ರಿಯರ ಭಾಷಣದಿಂದಲೂ, ಬಹೀರ್ ವ್ಯವಹಾರದ ಇಲಾಖೆಯ ಕಾರ್ಯದರ್ಶಿಯವರ ಭಾಷಣದಿಂದಲೂ ಫ್ರೆಂಚ ಸರಕಾರದ ರಷ್ಯಾದೊಡನೆ ಇರುವ ಬೆಂಬಲವು ಇನ್ನೂ ಹೆಚ್ಚಿಸಲಾಗುವುದೆಂದು ತಿಳಿದುಬರುತ್ತದೆ. ಕೊಮ್ಯುನಿಷ್ಟರಿಗೆ ವಿರೋಧವಾದ, ಇಟೆಲಿ—ಜರ್ಮನ್ ಪ್ರೇರಣೆಗೊಳಗಾದ ಒಂದು ಪಕ್ಷವು ಫ್ರಾನ್ಸಿನಲ್ಲಿ ಜನ್ಮವೆತ್ತಿದ್ದು ಕಾರ್ಯಗೈಯುತ್ತಿದ್ದರೂ ಅವರ ಕೊಮ್ಯುನಿಸಮಿಗೆ ವಿರೋಧವೆಸಿಸುವ ಕಾರ್ಯಗಳು ಅಷ್ಟು ಯಶಸ್ವಿಯಾಗಿ ನಡೆಯುವುದಿಲ್ಲ.

ಜರ್ಮನಿ ಮತ್ತು ಆಸ್ಟ್ರೀಯಾ

ಆಸ್ಟ್ರೀಯಾ—ಜರ್ಮನ್ ಸಂಬಂಧಗಳು ಇತ್ತೀಚೆಗೆ ಭಿನ್ನವಾಗುತ್ತಾ ಬರುತ್ತಿವೆ. ಆಸ್ಟ್ರಿಯದ ಅಭ್ಯುದಯಕ್ಕೆ ಮೂರು ಅಡ್ಡಂತರಗಳು ಇರುವವೆಂದೂ, ಅವುಗಳು (೧) ಕೊಮ್ಯುನಿಸಂ (೨) ನಾಜಿಸಂ (ಜರ್ಮನಿಯ ರಾಷ್ಟ್ರೀಯ ಸಮತಾವಾದವು ತಮಗೆ ಬಹಳ ಹಾನಿಕರವೆಂದು ಅವರ ಅಭಿಪ್ರಾಯ) (೩) ಸ್ತೋತ್ರ ಮನೋವರ್ತನೆ. ಜರ್ಮನಿಯ ಪ್ರೇರಣೆಯ ಆಸ್ಟ್ರಿಯವನ್ನು ಸೇರಬಾರದಾಗಿ ಮಾಡುವುದೇ ಅಲ್ಲಿನ ಚಾನ್ಸಲರರ ಮುಖ್ಯ ಉದ್ದೇಶವಾಗಿರುತ್ತದೆ. ಇದರಿಂದಾಗಿ ಜರ್ಮನಿಗೆ ಸ್ವಲ್ಪ ಹೊಟ್ಟೆಯುರಿಯುಂಟಾಗಿದೆ. ನಾಜಿಗಳಿಗೆ ವಿರೋಧ ಪ್ರಚಾರ ನಡೆಸಿದುದರ ಕುರಿತು, ಜರ್ಮನಿಯ ರಾಜಧಾನಿಯಾದ ಬರ್ಲಿನ್ ನಗರದಿಂದ ಪ್ರತಿಕೂಲಗಳು ಹೋಗಿವೆ. ಆಸ್ಟ್ರಿಯಾಕ್ಕೆ ಸ್ವತಂತ್ರವಾಗಿ ಬಾಳಬೇಕೆಂಬ ಮಹಾ ಆಶೆಯು ಉಂಟಾಗಿರುತ್ತದೆ.

ಚೀನಾ ಜಪಾನ್ ಸಮ್ಮಂದ

ಚೀನಾದಲ್ಲಿ ದಿನೇ ದಿನೇ ಕೊಮ್ಯುನಿಸಂ ಪ್ರೇರಣೆಯು ಹೆಚ್ಚುತ್ತಾ ಇದೆ. ಮಂಗೋಲಿಯಾದ ಕೊಮ್ಯುನಿಷ್ಟ ರಾಜ್ಯಗಳ ಹತ್ತಿರ ಚೀನಾ ದೇಶದ ಕೆಲವು ಪ್ರಾಂತ್ಯಗಳನ್ನು ತನ್ನ ವಶಮಾಡಿಕೊಳ್ಳಲು ಹವಣಿಸುತ್ತಿದ್ದರೆ ಮೊಂಗಲಿಯಾದಿಂದ ಕೆಲವು ಕೊಮ್ಯುನಿಷ್ಟ ಸೇನೆ ಪಡೆಗಳು ಆ ಪ್ರಾಂತ್ಯಗಳ ಮೇಲೆ ದಂಡೆತ್ತಿ ಬಂದರೆ. ಚೀನಾದಲ್ಲಿ ಕೊಮ್ಯುನಿಷ್ಟ ಪ್ರಭಾವವು ಹೆಚ್ಚುತ್ತಿರುವುದನ್ನು ಕಂದು ಜಪಾನಿಗೆ ಭೀತಿಯುಂಟಾಗಿರುತ್ತದೆ. ಕೊಮ್ಯುನಿಸಮ್ಮನ್ನು ಚೀನಾದಿಂದ ಹೊರಗಿಡಲು ಜಪಾನು ಬಹಳ ಶ್ರಮಿಸುತ್ತಿದೆ. ಜಪಾನಿನ ಸರಕಾರ ಮುಂದಿಳಿದ ಸ[illegible]ಯಲ್ಲಿ ಆ ಕುರಿತು ಅನೇಕ [illegible]ವವು. ಚೀನಾದೇಶವು ಹಠ [illegible] ತಮ್ಮ[illegible] ಬಿಟ್ಟು ಅನ್ಯ ಜನಾಂಗವಾದ ರಷ್ಯಾದೊಡನೆ ಕೈಜೋಡಿಸಬಾರದೆಂದು, ಜಪಾನ [illegible] ಒಂದು ಸೂಚನೆಯನ್ನು [illegible]ರುತ್ತದೆ. [illegible] ಚೀನಾವು ತನಗಾಗಿಯೆ [illegible] ಜಪಾನಿನ ಉದ್ದೇಶ. ರಷ್ಯಾವು ಜಪಾ[illegible] ಸ್ವಾರ್ಥವು ನೆರವೇರದಂತೆ [illegible] ತನ್ನ ಕಾರ್ಯಕಲಾಪಗಳನ್ನು ನಡೆಯಿಸ[illegible] ಆದರೆ ಚೀನಾ—ಜಪಾನ್ ಒಪ್ಪಂದವೊಂದು ಆಗುವ ಹಾಗೆ ಆ ಕ[illegible] ಮಾತುಕತೆಗಳು ಪ್ರಾರಂಭವಾಗುವವೆ ಎ[illegible] ವಾರ್ತೆ[illegible]

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ



ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುಜ್ಜೀವನ ಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು — ಪೊಪ್ಯುಲರ್ ಸ್ಟೋರ್ಸ್,

ರಥಬೀದಿ, ಮಂಗಳೂರು

ವಿಷಯ ಸೂಚಿಕೆ

ಟಿಪ್ಪಣಿಗಳು
ಯುದ್ಧಗಳ ಸ್ಪರ್ಧೆ
ಶಿಕ್ಷಣ ಕ್ಷೇತ್ರದೊಳಗೆ ಸ್ವರಾಜ್ಯ
ಅಖಿಲ ಭಾರತದ ಶಿಕ್ಷಕರ ಪರಿಷತ್ತು
ವಿವಿಧ ಸಮಾಚಾರಗಳು
ಅಗ್ರಲೇಖ
ಹೊಸ ಸಂಪುಟ ೧೦
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ಕ್ರೈಸ್ತ ಬಂಧುಗಳಿಗೆ ರಾಷ್ಟ್ರಪತಿಗಳ ಸಂದೇಶ ೧೩
ಮಂಗಳೂರು, ತಾಲೂಕುಗಳಿಂದ ೧೪
ನಿರುದ್ಯೋಗ ನಿವಾರಣೆ ಮಾಡಿದ ಕಥೆ ೧೮

ತಾ ೮ನೇ ಶುಕ್ರವಾರ ಜನವರಿ ೧೯೩೮

ಸ್ವದೇಶಾಭಿಮಾನಿ

ಹೊಸ ಸಂಪುಟ

ಈ ಸಂಚಿಕೆಯಿಂದ ಸ್ವದೇಶಾಭಿಮಾನಿಯ ಹೊಸ ಸಂಪುಟಕ್ಕೆ ಪ್ರಾರಂಭ. ಪರಮಾತ್ಮನ ಆಶೀರ್ವಾದ, ವಾಚಕರ ಬೆಂಬಲ, ಲೇಖಕರ ಸಹಕಾರ,—ಇವುಗಳ ಸಹಾಯದಿಂದ ಈ ಪತ್ರಿಕೆಯು ಇದೀಗ ಒಂದು ಕಲಾಂತರದ ವರೆಗೆ ಜನಸೇವೆಯನ್ನು ಮಾಡುತ್ತ ಬಂದಿದೆ ಸಹಾಯವೂ ಹೆಚ್ಚುತ್ತ ಬರುತ್ತಿರುವಂತೆ, ನಮ್ಮ ಮೇಲಣ ಜವಾಬ್ದಾರಿಯೂ ಹೆಚ್ಚು ಹೆಚ್ಚಾಗುತ್ತ ಬರುತ್ತಿರುವುದರಿಂದ, ಅದನ್ನು ತೃಪ್ತಿಕರವಾದ ರೀತಿಯಲ್ಲಿ ಸಲ್ಲಿಸಲು ಮಾಡತಕ್ಕದನ್ನು ಕುರಿತಾಗಿ ನಾವು ಸರ್ವದಾ ಆಲೋಚನೆ ಮಾಡುತ್ತಿದ್ದೇವೆ

ದಿನದಿನಕ್ಕೆ ಜಗತ್ತಿನ ವಾತಾವರಣವು ಸ್ವದೇಶ ಸಿದ್ಧಿಯೂ ತೀವ್ರವಾಗಿ ಬದಲಾವಣೆ ಹೊಂದುತ್ತಲಿದೆ ನಮ್ಮ ಜನತೆಯು ಅಂತೆಯೆ ತೀವ್ರವಾಗಿ ಪಲ್ಲಟಗೊಳ್ಳುತಿರುವ ವಿದ್ಯಮಾನಗಳನ್ನು ಕಾಪಾಡಿಕೊಂಡು ಬರಬೇಕಾಗಿದೆ

ರಾಜಕೀಯ ವಿಚಾರಗಳಂತೂ ಹಲವು ಬಗೆಯಾಗಿ ಮಾರ್ಪಡುತ್ತಿವೆ ಎಂದು ಎಲ್ಲರೂ ಬಲ್ಲರು ಖಂಡಿತವಾದ ಹಾಗೂ ಸೌಮ್ಯವಾದ ಸೂಚನೆಗಳ ಮೂಲಕ ರಾಜಕೀಯ ಪರಿಸ್ಥಿತಿಯಲ್ಲಿ ನಾವು ಹೇಗೆ ಮುಂದರಿಯಬೇಕೋ ಅವನ್ನು ಹಲವು ಪಕ್ಷಗಳು ಸಾರುತ್ತಲೇ ಇವೆ. ಜನಜೀವನದ ಮೇಲೆ ಪರಿಣಾಮವನ್ನುಂಟು ಮಾಡತಕ್ಕ ನೂತನ ಧೋರಣೆಯನ್ನು ವೈಸ್ರಾಯರು ಇಲ್ಲಿಗೆ ಅಧಿಕಾರ ಕಳೆದಂದಿನಿಂದಲೂ ಸಾರುತ್ತ, ಗ್ರಾಮಸ್ಥರ ಮತ್ತು ಗ್ರಾಮಗಳ ಉದ್ಧಾರಕ್ಕಾಗಿ ಅಗತ್ಯವಾಗಿ ತೋರುವ ಚಳವಳವನ್ನು ಹೂಡಿರುವರು ರಾಷ್ಟ್ರೀಯರು ಗ್ರಾಮೋದ್ಧಾರಕ್ಕೆ ಹಾಗೂ ಗುಡಿಕೈಗಾರಿಕೆಗಳಿಗೆ ಕೈಹಚ್ಚಿ ತಾವೂ ಮೊದಲಾಗಿಯೆ ಚಡಪಡಿಸುತ್ತಿರುವರು ಕೌನ್ಸಿಲು ಚುನಾವಣೆಗಳ ಒತ್ತಾಸೆಯ ಮೇಲಾಟದಲ್ಲಿ ನಾನಾ ಮುಖವಾಗಿ ಪಕ್ಷವಿಪಕ್ಷಗಳ ಹೊಗಳಿಕೆ ತೆಗಳಿಕೆಗಳ ಗೊಂದಲದಲ್ಲಿ ಮತದಾರರಿಗೊಂದು ಸಮಸ್ಯೆಯೇ ಹುಟ್ಟುವಂತಾಗಿದೆ. ಹೇಗೂ ಚುನಾವಣೆಗಳಾಗಿ ಯಾರೇ ಗೆದ್ದರೂ, ಮುಂದಣ ಸರಕಾರ ಕ್ರಮದ ವ್ಯವಸ್ಥೆಯಿಂದ ಜನಸಾಧಾರಣ ಅವಸ್ಥೆಯ ಏಳ್ಗೆಗೆ ಆಗುವುದೂ ಹೋಗುವುದೂ ಏನೂ ಇಲ್ಲವೆಂದೇ ಸಾರುವವರೂ ಕಾರಣ ತೋರಿಸುವವರೂ ಇದ್ದಾರೆ.

ಸಾಂಪತ್ತಿಕ ವಿಚಾರದಲ್ಲಿ, ದಾರಿದ್ರ್ಯ ಹೆಚ್ಚುತ್ತಿದೆ. ಚಿನ್ನ ಪರದೇಶಕ್ಕೆ ಹೋಗುತ್ತಿದೆ. ರೂಪಾಯಿಯ ವಿನಿಮಯವು ಹಾಗೇ ಇದೆ. ನಿರುದ್ಯೋಗಿ ಶಿಕ್ಷಿತರ ದುರವಸ್ಥೆಗೆ ಯಾವ ವಿಮೋಚನೋಪಾಯವೂ ಇನ್ನೂ ತೋರಿಲ್ಲ.

ವಿದ್ಯಾಕ್ಷೇತ್ರದಲ್ಲಿ ಮಾರ್ಪಾಟುಗಳು ಅವಶ್ಯವಾಗಿ ಆಗಬೇಕೆಂದೂ ಪ್ರತಿಯೊಂದು ಕಡೆಯಿಂದ ಅಧಿಕಾರವಾಣಿಯಿಂದಾದುಪವಂದ್ವಾರೆ, ಕಮಿಟಿ ಕೂಟಗಳು ಜರಗುತ್ತಿವೆ. ಫಲಿತಾಂಶ ಇನ್ನೂ ತಿಳಿದಿಲ್ಲ.

ಸಾಮಾಜಿಕ ವಿಷಯವಾಗಿ, ಹರಿಜನೋದ್ಧಾರ ಕಾರ್ಯವು ಸಾಗುತ್ತಿರುವ ಹಾಗೆಯೆ, ಜಾತಿಗಳಿಗೆ ಅನ್ವಯಿಸಿ ನೇಮಕಗಳ ಕ್ರಮವೂ ಮತಾಂತರಗೊಳಿಸುವ ಏರ್ಪಾಡುಗಳೂ ಇನ್ನೂ ಬಿಗಿಯಾಗುತ್ತಿವೆ: ಧರ್ಮಶ್ರದ್ಧೆಯುಳ್ಳವರಲ್ಲಿ ವಿವೇಕಿಗಳು ಸುಧಾರಣೆಗಳಿಗೊಪ್ಪುತ್ತ ಬರುವಂತೆ, ಧರ್ಮಾಂಧರ ಕುತರ್ಕಗಳೂ ಹೆಚ್ಚುತ್ತಲಿವೆ.

ಕೃಷಿ, ವಾಣಿಜ್ಯ ಕೈಗಾರಿಕೆ ಮೊದಲಾದುವೂ ಸುಧಾರಣೆಹೊಂದುತ್ತ ಬರುವರೆ ಚಡಪಡಿಸುತ್ತಿವೆ; ಆದರೆ, ಅವುಗಳಿಗೆ ಜಾತೀಯವಾದ ಆತಂಕಗಳೂ ಬಾಧಿಸುತ್ತಿವೆ.

ಮಹಾರಾಷ್ಟ್ರಗಳು ಕೂಟಸಂಧಿಗಳಲ್ಲಿ ಮಗ್ನರಾಗಿದ್ದು, ಕೆಲವರ ದರ್ಪದಿಂದ ಇತರ ಕೆಲವರು ನೊಂದುವಂತಾಗಿ, ಪ್ರತಿಯೊಬ್ಬರೂ ಪ್ರಬಲವಾಗಿರಲು ಆತುರಪಟ್ಟು, ಯುದ್ಧಸನ್ನಾಹವು ಸರ್ವತ್ರವೂ ಹೆಚ್ಚುತ್ತಲಿದೆ. ಯುರೋಪು ರಣರಂಗವಾಗುವುದಕ್ಕೆ ಸಿದ್ಧವಾಗಿ, ಈಗ ಶಿಬಿರಗಳಾದಂತೆ ತೋರುತ್ತಿದೆ

ಇಂತಹ ಸುತ್ತಲಿನ ನೋಟದ ಮಧ್ಯದಲ್ಲಿ ನಾವೂ ನೀವೂ ಬದುಕಬೇಕಾಗಿದೆ ಇವುಗಳಲ್ಲಿ ಪ್ರತಿಯೊಂದು ವಿಷಯವೂ ನೂರಾರು ಸಮಸ್ಯೆಗಳನ್ನು ತಂದೊಡ್ಡುವುದಾಗಿದೆ ಇವುಗಳನ್ನು ಪ್ರತಿವಾರವೂ ವಿಚಾರಮಾಡುತ್ತ, ಜಗತ್ತಿನ ಪ್ರಮುಖರ ಹೇಳಿಕೆಗಳನ್ನು ಇಲ್ಲಿ ಮುಂದಿಸಿ ನಾವೆಲ್ಲ ವಿವೇಕವನ್ನು ಪಡೆದು ನಡೆವಂತೆ ಮಾಡುವುದೇ ಈ ಪತ್ರಿಕೆಯ ಕರ್ತವ್ಯವಾಗಿದೆ

ಮೂವತ್ತು ವರ್ಷಗಳಿಂದ ಈ ಪತ್ರಿಕೆಯು ಮಾಡುತ್ತಿರುವ ಸೇವೆಯು ಈ ಭಾಗದಲ್ಲಿ ಅಲ್ಪವಲ್ಲವೆಂದು ನಾವು ನಮ್ರತೆಯಿಂದ ಸೂಚಿಸಿಕೊಂಡು, ಇನ್ನೂ ಹೆಚ್ಚುತ್ತ ನಮಗೆ ಸಹಾಯ ದೊರೆವಂತೆ ನಿಮಗೂ ನಮಗೂ ಅನುಕೂಲತೆಗಳು ಉಂಟಾಗಲೆಂದು ಭಗವಂತನಲ್ಲಿ ಎಂದಿನಂತೆ ಪ್ರಾರ್ಥಿಸಿಕೊಂಡು ಈ ಹೊಸವರ್ಷವನ್ನಿಲ್ಲಿ ಪ್ರಾರಂಭಿಸುತ್ತೇವೆ

ಸ್ಫುಟ ವಿ ಚಾ ರ ಗ ಳು

ಕಲಹಮಯ ಜಗತ್ತಿನಲ್ಲಿ ಬ್ರಿಟನಿನ ಸ್ಥಾನ

ಹಿಂದೂ ದೇಶಕ್ಕೆ ಹತ್ತಿರದಲ್ಲಿರುವ ಸಾಯಾಮಿನಲ್ಲಿ ಜಪಾನೀಯರು ಬಹಳ ಶಾಂತತೆಯಿಂದ ನುಗ್ಗುತ್ತಿದ್ದಾರೆ ಇದರ ಮರ್ಮವೇನು? ಉದ್ದೇಶವಿದ್ದರೂ, ಅವುಗಳು ಅಲ್ಲಗಳೆಯಲಾಗುವವೆಂಬ ವಾರ್ತೆಯು ಈ ಮೊದಲು ಹರಡಿತ್ತು. ಆದರೆ ವಿಹಾರಕ್ಕೆಂದು ಸಾಯಾಮಿಗೆ ಬಂದ ಜಪಾನೀಯರು ಸಾಯಾಮಿನಲ್ಲಿ ತಮ್ಮ ನೆಲೆಯನ್ನು ಸ್ಥಿರ ಮಾಡಿರುವರು. ಅಲ್ಲಿ ಕ್ರಾ ಇಸ್ತಮಾಸ್ ಹತ್ತರ ಒಂದು ಕಾಲುವೆಯನ್ನು ತೋಡುವರಾಗಿ ತಿಳಿದು ಬರುತ್ತದೆ. ಈ ಕ್ರಾ ಕಾಲುವೆಯಿಂದ, ಸಿಂಗಾಪುರದಲ್ಲಾದ ಬ್ರಿಟಿಷ್ ಸಾರ್ವಭೌಮಿಕ ಕ್ರಮ ಏರ್ಪಾಡು ಅಲ್ಲಗಳೆಯಲಾಗುವವು ಸಿಂಗಪುರದಲ್ಲಿ ಬ್ರಿಟಿಷರ ಕೈಬಲವು ಕುಂದಿತೆಂದರೆ, ನಂತರ ಅವರು ತಮ್ಮ ರಕ್ಷಣೆಯನ್ನು ಇಂಗ್ಲಿಷ್ ಕಾಲುವೆಯಲ್ಲಿ ಮಾಡಿಕೊಳ್ಳತಕ್ಕದು

ಸ್ಪೆಯಿನಿನಲ್ಲಿ ಪೆಸಿಯಿಸ್ಟ ಜಯಪ್ರದರಾದರೂ, ಬ್ರಿಟನಿಗೆ ಸುಖವಿಲ್ಲವಾಗದಿದ್ದರೂ ಅದಕ್ಕೆ ಸುಖವಿಲ್ಲ. ಕಾರಣ, ಸ್ಪೆಯಿನು ಪೆಸಿಯಿಸ್ಟರ ಕೈವಶವಾದರೆ, ಅಲ್ಲಿ ಮುಸಲೀನಿಯ ಪ್ರೇರಣೆಯು ಹೆಚ್ಚುವುದರಿಂದ, ಮೆಡಿಟರೇನಿಯನ್ನಿನ ದ್ವೀಪಗಳು ಮುಸಲೀನಿ ಕೈವಶವಾಗಿ, ಪೌರ್ವಾತ್ಯಕ್ಕೆ ಹತ್ತಿರವೆನಿಸುವ ಜಲಮಾರ್ಗವು ಬ್ರಿಟನಿಗೆ ಮುಚ್ಚಲಾಗುವ ಸಂಭವಗಳು ಬರಬಹುದು. ಮೆಡಿಟರೇನಿಯನ್ ಕುರಿತು, ಇಟಲಿ ಆಂಗ್ಲೇಯ ಒಪ್ಪಂದವೊಂದು ನಡೆದಿರುತ್ತದೆಂದು ವಾರ್ತೆ ಬಂದಿದೆ ಆದರೆ ಈಗಿನ ದಿವಸಗಳಲ್ಲಿ ಯುರೋಪ್ಯದಲ್ಲಿ ಒಪ್ಪಂದಗಳಿಗೆ ಹೆಚ್ಚಿನ ಬೆಲೆಯೂ ಮನ್ನಣೆಯೂ ಇರುವುದಿಲ್ಲ

ಪೆಲೆಸ್ತೀನದಲ್ಲಿ ಉಂಟಾದ ದಂಗೆಯಿಂದ ಉಂಟಾದ ಅಸಮಾಧಾನವು ಇನ್ನೂ ಶಾಂತಗೊಳ್ಳಲಿಲ್ಲ ಅರಬೀಯರು ಸ್ವಾತಂತ್ರ್ಯಕ್ಕಾಗಿ ಚಡಪಡಿಸುತ್ತಿದ್ದಾರೆ

ಪೌರ್ವಾತ್ಯದಲ್ಲಿ ಜಪಾನಿನ ಏಟು, ಮೆಡಿಟರೇನಿಯನ್ನಿನಲ್ಲಿ ಮುಸಲೀನಿಯ ಆಕ್ರಮಣ, ಅರಬೀಯರಲ್ಲಿ ಬ್ರಿಟಿಷ ಅಧಿಕಾರಕ್ಕೆ ವಿದ್ವೇಷ ದೊರೆಕುವ ಹಾಗೆ ಬ್ರಿಟನು, ರಷ್ಯದೊಡನೆ ಸೇರಿ, ಪೆಸಿಯಿಸ್ಟ ಸಾಮ್ರಾಜ್ಯವನ್ನು ತೀರಿಸುವುದು ಒಂದು ವೇಳೆ ಸ್ವಾತಂತ್ರ್ಯದ ಬಲವು ಹೆಚ್ಚಿದಿದ್ದರೂ ಕೊಮ್ಯೂನಿಜಮ್ಮಿನ ಪ್ರತಾಪವು ಹೆಚ್ಚಬಹುದು ಅದರಿಂದಲೂ ಬ್ರಿಟನಿಗೆ ಸಮಾಧಾನವಿಲ್ಲ

ರಷ್ಯದೊಡನೆ ಸೇರಿದರೆ ಜಪಾನ್ ಜರ್ಮನ್ ದರ್ಪವನ್ನು ಮುರಿಯಬಹುದು ಮುಸಲೀನಿಯನ್ನು ಬಗ್ಗಿಸಬಹುದು ಆದರೆ, ಬ್ರಿಟನು ತನ್ನ ವರ್ತನೆಯನ್ನು ಸರಿಯಾಗಿ ನಿರ್ಧಾರಪಡಿಸಲಿಲ್ಲ ಸಮಯಕ್ಕೆ ತಕ್ಕುದಾಗಿ ವರ್ತಿಸಬಹುದಾಗಿ ಅದರ ಭಾವವಾಗಿರಬಹುದು

ಆದರೆ, ಬ್ರಿಟನಿನಲ್ಲಿ ಇನ್ನೊಂದು ಮಹಾಯುದ್ಧಕ್ಕಾಗಿ ಸಿದ್ಧತೆಗಳು ಬಹಳ ರಭಸದಿಂದ ಬಹಳ ಯಶಸ್ವಿಯಾಗಿ ನಡೆಯುತ್ತಿವೆ ಯುದ್ಧಶಸ್ತ್ರ ಯಂತ್ರ ಇತ್ಯಾದಿಗಳನ್ನು ತಯಾರಿಸುವ ಕಾರ್ಖಾನೆ ರಾತ್ರಿ ಹಗಲು ತಣಿಯುತ್ತಿವೆ ಭೂಸೈನ್ಯ ಜಲಸೈನ್ಯ ಇವುಗಳನ್ನಲ್ಲಾ ವಿಶೇಷ ರೀತಿಯಲ್ಲಿ ವೃದ್ಧಿ ಪಡಿಸುತ್ತಿದ್ದಾರೆ ಅಲ್ಲದೆ ಅಲ್ಲಲ್ಲಿ ಬೇಕಾದ ರಕ್ಷಣ ಏರ್ಪಾಡುಗಳನ್ನು ಮಾಡುತ್ತಿದ್ದಾರೆ

ಬ್ರಿಟನು ಯಾವ ಪಕ್ಷವನ್ನು ಸೇರುತ್ತದೆಂಬುದನ್ನು, ಅದೂ ಯಾವತ್ತೂ ಪಕ್ಷವನ್ನು ಸೇರಿದೊಡನೆ ಮಾತ್ರ ದೃಢವಾಗಿ ಹೇಳಬಹುದು

ದಾಂಪತ್ಯಗಳ ವಿವಾಹ

ಹಲವು ವರ್ಷಗಳ ಘನವಾದ ದಾಂಪತ್ಯ ಜೀವನದೊಂದಿಗೆ ದೇಶಸೇವೆಯಲ್ಲಿ ತನುವನ್ನು ಅರ್ಪಿಸಿ, ಕಾರಾಗೃಹವನ್ನು ಪದೇ ಪದೇ ಅನುಭವಿಸಿ, ಬಳಲಿದ ಶ್ರೀ। ಜವಾಹರಲಾಲರು ಈಗ ಎರಡನೇ ಮದುವೆಯನ್ನು ಮಾಡಿಕೊಳ್ಳುವರೆಂಬ ವಾರ್ತೆಯನ್ನು ಕೆಲವು ಅಸಂಬದ್ಧ ಪ್ರಳಾಪಿಗಳು ಹರಡಿರುವರು. ಪಂಡಿತರು ಅದನ್ನು 'ಬೇಸರದ ಹುಸಿ' ಎಂದು ಅಲ್ಲಗಳೆದಿರುವರು

ಪಂಡಿತ ಮಾಲವೀಯರು ತನ್ನ 76ನೇ ಜನ್ಮೋತ್ಸವದಲ್ಲಿ ಅರ್ಪಿಸಿದ ಅನೇಕ ಬಿನ್ನವತ್ತಳೆಗಳಿಗೆ ಉತ್ತರವೀಯುತ್ತಾ ನನಗೆ ಇನ್ನು ಕೆಲವು ವರ್ಷ ಜಾಸ್ತಿ ಬದುಕುವ ಆಶೆ ಇದೆ ನನ್ನ ಇಚ್ಛೆಯು ಪೂರ್ತಿಯಾದ ಮೇಲೆಯೇ ನಾನು ಸಾಯ ಬಯಸುವೆನು ಎಂದರು

ಹರಿಜನೋದ್ಧಾರದ ಒಂದು ಭಾಗವಾದ ದೇವಾಲಯ ಪ್ರವೇಶವನ್ನು ಯಶಸ್ವಿಗೊಳಿಸಿ ಕಾರ್ಯ ಪ್ರಾರಂಭಿಸಿದ ಕೆಲವೇ ಸಮಯದಲ್ಲಿ ಒಂದು ಪ್ರವೇಶ ಪ್ರಾರಂಭೋತ್ಸವವನ್ನು ಜರುಗಿಸಲು ಮಹಾತ್ಮರು ತಿರುವಾಂಕೂರಿಗೆ ತಾ. 12ಕ್ಕೆ ಹೋಗುವರು, ಏನು ಸುಹಾತ್ಮೆ! ಗಾಂಧಿಯವರಲ್ಲದಿದ್ದರೆ ಇನ್ನೆಷ್ಟು ವರ್ಷಕ್ಕೆ ಈ ಸುಧಾರಣೆಯು ಮುಂದುವರಿಯುತ್ತಿತ್ತೋ? ದೇವರೇ ಬಲ್ಲ.

ರಾತ್ರಿ ಹಗಲು ಕಾವಲುಗಾರರಿಂದ ಭದ್ರವಾಗಿರುವ ನಮ್ಮ ರೈಲ್ವೆ ಸ್ಟೇಶನಿನಲ್ಲಿ ಟಪ್ಪಾಲು ಸಂಬಂಧ ಕಳವು ಬಹಳ ಚಾತುರ್ಯದಿಂದಾಗಿದೆಯೆಂದರೆ ಇತರರ ಅವಸ್ಥೆಯೇನು? ಕಳ್ಳರು ಬಹಳ ಸಾಹಸಿಗಳು ಅಲ್ಲದೆ ವಿವೇಕಿಗಳೂ ಇದ್ದಾರೆ ರೈಲ್ವೆ ಆಫೀಸಿನ ಕೋಣೆಯ ಮೇಲ್ಗಡೆಯ ಹಂಚುಗಳನ್ನು ಹಾರಿಸಿ, ಹಗ್ಗಗಳ ಮುಖಾಂತರ ಕೆಳಗಿಳಿದು, ಬರಿ ಇನ್ಶೂರು ಕವರುಗಳನ್ನೂ, ಬೆಳ್ಳಿ ರೂಪಾಯಿಗಳನ್ನೂ ಹೊಡೆದಿರುವ ಈ ಕಳ್ಳರು ಎಲ್ಲೋ ಕಠಿಣ ಸಂಸ್ಕಾರದಿಂದ ಪೀಡಿಸಲ್ಪಟ್ಟಿರಬೇಕು ಇಲ್ಲದಿದ್ದರೆ ಇಷ್ಟು ಸಾಹಸಪಡಲು ಕಾರಣವಿಲ್ಲ.

ಇಷ್ಟರವರೆಗೆ ತಟಸ್ಥವಾಗಿದ್ದ ಅಮೇರಿಕವು ಈಗ ಯುರೋಪಿನಲ್ಲಿ ತನ್ನ ಕೈಸೊಗ ನೋಡುತ್ತಿದೆ ಸ್ಪೈನಿನ ಸರಕಾರದವರಿಗೆ ನಾಲ್ಕೂವರೆ ಮಿಲಿಯ ಡಾಲರು ಬೆಲೆಯ ಯುದ್ಧಸಾಮಗ್ರಿಗಳನ್ನು ಮಾರಲು ಒಂದು ಸಂಸ್ಥೆಗೆ ಲೈಸೆನ್ಸ್ ಅಮೇರಿಕನ್ ಸರಕಾರದಿಂದ ಸಿಕ್ಕಿದೆ. ಏನೂ ಸೋಲುಗೆಲುಗಳಿಲ್ಲದೆ ಒಂದೇ ಸಮನೆ ನಡೆಯುತ್ತಿರುವ ಈ ಯುದ್ಧಜ್ವಾಲೆಯು ಯುರೋಪವನ್ನೆ ಸುಡದಿದ್ದರೆ ಸಾಕು. ಆಗಲೇ ಫ್ರಾನ್ಸ್, ರಶ್ಯ, ಜರ್ಮನಿ, ಇಟೇಲಿ, ಇಂಗ್ಲೆಂಡುಗಳು ಇದರಲ್ಲಿ ಬೇರೆ ಬೇರೆ ಪಾತ್ರಗಳಿಂದ ತಮ್ಮ ಕೆಲಸವನ್ನು ಸಾಧಿಸನೋಡುತ್ತಾರೆ. ಫಾಸಿಜಂ ಎಂಬ ಮಹಾಜ್ವಾಲೆಗೆ ಪೋಚಿನ ಚಿಟ್ಟೆಗಳೆಂಬ ಈ ರಾಷ್ಟ್ರಗಳು ನಾಶವಾಗಿಯೇ ಹೋಗುತ್ತವೆ ಎಂಬುದು ಈಗಿನ ಪರಿಸ್ಥಿತಿಯಿಂದ ತಿಳಿದುಕೊಳ್ಳಬಹುದು

ಮೂಲವ್ಯಾಧಿಗೆ ದಿವ್ಯೌಷಧ.

ಜಾಂಬಕ್ ಆಶ್ಚರ್ಯಕರವಾದ ರೀತಿಯಲ್ಲಿ ಮೂಲವ್ಯಾಧಿ ರೋಗವನ್ನು ಗುಣಪಡಿಸುವುದು.

ನಿತ್ಯಶ್ರಮದಿಂದಾಗಿ ಉಂಟಾಗುವ ಮೂಲವ್ಯಾಧಿಯ ದುರ್ಭರ ವೇದನೆಯಿಂದ ಬಾಧೆಗಳು ಅನುಭವಿಸುವಿರಾ? ಹಾಗಾದರೆ ಇಂದಿನಿಂದಲೆ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ ಜಾಂಬಕನ್ನು ಉಪಯೋಗಿಸಿರಿ ಬಹು ಬೇಗನೆ ನಿಮ್ಮ ವ್ಯಾಧಿಯನ್ನು ಗುಣಪಡಿಸುವುದೆನ್ನುವುದು ಅನುಭವವಾಗುವುದು. ಜಾಂಬಕು ದೇಹದ ಕಲ್ಮಶದಲ್ಲಿ ಹಾಳಾಗಿ ಗಟ್ಟಿಯಾದ ಮಲವನ್ನು ಮೃದುಗೊಳಿಸಿ ನೋವನ್ನು ಗುಣಪಡಿಸಿ ಮೂಲವ್ಯಾಧಿ ರೋಗವನ್ನು ನಾಶಪಡಿಸುವುದು, ಕಜ್ಜಿ, ಗುಳ್ಳೆಗಳಿಗೆ, ಸುಟ್ಟ ಮತ್ತು ಪೆಟ್ಟಿನ ಗಾಯಗಳಿಗೆ ಜಾಂಬಕು ದಿವ್ಯೌಷಧಿ, ಎಲ್ಲಾ ಔಷಧಿಯ ಅಂಗಡಿಗಳಲ್ಲೂ ರೂ. 1 ಅಥವಾ 2 4—0ಯಂತೆ ಮಾರಲ್ಪಡುವುದು,

ಏಜಂಟರು:—

ಮೆಸರ್ಸ್ ದಾಧಾ ಎಂಡ್ ಕೊ, ಪಿ. ಟಿ. ಮದ್ರಾಸು.

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ



ಜಾಂಬಕ್
Zam-Buk

ಯುರೋಪ್ಯದಲ್ಲಿ ವಿಷಮ ಸ್ಥಿತಿ.

ಸ್ಪೇಯಿನಿನಲ್ಲಿ ಪ್ರಾರಂಭವಾದ ದಂಗೆಯು ಒಂದು ಅಂತ ರಾಷ್ಟ್ರೀಯ ಸಮಸ್ಯೆಯಾಗಿ ಮಾರ್ಪಡುವುದು ಈಗ ಸಂಪೂರ್ಣವಾಗಿದೆನ್ನಬಹುದು ಅಲ್ಲಿನ ರಣರಂಗದಲ್ಲಿ ಅಂತರ್ಯುದ್ಧ ... ಕದನ ನಡೆಯುತ್ತಿರುವುದು ... ಅಂದರೆ ಇನ್ನೊಂದು ಮಹಾ ಯುದ್ಧವು ಸಣ್ಣಮಟ್ಟಿಗೆ ಸ್ಪೇಯಿನಿನಲ್ಲಿ ಪ್ರಾರಂಭವಾಗಿದೆ

ಇಟಲಿಯಿಂದಲೂ, ಜರ್ಮನಿಯಿಂದಲೂ ಪೆಸಿಷ್ಟ ದಂಗೆಕೋರರ ಸಹಾಯಾರ್ಥವಾಗಿ, ಧಾರಾಳವಾಗಿ ಸೈನಿಕರು ಬಂದಿಳಿಯುತ್ತಿದ್ದಾರೆ. ಸ್ಪೇಯಿನಿನ ಪ್ರಜಾಪ್ರಭುತ್ವ ಸರಕಾರದ ಸಹಾಯಾರ್ಥವಾಗಿ ಇಂಗ್ಲೆಂಡು, ಫ್ರಾನ್ಸು, ರಷ್ಯ ಈ ದೇಶಗಳಿಂದ ಸೈನಿಕ ಸ್ವಯಂಸೇವಕರು ಬರುತ್ತಿದ್ದಾರೆ ಅಂದರೆ ಸ್ಪೇಯಿನಿನ ದಂಗೆಯು ಫೆಸಿಸಂ ಕಮ್ಯೂನಿಸಂ ಕದನದ ರೂಪವನ್ನು ಹೊಂದುವಂತೆ ಕಾಣುತ್ತದೆ

ಜರ್ಮನರು ಸ್ಪೇಯಿನನ್ನು ಸೇರಲು, ಓವರ್ ಜಿಬ್ರಾಲ್ಟರ್ ಬಾಧಕ ಕೋಟೆಯನ್ನು ... ಇಟೆಲಿಯು ಇನ್ನೊಂದು ಕಡೆಯಿಂದ ರಣರಂಗವನ್ನು ಸೇರುತ್ತದೆ, ಫ್ರಾನ್ಸಿನ ಸೌಮ್ಯವಾದ ಸರಕಾರವು, ಇನ್ನೂ ಸುಮ್ಮನೆ ಕಾಣಿಸಿಕೊಂಡರೂ ರಷ್ಯವು ಆ ಕುರಿತು ಕಾರ್ಯಕಲಾಪಗಳನ್ನು ಪ್ರಾರಂಭಿಸಿಯೆ ಬಿಟ್ಟಿದೆ ಅದರೆ ಸಮರವು ಸರಿಯಾಗಿ ಪ್ರಾರಂಭವಾಗುವುದು ಬ್ರಿಟಿಶ ಮೇಲೆ ಹೊಂದಿಕೊಂಡಿದೆ

ಸ್ಪೇಯಿನಿನ ದಂಗೆಕೋರರು ಒಂದು ಬ್ರಿಟಿಷ ನೌಕೆಯ ಮೇಲೆ ಬಾಂಬನ್ನು ಎಸೆದರು ಒಂದು ಜರ್ಮನ್ ಹಡಗು ... ಸಾಮಾನು ಇತ್ಯಾದಿಗಳಿಂದ ಕೂಡಿದ್ದಾಗಿ ಸ್ಪೇಯಿನಿನ ಸರಕಾರದಿಂದ ಸೆರೆ ಹಿಡಿಯಲ್ಪಟ್ಟಿದೆ. ಬಿಟ್ಟುಕೊಡಲಾಗಲಿಲ್ಲ ಸ್ಪೆಯಿನ್ ಸರಕಾರ ಹಡಗೊಂದು ಜರ್ಮನಿಯಲ್ಲಿ ಸೆರೆಹಿಡಿಯಲಾಗಿದೆ

ಬಹಳ ಮಹತ್ತರದ ಮಹಾಯುದ್ಧ ಸಿದ್ಧತೆಯಾಗುತ್ತಿದ್ದರೂ ಎಲ್ಲಾ ಮಹಾಪ್ರಭುತ್ವದ ಜನಾಂಗಗಳಲ್ಲಿ ಒಂದು ತರದ ಭೀತಿಯು ಇರುವುದರಿಂದ ಮೇಲಿನ ಘಟನೆಗಳಿಂದ ಯುದ್ಧವು ಸರಿಯಾಗಿ ಪ್ರಾರಂಭಿಸಲಿಲ್ಲ ಅಲ್ಲದಿದ್ದರೆ ಯುರೋಪ್ಯವು ಒಂದು ಮಹಾ ರಣರಂಗವಾಗಿ ಇಷ್ಟರೊಳಗೆ ಮಾರ್ಪಾಡ ತಿತ್ತು.

ಸ್ತ್ರೀ ಸೈನ್ಯಪಡೆ.

ರಷ್ಯಾದೇಶದ ಸ್ತ್ರೀಯರು, ಸಾಗರ್ರಾವು ಹೊರರಾಗಲು ಬಹು ಸಮಯದಿಂದ ಚಟುವಟಿಕೆಗಳು ನಡೆಯುತ್ತಿದ್ದು ಈಗ ಸಾಧಾರಣ ಅರ್ಧ ... ಹೆಚ್ಚಿನ ಸ್ತ್ರೀಯರು ಸಂಗ್ರಾಮ ... ಹೊಂದಿರುವರೆಂದು ಸ್ತ್ರೀ ಸೈನ್ಯ ... ಕುರಿತು ಜರಗಿದ ಸಂಗ್ರಾಮಿಕರ ಪಕ್ಷಿಯರ ಪರಿಷತ್ತಿನಲ್ಲಿ ಓದಲಾದ ವರದಿಯಿಂದ ತಿಳಿದುಬರುತ್ತದೆ

ಶಾಂತರಾಗಿರಬೇಕೆಂಬುದು ರಷ್ಯಾದೇಶದ ಮುಖ್ಯ ಉದ್ದೇಶವಾಗಿದ್ದರೂ ಸ್ವಾತಂತ್ರ್ಯ ರಕ್ಷಣೆಗಾಗಿ ಯುದ್ಧಸಂದರ್ಭಗಳು ಬಂದಲ್ಲಿ ಸಿದ್ಧರಾಗಿದ್ದು, ಪುರುಷರು ಮಾತ್ರ ಧೈರ್ಯಶಾಲಿ ಪುರುಷರನ್ನು ಮಾತ್ರ ಎದುರಿಸುವುದಲ್ಲದೆ, ವೀರ ರಮಣಿಯರನ್ನು ಕೂಡ ಎದುರಿಸುವವರಾಗಿರಬೇಕೆಂದು ಸೋವಿಯಟ್ ಸರಕಾರದ ಮತವಾಗಿರುತ್ತದೆ

ಪೌರ್ವಾತ್ಯದಲ್ಲಿ ಜಪಾನೀಯ ಅಧಿಕ್ರಮದ ಸಂಭವದಲ್ಲಿ, ಸೈನಿಕರಾಗಿ ಮುಂದೆ ಬರಲು ಧಾರಾಳ ವೀರ ರಮಣಿಯರು ಸಿದ್ಧರಾಗಿರುವರೆಂದು ಪೂರ್ವ ರಷ್ಯಾ ಓವರ್ ಸ್ತ್ರೀ ... ಯಿಂದ ಭರವಸೆಯು ಸೋವಿಯಟ್ ಸರಕಾರಕ್ಕೆ ಸಿಕ್ಕಿರುತ್ತದೆ

ಪೋಪ್ ಸಾಹೇಬರ ಆರೋಗ್ಯ

ಬಹಳ ದಿವಸಗಳಿಂದ ಹಾಸಿಗೆ ಹಿಡಿದ ಪೋಪ್ ಸಾಹೇಬರ ದೇಹಸ್ಥಿತಿಯಲ್ಲಿ ಯಾವತ್ತೂ ಬದಲಾವಣೆಗಳು ಕಾಣದೆ, ರೋಗದ ಸ್ಥಿತಿಯು ಇದ್ದ ಹಾಗೆ ಇರುವುದಲ್ಲದೆ, ಅವರು ಕ್ಷೀಣರಾಗುತ್ತಾ ಬರುತ್ತಿದ್ದಾರಂತೆ ಪ್ರಸಿದ್ಧ ವೈದ್ಯಕೀಯ ಜನರು ಅವರ ಮೇಲೆ ಚಿಕಿತ್ಸೆ ನಡೆಯಿಸುತ್ತಿದ್ದಾರೆ. ಆದರೆ ಅವರು ಮತ್ತೊಮ್ಮೆ ಆರೋಗ್ಯ ಹೊಂದುವುದರಲ್ಲಿ ತುಂಬಾ ಸಂದೇಹಗಳುಂಟಾಗಿವೆ

ಮೆಡಿಟರೆನಿಯನ್ ಒಪ್ಪಂದ

ಮೆಡಿಟರೇನಿಯನ್ ಸಾಗರದಲ್ಲಿ ಇಟೇಲಿಯ ಪ್ರಬಲತೆ ದಿನ ದಿನ ಹೆಚ್ಚುತ್ತಿರಲು, ಬ್ರಿಟಿಷರ ಪೌರ್ವಾತ್ಯಕ್ಕೆ ಈ ಹತ್ತಿರದ ಹಾದಿಯಲ್ಲಿ ಅಡ್ಡಂತರಗಳು ಬರಬಹುದೆಂಬ ಊಹನೆಯು ಎಲ್ಲೆಲ್ಲೂ ಉಂಟಾಗಿದ್ದವು, ಆದರೆ ಮೆಡಿಟರೆನಿಯನ ದಿಂದ ಬ್ರಿಟಿಷರಿಗೆ ಸುರಕ್ಷಿತ ಹಾದಿ ದೊರಕುವ ಕುರಿತು ಒಂದು ಒಪ್ಪಂದ ನಡೆದಿದೆ ಎಂದೂ, ಅದಕ್ಕೆ ಎರಡೂ ಜನಾಂಗಗಳೂ ಸಹಿ ಹಾಕಿವೆ ಎಂದೂ ವಾರ್ತೆ ಬಂದಿದೆ, ಆದರೆ ಸತ್ಯಯುದ ಕಡೆ ಲಕ್ಷವೆ ಇಲ್ಲದ ಪಾಶ್ಚಾತ್ಯದಲ್ಲಿ ಒಪ್ಪಂದಗಳಿಗೆ ಮಹತ್ವವಿದೆಯೆ ಎಂಬುದನ್ನು ಮಾತ್ರ ನೋಡಲಿದೆ

ಇಗರ್ಜಿಯಲ್ಲಿ ಅಸ್ಪೃಶ್ಯತೆ.

ಕುಂಭಕೋಣದ ಕೆಥೊಲಿಕ್ ಇಗರ್ಜಿಯಲ್ಲಿ, ಆದಿದ್ರಾವಿಡ ಕೆಥೊಲಿಕ್ ಜನರಿಗೆ ನ್ಯಾಯವಾದ ಸ್ಥಾನಮಾನಗಳು ದೊರಕದೆ, ಇಗರ್ಜಿಗೆ ಪ್ರಾರ್ಥನೆಗೆ ಬರುವ ಅವರು, ಇತರ ಸುವರ್ಣ ಜನರೊಡನೆ ಬೆರಸದಂತೆ, ಅವರು ಒಂದು ನಿಯಮಿತ ಸ್ಥಳದಲ್ಲಿ ಕೂತುಕೊಳ್ಳಬೇಕೆಂದಿದೆ ಅವರು ಕ್ರೈಸ್ತರಾಗಿದ್ದರೂ, ಅವರು ಇತರ ಕ್ರೈಸ್ತರಿಗೆ ಅಸ್ಪೃಶ್ಯರಾಗಿರುವರು.

ಆದರೆ ಇತ್ತೀಚೆಗೆ ಇಗರ್ಜಿಯ ಈ ವರ್ತನೆಯಿಂದ ಆದಿದ್ರಾವಿಡರಲ್ಲಿ ಅಸಮಾಧಾನ ಉಂಟಾಗಿ ತಮಗೆ ಇಗರ್ಜಿಗಳಲ್ಲಿ ಇತರರೊಡನೆ ಸ್ಥಳ ದೊರಕಬೇಕೆಂದು ಚಳವಳ ನಡೆಯಿಸಲಾರಂಭಿಸಿದ್ದಾರೆ ಆದರೆ ಇಗರ್ಜಿಯ ಪಾದ್ರಿಗಳು ಅದಕ್ಕೆ ಸಿದ್ಧರಿಲ್ಲ ಆದಿದ್ರಾವಿಡರು ಆ ಕುರಿತು ಸ್ವಲ್ಪ ಸಮಾಧಾನ ತೊರಿದಬೇಕೆಂದೂ, ಕ್ರಮೇಣ ಅವರಿಗೆ ಆ ಸ್ಥಾನವು ಕೊಡಲಾಗುವುದೆಂದೂ ಬಿಷೋಪರ ಹಿತೋಕ್ತಿಗಳನ್ನು ಆಡಿರುವರು ಆದರೆ ದೇಶದಲ್ಲೆಲ್ಲಾ ಅಸ್ಪೃಶ್ಯತೆಯು ಮಾಯವಾಗುತ್ತಿರುವಾಗ ಇಲ್ಲಿನ ಆದಿದ್ರಾವಿಡರು ಮಾತ್ರ ಅದನ್ನು ಯಾಕೆ ಅನುಭವಿಸಬೇಕೆಂಬ ಭಾವನೆಯಿಂದ ಅವರು ವಿಜಯಿಗಳಾಗುವ ವರೆಗೆ ಭಯಂಕರ ತರದ ಚಳವಳವನ್ನು ನಡೆಯಿಸಬೇಕೆಂದು, ಒಂದು ಮಹಾಸಭೆಯಲ್ಲಿ ಸೇರಿ ನಿರ್ಧಾರಮಾಡಿರುವರು

ಅಖಿಲ ಜಗತ್ತು ವಾೖ ಎಂ ಸಿ ಎ ಪರಿಷತ್ತು

ಸಮಸ್ತ ಜಗತ್ತಿನ ವಾೖ ಎಂ ಸಿ ಎ ಪರಿಷತ್ತು ಮೈಸೂರಿನಲ್ಲಿ ಶ್ರೀಮನ್ ಮಹಾರಾಜರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು ಈ ಪರಿಷತ್ತಿಗೆ ಸಾಧಾರಣ ೧೮ ಜನಾಂಗಗಳಿಂದ ಪ್ರತಿನಿಧಿಗಳು ಬಂದಿದ್ದರು ದೇಶದ ತರುಣರ ಕೃತ್ಯದ ಕುರಿತು ಈ ಪರಿಷತ್ತಿನಲ್ಲಿ ಅನೇಕ ಭಾಷಣಗಳಾದವು ಪರಿಷತ್ತಿಗೆ ಬಂದವರಿಗೆ ಮಹಾರಾಜರವರ ಒಂದು ಸತ್ಕಾರಕೂಟ ನಿತ್ತು ಮೈಸೂರಿನ ದಿವಾನರಾದ ಮಿರ್ಜಾರವರು ಪರಿಷತ್ತಿಗೆ ಬಂದ ತರುಣರಿಗೆ ಒಂದು ಭಾಷಣವನ್ನು ಮಾಡಿದರು ವಾೖ ಎಂ ಸಿ ಎ ಎಂದರೆ ಅದೊಂದು ಸಮಸ್ತ ಜಗತ್ತಿನ ತರುಣರ ಸಂಸ್ಥೆಯಾಗಿರುತ್ತದೆ ತರುಣರ ಉದ್ಧಾರವೆ ಈ ಸಂಸ್ಥೆಯ ಮುಖ್ಯ ಗುರಿಯಾಗಿರುತ್ತದೆ ಈ ಸಂಸ್ಥೆಯು ಈ ಜಗತ್ತಿನ ಅನೇಕ ಕಡೆಗಳಲ್ಲಿ ಹಿಂದೂದೇಶದ ಎಲ್ಲಾ ಮುಖ್ಯ ನಗರಗಳಲ್ಲಿ ಶಾಖೆಗಳಿರುವವು.

ಜರ್ಮನಿಗೆ ಅವಮಾನ.

ಹೊಲ್ಲೆಂಡಿನಲ್ಲಿ ಜರ್ಮನಿಯ ಕುರಿತು ಬಹಳ ಅಸಮಾಧಾನ ಉಂಟಾಗಿದೆ ತಮ್ಮ ದೇಶದಲ್ಲಿರುವ ನಾಜಿಗಳನ್ನು ಮೇಲೆ ಅವರು ಒಂದು ತರದ ಬಹಿಷ್ಕಾರವನ್ನು ಹೂಡಿರುವರು ಮೊನ್ನೆ ಒಂದು ಜರ್ಮನ್ ಶಾಲೆಯ ಸ್ವಸ್ತಿಕಾ ಧ್ವಜವು ಯಾರಿಂದಲೊ ಕಳ್ಳ ತೆಗೆಯಲಾಗಿ ಅಪಮಾನಿಸಲಾಯಿತು ಈ ತರದ ಘಟನೆಯು ಬೇರೆ ಜರ್ಮನ್ ಶಾಲೆಗಳಲ್ಲಿ ನಡೆಯದಂತೆ, ಆ ಶಾಲೆಗಳಲ್ಲಿ ಪೋಲಿಸ್ ಬಂದೋಬಸ್ತು ಏರ್ಪಾಡು ಮಾಡಲಾಗಿದೆ

ಮೇಲಿನ ಘಟನೆಯಿಂದ ಎಲ್ಲಾ ಜರ್ಮನರಿಗೆ ಮಹಾ ಅವಮಾನವುಂಟಾದಂತಾಗಿ, ಅವರು ಹೊಲ್ಲೆಂಡಿನ ಮೇಲೆ ರೇಗಿರುವರು ಡಚ್ಚ ಸರಕಾರಕ್ಕೆ ಜರ್ಮನ್ ಸರಕಾರದಿಂದ ಪ್ರತಿಕೂಲಗಳು ಬಂದಿವೆ.

ದಂಗೆ ನಾಯಕನಿಗೆ ಕ್ಷಮಾಪಣೆ ಕೊಡಲಾಯಿತು.

ಚೀನಾದೇಶದಲ್ಲಿ ಇತ್ತೀಚೆಗೆ ಉಂಟಾದ ದಂಗೆಗೆ ಕಾರಣನಾದ ದಂಗೆ ನಾಯಕನಿಗೆ ಮುಖ್ಯ ಮಂತ್ರಿ ಚಿಯಾಂಗ್-ಕೈ ಶೇಖರ ವಿನಂತಿಪ್ರಕಾರ ಕ್ಷಮಾಪಣೆ ಕೊಡಲಾಯಿತು, ಅತನು ಮುಖ್ಯ ಮಂತ್ರಿಯನ್ನೆ ಬಂಧಿಸಲ್ಪಟ್ಟಿದ್ದನು, ಆದರೆ ಅದೊಂದು ತಪ್ಪುತರದ ಮನೋಭಾವದಿಂದ ನಡೆದ ಘಟನೆಯಾದುದರಿಂದ ಅತನಿಗೆ ಕ್ಷಮಾಪಣೆ ಕೊಡಲಾಯಿತು

ರಾಜಕೀಯ ಕೈದಿಗಳ ಅವಸ್ಥೆ.

ಅಖಿಲಭಾರತ ರಾಜಕೀಯ ಕೈದಿಗಳ ಉಪಶಮನಾ ಕಮಿಟಿಯವರು, ಪೈಜಾಪುರ ಕಾಂಗ್ರೆಸ್ಸಿನ ಚಪ್ಪರದಲ್ಲಿ ಬಾಬುರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಒಂದು ಪ್ರದರ್ಶನಾಸಭೆಯನ್ನು ಕಳೆದ ತಿಂಗಳ ೩೦ ತಾರೀಕಿನಲ್ಲಿ ಜರಗಿಸಿದರು ೪೦,೦೦೦ಕ್ಕಿಂತ ಹೆಚ್ಚಿನ ಜನರು ನೆರೆದಿದ್ದರು.

ಬಾಬು ರಾಜೇಂದ್ರ ಪ್ರಸಾದರು ಮೂವತ್ತು ನಿಮಿಷಗಳ ಭಾಷಣದಲ್ಲಿ ಅಖಿಲಭಾರತದಲ್ಲೆಲ್ಲಾ ರಾಜಕೀಯ ಕೈದಿಗಳು ಅನುಭವಿಸುತ್ತಿರುವ ಶೋಚನೀಯ ಸ್ಥಿತಿಯನ್ನು ವಿವರಿಸಿದರು ಅನೇಕ ಚಟಿನವ್ಯಾಗಳು ವಿಚಾರಣೆಯಿಲ್ಲದೆ, ಅಂಡಮಾನ್ ದ್ವೀಪಗಳಲ್ಲೂ ಹಿಂದೂದೇಶದಲ್ಲೂ ನರಳುತ್ತಿದ್ದಾರೆ ರಾಜಕೀಯ ಕೈದಿಗಳಿಗೆ ಉಪಶಮನ ದೊರಕಿಸುವರೆ, ದೇಶ ನಾಯಕರುಗಳು ಮುಂದೆ ಬಂದು ಉದಾರ ಧನಸಹಾಯವನ್ನು ಮಾಡಬೇಕೆಂದು ಒಂದು ವಿನಂತಿ ಮಾಡಿ ಶ್ರೀ ರಾಜೇಂದ್ರ ಪ್ರಸಾದರು ತಮ್ಮ ಭಾಷಣವನ್ನು ಕೊನೆಗೊಳಿಸಿದರು

ನಂತರ ಮೊನ್ನೆ ಈಚೆಗೆ ಬಂಧವಿಮುಕ್ತರಾದ ಶ್ರೀಗಳಾದ ಎಂ ಎನ ರಾಯ್‌ರವರು, ತಮ್ಮ ಕಾರಾಗೃಹವಾಸದ ಅನುಭವವನ್ನು ಪ್ರೇಕ್ಷಕರಿಗೆ ವಿವರಿಸಿದರು, ಸಾರ್ವಜನಿಕ ಮತವನ್ನು ಈ ವಿಚಾರ ವ್ಯವಸ್ಥೆಗೊಳಿಸಿ, ಪ್ರಚಾರ ಚಳವಳ ಇತ್ಯಾದಿಗಳನ್ನು ನಡೆಸಿ, ಸರಕಾರದವರು ರಾಜಕೀಯ ಕೈದಿಗಳ ಸವಲತ್ತುಗಳನ್ನು ಪೂರೈಸುವಂತೆ ಸಾಧಿಸಬೇಕೆಂದು ಅವರು ನೆರೆದ ಜನರೊಡನೆಯೂ, ಸಮಸ್ತದೇಶದೊಡನೆಯೂ ಬೇಡಿಕೊಂಡರು

ವೈಸ್ರಾಯರಿಗೆ ಸತ್ಕಾರಕೂಟ

ವೈಸ್ರಾಯರು ಸಪತ್ನಿ ಪರಿವಾರ ಸಮೇತರಾಗಿ ಈಗ ಕಲ್ಕತ್ತಾದಲ್ಲಿರುವರು ಅವರ ಸಂದರ್ಶನದಿಂದ ಕಲ್ಕತ್ತವೆಲ್ಲಾ ಚಟುವಟಿಕೆಯಿಂದ ಕೂಡಿದೆ

ಕಲ್ಕತ್ತಾ ನಗರಸಭೆಯವರಿಂದ ವೈಸ್ರಾಯರಿಗೆ ಕೊಡಲಾಗುವ ಸತ್ಕಾರಕೂಟದಲ್ಲಿ ಕಾಂಗ್ರೆಸ್ ಸದಸ್ಯರು ಭಾಗಿಗಳಾಗಬಹುದೊ ಎಂಬುದಾಗಿ, ಇಲ್ಲಿ ಬಹು ದಿನಗಳಿಂದ ಚರ್ಚೆ ನಡೆಯುತ್ತಿತ್ತು ಬಂಗಾಳ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶರತ್‌ಚಂದ್ರ ಬೋಸರ ಅಭಿಪ್ರಾಯವು ಈ ವಿಚಾರದಲ್ಲಿ ಕೇಳಲಾಯಿತು ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ ಕಮಿಟಿಯ ನಿರ್ಧಾರ ಮೇರೆಗೆ ಯಾವತ್ತೂ ಕಾಂಗ್ರೆಸ್ ಸದಸ್ಯರು ವೈಸ್ರಾಯರಿಗೆ ಕೊಡುವ ಸತ್ಕಾರಕೂಟದಲ್ಲಿ ಭಾಗಿಗಳಾಗಬಾರದೆಂದರು ಅದು ವೈಸ್ರಾಯರಿಗೆ ಧಿಕ್ಕಾರವೆನಿಸಲಾಗದಂತೆ

ಕಾಂಗ್ರೆಸಿನಲ್ಲೆ ಇದ್ದು ಕಾಂಗ್ರೆಸ್ ವಾಲರು, ಕಾಂಗ್ರೆಸ್ಸ ಉಮೇದ್ವಾರರನ್ನು ವಿರೋಧಿಸಬಾರದು

ರಾಷ್ಟ್ರಪತಿ ಶ್ರೀ ನೆಹರೂಗಳು ಕಾಂಗ್ರೆಸ್ಸವಾಲರಾಗಿದ್ದು ಕಾಂಗ್ರೆಸ್ಸ ಉಮೇದ್ವಾರರಿಗೆ ವಿರೋಧವಾಗಿ ಸ್ವತಂತ್ರರಾಗಿ ನಿಂತ ಓವರ್ ಮಹನೀಯರ ಹೆಸರನ್ನು ಕಾಂಗ್ರೆಸ್ಸಿನಿಂದ ತೆಗೆದುಹಾಕಿರುವರು ಯಾವ ರೀತಿಯಲ್ಲಾಗಲಿ ಕಾಂಗ್ರೆಸ್ಸವಾಲರೆಂಬವರು, ಕಾಂಗ್ರೆಸ್ಸಿನ ಒಳಗೆ ಇದ್ದು, ಕಾಂಗ್ರೆಸ್ಸನ್ನು ವಿರೋಧಿಸಬಾರದೆಂದು ರಾಷ್ಟ್ರಪತಿಯವರ ಕಟ್ಟಾಜ್ಞೆಯು ಹೊರಡಿರುತ್ತದೆ

ಅಖಿಲಭಾರತ ಆಯುರ್ವೇದಿಕ್ ವೈದ್ಯರ ಪರಿಷತ್ತು ಕಾಶಿ ಪಟ್ಟಣದಲ್ಲಿ ಜರಗಿತು ದೇಶದ ಎಲ್ಲಾ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು ಆಯುರ್ವೇದ ಉದ್ಧಾರದ ಕುರಿತು, ಅನೇಕ ಭಾಷಣಗಳು ನಡೆದುವು,

ಕುಂಭಕೋಣದಲ್ಲಿ ದೇವಸ್ಥಾನ ತೀರ್ಥದ ಕುರಿತಾಗಿ ಅರ್ಚಕರಲ್ಲಿ ಮತ್ತು ದೇವಸ್ಥಾನದ ಭಕ್ತರಲ್ಲೂ ಉಂಟಾದ ಭೇದಗಳಿಂದ ದೊಂಬಿ ಗಲಾಟೆ ಉಂಟಾಗುವ ಸಂಭವಗಳು ಉಂಟಾದವು.

ದೇವಾಲಯ ಪ್ರವೇಶ.

ಅದೇ ತಿಂಗಳ ೧೨ನೇ ತಾರೀಕಿನ ದಿವಸ ಮಹಾತ್ಮಾ ಗಾಂಧಿಯವರು ತ್ರಿವಾಂಡ್ರಮ್ಮಿಗೆ ಬರುವರಾಗಿ ತಿಳಿದು ಬರುತ್ತದೆ ಎಲ್ಲಾ ಜಾತಿಯವರಿಂದ ಘನವಾದ ಸ್ವಾಗತವು ಅವರಿಗೆ ಕೊಡಲಾಗುವುದು ೧೩ನೆ ತಾರೀಕಿನ ದಿವಸ ೧೬ ಮೆರವಣಿಗೆಗಳು ನಡೆದು, (ಬಹಳ ವೈಭವದಿಂದ) ಅಲ್ಲಿನ ರೈಲ್ವೆ ಸ್ಟೇಶನಿನ ಮೈದಾನಿನಲ್ಲಿ ಕೂಡಿ ಬಂದು ಒಂದು ಮಹಾಸಭೆಯು ಸೇರುವುದು ಅಲ್ಲಿ ಮಹಾತ್ಮಾಜಿಯವರಿಗೆ ಅನೇಕ ಭಿನ್ನಪಗಳು ಅರ್ಪಿಸಲಾಗುವವು, ಮಹಾತ್ಮಾ ಗಾಂಧಿಯವರು ಆ ಸಭೆಯಲ್ಲಿ ಭಾಷಣಮಾಡುವರು, ನಂತರ ಅವರು ತಿರುವಾಂಕೂರಿನ ಇತರ ಸ್ಥಳಗಳನ್ನು ಸಂದರ್ಶಿಸಿ, ಹಿಂತಿರುಗುವರು,

---

ಸಿಲೋನಿನಲ್ಲಿ ಹಿಂದೂದೇಶಕ್ಕೆ ವಿರೋಧವಾದ ಭಾವಗಳಿರುವುದಿಲ್ಲವೆಂದು, ಅಲ್ಲಿನ ಸೌಮ್ಯವಾದಿ ನಾಯಕರು ಭರವಸೆಯಿತ್ತಿರುವರು

ಸ್ಪೆಯಿನ್ ಕೆಟಲೋನಿಯಾದಲ್ಲಿ ಈಗ್ಗೆ ಕಮ್ಯೂನಿಷ ಸರಕಾರವಿರುವುದೆಂದೂ ಇದು ರಷ್ಯದೇಶ ರಾಜಧಾನಿಯಾದ ಮೊಸ್ಕೊ ನಗರದ ಪ್ರೇರಣೆಗೆ ಒಳಗಾಗಿರುವುದೆಂದೂ, ಇಟೇಲಿಗೆ ಅದರಿಂದ ಸಮಾಧಾನವಿಲ್ಲವೆಂದೂ, ಮೆಡಿಟರೆನಿಯನ್ ಸಾಗರದ ಕುರಿತು ಆಂಗ್ಲೊ ಇಟೇಲಿಯನ್ ಒಪ್ಪಂದವಾಗಿದ್ದರೂ, ಇಟೇಲಿಯು ತನ್ನ ಈ ನವರ್ತನೆಯನ್ನು ಬಿಡಲುದಿಸುವುದಿಲ್ಲವೆಂದೂ ತಿಳಿದುಬರುತ್ತದೆ

ರಾಷ್ಟ್ರಪತಿಯರ ಸ್ವಯಂಸೇವಕರಿಗಾಗಿ ವಿನಂತಿ

ಚುನಾವಣಾ ಪ್ರಚಾರ ಕಾರ್ಯ ನಿಮಿತ್ತ ಪಂಜಾಬ್, ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಪ್ರಚಾರಕ್ಕೆ ಹೊರಟ ರಾಷ್ಟ್ರಪತಿ ಶ್ರೀ ನೆಹರೂಗಳು, ಚುನಾವಣಾ ಸಮಯದಲ್ಲಿ ಕಾಂಗ್ರೆಸ್ಸಿನ ಪರವಾಗಿ, ವಿದ್ಯಾವಂತ ಪುರುಷರು ಸ್ವಯಂಸೇವಕರಾಗಿ ಸೇರಬೇಕೆಂದು ವಿನಂತಿ ಮಾಡಿರುವರು ಕಾಂಗ್ರೆಸ್ಸು ಉಮೇದ್ವಾರರು ಅವರ ವ್ಯಕ್ತಿತ್ವವನ್ನು ಮರೆತುಬಿಟ್ಟು, ಅವರೆಲ್ಲರು ಸಂಸ್ಥೆಯ ಒಂದು ಆದರ್ಶದ ಪ್ರತಿನಿಧಿಗಳೆಂಬ ಭಾವನೆಯಿಂದ ವರ್ತಿಸಬೇಕೆಂದೂ ಎಲ್ಲರೂ ವ್ಯಕ್ತಿಭೇದವನ್ನು ತೊರೆದು, ಕಾಂಗ್ರೆಸ್ಸಿನ ಮತ್ತು ಸ್ವಾತಂತ್ರ್ಯದ ಸೈನಿಕರಾಗಬೇಕೆಂದೂ ಕಾಂಗ್ರೆಸ್ಸಿಗೆ ವಿರೋಧಿಸುವವರು ಕಾಂಗ್ರೆಸ್ ವಾಲರಲ್ಲವೆಂದೂ ವಿದ್ಯಾವಂತ ಪುರುಷರು ಸ್ವಯಂಸೇವಕರಾಗಿ ಮುಂದೆ ಬಂದು ಚುನಾವಣಾ ರಂಗದಲ್ಲಿ ಕಾಂಗ್ರೆಸ್ಸಿನ ಪರವಾಗಿ ಕಾರ್ಯ ನಡೆಸಬೇಕೆಂದೂ ಸಮಸ್ತ ಹಿಂದುದೇಶದೊಡನೆ ಮತ್ತೆ ವಿನಂತಿಯನ್ನು ಮಾಡಿ

ಕಾಂಗ್ರೆಸ್ಸ ಸಂದೇಶ ಬೋಧನ

ಪೈಜಾಪುರ ಕಾಂಗ್ರೆಸ್ಸಿನ ಸಂದೇಶವನ್ನು ಹಳ್ಳಿಗರಿಗೆ ಬೋಧಿಸಲು ಕಾಂಗ್ರೆಸ್ಸಿನ ಒಂದು ತಂಡವು ಅಹಮದಾಬಾದಿನಿಂದ ಹೊರಟು ಕಾಲ್ನಡಿಗೆಯಿಂದ ಹಳ್ಳಿಗರಿಗೆ ತೆರಳುವುದು ಅವರು ಕಾಂಗ್ರೆಸ್ಸಿನ ಪರವಾಗಿ ಚುನಾವಣಾ ಪ್ರಚಾರವನ್ನು ನಡೆಯಿಸುವರಂತೆ

ನೋಟೀಸು.

ಮಂಗಳೂರು ಡಿ. ಮು, ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 668 / 1936

ಡಿ ವೆಂಕಟೇಶ ರಂಗಭಟ್ಟ ಮಂಗಳೂರು ಕಸಬಾ ಡೊಂಗರಕೇರಿಯಲ್ಲಿರುವವ — ವಾದಿ

ಮತ್ತು

ಅನಂತ ಪುತ್ತು ಸೇಟ್ ಮತ್ತು ಸನ್ಸ್ ಮಗ ಸರಾಫ ಕುಂದಾಪುರ ತಾಲೂಕು ಕೋಟೇಶ್ವರದಲ್ಲಿರುವವ— ಪ್ರತಿವಾದಿ

ಪ್ರತಿವಾದಿ ಅನಂತ ಪುತ್ತುಸೇಟರಿಗೆ —

ವಾದಿಯು ನಿಮ್ಮ ಮೇಲೆ ರೂ 15—11 9ಪೈಯನ್ನು ಸಂಕ್ರಹ ಬಡ್ಡಿ ಸಮೇತ ಬರಮಾಡುವರೆ ಫಿರ್ಯಾದಿ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಣ ವ್ಯಾಜ್ಯವು ತಾ 16—1—1937ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದರಿ ದಿವಸ ಪೂರ್ವಾಹ್ನ 11 ಗಂಟೆ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ನಿಮ್ಮ ಉತ್ತರ ಹಿರಿಯನ್ನು ದಾಖಲುಮಾಡುವರೆ ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದರಿ ವ್ಯಾಜ್ಯವು ತೀರ್ಮಾನವಾಗುವುದು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿರುತ್ತದೆ

ಮಂಗಳೂರು, 5—1—1937

P. Ramanath Pai,
Advocate for Plff

ಬಾಲ್ಡ್‌ವಿನ್ನರ ಕುರಿತು ಅಸಮಾಧಾನ!

ಇಂಗ್ಲಾಂಡಿನಲ್ಲಿ 'ದಿಪ್ರೆಸ್ಡ್ ಏರಿಯಾಸ್' ಎಂಬ ಹಿಂದುಳಿದ ಸ್ಥಳಗಳನೇಕ ಇರುವವು. ಇವುಗಳಲ್ಲಿನ ಜನರ ಸ್ಥಿತಿಯು ಶೋಚನೀಯವಾಗಿದ್ದು, ಅವರನ್ನು ಸುಧಾರಿಸುವ ಯೋಜನೆಗಳನ್ನು ಸೂಚಿಸುವರೆ ಪಾರ್ಲಿಮೆಂಟಿನಿಂದ ಸಮಿತಿಗಳು ರಚನೆಯಾಗಿದ್ದವು. ಮಾಜಿ ಚಕ್ರವರ್ತಿಯವರು ಆ ಕುರಿತು ಭಾರಿ ಶ್ರಮವನ್ನು ವಹಿಸಿದ್ದು, ಒಳ್ಳೆ ಉಚಿತ ವ್ಯವಸ್ಥೆಗಳಾಗಬೇಕೆಂದು ಮಂತ್ರಿಮಂಡಳಕ್ಕೆ ಆಜ್ಞಾಪಿಸಿದ್ದರು. ಆದರೆ ಸರಕಾರವು ಈ ಪ್ರದೇಶಗಳಿಗಾಗಿ ಮಾಡಿದ ಕಾರ್ಯಗಳಿಂದ ಅಲ್ಲಿನ ಜನರಿಗೆ ಸಮಾಧಾನವಾಗಲಿಲ್ಲವೆಂದು ತಿಳಿದುಬರುತ್ತದೆ. ಈ

ಬ್ರಿಟಿಷ್ ಪ್ರಧಾನಮಂತ್ರಿ ಬಾಲ್ಡ್‌ವಿನ್ನರು.

ಕಾರಣದಿಂದ ಈಗ ಅಧಿಕಾರದಲ್ಲಿರುವ ಟೋರಿಗಳ ಮೇಲೆ, ದೇಶದ ಹಲವುಕಡೆಗಳಲ್ಲಿ ಅಸಮಾಧಾನ ಉಂಟಾಗಿದೆ ಎಂದೂ, ಅದರಿಂದ ಅವರು ಮುಂದಿನ ಚುನಾವಣೆಯಲ್ಲಿ ಓಟುಗಳು ಕಡಿಮೆಯಾಗುವವಂತೆ. ಅವರ ನಾಯಕರಾದ ಬಾಲ್ಡ್‌ವಿನ್ನರು ಅಧಿಕಾರವನ್ನು ತೊರೆದುಬಿಡಬೇಕಾದ ಸಂಭವಗಳು ಬರಬಹುದಂತೆ. ಬಾಲ್ಡ್‌ವಿನ್ನರು ಕಳೆದ ಮಹಾ ಚುನಾವಣೆಯಲ್ಲಿ ಹೆಚ್ಚಿನ ವಾಗ್ದಾನಗಳನ್ನು ಮಾಡಿದ್ದರೂ, ಅವುಗಳನ್ನು ನಡೆಯಿಸಿಕೊಡುವುದರಲ್ಲಿ ಬಹಳ ಹಿಂದುಳಿದಿದ್ದಾರಂತೆ. ಅಂತೂ, ಇಂತೂ, ಬಾಲ್ಡ್‌ವಿನ್ನರ ನಾಯಕತ್ವದಲ್ಲಿ ಬ್ರಿಟಿಷ ಪ್ರಜೆಗಳಲ್ಲಿ ಸಮಾಧಾನವಿಲ್ಲವೆನ್ನಬಹುದು.

ಮೂರು ಭಾರಿ ಮದುವೆಯಾದನು—ಮೂವರು ಪತ್ನಿಯರೂ ನೆರೆಯನಿಂದ ಅಪಹರಿಸಲ್ಪಟ್ಟರು.

ಈ ಮೇಲಿನ ಅವಸ್ಥೆಯು ನಡೆದುದು ಫ್ರಾನ್ಸಿನ ಪೆರಿಸ್ ನಗರದಲ್ಲಿ ನೆಲಸಿದ ಓರ್ವ ಆಂಗ್ಲೇಯ ಪುರುಷನಿಗೆ. ಪ್ರಥಮ ಭಾರಿ ಸ್ವದೇಶದಲ್ಲಿ ವಿವಾಹವಾದವನಾಗಿ, ಪೆರಿಸ್ ನಗರದಲ್ಲಿ ಕೊಠಡಿಗಳನ್ನು ಪಡೆಕೊಂಡು ವಾಸ್ತವಿಸಿದನು. ಒಬ್ಬ ಫ್ರೆಂಚ್ ಪುರುಷನೂ ಆ ಕೊಠಡಿಯ ಹತ್ತಿರವೇ ವಾಸವಾಗಿದ್ದನು. ಹೀಗಿರುತ್ತಾ, ಕೆಲಸಮಯದ ನಂತರ ತನ್ನ ಪತ್ನಿಗೂ ಆ ಫ್ರೆಂಚ್ ತರುಣನಿಗೂ ವ್ಯಾಮೋಹವುಂಟಾದುದನ್ನು ಆತನು ಕಂಡುಹಿಡಿದನು. ರೋಷದಿಂದ ಆಕೆಯನ್ನು ಡೈವೋರ್ಸ್ ಮಾಡಿಬಿಟ್ಟನು. ನಂತರ ಆಕೆಯು ಆ ಫ್ರೆಂಚ್ ತರುಣನ ಸತಿಯಾಗಿ ಬಾಳುವವಳಾದಳು.

ಎರಡನೆ ಸಾರಿ, ಆತನು ಓರ್ವ ಫ್ರೆಂಚ ತರುಣಿಯನ್ನು ವಿವಾಹವಾದನು. ಅದೇ ಕೊಟಡಿಯಲ್ಲಿ ತನ್ನ ಸಂಸಾರವನ್ನು ಆಕೆಯೊಡನೆ ನಡೆಯಿಸುವವನಾದನು. ಸ್ವಲ್ಪ ಸಮಯದ ನಂತರ, ಹತ್ತಿರವಿರುವ ಆ ಫ್ರೆಂಚ ತರುಣನು ಆತನ ದ್ವಿತೀಯ ಪತ್ನಿಯಲ್ಲಿ ವ್ಯಾಮೋಹಿತನಾದುದನ್ನು ಕಂಡುಹಿಡಿದು, ಆಕೆಯನ್ನೂ ತ್ಯಜಿಸಿದನು. ಫ್ರೆಂಚ್ ಪುರುಷನು ಮೊದಲಿನವಳನ್ನು ತ್ಯಜಿಸಿ, ಆ ದ್ವಿತೀಯ ಪತ್ನಿಯನ್ನು ವಿವಾಹವಾಗಿ ಆಕೆಯೊಡನೆ ಸಂಸಾರ ಬೆಳೆಸುವವನಾದನು. ಮೂರನೇ ಭಾರಿಗೆ ಆಂಗ್ಲೇಯ ಪುರುಷನು ವಿವಾಹವಾಗಿ ಅದೇ ಕೊಟಡಿಯಲ್ಲಿ ವಾಸಿಸುವವನಾದನು. ಯಥಾ ಪ್ರಕಾರ ಆ ಮೂರನೇ ಮಡದಿಯೂ ಕೂಡ ಆ ಫ್ರೆಂಚ್ ತರುಣನನ್ನು ಸೇರುವವಳಾದಳು.

ಈ ತರದ ಘಟನಾವಳಿಗಳಿಂದ ಆಂಗ್ಲೇಯನಿಗೆ ಏನೋ ಶಾಂತಿಯು ಇಲ್ಲವಂತಾಗಿ ಆತನ ಸುಖಕ್ಕೆ ಭಂಗವುಂಟಾದುದರಿಂದ ಅವನು ಇದಕ್ಕೆಲ್ಲಾ ಆ ಫ್ರೆಂಚ ತರುಣನು ಕಾರಣನಾದುದರಿಂದ, ಅದರಿಂದ ತನಗಾದ ನಷ್ಟಕ್ಕಾಗಿ ಆಂಗ್ಲೇಯನು ಒಂದು ವ್ಯಾಜ್ಯವನ್ನು ಹೂಡಿರುವನು. ಆಂಗ್ಲೇಯನು ಈಗ ನಾಲ್ಕನೇ ಭಾರಿಗೆ ವಿವಾಹವಾಗಿ ಬೇರೊಂದು ಸ್ಥಳದಲ್ಲಿ ವಾಸವಾಗಬೇಕೆಂದು ನಿರ್ಧಾರ ಮಾಡಿರುವನೆಂದು ತಿಳಿದುಬರುತ್ತದೆ.

ಶಾಸನಸಭೆಯಲ್ಲಿ ಪಿಸ್ತೂಲುಗಳು ಎತ್ತಲಾದವು.

ಫಿಲಿಪ್ಪೈನ್ ದ್ವೀಪಗಳಲ್ಲಿ ನೂತನವಾಗಿ ರಚನೆಯಾದ ಪ್ರಜಾಪ್ರಭುತ್ವದ ಶಾಸನಸಭೆಯ ಅಧಿವೇಶನ ನಡೆಯುತ್ತಿರುವಾಗ ಶೋಚನೀಯವಾದ, ನಾಗರೀಕ ಜಗತ್ತನ್ನು ವಿಸ್ಮಯಗೊಳಿಸುವ ಒಂದು ಘಟನೆಯು ನಡೆದುಬಿಟ್ಟಿತು. ಶಾಸನಸಭೆಯಲ್ಲಿ ಇರ್ವರು ಸದಸ್ಯರಿಗೆ ಯಾವುದೋ ಒಂದು ವಿಚಾರ ಮೇಲೆ ಚರ್ಚೆವುಂಟಾಯಿತು. ಮಾತುಗಳ ಕದನವು ಮಿತಿಮೀರಿ ನಡೆದು, ಇರ್ವರೂ ತಮ್ಮ ಕಿಸೆಯೊಳಗಿದ್ದ ಪಿಸ್ತೂಲುಗಳನ್ನು ತೆಗೆದರು. ಶಾಸನಸಭೆಯ ಅಧ್ಯಕ್ಷರು, ತಮ್ಮ ಕಿಸೆಯಿಂದಲೂ, ಪಿಸ್ತೂಲು ತೆಗೆಯದಿರುತ್ತಿದ್ದರೆ ಅವಸ್ಥೆಯು ಕಠಿಣವಾಗುತಿತ್ತು. ಬೀದಿಗಳಲ್ಲಿ ಮತ್ತೂ ಇನ್ನಿತರ ಕಡೆಗಳಲ್ಲಿ ಈ ತರದ ಘಟನೆ ನಡೆಯುವುದೇನೊ ಸಹಜವಾಗಿದ್ದರೂ, ನಾಗರೀಕತೆಯ ಆಸ್ಥಾನವಾಗಿರುವ ಶಾಸನಸಭೆಗಳಲ್ಲೂ ಈ ತರದ ಘಟನೆಗಳು ನಡೆಯುವುದಾದರೆ, ಮನುಷ್ಯನು ತನ್ನಲ್ಲಿರುವ ಕ್ರೂರ ಸ್ವಭಾವವನ್ನು ಇನ್ನೂ ತೊರೆದಿಲ್ಲವೆಂದು ನಂಬುವಂತಾಗಿದೆ.

ಹಿಂದೂದೇಶಕ್ಕೊಂದು ಪಾಠ.

ಹಿಂದೂದೇಶದ ರಾಜಕೀಯ ಪುರುಷರು ಅಮೇರಿಕಾದಿಂದ ಒಂದು ಬುದ್ಧಿಪಾಠವನ್ನು ಹೊಂದುವ ಒಂದು ದೃಷ್ಟಾಂತವಿದೆ. ಪಕ್ಷಭೇದದಿಂದಾಗಿ ಶಾಸನಸಭೆಯಲ್ಲಿ, ವ್ಯಕ್ತಿತ್ವ ಭೇದಗಳು, ಮತ್ತು ಇತರ ಭೇದವಿಚ್ಛೇದಗಳು, ಆ ದೇಶದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಚುನಾವಣೆಯು ಮುಗಿದ ಮರುದಿನವೆ, ಅಲ್ಪ ಸಂಖ್ಯಾಕರು, ತಮ್ಮ ಅಸ್ತ್ರಗಳನ್ನೆಲ್ಲಾ ಬಿಟ್ಟಿಟ್ಟು, ದೇಶಹಿತದೃಷ್ಟಿಯಿಂದ, ಅಧಿಕ ಸಂಖ್ಯಾಕರೊಡನೆ ಕೂಡುತ್ತಿದ್ದಾರೆ. ದೇಶಹಿತವೆ ಪಕ್ಷಹಿತಕ್ಕಿಂತ ಶ್ರೇಷ್ಠವಾದುದೆಂಬ ನಂಬಿಕೆಯು ಅವರದಾಗಿರುತ್ತದೆ. ಚುನಾವಣೆ ಕಾಲದಲ್ಲಾದ ಎಲ್ಲಾ ದ್ವೇಷಯುತ ಕಾರ್ಯಗಳನ್ನು ಮರೆತುಬಿಟ್ಟು, ಶಾಸನಸಭೆಯಲ್ಲಿ ಸಹೋದರಭಾವದಿಂದ ವರ್ತಿಸುವುದೆ ಅವರ ಕ್ರಮವಾಗಿರುತ್ತದೆ. ಈ ಸ್ವಭಾವದಿಂದಲೆ ಅಮೇರಿಕಾದಲ್ಲಿ ರಾಷ್ಟ್ರೀಯ ಐಕ್ಯವು, ಅಖಂಡತ್ವವು ಒಳ್ಳೇ ರೀತಿಯಲ್ಲಿ ಬೆಳೆದು ದೃಢವಾಗಿವೆ.

ಮೊನ್ನಿನ ಅಧ್ಯಕ್ಷ ಚುನಾವಣೆಯಲ್ಲಿ, ರೂಸ್‌ವೆಲ್ಟರಿಗೆ ವಿರೋಧವಾಗಿ ಅನೇಕರು ಕಾರ್ಯ ನಡೆಯಿಸಿದ್ದರು. ಅವರ ಮೇಲೆ ತಾನೆಂದಿಗೂ ಸೇಡು ತೀರಿಸಲಾರೆನೆಂದು ರೂಸ್‌ವೆಲ್ಟರು ಭರವಸೆಕೊಟ್ಟಿರುವರು. ಅವರು ಬಹಳ ಪ್ರಬಲರಾಗಿದ್ದರೂ, ಸೇಡು ತೀರಿಸಲು ಸಾಧಿಸರು. ಕಲಹವೆಂಬುದೆ ಅವರಿಗಾಗದು. ವಿರೋಧವನ್ನು ಎದುರಿಸುವ ಮಹಾ ಯೋಗ್ಯತೆಯು ಅವರಲ್ಲಿದ್ದರೂ, ಪ್ರಶ್ನೆಗಳನ್ನು ರಾಜಿಯಿಂದ ಸುಧಾರಿಸಲು ಪ್ರಯತ್ನಿಸುವವರು. ರಾಷ್ಟ್ರದಲ್ಲಿ ಛಿದ್ರಗಳುಂಟಾಗದಂತೆ ಅವರು ಬಹಳ ಜಾಗರೂಕತೆಯಿಂದ ವರ್ತಿಸುತ್ತಿದ್ದಾರೆ.

ಮನುಷ್ಯನೊಬ್ಬನು ಕೋತಿಯಾಗಿ ಮಾರ್ಪಡುತ್ತಿರುವನು.

ಅಮೇರಿಕಾದ ಕೆಲಿಫೋರ್ನಿಯಾದ ಎಜೂಟಾ ಎಂಬಲ್ಲಿ ಒಬ್ಬನು ವಿಚಿತ್ರತರದ ರೋಗಕ್ಕೆ ತುತ್ತಾಗಿರುವನು. ಆತನು ಮೆಲ್ಲ ಮೆಲ್ಲನೆ ಒಂದು ಮಾನವಕೋತಿಯಾಗಿ ಮಾರ್ಪಡುತ್ತಿರುವನು.

ಈ ವಿಚಿತ್ರತರದ ಮಾರ್ಪಾಟು ಇಂದಿಗೆ ಏಳು ವರ್ಷಗಳಿಂದ ನಡೆಯುತ್ತಿದೆ. ಅಷ್ಟು ಸಮಯದಲ್ಲಿ, ಆತನು ತನ್ನ ಎತ್ತರದಿಂದ ಐದು ಇಂಚುಗಳನ್ನು ಕಳೆದುಕೊಂಡಿರುವನು. ಆತನ ತಲೆಯು ದೊಡ್ಡದಾಗುತ್ತಾ ಬಂದಿದೆ.

ಆತನನ್ನು ಪರೀಕ್ಷಿಸಿದ ವೈದ್ಯಕೀಯ ಜನರು, ಆತನ ಎಲುಬುಗಳಲ್ಲಿ ಸುಣ್ಣಬಣ್ಣವು ಕರಗುವುದರಿಂದ, ಆತನ ಸ್ಥಿತಿಯು ಹಾಗಾಗುತ್ತಿರುವುದೆಂಬ ಅಭಿಪ್ರಾಯವನ್ನು ಕೊಡುವವರಾಗಿದ್ದಾರೆ.

ಈ ರೋಗವು ಇತರರಿಗೆ ತಗಲದಂತೆ ವೈದ್ಯರು ಬಹಳ ಶ್ರಮವನ್ನು ವಹಿಸಿರುವರು.

ಆಧುನಿಕ ವೈದ್ಯಶಾಸ್ತ್ರವು ಯಾವತರದ್ದು ವಿಚಾರದಲ್ಲಿ ಸೋಲನ್ನು ಹೊಂದುವುದಿಲ್ಲವೆಂಬ ಸಂಗತಿಯು ಸ್ಪಷ್ಟಪಡಿಸುವುದು.

ಅಮೇರಿಕನ ಜನಾಂಗ ಮಂಡಳ.

ಅಮೇರಿಕಾದ ಅಧ್ಯಕ್ಷ ರೂಸ್‌ವೆಲ್ಟರು ಪ್ರಪಂಚದ ಶಾಂತಿಯ ಕುರಿತು ಹೆಚ್ಚಿನ ಆತುರವನ್ನು ತೋರಿಸದಿದ್ದರೂ, ಜಗತ್ತಿನ ನಾಯಕನೆಂದೆನಿಸಿಕೊಳ್ಳಬೇಕಾಗಿ ಮಹತ್ವಾಕಾಂಕ್ಷೆಯು ಅಲ್ಲಿಲ್ಲದಿದ್ದರೂ, ಅವರು ಜಗತ್ತಿನ ಶಾಂತಿಗಾಗಿ ಕಾರ್ಯತಃ ಶ್ರಮಿಸುತ್ತಿದ್ದಾರೆನ್ನಬಹುದು. ಎರಡು ಅಮೇರಿಕಾ ಖಂಡಗಳಲ್ಲಿರುವ ಪ್ರಜೆಗಳನ್ನು ಕೈಗೊಂಡು, ಜಗತ್ತಿನ ಶಾಂತಿ ಸಾಧಿಸುವುದೆ ಅವರ ಉದ್ದೇಶವಾಗಿರುತ್ತದೆ. ಎರಡೂ ಅಮೇರಿಕಾ ಖಂಡಗಳು ಕೂಡಿ, ಅವರಿರುವ ಅರ್ಧ ಭೂಮಂಡಲದಲ್ಲಿ ಶಾಂತಿ ಸ್ಥಾಪಿಸುವರೆ, ಒಂದು ಜನಾಂಗಮಂಡಳವು ರಚಿಸಲಾಗುವುದು. ಎರಡೂ ಅಮೇರಿಕಾ ಖಂಡಗಳಲ್ಲಿರುವ ಜನಾಂಗಗಳ ಅಭಿವೃದ್ಧಿ, ಸಂಪತ್ತವೃದ್ಧಿ ಕ್ಷೇಮವೃದ್ಧಿ ಒಂದಿಷ್ಟು ಕಚ್ಚಾಟವಿಲ್ಲದೆ, ಶಸ್ತ್ರಗಳ ತಿಕ್ಕಾಟವಿಲ್ಲದೆ ಶಾಂತರೀತಿ ಸಹಕಾರ ಸೂತ್ರವನ್ನನುಸರಿಸಿ ಕಾರ್ಯಸಾಧಿಸುವುದೇ ನವೀನತಾಗಿ ರಚನೆಯಾಗುವ ಅಮೇರಿಕನ್ ಜನಾಂಗಮಂಡಳದ ಉದ್ದೇಶವಾಗಿರುತ್ತದೆ. ಈಗಲೆ ಅನೇಕ ವಿಚಾರಗಳಲ್ಲಿ ಕೀರ್ತಿಯನ್ನೂ ಯಶಸ್ಸನ್ನೂ ಹೊಂದಿದ ಅಧ್ಯಕ್ಷ ರೂಸ್‌ವೆಲ್ಟರು, ಈ ತರದ ಒಂದು ಮಹಾ ಕಾರ್ಯವನ್ನು ನಡೆಯಿಸಿ, ಈ ಜಗತ್ತಿನ ಮಹಾ ಮನ್ನಣೆಗೆ ಪಾತ್ರರಾಗಬಹುದೆಂದು ಒಂದು ಅಮೇರಿಕನ್ ಪತ್ರಿಕೆಯು ಬರೆಯುತ್ತದೆ.

ಚೀನಾ ದೇಶದ ಕಾಯಾಂಗ್ಸಿ ಎಂಬಲ್ಲಿ ಭಂಗಾರವಿರುವ ಘನಿಯೊಂದು ದೊರಕಿರುತ್ತದೆಂದೂ, ಅದರಲ್ಲಿ ೨೦ ಪದರು ಭಂಗಾರವಿದೆಯೆಂದೂ, ಅಲ್ಲಿನ ಸರಕಾರವೇ ಆ ಘನಿಗಳಲ್ಲಿ ನಡೆಯಬೇಕಾದ ಕೆಲಸವನ್ನು ನಿರ್ವಹಿಸುವರೆಂದೂ ವಾರ್ತೆ.

DIRECTORS

WHO DIRECT

Men of strength and character with business judgment proven through their own personal success are the policy making, directive power behind the business affairs of this bank.

At regular intervals during the year the members of our Board of Directors meet and together inspect the progress of the bank and the business transacted during the period intervening since their preceding meeting and outline and discuss the policy of operation for the future.

Such men are the mainspring of any bank in which you should have your money deposited for security. Such are the men who by sound management and careful control keep your bank account safe, ready for you whenever you demand.

Our DIRECTORS DO DIRECT the affairs of our Bank

ESTD: 1906.

CANARA BANK

LIMITED.

ಕ್ರೈಸ್ತಬಂಧುಗಳಿಗೆ ಪಂಡಿತಜೀಯವರ ಸಂದೇಶ

"ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಈ ಹಿಂದೆ ಎಷ್ಟೊ ಮಂದಿ ಕೆಥೊಲಿಕರು ಸೇರಿರುತ್ತಾರೆ, ಇದಕ್ಕೂ ಹೆಚ್ಚಿನ ಮಂದಿ ಮುಂದೆ ಬಂದು ಇನ್ನೂ ಸೇರುವರೆಂದು ನಾನು ಆಶಿಸುತ್ತೇನೆ.

ಶ್ರೀ ಬಿ.ಎಸ್. ಗಿಲಾನಿಯವರೊಂದಿಗೆ ರಾಷ್ಟ್ರಸಭಾಪತಿ ಜವಾಹರಲಾಲರು ದ. ಕನ್ನಡಕ್ಕೆ ಕಳುಹಿಸಿಕೊಟ್ಟ ಸಂದೇಶ

"ನನಗೆ ಎಲ್ಲಕ್ಕೂ ಪ್ರಿಯವಾದುದು ಭಾರತದ ಸ್ವಾತಂತ್ರ್ಯ ಈ ಮಹಾ ಕಾರ್ಯಕ್ಕಾಗಿ ನನ್ನ ಸರ್ವ ಪ್ರಾಣ ಮತ್ತು ಸರ್ವ ಶಕ್ತಿಯನ್ನು ವಿನಿಯೋಗಿಸುತ್ತಿದ್ದೇನೆ ಈ ಪ್ರಶ್ನೆಯನ್ನು ವಿಚಾರಿಸುವಾಗ ನಾನು ಎಲ್ಲಾ ಭಾರತೀಯರ ಕುರಿತು ಯೋಚಿಸುತ್ತಿದ್ದೇನೆ. ಅವರು ಯಾವ ಮತದವರಾದರೂ ಒಂದೇ ಯಾಕೆಂದರೆ ಸ್ವಾತಂತ್ರ್ಯವು ಎಲ್ಲಾ ಮತದವರಿಗೂ ಸಮಾನವಾಗಿ ಬೇಕಾಗಿರುತ್ತದೆ. ನಾನು ಜಾತಿವಾರು ದೃಷ್ಟಿಯಿಂದ ವಿಚಾರ ಮಾಡುವುದಿಲ್ಲ ಇದರಿಂದ ಎಲ್ಲರಿಗೂ ಸಮಾನವಾದ ರಾಜಕೀಯ ಮತ್ತು ಸಾಮಾಜಿಕ ವಿಚಾರಗಳು ಸ್ಪಷ್ಟವಾಗಲು ಅನ್ನಿಯವಾಗುತ್ತದೆ ಈ ಹೊತ್ತು ಭಾರತದ ಅತ್ಯಂತ ಬಲವತ್ತರವಾದ ಆಶೆಯು ಸ್ವಾತಂತ್ರ್ಯದ ಆಶೆಯೆಂಬುದು. ಸರ್ವಿವಾದ ಈ ಆಶೆಯು ಭಾರತ ರಾಷ್ಟ್ರಸಭೆಯಲ್ಲಿ ವ್ಯಕ್ತವಾಗಿರುತ್ತದೆ. ಆದುದರಿಂದ ಸ್ವಾತಂತ್ರ್ಯ ಚಳವಳದಲ್ಲಿ ಸಹಭಾಗಿಗಳಾಗಲು ಇಚ್ಛಿಸುವವರೆಲ್ಲರೂ ಕಾಂಗ್ರೆಸ್ ಸಂಸ್ಥೆಗೆ ಸೇರಿ ಅದಕ್ಕೆ ಬೆಂಬಲ ಕೊಡಬೇಕು ಅದರಿಂದ ದೂರ ನಿಲ್ಲುವುದೇ ಸರಿ ಇದರಿಂದ ದೇಶದ ದೇಶದ ಸತ್ಯ ಸ್ಥಿತಿ ಹಾಗೂ ಜೀವಂತ ವಿಷಯಗಳ ಸಂಬಂಧವನ್ನು ಕಳೆದುಕೊಂಡಂತಾಗುವುದು ಯಾವ ಪಂಗಡ ಅಥವಾ ಜಾತಿಯು ಈ ರೀತಿ ವರ್ತಿಸುವುದೊ ಅದು ದೇಶಕ್ಕೆ ಅಹಿತವನ್ನುಂಟುಮಾಡಿಕೊಳ್ಳುತ್ತಿದೆ ಆದುದರಿಂದ ನಾವು ಯಾರೇ ಇರಲಿ, ಯಾವ ಮತಕ್ಕೆ ಸೇರಿದವರಾದರೂ ಎಲ್ಲರೂ ಕೈಜೋಡಿಸಿ ರಾಷ್ಟ್ರಸಭೆಯ ಧ್ವಜದಡಿಯಲ್ಲಿ ಸೇರಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲೇ ಬೇಕೆಂದು ನಾನು ಬಲವತ್ತರವಾಗಿ ಆಶಿಸುತ್ತೇನೆ"

ಮುತ್ತಿನ ಹುಳದ ಆತ್ಮಗಳು ಬುದ್ಧನಿಗೆ ಅರ್ಪಿಸಲಾದವು

ಪ್ರಸಿದ್ಧ ಮುತ್ತಿನ ವ್ಯಾಪಾರಿಯಾದ ಕೊರಿಚಿ ಮಿಗೆಮೊಟೊ ಎಂಬಾತನು ಸದ್ಯದಲ್ಲಿ ೫೦ ಮಿಲಿಯ ಮುತ್ತಿನ ಚಿಪ್ಪುಗಳನ್ನು ಬುದ್ಧನಿಗೆ ಅರ್ಪಿಸಲಿರುವನು ಮುತ್ತಿನ ಹುಳಗಳನ್ನು ತಯಾರಿಸುವ ಕಾರ್ಯವನ್ನು ಈತನು ೫೦ ವರ್ಷಗಳ ಹಿಂದೆ ಪ್ರಾರಂಭ ಮಾಡಿದ್ದನು ಈಗ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವೆನಿಸುವ ಮುತ್ತಿನ ಸಮುದ್ರ ತಳಗಳಿಗೆ ಆತನು ಯಜಮಾನನಾಗಿರುವನು. ಮಾನವನಿಗೆ ಯಾವುದರಿಂದ ಒಳ್ಳಿತು ಉಂಟಾಗುತ್ತದೊ, ಅದನ್ನು ಆರಾಧಿಸಬೇಕೆಂಬುದು ಜಪಾನೀಯರ ಸಾಂಪ್ರದಾಯವಾಗಿರುತ್ತದೆ ಗಾನೋಪಕರಣಗಳಲ್ಲಿ ಉಪಯೋಗಿಸಲ್ಪಡುವ ಒಡವೆಯನ್ನು ಕೊಡುವ ಬೆಕ್ಕುಗಳ ನಾಯಿಗಳ, ಪ್ರೀತಿಯ ಕುದುರೆಗಳ ಇವುಗಳ ಸ್ಮಾರಕಾರ್ಥವಾಗಿ ಅನೇಕ ಸಹಾಯಗಳು ರಚನೆಯಾಗಿ ಅವುಗಳ ಆತ್ಮಗಳು ಬುದ್ಧನಿಗೆ ಅರ್ಪಿಸಲ್ಪಟ್ಟು ಆರಾಧನೆಯು ನಡೆಯುತ್ತದೆ ಮುತ್ತಿನ ಚಿಪ್ಪುಗಳಿಂದ ಮಿಕಿಮೊಟೊನಿಗೆ ಬಹಳ ಲಾಭವಾಗುವುದರಿಂದ ಮೇಲಿನ ತರದ ಆರಾಧನೆಯು ಅವುಗಳಿಗೆ ಆಗಬೇಕೆಂದು ಆತನು ನಿರ್ಧಾರ ಮಾಡಿರುವನು ಮುತ್ತುಗಳಿಂದಲೆ ಆತನ ಮಿಲಿಯಾಧಿಪತಿಯಾಗಿರುವನು ಆದುದರಿಂದ ೫೦ ಮಿಲಿಯ ಮುತ್ತಿನ ಚಿಪ್ಪುಗಳು ಬುದ್ಧನ ರಕ್ಷಣೆಗೆ ಅರ್ಪಿಸಲಾಗುವುವು. ಈ ಸಮಾರಂಭವು ಮಿಕಿ ಮೊಟೊವಿನ ಬಂಧುಬಳಗ, ಕುಟುಂಬ ಸ್ನೇಹಿತ, ಕೆಲಸದವರು ಇತ್ಯಾದಿಗಳು ನೆರೆದುಬಂದು, ಅತಿ ವಿಜೃಂಭಣೆಯಿಂದ ಜರಗಿಸಲಾಗುವುದು ಮುತ್ತಿನ ಹುಳವನ್ನು ಬೆಳೆಯಿಸುವ ಕ್ರಮವು ೧೭೯೭ರಲ್ಲಿ ಒಬ್ಬ ಪಾಶ್ಚಾತ್ಯ ವಿಜ್ಞಾನಿಯಿಂದ ಕಂಡುಹಿಡಿಯಲ್ಪಟ್ಟಿತ್ತು ಆತನ ಮಿಕಿಮೊಟೊವಿನ ಕ್ರಮಗಳು ಜಪಾನೀಯ ವಿಜ್ಞಾನಿಗಳ ಸೂತ್ರಗಳನ್ನು ನುಸರಿಸಿಕೊಂಡಿದೆ ಮಿಕಿ ಮೊಟೊನು ಪ್ರಾರಂಭದಲ್ಲಿ ಸಣ್ಣ ಅಂಗಡಿಗಾರನಾಗಿದ್ದನು. ಮುತ್ತಿನ ಹುಳಗಳನ್ನು ಬೆಳೆಯಿಸುವ ಆಲೋಚನೆಯು ಅವನಿಗೆ ಹೊಳೆದು, ತನ್ನ ಅಂಗಡಿಯನ್ನು ತೊರೆದ್ದು, ಮುತ್ತಿನ ಹುಳಗಳನ್ನು ತಯಾರಿಸುವುದರಲ್ಲಿ ಲೀನನಾದ ಪ್ರಾರಂಭದಲ್ಲಿ ಈತನು ಸಿದ್ಧಪಡಿಸಿದ ಹುಳಗಳಿಂದ ಯೋಗ್ಯ ತರದ ಮುತ್ತುಗಳು ದೊರಕಲಿಲ್ಲ ಆದರೆ ತನ್ನ ಸಾಧನೆಯನ್ನು ಅಷ್ಟಕ್ಕೆ ನಿಲ್ಲಿಸದೆ, ಬಹಳ ಪರಿಶ್ರಮ ಪಟ್ಟು, ಉತ್ತಮ ತರದ ಮುತ್ತುಗಳನ್ನು ಕೊಡುವ ಹುಳಗಳನ್ನು ಸಿದ್ಧಪಡಿಸಿದನು ೧೮೯೬ರಲ್ಲಿ ಆತನು, ತನ್ನ ಪ್ರಥಮ ಮುತ್ತನ್ನು ತಯಾರಿಸಿದನು ೧೯೧೬ರಲ್ಲಿ ಉತ್ತಮ ತರದ ಮುತ್ತುಗಳು ಇವನಿಂದ ಸಿದ್ಧಮಾಡುವು ೧೯೩೦ರಲ್ಲಿ ಆತನು ಅತಿರೇಕವಾಗಿ ಮುತ್ತುಗಳನ್ನು ತಯಾರಿಸುವವನಾದನು ಈಗ ಆತನು ವರ್ಷಂಪ್ರತಿ ನಾಲ್ಕು ಮಿಲಿಯ ಮುತ್ತಿನ ಹುಳಗಳನ್ನು ಬೆಳೆಯಿಸುತ್ತಿದ್ದಾನೆ

ಡ್ಯೂಕ್ ಮತ್ತು ಡಚೆಸ್ ಆಫ್ ಕೆಂಟರವರಿಗೆ ಎರಡನೇಯದಾಗಿ ಒಂದು ಹೆಣ್ಣು ಮಗು ಹುಟ್ಟಿರುವುದು ಮೊದಲನೇ ಮಗು ಗಂಡು ಈ ಈರ್ವ ರಾಜ ಕೂಸುಗಳು ಬ್ರಿಟಿಷ ಪಟ್ಟಕ್ಕೆ 5ನೇ ಮತ್ತು 6ನೇ ಉತ್ತರಾಧಿಕಾರಿಗಳು

ಮಂಗಳೂರು

ಸದ್ಧರ್ಮ ಪ್ರಚಾರಕ ಮಾಸ ಪತ್ರಿಕೆಯ ಸಂಪೂರ್ಣ ಮೆನೇಜ್‌ಮೆಂಟನ್ನು ಶ್ರೀಮಾನ್ ವಿ. ಆರ್. ಕೊೖಲೂರಕರರು ವಹಿಸುವರಾಗಿಯೂ ಆ ಕುರಿತು ಎಲ್ಲಾ ಪತ್ರವ್ಯವಹಾರಗಳನ್ನು ಅವರೊಡನೆ ನಡೆಸಬೇಕಾಗಿಯೂ, ಸಂಪಾದಕೀಯ ವಿಚಾರದ ಕುರಿತಾಗಿ ಮಾತ್ರ ಸಂಪಾದಕರೊಡನೆ ಪತ್ರವ್ಯವಹಾರ ಮಾಡಬೇಕಾಗಿಯೂ ಪತ್ರಿಕೆಯ ಸಂಪಾದಕರು ತಿಳಿಸುತ್ತಾರೆ.

ಶ್ರೀ ರಾಜರಾಜೇಶ್ವರೀ ಪ್ರಸೀದ

ಸಾಹಿತ್ಯಸಾಮ್ರಾಜ್ಯ

ನಾಟಕ ಮಂಡಳಿ, ಮೈಸೂರು

ಮಂಗಳೂರು ಮೈದಾನಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ

ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ 9—1—37ನೇ ಶನಿವಾರ ರಾತ್ರಿ 9-30ಗಂಟೆಗೆ

ರಾಜಸಿಂಹ

ತಾ 10 1—37ನೇ ಭಾನುವಾರ ಸಾಯಂಕಾಲ 6 ಗಂಟೆಗೆ

ಮ್ಯಾಟಿನಿ ಮ್ಯಾಟಿನಿ

ನಿರುಪಮಾ

ಎಂಬ ನಾಟಕಗಳನ್ನು ಪ್ರದರ್ಶಿಸುವರು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಯಂ. ವಿ ಸುಬ್ಬಯ್ಯ ನ್ಯಾಡು, ಆರ್. ನಾಗೇಂದ್ರ ರಾವ್, ಪ್ರೊಪ್ರೈಟರ್ಸ್

THE

BANK OF MANGALORE LTD

MANGALO

ESTD 193

Branches-

Panemangalore M[illegible] & Pal[illegible]

Chairman—Philip J Chandran, Esq.,

Retd Dt Registrar of Joint Stock Companies

On & from 1st of January 1937

Fixed Deposits will be received at following rates of interest

For	3 month		3½
„	6		4
„	12 „		[illegible]
	24	& upwards	5½

Interest Payable Quarterly

Saving Bank deposit 3½ on daily balances

All kinds of banking business transacted

U. R. PAI, N. U. PAI, *Managing Director*

ಸಿದ್ಧವಾಗಿದೆ ಸಿದ್ಧವಾಗಿದೆ

ಪಂಡಿತ ಜವಾಹರಲಾಲರ ಆತ್ಮಕಥೆ

ಕನ್ನಡ ಭಾಷಾಂತರಃ—ನವಜೀವನ ಕನ್ನಡ ಗುಂಪಿನಿಂದ

೧ನೆಯ ಸಂಪುಟ ಸಿದ್ಧವಾಗಿದೆ

ಡಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು.

ಟಪ್ಪಾಲು ಖರ್ಚು ಪ್ರತ್ಯೇಕ

ಅತ್ಯುತ್ತಮ ಪ್ರತಿ . . .	ರೂ. ೧೦-೦-೦
ವಾಚನಾಲಯ ಪ್ರತಿ . . .	„ ೭-೦-೦
ಸಾಮಾನ್ಯ ಪ್ರತಿ . . .	„ ೫-೦-೦

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು

ಪ್ರಕಾಶಕರು:—

ಸಿ. ಅಶ್ವತ್ಥನಾರಾಯಣರಾವ್, ಬಿ. ಎ,

ಸಂಪಾದಕರು.—"ನವಜೀವನ" ಮತ್ತು "ಮಕ್ಕಳ ಪುಸ್ತಕ"

ಬಳೇಪೇಟೆ, ಬೆಂಗಳೂರು ಸಿಟಿ.

ಮಂಗಳೂರು

ಅಪ್ರತಿಮ ಕಲಾವಿದರಾದ ಶ್ರೀ ಉದಯಶಂಕರ್‌ರವರು ನೆನ್ನೆ ಇಲ್ಲಿಗೆ ತಮ್ಮ ಕಲಾಕಾರರೊಂದಿಗೆ ದಯಮಾಡಿಸಿರುವರು. ಇಲ್ಲಿ ಅವರು ಕಲಾಕೌಶಲ್ಯ ಪ್ರದರ್ಶನಗಳನ್ನು ಮಾಡಿತೋರಿಸುವರೆಂದು ತಿಳಿದುಬಂದಿದೆ.

ಕಳೆದ ವಾರ ಇಲ್ಲಿಯ ಶ್ರೀ ಅನ್ನದಾನಂದ ಮಹಿಳಾ ಸೇವಾಶ್ರಮದವರು ಹರಿಜನರಿಗೆ ಅನ್ನದಾನ ಮಾಡಿದ್ದರು. ಸುಮಾರು ೫೦೦ ಹರಿಜನರು ಆ ದಿವಸ ತೃಪ್ತರಾಗಿದ್ದಾರೆ. ನಮ್ಮೂರಿನ ಇತರ ಸಂಘಗಳೂ ಹೀಗೇಕೆ ಮಾಡ ಬಾರದು?

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕ ಔತಣವು ಕಳೆದ ತಾ. ೪ನೇ ದಿನ ಸಡಗರದಿಂದ ಏರ್ಪಡಿಸಲಾಗಿತ್ತು. ವಿವಿಧ ವಿನೋದ ಭಾಷಣಗಳಿಂದ ಔತಣವು ರುಚಿಯಾಗಿ ಪೂರೈಸಲಾಯಿತು.

ಮುಲ್ಕಿಯ ಯುವಕ ಕುಲಾಲರ ಸಮಾಜದ ಸಭೆಯೊಂದು ಬರುವ ತಾ. ೧೮ನೇ ಆದಿತ್ಯವಾರ ಅಲ್ಲಿ ಶ್ರೀ ಮಂಜುನಾಥ ಸ್ವಾಮಿ ದೇವಳದಲ್ಲಿ ಕೂಡಲಿದೆ. ಸಮಾಜ ದವರೆಲ್ಲರೂ ದಯಮಾಡಿಸಬೇಕಾಗಿ ಮುಂದಾಳುಗಳ ಕೋರಿಕೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯೊಂದು ಇದೇ ತಾ. ೧೮ನೇ ಆದಿತ್ಯವಾರ ಕಾರ್ಕಳದಲ್ಲಿ ಶ್ರೀ ಎಂ. ಎಸ್. ಅಧಿಕಾರಿಗಳ ಆಫೀಸಿನಲ್ಲಿ ಜರುಗುವದೆಂದು ತಿಳಿಸೋಣವಾಗಿದೆ.

ಬೊಂಬಾಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯವರು ಒಂದು ಸಭೆ ಸೇರಿ ಕೀರ್ತಿಶೇಷ ಎ. ಎಸ್. ಪೈಯವರ ನಿಧನಕ್ಕಾಗಿ ಸಂತಾಪ ಸೂಚಿಸಿ, ಮೃತರ ಗುಣಕಥನಗಳಾದ ಬಳಿಕ, ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ದೇವರ ಪ್ರಾರ್ಥನೆಗಳಾದುವು. ಬೊಂಬಾಯಿಯಲ್ಲಿನ ನಮ್ಮ ಜಿಲ್ಲೆಯವರು ಒಂದೇ ಮಾತೃವಿನ ಮಕ್ಕಳಂತೆ ನಡೆಯುತ್ತಿರುವುದನ್ನು ನೋಡಿ ನಮ್ಮ ಜಿಲ್ಲೆಯ ಉಮೇದ್ವಾರರು ಒಂದು ಪಾಠವನ್ನು ಕಲಿಯಬಾರದೇಕೆ?

ಕಳೆದ ಆದಿತ್ಯವಾರ ಮಂಗಳೂರು ಆರ್ಯ ಸಮಾಜ ಮಂದಿರದಲ್ಲಿ ಲೂಯಿಸ್ ನಜರೆತ್ ಎಂಬೊಬ್ಬ ರೋಮನ್ ಕೆಥೋಲಿಕ ಕ್ರೈಸ್ತನ ಶುದ್ಧಿಸಂಸ್ಕಾರವಾಯಿತು. ಇವರು ಕುಂಬಳೆಯ ಒಂದು ಸೆಟ್ಟಿಗಾರ ಕುಟುಂಬಕ್ಕೆ ಸೇರಿದವರಾಗಿದ್ದು ೧೨ ವರ್ಷಗಳ ಮೊದಲು ಕ್ರೈಸ್ತ ಮತಾಂತರ ಹೊಂದಿದ್ದರು. ಶ್ರೀ ಮೋಹನಪ್ಪ ತಿಂಗಳಾಯರು ಇವರಿಗೆ ಗಾಯತ್ರೀ ಮಂತ್ರೋಪದೇಶದ ವಿನಃ ವೈದಿಕ ಆರ್ಯಧರ್ಮ ದೀಕ್ಷೆಯನ್ನು ಕೊಟ್ಟು ಧರ್ಮಪಾಲ ಎಂಬ ಹೆಸರಿಟ್ಟಿದ್ದರು. ಧರ್ಮಪಾಲರು ಕ್ರೈಸ್ತ ಮತದಲ್ಲಿ ತನಗುಂಟಾದ ಸಂಶಯ ಎಂಬ ಚಲೋ ಭಾಷಣಕೊಟ್ಟರು.

ಕಳೆದ ತಾ. ೬ನೇ ಬುಧವಾರ ಇಲ್ಲಿಯ ಶ್ರೀ ರಾಜರಾಜೇಶ್ವರೀ ಥಿಯೇಟರಿನಲ್ಲಿ ಶ್ರೇಷ್ಠ ಸಂಗೀತ ಕಛೇರಿಯು ನಡೆಯಿತು. ಪ್ರಖ್ಯಾತರಾದ ಚಲ್ಲಪಲ್ಲಿ ಸಂಜೀವರಾಯರು ಕೊಳಲು ಗಾಯನದಿಂದಲೂ, ಶ್ರೀ ಮೈಸೂರು ಚೌಡಯ್ಯನವರು ಪಿಟೀಲು ವಾದನದಿಂದಲೂ ಶ್ರೀ ಕೊ. ರಾಜಪ್ಪ ಅಯ್ಯನವರು ಮೃದಂಗವಾದನದಿಂದಲೂ ಶಾಸ್ತ್ರೀಯ ಸಂಗೀತ ವಿಶೇಷಗಳನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ಸಂತೋಷಪಡಿಸಿದರು.

ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ನಿನ್ನೆ 'ಶಿರುಪತಿ' ಎಂಬ ಹೊಸ ನಾಟಕವನ್ನು ಬಹಳ ಯಶಸ್ವಿಯಾಗಿ ಆಡಿದರು. ಜನರ ಪ್ರೋತ್ಸಾಹವು ಪರದೆಯಂತೆ ಮಿತಿಮೀರಿ ಇತ್ತು.

ರಾಷ್ಟ್ರಪತಿ ಜವಾಹರಲಾಲರು ಫೆಬ್ರವರಿ ತಾ. ೧೦ರ ಸುಮಾರಿಗೆ ನಮ್ಮ ಜಿಲ್ಲೆಗೆ ದಯಮಾಡಿಸುವರೆಂದು ತಿಳಿದು ಬರುತ್ತದೆ. ಅವರನ್ನು ಕರೆದೊಯ್ಯಲಿಕ್ಕೆ "ಸ್ಪೆಶಲ್" ವಿಮಾನವೊಂದನ್ನು ಟಾಟಾ ಕಂಪೆನಿಯವರು ಒದಗಿಸುತ್ತಾರಂತೆ. ಏರ್ಪಾಡುಗಳು ನಡೆಯುತ್ತಿವೆ.

ನಮ್ಮ ಜಿಲ್ಲೆಯಲ್ಲಿ ಶಾಸನ ಸಭಾ ಉಮೇದ್ವಾರರ ಗಲಾಟೆಯು ಜೋರಾಗಿದೆ. ಅವರಲ್ಲಿ ಕೆಲವರು ಅವರ ಬಾಲ ಹಿಡಿದು ಓಟುಸಂಗ್ರಹಿಸಲಿಕ್ಕಾಗಿ ಮಾಡುವ ಕೆಲವು ತಲೆಹಿಡುಕರ ಬಾಧೆಯು ಹೆಚ್ಚಿದೆ. ಕೆಲವು ಮಹನೀಯರು ತಾವು ಪ್ರಚಾರಿಸುತ್ತಿರುವ ಪಾರ್ಟಿಯನ್ನು ಹೊಗಳಿ ವೈಯಕ್ತಿಕ ಜಾತಿಗಳನ್ನು ನಿಂದಿಸುವ ತುಚ್ಛ ಕೆಲಸಕ್ಕೆ ಕೈಹಾಕಿಯಿತ್ತಾರೆ. ಜಾತಿ ಮತ ವೈರವನ್ನು ಹೆಚ್ಚಿಸಿ ದೇಶದ ಸಂಕಷ್ಟಗಳನ್ನು ಹೆಚ್ಚಿಸುವ ಇವರ ಮೂರ್ಖತನಕ್ಕೆ ಧಿಕ್ಕಾರವಿರಲಿ.

ಡಿಸ್ಟ್ರಿಕ್ಟ್ ಬೋರ್ಡು ಎಲೆಕ್ಷನು ಬರುವ ತಾ. ೧೫ಕ್ಕೆ ಜರುಗಲಿದೆಯೆಂದು ತಿಳಿಸಲಾಗಿದೆ.

ತಾಲೂಕುಗಳಿಂದ

ಅಳ್ವೆಕ್ಕೋಡಿ:— ಇಲ್ಲಿಯ ಶ್ರೀ ರಾಮ ಜನ್ಮಭೂಮಿ ಸ್ಥಾನದ ವಾರ್ಷಿಕ ಮಾಸದ ದೀಪೋತ್ಸವ ಸಮಯ ಇದೇ ತಾ. ೧೩ಕ್ಕೆ ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರು ಚಿತ್ತೈಸಿದ್ದರು. ಸದರಿಯವರನ್ನು ಆಮಂತ್ರಿಸಿ ಇಲ್ಲಿಯವರು ಒಂದು ಮಾನಪತ್ರವನ್ನು ಸಮರ್ಪಿಸಿದರು. ಸದರಿಯವರು ಒಂದು ಭಾಷಣದಲ್ಲಿ ತಾನು ಇನ್ನುಮುಂದಿನ ಜಾನಾವಾಡಿಯ ಸಮಯ ಜೀರ್ಣೋದ್ಧಾರವಾಗ ನಿಲ್ಲುವುದಾಗಿಯೂ ಮಾವುತನ ಹೊಣೆಗಳನ್ನು ತನಗೆನೇ ಕೊಡಬೇಕೆಂತ ಕೇಳಿಕೊಂಡರು. ಇಲ್ಲಿಯ ಸಂಘಗಳು ತಂತಮ್ಮ ಒಟ್ಟುಗಳನ್ನು ತಮ್ಮಯವರಿಗೆ ಕೊಡುವುದಾಗಿ ವಾಗ್ದಾನಮಾಡಿದರು. ಇಲ್ಲಿಯ ಶಾರೀರಿಕ ಕಟ್ಟಡದ ಸ್ಥಳ ಮುಹೂರ್ತವು ಇದೇ ತಾ. ೨೦ರಲ್ಲಿ ನಡೆಯಿತು. ಕೆಲಸವು ಅದನ್ನು ತ್ವರೆಯಲ್ಲಿ ಸಾಗುವಂತೆ ಹಣಸಂಗ್ರಹವು ನಡೆಯುತ್ತಿದೆ.

ಅಮ್ಮೆಂಬಳ:— ಇದೇ ಕಳೆದ ತಾ. ೨೮ರಲ್ಲು ಅಮ್ಮೆಂಬಳ ಸೋಮನಾಥ ಸಂಸ್ಕೃತ ಶಾಲೆಯಲ್ಲಿ ಪಾಠಶಾಲೆಯ ದಿಗಂಬರ ಜೈನ ಆಂಗ್ಲೋ-ಸಂಸ್ಕೃತ ಶಾಲೆಯ ಪ್ರಧಾನಾಧ್ಯಾಪಕರಾದ ಎ. ಈಶ್ವರ ಭಟ್ಟ ವಿದ್ವಾನ್ ಇವರ ಅಧ್ಯಕ್ಷತೆಯಲ್ಲಿ ಸಭೆಯು ವಿಜೃಂಭಣೆಯಿಂದ ಜರಗಿತು. ಈ ಸಭೆಗೆ ಚೆಕ್ರಪಾಣಿ ಮಂಗಳೂರು ಹಿಂದೀ ಶಾಂತಿನಿಕೇತನದ ಅಧ್ಯಾಪಕರಾದ ಟಿ. ಸುಬ್ಬ ಭಟ್ಟರು ಹಿಂದಿಯನ್ನೇಕೆ ಕಲಿಯಬೇಕೆಂದು ವಿವರಿಸಿ ಹೇಳಿದರು. ನೆರೆದವರು ತಂತಮ್ಮ ಅಭಿಪ್ರಾಯಗಳನ್ನು ಸಾಂಸ್ಕೃತವಾದ ಭಾಷಣದಮೂಲಕ ಎಲ್ಲರಿಗೂ ತಿಳಿಯಗೊಡಿಸಿದರು. ಅಲ್ಲದೆ, ಈ ಕೇಂದ್ರದಿಂದ ಹಿಂದೀ ಪರೀಕ್ಷೆಗೆ ಕಳುಹಿ ಎಲ್ಲರೂ ಉತ್ತೀರ್ಣರಾದುದಲ್ಲದೆ ಕುಮಾರಿ ಪಿ. ಸೀತಾರತ್ನಾ ಎಂಬ ವಿದ್ಯಾರ್ಥಿನಿಯೊಬ್ಬಳು ಸರ್ವ ಪ್ರಥಮಳಾಗಿ ಬಂದು ಬಹುಮಾನ ಪಡೆದುದು ತುಂಬಾ ಸಂತೋಷದಾಯಕವಾಗಿರುತ್ತದೆ. ಅದೆಗೆ ಪ್ರಾಥಮಿಕ ಪರೀಕ್ಷೆಗೆ ಉತ್ತೀರ್ಣರಾಗಿ ತೇರ್ಗಡೆಹೊಂದಿದ ಐದು ಮಂದಿಗೂ ಪ್ರಮಾಣಪತ್ರ (certificate) ಗಳನ್ನು ಕೊಟ್ಟರು. ಅಲ್ಲದೆ, ಇಲ್ಲಿ ಒಂದು "ಹಿಂದೀ ಪ್ರಚಾರ ಸಂಘ"ವನ್ನು ಸಹಾ ಸ್ಥಾಪಿಸಲಾಯಿತು.

ಉಡುಪಿ— (ನಮ್ಮ ಸ್ವಂತ ವಾತ್ತಾದಾರರಿಂದ) ದಕ್ಷಿಣ ಕನ್ನಡ ಜಿಲ್ಲಾ ಆದಿದ್ರಾವಿಡ ಅಧ್ಯಾಪಕರ ದ್ವಿತೀಯ ಪರಿಷತ್ತು ಕಳೆದ ತಾ. ೪ರಲ್ಲಿ ಮುನ್ಸಿಪಲ್ ಮೈನ್ ಶಾಲೆಯಲ್ಲಿ ನಗರ ಸಭಾಸದಸ್ಯರಾದ ಶ್ರೀ ಪಿ. ಎನ್. ಮಾಧವರಾವ್, ಎಂ. ಎ. ಬಿ. ಎಲ್. ಇವರ ಸಭಾಧ್ಯಕ್ಷತೆಯಲ್ಲಿ ಜರಗಿತು. ಮೊದಲಾಗಿ, ಜಿಲ್ಲಾ ಹರಿಜನ ಅಧ್ಯಾಪಕ ಸಂಘದ ಕಾರ್ಯದರ್ಶಿಗಳವರು ಗತವರ್ಷದ ವರದಿಯನ್ನು ಓದಿದ ತರುವಾಯ ಶ್ರೀಗಳಾದ ಡಾ. ಪಿ. ಜಿ. ಆಚಾರ್, ಆ ಸುಬ್ಬಕೃಷ್ಣಯ್ಯ ಮೊದಲಾದವರ ವಿವಿಧ ವಿಷಯಗಳನ್ನೊಳಗೊಂಡ ರಸಭರಿತವಾದ ಭಾಷಣಗಳಿದ್ದವು. ತದನಂತರ ಆಗ್ರಾಸನಾಧಿಪತಿಗಳು, ಹರಿಜನ ವಿದ್ಯಾಭ್ಯಾಸ, ಅವರ ಸಾಮಾಜಿಕ ಮತ್ತು ಧಾರ್ಮಿಕೋನ್ನತಿಗೆ ಬೇಕಾದ ಹಲಕೆಲವು ವಿಷಯಗಳನ್ನು ಸೂಚಿಸಿದರು. ಅದು ಮಾತ್ರವಲ್ಲದೆ, ಈ ದಿನ ಕೆಲವು ಠರಾವು ಗಳೂ ಪಾಸಾದುವು. ತಿರುವಾಂಕೂರಿನಲ್ಲಿ ಕ್ಷೇತ್ರ ಪ್ರವೇಶದ ಹಕ್ಕನ್ನು ಹರಿಜನರಿಗೆ ದಯಪಾಲಿಸಿದ್ದಕ್ಕಾಗಿ ತಿರುವಾಂಕೂರು ಮಹಾರಾಜರಿಗೂ, ಮೈಸೂರು ಮಹಾರಾಜರಿಗೂ ಧನ್ಯವಾದಗಳು ಅರ್ಪಿಸಲಾದುವು. ಅನೇಕ ಎಡ್ವರ್ಡರು ರಾಜಪದವಿಯನ್ನು ಬಿಟ್ಟಿದ್ದಕ್ಕೆ ದುಃಖವನ್ನೂ ಆರನೇ ಜಾರ್ಜರು ಪಟ್ಟವನ್ನೇರಿದುದಕ್ಕೆ ಸಂತೋಷವನ್ನೂ ಸೂಚಿಸಿ ಗೊತ್ತುವಳಿಗಳಾದುವು. ಹರಿಜನರಿಗೆ ಕಡ್ಡಾಯ ಶಿಕ್ಷಣ ಕೊಡುವುದಕ್ಕೂ, ಅವರ ಆರ್ಥಿಕ ದುಃಸ್ಥಿತಿಯನ್ನು ಹೋಗಲಾಡಿಸುವ ವಿಧಾನ ಅವುಗಳನ್ನು ಕುರಿತು ನಿರ್ಣಯಗಳಾದುವು.

ಉಡುಪಿ ತಾಲೂಕಿನಲ್ಲಿ ಕಾಂಗ್ರೆಸ್ ಚುನಾವಣೆಯ ಕಾರ್ಯವನ್ನಾರಂಭಿಸುವರೆ, ಸಾರ್ವಜನಿಕ ಮಹಾಸಭೆಯೊಂದು ಇದೇ ತಾ. ೩ನೇ ಆದಿತ್ಯವಾರ ಸಾಯಂಕಾಲ ಫಂಡ್ ಹಕ್ಕಿ ತೇರುಬೀದಿಯಲ್ಲಿ ಶ್ರೀ ವಕೀಲ್ ಎಂ. ವಿಠ್ಠಲಕಾಮತ್‌ರ ಅಧ್ಯಕ್ಷತೆಯಲ್ಲಿ ಜರಗಿತು. ವಕೀಲ ಕೋಟ ರಾಮಕೃಷ್ಣ ಕಾರಂತರು ಪ್ರಾರಂಭಿಕ ಭಾಷಣ ವನ್ನಿತ್ತ ತರುವಾಯ ಶ್ರೀಗಳಾದ ಎ. ಬಿ. ಶೆಟ್ಟಿ, ಎಂ. ಎಲ್. ಸಿ., ವಕೀಲ ಕೆ. ಆರ್. ಆಚಾರ್, ವಕೀಲ ಕಲಬೇರಿ ರಂಗರಾವ್, ವಕೀಲ ವಾಸುದೇವರಾವ್, ಹಿರಿಯಡ್ಕ ರಾಮರಾಯ ಮಲ್ಯ, ಕಿಲ್ಲೆ ನಾರಾಯಣಶೆಟ್ಟಿ ಮೊದಲಾದವರು ತಮ್ಮ ಸಂದರ್ಭೋಚಿತ ಭಾಷಣಗಳನ್ನಿತ್ತರು.

ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಯ ಆಕ್ಟಿನ ೨೮ನೇ ಪ್ರಕರಣದ ಮೇರೆಗೆ, ಉಡುಪಿ ಮುನಿಸಿಪಾಲಿಟಿಯ ಚೆಕ್ ಬುಕ್ಕುಗಳು ಬೆಳಿಗ್ಗೆ ೧೧-೩೦ರ ನಂತರದ ಬ್ಯಾಂಕಿನ ವ್ಯವಹಾರ ಕಾಲದಲ್ಲಿ ಸುತ್ತ ಸುಂಕಗಳನ್ನು ವ್ಯಾಪಾರದ ಕ್ರಿಮಿನಲ್ಲು ಸ್ವಾಧೀನ ಬೇಕಾಯಿತು ಎಂದು ಅಂತಹ ಮರುದಿನ ರಿಜಿಸ್ಟ್ರೇಶನ್ ಆಫೀಸಿನಲ್ಲಿ ದಸ್ತು ದಾಖಲಾಗಬೇಕೆಂದು ಸನ್ಮಾನಂಧರರಿದ್ದವರು ಜಿಲ್ಲಾ ಮುಖಾಂತರ ತಿಳಿಸಿರುತ್ತಾರೆ.

ಸ್ಥಳೀಯ ಶ್ರೀ ಕೃಷ್ಣ ಸನ್ನಿಧಿಯ ಮಕರ ಸಂಕ್ರಮಣ ಜಾತ್ರೆಯು ಇಂದು (ತಾ. ೮) ಆರಂಭವಾಗಿ ತಾ. ೧೪ಕ್ಕೆ ಸಂಕ್ರಮಣ ಮಹೋತ್ಸವ, ೧೫ಕ್ಕೆ ಚೂರ್ಣೋತ್ಸವ ವಾದಿಗಳು ಜರಗಲಿರುವವು.

ಪುತ್ತೂರು:— ಇಲ್ಲಿಯ ಡಿವಿಷನಲ್ ಮಹಾರಾಷ್ಟ್ರೀಯ ಕೋಆಪರೇಟಿವ್ ಸೊಸೈಟಿಯವರು ತಮ್ಮ ಕಾರ್ಯಭಾರವನ್ನು ಬಹಳ ಶ್ರದ್ಧೆಯಿಂದ ನೆರವೇರಿಸುತ್ತಿರುತ್ತಾರೆ. ಬರುವ ಮಳೆಗಾಲಕ್ಕಿಂತ ಮುಂಚೆಯೇ ಕೊಳೆರೋಗದ ಹಾವಳಿಯನ್ನು ಅಡಗಿಸಲು ತುಂಬಾ ಪ್ರಯತ್ನಗಳನ್ನು ಈಗಲೇ ಕೈಕೊಂಡಿರುತ್ತಾರೆ. ಅಡಿಕೆಯ ಮರಗಳನ್ನು ಸ್ಪ್ರೇಮಾಡಲು, ಸ್ಥಳೀಯ ವಿದ್ಯಮಾನಗಳಿಗನುಗುಣವಾಗಿ ಇಲ್ಲಿಯವರು ಆದ ಶ್ರೀ ದಾಮೋದರ ಬಾಳಿಗರಿಂದಲೇ ಕಲ್ಪಿಸಲ್ಪಟ್ಟು ಆವಿಷ್ಕೃತವಾಗಿರುವ "ಮಹಾಲಿ ಸ್ಪ್ರೇಯಿಂಗ್ ಮೆಶಿನು" ಗಳನ್ನು ಕೊಂಡುಕೊಳ್ಳಲು ಒಪ್ಪಂದ ನಡೆಸಿರುವುದು ಸೊಸೈಟಿಯ ಮೆಂಬರರಿಗೆ ಪ ಡ್ಯರೆಕ್ಟರರಿಗೆ ಸ್ವದೇಶದ ಕೈಗಾರಿಕೆಗಳ ಮೇಲೆ ಇರುವ ಪ್ರೇಮವನ್ನು ಸೂಚಿಸುವುದು. ಸ್ವದೇಶಿ ಕೈಗಾರಿಕೆಗಳಿಗೆ ಹೀಗೆಯೇ ಎಲ್ಲರಿಂದಲೂ ಪ್ರೋತ್ಸಾಹ ದೊರಕಿದರೆ ದೇಶದ ಆರ್ಥಿಕ ಸ್ಥಿತಿಯು ಉಂಟಾಗಬೇಕಾಗಿರುವುದೆಂಬುದರಲ್ಲಿ ಸಂಶಯವಿಲ್ಲ.

ಕೊಕ್ಕಡದಲ್ಲಿ ೧೨೦ ಮಂದಿ ಕ್ರೈಸ್ತರು ಹಿಂದೂಧರ್ಮವನ್ನು ಸ್ವೀಕರಿಸಿದರು.

ಕಳೆದ ಎರಡು ವಾರಗಳಿಂದ ಕೊಕ್ಕಡಕ್ಕೆ ದಯಮಾಡಿಸಿರುವ ಮೈಸೂರು ಕೇಂದ್ರದ ಹಿಂದೂ ಮಹಾಸಭೆಯ ಗೌರವ ಕಾರ್ಯದರ್ಶಿ ಶ್ರೀ ಎ. ಶೇಷಪ್ಪಯ್ಯನವರು ಹಿಂದೂ ಧರ್ಮದ ಸಂಘಟನೆಯ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡುತ್ತಿದ್ದಾರೆ. ಉಪನ್ಯಾಸಗಳನ್ನು ಕೇಳಲು ನೂರಾರು ಮಂದಿ ಜನರು ನೆರೆದಿದ್ದರು. ಕೊಕ್ಕಡದ ಹಿಂದೂ ಸಭೆಯವರು, ಕೆಲವು ವರ್ಷಗಳಿಂದ ಕ್ರೈಸ್ತ ಮತಕ್ಕೆ ಸೇರಿದ್ದ ೧೨೦ ಮಂದಿ ಹರಿಜನರನ್ನು ಶುದ್ಧಿಗೊಳಿಸಿ ಹಿಂದೂಮತಕ್ಕೆ ಸೇರಿಸಿಕೊಂಡರು. ಶ್ರೀ ಶೇಷಪ್ಪಯ್ಯನವರು ಶುದ್ಧಿಗೊಳಿಸುವ ಕಾರ್ಯದಲ್ಲಿ ಪ್ರಮುಖ ಹಸ್ತವನ್ನು ವಹಿಸಿದ್ದರು. ಸುತ್ತಮುತ್ತಲಿನ ಗ್ರಾಮಗಳ ಕ್ರೈಸ್ತರು ಸ್ವಇಚ್ಛೆಯಿಂದಲೇ ಹಿಂದೂಗಳಾಗುವ ಸಂಭವ ಇದೆ. ಕೊಕ್ಕಡದ ಹಿಂದೂಗಳಲ್ಲಿ ನವಚೈತನ್ಯವೂ ಸಸ್ಫೂರ್ತಿಯೂ ಉಂಟಾಗಿದೆ. ಶುದ್ಧಿಯಾದ ಹರಿಜನ ಸ್ತ್ರೀಯರಿಗೆ, ಹಿಂದೂ ಮಹಾಸಭೆಯ ಮುಖಂಡರು ಕುಂಕುಮ, ಬಳೆಗಳನ್ನು ಧರ್ಮಾರ್ಥ ಕೊಡಿಸಿದರು. ಅಲ್ಲದೆ ಸುಮಾರು ೩೦೦ ಮಂದಿ ಹರಿಜನರಿಗೆ ಊಟ ಕೊಡಲಾಯಿತು.

ಅಡೂರು— ಕಳೆದ ತಾ. ೨ರಲ್ಲು ಬೆಳಿಗ್ಗೆ ಸಭೆ ಸೇರಿ, ಶ್ರೀ ಕೆ. ಆರ್. ಕಾರಂತರವರು ಕಾಂಗ್ರೆಸ್ಸಿಗೆ ಏಕೆ ಓಟು ಕೊಡಬೇಕು ಎಂದು ಮುಂತಾಗಿ ಸ್ವಾರಸ್ಯವಾದ ಭಾಷಣವಿತ್ತರು. ಅದೇ ದಿನ ಸಂಜೆ ಶ್ರೀ ಕಡಂಬಿತ್ತಾಯರ ಅಧ್ಯಕ್ಷತೆಯಲ್ಲಿ ಪಾಠೀರು ಸಭೆ ನಡೆದು, ಶ್ರೀ. ಕೆ. ಆರ್. ಕಾರಂತರ ಭಾಷಣವಾದಾಯಿತು.

ಬದಿಯಡ್ಕ— ಕಳೆದ ತಾ. ೫ರಲ್ಲು ಸಂಜೆ, ಶಾಸ ರಗೋಳು ಶ್ರೀ ಆರ್. ಪಂಡಿಟ್ಲಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಶ್ರೀಗಳಾದ ವಕೀಲ ಶ್ಯಾಮ ಶೆಟ್ಟರು, ಎಸ್. ಎಸ್. ಕಿಲ್ಲೆ, ಕೆ. ಆರ್. ಕಾರಂತ ಇವರೇ ಮೊದಲಾದವರು. ಕಾಂಗ್ರೆಸ್ಸಿನ ಚುನಾವಣೆಯ ಧ್ಯೇಯ ಮೊದಲಾದ ವಿಷಯಗಳಲ್ಲಿ ಭಾಷಣಕೊಟ್ಟ ತರುವಾಯ, ಕಾಂಗ್ರೆಸ್ಸು ಪರವಾಗಿ ನಿಂತ ಉಮೇದ್ವಾರರಿಗೇನೇ ಓಟುಗಳನ್ನು ಕೊಟ್ಟು, ಕಾಂಗ್ರೆಸ್ಸಿನ ಗೌರವವನ್ನು ಉಳಿಸಬೇಕೆಂದು ಪ್ರಾರ್ಥಿಸಿಕೊಂಡರು.

ಸುರತ್ಕಲ್— ಇಲ್ಲಿ ತಾ. ೩ರಲ್ಲು ಸೆಟ್ಟಿಗಾರ ದೇವಸ್ಥಾನದಲ್ಲಿ ಹಾಗೂ ಮುಗೇರ ದೇವಸ್ಥಾನಗಳಲ್ಲಿ ನಡೆದ ಸಭೆಗಳಲ್ಲಿ ಶ್ರೀ ಎಸ್. ಎಸ್. ಕಿಲ್ಲೆಯವರ ಭಾಷಣವಾಯಿತು.

ಪೆರಂಬೂರು— ಇಲ್ಲಿ ಪೆರಂಬೂರು ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ, ಶ್ರೀಗಳಾದ ಬಂಟ್ವಾಳ ಬಾಳಿಗಾ, ಎಸ್. ಎಸ್. ಕಿಲ್ಲೆ, ಮೋಹನಪ್ಪ ತಿಂಗಳಾಯರು ಇವರೇ ಮೊದಲಾದವರ ಭಾಷಣಗಳಾದುವು.

ದ. ಕ. ಜಿಲ್ಲಾ ಶಿಕ್ಷಣ ಪ್ರದರ್ಶನ.

ಜನವರಿ ತಾ. ೧೩, ೧೪, ೧೫, ೧೬ರಲ್ಲಿ. ಮಂಗಳೂರು ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲೆಯಲ್ಲಿ.

ತಾ. 13ನೇ ಬೆಳಿಗ್ಗೆ 8.30ಕ್ಕೆ ಜಿಲ್ಲಾ ಕಲೆಕ್ಟರರು ಪ್ರದರ್ಶನ ತೆರೆಯುವರು.

ಪ್ರತಿ ದಿನವೂ ಬೆಳಿಗ್ಗೆ 8ರಿಂದ 12ರ ವರೆಗೂ ಶ್ಯಾಮ 2ರಿಂದ 6ರ ವರೆಗೂ ಪ್ರದರ್ಶನ.

ತಾ. 14ರಲ್ಲಿ ಮಧ್ಯಾಹ್ನ 2ರಿಂದ 6ರ ತನಕ ಸ್ತ್ರೀಯರಿಗಾಗಿ ಮಾತ್ರ.

ಪ್ರತಿದಿನವೂ ಶ್ಯಾಮ 2ರಿಂದ 6ರ ವರೆಗೆ ಶಿಕ್ಷಣ ವಿಷಯಕ ಭಾಷಣಗಳಿವೆ.

ರೇಡಿಯೋ, ರೂರಲ್ ಸೈಯನ್ಸ್, ಭೂಗೋಳ, ನೂತನ ಸಂಶೋಧನೆಗಳು, ಸಾಮಾನ್ಯ ವಿಜ್ಞಾನ, ಕನ್ನಡ ಭಾಷಾ ಶಿಕ್ಷಣ, ಶಾಲಾ ಆಟೋಪಕರಣಗಳು, ಆಧುನಿಕ ಶಿಕ್ಷಣ ಪದ್ಧತಿಗಳು, ಗಣಿತ, ವೃತ್ತಿಶಿಕ್ಷಣ, ಇತ್ಯಾದಿ ಶಾಲಾ ಪಾಠಗಳಿಗೆ ಸಂಬಂಧಪಟ್ಟಂಥ ವಿಷಯಗಳ ಶಿಕ್ಷಣಪದ್ಧತಿಗಳನ್ನು ಕುರಿತಾಗಿ ಶ್ರೀಯುತರುಗಳಾದ ಮಿದ ಪೊರಿಸ್ವಾಮಿ, ಬಿ. ವಿ. ರಮಣ, ಎಸ್. ರಾಮಕೃಷ್ಣಾಚಾರ್, ಯು. ದೇಜು, ಎಂ. ಎಸ್. ಕಾಮತ್, ಎಸ್. ಮುಕುಂದರಾವ್, ಪಿ. ರಮಾನಂದ ರಾವ್, ಎಂ. ರಾಮಚಂದ್ರಯ್ಯ, ಜಿ. ಪಿ. ರಾಜರತ್ನಂ, ಯು. ಕೃಷ್ಣರಾವ್, ಇವರೇ ಮೊದಲಾದ ವಿದ್ವಾಂಸರಿಂದ ಶಿಕ್ಷಕರ ಸಲುವಾಗಿ (Refresher course) ಭಾಷಣಗಳಾಗುವವು.

ಪ್ರತಿ ದಿನ ಶ್ಯಾಮ ೬ರಿಂದ ೭ರ ತನಕ ವ್ಯಾಯಾಮ ಶಿಕ್ಷಣ ಪ್ರದರ್ಶನವಿದೆ. ಅನಂತರ ೭ರಿಂದ ೮ರ ತನಕ ವಿವಿಧ ಮನೋರಂಜಕ ಗೀತಾಭಿನಯ ನಾಟಕಾದಿಗಳೂ ಇವೆ.

ಪ್ರತ್ಯೇಕ ಶಾಲೆಗಳಲ್ಲಿ ನಾನಾ ಪ್ರದರ್ಶನ ವಸ್ತುಗಳನ್ನು ಇಡಲಾಗಿದೆ. ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲ ವಿಭಾಗಗಳಲ್ಲೂ ವಿದ್ಯಾರ್ಥಿಗಳೂ ಶಿಕ್ಷಕರೂ ತಯಾರಿಸಿರುವ ಸಾವಿರಾರು ಆಕೃತಿಗಳು ಸಾಮಾಗ್ರಿಗಳಿವೆ.

ಇದೇ ಪ್ರದರ್ಶನ ಕಾಲಕ್ಕೆ ಸೀಜನ್ ಟಿಕೆಟುಗಳಿವೆ, ದರ ರೂಪಾಯಿ 1. ಮತ್ತು ೮ ಆಣೆ. ಒಂದೇ ದಿನಕ್ಕಾದರೆ ನಾಲ್ಕಾಣೆ ಮಾತ್ರ.

ಪ್ರದರ್ಶನದ ಮೊದಲನೇ ದಿನ ಪ್ರವೇಶದ ಟಿಕೆಟು ಬೆಲೆ ಒಂದಾಣೆ ಮಾತ್ರ, ನಂತರದ ದಿನಗಳಲ್ಲಿ ಹಿರಿಯರಿಗೆ ಒಂದಾಣೆ, ಕಿರಿಯರಿಗೆ ಅರ್ಧಾಣೆ ಮಾತ್ರ.

ಈ ಶಿಕ್ಷಣೋತ್ಸವಕ್ಕೆ ಸರ್ವರೂ ದಯೆಮಾಡಿಸಬೇಕಾಗಿ ವಿನಂತಿ.

ಶಂಕರನಾರಾಯಣ— ಇದೇ ಕಳೆದ ತಾ. ೩ರಲ್ಲಿ ಶಂಕರನಾರಾಯಣದಲ್ಲಿ ಬೆಳಿಗ್ಗೆ ಗಂಟೆ ೧೧ಕ್ಕೆ ಸುಬ್ರಾಯ ಉಡುಪರ ಅಧ್ಯಕ್ಷತೆಯಲ್ಲಿ ಮಹಾಸಭೆಯು ಸೇರಿ, ಶ್ರೀಗಳಾದ ಎಸ್. ಎಸ್. ಕಿಲ್ಲೆ ಮತ್ತು ರಂಗರಾವ್ ಕಲಬೇರಿಯವರ ಭಾಷಣಗಳಾದುವು. ಭಾಷಣಕರ್ತರು ಕಾಂಗ್ರೆಸ್ಸಿನ ಚುನಾವಣೆಯ ಕುರಿತು ಕಾಂಗ್ರೆಸ್ಸಿಗೆ ಬೆಂಬಲಬೇಡಿದರು. ಎಲ್ಲರೂ ಕಾಂಗ್ರೆಸ್ಸಿಗೆ ಸಹಾಯಮಾಡುವುದು ತಂತಮ್ಮ ಕರ್ತವ್ಯವೆಂದು ಸೂಚಿಸಿದ ಬಳಿಕ ಸಭಾಕಾರ್ಯವಾಯಿತು.

ಹಾಲಾಡಿ— ಕಳೆದ ತಾ. ೬ನೇ ಮಧ್ಯಾಹ್ನ ಹಾಲಾಡಿಯಲ್ಲಿ ಶ್ರೀಯುತ ಚಂದಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಪಾಠೀರು ಸಭೆಯು ಜರಗಿ, ಸದ್ರಿ ಮಹನೀಯರ ಭಾಷಣಗಳಾದುವು.

ಸ್ವಾಬರಕಟ್ಟೆ— ಕಳೆದ ತಾ. ೫ನೇ ಸಾಯಂಕಾಲ ಇಲ್ಲಿ ಮಹಾ ಸಭೆಯು ಜರಗಿತು. ಎದುರುಪಕ್ಷದವರು ಅತ್ಯಂತದವರೊಡನೆ ಹೊಂದಿ ನಡೆಯುವ ಸಂಭವವಿದೆಯಾಗಿ ಪೋಲೀಸರಿಗೆ ಅರ್ಜಿಮಾಡಿಸಿದ್ದರಿಂದ, ಸರ್ಕಲ್ ಇನ್ಸ್‌ಪೆಕ್ಟರರು ಮತ್ತು ಪೋಲೀಸರೂ, ಕುಂದಾಪುರ ಸಬ್ ಕಲೆಕ್ಟರರೂ ಸಬ್ ಮೆಜಿಸ್ಟ್ರೇಟರೂ ಬಂದಿದ್ದರು. ಈ ವಾರ್ತೆಯು ಮೊದಲೇ ಹಬ್ಬಿದ್ದುದರಿಂದ ಕುಂದಾಪುರದಿಂದಲೂ ಹಲವು ಮಂದಿ ಈ ಸಭೆಗೆ ಬಂದಿದ್ದರು. ಸಭೆಯು ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಎ. ಬಿ. ಶೆಟ್ಟಿ, ಎಸ್. ಎಸ್. ಕಿಲ್ಲೆ, ರಂಗರಾವ್ ಕಲಬೇರಿ ಮೊದಲಾದವರು ಉತ್ತಮ ಭಾಷಣಗಳನ್ನಿತ್ತರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಶ್ರೀ ಹಳ್ನಾಡು ಮಾದಣ್ಣಯ್ಯನವರು, ಈ ಮೊದಲು ಕಾಂಗ್ರೆಸ್ಸಿನ ಮೇಲೆ ಸಹಾನುಭೂತಿಯನ್ನು ಈಗ ಮಹಾಜನರು ಮರೆಯಬಾರದಾಗಿ ಕೇಳಿಕೊಂಡ ಮೇಲೆ ಸಭೆಯು ಮುಕ್ತಾಯವಾಯಿತು.

TRUE COPY.

Nanjangood, dated 29th Oct 36

From

B. M. Sivaramiah,

(Bellur M. Sivaram)

First Grade Pleader,

Brindaban Kuteer, NANJANGOOD.

To

The Secretary,
The C. P. C. Co., Ltd.,
MANGALORE.

Sir,

From here I write to thank you heartily for the excellent convenience you were pleased to afford me in my lecture tours in South Kanara. Ever since, I got down from train at Hassan your service took charge of me and at Sakleshpur Puttur, Mangalore, Udipi (especially) Someshwar and even at Agumbe your service was kind and all felicitous to me. I felt as if I had my own car with me throughout. I may say here that I observed that all other passengers also were treated alike and their conveniences attended to promptly properly and what is most remarkable courteously. I think I have derived from your service in my tour ten times the benefit I have really paid for the same. I conclude by saying yours is an excellent service and you deserve every praise for the public good you are doing all along.

Please accept my heartfelt thanks and congratulations.

Yours sincerely

(Sd) B. M. Sivaramiah.

ತಯಾರಾಗಿವೆ!

1937ನೇ ಇಸವಿಯ ಸಣ್ಣ ಮತ್ತು ದೊಡ್ಡ ಸೈಜಿನ ಶಾರದಾ
ಡೈರಿಗಳು ಈಗಾಗಲೇ ಸಿದ್ಧವಾಗಿವೆ
ಸಣ್ಣ ಸೈಜು ಬೆಲೆ ನಾಲ್ಕಾಣೆ – ದೊಡ್ಡದಕ್ಕೆ ಬೆಲೆ ಎಂಟಾಣೆ

ತಯಾರಾಗಿವೆ!

THE BOMBAY LIFE ASSURANCE CO., LTD.

Estd. 1908

Church Gate Street, Fort - BOMBAY.

SPECIAL FEATURES.

1. Rebate on yearly payment of policies
2. Rebate for larger assurances
3. Accident Risk covered on small extra premiums
4. Attractive Bonuses

It pays you to represent this Company.

Wanted Agents in unrepresented parts

Apply to.—

Messs Kochikar Brothers,

Madras Branch Secretaries.

1936
OUR VALUATION YEAR

Take a BOMBAY LIFE Policy now, and share in the profits

Bonus declared in 1933. **Rs. 18** Per thousand per year on Endowment Assurances.

RECORD OF BONUSES ALLOTTED

Whole Life Assurance Rs.	Year	Endowment Assurance Rs.
[illegible]	[illegible]	10
[illegible]	[illegible]	12-8
[illegible]	1930	15
23	1933	18

Per thousand per year

Bonus declared in 1933. **Rs. 23** Per thousand per year on Whole Life Assurances

Branches at:-	P. B. 337, Mount Road, Madras	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore	Udipi S. India.	Charni Road, Bombay No. 4

ಚೀನಾದೇಶವು ಇನ್ನೂ ಸಹಿಸುವುದೇ?

ಮಹಾ ದೇಶವಾದರೂ ಚೀನಾವು ಸುಖದಿಂದ ಬಾಳಲಾರದಾಗಿದೆ. ಅದು ಛಿನ್ನಭಿನ್ನವಾಗಿದ್ದು, ದಿನೇ ದಿನೇ ಅಂತಃಕಲಹ ಛಿದ್ರಗಳು ಹೆಚ್ಚುತ್ತಿವೆ. ಬಹಿರ್ ಜನರ ಕಿರುಕುಳಗಳನ್ನು ಸಹಿಸಿ ಸಹಿಸಿ ಅದು ಬೇಸತ್ತು ಹೋಗಿದೆ. ತನ್ನ ಅಂತರ್ಯಸ್ಥಿತಿಯು ನೆಟ್ಟಗಿರದುದರಿಂದ, ಅದು ತನ್ನನ್ನು ಪೀಡಿಸುತ್ತಿದ್ದ ಅನ್ಯರೊಡನೆ ಯುದ್ಧಮಾಡಲು ಹಿಂಜರಿಯುತ್ತಿತ್ತು. ಆದರೆ, ಯುದ್ಧ ಮಾಡದಿದ್ದರೂ ಮಾಡದಿದ್ದರೂ ಅದರ ಸ್ಥಿತಿಯು ಒಂದೇಯಾಗಿ ನಿಲ್ಲುವ ಸಂಭವಗಳು ಇಂದು ಒದಗಿರುವುದರಿಂದ ಅದು ಯುದ್ಧಮಾಡಿಯೇ ತೀರಿಸುವ ನಿರ್ಧಾರಮಾಡಿದಂತೆ ಕಾಣುತ್ತದೆ. ಅವರಲ್ಲಿ ಭಿನ್ನಗಳಿದ್ದರೂ, ರಾಷ್ಟ್ರವೈರಿಯನ್ನು ಎದುರಿಸುವ ವಿಚಾರದಲ್ಲಿ ಎಲ್ಲರೂ ಐಕ್ಯವಾಗುವರಂತೆ. ಅದಕ್ಕೆ ಜಪಾನಿಂದ ಸಾಕೋಸಾಕಾಗಿದೆ. ಇನ್ನು ಅವರು ಸಹಿಸುವವರಲ್ಲ. ಆದ್ದರಿಂದ, ಚೀನಾವು ಜಪಾನಿನೊಡನೆ ಯುದ್ಧ ಮಾಡಲು ಟೊಂಕಕಟ್ಟಿರುತ್ತದೆ. ಚೀನಾದ ಮೇಲೆ ಧಾವಿಸಿಬಂದ ವೈರಿ ಜನಾಂಗಗಳಿಗೆ ಕಾರ್ಯವೇನೋ ಸುಲಭವೆನಿಸದು. ಚೀನಾ ದೇಶದ ಪ್ರಮಾಣದಿಂದಲೇ ಅವರಿಗೆ ಅನೇಕ ಅಡ್ಡಂತರಗಳುಂಟಾಗಬಹುದು. ಯುದ್ಧ ಸಿದ್ಧತೆಯನ್ನು ಅವರೀಗ ಮಾಡಿಯೇ ಬಿಟ್ಟಿದ್ದಾರೆ. ಬೇಕಾದ ಯುದ್ಧ ಸಾಮುಗ್ರಿಗಳನ್ನು ಶೇಖರಿಸಿರುವರು.

ಪೂರ್ವಾಫ್ರಿಕಾದಲ್ಲಿ ಭಾರತೀಯರು

ಆಫ್ರಿಕಾದಲ್ಲಿರುವ ಭಾರತೀಯರಿಗೆ ಬಿಳಿ ಜನರೊಡನೆ ಸರಿಯಾದ ಸ್ಥಾನಮಾನಗಳು ದೊರಕದೆ, ಆ ಬಿಳೀ ಜನರ ಮಹಾ ಸ್ವಾರ್ಥಗಳಿಂದಾಗಿ ಅವರು ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿರುವವರಾಗಿದ್ದಾರೆ. ಅವರ ಈ ಸ್ಥಿತಿಯು ಅತಿ ಶೋಚನೀಯವಾಗಿರುತ್ತದೆ. ಹಿಂದೀಯರ ಹಿತವು ಭಯಂಕರ ಅಪಾಯಗಳಿಗೆ ತುತ್ತಾಗುವ ಸಂಭವಗಳುಂಟಾಗಿವೆ. ದಕ್ಷಿಣ ಆಫ್ರಿಕದಲ್ಲಿ ಹಿಂದೀಯರಿಗೆ ಸುಖ ಸಂತೋಷದಲ್ಲಿ ಬಾಳಲು ಅವಕಾಶವೇನೂ ದೊರಕುವುದಿಲ್ಲ. ಬಿಳಿ ಜನರೇ, ಎಲ್ಲವೂ ತಮದಾಗುವಂತೆ ಸಾಧಿಸುತ್ತಿದ್ದು, ಅದಷ್ಟು ಮಟ್ಟಿಗೆ ಹಿಂದೀಯರನ್ನು ಅನೇಕ ತರದ ಅವಮಾನಗಳಿಗೂ, ಸಂಕಷ್ಟ ಹಿಂಸೆಗಳಿಗೂ ಒಳಪಡಿಸುತ್ತಿದ್ದಾರೆ. ಮನೆಮಾಡಿ ನಿಲ್ಲಲು ವ್ಯಾಪಾರ ಸಾಗುವಳಿ ನಡೆಯಿಸಲು ಭಾರತೀಯರಿಗೆ ಅಲ್ಲಿ ನೆಲೆ ಸಿಗದಂತೆ ಪಾಶ್ಚಾತ್ಯರು ಅಲ್ಲಿ ಪರಿಶ್ರಮಪಡುತ್ತಿದ್ದಾರೆ. ಭಾರತೀಯರನ್ನು ಹೊರಗಿಡುವದೇ ದಕ್ಷಿಣಾಫ್ರಿಕದ ಯೂನಿಯನ್ ಸರಕಾರದ ಗುರಿಯಾಗಿರುತ್ತದೆ. ಪೂರ್ವ ಆಫ್ರಿಕಾದಲ್ಲೂ ಈ ಯೂನಿಯನ್ ಸರಕಾರದ ಪ್ರೇರಣೆಯು ಕಾಣಿಸಿಕೊಳ್ಳಲಾರಂಭಿಸಿದೆ. ಇದು ಆಫ್ರಿಕಾವನ್ನು ಸಂಚರಿಸಿಬಂದ ಓರ್ವ ಹಿಂದೀ ಮಹನೀಯರ ಅಭಿಪ್ರಾಯವಾಗಿರುತ್ತದೆ.

ಲಿಂಡ್‌ಬರ್ಗ್ ಕೂಸನ್ನು ಕೊಲೆಮಾಡಿದವರಾರು?

ಲಿಂಡ್‌ಬರ್ಗ್ ಕೂಸನ್ನು ಕೊಲೆಪಡಿಸಿದ ಅಪಾದನೆಗೆ ಒಳಪಡಿಸಿ ಹಾಫ್ಟ್‌ಮೇನ್ ಎಂಬವನನ ಕೆಲಸಮಯದ ಹಿಂದೆ ಗಲ್ಲಿಗೇರಿಸಲಾಯಿತು. ಆದರೆ, ಅವನು ನಿಜವಾದ ಅಪರಾಧಿತನಲ್ಲ ಎಂದು ಈಗ ತಿಳಿದುಬಂದಿರುತ್ತದೆ. ಆದರೂ ಲಿಂಡ್‌ಬರ್ಗ್ ಕೂಸನ್ನು ಕದ್ದೊಯ್ಯುವ ಕಾರ್ಯದಲ್ಲಿ ಆತನು ಸಹಕರಿಸಿದ್ದನಂತೆ.

ಲಿಂಡ್‌ಬರ್ಗ್ ಕೂಸನ್ನು ಕದ್ದೊಯ್ದವನು ಓರ್ವ ಸ್ವಿಸ್ ಜನಾಂಗೀಯನು. ಐದು ಜನ ಸಂಗಾತಿಗಳೊಡನೆ ಆ ಮಗುವನ್ನು ಕದ್ದೊಯ್ದು ಅದರ ಪ್ರಜ್ಞೆ ತಪ್ಪಿಸಲು ಒಂದು ತರದ ವಿಷ ದ್ರಾವಕವನ್ನು ಉಪಯೋಗಿಸಿ, ಅದು ಪುನಃ ಸ್ಮೃತಿಹೊಂದದಿರಲು, ಅವರು ಆ ಮಗುವನ್ನು ಎಲ್ಲೋ ಒಂದು ಕಡೆಯಲ್ಲಿ ಹೂತಿಟ್ಟರಂತೆ.

ಈ ರಹಸ್ಯವು, ಆ ಸ್ವಿಸ್‌ನೊಡನೆ ಕೆಲಕಾಲ ನೆಲಸಿದ ಸ್ವಿಸ್‌ದೇಶದ ಓರ್ವ ಪ್ರವಾಸಿಯಿಂದ ಈಗ ತಿಳಿದುಬಂದಿರುತ್ತದೆ.

ಅಮೃತಬಜಾರ ಪತ್ರಿಕೆಯ ಸ್ವಿಸ್ ಬಾತ್ಮಿದಾರರು, ಹೀಗೆಂದು ಬರೆಯುತ್ತಿದ್ದಾರೆ. ಅಷ್ಟಮ ಎಡ್ವರ್ಡ ಚಕ್ರವರ್ತಿಯರ ರಾಜ ಪರಿತ್ಯಾಗದಿಂದ ಅಂತರಾಷ್ಟ್ರೀಯ ರಾಜಕೀಯ ವಾತಾವರಣದಲ್ಲಿ ವಿಶೇಷತರದ, ಪ್ರೇರಣೆ ಉಂಟಾಗದಿದ್ದರೂ, ಯುರೋಪ್ಯದ ಪತ್ರಿಕೆಗಳು ಅವರ ಕುರಿತು ವಾರ್ತೆಗಳಿಗೆ ಬಹಳ ವಿಶೇಷತೆಯನ್ನು ಕೊಟ್ಟು, ಅಲ್ಲಿನ ಮುಖ್ಯ ವಿಚಾರಗಳನ್ನು ಮರೆತುಬಿಟ್ಟಂತೆ ಕಾಣುತ್ತದೆ. ಸಾಮಾನ್ಯ ಬ್ರಿಟಿಷ ಪ್ರಜೆಗಳಿಗಿರುವ ಹಕ್ಕು ಬ್ರಿಟಿಷ ಚಕ್ರವರ್ತಿಯರಿಗೆ ತಿರಸ್ಕರಿಸಿಬಿಟ್ಟದ್ದು ಶೋಚನೀಯವು. ಅಷ್ಟಮ ಎಡ್ವರ್ಡ ಚಕ್ರವರ್ತಿಯರು

ಸ್ವಾತಂತ್ರ್ಯ ಪುರುಷರಾಗಿದ್ದು ಸ್ವತಂತ್ರವಾಗಿ ಅಭಿಪ್ರಾಯಗಳನ್ನೂ ಇಚ್ಛೆಗಳನ್ನೂ ಹೊಂದುತ್ತಿದ್ದರು. ಅವರು ಹಿಂದೂದೇಶಕ್ಕೆ ತೆರಳಿದ್ದಾಗ, ಹಿಂದೂದೇಶ ಜನರ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಮಹಾತ್ಮಾಜಿ ಜವಾಹರಲಾಲ ಇತ್ಯಾದಿ ಮಹಾ ಪುರುಷರನ್ನು ಕಾಣಲು ಇಚ್ಛೆಯನ್ನು ತೋರಿಸಿದ್ದರಂತೆ. ದೇವರ ಕೊಟ್ಟರೂ ಪೂಜಾರಿ ಬಿಡ ಎಂಬಂತೆ, ಆಗ್ಯೆ ಅವರ ಹತ್ತಿರವಿರುವವರು ಹಾಗಾಗದಂತೆ, ಮಾಡಿಬಿಟ್ಟರು. ಇತ್ತೀಚೆಗೆ ಅವರು ಇಂಗ್ಲಾಂಡಿನ ಹಿಂದುಳಿದ ಪ್ರದೇಶಗಳಾದ 'ಡಿಪ್ರೆಸ್ಡ್ ಏರಿಯಾಸ್'ಗಳನ್ನು ಸಂದರ್ಶಿಸಲು ಹೋದಾಗ ಮಂತ್ರಿಮಂಡಳವು ಅವರ ಕಾರ್ಯಕ್ರಮದಲ್ಲಿ ಸೇರಿಸಿದ ಸ್ಥಳಗಳನ್ನು ಸಂದರ್ಶಿಸದೆ ಅಕಸ್ಮಾತಾಗಿ ತಮ್ಮ ಸ್ವೇಚ್ಛೆಯಿಂದ ಬೇರೆ ಕೆಲವು ಸ್ಥಳಗಳನ್ನು ಸಂದರ್ಶಿಸಿ ಅವುಗಳ ಸುಧಾರಣೆಗಾಗಿ ಯೋಗ್ಯ ಏರ್ಪಾಡುಗಳಾಗಬೇಕೆಂದು ತನ್ನ ಮಂತ್ರಿಗಳಿಗೆ ಆಜ್ಞಾಪಿಸಿದ್ದರು.

ಗಾಳಿಯಿಂದ ಮೋಟಾರು ವಾಹನವನ್ನು ನಡೆಯಿಸಬಹುದು.

ಇತ್ತೀಚೆಗೆ ಇಂಗ್ಲಾಂಡಿನ ವಿಜ್ಞಾನಿಯೊಬ್ಬನು, ತಾನು ಉಪ್ಪುನೀರಿನಿಂದ ಮೋಟಾರು ವಾಹನಕ್ಕೆ ಬೇಕಾದ ಪೆಟ್ರೋಲನ್ನು ತಯಾರಿಸಬಲ್ಲನೆಂದು ಹೇಳಿ ಸಮಸ್ತ ಜಗತ್ತನ್ನೆ ವಿಸ್ಮಯಗೊಳಿಸಿರುವನು. ಈಗ ಜಪಾನೀಯ ವಿಜ್ಞಾನಿಯೊಬ್ಬನು—ಇನ್ನೂ ಹೆಚ್ಚಿನ ತರದ ಕೌತುಕವೊಂದನ್ನು ಹೊರಡಿಸಿರುವನು. ಆತನು ಗಾಳಿಯಿಂದ ಮೋಟಾರು ವಾಹನಗಳಿಗೆ ಬೇಕಾದ ಪೆಟ್ರೋಲನ್ನು ತಯಾರಿಸಬಲ್ಲನಂತೆ. ಉಷ್ಣವು ಹೆಚ್ಚಿದ ಹಾಗೆ ಕೆಲವು ಪದಾರ್ಥಗಳು ಕರಗಿ ದ್ರವಕರೂಪವನ್ನು ಹೊಂದುವವು. ಉಷ್ಣವು ತುಂಬಾ ಹೆಚ್ಚಿದರೆ ವಾಯುರೂಪವನ್ನು ಹೊಂದುವವು. ಇದೊಂದು ಖಚಿತವಾದ ವಿಜ್ಞಾನಸೂತ್ರ. ಹಾಗೆನೆ ಗಾಳಿಯ ಉಷ್ಣವನ್ನು ಬಹಳ ಕಡಿಮೆಮಾಡಿ ಅದರ ಶೀತವನ್ನು ಹೆಚ್ಚಿಸಿದರೆ ಅದೊಂದು ದ್ರಾವಕವಾಗಿ ಮಾರ್ಪಡುವುದು. ಈ ಗಾಳಿಯನ್ನು ಕೆಲವು ವಿಶೇಷತರದ ಪಾತ್ರಗಳಲ್ಲಿ ಶೇಖರಿಸಿಟ್ಟು ಪೆಟ್ರೋಲಿನಂತೆ ಉಪಯೋಗಿಸಬಹುದಂತೆ. ದ್ರಾವಕರೂಪದಲ್ಲಿರುವ ಗಾಳಿಯು ಮತ್ತೊಮ್ಮೆ ವಾಯುರೂಪವನ್ನು ಹೊಂದುತ್ತಿರವಾಗ ಉಂಟಾದ ಶಕ್ತಿಯನ್ನು ಒಂದು ಇಂಜಿನನ್ನು ನಡೆಯಿಸಲು ಉಪಯೋಗಿಸಬಹುದಂತೆ.

ರಷ್ಯವು ಯುದ್ಧಕ್ಕೆ ಸಿದ್ಧವಿದೆಯೇ?

ತನ್ನ ದೂರದ ಪೌರ್ವಾತ್ಯದ ಗಡಿಯಲ್ಲಿ ಬೇಕಾದ ರಣಸಿದ್ಧತೆಗಳನ್ನು ರಷ್ಯಾವು ಮಾಡುತ್ತಿದೆ. ಅಲ್ಲಿ ಕೋಟೆ ಕೊತ್ತಳ ಇತ್ಯಾದಿಗಳನ್ನು ರಚಿಸುತ್ತಿದ್ದಾರೆ. ಅಲ್ಲದೆ, ಯುದ್ಧ ಸಮಯದಲ್ಲಿ ಬೇಕಾದ ಆಹಾರ ಸಾಮುಗ್ರಿಗಳನ್ನು ಒದಗಿಸುವದರ ಅಲ್ಲಿಯೇ (ಗಡಿಯ ಹತ್ತಿರವಿರುವ ದೇಶಗಳಲ್ಲಿ) ಬೇಸಾಯವನ್ನು ನಡೆಸುತ್ತಿದ್ದಾರೆ. ಹಾಳುಬಿದ್ದ ಈ ಪ್ರದೇಶಗಳಲ್ಲಿ ರಷ್ಯಾವು ವಸಾಹತುಗಳನ್ನು ರಚಿಸಿ, ಅವುಗಳನ್ನು ಬೆಳೆಯಿಸುತ್ತದೆ. ಬಹಳ ದೂರದಿಂದ ಆಹಾರ ಸಾಮುಗ್ರಿಗಳನ್ನು ಒದಗಿಸಲು ಉಂಟಾಗಬಹುದಾದ ಯುದ್ಧಕಾಲದ ಒಂದು ಕಷ್ಟವನ್ನು ರಷ್ಯವು ಈ ರೀತಿ ಸುಧಾರಿಸಲು ಸಾಧಿಸುತ್ತದೆ. ಆದರೆ, ರಷ್ಯಾ ದೇಶದ ಸಿದ್ಧತೆಗಳು ಪೂರ್ಣವಾಗುವ ತನಕ ಜಪಾನು ಸುಮ್ಮನಿರುವುದೇ? ಚೀನಾ ದೇಶದ ನಾಯಕರಾದ ಚಿಯಾಂಗ್—ಕೈ—ಶೇಕರು, ಚೀನಾದಲ್ಲಿ ಒಕ್ಕಟ್ಟನ್ನು ಉಂಟುಮಾಡುವ ತನಕ ಅದು ಸುಮ್ಮನಿರುವುದೇ? ಎಂಬೀ ಪ್ರಶ್ನೆಗೆ ಉತ್ತರವೂ ಎಂಬಂತೆ, ಜಪಾನು ಜರ್ಮನಿಯೊಡನೆ ಒಪ್ಪಂದ ಬೆಳೆಸಿದೆ. ಈ ಈರ್ವರೂ ಒಟ್ಟಾಗಿರುವಾಗ ತಾನಾಗಿಯೇ ಯುದ್ಧಪ್ರಾರಂಭಿಸಲು ರಷ್ಯಾ ದೇಶಕ್ಕೆ ಸಾಧ್ಯವಿಲ್ಲ. ಈಗ ಸುಮ್ಮನೆ ಕುಳಿತು ವಿದ್ಯಮಾನಗಳನ್ನು ನಿರೀಕ್ಷಿಸುತ್ತಿದ್ದ ಪ್ರಭುತ್ವದ ಜನಾಂಗಗಳು ಯಾವದಾದರೂ ಒಂದು ಪಕ್ಷವನ್ನು ಸೇರುವ ಆಲೋಚನೆಯನ್ನು ಮಾಡದಿದ್ದರೆ, ಜಪಾನು ಚೀನಾದ ಮೇಲೆ ಹಕ್ಕಾರು ನಡೆಯಿಸುವುದು ಖಂಡಿತ. ಈ ಕಾರ್ಯದಲ್ಲಿ ಅವರಿಗೆ ಬೇರೆ ತಡೆಗಳಿಲ್ಲ.

ರಷ್ಯಾದಲ್ಲಿನೋ 'ಮಹಾ' ಸಿದ್ಧತೆಗಳಾಗಿವೆ ಎಂಬ ವಾರ್ತೆಯನ್ನು ನಾವು ಕೇಳುತ್ತೇವೆ. ಆದರೆ, ಜಪಾನಿನ ಬಲವನ್ನು ಅವರು ಹಿಮ್ಮೆಟ್ಟಿದಂತೆ ಆಗಲಿಲ್ಲ. ಸೇನಾ ಸಂಖ್ಯೆಯು ದೊಡ್ಡದಿರುವುದು ನಿಜ. ಆದರೆ ಜಪಾನಿನಷ್ಟು ಯೋಗ್ಯತೆ ರಷ್ಯಾ ದೇಶದ ಸಂಗ್ರಾಮಿಗಳಲ್ಲಿರುವುದಿಲ್ಲ. ಮಾತ್ರವಲ್ಲದೆ, ರಷ್ಯಾ ದೇಶವು ಈಗಲೂ ತನಗೆ ಬೇಕಾದ ಹೆಚ್ಚಿನ ಯುದ್ಧೋಪಕರಣಗಳನ್ನು ಹೊರಗಿನಿಂದ ಪಡಕೊಳ್ಳಬೇಕಾಗಿದೆ. ಆದ್ದರಿಂದ ಪಾಶ್ಚಾತ್ಯದಲ್ಲೂ—ಪೌರ್ವಾತ್ಯದಲ್ಲೂ ಯುದ್ಧಮಾಡಲು ರಷ್ಯಾವು ಸಿದ್ಧವಿದೆ ಎಂದು ಹೇಳಲಾಗುವುದಿಲ್ಲ (ಜಪಾನ್ ಜರ್ಮನ್ ಒಪ್ಪಂದದಂಥ) ಅವರ ಒಯ್ಯೋಣ ಏರ್ಪಾಡು ಸರಿಯಾಗಿಲ್ಲ. ಸಿಡಿಮದ್ದು ತಯಾರಿಸಲು ಬೇಕಾದ ಸಾಮುಗ್ರಿಗಳು ಅವರಲ್ಲಿಲ್ಲ. ಶಸ್ತ್ರಗಳು ಇವರಿಗೆ ಹೊರಗಿನಿಂದ ಬರಬೇಕು. ಈಗಿನ ಸ್ಥಿತಿಗನುಸಾರವಾಗಿ ಇನ್ನೆರಡು ಪ್ರಬಲ ಜನಾಂಗಗಳ ಸಹಕಾರ ವಿನಹ, ಅದಕ್ಕೆ ಏನೂ ಮಾಡಲಾಗದು. ಆದರೆ ಯುದ್ಧವನ್ನು ಬಳಸಿಸಲು ಪ್ರಾರಂಭಿಸಿದ ಹಳೇದಾದ ಪ್ರಬಲ ಜನಾಂಗವಾದ ಜರ್ಮನಿಯು ಕೊಮ್ಯುನಿಸಮಿಗೆ ವಿರೋಧವಾಗಿ ಒಪ್ಪಂದಗಳನ್ನು ಮಾಡಿರುವಾಗ, ಇನ್ನಿತರ ಪ್ರಮುಖ ರಾಷ್ಟ್ರಗಳ ಈ ಕಲಹದಲ್ಲಿ ಕೈಹಚ್ಚುವ ಸಂಭವಗಳು ಕಡಿಮೆ.

ಶಾಲಾ ಮಾಸ್ತರರು ಬೇಕು.

ಕಾಸರಗೋಡು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಿಂದ ಮಂಜೂರಾದ ಮತ್ತು ಕುಂಬಳೆ ಮತ್ತು ಪೇರಾಲ್ ಈ ಸ್ಥಳಗಳ ಏಡೆಡ್ ಶಾಲೆಗಳಿಗೆ ಹಾಯರ್ ಮತ್ತು ಲೋವರ್ ಟ್ರೈನ್ಡ್ ಮಾಸ್ತರರು ಬೇಕಾಗಿದೆ. ಅರ್ಜಿಗಳು ಸರ್ಟಿಫಿಕೇಟುಗಳ ಸಮೇತ ತಾ. 31-1-37ರ ವಳಗೆ ನನಗೆ ತಲುಪಬೇಕು. ಸರ್ಟಿಫಿಕೇಟು ವಾಪಾಸ ರವಾನಿಸಬೇಕಾದ ಸ್ಟ್ಯಾಂಪುಗಳು ಅಥವಾ ಸರ್ಟಿಫಿಕೇಟಿನ ಸರಿಯಾದ ನಕಲು ದಸ್ಕತು ಹಾಕಿ ರವಾನಿಸಬೇಕು.

1-1-37

ಎಂ. ಸಿ. ಮುಪ್ಪಿ,
ಸೆಕ್ರೆಟರಿ ಜಿಲ್ಲಾ ಮುಸ್ಲಿಂ
ವಿದ್ಯಾಭ್ಯಾಸ ಸಂಘ
ಪೋಸ್ಟ್ ಕುಂಬಳೆ, ದ. ಕ.

ಎದೆಯ ನೋವನ್ನು ಗುಣಪಡಿಸಿರಿ

ನಿಮಗೆ ಕೆಮ್ಮು ಕಾಸ ಮೊದಲಾದ ಹೃದ್ರೋಗಗಳು ಇವೆಯೆ? ಹಾಗಾದರೆ ಪೆಪ್ಸ್ ಗುಳಿಗೆಗಳನ್ನು ದಿನಾಲೂ ಸೇವಿಸಿರಿ. ಬಾಯಿಯ ಜೊಲ್ಲಿನಲ್ಲಿ ಇವುಗಳು ಕರಗಿದ ಕೂಡಲೇ ಇವುಗಳಿಂದ ಹೊರಡುವ ಸುವಾಸನಾಯುಕ್ತ ನೊರೆಯು ಶ್ವಾಸಕೋಶಗಳನ್ನು ಸೇರಿ ಅಲ್ಲಿರುವ ರೋಗಾಣುಗಳನ್ನು ಕಳೆದು ನಾಶಗೊಳಿಸುವುದು. ಇವುಗಳು ಗಂಟಲುನೋವನ್ನೂ ಇನ್ನಿತರ ತರದ ಘೋರ ಹೃದ್ರೋಗಗಳನ್ನೂ ಗುಣಪಡಿಸುವುದು.



ಪೆಪ್ಸ್ ಗುಳಿಗೆಗಳನ್ನು ನಿತ್ಯವೂ ನಿಮ್ಮೊಡನೆ ಇಟ್ಟುಕೊಳ್ಳಿರಿ.
ಎಲ್ಲಾ ಔಷಧ ಅಂಗಡಿಗಳಲ್ಲೂ

ಸೀಸೆಯೊಂದಕ್ಕೆ ರೂ. 1—0—0ರಂತೆ ಮಾರಲ್ಪಡುವುದು.

ಏಜಂಟರು—ಮೆಸರ್ಸ್ ದಾಥಾ ಅಂಡ್ ಕಂಪೆನಿ, ಪಿ. ಟಿ. ಮದ್ರಾಸು.

ವಿಷಹಾರಿ ಶ್ವಾಸನೀಯ ಗುಳಿಗೆಗಳನ್ನು ಸೇವಿಸಿರಿ.

PEPS

Distributors for South Kanara:—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ರೈಲು ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಹೊತ್ತು	ತಲಪುವ ಹೊತ್ತು
ಮೈಲು	ಬೆಳಗ್ಗೆ 9-50	ಸಂಜೆ 4-20
ಎಕ್ಸ್‌ಪ್ರೆಸ್	„ 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಶಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 8-20	

ಕಳೆದ 30 ವರ್ಷಗಳಿಂದಲೂ
ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡು
ತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

'ಸ್ವದೇಶಾಭಿಮಾನಿ'

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ.

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ. ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್ ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ.

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮುಂತಾದ ಮುಖ್ಯಸ್ಥಳಗಳಲ್ಲಿ ಮತ್ತು ಇತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ ಬಿಡಿ ಸಂಚಿಕೆಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಶರ್ತಗಳಿಗಾಗಿ ಬರೆಯಿರಿ.

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು

ಸರಕಾರದಲ್ಲಿ ರಿಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ಸ್ಥಾಪನಾ 1900

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

ರೋಗದ ನಾಮಗಳು:— ಕ್ಷಯ ರೋಗ, ಬಾಲಂತಿರೋಗ, ಹಡೆದ ನಂಜು, ದಮ್ಮು, ಅಡಗೈ, ಕಾಲರಾ, (ಮಹಾರೋಗ,) ಪ್ಲೇಗು, ಇನ್ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮಲ ರೋಗ, ಗಂಡುಮಾಲೆ, [illegible] ಶಕ್ತಿಕ್ಷಯ, ತಿವಿಶೂಲೆ, ಮೂಗಿನೊಳಗಿನ [illegible] ಮೊದಲಾದುವುಗಳು, ಕಣ್ಣಿನೊಳಗಿನ [illegible] [illegible] ಕಡಿಮೆಯಾಗುವ, ಅಜೀರ್ಣ, ಹೊಟ್ಟೆ ಶೂಲೆ, [illegible] ಅವ ರೋಗಗಳು, ಅಂಡಿ, [illegible] ಹೊಟ್ಟೆ [illegible] [illegible] ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣವಾಗುವವು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು, ಅಂಥವರು ಒಂದು ಸಾರಿ ತಂದು ನೋಡಬೇಕು. ಸ್ಥಾಪನಾ ಆದಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ.

[illegible]

ನಮ್ಮ ವಿಳಾಸ:—ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು. ಪೋ. ಶಹಾಪೂರ [ಬೆಳಗಾಂವಿ]

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.
ಚಂದ್ರಮುಖ್—ವಾಂತಿಭೇದಿ, ಅತಿಸಾರಕ್ಕೆ.
ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ವೃದ್ಧಿಕಾಸವ—ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.
ಭುವನಾಂಜನ ಸ್ಕಿನ್ ಬಾಮ್—[illegible] ನೋವುಗಳಿಗೆ.
ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಮೀನು ವ್ಯವಸಾಯ ಮತ್ತು ಮೀನಿನ ಕಸಬು

([illegible])

ಮೀನಿನ ವ್ಯವಸಾಯವು [illegible] ಇನ್ನೂ ಕಿರುವ ಉಪಾಯಗಳಲ್ಲಿ ಪ್ರಧಾನವಾದ ದ್ದೆಂದಾಗಿರುತ್ತದೆ. ಅದರಿಂದ ದೇಶದಲ್ಲಿ ಸಂಪತ್ತು ಹೆಚ್ಚಿ ಜನರಿಗೆ ಆಹಾರವೂ ಒಂದು ಉದ್ಯೋಗವೂ ಸಿಕ್ಕುತ್ತವೆ. ಮೀನಿನ ಕೈಗಾರಿಕೆಯು ಹಿಂದೂದೇಶದಲ್ಲಿ ಇನ್ನೂ ಸರಿಯಾಗಿ ವೃದ್ಧಿಗೆ ಬರಲಿಲ್ಲ. ಮೀನನ್ನು ಹಿಡಿಯುವ ಮತ್ತು ಅದನ್ನು ಹಾಳಾಗದಂತೆ ರಕ್ಷಿಸುವ ವಿಧಾನಗಳ ಕುರಿತೂ, ಮೀನು ವ ಮೀನಿನಿಂದ ತಯಾರಿಸುವ ಪದಾರ್ಥಗಳನ್ನು ಎಲ್ಲಾ ಕಡೆಗಳಿಗೆ ಮುಟ್ಟಿಸುವ ಏರ್ಪಾಡುಗಳ ಕುರಿತೂ ಇನ್ನು ಮಾಡಬೇಕಾದ ಕೆಲಸವೆಷ್ಟೋ ಬಾಕಿ ಇರುತ್ತವೆ. ಫಿಶ್ಶರೀಸ್ ಶಾಖೆಯವರು ಸಾಮಾನ್ಯ ಜನರೆಲ್ಲರ ಹಿತಕ್ಕಾಗಿ ಮಾಡುವ ಕಾರ್ಯಕ್ರಮಗಳನ್ನು ಐದು ಬಗೆಯಾಗಿ ವಿಂಗಡಿಸಬಹುದು.

1 ಮೀನಿನ ಕಸಬನ್ನು ರೂಪಿತಕ್ಕೆ ತಂದು ಜನರಿಗೆ ಆಹಾರ ಸಾಮಗ್ರಿಗಳು ಹೆಚ್ಚುವಂತೆ ಮಾಡುವದು.

2 ಮೀನು ಹಿಡಿಯುವುದನ್ನು ಹೆಚ್ಚಿಸಿ, ಹಿಡಿದ ಹಸಿ ಮೀನು ಹಾಳಾಗದೇನೇ ದೂರದ ಪ್ರದೇಶಗಳಲ್ಲಿ ಮಾರಾಟದ ಬಗ್ಗೆ ಒಯ್ಯುವದಕ್ಕೆ ಅನುಕೂಲತೆಗಳನ್ನು ಕಲ್ಪಿಸಿ, ಆಹಾರಕ್ಕೆ ಉಪಯೋಗವಿಲ್ಲದೆ ಉಳಿಯುವ ಮೀನಿನಿಂದ ಎಣ್ಣೆ ಗೊಬ್ಬರ ವ ಇತರ ಉತ್ಪತ್ತಿಗಳನ್ನು ತಯಾರಿಸುವದು. ಈ ಉದ್ದಿಶ್ಯಗಳಿಗಾಗಿ ಮೀನು ಕೈಗಾರಿಕೆ ವ ಅದಕ್ಕೆ ಸಂಬಂಧಿಸಿದ ಇತರ ಕೈಗಾರಿಕೆಗಳ ಕ್ರಮಗಳನ್ನು ತಿದ್ದುಪಡಿಸಿ ಹೊಸ ಕ್ರಮಗಳನ್ನು ಜಾರಿಗೆ ತಂದು, ಆ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವದು.

3 ಮೀನು ಕಸಬಿನವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವದು, ಪ್ರಕೃತಿ ಶಾಸ್ತ್ರದ ಅಭ್ಯಾಸಕ್ಕೆ ಸಹಾಯವಾಗುವಂತೆ ಮೀನುಗಳಲ್ಲಿ ಸಿಕ್ಕುವ ಬೇರೆ ಬೇರೆ ಜಾತಿಗಳನ್ನು ತೋರಿಸುವ ಸಾರ್ವಜನಿಕ ಜಲಜಂತು ಪ್ರದರ್ಶನಾಲಯಗಳನ್ನು ಸ್ಥಾಪಿಸುವದು.

4 ಮೀನು ಕಸಬಿನವರ ಆರ್ಥಿಕ ವ ನೈತಿಕ ಸ್ಥಿತಿಯನ್ನು ಉತ್ತಮಗೊಳಿಸುವದು.

5 ಹುಳುನಾಶಕ ಜಾತಿಯ ಮೀನನ್ನು ಮಲೇರಿಯವಿರುವ ಪ್ರದೇಶಗಳಿಗೆ ಹಂಚಿ, ಅಲ್ಲಿ ಅದರ ಬೆಳೆಯನ್ನು ಹೆಚ್ಚಿಸಿ, ಮಲೇರಿಯದ ಹಾವಳಿಯನ್ನು ತಗ್ಗಿಸಲಿಕ್ಕೆ ಪ್ರಯತ್ನಿಸುವದು.

1. ಆಹಾರ ಸಾಮಗ್ರಿಗಳನ್ನು ಹೆಚ್ಚಿಸುವದು.

ಹಿಂದೀಯರ ನಿತ್ಯದ ಆಹಾರದಲ್ಲಿ ಶರೀರದ ಬೆಳವಣಿಗೆಗೆ ಅತ್ಯಾವಶ್ಯಕವಾದ 'ಪ್ರೊಟೀನ್' ಎಂಬ ಪದಾರ್ಥವು ಬಹಳ ಕಡಿಮೆಯೆಂದು [illegible]ರು ಹೇಳುತ್ತಾರೆ. ಈ ಪ್ರೊಟೀನು ಅಗ್ಗ[illegible], ಜೀರ್ಣಕ್ಕೆ ಅನುಕೂಲವಾದ ರೂಪದಿಂದ ಮೀನಿನಲ್ಲಿ ಸುಲಭವಾಗಿ ದೊರಕುತ್ತದೆ. ಮೀನು ಧಾರಾಳವಾಗಿ ಸಿಕ್ಕುವದು ಸಮುದ್ರ[illegible] ... ಸಮುದ್ರದ ಮೀನನ್ನು ಹಾಳಾಗದಂತೆ [illegible] ಫಿಶ್ಶರೀಸ್ ಶಾಖೆಯವರು [illegible] ಸಮುದ್ರಗಳಲ್ಲಿ [illegible] ಎಲ್ಲೆಲ್ಲಿ ಮೀನು ಸಿಕ್ಕುವ ಪ್ರದೇಶಗಳೆಂಬುದರ ಕುರಿತೂ ಬಹಳ [illegible] ಸಂಗತಿಗಳನ್ನೆಲ್ಲಾ ಸಂಗ್ರಹಿಸಿದ್ದಾರೆ. ಇದರ ಮೂಲಕ, ಈ ಮೀನು ವ್ಯವಸಾಯ ಪ್ರದೇಶಗಳಿಂದ ತುಂಬಾ ಪ್ರಯೋಜನವು ಮೀನು ಕಸಬಿನವರಿಗೆಲ್ಲಾ ದೊರಕುವಂತೆ ಏನು ಮಾಡಬಹುದೆಂಬುದರ ಕುರಿತು ಸರಕಾರದವರು ಆಲೋಚಿಸುತ್ತಿದ್ದಾರೆ.

ಈ ಅಧಿಪತ್ಯದ 16 ಜಿಲ್ಲೆಗಳಲ್ಲಿ ಒಳಪ್ರದೇಶಗಳಲ್ಲಿರುವ ಸರೋವರ, ನದಿ ವಗೈರೆಗಳಲ್ಲಿ ಮೀನು ವ್ಯವಸಾಯ ಮಾಡುವ ಹಕ್ಕನ್ನು ಫಿಶ್ಶರೀಸ್ ಶಾಖೆಯವರು ತಾವೇ ಇಟ್ಟುಕೊಂಡು ತಿನ್ನಲಿಕ್ಕೆ ಯೋಗ್ಯವಾದ ಉತ್ಕೃಷ್ಟ ತರದ ಮೀನನ್ನು ಅಲ್ಲಿ ತಪ್ಪದೆ ಸಂಗ್ರಹಿಸುತ್ತಾರೆ. ಈ ಪ್ರದೇಶಗಳಿಗೆ ಮೀನು ಮರಿಗಳನ್ನು ಒದಗಿಸುವ ಬಗ್ಗೆ ಫಿಶ್ಶರೀಸ್ ಶಾಖೆಯವರು ಏಳು ಕಡೆಗಳಲ್ಲಿ ಮೀನು ವ್ಯವಸಾಯ ಕ್ಷೇತ್ರಗಳನ್ನು ಸ್ಥಾಪಿಸಿದ್ದಾರೆ. ಹತ್ತಿರವಿರುವ ಮೀನು ವ್ಯವಸಾಯದ ಪ್ರಾಂತಿಕ ಜಲಪ್ರದೇಶಗಳಿಗೆ ಒದಗಿಸುವ ಉದ್ದಿಶ್ಯ ಈ ಕ್ಷೇತ್ರಗಳಲ್ಲಿ ತಿನ್ನಲಿಕ್ಕೆ ಯೋಗ್ಯವಾದ ಒಳ್ಳೇ ಜಾತಿಯ ಮೀನನ್ನು ಬೆಳೆಸುತ್ತಾರೆ.

ದಕ್ಷಿಣ ಹಿಂದೂದೇಶದಲ್ಲಿರುವ ಜಲಪ್ರದೇಶಗಳಿಗೆ ಬೇಕಾದ ಮೀನು ವ ಮೀನು ವ್ಯವಸಾಯದ ವಿಷಯದ ಜ್ಞಾನವನ್ನು ಕೈಕರೆಲ್ಲಿ ಪ್ರಚಾರಗೊಳಿಸಿ, ಮೀನು ವ್ಯವಸಾಯವು ಮನೆ ಕೈಗಾರಿಕೆಯಾಗಿ ಬಾಳುವಂತೆ ಮಾಡಬೇಕಾಗಿ ಸರಕಾರದವರು ಸಾಧಿಸುತ್ತಿದ್ದಾರೆ. ವರ್ಷ ಹೋಗುತ್ತಾ ಹೋಗುತ್ತಾ ಫಿಶ್ಶರೀಸ್ ಇಲಾಖೆಯವರು ಈ ಕುರಿತಾದ ಅನುಭವವನ್ನು ಖಾಸಗಿ ಬಾವಿ, ಕೆರೆಗಳ ಮಾಲೀಕರಿಗೆ ಹೆಚ್ಚು ಹೆಚ್ಚಾಗಿ ಕೊಡುತ್ತಾರೆ.

2 ಕೈಗಾರಿಕೆಯ ಸುಧಾರಣೆ

ಹಿಂದೂದೇಶದಲ್ಲಿ ಮೀನನ್ನು ಸಿಗಿಯುವ ಕೈಗಾರಿಕೆಯು ಪುರಾತನ ಕಾಲದಿಂದ ಇರುವಂಥಾದ್ದು. ಈ ಕೈಗಾರಿಕೆಯನ್ನು ಇಲ್ಲಿ ಇನ್ನೂ ಹಳೇ ಕ್ರಮಗಳಿಂದಲೇ ನಡೆಸುತ್ತಾರೆ. ನೋಟದಲ್ಲಿಯೂ ವಾಸನೆಯಲ್ಲಿಯೂ ಶುಚಿತ್ವದಲ್ಲಿಯೂ, ಬಾಳುವಿಕೆಯಲ್ಲಿಯೂ ಈ ಕೈಗಾರಿಕೆಯಲ್ಲಿ ಮಾಡುವ ಪದಾರ್ಥಗಳನ್ನು ಉತ್ತಮ ರೀತಿಗೆ ತರಲಿಕ್ಕೆ ಒಳ್ಳೇ ಹೊಸ ಸುಧಾರಿತ ಕ್ರಮಗಳನ್ನು ರೂಢಿಗೆ ತರಲು ಸಾಧ್ಯವಿದೆ. 'ತಾನೂರಿನಲ್ಲಿರುವ ಶೋಧನೆ ಸಂಸ್ಥೆಯಲ್ಲಿ ಮೀನು ಹಾಳಾಗದಂತೆ ರಕ್ಷಿಸುವ ಒಳ್ಳೇ ಉಪಾಯಗಳನ್ನು ಈಗ ಕಂಡು ಹಿಡಿದಿರುತ್ತಾರೆ.

[ಸಶೇಷ]

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ 'ಇಡ್ಯ ವಿದ್ಯಾದಾಯಿನೀ ಶಾಲೆ' ಮತ್ತು ಹೊಸತಾಗಿ ಸ್ಥಾಪಿಸಲಿರುವ 'ಅನಾಥಾಲಯ' ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ".

ತೆಗೆಯುವ ತಾ. 17-1-1937 . ಸೋಡ್ತಿಯ ಮೊಬಲಗು ರೂ. 50,000

ಒಂದನೇ ಇನಾಂ ರೂ. 8000; 2ನೇ ಇನಾಂ ರೂ. 2,000;

ಜುಮ್ಲಾ ಇನಾಂಗಳು 1000; ಇನಾಂಗಳ ಜುಮ್ಲಾ ಮೌಲ್ಯ ರೂ. 30,125

ಟಿಕೇಟು 1ರ ನಾಲ್ಕಾಣೆ ಮಾತ್ರ!

20 ಟಿಕೇಟುಗಳಿರುವ ಒಂದು ಪುಸ್ತಕದ ಬೆಲೆ ರೂ. 4-0-0. 2 ಪುಸ್ತಕಗಳ ಬೆಲೆ ರೂ. 7-8-0. ಸ್ಪೆಶಲ್ ಬಹುಮಾನಗಳೂ ಇವೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಮೆನೇಜರ್: ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್. (ದ. ಕ.)



LEVER BROTHERS (INDIA) LIMITED

ಪ್ರಖ್ಯಾತಿಯಾದ ಸಿನೀಮಾ ನಟರ ಸೊಗಸಾದ ಭಾವಚಿತ್ರಗಳು

ಉಚಿತ!

ದೊಡ್ಡ ಲಕ್ಸ ಸೋಪಿನ 5 ರಾಪರ್‌ಗಳನ್ನು ನಿಮ್ಮ ವಿಳಾಸದೊಂದಿಗೆ "Portraits"

ಟಿ. ಟಿ. ಕೃಷ್ಣಮ್ಮಾಚಾರಿ,

11-14, ಅರ್ಮೇನಿಯನ್ ಸ್ಟ್ರೀಟ್, ಮದ್ರಾಸು.

ಈ ವಿಳಾಸಕ್ಕೆ ಕಳುಹಿಸಿಯೋ, ಪ್ರಖ್ಯಾತಿಯಾದ ಸಿನೀಮಾ ತಾರೆಯರ ಸೊಗಸಾದ ಭಾವಚಿತ್ರ ಒಂದನ್ನು ಉಚಿತವಾಗಿ ಪಡೆಯಿರಿ.

ಬಾಬೂಲಿನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟಿದೆ. ಸೋಡಿಯಮಿನ ಲವಣ, ಮೆಗ್ನೆಶಿಯಮ್ ಪೊಟೇಶಿಯಮ್ ಮತ್ತು ಬಡಿಶೇಪ, ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿದೆ. ಚಿಕ್ಕಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛಪಡಿಸಿ, ಬಲಗೊಳಿಸಿ ಕಾಪಾಡುವುದು.

ಶಾಂತಿ,ನಾಯಿಕೆಮ್ಮು ... ಉಪಯೋಗಿಸಲ್ಪಡಬಹುದಾದ ಅಮೂಲ್ಯ ಔಷಧಿ ಮಕ್ಕಳಿಗೆ ಹಲ್ಲು ... ಗುವ ತೊಂದರೆಗಳನ್ನೆಲ್ಲಾ ನಿಲ್ಲಿಸುವುದು, ಅನುಪಾನ ಪತ್ರ ಸೀಸೆಯೊಂದಿಗಿದೆ.

ಬಾಟ್ಲಿ 1ಕ್ಕೆ 14 ಆಣೆ.

ಪೋಸ್ಟೇಜು ಪ್ರತ್ಯೇಕ.

ಬಾಬ್ ಕೆಮಿಕಲ್ ವರ್ಕ್ಸ ಬೊಂಬಾಯಿ ಮತ್ತು ಕಲ್ಕತ್ತಾ.

ಎರಡಾಣೆ ಅಂಚೆ ಚೀಟನ್ನು ಕಳುಹಿದವರಿಗೆ, ಒಂದು ಸ್ಯಾಂಪಲ್ ಬಾಟ್ಲೀ ಕಳುಹಲಾಗುವುದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು:— ಫೊಷ್ಮಂರ್ ಸ್ಟೋರ್ಸ್, ರಥಬೀದಿ ಮಂಗಳೂರು.

Regd. No. M. 3406.

ಸ್ವದೇಶಾಭಿಮಾನಿ

ಬಿಡಿ ಸಂಚಿಕೆಗೆ ಒಂದಾಣೆ. ESTABLISHED 1906

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ಕೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. ಮಂಗಳೂರು ತಾ. ೧೫ನೇ ಜನವರಿ ೧೯೩೭. (15 – 1 – '37) ಸಂಚಿಕೆ ೨

THE

Northern India Insurance Co., Ltd., LAHORE.

The only Accidental Life Insurance Company in India.

(Estd. 1929)

EXCELLENCE

The prestige that arises from Financial Stability and years of fair dealing is enjoyed by each NORTHERN INDIA representative. Practical agency training and attractive sales aids open new avenues of business and complete the equipment of the man on the field.

ACHIEVEMENT

Declared a Quadrennial Bonus of Rs. 40 and 32 per thousand sum assured in case of Whole Life and Endowment Assurances respectively. For our prompt payment of claims call for the attractive booklet "FACE THE FACTS."

ATTRACTIVE

Double the sum payable in case of any Accidental Death and Triple the sum in case of Certain Accidental Deaths without payment of any extra premiums. Policy-holders Savings Bureau Service reduces the premiums from 5 to 12%. Influential Directorate and efficient agency-minded management. 2½% rebate on yearly premiums.

We shall be glad to supply a copy of the latest Balance sheet and Annual Report without obligation to those interested.

Wanted Agents of both sexes throughout Karnataka

All enquiries may be addressed to:

T. H. RAGHAVENDRA RAO,
Branch Secretary,
104, Big Street, Triplicane, MADRAS.

Note[illegible]

ಜೈಲಿನಲ್ಲಿಟ್ಟವರ ಕಡೆಗೆ ಸರಕಾರದ ದಯಾಭಾವ ಹೀಗಿದೆ:—ಲಾಹೋರು ಜೈಲಿನಲ್ಲಿರುವ ಒಬ್ಬನಿಗೆ ರೋಗ. ಆತನು ಆಸ್ಪತ್ರೆಯಲ್ಲಿದ್ದವನು. ಅದೇ ಊರಲ್ಲಿರುವ ಆತನ ಸೊಸೆ ಅವನನ್ನು ಕಾಣಬಾರದೆಂದು ಸರಕಾರದ ಅನುಜ್ಞೆ. ಆತನ ತಾಯಿ ಸಾವಿರ ಮೈಲು ದೂರ ಬರಿಸಾಲಿನಲ್ಲಿರುವಳು. ಆಕೆ ಬಂದು ಮಗನನ್ನು ಕಾಣಬಹುದಾಗಿ ಕನಿಕರದಿಂದ ಅಪ್ಪಣೆಕೊಡಲಾಗಿದೆ. ಅವಳ ವಯಸ್ಸು ಮಾತ್ರ ೮೦! ಅವಳು ಬರುವುದುಂಟೇ? ಹೀಗೇಕಾಯಿತು?

o o o

ಮಿಡ್ನಾಪುರದಿಂದ ವಾರ್ತೆ,—ಚುನಾವಣೆಯ ಸಲುವಾಗಿ ಸಭೆಗಳು ಪೋಲೀಸು ಠಾಣ್ಯದಲ್ಲೇ ಜರಗುತ್ತಿವೆಯೆಂದು. ಕೇಳಿದರೆ, ಭಯಂಕರದ ವಿಕಾರ ತಡೆವುದಕ್ಕಾಗಿ ಹೀಗೆ ಮಾಡಲಾಗುತ್ತಿದೆ ಎನ್ನುತ್ತಾರೆ. ವಾಸ್ತವವಾಗಿ, ಇದು ರಾಷ್ಟ್ರೀಯರಿಗೆ ಅವಕಾಶ ಸಿಗದಂತಾಗಿದೆ ಎಂದು ಕೌನ್ಸಿಲ್ ಆಫ್ ಸ್ಟೇಟಿಗೆ ಹಿಂದೆ ಮೆಂಬರರಾಗಿದ್ದ ಸುಹೃವಾರ್ದಿಯವರ ದೂರು.

o o o

ಬಂಗಾಳದ ಪತ್ರಿಕೆಗಳಲ್ಲಿ ಈ ಬಗೆಯ ಆಕ್ಷೇಪಗಳನ್ನೂ ಆರೋಪಣೆಗಳನ್ನೂ ಪ್ರಕಟಿಸಿವೆ.

o o o

ಇಟಲಿಗೂ ಇಂಗ್ಲೆಂಡಿಗೂ ಒಂದು ಕರಾರು ಆಗಿದೆ. ಏತಕ್ಕಾಗಿ? ಮೆಡಿಟರೇನಿಯನ್ ಸಮುದ್ರದಲ್ಲಿ ಇಬ್ಬರ ಹಿಂದಿನ ಹಕ್ಕು ಸರಿಯೆಂದು ಪರಸ್ಪರ ಒಪ್ಪಿಗೆ. 'ನಾವೂ ನೀವೂ ಮಿತ್ರರು'—'ನೀವೂ ನಾವೂ ಗೆಳೆಯರು' ಎಂದೊಡನೆಯೇ ಬಹಳವೇನು ದೊರೆಯಿತು? ಕಾಗದದಲ್ಲಿರುವ ಒಕ್ಕಣಿಯಲ್ಲಿ ಸಿಗದ ತಂತ್ರಗಳಾವುವೂ ಇವೆಯೋ? ತಿಳಿದಿಲ್ಲ.

o o o

ಸ್ಪೆಯಿನಿನಲ್ಲಿ ಇತ್ತಂಡಕ್ಕೂ ಕೈಯಿಕ್ಕಲು ಅಸ್ಪದವಿರಬಾರದಾಗಿ ಒಪ್ಪಿಕೊಳ್ಳಲಾಗಿದೆ. ಇಟೇಲಿಯ ಸೇನಿಕರು ಮಾತ್ರ ಸ್ಪೈನಿನಲ್ಲಿ ಬಂದಿಳಿದಾಗಿದೆ!

o o o

ಹೆಚ್ಚಿನ ಜನಾಂಗಗಳು ಕರಾರಿಗೆ ಏನೂ ಬೆಲೆ ಇಟ್ಟಿರದ ಈ ಕಾಲದಲ್ಲಿ, ಇದೊಂದು ಕರಾರಿನ ವಿಷಯ ಹೇಗಾದೀತೋ ತಿಳಿಯಬರುವುದಿಲ್ಲ.

o o o

'ಅನ್ನವಿಲ್ಲವೆ ಅವರಿಗೆ? ಪಾಯಸ ತಿನ್ನಿರಿ' ಎಂದು ಹಿಂದೆ ಒಬ್ಬ ರಾಣಿ ಅಪ್ಪಣೆಕೊಟ್ಟಿದ್ದಳು. ಅದರಂತೆ, ಹೊತ್ತಿಗೆ ಅನ್ನವಿಲ್ಲದೆ ಹಳ್ಳಿಗರಿಗಾಗಿ ಪ್ರತಿ ಹಳ್ಳಿಯಲ್ಲೂ ಟೆಲಿಫೋನ್ ಇಡುವ ಹಾಗೆ ಒಂದು ಹೊಸ ಸೂಚನೆ,—ಗ್ರಾಮೋದ್ಧಾರಕ್ಕಾಗಿ!

o o o

ಶುದ್ಧ ನೀರಿಲ್ಲ. ಸಾಲೆಯಿಲ್ಲ. ಸೂಲಗಿತ್ತಿ ಇಲ್ಲ. ಟೆಲಿಫೋನ್! ಅಂತೆ,

o o o

ಲಕ್ನೋದಲ್ಲಿ ಮತ್ತೊಂದು ಸರಕಾರೀ ಸರ್ಕಿ[illegible]ರು. ಚುನಾವಣೆಯಲ್ಲಿ ಸರಕಾರವು ಕೈ[illegible]ಕ್ಕುವುದಿಲ್ಲ; ಹೀಗೆಂದರೆ, 'ಕಾಂಗ್ರೆಸ್ಸಿನ [illegible]ಕ್ಷವಾಗಿಲ್ಲ ಎಂದೂ ತಿಳಿಯಬೇಕೆಂದು ಸರ್ಕಿ[illegible]ರು. ಇಂತಹ ಸರ್ಕಿಲಾರೂ ಅಗತ್ಯವಾ[illegible]ತ್ತೇ? ಕಾಂಗ್ರೆಸ್ಸಿಗೆ ಸಹಾಯ ಮಾಡುವ [illegible]ಕೇಸರರೂ ಇರಬಹುದುದೇ?

o o o

ಸ್ಪೆಯಿನಿನ ದುರವಸ್ಥೆಯು ಸರ್ವರಿಗೆ ಮಂದ[illegible]ಗುವ ಹಾಗೆ ಜನಾಂಗಸಂಘದಲ್ಲಿ ಸ್ಪೈನಿನ [illegible]ರ್ಯದರ್ಶಿಯ ಭಾಷಣ:—ಇಂದು ಮದ್ರಿಡ್, [illegible]ಳೆ ಲಂಡನ್—ನೆನಪಿರಲಿ.

o o o

ದಿಸೆಂಬರು ತಿಂಗಳ ಅಂತ್ಯಕ್ಕೆ ಜಾಪಾನಿಗೂ [illegible]ಮೇರಿಕಾ ಇಂಗ್ಲೆಂಡುಗಳಿಗೂ ಯುದ್ಧ ನಾವೆ[illegible] ದಾವೂಶಾಯುಗಳ ಸಂಬಂಧವಾಗಿದ್ದ [illegible]ರು ಮುಗಿದಿದೆ. ಈಗ ಜಾಪಾನು ಇವರ[illegible] ಸಮಾನತೆ ಹೊಂದುವಷ್ಟು ನಾವೆಗಳನ್ನು [illegible]ಸಲು ಖಂಡಿತ ತೊಡಗಿದೆ; ಪ್ರತಿಯೊಬ್ಬರು

ದಮ್ಮಿನ ಪ್ರಕಾರ ಬಹಳ ಇವೆ.

ಆದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮನಾಗಿ ಗುಣಕಾರಿಯಾಗದು. ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ನೂರಾರು ದಮ್ಮಿನವರಿಗೆ ಪುರೋಹಿತ ಶ್ವಾಸಹಾರಿಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ಕರದ್ದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢ ವಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು.

ಎಫೆಡ್ರೀನಿನ ಗುಳಿಗೆ ಹೊಗೆಯ ಔಷಧ ಇಂಜೆಕ್ಷನ್‌ಗಳಂಥ ದಮ್ಮು ತಾತ್ಪೂರ್ತಿಕ ನಿಲ್ಲಿಸುವ ಸುಮ್ಮಳ ಔಷಧಗಳು ನನಗೆ ಗೊತ್ತಿದ್ದು, ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ. ಕಡೆಗೆ ಶ್ವಾಸವಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು. ಅವರೆಲ್ಲರಿಗೆ ದಮ್ಮನ್ನು ನಿಧಾನ ಆದರೂ ಪೂರ್ಣ ಗುಣಮಾಡುವಂಥ ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು. ದಮ್ಮು, ಕಂಠದಾಹ ಮಾಡುವ ಹಳೇ ಕೆಮ್ಮು, ಕೋಡಗಕೆಮ್ಮು, ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ ಪುರೋಹಿತ ಶ್ವಾಸಹಾರಿ ಜ್ಞೇನ ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು. ಅಲ್ಲದೆ, ಆಮ್ಲ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಂಪೌಂಡ (ಕೆಂಪು ಪೇಕಿಂಗ್) ದ ಶಿಫಾರಸು ಮಾಡುವೆನು.

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂಪಾಯ 2, ರೂ. 3-8-0 ಮತ್ತು ರೂ. 6 ಬೆಲೆಯ ಸಣ್ಣ, ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು.

ಮುಂಬೈ ಏಜಂಟ್ಸ—

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ 2.

ಡಾ। ಪುರೋಹಿತ ಫಾರ್ಮೆಸಿ,

ಕೊಲ್ಹಾಪುರ.

ಬೇಕಾದಷ್ಟು ನಾವೆ ಕಟ್ಟಿಸಬಹುದು ಎಂದೇ ಜಾಪಾನಿನ ಮಾತು.

o o o

ಭೂಮಧ್ಯ ಸಮುದ್ರದ ಕಡೆಯಿಂದ ಈಚೆಗೆ ಯುದ್ಧಸನ್ನಾಹ ಪ್ರಾರಂಭವಾಗುವಂತಾಯಿತು ಬ್ರಿಟನ್ನಿನ ಹಡಗುಗಳು ಬರೀ ಕಸರತ್ತಿಗಾಗಿ ಭೂಮಧ್ಯ ಸಮುದ್ರದ ಮಕಾರಕ್ಕೆ ಬರುವುವು!

o o o

'ಕಾಂಗ್ರೆಸ್ಸಿಗೆ ವಿರುದ್ಧವಾಗಿರುವ ಪಕ್ಷದವರೆಲ್ಲ ಒಟ್ಟಾಗಿ, ಬಹಳ ಹೇಚಾಡಿ ನಾನಾ ಹೆಸರುಳ್ಳ ಪಕ್ಷದವರೆಂದು ತೋರಿಸಿಕೊಂಡು, ಸ್ವತಂತ್ರ ಪ್ರತಿನಿಧಿಗಳಾಗ ತೊಡಗಿದ್ದಾರೆಂದು', ಪತ್ರಿಕೆಯೊಂದು ಬರೆದಿದೆ. ಒಕ್ಕಟ್ಟಿನಲ್ಲಿ ಬಲವಿದೆ ಎಂಬುದನ್ನು ಇವರು ನಂಬಿರುವರು. ಎಂತಹ ಒಕ್ಕಟ್ಟಿನಲ್ಲಿ ಎಂಬುದನ್ನು ತಿಳಿಯುವರು

o o o

'ನನ್ನನ್ನು ಚುನಾಯಿಸಿದರೆ, ನಿಮಗೆಲ್ಲ ಭಾವಿಗಳನ್ನು ಕಟ್ಟಿಸಿಕೊಡುತ್ತೇನೆ' ಎಂದು ವಾಗ್ದಾನ ಮಾಡುವ ಉಮೇದ್ವಾರರೊಬ್ಬರು ಅಸ್ಸಾಮಿನಲ್ಲಿ ಸಂಚರಿಸಿ, ಮತದಾರರಿಗೆ ಭಾಷಣಕೊಡುತ್ತಿದ್ದಾರೆ. 'ನನ್ನವರನ್ನು ಚುನಾಯಿಸಿದರೆ, ಈಗ ವೇಷಭೂಷಣ ಧರಿಸಿರುವವರನ್ನೆಲ್ಲ ಲಂಗೋಟಿ ಉಡುವಂತೆ ಮಾಡುತ್ತೇನೆ' ಎಂದು ಒಬ್ಬ ಉಮೇದ್ವಾರರ ಕಡೆಯ ಹಂಗಿಕರು ಹೇಳುತ್ತಿದ್ದರೆ ಹೇಗಾದೀತು? ಹಾಗೆಯೆ ಇದು.

'ಓವಲ್‌ಟಿನ್' ಪುಷ್ಟವಾದ ದೇಹವನ್ನೂ ಚಟುವಟಿಕೆವುಳ್ಳ ಮನಸ್ಸನ್ನೂ ಉಂಟು ಮಾಡುತ್ತದೆ

ಮಲಗುವ ವೇಳೆಯಲ್ಲಿಯೂ, ಊಟದ ಸಮಯದಲ್ಲೂ ಓವಲ್‌ಟಿನ್ನನ್ನು ನಿಮ್ಮ ಮಕ್ಕಳ ದಿನನಿತ್ಯದ ಪಾನೀಯವನ್ನಾಗಿ ಮಾಡಿದರೆ ಗಟ್ಟಿ ಮತ್ತು ಆರೋಗ್ಯವುಳ್ಳ ದೇಹವನ್ನೂ, ನರಗಳನ್ನೂ ಮತ್ತು ಚುರುಕಾದ ಮಾನಸಿಕ ಶಕ್ತಿಯನ್ನೂ ಬೆಳೆಸಲಿಕ್ಕೆ ಬೇಕಾಗುವ ಪೌಷ್ಟಿಕ ಪದಾರ್ಥಗಳು ಇದರಿಂದ ದೊರೆಯುತ್ತದೆಂದು ಖಂಡಿತವಾದ ಮಾತು.

ಶ್ರೇಷ್ಠವಾದ ಪಕ್ವ ಬಾರ್ಲಿ ಸತ್ವದಿಂದಲೂ, ಹಸಿಯಾದ ದನದ ಕೆನೆಹಾಲಿನಿಂದಲೂ ಶಾಸ್ತ್ರೀಯವಾಗಿ ತಯಾರುಮಾಡಲ್ಪಟ್ಟದ್ದರಿಂದ 'ಓವಲ್ಟಿನ್' ಕಮ್ಮಿ ವೆಚ್ಚದಲ್ಲಿ ಹೆಚ್ಚಿನ ಆರೋಗ್ಯ ಪುಷ್ಟಿಯನ್ನು ಕೊಡುತ್ತದೆ. ನೀವು ಕೊಂಡುಕೊಳ್ಳಬಹುದಾದ ಆಹಾರಗಳಲ್ಲೆಲ್ಲಾ ಇದು ಸರ್ವಶ್ರೇಷ್ಠವಾದ ಏಕಮಾತ್ರ ಆಹಾರವಾಗಿರುತ್ತದೆ.

ಶ್ರೇಷ್ಠತೆಯಲ್ಲಿಯೂ ಬೆಲೆಯಲ್ಲಿಯೂ ಓವಲ್ಟಿನ್ ಏಕಮಾತ್ರವಾಗಿ ನಿಲ್ಲುತ್ತದೆ. ಆದರೆ ಮನೆಯಲ್ಲಿ ಉಪಯೋಗಿಸುವ ಸಕ್ಕರೆಯಂತೆಯಂತಹ ಅಗ್ಗವಾದ ವಸ್ತುಗಳು ಓವಲ್ಟಿನ್‌ನಲ್ಲಿಲ್ಲ. ನಿಮ್ಮ ಮಕ್ಕಳ ಆರೋಗ್ಯಹಿತಕ್ಕಾಗಿ ಓವಲ್ಟಿನ್ನನ್ನೇ ಉಪಯೋಗಿಸಿರಿ. ನಕಲಿಗಳಿಗೆ ಮೋಸಹೋಗದಿರಿ

OVALTINE

'ಓವಲ್‌ಟಿನ್' ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ.

ಏಜಂಟ್ಸ್:— ಜೇಮ್ಸ್ ರೈಟ್, ೩೩೧ ಲಿಂಡನ್ ಸ್ಟ್ರೀಟ್, ಕಲ್ಕತ್ತಾ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ.

OV/433

o o o

'ತೆಂಗಿನ ಮರದ ಮೇಲೆಯೆ ಹತ್ತಿಕೊಂಡಿದ್ದು ಅವರಿವರ ಜಾತಿಗಳನ್ನು ದೂರುತ್ತ, ಹೇಗೂ ತನ್ನವರಿಗೆ ವೋಟು ಒದಗಿಸಿಕೊಳ್ಳಬೇಕೆಂದು ಒಬ್ಬ ಉಮೇದ್ವಾರರ ಪಕ್ಷವಾಗಿ ಭಾಷಣ ಮಾಡುವವರಿದ್ದಾರೆ. ಚುನಾವಣೆ ಎಂತೂ ಆಗದು; ವೋಟುಗಳು ಇಂತಹರಿಗೆ ಎಂದೂ ದೊರೆವ ಹಾಗಿಲ್ಲ; ಆದರೂ ಜಾತಿಗಳೊಳಗೆ ಇನ್ನಷ್ಟು ವೈಷಮ್ಯವನ್ನು ಉಂಟುಮಾಡಿ ಊರಿನ ಹಿತವನ್ನ ಕೆಡಿಸುವ ಇವರಿಗೆ ಇನ್ನೂ ಬಿರುದುಗಳು ಫೆಬ್ರವರಿಯಲ್ಲಾದರೂ ಸಿಗುವುದುಂಟೇ'

'ಇವರ ಭಾಷಣವು ಅಷ್ಟು ಶಾಂತಿಮಯವಾಗಿದ್ದು, ಜನರಲ್ಲಿ ವಿರಕ್ತಿಯುಂಟಾದೀತೆಂದು ಮಾತ್ರ, ಇವರು ತೆಂಗಿನಮರ ಹತ್ತಿಕೊಂಡೇ ಮಾತಾಡುತ್ತಾರೆ ಹೊರತು ನೆಲದ ಮೇಲೆ ಇನ್ನೂ ನಿಲ್ಲುವುದಿಲ್ಲ' ಎಂದೂ ಹಿಂದೂಸ್ಥಾನ ಟೈಮ್ಸಿನ ಮಾತು.

ಮಹಾಶಕ್ತಿಯುತ ಕಾಂಗ್ರೆಸನ್ನು ತನ್ನ ಬಗಲಿಗೆ ತಂದ ಫೈಜಪುರದ ಮಹಿಮೆ!

ರಾಷ್ಟ್ರಸೇವೆಯಲ್ಲಿ ಅದರ ಭಾಗ

ಇಷ್ಟರ ವರೆಗೆ ರಾಷ್ಟ್ರಸಭೆಯು ತನ್ನ ಅಧಿವೇಶನಗಳನ್ನು ನಗರಗಳಲ್ಲಿಯೇ ಸೇರಿಸಿದ್ದುದರಿಂದ ಬಹುಸಂಖ್ಯಾಕ ಹಳ್ಳಿಗರಿಗೆ ಅದರ ಸುವಾರ್ತೆಯು ಸರಿಯಾಗಿ ತಿಳಿಯಲನುಕೂಲವಾಗಿರಲಿಲ್ಲ ಗ್ರಾಮ ಜೀವನವನ್ನು ಉದ್ಧರಿಸ ಹೊರಟ ಮಹಾತ್ಮರು ಹಳ್ಳಿಗರೊಂದಿಗೆ ಕಾಂಗ್ರೆಸ್ಸಿನ ಮಿಳನವು ಅಗತ್ಯವೆಂದು ಬೋಧಿಸಿ ಈ ಸರ್ತಿಯ ಅಧಿವೇಶನವು ಹಳ್ಳಿಯಲ್ಲಿಯೇ ಜರುಗಲೇರ್ಪಡಿಸಿದರು. ಕಾಂಗ್ರೆಸ್ಸು ಮಹಾತ್ಮರ ವಚನಗಳನ್ನು ಮನ್ನಿಸಿತು ಕೂಡಲೇ ಮಹಾತ್ಮರು ಫೈಜಪುರವನ್ನು ಈ ಸಲದ ಕೇಂದ್ರವಾಗಿ ನಿಯಮಿಸಿದರು ಅಲ್ಲಿಂದ ಕಾರ್ಯಕ್ಕಾರಂಭ

ಮಹಾತ್ಮರು ಫೈಜಪುರವನ್ನು ಪ್ರತ್ಯೇಕವಾಗಿ ಸೂಚಿಸಲು ಒಂದು ಕಾರಣವಿರುವುದು ಕಾನೂನು ನಿರೋಧ ಚಳವಳದ ಸಮಯ ಫೈಜಪುರದಲ್ಲಿ ಒಂದು ಚಿಕ್ಕ ಘಟನೆಯು ನಡೆಯಿತು ಹದಿನಾರು ವರುಷಗಳಿಂದ ಬ್ರಿಟಿಷ ಸರಕಾರದ ಪೋಲೀಸ ಖಾತೆಯ ಸಬ್ ಇನ್ಸಪೆಕ್ಟರಾಗಿದ್ದ ಶ್ರೀ| ದಾಂಚಿ ನಾನಾ ಚೌಧ್ರಿ ಎಂಬ ದೇಶಭಕ್ತರು, ದೇಶಬಾಂಧವರ ಮೊರೆಯನ್ನು ಹಿಂಬಾಲಿಸಿದರು ಕೆಲಸಕ್ಕೆ ರಾಜಿನಾಮೆ ಇತ್ತು ಅವರು ಪತ್ನಿ ಸಮೇತರಾಗಿ ದೇಶಸೇವೆಯ ಕರ್ತವ್ಯವನ್ನು ನೆರವೇರಿಸಿದರು ಕೆಲವೇ ನೂರ ಮಂದಿಗಳಷ್ಟು ಜನಸಂಖ್ಯೆಯುಳ್ಳ ಫೈಜಪುರದಂತ ಒಂದು ಹಳ್ಳಿಯಿಂದ ಇತರ ಎಂಬತ್ತು ಮಂದಿಗಳು ಶ್ರೀ ಚೌಧ್ರಿಯವರಂತೆ ಜೈಲು ಹಾದಿಯನ್ನು ಹಿಡಿದುದು ಕಾಂಗ್ರೆಸ ಚರಿತ್ರೆಯಲ್ಲಿ ಒಂದು ಅಪೂರ್ವ ಘಟನೆಯೆಂದೇ ಹೇಳಬೇಕು ಈ ಪ್ರಚಂಡ ಬಲಿದಾನದ ಮಹಿಮೆಯು ಮಹಾತ್ಮರ ಮನಸ್ಸನ್ನು ಕರಗಿಸಿತು, ಕರುಗಿಸಿತು, ಅಂತೆಯೇ ಮಹಾತ್ಮರು ಆ ಮಹಿಮೆಯನ್ನರಿಂದ ಪ್ರೇರಕರಾಗಿ ಬೀರಿದರು ಕಾಂಗ್ರೆಸು ಫೈಜಪುರದ ಬಾಗಿಲನ್ನು ಹುಡುಕಿ ಬರುವಂತೆ ಮಾಡಿದ ಮಹಾತ್ಮನೇ ನೀನು ಧನ್ಯನು.

ಫೈಜಪುರ-ಬಿರುದು ನಗರಿ

ಸ್ವಯಂಸೇವಕರ ಫೈಜಪುರದ ಶಿಬಿರ ರಚನೆಗಾಗಿ ಟೊಂಕಕಟ್ಟಿದೊಡನೆ ಅನೇಕ ತೊಂದರೆಗಳನ್ನು ಅವರು ಎದುರಿಸಬೇಕಾಯಿತು. ಸ್ವಂತ ಸ್ನೇಹಿತರುಗಳಿಂದ ಟೀಕೆ, ಹಾಸ್ಯ, ನಿರುತ್ಸಾಹ ಜೊತೆಗೆ ಕಷ್ಟತರವಾದ ಪ್ರಕೃತಿರಚನೆ ಇವಿಷ್ಟನ್ನು ಮೌನದಿಂದ ಸಹಿಸಿ ಅತಿರು ಬಿದಿರು ನಗರ ರಚನೆಯನ್ನು ಸಕಾಲದಲಿ ಮುಗಿಸಿದರು ಅಸಾಧ್ಯವಾದುದೆಂದೆಣಿಸಿದನ್ನು ಸಾಧ್ಯವಾಗಿಯೆ ಆಶ್ಚರ್ಯರೂಪವಾಗಿ ತೋರಿಸಿದ ಆ ತರುಣ ಧೀರರ ಸಾಹಸವೇ ಸಾಹಸ ಇಂಥವರಿಂದಲ್ಲವೇ ದೇಶೋದ್ಧಾರವಾಗಬೇಕು

ಸ್ವಯಂಸೇವಕರಲ್ಲಿ ಸ್ಥಾನಮಾನಭೇಧಾಬೇಧವಿಲ್ಲ, ಜಾತಿಮತ ಬೇಧಗಳಿಲ್ಲ ಎಲ್ಲರೂ ಏಕಮನಸ್ಸಿನಿಂದ ಆ ತಿಲಕನಗರದ ರಚನೆಗಾಗಿ ದುಡಿದಿರುವರು ಅಲ್ಲಿ ಮಾಡಿದ್ದ ಸರಳ ಏರ್ಪಾಡುಗಳು ವಿಸ್ಮಯವನ್ನುಂಟುಮಾಡುತ್ತಿದೆ ಡಾಕ್ಟರರೂ, ವಕೀಲರೂ ಬ್ರಾಹ್ಮಣರಾಗಿದ್ದರೂ ಸ್ವಯಂಸೇವಕರಾಗಿ ಬಂದು, ತೋಟಿ ಕೆಲಸವನ್ನು ಕೂಡಾ ಮಾಡಿರುತ್ತಾರೆ ದೇಶಸೇವೆಯ ಪ್ರಚಂಡ ಉತ್ಸಾಹವನ್ನು ಕಂಡ ಮಹಾತ್ಮರು ಬಹಳ ಸ್ಫೂರ್ತಿದಾಯಕವಾಗಿ ಅವರನ್ನು ಕೊಂಡಾಡಿದರು

ಕಾಂಗ್ರೆಸ್ ಯಾತ್ರೆ

ಸುತ್ತುಮುತ್ತಲಿನ ಹಳ್ಳಿಗರಿಗೆ ಫೈಜಪುರವು ಒಂದು ಯಾತ್ರೆ ಸ್ಥಳವಾಯಿತು ತಮ್ಮ ಸಂಕಷ್ಟಗಳನ್ನು ಸಾರುಗಾಣಿಸಲಿಕ್ಕೆ ಟೊಂಕಕಟ್ಟಿದ ಕಾಂಗ್ರೆಸಿಗೆ ತಮ್ಮ ಕೃತಜ್ಞತೆಯನ್ನು ಅರ್ಪಿಸಲಿಕ್ಕೆಂದು ಹಳ್ಳಿಗರು ಬಹಳವಾಗಿ ಸ್ಫೂರ್ತಿಗೊಂಡಿದ್ದು ತಂಡ ತಂಡಗಳಲ್ಲಿ ಕಾಂಗ್ರೆಸ್ ಮುಖಂಡರ ದರ್ಶನಕ್ಕಾಗಿಯೂ, ಕಾಂಗ್ರೆಸ್ ಯಾತ್ರೆಯಲ್ಲಿ ಭಾಗವಹಿಸುವುದಕ್ಕಾಗಿಯೂ ಬಂದಿದ್ದರು

ಧ್ವಿಧ್ವಜಗಳು

ಅಲ್ಲೊಂದು ತಮಾಷೆ ನಡೆಯಿತು ಕಾಂಗ್ರೆಸ್ ಶಿಬಿರಕ್ಕೆ ಸ್ವಲ್ಪ ಮುಂದೆ ಬಂದು ಬಟ್ಟೆ ಗುಡಾರವಿತ್ತು, ಬ್ರಿಟಿಷ್ ಧ್ವಜವು ಅದರ ಮೇಲ್ಗಡೆ ಡೌಲಿನಿಂದ ಹಾರುತ್ತಿತ್ತು ತಿಲಕ್ ನಗರಕ್ಕೆ ಬರುವ ಜನರು ಅದನ್ನು ಕಂಡೊಡನೇ ಆಶ್ಚರ್ಯಚಕಿತರಾಗಿ ಈ ಧ್ವಜವು ಅಲ್ಲಿ ಹೇಗೆ ಬಂತೆಂದು ತಿಳಿಯುದಾದರು ಆದರೆ ದೂರದಲ್ಲಿಯೇ ಬ್ರಿಟಿಷ್ ಧ್ವಜವನ್ನು ಮೀರಿಸಿ 150 ಅಡಿಗಳಧ್ವಜಸ್ಥಂಭದ ಮೇಲೆ,ರಾಷ್ಟ್ರಸ್ವಾತಂತ್ರ್ಯ, ಪವಿತ್ರತೆ, ಬಲಿದಾನದ ಕುರುಹುಗಳಿಂದೊಡಗೂಡಿದ ರಾಷ್ಟ್ರ ಬಾವುಟವನ್ನು ಕಂಡೊಡನೆ ಜನರು ಒಡನೆ ಸ್ಫೂರ್ತಿಗೊಂಡವರಾಗಿ ತಮ್ಮ ಗುರಿ ಅಲ್ಲಿರುವುದೆಂದು ಆ ಕಡೆಗೆ ಧಾವಿಸುತ್ತಿದ್ದರು.

ದೇವತೆಗಳ ದೃಶ್ಯ

ಮಾನವನ ಉಜ್ವಲ ಕಲಾ ವರ್ಚಸ್ಸಿನಿಂದ ರಚಿಸಲ್ಪಟ್ಟ ಬಿದಿರು ನಗರವಾಗಿ ಫೈಜಪುರವು ಪ್ರತ್ಯೇಕ ಸ್ವರ್ಗದಂತೆ ಕಂಗೊಳಿಸುತ್ತಿತ್ತು ದೇಶ ಸೇವಕ ಸೇವಕಿಯರ ಅವಿಶ್ರಾಂತ ಶ್ರಮ ನಿರ್ಮಲವಾದ ಭ್ರಾತೃತ್ವ ಕೋಟಿಗಳ ಕಟಿ ಒಬ್ಬ ಬ್ರಾಹ್ಮಣ ಪ್ರೊಫೆಸರ ಅದರ ಮುಂದಾಳುಗಳು ನೂರಾರು ಹಳ್ಳಿ ಹೆಂಗಸರಿಂದ ಸಹಕರಿಸಲ್ಪಟ್ಟ ಅದಿಗೆ ಮನೆ ಎಲ್ಲವೂ ಕಾಂಗ್ರೆಸಿನ ಮಹಿಮೆಯನ್ನು ಒಟ್ಟುಗೂಡಿದ್ದರು ಅವರ ಮಿಳನ ದರ್ಶನವು ಮಿಲಿಯಾನಧಿ ಅಲ್ಲಿ ಹೊಟ್ಟೆಗಳನ್ನು ತಣ್ಣಗೆ ಮಾಡಿದೆ ತಮ್ಮ ಬ ಧನವನ್ನ ನ ಹ'ಸಿ. ಅವತಾರವೆತ್ತಿದ ಮೂರ್ತಿಗಳೇ ತಮ್ಮೆದುರಿನಲ್ಲಿ ನಿಂತಂತೆ ಅವರಿಗೆ ಕಂಗೊಳಿಸಿತು ... ಳು ಗಳಾದರೂ ತಾವು ಉದ್ಧರಿಸಲೆಳಸ ಬಂಧುಗಳನ್ನು ನೋಡಿ ಮರ ಕಗೆ ತವ ಅದು ಅವರ ಭಾಷಣಗಳಿಂದ ವ್ಯಕ್ತವಾಗುತ್ತ

ರಾಷ್ಟ್ರಪತಿ ನೆಹರೂರವರು ಶಬ್ದಗ್ರಾಹಕದ ಎದುರು ನಿಂತು ಭಾಷಣ ಮಾಡುತ್ತಿರುವ ದೃಶ್ಯ

ಫೈಜಪುರವು ತಿಲಕನಗರ ಮಾತ್ರವಲ್ಲದೆ ಶ್ರೇಷ್ಠ ತಿಳುವಳಿಕೆಯ ನಗರವೂ ಆಗಿತ್ತು ಪರಸ್ಪರ ಸೇವೆಯ ಉತ್ಸಾಹವು ಆ ಫೈಜಪುರದಲ್ಲಿ ಕಾಣಬಹುದಿತ್ತು ಈ ಮೇಲಿನ ಚಿತ್ರವು ಬ್ರಾಹ್ಮಣ ಯುವಕ ಸ್ವಯಂಸೇವಕರ ತಂಡವೊಂದು, ಒಬ್ಬ ಬ್ರಾಹ್ಮಣ ಪ್ರೊಫೆಸರರಿಂದ ನಡೆಸಲ್ಪಟ್ಟು, ತೋಟಿ ಕೆಲಸಕ್ಕೆ ಹೊರಟಾಗ ತೆಗೆದ ಚಿತ್ರ ಇದನ್ನಾದರೂ ಸನಾತನಿಗಳ (ಪೂತನಿ ಎಂಬಂತೆ) ತಮ್ಮ ಕ್ರೂರ ಹೃದಯವನ್ನು ಕರಗಿಸಬಾರದೆ?

ಬೀರುವಂತವುಗಳೇ ಒಂದೇ ಸಲಕ್ಕೆ ೨೫,೦೦೦ ಜನರನ್ನು ಊಟೋಪಚಾರಗಳಿಂದ ಸತ್ಕರಿಸಲೆನುಕೂಲವುಳ್ಳ ವಿಶಾಲ ಮೈದಾನು ಭೂಮಿಯಲ್ಲಿ ಒಂದೇ ಸಲಕ್ಕೆ ಅಷ್ಟು ಜನರನ್ನು ತೃಪ್ತಿಗೊಳಿಸುವುದೆಂದರೆ ವ್ಯವಸ್ಥೆಯ ಶ್ರೇಷ್ಠತೆಯು ಎಷ್ಟರ ಮಟ್ಟಿಗಿರಬೇಕೆಂದು ವಾಚಕರೇ ಊಹಿಸಿಕೊಳ್ಳಬೇಕು. ಇಷ್ಟನ್ನೆಲ್ಲಾ ಮಾಡಲು ಸಾಮರ್ಥ್ಯವುಳ್ಳ ಕಾಂಗ್ರೆಸು ಇನ್ನು ಏನನ್ನೂ ಮಾಡಬಹುದೆಂಬ ಭರವಸೆಯು ಜನರಲ್ಲಿ ಖಂಡಿತವಾಗಿಯೂ ಉಂಟಾದಿಗರದು

ಕೊಂಗ್ರೆಸಿನ ಮಹಾ ಮುಖಂಡರು

ಕಾಂಗ್ರೆಸ್ ನಾವೆಯ ಚುಕ್ಕಾಣಿಯನ್ನು ಹಿಡಕೊಂಡು,ರಾಜಕೀಯವೆಂಬಮಹಾ ಭಯಂಕರ ವಾತಾವರಣವುಳ್ಳ ಸಾಗರವನ್ನು ದಾಟಿ ಸ್ವಾತಂತ್ರ್ಯವೆಂಬ ದಡವನ್ನು ಸೇರಲು ಸರ್ವ ಶಕ್ತಿಗಳನ್ನೂ ಪ್ರಯೋಗಿಸುವ ಕಾಂಗ್ರೆಸ್ ಮಹಾ ಮುಖಂಡರೆಲ್ಲರೂ ಫೈಜಪುರದಲ್ಲಿ

ಮಹಾತ್ಮರ ಉಜ್ವಲ ಉದ್ಗಾರ

ಗ್ರಾಮ ಕೈಗಾರಿಕೆ ಮತ್ತು ಖಾದಿ ಪ್ರದರ್ಶನ ಸಮಯದಲ್ಲಿ ಮಹಾತ್ಮರು, ನೆರೆದ ಪ್ರಚಂಡ ಜನಸ್ತೋಮವನ್ನುದ್ದೇಶಿಸಿ ಅತ್ಯುಜ್ವಲವಾದ ಭಾಷಣ ಮಾಡಿದರು ಭಾಷಣ ಚರಿತ್ರೆಯಲ್ಲಿ ಅದೊಂದು ಉತ್ಕೃಷ್ಟಸ್ಥಾನವನ್ನು ಪಡೆಯುವ ಭಾಷಣವಾಗಿದ್ದು, ಜನಸ್ತೋಮವನ್ನು ಒಮ್ಮೆ ನಗುವಂತೆಯೂ, ಮತ್ತೊಮ್ಮೆ ಮರುಗುವಂತೆಯೂ ಮಾಡಿತು ಇಷ್ಟುತ್ತಾರೆ. ತಿಂಗಳಿಂದ ರಾಜಕೀಯಗಳಿಂದ ದೂರವಿದ್ದ ಮಹಾತ್ಮರು ಪುನಃ ಅದನ್ನು ಎತ್ತಿ ಹಿಡಿದಂತೆ ತೋರುತ್ತಿದ್ದರು "ಸಮಯ ಬಂದಲ್ಲಿ ನಾನು ನಾಸಿ ಕಂಭದಲ್ಲಿಯಾದರೂ ಸಾಯಲು ಸಿದ್ಧನಿರುವೆನು. ನಾನೀಗ ಮರಣಶಯ್ಯೆಯಲ್ಲಿದ್ದೇನೆಂದು ತಿಳಿಯಬೇಡಿ ಇನ್ನೊಂದು ವರ್ಷದಲ್ಲಿ ಅನೇಕ ಘಟನೆಗಳಾಗಲಿರುವುವು-ತಿಳಿದಿರಲಿ" ಎಂದು ಪ್ರವಾಧವನ್ನು ನುಡಿದರು, ಮಹಾತ್ಮರ ಈ ವಚನಗಳು ಬಹಳ ಅರ್ಥಗರ್ಭಿತವೂ ತಲ್ಲಣಗೊಳಿಸುವಂತವುಗಳೂ ಆಗಿದ್ದು ಸಭಿಕರನ್ನು ಗೊಂದಲಿಕ್ಕೀಡು ಮಾಡಿದುವು

ಮಹಾತ್ಮರು ಕ್ರಾಂತಿಕಾರರೇ?

ಮೊದಲನೇ ಸಲಕ್ಕೆ ವ್ಯಾಸರಾಯರ ಕುರಿತು ಮಾತನಾಡುತ್ತಾ ಮಹಾತ್ಮರು ಹೀಗೆಂದರು —೩೫ ಕೋಟಿ ಜನಸಂಖ್ಯೆಯುಳ್ಳ ಭಾರತೀಯರಿಗೆ ಒಟ್ಟಾಗಿ ನಿಂತು, ಕೆಲವೇ ಲಕ್ಷ ಬ್ರಿಟಿಷರ ಮೇಲೆ ಕೆಲವು ಕಲ್ಲುಗಳನ್ನೆಸೆಯುವುದು ಕಷ್ಟಸಾಧ್ಯವಲ್ಲ ಆದರೆ ಅದ ನಮ್ಮ ಮನಸ್ಸಿನಲ್ಲಿಲ್ಲ ಆ ರೀತಿಯ ... ಸಾಯಲ್ಲ ದೇವರ ಅದನ್ನು ಮೆಚ್ಚರು" ಮುಂದುವರಿಸುತ್ತಾ ಮಹಾತ್ಮರು "ಈ ಮಾತುಗಳನ್ನು ನಾನೇನ ಮುಚ್ಚಿದ ಮನೆಯೊಳಗೆ ಕೂತು ಹೇಳುವುದಿಲ್ಲ ಬಹಿರಂಗವಾದ ಸ್ಥಳದಲ್ಲಿ, ಅನೇಕ ಪತ್ರಿಕಾ ಪ್ರತಿನಿಧಿಗಳೆದುರಿನಲ್ಲಿ ಕೂತು ಹೇಳುತ್ತಿದ್ದೇನೆ" ಎಂದರು ಒಂದು ವೇಳೆ ಇವು ಸರಕಾರದವರಿಗೆ ಜನತೆಯ ಶಕ್ತಿಯ ಕುರಿತಾಗಿ ಮಹಾತ್ಮರು ಎಚ್ಚರಿಕೆ ರೂಪದಲ್ಲಿ ಹೇಳಿದ ಮಾತುಗಳೇ? ಎಂದು ಕೆಲವು ಆಂಗ್ಲೊ ಇಂಡಿ ಪತ್ರಿಕೋದ್ಯೋಗಿಗಳು ತರ್ಕಿಸಿದರು ಆದರೆ ಆ ಮಾತುಗಳು ಮಹಾತ್ಮರ ಶಾಂತಿಪ್ರಿಯತೆಯನ್ನೂ, ಉದಾರ ಮನಸ್ಸನ್ನೂ ವ್ಯಕ್ತಗೊಳಿಸುತ್ತವೆ

ಕಾಂಗ್ರೆಸ್ ಅಧಿವೇಶನ.

ವರ್ಣನಾತೀತವಾದ ಉತ್ಸಾಹದೊಡನೆ ಅಧಿವೇಶನವು ಸಾಯಂಕಾಲ 4—80 ಘಂಟೆಗೆ ಪ್ರಾರಂಭವಾಯಿತು. ಅಧ್ಯಕ್ಷರ ಮೆರವಣಿಗೆ, ಗಾಂಧಿ ದಂಪತಿಗಳ ಆಗಮನ, ಇವುಗಳು ಸಭೆಯ ಆತುರವನ್ನು ಹೆಚ್ಚಿಸಿತು ಸನ್ಮಾನ್ಯ ಮದನಮೋಹನ ಮಾಲವೀಯರು ಗಾಂಧೀಜಿಯವರನ್ನು ಗದ್ದುಗೆಗೇರಲು ಕೈಕೊಟ್ಟು ಮೇಲೇರಿಸಿದ ಆ ದೃಶ್ಯವು ಅನೇಕರಲ್ಲಿ ಕಣ್ಣೀರಿಳಿಸಿತಂತೆ ಮಹಾತ್ಮರಿಗೆ ... ಮಿಕರೂ, ಹಿತ್ತಾಣರೂ ಆಗಿದ್ದ ಮಾಲವೀಯಾಜಿಯವರು ಅದನ್ನು ಗಣಿಸದೆ ತನ್ನ ಸಹೋದ್ಯೋಗಿಗೆ ಪ್ರೇಮಪೂರ್ವಕ ಮಾಡಿದ ಸಹಾಯವು ಚಿಕ್ಕದಾದರೂ ಬಹಳ ಅಭಿವಂದನೀಯವಾಗಿತ್ತು ರಾಷ್ಟ್ರಪತಿಗಳು ಅಧ್ಯಕ್ಷ ಪೀಠವನ್ನೇರಿದರು, ಮುಸ್ಸಂಜೆಯ ಕಿರಣಗಳು ಅವರ ಕಪೋಲಗಳನ್ನು ಬೆಳಗಿಸಿದವು, ಶಂಕರರಾವ್ ದೇವ್ ರವರು ಅಧ್ಯಕ್ಷಪದಕವನ್ನು ನೆಹರುಗಳಿಗೆ ತೊಡಿಸಿದರು., ಈ ದೃಶ್ಯಗಳನ್ನು ನೆರೆದ ತಂಡವು ಗಂಭೀರ ಮೌನದಿಂದ ನೋಡುತ್ತಿದ್ದಿತು

ಗ್ರಾಮ ಕೈಗಾರಿಕೆ ಪ್ರದರ್ಶನದಲ್ಲಿ ರಾಷ್ಟ್ರಪತಿಗಳು ತಮಗೆ ಬೇಕಾದ ಕೆಲವು ವಸ್ತುಗಳನ್ನು ಆರಿಸಿ ತೆಗೆಯುವ ದೃಶ್ಯ ಅವರ ಗಂಭೀರ ಭಾವವನ್ನು ಗಮನಿಸಿರಿ

ಮಹಾವ್ಯಕ್ತಿಗಳು

ಬಹಳ ಸಮಯದಿಂದ ತಿಲಕ ನಗರದ ಕಾಂಗ್ರೆಸ್ ಕಾರ್ಯಕಲಾಪಗಳ ಮೇಲೆ ಬೆಳಕನ್ನು ಸುರಿದು ದಣಿದ ಸೂರ್ಯದೇವನು ಪಶ್ಚಿಮದ ಗಗನದಲ್ಲಿ ಮರೆಯಾಗಲು ಧಾವಿಸುತ್ತಿದ್ದನು ದಿನವೆಲ್ಲಾ ಹಾರಾಡಿ ದಣಿದ ಹಕ್ಕಿ

(೧೩ನೇ ಪುಟಕ್ಕೆ ಮುಂದುವರಿದುದು)



ಭಯಂಕರ ವಿಷಕಾರಿ!

ಸರ್ಪದ ವಿಷವು ತಕ್ಷಣ ಮರಣವನ್ನುಂಟುಮಾಡುತ್ತದೆ. ದೌರ್ಬಲ್ಯವು ಅಷ್ಟೇ ಹಾನಿಕರವಾದದ್ದು. ಇದು ಕ್ರಮೇಣ ಮಾನುಷಿಕದೇಹ ನಿರ್ಮಾಣವನ್ನು ನುರಿಗೈಯ್ಯುತ್ತದೆ. ಸರ್ಪ ಕಡಿತಕ್ಕೆ ಯಾವ ಗುಣಕಾರಿಯೂ ಇಲ್ಲ. ಆದರೆ ಅದೃಷ್ಟವಶಾತ್ ದೌರ್ಬಲ್ಯತೆಗೆ ಒಂದೇ ಔಷಧಿ ಇದೆ. ಅದೇ

ಅಮೃತ

ಇದು ದೌರ್ಬಲ್ಯತೆಯನ್ನು ವ್ಯಾಧಿಗಳನ್ನು ದೂರಮಾಡಿ, ಉತ್ತಮ ದೇಹಶಕ್ತಿಯನ್ನೂ ಮಾನಸಿಕ ಶಕ್ತಿಯನ್ನೂ ಕೊಡುತ್ತದೆ

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ

ತಯಾರಿಸುವವರು — ಕೇಸರಿ ಕುಟೀರಂ, ಎಗ್ಮೋರ್, ಮದರಾಸು

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

S. C. No. 752/1936.

ಎಚ್. ಸೂರಪ್ಪಯ್ಯ—ವಾದಿ.

ಮತ್ತು

ಟಿ. ಮಾರಪ್ಪ ವಕ್ಕಳ, ತ್ಯಾಂಪ ವಕ್ಕಳರ ಮಗ ಮಂಗಳೂರು ಕೈಹಾರು ಹಂಪನಕಟ್ಟೆಯಲ್ಲಿ 'ಹೊಟೇಲ್ ಇಂಡಿಯಾನ್' ಇದರ ಪ್ರೊಪ್ರೈಟರ್ —ಪ್ರತಿವಾದಿ

ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ,—ವಾದಿಯು ಪ್ರತಿವಾದಿಯಿಂದ ಬರತಕ್ಕ ಕೈಪೇಟಿನಲ್ಲಿ ಕೇಳಿದ ರೂ 35—9—0 ವಗೈರೆಯನ್ನು ಬರಮಾಡಿಕೊಳ್ಳುವರೆ, ಮೇಲಿನ ದಾವೆಯನ್ನು ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ 18—1—1937ಕ್ಕೆ ಅಪ್ಪೈಸು ತನ್ನಿಗೆ ಇಟ್ಟದೆ. ಸದ್ರಿ ದಿವಸ ಪ್ರತಿವಾದಿಯು ಕೋರ್ಟಿನ ಮುಂದೆ ಹಾಜರಾಗದೆ ಇದ್ದರೆ ನಂಬ್ರವು ಆತನ ಗೈರುಹಾಜರಿಯಲ್ಲಿ ತೀರ್ಮಾನವಾದೀತು

ಮಂಗಳೂರು,
5-1-1937

H NARSAPAYA,
Vakil for Plaintiff

BEHAR CHEMICAL WORKS, BHAGALPUR

ಬಿ. ಸಿ. ರಸಾಯನಿಕ ವೈದ್ಯಶಾಲೆಯ ಚ್ಯವನ ಪ್ರಾಸ ಲೇಹ್ಯ.

ಮಾನವ ಶರೀರದ ಮೇಲೆ ಅತ್ಯಂತ ಉಪಯೋಗಕರವಾದ ಶಕ್ತಿವರ್ಧಕ ಹಾಗೂ ಮೇಧಾಶಕ್ತಿಯನ್ನು ಬೆಳೆಸುವ ಪೌಷ್ಟಿಕ ಸಾಧನ.

ಕೆಮ್ಮು, ನೆಗಡಿ, ಕೆಮ್ಮು ಗೂರಲು, ಸ್ವರಭಂಗ ಎನೆಯ ನೋವು, ಕ್ಷಯ ಇತ್ಯಾದಿ ರೋಗಗಳ ಮೇಲೆ ಈ ದಿವ್ಯೌಷಧಿಯು ವಿಶೇಷವಾಗಿ ಚ್ಯವನ ಋಷಿಗಳು ಇದರ ಗುಣವನ್ನು ಪ್ರತ್ಯಕ್ಷವಾಗಿ ಮನಗಂಡಿರುವುದರಿಂದಲೂ ನಮ್ಮಲ್ಲಿಯ ಕವಿ ರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಅದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಅಸಾಧಾರಣವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣಕಾರಿ ದಾಖಲೆಗಳನ್ನು ಪಡೆದಿರುವುದರಿಂದಲೂ, ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ, ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇಬೇಕು.

1 ತಿಂಗಳ ಉಪಯೋಗದ ಟಿನ್ 1ಕ್ಕೆ ರೂ 1 8 0

ಏಜೆಂಟರು — ಷಾ ಕಂಪೆನಿ,
ಗವರ್ನಮೆಂಟ್ ಕೊಲೆಜ್ ಎದುರು
ಮಂಗಳೂರು

TEST YOUR EYES

By the Electro Ophthalmoscope







All Varities of Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ.
ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ " ವರ್ಷಗಳ ಮೌಲ್ಯದೇತನದ ಫಲಿತಾಂಶವಾಗಿ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ ರೂಪಾಯಿ 10/-ರ ಬೋನಸ್ ಹಂಚಲಾಗಿದೆ.

ನಮ್ಮ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿ, ವ್ಯವಹಾರಕುಶಲರಾದ ಯೋಗ್ಯ ಏಜಂಟರು ಬೇಕು!

ಇವರಿಗೆ ಪ್ರತಿ ತಿಂಗಳಿಗೆ 30 ರೂಪ್ಯಾಗಳ ವೇತನವು ದೊರೆಯುವುದು

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ— ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ನಿಮಗೆ ಯಾರು ಬೇಕು?

ಕಾಂಗ್ರೆಸ್ ಪಕ್ಷವೋ? ಅಥವಾ ಜಸ್ಟಿಸ್ ಪಕ್ಷವೋ?

ಬರುವ ಫೆಬ್ರವರಿ ೧೮ ಮತ್ತು ೨೧ನೆಯ ತಾರೀಕುಗಳಲ್ಲಿ ಮದರಾಸು ಇಲಾಖೆಯ ಲೆಜಿಸ್ಲೇಟಿವ್ ಎಸೆಂಬ್ಲಿಗೆ ನಿಮ್ಮ ಪರವಾಗಿ ಹೋಗುವ ಪ್ರತಿನಿಧಿಗಳನ್ನು ಆರಿಸುವುದಿದ್ದೆ, ದೇಶದಲ್ಲಿ ಈಗ ಎರಡು ಪಕ್ಷಗಳು ಮಾತ್ರ ಇವೆ. ಹಿಂದೀ ಜನತೆಯ ಪರವಾಗಿ ಹಿಂದೀ ಜನತೆಯ ಹಿತಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ ಒಂದು ಕಡೆ; ಮತ್ತೊಂದು ಕಡೆ ಕಾಂಗ್ರೆಸ್ಸಿನ ವಿರುದ್ಧವಿರುವ ಜಸ್ಟಿಸ್ ಪಕ್ಷ ಇವೆರಡೇ ಮುಖ್ಯಮುಖ್ಯ ಪಕ್ಷಗಳು ನಿಮ್ಮೆದುರಿಗಿವೆ. ಇವೆರಡರಲ್ಲಿ ನಿಮಗೆ ಯಾವ ಪಕ್ಷ ಬೇಕು?

ನಿಮ್ಮ ಹಿತವಾಗಬೇಕಾದರೆ ನೀವು ಕಾಂಗ್ರೆಸ್ಸಿಗೆನೇ ಓಟು ಕೊಡುವುದು ನಿಮ್ಮ ಧರ್ಮ. ನಿಮ್ಮ ಅಹಿತವನ್ನು ನೀವೇ ಮಾಡಿಕೊಳ್ಳುವುದಾದರೆ ಕಾಂಗ್ರೆಸ್ಸಿನ ವಿರುದ್ಧ ನಿಂತಿರುವ ಅಥವಾ ತಮ್ಮ ತಮ್ಮ ಹಿತವನ್ನು ಮಾತ್ರ ನೋಡಿಕೊಳ್ಳುವ ಜಸ್ಟಿಸ್ ಪಕ್ಷಕ್ಕೆ ಕೊಡಿರಿ

ನಿಮ್ಮ ಹಿತಾಹಿತಗಳನ್ನು ನೋಡಿಕೊಳ್ಳುವುದು ನಿಮಗೇ ಸೇರಿದೆ. ಇದನ್ನು ನೆನಪಿನಲ್ಲಿಡಿರಿ.

ಬಡ ಜನರ ಸಲುವಾಗಿ ಕಾಂಗ್ರೆಸ್ಸು ಏನು ಮಾಡಲು ನಿಶ್ಚಯಿಸಿದೆ? ನಮ್ಮ ದೇಶ ಬಡ ರೈತರ ದೇಶ ರೈತರಿಗೆ ಮುಖ್ಯವಾಗಿ ಏನು ಬೇಕು? ಈ ಸಂಬಂಧವಾಗಿ ಕಾಂಗ್ರೆಸ್ ಏನು ಗೊತ್ತು ಮಾಡಿದೆ ಕಾಂಗ್ರೆಸ್ಸು ಕೌನ್ಸಿಲು ಮತ್ತು ಎಸೆಂಬ್ಲಿಗಳಲ್ಲಿ ಯಾವ ಕಾರ್ಯಕ್ರಮವನ್ನು ಕೈಕೊಳ್ಳುವುದೆಂಬ ಬಗ್ಗೆ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ತನ್ನ ಪ್ರಸಿದ್ಧ ಪತ್ರಿಕೆಯಲ್ಲಿ ಹೀಗೆಂದು ಹೇಳಿದೆ.–

'ರೈತರಿಗೆ ಸಂಬಂಧಪಟ್ಟ ಸಂಪೂರ್ಣ ಕಾರ್ಯಕ್ರಮವು ನಿಶ್ಚಿತವಾಗುವ ವರೆಗೆ ಕರಾಚಿಯಲ್ಲಿ ನಿರ್ಣಯಿಸಿರುವುದನ್ನೆ ಕಾಂಗ್ರೆಸ್ ಪುನಃ ದೃಢಪಡಿಸುತ್ತಿದೆ ಅವುಗಳಾವುವೆಂದರೆ ಭೂಕಂದಾಯ ಹಿಡುವಳಿ ಮತ್ತು ಗೇಣಿಯ ಪದ್ಧತಿಯನ್ನು ಸುಧಾರಿಸುವುದು, ಈಗ ಅವರು ಕೊಡುತ್ತಿರುವ ಗೇಣಿ ಮತ್ತು ತೀರ್ವೆಯಲ್ಲಿ ಬಹಳ ಮಟ್ಟಿಗೆ ಕಡಿಮೆ ಮಾಡುವುದರಿಂದಲೂ ಮತ್ತು ಲಾಭದಾಯಕವಿಲ್ಲದ ಹಿಡುವಳಿಗಳ ಮೇಲೆ ಹಾಕಿರುವ ಗೇಣಿ ಮತ್ತು ತೀರ್ವೆಯನ್ನು ಸಂಪೂರ್ಣವಾಗಿ ತೆಗೆದು ಹಾಕುವುದರ ಮೂಲಕವಾಗಿಯೂ ಸಣ್ಣ ಪುಟ್ಟ ರೈತರಿಗೆ ಒಡನೆಯೇ ಸಹಾಯವನ್ನು ಕೊಟ್ಟು ಭೂಸ್ವಾಮ್ಯದ ಮೇಲಿರುವ ಹೊರೆಯನ್ನು ಸರಿಸಮಾನಗೊಳಿಸುವುದು.

'ಮತ್ತೊಂದು ಮಹತ್ವ ಹಾಗೂ ತೀವ್ರವಾಗಿ ವಿಚಾರಣೆ ನಡೆಸಬೇಕಾಗಿರುವ ಸಮಸ್ಯೆಯೆಂದರೆ ರೈತರ ಸಾಲದ ಪ್ರಶ್ನೆ– ಸದ್ಯಕ್ಕೆ ಸಾಲದ ವಸೂಲಿಯ ತಹಕೂಬಿಯನ್ನು ಪ್ರಸಿದ್ಧಪಡಿಸಿ ಇದರ ಬಗ್ಗೆ ವಿಚಾರಣೆ ನಡಿಸಿ ಸಾಲದ ಹೊರೆಯನ್ನು ಕಡಮೆ ಮಾಡುವುದಲ್ಲದೆ ಸರಕಾರದಿಂದ ಸುಲಭ ಬಡ್ಡಿಯಿಂದ ಹಣಸಹಾಯ ಒದಗುವಂತೆ ಮಾಡುವುದು ಈ ಸಹಾಯವು ಗೇಣಿ ಹಿಡಿದಿರುವವರು ಸ್ವಂತ ಸಾಗುವಳಿದಾರರೂ ಮತ್ತು ಸಣ್ಣ ಪುಟ್ಟ ವ್ಯಾಪಾರಸ್ಥರೂ ಮೊದಲಾದವರಿಗೆ ದೊರೆಯುವಂತಾಗಬೇಕು.

ಅಂದ ಮೇಲೆ ವಿಶೇಷತಃ ಬಡ ರೈತರ ಸಂಬಂಧವಾಗಿ ಕಾಂಗ್ರೆಸ್ ಏನು ಮಾಡಲಿರುವುದು ಎಂಬುದು ಸ್ಪಷ್ಟವಾಗುವುದು. ಇಂತಹ ಸಣ್ಣ ಪುಟ್ಟ ಸೌಕರ್ಯಗಳನ್ನು ಒದಗಿಸಿಕೊಡಲು ಪ್ರಯತ್ನ ಮಾಡಬೇಕಾದರೆ ಕಾಂಗ್ರೆಸ್ಸಿನವರು ಹೆಚ್ಚು ಸಂಖ್ಯೆಯಲ್ಲಿ ಅಸೆಂಬ್ಲಿಗಳಿಗೆ ಹೋದರೆ ಮಾತ್ರ ಸಾಧ್ಯವಾದೀತು. ರೈತರು ತಮ್ಮ ಹಿತಗಳ ಕಡೆಗೆ ಹೆಚ್ಚು ಮನಸ್ಸು ಕೊಡುವುದಾದರೆ ಕಾಂಗ್ರೆಸಿಗೇ ಓಟು ಕೊಟ್ಟು ಅವರನ್ನೆ ಅಸೆಂಬ್ಲಿಗಳಿಗೆ ಕಳುಹಿಸಿ ಕೊಡುವುದರಿಂದ ಅಧೀತು.

ಚುರುಮುರಿ ಉಪ್ಕರಿ

ನೋಡಿ ಸ್ವಾಮಿ ಒಂದು ಕಡೆ ಜಸ್ಟಿಸ್ ಪಾರ್ಟಿಯವರ ಭಟರೊಬ್ಬರು ಚುನಾವಣೆ ಗೆಲ್ಲಲು ಕೋಟಿಗಟ್ಟಲೆ ರೂಪಾಯಿಯಾದರೂ ಖರ್ಚು ಮಾಡುತ್ತೇವೆ ಅಂದರಂತೆ ಒಂದು ಕೋಟಿ ಸರ್ತಿ ಹೇಳಿದ್ದಾಯಿತು ಸ್ವಾಮಿ ಅವರು ಖರ್ಚು ಮಾಡಿದ್ದು ಕಾಣುವುದಿಲ್ಲ ಬಹುಶಃ ಈಗ "ಅವರಿಗೆ ಖರ್ಚು ಮಾಡಿಯೂ ಗೆಲ್ಲದಿದ್ದರೆ" ಎಂಬ ಯೋಚನೆ ಬಂದಿರಬೇಕು

ಅಬ್ಬಬ್ಬ ಎನ್ನೆ ಅನ್ನಿ, ಸನಾತನಿಗಳಷ್ಟು ಪುಣ್ಯ ಪುರುಷರು ಇಲ್ಲ ಅನ್ನಬೇಕು ಅವರು ಅಲ್ಲದೆ ದೇವರ ಹತ್ತಿರ ಹೋಗಲಿಕ್ಕೆ ಪವರ್ ಇನ್ನಾರಿಗಿದೆ ಸ್ವಾಮಿ ಇತರ ನಾವೆಲ್ಲ ಪಾಪಿಗಳಲ್ಲವೆ? ಇನ್ನು ನೋಡಿ ಈ ಸನಾತನಿಗಳಿಂದಲೇ ನಮಗೆ ಸ್ವರಾಜ್ಯ ಸಿಕ್ಕುತ್ತದೆ ಅವರು ಮನಸ್ಸು ಮಾಡುವುದಿಲ್ಲ ಪಾಪ ಯಾಕೆಂದರೆ ಅವರಿಗೆಲ್ಲಾ ಈ ಜಗತ್ತು ನಶ್ವರವಾದದ್ದು ಗೊತ್ತಾಯಿತೆ ಮತ್ತು ಎಷ್ಟು ಒಳ್ಳೆಯವರು ಸ್ವಾಮಿ. ಅವರು–ಒಳ್ಳೇ ಮೃದುವಾದ ಮೃದು ಕಲ್ಲಿನಂತೆ ಅವರ ಹೃದಯ, ಸ್ವಾರ್ಥ ಎಂಬುದು ಒಂದಿಷ್ಟು ಅವರ ಮುಖದ ಮೇಲೆ ಕಾಣಿಸುವುದೇ ಇಲ್ಲ ಸ್ವಾಮಿ ಮಹಾತ್ಮರು ಅವರಿಗೆ ಬೋಧನೆ ಕೊಡಲಿಕ್ಕೆ ಹೋಗುತ್ತಾರೆ ಬಹುಶಃ ಅವರಿಗೆ ಮತಿ ಭ್ರಾಂತಿ ಇಲ್ಲದಿದ್ದರೆ ಕಲ್ಲನ್ನು ಯಾರಾದರೂ ಕರಗಿಸಿದ್ದವರುಂಟೆ ಸ್ವಾಮಿ ಲೋಕದೊಳಗೆ? ಅದನ್ನು ಪುನಿತ ಮಾಡಬೇಕು ಅಲ್ಲವೆ?

ತಿರುವಾಂಕೂರು ಕೊಚ್ಚಿ ಇಲ್ಲಿಯೇ ಸನಾತನಿಗಳ ಉದ್ಭವ ಸ್ಥಾನ ಸ್ವಾಮಿ ಅವರೆಲ್ಲ ಕೂಡಿ ತಿರುವಾಂಕೂರು ಮಹಾರಾಜರ ದೇವಾಲಯ ಪ್ರವೇಶ ಆಜ್ಞೆಯನ್ನು ಖಂಡಿಸಿದ್ದಾರೆ ಏನೋ ಪುಣ್ಯಕ್ಕೆ ಅವರಿಗೆ ಕೋಪ ಸ್ವಲ್ಪ ಕಮ್ಮಿ ಕೋಪ ಬಂದರೆ ಲೋಕವೆಲ್ಲಾ ಸುಟ್ಟುಹೋದೀತು ಸ್ವಾಮಿ (ಪಿ ಕಿ ಕೊಟ್ಟರೆ), ಪಾಪ ಎಲ್ಲರೂ ದೇವಾಲಯಕ್ಕೆ ಪ್ರವೇಶಿಸಿ ಯಾಕೆ ಸ್ವಾಮಿ ಅವರ ತಪಸ್ಸಿಗೆ ತೊಂದರೆ ಕೊಡಬೇಕು ಈಗ ಅವರ ತಪಸ್ಸು ಹಾಳುಮಾಡಿದ ಪಾಪ ಯಾರಿಗೆ? ಆದ್ದರಿಂದ ಜಾಗ್ರತೆ ಸನಾತನಿಗಳವರು ಪೂತನಿ ಎಂತ ಕೇಳಿಲ್ಲವೆ ನೀವು, ಆ ವಂಗಡ ಅವರದು

ಆದರೆ ನಮ್ಮ ಕೋರ್ಟು ಇದೆ ನೋಡಿ ಅದಕ್ಕೆ ಒಂದಿಷ್ಟು ದಯೆ ದಾಕ್ಷಿಣ್ಯ, ಹೆದರಿಕೆ ಇಲ್ಲ ನೋಡಿ ಇಲ್ಲವೆ ಯಾಕಪ್ಪಾ ಉಡುಪಿ ಕೃಷ್ಣ(ಪರಮಾತ್ಮನ)ಸಂದೇಶ ಪತ್ರಿಕೆಯ ಸಂಪಾದಕರಿಗೆ 200 ರೂಪಾಯಿಯ ಜುಲುಮಾನೆ ವಿಧಿಸಿದ್ದಾರೆ? ತಪ್ಪಿದರೆ 2 ತಿಂಗಳ ಸಾದಾ ಶಿಕ್ಷೆ ಬೇರೆ ಪಾಪ 'ಅವರು ಮಾಡಿದ ತಪ್ಪೇನು' ಏನೊ ಶ್ರೀ ಶಾರಂಕರಿಗೆ ಸ್ವಲ್ಪ ತಮಾಷೆಮಾಡಿ ಬರದಾರಂತೆ. ಪಾಪ! ಅವರು ಸ್ವಲ್ಪ ಕುಶಾಲಿನ ಮನುಷ್ಯರು. ಇನ್ನು ಮುಂದೆ ಎಲ್ಲರೂ ಸ್ವಾಮಿ ತಮಾಷೆ ಸ್ವಲ್ಪ ಬಿಡಿ

ಕಾಂಗ್ರೆಸ್ಸಿನಿಂದ ಆರಿಸಲ್ಪಟ್ಟ ಸದಸ್ಯರು. ೧ ಕುಂದಾಪುರ, ಉಡುಪಿ ಮತ್ತು ಕಾರ್ಕಳ ಭಾಗಕ್ಕೆ ಶ್ರಿ. ಎ. ಬಿ. ಶೆಟ್ಟಿ. ೨ ಮಂಗಳೂರು ಭಾಗಕ್ಕೆ ಶ್ರಿ ಬಿ ವೆಂಕಟಪ್ಪಯ್ಯ ಬಾಳಿಗರು. ೩ ಕಾಸರಗೋಡು ಪುತ್ತೂರು ಶ್ರೀ ಕೋಟಿ ರಾಮಕೃಷ್ಣ ಕಾರಂತರು. ೪ ಕ್ರೈಸ್ತರ ಮತದಾರ ಸಂಘದಿಂದ ಪ್ರೊ. ಸಿ. ಜೆ. ವಾರ್ಕಿಯವರು. ೫ ಕುಂದಾಪುರ ಡಿವಿಜನ್ ಶೆಡ್ಯೂಲ್ ಜಾತಿಯವರ ಕಡೆಯಿಂದ ಶ್ರಿ. ಕೆ. ಈಶ್ವರ ಇವರು.

ದಕ್ಷಿಣ ಕನ್ನಡ ಜಿಲ್ಲಾ ಪಾರ್ಲಿಮೆಂಟರಿ ಬೋರ್ಡು ಮಂಗಳೂರು.

ವಿಚಿತ್ರಗಳು.

ಗಿಡುಗ, ಹದ್ದುಗಳ ಕಣ್ಣುಗಳು ಅವುಗಳ ಮಿದುಳಿಗಿಂತ ಎರಡರಷ್ಟು ಭಾರ ಇವೆಯಂತೆ.

ಪ್ರಪಂಚದ ಅತೀ ಹೆಚ್ಚು ಜನಸಂಖ್ಯೆಯುಳ್ಳ ನಗರವಾದ ಇಡೀ ನ್ಯೂಯೋರ್ಕಿನಲ್ಲಿ ಇರುವ ದನಗಳು ೨೭,೦೦೦ರಂತೆ ಜನಸಂಖ್ಯೆ ೭ ಮಿಲಿಯ.

ಹಂದಿಗಳ ಹಾಲನ್ನು ತೆಗೆಯುವ ಯಂತ್ರಗಳನ್ನು ಕಂಡುಹಿಡಿದಿರುತ್ತಾರೆ ದನದ ಹಾಲಿಗಿಂತ ಹಂದಿಯ ಹಾಲು ಪುಷ್ಟಿಯಂತೆ ಹಂದಿ ಕೊಲ್ಲುವವರಿಗೆ ಒಂದು ಸಲಹೆ

ಒಂದು ಚೂರು ಹಿಮಗಡ್ಡೆಯನ್ನು ತಿಂದರೆ ನಮ್ಮ ದೇಹವು ಸ್ವಲ್ಪ ಸಂಕೋಚಿಸಿಕೊಳ್ಳುವುದಂತೆ ಬಿಸಿ ಕಾಫಿಯನ್ನು ಕುಡಿದರೆ ದೇಹವು ಸ್ವಲ್ಪ ಉದ್ದವಾಗುವುದಂತೆ. ಗಿಡ್ಡ ಮನುಷ್ಯರಿಗೆ ಒಂದು ಉಪಾಯ

ನ್ಯೂಯೋರ್ಕಿನ ವಸ್ತು ಪ್ರದರ್ಶನಾಲದಲ್ಲಿ ಬೇರೆ ಬೇರೆ ಪೆಟ್ಟಿಗೆಗಳಲ್ಲಿ ೧೩,೦೦೦ ತಲೆಬುರುಡೆಗಳಿವೆಯಂತೆ. ನಮ್ಮೂರ ಸ್ಮಶಾನ ಭೂಮಿಗಳಲ್ಲಿಯೂ ಅನೇಕ ಟೊಳ್ಳು ಬುರುಡೆಗಳು ಇಲ್ಲವೆ?

ನಮ್ಮ ದೇಶದ ಚಳಿಪ್ರದೇಶಗಳಲ್ಲಿ ಮಂಜುಗಡ್ಡೆಯ ಮಳೆ ಬರುವುದುಂಟು ಹಿಮಾಲಯದ ಹತ್ತಿರ ಬಂದ ಅಂತಹ ಮಳೆಯಿಂದ ನೂರು ಜನರು ಸತ್ತಿರುವರಂತೆ ನಮ್ಮೂರಲ್ಲಿ ಕೆಲವು ವೇಳೆ ನೀರಿನ ಮಳೆಯೂ ಬರುವುದು ಕಷ್ಟ

ಶ್ರೀಕೃಷ್ಣನಿಗೂ ಸನಾತನಿಗಳಿಗೂ ಬಹಳ ಕೇವಲ ಕೃಷ್ಣನಿಗೆ ಬಾಕಿಯವರನ್ನ ನೋಡಿದರೆ ಆಗುವುದಿಲ್ಲ ಎಲ್ಲಾ ಪಾಪಿಗಳು ನೋಡಿ ಕೋರ್ಟಿನವರು ಕೃಷ್ಣನ ಕಡೆಗಾದರೂ ನೋಡಬಾರದಾಗಿತ್ತೆ? ಸನಾತನಿಗಳಿಗೆ ಹಣಕ್ಕೇನು ಕೊರತೆ ಇಲ್ಲಬಿಡಿ 'ಕೃಷ್ಣಾ ಒಂದು ತಿಕೀಟು ಕೊಡಯ್ಯಾ' ಅಂದರೆ ಸಾಕು, ಆಗಲೇ ಅವನ ಕೊಳಲಿನಿಂದ ಅದು ಹೊರಗೆ ಬೀಳುತ್ತದೆ ಅಷ್ಟು ಪವರ್ ಇದೆ ನೋಡಿ ನಿಮ್ಮ ಹತ್ತಿರ ಆ ಪವರ್ ಇದ್ದರೆ ನೀವೂ ಸನಾತನಿಗಳಾಗಬಹುದು ಸ್ವಾಮಿ.

ಈ ಜಸ್ಟಿಸ್ ಪಾರ್ಟಿಗಳಿಗೂ ಸನಾತನಿಗಳಿಗೂ ಬಹಳ ಹತ್ತಿರ ಸ್ವಾಮಿ– ಮೊದಲನೆಯವರು ನ್ಯಾಯ ದೇವತೆಯನ್ನು ತಲೆಯ ಮೇಲೆ ಹೊತ್ತವರು, ಎರಡನೆಯವರು ಅವಳ ಕಾಲಿಗೆ ಸುತ್ತು ಹಾಕಿದವರು ದೇಶಸೇವೆ ಇವರಲ್ಲಿಯೂ ಉಕ್ಕಿ ಹರಿದಾಡುತ್ತಿದೆ ನದಿಯ ಹಾಗೆ ಅದರಲ್ಲಿ ಕೆಲವರು ಸ್ನಾನ ಮಾಡುವುದೂ ಉಂಟು ಆದ್ದರಿಂದ ನಾವು ಅವರಿಗೆ ನೋಡಿದ ಕೂಡಲೇ ಒಟ್ಟು(?) ಕೊಡೋಣ (ಕಾಲಿಗೆ) ನೆನಪಿರಲಿ

ಇನ್ನೊಂದು ವಿಷಯ ಸ್ವಾಮಿ ಕೆಲವರಿಗೆ ಜನಸೇವೆ ಮಾಡುವುದೇ ಇಂದ್ರಪದವಿ ಕೆಲವರಿಗೆ ಅದನ್ನು ಮಾಡದೆ ಬಿರುದು ಸಿಕ್ಕುವುದೇ ಒಂದು ಪದವಿ ಬಿರುದು ಸಿಕ್ಕಿದರೆ ದೇಶಸೇವೆ ಮಾಡಿದ ಹಾಗೆ ನಾವೂ ಕೆಲವನ್ನು ಸಂಪಾದಿಸ ನೋಡಬೇಕು ಇಲ್ಲದಿದ್ದರೆ ಈ ಹಾಳು ದೇಶಸೇವೆ ಯಾರಿಗೆ ಬೇಕು ಸ್ವಾಮಿ. ಜೈಲಿಗೆ ಹೋಗು,ಪೆಟ್ಟು ತಿನ್ನು,ಸಾಯು ಇದಾದರೆ ಹಾಗಲ್ಲ ಬಿರುದು ಇದ್ದರೆ ಏನು ಮಾನ ಏನು ಮರ್ಯಾದೆ, ಆಟ ಕೂಟಗಳಲ್ಲಿ? ಜುಗಾರಿ ಮನೆ ಅಲ್ಲ, ಕ್ಲಬ್ಬುಗಳಿಗೆ ಹೋಗಿ ಇಸ್ಪೀಟು ಆಡೋದು (ಸ್ವಲ್ಪ ದುಡ್ಡು ಇಟ್ಟು ಗಮ್ಮತಿಗೆ. ಅದು ಮಾತ್ರ ಜುಗಾರಲ್ಲ ಏನು.) ಆ ಮೇಲೆ ಗಡಂಗಿಗೆ ಚೆ ಚೆ ಅಲ್ಲ, ಬಾರ್ ರೆಸ್ಟೋರೆಂಟಿಗೆ ಹೋಗಿ ಕೊಂಚ ಗರಂ ಮಾಡಿಕೊಂಡು, ಚುರುಟೆಳೆದು ಮನೆಗೆ ಬಂದು ಬಿದ್ದ ಎಂದರೆ ಏನು ಸುಖ, ಸ್ವಾಮಿ ಯಾರು ಬಡವರು? ಬಡವರು ಹೊಂಡಕ್ಕೆ ಹೋಗಲಿ ನಮಗೇನು ಆ ಮೇಲೆ?

'ಪೆದ್ದು'

ಆಫ್ರಿಕದ ಅರಣ್ಯಗಳಿಗೆ ಸಿಂಹ ಬೇಟೆಗೆ ಹೋಗುವವರು ತಮ್ಮ ಪ್ರತಿ ಬಂದೂಕಿಗೆ ೧೮೦೦ ರೂ. ತೆರಿಗೆ ಕೊಡಬೇಕು. ಪುಣ್ಯಕ್ಕೆ ನಮ್ಮೂರಲ್ಲಿ ಹುಲಿಗಳು ವಿನಹ ಸಿಂಹಗಳಿಲ್ಲ.

ಸೆಂಯಾಮಿನ ಜನರು ಮೀನು ಕಾಳಗದಿಂದ ತಮ್ಮ ಬಿಡುಕಾಲವನ್ನು ಕಳೆಯುತ್ತಾರೆ ಒಂದು ಗಾಜಿನ ಪಾತ್ರೆಯಲ್ಲಿ ನೀರು ಹಾಕಿ ಬಿಟಾಸ್ ಎಂಬ ಜಾತಿಯ ಮೀನುಗಳನ್ನು ಬಿಡುತ್ತಾರೆ ಅವುಗಳು ಒಂದಕ್ಕೊಂದು ಸಾಯುವ ವರೆಗೂ ಕಾದಾಡುವುವಂತೆ ಕೋಳಿ ಕಟ್ಟಿನ ತರಹ

ವಾಯರ್ಲೆಸ್, ರೇಡಿಯೋಗಳು ನಮಗೆ ಹೊಸದಾದರೂ ಇರುವೆಗಳಿಗೆ ಅವೇನೂ ಹೊಸದಲ್ಲ ಅವುಗಳಿಗೆ ಒಂದರ ಕೂಗು ಇನ್ನೊಂದಕ್ಕೆ ಬಹಳ ದೂರದಿಂದ ಕೇಳಿಸುತ್ತದೆಯಂತೆ. ನಮಗೂ ಹಾಗಿದ್ದರೆ ರೇಡಿಯೋ ಕಂಪೆನಿಗಳ ಗತಿ ಏನು?

ಆಫ್ರಿಕದ ಕೆಲವು ದ್ವೀಪಗಳಲ್ಲಿರುವ ಒಂದು ಜಾತಿಯ ತೆಂಗಿನ ಮರಗಳಿಗೆ ಒಂದೇ ದಂಟಿಗೆ ಎರಡೆರಡು ಕಾಯಿಗಳಾಗುತ್ತವಂತೆ ಅವುಗಳ ಭಾರ ೪೦ ರಾತ್ತಲುಗಳ ತನಕ ಇರುತ್ತದೆ

ನೀರು ಬಿಸಿಮಾಡುವಾಗ ಉಂಟಾಗುವ ಉಗಿ(Steam)ಯು ಪ್ರಕೃತಿಯಲ್ಲಿರುವ ಎಲ್ಲಾ ವಸ್ತುಗಳಿಗಿಂತಲೂ ಮಹಾ ಶಕ್ತಿಯುಳ್ಳದ್ದು ಅಂತಹ ಶಕ್ತಿಯ ವಸ್ತು ನಮ್ಮ ಅಡಿಗೆ ಮನೆಗಳಲ್ಲಿಯೂ ಬಚ್ಚಲು ಮನೆಯಲ್ಲಿಯೂ ಕಾಣಬಹುದು ನೋಡಿ

ಒಂದು ಔನ್ಸಿನಷ್ಟು ಪ್ರಮಾಣದಿಂದ ಒಂದು ಲಕ್ಷ ಜನರನ್ನು, ಮೃಗಪಕ್ಷಿಗಳನ್ನು ಒಂದು ಕ್ಷಣದಲ್ಲಿ ಕೊಲ್ಲುವ ಶಕ್ತಿಯುಳ್ಳ ವಿಷಗಾಳಿಯನ್ನು ಜರ್ಮನ್ ವಿಜ್ಞಾನಿಯೊಬ್ಬರು ಕಂಡುಹಿಡಿದಿರುವರ ಅಂತಹ ಕೆಲವು ನೂರು ಔನ್ಸುಗಳು ಇಡೀ ಪ್ರಪಂಚವನ್ನು ನಿರ್ಮೂಲಿಸಬಹುದಂತೆ

ಸಾಧಾರಣ ಕಣ್ಣುಗಳಿಂದಲೂ, ಕಿವಿಗಳಿಂದಲೂ ಸ್ಪರ್ಶಿಸಲಾಗದ ಬಣ್ಣಗಳೂ, ಸ್ವರಗಳೂ ಪ್ರಕೃತಿಯಲ್ಲುಂಟಾಗ ವಂತೆ ವಿಚಿತ್ರ ಕಣ್ಣು ಕಿವಿ ರಚನೆಯುಳ್ಳ ಕೆಲವು ಮೃಗಗಳೂ, ಪಕ್ಷಿಗಳೂ ಮತ್ತು ಕ್ರಿಮಿಗಳು ಅವುಗಳನ್ನು ಸ್ಪರ್ಶಿಸಬಲ್ಲುವಂತೆ

ಚೀನಾದೇಶವು ಅತ್ಯಂತ ಹಳೇ ನಾಗರೀಕತೆಯ ದೇಶವೆಂದೂ, ಕಾಗದ ತಯಾರಿಕೆಯೂ ಮುದ್ರಾ ಕೈಗಾರಿಕೆಯೂ ಅಲ್ಲಿ ೫ ಸಾವಿರ ವರ್ಷಗಳ ಮುಂಚಿನಿಂದಲೂ ಗೊತ್ತಿದೆಂದು ಚರಿತ್ರೆಗಾರರು ತಿಳಿಸುತ್ತಾರೆ

ಮಾಜಿ ವ್ಯಾಸರಾಯರು

ಅದೇ ಲೇಖದಲ್ಲಿ ದೇಸಾಯಿಯವರು ಹೀಗೆ ಬರೆದಿರುತ್ತಾರೆ–"ಸತ್ಯಾಗ್ರಹ ಚಳವಳವು ನಿಲ್ಲಿಸಿದ ಕೂಡಲೆ ಮಾಜಿ ವ್ಯಾಸರಾಯ ವಿಲ್ಲಿಂಗ್ಡನ್ನರು ತಾವು ಹಿಂದೂದೇಶವನ್ನು ಪುನಃ ಗೆದ್ದರೆಂದೂ, ಕಾಂಗ್ರೆಸ್ ಸದಸ್ಯರಿಗೆನೇ ಕಾಂಗ್ರೆಸ್ಸಿನ ಮೇಲೆ ಭರವಸೆ ತಪ್ಪಿದೆ ಎಂತಲೂ ಹೊಗಳಿಕೊಂಡರು. ಕಾಂಗ್ರೆಸ್ ಮುಖಂಡರು ಜೈಲುವಾಸವನ್ನನುಭವಿಸುತ್ತಿರುವಾಗ ಕೆಲವು ನೀಚಾತ್ಮರು ಮೂಢತನದಿಂದ ಕಾಂಗ್ರೆಸ್ಸನ್ನು ತುಚ್ಛೀಕರಿಸಿದುದೇ ವ್ಯಾಸರಾಯರಿಗೆ ಇಷ್ಟು ಧೈರ್ಯ ಬರಲು ಕಾರಣವಾಯಿತು. ಆದರೆ ಇನ್ನುಮುಂದೆ ದೇಶವನ್ನು ಸ್ವಾರ್ಥತ್ಯಾಗಕ್ಕಾಗಿ ಮಾರುವ ದೇಶದ್ರೋಹಿಗಳು ತಮ್ಮ ಕೆಲಸಗಳನ್ನು ಮಾಡಲು ನಾವು ಬಿಡಲಾರೆವು. ಸರಕಾರದವರನ್ನು ತಪ್ಪು ತಿಳುವಳಿಕೆಗೆ ಒಳಪಡಿಸುವ ಅವರಿಂದ ಹಿಂದೂದೇಶವು ತಮ್ಮಂಥಾ ಪ್ರಜಾಪ್ರತಿನಿಧಿಗಳಿಂದ ಆಳಲ್ಪಡುತ್ತಿದೆ" ಎಂದು ಹೇಳಲು ನಾವು ಬಿಡಲಾರೆವು

ಮದನಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಫ್ರಾನ್ಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ಸ್ವಭಟಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೊನೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು ಕ್ರಯ ರೂ. 1

ಇದರ ಸಂಗಡ ೧೨ ಫೈಂಟ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ 287 ಮದರಾಸ್

ಡಾಕ್ಟರ ವಾಮನ ಗೋಪಾಳರವರ

ಐಹಿಡಾಯಿಜ್ಞ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ
ಫೋಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟೊಕಿಸ್ಟ್—ಶಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯು

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 6	3— 10
ಮುಸ್ತಕಿ ...	3— 4	4— 4
ಗುಡ್ಡ ಸುಗ್ಗಿ ...	3—10	3—14
ಊರ ಅವ್ವಲ್ ಬೆಲ್ಲಗೆ ...	4— 0	4— 4
ರಂಗೂನ್ಸುಬೆ. ಗೋ. ೧ಕ್ಕೆ .	7 — 0	7— 4
ಎಲ್ಲೂರು ಬೆ. ಮು. ೧ಕ್ಕೆ .	3—14	3—14
ಗೋದಿ ಗೋಣಿ ೧ಕ್ಕೆ ...	11 — 0	13— 0
ತೊಗರಿ ಗೋಣಿ ೧ಕ್ಕೆ ...	9 — 8	12— 8
ಹುರುಳಿ ಗೋಣಿ ೧ಕ್ಕೆ ..	5— 0	5 — 2
ಕಡಲೆ ಗೋಣಿ ೧ಕ್ಕೆ ...	8 — 0	12 — 8
ತೊಗರಿಬೇಳೆ ಗೋಣಿ೧ಕ್ಕೆ .	11— 0	19— 0
ಉದ್ದು ಗೋಣಿ ೧ಕ್ಕೆ .	9— 0	3 — 8
ಹೆಸರು ಗೋಣಿ ೧ಕ್ಕೆ ...	7—12	8— 0
ಊರುಬೆಲ್ಲ ಖಂಡಿ ೧ಕ್ಕೆ ...	30— 0	32— 8
ಉಪ್ಪು ಗೋಣಿ ೧ಕ್ಕೆ ..	4— 4	4—12
ಕೊಬ್ರಿ ಖಂಡಿ ೧ಕ್ಕೆ ..	75— 0	84— 0
ಕೊಬ್ರಿ ಹಿಂಡಿ ಖಂಡಿ೧ಕ್ಕೆ ..	30— 0	30— 8
ಎಳ್ಳಿಂಡಿ ಖಂಡಿ ೧ಕ್ಕೆ .	27 — 8	30 — 0
ಕೊಬ್ರಿ ಎಣ್ಣೆ ಮಣ ೧ಕ್ಕೆ. .	6— 0	7 — 0
ಎಳ್ಳೆಣ್ಣೆ ಮಣ ೧ಕ್ಕೆ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	6— 5	7— 5
ಮಾರಿಶಸ ಸಕ್ಕರೆ ಮ ೧ಕ್ಕೆ	3— 2	3 — 4
ಮೆಣಸು	2— 8	4 — 6
ಸಾಸಿವೆ ಮುಡಿ ೧ಕ್ಕೆ	5 — 4	6— 0
ಕಾಳುಮೆಣಸು ಖ ೧ಕ್ಕೆ	100— 0	120 0
ಯೇಲಕ್ಕಿಬೀಜ ಮಣ೧ಕ್ಕೆ	80— 0	8೦ 0
ಗೇರುಬೀಜ ಮು. ೧ಕ್ಕೆ	3 — 0	3 — 8
ಅಡಿಕೆ ಖಂಡಿ ೧ಕ್ಕೆ	35— 0	37— 8
ತಾಂಮ್ರಕಗಡು ಮ ೧ಕ್ಕೆ	12— 4	12 — 8
ತಾಂಮ್ರಪಾತ್ರಗಳು ಮ ೧ಕ್ಕೆ	12 — 8	14 — 0
ಹಿತ್ತಾಳೆ ಸೇರು ೧ಕ್ಕೆ	13— 8	15 — 0
ಹಿತ್ತಾಳೆ ತಗಡು ಮ. ೧ಕ್ಕೆ	10— 0	10— 8
ಸತುವು ೧ಕ್ಕೆ	22— 7	22— 8
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	145— 0	150— 0
ಫ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	175— 0	195— 0
ಮಡಿಕೇರಿ ಏಲಕ್ಕಿ	50— 0	55

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಿಂದ ಹೊಟ್ಟೆಯ ಶಸ್ತ್ರ ಚಿಕಿತ್ಸೆಯ ಕಷ್ಟವು ತಪ್ಪಿಸಿ ದಂತಾಯಿತು

ಎಂ. ಬಿ. ಎಂಬೊಬ್ಬರು ಹೀಗೆ ಬರೆಯುತ್ತಾರೆ.–ಫೆಬ್ರವರಿಯ ಮೊದಲನೇ ವಾರದ ಸುಮಾರಿಗೆ ನಾನು ಅಸ್ವಸ್ಥಬಿದ್ದೆ. ನಾನು ಬಹಳ ಕ್ಷೀಣನಾಗಿ, ನಡೆಯಲು ಬಲು ಕಷ್ಟವಾಗುತ್ತಿತ್ತು. ಅಲ್ಲದೆ ಹೊಟ್ಟೆಯೊಳಗಿನ ಕಠಿಣ ನೋವಿನಿಂದಾಗಿ ನನಗೆ ಊಟ ಮಾಡಲಾಗುತ್ತಿರಲಿಲ್ಲ.

ಒಂದು ವಾರದ ವರೆಗೆ ಹೀಗೆ ನಡೆದು ಆ ಮೇಲೆ ನನಗೆ ವಾಂತಿ ಶುರುವಾಯಿತು. ನನಗೆ ನೀರು ಕೂಡಾ ಕುಡಿಯಲಿಕ್ಕೆ ಆಗುತ್ತಿರಲಿಲ್ಲ. ನಾನು ಒಬ್ಬ ಡಾಕ್ಟರರನ್ನು ವಿಚಾರಿಸಲು ಅವರು ನನಗೆ ಜಠರದಲ್ಲಿ ಹುಣ್ಣುಗಳಾಗಿವೆಯೆಂದು ನನ್ನ ಹೆಂಡತಿಯೊಡನೆ ಹೇಳಿದರು. ನನಗೆ ಏನನ್ನೂ ತಿನ್ನಲಿಕ್ಕೆ ಆಗುತ್ತಿರಲಿಲ್ಲ ಕಡೆಗೆ ಹಾಲು ಕೂಡಾ ತೆಗೆದುಕೊಳ್ಳುವುದನ್ನು ನಿಲ್ಲಿಸಿದೆ ನನ್ನನ್ನು ಆಸ್ಪತ್ರೆಗೆ ಕಳುಹಿಸಬೇಕೆಂದು ಡಾಕ್ಟರರು ಹೇಳಿದರು

ನಾನು ಮೆಕ್ಲೀನ್ ಬ್ರೆಂಡ್ ಸ್ಟೋಮಕ್ ಪೌಡರನ್ನು ತೆಗೆದುಕೊಳ್ಳಲು ಶುರುಮಾಡಿದ ಎರಡು ದಿನಗಳಲ್ಲಿ ನನ್ನ ವಾಕರಿಕೆಯು ನಿಂತು ಹೋಯಿತು ಇದು ನನಗೆ ದೈವಪ್ರಸಾದವಾಯಿತು ನಾನು ಬಹಳ ಗುಣಮುಖನಾಗುತ್ತೇನೆಂದು ಡಾಕ್ಟರರು ಹೇಳಿದರು ಅದನ್ನು ಮುಂದುವರಿಸುತ್ತಾ ಬಂದಲ್ಲಿ ಆಸ್ಪತ್ರೆಯ ಅವಶ್ಯಕತೆ ಇಲ್ಲವೆಂದರು. ಡಾಕ್ಟರರು ಹೇಳಿದಂತೆ ಮೆಕ್ಲೀನ್ ಪೌಡರಿನ ಪ್ರಯೋಗವನ್ನು ಮುಂದುವರಿಸುತ್ತಾ ಬಂದ ಹಾಗೆ ನನಗೆ ಒಂದಿಷ್ಟು ಆಹಾರ ತೆಗೆದುಕೊಳ್ಳುವಂತಾಯಿತು ಆದರೆ ಊಟಮಾಡಿದ ಮೇಲೆ ಸ್ವಲ್ಪ ಹೊಟ್ಟೆನೋವು ಆಗಲೂ ಆಗುತ್ತಿತ್ತು ಒಂದು ವಾರದ ಮೇಲೆ ನನಗೆ ಹಾಸಿಗೆಯಿಂದ ಎದ್ದು ತಿರುಗಾಡಲನುಕೂಲವಾಯಿತು ನನ್ನ ತೂಕವು ಬಹಳ ಇಳಿದಿತ್ತು ಹೇಗಾದರೂ ವಾರವಾರಕ್ಕೆ ನಾನು ಗುಣಮುಖನಾಗುತ್ತಾ ಬರುವ ಹಾಗೆ ಹೊಟ್ಟೆನೋವು ಕಮ್ಮಿಯಾಗುತ್ತಾ ಬಂತು ನನಗೀಗ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳಲಿಕ್ಕಾಗುತ್ತಿದೆ

ಈ ಹೊತ್ತಿಗೆ ನಾನು ಸಂಪೂರ್ಣ ಗುಣಹೊಂದಿದೆ ನನ್ನ ತೂಕವು ಹೆಚ್ಚಿತು ನನಗೀಗ ಯಾವ ನೋವೂ ಇಲ್ಲ ಮನಸ್ಸಿನಿಂದುದನ್ನು ತಿನ್ನುವೆನು ಈ ರೋಗದಿಂದ ಪಾರುಗಾಣುತ್ತೇನೆಂದು ನೆನಸಿರದ ನನಗೆ ಈಗ ಬಹಳ ಆಶ್ಚರ್ಯವಾಗುತ್ತಿದೆ ಇದೆಲ್ಲಕ್ಕೂ ನಾನು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿಗೆ ಚಿರಋಣಿಯಾಗಿರುತ್ತೇನೆ ಅದನ್ನು ಸಾವಿರಾರು ಬಾರಿ ವಂದಿಸುತ್ತೇನೆ ಎಂ ಬಿ ಯ ಪರೀ ಮಾಡಿದ ಹಾಗೆ ನೀವೂ ಮೆಕ್‌ಲೀನ್ ಪೌಡರಿನಿಂದ ನಿಮ್ಮ ಹೊಟ್ಟೆಶೂಲೆಯನ್ನು ಪರಿಹರಿಸಿರಿ. ನಿಮ್ಮ ನರಳುವಿಕೆಯು ಗುಣಹೊಂದಬೇಕಾದರೆ

ಎಂಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಕೇಳಿ ಕೊಳ್ಳಿರಿ ಇಂತಹ ನಮೂನೆಯ ಕಡಿಮೆ ದರದ ಪರಕೀಯ ಪ್ಯಾಕೆಟ್ಟುಗಳನ್ನು ಪಡೆದು ಮೋಸಹೋಗಬೇಡಿ ಇದು ಚಿಲ್ಲರೆಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ—



ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳಸ್ನುಳ್ಳ (ಭಕ್ತಶಿಖಾಮಣಿ ದಾಮಾಜಿಪಂತ) ಸಂಗೀತ ನಾಟಕ

ಬರೆದವರು—ಶ್ರೀ ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ, ಸೂರ್ಯನೊಳಗಿಲ್ಲ, ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮುನಿವರ।"

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮಂಜುಳವಾದ ಮನೋಹರವಾದ ೩೫ ಗೀತಗಳಿವೆ ಕಥಾನಿರೂಪಣದ ಚಮತ್ಕಾರ ಭಾಷೆಯ ಲಾಲಿತ್ಯ ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಅಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ 1. ಎಲ್ಬ್ಯರ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2 ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೬೭ನೆಯ ಧಾತು ಸಂವತ್ಸರದ ಪುಷ್ಯ ಶು॥ ೪ ,ಶನಿವಾರದಿಂದ ಪುಷ್ಯ ಶು॥ ೧೦ ಶುಕ್ರವಾರದ ವರೆಗಿನ ಪಂಚಾಂಗ (೧೯೪೬ನೇಯ ಮಕರ (ಪ್ರಯಾಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಹಬ್ಬ
16	ಶನಿ	೪	೩೪	ಶತಭಿಷ	೨೯	೪	ಪೂರ್ಣ ಸಂಕ್ರಮಣ
17	ರವಿ	೫	೩೦	ಪೂ ಭಾದ್ರ	೨೭	೫	
18	ಸೋಮ	೬	೨೫	ಉ ಭಾದ್ರ	೨೬	೬	
19	ಕುಜ	೭	೨೦	ರೇವತಿ	೨೦	೭	
20	ಬುಧ	೮	೧೬	ಅಶ್ವಿನಿ	೧೭	೮	
21	ಗುರು	೯		ಭರಣಿ	೧೨	೯	
22	ಶುಕ್ರ	೧೦	೫೬	ಕೃತ್ತಿಕ	೮	೯	

Break Gills!

Take To Night

Prepared by a Sage out of Amber Saffron Gold Musk with Himalayan Drugs recruit energy Strength Nervous Debility and all Disorders in Spinal Cord Regains lost vitality Gives marvellous effect 60 Pills Rs 5 Sample 30 Pills Rs 3 List Free

Dr A S MURTHI CHICACOLE

THE COMMONWEALTH ASSURANCE CO, LTD, POONA.

CHAIRMAN—Mr N C KELKAR

On Endowment Rs 37—8—0 per Thousand	Triennial Bonus in 2nd VALUATION	On Whole Life Rs. 45 per Thousand

(1) Low Premium Rates! *(2) Permanent Disability!*
(3) Double Indemnity *(4) Extended Assurance Benefit*
(5) HOUSE PURCHASE SCHEME FOR POLICY HOLDERS are the special features
Liberal first year and heritable renewal commissions to its representatives
Wanted Agents to represent South Kanara

For further particulars please apply to:-

Messrs GAVANKER & SONS,
CHICKPET, BANGALORE CITY.

Chief Agents for—MYSORE STATE, COORG, SOUTH KANARA AND CEDED DISTRICTS

ದ. ಕ. ಕಾ. ಕಮಿಟಿಗೆ ರಾಷ್ಟ್ರಪತಿಗಳ ಪತ್ರ

ಯು ವಿ-ತ್ತರೀ,   ಅಲ್ಲಹಾಬಾದ್.

ಕಾಂಗ್ರೆಸ್ ಉಮೇದುವಾರರಿಗೆ ಎದು ಕೆಲವು ಚುನಾಯಿತರಾಗದ ಕಾಂಗ್ರೆಸ್ ವಾಲರು ಉಮೇದುವಾರಿಕೆಗೆ ನಿಂತಿರುವರೆಂಬ ವರದಿಯು ನಮ್ಮ ಕಛೇರಿಗೆ ಮೇಲಿಂದ ಮೇಲೆ ಬಂದಿರುತ್ತದೆ. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಒಂದು ಸಲಕ್ಕೆ ಉಮೇದು ವಾರರನ್ನು ಚುನಾಯಿಸಿದರೆಂದರೆ, ಅವರ ಭಾವಗಳೆಷ್ಟೇ ಇರಲಿ, ಇತರ ಕಾಂಗ್ರೆಸ್ ವಾಲರು ಅದನ್ನು ಮನ್ನಿಸಲೇಬೇಕು ಈ ಕಟ್ಟಿಗೆ ತಪ್ಪಿದವರ ಮೇಲೆ ಕಾಂಗ್ರೆಸ್ ಅದನ್ನು ಪಾಲಿಸಲಿಕ್ಕೆ ಸರಿಯಾದ ಹೆಜ್ಜೆಗಳನ್ನು ತೆಗೆದು ಕೊಳ್ಳಬೇಕಾಗುವುದು. ವ್ಯಕ್ತಿಕ ಸ್ವಾರ್ಥ ಸಾಧನೆಗಾಗಿ ಶಾಸನ ಸಭೆಗಳಿಗೆ ಹೋಗಲೇ ಬೇಕೆಂದುದ್ದೇಶಿಸುವವರು ಕಾಂಗ್ರೆಸ್ಸಿನ ಅಪ್ಪಣೆ ಯನ್ನು ಲಕ್ಷಿಸದಿದ್ದ ಮೇಲೆ ಅಂಥವರನ್ನು ಚುನಾಯಿಸುವ ಮಾತು ಅಲ್ಲಿಗೆ ಮುಗಿಯಿತು ಶಾಸನ ಸಭೆಗಳನ್ನು ಪ್ರವೇಶಿಸಲು ಹದಮೀ ರುವ ಉತ್ಸಾಹವಿರುವುದೇ ಮತ್ತು ದೊಡ್ಡ ಮಂತ್ರಿಪದವಿಗಳನ್ನು ಶೇಖರಿಸುವ ಆ ಉಮೇ ದುವಾರರ ಅಭಾವತೆಯನ್ನು ತೋರಿಸುತ್ತದೆ ನಮ್ಮ ಸಹಪಾಠಿಗಳಿಗೇನೇ ಎದುರು ನಿಲ್ಲುವ ವರು ಯೋಗ್ಯ ಉಮೇದುವಾರರಲ್ಲವೆಂಬು ದಕ್ಕೆ ಕಾರಣ

ಶ್ರೀಮತಿ ಕಮಲಾದೇವಿಯವರು

ಇಂಥಾ ಪ್ರಬಲ ಶಿಸ್ತುಮುರಿಕರ ಮೇಲೆ ಸರಿಯಾದ ಹೆಜ್ಜೆಗಳನ್ನು ತೆಗೆದುಕೊಳ್ಳುವುದ ಕ್ಕಾಗಿ ಕಾಂಗ್ರೆಸ್ಸಿನ ಶಿಸ್ತುಕ್ರಮಗಳನ್ನು ಪರಿ ಷ್ಕರಿಸಲಾಗಿದೆ ಆದುದರಿಂದ ದಯವಿಟ್ಟು ನೀವು ಈ ಕೆಳಗಿನ ಮೇಲೆ ಸರಿಯಾದ ವರದಿ ಯನ್ನು ನಮ್ಮ ಕಛೇರಿಗೆ ಕಳುಹಿಸಬೇಕು ಅವು ಯಾವುವೆಂದರೆ

೧ ಕಾಂಗ್ರೆಸ್ ಅಧಿಕೃತ ಉಮೇದು ವಾರರ ಹೆಸರು, ಮತ್ತು ಅವರನ್ನು ಚುನಾವಣೆ ಗಳಲ್ಲಿ ಎದುರಿಸುವ ಕಾಂಗ್ರೆಸ್ ವಾಲರುಗಳ ಹೆಸರುಗಳು ಮತ್ತು ಅವರು ನಿಂತ ಕೇಂದ್ರ ಗಳು

೨ ಇಂಥಾ ದಂಗೆಖೋರ ಕಾಂಗ್ರೆಸ್ ವಾಲರ ಮೇಲೆ ನೀವು ಯಾವ ಕ್ರಮವನ್ನಾ ದರೂ ತೆಗೆದುಕೊಂಡಿರುವಿರಾ? ಅಥವಾ ಅವ ರಿಗೆ ಅವರ ದುರ್ವರ್ತನೆಯ ವಿಷಯ ತಿಳಿಸಿ ನೋಟೀಸೇನಾದರೂ ಕೊಟ್ಟಿದ್ದಿರೊ?

೩ ನಿಮ್ಮ ಕಾಂಗ್ರೆಸ್ ಕಮಿಟಿಯು ಅವರ ಮೇಲೆ ಯಾವ ಹೆಜ್ಜೆಗಳನ್ನು ತೆಗೆದು ಕೊಳ್ಳಲೆಳಸಿರುತ್ತದೆ?

೪ ನೀವು ಏನಾದರೂ ಇಷ್ಟರ ವರೆಗೆ ಮಾಡದಿದ್ದಲ್ಲಿ, ಈಗಲ್ಲಾದರೂ ಅದನ್ನು ಕೈ ಕೊಳ್ಳಿರಿ ಇದಲ್ಲದೆ ದಯವಿಟ್ಟು ಆ ಎಲ್ಲಾ ದಂಗೆಖೋರ ಕಾಂಗ್ರೆಸ್ ಮನುಷ್ಯರಿಗೆ ಒಂದು ವರದಿಯನ್ನು ನಮಗೆ ಕಳುಹಿಸುವಂತೆ ತಿಳಿಸ ಬೇಕು ಸ್ಥಳೀಯ ಅಥವಾ ಪ್ರಾಂತಿಕ ಕಾರ್ಯ ನಿರ್ವಾಹಕ ಮಂಡಳಿಯವರು ಸರಿಯಾದ ಕ್ರಮವನ್ನು ತೆಗೆದುಕೊಳ್ಳದಿದ್ದಲ್ಲಿ ನಾವು ಅದರ ವಿಚಾರವನ್ನು ನೋಡಿಕೊಳ್ಳುತ್ತೇವೆ ಕಾಂಗ್ರೆ ಸ್ಸಿನ ಕೆಲಸಕ್ಕೆ ಅಡ್ಡಿ ತರುವಂಥವರು ಕಾಂಗ್ರೆಸ್ ವಾಲರೆಂದು ಹೇಳಿಕೊಳ್ಳಲು ಅಯೋಗ್ಯರಿರು ವರು. ದಯಮಾಡಿ ಈ ವಿಷಯಗಳಿಗೆ ತ್ವರೆ ಯಾಗಿ ಉತ್ತರ ಕೊಡಿರಿ

ನಿಮ್ಮ ಹಿತೈಷಿ,

ಜವಾಹರಲಾಲ್ ನೆಹರು,

ರಾಷ್ಟ್ರಾಧ್ಯಕ್ಷ

ಮನೆಗಳಲ್ಲಿ ಕಲಾ ಸ್ಥಾಪನೆ

ವಿಲಿಯಮ್ ಬಿನೆಡ್ ಎಂಬ ಮಹಿ ಳೆಯು ,ಮಾಡರ್ನರಿವ್ಯೂನಲ್ಲಿ ಹೀಗೆ ಬರೆದಿರು ವರು -ಕೈಯಿಂದ ತಯಾರಾದ ಬಟ್ಟೆಬರೆಗಳ ಲ್ಲಿಯೂ, ಕಸೂತಿ ಕೆಲಸಗಳಲ್ಲಿಯೂ ಮತ್ತು ಇನ್ನಿತರ ಗ್ರಾಮ ತಯಾರಿಕೆಗಳಾದ ತಾಮ್ರ ಹಿತ್ತಾಳೆ ಮತ್ತು ಮಣ್ಣಿನ ಕೆಲಸಗಳಲ್ಲಿಯೂ ಒಂದು ತರದ ದೈವೀಕ ಅಂದವಿರುವುದು ಪವಿತ್ರ ಭಾರತೀಯರ ಪ್ರತಿ ಮನೆಗಳಲ್ಲೂ ಇವು ಗಳ ಅಲಂಕಾರವನ್ನು ಕಾಣಬಹುದು ಅವು ಗಳ ಕಲಾ ಶ್ರೇಷ್ಠತೆಯನ್ನು ಮೋಹಕ ಲಕ್ಷಣ ಗಳನ್ನೂ ತಿಳಿಕೊಳ್ಳಲು ಪ್ರತಿಯೊಬ್ಬ ಭಾರತೀ ಯನು ಪ್ರಯತ್ನಪಟ್ಟು ಪರಕೀಯರಿಂದ ಉಪ ಯೋಗಿಸಲಿಕ್ಕೆ ಅನೇಕ ಕೃತಕ ವಸ್ತುಗಳನ್ನು ನಾವು ತ್ಯಜಿಸಿದರೆ,ಹಳ್ಳಿಗರಿಗೊಂದು ಕಸಬನ್ನು ಕಲ್ಪಿಸಿದಂತೆಯೂ ಮನೆಗಳಲ್ಲಿ ಸಂಸ್ಕೃತಿಯನ್ನು ಸ್ಥಾಪಿಸಿದಂತೆಯೂ ಆಗುತ್ತದೆ

ನಮ್ಮ ಬಡತನವು ನಮ್ಮ ಗುಲಾಮ ಗಿರಿಯ ಚಿಹ್ನೆ

ಶ್ರೀ ಭುಲಾಭಾಯಿ ದೇಸಾಯಿಯವರು ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯಲ್ಲಿ ಬರೆದಿ ರುವ ಒಂದು ಲೇಖನದಿಂದ –

ನಮ್ಮ ದೇಶದ ಬಡತನವು ನಮ್ಮ ಗುಲಾ ಮಗಿರಿಯ ಒಂದು ರೋಗದ ಒಂದು ಚಿಹ್ನೆಯಾಗಿ ರುತ್ತದೆ ನಾವೀಗ ಚಿಹ್ನೆಗಳನ್ನು ಪರೀಕ್ಷಿಸಿ

ಶ್ರೀ ಭುಲಾಬಾಯಿ ದೇಸಾಯಿಯವರು.

ಕೊಡುಕೊಳ್ಳುವುದರಲ್ಲಿ' ಯಾವ ಅರ್ಥವೂ ಇಲ್ಲ " ರೋಗವನ್ನೇ ಪರಿಹರಿಸಬೇಕ ಲ್ಲವೇ? ಎಂದಿಗೆ ನಮಗೆ ಸ್ವಾತಂತ್ರ್ಯ ಸಿಗು ತ್ತದೊ ಅಂದೇ ನಾವು ಈ ಬಡತನವನ್ನು ಪರಿ ಹರಿಸಲು ಸಮರ್ಥರಾಗುತ್ತೇವೆ

ಕಾಂಗ್ರೆಸ್ ಉಮೇದುವಾರಿಕೆ.

ಕಾಂಗ್ರೆಸ್ಸು ಯೋಗ್ಯ ಉಮೇದುವಾ ರರನ್ನು ಆರಿಸಿರುತ್ತದೆ ಕೆಲವು ಮಂದಿ ನೀಚರು, ದೇಶಮುಖಂಡರು ಜೈಲುವಾಸದಲ್ಲಿ ದ್ದಾಗ, ಸರಕಾರದೊಡನೆ ಸಹಕ ರಿಸಿ ತಮ್ಮ ಬಂಧುಗಳ ಬಂಧನಶೃಂಖಲೆಯನ್ನು ಇನ್ನೂ ಬಿಗಿಸಲು ಸಹಾಯಕರಾಗಿದ್ದು, ತಾವು ಮಹಾ ಶ್ರದ್ಧಾಳುಗಳೆಂದು ಸರಕಾರಕ್ಕೆ ತೋ ರಿಸಿ ತಮ್ಮ ಇಷ್ಟ ಸಿದ್ಧಿಮಾಡಿಕೊಂಡರು.

ಪೋಪ್ ಸ್ವಾಮಿಯವರು

ಗಳು ವಿಚಿತ್ರ ಹಾಡುಗಳನ್ನು ಹಾಡುತ್ತ ತಮ್ಮ ಗೂಡು ಮನೆಗಳನ್ನು ಸೇರುತ್ತಲಿದ್ದವು ಅಸ್ತ ಚಂದ್ರದೇವನು ತನ್ನ ಕರ್ತವ್ಯ ಸಲುವಾಗಿ ದಿಗಂತವನ್ನು ಮೊರೆ ಇಡುತ್ತವೋ ಎಂಬಂತೆ ಕಾಣಿಸುವ ಮರಗಳೆಡೆಯಿಂದ ಗಗನವನ್ನೇರುತ್ತಲಿದ್ದನು ಅಲ್ಲಿಯ ಪ್ರಶಾಂತ ವಾತಾವರಣ ಮಧ್ಯದಲ್ಲಿ, ಅಗಾಧ ಜನಸ್ತೋಮದ ಗಂಭೀರಮೌನ ಮಧ್ಯದಲ್ಲಿ, ನಿಂತಿದ್ದ ರಾಷ್ಟ್ರಪತಿಯ ಗಂಭೀರಾಕೃತಿಯು ಸ್ಫೂರ್ತಿಯನ್ನುಂಟು ಮಾಡುತ್ತಿತ್ತು ವಿಶ್ವ ನಾಟಕದ ಭೀಕರತೆಯನ್ನು ವರ್ಣಿಸಿ ತಮ್ಮ ಮುಂದಿನ ಕಾರ್ಯದಲ್ಲಿ ಒದಗಬಹುದಾದ ತೊಡಕುಗಳನ್ನು ಬಿಚ್ಚಿ ಹೇಳುತ್ತಲಿದ್ದ ರಾಷ್ಟ್ರಪತಿಗಳ ಭಾಷಣವು ನೆರೆದ ಸರ್ವಾತ್ಮಗಳಲ್ಲಿ ರೋಮಾಂಚನವನ್ನುಂಟು ಮಾಡಿತು ಅವರ ಹೃದಯದ ಅಂತರ್ಯದಿಂದ ಉಕ್ಕಿ ಬರುವ ಉಜ್ವಲ ಪರಿತಾಪಿ ಭಾಷಣವು ಯಾವ ಭಾರತೀಯನನ್ನಾದರೂ ಎದೆಯು ಬ್ಬಿಸದೇ ಇರದು ಈ ಮಧ್ಯೆ ಇರ್ವ ಮುದಿವ್ಯಕ್ತಿಗಳು ಗದ್ದುಗೆಯ ಒಂದು ಮೂಲೆಯಲ್ಲಿ ಏನೋ ಪಿಸುಮಾತನಾಡುತ್ತಿದ್ದರು ಈ ದೃಶ್ಯವೊಂದು ಎಲ್ಲರ ಮನಸ್ಸನ್ನು ಆಕರ್ಷಿಸಿತು ನೋಡಿದ್ದಲ್ಲಿ ಅವರು ಬೇರೆ ಯಾರಾಗಿರದೆ ಮಾಲವೀಯಾಜಿ, ಮಹಾತ್ಮಾಜೀಯವರಾಗಿದ್ದರು

ತ್ರಿಮೂರ್ತಿಗಳು

ಮಹಾತ್ಮ ಗಾಂಧಿಯವರು ಕಾಂಗ್ರೆಸ್ಸಿನ ಭೂತಕಾಲದ ಪ್ರತಿನಿಧಿಗಳಾಗಿಯೂ, ಪ ನೆಹರಗಳು ವರ್ತಮಾನ ಕಾಲದ ಅಚಲ ಮೂರ್ತಿಗಳಾಗಿಯೂ, ಶ್ರೀ ಎಂ ಎನ್ ರೋಯ್ ಯವರು ಭವಿಷ್ಯತ್ಕಾಲದ ರಹಸ್ಯಪೂರ್ಣರಾಗಿಯೂ ಫೈಜಪುರದಲ್ಲಿ ಮೆರೆಯುತ್ತಿದ್ದರು ಈ ತ್ರಿಮೂರ್ತಿಗಳಲ್ಲಿ ಏನೋ ಒಂದು ತರದ ಅಸಾಧಾರಣ ಆಕರ್ಷಣ ಶಕ್ತಿಯುಳ್ಳ, ಅದು ನೋಡಿದವರನ್ನು ಮುಗ್ಧರನ್ನಾಗಿ ಮಾಡುತ್ತಿತ್ತು ಇವರಲ್ಲಿ ಕಡೇಯವರಾದ ಎಂ ಎನ ರೋಯ್ ಯವರನ್ನು ಫೈಜಪುರದ ಗೂಢ ವ್ಯಕ್ತಿ ಎಂದು ಸಾರಿರುತ್ತಾರೆ ಇದಕ್ಕೆ ಕಾರಣ ಏನು

ಅರೆ ಆಂಗ್ಲ ಅರೆ ಹಿಂದೀ ಪತ್ರಿಕೆಗಳು

ಇಂಥಾ ಪತ್ರಿಕೆಗಳು ಬೊಂಬೈ, ಕಲ್ಕತ್ತಾ ಮುಂತಾದೆಡೆಗಳಲ್ಲಿ ತುಂಬಾ ಇವೆ ನಮ್ಮತ್ತ ಕಡೆಗೂ ಇವೆ ಅಷ್ಟಿ. ಇವುಗಳ ಧ್ಯೇಯವೆಂದರೆ ಬರಿ ಸುಳ್ಳು ವರ್ತಮಾನ ಪ್ರಕಟಿಸುವುದು, ಸುಳ್ಳಭಿಪ್ರಾಯಗಳನ್ನು ಬರೆಯುವುದು ಇಷ್ಟೆ ಇವುಗಳ ಮಾಲೀಕರು ಹೆಚ್ಚಾಗಿ ಆಂಗ್ಲೊ—ಇಂಡಿಯಾನ (ಅರೆ ಆಂಗ್ಲ—ಅರೆ ಹಿಂದೀ) ಜೇರಕ ಕೂಟಕ್ಕೆ ಸೇರಿದವರು ಇವರು ತಾವು ತಾಜಾ ಐರೋಪ್ಯರಂತೆ ತಿಳಕೊಂಡು ದೇಶದ್ರೋಹಿಗಳಂತೆ ವರ್ತಿಸುತ್ತಾರೆ ಇವರು ನಿಜವಾಗಿಯೂ ಭಾರತೀಯರಿರುವರು ಆದರೆ ಇವರ ಮನೋಭಾವವು ಐರೋಪ್ಯರ ಕಡೆಗೇನೇ ಒಲಿದಿರುವಂತೆ ಕಾಣುತ್ತದೆ ಇವರ ದೇಶದ್ರೋಹಿ ಕಾರ್ಯಗಳಿಂದ ಸರಕಾರಕ್ಕೆ ದೇಶದ ಸ್ಥಿತಿಗತಿಗಳನ್ನು ಇವರು ಕೊಡುವ ಟಕ್ಕು ವರ್ತಮಾನಗಳಿಂದ ತಿಳಕೊಳ್ಳಲಾಗುವುದಿಲ್ಲ. ಅಂತೆಯೇ ತಕ್ಕುದಾದ ಪರಿಹಾರವನ್ನು ಮಾಡಲಿಕ್ಕೂ ಅವರಿಗೆ ಕಷ್ಟವಾಗುತ್ತದೆ ಈ ಪತ್ರಿಕಾ ಕರ್ತರು ತಮ್ಮ ಸ್ವಾರ್ಥಸಾಧನೆಗಾಗಿಯೇ ಕೆಲಸ ಮಾಡುತಿದ್ದು ಜಾತಿಮತ ವೈಷಮ್ಯಗಳನ್ನುಂಟುಮಾಡುವುದರಲ್ಲಿ ಬಹಳ ನಿಪುಣರು ಇವರ ಪತ್ರಿಕೆಗಳನ್ನು ಓದುವವರು ದೇಶದಲ್ಲೆಲ್ಲೂ ಬಡತನವಿಲ್ಲವೆಂದೂ ಕಾಂಗ್ರೆಸು ಸುಮ್ಮಗೆ ಗಲಾಟೆ ಮಾಡುತ್ತಿರುವುದೆಂದೂ ತಿಳಕೊಳ್ಳುವಷ್ಟು ಬುದ್ಧಿಗೇಡಿಗಳಾಗುತ್ತಾರೆ. ಅಂತೂ ಜಸ್ಟಿಸ್ ಪಾರ್ಟಿ ಸದಸ್ಯರಾಗಬೇಕಾದರೆ ಇಂಥಾ ಪೇಪರುಗಳ ಬಹುಕಾಲದ ಚಂದಾದಾರನಾಗಿರಬೇಕು.

ರಹಸ್ಯ ವ್ಯಕ್ತಿ ರಾಯ್

ಇಂಥಾ ಪತ್ರಿಕೆಗಳ ಅನ್ನವನ್ನುಣ್ಣುವ ಕೆಲವು ಪ್ರತಿನಿಧಿಗಳು ಫೈಜಪುರದಲ್ಲಿ ಹಾಜರಿದ್ದ ಇದ್ದರು ಅವರಿಗೆ ಎಂ ಎನ್ ರಾಯರೆಂದರೆ ಬಹಳ ಹೆದರಿಕೆ—ದೊಡ್ಡ ಕ್ರಾಂತಿಕಾರರೆಂದು ಐರೋಪ್ಯರನ್ನು ಸದಾ ನಂಬಿಕೊಂಡಿದ್ದು ತಮ್ಮ ಪಾಪಿ ಹೊಟ್ಟೆಗಳ ಮೇಲಿಂದು ಕಾಲು ಇವರು ಕಾಲನ್ನು ಚಾಚುವರೋ ಎಂಬ

"ಫೈಜಪುರದ ಗೂಢ ವ್ಯಕ್ತಿ" ಎಂದು ಆಂಗ್ಲ-ಹಿಂದೀ ಪತ್ರಿಕೆಗಳಿಂದ ಸಾರಲ್ಪಟ್ಟ ಶ್ರೀ ಎಂ ಎನ್ ರೊಯ್ ಯವರು ರಾಷ್ಟ್ರಪತಿಯೊಂದಿಗೆ ನಿಂತಿರುತ್ತಿದು ಅವರ ಎತ್ತರ ದೇಹಪ್ರಕೃತಿಯೂ ಸುಂದರಾಕೃತಿಯೂ ಎಲ್ಲರನ್ನೂ ಆಕರ್ಷಿಸುವಂತಿದೆ

ಒಂದೇ ಹೆದರಿಕೆ ಅವರಿಗೆ ಮುಂದೆ ಈ ಬಡ ಹಿಂದೀಯರ ಅನ್ನ ತಿಂದು ಕೊಬ್ಬಲಿಕ್ಕೆ ಅವರಿಗೆ ಮಾರ್ಗದೆಗ ಕಷ್ಟ ಈ ಅವಸ್ಥೆಯಲ್ಲಿ ಅವರು ಹೇಗಾದರೂ ತಮ್ಮ ... ಎಂ ಎನ್ ರಾಯ್ ರಂಥಾ ದೇಶಸೇವಕ ತರುಣರನ್ನು ಸರಕಾರದವರ ಮನಸ್ಸಿಗೆ ಅಪಾಯಕರ ವ್ಯಕ್ತಿ ಎಂಬ ತಿಳುವಳಿಕೆಯನ್ನು ಹುಟ್ಟಿಸಿ ಅವರು ಅವನ ಮೇಲೆ ನಿರತ ದೃಷ್ಟಿ ಇಟ್ಟಿಸುದಂತೆ ಮಾಡಿದರೆ ತಮಗದರಿಂದ ಸ್ವಲ್ಪ ಸುಖವಾಗಬಹುದೆಂದೇ ಅವರ ಈ ಉಪಾಯ

ಟೈಮ್ಸ್ ಆಫ್ ಇಂಡಿಯಾ

ಅರೆ ಆಂಗ್ಲ ಅರೆ ಹಿಂದೀ ಜಾತಿಗೆ ಸೇರಿದ ಮೇಲಿನ ಪತ್ರಿಕೆಯು ಅವರ ವಿಷಯ ಈ ರೀತಿ ಬರೆಯುತ್ತದೆ "ಶ್ರೀ ಎಂ ಎನ್ ರೊಯ್ ಯವರನ್ನು ನೋಡಿದ ಕೂಡಲೇ ಎಲ್ಲರೂ ಅವರಿಗೆ ಹೆದರುತ್ತಾರೆ ಅವರನ್ನು ದೂರವಿರಿಸಿದರೆ ಹೆದರಿಕೆ, ಹತ್ತಿರ ಸೇರಿಸಿದರೆ ಅಪಾಯ, ಎಂದು ಇತರ ಮುಖಂಡರು ಅಭಿಪ್ರಾಯಪಡುತ್ತಾರೆ 'ರಾಷ್ಟ್ರ ಮುಖಂಡರ ಎದುರಿಗೆ ನಿಲ್ಲಲು ಧೈರ್ಯಸಾಲದ ಈ ಪಾಪಿ' ಪ್ರತಿನಿಧಿಗಳು ಅವರ ಅಭಿಪ್ರಾಯವನ್ನು ಬರೆಯುವ ತೆರವನ್ನು ವಾಚಕರು ಗಮನಿಸಿರಿ

ಇನ್ನೊಂದು ಸುಳ್ಳು

'ಇವರನ್ನು ಹದದಲ್ಲಿಟ್ಟಲ್ಲಿ ಕಾಂಗ್ರೆಸ್ಸಿಗೆ ಇವರಿಂದ ಬಹಳ ಸಹಾಯವಾಗಬಹುದು' ಎಂದು ಒಬ್ಬ ಮುಖಂಡರು ಹೇಳಿದರಂತೆ ಮುಖಂಡರ ಹೆಸರಿಲ್ಲ 'ಕಾಂಗ್ರೆಸ್ಸನ್ನು ಉರುಳಿಸಲಿಕ್ಕೆ ಬಂದ ಕ್ರಾಂತಿಕಾರ'' ಎಂದು ಇನ್ನೊಂದು ಆಂಗ್ಲ ಹಿಂದೀ ಪತ್ರಿಕೆಯ ಅಭಿಪ್ರಾಯ 'ಕ್ಷಣಕ್ಷಣಕ್ಕೂ ರಾಯ್‌ರು ಬಹಳ ರಹಸ್ಯವ್ಯಕ್ತಿಗಳಾಗಿ ಮಾರ್ಪಡುತ್ತಾರೆ' ಎಂದು ಮತ್ತೊಂದು ಅಭಿಪ್ರಾಯ ಈ ಪತ್ರಿಕೆಗಳು ಇಂಥಾ ನೀಚ ಮನೋವರ್ತನೆಯನ್ನೇಕೆ ಇಟ್ಟುಕೊಂಡಿರುತ್ತಾರೆಯೋ ಬೇರೆ ಕಾಣುವುದಿಲ್ಲ!

ಬರುವುದು! ತಿಳಿದಿರಲಿ.

ಭಾರತದ ಕಲಾಶ್ರೇಷ್ಠತೆಯ ಮಹತ್ವ!

ಇದುವರೆಗೆ ಭರತಖಂಡದಲ್ಲಿ ತಯಾರಾದ ಚಲನಚಿತ್ರಗಳಲ್ಲೆಲ್ಲಾ ಅತೀವ ಶ್ರೇಷ್ಠವಾದುದು.

ಹಲವು ಹನ್ನೆರಡು ಚಿತ್ರಗಳಿಗಿಂತ ಇದೊಂದನ್ನು ಕಂಡು ನಿಮ್ಮ ಜೀವನ ಸಾರ್ಥಕ ಮಾಡಿಕೊಳ್ಳಿರಿ'

ಪ್ರಭಾತ ಚಿತ್ರ

'ಅಮರ ಜ್ಯೋತಿ'

ದುರ್ಗಾ ಖೋಟೆ— ವಸಂತಿ — ಚಂದ್ರಮೋಹನ— ಶಾಂತಾ ಆಪ್ಟೆ ಅಲ್ಲದೆ ಸಾವಿರಾರು ಮಂದಿ ಇತರರು

IT'S PRABHAT

AMAR JYOTI

OR

IMMORTAL FLAME

The picture which won the hearts of millions

ALL OVER THE WORLD

ಶ್ರೀ ಚಿತ್ರಾ ಟಾಕೀಸ್'

ಮಂಗಳೂರು.

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ.

ಶ್ರೀ ದೂ ವಿದ್ಯಾದಾಯಿನೀ ಸಭೆಯವರ ತಮ್ಮ ಆಡಳಿತೆಯೊಳಗಿರುವ 'ಇಡ್ಯ ವಿದ್ಯಾದಾಯಿನೀ ಶಾಲೆ' ಮತ್ತು ಹೊಸತಾಗಿ ಸ್ಥಾಪಿಸಲಿರುವ 'ಅನಾಥಾಲಯ' ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾ 17-1-1937 ಸೋಡ್ತಿಯ ಮೊಬಲಗು ರೂ 50,000

ಒಂದನೇ ಇನಾಂ ರೂ. 8000 2ನೇ ಇನಾಂ ರೂ 2,000;

ಜುಮ್ಲಾ ಇನಾಂಗಳು 1000; ಇನಾಂಗಳ ಜುಮ್ಲಾ ಮೌಲ್ಯ ರೂ. 20,125

ಟಿಕೇಟು 1ರ ನಾಲ್ಕಾಣೆ ಮಾತ್ರ'

20 ಟಿಕೇಟುಗಳಿಗೆ ಒಂದು ಪುಸ್ತಕದ ಬೆಲೆ ರೂ 1 0 0 2 ಪುಸ್ತಕಗಳ ಬೆಲೆ ರೂ 7-8-0 ಸ್ಪೆಶಲ್ ಬಹುಮಾನಗಳೂ ಇವೆ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಮೆನೇಜರ್ ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ ಕ)

ರಾಯ್‌ರ ವಿಷಯ ರಾಷ್ಟ್ರ ಮುಖಂಡರ ಅಭಿಪ್ರಾಯ.

ಪ್ರತಿಯೊಬ್ಬ ರಾಷ್ಟ್ರ ಮುಖಂಡರೂ ಎಂ ಎನ್ ರಾಯ್‌ರ ವಿಚಾರದಲ್ಲಿ ಯಾವ ಹೆದರಿಕೆಯುಳ್ಳವರಾಗಿಯೂ ಇಲ್ಲ ಯಾವ ಅಪಾಯವನ್ನು ಅವರಿಂದಾಗುತ್ತದೆಂದು ನಿರೀಕ್ಷಿಸುವುದೂ ಇಲ್ಲವೆಂಬುದು ಮೊನ್ನೆ ಫೈಜಪುರದಲ್ಲಿ ಅವರು ಮುಖಂಡರೊಡನೆ ವ್ಯವಹರಿಸಿದ ರೀತಿಯಿಂದ ತಿಳಿದುಬರುತ್ತದೆ ಪ ನೆಹರುಗಳಿಗೆ ತಮ್ಮ ಧ್ಯೇಯ ಸಾಧನೆಯಲ್ಲಿ ರಾಯ್‌ರಂಥವರು ಅತ್ಯಗತ್ಯವೆಂದು ಹೇಳುತ್ತಾರೆ ರಾಯ್‌ರವರು ಸಮತಾವಾದಿಗಳ ಸಮ್ಮೇಳನದಲ್ಲಿ ಮಾಡಿದ ಭಾಷಣಗಳು ಆಂಗ್ಲ ಹಿಂದೀಯವರನ್ನು ಹೆದರಿಸುವಂಥಾದ್ದೇನೂ ಕಂಡುಬರುವುದಿಲ್ಲ ಅಂದ ಮೇಲೆ ಇವರು ಹೆದರಿ ಸಾಯುವುದೇಕೆ?

ಮಹಾತ್ಮರೂ ರಾಯ್‌ರೂ

ಮಹಾತ್ಮರಿಗೂ ಶ್ರೀ ರಾಯ್‌ರವರಿಗೂ ಅನೇಕ ವಿಷಯಗಳಲ್ಲಿ ಅಭಿಪ್ರಾಯ ಬೇಧವಿರುವುದಾದರೂ ರಾಯರು ಮಹಾತ್ಮರನ್ನು ವಿರೋಧಿಸಲು ಸಮ್ಮತಿಸುವವರಲ್ಲ, ತನ್ನಿಂದ ಕಾಂಗ್ರೆಸಿನಲ್ಲಿ ಬೇದಾಭಿಪ್ರಾಯ ಹುಟ್ಟುವುದಾದರೆ ತಾನು ದೂರವಿರುವೆನೆಂದು ಶ್ರೀ ರಾಯರು ಹೇಳಿರುತ್ತಾರೆ ಅದು ಶಾಂತಿಪ್ರಿಯರ ಕಾರ್ಯವಲ್ಲವೆ?

ಇಂಗ್ಲೆಂಡಿನಲ್ಲಿ ಮಕ್ಕಳ ಸಂಖ್ಯೆ ಕಡಿಮೆ

ಇಂಗ್ಲಿಷ ಮಹಿಳೆಯರು ತಮ್ಮ ಹೆಚ್ಚಿನ ಜೀವಮಾನವನ್ನು ಸಂತೋಷ ಕೂಟಗಳಲ್ಲಿಯೂ, ಕ್ಲಬ್ಬುಗಳಲ್ಲಿಯೂ, ಹೆಂಡದಂಗಡಿಗಳಲ್ಲಿಯೂ, ಅಥವಾ ಬಟ್ಟೆ ವಸ್ತ್ರ ದರ್ಜಿ ಅಂಗಡಿಗಳಲ್ಲಿಯೂ ಕಳೆದು ಸಂತುಷ್ಟರಾಗುವುದರಿಂದ ಅವರಿಗೆ ದಾಂಪತ್ಯ ಸುಖವನ್ನು ಪಡೆದು ಮಕ್ಕಳಿಂದ ಆಶೀರ್ವದಿಸಲ್ಪಡುವ ಇಚ್ಛೆ ಹೆಚ್ಚಾಗಿ ಇಲ್ಲದಂತಾಗಿರುವುದರಿಂದ ಇಂಗ್ಲೆಂಡಿನಲ್ಲಿಂದು ಜನಸಂಖ್ಯೆಗೆ ಸರಿಯಾಗಿ ಮಕ್ಕಳು ಕಮ್ಮಿಯಂತೆ.

ಮಂಗಳೂರು.

ಕೇರಳದ ಪ್ರಸಿದ್ಧ ಕವಿಗಳಾದ ವಳ್ಳತ್ತೋಳ್ ನಾರಾಯಣ ಮೆನೋನ್‌ರವರ ಜೊತೆಯಲ್ಲಿ ಬಂದಿದ್ದ ಕಥಾಕಳಿ ಕಲಾವಿದರು ತಮ್ಮ ಕಲಾಪ್ರದರ್ಶನವನ್ನು ಇಲ್ಲಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತೋರಿಸಿರುವರು. ಭರತಖಂಡದಲ್ಲೆಲ್ಲಾ ಪ್ರಖ್ಯಾತವಾಗಿದ್ದು, ಉದಯ ಶಂಕರರಿಂದ ಪ್ರಸಂಗಕ್ಕೆ ಇದರ ಶ್ರೇಷ್ಠತೆಯು ತೋರಿಬಂದಿದೆ. ನಮ್ಮೂರ ಬೈಲಾಟದ ಮೇಳದವರು ಇದರಿಂದ ತುಂಬಾ ವಿಷಯಗಳನ್ನು ತಿಳಕೊಳ್ಳುವುದಿದೆ.

ನಮ್ಮ ಕಾಂಗ್ರೆಸ್ ಕಮಿಟಿಯವರು ಮನೆ ಮನೆ ತಿರುಗಿ ಖಾದಿವಸ್ತ್ರ ವ್ಯಾಪಾರದ ವಿಕ್ರಯವನ್ನು ಪ್ರತಿ ವಾರವೂ ಮಾಡಲೇರ್ಪಡಿಸಿರುವರು. ದೇಶಪ್ರೇಮಿಗಳು ನಮ್ಮ ನಾಡಿನ ಉದ್ಧಾರದ ಕುರುಹಾದ ನಮ್ಮ ಬಡಬಾಂಧವರ ಹೊಟ್ಟೆಗೆ ಅನ್ನವೀವ ಖಾದಿಯನ್ನು ಕೊಂಡು ಪ್ರೋತ್ಸಾಹಿಸುವುದರಲ್ಲಿ ಹಿಂತೆಗೆಯುವವರಲ್ಲವೆಂದು ನಂಬಲಾಗಿದೆ.

"ಡಾ। ಬಿಸೆಂಟ್ ಭಾಷಣ ಸ್ಪರ್ಧೆ"ಯೊಂದನ್ನು ಇಲ್ಲಿಯ ಥಿಯೋಸೊಫಿಕಲ್ ಸಂಘದವರು ಏರ್ಪಡಿಸಿರುತ್ತಾರೆ. ಸ್ಪರ್ಧೆಗಳು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಆಗಲಿವೆ. ಸ್ಪರ್ಧಿಸಲಿಚ್ಛೆಯುಳ್ಳವರು ಇದೇ ತಾ ೧೫ರೊಳಗೆ ಕಾರ್ಯದರ್ಶಿಗಳಿಗೆ ಬರೆಕೊಳ್ಳಬೇಕು.

ಕದ್ರಿ ಮಾರ್ಕೆಟ್ ಬಳಿಯಲ್ಲಿರುವ ಒಬ್ಬ ಕ್ರಿಶ್ಚಿಯನನ ಮನೆಗೆ ರಾತ್ರಿ ಸಮಯ ಬೆಂಕಿಬಿದ್ದು ಪೂರ್ಣ ಭಸ್ಮವಾಗಿರುವುದು ತುಂಬಾ ನಷ್ಟವುಂಟಾಗಿದೆಂದು ತಿಳಿದು ಬಂದಿದೆ.

ಸುಪ್ರಸಿದ್ಧ ನಾಗರೀಕರೂ ಅಪ್ರತಿಮ ದೇಶಸೇವಕರೂ ಅತ್ಯುತ್ಸಾಹದ ಕಾಂಗ್ರೆಸ್‌ವಾಲರೂ ಆಗಿದ್ದ ಶ್ರೀಯುತ ಕಾರ್ನಾಡ ಸದಾಶಿವರಾಯರನ್ನು ಕಾಲವಿಧಿಯು ನಮ್ಮಿಂದ ಸೆಳೆದೊಯ್ಯಿತು. ತ್ಯಾಗಸೇವೆ, ಬಲಿದಾನವೆಂಬ ಶಬ್ದಗಳನ್ನು ತನ್ನಲ್ಲಿ ಮೂರ್ತಿಮತ್ಗೊಳಿಸಿ ಭಾರತ ಮಾತೆಯ ಚರಣಸೇವೆಯಲ್ಲಿ ತನ್ನ ದೇಹವನ್ನು ಮರಣಾಂತ್ಯದ ವರೆಗೂ ಸವೆದು ವೀರಸ್ವರ್ಗವನ್ನು ಪಡೆದ ಕರ್ನಾಟಕ ಮಾತೆಯ ವೀರ ಪುತ್ರನೇ ನಿನ್ನ ಪವಿತ್ರ ನಿಶ್ಕಲಂಕ ಆತ್ಮಕ್ಕೆ ಚಿರಶಾಂತಿಯುಂಟಾಗಲಿ. ರಾಯರಂಥಾ ವೀರಪುತ್ರರನ್ನು ಪಡೆದ ಕರ್ನಾಟಕ ಮಾತೆಯು ಅಲ್ಲ, ಭಾರತಮಾತೆಯೇ ಧನ್ಯಳು.

ದೇಶಭಕ್ತರ ಮೇಲೆ ಜಿಲ್ಲೆಯವರಿಗೆ ಇದ್ದ ಭಕ್ತಿ ವಿಶ್ವಾಸ, ಪ್ರೇಮಗಳಿಗನ್ನು ಅವರ ದಿವ್ಯಸ್ಮರಣೆಗೆ ಮನ್ನಣೆಯನ್ನು ಕೊಡುವುದಕ್ಕಾಗಿ ಮೊನ್ನೆ ತಾ ೧೨ನೇ ಸೋಮವಾರ ಮಂಗಳೂರಲ್ಲಿ ಪ್ರಚಂಡ ಹರತಾಳವನ್ನಾಚರಿಸಿದ್ದರು. ಸಾಯಂಕಾಲ ಮೌನಮೆರವಣಿಗೆಯೂ ನೆಹರೂ ಮೈದಾನದಲ್ಲಿ ಸಂತಾಪಸಭೆ ಸೇರಿದ್ದು, ಉಜ್ವಲ ಭಾಷಣಗಳ ಮೂಲಕ ನವ ಜ್ಯೂರಿನ ದೊಡ್ಡವರೆನಿಸಿಕೊಂಡ ಎಷ್ಟು ಮುಂದಿಗಳ ಸಾವಿಗೆ ಇಂತಾ ಹರತಾಳಗಳಾಗುತ್ತವೆ ಎಂದು ನೋಡಲಿದೆ.

ಮಹಾಕವಿ ವಳ್ಳತ್ತೋಳ್ ಮೆನೋನ್‌ರವರು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ನಿನ್ನೆ "ಕಥಾಕಳಿ"ಯ ವೈಶಿಷ್ಟ್ಯವನ್ನು ವಿವರಿಸಿ ಸಾರಸ್ಯದಿಂದ ಭಾಷಣಿಸಿತ್ತರು.

ಇಲ್ಲಿನ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ಇದೇ ತಾ ೧೭—೧—೩೭ನೇ ಆದಿತ್ಯವಾರ "ಭೂಕೈಲಾಸ" ಎಂಬ ನಾಟಕವನ್ನು ಆಡಿತೋರಿಸುವರು. ಸ್ಥಳ ಪರಿಸ್ಥಿತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ದರ ಅರ್ಧ ಏರ್ಪಡಿಸಲಾಗಿದೆ ಸ್ತುತ್ಯ!

ದಿವಂಗತ ಐದನೇ ಜಾರ್ಜ್ ಸಾರ್ವಭೌಮರ ಸ್ಮಾರಕ ನಿಧಿಯಲ್ಲಿ ಇದೇ ತಾ ೬—೧—೩೭ರ ವರೆಗೆ ದ. ಕ. ಜಿಲ್ಲೆಯಿಂದ ಒಟ್ಟು ರೂ ೧೩ ೫೮೩—೧—೭ ಜಮೆಯಾಗಿರುತ್ತದೆಂದು ತಿಳಿದುಬರುತದೆ.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರವರು ತಮ್ಮ ಎಲ್ ಡಿಸ ೦೧೨, ೪೩೩ ತಾ ೨—೩೭ರಲ್ಲಿ, ಇದೇ ತಾ ೨೩ಕ್ಕೆ ಫೆಬ್ರುವರಿ ನಲ್ಲಿ ಜರಗುವ ದ. ಕ. ಜಿಲ್ಲಾ ಬೋರ್ಡ ಮೂಲ ಶಾಲಾ ಅಧ್ಯಾಪಕರ ಪರಿಷತ್ತಿಗೆ ಬೋರ್ಡ ಮೂಲ ಶಾಲಾ ಅಧ್ಯಾಪಕರೆಲ್ಲ ಹಾಜರಾಗಲು ಅನುಮತಿಯನ್ನು ಕೊಟ್ಟಿದ್ದಾರೆ. ಈಗ ಪರಿಷತ್ತಿಗೆ ಹಾಜರಾಗುವ ಅಧ್ಯಾಪಕರ, ತಾ ೨೬ನೇ ಅಪರಾಹ್ನ ಮತ್ತು ೨೭ನೇ ಪೂರ್ವಾಹ್ನದ ಗೈರಹಾಜರಿ ಕೆಲ್ಲ ಡ್ಯೂಟಿಯೇಗಿರುವ ನಿಮಿತ್ತ (on duty) ಎಂದು ಗಣಿಸಲಾಗುವುದು ಎಂದು ಆಜ್ಞಾಪಿಸಿರುತ್ತಾರೆ. ಪರಿಷತ್ತಿನಲ್ಲಿ ಮಹತ್ಕಾರ್ಯಗಳು ಆಗಲಿಕ್ಕಿರುವುದರಿಂದ ಪರಿಷತ್ತಿಗೆ ಎಲ್ಲರೂ ಕಡ್ಡಾಯ ಬರಬೇಕಾಗಿ ಪ್ರಾರ್ಥನೆ.

ಇಲ್ಲಿಯ ಬಜಾರಿನಲ್ಲಿರುವ ಒಂದು ಗೌಡ ಸಾರಸ್ವತರ ಮನೆಯಲ್ಲಿ ಒಬ್ಬ ೧೩ ವರ್ಷದ ಹುಡುಗನು ಕೈತಪ್ಪಿ ಬಾವಿಯಲ್ಲಿ ಬಿದ್ದು ಮರಣಪಟ್ಟಿರುವನು.

ಕಳೆದ ಆದಿತ್ಯವಾರ ಇಲ್ಲಿಯ ಮುಸ್ಲಿಂ ಶಿಕ್ಷಣಪ್ರದರ್ಶನ ಸಂಘದವರು ಒಂದು ಪುಟ್ಟ ಸತ್ಕಾರಕೂಟವನ್ನು ಏರ್ಪಡಿಸಿದರು. ಅನೇಕ ಅಧ್ಯಾಪಕರೂ, ಪತ್ರಿಕಾ ಪ್ರತಿನಿಧಿಗಳೂ, ಹಿತೈಷಿಗಳೂ ದಯಮಾಡಿಸಿದ್ದರು. ಪ್ರಾರ್ಥನೆ, ಲಘು ಉಪಹಾರ, ಸಂಗೀತಗಳಾದ ಮೇಲೆ ಶ್ರೀ ಕಣ್ಣಪ್ಪನವರನ್ನು ಆ ದಿವಸದ ಅಧ್ಯಕ್ಷರನ್ನಾಗಿ ಮಾಡಿ ಶಿಕ್ಷಣಪ್ರದರ್ಶನದ ಏರ್ಪಾಡಿನ ವಿಚಾರದ ಕುರಿತು ತರ್ಕಿಸಲಾಗಿ, ಯೋಗ್ಯ ಕಾರ್ಯಕ್ರಮವನ್ನು ಅನುಮೋದಿಸಲಾಯಿತು. ಅಧ್ಯಕ್ಷರು ಅನೇಕ ಸಲಹೆಗಳನ್ನಿತ್ತು ಒಂದು ಚಿಕ್ಕ ಭಾಷಣಮಾಡಿದರು. ವಂದನೆಗಳಾದ ಮೇಲೆ ಸಭೆ ಮುಗಿಯಿತು.

ಸ್ಥಳೀಯ ಮುಸ್ಲಿಂ ಉಪಾಧ್ಯಾಯ ಸಂಘದ ವಾರ್ಷಿಕ ಸಭೆಯು ಮಹಮ್ಮಡನ್ ಎಲಿಮೆಂಟರಿ ಶಾಲೆಯಲ್ಲಿ ಪೌರ ಸಭಾಧ್ಯಕ್ಷ ಶ್ರೀ ಡಾ। ವಿಠಲ ಶೆಟ್ರು ಅಧ್ಯಕ್ಷತೆಯಲ್ಲಿ ಸೇರಿತ್ತು. ಕ್ರಮಪ್ರಕಾರ ಪ್ರಾರ್ಥನೆ, ಸಂಗೀತ, ವರದಿ ವಾಚನ, ನವೀನ ಕ್ರಮದ ವ್ಯಾಯಾಮ ಪ್ರದರ್ಶನ (ಮಕ್ಕಳಿಂದ) ಗಳಾದ ಮೇಲೆ ಸಂತೋಷಪಟ್ಟು ಅಧ್ಯಕ್ಷರು ಒಂದು ಭಾಷಣಕೊಟ್ಟರು. ಸಂಘದ ಕಾರ್ಯಕಲಾಪಗಳನ್ನು ಕೊಂಡಾಡಿ ಸಂಘದ ಧ್ಯೇಯಗಳು ಸ್ವಾತಂತ್ರ್ಯವೆಂದರು. ಮೇಲಾಗಿ ಐಕ್ಯತೆಯನ್ನು ಅಭಿನಂದಿಸಿದರು. ಕಾರ್ಯದರ್ಶಿಗಳು ಸಕಲರಿಗೆ ವಂದನೆಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು. ಮುಸ್ಲಿಂ ಬಂಧುಗಳ ಈ ಪರಿಶ್ರಮವು ಯಶಸ್ಸನ್ನು ಪಡೆಯಲೆಂದೇ ನಮ್ಮ ಪ್ರಾರ್ಥನೆ.

ಮಹಾಜನಗಳಲ್ಲಿ ವಿನಂತಿ:— ಬಾವುಟಗುಡ್ಡೆಗೆ ಏರುವಲ್ಲಿ ಕೋರ್ಟುವಾರ್ಡಿನಲ್ಲಿ ನಮ್ಮ ಕೋಮನ್‌ವೆಲ್ತ್ ಇಂಜಿನಿಯರಿಂಗ್ ವರ್ಕ್‌ಶೋಪುಗಳಿರುವದಷ್ಟೆ. ಸದರಿ ವರ್ಕ್‌ಶೋಪಿನ ಯಂತ್ರ ಸಲಕರಣೆಗಳು ರಾತ್ರಿವೇಳೆಗಳಲ್ಲೂ ಕಾರ್ಯನಿರತ ಪ್ರತಿಬಂಧಕವಾಗಿ ಗಂಟೆ ೯ರಿಂದ ಬೆಳಗ್ಗೆ ೪ ಗಂಟೆಯ ವರೆಗೆ ಚಲಾವಣೆಯಾಗುವ ಸಮ್ಮಂಧ ಸುತ್ತುಮುತ್ತು ವಾಸಿಸುವ ಜನಗಳ ನಿದ್ರೆ ವ ಆರೋಗ್ಯಕ್ಕೆ ಬಹಳ ಹಾನಿಕರ ಉಂಟುಮಾಡುತ್ತದೆಂಬ ವಿಷಯವು ಪೋಲಿಸು ವ ಮುನ್ಸಿಪಾಲಿಟಿಯ ಅವಗಾಹನೆಗೆ ಬಂದಿದ್ದರೂ ಹೆಚ್ಚಿನ ಸಿಕ್ಷಾ ತಗೆದುಕೊಳ್ಳದ್ದು ಬಹಳ ಶೋಚನೀಯವಾಗಿರುತ್ತದೆ. ಇನ್ನಾದರೂ ಇಂಥಾ ಸಂಗತಿಗಳ ಕುರಿತು ಆಲೋಚಿಸತಕ್ಕ ವ್ಯವಸ್ಥೆಯನ್ನು ಮಾಡಲಾರರೇ? ಎಂದೆಲ್ಲ ಬಾಧಿತರು ವಿನಂತಿಸಿಕೊಳ್ಳುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಕರ್ನಾಟಕ ಮುಂದಾಳುಗಳಿಗೆ ಆಮಂತ್ರಣ— ಅಖಿಲ ಕರ್ನಾಟಕದ ಮುಂದಾಳುಗಳು ನಮ್ಮ ಜಿಲ್ಲೆಯಲ್ಲಿ ಸಂಚರಿಸಿ ಜಿಲ್ಲಾ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ತಾವು ಕೈಕೊಂಡಿರುವ ಕಾರ್ಯದಲ್ಲಿ ಸಹಾಯವನ್ನೀ ಕೊಡುವುದ ಸಲುವಾಗಿ ಜಿಲ್ಲಾ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಿಂದ ಡಾ। ವಿಠಲ್ ಶೆಟ್ರು ಧಾರವಾಡದ ಶ್ರೀ ದಿವಾಕರರಿಗೂ ಬೆಳಗಾಂವಿಯ ಶ್ರೀ ಗಂಗಾಧರರಾವ್ ದೇಶಪಾಂಡೆಯವರಿಗೂ ಆಮಂತ್ರಣವಿತ್ತರು.

ಅಖಿಲಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ ಯು ಸಿ ಸುಬ್ರಹ್ಮಣ್ಯಭಟ್ಟ ಇವರನ್ನು ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲಿಗೆ ಕಾಂಗ್ರೆಸಿನ ಪರವಾಗಿ ಉಮೇದ್ವಾರರಾಗಿ ನಿಲ್ಲಲು ಅನುಮತಿಯನ್ನು ಕೊಟ್ಟಿದ್ದರು. ಆದರೆ ಈ ಅನುಮತಿಯು ಬರುವುದರೊಳಗಾಗಿಯೇ ಶ್ರೀ ಭಟ್ಟರು ತಮ್ಮ ಸಾಲ್ಯಾಡಿ ಸದಸ್ಯತ್ವಕ್ಕೆ ಸಹಾ ರಾಜೀನಾಮೆಯನ್ನು ಕೊಟ್ಟಿರುವುದರಿಂದ ಕಾಂಗ್ರೆಸ್ಸಿನ ಪರವಾಗಿ ಕೌನ್ಸಿಲಿಗೆ ನಿಲ್ಲಲು ಕೊಟ್ಟ ಅನುಮತಿಯನ್ನು ಹಿಂದಕ್ಕೆ ತೆಗೆಯಲಾಯಿತು.

ಮಂಗಳೂರಿನ ಬಾಂಧವಬಳಗದ ಒಂಭತ್ತನೆಯ ವಾರ್ಷಿಕೋತ್ಸವವು ಇದೇ ಜನವರಿ ತಾ ೧೭ನೇ ಆದಿತ್ಯವಾರ ಸಾಯಂಕಾಲ ಗಂಟೆ ೪॥ಕ್ಕೆ ಕೆನರಾ ಹೈಸ್ಕೂಲಿನ ಸುಬ್ರಾಯ ಪೈ ಮೆಮೋರಿಯಲ್ ಹೋಲಿನಲ್ಲಿ ನಡೆಯುವುದು. ಗವರ್ನಮೆಂಟ್ ಕಾಲೇಜಿನ ಜೂನಿಯರ್ ಪಂಡಿತರಾದ ಶ್ರೀಯುತ ಕೆ ವಿ ಕೃಷ್ಣಭಟ್ಟ ವಿದ್ವಾನ್ ಇವರು ಅಧ್ಯಕ್ಷರಾಗಲು ತಮ್ಮ ಸಮ್ಮತಿಯನ್ನಿತ್ತಿರುವರು. ಕನ್ನಡ ಭಾಷಾಭಿಮಾನಿಗಳೆಲ್ಲರಿಗೂ ಸುಸ್ವಾಗತವಿದೆ.

ಸ್ಥಳೀಯ ಸರಕಾರೀ ತರಬೇತಿ ಶಾಲೆಯಲ್ಲಿ ಕಳೆದ ತಾ, ೧೩ರಲ್ಲಿ ಶಿಕ್ಷಣ ಪ್ರದರ್ಶನವನ್ನು ಮಾನ್ಯ ಕಲೆಕ್ಟರರವರು ತೆರೆದರು. ಜಾಜಿ ಸಾಯಂಕಾಲ, ಶಿಕ್ಷಣ ವಿಚಾರದಲ್ಲಿ ಅನುಭವಸ್ಥ ಮಹನೀಯರಿಂದ ಭಾಷಣಗಳಾದುವು. ಮೈಸೂರಿನ ಶ್ರೀ ಕೆ ರಾಜರತ್ನಂ ಇವರು ಶಿಶುಗೀತೆಗಳ ಮೇಲೆ ಸ್ವಾರಸ್ಯ ಭಾಷಣವಿತ್ತರು. ನಿನ್ನೆಯೂ ಭಾಷಣಗಳಾಗಿವೆ.

ತಾಲೂಕುಗಳಿಂದ!

ದೇವಸ್ಯಪಡೂರು— ಈ ಗ್ರಾಮದ ಬೋರ್ಡು ಶಾಲಾ ಮಕ್ಕಳು ಹಾಗೂ ಯುವಕರು ಕೂಡಿ ತಾರೀಕು ೨—೧—೩೭ನೇ ಶನಿವಾರ ರಾತ್ರಿ ಗಂಟೆ ೭॥ಕ್ಕೆ ಸದರಿ ಶಾಲಾ ಮುಖ್ಯೋಪಾಧ್ಯಾಯರಾದ ಅಮ್ಮುಂಜೆ ಡಿ. ನಾರಾಯಣರಾಯರಿಂದ ನೂತನವಾಗಿ ರಚಿಸಲ್ಪಟ್ಟ "ಗ್ರಹಚಾರ ಪರಿಹಾರ" ಎಂಬ ಚಿಕ್ಕ ಗ್ರಾಮಾಚಿಕ ನಾಟಕವನ್ನೂ, ಶಾಲಾ ಬಾಲಕಿಯರು "ಸಾವಿತ್ರಿ" ಎಂಬ ನಾಟಕವನ್ನೂ ಆಡಿ, ಬಂದಿದ್ದ ಊರ ಹಾಗೂ ಪರ ಊರ ಮಹನೀಯರನ್ನು ಸಂತೋಷಪಡಿಸಿದರು. ರಾ। ಅಜ್ಜಾವರ ಎಂ. ರಾಮರಾಯರ ಸಿನರಿಗಳು ನೇತ್ರಾನಂದಕರವಾಗಿದ್ದುವು. ಬಳಿಕ ರಾ। ರಾ ಎ. ಸುಬ್ಬರಾಯರ ಹಾಡುವಿಕೆಯಿಂದ ಯಕ್ಷಗಾನ ತಾಳದ ಸ್ಥಳೀಯ ಸಭೆಯು ಅತಿ ವೈಭವದಿಂದ ನೆರವೇರಿತು.

ಸುರತ್ಕಲ್— ಇಲ್ಲಿಯ ಇದ್ದ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಟ್ಟಿರುವ "ಫ್ರೆಂಡ್ ವಿದ್ಯಾದಾಯಿನೀ ಸೋಸೈಟಿ"ಯು ಈ ಮೊದಲೇ ನಿಶ್ಚಯಿಸಿರುವಂತೆ ಇದೇ ಬರುವ ತಾರೀಕು ೧೭—೧—೩೭ನೇ ಆದಿತ್ಯವಾರ ಅಪರಾಹ್ನ ಗಂಟೆ ೧ಕ್ಕೆ ಸದರಿ ಶಾಲಾ ಮಂದಿರದಲ್ಲಿ ಸನ್ಮಾನ್ಯ ಮಹನೀಯರ ಸಮ್ಮುಖದಲ್ಲಿ ತೆಗೆಯಲಾಗುವುದು. ಸರ್ವರಿಗೂ ಸ್ವಾಗತವಿದೆ.

ಕರಂದಾಡಿ:— ಇದೇ ತಿಂಗಳ ತಾರೀಕು ೯ನೇ ಶನಿವಾರ ಕಾಪು ಸರ್ಕಲಿನ ಸರ್ಕಲ್ ಮೀಟಿಂಗು ಕರಂದಾಡಿ ಶಾಲೆಯಲ್ಲಿ ಕಾಪು ಶಾಲೆಯ ಮುಖ್ಯೋಪಾಧ್ಯಾಯರಾದ ಮ। ರಾ। ಕೆ ದೇಜಾಶೆಟ್ರುವರ ಅಧ್ಯಕ್ಷತೆಯಲ್ಲಿ ಜರಗಿತು. ಸುಮಾರು ಹತ್ತು ಯಾ ಹನ್ನೆರಡು ವರ್ಷದ ಒಬ್ಬ ಬಾಲಕಿಯು ಗೋಪ ಲಾವಣ್ಯನೆಂಬ ಒಂದು ಕಥೆಯನ್ನು ಹರಿಕಥಾ ರೂಪವಾಗಿ ಬಹು ಇಂಪಾಗಿ ಹಾಡಿತೋರಿಸಿ ಪ್ರೇಕ್ಷಕರ ಚಿತ್ತವನ್ನು ಸಂತೋಷಗೊಳಿಸಿದಳು. ಆಮೇಲೆ ಪುಟ್ಟ ಬಾಲಕರ ಕರತಾಳದಿಂದ ಕೂಡಿದ ಭಜನೆಯೂ ಮತ್ತು ಬಾಲಕಿಯರು ಒಳ್ಳೆಯ ಚಟುವಟಿಕೆಯಿಂದ ಆಡಿದ ಲೇಜಿಮ್ ಮತ್ತು ಕೋಲಾಟವೂ ಬಹು ಮನೋರಂಜಕವಾಗಿದ್ದುವು. ಸಭಿಕರ ಹಿತವಾದವು ಮುಗಿದ ಮೇಲೆ ಸಭಾಧ್ಯಕ್ಷರ ಭಾಷಣದಿಂದ ಸಭೆಯು ಮಂಗಳಗೀತದೊಡನೆ ಮುಕ್ತಾಯಗೊಂಡಿತು. ಕಡೆಗೆ ಶಾಲಾ ಮೆನೇಜರರು ಒದಗಿಸಿಕೊಟ್ಟ ತಿಂಡಿತೀರ್ಥಗಳನ್ನು ಸ್ವೀಕರಿಸಿ ಎಲ್ಲರೂ ಸಂತೋಷದಿಂದ ಅಗಲಿದರು.

ಮುಡಪ್ಪಾಡಿ: ಇಲ್ಲಿಯ ಎಲಿಮೆಂಟರಿ ಶಾಲಾ ಅಷ್ಟಮ ವಾರ್ಷಿಕ ವರ್ಧಂತಿ ಉತ್ಸವವು ತಾರೀಕು ೧೧—೧—೩೭ನೇ ಗುರುವಾರ ಅಪರಾಹ್ನ ಗಂಟೆ ೩ಕ್ಕೆ ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಮುಖ್ಯೋಪಾಧ್ಯಾಯರಾದ ಮ ರಾ ಕೆ ಗೋಪಾಲರಾವ್ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ವರದಿ ವಾಚನ ಕೋಲಾಟ ಜಡೆ ಆಟ, ವಿವಿಧ ವಿನೋದ ಪದಗಳು, ಕಥಾನಟನೆಗಳಿಂದ ಮಕ್ಕಳು ಸಭಿಕರನ್ನು ಆನಂದಗೊಳಿಸಿದರು. ಮಕ್ಕಳಿಗೆ ಇನಾಂ ಹಂಚಿಯಾದ ತರುವಾಯ ಸಭಿಕರು ಮತ್ತು ಸಭಾಧ್ಯಕ್ಷರು ತಮ್ಮ ಸರಸವಾದ ಮಾತುಗಳಿಂದ ಬಾಷಣವಿತ್ತರು. ಕೊನೆಗೆ ಧನ್ಯವಾದಾರ್ಪಣ ಮಾಡಿ ಸಭೆಯು ಮುಕ್ತಾಯವಾಯಿತು. ಮರ ದಿನ ರಾತ್ರಿ ಶ್ರೀ ಮಂದರ್ತಿ ಮೇಳದ ದಶಾವತಾರದ ಆಟವು ಅಧ್ಯಕ್ಷರ ನೇತೃತ್ವದಲ್ಲಿ ನಡೆಯಿತು. ಸಭಿಕರು ಆನಂದಾತಿಶಯದಿಂದ ತೆರಳಿದರು.

ಕೆಲವು ದಿನಗಳ ಹಿಂದೆ ಇಲ್ಲಿನ ಉಳ್ಳಾಲ ಸಂಕದ ಬಳಿಯಲ್ಲಿ ಸುಮಾರು ೩೦ ಮಂದಿ ಹೆಂಗುಸರು ಚಿಪ್ಪು ಹೆಕ್ಕುತ್ತಿದ್ದವರು ಅಕಸ್ಮಾತ್ತಾಗಿ ನೀರುಪಾಲಾಗುತ್ತಿರುವಾಗ, ಐತಪ್ಪ, ಸೋಮಯ್ಯ, ಸೀತಾರಾಮ ಮತ್ತು ಸುಬ್ಬ ಎಂಬ ಸಾಹಸಿ ಮೊಗವೀರರು ಅವರನ್ನು ಕ್ಷಿಪ್ರ ಕಾಲದಲ್ಲಿ ದಡಕ್ಕೆಳೆದು ರಕ್ಷಿಸಿದರು. ಇವರಲ್ಲಿ ಐತಪ್ಪನೆಂಬವನು ಕೆಲವು ಕಾಲದ ಹಿಂದೆ ಒಬ್ಬ ಹುಡುಗನನ್ನೂ ಒಂದು ಮಗುವನ್ನೂ ರಕ್ಷಿಸಿದ್ದನು. ನೇತ್ರಾವತಿಗೆ ಸ್ತ್ರೀಯರೆಂದರೆ ಬಹಳ ಪ್ರೀತಿಯೆಂದು ಕಾಣುತ್ತದೆ.

ಇದೇ ತಾ ೧೩ನೇ ಸಾಯಂಕಾಲ ಕದ್ರಿಯಲ್ಲಿ ಬಿಲ್ಲವ ಜಾತಿಯವನೊಬ್ಬನೂ ಭಂಡಾರಿ ಜಾತಿಯವನೊಬ್ಬರೂ ಜಗಳವಾಡಿಕೊಂಡು, ಮೂವರೂ ವಿಶೇಷ ರೀತಿಯಲ್ಲಿ ಜಖಂಗೊಂಡು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಜಗಳದಲ್ಲಿ ಚೆತ್ತ ಮತ್ತು ತಲವಾರು ಉಪಯೋಗಿಸಲಾಗಿದೆಯೆಂದು ತಿಳಿದು ಬರುತ್ತದೆ.

ಸುಳ್ಯ:— ತಾ. ೯—೧—೧೯೩೭ರಲ್ಲಿ ಸುಳ್ಯದಲ್ಲಿ ಶ್ರೀಯುತ ಕುದಿಯಪ್ಪ ಲಕ್ಷ್ಮೀನಾರಾಯಣಯ್ಯನವರ ಅಧ್ಯಕ್ಷತೆಯಲ್ಲಿ ಮಹಾಸಭೆಯೊಂದು ಸೇರಿತು. ಈ ಸಭೆಗೆ ಪುತ್ತೂರಿನ ಅನೇಕ ಮಹನೀಯರೂ ಪ್ರಮುಖ ವಕೀಲರೂ ಹಾಜರಿದ್ದರು. ಈ ಸಭೆಯನ್ನು ಜರಗಿಸಿದ ಕಾರಣಗಳನ್ನು ಹಿ. ರಾಮರಾಯ ಮಲ್ಯರು ತಿಳಿಸಿದ ಮೇಲೆ ಶ್ರೀಗಳಾದ ಬಿ ರಂಗರಾಯರು, ಎಚ್. ಗಣಪತಿರಾಯರು, ಪಿ. ಮಂಗೇಶರಾಯರು, ಹೊಳ್ಳರು, ಎಂ. ಸದಾಶಿವರಾಯರು ಇವರೇ ಮೊದಲಾದವರು ಅನೇಕ ವರ್ಷಗಳಿಂದಲೂ ದೇಶದ ಏಳಿಗೆಗಾಗಿ ಅಹೋರಾತ್ರಿ ತನುಮನಧನಗಳಿಂದ ಕೆಲಸಮಾಡುವ ಕಾಂಗ್ರೆಸ್ ಉಮೇದ್ವಾರರಿಗೆ ಓಟುಗಳನ್ನು ಕೊಡಬೇಕಾಗಿ ಜಬರ್ ಭಾಷಣಗಳನ್ನಿತ್ತಬಳಿಕ ಸಭೆಯು ಮುಗಿಯಿತು.

ಬೆಟ್ಟಂಪಾಡಿ:— ಕಾಂಗ್ರೆಸ್ ಮುಖಂಡರೆಲ್ಲ ಬಂದಿದ್ದು, ಚುನಾವಣೆಯ ವಿಷಯ ಭಾಷಣಗಳಾದುವು. ಸ್ಥಳೀಯರಿಂದ ಕಾಂಗ್ರೆಸ್ಸಿಗೆ ಓಟುಕೊಡುವುದಾಗಿ ಭರವಸೆ ದೊರಕಿತು.

ಮೂಲ್ಕಿ:— ಕಾರ್ನಾಡ್ ಸದಾಶಿವರಾಯರ ನಿಧನ ಸಂತಾಪಕ್ಕಾಗಿ ಇಲ್ಲಿ ಹರತಾಳ ಆಚರಿಸಲಾಗಿತ್ತು. ಶೋಕಸೂಚಕ ಸಭೆಗಳೂ ಸೇರಿದ್ದುವು.

ಅದೇ ಸಂಜೆಗೆ ಮೂಲ್ಕಿಯಲ್ಲಿ ಒಂದು ಕಾಂಗ್ರೆಸ್ ಕಮಿಟಿ ಸ್ಥಾಪಿಸುವ ವಿಚಾರದ ಕುರಿತು ಒಂದು ಸಭೆಯಾಯಿತು.

ಮೂಲ್ಕಿ ಹೈಸ್ಕೂಲಿನ ಸೋಡಿಯನ್ನು ಇದೇ ಬರುವ ತಾ. ೩೧—೧—೩೭ಕ್ಕೆ ತೆಗೆಯಲಾಗುತ್ತದೆಂದು ತಿಳಿದು ಬರುತ್ತದೆ.

ಉಡುಪಿ:— ಕಳೆದ ವಾರ ಇಲ್ಲಿಯ ಬೋರ್ಡು ಹೈಸ್ಕೂಲಿನ ವಠಾರದಲ್ಲಿ ಊರ ಶಾಲಾಮಕ್ಕಳ ವ್ಯಾಯಾಮ ಪ್ರದರ್ಶನವಾಯಿತು. ಊರ ಹಿತೈಷಿಗಳು ಬಹಳ ಮುತವರ್ಜಿ ತೆಗೆದುಕೊಂಡಿದ್ದರು.

ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಎ ಬಿ ಶೆಟ್ರು ಉಡುಪಿಯ ಆಜು ಬಾಜುಗಳಲ್ಲಿ ಸಂಚಾರಮಾಡಿ ಭಾಷಣ ಮಾಡುತ್ತಿರುವರು.

ವರ್ಷಂಪ್ರತಿ ನಡೆಯುವಂತೆ ಇಲ್ಲಿ ಮಕರ ಸಂಕ್ರಾಂತಿ ಉತ್ಸವಗಳು ನಡೆದುವು.

ಕಾ। ಸದಾಶಿವರಾಯರ ನಿಧನದ ಸಂತಾಪಸೂಚಕ ಹರತಾಳವು ಆಚರಿಸಲ್ಪಟ್ಟು, ಶೋಕಸೂಚಕ ಠರಾವುಗಳು ನೆರೆದ ಸಭೆಯಲ್ಲಿ ಅನುಮೋದಿಸಲಾದುವು.

ಚುನಾವಣೆಯ ಪ್ರಚಾರ.

ಚುನಾವಣೆಯ ಪ್ರಚಾರಕ್ಕಾಗಿ ಜೋಡಿ ಕಾರುಗಳ ಮುಖಂಡರು ಈ ಕೆಳಗಿನ ಸ್ಥಳಗಳಲ್ಲಿ ಭಾಷಣಮಾಡಲಿರುವರು. ಸ್ಥಳೀಯರು ಪ್ರೋತ್ಸಾಹಿಸಬೇಕಾಗಿ ಬರೆದು ವಿನಂತಿ.

ತಾ ೧೫—೧—೩೭ಕ್ಕೆ ವಿಟ್ಲ ದೇವಸ್ಥಾನದ ವಠಾರದಲ್ಲಿ ಸಭೆ. ಅದೇ ದಿವಸ ಪಡ್ನೂರು ಗ್ರಾಮದಲ್ಲಿ ಸಭೆ. ತಾ ೧೬ರಲ್ಲಿ ಕಡಬ ಕಸಬೆಯಲ್ಲಿ ಮತ್ತು ರಾಮಕುಂಜ ಗ್ರಾಮದಲ್ಲಿ ಸಭೆ. ತಾ ೧೭ಕ್ಕೆ ಗುರುವಾಯನಕೆರೆ ಮತ್ತು ಬಂಗಾಡಿ ಗ್ರಾಮದಲ್ಲಿ ಸಭೆ.

ಮದ್ರಾಸು ಕೌನ್ಸಿಲ್ ಓಟರರುಗಳಲ್ಲಿ ವಿನಂತಿ

ಈ ಮೊದಲು ನಾನು ನನ್ನ ಕೌನ್ಸಿಲು ಉಮೇದ್ವಾರಿಕೆಯ ಕುರಿತು ಪತ್ರಿಕೆಯಲ್ಲಿ ಜಾಹೀರು ಮಾಡಿ ಎಲ್ಲ ಓಟರರುಗಳಿಗೂ ಕಾಗದ ಮೂಲಕ ಪ್ರೋತ್ಸಾಹವನ್ನು ಅಪೇಕ್ಷಿಸಿದ್ದೆನಷ್ಟೆ! ನಾನು ಸ್ವತಹ ಕೂಡಿದಷ್ಟು ಓಟರರುಗಳನ್ನು ನೋಡಬೇಕೆಂದಿದ್ದೇನೆ. ಶ್ರೀ ಸ್ಥಳವನ್ನು ಬಿಟ್ಟು ಹೆಚ್ಚಿನ ದಿವಸ ಜಿಲ್ಲೆಯಲ್ಲಿ ತಿರುಗಾಡಲು ಅನುಕೂಲವಾಗದ ಕಾರಣವೂ ನಾನು ಹೋದ ಸಮಯ ಕೆಲವು ಓಟರರುಗಳು ತಮ್ಮ ಕಾರ್ಯೋದ್ದೇಶ್ಯದ ಬೇರೆ ಕಡೆಗೆ ಹೋಗಿದ್ದುದರಿಂದಲೂ ಅವರನ್ನು ನೋಡಲು ಅವಕಾಶವಾಗಲಿಲ್ಲ. ಕಾಲಸಂಕೋಚದಿಂದ ಅಥವಾ ಶರೀರ ಅಸೌಖ್ಯತೆಯಿಂದ ಹೆಚ್ಚು ದೂರ ನಡೆದು ಹೋಗಿ ಕೆಲವು ಓಟರರುಗಳನ್ನು ನೋಡಲು ಅನಾನುಕೂಲವಾದರೆ, ಅವರು ಯಾವ ತರಹದ ಭೇದ ಅಥವಾ ವಿರೋಧಾಭಿಪ್ರಾಯವನ್ನು ಹೊಂದಬಾರದಾಗಿ ವಿನಂತಿ.

ಇಷ್ಟರ ತನಕ ಓಟರರುಗಳೂ ಮತ್ತು ಇತರ ಸ್ನೇಹಿತರುಗಳೂ ತೋರಿಸಿರುವ ಗೌರವ ಸಹಾನುಭೂತಿ ಮತ್ತು ಪ್ರೋತ್ಸಾಹಕ್ಕೆ ಕೂಡಾ ತುಂಬಾ ಆಭಾರಿಯಾಗಿರುವೆನು. ಇಂಥ ಪರಸ್ಪರ ಪ್ರೇಮವಾತ್ಸಲ್ಯವು ಅಭ್ಯುದಯ ವೃದ್ಧಿಯಾಗಲೆಂದು ಶ್ರೀ ಸ್ವಾಮಿಯಲ್ಲಿ ಪ್ರಾರ್ಥನೆ.

ಮಂಜಯ್ಯ ಹೆಗ್ಗಡೆ, ಧರ್ಮಸ್ಥಳ.

TRUE COPY.

Nanjangood, dated 29th Oct 36

From

B. M. Sivaramiah,

(Bellur M. Sivaram)

First Grade Pleader,

Brindaban Kuteer, NANJANGOOD.

To

The Secretary, The C. P. C. Co., Ltd., MANGALORE.

Sir,

From here I write to thank you heartily for the excellent convenience you were pleased to afford me in my lecture tours in South Kanara Ever since, I got down from train at Hassan your service took charge of me and at Saklaspur, Puttur Mangalore, Udipi (especially), Someshwar and even at Agumbe, your service was kind and all felicitous to me I felt as if I had my own car with me throughout I may say here that I observed that all other passengers also were treated alike and their conveniences attended to promptly, properly and what is most remarkable courteously I think I have derived from your service in my tour ten times the benefit I have really paid for the same I conclude by saying yours is an excellent service and you deserve every praise for the public good you are doing all along.

Please accept my heartfelt thanks and congratulations

Yours sincerely

(Sd) B. M. Sivaramiah.

ತಯಾರಾಗಿವೆ! 1937ನೇ ಇಸವಿಯ ಸಣ್ಣ ಮತ್ತು ದೊಡ್ಡ ಸೈಜಿನ ಶಾರದಾ ಡೈರಿಗಳು ಈಗಾಗಲೇ ಸಿದ್ಧವಾಗಿವೆ ಸಣ್ಣ ಸೈಜು ಬರೇ ನಾಲ್ಕಾಣೆ – ದೊಡ್ಡದಕ್ಕೆ ಬರೇ ಎಂಟಾಣೆ **ತಯಾರಾಗಿವೆ!**

THE BOMBAY LIFE ASSURANCE CO., LTD.

Estd. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies
2. Rebate for larger assurances
3. Accident Risk covered on small extra premiums
4. Attractive Bonuses.

It pays you to represent this Company.

Wanted Agents in unrepresented parts

—1936—

OUR VALUATION YEAR

Take a BOMBAY LIFE Policy now, and share in the profits



Apply to.—

Messs Kochikar Brothers,

Madras Branch Secretaries.

Branches at -	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India	Charni Road, Bombay No. 4

ಕೊನೆಯ ಪಾನಿಪತ್ ಯುದ್ಧದ ಅರ್ಥ.

ಹಿಂದೂದೇಶದ ಚರಿತ್ರೆಯಲ್ಲಿ ಪಾನಿಪತ್ತು ಒಂದು ಪ್ರಾಮುಖ್ಯ ಪಾತ್ರವನ್ನು ಆಡಿರುವುದು. ಅದರಿಂದ ಅನೇಕ ಸಾಮ್ರಾಜ್ಯಗಳು ಸ್ಥಾಪನೆಯಾಗಿವೆ, ಅನೇಕವುಗಳು ಧ್ವಂಸವಾಗಿಹೋಗಿವೆ. ಪ್ರಥಮ ಪಾನಿಪತ್ ಯುದ್ಧದಲ್ಲಿ ಮೊಗಲ್ ಸಾಮ್ರಾಜ್ಯದ ಸ್ಥಾಪಕನಾದ ಬಾಬರನು, ಹಿಂದೂ ದೇಶವನ್ನು ಪಡೆದನು ಎರಡನೆ ಪಾನಿಪತ್ ಯುದ್ಧದಲ್ಲಿ ಅಕ್ಬರನು ಕಳೆದುಹೋದ ಸಾಮ್ರಾಜ್ಯವನ್ನು ಹಿಂದಕ್ಕೆ ಪಡೆಕೊಂಡನು. ಮೂರನೆ ಮತ್ತು ಕೊನೆಯ ಪಾನಿಪತ್ ಯುದ್ಧದಲ್ಲಿ ಒಂದು ಹಿಂದೂ ಸಾಮ್ರಾಜ್ಯದ ಆಶಯಗಳು ಧ್ವಂಸವಾದವು. ಮರಾಟರ ಮತ್ತು ಮುಸ್ಲಿಮರ ಬಲವು ವಿಶೇಷತರದಲ್ಲಿ ಕುಂದಿಹೋಯಿತು—ಅದರಿಂದ ಬ್ರಿಟಿಷರ ಏಳ್ಗೆಗೆ ಹಾದಿ ಹಾಸಿದಂತಾಯಿತು.

ಶಿವಾಜಿಯನಂತರ ಅಧಿಕಾರಕ್ಕೆ ಒಂದು ಪ್ರಾಬಲ್ಯಹೊಂದಿದ ಪೇಶ್ವೆಯರ ಸಾರ್ವಭೌಮಿಕೆ ದರ್ಪವಲ್ಲದಿದ್ದರೆ, ನಿಜವಾಗಿಯೂ ಶಿವಾಜಿ ಕ್ರಮಗಳನ್ನೆ ಅವರು ಆಚರಿಸುತ್ತಿದ್ದರೆ, ಹಿಂದೂ ದೇಶದ ಚರಿತ್ರೆಯು ಬೇರೆಯಾಗುವ ಸಂಭವಗಳಿದ್ದವು ಪೇಶ್ವೆಯರ ದಬ್ಬಾಳಿಕೆಯಿಂದ ಹಿಂದೂಗಳಲ್ಲಿ ಐಕ್ಯವಿಲ್ಲದಂತಾಯಿತು ಅಗ್ಗೆ ಹಿಂದೂಗಳನ್ನು ಕೆಡವಲು, ಒಟ್ಟಾದ ಮುಸ್ಲಿಮರಿಂದಲೂ, ಹಿಂದೂಗಳು ಐಕ್ಯದ ಕುರಿತು ಒಂದು ಪಾಠ ಕಲಿಯದವರಾದರು ಪೇಶ್ವೆಯರ ಸಾರ್ವಭೌಮತೆಯು ಮಿತಿಮೀರಿ ವರ್ತಿಸಿದುದರಿಂದ, ಪ್ರಸಿದ್ಧಿಗೆ ಬಂದ ಮರಾಟರ ಸಾಮ್ರಾಜ್ಯವು ಧ್ವಂಸವಾಯಿತು. ಬಹಳವಾಗಿ ಪ್ರಬಲತೆ ಹೊಂದಿದ ಅಂದಿನ ಪೇಶ್ವೆಯರು ಅಧಿಕಾರದ ಅಮಲಿನಿಂದ ಅವಿವೇಕಿಗಳಾಗಿ ವರ್ತಿಸಿದರು.

ಇಬ್ಬರ ನ್ಯಾಯ ಮೂರನೆಯವನಿಗೆ ಆಯವೆಂಬಂತೆ, ಹಿಂದೂ ಮುಸ್ಲಿಮರು ಪರಸ್ಪರ ಯುದ್ಧ ನಿರತರಾಗಿ, ತಮ್ಮ ಅವಸಾನಕಾಲವನ್ನು ಹತ್ತಿರ ಕರೆಯುತ್ತಿರುವಾಗ ಬ್ರಿಟಿಷರು ಹಿಂದೂದೇಶದಲ್ಲಿ ಕಾಲಿಟ್ಟರು ಹಿಂದೂ-ಮುಸ್ಲಿಂ ಕಲಹದಿಂದಾಗಿ, ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಇಲ್ಲಿ ದೃಢವಾಗಿ ಸ್ಥಾಪಿಸಲು, ಅತಿ ಸುಲಭವಾಯಿತು ಸಂದರ್ಭಾನುಸಾರ, ಹಿಂದೂಗಳನ್ನು ಮುಸ್ಲಿಮರ ಎದುರು ಹಾಕಿ, ಮುಸ್ಲಿಮರನ್ನು ಹಿಂದೂಗಳ ಎದುರು ಹಾಕಿ, ತಮ್ಮ ಕಾರ್ಯಸಾಧನೆಯನ್ನು ನಡೆಯಿಸಿಬಿಟ್ಟರು

ಅಂದು ಜನಿಸಿದ ಈ ಹಿಂದೂ—ಮುಸ್ಲಿಂ ವೈಮನಸ್ಸು ಬ್ರಿಟಿಷರಿಂದ ಸಾಕಿಸಲಹಲ್ಪಟ್ಟು, ಹಿಂದೂದೇಶದ ಏಳ್ಗೆಗೆ ಮೃತ್ಯುಪ್ರಾಯವಾಗಿ ನಿಂತಿರುತ್ತದೆ ಲೋರ್ಡ್ ಕ್ಲೈವ್, ವಾರನ್ ಹೆಸ್ಟಿಂಗ್ ಮೊದಲಾದವರು ಕಂಡುಹಿಡಿದ ಈ ವಹಾ ಉಪಾಯವು ಈಗಲೂ ಉಪಯೋಗಿಸಲ್ಪಡುತ್ತದೆ ಈ ಹಿಂದೂ ಮುಸ್ಲಿಮರ ಭೇದವನ್ನು ಬೆಳೆಸುವವರು, ಎರಡೂ ಕೋಮಿನ ಕೆಲವೆ ಸ್ವಾರ್ಥಪುರುಷರು ಹಿಂದೂದೇಶ ಮುಸ್ಲಿಮರ ಮತ್ತು ಹಿಂದೂಗಳ ಎದುರಿರುವ ಪ್ರಶ್ನೆ ಒಂದೆ ಆಗಿರುತ್ತದೆ ಹಿಂದೂ ರೈತನು, ಮಜೂರನು, ಬಡವನು, ಹೇಗೆ ನರಳುತ್ತಿದ್ದಾನೊ ಹಾಗೆನೆ, ಮುಸ್ಲಿಂ ರೈತನು, ಮಜೂರನು, ಬಡವನು ನರಳುತ್ತಿರುವನು ಕೋಮುವಾರು ಏವಾರ್ಡ ಇತ್ಯಾದಿಗಳಿಂದ ಕೋಮಿನ ನಿಜವಾದ ಕಷ್ಟಗಳು ಸುಧಾರಣೆಯಾಗುವುದಿಲ್ಲ. ಏವಾರ್ಡಗಳಿಂದ ಮತ್ತು ಜಾತಿವಾರು ಭೇದಗಳಿಂದ ಶ್ರೀಮಂತರಿಗೆ ಮತ್ತು ಮಧ್ಯಮ[illegible]ವರಿಗೆ ಮಾತ್ರ (ಭೇದಗಳನ್ನು ಬೆಳೆಸು[illegible]ವನವಾಗುವುದು. ಹಿಂದೂ [illegible] ನಿವಾರಣೆಯೂ

ಹಿಂದೂ—ಮುಸ್ಲಿಂ ಭೇದದಿಂದ ಹಿಂದೂ ದೇಶವು, ಬಹಳ ಕಾಲದಿಂದ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಾ ಬರುತ್ತಿದ್ದು, ಆ ದಣಿವಿನಿಂದ ಬಳಲಿದಂತಾಗಿ, ಒಂದು ಮಹಾ ರೋಗಕ್ಕೆ ತುತ್ತಾಗಿ, ಈಗ ದಿನೆ ದಿನೆ ಕೃಶವಾಗುತ್ತಾ ಬರುತ್ತಿದ್ದು, ಮೃತ್ಯುಶಯ್ಯೆಯನ್ನು ಹಿಡಿದಿರುತ್ತದೆ. ಹಿಂದೂ—ಮುಸ್ಲಿಮ ಐಕ್ಯವೊಂದೆ, ಆ ಮಹಾರೋಗಕ್ಕೆ ದಿವ್ಯ ಔಷಧಿ. ಮಾತೆಯು ಮಡಿದರೆ, ಮತ್ತೆ ಮುಸ್ಲಿಮರಿಲ್ಲ ಹಿಂದೂಗಳಿಲ್ಲ, ಇತರರಿಲ್ಲ ಆದರಿಂದ ಭಾರತೀಯರು, ಎಲ್ಲರೂ, ಕೋಮು, ಜಾತಿ, ವಿಭಾಗವೆಂಬ ಭೇದಗಳನ್ನು ತೊರೆದು, ಒಂದೆ ರಾಷ್ಟ್ರಕ್ಕಾಗಿ, ಒಂದೆ ಮಾತೃಭೂಮಿಯ ಹಿತಕ್ಕಾಗಿ, ತಮ್ಮದೆ ಹಿತಕ್ಕಾಗಿ, ಬಡತನ ನಿವಾರಣೆಗಾಗಿ, ಹಿಂದೂದೇಶದ ಅಭ್ಯುದಯಕ್ಕಾಗಿ, ಐಕ್ಯದಿಂದ ವರ್ತಿಸಬಾರದೆ? ಐಕ್ಯದಿಂದ ಜಗತ್ತಿನ ಇತರ ರಾಷ್ಟ್ರಗಳು, ಹೊಂದಿದ ಪ್ರಗತಿಯು, ನಮ್ಮವರ ಕಣ್ಣುಗಳಿಗೆ ಗೋಚರವಾಗುವುದಿಲ್ಲವೆ?

ಹಿಂದೂ-ಮುಸ್ಲಿಮ ಐಕ್ಯವು ಬೇಗನೆ ಉಂಟಾಗಲಿ ಭಾರತಮಾತೆಗೆ ಜಯವಾಗಲಿ

ಮಾಜಿ ಚಕ್ರವರ್ತಿ ಅಷ್ಟಮ ಎಡ್ವರ್ಡರು.

ಮಾಜಿ ಚಕ್ರವರ್ತಿ ಎಡ್ವರ್ಡರು, ಈಗ ಡ್ಯೂಕ್ ಆಫ್ ವಿಂಡ್ಸರರವರು, ಹಿಂದೂದೇಶದ ವೈಸ್ರಾಯರಾಗಿ ಬರುವರೆಂಬ ಬಲವಾದ ವಾರ್ತೆಯಿದೆ ಸಾಮಾನ್ಯ ಒಂದು ಸ್ತ್ರೀಯನ್ನು ವರಿಸಿದರಿಂದ, ಅವರು ಸಿಂಹಾಸನವನ್ನು ತೊರೆಯಬೇಕಾಗಿ ಬಂತು. ಸದ್ಯದಲ್ಲೆ ತನ್ನ ಪ್ರೀತಿಯ ಸ್ತ್ರೀಯಳನ್ನು ಅವರು ವಿವಾಹವಾಗುವರು ಹಾಗಿರುವಾಗ, ಅವರು ಹಿಂದೂದೇಶದ ವೈಸ್ರಾಯರಾಗತಕ್ಕವರೆ, ಓರ್ವ ಸಾಮಾನ್ಯ ಸ್ತ್ರೀಯು, ಅದರಲ್ಲೂ ಅಮೇರಿಕಾನಳು, ಹಿಂದೂ ದೇಶದ ವೈಸ್ರಾಯಿನಿಯಾಗುವುದು ಸರಿಯೆ? ಎಂಬ ನಿಷ್ಕರ್ಷ ಉಂಟಾಗಿದೆಂದು, ಅತ್ತಕಡೆಯಿಂದ ವಾರ್ತೆಯು ಬಂದಿರುತ್ತದೆ

ಆದರೆ ಮಾಜಿ ಚಕ್ರವರ್ತಿಯರು, ಸಿಂಹಾಸನಾ ಪರಿತ್ಯಾಗವನ್ನು ಮಾಡಲು ಬೇರೆ ಒಂದು ಕಾರಣವಿರುವುದೆಂದು, ಪ್ರಣಯ ಪ್ರಕರಣವನ್ನು ಮಾತ್ರ ಮುಂದಕ್ಕೆ ಬರುವಂತೆ ಮಾಡಿ ಅದರಿಂದ ಒತ್ತಾಯಪೂರ್ವಕ ಸಿಂಹಾಸನಾ ಪರಿತ್ಯಾಗಬನೆ ಮಾಡಿರುವರೆಂದು, ಲಂಡನಿನಿಂದ ಒಂದು ಬಾತ್ಮಿಯು ಬಂದಿರುತ್ತದೆ.

ಮಾಜಿ ಚಕ್ರವರ್ತಿಯರು ಸ್ವಾತಂತ್ರ್ಯ ಸ್ವಭಾವಿಗಳು, ಮಂತ್ರಿಮಂಡಳಕ್ಕೆ ಬಗ್ಗುವುದು, ಪಾರ್ಲಿಮೆಂಟಿನ ಸೇವಕನಾಗಿರುವುದು ಅವರಿಗೆ ಒಪ್ಪತಕ್ಕದಲ್ಲವೆಂಬ, ದಿವಂಗತರಾದ ಪಂಚಮ ಜಾರ್ಜರೆ ಕಂಡುಹಿಡಿದಿದ್ದು, ಅಷ್ಟಮ ಎಡ್ವರ್ಡರು ಪಟ್ಟಕ್ಕೆ ಬಾರದೆ ನಿಲ್ಲುವುದೆ ಉಚಿತವೆಂದು ಸೂಚಿಸಿದ್ದರು. ಮಾಜಿ ಚಕ್ರವರ್ತಿಯರ ಇಚ್ಛೆಯು ಕೂಡ ಹಾಗೆನೆ ಇತ್ತು ಆಧರೆ ಕನ್ಸರ್ವೇಟಿವರ ನಾಯಕರಾದ ಮುಖ್ಯ ಮಂತ್ರಿ ಬಾಲ್ಡವಿನ್ನರು ಒತ್ತಾಯಪಡಿಸಿದರಿಂದ, ಎಡ್ವರ್ಡರು ಪಂಚಮ ಜಾರ್ಜರು ದಿವಂಗತರಾದಾಗ, ಪಟ್ಟವನ್ನು ಸ್ವೀಕರಿಸಿದುದು ಚಕ್ರವರ್ತಿಯವರನ್ನು ಹೇಗಾದರೂ ನಡೆಯಿಸಿ, ಕೊಂಡುಹೋಗಬಹುದೆಂಬ ಭರವಸೆಯು ಬಾಲ್ಡವಿನ್ನರಿಗೆ ಇದ್ದಿರಬಹುದು. ಆದರೆ ಚಕ್ರವರ್ತಿಯರು ಪಟ್ಟಕ್ಕೆ ಬಂದ ಎಳೆಂಟು ಮಾಸದೊಳಗೆ, ನಮ್ಮ ನಿಜ ಸ್ವಭಾವವನ್ನು ತೋರಿಸಿಬಿಟ್ಟರು. ತಮಗೆ ಬೇಕಾದುದನ್ನು ಮಂತ್ರಿಮಂಡಳವು ಮಾಡತಕ್ಕದ್ದೆಂದು ಸ್ವಕ್ರವಡಿಸಿದರು ಇದನ್ನು ನೋಡಿದ ಬಾಲ್ಡವಿನ್ನರು, ಬೇರೆ ಹಾದಿ ಕಾಣದೆ, ಅವರ ಪ್ರಣಯ ಪ್ರಕರಣವನ್ನು ಕಾರಣವನ್ನಾಗಿ ಮಾಡಿ, ಅವರು ಪಟ್ಟವನ್ನು ತೊರೆಯುವಂತೆ ಮಾಡಿದರೆಂದು ಈ ಬಾತ್ಮಿಯ ಅಭಿಪ್ರಾಯ

ರೂಪಾಯಿಯ ಬೆಲೆ ತಗ್ಗುವುದೆಂದರೇನು?

'ರೂಪಾಯಿಯ ಬೆಲೆಯನ್ನು ತಗ್ಗಿಸಬೇಕು, ಲಂಡನಿನ ಆರ್ಥಿಕ ಪುರುಷರ ಕುಯುಕ್ತಿಗಳಿಗೆ ಬಲಿಯಾಗಿ ಹಿಂದೂದೇಶವು ನರಳುತ್ತಿದೆ ಎಂಬುದಾಗಿ ದೇಶದಲ್ಲೆಲ್ಲಾ ಒಂದು ಕೂಗು ಹೊರಡಿರುತ್ತದೆ ಸಾಮಾನ್ಯ ಜನರಿಗೆ ಇದರ ಅರ್ಥವಾಗುವುದೆ ಇಲ್ಲ ರೂಪಾಯಿಯ ಬೆಲೆ ಎಂದರೇನು?

ನಮಗೆ ಬಹೀರ್ ದೇಶಗಳೊಡನೆ ವ್ಯಾಪಾರವಿದ್ದುದರಿಂದ, ನಮ್ಮ ಚಲಾವಣೆ ನಾಣ್ಯಕ್ಕೂ, ಅವರ ಚಲಾವಣೆ ನಾಣ್ಯಕ್ಕೂ ಒಂದು ತರದ ಸಂಬಂಧವಿದೆ ಒಂದು ದಾಮಾಯಲ್ಲಿ ಅವುಗಳ ಬೆಲೆಯು ಎಣಿಸಲ್ಪಡುವುದು ಈ ದಾಮಾಶಾಯಿಯು, ಆಯಾ ದೇಶಗಳ ಚಲಾವಣೆ ನಾಣ್ಯ, ಬಂಗಾರದ ಮೌಲ್ಯದ ಮೇಲೆ ಹೊಂದಿಕೊಂಡಿದೆ

ಕೆಲಸಮಯದ ಹಿಂದೆ ಬ್ಲೆಕೆಟ್ ಎಂಬವರಿಂದ, ರೂಪಾಯಿ-ಪವನು ದಾಮಾಶಾಯಿಯು ಮಾರ್ಪಡಿಸಲ್ಪಟ್ಟು, ರೂಪಾಯಿಯ ಬೆಲೆಯನ್ನು ಏರಿಸಲಾಯಿತು ಅಂದರೆ ರೂಪಾಯಿ-ಪವನು ದಾಮಾಶಾಯಿ (ratio) ಇಳಿಸಲಾಯಿತು

ಉದಾಹರಣೆ, ಲಂಡನಿನಲ್ಲಿ ಹತ್ತಿಯ ಬೆಲೆಯು ೧೦ ಪವನುಗಳೆಂದು ಭಾವಿಸೋಣ ಈಗಿನ ದಾಮಾಶಾಯಿ ಪ್ರಕಾರ, ಹಿಂದೀಯ ವರ್ತಕನಿಗೆ ೧೩೦ ರೂಪಾಯಿಗಳು ದೊರಕುವವು ಮುಂಚಿನ ದಾಮಾಶಾಯಿ ಪ್ರಕಾರ ೧೫೦ ರೂಪಾಯಿಗಳು ದೊರಕುವವು ಆದರಿಂದ ಹಿಂದೀಯ ಒಡವೆಗಳು ಬ್ರಿಟನಿನಲ್ಲಿ ಕಡಿಮೆ ದರದಲ್ಲಿ ದೊರಕುವವು ಹಾಗೆನೆ ಬ್ರಿಟನಿನಿಂದ ಹಿಂದೂದೇಶಕ್ಕೆ ೧೦ ಪವನು ಬೆಲೆ ಬಾಳುವ ಒಡವೆಗಳಿಗೆ, ಹಿಂದೀಯರು ರೂ ೧೫೦ ಕೊಡುವ ಬದಲಾಗಿ, ೧೩೦ ಕೊಟ್ಟರೆ ಸಾಕಾಗುತ್ತದೆ. ಅಂದರೆ ಬ್ರಿಟಿಷ ಒಡವೆಗಳನ್ನು ಕಡಿಮೆ ದರದಲ್ಲಿ ಹಿಂದೂದೇಶದಲ್ಲಿ ಸೇರಿಸಲಾಗುತ್ತದೆ ಇದರಿಂದ ಲಾಭ ಯಾರಿಗೆ? ಎಲ್ಲಾ ವಿಧದಲ್ಲೂ ಬ್ರಿಟಿಷರಿಗೆ. ತಮ್ಮ ಒಡವೆಗಳು, ಅವರಿಗೆ ಸುಲಭದರದಲ್ಲಿ ದೊರಕುವುದು ಅವರ ಒಡವೆಗಳು ನಮ್ಮ ಮಾರ್ಕೆಟುಗಳಲ್ಲಿ ತುಂಬಿಬಿಡುವವು

ನಮ್ಮ ಒಡವೆಗಳಿಗೆ ಬ್ರಿಟನಿನಲ್ಲಿ ಧಾರಣೆ ಕಡಿಮೆಯಾದರೆ, ನಷ್ಟವುಂಟಾಗುವುದು ಯಾರಿಗೆ ಕಾರಣ ಸಾಮಗ್ರಿಗಳನ್ನು ತಯಾರಿಸುವ ರೈತನಿಗೆ ಆತನ ಬೆಳೆಗೆ ಸರಿಯಾದ ಬೆಲೆಯು ಬಾರದೆ, ತನಗೆ ಉಂಟಾದ ನಷ್ಟವನ್ನು ಭರ್ತಿಮಾಡಿ, ದಿನ ಕಳೆಯಬೇಕಾದರೆ, ಆತನು ತನ್ನಲ್ಲಿದ್ದ ಬಂಗಾರವನ್ನು ಮಾರಬೇಕಾಗುತ್ತದೆ

ಈ ಮೊದಲ, ೬೩-೧೭ ೧೦ ಧಾರಣೆಗೆ ಪಡೆಕೊಂಡ ಬಂಗಾರವನ್ನು ಆತನೀಗ £ ೮ ಪವನು ಮಾರುತ್ತಿದ್ದಾನೆ ಆತನಿಗೆ ತತ್ಕಾಲಕ್ಕೆ ಬಹಳ ಲಾಭವಾಗುತ್ತದೆ ನಿಜ ಆದರೆ ಬಂಗಾರವನ್ನೆ ಆತನು ಕಳಕೊಂಡ ಮೇಲೆ ಆತನಲ್ಲಿ ಏನು ಉಳಿದಿದೆ ಆತನ ಫಲಗಳಿಗೆ ಸರಿಯಾದ ಧಾರಣೆ ಬರುತ್ತಿದ್ದರೆ, ಆತನು ಬಂಗಾರವನ್ನು ಮಾರಾಟಮಾಡುವುದರ ಅಗತ್ಯವಿತ್ತೆ

ಪಾಶ್ಚಾತ್ಯ ಜನಾಂಗಗಳೆಲ್ಲಾ ತಮ್ಮ ಚಲಾವಣೆಯ ನಾಣ್ಯದ ಬೆಲೆಯನ್ನು ತಗ್ಗಿಸಿಬಿಟ್ಟು ದಾಮಾಶಾಯಿಯನ್ನು ಮಾರ್ಪಡಿಸಿ, ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ

ಆದರೆ ಹಿಂದೂದೇಶದಲ್ಲಿ ಮಾತ್ರ ವ್ಯಾಪಾರದ ಸ್ಥಿತಿ ನೆಟ್ಟಗಿಲ್ಲದಿದ್ದರೂ, ಬಡವನು ನರಳುತ್ತಿದ್ದರೂ, ರೂಪಾಯಿ ಬೆಲೆಯು, ಬ್ಲೆಕೆಟ್‌ನಿಂದ ರಚನೆಯಾದ ದಾಮಾಶಾಯಿಯು. ಹಾಗೆನೆ ಇದ್ದು, ಲಂಡನಿನ ಶ್ರೀಮಂತ ಪುರುಷರ ಬೊಕ್ಕಸಗಳು ತುಂಬುತ್ತಿದ್ದಾಗ, ನಮ್ಮ ಬೊಕ್ಕಸಗಳು ಖಾಲಿಯಾಗುತ್ತಿವೆ

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD. 1906

CANARA BANK,
LIMITED.



Distributors for South Kanara —

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಸರಕಾರದಲ್ಲಿ ರಿಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕೂಶಫಾ ಅಥವಾ ಆರೋಗ್ಯಬಿಂದು

ರೋಗದ ನಾಮಗಳು:—ಕ್ಷಯ ರೋಗ, ಬಾಲಂತಿರೋಗ, ಹಳೆದ ಸಂಜು, ದಮ್ಮು, ಅಜಗ್ರ ಕಾಲರಾ, (ಮಾರಿಕಾ) ಪ್ಲೇಗು ಇನ್ ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ ಗುಲ್ಮರೋಗ, ಮೂಲ ರೋಗ, ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಕಿವಿಶೂಲೆ, ಮೂಗಿನೊಳಗಿನ ಏನು ರೋಗಗಳು ಪ್ರಮಾಣವಿತ್ರ ಮೂರ್ತಿಮಂತವೈದ್ಯ [illegible]

[illegible]

ನಮ್ಮ ವಿಳಾಸ —ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕೂಶಫಾ ಹೆಡ್ ಆಫೀಸು, ಪೊ. ಶಹಾಪೂರ [ಬೆಳಗಾಂವಿ]

ರೈಲು ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲ್ಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	„ 5 55	ರಾತ್ರಿ 8 50
ಫಾಸ್ಟ ಪೆಸೆಂಜರ್	ಮ. 12 45	ಮ 2.40
ಕಟಿಲ್	ಸಂಜೆ 5 25	ಬೆಳಗ್ಗೆ 9.35
ಕಾಸರಗೋಡು ಪೆಸೆಂಜರು	ಬೆ 8 25	ಮ 1.20
ಕಾಸರಗೋಡು ಪೆಸೆಂಜರು	ಸಂಜೆ 3.20	

ಕಳೆದ 30 ವರ್ಷಗಳಿಂದಲೂ ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡು ತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

'ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಚಿತ್ರಾಕೃತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ-ಊರ್ಧ್ವಪುಂಡ್ರ-ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ ಎಂ. ನರಸಿಂಗರಾವ್, ಬಿ. ಎ/ಎಂ ಎಲ್. ಇವರಿಂದ ರಚಿತವಾದ ವ್ಯಾಕರಣಾರ್ಥ ಟೀಕಾ ಸಹಿತ. ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಟ್ಟಿಗೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್ ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು

ಟಪ್ಪಾಲ ಆಫೀಸ ಬಳಿಯಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕಮಗಳೂರ ಮುಖ್ಯವಾಗಿ ಇನ್ನಿತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ ಬಿಡಿ ಸಂಚಿಕೆಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ ಶರ್ತಗಳಿಗಾಗಿ ಬರೆಯಿರಿ

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ
ಚಂದ್ರಮಾಸ್—ವಾಂತಿಭೇದಿ, ಅತಿಸಾರಕ್ಕೆ.
ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ಮೃತ್ಯುಂಜಯಾಸವ—ನಿಸ್ರಾಣಕ್ಕೆ.
ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ
ಭುವನಾಂಜನ ಪೈನ್ ಬಾಮ್—ಶಾರೀರಿಕ ನೋವುಗಳಿಗೆ
ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.
ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಕೊನೆಯ ಪಾನಿಪತ್ ಯುದ್ಧದ ಅರ್ಥ.

ಹಿಂದೂದೇಶದ ಚರಿತ್ರೆಯಲ್ಲಿ ಪಾನಿಪತ್ತಿನ ಯುದ್ಧ ಪ್ರಾಮುಖ್ಯ ಸ್ಥಾನವನ್ನು ಪಡೆದಿರುವುದು, ಇದರಿಂದ ಅನೇಕ ಸಾಮ್ರಾಜ್ಯಗಳು ಸ್ಥಾಪನೆಯಾಗಿವೆ, ಅನೇಕವುಗಳು ಧ್ವಂಸವಾಗಿಹೋಗಿವೆ. ಪ್ರಥಮ ಪಾನಿಪತ್ ಯುದ್ಧದಲ್ಲಿ ಮೊಗಲ್ ಸಾಮ್ರಾಜ್ಯದ ಸ್ಥಾಪಕನಾದ ಬಾಬರನು, ಹಿಂದೂದೇಶವನ್ನು ಪಡೆದನು. ಎರಡನೆ ಪಾನಿಪತ್ ಯುದ್ಧದಲ್ಲಿ ಅಕ್ಬರನು ಕಳೆದುಹೋದ ಸಾಮ್ರಾಜ್ಯವನ್ನು ಹಿಂದಕ್ಕೆ ಪಡೆಕೊಂಡನು. ಮೂರನೆ ಮತ್ತು ಕೊನೆಯ ಪಾನಿಪತ್ ಯುದ್ಧದಲ್ಲಿ ಹಿಂದು ಹಿಂದೂ ಸಾಮ್ರಾಜ್ಯದ ಆಶಯಗಳು ಧ್ವಂಸವಾದವು. ಮರಾಟರ ಮತ್ತು ಮುಸ್ಲಿಮರ ಬಲವು ವಿಶೇಷತರದಲ್ಲಿ ಕುಂದಿಹೋಯಿತು—ಅದರಿಂದ ಬ್ರಿಟಿಷರ ಏಳ್ಗೆಗೆ ಹಾದಿ ಹಾಸಿದಂತಾಯಿತು.

ಶಿವಾಜಿಯನಂತರ ಅಧಿಕಾರಕ್ಕೆ ಒಂದು ಪ್ರಾಬಲ್ಯಹೊಂದಿದ ಪೇಶ್ವೆಯರ ಸಾರ್ವಭೌಮತೆ ದರ್ಪವಲ್ಲದಿದ್ದರೆ, ನಿಜವಾಗಿಯೂ ಶಿವಾಜಿ ಕ್ರಮಗಳನ್ನೆ ಅವರು ಆಚರಿಸುತ್ತಿದ್ದರೆ, ಹಿಂದೂದೇಶದ ಚರಿತ್ರೆಯು ಬೇರೆಯಾಗುವ ಸಂಭವಗಳಿದ್ದವು ಪೇಶ್ವೆಯರ ದಬ್ಬಾಳಿಕೆಯಿಂದ ಹಿಂದೂಗಳಲ್ಲಿ ಐಕ್ಯವಿಲ್ಲದಂತಾಯಿತು ಆಗ್ಯೆ ಹಿಂದೂಗಳನ್ನು ಕೆಡವಲು,ಒಟ್ಟಾದ ಮುಸಿ ಮರಿಂದಲೂ, ಹಿಂದೂಗಳು ಐಕ್ಯದ ಕುರಿತು ಒಂದು ಪಾಠ ಕಲಿಯದವರಾದರು ಪೇಶ್ವೆಯರ ಸಾರ್ವಭೌಮತೆಯು ಮಿತಿಮೀರಿ ವರ್ತಿಸಿದುದರಿಂದ, ಪ್ರಸಿದ್ಧಿಗೆ ಬಂದ ಮರಾಟರ ಸಾಮ್ರಾಜ್ಯವು ಧ್ವಂಸವಾಯಿತು ಬಹಳವಾಗಿ ಪ್ರಬಲತೆ ಹೊಂದಿದ ಅಂದಿನ ಪೇಶ್ವೆಯರು ಅಧಿಕಾರದ ಅಮಲಿನಿಂದ ಅವಿವೇಕಿಗಳಾಗಿ ವರ್ತಿಸಿದರು

ಇಬ್ಬರ ನ್ಯಾಯ ಮೂರನೆಯವನಿಗೆ ಆಯವೆಂಬಂತೆ,ಹಿಂದೂ ಮುಸ್ಲಿಮರು ಪರಸ್ಪರ ಯುದ್ಧ ನಿರತರಾಗಿ, ತಮ್ಮ ಅವಸಾನಕಾಲವನ್ನು ಹತ್ತಿರ ಕರೆಯುತ್ತಿರುವಾಗ ಬ್ರಿಟಿಷರು ಹಿಂದೂದೇಶದಲ್ಲಿ ಕಾಲಿಟ್ಟರು ಹಿಂದೂ—ಮುಸ್ಲಿಂ ಕಲಹದಿಂದಾಗಿ, ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಇಲ್ಲಿ ದೃಢವಾಗಿ ಸ್ಥಾಪಿಸಲು, ಅತಿ ಸುಲಭವಾಯಿತು ಸಂದರ್ಭಾನುಸಾರ, ಹಿಂದೂಗಳನ್ನು ಮುಸ್ಲಿಮರ ಎದುರು ಹಾಕಿ, ಮುಸ್ಲಿಮರನ್ನು ಹಿಂದೂಗಳ ಎದುರು ಹಾಕಿ, ತಮ್ಮ ಕಾರ್ಯಸಾಧನೆಯನ್ನು ನಡೆಯಿಸಿಬಿಟ್ಟರು

ಅಂದು ಜನಿಸಿದ ಈ ಹಿಂದೂ—ಮುಸ್ಲಿಂ ವೈಮನಸ್ಸು ಬ್ರಿಟಿಷರಿಂದ ಸಾಕಿಸಲಹಲ್ಪಟ್ಟು, ಹಿಂದೂದೇಶದ ಏಳ್ಗೆಗೆ ಮೃತ್ಯುಪ್ರಾಯವಾಗಿ ನಿಂತಿರುತ್ತದೆ ಲೋರ್ಡ್ ಕ್ಲೈವ್, ವಾರನ್ ಹೇಸ್ಟಿಂಗ್ ಮೊದಲಾದವರು ಕಂಡುಹಿಡಿದ ಈ ವ ಹಾ ಉಪಾಯವು ಈಗಲೂ ಉಪಯೋಗಿಸಲ್ಪಡುತ್ತದೆ ಈ ಹಿಂದೂ ಮುಸ್ಲಿಮರ ಭೇದವನ್ನು ಬೆಳೆಸುವವರು, ಎರಡೂ ಕೋಮಿನ ಕೆಲವೆ ಸ್ವಾರ್ಥಪುರುಷರು ಹಿಂದೂದೇಶ ಮುಸ್ಲಿಮರ ಮತ್ತು ಹಿಂದೂಗಳ ಎದುರಿರುವ ಪ್ರಶ್ನೆ ಒಂದೆ ಆಗಿರುತ್ತದೆ ಹಿಂದೂ ರೈತನು, ಮಜೂರನು, ಬಡವನು, ಹೇಗೆ ನರಳುತ್ತಿದ್ದಾನೊ ಹಾಗೆನೆ, ಮುಸ್ಲಿಂ ರೈತನು, ಮಜೂರನು, ಬಡವನು ನರಳುತ್ತಿರುವನು ಕೋಮುವಾರು ಎವಾರ್ಡ ಇತ್ಯಾದಿಗಳಿಂದ ಕೋಮಿನ ನಿಜವಾದ ಕಷ್ಟಗಳು ಸುಧಾರಣೆಯಾಗುವುದಿಲ್ಲ, ಎವಾರ್ಡಗಳಿಂದ ಮತ್ತು ಜಾತಿವಾರು ಭೇದಗಳಿಂದ ಶ್ರೀಮಂತರಿಗೆ ಮತ್ತು ಮಧ್ಯಮ ತರಗತಿಯವರಿಗೆ ಮಾತ್ರ (ಭೇದಗಳನ್ನು ಬೆಳೆಸುವವರು) ಪ್ರಯೋಜನವಾಗುವುದು. ಹಿಂದೂದೇಶದ ಬಡತನದ ಗೋಳು ನಿವಾರಣೆಯಾಗುವ ಸಾಧ್ಯತೆಯು ಅದರಲ್ಲಿಲ್ಲ.

ಹಿಂದೂ—ಮುಸ್ಲಿಂ ಭೇದದಿಂದ ಹಿಂದೂದೇಶವು,ಬಹಳ ಕಾಲದಿಂದ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಾ ಬರುತ್ತಿದ್ದು, ಆ ಧಣಿವಿನಿಂದ ಬಳಲಿದಂತಾಗಿ, ಒಂದು ಮಹಾ ರೋಗಕ್ಕೆ 'ತುತ್ತಾಗಿ, ಈಗ ದಿನೆ ದಿನೆ ಕೃಷವಾಗುತ್ತಾ ಬರುತ್ತಿದ್ದು, ಮೃತ್ಯುಶಯ್ಯೆಯನ್ನು ಹಿಡಿದಿರುತ್ತದೆ. ಹಿಂದೂ—ಮುಸ್ಲಿಮ ಐಕ್ಯವೊಂದೆ, ಆ ಮಹಾರೋಗಕ್ಕೆ ದಿವ್ಯ ಔಷಧಿ. ಮಾತೆಯು ಮಡಿದರೆ, ಮತ್ತೆ ಮುಸ್ಲಿಮರಲ್ಲಿ ಹಿಂದೂಗಳಲ್ಲಿ, ಇತರರಲ್ಲಿ ಆದಂದ ಭಾರತೀಯರು, ಎಲ್ಲರೂ, ಕೋಮು, ಜಾತಿ, ವಿಭಾಗವೆಂಬ ಭೇದಗಳನ್ನು ತೊರೆದು, ಒಂದೆ ರಾಷ್ಟ್ರಕ್ಕಾಗಿ, ಒಂದೆ ಮಾತೃಭೂಮಿಯ ಹಿತಕ್ಕಾಗಿ, ತಮ್ಮದೆ ಹಿತಕ್ಕಾಗಿ, ಬಡತನ ನಿವಾರಣೆಗಾಗಿ, ಹಿಂದೂದೇಶದ ಅಭ್ಯುದಯಕ್ಕಾಗಿ, ಐಕ್ಯದಿಂದ ವರ್ತಿಸಬಾರದೆ? ಐಕ್ಯದಿಂದ ಜಗತ್ತಿನ ಇತರ ರಾಷ್ಟ್ರಗಳು, ಹೊಂದಿದ ಪ್ರಗತಿಯು, ನಮ್ಮವರ ಕಣ್ಣುಗಳಿಗೆ ಗೋಚರವಾಗುವುದಿಲ್ಲವೆ?

ಹಿಂದೂ-ಮುಸ್ಲಿಮ್ ಐಕ್ಯವು ಬೇಗನೆ ಉಂಟಾಗಲಿ ಭಾರತಮಾತೆಗೆ ಜಯವಾಗಲಿ

ರೂಪಾಯಿಯ ಬೆಲೆ ತಗ್ಗುವುದೆಂದರೇನು?

'ರೂಪಾಯಿ ಬೆಲೆಯನ್ನು ತಗ್ಗಿಸಬೇಕು, ಲಂಡನಿನ ಆರ್ಥಿಕ ಪುರುಷರ ಕುಯುಕ್ತಿಗಳಿಗೆ ಒಳಗಾಗಿ ಹಿಂದೂದೇಶವು ನರಳುತ್ತಿದೆ' ಎಂಬುದಾಗಿ ದೇಶದಲ್ಲೆಲ್ಲಾ ಒಂದು ಕೂಗು ಹೊರಡಿರುತ್ತದೆ ಸಾಮಾನ್ಯ ಜನರಿಗೆ ಇದರ ಅರ್ಥವಾಗುವುದೆ ಇಲ್ಲ ರೂಪಾಯಿ ಬೆಲೆ ಎಂದರೇನು?

ನಮಗೆ ಬಹೀರ್ ದೇಶಗಳೊಡನೆ ವ್ಯಾಪಾರವಿದ್ದುದರಿಂದ, ನಮ್ಮ ಚಲಾವಣೆ ನಾಣ್ಯಕ್ಕೂ, ಅವರ ಚಲಾವಣೆ ನಾಣ್ಯಕ್ಕೂ ಒಂದು ತರದ ಸಂಬಂಧವಿದೆ ಒಂದು ದಾಮಾಯಲ್ಲಿ ಅವುಗಳ ಬೆಲೆಯು ಎಣಿಸಲ್ಪಡುವುದು ಈ ದಾಮಾಶಾಯಿಯು, ಆಯಾ ದೇಶಗಳ ಚಲಾವಣೆ ನಾಣ್ಯ, ಬಂಗಾರದ ಪಾಲ್ಯದ ಮೇಲೆ ಹೊಂದಿಕೊಂಡಿದೆ

ಕೆಲ ಸಮಯದ ಹಿಂದೆ ಬ್ಲೆಕೆಟ್ ಎಂಬವರಿಂದ, ರೂಪಾಯಿವನು ದಾಮಾಶಾಯಿಯು ಮಾರ್ಪಡಿಸಲ್ಪಟ್ಟು, ರೂಪಾಯಿ ಬೆಲೆಯನ್ನು ಏರಿಸಲಾಯಿತು ಅಂದರೆ ರೂಪಾಯಿವನು ದಾಮಾಶಾಯಿ (ratio) ಇಳಿಸಲಾಯಿತು

ಉದಾಹರಣೆ, ಲಂಡನಿನಲ್ಲಿ ಹತ್ತಿಯ ಬೆಲೆಯು ೧೦ ಪವನುಗಳೆಂದು ಭಾವಿಸೋಣ ಈಗಿನ ದಾಮಾಶಾಯಿ ಪ್ರಕಾರ ಹಿಂದೀಯ ವರ್ತಕನಿಗೆ ೧೩೦ ರೂಪಾಯಿಗಳು ದೊರಕುವವು ಮುಂಚಿನ ದಾಮಾಶಾಯಿ ಪ್ರಕಾರ ೧೫೦ ರೂಪಾಯಿಗಳು ದೊರಕುವವು ಆದರಿಂದ ಹಿಂದೀಯ ಒಡವೆಗಳು ಬ್ರಿಟನಿನಲ್ಲಿ ಕಡಿಮೆದರದಲ್ಲಿ ದೊರಕುವವು ಹಾಗೆನೆ ಬ್ರಿಟನಿನಿಂದ ಹಿಂದೂದೇಶಕ್ಕೆ ೧೦ ಪವನು ಬೆಲೆ ಬಾಳುವ ಒಡವೆಗಳಿಗೆ,ಹಿಂದೀಯರು ರೂ ೧೫೦ ಕೊಡುವ ಬದಲಾಗಿ, ೧೩೦ ಕೊಟ್ಟರೆ ಸಾಕಾಗುತ್ತದೆ. ಅಂದರೆ ಬ್ರಿಟಿಷ ಒಡವೆಗಳನ್ನು ಕಡಿಮೆ ದರದಲ್ಲಿ ಹಿಂದೂದೇಶದಲ್ಲಿ ಸೇರಿಸಲಾಗುತ್ತದೆ ಇದರಿಂದ ಲಾಭ ಯಾರಿಗೆ? ಎಲ್ಲಾ ವಿಧದಲ್ಲೂ ಬ್ರಿಟಿಷರಿಗೆ ತಮ್ಮ ಒಡವೆಗಳು, ಅವರಿಗೆ ಸುಲಭದರದಲ್ಲಿ ದೊರಕುವುದು ಅವರ ಒಡವೆಗಳು ನಮ್ಮ ಮಾರ್ಕೆಟುಗಳಲ್ಲಿ ತುಂಬಿಬಿಡುವವು

ನಮ್ಮ ಒಡವೆಗಳಿಗೆ ಬ್ರಿಟನಿನಲ್ಲಿ ಧಾರಣೆ ಕಡಿಮೆಯಾದರೆ, ನಷ್ಟವುಂಟಾಗುವುದು ಯಾರಿಗೆ ಕಾರಣ ಸಾಮಗ್ರಿಗಳನ್ನು ತಯಾರಿಸುವ ರೈತನಿಗೆ ಆತನ ಬೆಳೆಗೆ ಸರಿಯಾದ ಬೆಲೆಯು ಬಾರದೆ, ತನಗೆ ಉಂಟಾದ ನಷ್ಟವನ್ನು ಭರ್ತಿಮಾಡಿ, ದಿನ ಕಳೆಯಬೇಕಾದರೆ, ಆತನು ತನ್ನಲ್ಲಿದ್ದ ಬಂಗಾರವನ್ನು ಮಾರಬೇಕಾಗುತ್ತದೆ

ಈ ಮೊದಲ, £ ೩-೧೭-೧೦ ಧಾರಣೆಗೆ ಪಡೆಕೊಂಡ ಬಂಗಾರವನ್ನು ಆತನೀಗ £ ೮ ಪವನು ಮಾರುತ್ತಿದ್ದಾನೆ ಆತನಿಗೆ ತತ್ಕಾಲಕ್ಕೆ ಬಹಳ ಲಾಭವಾಗುತ್ತದೆ ನಿಜ ಆದರೆ ಬಂಗಾರವನ್ನೆ ಆತನು ಕಳಕೊಂಡ ಮೇಲೆ ಆತನಲ್ಲಿ ಏನು ಉಳಿದಿದೆ ಆತನ ಫಲಗಳಿಗೆ ಸರಿಯಾದ ಧಾರಣೆ ಬರುತ್ತಿದ್ದರೆ, ಆತನು ಬಂಗಾರವನ್ನು ಮಾರಾಟಮಾಡುವುದರ ಅಗತ್ಯವಿತ್ತೆ

ಪಾಶ್ಚಾತ್ಯ ಜನಾಂಗಗಳೆಲ್ಲಾ ತಮ್ಮ ಚಲಾವಣೆಯ ನಾಣ್ಯದ ಬೆಲೆಯನ್ನು ತಗ್ಗಿಸಿಬಿಟ್ಟು ದಾಮಾಶಾಯಿಗಳನ್ನು ಮಾರ್ಪಡಿಸಿ, ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ

ಆದರೆ ಹಿಂದೂದೇಶದಲ್ಲಿ ಮಾತ್ರ ವ್ಯಾಪಾರದ ಸ್ಥಿತಿ ನೆಟ್ಟಗಿಲ್ಲದಿದ್ದರೂ, ಬಡವನು ನರಳುತ್ತಿದ್ದರೂ ರೂಪಾಯಿ ಬೆಲೆಯು, ಬ್ಲೆಕೆಟ್‌ನಿಂದ ರಚನೆಯಾದ ದಾಮಾಶಾಯಿಯು ಹಾಗೆನೆ ಇದ್ದು ಲಂಡನಿನ ಶ್ರೀಮಂತ ಪುರುಷರ ಬೊಕ್ಕಸಗಳು ತುಂಬುತ್ತಿದ್ದಾಗ, ನಮ್ಮ ಬೊಕ್ಕಸಗಳು ಖಾಲಿಯಾಗುತ್ತಿವೆ

ಮಾಜಿ ಚಕ್ರವರ್ತಿ ಅಷ್ಟಮ ಎಡ್ವರ್ಡರು.

ಮಾಜಿ ಚಕ್ರವರ್ತಿ ಎಡ್ವರ್ಡರು, ಈಗ ಡ್ಯೂಕ್ ಓಫ್ ವಿಂಡ್ಸೊರವರು, ಹಿಂದೂದೇಶದ ವೈಸ್ರಾಯರಾಗಿ ಬರುವರೆಂಬ ಬಲವಾದ ವಾರ್ತೆಯಿದೆ ಸಾಮಾನ್ಯ ಒಂದು ಸ್ತ್ರೀಯನ್ನು ವರಿಸಿದರಿಂದ, ಅವರು ಸಿಂಹಾಸನವನ್ನು ತೊರೆಯಬೇಕಾಗಿ ಬಂತು. ಸದ್ಯದಲ್ಲೆ ತನ್ನ ಪ್ರೀತಿಯ ಸ್ತ್ರೀಯಳನ್ನು ಅವರು ವಿವಾಹವಾಗುವರು. ಹಾಗಿರುವಾಗ, ಅವರು ಹಿಂದೂದೇಶದ ವೈಸ್ರಾಯರಾಗತಕ್ಕವರೆ, ಓರ್ವ ಸಾಮಾನ್ಯ ಸ್ತ್ರೀಯು, ಅದರಲ್ಲೂ ಅಮೇರಿಕಾನಳು,ಹಿಂದೂದೇಶದ ವೈಸ್ರಾಯಿನಿಯಾಗುವುದು ಸರಿಯೆ? ಎಂಬ ನಿಷ್ಕರ್ಷ ಉಂಟಾಗಿದೆಂದು, ಅತ್ತಕಡೆಯಿಂದ ವಾರ್ತೆಯು ಬಂದಿರುತ್ತದೆ

ಆದರೆ ಮಾಜಿ ಚಕ್ರವರ್ತಿಯರು, ಸಿಂಹಾಸನಾ ಪರಿತ್ಯಾಗವನ್ನು ಮಾಡಲು ಬೇರೆ ಒಂದು ಕಾರಣವಿರುವುದೆಂದು, ಪ್ರಣಯ ಪ್ರಕರಣವನ್ನು ಮಾತ್ರ ಮುಂದಕ್ಕೆ ಬರುವಂತೆ ಮಾಡಿ ಆದರಿಂದ ಒತ್ತಾಯಪೂರ್ವಕ ಸಿಂಹಾಸನಾ ಪರಿತ್ಯಾಗಜನೆ ಮಾಡಿರುವರೆಂದು, ಲಂಡನಿನಿಂದ ಒಂದು ವಾರ್ತೆಯು ಬಂದಿರುತ್ತದೆ

ಮಾಜಿ ಚಕ್ರವರ್ತಿಯರು ಸ್ವಾತಂತ್ರ್ಯ ಸ್ವಭಾವಿಗಳು, ಮಂತ್ರಿಮಂಡಳಕ್ಕೆ ಬಗ್ಗುವುದು, ಪಾರ್ಲಿಮೆಂಟಿನ ಸೇವಕನಾಗಿರುವುದು ಅವರಿಗೆ ಒಪ್ಪತಕ್ಕದಲ್ಲವೆಂಬ, ದಿವಂಗತರಾದ ಪಂಚಮ ಜಾರ್ಜರೆ ಕಂಡುಹಿಡಿದಿದ್ದು, ಅಷ್ಟಮ ಎಡ್ವರ್ಡರು ಪಟ್ಟಕ್ಕೆ ಬಾರದೆ ನಿಲ್ಲುವುದೆ ಉಚಿತವೆಂದು ಸೂಚಿಸಿದ್ದರು. ಮಾಜಿ ಚಕ್ರವರ್ತಿಯರ ಇಚ್ಛೆಯು ಕೂಡ ಹಾಗೆನೆ ಇತ್ತು. ಆದರೆ ಕನ್ಸರ್ವೇಟಿವರ ನಾಯಕರಾದ ಮುಖ್ಯ ಮಂತ್ರಿ ಬಾಲ್ಡವಿನ್ನರು ಒತ್ತಾಯಪಡಿಸಿದರಿಂದ, ಎಡ್ವರ್ಡರು ಪಂಚಮ ಜಾರ್ಜರು ದಿವಂಗತರಾದಾಗ, ಪಟ್ಟವನ್ನು ಸ್ವೀಕರಿಸಿದುದು ಚಕ್ರವರ್ತಿಯವರನ್ನು ಹೇಗಾದರೂ ನಡೆಯಿಸಿ, ಕೊಂಡುಹೋಗಬಹುದೆಂಬ ಭರವಸೆಯು ಬಾಲ್ಡವಿನ್ನರಿಗೆ ಇದ್ದಿರಬಹುದು ಆದರೆ ಚಕ್ರವರ್ತಿಯರು ಪಟ್ಟಕ್ಕೆ ಬಂದ ಎಳೆಂಟು ಮಾಸದೊಳಗೆ, ನಮ್ಮ ನಿಜ ಸ್ವಭಾವವನ್ನು ತೋರಿಸಿಬಿಟ್ಟರು ತಮಗೆ ಬೇಕಾದುದನ್ನು ಮಂತ್ರಿಮಂಡಳವು ಮಾಡತಕ್ಕದ್ದೆಂದು ವ್ಯಕ್ತಪಡಿಸಿದರು ಇದನ್ನು ನೋಡಿದ ಬಾಲ್ಡವಿನ್ನರು, ಬೇರೆ ಹಾದಿ ಕಾಣದೆ, ಅವರ ಪ್ರಣಯ ಪ್ರಕರಣವನ್ನು ಕಾರಣವನ್ನಾಗಿ ಮಾಡಿ, ಅವರು ಪಟ್ಟವನ್ನು ತೊರೆಯುವಂತೆ ಮಾಡಿದರೆಂದು ಈ ವಾರ್ತೆಯ ಅಭಿಪ್ರಾಯ

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness

ESTD. 1906

CANARA BANK, LIMITED.



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಸರಕಾರದಲ್ಲಿ ರಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧ [illegible]

ರೋಗದ ನಾಮಗಳು:— ಕ್ಷಯ ರೋಗ, ಜಾಡಾಂತಿರೋಗ, ಹಡೆದ ಸಂಜು, ದಮ್ಮು, ಅಡಗೈ ಕಾಲರಾ, (ಮಾರಿಕಾ,) ಪ್ಲೇಗು ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಕಿವಿಶೂಲೆ, ಮೂಗಿನೊಳಗಿನ ಖಿನ್ನತೆ ಮೊದಲಾದುವುಗಳು, ಕಣ್ಣಿನ [illegible]

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

[illegible] ಬೇನೆ, ಅಜೀರ್ಣ, ಹೊಟ್ಟೆ ಶೂಲೆ [illegible] ಮಕ್ಕಳ ರೋಗಗಳು, ಮತ್ತು ದೊಡ್ಡವರಿಗೂ ವೃದ್ಧರಿಗೂ [illegible] ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ [illegible] ಗುಣಬರುವುದು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು. [illegible] ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುವುವು. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಪತ್ರಗಳು [illegible]

[illegible] ತೊಲೆ ಬಾಟ್ಲಿ ಒಂದಕ್ಕೆ [illegible] ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ [illegible] ಬಾಟ್ಲಿ ಕಮಿಶನ್ [illegible] ವ್ಯವಸ್ಥೆ ಮಾಡಿದೆ. ಟಪಾಲ ಖರ್ಚು [illegible] ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ [illegible] ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು. ಟಪಾಲ ಖರ್ಚು [illegible] ಬೀಳುವುದು. [illegible] ಚಿಕ್ಕ ಬಾಟ್ಲಿಗಳನ್ನು [illegible] ಸಣ್ಣ ಬಾಟ್ಲಿ ಒಂದೇ ಬೇಡಿದರೆ [illegible] ಟಪಾಲ ಖರ್ಚು [illegible] ಎರಡು [illegible] ಆಣೆ ಬೀಳುವುದು.

ತಿಳಿದುಕೊಳ್ಳುವ ಕ್ರಮ:—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು. [illegible] ಔಷಧವು [illegible] ಬಾಟ್ಲಿ [illegible] ಹಣ ತಿರುಗಿ ಕೊಡುವೆವು. ಬೇಡುವವರು ತಮ್ಮ ವಿಳಾಸ ಕನ್ನಡ [illegible] ಇಂಗ್ಲೀಷ [illegible] ಬರೆಯಬೇಕು. ತಮ್ಮ ಹೆಸರು, ತಂದೆಯ ಹೆಸರು, ಅಡ್ಡ ಹೆಸರು ಇರುವ ಗ್ರಾಮ, ಪೋಸ್ಟಾಫೀಸು ತಾಲೂಕು ಜಿಲ್ಲಾ ಸ್ಟೇಟ ಎಲ್ಲಾ [illegible] ಬರೆಯಬೇಕು.

ನಮ್ಮ ವಿಳಾಸ —ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೋ. [illegible] [ಬೆಳಗಾವಿ]

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12-45	ಮ 2-40
ಕಿಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 3 30	

ಕಳೆದ 30 ವರ್ಷಗಳಿಂದಲೂ ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡು ತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

'ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ ಎಂ ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 8.

30, 60 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು

ಬನ್ನಿರಿ ಅಥವಾ ಬರೆಯಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕಪಟ್ಟಣಗಳಲ್ಲಿ ಮುಖ್ಯವಾಗಿ ಇದುವರೆಗೆ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ 'ಬಿಡಿ ಸಂಚಿಕೆ'ಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಶರ್ತಗಳಿಗಾಗಿ ಬರೆಕೊಳ್ಳಿರಿ.

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

- ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.
- ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.
- ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.
- ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ಮ ಚರ್ಮವ್ಯಾಧಿಗಳಿಗೆ.
- ವೃದ್ಧಿಕಾಸವ—ನಿತ್ರಾಣಕ್ಕೆ
- ಮಹಾಮಂದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.
- ಭುವನಾಂಜನ ಪೈನ್ ಬಾಮ್—ಶರೀರದ ನೋವುಗಳಿಗೆ
- ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.
- ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಮೀನು ವ್ಯವಸಾಯ ಮತ್ತು ಮೀನಿನ ಕಸಬು

(... ಸರಕಾರದವರಿಂದ ಪ್ರಕಟಿಸಲ್ಪಟ್ಟದ್ದು)

... ಉಪಾಯಗಳನ್ನು ಈಗ ಈ ಕೈಗಾರಿಕೆಯಲ್ಲಿ ಉಪಯೋಗಿಸುವದರಿಂದ ಮೀನು ... ವರಿಗೆ ಮೊದಲಿಗಿಂತಲೂ ಒಳ್ಳೇ ತರದ ಆಹಾರವೊಂದು ದೊರಕುವಂತೆಯೂ, ಮೀನು ವ್ಯವಸಾಯದವರಿಗೆ ಮೊದಲಿಗಿಂತ ಒಳ್ಳೆಯ ಮತ್ತು ವಿಸ್ತಾರವಾದ ಮಾರಾಟದ ಅನುಕೂಲತೆಗಳು ದೊರಕುವಂತೆಯೂ ಆಗಿದೆ. ಮೀನು ಹಿಡಿಯುವ ಕೈಗಾರಿಕೆಯವರಿಗೆ ಸಹಾಯವಾಗಿ ಸರಕಾರದವರು ಉಪ್ಪನ್ನು ಅವರಿಗೆ ಧರ್ಮಾರ್ಥವಾಗಿ ಹಂಚುತ್ತಾರೆ.

ಹಸಿ ಮೀನನ್ನು ಹಾಳಾಗದಂತೆ ಇಟ್ಟುಕೊಂಡು ಹಂಚಬೇಕಾದರೆ ಅದನ್ನು ತಣ್ಣಗೆ ಮಾಡುವ ಪಾತ್ರೆಗಳಲ್ಲಿ ಇಡುವುದೇ ಮುಖ್ಯ ಉಪಾಯವಾಗಿರುತ್ತದೆ. ಇಲ್ಲಿಯ ಜನರ ಆರ್ಥಿಕ ಸ್ಥಿತಿ ಮತ್ತು ಮಾರಾಟದ ಸ್ಥಿತಿಗೆ ಸರಿಯಾದ ಸಾಮಾನ್ಯ ತರದ ಹಿಮ ಯಂತ್ರಗಳಿಂದ ಹೆಚ್ಚು ಖರ್ಚಿಲ್ಲದೆ ಮೀನು ಹೆಪ್ಪುಗಟ್ಟುವ ಉಪಾಯವನ್ನು ಕಂಡುಹಿಡಿದಿರುತ್ತಾರೆ. ಈ ಉಪಾಯವನ್ನು ಒಂದೆರಡು ಖಾಸಗಿ ಕಾರ್ಖಾನೆಗಳಲ್ಲಿ ಉಪಯೋಗಿಸ ತೊಡಗಿದ್ದಾರೆ.

ಮೀನೆಣ್ಣೆ ಮತ್ತು ಮೀನು ಗೊಬ್ಬರದ ಕೈಗಾರಿಕೆಯು ಪಶ್ಚಿಮ ಕರಾವಳಿಯಲ್ಲಿ 1910ರ ಲಾಗಾಯತು ನಡೆಯುತ್ತಿದ್ದು ಈಗ ಅದಕ್ಕೆ ಸಮಂಧಪಟ್ಟ 647 ಖಾಸಗಿ ಕಾರ್ಖಾನೆಗಳಿವೆ. ಅವುಗಳಲ್ಲಿ ವರ್ಷಂಪ್ರತಿ ಮೀನು ಹೆಚ್ಚಿಗೆ ಸಿಕ್ಕುವ ವರ್ಷಗಳಲ್ಲಿ ಅರ್ಧ ಕೋಟಿ ರೂಪಾಯಿಯ ವ್ಯಾಪಾರವೂ ಇತರ ಸಾಧಾರಣ ವರ್ಷಗಳಲ್ಲಿ ಸರಾಸರಿಯಾಗಿ ಹತ್ತು ಲಕ್ಷ ರೂಪಾಯಿಯ ವ್ಯಾಪಾರವೂ ನಡಿಯುತ್ತದೆ. ಫಿಶ್ಶರಿಸ್ ಇಲಾಖೆಯವರು ನಡೆಸಿದ ಶೋಧನಾ ಕಾರ್ಯಗಳ ಫಲವಾಗಿಯೇ ಈ ಕೈಗಾರಿಕೆಯು ಅಭಿವೃದ್ಧಿಗೆ ಬಂದದ್ದಾಗಿರುತ್ತದೆ.

ಕಳೆದ ಯುದ್ಧದ ನಂತರ, ಪಾಶ್ಚಾತ್ಯ ದೇಶಗಳಲ್ಲಿ ಕೃಷಿಗಾರರು ಒಂದು ಬಗೆಯ ಮೀನಿನ ಹಿಟ್ಟನ್ನು ತಯಾರಿಸಿ ಸಂಗ್ರಹಮಾಡಿಟ್ಟುಕೊಳ್ಳುತ್ತಾರೆ. ಇದಕ್ಕೆ ಸಂಬಂಧಿಸಿದ ಕೈಗಾರಿಕೆಯು ಅಲ್ಲೀಗ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಈ ಕೈಗಾರಿಕೆಯನ್ನು ಇತ್ತೀಚೆಗೆ ಹಿಂದೂದೇಶದಲ್ಲಿ ಆರಂಭಿಸಿದ್ದಾರೆ. ದಕ್ಷಿಣ ಹಿಂದೂದೇಶದಲ್ಲಿ ತಯಾರಿಸಿದ ಮೀನಿನ ಹಿಟ್ಟನ್ನು ಈಗ ಹಿಂದೂದೇಶದ ಎಲ್ಲಾ ಕಡೆಗಳಲ್ಲಿಯೂ ಬರ್ಮಾದಲ್ಲಿಯೂ ಕಾಣಬಹುದು.

ದಕ್ಷಿಣ ಹಿಂದೂದೇಶದ ಮೀನೆಣ್ಣೆಗಳಲ್ಲಿ ವಿಟಾಮಿನ್ ಎಂಬ ದೇಹ ಪೌಷ್ಟಿಕ ಪದಾರ್ಥವು ಎಷ್ಟಿದೆಯೆಂದು ನೋಡಲಿಕ್ಕೆ ಶೋಧನೆಗಳನ್ನು ನಡೆಸಿತ್ತು. 'ಕೊಡಲಿವರ್' ಎಣ್ಣೆಯ ಬದಲಾಗಿ ಔಷಧ ಉಪಯೋಗಕ್ಕೆ ಬೇರೆ ಅಗ್ಗದ ಒಳ್ಳೇ ತರದ ಎಣ್ಣೆಯನ್ನು ತಯಾರಿಸಬಹುದೆಂದು ಈ ಶೋಧನೆಗಳಿಂದ ಕಂಡುಬಂದಿರುತ್ತದೆ. ಸಾಮಾನ್ಯ ಜನರ ತಿಂಡಿ ಆಹಾರಗಳಲ್ಲಿ ಎ ವಿಟಾಮಿನು ಕಡಿಮೆಯಾಗಿರುವ ಮುಖ್ಯ ಕೊರತೆಯನ್ನು ಹೋಗಲಾಡಿಸಲಿಕ್ಕೆ ಇದು ಬಹಳ ಉಪಯೋಗಕರವಾಗಿರುತ್ತದೆ. ಇದರಿಂದ ಜನರ ಆಹಾರ ಸಮ್ಮಂಧವಾದ ಮತ್ತು ಆರ್ಥಿಕ ತೊಂದರೆಗಳನ್ನು ಹೋಗಲಾಡಿಸಲಿಕ್ಕೂ ಬಹಳ ಸಹಾಯವಾಗಬಹುದು.

ಮೀನು ಹಿಡಿಯುವ ಮತ್ತು ಮೀನು ಸಿಗಿಯುವ ಕಸಬುಗಳಲ್ಲಿರುವವರ ಆರ್ಥಿಕ ದುರವಸ್ಥೆಯ ಕುರಿತು ಆಲೋಚಿಸುವಾಗ ಮೀನಿನ ವ ಮೀನಿನ ವ ಮೀನು ಪದಾರ್ಥಗಳ ವ್ಯಾಪಾರವು ಇನ್ನೂ ಅವ್ಯವಸ್ಥಿತ ಸ್ಥಿತಿಯಲ್ಲಿಯೇ ಇರುವದು ಇತ್ತೀಚೆಗೆ ಫಿಶ್ಶರೀಸ್ ಶಾಖೆಯವರ ದೃಷ್ಟಿಗೆ ಬಿತ್ತು. ಈ ಅಧಿಪತ್ಯದಲ್ಲಿರುವ ಬೇರೆ ಬೇರೆ ಮಾರಾಟ ಸ್ಥಳಗಳಲ್ಲಿರುವ ಧಾರಣೆಗಳನ್ನು ಮೀನಿನ ವ್ಯಾಪಾರದವರ ತಿಳುವಳಿಕೆಗೆ ಪ್ರತಿ ವಾರದಲ್ಲಿ ಪ್ರಕಟಿಸುವ ಕುರಿತು ಈಗ ಏರ್ಪಾಡನ್ನು ಮಾಡಿರುತ್ತಾರೆ.

3 ಮೀನು ಕಸಬಿನವರ ಮಕ್ಕಳ ಶಿಕ್ಷಣ.

1984-85ರಲ್ಲಿ ಪಶ್ಚಿಮ ಕರಾವಳಿಯಲ್ಲಿ 2,841 ಹುಡುಗರೂ, 1,527 ಹುಡುಗಿಯರೂ ಫಿಶ್ಶರಿಸ್ ಶಾಖೆಯವರು ಸ್ಥಾಪಿಸಿದ 87 ಶಾಲೆಗಳಲ್ಲಿ ಶಿಕ್ಷಣ ಹೊಂದುತ್ತಿದ್ದರು. ಈ ಶಾಲೆಗಳಲ್ಲಿ ಧರ್ಮಾರ್ಥವಾಗಿ ಶಿಕ್ಷಣ ಕೊಡುತ್ತಾರೆ. ಈ ಶಿಕ್ಷಣವು ಮೀನು ಕಸಬಿಗೆ ಸಮ್ಮಂಧಪಟ್ಟ ವಿಜಾತೀಯವಾದ ಶಿಕ್ಷಣವಾಗಿರುತ್ತದೆ. ಮೀನು ಕಸಬಿಗೆ ಸಮಂಧಪಟ್ಟ ಎಲ್ಲಾ ಸಾಧನಗಳಲ್ಲಿ ಚೆನ್ನಾಗಿ ತರಬೇತಿಯಾದ ಶಿಕ್ಷಕರು ದೊರಕುವಂತೆ ಕಲ್ಲಿಕೋಟೆಯಲ್ಲಿ ಶಿಕ್ಷಕ ತರಬೇತಿಯ ವಿಶೇಷ ತರದ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಾರೆ.

ಈ ವಿಜಾತೀಯವಾದ ಶಿಕ್ಷಣದ ಪ್ರಯೋಜನವು ತಮಗೂ ದೊರಕಬೇಕೆಂದು ತಮಿಳು ಜಿಲ್ಲೆಗಳಲ್ಲಿರುವ ಮೀನು ಕಸಬಿನವರು ಹೇಳಿಕೊಂಡಂದ್ದರಿಂದ ತಿನ್ನವೆಲ್ಲಿ ಜಿಲ್ಲೆಯಲ್ಲಿರುವ ಮೀನು ಕಸಬಿನವರ ಶಾಲೆಗಳ ಶಿಕ್ಷಕರನ್ನು ಈ ವರ್ಷ ಈ ತರಬೇತಿ ಸಂಸ್ಥೆಗೆ ಹೊಸತಾಗಿ ಸೇರಿಸಿಕೊಂಡಿದ್ದಾರೆ.

ಹಿಂದೂದೇಶದಲ್ಲಿ ಕೊಡುವ ಶಿಕ್ಷಣದಲ್ಲಿ ಪ್ರಕೃತಿಶಾಸ್ತ್ರದ ಕುರಿತು ಹೆಚ್ಚಿನ ವಿಚಾರವಿರುತ್ತಿದ್ದಿಲ್ಲ. ಆದರೆ ಇಲ್ಲಿ, ಈ ಶಾಸ್ತ್ರಾಭ್ಯಾಸವನ್ನು ಪ್ರೋತ್ಸಾಹಿಸಬೇಕೆಂದು ಸರಕಾರದವರು ಮದ್ರಾಸಿನಲ್ಲಿ ಜಲಜಂತು ಪ್ರದರ್ಶನಾಲಯುವನ್ನಿಟ್ಟು, ಹಿಂದೂದೇಶದಲ್ಲಿ ಬರ್ಮಾದಲ್ಲಿಯೂ ಇರುವ ಎಲ್ಲ ಶಾಲೆ ಉಚ್ಚ ಶಾಲೆ ವ ಪ್ರದರ್ಶನಾಲಯಗಳಿಗೆ ಶಿಕ್ಷಣದ ಕುರಿತು ಪ್ರಯೋಜನಕ್ಕೆ ಬೀಳುವ ನಾನಾ ತರದ ಜೀವಜಂತುಗಳನ್ನು ಕಳುಹಿಸಿಕೊಡುತ್ತಾರೆ. ಪೌರ್ವಾತ್ಯ ದೇಶಗಳಲ್ಲೆಲ್ಲಿಯೂ ಮದ್ರಾಸಿನಲ್ಲಿರುವ ತರದ ಜಲಜಂತು ಪ್ರದರ್ಶನಾಲಯಗಳಿಲ್ಲ; ಶಾಲೆಗಳಿಗೆ, ಪ್ರದರ್ಶನಾಲಯಗಳಿಗೆ ಹೀಗೆ ಜೀವಜಂತುಗಳನ್ನು ಫಿಶ್ಶರಿಸ್ ಶಾಖೆಯವರೇ, ಕಳುಹಿಸಿಕೊಡುವಂಥಾದ್ದು.

4 ಮೀನುಕಸಬಿನವರ ಆರ್ಥಿಕ ವ ನೈತಿಕ ಉನ್ನತಿ.

ಶಿಕ್ಷಣ ಪ್ರಚಾರದಿಂದಲೂ ಸಹಕಾರ ಸಂಘಗಳ ಸ್ಥಾಪನೆಯಿಂದಲೂ ಮೀನು ಕಸಬಿನವರ ಉದ್ಧಾರವನ್ನುಂಟುಮಾಡುವದು ಫಿಶ್ಶರಿಸ್ ಶಾಖೆಯ ಕರ್ತವ್ಯಗಳಲ್ಲಿ ಒಂದಾಗಿದೆ. ಫಿಶ್ಶರಿಸ್ ಶಾಖೆಯವರು 1914ನೇ ವರ್ಷದಿಂದಿನಿಂದ ಮೀನು ಕಸಬಿನವರ ಹೊಸ ಸಂಘಗಳನ್ನು ಸ್ಥಾಪಿಸಿ ಅವುಗಳ ಜಾಗ್ರತೆಯ ಕುರಿತು ಸಹಕಾರ ಶಾಖೆಯೊಂದಿಗೆ ಸೇರಿ ಕೆಲಸಮಾಡುತ್ತಿದ್ದಾರೆ. 1984—85ರ ಅಂತ್ಯದಲ್ಲಿ ಹೀಗೆ ಅವರ ಸಂಘಗಳು ಪಶ್ಚಿಮ ಕರಾವಳಿಯಲ್ಲಿ 49, ಪೂರ್ವ ಕರಾವಳಿಯಲ್ಲಿ 21 ಇದ್ದವು.

ಮೀನು ಕಸಬಿನವರಲ್ಲಿ ಕುಡುಕತನ, ಅನಾವ್ಯಯಗಳ ಅಭ್ಯಾಸಗಳು ಕಡಮೆಯಾಗುವಂತೆ ಫಿಶ್ಶರಿಸ್ ಇಲಾಖೆಯ ಅಧಿಕಾರಿಗಳು ಸಾಮಾಜಿಕೋನ್ನತಿಯ ಕೆಲಸವನ್ನೂ ಮಾಡುತ್ತಿದ್ದಾರೆ.

5 ಮಲೆಜ್ವರ ನಿಗ್ರಹದ ಕಾರ್ಯಗಳು.

ಮಲೆಜ್ವರವನ್ನು ಕಡಿಮೆಮಾಡಬೇಕಾದರೆ ಸೊಣಗಳನ್ನು ನಾಶಪಡಿಸುವ ಒಂದು ಜಾತಿಯ ಮೀನನನ್ನು ಬೆಳೆಸುವದೇ ಒಳ್ಳೇ ಉಪಾಯವೆಂಬದು ಈಗ ಸರ್ವ ಸಮ್ಮತವಾಗಿದೆ. ಫಿಶ್ಶರಿಸ್ ಇಲಾಖೆಯವರು ಹಲವು ಪ್ರದೇಶಗಳಲ್ಲಿ ಈ ಕುರಿತು ನಡೆಸಿದ ಕಾರ್ಯಗಳು ಸಾರ್ಥಕವಾಗಿವೆ. ಕರ್ನೂಲು ಜಿಲ್ಲೆಯ ನಲ್ಲಿಮಲೆ ಎಂಬುದು ಯಾವಾಗಲೂ ಮಲೆಜ್ವರವು ತಪ್ಪದ ನಾಡೆಂದು ಹೆಸರುಗೊಂಡಿತ್ತು. ಅಲ್ಲಿ 1915ನೇ ವರ್ಷದಿಂದ ಫಿಶ್ಶರಿಸ್ ಶಾಖೆಯವರು ವರ್ಷಂಪ್ರತಿ ಈ ಜಾತಿಯ ಮೀನನ್ನು ಸಂಗ್ರಹ ಮಾಡಿಡುತ್ತಾರೆ. ಹೀಗೆ ಮಾಡಿದ್ದರಿಂದ ಅಲ್ಲಿ ಮಲೆಜ್ವರದ ಹಾವಳಿಯು ಬಹಳ ಕಡಿಮೆಯಾದದ್ದು ಇತ್ತೀಚೆಗೆ ಆ ಕುರಿತು ಮಾಡಿದ ತನಿಖೆಯಿಂದ ತಿಳಿದುಬರುತ್ತದೆ.

ಈ ಜಿಲ್ಲೆಯಲ್ಲಿರುವ ಕೈಗಾರಿಕೆಗಳಲ್ಲಿ ಮೀನು ಕೈಗಾರಿಕೆಯು ಬಹಳ ಮುಖ್ಯವಾದದ್ದು. ಈ ಅಧಿಪತ್ಯದಲ್ಲಿರುವ ಮೀನು ಹಿಡಿಯುವ ದೊಡ್ಡ ಎರಡು ಕೇಂದ್ರಗಳಲ್ಲಿ ಮಲ್ಪೆಯು ಒಂದಾಗಿರುತ್ತದೆ.

ಪಶ್ಚಿಮ ಕರಾವಳಿಯ ಇತರ ಕಡೆಗಳಂತೆ ಈ ಜಿಲ್ಲೆಯಲ್ಲಿ ಸಮುದ್ರದ ಮೀನು ಧಾರಾಳವಾಗಿ ಸಿಕ್ಕುವುದರಿಂದ, ಈ ಜಿಲ್ಲೆಯ ಹೊಳೆಗಳಲ್ಲಿರುವ ಮೀನಿನ ಪ್ರದೇಶಗಳು ಏನೂ ಪ್ರಾಮುಖ್ಯತೆಯವುಗಳಾಗಿರುವುದಿಲ್ಲ. ಈ ಜಿಲ್ಲೆಯಲ್ಲಿ 457 ಮೀನೆಣ್ಣೆ, ಮೀನು ಗೊಬ್ಬರದ ಕಾರ್ಖಾನೆಗಳಿವೆ. ಅವುಗಳಿಂದ ಒಳ್ಳೇ ಮುನಾಫೆಯು ಲಭಿಸುತ್ತದೆ. ಈ ಕೈಗಾರಿಕೆಗೆ ಹೆಚ್ಚಿನ ಅನುಕೂಲತೆಗಳೂ ಪ್ರೋತ್ಸಾಹವೂ ದೊರೆಯುತ್ತವೆ. ಮೀನು ಕಸಬಿನವರು ಬೇರೆ ಜನರು ಇರುವಲ್ಲಿಂದ ದೂರ ಹಳ್ಳಿ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿ ಇರುವದು ವಾಡಿಯಾಗಿರುತ್ತದೆ. ಅವರ ಮಕ್ಕಳಿಗಾಗಿ ಸರಕಾರದವರು ಪ್ರತ್ಯೇಕ 18 ಶಾಲೆಗಳನ್ನು ಈ ಜಿಲ್ಲೆಯಲ್ಲಿ ಸ್ಥಾಪಿಸಿದ್ದಾರೆ. ಅವುಗಳಲ್ಲಿ ಧರ್ಮಾರ್ಥವಾಗಿ ಶಿಕ್ಷಣವನ್ನು ಕೊಡುತ್ತಾರೆ. ಈ... ಅವುಗಳಲ್ಲಿ 745 ಹುಡುಗರೂ 240 ಹುಡುಗಿಯರೂ ಶಿಕ್ಷಣ ಹೊಂದುತ್ತಿದ್ದಾರೆ ಈ ಜಿಲ್ಲೆಯಲ್ಲಿ ಮೀನು ಕಸಬಿನವರಿಗೆ ಸಮ್ಮಂಧಪಟ್ಟ 14 ಸಹಕಾರ ಸಂಸ್ಥೆಗಳಿವೆ. ಮೀನು ಕಸಬಿನವರು ಮಿತವ್ಯಯದ ಅಭ್ಯಾಸಗಳನ್ನು ಕಲಿಯುವಂತೆ ಅವರಿಗೆ ಅವರವರ ಪಾಲು ಬಂದ ಪಾಳ ಮತ್ತು ಠೇವಣಾತಿಗಳ ಆಧಾರದಿಂದ ಮಾತ್ರ ಸಂಘದ ಸಹಾಯವು ಸಿಕ್ಕುವಂತೆ ನಿಯಮಗಳನ್ನು ಮಾಡಿದ್ದಾರೆ.

ಇನ್ನು 2 ವಾರಗಳು ಮಾತ್ರ!

ಶ್ರೀ ರಾಜರಾಜೇಶ್ವರೀ ಪ್ರಸೀದ

ಸಾಹಿತ್ಯಸಾಮ್ರಾಜ್ಯ

ನಾಟಕ ಮಂಡಳಿ, ಮೈಸೂರು

ಮಂಗಳೂರು ಮೈದಾನಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ

ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ 16--1-37ನೇ ಶನಿವಾರ ರಾತ್ರಿ 9-30 ಗಂಟೆಗೆ

ರಾಷ್ಟ್ರವೀರ

ಎಂಬ ನಾಟಕವನ್ನು ಪ್ರದರ್ಶಿಸುವರು

ತಾ.17-1-37ನೇ ಭಾನುವಾರ ಸಾಯಂಕಾಲ 6 ಗಂಟೆಗೆ

ಮ್ಯಾಟಿನಿ ಮ್ಯಾಟಿನಿ

ಭೂ-ಕೈಲಾಸ

ನಾಟಕಕ್ಕೆ ಮಾತ್ರ ಸ್ಥಳ ಪರಸ್ಥಳಗಳ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲ್ಲಾ ತರಗತಿಗಳಲ್ಲಿಯೂ ಅರ್ಧ ದರ ಏರ್ಪಡಿಸಿರುತ್ತದೆ.

ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಯಂ. ವಿ. ಸುಬ್ಬಯ್ಯ ನ್ಯಾಡು, ಆರ್. ನಾಗೇಂದ್ರ ರಾವ್, ಪ್ರೊಪ್ರೈಟರ್ಸ್.

THE

BANK OF MANGALORE LTD.,

MANGALORE.

ESTD. 1931.

Branches:- Panemangalore, Mudabidri & Padubidri.

Chairman:—**Philip J. Chandran, Esq.,**

Retd. Dt. Registrar of Joint Stock Companies.

On & from 1st of January 1937,

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*

"ಬ್ರೇಕ್ ಪಿಲ್ಸ್"

Invented by a Himalayan Sage.

ಸ್ತ್ರೀಪುರುಷರಿಗೆ ಆನಂದವನ್ನುಂಟು ಮಾಡುವುದು ಈ ಮಾತ್ರೆಗಳೆ.

ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು.

ಇದರಲ್ಲಿ ರಸವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು

ಗುಣವಿಲ್ಲದಿದ್ದಲ್ಲಿ ಹಣ ವಾಪಾಸು

೬೦ ಮಾತ್ರೆಗಳು ರೂ ೫ ೦-೦. ೩೦ ಮಾತ್ರೆಗಳು ರೂ ೩ ೦-೦.

(ಕಾಗದ ಪತ್ರಗಳು ಇಂಗ್ಲಿಷಿನಲ್ಲಿಯೇ)

ಡಾ| ಎ ಎಸ್ ಮೂರ್ತಿ,
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ಡೋಂಗರೇ ಇವರ ಬಾಲಾಮೃತ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಛಳಿಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಷಾ ಮತ್ತು ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

Regd)

ಅಮೃತಾಂಜನ

ತಲೆನೋವು, ಶಿರೋವೇದನ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಷಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS · OINTMENT · BOMBAY MADRAS CALCUTTA

ESTD· 1906·

[T]he Canara Banking Corporation Udipi Ltd.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

ನೋಟೀಸು.

ನಿರಖು ಠೇವಣಾತಿ (Fixed Deposit) ಗಳನ್ನು ನಮ್ಮ ಎಲ್ಲ ಆಫೀಸುಗಳಲ್ಲಿಯೂ ತಾ. 1-1-1937ರಿಂದ ಈ ಕೆಳಗಿನ ಧರದಲ್ಲಿ ಸ್ವೀಕರಿಸಲಾಗುವುದು —

8 ತಿಂಗಳಿಗೆ	— ಶೇ. 3½%	1 ವರ್ಷಕ್ಕೆ
೩	„ 3%	„
	„ 3½%	„
	„ 4%	„

ಅಗುವವು)

S. K | Udipi, 9-11-'36

..., 4. Shimoga, 5. Madras, 6. Bunder Mangalore,
... 12. Sagara.

ದಿ ಮುಲ್ಕಿ ಗ್ರೇಂಡ್ ರೇಫ್ಲ್

(ಮುಲ್ಕಿ ಪುಸ್ತಕಾಲಯ ಸಹಾಯಾರ್ಥ)

ಮೂಲ್ಕಿ ದ. ಕನ್ನಡ.

ಟಿಕೆಟು ಅಚ್ಚಾಗುವ ತಾ. 16-1-'37. ಲೋಟ್ರಿ ತೆಗೆಯುವ ತಾ. 31-1-'37.

ಟಿಕೇಟು ಒಂದರ ಕ್ರಯ ಆಣೆ 4 ಮಾತ್ರ.

10 ಟಿಕೇಟುಗಳುಳ್ಳ ಪುಸ್ತಕಕ್ಕೆ ಒಂದಕ್ಕೆ ರೂ. 6-0-0 ಮಾತ್ರ.

ಜಾಗ್ರತೆ ಮಾಡಿರಿ!

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ.

ಲೋಟ್ರಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸಿಡೋಣ ಆಗಲಿಕ್ಕಿಲ್ಲ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ

ಕಾರ್ಯದರ್ಶಿ,
ದಿ. ಮುಲ್ಕಿ ಗ್ರೇಂಡ್ ರೇಫ್ಲ್,
ಮೂಲ್ಕಿ ದ. ಕನ್ನಡ.

THE PIE-MONEY BANK LTD.

Maidan Road, MANGALORE

Undertakes all kinds of Banking Business Current account at 3½% per annum Savings Bank Deposits at 4½% per annum

FIXED DEPOSITS

For 2 Years 7% 1 Year 6% For 6 months 5% 3 months 4½%

Auction Chit Funds ranging from Rs 100—0—0 run regularly on systematic lines Unique Banking facilities to Businessmen and interested Public

Apply for paticulars— **K. R. GURU,** *Managing Director*

ಗುಣವಾದದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸ್ತ್ರೀ ಪಡೆಯುವುದರಿಂದ ರೋಗಗಳ ಅತಿಯು ಅಶಕ್ತರಾಗುತ್ತದೆ. ಬಹಳ ಮಕ್ಕಳಲ್ಲಿ ವಿಶೇಷ ಖರ್ಚಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಪಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟು ಸರಿಯಾಗಿ ಆಗುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ದೊಡ್ಡ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದುಬಳ ಸರ್ಟಿಫಿಕೇಟು — ಡಾ| ಬಿ ಎ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಡಿ, ಕಾಕೋ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕ್ಕಾಗಿ ಡಬ್ಬಿಯ ಕ್ರಯ ರೂ. ೪-೦-೦, ವಿ. ಪಿ. ಅಣೆ ೮

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

೧೮೭೭ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್
ರಥಬೀದಿ ನಂಬ್ರ 3 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ-ಪೇಟೆ, ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್, ತೀರ್ಥಹಳ್ಳಿ

ಈಗಿನ ದಿವಸಗಳಲ್ಲಿ ಬೇಕಾದದ್ದು ಉತ್ತಮವಾದದ್ದು. ಅಗ್ಗವಾದದ್ದಲ್ಲ!

ಪರಿಮಳದಲ್ಲಿಯೂ ರುಚಿಯಲ್ಲಿಯೂ ಪರಿಪೂರ್ಣವಾದದ್ದು.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್



ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್ ಇದ್ದು ಅಂದವಾದ ಪೊಟ್ಟಣಗಳಲ್ಲಿ ಸಿಗುತ್ತದೆ.

ಶ್ರೇಷ್ಠಗುಣಗಳು ನಿಮ್ಮನ್ನು ಕಣ್ಣನ್, ದೇವನ್ ಚಹಾವನ್ನೇ ಕೊಂಡುಕೊಳ್ಳುವಂತೆ ಒತ್ತಾಯ ಮಾಡುತ್ತದೆ.

ಕಣ್ಣನ್ ದೇವನ್ ಚಹಾ ಪೊಟ್ಟಣಗಳ ಸಿಗುವಿಕೆಯನ್ನು ನಿರೀಕ್ಷಿಸಿ

Sole Agents: The

ಅಭ್ಯಾಸಿಗ... ಅವರವರ ಪಾಲು ಬಂದ ... ವಹಾತಿಗಳ ಆಧಾರದಿಂದ ಮಾತ್ರ ಸಂಘದ ಸಹಾಯವು ಸಿಕ್ಕುವಂತೆ ನಿಯಮಗಳನ್ನು ಮಾಡಿದ್ದಾರೆ

...ಅವುಗಳಿಂದ ಒಳ್ಳೇ ಮ...ಯು ಲಭಿಸುತ್ತದೆ ಈ ಕೈಗಾರಿಕೆಗೆ ...ಟ್ಟಿನ ಅನುಕೂಲತೆಗಳೂ ಪ್ರೋತ್ಸಾಹವೂ ದೊರೆಯುತ್ತವೆ. ಮೀನು ಕಸಬಿನವರು ಬೇರೆ ಜನರು ಇರುವಲ್ಲಿಂದ ದೂರ ಹಳ್ಳಿ ಪ್ರದೇಶಗ...

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು

Estd. 1906.] ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ಬಿಡಿ ಸಂಚಿಕೆ ಒಂದಾಣೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮುಕ್ತಿ ವಿಶ್ವವ ಸುಡುತ ಬರುತಿರುವ ॥

ಗರಳಕೆವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು । ೧ ।

ಪುಸ್ತಕ ೩೧. ಮಂಗಳೂರು ತಾ. ೨೨ನೇ ಜನವರಿ ೧೯೩೭ (22 1-'37) ಸಂಚಿಕೆ ೩

A copy of this Prospectus has been filed with the Assistant Registrar of Joint Stock Companies Mangalore

Mangalore Automobiles Ltd.

(INCORPORATED UNDER THE INDIAN COMPANIES ACT 1913)

Authorised Capital Rs. 100,000

DIVIDED INTO 10000 SHARES OF RUPEES TEN EACH.

Present issue 5,000 shares of Rupees Ten each. Payable on application Rs 10/ full Amount of share

DIRECTORS

1 U MANJAPPA Esq
Retired Deputy Collector & President Special Bench of Magistrates Chairman

2 G SOMASHEKAR RAO Esq, B.A., B.L., Vakil

3 T R GANAPATHY IYER Esq *Director Messrs Rane (Madras) Ltd. Lendlord etc*

4 B VITTAL RAU Esq, *Managing Director The Popular Insurance Co Ltd*

5 K R GURU Esq *Managing Director The Pie Money Bank Ltd*

6 T B JOGI Esq (*Ex officio*) Manager

7 U V UPADYA Esq (*Ex officio*) Automobile-Engineer

AUDITOR —P M HEGDE Esq, B.A., B.L.

BANKERS THE JAYA LAXMI BANK LTD

REGISTERED OFFICE —MANGALORE

PROSPECTUS

Objects —The several objects and purposes for which this company is floated are set out in the Memorandum of Association.
The main objects are as under —

1 **City Motor Bus Service** Mangalore is an extensive town thickly populated and the public feel the necessity of cheap conveyance. A city service will afford the public most up to date and modern conveyance with all facilities and will yield a good return to the company.

2 To acquire and take over as a going concern the business of Messrs National Automobiles a private partnership company with a view to expand and improve the motor trade by direct import of motor parts and accessories also to work up motor car and truck agencies.

3 Start a well equipped and up-to-date repair shop, which will serve all motor cars lorries buses private and public calculated to bring good returns.

The company has purchased the goodwill of National Automobiles Mangalore together with all the rights privileges and benefits of contracts. The assets are valued strictly at cost price under certificate by the Auditor and the purchase consideration is fixed at Rs 7500/- (including goodwill valued at Rs 2500/-) which is payable by the allotment of 425 fully paid up shares of Rs. 10 each and Rs 3250 in cash. The proceeds of the shares now offered will be sufficient for all the company's present requirements.

Management —The company has appointed Mr T B Jogi as Manager Mr U V Upadya as Engineer and Mr A R Chanillo as Accountant under the control of Directors as per contracts for the Management of the company.

The Directors shall be at liberty to engage agents to canvass shares and such agents shall be paid a commission on the value of shares canvassed by them at a rate not exceeding 5 per cent.

Preliminary Expenses —The company shall have to pay preliminary expenses in connection with the formation and floating of the company up to the time of commencement of business, exclusive of the commission payable to the canvassers of shares and the amount estimated thereof is Rs 750.

Contracts—The company is under contract dated 1—1—'37 to take over the National Automobiles. Another contract of service has also been entered into with Mr U V Upadya, Automobile Engineer, and the contracts are open to inspection at the Company's Office. Under the first Messrs T B Jogi and A. R Chanillo are appointed as Manager and Accountant for a period of 15 years on a remuneration of not less than Rs 75/- monthly and 6% on the nett profits and Rs 65/-monthly and 2% of nett profits respectively. As per the second Mr U. V Upadya is appointed as Automobile Engineer and Technical Advisor of the Company on a salary of Rs 100/-monthly and 2% on the nett profits.

Directors' Qualification & Remuneration—The Articles of Association of the company provide that the qualification of a Director is the holding of 50 shares in the company registered in his name except in the case of the first Directors, each of whom shall however hold in his own right not less than five unencumbered shares. The remuneration of every Director (including the ex officio Directors) shall be Rs. 5/-or such other sum as the Directors may from time to time fix for every meeting of the Board or of a committee of the Board attended by him. This is exclusive of any travelling allowance that may be fixed by the Directors.

Minimum Subscription—The minimum subscription upon which the company will proceed to allotment is 250 shares of the nominal value of Rs. 2500/-

Application for Shares—Application for shares shall be made upon the prescribed form and sent either directly to the company or their Bankers together with the remittance of the amount of deposit.

Where no allotment is made, the deposit will be returned in full and where the number of shares allotted is less than the number of shares applied for, then the balance of deposit will be returned.

Copies of prospectus and forms of application can be obtained at the office of the company.

The Memorandum and Articles of Association of the company can be inspected at any time during business hours at the Registered Office of the company. This prospectus is issued subject to the provisions contained in the Memorandum of Association of the company.

Share certificates will be completed and ready for delivery within three months after the allotment of shares.

Dated 11-1-1937 } 1. (Sd) U. MANJAPPA. 2. (Sd) G. SOMASHEKAR RAO. 3. (Sd) T. R. GANAPATHY IYER.
MANGALORE. } 4. (Sd) B. VITTAL RAU. 5. (Sd) K. R. GURU. 6. (Sd) T. B. JOGI 7. (Sd) U. V. UPADYA.

... ಬರೆಯುವರು. ಮುಂದೆ ನೋಡಬೇಕು.

○ ○ ○

ಬಂಗಾಳ ನಾಗಪೂರ ರೈಲ್ವೆ ಕೆಲಸಗಾರರ ಮುಷ್ಕರ ಇನ್ನೂ ಮುಗಿದಿಲ್ಲ. ಅಧಿಕಾರಿಗಳು ತಮಗೆ ಅದರಿಂದೇನೂ ಬಾಧಕವಾಗಿಲ್ಲ ಎನ್ನುವರು. ಕಳೆದ ೧೧ ದಿನಗಳ ಆಯವ್ಯಯ ನೋಡಿದರೆ,—ಹೆಚ್ಚಲ್ಲ, ಎಂಟೇ ಲಕ್ಷ ರೂಪಾಯಿ ನಷ್ಟವಾಗಿದೆ! ೪೧,೦೦೦ ಜನರು ಮುಷ್ಕರ ಹೂಡಿದ್ದಿರುವರು. ಒಟ್ಟೊಟ್ಟಿನ ಅಲಕ್ಷ್ಯದಿಂದ ಕಂಪನಿಗೆ ೨೦ ರೂಪಾಯಿ ನಷ್ಟ, ಹನ್ನೊಂದು ದಿನಗಳಲ್ಲಿ! ಇತರ ಪ್ರತಿಯೊಂದು ರೈಲ್ವೆಯೂ ಅಧಿಕಾಧಿಕ, (೧೧-೧೪ ಲಕ್ಷ) ರೂಪಾಯಿ ಲಾಭತೋರಿಸಿದೆ. ಅವುಗಳ ಒಟ್ಟುಲಾಭ ೪೩ ಲಕ್ಷ ರೂಪಾಯಿ.

○ ○ ○

ಸ್ಪೈಯಿನಿನ ರಾಜಧಾನಿ ಮೆಡ್ರಿಡ್ ಈಗ ಆಹಾರವಿಲ್ಲದೆ ಬಳಲುತ್ತಿದೆ. ಅಕ್ಕಿ ಕೂಡ ಸಿಗುತ್ತಿಲ್ಲ. ರೊಟ್ಟಿಗಾಗಿ ದಾರಿಯುದ್ದಕ್ಕೂ ಹೆಂಗಸರು ಸಾಲಾಗಿ ನಿಂತು ಕಾಯುತ್ತಿದ್ದಾರೆ. ಸರಕಾರೀ ಆಫೀಸುಗಳ ಇದಿರಲ್ಲಿ, ಮೆರವಣಿಗೆ ಸಾಗುತ್ತ "ಆಹಾರ-ಶಾಂತಿ!" ಎಂದು ಕೂಗುತ್ತಿದ್ದಾರೆ. ಕಲ್ಲಿದ್ದಲೂ, ಕಟ್ಟಿಗೆಯೂ ನಾಸ್ತಿ. ಮೇಜುಕುರ್ಚಿ ಕಪಾಟುಗಳನ್ನು ಸುಡುತ್ತ, ಅಡಿಗೆಮಾಡುತ್ತಿದ್ದಾರೆ. ಜನರನ್ನು ಹೊರಗೆ ಕಳುಹಿಸೋಣವೆಂದರೆ ಯಾವ ದಾರಿಯಾಗಿ, ಹೇಗೆ, ಎಲ್ಲಿಗೆ ಎಂದೂ ತಿಳಿಯದಾಗಿದೆ" ಎಂದು ಅಲ್ಲಿಂದ ಸ್ವದೇಶಕ್ಕೆ ಈಗ ಬಂದಿರುವ ಲೇಡಿಯ ಮಾತು.

○ ○ ○

ಜರ್ಮನಿಯಲ್ಲಿ ಮಕ್ಕಳಿಗೊಂದು ಹೊಸ ಉದ್ಯೋಗಹಚ್ಚಲಾಗಿದೆ. ವಸ್ತ್ರದ ಚಿಂದಿಗಳು, ಎಲುಬುಗಳು, ಬಾಟಲಿಚೂರುಗಳು ಇವನ್ನು ಕೂಡಿಸುವ ಕೆಲಸ. ಹೆದ್ದಾರಿಗಳು ಸುರಕ್ಷಿತವಾಗಲೆಂದೇನೂ ಅಲ್ಲ, ಖರ್ಚು ಕಡಿಮೆಯಾಗಲೆಂದೂ ಅಲ್ಲ, ಇದು ಸಾಂಪತ್ತಿಕಯುಕ್ತಿಯಂತೆ. ಹೇಗೆ? ಇವು ಕ್ಷುಲ್ಲಕ ವಸ್ತುಗಳೆಂದು ಜನರು ತಿಳಿದರೂ ಇವು ಯುದ್ಧಸಾಮಗ್ರಿಗಳಲ್ಲಿ ಬಹು ಅಮೂಲ್ಯವಾಗಿವೆ. ಮನೆಮನೆಯಿಂದ ಇವನ್ನು ಕೂಡಿಸಲು ಸರಕಾರವು ಅಪ್ಪಣೆಕೊಟ್ಟಿದೆ. ಯುದ್ಧ ಸನ್ನಾಹವೇನೊ ನಿಜವೆ. ಯುದ್ಧವಾದಲ್ಲಿ ಮಾತ್ರ, ಆ ಸನ್ನಾಹವೇ ಈ ಮಕ್ಕಳ ತಂದೆತಾಯಿಂದಿರ ಮೇಲೂ ಮಕ್ಕಳ ಮೇಲೂ ಎದುರುಪಕ್ಷದವರಿಂದ ಮರಣವನ್ನೂ ಅದಕ್ಕೂ ಭಯಂಕರವಾದ ಇತರ ಪರಿಣಾಮವನ್ನೂ ಉಂಟುಮಾಡಲಾರದೇ?

○ ○ ○

ಇನ್ನೊಂದು ಪ್ಲೇನು. ಭೂಲೋಕದ ಅಸ್ತಿವಾರದ ಪ್ಲೇನು ಹೊರಟಿದೆ. ಯೂರೋಪಿನವರಿಗೆ ಶಾಂತಿಯನ್ನುಂಟುಮಾಡುವ ಈ ಪ್ಲೇನಿನಲ್ಲಿ ಯೂರೋಪಿನ ಯಾರೂ ಕಾಲಿದನ್ನು ಕಾಣಲಾರರು. ಲೀಗ್ ಆಫ್ ನೇಶನ್ಸ್ ಎಂಬಾ ಜನಾಂಗ ಸಂಘದ ರಚನೆಯಲ್ಲಿ ತಪ್ಪಿತ್ತು; ಸಂಘವು ತಪ್ಪು ಮಾಡುತ್ತಾ ಬಂದು ಈಗ ಜೀವನ್ಮೃತವಾಗಿದೆನ್ನೋಣ. ಆದರೆ, ಈ ಹೊಸ ಅಸ್ತಿವಾರದ ಕಾರ್ಯದಲ್ಲಿ,—ಆಸ್ಯಖಂಡಕ್ಕೆ ಅಷ್ಟು ಪ್ರಾಧಾನ್ಯವಿಲ್ಲ; ಆಸ್ಯಖಂಡವೆಂದರೆ ಆಶ್ರಿತಖಂಡವೆಂದರ್ಥವೇ? ಆಫ್ರಿಕಾ, ದಕ್ಷಿಣ ಅಮೇರಿಕಗಳೂ ಹಾಗೆ ಹಾಗೆಯೆ. ಹಿಂದುಳಿದ ಮತ್ತು ಪರಾಶ್ರಿತವಾಗಿ ಬದ್ಧ ಜನಾಂಗಗಳಿಗೆ, ಪ್ರಜೆಗಳಾಗಿಯೆ ಬಾಳಬೇಕಾಗಿ ಬಂದವರಿಗೆ, ಯಾವ ಹೆಚ್ಚಿನ ಸಲಕರಣೆಗಳೂ ಇಲ್ಲ. ಈ ಹೊಸ ಅಸ್ತಿವಾರ ರಚನೆಯಲ್ಲೂ ಇಷ್ಟು ಬಲಹೀನವಾದ ಪ್ಲೇನೇ ಬೇಕೆ?



ಅದರಿಂದಲೇ ಔಷಧ ... ಎಲ್ಲ ದಮ್ಮಿನವರಿಗೆ ಸಮನಾಗಿ ಗುಣಕಾರಿಯಾಗದು. ಇದನ್ನರಿತಿದ್ದ ನಾನು ನನ್ನ ಕಡೆಗೆ ಬಂದ ನೂರಾರು ದಮ್ಮಿನವರಿಗೆ ಪುರೋಹಿತ ಶ್ವಾಸಹಾರಿಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ತರದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢ ವಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು.

ಎಫಿಡ್ರೀನಿನ ಗುಳಿಗೆ ಹೊಗೆಯ ಔಷಧ ಇಂಜಕ್ಷನ್‌ಗಳಂಥ ದಮ್ಮು ತಾತ್ಪೂರ್ತಿಕ ನಿಲ್ಲಿಸುವ ಮಸ್ಸೇ ಔಷಧಗಳು ನನಗೆ ಗೊತ್ತಿದ್ದು, ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸವಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು. ಅವರಿಲ್ಲರಿಗೆ ದಮ್ಮನ್ನು ನಿಧಾನ ಆದರೂ ಪೂರ್ಣ ಗುಣಮಾಡುವಂಥ ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು. ದಮ್ಮು, ಕಂಠದಾಹಮಾಡುವ ಹಳೇ ಕೆಮ್ಮು ಕೋಡಗಕೆಮ್ಮು, ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ ಪುರೋಹಿತ ಶ್ವಾಸಹಾರಿ ಪ್ಲೇನ ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು. ಅಲ್ಲದೆ, ಆಮ್ಲ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಂಪೌಂಡ (ಕೆಂಪು ಪೇಕಿಂಗ್)ದ ಶಿಫಾರಸು ಮಾಡುವೆನು.

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂಪಾಯಿ 2, ರೂ. 3-8-0 ಮತ್ತು ರೂ. 6 ಬೆಲೆಯ ಸಣ್ಣ, ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು.

ಮುಂಬಯಿ ಏಜಂಟ್ಸ—

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ 2.

ಡಾ। ಪುರೋಹಿತ ಫಾರ್ಮಸಿ,
ಕೊಲ್ಹಾಪುರ.

ನೋಟೀಸು.

ಮೊನ್ನೆ ಜರುಗಿದ ವಿಜಯನಗರ ಉತ್ಸವಗಳ ಕಾಲದಲ್ಲಿ ಹಂಪೆಯಲ್ಲಿ ತುಂಗಭದ್ರಾ ನದಿಯಲ್ಲಿ ದೋಣಿಯು ಮುಳುಗಿ ಮರಣ ಹೊಂದಿದವರಲ್ಲಿ ನಮ್ಮ ಕಂಪೆನಿಯ ವಿಮಾದಾರರಾದ ಶ್ರೀ। ಇ. ಎನ್. ವೆಂಕಟಾಚಲಯ್ಯ ಶೆಟ್ಟರು, ವರ್ತಕರು ಮತ್ತು ಬ್ಯಾಂಕರರು, ಮಂಚಲದೊರೆ ಗುಬ್ಬಿ ತಾಲ್ಲೂಕು ತುಮಕೂರು ಡಿಸ್ಟ್ರಿಕ್ಟ್, ಅವರೂ ಒಬ್ಬರೆಂದು ತಿಳಿದುಬರುತ್ತದೆ. ಅವರು ಈಗ ಆರು ತಿಂಗಳಿಂದ ನಮ್ಮ ಕಂಪೆನಿಯಲ್ಲಿ 1000 ರೂಪಾಯಿಗೆ ವಿಮೆಮಾಡಿರುತ್ತಾರೆ. ಕಂಪೆನಿಯು ಅವರ ವಿಮಾಹಣವನ್ನು ಶೀಘ್ರವಾಗಿ ಸಲ್ಲಿಸಬೇಕೆಂಬ ಇಚ್ಛೆಯಿರುವುದರಿಂದ ಈ ವಿಷಯವಾಗಿ ಹೆಚ್ಚು ಮಾಹಿತಿಯನ್ನು ತಿಳಿದವರು ಕಂಪೆನಿಗೆ ಕೂಡಲೆ ದಯವಿಟ್ಟು ತಿಳಿಸಿದರೆ ಬಹಳ ಉಪಕಾರವೆಂದು ಭಾವಿಸುತ್ತೇವೆ.

ಕಂಠೀರವ ಮತ್ತು ಕಂಪೆನಿ,
ಆಡಳಿತ ನಿರ್ವಾಹಕರು,
ದಿ ಮೈಸೂರು ಇನ್ಷ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಶ್ರೀ ನರಸಿಂಹರಾಜರೋಡ್-ಬೆಂಗಳೂರು ಸಿಟಿ.

ಸುಖವಾದ ನಿದ್ರೆಯ ವಿಷಯವಾಗಿ ಖಾತ್ರಿಯಾಗಿರಿ.

ಸುಖವಾದ ಆರಾಮವುಳ್ಳ ನಿದ್ರೆಗೆ ಖಾತ್ರಿಯಾದ ದಾರಿಯೆಂದರೆ, ಓವಲ್ಟಿನ್ನನ್ನು ನಿಮ್ಮ ಶಯನ ಸಮಯದ ಪಾನೀಯವಾಗಿ ಮಾಡಿರಿ. ಅದು ಮಿದುಳು, ನರಗಳಿಗೆ ಹೆಚ್ಚು ಪೌಷ್ಟಿಯ ಆಹಾರವನ್ನುಂಟುಮಾಡಿ ನಿಮಗೆ ಬೆಳಗ್ಗೆ ಏಳುವಾಗ ಚುರುಕಾಗಿ ಚೇತನವುಳ್ಳವರಾಗಿ ಮಾಡುವ ಆ ಗಾಢವಾದ ಶಾಂತ ನಿದ್ರೆಯನ್ನುಂಟುಮಾಡುತ್ತದೆ.

ಓವಲ್ಟಿನನ್ನು ಪ್ರಕೃತಿಯಲ್ಲಿರುವ ಅಮೂಲ್ಯ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ, ದನದ ನವ ಕೆನೆಹಾಲಿನಿಂದಲೂ ಮಾಡಿದಾಗಿದ್ದು, ಶ್ರೇಷ್ಠ ವಿಟಮಿನ್‌ಗಳಿಂದ ಕೂಡಿದ್ದಾಗಿರುತ್ತದೆ. ಓವಲ್ಟಿನು ಪೌಷ್ಟಿಯುಕ್ತ ಸಂಪೂರ್ಣ ಗುಣದ ಆಹಾರವಾದ್ದರಿಂದ, ನಿಮಗೆ ಅದು ಆರೋಗ್ಯ, ಶಕ್ತಿ, ಚೇತನ್ಯವನ್ನುಂಟುಮಾಡಲಿಕ್ಕೆ ಬೇಕಾಗುವ ಎಲ್ಲಾ ಶಕ್ತಿವರ್ಧಗಳನ್ನು ಒದಗಿಸುತ್ತದೆ.

ಅಪ್ಪಟ 'ಓವಲ್ಟಿನ್'ನ್ನು ಪಡೆಯಿರಿ. ಗುಣದಲ್ಲಿಯೂ, ಕ್ರಮದಲ್ಲಿಯೂ, ಇದರ ಸರಿಸಮಾನವಾದದ್ದು ಯಾವುದೂ ಇಲ್ಲ. ಕೃತಕ ಬದಲಿಯುಗಳನ್ನು ತ್ಯಜಿಸಿರಿ.

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ.
ಇದು ತಯಾರಿಕೆಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ.

ಏಜಂಟರು:—ಜೇಮ್ಸ್ ರೈಟ್ 85 ಎ. ಲೋನ್ ಸ್ಟ್ರೀಟ್, ಕಲ್ಕತ್ತಾ.
ಬೊಂಬಾಯಿ ಮತ್ತು ಮದ್ರಾಸುಗಳಲ್ಲೂ ಸಿಗುತ್ತದೆ.

OV/475

ಚೆಕೋಸ್ಲೋವೇಕಿಯಾದಲ್ಲಿ ರಷ್ಯಾದ ಪ್ರೇರಣೆ ನಡೆಯುವುದರ ಕುರಿತು ಪರಿಶೀಲಿಸಲು ಇಂಗ್ಲೆಯರ ಸೂಚನೆ ಮೇರೆಗೆ, ಒಂದು ಸಮಿತಿಯು ರಚನೆಯಾಗಿದೆ.

ಸ್ಪೈನ ಸರಕಾರದ ಪರವಾಗಿಯೂ ದಂಗೆಕೋರರ ಪರವಾಗಿಯೂ ಯಾರೂ ಸ್ವಯಂಸೇವಕರಾಗಿ ಹೋಗದಂತೆ, ಇಂಗ್ಲಾಂಡು, ಫ್ರಾನ್ಸು, ಜರ್ಮನಿ, ಇಟಲಿ ಇತ್ಯಾದಿ ಪ್ರಮುಖ ದೇಶದ ಸರಕಾರಗಳು ಹೊಸತೊಂದು ನಿರ್ಣಯವನ್ನು ಮಾಡಿರುತ್ತವೆ. ಸೈನಿಕರು ಯುದ್ಧರಂಗಕ್ಕಿಳಿದ ಮೇಲೆ ಈ ನಿಯಮ.

ಜರ್ಮನಿಗೆ ಯುದ್ಧ ಬೇಕಾಗಿದೆ, ಆದ್ದರಿಂದ ಯುದ್ಧ ಸಾಮಗ್ರಿಗಳು ಬೇಕಾಗಿವೆ ಎಂಬ ಕೂಗು ಜರ್ಮನಿಯಲ್ಲಿ ಎಲ್ಲೆಲ್ಲೂ ಹರಡಿರುತ್ತದೆ. ಹಾಳು ಚಿಂದಿ, ಎಲುಬು, ಗಾಜಿನ ಚೂರು, ಯುದ್ಧಸಾಮಗ್ರಿಗಳನ್ನಾಗಿ ಉಪಯೋಗಿಸಲು, ಮನೆಮನೆಗೆ ಸುತ್ತಾಡಿ, ಅವುಗಳನ್ನು ಶೇಖರಿಸಬೇಕೆಂದು ನಾಜಿನಾಯಕರ ಅಪ್ಪಣೆಯಾಗಿರುತ್ತದೆ.

ಐದು ಮಿನಿಟಿಗೆ ಐದು ತಿಂಗಳ ಪ್ರವಾಸ

ಸುಲೆಮನ್ ಖಾದಿರ್ ಎಂಬವನು ಇಜಿಪ್ತಿನ ಸುಡಾನ್ ಪ್ರಾಂತ್ಯದ ಆಬುಅರ್ವದ್ ಎಂಬ ಹಳ್ಳಿಯವನು. ಗ್ರಾಮ ಅಧಿಕಾರಿಗಳು ಅವನ ಹೊಲವೊಂದನ್ನು ಮೋಸದಿಂದ ಅಪಹರಿಸಿದರೆಂಬುದಕ್ಕೆ ಆತನು ೧೨೦೦ ಮೈಲುಗಳಷ್ಟು ಪ್ರಯಾಣ ಮಾಡಿ ಕೈರೊ ನಗರಕ್ಕೆ ಬಂದು, ಸರ್ಕಾರದ ಪ್ರತಿನಿಧಿಗಳೊಂದಿಗೆ ತನ್ನ ಗೋಳನ್ನು ಹೇಳಿಕೊಂಡನಂತೆ. ಅಧಿಕಾರಿಗಳು, ಒಂದು ಪತ್ರ ಬರೆದು ಟಪ್ಪಾಲು ಮೂಲಕ ತಿಳಿಸಿದ್ದರೆ ಸಾಕಿತ್ತು ಎಂದರಂತೆ. ಆಗ ಸುಲೆಮಾನನು, "ಆ ದಿವಸ ನಮ್ಮ ಗ್ರಾಮದ ಟಪ್ಪಾಲು ಮನೆ ತೆರೆದಿರಲಿಲ್ಲ. ಅದು ತೆರೆಯುವವರೆಗೆ ಕಾಯುವಷ್ಟು ಸಹನೆ ನನಗಿಲ್ಲದಾಯಿತು" ಎಂದನಂತೆ. ಅವನು ಐದು ತಿಂಗಳು ಕಾಲುದಾರಿ ನಡೆದಿರುವನಂತೆ.

ಇದ್ದ ಹಾಗೆ

ಲಂಡನಿನ ಒಂದು ಪತ್ರಿಕೆಯಲ್ಲಿ ಒಂದು ಜಾಹೀರಾತು ಹೀಗಿತ್ತು "ಬೇಕಾಗಿವೆ–೨೪೦೦ ಮಿಡಿತೆಗಳು, ೧೫೦೦ ಕುರುವಾಯಿ ಹುಳಗಳು ಮತ್ತು ೫೦,೦೦೦ ತಗಣೆಗಳು." ಈ ವಿಚಿತ್ರ ಜಾಹೀರಾತಿಗೆ ಕಾರಣವನ್ನು ಕೇಳಲು ಪತ್ರಿಕಾ ಪ್ರತಿನಿಧಿಗಳು ಜಾಹೀರಾತು ಕೊಟ್ಟವನೊಡನೆ ಕೇಳಲು, ಅವನು "ನಾಳೆ ನಾನು ನನ್ನ ಮನೆಯನ್ನು ಬಿಡುತ್ತೇನೆ. ಮನೆಯ ಯಜಮಾನನು ಮನೆ ಬಿಡಬೇಕಾದರೆ ಅದು ಮೊದಲು ಹೇಗಿತ್ತೋ ಹಾಗೆಯೇ ಬಿಟ್ಟು ಹೋಗಬೇಕೆಂದು ಹೇಳಿರುವರು. ನಾನಿಲ್ಲಿ ಬರುವಾಗ ಈ ಮನೆಯಲ್ಲಿ ಅಷ್ಟು ಜೀವಿಗಳು ಇದ್ದುವು" ಎಂದನಂತೆ. ಒಳ್ಳೆ ತಲೆಖರ್ಚು ಮಾಡಿದ್ದಾನೆ.

ಜೀವ ತೆಗೆವ ನಗು

ಹೊಟ್ಟೆತುಂಬಾ ನಗಬೇಕೆಂದು ಕಟಿಂಗ್ ಎಂಬ ಊರಿನ ತರುಣನೊಬ್ಬನು ಪಟಾಕಿಯನ್ನು ಬಾಯಲ್ಲಿಟ್ಟು ಬೆಂಕಿಕೊಟ್ಟನು. ಅದು ಸಿಡಿದು, ಅವನ ಕೆಳಹಲ್ಲು ಹಾರಿತು. ತುಟಿ ಒಡೆದು ಚೂರಾಯಿತು. ನೆರೆಯವರು ಬಂದು ವಿಚಾರಿಸುವಾಗಲೂ ಅವನು ನಗುತ್ತಾ ಇದ್ದನಂತೆ.

ಇದೇ ಪ್ರಕಾರ ಇಂಗ್ಲೆಂಡಿನ ಒಬ್ಬನು ತನ್ನ ಅತ್ತೆಯ ಕುರ್ಚಿಗೆ ಸಿಡಿಮದ್ದು ಜಡಿದು ಬೆಂಕಿ ಕೊಟ್ಟು ಹಾರಿಸಿಬಿಟ್ಟ. ಅವಳ ಪ್ರಾಣ ಹೋಗುವ ಹಾಗಾಯಿತು. ಅದನ್ನು ಕಂಡು ನಗುತ್ತಾ ಇದ್ದ ಇವನಿಗೆ ಈಗ ನಗುವ ಜಾಡ್ಯ ತಾಗಿದೆ. ನಗುತ್ತಾ ಸತ್ತುಹೋಗಬಹುದೆಂದು ಡಾಕ್ಟರರು ಅಭಿಪ್ರಾಯ ಪಡುತ್ತಿದ್ದಾರೆ.

ಬ್ರೆಜಿಲಿನಲ್ಲಿ ಹಾಗೆ ಒಬ್ಬನು ತನ್ನ ಸ್ನೇಹಿತ, ಸಂಬಂಧಿಕರನ್ನೆಲ್ಲಾ ಒಂದು ಸತ್ಕಾರ ಕೂಟಕ್ಕೆ ಆಮಂತ್ರಿಸಿ ಅವರು ಗುಂಪಾಗಿ ನಿಂತಿದ್ದಾಗ ಒಂದು ಬಾಂಬನ್ನು ಅವರ ಮೇಲೆ ಎಸೆದನಂತೆ. ಐದು ಜನರು ತಕ್ಷಣ ಪ್ರಾಣ ಬಿಟ್ಟರು. ಅದನ್ನು ನೋಡಿ ನಗಲಿಕ್ಕೆ ಪ್ರಾರಂಭವಾದಿದ್ದ ಆಸಾಮಿ, ಜೈಲಿನಲ್ಲಿ ಇರುವಾಗಲೂ ನಗುತ್ತ ಇದ್ದನಂತೆ.

ಚಿಕ್ಕ ವಿವಾದದಿಂದ ಜೈಲು

ಟೊಟೆಂಗಿನ ಇಬ್ಬರು ದಂಪತಿಗಳಿಗೆ ಒಂದು ಚಲಚಿತ್ರ ಮಂದಿರದಲ್ಲಿ ನಡೆಯುವ ಫಿಲ್ಮು ಯಾವುದೆಂಬುದರ ಮೇಲೆ ವಿವಾದ ಬಂದು, ಗಂಡನು ತನ್ನ ತರ್ಕವೇ ಸರಿಯೆಂದು ತೋರಿಸಲಿಕ್ಕೆ ಮಾರ್ಗದಲ್ಲಿ ತೂಗಹಾಕಿದ ಜಾಹೀರಾತು ಹಲಿಗೆಯನ್ನು ಕಿತ್ತು ತಂದು ಪತ್ನಿಗೆ ತೋರಿಸಿ, ತನ್ನ ವಾದವನ್ನು ಸಿದ್ಧಪಡಿಸಿದನು. ಹೆಂಡತಿಯು ಸಮಾಧಾನಗೊಂಡಳು. ಮರುದಿವಸ ಗಂಡನಿಗೆ ಕಳ್ಳ ಅಪವಾದನೆಯ ವಾರಂಟು ಬಂತು.

ಮರಿಗಳು

ಚಿಕಾಗೊ ನಗರದ ಬಾಟೊರಿಯಾ ದಂಪತಿಗಳೇ ಅಮೇರಿಕದಲ್ಲಿ ತುಂಬ ಮಕ್ಕಳಿದ್ದವರು. ಅವರಿಗೆ 21 ಮಕ್ಕಳಿದ್ದಾರೆ. 9 ಗಂಡು 12 ಹೆಣ್ಣು. ತಾಯಿಯ ಪ್ರಾಯ 42. ತಂದೆಗೆ 51 ವರ್ಷ. ಮಕ್ಕಳಾಗುವುದು ಅಮೇರಿಕಾದಲ್ಲಿ ಹೆಚ್ಚು. ಗರ್ಭ ಸಂಯಮನದ ಪ್ರಚಾರ ನಮ್ಮ ದೇಶದಲ್ಲಿ ಹೆಚ್ಚು.

ಹೊಟ್ಟೆಯಲ್ಲಿ ಕತ್ತರಿ ಕರಗಿತು

ಒಕಹಾಮದ ಮಹಿಳೆಯೊಬ್ಬಳಿಗೆ ಶಸ್ತ್ರಚಿಕಿತ್ಸೆ ಮಾಡಿದರು. ಒಂದು 6 ಅಂಗುಲದ ಕತ್ತರಿ, ಡಾಕ್ಟರರ ಅಜಾಗ್ರತೆಯಿಂದ, ಅವಳ ಹೊಟ್ಟೆ ಒಳಗೆ ಉಳಿದು ಹೋಯಿತು. ಆ ಮೇಲೆ ಕೆಲವು ಸಮಯದ ನಂತರ ಪುನಃ ಒಂದು ಶಸ್ತ್ರ ಚಿಕಿತ್ಸೆ ನಡೆಸಿದಾಗ ಆ ಕತ್ತರಿಯು ಹೊರಗೆ ಬಂತು. ಅದರ ಒಂದು ತುಂಡು ಪೂರ್ಣ ಕರಗಿ ಹೋಗಿತಂತೆ.

ಹಲ್ಲಿನಿಂದ ಕಳ್ಳ ಸಿಕ್ಕಿಬಿದ್ದ

ಕಳರ ಮುಟ್ಟಿದ ಬಾಗಿಲುಗೋಡೆಗಳ ಮೇಲಿನ ಹೆಬ್ಬೆಟ್ಟು ಗುರುತುಗಳಿಂದ ಅವರ ಪತೆ ಹಚ್ಚುವುದು ಒಂದು ಚಮತ್ಕಾರವೆನ್ನಬೇಕು. ಅದಕ್ಕಿಂತಲೂ ಆಶ್ಚರ್ಯ ಪಡಿಸುವಂತೆ ಹಲ್ಲುಗಳ ಗುರುತಿನಿಂದ ಒಬ್ಬ ಕಳ್ಳನನ್ನು ಹಿಡಿದಿರುವರು. ಕಳ್ಳನು ಖಜಾನೆ ಒಡೆಯುವಾಗ ಅವಸರದಲಿ ಒಂದು ರೊಟ್ಟಿಚೂರನ್ನು ಅರ್ಧ ತಿಂದು ಬಿಟ್ಟುಹೋದನು. ಗುಪ್ತ ಪೋಲೀಸರು ಆ ರೊಟ್ಟಿತುಂಡಿನಲ್ಲುಳಿದಿದ್ದ ಹಲ್ಲುಗಳ ಗುರುತಿನಿಂದ ಕಳ್ಳನನ್ನು ಪತೆಮಾಡಿದರು. ಕಳ್ಳರಿಗೆ ಹಲ್ಲು ಇದ್ದೂ ಕಷ್ಟ.

ಅಜಗಜಾಂತರ ವ್ಯತ್ಯಾಸ

ಸನ್‌ಫಿಶ್ ಎಂಬ ಮೀನುಗಳು ಜಪಾನಿನ ಸಮುದ್ರ ತೀರಾವಳಿಯಲ್ಲಿ ತುಂಬಾ ಸಿಗುತ್ತಿವೆ. ಇವುಗಳ ಹತ್ತು ಹನ್ನೆರಡು ಅಡಿಗಳಷ್ಟು ಉದ್ದ ಎರಡು ಟನ್ನುಗಳಷ್ಟು ಭಾರವಿರುತ್ತವೆ. ಆದರೆ ಇವುಗಳ ಮರಿಗಳು ಹುಟ್ಟಿದಾಗ ಸೂಜಿ ಮೊನೆಯಷ್ಟು ಇರುತ್ತವೆಯಂತೆ.

ಸಿರಿ ಬಡವ್ಯಾಗಿಗೆ ನಿಧಿ ಸಿಕ್ಕಿತು

ಆಸ್ಟ್ರೇಲಿಯಾ ಕ್ವೀನ್ಸ್‌ಲ್ಯಾಂಡಿನ ಒಬ್ಬ ಬಡ ರೈತನು ಒಂದು ದಿನ ಕೆಲಸಕ್ಕಾಗಿ ಪತ್ರಿಕೆಯ ಜಾಹೀರಾತುಗಳನ್ನು ನೋಡುತ್ತಿರುವಾಗ ಅವನಿಗೆ ತನ್ನ ಹೆಸರು ಪತ್ರಿಕೆ ಜಾಹೀರಾತೊಂದರಲ್ಲಿರುವುದ ಕಂಡು ಬಂತು. ನೋಡುವಾಗ ಎಡಿನ್‌ಬರ್ಗ್‌ನಲ್ಲಿದ್ದ ಅವನ ಚಿಕ್ಕ ತಂದೆಯೊಬ್ಬನು ಅವನಿಗಾಗಿ 48,927 ಪವನುಗಳನ್ನು ಬಿಟ್ಟಿರುವನಂತೆ. ಅವನ ಕಡೆ ವಕೀಲರು, ಹಕ್ಕುದಾರರಾದವನ ಪತ್ತೆಗಾಗಿ ಆ ಜಾಹೀರಾತನ್ನು ಮಾಡಿದ್ದರು. ಎಂಥಾ ಪುಣ್ಯ ನೋಡಿ.

ಅಂತ್ಯವಿಲ್ಲದ ಸೀನು

ಊಟವಾದ ಮೇಲೆ ಸೀನು ಬರುವುದು ನಮಗೆಲ್ಲರಿಗೆ ಸ್ವಾಭಾವಿಕ. ಆದರೆ ವಾಶಿಂಗ್‌ಟನ್ನಿನ ಮಿಸ್, ಮಾರ್ಗರೆಟ್ ಎಂಬ 18 ವರ್ಷದ ತರುಣಿಯೋರ್ವಳು ಇಂದಿಗೆ 4 ತಿಂಗಳಿಂದಲೂ ಒಂದೇ ಪ್ರಕಾರ ಪ್ರತಿ ಕ್ಷಣಕ್ಕೂ ಸೀನುತ್ತಿರುವಳು–ಡಾಕ್ಟರರು ದಿಗ್ಭ್ರಮೆಗೊಂಡಿರುವರು. ಈ ನೂತನ ಜಾಡ್ಯವು ಇದೇ ಮೊದಲನೇ ಸಾರಿಯೇ ಕಂಡು ಬಂದುದಂತೆ. ಪ್ರಖ್ಯಾತ ವೈದ್ಯಜ್ಞರ ಮೇಳವೊಂದು ರೋಗಿಯನ್ನು ಪರೀಕ್ಷಿಸುತ್ತಿರುವರು. ಯಾವ ಗುಣಕಾರಿಯೂ ಕಾಣದಾಗಿದೆ.

ಬಹು ಪುರಾತನ ವಿದ್ಯಾಪೀಠ

ಯೂರೋಪಿನ ಬಹು ಪುರಾತನದ ವಿಶ್ವವಿದ್ಯಾಲಯವು ಸ್ಪೇಯಿನಿನ ಕರ್ಡೊವಾ ಎಂಬಲ್ಲಿದೆ. ಯೂರೋಪು ಅಜ್ಞಾನಾಂಧಕಾರದಲ್ಲಿದ್ದಾಗ ಕರ್ಡೋವಾ ನಗರವು ಸಕಲ ವಿದ್ಯೆಗಳ ಮಾತೃಸ್ಥಾನವಾಗಿತ್ತಂತೆ.

ವಿಚಿತ್ರಗಳು

ಪ್ರಪಂಚದಲ್ಲಿ ನುಸಿಗಳನ್ನು ಯಾರೂ ಕೊಲ್ಲದೆ ಒಂದು ವರ್ಷದ ತನಕ ಬಿಟ್ಟರೆ, ಅವುಗಳ ಭಾರವು ಭೂಭಾರಗಿಂತಲೂ, ಮಿಗಬಹುದಂತೆ.

ಒಂದು ಕಾಗೆಯು ಒಂದು ದಿವಸಕ್ಕೆ ತಿನ್ನುವಂತೆ ಅದೇ ಲೆಕ್ಕದಲ್ಲಿ ಮನುಷ್ಯನು ತಿಂದರೆ ಅವನಿಗೆ ಎಂಟು ಕುರಿಗಳಷ್ಟು ಮಾಂಸ ಬೇಕಾಗುವುದಂತೆ.

ಇರುವೆಯು ತನ್ನ ನೂರು ಪಾಲಷ್ಟು ಭಾರವನ್ನು ಹೊರಬಲ್ಲುದು. ಆ ಲೆಕ್ಕದಲ್ಲಿ ಒಬ್ಬ ಮನುಷ್ಯನಿಂದ 500 ಮಣಗಳಷ್ಟು ಎತ್ತಲಿಕ್ಕೆ ಬರಬೇಕು.

ಇಂಗ್ಲಂಡಿನ ಟ್ರಫಾಲ್ಗರ್ ಸ್ಕ್ವಾಯರ್ ಎಂಬುದು ತುಂಬಾ ಗಲಾಟೆಯ ಸ್ಥಳ. ಅಲ್ಲಿ ಆಗುವ ವಾಹನಗಳ ಶಬ್ದವು, ಮಾರ್ಗಗಳು ಅಗಲವಾಗಿರುವುದರಿಂದ ತಿಳಿಯುವುದಿಲ್ಲ. ಆ ಶಬ್ದವು ಸಮೀಪದ ಮಾರ್ಗಗಳಲ್ಲಿ ಆಗುತ್ತಿದ್ದರೆ, ಸುತ್ತುಮುತ್ತಲಿನ ಎಲ್ಲ ಕಟ್ಟಡಗಳು ನೆಲಸಮವಾಗಬಲ್ಲುವಂತೆ. ಅಂಥಾ ಶಬ್ದಶಕ್ತಿ.

ಮನುಷ್ಯನ ಕಣ್ಣುಗಳು ಸೃಷ್ಟಿಯಲ್ಲಿ ಶ್ರೇಷ್ಠ ಸಂಪೂರ್ಣತೆಯುಳ್ಳವುಗಳು. ನಮ್ಮ ಕಣ್ಣಿನೊಳಗಿನ ಭೂತಕನ್ನಡಿಯಂತೆ ಯಂತ್ರತಯಾರಿಕೆಯು ಲೆನ್ಸ ಎಂಬ ಯಾವ ಕನ್ನಡಿಗಳೂ ಅಷ್ಟು ಉತ್ತಮವಾಗಿರಲಾರದಂತೆ.

ನಾವು ವಾಸಿಸುವ ಭೂಮಿಯ ಇಪ್ಪತ್ತು ಸಾವಿರ ಮಿಲಿಯ ವರುಷಗಳಷ್ಟು ಪುರಾತನವಂತೆ.

ಒಂದು ಕಾಲದಲಿ ಭೂಮಿಯ ಸೂರ್ಯನಂತೆ ಉರಿಯುತ್ತಿದ್ದು ಎಷ್ಟೋ ಸಣ್ಣ ಸಣ್ಣ ನಕ್ಷತ್ರ ಕಿರಣಗಳನ್ನು ಬೆಳಗಿಸುತ್ತಿದ್ದ ಕ್ರಮೇಣ ಭೂಮಿಯು ತಣ್ಣಗಾಗುತ್ತ ಬಂದು ಮಿಲಿಯ ವರುಷಗಳಿಂದ ಜನರ ಹಿತ ನೆಲೆಗೊಂಡ ಪ್ರದೇಶವಾಗಿದೆ ಎಂದು ಭೂಗೋಳಜ್ಞರ ಅಭಿಪ್ರಾಯ ಪಡುತ್ತಾರೆ.

ಪ್ರಪಂಚದಲಿ ಅತಿ ಆಳವಾದ ... ಕಪ್ಪು ... ಯಾದ ಶಕ್ತಿಯಿಂದ ... ಅಲ್ಲಿ ... ಳಲ್ಲಿ ಅದು 6 ಮೈಲಿಗಳಷ್ಟು ಆಳವಿರುವುದು. ಕೆಲವು ಸ್ಥಳಗಳಲ್ಲಿ ಕೆಲವು ಮೈಲಿಗಳ ವಿಸ್ತೀರ್ಣಕ್ಕೆ ... ಇದೆಯಂತೆ.

ಬಂಗಾರಕ್ಕೆ ತಲೆ ಬಾಗುವಂತೆ ... ರೆಡಿಯಂ ... ದಾತು. ಇದರ ಮೌಲ್ಯ ರೂಪಾಯಿ ತೂಕಕ್ಕೆ 30,000 ಸಾವಿರ ಪವನಗಳು. ಭೂಮಿಯಿಂದ ಒಪಳ ... ತೆಗೆಯಬೇಕಾಗುವುದು. ಕಬ್ಬಿಣವನ್ನು ... ರಿಗೆ ಇರಿಸಿದರೆ ಕರಗಿ ಸೀಸವಾಗುತ್ತದೆ ... ರೆಡಿಯಮಿನ ಪ್ರಕಾಶದಿಂದ ಅನೇಕ ರೋಗಗಳು ಗುಣವಾಗಿವೆ.

ಐಯರ್ಲೆಂಡಿನಲಿ ಹನ್ನೊಂದು ಅಡಿ ಎತ್ತರದ ಅಸ್ಥಿಪಂಜರವು ಸಿಕ್ಕಿರುತ್ತದೆ. ಅನೇಕ ಸಾವಿರ ವರ್ಷಗಳ ಹಿಂದಿನದೆಂದು ಶಾಸ್ತ್ರಜ್ಞರ ಅಭಿಪ್ರಾಯ ಪಡುತ್ತಾರೆ.

ಒಂದು ಕಾಲದಲ್ಲಿ ಮನುಷ್ಯನ ಆಕೃತಿಯನ್ನು ಹೋಲುವ ಮೀನುಗಳು ಸಾಗರಗಳಲ್ಲಿ ಮುತ್ತಿದ್ದುವಂತೆ. ಕ್ರಮೇಣ ಅವುಗಳು ಕಪ್ಪೆಗಳಾಗಿ ಮಂಗರೂಪದಿಂದ ಮನುಷ್ಯರಾಗಿರುವರೆಂದು ಒಬ್ಬ ರಶ್ಯನ್ ವಿಜ್ಞಾನಿಯ ಅಭಿಪ್ರಾಯ.

ಜಲಪ್ರಾಣಿಗಳೇ ನೆಲ ಪ್ರಾಣಿಗಳಾಗಿ ಮಾರ್ಪಡುವುದರಿಂದ, ನೀರಿನೊಳಗಿರುವ ಪ್ರತಿ ಒಂದು ತರದ ಪ್ರಾಣಿಗಳೂ ನೆಲದ ಮೇಲೂ ಇವೆಯಂತೆ.

ಹಿಂದೂದೇಶದಿಂದ ಹಡಗು ಪ್ರಯಾಣ ಮಾಡಿ ವಿಲಾಯತಿಗೆ ಹೋಗುವವರು ಸುವೇಜ್ ಕಾಲುವೆಯ ಬಳಿ ಹಾರುವ ಮೀನುಗಳನ್ನು ಕಾಣಬಹುದು. ಇತ್ತೀಚೆಗೆ ಇವುಗಳಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಗಳಾಗಿವೆ.

ಜಾತಿ!—ಜಾತಿ!—ಜಾತಿ!

ಅಂಬಲಾ ಕ್ಷೇತ್ರದಿಂದ ಕಾಂಗ್ರೆಸ್ ಹುರಿಯಾಳಾಗಿ ಚುನಾಯಿಸಲ್ಪಟ್ಟ ಶ್ರೀ। ದೇಶಬಂಧು ಗುಪ್ತ ಎಂಬವರಿಗೆ ವಿರೋಧವಾಗಿ ಶ್ರೀ। ಲೀಲಾವತಿ ಜೈನ್ ಎಂಬ ಮಹಿಳೆಯು ನಿಂತಿದ್ದರು. ಶ್ರೀ। ಗುಪ್ತರಿಗೆ ತಮ್ಮ ಚುನಾವಣೆಯ ವಿಚಾರ ದೃಢವಾದ ನಂಬಿಕೆ ಇತ್ತು. ಅದನ್ನು ತಿಳಿದ ಅವರ ಮಹಿಳಾ ಎದುರುವಾದಿಗಳು ಪಂಡಿತ ಜವಾಹರಲಾಲರಿಗೆ ಅನೇಕ ಪತ್ರಗಳನ್ನು ಬರೆದು ಕಾಂಗ್ರೆಸ್ಸಿನ ಧೋರಣೆಯನ್ನು ಟೀಕಿಸಿದ್ದರು. ಕೊನೆಗೆ ಎಲ್ಲವೂ ಅರಣ್ಯರೋದನವಾಗಿ ಪಾರ್ಟಿ ಮೇಲೆ ಕಾಂಗ್ರೆಸ್ಸಿನಿಂದ ಜೈನರಿಗೆ ಅನ್ಯಾಯವುಂಟು ಎಂದು ಸಾರತೊಡಗಿದರು. ಜವಾಹರಲಾಲ್ ನೆಹರು ಅವರು ಲೀಲಾವತಿಯವರಿಗೆ ಪತ್ರ ಬರೆಯುತ್ತಾ ಚುನಾವಣೆ ವ್ಯಾಪಾರದಲ್ಲಿ ನೀವು ಜಾತಿನ ತದ ಪ್ರಶ್ನೆ ತರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನೀವು ಜೈನರ ಕಡೆಯಿಂದ ಉಮೇದುವಾರರಾಗಿ ನಿಂತಿರುವರೆ ... ಇಷ್ಟರ ವರೆಗೆ ತಿಳಿಯಲಿಲ್ಲ. ಕಾಂಗ್ರೆಸ್ ಉಮೇದುವಾರರ ಆರಿಕೆಯು ಜಾತಿಯ ತಗಳ ಕಡೆಗೆ ನೋಡಿ ಮಾಡಲಿಲ್ಲ. ನೀವು ನಮ್ಮ ಜಾತಿಯ ಪ್ರಶ್ನೆಯನ್ನು ... ತಂದರೆ ನಮ್ಮ ಜಾತಿಗೇನೆ ದ್ರೋಹ ಮಾಡಿದಂತಾಗುವುದು ಎಂದು ಬರೆದಿರುವರು. ಪ್ರತ್ಯೇಕಜಾತಿಯ ಕಡೆಯಿಂದ ... ವರೆನ್ನುವ ಜಸ್ಟಿಸ್ ಹುರಿಯಾಳುಗಳು ಸ್ವಲ್ಪ ಕಣ್ಣು ಬಿಡಲಿ.

ಕಾಂಗ್ರೆಸ್ ಧ್ಯೇಯ

... ಮೌಲಾನಾ ಆಜಾದರು ... ಭವನದಲ್ಲಿ ಮಾಡಿದ ಭಾಷಣದಲಿ ಕಾಂಗ್ರೆಸಿನ ... ನ್ನು ಪ್ರಸ್ತಾಪಿಸಿದ ... ಇದುವರೆಗೆ ಅನುಮೋದಿಸಿದ ... ಉದಲಾವಣೆಗಳು, ಭಾರತ ಸ್ವತಂತ್ರ ಸರಕಾರದ ಮುಖ್ಯಾಂಶಗಳಾಗಿವೆ. ಇನ್ನು ... ಸ್ವಾತಂತ್ರ್ಯದಿಂದ ಒದ್ದು ... ಕಾಂಗ್ರೆಸ ... ಸಮಿತಿಯಲ್ಲಿ ದೈಶಿಕ ... ಅಭಿವೃದ್ಧಿಯನ್ನು ಮಾಡಿಕೊಳ್ಳುವುದಕ್ಕೆ ಸಂಪೂರ್ಣ ಪಕ್ಕಿರುವುದು ಎಂದರು.

ಜಮೀನ್ದಾರರಿಗೆ ಜುಲ್ಮಾನ

... ಜಮೀನುದಾರರ ... ಹೆಚ್ಚು ... ತ್ಯಾರದಿಂದ ... ಸತ್ತುಹೋದನು ... ಇರುವವಳು ಅವನ ಹೆಂಡತಿ ... ಅಧಿಕಾರವಿಲ್ಲವೆಂದು ಜಮೀನ್ದಾರ ... ಹೆಂಗಸು ದಾವೆ ಮಾಡಿದ್ದಲ್ಲಿ ... ಗೇಣಿಚೀಟಿಯಲ್ಲಿ ಅವಳ ಹೆಸರು ... ಗಾರನ ಹಕ್ಕನ್ನು ಇದೆಯೆಂದು ವಾದಿಸಿ, ಜಮೀನ್ದಾರರ ಬಲಾತ್ಕಾರಕ್ಕೆ ... 20 ರೂ ಜುಲ್ಮಾನೆ ವಿಧಿಸಿದರು. ಸಾಹುಕಾರ ಜಮೀನ್ದಾರರ ... ಇನ್ನು ಮುಂದೆ.

ಪ್ರಣಯಿಯ ಬಂಧನ

ಸಿಂಗಾಪುರದಲ್ಲಿ ಓಮ್‌ಟೀಚ್ ಎಂಬವನು ತನ್ನ ನೆರೆಯ ಓರ್ವ ತರುಣಿಯಲ್ಲಿ ಮೋಹಿತನಾಗಿ, ಅವಳು ಒಪ್ಪದಿರಲು,–ಒಂದು ದಿನ ಬಲತ್ಕಾರದಿಂದ ಅವಳನ್ನು ಬಂಧಿಸಿ ತನ್ನ ಅಂಗಡಿಯ ಗುಪ್ತ ಕೋಣೆಯಲ್ಲಿ 4 ವರುಷಗಳ ತನಕ ಇಟ್ಟುಕೊಂಡಿದ್ದನಂತೆ. ಅವನಲ್ಲಿ ವ್ಯಾಪಾರಕ್ಕೆ ಬಂದವರು, ತರುಣಿಯ ಕೂಗನ್ನು ಕೇಳಿ ಪೋಲೀಸಿನವರಿಗೆ ದೂರು ಕೊಡಲು ಟೀಮನನ್ನು ಈಗ ಹಿಡಿದು, ಒಂದುವರೆ ವರುಷದ ಬಂಧನಕ್ಕೆ ಕಳುಹಿಸಿರುವರು.

ಸ್ತ್ರೀಯರ ಸೌಖ್ಯಕ್ಕೆ 'ಲೋಧ್ರ'ಕ್ಕಿಂತಲೂ ಉತ್ತಮವಾದ ಮತ್ತು ಶಕ್ತಿಯುತವಾದ ಔಷಧಿಯು ಬೇರೊಂದಿಲ್ಲ. ಇದು ಮುಟ್ಟಿನ ಕಾಲಕ್ರಮವನ್ನೂ, ಮುಟ್ಟು ಸ್ರಾವವನ್ನೂ ಸರಿಪಡಿಸಿ, ಹದಮೀರಿ ಹರಿಯುವ ಮುಟ್ಟು ಸ್ರಾವವನ್ನೂ ತಡೆಕಟ್ಟುತ್ತದೆ. ಋತುಕಾಲದಲ್ಲಾಗುವ ಎಲ್ಲಾ ವಿಧದ ನೋವನ್ನೂ, ಹೊಟ್ಟೆ ನೋವು, ಬೆನ್ನುನೋವುಗಳನ್ನೂ ಗುಣಪಡಿಸುತ್ತದೆ. ಇದಲ್ಲದೆ ಆರೋಗ್ಯವನ್ನೂ ಶಕ್ತಿಯನ್ನೂ ಸದಾ ಕಾಲವೂ ಸರಿಯಾಗಿ ಇರಿಸುವುದಕ್ಕೆ ಇದು ಉತ್ತಮ ಟಾನಿಕ್ ಕೂಡಾ ಆಗಿರುತ್ತದೆ

'ಲೋಧ್ರ'

ಗರ್ಭಾಶಯ ರೋಗ ನಿವಾರಿಣಿ. ಪ್ರತಿಯೊರ್ವ ಸ್ತ್ರೀಗೂ ಬೇಕಾಗಿರುವುದು.

ಕೇಸರಿ ಕುಟೀರಮ್,

ಎಗ್ಮೋರ್ :: ಮದ್ರಾಸು.

ಆನೆಗಾತ್ರ ಮಹಿಳೆ.

ಪ್ರಪಂಚದ ಅತಿ ಗಾತ್ರ ಮಹಿಳೆಯಾದ ಹಿಲ್ಡಾ ವಿಲ್ಸನ್ ಎಂಬ ಜರ್ಮನಳು ಈಗ ಸತ್ತು ಹೋಗಿರುವಳು. ಅವಳಿಗೆ ಸಾಧಾರಣ ಕೈಲು ನೋಟಾರು ಬಂಡಿಗಳನ್ನು ಹತ್ತಲಿಕ್ಕಾಗುತ್ತಿರಲಿಲ್ಲವಂತೆ. ಇವಳ ಭಾರವು ೨೦ ಮಣವಾಗಿತ್ತಂತೆ.

ರಾಜಕುವರಿಯ ರಕ್ಷಣೆಗಾಗಿ

ವಿಹಾರಾರ್ಥಕ್ಕಾಗಿ ಅಮೇರಿಕಕ್ಕೆ ಹೋಗಿದ್ದ ಇಂದೋರಿನ ಮಹಾರಾಜರಿಗೂ ಈಗ ಕಷ್ಟಕ್ಕೆ ಬಂದಿದೆ. ದರೋಡೆಗಾರರು ಅವರ ಮೂರು ವರ್ಷದ ಮಗುವನ್ನು ಅಪಹರಿಸುವುದಾಗಿ ಪತ್ರ ಕಳುಹಿಸಿರುವರು. ಅಧಿಕಾರಿಗಳು ಅವರ ಮನೆಯನ್ನು ವಿದ್ಯುದ್ದೀಪಗಳಿಂದ ಪ್ರಕಾಶಗೊಳಿಸುತ್ತಿರುವರು, ಕಳ್ಳರ ಸುಳಿವು ಕಾಣುವ ಹಾಗೆ. ವಿಹಾರಕ್ಕೆ ಹೋಗಿ ಅಪಹಾರಕ್ಕೆ ಗುರಿಯಾದ ಮಹಾರಾಜರ ಗೋಳು ಹೇಳತೀರದು.

CHEAPEST RATES
VALUE BACK IF DISAPPROVED
DECENT, STRONG, ACCURATE & STYLISH WRISTWATCHES GTD 3 YEARS. ROUND NICKEL 3/14/-, RADIUM DIAL 3/13/-; GOLDEN 0/14/-, SQUARE NICKEL 4/8/-, GOLDEN 4/14/-, RECTANGULAR NICKEL 5/4/-, GOLDEN 6/-. VERY SMALL ROUND NICKEL 6/-, GOLDEN 6/8/-. POSTAGE -/7/-.
ALL FREE ON S. G.T Co. 158 MANICKTOLA ST, CALCUTTA

BEHAR CHEMICAL WORKS, BHAGALPUR.

ಬಿ. ಸಿ. ರಸಾಯನಿಕ ವೈದ್ಯಶಾಲೆಯ ಚ್ಯವನ ಪ್ರಾಸ ಲೇಹ್ಯ.

ಮಾನವ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ, ಮೆದುಳನ್ನು ಬೆಳೆಸುವ ಶಾಸ್ತ್ರೀಯ ಸಾಧನ.

ಸೀತ ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಕಾರದ ಮೇಲೆ ಈ ದಿವ್ಯೌಷಧಿಯು ವಿಶೇಷವಾಗಿ ಅವಶ ಮೆಹಿಗಳು [illegible] ಗುಣವನ್ನು ಉಚ್ಚ ಕೀರ್ತನ ಮಹರ್ಷಿಗಳು ವುದರಿಂದಲೂ ನಮ್ಮಲ್ಲಿಯ ಆದಿ ರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ಉಪಯೋಗಿಸ ವುದರಿಂದಲೂ ಇದರಲ್ಲಿ ಸೇರಿಸಿದ ಸ್ನಾಯುಗಳನ್ನು ಬಲಪಡಿಸುವ ಅತ್ಯುತ್ತಮವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ದಾಕ್ಟರು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ, ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ, ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇಬೇಕು,

1 ತಿಂಗಳ ಉಪಯೋಗದ ಸೀಸೆ 1ಕ್ಕೆ ರೂ. 1 8-0

ಏಜೆಂಟರು:— ಶಾ. ಕಂಪೆನಿ,

ಗವರ್ನಮೆಂಟ್ ಕಾಲೇಜ್ ಎದುರು

ಮಂಗಳೂರು.

TEST YOUR EYES

By the Electro Ophthalmoscope





All Varities of Frames & Lenses.

AT

The Mangalore Trading Association Ltd.

Sight Testing Ophthalmic Opticians,

Car Street, MANGALORE.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗಿದೆ.

ನಮ್ಮ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿ, ವ್ಯವಹಾರಕುಶಲರಾದ ಯೋಗ್ಯ ಏಜಂಟರು ಬೇಕು!

ಇವರಿಗೆ ಪ್ರತಿ ತಿಂಗಳಿಗೆ 80 ರೂಪಾಯಿಗಳ ವೇತನವು ದೊರೆಯುವುದು.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

1937ನೇ ವರ್ಷದ ಭವಿಷ್ಯ

ಬಂಗಾಳ ಸರಕಾರದ ಜೋತಿಷ್ಯರಾದ ರಾವ್ ಸಾಹೇಬ್ ಪಂಡಿತ್ ಶೈಲೇಶ್‌ಚಂದ್ರ ಜ್ಯೋತಿಶ್ಯಾರ್ಣರವರು ೧೯೩೭ರ ಭವಿಷ್ಯವನ್ನು ಜೋತಿಷ್ಯ ಶಾಸ್ತ್ರದ ಲೆಕ್ಕ ಪ್ರಕಾರ ಗುಣಿಸಿ ಪ್ರಕಟಿಸಿರುವರು ಈ ಕೆಳಗೆ ಅವರ ಸಂಕ್ಷಿಪ್ತ ಪ್ರಕಟನೆಯನ್ನು ಕೊಡಲಾಗಿದೆ

೧೯೩೭ನೇ ವರ್ಷವು ಬಹಳ ಭಯಂಕರ ಘಟನಾವಳಿಗಳಿಂದ ಕೂಡಿ ಅಂಕ್ಕವಾಗುತ್ತದೆ. ನನ್ನ ಶಾಸ್ತ್ರದ ಪ್ರಕಾರ ೧೯೩೭ನೇ ವರ್ಷದ ಸಾಧಾರಣ ಘಟನೆಗಳು ಹೀಗಿವೆ.—

೧ ಮಾನವ ಕೋಟಿಯ ಆರೋಗ್ಯಕ್ಕೆ ಕುಂದುಂಟಾಗುತ್ತದೆ

೨ ಮಾನಸಿಕ ಸಂಕಷ್ಟಗಳು ಹೆಚ್ಚುತ್ತವೆ.

೩ ಪ್ರಭುತ್ವದರಾಷ್ಟ್ರಗಳ ಬಲವು ಕುಂದುವುದು

೪. ಬೆಳೆಗಳಿಗೆ ಹಾನಿ ಇದೆ

೫ ಮನುಷ್ಯರ ಪ್ರಾಣನಷ್ಟ

೬ ರಾಜಕೀಯ ಅವ್ಯವಸ್ಥೆ

೭ ಪ್ರಕೃತಿಯ ನ್ಯೂನತೆಯಿಂದ ಹಾನಿ ಬರುವುದಲ್ಲದೆ ಭಯಂಕರ ಗಾಳಿಮಳೆಗಳಿಂದ ಬೆಳೆಗಳಿಗೆ ತುಂಬಾ ನಷ್ಟವಿದೆ ಇದಾದ ನಂತರ ಪ್ರಪಂಚದಲ್ಲಿ ಅಂಟುರೋಗದ ಹರಡು ವಿಕೆಯುಂಟಾಗುತ್ತದೆ ಇದು ಸ್ಪೈನ್, ಅಬಿಸೀನಿಯಾ, ನ್ಯೂಜಿಲೆಂಡ್, ದ ಅಮೇರಿಕಾ, ಪೂರ್ವ ಆಫ್ರಿಕಾ, ತುರ್ಕಿ, ಚೀನಾ, ಜಪಾನ್, ಹಿಂದೂಸ್ಥಾನ, ಸಿಲೋನ್ ಮತ್ತು ಬರ್ಮಾಗಳಲ್ಲಿ ಬಹಳ ಜಾಸ್ತಿಯಾಗುತ್ತದೆ ಈ ರೋಗದಿಂದ ಪ್ರಪಂಚದ ಪ್ರಾಣಹಾನಿಯಾಗಲಿದೆ

ಐರೋಪ್ಯ ಜನಾಂಗಿಕರಲ್ಲಿರುವ ಈಗಿನ ಮನಸ್ತಾಪಗಳು ಇನ್ನೂ ಹೆಚ್ಚುತ್ತವೆ. ಜನತೆಯೊಳಗಿನ ಅತೃಪ್ತಿ ಅಶಾಂತಿಗಳು ಇವ್ಮ್ರದ್ಧಿಯಾಗುತ್ತವೆ ಕೆಟ್ಟ ನಕ್ಷತ್ರಗಳ ದರ್ಶನಕ್ಕೆ ಯುರೋಪು ಸಿಲುಕುವುದರಿಂದ ಅಲ್ಲಿ ಪರಸ್ಪರ ದ್ರೋಹಾತ್ಮಕ ಕಾರ್ಯಗಳು ಜರುಗುವುವು. ಅಮೇರಿಕಾ ಹಿಂದೂಸ್ಥಾನಗಳಲ್ಲಿ ನವೀನ ಸಾಮಾಜಿಕ ಸುಧಾರಣೆಗಳಾಗುವುವು. ಇವುಗಳಿಂದ ಜನರಿಗೆ ಸ್ವಲ್ಪ ಸುಖವುಂಟಾಗಬಹುದು

ಭಾರತ ವಿಚಾರಗಳು

ಭಾರತೀಯ ಮುಖಂಡರ ಜಾತಿಮತ ಐಕ್ಯತೆಯ ಪ್ರಯತ್ನಗಳು ಹೆಚ್ಚು(ಅಂದರೆ ಸ್ವಲ್ಪ ಆದರೂ ಆಗುತ್ತದೆ) ಯಶಸ್ವಿಯಾಗುವುದಿಲ್ಲ. ಭಾರತದ ರಾಜಕೀಯ ವಾತಾವರಣವು ಇನ್ನೂ ಭೀಕರವಾಗಿ ಪರಿಣಮಿಸಿ, ನೂತನ ರಾಜ್ಯಾಂಗ ಸುಧಾರಣೆಯಿಂದ ಯಾವ ಬದಲಾವಣೆಗಳೂ ಆಗುವುದಿಲ್ಲ

ಆಸ್ತಿಕ ಸಂಸ್ಥಾನಾಧೀಶರಿಗೆ ಈ ಹೊಸ ವರುಷದಲ್ಲಿ ತುಂಬಾ ಶುಭಚಿಹ್ನೆಗಳಿವೆ ಫೆಡರೇಶನನ್ನು ಅವರು ಹೆಚ್ಚಾಗಿ ಸಮ್ಮತಿಸುತ್ತಾರೆ, ಮತ್ತು ತಮ್ಮ ಪ್ರಜೆಗಳ ಅಭಿವೃದ್ಧಿಗಾಗಿ ತುಂಬಾ ಪ್ರಯತ್ನಿಸುವವರಾಗುತ್ತಾರೆ

ಇಂಡಿಯಾ ಸರಕಾರವು ಕೃಷಿ ಕೈಗಾರಿಕೆಯ ಅಭಿವೃದ್ಧಿಗೆ ತುಂಬಾ ಪ್ರಯತ್ನಪಡುವುದು ಅಲ್ಲದೆ, ಗ್ರಾಮೋದ್ಧಾರ, ಮಹಿಳಾ ಶಿಕ್ಷಣದ ಕಡೆಗೂ ಪ್ರಯತ್ನಗಳು ಭರದಿಂದಾಗುವುವು ಇಂಡಿಯಾ ಸರಕಾರಕ್ಕೆ ಈ ವರ್ಷದಲ್ಲಿ ತುಂಬಾ ಯಶಸ್ಸಿದೆ ಪೋಲೀಸ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಡಲ್ಪಡುವುದರಿಂದ, ಆಡಳಿತೆಯು ಸುಕ್ರಮ ಹೊಂದಿ, ದೇಶದೊಳಗಿನ ಅಶಾಂತಿಯು ಕೊನೆಗಾಣುವುದು. ನಮ್ಮ ದೇಶದಲ್ಲಿ ಯಂತ್ರಸಾಧನಗಳು ಹೆಚ್ಚಾಗುವುವು

ಯುರೋಪಿನಲ್ಲಿ ನಡೆಯುವ ಸಾಮ್ರಾಜ್ಯ ಯುದ್ಧವು ಬ್ರಿಟನನ್ನು ಬಾಧಿಸಲಾರದು ಆದರೆ ಪ್ರಾನ್ಸಿಗೆ ಅದರಿಂದ ಸ್ವಲ್ಪ ತೊಂದರೆಯಾಗಬಹುದು

ರಾಜಕುಟುಂಬದ ಭವಿಷ್ಯ

ಈ ವರ್ಷವು ಷಷ್ಠಮ ಜಾರ್ಜರಿಗೆ ಶಾಂತಿದಾಯಕವಾಗುತ್ತದೆ. ರಾಜಕುಟುಂಬವು ಸಂತೋಷದಿಂದ ದಿನಗಳನ್ನು ಕಳೆಯುತ್ತದೆ ಅಲ್ಲದೆ ಅನೇಕ ಹರ್ಷ ಸಮಾರಂಭಗಳು ಅಲ್ಲಿ ಜರುಗಲಿವೆ.

ಸಾರ್ವಭೌಮರು ಭಾರತೀಯರ ವಿಚಾರ ಬಹು ಸಹಾನುಭೂತಿಯುಳ್ಳವರಾಗುವರು ಅಲ್ಲದೆ ಅವರ ಆರೋಗ್ಯವು ಸುಖದಾಯಕವಾಗಿರುವುದು ರಾಜಮಾತೆ ಮೇರಿ ರಾಣಿಯವರು ದೇವರ ದಯೆಯಿಂದ ಸುಖವಾಗಿರುವರು

ಪ್ರಖ್ಯಾತ ಪುರುಷರು ಹಿಂದೂಸ್ಥಾನಕ್ಕೆ ಬರುವರು ಆಂಗ್ಲ ರಾಜಕುಟುಂಬದ ಸದಸ್ಯರಲ್ಲಿ ಕೆಲವರು ಇಲ್ಲಿಗೆ ಬರಲಿರುವರು

ಈಗಿನ ಭವಿಷ್ಯವು ಮಾಜಿ ಅಷ್ಟಮ ಎಡ್ವರ್ಡರಿಗೆ ಅಷ್ಟೇನು ಹಿತವಾಗಿರಲಾರದು ಅವರ ಮದುವೆ ವಿಚಾರದಲ್ಲಿ ತುಂಬ ತೊಡಕುಗಳು ಬರುತ್ತವೆ

ಪ್ರಖ್ಯಾತ ಮೂರು ಭಾರತ ಮುಖಂಡರು ಅಸೌಖ್ಯದಿಂದ ಕಠಿಣವಾಗಿ ನರಳುವರು (ಇವರಲ್ಲಿ ಇಬ್ಬರು ಬಂಗಾಳದವರ) ಒಬ್ಬರ ಸತ್ತು ಹೋಗುವರು

ಹಿಟ್ಲರ ಮತ್ತು ಮುಸೊಲಿನಿಗಳು

ಹಿಟ್ಲರನಿಗೆ ತುಂಬಾ ವಿಷಯಗಳಲ್ಲಿ ಅನೇಕ ತೊಂದರೆಗಳ ಒದಗುವುದರಿಂದ ಈ ವರ್ಷವು ಅವನಿಗೆ ಒಳ್ಳೆಯದಾಗುವುದಿಲ್ಲ ಮುಸೊಲಿನಿಗೆ ಕಠಿಣ ಕಾಯಿಲೆಯಾಗುವುದು, ರಾಷ್ಟ್ರಪಾರಿಯು ಅವನ ದೇಶಕ್ಕಾಗಿ ಇನ್ನೊಂದು ಸಲ ಪ್ರಯತ್ನಿಸಬಹುದು. ಅದ್ದರಿ ಅವನನ್ನು ಹತಾಶರಾಗಿ ಮಾಡುವರ

ಯುರೋಪಿನಲ್ಲಿ ಇನ್ನೊಂದ ಪಟ್ಟ ಪರಿತ್ಯಾಗವಾಗಲಿಕ್ಕಿದೆ

ಇಂಗ್ಲೆಂಡಿನ ವ್ಯಾಪಾರ, ಉದ್ಯಮಗಳು ಸಮೃದ್ಧಿಯಾಗುವುವು ಅಲ್ಲಿ ನೌಕಾ ಬಲವನ್ನು ಹೆಚ್ಚಿಸಲಾಗುವುದ

ಹಿಂದೂಸ್ಥಾನದಲ್ಲಿ ಜನನ ಸಂಖ್ಯೆ ಮರಣಸಂಖ್ಯೆಯನ್ನು ಮೀರುವುದು

ವಿಷಗಾಳಿಯ ಮುಖ ಮುಚ್ಚಳಗಳು

ಇಂಗ್ಲೆಂಡಿನಲ್ಲಿ ವಿಷಗಾಳಿ ರಕ್ಷಣೆಗಾಗಿ ಮುಖ ಮುಚ್ಚಳಗಳ ತಯಾರಿಕೆಗಾಗಿ ಒಂದು ಕಾರ್ಖಾನೆಯನ್ನು ತೆರೆದಿರುವರು ಅದರಲ್ಲಿ ಒಂದು ವಾರಕ್ಕೆ 8,000,000 ಅಂಥಾ ಮುಚ್ಚಳಗಳು ತಯಾರಾಗುತ್ತವಂತೆ ಅವುಗಳನ್ನು ಒಂದು ದೊಡ್ಡ ಕಟ್ಟಡದಲ್ಲಿರಿಸಿ, ಯುದ್ಧ ಸಮಯದಲ್ಲಿ ಅವನ್ನು ಪ್ರಜೆಗಳಿಗೆಲ್ಲಾ ತಮ್ಮ ತಮ್ಮ ರಕ್ಷಣೆಗಾಗಿ ಕೊಡುವರಂತೆ ನಮ್ಮ ದೇಶದವರ ಗತಿಯೇನು?

ಹಿಟ್ಲರನಲ್ಲಿ ನೆಪೋಲಿಯನನ ಯೋಚನೆಗಳು

ಜರ್ಮನಿಯು ಈಗ ನಾಲ್ಕು ವರ್ಷದ ಒಂದು ಯೋಜನೆಯನ್ನು ಪ್ರಾರಂಭಿಸಿರುವುದಷ್ಟೆ ಅದರ ವಿಚಾರ ಪ್ರೋತ್ಸಾಹವನ್ನು ಕೊಡುತ್ತ ಹೀಗೆಂದನು – ಅಸಾಧ್ಯವೆಂಬ ಮಾತು ನಾವು ಮಾಡಿರುವ ಯೋಜನೆಯಲ್ಲಿ ಸಾಧ್ಯವಾಗುತ್ತದೆ ಜನರಲ್ ಗೋರಿಂಗರು ಈಗ ಈ ಯೋಜನೆಯ ಅಧಿಕಾರಿಗಳಾಗಿರುತ್ತಾರೆ ಅವರು ಮುಂದಾಳತ್ವ ವಹಿಸಿದ ಕಾರ್ಯಗಳು ಅಸಾಧ್ಯವಾಗುವುದು ಎಂದರೆ ನಂಬಲಾಗುವುದಿಲ್ಲ ಈ ಯೋಜನೆಯ ಅಂತ್ಯದಲ್ಲಿ ಜರ್ಮನಿಯು ತನಗೆ ಬೇಕಾಗುವ ಅವಶ್ಯ ಪದಾರ್ಥಗಳನ್ನು ತಯಾರಿಸಲು ಸಮರ್ಥವಾಗುವುದು ಇಂಥಾ ಮಾತುಗಳೇ ಮುಂಚೆ ನೆಪೋಲಿಯನನ್ನು ಎಂದಿದ್ದನು ಅವನನ್ನು ದೇಶಭ್ರಷ್ಟ ಮಾಡಿ ಓಡಿಸಿದರು ಅವನ ಗತಿಯು ಹಿಟ್ಲರನಿಗೂ ಆದೀತು

ಮಾಜಿ ದೊರೆಗಳ ಕೆಲ ವಿಚಾರಗಳು

ದೇಶ ವಿದೇಶಗಳಿಂದ ಅನೇಕ ದೊಡ್ಡ ಪತ್ರಿಕಾ ಸಂಸ್ಥೆಗಳು ಅಷ್ಟಮ ಎಡ್ವರ್ಡರೊಂದಿಗೆ ಪತ್ರವ್ಯವಹಾರ ನಡಿಸುತ್ತಿರುತ್ತಾರೆ. ಪ್ರಪಂಚದ ರಾಜಕೀಯ ವಿಚಾರಗಳ ಕುರಿತು ಪ್ರತಿ ವಾರ ಅವರೊಂದೊಂದು ಲೇಖನವನ್ನು ಬರೆದರೆ ಅವರಿಗೆ ಲೇಖನ ಒಂದಕ್ಕೆ 2500 ಪವನು ಕೊಡುತ್ತೇವೆಂದು ಪತ್ರಗಳನ್ನು ಬರೆದಿದ್ದಾರೆ. ಅವರು ಅದನ್ನು ಸ್ವೀಕರಿಸಲಿಲ್ಲ.

ಎಡ್ವರ್ಡರು ರಾಜಪಟ್ಟವನ್ನು ಬಿಟ್ಟುಕೊಡುವಾಗ ಮಾಡಿದ ಭಾಷಣವನ್ನು ಗ್ರಾಮಫೋನ್ ರಿಕಾರ್ಡಿನಲ್ಲಿ ತೆಗೆದಿರುವರು ಅದೀಗ ಪ್ರಪಂಚ ಎಲ್ಲಾ ಭಾಗಗಳಲ್ಲೂ ಮೊದಲು ಹಂಚಲಾಗಿದೆ ಅಮೇರಿಕದ 800 ಕಂಪೆನಿಗಳು ರಾತ್ರಿ ಹಗಲು ಕೆಲಸ ಮಾಡುತ್ತಿವೆ 8 ಲಕ್ಷ ರಿಕಾರ್ಡುಗಳು ಒಂದು ದಿನಕ್ಕೆ ಈಗ ಮಾರಿ ಹೋಗುತ್ತವಂತೆ ಈ ರಿಕಾರ್ಡುಗಳ ಬೆಲೆಯು ಬರೆ 6 ರೂಪಾಯಿಗಳಾದರೂ, ಕೆಲವರು ಖರ್ಚಾಗಿ ಹೋಗಬಹುದೆಂಬ ಹೆದರಿಕೆಯಿಂದ 6 ಪವನುಗಳನ್ನು ಕೊಟ್ಟು ಕೊಂಡಿರುವರು

ಇಷ್ಟು ರಿಕಾರ್ಡುಗಳು ಅವೇರಿಕದಲ್ಲಿ ಮಾತ್ರ ಖರ್ಚಾಗುತ್ತವೆ ಅದಕ್ಕೆ ಕಾರಣ ಬೇರೇನಲ್ಲದೆ, ಎಡ್ವರ್ಡರು ಅಮೇರಿಕಾದವಳೊಬ್ಬಳಿಗಾಗಿ ಮಾಡಿದ ಅದ್ಭುತ ತ್ಯಾಗವೇ ಆಗಿರುತ್ತದೆ ಅಲ್ಲಿಯವರು ಅದನ್ನು ಈಗ ತಲೆ ತಲಾಂತರದ ವರೆಗೂ ಇಟ್ಟುಕೊಂಡಿರುವ ನಿರ್ಧಾರ ಮಾಡಿರುತ್ತಾರೆ ಅದೊಂದು ಚರಿತ್ರಾರ್ಹ ದಾಖಲೆಯಾಗಿರುತ್ತದೆ ಅದರಲ್ಲಿ ಮುದ್ರಿತವಾದ ಅಷ್ಟಮ ಎಡ್ವರ್ಡರ ಭಾಷಣವು ಆಂಗ್ಲ ಸಾಹಿತ್ಯದಲ್ಲಿ ಒಂದು ಸ ದರಕೃತಿಯಾಗಿರುವುದಂತೆ ... ಯೋಚನೆಯು ... ಕಲಿಸುವುದಕ್ಕೆ ಅದೇ ರಿಕಾರ್ಡ ಶಾಲೆಗಳಲ್ಲೆಲ್ಲಾ ಈ ರಿಕಾರ್ಡುಗಳನ್ನಿಟ್ಟುಕೊಂಡಿರುತ್ತಾರಂತೆ

ಇಷ್ಟಿರುವಾಗ ಅದರ ಒಂದೆ ಒಂದು ಪ್ರತಿ ... ಇಲ್ಲ ದಿನದಲ್ಲಿ ... ಗಲಿಲ್ಲವಂತೆ ... ದೊರೆಯ ಭಾಷಣ ದಾಖಲೆಯನ್ನು ವ ನಿ ವ ಸಗಳಲ್ಲಿ ... ಆಂಗ್ಲ ... ಸರಿಹೋಗಲಿಲ್ಲ ... ವಂತೆ

ಹೆದರಿಕೆಯ ಗ್ರಂಥ

ಮನುಷ್ಯನಲ್ಲಿ ಹೆದರಿಕೆಯುಂಟಾದಾಗ ದೇಹದೊಳಗಿನ ರಕ್ತವು ರಭಸದಿಂದ ಚಲನ ಹೊಂದಿ ಸ್ನಾಯುಗಳ ... ಸ ಕೋಚಿತವಾಗುತ್ತವೆ ಈ ಸಮಯದಲ್ಲಿ ದೇಹದಿಂದ ಒಂದು ತರದ ವಾಸನೆಯು ಹೊರಡುತ್ತದೆ ಸೂಕ್ಷ್ಮ ವಾಸನೇಂದ್ರಿಯವುಳ್ಳ ಮೃಗಗಳಿಗಿರುವುದರಿಂದ ನಮ್ಮ ದೇಹದೊಳಗಿನ ಆ ವಾಸನೆಯನ್ನು ತಿಳಿದು ನಾವು ಭಯಗೊಂಡಿರುತ್ತೇವೆಂದು ಅವು ನಿರ್ಧರಿಸುತ್ತವೆಯಂತೆ ಆ ವೇಳೆಯೇ ಅವುಗಳು ನಮ್ಮ ಮೈಮೇಲೆ ಬೀಳುತ್ತವೆ ಒಂದು ಸಮಯದಲ್ಲಿ ನಾವು ಹೆದರಿಕೊಳ್ಳದಿದ್ದರೆ ಕ್ರೂರ ಮೃಗಗಳು ಪಲಾಯನಕ್ಕಾರಂಭಿಸುವವಂತೆ ಹುಲಿಯನ್ನು ನೋಡಿ ಭಯಗೊಳ್ಳದವರು ನಮ್ಮಲ್ಲಿ ಎಷ್ಟು ಮಂದಿಗಳಿದ್ದಾರೆ?

ನಕಲಿ ಬಂಗಾರದ ಶೋಧ

ಕೃತಕ ಬಂಗಾರದ ಶೋಧೆಯು ಯಶಸ್ವಿಯಾಗಿದೆಯೆಂಬ ಒಂದು ಸುದ್ದಿಯು ಜಪಾನಿನಲ್ಲಿ ಹುಟ್ಟಿ ಪ್ರಪಂಚದಲ್ಲೆಲ್ಲಾ ಜಾಹೀರಾತಾಗಿದೆ ಬಂಗಾರ ವ್ಯಾಪಾರಿಗಳು ಗಾಬ್ರಿಗೊಂಡಿರಬಹುದು

ಕಂಡುಹಿಡಿದವರು ಜಪಾನಿನ ಸಾರ್ವಭೌಮ ವಿಶ್ವವಿದ್ಯಾಲಯದ ವಿಜ್ಞಾನಿಗಳೊಬ್ಬರು ಬಂಗಾರದಂತಿರುವ ಆ ಲೋಹವು ಬಂಗಾರವಲ್ಲದಿದ್ದರೂ, ಅದರಂತೆ ಅಂದವಾಗಿದ್ದು, ಬಂಗಾರದ ಬೆಲೆಯ ಸಾವಿರದ ಒಂದು ಪಾಲನ್ನು ಅದರ ಬೆಲೆಯು ಆಗಿರುತ್ತದೆಯಂತೆ

ಅಷ್ಟಮ ಎಡ್ವರ್ಡರ ಐಶ್ವರ್ಯ

ಮಾಜಿ ಸಾರ್ವಭೌಮರ ಸಂಪತ್ತೆಷ್ಟೆಂದು ನೀವು ಬಲ್ಲಿರೊ?

ಅವರೇನು ಬಡವರಲ್ಲ. ಅವರು ... ಹೆಚ್ಚಾಗಿ ಐಶ್ವರ್ಯವನ್ನು ಕೇಳಬೇಕಾದುದಿತ್ತು. ದುಂದುಗಾರಿಕೆಯ ಸ್ವಭಾವದವ... ದುದರಿಂದ ಅವರಿಗೆ ಅದು ಸಾಧ್ಯವಾಗಲಿಲ್ಲ ಕೊರ್ನವಾಲಿನ ಜಮೀನುದಾರಿಕೆಯಿಂದ ಅವರ ಚೀಲಕ್ಕೆ 2,000,000 ಪವನು ನಗದಾಗಿ ಸೇರಿದೆ ಈಗ ಆ ಜಮೀನ್ದಾರಿಯು ... ಕವ್ಯಂದಿರಾದ ಸಾರ್ವಭೌಮ ಷಷ್ಠ ಜಾರ್ಜರ ಕೈಸೇರಿದೆ

ಇಷ್ಟಲ್ಲದೆ ಅವರ ತಂದೆಯ ... ಮಹಾರಾಣಿ ಅಲೆಗ್ಸಾಂಡ್ರಿಯಯ ... ದು 1 ಮಿಲಿಯ ಪವನು ಎಡ್ವರ್ಡರಿಗೆ ಸಿಕ್ಕಿರುತ್ತದೆ ವಿಕ್ಟೋರಿಯಾ ಮಹಾರಾಣಿಯವರಿಂದಲೂ ಅವರಿಗೆ ಸ್ವಲ್ಪ ... ಪಂಚಮ ಜಾರ್ಜರಿಂದ ಇವರಿಗೆ ... ದೊರಕಿಲ್ಲವಾದರೂ, ಪ್ರಿನ್ಸ್ ಆಫ್ ... ವಾಗ ತಮಗೆ ಸಿಕ್ಕುವ ಸಂಬಳದ ... ಕೇಳಬಿಸಿಟ್ಟಿರುವರು ಇವರಿಂದೀಗ ... ರಿಗೆ ಹೆಂಡತಿ ಮಕ್ಕಳಿಲ್ಲದರಿಂದ ಖರ್ಚು ... ಹಾಕಲಿಕ್ಕೆ ಅನ ಕೂಲವಾಯಿತ ... ಖರ್ಚ ಮಾಡಿದುದೆಂದರೆ ತಮ್ಮ ... ವಾಗಿದ್ದ ಬೆಲ್ವಿಡೇರ್ ಅರಮನೆ ... ಅಷ್ಟೆ ಬಾಕಿ ಯಾವ ಖರ್ಚ ... ಷವಾಗಿ ಇರಲಿಲ್ಲ ಜ ಗಾರಿ ... ಕಂದ ರಿ ಜೂಜುಗಾಗಲೀ ಅವರು ... ಮಾಡುತ್ತಿರಲಿಲ್ಲ ಇದರಿಂದ ಅವ... ಗಂಟು ಕೇಳಬಿಸಬೇಕು.

ನಿದ್ರಾದೇವತೆ
ಪ್ರಣಯದ ಪರಿಣಾಮ

ಅನಾ ಸಾಪಿಫ್ರೋಲ್ ಎಂಬವಳ ... ಇಪ್ಪತ್ತು ... ರುಷಗಳ ಕೆಳಗೆ ... 1930ರ ... ಪ್ರಾರಂಭವಾದ ... ಸಮಯದ ಹಿ ದೆ ... ಪರ ಷಗಳದ ... ತ್ತಿದ್ದವಳ ಒಂದೇ ಸಾರಿ ಎದ್ದಿದ್ದಳ ... ಹದಿನೈದು ವರುಷಗಳ ಕೆಳಗೆ ಈಗ ... ಹೊತ್ತು ಎಚ್ಚರವಿರ ತ್ತಾಳೆ ... ಅವಳು 19 ವರುಷದ ... ಒಬ್ಬ ರೈತ ... ನ ಪ್ರಿ ... ತ ದೆಯು ಈಗ ಕೊ ... ಕುವರ ... ಶನಾಗಿ ... ದನು ಇದನ್ನು ತಿಳಿದ ಅನ ... ಮೂರ್ಛೆ ಹೋದಳ ಹಿಂವು ... ತ್ಯಗಳು ನಿಷ್ಫಲವಾದುವು ... ಅವಳು ಈ ನಿದ್ರಾದೇವಿಯ ವಶವಾಗ ... ಗಟ್ಟಿಮುಟ್ಟಾಗಿದ್ದ ತರುಣಿಯು ಈಗ ... ಅಸ್ಥಿಪಂಜರವಾಗಿ ಮಾರ್ಪಟ್ಟಿರುವಳ

ಗುಂಡಿನೇಟಿನ ಪರಿಣಾಮ

ಟ್ರೆಂಟನ್ ನಗರದಲ್ಲಿ 15 ... ಹುಡುಗನೊಬ್ಬನಿಗೆ, ಬೇಟೆಯಾಡು ... ಗುಂಡು ತಗಲಿತ್ತು ಗುಂಡು ಕೊ ... ಅವನ ತಲೆಯನ್ನು ಹೊಕ್ಕು ಮಿದುಳಿನ ... ಪದಲ್ಲಿರುವುದರಿಂದ ಅದನ್ನು ಹೊರ... ಯಲು ಡಾಕ್ಟರರಿಗೆ ಧೈರ್ಯವಾಗಲಿಲ್ಲ

ಅದರ ಪರಿಣಾಮವಾಗಿ ಈಗ ಆ ಹುಡುಗನಿಗೆ ಯಾವುದರ ಹೆಸರುಗಳೂ ಗೊತ್ತಿಲ್ಲ. ಗೊತ್ತಿದ್ದರೆ ಹೇಳಲಿಕ್ಕೆ ಬರುವುದಿಲ್ಲ ಒಂದು ಕುರ್ಚಿಯನ್ನು ಅವನಿಗೆ ತೋರಿಸಿದರೆ ಅವನು ಅದು ಒಂದು ಕೂತುಕೊಳ್ಳುವ ವಸ್ತು ಎಂದು ಹೇಳುತ್ತಾನೆ. “ಕುರ್ಚಿ” ಎಂದು ಹೇಳಬರುವುದಿಲ್ಲ. ನಾಮಪದಗಳನ್ನು ತಿಳಿಸುವ ಮಿದುಳು ಕೇಂದ್ರವು ಜಖಂ ಆಗಿರುವುದೆಂದು ಡಾಕ್ಟರರು ಅಭಿಪ್ರಾಯ ಪಡುತ್ತಾರೆ ಹುಡುಗನು ಬದುಕಿರುವನು.

ಮದನಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮಾರ್ಗಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂತರೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ 1 ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೊಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್.

ಡಾಕ್ಟರ ವಾಮನ ಗೋಪಾಳರವರ

ಐಡಿಸಾಯಿಡ್ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ
ಫೊಸ್ಪರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟೊಕಿಸ್ಟ್—ಶಾ ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯು

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3—6	3—10
ಮಸ್ಸಕ ...	3—4	4—4
ಗುಡ್ಡ ಸುಗ್ಗಿ ...	3—10	3—14
ಊರ ಅವ್ವಲ್ ಬೆಳ್ತಿಗೆ ..	4—0	4—4
ರಂಗೂನು ಬೆ. ಗೋ. ಗೋಣಿ ..	7—0	7—4
ಎಲ್ಲೂರು ಬೆ. ಮು. ಗೋಣಿ .	3—14	3—14
ಗೋಧಿ ಗೋಣಿ ಗೋಣಿ ...	11—0	13—0
ತೊಗರಿ ಗೋಣಿ ಗೋಣಿ ...	9—8	12—8
ಹುರುಳಿ ಗೋಣಿ ಗೋಣಿ ..	5—0	5—2
ಕಡಲೆ ಗೋಣಿ ಗೋಣಿ ...	8—0	12—8
ತೊಗರಿಬೇಳೆ ಗೋಣಿ ಗೋಣಿ ..	11—0	19—0
ಉದ್ದು ಗೋಣಿ ಗೋಣಿ	9—0	8—8
ಹೆಸರು ಗೋಣಿ ಗೋಣಿ ...	7—12	8—0
ಊರುಬೆಲ್ಲ ಖಂಡಿ ಗೋಣಿ ..	30—0	32—8
ಉಪ್ಪು ಗೋಣಿ ಗೋಣಿ ...	4—4	4—12
ಕೊಬ್ಬರಿ ಖಂಡಿ ಗೋಣಿ .	75—0	84—0
ಕೊಬ್ಬರಿ ಹಿಂಡಿ ಖಂಡಿ ಗೋಣಿ ...	30—0	30—8
ಎಳ್ಳಿಂಡಿ ಖಂಡಿ ಗೋಣಿ ...	27—8	30—0
ಕೊಬ್ಬರಿ ಎಣ್ಣೆ ಮುಡಿ ಗೋಣಿ ..	6—0	7—0
ಎಳ್ಳೆಣ್ಣೆ ಮುಡಿ ಗೋಣಿ .	7—0	7—0
ಚಿಮಿಣಿಎಣ್ಣೆ ಪೆಟ್ಟಿಗೆ ಗೋಣಿ .	6—5	7—5
ಮೋರಿಸ ಸಕ್ಕರೆ ಮು. ಗೋಣಿ ..	3—2	3—4
ಮೆಣಸು	2—8	4—8
ಸಾಸಿವೆ ಮುಡಿ ಗೋಣಿ	5—4	6—0
ಕಾಳುಮೆಣಸು ಖ. ಗೋಣಿ	100—0	120 0
ಯೇಲಕ್ಕಿಬೀಜ ಮಣಗೋಣಿ	80—0	85—0
ಗೇರುಬೀಜ ಮು. ಗೋಣಿ	3—0	3—8
ಅಬ್ಬಿಣ ಖಂಡಿ ಗೋಣಿ	35—0	37—8
ತಾಂಮ್ರತಗಡು ಮ. ಗೋಣಿ	12—4	12—8
ತಾಂಮ್ರಪಾತ್ರಗಳು ಮ. ಗೋಣಿ	12—8	14—0
ಚೀನಿಬೆಳ್ಳಿ ಸೇರು ಗೋಣಿ	13—8	15—0
ಹಿತ್ತಾಳೆ ತಗಡು ಮ. ಗೋಣಿ	10—0	10—8
ಪವನು ಗೋಣಿ	22—7	22—8
ಹುಣಸೆ ಹುಳಿ ಖಂಡಿ ಗೋಣಿ	40—0	45—0
ನೇಟಿವ್ ಕಾಫಿ ಖಂಡಿ ಗೋಣಿ	145—0	150—0
ಪ್ಲಾಂಟರ್ ಕಾಫಿ ಖಂಡಿ ಗೋಣಿ	175—0	195—0
ಮಡಿಕೇರಿ ಏಲಕ್ಕಿ	50—0	56—0

ಗ್ರಾಮ ವೈದ್ಯಕ ಸಹಾಯ

(ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟಿದ್ದು)

ಹಳ್ಳಿಗಳಲ್ಲಿರುವ ಜನರಿಗೆ ಆದಷ್ಟು ಅವರ ಹತ್ತಿರದಲ್ಲಿಯೇ ಯೋಗ್ಯ ತರದ ವೈದ್ಯಕ ಸಹಾಯವು ಸಿಕ್ಕಬೇಕೆಂದು ಸರಕಾರದವರು 1924 ನೇ ಇಸವಿಯಲ್ಲಿ ಗ್ರಾಮ ವೈದ್ಯಕ ಸಹಾಯದ ಯೋಜನೆಯೊಂದನ್ನು ಕೈಕೊಂಡರು. ಹೆಚ್ಚು ಖರ್ಚಿಲ್ಲದೆ ಒಳ್ಳೇ ತರದ ವೈದ್ಯಕ ಸಹಾಯವು ಸಿಕ್ಕುವುದಕ್ಕೆ ಇದರಷ್ಟು ಒಳ್ಳೇ ಉಪಾಯಗಳು ಬೇರೆ ಇರುವುದಿಲ್ಲ. ಈ ಯೋಜನೆಯ ಮೇರೆಗೆ ಒಳ್ಳೇ ಯೋಗ್ಯತೆ ಪಡೆದ ವೈದ್ಯರಿಗೆ, ಅವರು ಜನರ ವಿಶ್ವಾಸವನ್ನು ಗಳಿಸಿ ತಮ್ಮ ಜೀವನವನ್ನು ನಡೆಸ ಸಮರ್ಥರಾಗುವ ತನಕ ಆರಂಭದ ಕೆಲವು ವರ್ಷ ಸರಕಾರದವರು ದ್ರವ್ಯಸಹಾಯವನ್ನು ಮಾಡಿ, ಎಲ್ಲೆಲ್ಲಿ ವೈದ್ಯಕ ಸಹಾಯವು ಅಗತ್ಯವಿರಬಹುದೋ ಅಂಥಾ ಹಳ್ಳಿಗಳಲ್ಲಿ ಅವರು ಸ್ಥಿರವಾಗಿ ಉಳಕೊಳ್ಳಲಿಕ್ಕೆ ಅವರನ್ನು ಪ್ರೋತ್ಸಾಹಿಸುತ್ತಾರೆ. ಸರಕಾರಕ್ಕೆ ಇದರಿಂದ ಖರ್ಚು ಕಡಿಮೆಯಾಗುವುದಲ್ಲದೆ ಕೆಲಸವಿಲ್ಲದ ಅನೇಕ ವೈದ್ಯಶಾಸ್ತ್ರಜ್ಞರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟಂತೆಯೂ ಆಗುತ್ತದೆ. ಹಳ್ಳಿಗಳಲ್ಲಿರುವ ಸ್ತ್ರೀಯರಿಗೆ ಪ್ರಸವ ಕಾಲದಲ್ಲಿ ಸಹಾಯ ಮಾಡಲಿಕ್ಕೆ ಸೂಲಗಿತ್ತಿಯರನ್ನು ನೇಮಕ ಮಾಡಲಿಕ್ಕೂ ಏರ್ಪಾಡು ಮಾಡಿರುತ್ತಾರೆ.

2. ಹೀಗಿನ ಹಳ್ಳಿ ಔಷಧಾಲಯಗಳನ್ನು ಎಲ್ಲೆಲ್ಲಿ ಸ್ಥಾಪಿಸಬೇಕೆಂಬದನ್ನು ಜಿಲ್ಲಾ ಮೆಡಿಕಲ್ ಆಫೀಸರರೊಡನೆಯೂ ಸರ್ಜನ್ ಜನರಲರೊಡನೆಯೂ ಆಲೋಚನೆ ಮಾಡಿ ಆಯಾಯ ಸ್ಥಳೀಯ ಬೋರ್ಡಿನವರೇ ನಿಶ್ಚಯಿಸುವುದಾಗಿರುತ್ತದೆ. ಹಾಗೆಯೇ ಆ ಔಷಧಾಲಯಗಳಿಗೆ ವೈದ್ಯರನ್ನು ಜಿಲ್ಲಾ ಮೆಡಿಕಲ್ ಆಫೀಸರರ ಮತ್ತು ಸರ್ಜನ್ ಜನರಲರ ಒಪ್ಪಿಗೆಯನ್ನು ಪಡೆದು ಸ್ಥಳೀಯ ಬೋರ್ಡಿನವರೇ ನೇಮಕ ಮಾಡುತ್ತಾರೆ. ಈ ಔಷಧಾಲಯಗಳಿಗೆ ಖಾಸಗಿ ವೈದ್ಯರನ್ನೇ ನೇಮಕ ಮಾಡುವುದಾಗಿರುತ್ತದೆ. ಅವರು ಮೇಲೆ ಹೇಳಿದಂತೆ ಸ್ಥಳೀಯ ಬೋರ್ಡಿನವರ ನಿಶ್ಚಯಿಸಿದ ಹಳ್ಳಿಗಳಲ್ಲಿ ಸ್ಥಿರವಾಗಿ ಉಳಕೊಂಡು ತಮಗೆ ಸರಕಾರದವರು ಕೊಡುವ ದ್ರವ್ಯ ಸಹಾಯದ ಬದಲಾಗಿ ಬಡ ಜನರಿಗೆ ತಮ್ಮ ಔಷಧಾಲಯದಲ್ಲಿ ನಿಶ್ಚಿತ ಸಮಯಕ್ಕೆಲ್ಲಾ ಧರ್ಮಾರ್ಥವಾಗಿ ಚಿಕಿತ್ಸೆ ಮಾಡುವುದಾಗಿ ಸರಕಾರದವರೊಡನೆಯೂ ಸ್ಥಳೀಯ ಬೋರ್ಡಿನವರೊಡನೆಯೂ ಕರಾರು ಮೂಲಕ ಒಪ್ಪಿಕೊಳ್ಳಬೇಕಾಗಿರುತ್ತದೆ. ಇದಕ್ಕೆ ವಿರುದ್ಧವಾಗದ್ದಲ್ಲಿ ಅವರು ಅನುಕೂಲಸ್ಥರಿಂದ ಚಿಕಿತ್ಸೆ ಬಗ್ಗೆ ಫೀಸನ್ನೂ ಔಷಧಗಳ ಕ್ರಯವನ್ನೂ ಪಡೆಯಬಹುದು. ಈ ಔಷಧಾಲಯಗಳ ವಿಷಯದಲ್ಲಿ ವೈದ್ಯರಿಗೂ ಸೂಲಗಿತ್ತಿಗೂ ವರ್ಷಾವಧಿ ನಿಶ್ಚಿತ ದ್ರವ್ಯಸಹಾಯವನ್ನು ಮಾಡುವುದೊಂದನ್ನು ಮಾತ್ರ ಸರಕಾರದವರು ನೋಡಿಕೊಳ್ಳುತ್ತಾರೆ. ದಿನವೊಂದಕ್ಕೆ 30 ರೋಗಿಗಳಿಗೆ ಕೊಡಲಿಕ್ಕೆ ಸಾಕಾಗುವ ಅಂದಾಜಿನ, ವರ್ಷಾವಧಿ ರೂ 360 ಬೆಲೆ ಬಾಳುವ ಔಷಧ ವಗೈರೆಯನ್ನು ಸ್ಥಳೀಯ ಅಧಿಕಾರಿಗಳು ಆ ವೈದ್ಯರಿಗೆ ಒದಗಿಸಬೇಕಾಗಿರುತ್ತದೆ. ಜಿಲ್ಲಾ ಮೆಡಿಕಲ್ ಆಫೀಸರರೊಡನೆ ಆಲೋಚಿಸಿ, ವೈದ್ಯರಿಗೂ ಸೂಲಗಿತ್ತಿಗೂ ಕೊಡಬೇಕಾದ ವರ್ಷಾವಧಿಯ ದ್ರವ್ಯಸಹಾಯವನ್ನೂ ಇತರ ಖರ್ಚನ್ನೂ ತಾವೇ ತಾಳಿಕೊಂಡು ಇನ್ನೂ ಹೆಚ್ಚಿನ ಹಳ್ಳಿ ಔಷಧಾಲಯಗಳನ್ನು ಬೇಕಾದಲ್ಲೆಲ್ಲಾ ಸ್ಥಳೀಯ ಅಧಿಕಾರಿಗಳೇ ಇಡಬಹುದು.

ದಕ್ಷಿಣ ಕನ್ನಡದಲ್ಲಿ ಈಗ 21 ಗ್ರಾಮ ಔಷಧಾಲಯಗಳಿವೆ. ಇವುಗಳಲ್ಲಿ 19ಕ್ಕೆ ಸರಕಾರದವರೂ 2ಕ್ಕೆ ಜಿಲ್ಲಾ ಬೋರ್ಡಿನವರೂ ದ್ರವ್ಯಸಹಾಯ ಮಾಡುತ್ತಾರೆ. ಇವುಗಳಲ್ಲದೆ ತಾಲೂಕು ಕಚೇರಿಗಳಿರುವ ಪಟ್ಟಣಗಳಲ್ಲಿಯೂ ಬಂಟ್ವಾಳ, ಮೂಲ್ಕಿ, ಬೆಳ್ತಂಗಡಿ,

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

(೫ ಅಂಕಗಳ ಸ್ವಲ್ಪ) ಭಕ್ತಶಿಖಾಮಣಿ ದಾಮಾಜಿಪಂತ (ಸಂಗೀತ ನಾಟಕ)

ಬರೆದವರು.—ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು । ಯೋಗಿ ಹೃದಯದೊಳಲ್ಲ । ಸೂರ್ಯನೊಳಗಿಲ್ಲ ।। ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮುನೀಶ್ವರಾ.।" ।।

ಎಂಬ ವಾಕ್ಯದ ಸಂಪೂರ್ಣತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳಿವೆ. ಕಥಾಸಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗ ವ ಸ್ಥಳ -1. ಎಲ್ಫಿನ್ಸ್ಟನ್ ಪಬ್ಲಿಷಿಂಗ್ ಹೌಸ್, ಸ್ಟೋರ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೭ನೆಯ ಧಾತು ಸಂವತ್ಸರದ ಪುಷ್ಯ ಶು॥ ೧೨ ,ಶನಿವಾರದಿಂದ ಪುಷ್ಯ ಬ॥ ೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇಯ ಮಕರ (ಪ್ರಯಿಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ದಿನ	ವಿಶೇಷ
23	ಶನಿ	೧೨	೫೨	ರೋಹಿಣಿ	೪	೧೦	
24	ರವಿ	೧೩	೪೮	ಮೃಗಶಿರ	೫೭	೧೧	
25	ಸೋಮ	೧೪	೪೪	ಪುನರ್ವಸು	೫೭	೧೨	
26	ಕುಜ	೧೫	೪೨	ಪುಷ್ಯ	೫೬	೧೩	
27	ಬುಧ	೧	೪೦	ಆಶ್ಲೇಷ	೫೬	೧೪	
28	ಗುರು	೨	೪೨	ಮಘ	೫೮	೧೫	
29	ಶುಕ್ರ	೩	೪೧	ಹುಬ್ಬ	೬೨	೧೬	

Break Chills

Take To-Night

Prepared by a Sage out of Amber Saffron Gold Musk with Himalayan Drugs recovers lost energy Strength Nervous Debility and all Disorders in Spinal Cord Regains lost vitality Gives marvellous effect 60 Pills Rs 5 Sample 30 Pills Rs 3 List Free

Dr A S. MURTHI CHICACOLE

THE COMMON WEALTH ASSURANCE CO, LTD., POONA.

CHAIRMAN—Mr N C KELKAR

On Endowment	Triennial Bonus in 2nd VALUATION	On Whole Life
Rs 37—8—0 per Thousand		Rs. 45 per Thousand

(1) Low Premium Rates! *(2) Permanent Disability!*
(3) Double Indemnity! *(4) Extended Assurance Benefit*

(5) HOUSE PURCHASE SCHEME FOR POLICY HOLDERS are the special features

Liberal first year and hereditary renewal commissions for its representatives

Wanted Agents to represent South Kanara.

For further particulars please apply to:-

Messrs GAVANKER & SONS,
CHICKPET, BANGALORE CITY

Chief Agents for—MYSORE STATE, COORG, SOUTH KANARA AND CEDED DISTRICTS

ತಿರುವಾಂಕೂರಿನಲ್ಲಿ ಮಹಾತ್ಮರು

ತ್ರಿವಾಂಕೂರು ಸನಾತನಿಗಳ ಅಭೇದ್ಯ ಕೇಂದ್ರವೇನೊ ಆಗಿತ್ತು. ಆದರೆ ನೂರಾರು ವರುಷಗಳಿಂದ ಸವರ್ಣ (ಮೈ ಬಣ್ಣ ಕಪ್ಪೇ. ಆದರೆ ಜಾತಿ ಮಾತ್ರ ಸವರ್ಣ) ರಿಂದ ಹೀನ ರೀತಿಯಲ್ಲಿ ನಡೆಸಿಕೊಂಡು ಬಂದ ಅವರ್ಣರ ಗೋಳು, ಒಂದು ಕಾಲದಲ್ಲಿ ಹಿಂದೂ ಮತದ ತವರೂರೆನಿಸಿದ ಆ ತ್ರಿವಾಂಕೂರಿನ ದೇವರುಗಳ ಕಿವಿಯನ್ನು ಮುಟ್ಟದೆ ಇರಲಿಕ್ಕಿಲ್ಲ. ಧರ್ಮವು ಅಧರ್ಮಕ್ಕೆ ಇಳಿದಾಗ, ಅನ್ಯಾಯಗಳು ಅಪಾರವಾದ ಕಾಲದಲ್ಲಿ ತಾನು ಅವತಾರವೆತ್ತಿ ಕೊಂಡು ಬರುತ್ತೇನೆಂದು ಹೇಳಿದ ಆ ಪರಮಾತ್ಮನ ಮಾತು ತ್ರಿವಾಂಕೂರಿನಲ್ಲಾದರೂ ನೆರವೇರಿತೆಂಬುದಕ್ಕೆ ತುಂಬಾ ಸಂತೋಷವಾಯಿತು. ಪ್ರತ್ಯಕ್ಷ ದೇವರಂತೆ ಇರುವ ಆ ಮಹಾರಾಜನ ಕರುಣಾದೃಷ್ಟಿಯು ಇಂದು ದೇವರ ದರ್ಶನಕ್ಕಾಗಿ ಗೋಳಾಡುತ್ತಿದ್ದ ಆ ಅವರ್ಣರ ಕಡೆಗೆ ತಿರುಗಿತು. ಸರಕಾರಕ್ಕೆ ಸಂಬಂಧಪಟ್ಟ ಎಲ್ಲಾ ದೇವಾಲಯಗಳನ್ನು, ಜನ್ಮದಿಂದಲೂ, ಯಾ ಮತದಿಂದಲೂ ಹಿಂದುವಾಗಿರುವರಿಗೆ ತೆರೆಯಲೇಬೇಕೆಂಬ ಆಜ್ಞೆಯು ಸನಾತನಿಗಳನ್ನು ದಿಗಿಲುಬಡಿಸಿದಾದರೂ, ಅದು ನಿಜವಾದ ದೇವರನ್ನು ಆ ದೇವಸ್ಥಾನಗಳಲ್ಲಿ ನಿಲ್ಲುವಂತೆ ಮಾಡಿದೆ. ಅಂಧಶ್ರದ್ಧೆ, ಅದರ ಅನ್ಯಾಯಗಳು, ಅನ್ಯಾಯಗಳಿಂದ ಕಲ್ಪಿತ ಮನೋಭಾವ ಇವುಗಳಿಂದಲೇ ತುಂಬಿಕೊಂಡಿದ್ದ ಆ ಅಧರ್ಮಾಲಯಗಳು ಇಂಥ ಪವಿತ್ರವಾಗಿ ದೇವಾಲಯಗಳಾಗಿ ಮಾರ್ಪಟ್ಟವೆಂದು ಹೇಳಬಹುದು. ಈಗ ಅವತಾರಿಗಳು ಮಹಾತ್ಮರೊ ಅಥವಾ ತಿರುವಾಂಕೂರ ಅಧಿಪತಿಗಳೊ? ಎಂಬ ಪ್ರಶ್ನೆ. ಇವರ್ಗರೂ ಅವತಾರ ಪುರುಷರೇ. ಅವರೇ ಅಲ್ಲ, ಅಧರ್ಮವನ್ನು ಖಂಡಿಸಿ, ಧರ್ಮವನ್ನು ಸ್ಥಾಪಿಸಬಯಸುವವರೆಲ್ಲರೂ ದೇವರ ಅವತಾರಿಗಳೆಂದಲೇ ಹೇಳಬಹುದು. ಅದರಂತೆ ಮಹಾತ್ಮರ ತ್ರಿವಾಂಕೂರಿನಲ್ಲಿ ಈಗ ಪ್ರವೇಶೋತ್ಸವ ಕಾಲದ ಸಮಾರಂಭಗಳಿಗಾಗಿ ಅಲ್ಲಲ್ಲಿ ಸಂಚಾರಮಾಡುತ್ತಿರುವರು. ಅವರು ಹೋದೆಡೆಗಳಲ್ಲಿ ಜನಜಾತ್ರೆಯು ಕಿಕ್ಕಿರಿದು ನೆರೆಯುತ್ತದೆ. ಅವರ್ಣರ [illegible] ವಾಗಿ ಅವರನ್ನು ಸ್ವಾಗತಿಸುತ್ತಿರುವರು, ತಿಳಿವಳಿಕೆಯುಳ್ಳ ಕರುಣಾಶಾಲಿ ವಿಶಾಲ ಹೃದಯದ ಸವರ್ಣರು ಅವರನ್ನು ಕೊಂಡಾಡುತ್ತಿರುವರು. ಈ ಮಧ್ಯೆ ಅವರನ್ನು ಶಪಿಸುವ ಸನಾತನಿಗಳನ್ನು ಬೆರಳುಗಳಿಂದ ಎಣಿಸಬಹುದು. ಮಹಾತ್ಮರು ಹೋದೆಡೆಗಳಲ್ಲಿ "ಇಂದು ನಿಜವಾಗಿಯೂ ಹಿಂದೂ ಧರ್ಮವು ಉದ್ಧಾರವಾಯಿತು.

ಹಿಂದೂ ಧರ್ಮಪಾಲಕರೆಂಬ ಬಿರುದು ತ್ರಿವಾಂಕೂರಿನ ಮಹಾರಾಜರಿಗೇನೇ ಸಲ್ಲತಕ್ಕದು. ಇಂದಾದರೆ ಈ ದೇವಸ್ಥಾನದಲ್ಲಿ ದೇವರನ್ನು ಕಾಣಬಹುದು. ಸವರ್ಣರು ಅವರ್ಣರಿಗೆ ದೈವಸಾನಿಧ್ಯವನ್ನು ಆರಾಧನೆಯ ಮೂಲಕ ಸೇರುವ ಕಲೆಯನ್ನು ಅವರಿಗೆ ತಿಳಿಸುವುದು ಧರ್ಮವಾಗಿರುತ್ತದೆ. ಅವರ್ಣರಾದರೂ ಸುವರ್ಣರಿಂದ ತಮಗೆ ಉಂಟಾದ ಅನ್ಯಾಯಗಳನ್ನು ಮರೆತು ಅವರನ್ನು ಮನ್ನಿಸಬೇಕು. ಅಲ್ಲದೆ ತಮಗೆ ತೋರಿಸಿದ ಉದಾರತೆಗೆ ಅವರ್ಣರು ಯೋಗ್ಯರೆನಿಸುವ ರೀತಿಯಲ್ಲಿ ನಡೆಯಬೇಕು" ಎಂದು ಸಾರುತ್ತಲಿರುವರು. ಹಿಂದೂಮತದಲ್ಲಿ ಒಗ್ಗಟ್ಟಿಲ್ಲದೆ ಅದು ಹಾಳಾದರೂ ಚಿಂತೆಯಿಲ್ಲ. ಸನಾತನವು ಬದುಕಿದರೆ ಸಾಕು ಎಂದು ಬೊಬ್ಬಿಡುವವರ ದಮ್ಮು ಅಲ್ಲಿ ಕೇಳಿಸುವುದಿಲ್ಲ. ಮಹಾತ್ಮರ ಎದುರಿಗೆ ನಿಂತು ಮಾತಾಡುವ ಧೈರ್ಯ ಆ ಪಾಪಿಗಳಿಗೆಲ್ಲಿಂದ ಬರಬೇಕು?

ಮುಸ್ಲಿಂ ಶಿಕ್ಷಣ ಪ್ರಚಾರ

ಮಂಗಳೂರು ಮುಸ್ಲಿಂ ಉಪಾಧ್ಯಾಯ ಸಂಘದವರು ಸದ್ಯದಲ್ಲಿ ಒಂದು ಶಿಕ್ಷಣ ಪ್ರದರ್ಶನವನ್ನು ಏರ್ಪಡಿಸಲಿರುವರು. ನಮ್ಮ ದೇಶದ ಬಾರಿ ಬಡತನದಿಂದ ನಮ್ಮ ತರುಣರಿಗೆ ವಿದ್ಯೆಯು ಅನಾನುಕೂಲತೆಯಾಗಿ, ದೇಶವು ಇನ್ನೂ ಹೆಚ್ಚಿನ ದಾರಿದ್ರ್ಯತೆಗೆ ಇಳಿಯುತ್ತಲಿದೆ. ಈ ವಿದ್ಯಾ ಅಭಾವವು ಜಾತಿಮತಗಳ ಬೇದವಿಲ್ಲ ಹಿಂದೂ ಮುಸ್ಲಿಂ, ಕ್ರೈಸ್ತರೆಲ್ಲರ ಒಳಗೂ ಒಂದೇ ಪ್ರಕಾರವಾಗಿರುತ್ತದೆ. ಪರಿಸ್ಥಿತಿಯು ಹೀಗಿರುವಾಗ ಆಯಾಯ ಮತ ಮುಖಂಡರು ಅವರವರ ಸಮ್ಮಂಧಪಟ್ಟ ಜಾತಿ ವರ್ಗದವರಿಗೆ ಶಿಕ್ಷಣ ಅನುಕೂಲತೆಗಳನ್ನು ಕಲ್ಪಿಸಿಕೊಡುವ ಪ್ರಯತ್ನ ಮಾಡುವುದು, ಒಂದು ಸತ್ಕಾರ್ಯವೇ ಸರಿ.

ನಮ್ಮ ಜಿಲ್ಲೆಯಲ್ಲಿ ಹಿಂದೂಗಳಿಗಿಂತಲೂ ಮುಸ್ಲೀಮರು ಅಲ್ಪ ಸ್ವಲ್ಪ ಸಂಖ್ಯಾಕರಿರಬಹುದು. ಆದರೆ ಅವರಲ್ಲಿನ ಶಿಕ್ಷಿತ ವರ್ಗವು ಅಷ್ಟೆ ಅಲ್ಪ ಸಂಖ್ಯಾಕವಾಗಿರುತ್ತದೆ. ಒಂದೊತ್ತಿನ ಅನ್ನಕ್ಕೂ ಗತಿ ಕಾಣಸಿಗದ ಈ ಕಾಲದಲ್ಲಿ ವಿದ್ಯೆಯ ಕಡೆಗೆ ಗಮನ ಕೊಡುವುದಾದರೂ ತೀರ ಕಷ್ಟವೆನಿಸಿದೆ. ನಮ್ಮ ಮುಸ್ಲಿಂ ಬಂಧುಗಳು ಶಿಕ್ಷಣ ಪ್ರಚಾರಕ್ಕಾಗಿ ಮಾಡುತ್ತಿರುವ ಸಾಧನಗಳು ಇಂಥಾ ಸಮಯದಲ್ಲಿ ಸ್ತುತ್ಯವೆನಿಸದಿರಲಾರವು. ಇವರ ದಿವ್ಯ ಉದ್ದೇಶದಲ್ಲಿ ಎಲ್ಲ ಜಾತಿಯವರೂ ಅವರೊಂದಿಗೆ ಸಹಕರಿಸಿ ಅದರಿಂದ ಅವರನ್ನು ಪ್ರೋತ್ಸಾಹಿಸುವುದೆ ಧರ್ಮವಾಗಿದೆ. ಇದರಿಂದ ಹಿಂದುಳಿದವರು [illegible] ಕೊರತೆಗಳನ್ನು ಸಂಪಾದಿಸಲಿಕ್ಕೆ [illegible] ಇನ್ನೂ ಅಭಿವೃದ್ಧಿಯಾಗಲಿಕ್ಕೂ [illegible]ವಾಗುತ್ತದೆ. ಶಿಕ್ಷಣದಲ್ಲಿ ಅನೇಕ ದಿವ್ಯ ಉದ್ದೇಶಗಳಿರುತ್ತವೆ. ಅವುಗಳಲ್ಲಿ ಶ್ರೇಷ್ಠವಾದ ಸ್ವದೇಶಾಭಿಮಾನದ ಬೆಳವಣಿಗೆಯು ಎಲ್ಲ ಶಿಕ್ಷಣಗಳ ಪ್ರಧಾನ ಉದ್ದೇಶವಾಗಿರಬೇಕು. ದೇಶದ ಬಡತನ [illegible] ದುಸ್ಥಿತಿಗಳಲ್ಲಿ ಜನಾಂಗದ [illegible] ಪರಿಣಾಮಗಳನ್ನು [illegible] ತಿಳಿಯುವ ಮಕ್ಕಳಿಗೆ ತಿಳಿಯಗೊಳಿಸಿ ಅವರು ಬೆಳೆದ ವಿದ್ಯಾವಂತರಾದ ಹಾಗೆ ಅವರಲ್ಲಿ ತಿಳುವಳಿಕೆಯು ತೇಜೋಮಾನವಾಗಿ ಬೆಳೆಯುವಂತೆ ಮಾಡಿಬಿಟ್ಟು, ಅವರು ಉಪಯುಕ್ತ ದೇಶಸೇವಕರಾಗಿ, ದೇಶದ ಯೋಧರಾಗಿ ಮಾಡುವ ಕರ್ತವ್ಯವು ಭರತಭೂಮಿಯಲ್ಲಿ ಹುಟ್ಟಿ ಭರತಮಾತೆಯ ಉಪ್ಪು ತಿನ್ನುವ ಪ್ರತಿಯೊಬ್ಬ ವೀರ ಭಾರತೀಯನ ಕರ್ತವ್ಯವಾಗಿರುತ್ತದೆ. ದೇಶದೇಳ್ಗೆಯನ್ನು ಮಕ್ಕಳಲ್ಲಿ ಚಿಕ್ಕಂದಿನಿಂದಲೂ ಗುರಿಯಲ್ಲಿರಿಸಿ, ಅವರನ್ನು ತರಬೇತಿ ಮಾಡಿದರೆ ಬಹು ಬೇಗನೆ ಹಸಿ ಕೂಡಿ ಹಳ್ಳವಾದಂತೆ ನಮ್ಮ ರಾಷ್ಟ್ರವು ಸರ್ವ ಭಾರತೀಯರ ಒಗ್ಗಟ್ಟಿನ ನಾಡಾಗಿ ಪ್ರಪಂಚದಲ್ಲಿ ಮೆರೆಯದಿರದು.

ಮುಸ್ಲಿಂ ಬಂಧುಗಳ ಶಿಕ್ಷಣ ಪ್ರಚಾರವು ಯೋಗ್ಯ ಕಾರ್ಯಕ್ರಮಗಳಿಂದೊಡಗೂಡಿರುತ್ತದೆ. ಮಂಗಳೂರಿನ ಮುಸ್ಲಿಂ ಶಾಲೆಗಳನ್ನು ಒಂದು ಮಾದರಿ ಸಂಸ್ಥೆಯಾಗಿರಿಸಿ, ಆ ಮಾದರಿಯ ಮೇಲೆ ಜಿಲ್ಲೆಯ ಹಳ್ಳಿಗಳಲ್ಲಿನ ಮುಸ್ಲಿಂ ಶಾಲೆಗಳನ್ನು ವ್ಯವಸ್ಥೆಪಡಿಸುವ ಒಂದು ಚಳವಳ ರೂಪವಾದ ಕಾರ್ಯಕ್ರಮವು ಬಹಳ ಅಭಿನಂದನೀಯವಾಗಿದ್ದಾಗಿರುತ್ತದೆ. ಹಳ್ಳಿಯಲ್ಲಿನ ಮುಸ್ಲಿಂ ಶಾಲೆಗಳು ಇಂದು ಹೀನಾವಸ್ಥೆಯಲ್ಲಿರುವದೆಂಬ ವಿಷಯವನ್ನು ಮಾನ್ಯ ಜಿಲ್ಲಾ ವಿದ್ಯಾಧಿಕಾರಿಗಳೇ ಒಂದು ಭಾಷಣದಲ್ಲಿ ತಿಳಿಸಿರುವರು. ಈ ಟೀಕೆಯು ಮುಸ್ಲಿಂ ಬಂಧುಗಳನ್ನು ತಮ್ಮ ನಿರ್ಧಾರವನ್ನು ಇನ್ನೂ ಭರದಿಂದ ಸಾಗಿಸುವಂತೆ ಮಾಡುವುದೆಂದು ಹಾರೈಸಲಾಗಿದೆ. ಇದೇ ಸಂದರ್ಭದಲಿ ಒಂದು ವಾಚನಾಲಯವನ್ನೂ ಪುಸ್ತಕ ಸಂಗ್ರಾಲಯವನ್ನೂ ಸ್ಥಾಪಿಸಬೇಕೆಂದು ಅವರು ನಿಶ್ಚಯಿಸಿರುತ್ತಾರೆ. ಅವರಿಗೆ ಸರಕಾರದ ಯೋಗ್ಯ ಸಹಾಯ ಸಿಕ್ಕಬಹುದೆಂದ ನಿರೀಕ್ಷಿಸಲಾಗಿದೆ. ವಾಚನಾಲಯವನ್ನು ಸಾರ್ವಜನಿಕವಾಗಿ ಮಾಡಿದ್ದಲ್ಲಿ, ಸಕಲ ಮತಸ್ಥರೂ ಅಲ್ಲಿ ಕೂಡುವುದರಿಂದ ಇದೊಂದು ಸರ್ವ ಸಮಾಜ ಸಮ್ಮೇಳನ ಸ್ಥಾನವಾಗಿ ಪರಸ್ಪರ ಜಾತಿಮತಸ್ಥರಲ್ಲಿ ತಿಳುವಳಿಕೆಯನ್ನು ತಂದೊದ್ದುವುದರಲ್ಲಿ ಸಹಾಯಕವಾಗಬಹುದು.

ಮುಸ್ಲಿಂ ಬಂಧುಗಳ ಮಹದುದ್ದೇಶದಲ್ಲಿ ಸಕಲರೂ ಸಹಕರಿಸಿ ವಿದ್ಯಾಪ್ರಚಾರಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು, ದೇಶದ ಏಳ್ಗೆಯ ಸಾಧನ ಮಾಡುವರಾಗಿ ಈ ಮೂಲಕ ಹಾರೈಸಲಾಗಿದೆ.

ಮದರಾಸಿನಲ್ಲಿ ಕಾಂಗ್ರೆಸ್ ವಿಜಯ

LATEST NEWS.

ಮದ್ರಾಸು ಲೆಜಿಸ್ಲೇಟಿವ್ ಚುನಾವಣೆಗೆ ನಿಂತ ಅನೇಕ ಕಾಂಗ್ರೆಸ್ ಉಮೇದ್ವಾರರು ಆಗಲೇ ಚುನಾಯಿತರಾಗಿರುವರು. ಅವರ ಪ್ರತಿಕಕ್ಷಿಗಳು ತಮ್ಮ ಉಮೇದ್ವಾರಿಕೆಯನ್ನು ಹಿಂದಕ್ಕೆ ತೆಗೆದಿರುವರು

ಪಂಡಿತ ಜವಾಹರಲಾಲರು ತಮ್ಮ ಪಂಜಾಬ ಪ್ರವಾಸವನ್ನು ಪೂರ್ಣಗೊಳಿಸಿದರು

ನವ ರಾಜ್ಯಾಂಗ ರಚನೆಯನ್ನು ಖಂಡಿಸಿ ಬೊಂಬಾಯಿ ಕಾಂಗ್ರೆಸ್ ಕಮಿಟಿಯವರ ಠರಾವುಗಳನ್ನು ಪಾಸು ಮಾಡಿದರು

ಬೊಂಬಾಯಿ ಆಸ್ಪತ್ರೆಯಲ್ಲಿದ್ದ ವಲ್ಲಭಭಾಯಿ ಪಟೇಲರು ಈಗ ಸೌಖ್ಯವಾಗಿರುತ್ತಾರೆ. ಇಪ್ಪತ್ತರಿಂದ ಅವರು ಮಹಾರಾಷ್ಟ್ರ ಪ್ರವಾಸವನ್ನು ಕೈಕೊಳ್ಳುವರು

ಆಂಗ್ಲ ಐರಿಷ ವಾಣಿಜ್ಯ ಒಪ್ಪಂದಗಳನ್ನು ಸವಿಚಾರವಾಗಿ ಪುನಃ ವಿಮರ್ಶೆ ಮಾಡಲಾಗುವ ಐರ್ಲೆಂಡಿಗೂ ದಕ್ಷಿಣ ಆಫ್ರಿಕಕ್ಕೂ ಸಂಬಂಧಗಳನ್ನು ವಿಶಾಸಗೊಳಿಸಬೇಕೆಂಬದರ ಕುರಿತು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ

ಪ್ರಪಂಚದ ಪ್ರಾಯ್ವೆಟ್ ಚಾಂಪಿಯನ್‌ಶಿಪ್ಪಿನಲಿ ಗೆದ್ದ [illegible] ಎಂಬವನು [illegible] ಎಂಬವನನ್ನು [illegible] ಸುತ್ತಿನ ಪಂದ್ಯದಲಿ ಹೊಡೆದನು

ಸ್ಪೇನ್ ಯುದ್ಧಕ್ಷೇತ್ರವು ಸರಕಾರದ ಪಾರ್ಟಿಯವರಿಗೆ [illegible] ಬಲಿದಿರುವಂತೆ ಕಾಣುತ್ತದೆ. ಸರಕಾರದವರ [illegible] ಎಂಬ ಸ್ಥಳವನ್ನು ವಶಮಾಡಿಕೊಂಡಿರುವರು

ಪತ್ತೆ ಗೊತ್ತಾಗದ ಒಂದು ವಿಮಾನವು [illegible] ಒಂದು [illegible] ಸಿಂದ ಪುಡಿಮಾಡಿ[illegible]

ಪೋಪ ಸ್ವಾಮಿ [illegible] ನೋವು ವಿಪರೀತವಾಗಿರುತ್ತದೆ. ಅವರ ದೇಹಸ್ಥಿತಿಯು [illegible]ಜನಕವಾಗಿದೆಯಂತೆ

ಹಿಟ್ಲರನು [illegible] ಸರಕಾರದೊಡನೆ [illegible] ಮಾತು ಕತೆಗೆ [illegible] ಎಂದು ಅವನೇ ಹೇಳಿದನು

ಡ್ಯೂಕ್ ಆಫ್ ಗ್ಲೌಸ್ಟರರು ಚಕ್ರವರ್ತಿಗಳಿಗೆ ಅವರ ಕೆಲಸಗಳಲ್ಲಿ ಸಹಾಯಕರಾಗುವರೆಂದುದರಿಂದ ಅವರ ಅವರ ಸ್ವಂತ ಕೆಲಸಕ್ಕೆ ರಾಜಿನಾಮೆ ಇತ್ತಿರುವರು

ಪಾಳಿ ಬಿನ [illegible] ಪಿಲ ಹೆಲಿಯಾರವರು ಒಂದು [illegible] ಅಪಘಾತದಲ್ಲಿ ಸಿಕ್ಕಿ ಪಾರಾಗಿರುವರು

ಸ್ವತಂತ್ರ ಶಾಲೆಗಳ ದುರವಸ್ಥೆ

ನಮ್ಮ ಜಿಲ್ಲೆಯಲ್ಲಿ ಅನೇಕ ಸ್ವತಂತ್ರ ಶಾಲೆಗಳು ಇವೆ. ಇವುಗಳ ಸಂಖ್ಯೆಗಳು ಬೋರ್ಡು ಶಾಲೆಗಳಷ್ಟೆ ಇವೆಯೆಂದು ತಿಳಿದು ಬರುತ್ತದೆ. ಇವುಗಳಲ್ಲಿ ಕೆಲವು ಶಾಲೆಗಳು ನಡೆಸುತ್ತಿರುವ ಅನ್ಯಾಯಗಳನ್ನು ನಮಗೆ ತಿಳಿಸಿದ ಬಾತ್ಮಿದಾರರ ಮಾತುಗಳನ್ನು ಮನಸ್ಸಿಗೆ ತೆಗೆದುಕೊಂಡರೆ ಇವುಗಳು ನಿಜವಾಗಿಯೂ ಶಾಲೆಗಳೋ ಅಥವಾ ಅಧರ್ಮದ ಸಂಸ್ಥೆಗಳೊ, ಅನ್ಯಾಯದ ಪೀಠಗಳೊ ಅಥವಾ ಸ್ವಾರ್ಥಭಂಡಾರಗಳೊ ಎಂಬ ಸಂಶಯವುಂಟಾಗುತ್ತದೆ. ನಿರುದ್ಯೋಗದ ಬೇಸೆಯಿಂದ ಆರ್ಥಿಕ ದುಃಸ್ಥಿತಿಯಲ್ಲಿ ಸಿಲುಕಿ ನರಳುವ ಕೆಲವು ತರುಣರನ್ನು ಈ ಶಾಲೆಯ ಚಾಲಕರು ಉಪಾಧ್ಯಾಯರನ್ನಾಗಿ ತೆಗೆದುಕೊಂಡು ಅವರಿಗೆ ಕೆಲಸದ ಭದ್ರತೆಯನ್ನು ಕೊಡದೆ ಬಹಳ ತುಚ್ಛ ರೀತಿಯಲ್ಲಿ ನಡೆಸುತ್ತಿರುವರಂತೆ. ಉಪಾಧ್ಯಾಯರಿಗೆ ೨೦ ರೂ ಸಂಬಳ ತೆರುವನೊಬ್ಬ ಟೀಚರ್ — ಮೆನೇಜರನ ೧೦ ರೂಪಾಯಿಗೆ ಯಾರಾದರೂ ಸಂಬಳಕ್ಕೆ ನಿಲ್ಲುತ್ತೇನೆಂದು ಅವನ ಬಳಿ ಹೇಳಿದರೆ ಅವನು ಮೊದಲನೇಯವನನ್ನು ರದ್ದುಮಾಡಿ ಎರಡನೇಯವನನ್ನು ಇಟ್ಟುಕೊಳ್ಳುವನು. ಅಷ್ಟಕ್ಕೆ ತನ್ನ ಅನ್ಯಾಯವನ್ನು ಬಿಡದೆ, ಎರಡನೇಯವನಿಗೆ ಸಂಬಳ ಕೊಡುವಾಗ ಅವನಿಂದ ಇಪ್ಪತ್ತೋ ಮೂವತ್ತೊ ರೂಪಾಯಿಗೆ ದಸ್ಕತು ಪಡೆಕೊಂಡ ಮೇಲೆ, ಅವನ ಕೈಯ ಮೇಲೆ ಆ ಹತ್ತು [illegible] ರೂಪಾಯಿಗಳನ್ನು ಹಾಕುವನು. ಮುಚ್ಚಿದ ಬಾಯಿಯಿಂದ ಇಂತಹ ಅನ್ಯಾಯಗಳನ್ನು ಸಹಿಸುವ ಉಪಾಧ್ಯಾಯರಿಂದು ನಮ್ಮ ಜಿಲ್ಲೆಯಲ್ಲಿ [illegible] ಜನರಿರುತ್ತಾರೆ

ಇದಕ್ಕಿಂತಲೂ ಇನ್ನೊಂದು ತಮಾಷೆಯುಂಟು. ಒಬ್ಬ ಟೀಚರ ಮೆನೇಜರನು ೨–೩ ಶಾಲೆಗಳನ್ನು ನಡೆಸುವುದೂ ಉಂಟು. ಅವನ ಯಾವುದಾದರೂ ಶಾಲೆಗೆ ವಿದ್ಯಾಧಿಕಾರಿಗಳು ಭೇಟಿಮಾಡುವುದಾದರೆ ಆ ಮೆನೇಜರನು ಇತರ ಎರಡು ಶಾಲೆಗಳಿಂದ ವಿದ್ಯಾರ್ಥಿಗಳನ್ನು ಒಂದೇ ಶಾಲೆಯೊಳಗೆ ಸೇರಿಸಿ, ಮಕ್ಕಳ ಸಂಖ್ಯೆ ಜಾಸ್ತಿ ಇದೆ ಎಂದು ಅಭಿಪ್ರಾಯವನ್ನುಂಟು ಮಾಡಿದ ಸಂದರ್ಭಗಳು ನಡೆಯುತ್ತಿವೆ. [illegible] ಇಂತಹ ಅನ್ಯಾಯಗಳನ್ನು [illegible] ಪ್ರಯತ್ನ[illegible] ಮಾಡುತ್ತಿದ್ದರು. ಆದರೂ ನಮ್ಮ [illegible] ಸರಕಾರದವರ ಇಷ್ಟಕ್ಕೆ ಹೋಗುವುದು [illegible] ಸ್ವತಂತ್ರ ಶಾಲೆಗಳ ಅಧ್ಯಾಪಕರು ತಮ್ಮ ಹಕ್ಕುಗಳಿಗಾಗಿಯೂ ಇಂತಹ [illegible] ಚಾಲಕರ ಕೈಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೂ ಮಾಡುವ ಪ್ರಯತ್ನಗಳಿಗೆ ಸಹಾಯ [illegible] ನ್ಯಾಯ [illegible] ದತಾಗುತ್ತದೆ

DIAMONDS! DIAMONDS!
BEST BRILLIANCY!
K. R. K. SHET,
Near Mission High School
MANGALORE
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು!
ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಪದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ
ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟತನವೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ
ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ, ಮಂಗಳೂರು

ಕಳ್ಳ ಕಣ್ಣೀರವ

ನನಗೆ ಅನೇಕ ಚಿಕ್ಕ ದೊಡ್ಡ ತಮ್ಮಂದ್ರಿದ್ದಾರೆ. ಮುಂಚೆ ನರ್ಸಣ್ಣ ಒಬ್ಬ ಇದ್ದ. ಪಾಪ! ಅವನ ಪತ್ತೆ ಇಲ್ಲದೆ ಎಷ್ಟೋ ವರುಷಗಳಾದುವು. ಆ ಮೇಲೆ ಸ್ಯಾಬ ಒಬ್ಬನಿದ್ದ, ಅವನು ಸಾ . . . ಲಿಲ್ಲ. ಬದುಕಿದ್ದಾನೆ. ಆದರೆ ಉಸಿರಿಲ್ಲ. ಈಗ ನಾರದನೊಬ್ಬನಿದ್ದಾನೆ. ನನಗೂ ನಾರದನಿಗೂ ತುಂಬಾ ಕೂಡಿಕೊಂಡು ಬರುತ್ತದೆ. ಇಚೀ ಇನ್ನೊಬ್ಬ ತಮ್ಮನಿದ್ದಾನೆಂದ. ನನಗೆ ಗೊತ್ತಾಯಿತು. ಆದರೆ ಅವನು ಅಶ್ವತಮ್ಮನೆಂದು ಹೆಸರು ಹಾಕಿಕೊಂಡಿದ್ದಾನೆ. ಅಶ್ವದತಮ್ಮನ ಜಾತಿಯಾವುದು? ಹೊ,ಹೊ, ಹೋ! ಗೊತ್ತಾಯಿತು. ಕ . . . ತ್ತೆ? ಅಲ್ವೆ? ಸರಿ, ಸರಿ. ನನಗೆ ಹಾಗೆಲ್ಲ ಒಳಗೊಂದು ಹೊರಗೊಂದು ಗೊತ್ತಾಗುವುದಿಲ್ಲ ನೋಡಿ. ನನ್ನ ನಾರದರ ತಮ್ಮನಾಗಲಿಕ್ಕೆ ಮನಸ್ಸಿಲ್ಲದಿದ್ದರೆ ಅಶ್ವತಮ್ಮನಾಗಬೇಕೆ? ಆದರೆ ಒಂದು ಖರೆ ಏನೆಂದ್ರೆ, ಅವನ ಯೋಚನೆಗಳಿಗೂ, ಇಟ್ಟುಕೊಂಡ ಹೆಸರಿಗೂ ಹೆಚ್ಚು ತಾರತಮ್ಯ ಕಾಣಿಸುವುದಿಲ್ಲ. ಒಪ್ಪಿದೆ. ಅಶ್ವತಮ್ಮ ನೀನು ಅಶ್ವತಮ್ಮನೇ ಸರಿ. ಆದರೆ ಅಶ್ವ ತಮ್ಮಾ, ನೀನು ಯಾಕೆ, ನಿನ್ನ ಅಣ್ಣನಾದ ಅಶ್ವದ ಹೆಸರಿನಿಂದ ಮೆರೆಯಲು ನೋಡುವೆ. ಕ . . . ? ಅಂದ್ರೆ ಅಶ್ವ ತಮ್ಮನೇ ಅಂತ ಅಲ್ವೆ? ಯಾವ ಕೆಲಸಕ್ಕೂ ಬಾರದ ನೀನು ಯಾಕೆ ಆ ಕಾಮಗಾರಿ ಅಣ್ಣನ ಹೆಸರನ್ನು ಕೂಡಿಸುವೆ? ಅದನ್ನು ತಿಳುಕೊಳ್ಳಲಾರದಷ್ಟು ಅಶ್ವ ತಮ್ಮನೇ ನೀನು?

ಕಣ್ಣೀರಹ ಸುರಿಸಿದಷ್ಟೂ ಆರೋಗ್ಯಕ್ಕೆ ಒಳ್ಳೇದು. ಕಾಂಗ್ರೆಸ್ಸಿನವರು ಸದಾಶಿವರಾಯರನ್ನು, ಆ ಮೇಲೆ, ಪಟೇಲರನ್ನು, ನೆಹರುಗಳನ್ನು, ಕಮಲಾ ದೇವಿಯವರನ್ನು ಇಂಥಾ ದೊಡ್ಡ ದೇಶಭಕ್ತರನ್ನು ಶಾಸನ ಸಭೆಗಳಿಗೆ ಉಮೇದುವಾರರಾಗಿ ಚುನಾಯಿಸಲಿಲ್ಲದಕ್ಕೆ ಕೆಲವರು ಕಣ್ಣೀರು ಸುರಿಸಿ, ಅತ್ತು ಗೋಳಿಡುವುದನ್ನು ನೋಡಿದರೆ, ನನಗೂ ಹಾಗೆ ಅಳಬೇಕೂಂತ ಆಗುತ್ತೆ? ಆ ಕಣ್ಣೀರು ಸುರಿಸಿ ಆರೋಗ್ಯವಾಗಿರಬೇಕೆಂದೆನಿಸುತ್ತೆ ಆದ್ರೆ ನನಗೆ ಅಂತಾ ಬೆಣ್ಣೆಯಂತ ಹೃದಯ ಇಲ್ಲ. ಏನು ಮಾಡೋದು? ಈಗ ನನಗೆ ಇನ್ನೊಂದು ಆಶ್ಚರ್ಯ ಈ ಕಣ್ಣೀರಿಗೆ ಅಂತ್ಯವೆ ಇಲ್ಲ, ನೋಡ್ಲಿಕ್ಕೆ ಹೋದ್ರೆ ಹ? ಏನು ಪುಣ್ಯಶಾಲಿಗಳಪ್ಪಾ

ನೇತ್ರಾವತಿಯ ನೀರು ಉಪ್ಪಂತೆ ಅದು ಸಮುದ್ರದ ಹತ್ತಿರ ಇದ್ದುದರಿಂದಂತೆ ಎಂಥಾ ಭೂಗೋಳಜ್ಞನರ ಅಜ್ಞಾನವಿದು? ಒಳ್ಳೆ ಯುಗಗಳ ಕಾಲದಲ್ಲಿ ಇಂಥಾ ಕಣ್ಣೀರು ಸುರಿಸುವವರನೇಕರು ಇದ್ರು. ಅವರು ಸುರಿಸಿದ ಕಣ್ಣೀರು ಇಂದು ನೇತ್ರಾವತಿ ನದಿಯಾಗಿ ಮಾರ್ಪಟ್ಟು, ಅದರ ನೀರು ಉಪ್ಪಾಗಲು ಕಣ್ಣೀರೇ ಕಾರಣ ಗೊತ್ತಾಯಿತೊ? ಈ ವಿಷಯಗಳು ಈಚೆಗೆ ತಿಳಿಯ ಬಂದುದರಿಂದ ಭೂಗೋಳಜ್ಞರೂ ಒಪ್ಪಿಕೊಳ್ಳಬೇಕಾಗಿದೆ ಮತ್ತೆ ಈಗಿರುವ ಅಲ್ಪ ಕಣ್ಣೀರಿಗಳು ಒಂದು ದಿವಸ ಆ ನೀರನ್ನು ನಿಲ್ಲಬಿಟ್ಟರೆ ನನ್ನ ಅವಸ್ಥೆ ವಿಪರೀತವಾದೀತು ನೇತ್ರಾವತಿಗೆ ಉದ್ಭವ ಸ್ಥಾನದಲ್ಲಿ ಕೊರತೆ ಬಂದಂತಾಗಿ,ಕಣ್ಣೀರಿನ ಸಪ್ಲೈ ಇಲ್ಲದೆ, ಬರಗಾಲ ಬರಬಹುದು, ನಮ್ಮ ಜಿಲ್ಲೆಗೆ? ಆದ್ರಿಂದ ಹುಶಾರ್, ಎಲ್ಲರೂ ಕಣ್ಣೀರಿಳಿಸಲಿಕ್ಕೆ ಪ್ರಯತ್ನಿಸಬೇಕು. ಆದ್ರೆ . ಕಣ್ಣೀರಿಳಿಸುವಾಗ ಕಣ್ಣುಗುಡ್ಡಗಳು ಹೊರಗೆ ಬಂದಾವ ಜಾಗ್ರತೆ? ಕಣ್ಣು ಹೋದೀತು? (ಮೊದಲೇ ಇಲ್ಲ.)

ಈಗ ಇನ್ನೊಂದು ಯೋಚ್ನೆ. ಎಲ್ಲರೂ ಕಣ್ಣೀರಿಳಿಸಿ ಬಿಟ್ಟರೆ, ನೇತ್ರಾವತಿಯಲ್ಲಿ ನೀರು ತುಂಬಿ ಜಲಪ್ರಳಯವಾದ್ರೆ? ಆದ್ರಿಂದ ಬೇಡ. ಕಣ್ಣೀರ ಅಭ್ಯಾಸ ಇದ್ದವರೇ ಮಾಡಲಿ. ಬರಗಾಲ ಬರದ ಹಾಗೆ ಒಬ್ಬೊಂದೇ ಸಾಕು

ಈ ಕಣ್ಣೀರವನನ್ನು ನೋಡಿದ್ರೆ ನನಗೆ ತುಂಬಾ ಬೇಜಾರ ಅಗತ್ತೆ. ಆ ಕಣ್ಣೀರವರೇ, ನೀವು ಒಂದು ಕೆಲ್ಸ ಮಾಡಿ. ಈ ಕಾಂಗ್ರೆಸ್ಸಿನವರು ನಿಮಗೆ ಕಣ್ಣೀರಿಡುವಂತೆ ಮಾಡ್ತಾರೆಂದು ನೀವು ಡಾ। ಸದಾಶಿವರಾಯರ ಹತ್ತಿರವೇ ಹೋಗಿ ಹೇಳಬಹುದಲ್ಲವೇ? ಆದರೆ ಅಲ್ಲಿ ಜಾಗಾ ಉಂಟೋ ಇಲ್ಲವೊ ಎಂಬುದು ಸಂಶಯ. ಹೋಗಲಿ, ಆ ಸ್ವರ್ಗದ ಹೊರಗೆ ನಿಂತಾದರೂ ಆ ಕಣ್ಣೀರನ್ನು ಇಳಿಸಿ.

ಪಾಪ! ಒಬ್ಬ ಮಾಪ್ಳೆ ಹುಡುಗ ಬಂದರದಲ್ಲಿ ನಾಗರೀಕತೆಯ ವಾಹನವೊಂದಕ್ಕೆ ಬಲಿಬಿದ್ದ. ಮೋಜುಗಾರರ ಮೋಟಾರ ರೇಸಿನ, ಸ್ಪೀಡಿಗೆ ತನ್ನ ಪ್ರಾಣವನ್ನು ಬಲಿದಾನ ಮಾಡಿ, ಅದರ ಅನಾಹುತದ ಅಂಟನ್ನುಂಟುಮಾಡಿದ. ಅವನ ಆತ್ಮಕ್ಕೆ ಶಾಂತಿಯಿರಲಿ. ಮೋಟಾರುಗಾರನು, ತಾನು ಬಂಡಿಯನ್ನು ಹಗುರ ಬಿಡುತ್ತಿದ್ದೆ ಅಂತಾನೆ. ಮೃತನ ಕಡೆಯವರು "ಅದು ಹೌದು ಕಾರಣ ಹುಡುಗನೂ ಹಗುರ ಪ್ರಾಣಬಿಟ್ಟ" ಅಂತಾ ಇದ್ದಾರಂತೆ. ಅಬ್ಬ, ಆತ ಜೋರು ಬಿಟ್ಟಿದ್ದರೆ, ಎಷ್ಟು ಪ್ರಾಣಗಳು ಹೋಗುತ್ತಿದ್ದುವೋ ದೇವರೇ ಗತಿ ಆಗ ಒಬ್ಬ "ಮಿನರ್ವಾದು ಮಹಿಮೆ ಇದು" ಎಂದ ಮಾತು ನನ್ನ ಕಿವಿಗೆ ಬಿತ್ತು. ಹುಂ ಅಂದೆ.

ಮಲೆಯಾಳಿಗಳು ನಮ್ಮೂರಲ್ಲಿ ಯಥೇಷ್ಟ ಇದ್ದಾರೆ ಶನಿವಾರ ಆದಿತ್ಯವಾರ ಅವರ ವಿವಿಧ ವೇಷ ನೋಡಿ ನಮ್ಮೂರವರಿಗೆ ಸಾಕಾಗಿದೆ ಏನೆಲ್ಲ ರಕ್ಕುಗಳು ಅವರಲ್ಲಿ ಸುಮ್ಮನೆ ಕೈ ಬೆರಳುಗಳು ಮಡಚಿ ಹಿಡಕೊಂಡರೆ, ಅದೊಂದು ರೋಗವಂತೆ ಒಂದು ಸಂಗ್ತಿ ಆಶ್ಚರ್ಯವನ್ನುಂಟುಮಾಡುತ್ತದೆ. ರೋಗದಿಂದಲೂ ಅವರು ಕಾಸು ಮಾಡುತ್ತಾರಲ್ಲ ಅಂತ

ಕಥಕಳಿ ಕೂಟದವರೂ ಒಂದು ನಮ್ಮೂರಲ್ಲಿ ಒಂದು ಕೈ ನೋಡಿ ಹೋದ್ರು ಅವರ ಕಲೆಯೇನೋ ಶ್ರೇಷ್ಠವಾದದ್ದೆ ನಿಜ. ಮೂಕ ಚಲನಚಿತ್ರಕ್ಕೂ ಅದಕ್ಕೂ ಏನೂ ವ್ಯತ್ಯಾಸ ಕಾಣುವುದಿಲ್ಲ

ನೋಡ ಹೋದವರಿಗೆ ಕಥೆ ಗೊತ್ತಿರಬೇಕು ಕಳಿ ಮಾತ್ರ ಅವರು ಮಾಡುತ್ತಾರೆ ನೋಡುವವರಿಗೆ ಕಥೆ ತಿಳಿಯದಿದ್ದಲ್ಲಿ, ಕಳಿಯಿಂದ ಹೆಚ್ಚೇನೂ ತಿಳಿಯುವುದಿಲ್ಲ ಅವರು ತಿರುಗಿಸುವ ಕೈಕಾಲು, ಕಣ್ಣುಗಳಿಗೆ ಏನೋ ವಿಶೇಷ ಅರ್ಥವಿದೆಯಂತೆ ಅದನ್ನು ಕಲಿಯಲಿಕ್ಕೆ ಕೆಲವು ವರ್ಷಗಳು ಬೇಕಾಗಬಹುದು ಕಲ್ತ ಮೇಲೆ ನಾವೇ ಅದನ್ನು ಮಾಡಿತೋರಿಸುವುದಿಲ್ಲವೊ? ಕಲಿಯದಿದ್ದರೆ ನಮಗದು ತಿಳಿಯುವುದಿಲ್ಲ ಕಲ್ತರೆ ನಮಗೆ ಅವರದು ಬೇಡ ಅಂದ ಮೇಲೆ ನಾವು ಅವರನ್ನು ಪ್ರೋತ್ಸಾಹಿಸುವುದು ಹೇಗೆ?

ವಿಶೇಷವೆಂದರೆ ಅವರ , ತಾಳಮದ್ದಳೆ ಮುಂಚೆ ರಣಭೇರಿಗಳು ಹಾಗೆ ಬೊಬ್ಬೆ ಹೊಡ್ದಿದ್ದಾವೊ, ಸಂಶಯ' ಹ್ಯಾಗೆ ಅದನ್ನು ತಯಾರಿಸಿದರೊ? ಸಾಧಾರಣದ್ದಾದರೆ ಅವರ ಆ ಒಂದೆ ಏಟಿಗೆ ಚೂರು ಆಗಿ ಹೋಗ್ತಿದ್ದುವು. ಆ ಶಬ್ದ ಕೇಳುವಾಗ ಕಥಾಕಳಿಯವರು ಬಾಯಿ ಬಿಟ್ರೆ ಎಷ್ಟೊ ವಾಸಿ ಅನ್ನಿಸುತ್ತದೆ ಒಂದು ವೇಳೆ ಅವರ ಮದ್ದಳೆ ಗುಟ್ಟು ನಮ್ಮೂರ ಆಟಗಾರರೊಂದಿಗೆ ಬಿಟ್ಟರೆ, ನಮ್ಮೂರವರ ಗತಿಯೇನು? ನಿದ್ರಾನಾಶದ ಔಷಧಿ ಹುಡುಕಿ ಹೋದರೆ ಆಯಿತು ಇಷ್ಟು ಕಥಕಳಿಯವರು ಮಾಡದಿದ್ರೆ ಸಾಕು

ಎಲ್ಲದಕ್ಕೂ ಇನ್ನೊಂದು ವಿಶೇಷ ಮದ್ದಳೆ ಗದ್ದಲಕ್ಕೂ ಲಕ್ಷಿಸದೆ ಒಬ್ಬ ಗರಿಬ ಪ್ರೇಕ್ಷಕನು ನಿದ್ರೆ ಮಾಡುತ್ತಿದ್ದನು ಅದನ್ನು ನೋಡಿದ ಪೇಟೆಯ ಸುದಾರಿತನೊಬ್ಬನು, "ಎಲಾ, ಇವನು ಪೇಟೆಯವನೋ ಹಳ್ಳಿಯವನು" ಎಂದು ಹೇಳಿ ತನ್ನ ಸ್ನೇಹಿತರೊಂದಿಗೆ ಹಲ್ಲುಬಿಟ್ಟ. ಆಗ ನಾನು ಅಲ್ಲಿ ಇದ್ದೆ. ಆ ಗದ್ದಲಕ್ಕೆ ನಿದ್ದೆ ಮಾಡುವ ಆ ಗರೀಬನ ಸಂಯಮನ ಶಕ್ತಿಯನ್ನು ಕೊಂಡಾಡಿದೆ ನನ್ನ ಹಾಗೆ ಗದ್ದಲಕ್ಕೆ ನಿದ್ದೆ ಬೀಳದೆ ಬಾಯ್ಬಿಡುವ ಪೇಟೆಯವನನ್ನು ನೋಡಿ, ನನಗೆ ಕಣ್ಣೀರವನ ನೆನಪು ಬಂತು. ಬೇಷ್ ಅಂದೆ

(೨೪ನೇ ಪುಟಕ್ಕೆ ಮುಂದುವರಿದಿದೆ.)

LEVER BROTHERS (INDIA) LIMITED

ಪ್ರಖ್ಯಾತಿಯಾದ ಸಿನೇಮಾ ನಟರ ಸೊಗಸಾದ ಭಾವಚಿತ್ರಗಳು **ಉಚಿತ!**

ಖಾಲಿ ಲಕ್ಸ್ ಸೋಪಿನ 5 ರಾಪರ್‌ಗಳನ್ನು ನಿಮ್ಮ ವಿಳಾಸದೊಂದಿಗೆ "Portraits"
ಆ ಟ ಕೃಷ್ಣಮ್ಮಾಚಾರಿ,
11-14, ಅರ್ಮೇನಿಯನ್ ಸ್ಟ್ರೀಟ್, ಮದ್ರಾಸು.
ಈ ವಿಳಾಸಕ್ಕೆ ಕಳುಹಿಸಿ, ಪ್ರಖ್ಯಾತಿಯಾದ ಸಿನೇಮಾ ತಾರೆಯರ ಸೊಗಸಾದ ಭಾವಚಿತ್ರ ಒಂದನ್ನು ಉಚಿತವಾಗಿ ಪಡೆಯಿರಿ.

ಇನ್ನು 2 ವಾರಗಳು ಮಾತ್ರ!

ಶ್ರೀ ರಾಜರಾಜೇಶ್ವರೀ ಪ್ರಸಾದ

ಸಾಹಿತ್ಯಸಾಮ್ರಾಜ್ಯ

ನಾಟಕ ಮಂಡಳಿ, ಮೈಸೂರು

ಇವರು

ಮಂಗಳೂರು ಮೈದಾನಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ

ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ23—1—37ನೇ ಶನಿವಾರ ರಾತ್ರಿ 9-30 ಗಂಟೆಗೆ

ವಿರಾಟಪರ್ವ

ಎಂಬ ನಾಟಕವನ್ನು ಪ್ರದರ್ಶಿಸುವರು.

ತಾ. 24 1—37ನೇ ಭಾನುವಾರ ಸಾಯಂಕಾಲ 6 ಗಂಟೆಗೆ

ಮ್ಯಾಟಿನಿ ಮ್ಯಾಟಿನಿ

ಭೂ-ಕೈಲಾಸ

ನಾಟಕಕ್ಕೆ ಮಾತ್ರ ಸ್ಥಳ ಪರಸ್ಥಳಗಳ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲ್ಲಾ ತರಗತಿಗಳಲ್ಲಿಯೂ ಅರ್ಧದರ ಏರ್ಪಡಿಸಿರುತ್ತದೆ.

ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಯಂ. ವಿ. ಸುಬ್ಬಯ್ಯ ನಾಯುಡು, ಆರ್. ನಾಗೇಂದ್ರ ರಾವ್, ಪ್ರೊಪ್ರೈಟರ್ಸ್.

ಜಗತ್ತಿನ ಯಾವಾಗಲೂ ಮಾರ್ಪಡುತ್ತಿರುವ ಮುಖ.

ನಮ್ಮ ಈ ಜಗತ್ತು ಪ್ರಾರಂಭದಲ್ಲಿ ಈಗ ಇರುವ ಹಾಗೆ ಇರಲಿಲ್ಲವಂತೆ. ನಿಸರ್ಗದ ದೆಸೆಯಿಂದ, ಇನ್ನಿತರ ಕಾರಣಗಳಿಂದ ಅದರ ಮೇಲ್ಭಾಗವು ಬಹಳವಾಗಿ ಮಾರ್ಪಟ್ಟಿರುವುದೆಂದು ಅಂತವಿಜ್ಞಾನಿಗಳ ಮಾತು.

ಪರ್ವತಗಳು ಹೇಗೆ ರಚನೆಯಾದವು? ಪರ್ವತಗಳು ಜನಿಸಿದಾವಾಗ? ಈ ಪ್ರಶ್ನೆಗಳಿಗೆ ಉತ್ತರಕೊಡಲು ಅಸಾಧ್ಯವಾದರೂ, ಅವುಗಳು ಬೇರೆ ಬೇರೆ ಯುಗದವುಗಳು, ಅವುಗಳಲ್ಲಿ ವಿಶೇಷತರದ ಮೇಲ್ಮೈಳಗಾಗಿದೆ ಮಳೆ, ಹಿಮ ಇತ್ಯಾದಿಗಳಿಂದ ಅವುಗಳಲ್ಲಿ ಮಾರ್ಪಾಡುಗಳಾಗುತ್ತವೆಂದು ಧೈರ್ಯದಿಂದ ಹೇಳಬಹುದು; ಸಂಪೂರ್ಣ ನಗರಗಳೆ, ಪರ್ವತಗಳೆ, ಅವುಗಳ ಒಳಗಿರುವ ಬಂಡೆಯಿಂದ ಬಂದೂ ಕೆಳಕ್ಕೆ ಹೋಗಿವೆ, ಯಾ ಮೇಲಕ್ಕೆ ಹೋಗಿವೆ ಎಂಬುದನ್ನು, ಅನೇಕ ಭೂಗರ್ಭ ಶಾಸ್ತ್ರಜ್ಞರು ಕಂಡುಹಿಡಿದಿರುವರು ಭೇದಿಯ ಜನನ, ಅದರ ಬೆಳವಣಿಗೆ ಇತ್ಯಾದಿಯಿಂದ ಭೂಕಂಪ ಇತ್ಯಾದಿಗಳು ಉಂಟಾಗಿ ಭೂಮಿಯು ಕುಸಿಯುವುದು, ಮೇಲಕ್ಕೆ ಹೋಗುವುದುಂಟು.

ನದಿಗಳ ದೆಸೆಯಿಂದ ಪರ್ವತಗಳು ಕರಗುವುದುಂಟು, ನವೀನ ಪರ್ವತಗಳು ಉಂಟಾಗುವುದುಂಟು. ನದಿಯು ಹರಿಯುತ್ತಿರುವಾಗ, ಪರ್ವತಗಳನ್ನು ಕರಗಿಸಿ, ಮಳಲು, ಮಣ್ಣು ಕಲ್ಲು ಇತ್ಯಾದಿಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಿಬಿಡುತ್ತವೆ. ಪರ್ವತಗಳ ಅಂಶಗಳು ಸಾಗರತಳವನ್ನು ಸೇರಿ, ಅಲ್ಲಿ ಬಂಡೆಗಳೂ, ಪರ್ವತಗಳೂ, ರಚನೆಯಾಗುವಂತೆ ಮಾಡುತ್ತದೆ. ಬಂಡೆಗಳು ರಚಿಸಲ್ಪಡುತ್ತವೆ, ಅಥವಾ ಜೀರ್ಣಿಸಲ್ಪಡುತ್ತವೆ ಎಂದು ಭೂಶಾಸ್ತ್ರಜ್ಞರು ಕಂಡುಹಿಡಿದಿರುವರ. ದಡಗಳು ಕೊರೆಯಲ್ಪಡುವುದರಿಂದ, ನದಿಯ ದೆಸೆಯಿಂದ ಸಂಪೂರ್ಣ ನಗರಗಳೆ ಮಾಯವಾಗಬಹುದು, ನವೀನ ನಗರಗಳೆ ರಚನೆಯಾಗಬಹುದು. ನದಿಗಳಿಂದ ಸಾಗಿಸಲ್ಪಟ್ಟ ಮಳಲು, ಕಲ್ಲು ಇತ್ಯಾದಿಗಳಿಂದ ಸಾಗರದ ತಳದಲ್ಲಿ ಬಂಡೆಗಳು ರಚನೆಯಾಗಬಹುದು. ಸಂಯುಕ್ತ ಅಮೇರಿಕಾವು ಈ ಕಾರಣಗಳಿಂದ ವರ್ಷಂಪ್ರತಿ ೭೦೦ ಮಿಲಿಯ ಟನ್ ಮಣ್ಣು ಕಳೆದುಕೊಳ್ಳುತ್ತದೆ. ಅದು ಸ್ವಾತಂತ್ರ್ಯವಾದಂದಿನಿಂದ, ಅಂದರೆ ೧೭೭೬ರಿಂದ ಇಷ್ಟರ ವರೆಗೆ ಕಳೆದುಕೊಂಡ ಮಳಲಿನಿಂದ ೭ ಮೈಲು ಉದ್ದದ ೪೫೦೦ ಅಡಿ ಎತ್ತರವಾದ ಪರ್ವತಗಳು ರಚನೆಯಾಗಬಹುದಿತ್ತು. ಇಷ್ಟೆಲ್ಲವೂ ನಷ್ಟವಾಗಲಿಲ್ಲ. ಈ ಮಣ್ಣು ನದಿಯ ಮುಖಗಳಲ್ಲಿ ಸಮುದ್ರ ತಳವನ್ನು ಸೇರಿ ಅಲ್ಲಿ ಒತ್ತಾಟವು ಹೆಚ್ಚಿದರಿಂದ ಅದರ ದೆಸೆಯಿಂದ ಸಮುದ್ರದ ಹತ್ತಿರದ ಭೂಪ್ರದೇಶದಲ್ಲಿ ನೂತನವಾದ ಪರ್ವತಗಳು ರಚನೆಯಾಗಿವೆ.

ಲಂಡನ್ ನಗರವು ಕೆಳಕ್ಕೆ ಹೋಗುತ್ತಿದೆ! ಐರೋಪ್ಯದ ಸ್ಕಾಂಡಿನೇವಿಯಾ ಎಂಬ ಪರ್ವತಾವಳಿಯು ತಿರುಗಲಾರಂಭಿಸಿದೆ. ಇಂಗ್ಲಾಂಡು ತಿರುಗುತ್ತಾ ಇದೆ. ಈಶಾನ್ಯ ದಿಕ್ಕಿನಲ್ಲಿದ್ದ ಅದು, ನೈಋತ್ಯ ದಿಕ್ಕಿಗೆ ತಿರುಗುತ್ತಿದೆ!

ಪ್ರತಿ ಒಂದು ಶತಮಾನದಲ್ಲಿ ಲಂಡನು ಸರಾಸರಿಯಲ್ಲಿ ೯ ಇಂಚು ಕೆಳಕ್ಕೆ ಹೋಗುತ್ತಿದೆ. ಹೀಗೆನೆ ಅದು ಕೆಳಕ್ಕೆ ಹೋಗುವುದಾದರೆ, ಇನ್ನೊಂದು ಐದು ಶತಮಾನ ಯಾ ಹತ್ತು ಶತಮಾನದೊಳಗೆ ಲಂಡನು ಬಹಳವಾಗಿ ಕೆಳಕ್ಕೆ ಹೋಗುವುದರಿಂದ ತೇಮ್ಸ್ ನದಿಯ ದಡಗಳನ್ನು ಭದ್ರವಾಗಿಡಲು ಕಷ್ಟಸಾಧ್ಯವೆನಿಸುವುದು.

ಇಂಗ್ಲಾಂಡಿನ ಡನ್‌ವಿಚ್ ಎಂಬ ಇಗರ್ಜಿ ಮನೆಮಠಗಳಿಂದ ಕೂಡಿದ ಒಂದು ಸಂಪೂರ್ಣ ನಗರವು, ಸಮುದ್ರ ದಡದ ಕೊರೆಯುವಿಕೆಯಿಂದ ಮಾಯವಾಗಿರುತ್ತದೆ. ಕೆಲವು ಕಡೆಗಳಲ್ಲಿ ಸಮುದ್ರವು ಹಿಂದಕ್ಕೆ ಸರಿಯುತ್ತಿದ್ದು, ನೂತನ ಪ್ರದೇಶಗಳು ಅಲ್ಲಿ ರಚನೆಯಾಗುತ್ತವೆ.

ಪರ್ವತಗಳ ರಚನೆಯಾಗಬೇಕಾದರೆ ವಿಶೇಷ ತರದ ಶಕ್ತಿಯು ಬೇಕು. ಅದು ಹೇಗೆ ಪರಿಣಮಿಸುತ್ತದೆ. ಭೂಗರ್ಭದಲ್ಲಿ ಶಕ್ತಿಯು ಮಹಾ ಶೇಖರವಿದೆ. ಅದು ವಿವಿಧ ರೂಪದಲ್ಲಿದೆ. ನದಿಗಳಿಂದ ಸಮುದ್ರದ ತಳದಲ್ಲಿ ಕೂಡುತ್ತಿರುವ ಮಳಲಿನ ಶೇಖರದಿಂದ ಉಂಟಾದ ಒತ್ತಾಟದಿಂದ ಪರ್ವತಗಳು ಉಂಟಾಗುತ್ತವೆ. ಅಮೇರಿಕಾದ ರೊಕ್ಕಿಸ್ ಮತ್ತು ಎಂಡಿಸ್ ಇದೇ ಕಾರಣದಿಂದ ಉಂಟಾದ ಪರ್ವತಾವಳಿಗಳು.

ಆದರೆ ಪರ್ವತಗಳು ಹೇಗೆ ಉಂಟಾಗುತ್ತವೆ ಎಂಬುದರ ಕುರಿತು ಸರಿಯಾದ ಜ್ಞಾನವು ಇಷ್ಟರತನಕ ಯಾರಿಗೂ ಆದದ್ದಿಲ್ಲ. ಭೂಗರ್ಭದೊಳಗೆ ಉಂಟಾಗುವ ರೇಡಿಯೊ ಶಕ್ತಿ, ಇತ್ಯಾದಿ ವಿವಿಧ ತರದ ಶಕ್ತಿಯು ಪರ್ವತಗಳ ಜನನಗಳ ಕಾರಣವಂತೆ. ಒಳಗಿನ ಶಕ್ತಿಗಳ ದೆಸೆಯಿಂದ ಭೂಮಿ ಹೊರಗಿನ ಮೈಮೇಲಿ ವಿಶೇಷ ತರದ ಮಾರ್ಪಾಟುಗಳು ನಡೆಯುತ್ತವೆ. ಪರ್ವತರಚನೆಗೆ ಭೂಕಂಪ ಮುಖ್ಯ ಕಾರಣವಲ್ಲವಂತೆ. ಭೂಕಂಪದ ಭೂಮಿಯು ಇಷ್ಟರತನಕ ಇಂಚುಗಳಷ್ಟು ಮೇಲಕ್ಕೆ ಹೋಗಲಿಲ್ಲವಂತೆ. ಭೂಮಿಯ ಒಳಗಿರುವ ವಿಶೇಷ ತರದ ಶಕ್ತಿಯು ಭೂಮಿಯ ಮೇಲೆ ನಡೆಯುತ್ತಿರುವ ಕೆಲವು ವಿಶೇಷ ತರದ ಮಾರ್ಪಾಟುಗಳಿಗೆ ಕಾರಣವೆಂದು ಪ್ರವೀಣ ಭೂಶಾಸ್ತ್ರಜ್ಞರು ಕಂಡುಹಿಡಿದಿರುವರು.

ಈ ಜಗತ್ತು ಎತ್ತ ಸಾಗುತ್ತಿದೆ?

ಬಹಳ ಹಿಂದಿನ ಕಾಲದಲ್ಲಿ ಒಂದು ಮಾರ್ಪಾಡು ನಡೆಯಬೇಕಾದರೆ ೫೦ ಸಾವಿರ ವರ್ಷಗಳು ಬೇಕಾಗಿದ್ದವು. ಆದರೆ, ಈಗಿನ ಕಾಲದಲ್ಲಿ ವರ್ಷಂಪ್ರತಿ ೫೦ ಸಾವಿರ ಮಾರ್ಪಾಡುಗಳು ನಡೆಯುತ್ತವೆ. ಪ್ರಗತಿಯು ಅತಿ ರಭಸದಿಂದ ನಡೆಯುವ ಕಾಲ ಇಂದಿನದು. ವಿಜ್ಞಾನದಿಂದ ಮಾನವ ಸೇವೆ ಮಾಡುವ, ಆತನಿಗೆ ಅತಿಶಯವಾದ ಸಂಪತ್ತು ಇತ್ಯಾದಿಗಳನ್ನು ಉಂಟುಮಾಡುವ, ರಕ್ಷಣೆ, ಯುದ್ಧ ಇತ್ಯಾದಿಗಳಿಗೆ ಬೇಕಾದ ಒಡವೆಗಳನ್ನು ಸಿದ್ಧಮಾಡುವ ಉಪಾಯಗಳನ್ನು ಕಂಡು ಹಿಡಿಯುವರೆ ಅಸಂಖ್ಯಾಕ ವಿಜ್ಞಾನಿಗಳು ಜಗತ್ತಿನ ವಿವಿಧ ಕಡೆಗಳಲ್ಲಿ ಅನೇಕ ಶೋಧನಾಲಯಗಳಲ್ಲಿ ಪರಿಶ್ರಮಿಸುತ್ತಿದ್ದಾರೆ. ಪಾಶ್ಚಾತ್ಯದ ಪ್ರಗತಿ ಹೊಂದಿದ ಜನಾಂಗಗಳು ತಮ್ಮ ಸಾಂಪತ್ತಿಕ ಸ್ಥಿತಿಯನ್ನುದ್ಧರಿಸುವ ಕಾರಣದಿಂದ, ವಿಜ್ಞಾನ ಶೋಧನಾಲಯಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಡುತ್ತಿರುವರು. ಇದಕ್ಕಾಗಿಯೇ ಜರ್ಮನಿಯು, ನಾಲ್ಕು ವರ್ಷದ ಯೋಜನೆಯೊಂದನ್ನು ಹೊರಡಿಸಿದೆ. ಇಂದಿನ ರಷ್ಯಕ್ಕೆ ವಿಜ್ಞಾನವೇ ಪರಮ ಧರ್ಮವಾಗಿರುತ್ತದೆ. ಅದುವೇ ಅವರ ದೇವರು, ತತ್ವ ಇತ್ಯಾದಿ. ವಿಜ್ಞಾನದಿಂದ ಮಾನವ ಸೇವೆ ಮಾಡಿಕೊಂಡು ಮಾನವ ವರ್ಗವನ್ನು ಉದ್ಧರಿಸುವುದೇ ಸೋವಿಯಟ್ ರಷ್ಯದ ಮುಖ್ಯ ಧ್ಯೇಯವಾಗಿರುತ್ತದೆ. ಅಮೇರಿಕಾದ ಸಂಯುಕ್ತ ರಾಜ್ಯಗಳಲ್ಲಿ ೧೬೦೦ ವಿಜ್ಞಾನ ಶೋಧನಾಲಯಗಳಿವೆ. ನೂತನವಾದ ಕೈಗಾರಿಕೆಗಳನ್ನು ಕಂಡು ಹಿಡಿಯುವುದು ಅವರಿಂದ ನಿರುದ್ಯೋಗಿ ಜನರಿಗೆ ಉದ್ಯೋಗವನ್ನು ದೊರಕಿಸಿಕೊಡುವುದು ಅವುಗಳ ಕರ್ತವ್ಯವಾಗಿರುತ್ತದೆ. ಮುಸಲೋನಿಯು ತನ್ನ ವಿಜ್ಞಾನಿಗಳಿಗೆ ಬಹಳ ಉತ್ತೇಜನ ಕೊಡುತ್ತಿದ್ದಾನೆ. ಜನಾಂಗಗಳ ಅಭಿವೃದ್ಧಿ ಆದರ ದೊಡ್ಡ ಉತ್ತರವಾದ ಮಾರ್ಪಾಟುಗಳನ್ನು ಸಾಧಿಸುವುದೇ ವಿಜ್ಞಾನ ಶೋಧನಾಲಯಗಳಲ್ಲಿ ಪರಿಶ್ರಮಿಸುತ್ತಿರುವ ಜನಾಂಗಗಳ ಮುಖ್ಯ ಉದ್ದೇಶವಾಗಿರುತ್ತದೆ. ಹೀಗಾಗಿ ದಿನೇ ದಿನೇ ಮಾರ್ಪಾಡುಗಳು ನಡೆಯುತ್ತಾ ಇದ್ದು, ಜನವರ್ಗದ ಕ್ರಮನಿಯಮ, ಧರ್ಮ ವರ್ತನೆ ಇತ್ಯಾದಿಗಳು ಬದಲಾಗುತ್ತಾ ಬಂದಿವೆ. ಸಮಸ್ತ ಜಗತ್ತಿನ ಸ್ಥಿತಿಯು ಇದೇ ವಿಧವಾಗಿರುತ್ತದೆ.

ಪ್ರಾಚೀನ ಹಿಂದೂದೇಶದ ನ್ಯಾಯ

ಪ್ರಾಚೀನ ಹಿಂದೂದೇಶದಲ್ಲಿ ನ್ಯಾಯ ವ್ಯವಹರಣೆಯು ಪಕ್ಷಪಾತವಿಲ್ಲದೆಯೂ, ಅತಿ ಜಾಗ್ರತೆಯಿಂದಲೂ ನಡೆಯುತ್ತಿತ್ತು. ಆದರೆ, ನ್ಯಾಯಸ್ಥಾನಗಳ ಇತ್ಯರ್ಥಗಳು ಅರಸನಿಗೆ ಬರೇ ಶಿಫಾರಸ್ಸುಗಳಾಗಿದ್ದವು. ಅವರ ತೀರ್ಮಾನವನ್ನು ಆತನು ಸ್ವೀಕರಿಸಲೂ ಬಹುದು, ತಿರಸ್ಕರಿಸಲೂ ಬಹುದಾಗಿತ್ತು. ಕ್ರಿ. ಪೂ. ಎರಡನೇ ಶತಮಾನದಲ್ಲಿ ಶೂದ್ರಕನೆಂಬ ಅರಸನ ಕಾಲದಲ್ಲಿ, ನ್ಯಾಯ ವ್ಯವಹರಣೆಯು ಯಾವ ರೀತಿಯಲ್ಲಿ ನಡೆಯುತ್ತಿತ್ತೆಂಬುದರ ಕುರಿತ 'ವಸಂತಸೇನಾ' ಎಂಬ ನಾಟಕದಿಂದ ಜ್ಞಾನಹೊಂದಬಹುದು.

ಆಗಿನ ಕಾಲದ ನ್ಯಾಯಾಸ್ಥಾನಗಳು, ಅರಸರಿಗೆ ನ್ಯಾಯವ್ಯವಹರಣೆಯ ಕುರಿತು ಬರೆ ಶಿಫಾರಸು ಮಾಡುವ ಸಂಸ್ಥೆಗಳಾಗಿದ್ದವು. ನ್ಯಾಯಾಸ್ಥಾನದ ಇತ್ಯರ್ಥಗಳು ಸಿಂಧುವಾಗತಕ್ಕವುಗಳಲ್ಲವಾಗಿತ್ತು. ಎಲ್ಲವೂ ಅರಸರ ಮೇಲೆ ಹೊಂದಿಕೊಂಡಿತ್ತು. ಸಾಧಾರಣ ಈಗಿನ ಪ್ರಿವಿ ಕೌನ್ಸಿಲಿನ ಕ್ರಮವು ಹೀಗೆನೇ ಇರುತ್ತದೆ. ಪ್ರಿವೀ ಕೌನ್ಸಿಲಿನವರು, ನ್ಯಾಯವ್ಯವಹಾರದ ಕುರಿತ ಚಕ್ರವರ್ತಿಯರಿಗೆ ಬರೇ ಶಿಫಾರಸ್ಸನ್ನು ಮಾತ್ರ ಮಾಡತ್ತಿರುವರು. ಆದರೆ ಪ್ರಿವೀ ಕೌನ್ಸಿಲಿನ ಇತ್ಯರ್ಥವನ್ನು ಬಿಟ್ಟು ಚಕ್ರವರ್ತಿಯ ಅನ್ಯಥಾ ವರ್ತಿಸುವುದಿಲ್ಲ.

ವಕೀಲರಿರುವ ಕ್ರಮವು ಆಗ ಇರಲಿಲ್ಲ. ನ್ಯಾಯಾಧೀಶರೇ ಖುದ್ದಾಗಿ ಸಾಕ್ಷಿಗಳನ್ನೂ, ವಾದಿ ಪ್ರತಿವಾದಿಗಳನ್ನೂ ಪರೀಕ್ಷಿಸ ಬೇಕಿತ್ತು. ಆದರೆ ಖುದ್ದಾಗಿ ಸತ್ಯವನ್ನು ಹುಡುಕಿ ತೆಗೆಯಬೇಕಾಗಿತ್ತು. ಈ ಕುರಿತ ನ್ಯಾಯಾಧೀಶರು, ಒಂದು ಕ್ರಮವನ್ನು ಅನುಸರಿಸಬೇಕಾಗಿತ್ತು. ನ್ಯಾಯಾಧೀಶರಿಗೆ ಸಹಾಯಕರಾಗಿ ಇಬ್ಬರು ಎಸ್ಸೆಸರರಿದ್ದರು. ನ್ಯಾಯ ವ್ಯವಹಾರವು ಆದಷ್ಟು ತ್ವರಿಯಿಂದ ನಡೆಯಬೇಕೆಂಬ ಕಟ್ಟಾಯವಿತ್ತು. ಸತ್ಯವು ಸಾಕ್ಷಿಗಳಿಂದ ಪಡೆಯಲು ಅಸಾಧ್ಯವಾದರೆ, ಅವರ ಮೇಲೆ ಕೆಲವು ಹಿಂಸೆಗಳನ್ನು ನಡೆಯಿಸಿ, ಸತ್ಯವನ್ನು ಕಂಡುಹಿಡಿಯಬಹುದಿತ್ತು.

ಸಾಕ್ಷಿಗಳಿಂದ ಒಬ್ಬನು ತಪ್ಪಿತನೆಂದಾದರೆ, ಆತನು ತನ್ನ ತಪ್ಪುಗಳನ್ನು ಹೇಳಿಕೊಳ್ಳಬೇಕೆಂಬತ್ತು. ಮಹಾ ಶಿಕ್ಷೆಗೊಳಗಾದ ಅಪರಾಧಿತನನ್ನು ತುಂಬಾ ದ್ರವ್ಯ ಕೊಟ್ಟಲ್ಲಿ ಅಥವಾ ಅರಸರಲ್ಲಿ ಯಾವದಾದರೂ ಕಾರಣಗಳು ನಡೆಯುವುದಿದ್ದರೆ, ಬಿಡುಗಡೆ ಮಾಡುತ್ತಿದ್ದರು. ಶಿಕ್ಷೆ ವಿಧಿಸುವ ಕಟುಕನಿಗೆ ಕೆಲವು ಅಧಿಕಾರಗಳಿದ್ದುವು. ಕೈದಿಯು ತಪ್ಪಿತನಲ್ಲವೆಂದು ಕಂಡುಬಂದರೆ ಆತನನ್ನು ಬಿಟ್ಟು, ನಿಜವಾದ ತಪ್ಪಿತಸ್ಥನನ್ನು ಕಂಡುಹಿಡಿಯಲು ಅವನಿಗೆ ಅಧಿಕಾರವಿತ್ತು.

ಸಾಲಕೊಟ್ಟವನಿಗೆ ಸಾಲ ಕೊಂಡವನ ಮೇಲೆ ಸಂಪೂರ್ಣ ಅಧಿಕಾರವಿದ್ದಿತು.

ಅರಸನು ಸರ್ವಾಧಿಕಾರಿಯಾಗಿದ್ದನು. ಆತನ ಕ್ರೂರನಾದರೆ, ಪ್ರಜೆಗಳಲ್ಲಿ ಅಸಮಾಧಾನವುಂಟಾಗಿ, ಸಂದರ್ಭಾನುಸಾರ ದಂಗೆಯೆಬ್ಬಿಸುವ ಸಿದ್ಧತೆಗಳು ನಡೆಯುತ್ತಿದ್ದವು. ಅರಸನಿಗೆ ಸಹಾಯಕರಾಗಿ ಬೋಧಕರ (ಕೌನ್ಸಿಲರ್ಸ್) ಒಂದು ಮಂಡಳಿಯ ಪದ್ಧತಿಯುತ್ತು. ಅರಸನು, ಸೇನೆಯ ಅಧಿನಾಯಕನಾಗಿದ್ದನು. ರೆವಿನ್ಯೂ, ನ್ಯಾಯ, ಪೋಲೀಸ್ ಇತ್ಯಾದಿ ವಿವಿಧ ಇಲಾಖೆಗಳು ಆಗಿನ ರಾಜ್ಯಗಳಲ್ಲಿ ಇತ್ತು.

ಜಾತಿವಾರು ಕ್ರಮಕ್ಕೆ ಆಗಿನ ಕಾಲದಲ್ಲಿ ಹೆಚ್ಚಿನ ಮನ್ನಣೆಯು ದೊರಕುತ್ತಿತ್ತು. ಬ್ರಾಹ್ಮಣರಿಗೆ ಭಾರೀ ಗೌರವವು ಸಲ್ಲುತ್ತಿತ್ತು. ಅವರಿಗೆ ವಿಶೇಷ ತರದ ಹಕ್ಕು ಬಾಧ್ಯತೆಗಳಿದ್ದವು (ಈ ಕಾರಣದಿಂದಲೇ ಬ್ರಾಹ್ಮಣರಿಂದಲೆ ನಮ್ಮ ಸಮಾಜವು ಕೆಟ್ಟುಹೋದುದು.) ಮಿಶ್ರ ವಿವಾಹಗಳ ಆಗಿನ ಕಾಲದಲ್ಲಿ ನಡೆಯುತ್ತಿದ್ದವು.

ಗುಲಾಮಗಿರಿಯು ಒಂದು ಸಾಮಾನ್ಯವಾದ ವಿಚಾರವಾಗಿತ್ತು. ಗುಲಾಮರನ್ನು ಮಾರಾಟಮಾಡಬಹುದಿತ್ತು. ಪಡಕೊಳ್ಳಬಹುದಿತ್ತು. ಜೂಜಾಡುವುದು, ನ್ಯಾಯಪ್ರಕಾರ ಕೆಲವು ಕಟ್ಟುಗಳನ್ನು ಅನುಸರಿಸಿ, ಜೂಜಿನ ಸಂಸ್ಥೆಗಳನ್ನು ನಡೆಯಿಸುವುದು ಒಂದು ಸಾಮಾನ್ಯ ಪದ್ಧತಿಯಾಗಿತ್ತು.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ ಗೋಪಾಲಾಚಾರ್ಲುರವರ

ಬಾಲಭಾಸ್ಕರ.

(ಗವರ್ನಮೆಂಟ್ ರಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ

ವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು

ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು:— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಅನುಕ್ರಮಣಿಕೆ.

ಲೇಖನಗಳು ... ೩
[illegible] ಪ್ರವಾಸ ... ೪
[illegible] ... ೫
[illegible] ... ೬
[illegible] ರಾಷ್ಟ್ರಾಧ್ಯಕ್ಷರ ಪತ್ರ ... ೭
[illegible] ನ್ಯಾಯ ... ೯
ವಿವಿಧ ಸಮಾಚಾರಗಳು ... ೧೧
[illegible]
ಅಮೇರಿಕ ವಿದ್ಯಾಶ್ರಮಗಳು ... ೧೩
ಎದೆಯ ಸುತ್ತಳತೆಯ ೨೦ ಇಂಚಿನಷ್ಟು ... ೧೪
ಯೂರೋಪಿನ ಕರ್ಮಫಲ ... ೧೫
ಸ್ಫುಟವಿಚಾರಗಳು ... ,,
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ... ೧೭
ಗ್ರಾಮ ವೈದ್ಯಕ ಸಹಾಯಕೆ ... ೧೮

ತಾ. ೨೨ನೇ ಶುಕ್ರವಾರ ಜನವರಿ ೧೯೩೭

ಸ್ವದೇಶಾಭಿಮಾನಿ

ಯೂರೋಪಿನ ಕರ್ಮಫಲ

ತಂದೆಯು ಪಾಪವನ್ನು ಮಗನು ಉಣ್ಣುವನೆಂಬ ಗಾದೆಯಂತೆ, ಒಂದು ತಲಾಂತರದವರ ಕರ್ಮಗಳ ಫಲಗಳನ್ನು ಮುಂದಣ ತಲಾಂತರದವರು ಅನುಭವಿಸಬೇಕಾಗುತ್ತದೆ. ಬಿತ್ತಿದನ್ನು ಕೊಯ್ಯುವುದಕ್ಕೇ ಮಾತವಲ್ಲದೆ ಕೊಯ್ದುದನ್ನು ಅಡುಗೆ ಮಾಡಲೂ ಅವರು ಬಾಧ್ಯರಾಗುತ್ತಾರೆ. ಶಾಂತಿ ತಾಟಸ್ಥ್ಯ ಭಾವನೆಗಳ ಮಾತು ಒಂದು ಕಡೆ ಸಾಗುತ್ತಿರುವಾಗಲೇ ಮತ್ತೊಂದು ಕಡೆ ಯೂರೋಪು ಹೊಂಡಕ್ಕಿಳಿಯುತ್ತಿರುವುದಕ್ಕೂ ಕಾರಣವಿದೇ. ಜರ್ಮನಿಯು ತುಫಾನೇಳುವುದಕ್ಕೆ ಕೇಂದ್ರವಾಗಿ ಇಂದು ತೋರುತ್ತಿರುವುದಕ್ಕೆ ನಾವು ಸಂತಾಪಪಡಬೇಕಾಗಿದೆ, ನಿಜ, ಆದರೆ ಅದು ಹೀಗೆ ಕೆಣಕಲಿಚ್ಛಿಸುವುದಕ್ಕೆ ಪ್ರತಿಹಿಂಸಾರೂಪವಾಗಿ ಅಂದಿನ ಶಾಂತಿಯು ಕರಾರೇ ಕಾರಣ. ಸಮುದ್ರ ... ಮಹಾಯುದ್ಧವು ಮುಗಿಯಲು ಭೂಗೋ... ವಿಜಯಿಯಾದ ಫ್ರಾನ್ಸು ಈ ಶಾಂತಿಯು ... ವಿಧಿಸಿತು. 1925ನೆ ಇಸವಿಯ ವರೆಗೆ ... ದರೆ ಲೊಕಾರ್ನೊ ಒಪ್ಪಂದವಾಗುವ ತನಕ ರಾಜಕೀಯ ಮತ್ತು ಸಾಂಪತ್ತಿಕ ವಿಚಾರಗಳಲ್ಲಿ ಜರ್ಮನಿಗೆ ಫ್ರಾನ್ಸು ಕೊಟ್ಟಿರುವ ಸಂಕಷ್ಟ ಪರಂಪರೆಗಳು ಎಂತಹ ಜನಾಂಗದ ಮನಸ್ಸಿನಲ್ಲಾದರೂ ವಿಕಲ್ಪಗಳನ್ನು ಉಂಟುಮಾಡುವಂತಹದಾಗಿದ್ದುವು. ಜರ್ಮನಿಯ ವಿರುದ್ಧ ನಡೆದ ಯುದ್ಧವು ವ್ಹಾರ್ಸೆಲ್ಸ್‌ದಲ್ಲಿ 1919ರಲ್ಲಿ ಮುಗಿಯುತೆನ್ನುವ ಬದಲು, ಲೊಕಾರ್ನೊದಲ್ಲಿ 1925ರಲ್ಲಿ ಮುಗಿಯಿತೆನ್ನಬಹುದು. ಪೋಲೆಂಡಿನಲ್ಲೂ ಜೆಕೊಸ್ಲೊವಾಕಿಯಾದಲ್ಲೂ ಈಗಲೂ ಮಿಲ್ಲಿಯಗಟ್ಟಲೆ ಜರ್ಮನರಿದ್ದು ಪರತಂತ್ರಕ್ಕೊಳಪಟ್ಟಿರುವರು. ಜರ್ಮನರು ರ್ಹೈನ್ ನದಿ ದಾಟಿ ಫ್ರಾನ್ಸಿಗೆ ಬರುವಲ್ಲಿ ಇಂಗ್ಲೆಂಡು ಫ್ರಾನ್ಸಿನ ಸಹಾಯಕ್ಕೆ ಬರುವುದಾಗಿ ಹೇಳಿಕೆಯುದ್ದರೂ ಪೂರ್ವಗಡಿಗಳಲ್ಲಿ ಜರ್ಮನಿಯು ಮುಂದೊತ್ತಿದರೆ ಇಂಗ್ಲೆಂಡು ಹಾಗ್ಯೇನೂ ಜರ್ಮನಿಗೆ ವಿರುದ್ಧವಾಗಿ ನಿಲ್ಲುವಂತೆ ಇಂಗ್ಲೆಂಡು ಫ್ರಾನ್ಸಿಗೆ ದೃಢವಚನ ಕೊಟ್ಟುದಿಲ್ಲ, ಪೋಲೆಂಡಿನ ಅಂತದಲ್ಲಿ ಜರ್ಮನಿಯು ಸದಾಕಾಲವೂ ಇರಬೇಕೆಂದು ಇಂಗ್ಲೆಂಡು ಆಶಿಸಿಲ್ಲ. ಹೀಗಿರುವುದರಿಂದ ಜರ್ಮನ್ ಭಾಷೆಯನ್ನಾಡುವ ಕೋಟ್ಯಾಂತರ ಜನಗಳು ಜರ್ಮನಿಯ ಪೂರ್ವಗಡಿಯ ಆಚೆಗೆ ದೃಷ್ಟಿ [illegible]ತ್ತಿರುವುದರಲ್ಲಿ ವಿಚಿತ್ರವೇನೂ ಇರುವುದಿಲ್ಲ. ಜರ್ಮನಿಯು ಸ್ವಂದಿಕಳೆಗಟ್ಟಿ ಚಿರಕಾಲವೂ ಇರುವ ಹಾಗೆ ಫ್ರಾನ್ಸು ಬಹಳ ಪ್ರಯತ್ನಪಟ್ಟಿರುವುದು. ಅದಕ್ಕಾಗಿ ವ್ಹಾರ್ಸೆಲ್ಸ್‌ದಲ್ಲಿ ಜರ್ಮನಿಯನ್ನು ಬಂಧಿಸಿದ್ದ ಸಂಕೋಲೆಯ ಗೊಣಸುಗಳನ್ನು ಒಂದೊಂದಾಗಿಯೆ ಜರ್ಮನಿಯು ಕಳಚಿಕೊಂಡಿದೆ. ಜಗತ್ತಿನ ಜನಾಂಗಗಳೊಳಗೆ ಜರ್ಮನಿಯು ತಲೆಯೆತ್ತಿ ನಿಲ್ಲಬೇಕೆಂಬ ಆಶೆಯನ್ನು ಪ್ರದರ್ಶಿಸುತ್ತಲಿದೆ.

ಫ್ರಾನ್ಸಿಗೆ ಇದೊಪ್ಪಲಾರದು. ಫ್ರಾನ್ಸಿನೊಳಗೆ ಜರ್ಮನರು ಪೂರ್ವಗಡಿಯಿಂದ ನುಗ್ಗುವರೆಂದು ಅಂಜಿಕೆಯಿದೆ. 1870ರಿಂದ ಇದೆರಡು ಸಲ ಫ್ರಾನ್ಸಿನೊಳಕ್ಕೆ ಜರ್ಮನರು ಜರ್ಮನರು ನುಗ್ಗಿದುದುಂಟು. ಮೊದಲನೆ ಸಲ ಫ್ರಾನ್ಸೇ ಜರ್ಮನಿಯನ್ನು ಕೆಣಕಿಸಿದ್ದಿತು. ಎರಡನೆ ಸಲ ನುಗ್ಗಾಟವಾದುದಕ್ಕೆ ಮೊದಲನೆ ಅಭಿಯೋಗತಿ ಕಾರಣವಾಗಿದ್ದಿತು. ಸಾಮ್ರಾಜ್ಯಸ್ಥಾಪನೆಗೆ ಫ್ರಾನ್ಸು ದುಡುಕಿದ್ದುದೇನೂ ಕಡಮೆಯಾಗಿಲ್ಲ. ತನ್ನ ಹೆಗ್ಗಳಿಕೆ ಹೆಚ್ಚಿಸಿಕೊಳ್ಳಲು ಫ್ರಾನ್ಸು ಹಿಂತೆಗೆದಿಲ್ಲ. ಫ್ರಾನ್ಸಿನ ಜನಸಂಖ್ಯೆ ಎಂದಿನಿಂದಲೂ ಒಂದೇ ಸಂಖ್ಯೆಯಾಗಿದೆ. ಫ್ರಾನ್ಸಿಗೆ ಆದುದರಿಂದ ಹೆಚ್ಚಿನ ಭೂಪ್ರದೇಶಗಳು ನೆಲೆನಿಲ್ಲಲು ಬೇಕಾಗಿಲ್ಲ. ಹೀಗಿದ್ದರೂ ಏಸ್ಯ ಆಫ್ರಿಕಗಳಿಂದ ದೊಡ್ಡ ಭೂಭಾಗಗಳಲ್ಲಿ ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಫ್ರಾನ್ಸು ಅತ್ಯಾತುರಗೊಳ್ಳುತ್ತಿದೆ. ಇದರಿಂದ ಜಗತ್ತಿನ ಶಾಂತಿಯು ಕಡದದೆ ಹೇಗೆ ಉಳಿಯಬಹುದು? ಸಾಮ್ರಾಜ್ಯವಿಚಾರವು ಒಮ್ಮೆ ತಲೆಗೆ ಹತ್ತಿತೆಂದರೆ, ಶಾಂತಿಯ ವ್ಯಾಖ್ಯಾನವು ಅಲ್ಲಿಗೇ ಮುಗಿದು, ಫ್ರಾನ್ಸು ಯುದ್ಧರಂಗಕ್ಕೆ ಇಳಿಯದೆ ಇರಲಾರದು.

ಅಬಿಸೀನಿಯವು ಹಿಂಸೆಗೊಳಪಟ್ಟು ವರ ... ಹೋನ್ಮುಖವಾಗಿದ್ದ ಕಾಲದಲ್ಲಿ, ಫ್ರಾನ್ಸಿನ ದೃಷ್ಟಿಯು ಅಚೆ ಇದ್ದರೂ, ಕಣ್ಣೀರ ಇಳಿಯಲಿಲ್ಲ. ಸ್ಪೈನು ನೆರೆಯ ರಾಜ್ಯ, ಅಲ್ಲಿನ ಅಂತಃಕಲಹವು ಜೋರಾಗಿರುವಾಗಲೂ ಫ್ರಾನ್ಸು ನಿಷ್ಪ್ರಯೋಜಕವಾದ ತಾಟಸ್ಥ್ಯ ತತ್ವವನ್ನೆಸಾರುತ್ತಿದೆ. ಆದರೆ ಮೊರೊಕ್ಕೊವಿನಲ್ಲಿ ಈಗ ಉಂಟಾಗಿರುವ ವಿದ್ಯಮಾನಗಳಿಂದ ಫ್ರಾನ್ಸು ಕದಡಿದೆ. ಸ್ಪೈನಿನಲ್ಲಿ ಏನೇ ಆಗುತ್ತಿರಲಿ, ಸ್ಪೈನಿಗೆ ಸೇರಿರುವ ಮೊರೊಕ್ಕೊವಿನಲ್ಲಿ ಮಾತ್ರ ಜರ್ಮನ ಸೇನೆಗಳು ಉಳಿಯಕೂಡದು ಎಂದು ಫ್ರಾನ್ಸಿನ ಕೂಗ. ಅಲ್ಲಿ ಆ ಸೇನೆಗಳ ಇದ್ದಾರೆಯೆ ಎಂಬುದನ್ನು ನಿಜವಾಗಿ ತಿಳಿಯುವುದು ಕಷ್ಟವಾಗಿದೆ. ಜರ್ಮನರ ಸಹಾಯದಿಂದ ಅಲ್ಲಿ ಬಂದರುಗಳನ್ನು ಬಲಪಡಿಸುತ್ತಾರೆ. ನಿಜ ಆದರೆ ಇದೊಂದು ಕಾರಣದಿಂದ ಮಾತ್ರ ಮೊರೊಕ್ಕೊವಿನಲ್ಲಿ ಜರ್ಮನಿಯು ಕೈಇಕ್ಕಿ ಹತಾಗುವುದಿಲ್ಲವಾಗಿ ಬ್ರಿಟಿಷ ಅಭಿಪ್ರಾಯ. ಫ್ರೆಂಚರಿಗೆ ತಾವು ವಿರುದ್ಧರಲ್ಲವೆಂದು ಮೊರೊಕ್ಕೊದಲ್ಲಿನ ಸ್ಪೈನಿನ ಜನಗಳೂ ಹೇಳುತ್ತಿರುವರು.

ಆದರೂ ಫ್ರಾನ್ಸಿನಲ್ಲಿ ದೊಡ್ಡ ಗಲಭೆಯದ್ದಿದೆ. ಮೊರೊಕ್ಕೊವಿನಲ್ಲಿ 8000 ಜರ್ಮನರು ಬಂದಿಳಿದಿರುವರಾಗಿಯೂ ಅಲ್ಲಿಂದ ಜಲಾಂತರ್ಗಾಮಿ ನಾವೆಗಳೂ ಆಕಾಶಯಾನಗಳೂ ಹೊರಡುವುದಾಗಿಯೂ ಫ್ರಾನ್ಸಿನಲ್ಲಿ ತುಂಬ ವಾರ್ತೆ ಹಬ್ಬಿದೆ. ಇದೂ ಅಲ್ಲದೆ, 6000 ಜಾಪಾನು ನಾವಿಕರೂ ಅತ್ತ ಬರುತ್ತಿರುವರೊಡೂ ಒಂದು ಹೊಸ ವದಂತಿಯಿದೆ.

ಜಾಪಾನರು ಇದೆಲ್ಲ ಕಟ್ಟು ಕತೆಯಲ್ಲಿ ಹೇಳಿದ ಕನಸು ಎನ್ನುವರು. ಮೊರೊಕ್ಕೊವಿನ ಮೇಲೆ ತಮ್ಮ ಯಜಮಾನ್ಯವನ್ನು ಇನ್ನಷ್ಟು ಬಿಗಿಹಿಡಿಯಲು ಫ್ರಾನ್ಸಿನ ಯತ್ನವಿದು ಎಂದು ಜರ್ಮನರೆನ್ನುವರು. ಸ್ಪೈನಿಗೆ ಸೇರಿದ ಮೊರೊಕ್ಕೊವನ್ನು ಫ್ರೆಂಚ ರಾಜ್ಯಕ್ಕೆ ಸೇರಿಸಿಕೊಳ್ಳುವುದಕ್ಕೆ ಫ್ರೆಂಚ ಸೇನಾಧ್ಯಕ್ಷರು ಸಿದ್ಧರೆಂದೂ ಇದು ಮರೆಯಲ್ಲಿರುವಂತೆ ಜರ್ಮನರ ಮೇಲೆ ದೂರು ಹೊರಿಸುತ್ತಾರೆಂದೂ ಜರ್ಮನರು ಸಾರುತ್ತಾರೆ. ಈ ವಾದ ಪ್ರತಿವಾದಗಳಲ್ಲಿ ಯಥಾರ್ಥವಾದುದಾವುದೋ ತಿಳಿಯಲಾರದು. ಹೇಗಿದ್ದರೂ ಮೊರೊಕ್ಕೋವನ್ನು ನುಗ್ಗಿರುವರೆಂಬ ಜರ್ಮನರೂ ನುಗ್ಗಲಿರುವರೆಂಬ ಜಾಪಾನೀಯ ಸ್ವಪ್ನರಾಜ್ಯಕ್ಕೆ ಸೇರಿದವರೆನ್ನಬಹುದು.

ಯುದ್ಧವುಂಟಾದರೆ, ಫ್ರಾನ್ಸಿನ ಎಲ್ಲೆ ಕಟ್ಟುಗಳನ್ನು ರಕ್ಷಿಸಲು, ಪರದೇಶೀಯ ಸೈನ್ಯಗಳೇ ಬೇಕು. ಆಫ್ರಿಕ ಪಶ್ಚಿಮ ಭಾಗದಲ್ಲಿ ಈ ಸೇನೆಗಳು ಇವೆ. ಅವನ್ನು ಉತ್ತರ ದೇಶಗಳಿಗೆ ತರುವುದಕ್ಕೆ ಈ ಮೊರೊಕ್ಕೋ ದಾರಿಯೆ ಅಗತ್ಯ. ಈ ದಾರಿಯ ಭದ್ರತೆಯ ಮೇಲೆಯೆ ಫ್ರಾನ್ಸಿನ ಮುಂದಣ ಯುದ್ಧ ಪರಿಣಾಮವು ಅಧರಿಸಿಯದೆ. ಈಗ ಯೂರೋಪಿನಲ್ಲಿ ಒಂದು ರಾಷ್ಟ್ರವು ಮತ್ತೊಂದನ್ನು ಸಂದೇಹದಿಂದ ಕಾಣುತ್ತಿರುವಾಗ, ಆಗಾಗ ಇಂತಹ ನರಗಳ ದೌರ್ಬಲ್ಯಕ್ಕೆ ಕಾರಣವುಂಟು. ಹಾಗೆಂದು ಫ್ರಾನ್ಸಿಗೆ ಈ ಬಗೆಯ ನರಗಳ ಅಶಕ್ತಿಯುಂಟಾದುದೇ ಇತರ ರಾಷ್ಟ್ರಗಳಿಗೂ ಅದು ಸಾಂಕ್ರಾಮಿಕವಾಗಿ ಏಕೆ ಹಬ್ಬಬೇಕೋ ತಿಳಿಯದು. ಜರ್ಮನಿ ಇಟೇಲಿಗಳಿಗಿಂತ ಫ್ರಾನ್ಸು ಶಾಂತಿಪ್ರಿಯವಾಗಿದೆಂಬುದು ಅಷ್ಟು ಸತ್ಯವೆ? ತನ್ನ ಸಾಮ್ರಾಜ್ಯವನ್ನು ಬಲಪಡಿಸಲು ಅವರವರ ಮೇಲೆ ದೋಷಾರೋಪಣೆ ಮಾಡುತ್ತಿರುವುದು ನ್ಯಾಯವೆ? ಅದಕ್ಕೆ ಬದಲು, ಅಂದು ಇತರರಿಗಾಗಿ ತಾನು ಹಾಸಿಟ್ಟ ಹಾಸುಗೆಯ ಮೇಲೆ ಇಂದು ತಾನೇ ಮಲಗಬೇಕಾಗಿದೆಯಲ್ಲ ಎಂದು ಕರ್ಮಫಲವನ್ನು ಚಿಂತಿಸಿದರಾಗದೆ?

ಸ್ಫುಟವಿಚಾರಗಳು

ಜಿನ್ನಾ ಸಾಹೇಬರು

ಮುಸ್ಲಿಮರ ಚಳವಳಿಗಳಲ್ಲಿ ಹಿಂದೂಗಳು ಭಾಗವಹಿಸಬಾರದೆಂದು ಬೋಧಿಸುವರು. ಹಾಗೆಂದು ಹಿಂದೂಗಳ ಚಳವಳಿಗಳಲ್ಲಿ ಮುಸ್ಲಿಮರ ಭಾಗವಹಿಸಬಾರದೆಂದು ಅವರು ಬೋಧಿಸುವುದಿಲ್ಲ. 'ಎಪಾರ್ಟನ್ನು ಕುರಿತಾಗಿ ಹಿಂದಗಳು ತಲೆಗೆಡಿಸಿಕೊಂಡಿರುವರು, ಅದನ್ನು ಪ್ರಕ್ಕೆ ಬಿಟ್ಟು ಬಿಟ್ಟು ದೇಶದ ಮಹಾ ಮಹಾ ಸಮಸ್ಯೆಗಳಲ್ಲಿ ತಲೆ ಹಾಕೋಣ ಎಂದ ಅವರು ಭಾಷಣ ಮಾಡಿದರು ಆದರೆ, ಇವರೇ ಮಹಾನುಭಾವರು ವರ್ತುಲ ಪರಿಷತ್ತಿನಲ್ಲಿ,—ಹಿಂದೂ ಮುಸ್ಲಿಮ ಸಮಸ್ಯೆಯನ್ನು ಮೊದಲಾಗಿ ಇತ್ಯರ್ಥಪಡಿರುವಲ್ಲಿ, ತಾವು ಭಾಗವಹಿಸುವುದಿಲ್ಲ ಎಂದೇ ಚಂಡೀ ಹಟಹಿಡಿದಿದ್ದರು. ಆಗ ಅದೇ ಅವರಿಗೆ ಮುಖ್ಯವಾಗಿತ್ತು. ಈಗ ಅದು ಅನುಕೂಲವಾಗಿ ಇತ್ಯರ್ಥವಾದ ಬಳಿಕ, ಅದು ಯಾರಿಗೆ ಅನನುಕೂಲವಾಗಿದೆಯೋ ಅವರು ಆ ಮಾತೆತ್ತಬಾರದೆಂದು ಅವರ ಆಗ್ರಹ ಹಿಡಿದಿರುವರ. ಅಂತೂ ದೇಶದ ಮಹಾ ಸಮಸ್ಯೆಗಳಲ್ಲಿ ಇನ್ನಾದರೂ ಇವರ ತಲೆಹಾಕುವರೆನ್ನೋಣ.

ಪ್ರತ್ಯೇಕ ಪ್ರಾತಿನಿಧ್ಯ

ದೇಶಹಿತೈಷಿಗಳು ಇದು ಹಾಳು ಕ್ರಮವೆನ್ನುವರು. ಇನ್ನೂ ಇನ್ನೂ ಸಮಾಜಗಳೊಳಗೆ ಸ್ಪರ್ಧೆ ಉಂಟಾಗುವ ಕಾರಣ, ಸಮಾಜಗಳಲ್ಲಿರುವ ಅಂತಃಕಲಹವು ಇನ್ನೂ ಬೆಳೆವುದೆಂದು. ಹೀಗೆ ಈ ಕ್ರಮವನ್ನು ದೂರುವರು. ಜಿನ್ನಾರವರಿಗೆ ಈ ಕ್ರಮವೇ ಅತ್ಯಾವಶ್ಯಕವಾಗಿ ತೋರುತ್ತಿದೆ! ಹಿಂದೂ ಮುಸ್ಲಿಮರು ಐಕ್ಯಕ್ಕೆ ಈಗ ಇದರಷ್ಟು ಸುಲಭವಾಗಿರುವ ಬೇರೆ ಉಪಾಯವೇ ಇಲ್ಲವಂತೆ! ಸಹಕಾರಕ್ಕೊಪ್ಪುವ ಹಿಂದೂ ಮುಖಂಡರು ಈಗ ಮುಂದಕ್ಕೆ ಬಂದಲ್ಲಿ ಅವರೊಡನೆ ಸಹಕರಿಸಲು ಅತಿ ವಿಚಕ್ಷಣರಾಗಿರುವ ಸಿದ್ಧರಾಗಿರುವ ಹಾಗಾಗಿದೆ, ಈ ಕ್ರಮದಿಂದ,—ಎಂದು ಅವರೆನ್ನುವರು. ಮುಸ್ಲಿಮರಲ್ಲಿ ಅತಿ ವಿಚಕ್ಷಣರೆಂದರೆ, ಈ ಸಮಾಜಾನ್ತಯ ಪ್ರಾತಿನಿಧ್ಯಕ್ಕೊಪ್ಪುವ, ಹಾಗೂ ಜನಾಂಗವೆಲ್ಲ ಒಂದೆಂಬ ಭಾವನೆ ದೊರಗೆಡಿಸಲ್ಪಟ್ಟ ಕ್ರಮ ಎಂದು ಭಾವಿಸಿರುವ ಕೆಲವೇ ಮುಖಂಡರು. ಹೀಗಿದ್ದರೂ, ಇವರು ಕೌನ್ಸಿಲಿಗೆ ಸೇರುವ ಮೊದಲೇ ಸಹಕರಿಸಿ, ಒಂದೇ ಬಗೆಯ ಸಾಮಾನ್ಯ ಪ್ರಾತಿನಿಧ್ಯಕ್ಕೊಪ್ಪದೆ, ಪ್ರತ್ಯೇಕ ಸಾಮಾಜಿಕರಾಗಿ ಕೌನ್ಸಿಲಿಗೆ ಏಕೆ ಚುನಾವಣೆಗೆ ನಿಲ್ಲಬೇಕು? ಚುನಾವಣೆ ಆದ ನಂತರ ಮಾತ್ರವೇ ಸಹಕರಿಸುವುದುಕ್ತಮವೇ? ಅದು ಮೊದಲಿಂದಲೇ ಇರುವಲ್ಲಿ ಅನ್ಯಾಯವೇನು?

ಸ್ಪೈಯಿನಿನಲ್ಲಿ ಸ್ವಯಂಸೇವಕರು

ಇಟಲಿಯಿಂದ ನಿನ್ನೆಯೂ 4000 ಮಂದಿ ಸೇರಿದರೆಂದು ವಾರ್ತೆ. ಇನ್ನೂ ಇನ್ನೂ ಈ ಪರಧೇಶೀ ವೊಲಂಟೀಯರರು ಸ್ಪೈಯಿನಿಗೆ ಹೋಗುವುದನ್ನು ತಡೆಯಬೇಕೆಂದು ಇಂಗ್ಲೆಂಡಿನ ಪ್ರಯತ್ನಗಳು, ಸೂಚನೆಗಳು, ಪತ್ರವ್ಯವಹಾರ ಇತ್ಯಾದಿ ನಡೆಯುತ್ತಲೇ ಇವೆ. ಇಟಲಿಯವರನ್ನು ತಡೆಯಬೇಕಾದರೆ, ರಷ್ಯದವರನ್ನು ತಡೆಯಿರೆಂದು ಇಟಲಿಯು ಹೇಳುತ್ತದೆ ಅಂತೂ, ಒಂದು ರಾಷ್ಟ್ರದ ಮೇಲೆ ಇನ್ನೊಂದಕ್ಕೆ ಸಂಶಯವು ಬೆಳೆದೇ ಬರುತ್ತದೆ. ತಟಸ್ಥವಾಗಿ ಕೈ ಇಕ್ಕದಂತೆ ಇತರ ರಾಷ್ಟ್ರಗಳೊಳಗೆ ಮಾಡಿರುವ ಒಪ್ಪಂದವೆಂಬುದು ಬರೇ ಕಾಗದ ಮಾತ್ರವಾಗಿ ಸಿಂಕಿದೆ. ಆಗುವುದೇನಿದೆಯೋ ಅದು ಮುಂದರಿಯುತ್ತಲೇ ಇದೆ. ತಡೆಯಬೇಕಾದ ಪ್ರಬಲ ಇಚ್ಛೆಯು ಇಂಗ್ಲೆಂಡು ಫ್ರಾನ್ಸುಗಳ ಸರಕಾರಗಳಲ್ಲಿದ್ದುದು. ಅವರ ಸರಕಾರದ ಪತ್ರವ್ಯವಹಾರದಲ್ಲೇ ಮುಗಿಯುತ್ತಲಿದೆ. ಜರ್ಮನರ ಹಡಗನ್ನು ಸ್ಪೈಯಿನಿನ ಸರಕಾರೀ ನಾವೆಗಳು ತಡೆದುವು. ಜರ್ಮನಿಗೆ ಸಿಟ್ಟು. ಇನ್ನೂ ಅದರ ಶಾಂತಿಯುಂಟಾಗಲಿಲ್ಲ. ಜರ್ಮನ್ ಯುದ್ಧನಾವೆಗಳು ಸ್ಪೈಯಿನಿನ ಹಡಗುಗಳನ್ನು ಸ್ಪೈಯಿನ್ ಬಳಿಯ ಸಮುದ್ರದಲ್ಲೇ ಬಂಧಿಸಿವೆ. ಜರ್ಮನಿಯಲ್ಲಿ ಪುನಃ ಎಲ್ಲ ದೇಶಗಳಲ್ಲಿರುವ ಜರ್ಮನರೆಲ್ಲ ಯುದ್ಧಕ್ಕೆ ಸಿದ್ಧರಾಗಿರ... ತೆ ಅಪ್ಪಣೆ ಹೊರಟಿದೆ. ಜರ್ಮನ ... ಗಳಲ್ಲಿ ಕೂಡ ಪರದೇಶೀಯರ ... ಹಕ್ಕಿಲ್ಲವೆಂದೂ ಕೀಲ್ ಕಾಲುವೆಯಲ್ಲಿ ಪರದೇಶೀಯ ಹಡಗುಗಳು ಸಂಚರಿಸುವಲ್ಲಿ ಜರ್ಮನರ ಅಪ್ಪಣೆ ಪಡೆಯಬೇಕೆಂದೂ ಜರ್ಮನ್ ಸರಕಾರವು ಇಶ್ತಿಹಾರು ಕೊಟ್ಟಿದೆ. ಮುಂದ ಎಷ್ಟು ದಿನ ಹೀಗೆ ಕೋಪೋದ್ರೇಕ ಸ್ಥಿತಿಯಲ್ಲಿದ್ದರೂ, ಯುದ್ಧಮಾಡದೆ ಸುಮ್ಮನಿರಬಹುದು?

ಪೆಲೆಸ್ತೀನದಲ್ಲಿ ಅರಬರು

ಹೇಳಲೇನಿರುವುದೆಂದು ತಿಳಿಯಲು ಇಂಗ್ಲೆಂಡಿನಿಂದೊಂದ ಕಮಿಶನನ್ನು ಅಲ್ಲಿಗೆ ಕಳುಹಿಸುವರು. ಅರಬರೂ ತಮ್ಮ ಹಂಬಲವಾಲೆ ಹೇಳಲಿಕ್ಕಿರುವರು. ಯೆಹೂದ್ಯರಿಗೆ ಯಾವುದೊಂದು ಪಕ್ಷಪಾತವನ್ನು ತೋರಿಸದೆ, ತಮ್ಮದೇ ಆಗಿರುವ ರಾಷ್ಟ್ರೀಯ ಸರಕಾರವನ್ನು ಪೆಲೆಸ್ತೀನದಲ್ಲಿ ಸ್ಥಾಪಿಸಿಕೊಡಬೇಕೆಂಬುದೇ ಅರಬರ ಸ್ವಾಭಾವಿಕ ಇಚ್ಛೆಯಾಗಿದೆ. ಪೆಲೆಸ್ತೀನದಿಂದ ಎರಡು ಸಾವಿರ ವರ್ಷಗಳಷ್ಟು ಹಿಂದಣಿಂದ ಪ್ರಪಂಚದ ಎಲ್ಲಾ ಭಾಗಗಳಿಗೆ ಚದರಿ ಹೋಗಿರುವ ಆದರೆ ಈಗ ಎಲ್ಲ ರಾಷ್ಟ್ರಗಳಿಂದಲೂ ಹೊರದೂಡಲ್ಪಡುತ್ತಿರುವ ಯೆಹೂದ್ಯರಿಗೆ ಕಾಯಂ ವಸತಿಯಾಗಿ ಪೆಲೆಸ್ತೀನವನ್ನು ಮಾಡಿಕೊಡಬೇಕೆಂಬ ಯುಕ್ತಿಯು ಬಹಳ ಮುಂದರಿದಿದೆ, ಇನ್ನು ಅದನ್ನು ತಡೆಯಲಾಗುವಂತಿಲ್ಲ. 1929ರಲ್ಲಿ ಯೆಹೂದ್ಯರಿಗೆ ವಿರುದ್ಧವಾಗಿ ಅಲ್ಲೊಂದು ಚಳವಳ ನಡೆಯಿತು. ಆಗ ಯೆಹೂದ್ಯರಲ್ಲದ ಪಂಗಡಗಳಿಗೆ ಯಾವುದೊಂದು ಹಾನಿ ತಟ್ಟದಂತೆ ವರ್ತಿಸಬೇಕಾಗಿ ನಿರ್ಧಾರವಾಯಿತು. ಕೂಡಲೇ, ಆಗಣ ಮುಖ್ಯ ಮಂತ್ರಿಗಳಾಗಿದ್ದ ಮೆಕ್‌ಡೊನಾಲ್ಡರ ಮೇಲೆ ವಿಶೇಷವಾದ ವಿರೋಧವುಂಟಾಯಿತು. ಹೀಗಿರುವ ಪ್ರಯುಕ್ತ, ಯೆಹೂದ್ಯರಿಗೆ ಲಕ್ಷ್ಯಕೊಡದೆ ಇರಲೂ ಬ್ರಿಟಿಷ ಸರಕಾರಕ್ಕೆ ಸಲ್ಲದು.

ಕಾಂಗ್ರೆಸ್ಸಿಗೆ ಮಹಾಜಯ!

ರಾಷ್ಟ್ರಪತಿಯವರ ಪಂಜಾಬಿನ ವಿಮಾನ ಪ್ರವಾಸವು ಬಹಳ ಯಶಸ್ವಿಯಾಗಿ ಕೊನೆಗೊಂಡಿತು. ಅಲ್ಲಿಯ ಚುನಾವಣೆಯು ಪ್ರಾರಂಭವಾಗಿದೆ. ಇಷ್ಟರ ವರೆಗಿನ ವಾತಾವರಣದಿಂದ, ಕಾಂಗ್ರೆಸ್ಸಿಗೆನೇ ಹೆಚ್ಚಿನ ಸ್ಥಾನಗಳು ದೊರಕುವವೆಂದು ತಿಳಿದುಬರುತ್ತದೆ. ಕಾಂಗ್ರೆಸ್ಸಿಗೇನೆ ಪ್ರಚಂಡ ಜಯವು ಒದಗುವುದು ಖಂಡಿತವಂತೆ. ಪಂಜಾಬಿನಲ್ಲಿ ಕಾಂಗ್ರೆಸ್ಸಿಗಾಗಿ ವಿಶೇಷ ತರದ ಉತ್ಸಾಹವು ಇರುವುದೆಂದೂ ರಾಷ್ಟ್ರಪತಿ ಜವಾಹರಲಾಲರ ವಿಮಾನ ಪ್ರವಾಸದ ಅನುಭವವಾಗಿರುತ್ತದೆ. ಅವರು ಹೋದೆಡೆಗಳಲ್ಲೆಲ್ಲಾ ಜನರು ಅವರನ್ನು ಕಾಣಲೂ, ಅವರ ಭಾಷಣವನ್ನು ಲಾಲಿಸಿ ಕಾಂಗ್ರೆಸ್ ಸಂದೇಶವನ್ನು ಕೇಳಲೂ ರೈತರು, ಸಿರಿವಂತರು ಎಲ್ಲಾ ಜಾತಿಯ ಜನರು ಕಿಕ್ಕಿರಿದು ನೆರೆದುಬಂದಿದ್ದರು. ಶ್ರೀ ನೆಹರು ಗಳಿಗೆ ಸಿಕ್ಕಿದ ಈ ತರದ ಸ್ವಾಗತವು ಇಷ್ಟರ ವರೆಗೆ ಯಾರಿಗೂ ದೊರಕಲಿಲ್ಲವಂತೆ.

ಪಂಜಾಬಿನಿಂದ, ರಾಷ್ಟ್ರಪತಿಯವರು ವಿಮಾನದಲ್ಲೇ ಸಂಯುಕ್ತ ಪ್ರಾಂತ್ಯಕ್ಕೆ ತೆರಳಿ, ಅಲ್ಲಿನ ಪ್ರವಾಸವನ್ನು ವಿಮಾನದಲ್ಲೇ ನಡೆಯಿಸುವರಾಗಿ ತಿಳಿದುಬರುತ್ತದೆ. ಸಂಯುಕ್ತ ಪ್ರಾಂತ್ಯಗಳಲ್ಲಿ ಚುನಾವಣೆಯು ಸ್ವಲ್ಪ ದಿನಗಳಲ್ಲಿ ಪ್ರಾರಂಭವಾಗುವುದು. ಇಷ್ಟರ ವರೆಗೆ ವಾತಾವರಣವನ್ನು ನೋಡಿದರೆ, ಕಾಂಗ್ರೆಸ್ಸಿಗೆ ಹೆಚ್ಚಿನ ಸ್ಥಾನಗಳು ದೊರಕುವವು ಎಂದು ಊಹಿಸಲಾಗಿದೆ.

ಕಲ್ಕತ್ತದಲ್ಲಿ ಚುನಾವಣೆಯು ಪ್ರಾರಂಭವಾಗಿದೆ. ಕಾಂಗ್ರೆಸ್ಸಿಗೇನೆ ಬಹುಮತಗಳು ದೊರೆತಿವೆ.

ಸ್ಪೈಯಿನ್ ಪ್ರಕರಣ

ದಂಗೆಖೋರರಿಗೆ ಅಪಜಯ ಒದಗುತ್ತದೆ. ಅಂದರೆ ಅಶ್ರಯವಾತನದ ಹಿಟ್ಲರ್-ಮುಸಲೋನಿ [illegible] ರಾಗಿರುವರು. ಸ್ಪೈಯಿನಿಗೆ ಹೊರ ದೇಶಗಳಿಂದ ಸ್ವಯಂಸೇವಕರಾಗಿ ಸೇರಬಾರದಾಗಿ [illegible] ಬ್ರಿಟಿಷ ಫ್ರೆಂಚ ಯೋಜನೆಗೆ ಜರ್ಮನಿ ಇಟಲಿಯು ಒಪ್ಪಿಗೆಯಿತ್ತರೂ, ಸ್ಪೈಯಿನಿನಲ್ಲಿ ಅವರ ಆಟವನ್ನು ನಡೆಯಿಸಲಾರಂಭಿಸಿದೆ. [illegible] ವರ್ತಮಾನಗಳು ನಡೆದ ಮೇಲೆ ಇಟಲೀಯಿಂದ [illegible] ಸಾವಿರ ಸ್ವಯಂಸೇವಕರು ಹೊರಟು ಸ್ಪೈಯಿನ್ ರಣರಂಗಕ್ಕೆ ಇಳಿದಿರುತ್ತದೆ. ದಂಗೆಖೋರರ ಪರವಾಗಿ ಈಗ ಕಾದಾಡುತ್ತಿರುವವರಲ್ಲಿ ಅಧಿಕ ಸಂಖ್ಯೆಯು ಹೊರದೇಶದವರೆನ್ನಲಾಗಿದೆ. ಫ್ರೆಂಚ ಬ್ರಿಟಿಷ ಸರಕಾರದವರು ಸಹ ಇದೇ ನಿರೀಕ್ಷಣೆಯನ್ನು ಮಾಡುತ್ತಿದ್ದಾರೆ. ಇಟಲಿ-ಜರ್ಮನಿಗೆ ತಕ್ಕ ಎಚ್ಚರಿಕೆಯನ್ನು ಮಾಡದಿದ್ದರೆ ಸ್ಪೈಯಿನಿನಲ್ಲಿ ಹೊರಹಾಕ್ಕರ ತಲೆಕೆಳಕ್ಕಾದರೆ [illegible] ಬ್ರಿಟನು, ರಶ್ಯಾ ಇವರೆಲ್ಲಾ ಒಟ್ಟುಗೂಡಿ ಹಿಟ್ಲರ ಮುಸಲೋನಿಯವರ ಮೇಲೆ ಧಾವಿಸುವರೇ ಎಂಬ ಸಂದೇಹಗಳುಂಟಾಗಿದೆ. ಆದರೆ ಇಟಲಿ-ಜರ್ಮನಿಯವರು ಸ್ಥಿತಿಗನುಸಾರವಾಗಿ ಈಗ ಶಾಂತಪ್ರಿಯತೆಯನ್ನು ತೋರಿಸ ಲಾರಂಭಿಸಿದ್ದಾರೆ.

ಆಭರಣಗಳನ್ನು ಹಿಂದಕ್ಕೆ ಕೊಡಲಾಯಿತು

ಮಿಸೆಸ್ ವಾಲ್ಲಿ ಸಿಂಪ್ಸನ್ನಳು ಲಂಡನನ್ನು ಬಿಟ್ಟು ಹೊರಗೆ ತೆರಳುವ ಸಮಯ ಮಾಜಿ ಚಕ್ರವರ್ತಿಯವರಿಂದ ಆಕೆಗೆ ಪಾರಿತೋಷಕಗಳಾಗಿ ಕೊಟ್ಟ, ಸಪ್ತಮ ಎಡ್ವರ್ಡ ಚಕ್ರವರ್ತಿಯವರ ಪತ್ನಿಯವರ ವಿಶೇಷ ಬೆಲೆಬಾಳುವ ಆಭರಣಗಳಲ್ಲಿ ಕೆಲವನ್ನು ಕೊಂಡೊಯ್ಯಲು ಬ್ರಿಟಿಷ ಸರಕಾರವು ಆಕ್ಷೇಪವೆತ್ತಿದುದರಿಂದ, ಅವುಗಳನ್ನು ಆಕೆಯು ಬ್ರಿಟಿಷರಿಗೆ ಹಿಂದಕ್ಕೆ ಕೊಟ್ಟಿರುವಳಂತೆ, ಬ್ರಿಟಿಷ ರಾಜಮನೆತನದ ಆಭರಣಗಳು ಹೊರಗೆ ಹೋಗದಂತೆ ಬ್ರಿಟಿಷ ಸರಕಾರವು ಈ ರೀತಿ ವರ್ತಿಸಿದ್ದಂತೆ। ಭಾರೀ ಬೆಲೆಬಾಳುವ ರತ್ನಾದಿಗಳನ್ನು ಮಾಜಿ ಚಕ್ರವರ್ತಿಯವರು ಮಿಸೆಸ್ ಸಿಂಪ್ಸನ್ನಳಿಗೆ ಕೊಟ್ಟಿರುವರಂತೆ.

ಸರದಾರ್ ಪಟೇಲರ ಆರೋಗ್ಯ

ಅಮರಾವತಿ ರೋಗಕ್ಕೆ ತುತ್ತಾಗಿ, ಫೈಜಾಪುರ ಕಾಂಗ್ರೆಸ್ಸಿನ ನಂತರ ಮುಂಬಯಿಯಲ್ಲಿ ಹಾಸಿಗೆ ಹಿಡಿದ ಸರದಾರ್ ವಲ್ಲಭಭಾಯಿ ಪಟೇಲರು ಈಗ ಸಂಪೂರ್ಣ ಗುಣಮುಖರಾಗಿರುವರು. ಅವರ ಆರೋಗ್ಯವು ಈಗ ನೆಟ್ಟಗಿರುವುದು. ಪಾರ್ಲಿಮೆಂಟರಿ ಕಮಿಟಿಯ ಅಧ್ಯಕ್ಷರಾದ ಪಟೇಲರು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ಸಿನ ಪರವಾಗಿ ಚುನಾವಣಾ ಪ್ರಚಾರ ನಡೆಯಿಸಲು ಹೊರಟಿರುವರು.

ಪಂಜಾಬಿನ ಚುನಾವಣೆಗಳು.

ಪಂಜಾಬಿನ ಚುನಾವಣೆಗಳು ಮೊನ್ನೆ ತಾ ೧೫ರಿಂದ ಪ್ರಾರಂಭವಾಗಿವೆ. ಎಲ್ಲೆಲ್ಲೂ ಅವಸರದ ಚಟುವಟಿಕೆಗಳು ನಡೆಯುತ್ತಿವೆ. ಪಕ್ಷ ನಾಯಕರು ರಾತ್ರಿಹಗಲು ವಿಶ್ರಮಿಸದೆ ಪರಿಶ್ರಮಿಸುತ್ತಿದ್ದಾರೆ.

ಪಂಜಾಬ ಪ್ರಾಂತ್ಯದಲ್ಲಿ ೩೨೦೦ ಪೋಲಿಂಗ್ ಸ್ಥಾನಗಳಿವೆ. ೩೭ ಲಕ್ಷ ಜನರ ಮತ ತೆಗೆಯಲಿದೆ. ೧೭೫ ಸದಸ್ಯಸ್ಥಾನಗಳಿಗೆ ೭೭೫ ಉಮೇದ್ವಾರರು ಸ್ಪರ್ಧಿಸುತ್ತಿದ್ದಾರೆ. ರಾಷ್ಟ್ರಪತಿಯವರ ಪ್ರವಾಸದಿಂದ, ಕಾಂಗ್ರೆಸ್ಸಿಗೆ ಹೆಚ್ಚಿನ ಸ್ಥಾನಗಳು ಸಿಗುವಂತಿದೆ. ಜನಾಭಿಪ್ರಾಯವು ಹೆಚ್ಚಿನ ಮಟ್ಟಿಗೆ ಕಾಂಗ್ರೆಸ್ಸಿನಪರವಿದೆ.

ಔತಣಕೂಟದಲ್ಲಿ ಅದೃಶ್ಯ ಜನರು!

ಇಟೋಲಿಯ [illegible] ಎಂಬಲ್ಲಿನ ಪ್ರೊ॥ [illegible] ಎಂಬವರು ವಿಚಿತ್ರತರದ ಒಂದು ಯೋಜನೆಯನ್ನು ಕಲ್ಪಿಸಿರುವರು. ಆದರಿಂದ ಅವರು ಅದೃಶ್ಯ ಔತಣಕೂಟಗಳನ್ನು ಜರಗಿಸುತ್ತಿದ್ದಾರೆ.

ಜನರನ್ನು ಅದೃಶ್ಯವಾಗಿ ಮಾಡಿಬಿಡಲು ಅವರು ಕಲ್ಪಿಸಿದ ಯಂತ್ರದಿಂದ ಸಾಧ್ಯವಾಗುತ್ತದಂತೆ. ಈ ಯಂತ್ರದಿಂದ ಬೀರುವ ಕಿರಣಗಳಿಂದ ಮನುಷ್ಯ ವಸ್ತು ಒಡವೆಗಳು ಕಣ್ಣಿಗೆ ಅಗೋಚರವಾಗುವವಂತೆ. ಒಂದು ಸವಸದಲ್ಲಿರುವ ಜನರು ಪೂರ್ಣವಾಗಿ ಈ ಯಂತ್ರದಿಂದ ಮಾಯವಾಗಬಹುದಂತೆ.

ಈ ತರದ ಅನೇಕ ಯಂತ್ರಗಳನ್ನು ರಚಿಸಿ ಅವುಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಪ್ರೊಫೆಸರರು ಮಾಡುತ್ತಿದ್ದಾರಂತೆ.

ಜೋಂಸ್ಕೆ ಸಂಗ್ರಾಮ ಶಾಲೆ

[illegible] ಸಂಗ್ರಾಮ ಶಾಲೆಗಾಗಿ [illegible] ಹತ್ತಿರ ಆನಂದವಲ್ಲಿ ಎಂಬಲ್ಲಿ ೯೦ ಎಕ್ರೆಗಳ ಸ್ಥಳವು ಕೊಂಡುಕೊಳ್ಳಲಾಗಿದೆ. ಅದು ಹತ್ತಿರವಿರುವ [illegible] ಸ್ಥಳವನ್ನು ಸದ್ಯದಲ್ಲೇ ಸಿದ್ಧಗೊಳಿಸುವ ವ್ಯವಸ್ಥೆ ಮಾಡಲಾಗಿದೆ. [illegible] ಶಾಲೆಯು ಶಿಕ್ಷಣಗೊಳ್ಳುವುದ [illegible] [illegible] ತರಬೇತಿ ಕೊಡುವುದು ಅಲ್ಲದೆ [illegible] ಸಿದ್ಧವಾಗುವ [illegible] ಶಾಲೆಯು ನಡೆಯುವುದು. [illegible] ವಿದ್ಯಾರ್ಥಿಗಳನ್ನು [illegible] ಸಂಗ್ರಾಮ [illegible] ಈ ಶಾಲೆಯು [illegible] ಈ ಸಂಸ್ಥೆಯು ನಡೆಯಬೇಕಾಗಿದೆ. ಈಗಾಗಲೆ ಇದಕ್ಕೆ ಅನೇಕರ ಸಹಾನುಭೂತಿಯು ದೊರಕಿರುತ್ತದೆ. ಎಲ್ಲಾ ಭಾರತೀಯ ತರುಣರಿಗೆ ಇದರಲ್ಲಿ ಪ್ರವೇಶ ದೊರಕುವುದು.

ರಷ್ಯಾದೇಶದ ಸಂಗ್ರಾಮ ರಹಸ್ಯಗಳು ಅಮೇರಿಕವನ್ನು ಸೇರಿದುವು

ರಷ್ಯಾದೇಶದ ಪ್ರವೀಣ ವಿಜ್ಞಾನಿಗಳಿಬ್ಬರು ಸೋವಿಯಟ್ ನಾಯಕ ಸ್ಟಾಲಿನನೊಡನೆ ಉಂಟಾದ ಬೇಧದ ದೆಸೆಯಿಂದ ತಮ್ಮ ದೇಶವನ್ನು ತೊರೆದು ಅಮೇರಿಕಾವನ್ನು ಸೇರಿ ಅಲ್ಲಿನ ನಾಗರಿಕರಾಗಿರುವರು. ಈ ವಿಜ್ಞಾನಿಗಳೊಡನೆ ರಷ್ಯಾದೇಶದ ಕೆಲವು ಸಂಗ್ರಾಮ ರಹಸ್ಯಗಳಿವೆ. ಅವರನ್ನು ಪುನಹ ಬರಮಾಡಿಕೊಳ್ಳಲು ಸ್ಟಾಲಿನನು ಬಹಳ ಪ್ರಯತ್ನಪಟ್ಟರೂ ಫಲಿಸಲಿಲ್ಲ. ಈ ವಿಜ್ಞಾನಿಗಳು ದೇಶವನ್ನು ತೊರೆದ ದರಿಂದ [illegible] ಮಿಲಿಯ ಹಣವು ವೆಚ್ಚಮಾಡಿ ನಿರ್ಮಿಸಲಾದ ಕೆಲವು ಕೆಲಸಗಳು ಕಾರ್ಯಯೋಜನೆಗಳು ನಿಂತುಹೋಗುವುವಂತೆ.

ಚುನಾವಣೆಯಲ್ಲೂ ಉಪವಾಸಾಚರಣೆ.

ಕಲ್ಕತ್ತಾದ ಶ್ರೀಮತಿ ಜ್ಯೋತಿರ್ಮಯಿ ಗಾಂಗೂಲಿಯವರು ಪ್ರಸಿದ್ಧ ಕಾಂಗ್ರೆಸ್‌ವಾದಿಗಳು. ಕಾಂಗ್ರೆಸ್ಸಿಗಾಗಿ ಬಹಳ ಪರಿಶ್ರಮಪಟ್ಟಿರುವರು. ಕಲ್ಕತ್ತಾ ನಗರಸಭೆಯ ಮಾಜಿ ಸದಸ್ಯರು. ಬಂಗಾಳ ಪ್ರಾಂತಿಕ ಎಸೆಂಬ್ಲಿಗೆ ಕಾಂಗ್ರೆಸ್ ಉಮೇದ್ವಾರರಾಗಿ ಆರಿಸಲು ಇವರು ಹಾಕಿದ ಅರ್ಜಿಯು ತಿರಸ್ಕರಿಸಲಾಗಿ, ಬೇರೊಂದು ಸ್ತ್ರೀಯು ಕಾಂಗ್ರೆಸ್ಸಿನವರಿಂದ ಆರಿಸಲ್ಪಟ್ಟಿದ್ದರಿಂದ, ಇವರು ಚುನಾವಣೆಯಲ್ಲಿ ಭಾಗವಹಿಸುವುದರಿಂದ ಕಾಂಗ್ರೆಸ್ಸಿನ ಶಿಸ್ತು ಕಟ್ಟಳೆಗೆ ಒಳಗಾಗುವ ಸಂಭವವುಂಟಾದುದರಿಂದ, ಅವರೀಗ ಉಪವಾಸಾಚರಣೆಯನ್ನು ಪ್ರಾರಂಭಮಾಡಿರುವರು.

ಹಾರಾಡುವ ರಾಷ್ಟ್ರಪತಿಯವರ ಕಥೆ(?) [illegible]

ಬಿಹಾರಿನ ಪ್ರವಾಸವನ್ನು ಮುಗಿಸಿ, ಶ್ರೀ ನೆಹರೂಗಳು ವಿಮಾನಮೂಲಕ ಪಂಜಾಬಿಗೆ ತೆರಳಿದರು. ಬಿಹಾರದಲ್ಲಿ ರಾಷ್ಟ್ರಪತಿಯವರ ಪ್ರವಾಸದಿಂದ ಮುಂದಿನ ಚುನಾವಣೆಗಾಗಿ, ಕಾಂಗ್ರೆಸ್ಸಿನ ಪರವಾಗಿ ಪ್ರಚಾರಕಾರ್ಯವು ಬಹಳ ಯಶಸ್ವಿಯಾಗಿ ನಡೆದಿರುತ್ತದೆ. ಕಾಂಗ್ರೆಸ್ಸಿಗೆ ಬಹುಮತ ಸಿಗುವುದರಲ್ಲಿ ಸಂದೇಹಗಳಿಲ್ಲ.

ಪಂಜಾಬಿನ ಎಲ್ಲಾ ಮುಖ್ಯಸ್ಥಳಗಳ ಪ್ರವಾಸವನ್ನು ಸಮಯ ಅತಿ ಕಡಿಮೆಯಿರುವುದರಿಂದ ವಿಮಾನದಲ್ಲಿ ಮಾಡಿದರು. ಅಮೃತಸರ, ರಾವಲ್‌ಪಿಂಡಿ ಇತ್ಯಾದಿ ಸ್ಥಳದಲ್ಲಿ ಜನಸ್ತೋಮ ಕಿಕ್ಕಿರಿದು ನೆರೆದುದರಿಂದ ವಿಮಾನವನ್ನು ಕೆಳಗಿಳಿಸಲು ಸ್ವಲ್ಪ ಕಷ್ಟವಾಯಿತು. ರಾಷ್ಟ್ರಪತಿಯವರನ್ನು ಸ್ವಾಗತೀಕರಿಸಲು ಎಲ್ಲೆಲ್ಲೂ ಭಾರಿ ಉತ್ಸಾಹ ಕಾಣಿಸಿಕೊಂಡಿತು.

ಮುಂದಿನ ಚುನಾವಣೆಯಲ್ಲಿ ಪಂಜಾಬದಲ್ಲಿ ಕಾಂಗ್ರೆಸ್ಸಿಗೆ ಬಹುಮತ ದೊರಕುವ ಕುರಿತು ರಾಷ್ಟ್ರಪತಿಯವರಿಗೆ [illegible] ಉತ್ತಮಪ್ರಭಾವಶಾಲಿಗಳು ಉಮೇದ್ವಾರರಾಗಿರುವುದರಿಂದ ಚುನಾವಣೆರಂಗದಲ್ಲಿ ಕಾಂಗ್ರೆಸ್ಸು ವಿಜಯಿಯಾಗುವುದು ಖಂಡಿತವೆಂದೂ, ಹಿಂದೂದೇಶದ ಬಡತನವನ್ನು ನಿವಾರಿಸುವದೆ, ಎಲ್ಲರೂ ಕಾಂಗ್ರೆಸ್ಸಿನೊಡನಿರಬೇಕೆಂದೂ, ಹಿಂದೂದೇಶದ ಅಭ್ಯುದಯವು ಕಾಂಗ್ರೆಸ್ಸಿನಿಂದಲೆ ಆಗತಕ್ಕದೆಂದೂ, ಕಾಂಗ್ರೆಸ್ಸಿಗೆ ಕೊಟ್ಟ ಮತವು ಸ್ವಾತಂತ್ರ್ಯಕ್ಕೆ ಕೊಟ್ಟ ಮತವೆಂದೂ, ಜನವರಿ ತಾ ೨೬ರನ್ನು ಸ್ವಾತಂತ್ರ್ಯದಿನ ದಿನವನ್ನಾಗಿ ಆಚರಿಸಬೇಕೆಂದೂ ರಾಷ್ಟ್ರಪತಿಗಳು ಭಾಷಣವಿತ್ತರು.

ಲಾಹೋರಿನಲ್ಲಿ ರಾಷ್ಟ್ರಪತಿಯವರನ್ನು ಸ್ವಾಗತೀಕರಿಸಲು ಒಂದು ಲಕ್ಷಕ್ಕೆ ಮಿಕ್ಕಿದ ಜನಸ್ತೋಮವು ನೆರೆದಿತ್ತು. "[illegible] ಸ್ವತಂತ್ರರಾದ ಮಿಸಲ್, ನಮ್ಮ ಬಡತನ [illegible]" ರಾಷ್ಟ್ರಪತಿಯವರು ಅಲ್ಲಿ ಭಾಷಣವಿತ್ತರು.

ರಾಷ್ಟ್ರಪತಿಯವರ [illegible] ಒಂದಿಷ್ಟು ವಿರಾಮ [illegible] ದೊರಕಿತು(?).

ಜರ್ಮನಿಯು ಶಾಂತವಾಗಲು ಸಿದ್ಧವಿದೆ

[illegible]ದಲ್ಲಿ ಇಂದು ಉಂಟಾಗಿರುವ [illegible] ಹಿಟ್ಲರನ [illegible] ಸಿದ್ಧವಿದೆಯೆಂದು ಕೆಲವು ಕಡೆಗಳಿಂದ ವಾರ್ತೆಗಳು ಬಂದಿರುತ್ತವೆ. [illegible] ವಿಚಾರ [illegible] ಜರ್ಮನಿಯು [illegible] ಸ್ವತಂತ್ರ [illegible] ಸಂತೋಷಿಸಿತು(?). ಈ ವಿಚಾರದ [illegible] ಜರ್ಮನಿ [illegible] ನಾಜಿವರ್ಗವು [illegible] ಹಿಟ್ಲರನು [illegible] ಜರ್ಮನಿಯ [illegible] [illegible] [illegible] ತನ್ನ ಸಂಪತ್ತಿನ [illegible] ಹಿಟ್ಲರನ [illegible] [illegible] ದೊರೆತಿ(?) [illegible] ಬರುತ್ತದೆ. ಆಗಿರುವಾಗ್ಯೂ [illegible] ಅತನು ತನ್ನ ಕಾರ್ಯಸಿದ್ಧಿಯನ್ನು ಸಾಧಿಸುತ್ತಿ [illegible] ಜರ್ಮನಿಯು [illegible] ಹಿಟ್ಲರನು [illegible] ಪ್ರೇರೇಪಿಸುವನಂತೆ.

ಮಾಜಿ ಚಕ್ರವರ್ತಿಯರ ಮುಂದಿನ ಪ್ಲೇನುಗಳು.

ಮಾಜಿ ಚಕ್ರವರ್ತಿಯವರು ತಮ್ಮ ಪ್ರಿಯೆಯೊಡನೆ ಅಮೇರಿಕಾದ ಸಂಯುಕ್ತ ರಾಜ್ಯಗಳಿಗೆ ಸದ್ಯದಲ್ಲೇ ತೆರಳುವರಂತೆ. ಅಲ್ಲದೆ, ಅಲ್ಲಿ ವಿಮಾನಗಳನ್ನು ತಯಾರಿಸುವ ಕೈಗಾರಿಕೆಯನ್ನು ಕೈಕೊಳ್ಳುವರಂತೆ. ಮಿಸೆಸ್ ವಾಲ್ಲಿ ಸಿಂಪ್ಸನ್ನಳೊಡನೆ ಅವರು ವಿವಾಹವಾದೊಡನೆ ಅವರು ತನ್ನ ಪತ್ನಿಯೊಡನೆ ಅತ್ತಕಡೆಗೆ ತೆರಳುವರಂತೆ. ಅಲ್ಲೊಂದು ಮಹಾ ಆಸ್ತಿಯನ್ನು ಪಡೆಕೊಳ್ಳುವದಕ್ಕೆ ಏರ್ಪಾಡುಗಳನ್ನು ಮಾಡಿರುವರಂತೆ. ಅಷ್ಟರ ತನಕ ಯುರೋಪ್ಯದ ವಿವಿಧ ವಿಹಾರಸ್ಥಳಗಳನ್ನು ಸಂಚರಿಸುವುದರಲ್ಲಿ ಕಾಲಕಳೆಯುವರಂತೆ. [ನ್ಯೂಯಾರ್ಕ್ ಟೈಮ್ಸ್]

ಜನರಲ್ ಫ್ರಾಂಕೋರ ವ್ಯುತ್ಕ್ರಮಗತಿ

ರಷ್ಯಾ, ಫ್ರಾನ್ಸ್, ಇ[illegible] ಹೊಂದಿದ ಸ್ಪೈಯಿನ್ ಸರಕಾರವನ್ನು ಎದುರಾಡುವ ಪ್ರಯತ್ನದಲ್ಲಿ ಬಹಳ ಪಿ[illegible]ವುದು. ಜನರಲ್ ಫ್ರಾಂಕೋರಿಗೆ ಹೆಚ್ಚಿನ ಕಡೆಗಳಲ್ಲಿ ಸೋಲು ದೊರಕಿದೆ ಎಂದೂ, ಅದರಿಂದ ಇಟೆಲಿಯಲ್ಲಿ ಸ್ವಲ್ಪ ಕಳವಳವು ಉಂಟಾಗಿದೆಯೆ ಎಂದೂ ವಾರ್ತೆ ಬಂದಿದೆ.

ಮಡ್ರಿಡ್ ನಗರವನ್ನು ಸೇರಲು ಜನರಲ್ ಫ್ರಾಂಕೊ ಅನೇಕ ದಿವಸಗಳಿಂದ ಪರಿಶ್ರಮಿಸುತ್ತಿದ್ದರೂ, ಅವರ ಪ್ರಯತ್ನಗಳು ಫಲಹೊಂದಲಿಲ್ಲವಾಗಿದೆ.

ದಂಗೆಯ ಸ್ಥಿತಿಯು ಹೀಗಾದುದರಿಂದ, ಇಟಲಿ-ಜರ್ಮನಿ ಇತ್ಯಾದಿ ಫೆಸಿಸ್ಟ ಜನಾಂಗ [ಶಾಂತಿಭಂಗ ಜನಾಂಗ]ಗಳು ತಮ್ಮ ಈಗಿನ ವರ್ತನೆಯನ್ನು ಬದಲಾಯಿಸಿ, ತತ್ಕಾಲಕ್ಕೆ ಶಾಂತಿಸ್ಥಾಪನೆಯ ಕುರಿತು ಆಲೋಚಿಸುವರೆಂದು ತಿಳಿದುಬರುತ್ತದೆ. ಜರ್ಮನಿಯು ಗೋಯರಿಂಗನು ಇಟಲಿಗೆ ತೆರಳಿದುದು ಇದೇ ಕಾರ್ಯಾರ್ಥವಾಗಿ ಎಂದು ಕೆಲವು ಪತ್ರಿಕೆಗಳ ಅಭಿಪ್ರಾಯ.

ಅಂತೂ, ಯುದ್ಧದ ಉದ್ಯೋಗಿಗಳಿಗಳು ಬೇಗನೆ ಬದಲುವ ಸಂಭವಗಳಿರುವುವು ಎಂಬ ದೃಢವಾದ ವಾರ್ತೆಯು ಫಟೋರ್ ಪತ್ರಿಕೆಗಳಲ್ಲಿದೆ.

ಇಟಲಿ - ಜರ್ಮನ್ ಸಂಬಂಧ.

ಇಟಲಿ ಜರ್ಮನ್ ಒಪ್ಪಂದವು ದಿನೇ ದಿನೇ ದೃಢವಾಗುತ್ತಾ ಬರುತ್ತಿದೆ. ಮೊನ್ನೆ ದಿನ ಹಿಟ್ಲರನ ಮುಖ್ಯ ಮಂತ್ರಿಯಾದ ಜನರಲ್ ಗೋರಿಂಗನು ಇಟಲಿಯ ರೋಮಿಗೆ ತೆರಳಿ, ಮುಸಲೋನಿಯ ಭೇಟಿಮಾಡಿದರು. ಇವರೊಳಗೆ ಬಹಳ ಸಮಯ ಸಂಭಾಷಣೆಯು ನಡೆಯಿತು. ಸದ್ಯದಲ್ಲೇ ಇಟಲಿಯ ಅರಸನಾದ ವಿಕ್ಟರನು ಹಿಟ್ಲರನ ಭೇಟಿಮಾಡುವನೆಂದು ತಿಳಿದುಬರುತ್ತದೆ.

ಬಂಗಾಳ ನಾಗಪುರ ರೈಲ್ವೆ ಮುಷ್ಕರ.

ಬಂಗಾಳ ನಾಗಪುರ ರೈಲ್ವೇ ಮುಷ್ಕರವು [illegible] ಗಳಿಂದ ಪ್ರಾರಂಭವಾಗಿದ್ದು ಈಗ [illegible] [illegible] ಕಷ್ಟಕರವಾಗಿ [illegible] ಜನರ ಉದ್ಯೋಗವನ್ನು ತ್ಯಜಿಸಿರುವರು. [illegible] ಮುಷ್ಕರ [illegible] ಗಳನ್ನು [illegible] [illegible] ಸರಕಾರದೊಡನೆ ಮಾಡಿದ [illegible] ಯಾವುದೇ ಕಾರಣಗಳಿಂದ ತಿರಸ್ಕೃತವಾಯಿತು. ಕೆಲವೆಂದು [illegible] ಹಿಡಿದ ಕೆಲಸಗಾರರನ್ನು [illegible] ಕೆಲಸದಿಂದ ತೆಗೆದುಹಾಕುವೆವೆಂದು [illegible] ಕೆಲಸಕ್ಕೆ ಸೇರಬೇಕೆಂದೂ [illegible] ಸಂಸ್ಥೆಯು ಪ್ರಕಟಿಸುತ್ತಿದೆ. [illegible] ಇದರ [illegible] ಇಷ್ಟರ ಮಟ್ಟಿಗೆ [illegible] ರೈಲ್ವೇ ಸಂಸ್ಥೆಗೆ ಹೆಚ್ಚಿನ ನಷ್ಟಗಳು ಸಂಭವಿಸಬಹುದೆಂದು [illegible] ಸಂಬಂಧಪಟ್ಟ [illegible] [illegible] ಮಾಡಿರುವರು. ಕಾಂಗ್ರೆಸ್ಸಿನ [illegible] ಮುಷ್ಕರಗಾರರೊಡನಿದೆ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನ ರಸ್ತೆ, ಮಂಗಳೂರು.

ESTD 1931

12 ವರ್ಷದೊಳಗಿನ ಬಾಲಕಬಾಲಿಕೆಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್, ತಬಲಾ ವಿದ್ವಾನ್ ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ಯಾಶಿಕ್ಷಕರು.

[illegible]ರಿಕನ್ ವಿದ್ಯಾಕ್ರಮಗಳು.

[illegible] ಯುಗಗಳು ಆಧುನಿಕವಾಗಿ [illegible] ದ್ದೇಶವಾದ ಬೋಧ [illegible] ದ ಪಠ್ಯ ಪುಸ್ತಕಗ [illegible] ಯನ್ನು ಮಾಡಿ [illegible] ಕಾರ್ಯಕ್ರಮವು [illegible] ಶಾಲೆಗಳಲ್ಲಿದೆ. ವರ್ತಮಾನ ಪತ್ರ [illegible] ಪತ್ರಿಕೆಗಳನ್ನೂ ಉಪಯೋಗಿ [illegible] ಕ್ರಮಗಳನ್ನು ಮಾಡಿರು [illegible] ಟೇಬಲಿನಲ್ಲಿ ಈಗಿನ ಕಾಲದ [illegible] ಕೊಳ್ಳಲು ಒಂದು ಪಿರೇಡು [illegible] ವರ್ತಮಾನ ಪತ್ರಿಕೆಗಳ ಮೇಲೆ ಬಂದಿ[illegible] ವಿಷಯಗಳ ಮೇಲೆ ವಿದ್ಯಾರ್ಥಿಗಳು [illegible] ಮಾಡಿರುವರು. ಕೈಗಾರಿಕಾ [illegible]ವೃಂತಿ, ಅದರಿಂದ ಮಾನವ ಸಮಾಜದಲ್ಲಿ [illegible]ಂಟಾದ ಪರಿಣಾಮಗಳು, ಇವನ್ನು ಮುಖ್ಯ ವಿಷಯವನ್ನಾಗಿಟ್ಟು, ಪತ್ರಿಕೆಗಳನ್ನು ವಿದ್ಯಾರ್ಥಿ[ಗಳಿ]ಂದ ಓದಿಸುತ್ತಿದ್ದಾರೆ. ಅಲ್ಲಿನ ಹೆಚ್ಚಿನ [ಶಾ]ಲೆಗಳು ಸಂಪೂರ್ಣ ಆಧುನಿಕವಾಗಿ ಮಾರ್ಪ[ಟ್ಟಿ]ವೆ. ಒಂದು ಶಾಲೆಯಲ್ಲಿ ಸಾಧಾರಣವಾಗಿ [illegible] ೨೫ ಪತ್ರಿಕೆಗಳನ್ನು ಕಾಣ[ಬ]ಹುದು.

ಶಾಲೆಗಳು ಪತ್ರಿಕೆಗಳನ್ನು ಬರಮಾಡಿ[ಕೊಳ್ಳು]ವುದು ಮಾತ್ರವಲ್ಲದೆ, ವಿದ್ಯಾರ್ಥಿಗಳು [ಅ]ವುಗಳ ಸದುಪಯೋಗ ಮಾಡುವಂತೆ ಬೋಧ[ನೆ]ಯು ನಡೆಯುತ್ತಿದೆ. ಈಗಿನ ಘಟನಾವಳಿ[ಗಳ] ಮೇಲೆ ಉಪಾಧ್ಯಾಯರು ವಿದ್ಯಾರ್ಥಿ[ಗಳೊ]ಡನೆ ಚರ್ಚೆ ನಡೆಯಿಸುವರು. ವಿವಿಧ [ಪ]ತ್ರಿಕೆಗಳ ಯೋಗ್ಯತಾಯೋಗ್ಯತೆಗಳನ್ನು [ಕ]ಂಡುಕೊಳ್ಳುವ ಕೆಲಸವು ಮೊದಲು ನಡೆ[ಯ]ುವುದು. ಇದರಿಂದ ಒಂದು ಶಾಲೆಯು [ತ]ನಗೆ ಬೇಕಾದ ಪತ್ರಿಕೆಗಳನ್ನು ಮೊದಲಾಗಿ [illegible]ಳ್ಳುವುದು. ಈ ಪತ್ರಿಕೆಯ ಲೇಖನ[ಗಳು] ವಿಮರ್ಶಕಾದೃಷ್ಟಿಯಿಂದ ಓದಲಾಗು[ವ]ುದು! ಅಂದರೆ, ವರ್ತಮಾನ ಪತ್ರಿಕೆಗಳು [ಪ]ಠ್ಯಪುಸ್ತಕದ ರೀತಿಯಲ್ಲೇ ವಿದ್ಯಾರ್ಥಿಗಳಿಂದ [ಓ]ದಲ್ಪಡುವುದು.

ನಿರ್ಜನವಾಗಿರುವ ಒಂದು ಆಖಂಡ ಅಡವಿಯು ಮಹಾ ಶಕ್ತಿಶೇಖರ ಭೂಗೋ[illegible]ವಾಯಿತು.

ಯುಗಗ[illegible] ಸುನ[illegible] ಕಣ[illegible] ಯಾಲೋರ್ನ ಎಂಬುದು ಆಸ್ಟ್ರೇಲಿಯಾ ವಿಕ್ಟೋರಿಯಾ ಪ್ರಾಂತ್ಯದ ಒಂದು [illegible] ಕೆಲಕಾಲದ ಹಿಂದೆ, ಉಪಯೋಗಕ್ಕೆ ಬಾರದ ನಿರ್ಜನವಾದ ಅಲ್ಲಿನ ಆಖಂಡ ಅಡವಿಯು ಇಂದು ಸಮಸ್ತ ವಿಕ್ಟೋರಿಯಾ ಪ್ರಾಂತ್ಯಕ್ಕೆ ಬೇಕಾದ ವಿದ್ಯುತ್ ಶಕ್ತಿಯನ್ನು ಒದಗಿಸುವ ಶಕ್ತಿನಿಲಯವಾಗಿರುತ್ತದೆ. ಅಲ್ಲಿ ಕಂದು ಕಲ್ಲಿದ್ದಲಿನ ಮಹಾ ಶೇಖರವು ದೊರಕಿರುತ್ತದೆ. ಈ ಕಲ್ಲಿದ್ದಲನ್ನು ಉರಿಸಿ, ಅನಿಲನ್ನು ತಯಾರಿಸಿ ಇಂಜಿನುಗಳನ್ನು ನಡೆಯಿಸಿ ಧಾರಾಳವಾದ ವಿದ್ಯುತ್ ಶಕ್ತಿಯನ್ನು ತಯಾರಿಸುತ್ತಿದ್ದಾರೆ. ಅಲ್ಲದೆ, ಆ ಕಂದು ಕಲ್ಲಿದ್ದಲ್ಲಿನಿಂದ ಮನೆಗಳಿಗೆ ಬೇಕಾಗುವ ಉರಿಸುವ ಸಾಮಗ್ರಿಗಳನ್ನು ತಯಾರಿಸುತ್ತಿದ್ದಾರೆ.

ವಿಕ್ಟೋರಿಯಾ ಪ್ರಾಂತ್ಯಕ್ಕೆ ಕಲ್ಲಿದ್ದಲಿನ ಅಗತ್ಯವು ಕಂಡು ಬಂದುದರಿಂದ, ಅವರು ವಿವಿಧ ಕಡೆಗಳಲ್ಲಿ ಅದನ್ನು ಹುಡುಕುವವರಾದರು. ಯಾಲೋರ್ನ್‌ದಲ್ಲಿ ೬೦ ವರ್ಷದ ಮೊದಲು ಸಣ್ಣದೊಂದು ಕಲ್ಲಿದ್ದಲಿನ ಶೇಖರವನ್ನು ಕಂಡು ಹಿಡಿದಿದ್ದರು. ಆದರೆ, ಅದರಿಂದ ಪ್ರಯೋಜನವು ಕಂಡು ಬಾರದ್ದರಿಂದ ಆ ಕಲ್ಲಿದ್ದಲನ್ನು ಅಗೆಯುವ ಕಾರ್ಯವನ್ನು ಸಾಧಿಸಲಾರದಾದರು. ಕಲ್ಲಿದ್ದಲಿಗಾಗಿ ವಿಕ್ಟೋರಿಯಾ ಪ್ರಾಂತ್ಯವು ಹತ್ತಿರದ ಪ್ರಾಂತ್ಯವನ್ನು ಹೊಂದಿಕೊಂಡಿರಬೇಕಾಯಿತು. ಆದರೆ, ಅಲ್ಲಿ ನಡೆಯುವ ಮುಷ್ಕರ[illegible]

ಇತ್ಯಾದಿಗಳಿಂದ ನ್ಯಾಯವಾದ ಧಾರಣೆಯಲ್ಲಿ ಕಲ್ಲಿದ್ದಲು ದೊರಕದಿರಲು, ಅವರ ದೃಷ್ಟಿಯು ಮತ್ತೊಮ್ಮೆ ಈ ಕಡೆ ಸರಿಯಿತು. ಕಲ್ಲಿದ್ದಲಿಗಾಗಿ ಯಾಲೋರ್ನ್‌ದಲ್ಲಿ ಮತ್ತೊಮ್ಮೆ ಶೋಧೆ ನಡೆಸಲಾಗಿ, ಅಲ್ಲಿನ ವಿಸ್ತೀರ್ಣದಲ್ಲಿ ಸಾಧಾರಣ ೩,೦೦೦,೦೦೦,೦೦೦ ಟನ್ ಕಂದು ಕಲ್ಲಿದ್ದಲು ಇರುವುದೆಂದೂ, ಅದನ್ನು ಸುಲಭವಾದ ರೀತಿಯಲ್ಲಿ ಅಗೆದು ತೆಗೆಯಬಹುದೆಂದು ಕಂಡು ಹಿಡಿಯಲ್ಪಟ್ಟಿತು. ಈಗ ವಿಕ್ಟೋರಿಯಾ ಪ್ರಾಂತ್ಯಕ್ಕೆ ವರ್ಷ ಒಂದರ ೪ ಮಿಲಿಯ ಟನ್ನ್ ಕಲ್ಲಿದ್ದಲು ಬೇಕಾಗುವುದರಿಂದ, ದೊರಕಿರುವ ಕಲ್ಲಿದ್ದಲಿನ ಶೇಖರವು ಸಾಧಾರಣ ೧೫೦೦ ವರ್ಷಗಳಿಗೆ ಸಾಕಾಗುವುದೆಂದು ಅಂದಾಜು ಮಾಡಲಾಗಿದೆ.

ವಿಕ್ಟೋರಿಯಾ ಪ್ರಾಂತ್ಯದಲ್ಲಿ ಎಲ್ಲಾ ಕೈಗಾರಿಕೆಗಳು ಯಾಲೋರ್ನಿನ ಕಂದು ಕಲ್ಲಿದ್ದಲನ್ನು ಉಪಯೋಗಿಸುತ್ತಿದ್ದಾರೆ. ಕಂದು ಕಲ್ಲಿನಿಂದಾಗಿ ಭಯಂಕರ ಅಡವಿಯಾಗಿರುವ ಈ ಯಾಲೋರ್ನ್ ಈಗ ಒಂದು ಆಧುನಿಕ ಸುಂದರ ನಗರವಾಗಿ ಮಾರ್ಪಟ್ಟಿರುತ್ತದೆ. ಸಂಪೂರ್ಣ ವಿಕ್ಟೋರಿಯಾ ಪ್ರಾಂತ್ಯವು ರಾತ್ರೆಯಲ್ಲಿ ಯಾಲೋರ್ನಿಂದಾಗಿ ಬೆಳಗುತ್ತದು. ಮಾತ್ರವಲ್ಲದೆ, ಸದಾ ಕಾಲವೂ ಕೈಗಾರ ಚಟುವಟಿಕೆಗಳಿಂದ ಝೇಂಕರಿಸುವಂತಾಗಿದೆ– ಯಾಲೋರ್ನ ಅಡವಿಯಿಂದ.

ಪ್ರೊಟೆಸ್ಟಾಂಟ

ಕ್ರೈಸ್ತಬಾಂಧವರಲ್ಲಿ

ಮಿ. ಒಲಿವರ್ ಜ. ಜಕಾರಿಯಸರು ಕಾಂಗ್ರೆಸ್ ಉಮೇದ್ವಾರಿಕೆಗೆ ಅರ್ಜಿಮಾಡಿದ್ದು ಮಿ। ಸಿ. ಜೆ. ವಾರ್ಕಿಯವರನ್ನು ಕಾಂ। ಪಾರ್ಲಿಮೆಂಟರಿ ಬೋರ್ಡಿನವರು ಆರಿಸಿರುವ ನಿಮಿತ್ತ ಕಾಂಗ್ರೆಸ್ ಶಿಸ್ತಿಗನುಸಾರವಾಗಿ ತಾವು ಚುನಾವಣೆಗೆ ನಿಲ್ಲುವುದಿಲ್ಲವಾಗಿಯೂ, ಮಿ। ವಾರ್ಕಿಯವರನ್ನೇ ತನಗೆ ಬೆಂಬಲವಿತ್ತು ಪ್ರೋತ್ಸಾಹಿಸಿದ ಜಾತಿ ವ ಅನ್ಯ ದೇಶಬಾಂಧವರು ತಮ್ಮ ಮತಗಳನ್ನು ಕೊಟ್ಟು ಬೆಂಬಲವೀಯಬೇಕೆಂದೂ ಸಮಗ್ರ ಭಾರತದಲ್ಲಿ ಜನಹಿತವನ್ನು ಬಯಸಿ ಸರ್ವ ಮಾನ್ಯವೂ ಅಖಂಡವೂ ಆಗಿರುವ ಕಾಂಗ್ರೆಸು ಸಂಸ್ಥೆಗೇ ಪ್ರೋತ್ಸಾಹಬಲಗಳನ್ನು ಕೊಡಬೇಕೆಂದು ಹಿಂದೂ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಸ್ತುತ್ಯ. ಆದರೆ ಮಂಗಳೂರಿನ ಹಾಗೂ ಮಲಬಾರಿನ ಕೆಲವು ಪ್ರೊಟೆಸ್ಟಾಂಟ ಕ್ರೈಸ್ತಬಂಧುಗಳು ಇದೇ ತಾ. ೧೫ರ ಹಸ್ತಪತ್ರಿಕೆಗಳಿಂದ ಹಿಂದೀ ಕ್ರೈಸ್ತ ವರ್ಗಕ್ಕೆ ಮಾಡಿರುವ ವಿನಂತಿಯಂತೆ ಮಿ। ಶ್ರೀಷ್ಮರನ್ನು ಆರಿಸಬೇಕೆಂದು ಜಾಹೀರು ಮಾಡಿದ್ದು ಖೇದದಾಯಕವಾಗಿದೆ. ಅದರಲ್ಲೂ, ಪತ್ರಿಕಾ ಸುದ್ದಿಗಾರರೂ ಬಡ ಜನತೆಯ ಸೇವಾತುರರೂ ಆದ ಮಿ। ಜೋರ್ಜ್ ಹರ್ಬರ್ಟರೂ ಅದಕ್ಕೆ ಸಹಿಹಾಕಿರುವುದು ಸಿರಾಶಾಜನಕವಾಗಿದೆ. ಸಹಿಹಾಕಿದವರಲ್ಲಿ ಅನೇಕರು ಮಿ। ಜಕಾರಿಯಸರು ಪ್ರಚಾರ ಭಾಷಣ ಮಾಡುತ್ತಿದ್ದಾಗ ಕಾಂಗ್ರೆಸ್ಸಿನ ಶ್ರೇಷ್ಠತೆ ಉದ್ದೇಶಗಳ ಪ್ರಸ್ತಾಪ ಮಾಡಿದ್ದೂ, ಪಾರ್ಲಿಮೆಂಟರಿ ಬೋರ್ಡಿಗೆ ಅರ್ಜಿಮಾಡಿದ್ದೂ ತಿಳಿದವರಿದ್ದು, ಈಗ ಪಕ್ಷಭೇದ ಮಾಡಿ, ಮಿ। ಶ್ರೀಷ್ಮರಿಗೆ ಸಹಕರಿಸಬೇಕೆಂದು ವಿನಂತಿಸಿರುವುದು ನ್ಯಾಯ ಧರ್ಮಸಮ್ಮತವಲ್ಲ; ಅವರ ಉಮೇದ್ವಾರರಾಗಿದ್ದ ಮಿ। ಜಕಾರಿಯಸರಿಗೂ ಸಂತೋಷಕರವಲ್ಲ. ಇನ್ನಾದರೂ ಪ್ರೊಟೆಸ್ಟಾಂಟ ಬಾಂಧವರು ಮಿ। ಜಕಾರಿಯಸರ ಅರಿಕೆಯಂತೆ ವರ್ತಿಸಿ ಯಾರೆಂದೂ, ಕಾಂ। ಉಮೇದ್ವಾರರಿಗೆ ಸಹಾಯವೀಯುವರೆಂದೂ ಮಿ। ಶ್ರೀಷ್ಮರ ವಾಳೆಯವನ್ನು ತ್ಯಜಿಸುವರೆಂದೂ ಅರಿಕೆಮಾಡಿಕೊಳ್ಳಲಾಗುತ್ತದೆ.

ನ್ಯಾಯಪ್ರಿಯ.

ಭರತಖಂಡದ ಕೀರ್ತಿಯು ಜ್ಯೋತಿಯು ಬೆಳಗುವುದೆಂತು?

ಲೀ

ಈ ವಿಜ್ಞಾನ ಯುಗದಲ್ಲಿ, ಪ್ರಪಂಚವು ಅತಿ ರಭಸದಿಂದ ಮುಂದೆ ಸಾಗುತ್ತಿರುವಾಗ, ನಮ್ಮ ತರುಣ ತರುಣಿಯರಿಗೆ ಹಳೇ ತ್ರಾ ವಿದ್ಯಾಭ್ಯಾಸವು ನಡೆಯುವುದು ಎಂದಿಗೂ ಉಚಿತವೆನಿಸದು. ನಮ್ಮ ಕಾಲದ ಮಹತ್ವವನ್ನು ಪರಿಗಣಿಸಲು, ಕಾರ್ಯಸಿದ್ಧಿಯನ್ನು ಮೆಚ್ಚಲು, ನೂತನ ಕಾಲದ, ಚಟುವಟಿಕೆಗಳನ್ನು ಸರಿಯಾಗಿ ತಿಳಿಯುವರೆ ನಮ್ಮಲ್ಲಿ ಯೋಗ್ಯತೆ ಬರಬೇಕು. ಒಬ್ಬನು ಬಹಳ ಬುದ್ಧಿಶಾಲಿ ನಾಗರೀಕನಾಗಬೇಕಾದರೆ, ಆತನಲ್ಲಿ ಈಗಿನ ಕಾಲದಲ್ಲಿ ನಡೆಯುವ ಚಟುವಟಿಕೆಗಳನ್ನು ಅವುಗಳ ಅರ್ಥ ಕಾರಣ, ಇತ್ಯಾದಿ ವಿಚಾರಗಳನ್ನು ತಿಳಿಯುವವನಾಗಬೇಕು. ಜಗತ್ತಿನ ಅನುನಿತ್ಯದ ಪರಿಚಯವು ಅವನಿಗಾಗಬೇಕು. ಹೀಗಾಗಲು ಪರಮ ಉಪಾಯವು ಒಂದೇ– ವರ್ತಮಾನ ಪತ್ರಿಕೆಗಳು.

ವರ್ತಮಾನ ಪತ್ರಿಕೆಗಳಲ್ಲಿ ಈ ಜಗತ್ತಿನ ಈಗಿನ ಚರಿತ್ರೆಗಳು ಚಿತ್ರಿತವಾಗಿವೆ. ಅವುಗಳಿಂದಲೆ ದೇಶವಿದೇಶಗಳೂ, ರಾಷ್ಟ್ರಗಳೂ, ತಮ್ಮ ತಮ್ಮ ಪರಸ್ಪರ ಅರಿವು ಮಾಡಿಕೊಳ್ಳುತ್ತಿರುವುದು. ಜಗತ್ತಿನ ಸಕಲ ವಿಚಾರಗಳಲ್ಲಿನ ಪ್ರಗತಿಯು ವರ್ತಮಾನ ಪತ್ರಿಕೆಗಳಲ್ಲಿ ಚಿತ್ರಿತವಾಗುವುದು. ಅವುಗಳಲ್ಲದಿದ್ದರೆ, ಆಧುನಿಕ ಜಗತ್ತಿನ ವಿಚಾರವೆ ನಮಗೆ ತಿಳಿಯದಂತಾಗುವುದು. ಆದುದರಿಂದ ನಾವು ಮುಂದೆ ಸಾಗಬೇಕಾದರೆ, ಪತ್ರಿಕೆಗಳು ಅಗತ್ಯ.

ವರ್ತಮಾನ ಪತ್ರಿಕೆ ಇತ್ಯಾದಿಗಳನ್ನು ಓದುವರೆ, ಕೆಲವು ತರುಣರಲ್ಲಿ ಸ್ವಾಭಾವಿಕ ಅಭಿರುಚಿಯಿರುತ್ತದೆ. ಆದರೆ ಹೆಚ್ಚಿನವರು ಆ ತರದ ಅಭಿರುಚಿಯಿಲ್ಲದವರು. ಶಾಲಾ ಕಾಲೇಜಿನಲ್ಲಿ ನಡೆಯುವ ಬೋಧೆಯಿಂದ ತೃಪ್ತರಾದ ಇವರು, ಆಧುನಿಕ ಕಾಲದಲ್ಲಿದ್ದರೂ, ಏನೂ ತಿಳಿಯದವರಾಗಿ, ಹಳೆಯ ಕಾಲದಲ್ಲಿ ಇರುತ್ತಿದ್ದಾರೆ. ಆಧುನಿಕ ಕಾಲಕ್ಕೆ ತಕ್ಕವರಾಗಿ ಅವರು ಬೆಳೆಯಲಾರರು.

ಆಧುನಿಕ ಕಾಲಕ್ಕೆ ತಕ್ಕವುಗಳಾದ ಅನೇಕ ಉತ್ತಮತರದ ಪತ್ರಿಕೆಗಳಿವೆ. ದಿನ ದಿನದ ಘಟನಾವಳಿಗಳು ಅದರಲ್ಲಿವೆ. ಅನೇಕ ವಿಚಾರಗಳು ಅವುಗಳಲ್ಲಿವೆ. ಅವುಗಳನ್ನು ಪಠ್ಯ ಪುಸ್ತಕಗಳನ್ನಾಗಿ ಶಾಲಾ ಕಾಲೇಜುಗಳಲ್ಲಿ ಉಪಯೋಗಿಸಲ್ಪಟ್ಟರೆ ವಿದ್ಯಾರ್ಥಿಗಳು ಉಪಾಧ್ಯಾಯರೊಡನೆ ತಾವಿರುವ ಕಾಲದ ಅರಿವನ್ನು ಮಾಡಿಕೊಂಡು, ವಿಚಾರಗಳನ್ನು ಸರಿಯಾಗಿ ತಿಳಿದವರಾಗಿ, ಕಾಲಕ್ಕೆ ತಕ್ಕುದಾದ ರೀತಿಯಲ್ಲಿ ತರಬೇತು ಹೊಂದುವವರಾಗುವರು.

ಆದ್ದರಿಂದ ನಮ್ಮ ಶಾಲಾಕಾಲೇಜುಗಳಲ್ಲಿ ಉತ್ತಮ ತರದ ಪತ್ರಿಕೆಗಳನ್ನು ಆರಿಸಿ, ಅವುಗಳ ಸದುಪಯೋಗವಾಗುವಂತೆ ಏರ್ಪಾಡುಗಳಾಗಬೇಕು. ಪತ್ರಿಕೆಗಳನ್ನು ನೋಡದೆ, ತಮ್ಮ ಶಿಕ್ಷಕವರ್ಗವನ್ನು ನಡೆಯಿಸಿ, ಇದ್ದಂತೆ ಇರುವ ಉಪಾಧ್ಯಾಯರಿಲ್ಲ, ಸರಿಯಾಗಿ ಹೇಳುವುದಾದರೆ ನಮ್ಮಲ್ಲಿ ಈಗ ನಡೆಯುವ ವಿದ್ಯಾಭ್ಯಾಸವು ವಿದ್ಯಾಭ್ಯಾಸವಲ್ಲ. ಶಾಲಾ ಕಾಲೇಜುಗಳಲ್ಲಿ ಪತ್ರಿಕೆಗಳ ಉಪಯೋಗದ ಕುರಿತು ಒಂದು ತರದ ನವಜಾಗೃತಿ ಹುಟ್ಟಬೇಕು. ಶಾಲಾಕಾಲೇಜುಗಳ ಪುಸ್ತಕಭಂಡಾರದಲ್ಲಿ, ವರ್ತಮಾನ ಕಾಲದ, ಎಲ್ಲಾ ತರದ ಪತ್ರಿಕೆಗಳಿಗೆ ಅವುಗಳ ಯೋಗ್ಯತೆಯ ಮೇಲೆ ಹೊಂದಿಕೊಂಡಿದ್ದು ಸರಿಯಾದ ಸ್ಥಾನವು ದೊರಕಬೇಕು.

ವಿಜ್ಞಾನದ ಸಹಾಯದಿಂದ ಈ ಜಗತ್ತು ದಿನೆ ದಿನೆ ಮಾರ್ಪಡುತ್ತಿದ್ದಂತೆ, ವಿದ್ಯಾರ್ಥಿಗಳ ಪಾಠಗಳು ಮಾರ್ಪಡಬೇಕು. ನಿತ್ಯಲೂ ನಡೆಯುವ ಮಾರ್ಪಾಡುಗಳನ್ನೂ ಅವುಗಳ ರಹಸ್ಯವನ್ನು ತಿಳಿಯುವ ರೀತಿ ನಮ್ಮ ವಿದ್ಯಾಭ್ಯಾಸವು ನಡೆಯಬೇಕು. ಆಗ ಒಂದಾನೊಂದು ಕಾಲದಲ್ಲಿ ಶ್ರೇಷ್ಠ ಪದವಿಯನ್ನು ಹೊಂದಿದ ಭರತಖಂಡದ ಕೀರ್ತಿಯ ಜ್ಯೋತಿಯು ಮತ್ತೊಮ್ಮೆ ಬೆಳಗುವುದು.

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all ~~our customers and other friends our sincerest wishes~~ for a HAPPY NEW YEAR. May the days be filled for YOU and YOURS with cheer and happiness.

ESTD: 1906.

CANARA BANK,

LIMITED.

ಜಪಾನಿನಲ್ಲಿ ಮಹಾತ್ಮರ ಜನಪ್ರಿಯತೆ

'ಜಪಾನಿನಲ್ಲಿ ಶೇಕಡ 99 ಜನರಿಗೆ ಗಾಂಧಿ ರವೀಂದ್ರ ಟಾಗೋರರೆಂದರೆ ಚೆನ್ನಾಗಿ ಗೊತ್ತಿರುತ್ತದೆ ಜಪಾನಿನವರು ಭಾರತೀಯರ ವಿಚಾರವಾಗಿ ಪೂರ್ಣ ಸಹಾನುಭೂತಿಯುಳ್ಳವರಾಗಿದ್ದಾರೆ' ಎಂದು ಜಪಾನಿನ ಕೋಬ್ ವಿಶ್ವವಿದ್ಯಾಲಯದ ಅಧ್ಯಾಪಕರೊಬ್ಬರು ನುಡಿದರು ಅವರು ಹಿಂದೂದೇಶ ಸಂಚಾರವನ್ನು ಕೈಕೊಂಡಿರುತ್ತಾರೆ ಜಪಾನ್ ಭಾರತ ವ್ಯವಹಾರವು ಅಭಿವೃದ್ಧಿಯಾಗುತ್ತಲಿದ್ದ ಹಾಗೆ ಜಪಾನೀಯರು ಭಾರತ ವಿಚಾರ ತಿಳಕೊಳ್ಳಲು ವಿಶೇಷ ಉತ್ಸಾಹಿಗಳಾಗಿದ್ದಾರೆ ನಾವು ಜಪಾನಿನಲ್ಲಿ ಸಂಕಷ್ಟ ಸಮಯದಲ್ಲಿ ನಮ್ಮ ರಾಜಸಿಂಹಾಸನದ ಕೆಳಗೆ ಒಗ್ಗಟ್ಟಿನಿಂದ ಕೂಡುತ್ತೇವೆ ಅದೇ ಪ್ರಕಾರ ನೀವಾದರೂ ಪವಿತ್ರವಾದ ಒಂದು ಐಕ್ಯತೆಯ ಚಿಹ್ನೆಯ ಕೆಳಗೆ ಒಟ್ಟುಕೂಡಬೇಕು ಎಂದರು

ರೈತರಿಗಾಗಿ ರಿಯಾಯತಿ

ರಿವಾ ಸಂಸ್ಥಾನದ ಮಹಾರಾಜರು ಅಲ್ಲಿನ ಜಮೀನುದಾರರಿಗೆ ರೈತರ ಗೇಣಿಯಲ್ಲಿ ರಿಯಾಯತಿ ತೋರಿಸುವಂತೆ ಅಪ್ಪಣೆ ಇತ್ತಿದರು ಜಮೀನು ಸಾಹುಕಾರರ ಅಪ್ಪಣೆಯ ನ್ಯಾಯ ಸುವಷ್ಟು ಕರುಣಾಶಾಲಿಗಳಾಗಳು ಒಪ್ಪಲಿಲ್ಲ ಈಗ ಮಹಾರಾಜರು ತಮ್ಮ ಜಹಗೀರುಗಳನ್ನ ಕೋರ್ಟು ವಾರ್ಡು ವಶಪಡಿಸಿ, ರೈತರಿಗೆ ಸಂಪೂರ್ಣ ಗೇಣಿ ರಿಯಾಯತಿಯನ್ನು ನೀಡಿರುವರು ನಮ್ಮವರಲ್ಲಿಯೂ ಅಂಥ ಒಬ್ಬ ಮಹಾರಾಜನಿಲ್ಲವಲ್ಲ ಎಂಬ ಚಿಂತೆ

71ನೇ ವರ್ಷದಲ್ಲಿ ಸಿನೆಮಾ ನಟಿ

71ನೇ ವರ್ಷದಲ್ಲಿ ದಾಮೆ ಮೇ ವಿಟ್ಟಿ ಎಂಬಾಕೆಯು ಬ ಡಸಿನ ಸಿನೆಮಾ ನಟಿಯಾಗಿದ್ದು ಈಗ ಪುನಹ ಅವೇರಿಕಾದಲ್ಲಿರುವ ಮೆಟ್ರೊ ಗೋಲ್ಡ್‌ವಿನ್ ಮೆಯರ್ ಕಂಪೆನಿಯ ನ ಕೊಂದಿಗೆ ಸಹಿಮಾಡಿರುವಂತೆ ಈಕೆಯು 65 ವರುಷಗಳ ಹಿಂದೆ ಲಂಡನಿನ ಮತ್ತು ನ್ಯೂಯೋರ್ಕ್ ನಗರಗಳಲ್ಲಿ ಅಭಿನಯಿಸಿದವಳಾಗಿದ್ದು ಈ ... ನಾಟಕ ಪ್ರಯೋಗಿ ... ಅವಳಿಗೆ ಹುಟ್ಟಿರ ಪುದು

ಇನ್ಸ್‌ಪೆಕ್ಟರರಿಗೆ ಶಿಕ್ಷೆಯಾಯಿತು

ಅನಾಥಿನಾಥ ಮುಖರ್ಜಿಯೆಂಬ ಸಭ್ಯ ಗೃಹಸ್ಥರೊಬ್ಬರನ್ನು ಅನ್ಯಾಯವಾಗಿ ಹೊಡೆದು ಬಿಟ್ಟು ಕೈದು ಮಾಡಿದರೆಂಬ ಅಪವಾದದ ಮೇಲೆ ದಾರ್‌ಬಾಂಗ್ ಸಂಸ್ಥಾನದ ಎ ಗೋಷ್ ಎಂಬ ಸಬ್ ಇನ್ಸ್‌ಪೆಕ್ಟರರಿಗೆ 4 ತಿಂಗಳ ಕಠಿಣ ಶಿಕ್ಷೆಯನ್ನೂ 25 ರೂಪಾಯಿಯ ಜುಲ್ಮಾನೆಯನ್ನೂ ವಿಧಿಸಲಾಗಿದೆ ಇವನಿಗೆ ಸಹಾಯಕೃದ್ಧ ಇನ್ನಿಬ್ಬರು ದಫೇದಾರರಿಗೂ ಕ್ರಮವಾಗಿ ಜುಲ್ಮಾನೆ ಮಾತ್ರ ... ಪೋಲಿಸರೂ ದುಡುಕಬಾರದು

ವಿದ್ಯಾರ್ಥಿಯ ಆತ್ಮಹತ್ಯೆ

ಮುಖ್ಯೋಪಾಧ್ಯಾಯರು ತನ್ನನ್ನು ಮೆಟ್ರಿಕ್ ಪರೀಕ್ಷೆಗೆ ಕಳುಹಿಸಲು ಚುನಾಯಿಸದಿದ್ದ ದ್ದಕ್ಕೆ, ಲಕ್ನೋ ಇಂಟರ್‌ಮಿಡಿಯಟ್ ಕಾಲೇಜಿನ ವಿದ್ಯಾರ್ಥಿಯಾದ ಮಹಮ್ಮದ್ ಇಬ್ರಾಹಿಮ್ ಎಂಬ ವಿದ್ಯಾರ್ಥಿಯು ಅಫೀಮನ್ನು ತಿಂದು ಪ್ರಾಣ ಕಳಕೊಂಡನು ಶಾಲಾಧಿಕಾರಿಗಳಿಗೆ ಒಂದು ಎಚ್ಚರಿಕೆ

ವಿಚಿತ್ರ ಚಲಚಿತ್ರ ಮಂದಿರ

ಉತ್ತರ ಧ್ರುವದ ಸಮೀಪ ಎಸ್ಕಿಮೊ ಜನರು ವಾಸಿಸುತ್ತಾರೆ. ಸಿನಿಮಾ ಶೋಕು ಅವರಿಗೂ, ಆ ಚಳಿ ಪ್ರದೇಶದಲ್ಲಿ ಹತ್ತಿಕೊಂಡು ಬಿಟ್ಟಿದೆ ಆದರೆ ಅಲ್ಲಿನ ಸಿನೆಮಾಕ್ಕೆ ದುಡ್ಡು ಕೊಡಬೇಕಾದಲ್ಲವಂತೆ ಬದಲಿಗೆ ಬೇರೆ ಬೇರೆ ತೂಕದ ಮೀನುಗಳನ್ನು ಕೊಟ್ಟರೆ ಸಾಕು ಮೀನು ದೊಡ್ಡದಾದರೆ, ಮೊದಲನೇ ತರಗತಿಯಲ್ಲಿ ಕುಳ್ಳಿರಿಸುತ್ತಾರೆ ದಿವಸದಲ್ಲಿ ಒಟ್ಟಾದ ಮೀನುಗಳನ್ನು ಮರುದಿನದ ಸಂತೆಯಲ್ಲಿ ಮಾರಿ ಹಣ ಗಳಿಸುತ್ತಾರೆ ಮೀನಿಗೆ ಕೊರತೆ ಇಲ್ಲದ ಊರುಗಳಲ್ಲಿಯೂ ಹಾಗೆ ಮಾಡಿದರೆ? ಚಲಚಿತ್ರ ಮಂದಿರ ಹೋಗಿ ಮೀನು ಮಾರ್ಕೆಟ್ ಟಾದೀತು, ಅಷ್ಟೆ

ಬಿರುದುಗಳ ಕುರುಹು

ಇಂಡಿಪೆಂಡೆಂಟ್ ಪತ್ರಿಕೆಯ ಒಂದು ಅಗ್ರ ಲೇಖನದಿಂದ —ಅಧಿಕಾರ ಬಿರುದುಗಳೆಂದರೆ ಅದೊಂದು ದ್ರೋಹಕ್ಕೆ ಹರಿದುಂಬುವ ಚಿಹ್ನೆಯಾಗಿರುತ್ತದೆ ಅದನ್ನು ಎಷ್ಟು ಬೇಗನೆ ತೆಗೆದುಹಾಕಬಹುದೊ ಅಷ್ಟು ಒಳ್ಳೆಯದು ಅದರಿಂದಲೆ ಅದರಲ್ಲಿಯೂ ಕಾಂಗ್ರೆಸ್ಸನ್ನು ಸೇರಲು ಅದನ್ನು ತೆಗೆದು ಹಾಕುವವನಿಗೆ ನಿಜವಾಗಲೂ ದೇಶಭಕ್ತನೆನ್ನಬಹುದು'

ರಾಜಮಾತೆಯೂ – ರಾಜಪ್ರೇಯಸಿಯೂ

ಕೆಲವು ವಾರಗಳ ಹಿಂದೆ ಅಂಗ್ಲರಲ್ಲಿ ನವೀನ ಚಕ್ರವರ್ತಿ ಟುಮಾನಿ ... ಭಾವ, ಅಷ್ಟೇ ... ಪಟ್ಟವರಿಗ್ಯಾಗಕ್ಕೆ ಕಾರಣಭೂತಳೆಂದ ಸಿಂಪ್ಸನ್ ಮಹಿಳೆಯು, ರಾಜಮಾತೆಯಾದ ರಾಣಿ ಮೇರಿಯವರ ... ಗಿದ್ದರೆಂದೂ ಅಷ್ಟನು ಎಷ್ಟು ... ಅವಳನ್ನು ಮದುವೆಯಾಗುವುದಕ್ಕೆ ರಾಣಿಯವರ ... ಕೆಲವು ... ವತ್ರಿಕೆಗಳ ಪ್ರಕಟಿಸಿದ್ದವು ... ಸಿಂಪ್ಸನ್ಳ ... ಈ ... ಇಲ್ಲವೆಂದು ತಿಳಿಸಿರುವರ

ಅಮೇರಿಕದ ... ವರ್ಷದ ... ಅವನ ... ಅವನು ... ಅವನನ್ನು ... ತ್ತಾರೆ ... ಅವನು ... ಹುಡುಗರ ... ನನಗೆ ಬಹಳ ... ಹೀಗೆಲ್ಲಾ ಬರೆದ ಹಾಕಿರುವನು. ಒಳ್ಳೆ ಮಾರ್ಗ ನ್ಯಾಯದಲ್ಲಿ ಬಂದ ಈ ಮುದುಕನ ವೈರಾಗ್ಯವು ತರುಣ್ಯದಲ್ಲಿ ಬರತ್ತಿದ್ದರೆ ಎಷ್ಟೋ ಮೇಲಾಗುತ್ತಿತ್ತೆಂದು ಕೆಲವರು ನಗುತ್ತಾರೆ ಇವನಿಗೆ ಒಂದು ವಿಧವಾ ಸಮಾಜದವರು,ಧನ ಸಹಾಯಕ್ಕೆ ಪತ್ರ ಒದೆದಿದ್ದರೆ ಹೇಗಾಗುತ್ತಿತ್ತು?

ವಿಚಿತ್ರ ಸಂಬಂಧ

ಕೆನ್ ಜ ಜಿಮ್ಮರ್ ಎಂಬ 23 ವರ್ಷದ ತರುಣನೂ, ಅವನ 61 ವರ್ಷದ ತಂದೆಯೂ, ಈಗ ಇಬ್ಬರು ಅಕ್ಕತಂಗಿಯರನ್ನ ವಿವಾಹ ಮಾಡಿಕೊಂಡಿರುತ್ತಾರೆ ಇದರಿಂದ ಇವರ ಸಂಬಂಧದ ಕುರಿತು ವಿಚಾರಿಸಿದರೆ ತುಂಬಾ ಗಲಿಬಿಲಿಯಾಗುತ್ತದೆ ಈಗ ನೋಡಿ ಮಗನು ತಂದೆಗೆ ಬಾವನೈದುನನೂ, ತಂದೆ ಹೆಂಡತಿಯ ಭಾವನೂ, ಮಲಮಗನೂ ಆಗಿರುತ್ತಾನೆ, ತಂದೆ ಹೆಂಡತಿಯು ಅವನಿಗೆ ಮಲತಾಯಿಯೂ ಅಲ್ಲದೆ, ಅತ್ತಿಗೆಯೂ ಆಗುತ್ತಾಳೆ ತಂದೆ ಹೆಂಡತಿಯು ಮಗನ ಹೆಂಡತಿಗೆ ಅತ್ತೆಯೂ ಅಕ್ಕಗೆಯೂ, ತಂಗಿಯೂ ಒಂದೇ ಸಾರಿ ಆಗುತ್ತಾಳೆ ಮಗನ ಹೆಂಡತಿಯು ತಂದೆಗೆ ನಾದಿನಿಯೂ, ಸೊಸೆಯೂ, ತಂದೆಯ ಹೆಂಡತಿಗೆ ಅವಳು ತಂಗಿಯೂ, ಮಗಳೂ, ಸೊಸೆಯೂ ಒಂದೇ ಸಮಯದಲ್ಲಿ ಆಗುತ್ತಾಳೆ

ಎದೆಯ ಸುತ್ತಳತೆಯು 12 ಇಂಚಿನಷ್ಟು ಇಳಿಯಿತು.

ದಪ್ಪನಾದ ಮನುಷ್ಯನ ಆಕೃತಿಯು ಮಧ್ಯತರಗತಿಯಾಗುತ್ತ ಬರುತ್ತಿದೆ.

ಕ್ರುಶನ್ ಲವಣವು ಅವನ ಭಾರವನ್ನು ಇಳಿಸಿದಂದಿನಿಂದ – ಅವನ ಉಸಿರಾಟವು ಸುಲಭವಾಗುತ್ತಿದೆ

ದಪ್ಪನಾಗಿ ಬೆಳೆಯುವುದು ಕೆಲವು ಮನುಷ್ಯರ ಜನ್ಮಸಿದ್ಧ ರೋಗವೆಂದೂ, ಅದಕ್ಕೆ ಯಾವ ಬಿಡುಗಡೆ ಇಲ್ಲವೆಂದೂ ತಿಳಿಯುವುದು ತಂಬಾ ತಪ್ಪು ದೇಹ ಗಾತ್ರದಲ್ಲಿ ಹದಿನೆರಡು ಅಂಗುಲಗಳಷ್ಟು ಇಳಿಸಲ್ಪಟ್ಟು, ವ ... ಕೃತಿಯನ್ನು ಹೊಂದಿದವನೊಬ್ಬನು ಹೇಳುತ್ತಿರುವುದನ್ನು ಈ ಕೆಳಗೆ ಓದಿರಿ –

ವಿಪರೀತ ಹೊಟ್ಟೆಯು ಬೆಳವಣಿಗೆ ... ಉಸಿರು ಬಿಡುವ ... ಕಷ್ಟದಿ ... ನಾನು ... ಗಳ ದ ... ಆಗ ನನ್ನ ಹೆಂಡತಿಯು ಕ್ರುಶನ್ ಲವಣವನ್ನ ... ಬೇಕೆಂದು ಹೇಳಿಕೊಟ್ಟಳು ಅದನ್ನ ಮೊದಲನೇ ಸಾರಿ ತೆಗೆದುಕೊಳ್ಳುವಾಗಲೇ ನನಗೆ ಸ್ವಲ್ಪ ಗುಣ ತೋರಿತು ಮರುದಿನ ಇನ್ನೊಂದನ್ನು ತೆಗೆದುಕೊಂಡ ಮೇಲೆ ಗುಣವು ವೃದ್ಧಿಯಾಗಿ, ಈಗ ಮೂರನೇ ಸೀಸೆ ತೆಗೆದುಕೊಳ್ಳುತ್ತಲಿದ್ದೇನೆ ಇನ್ನೂ ಪಡಕೊಳ್ಳಬೇಕೆಂದಿದ್ದೇನೆ ನನ್ನ ಉಸಿರಾಟವು ... ವರ್ಷಗಳ ಕೆಳಗಿದ್ದುದಕ್ಕಿಂತ ಎಷ್ಟೋ ಸರಿಯಾಗುತ್ತಿದ್ದು ನನ್ನ ಭಾರವು ... ರಿಂದ ... ಅಂಗುಲ ಇದ್ದ ನನ್ನ ... ಸುತ್ತಳತೆಯು ಈಗ ... ಆಗಿದೆ

ಇ ಎ ಎಂ

ಪ್ರತಿ ಪ್ರಾತಃಕಾಲ ಕ್ರುಶನ್ ತೆಗೆದುಕೊಂಡದ್ದರಿಂದ ಹೊಟ್ಟೆಯೊಳಗಿನ ಕಲ್ಮಷ ಆಹಾರಗಳೂ, ... ಪದಾರ್ಥಗಳೂ ಸಂಪೂರ್ಣ ಹೊರಹಾಕಲ್ಪಡುತ್ತವೆ ಯುರೋಪಿನ ಶ್ರೀಮಂತರು ತಮ್ಮ ತೂಕವನ್ನು ಇಳಿಸಲಿಕ್ಕಾಗಿ ಹೋಗಿ ಸಿಬ್ಬನ ಆ ಪ್ರಸಿದ್ಧ ಲವಣ ಸರೋವರದಲ್ಲಿನ ... ದಿಂದ ತಯಾರಿಸಲ್ಪಟ್ಟ ಕ್ರುಶನ್ ಲವಣವು ಸರ್ವ ಶ್ರೇಷ್ಠವಾದುದಾಗಿರುತ್ತದೆ



ಎಲ್ಲಾ ಸ್ಟೋರುಗಳಲ್ಲೂ ಬಜಾರುಗಳಲ್ಲೂ ಕ್ರುಶನ್ ಲವಣವು ದೊರೆಯುತ್ತದೆ

ಬೇಗ ಮುರಿಯುವ ಭಾರಿ ಕಳ್ಳ

ಸೆರೆಮನೆಯ ಕಳ್ಳರ ಅಂತ್ಯಸ್ಥಾನವೆನ್ನುತ್ತಾರೆ ಆದರೆ ಈ ಸಾರೆ ಅಮೇರಿಕದ ಭಾರಿ ಕಳ್ಳನೊಬ್ಬನು ಸುಳ್ಳು ಮಾಡಿ ತೋರಿಸುತ್ತಾನೆ

ಅವನನ್ನು ಕ್ರಿಸ್ಟನ್ ಹ್ಯಾಟ್ ಎಂಬಲ್ಲಿನ ದೊಡ್ಡ ಜೈಲಿನ ಭದ್ರವಾದ ಕೋಣೆಯಲ್ಲಿರಿಸಿದರು ಅರೆಘಂಟೆಯೊಳಗೆ ಅತನು ಬೇಗ ಮುರಿದು ಹೊರಗೆ ಬಂದನಂತೆ ಪುನಃ ಅವನನ್ನು ಇನ್ನೊಂದು ತುರಂಗದಲ್ಲಿ ತುಂಬಿಸಿದರು ಆಗ ಅಧಿಕಾರಿಯು "ಎಲೋ ಈಗ ನೀನು ಎಲ್ಲಿ ಹೋಗುತ್ತಿ ನೋಡೋಣ, ಈ ಕೋಣೆಯಲ್ಲಿ ನಿನ್ನ ಚಮತ್ಕಾರ ನಡೆಯದು" ಎಂದನಂತೆ ಅದಕ್ಕೆ ಕಳ್ಳನು "ಇಂಥಾ ಕೋಣೆಯ ಬೀಗಗಳನ್ನು ಬಿಸ್ಕಿಟ್ ತಿಂದ ಹಾಗೆ ಕಿತ್ತುಬಿಸಾಕ್ತೇನೆ ಎಂದು ಹೇಳುತ್ತಾ ಆ ಅಧಿಕಾರಿಯು ನೋಡುತ್ತಿದ್ದ ಹಾಗೆ ಬೀಗ ಮುರಿದು ಹೊರಗೆ ಬಂದನಂತೆ ಆ ಮೇಲೆ ಅವನನ್ನು ಬೇರೆ ಕೋಣೆಯಲ್ಲಿ ಸೇರಿಸಿದರು ಇಂಥವನನ್ನು ಯಾವ ಕೋಣೆಯಲ್ಲಿ ಹೇಗೆ ಇಡುವುದು ಎಂಬ ಒಂದು ಪ್ರಶ್ನೆ?

ಬೆನ್ನ ವ್ಯಾಯಾಮ

ಮನುಷ್ಯನಿಗೆ ಮೃಗಗಳಿಗಿಂತ ಹತ್ತು ಪಾಲು ಬೇಗನೇ ರೋಗಗಳು ತಗಲುವುದರಿಂದಲೂ, ಆ ರೋಗಗಳಲ್ಲಿ ಹೆಚ್ಚಿನವು ಬೆನ್ನು ಬಲಿನ ನ್ಯೂನತೆಯ ... ಗುವುದರಿಂದಲೂ, ಬೆನ್ನಿನ ಕೀಲುಗಳ ... ವ್ಯಾಯಾಮವಾಗಿರುತ್ತದೆ ... ಸ್ಪಂದ ... ವ್ಯಾಯಾಮವನ್ನು ತೆಗೆದುಕೊಳ್ಳುವ ...

(ಕಣೆ ಮೇಟಿನಿಂದ ...)

ಘಂಟೆಯ ಮಾ ... ಕೆಲವು ಉಮೇದುವಾರರು ಸಾರುತ್ತಿರ ... ಇವರ ಜಾತಿಮತ ವೈಶಮ್ಯ ಬೆಳೆಸುವ ಮಾತುಗಳಿಗೆ ಮರುಳಾಗ ನಮ್ಮ ಬುದ್ಧಿಗೇಡಿಗಳೆಂದು ಪೆದ್ದು ನಂಬಲಾರ

ತೆಂಗಿನ ಮರದಿಂದ ಒಬ್ಬ "ಕೊಂಗ್ರೆಸು ಕೊಂಕ್ಕಿ ಗಳದ್ದು" ... ಆಗ ಪೌರಾಧ್ಯಕ್ಷರ ನೆನಪು ಬಂತು ಅವರು ಕೊಂಕ್ಕಿಗಳೂ ಅಂತ ನೋಡ್ಲಿಕ್ಕೆ ಹೋದ್ರೆ ಅಲ್ಲ ಹಾಗಾದರೆ ತೆಂಗಿನ ಮರದವನ ಮಾತಿನಲ್ಲಿ ನ್ಯಾಯವೆಲ್ಲಿದೆ?

ಹಿಂದೂ ಕ್ರಿಕೆಟ್ ಟೀಮು ಕೊಂಕ್ಕಿಗಳದ್ದೆ ಅಂದು ಅವರೆ ಅಂದ್ರಂತೆ. ಅಲ್ಲಿ ನೋಡಿದರೆ ಅದರ ನಾಯಕರು ಶ್ರೀ ಉಗ್ರಪ್ಪ ಶೆಟ್ಟಿ, ಕಲ್ಪವೃಕ್ಷದ ಮೇಲೆ ನಿಂತು ಇಂಥಾ ಅನ್ಯಾಯ ಬೊಗುಳಬೇಕೇ? ಏನು ಮಾಡ್ಬೇಕು ಬಂಗಾರ ಹಲ್ಲಿನ ಪ್ರತಾಪ

'ಪೆದ್ದು'

ಹೊರಗಿರುವ ಭಾರತೀಯರ ಸಂಕಷ್ಟಗಳು.

ಸ್ಟ್ರೇಲಿಯೊದಲ್ಲಿರುವ ಭಾರತೀಯ ಮಜೂರರ ಸ್ಥಿತಿಗಳನ್ನು ಅರಿತು ವರದಿಮಾಡಿಕೊಳ್ಳುವರೆ ಕಳುಹಿಸಲ್ಪಟ್ಟ, ಭಾರತೀಯ ಮಜೂರ ಪ್ರಾತಿನಿಧ್ಯ ಮಂಡಳದ ಅಧ್ಯಕ್ಷರಾದ ರ್ಯಾಟ್ ಆನರಿಬಲ್ ಶ್ರೀನಿವಾಸ ಶಾಸ್ತ್ರಿಗಳು, 'ಹೊರಗಿರುವ ಭಾರತೀಯರು' ಎಂಬ ವಿಷಯ ಒಂದು ಪ್ರಚಂಡ ಭಾಷಣವನ್ನು ಸಿಂಗಾಪುರದ ವಿಕ್ಟೋರಿಯಾ ಸ್ಮಾರಕ ಮಂದಿರದಲ್ಲಿ ಮಾಡಿ, ಮಹಾ ಚಿಂತ್ರೆಯನ್ನು ನಿರ್ಮಿಸಿಬಿಟ್ಟರು. ಬ್ರಿಟಿಷ ಸಾಮ್ರಾಜ್ಯದ ವಿವಿಧ ಕಡೆಗಳಲ್ಲಿರುವ ಭಾರತೀಯರಿಗೆ ಅವರು ಬ್ರಿಟಿಷ ಕೊಮನ್‌ವೆಲ್ತಿನ ಸದಸ್ಯರಾಗಿದ್ದರೂ, ಸಂಸವಾನವಾದ ನಡುವಳಿಕೆಯು ದೊರಕದು. ಅವರು ಬಹಳ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆಂದೂ, ಇದರಿಂದ ಬ್ರಿಟಿಷ ಸಾಮ್ರಾಜ್ಯಕ್ಕೆ ಹಾನಿಬರಬಹುದೆಂದೂ, ಶಾಸ್ತ್ರಿಗಳು ತಮ್ಮ ಭಾಷಣದಲ್ಲಿ ಸೂಚಿಸಿದರು.

ಬ್ರಿಟಿಷ ನ್ಯಾಯದ ಆದರ್ಶಗಳು, ಅವರ ಭಾಷಣದಿಂದ ಬಯಲಾದವು

ಸಂಯುಕ್ತ ಅಮೇರಿಕಾದಲ್ಲಿ ಉಂಟಾದ ಹಲಕೆಲವು ಮುಷ್ಕರಗಳು ನಿಲ್ಲಿಸಲಾಗಿ, ಮಜೂರರಿಗೆ ಒಪ್ಪಿಗೆ ಇರುವ ತರದಲ್ಲಿ ಒಪ್ಪಂದ ನಡೆಯುವ ಮಾತುಕತೆಗಳು ನಡೆಯುತ್ತವೆ.

ಹೈದರಾಬಾದಿನಲ್ಲಿ ಭಯಂಕರ ಮೋಟಾರು ಅಪಘಾತ.

೧೫ ಜನರು ಕೂಡಲೆ ಮೃತರಾದರು. ಹೈದರಾಬಾದಿನ ಸಿಕಂದರಾಬಾದಿನಿಂದ ರಂಕಶಾಲೆಯ ಉದ್ಯೋಗಿಗಳು ವಿಹಾರ ಪ್ರವಾಸಕ್ಕಾಗಿ ಒಂದು ಮೋಟಾರು ಬಸ್ಸಿನಲ್ಲಿ ಹೋಗುತ್ತಿರುವಾಗ, ಒಂದೆಡೆ ರೈಲ್ವೆ ಕಂಬಿಗಳನ್ನು ದಾಟುತ್ತಿರುವಾಗ, ಅಕಸ್ಮಾತ್ತಾಗಿ ಟ್ರೈನು ದಾಟುತ್ತಿರುವುದರಿಂದ ಟ್ರೈನಿಗೆ ಡಿಕ್ಕಿ ಬಡಿದು, ಮೋಟಾರು ನುಚ್ಚುನೂರಾಗಿ ೧೫ ಜನರು ಒಡನೆ ಮೃತರಾದರು. ಮಿಕ್ಕವರ ಸ್ಥಿತಿಯೂ ಕಠಿಣವಾಗಿರುತ್ತದೆ

ಐರಿಷ್ ಆಂಗ್ಲೇಯ ಸಂಬಂಧ.

ಅನೇಕ ರಾಜಕೀಯ ವಿಚಾರಗಳಲ್ಲಿ, ಐರ್ಲೆಂಡಿಗೂ, ಇಂಗ್ಲೆಂಡಿಗೂ ಭೇದಗಳಾಗಿದ್ದು, ಅದು ಇಂಗ್ಲಾಂಡಿನಿಂದ ದೂರಕ್ಕೆ ಸರಿಯುತ್ತಿದ್ದಷ್ಟೆ ಈಗ ಸ್ವತಂತ್ರ್ಯವಾಗಿದೆ ಅಲ್ಲದೆ ಆಂಗ್ಲೇಯರು ಅದರ ಸ್ವಾತಂತ್ರ್ಯವನ್ನು ಮನ್ನಿಸುವ ದಿನವು ಬಂದಿದೆ ಇಂಗ್ಲಾಂಡಿನ ರಿಪ್ಸೆ ಮೆಕ್‌ಡೊನಾಲ್ಡರಿಗೂ ಐರ್ಲೆಂಡಿನ ಅಧ್ಯಕ್ಷ ಡಿವಲೆರರಿಗೂ, (ಈಗ ಕಣ್ಣು ಚಿಕಿತ್ಸೆಗಾಗಿ ಲಂಡನಿಗೆ ತೆರಳಿರುವರು) ರಹಸ್ಯದಲ್ಲಿ ಮಾತುಕತೆಗಳು ನಡೆಯುದವೆ ಎಂದು ವಾರ್ತೆ ಬಂದಿದೆ. ಐರಿಷ್-ಆಂಗ್ಲೇಯ ವೈಮನಸ್ಸನ್ನು ಸುಧಾರಿಸಿಕೊಳ್ಳುವುದು, ಆ ಮಾತುಕತೆಗಳ ಮುಖ್ಯ ಉದ್ದೇಶವೆಂದು ತಿಳಿದುಬರುತ್ತದೆ

ಹೀಗೆ ಅರಸರು ಗುಪ್ತವಾಗಿ ನಡೆಯಿಸಿದ ಪ್ರಣಯ ಇತ್ಯಾದಿ ಇತ್ಯಾದಿ ಕಾರಣಗಳಿಂದಾಗಿ ತಾವು ಬ್ರಿಟಿಷ ಚಕ್ರವರ್ತಿಯರೆಂದು ಇಂದಿಗೂ ಅನೇಕರು ಮುಂದೆ ಬರುತ್ತಿದ್ದಾರೆ.

ಮೂಲರ ಕೊಟ್ಲಾದಲ್ಲಿ ನಡೆದ ಮಹಾ ಕೊಲೆ.

ಬ್ರಿಟಿಷ ಪ್ರಭುತ್ವಕ್ಕೆ ವಿರೋಧವಾಗಿ ದಂಗೆ ಎಬ್ಬಿಸಿದುದಕ್ಕಾಗಿ ನಡೆದ ಕೊಲೆಯಿದು. ೧೮೭೨, ಜನವರಿ ೧೯ರಲ್ಲಿ ಅದು ನಡೆದುದು. ಮಾಲರ ಕೊಟ್ಲಾದಲ್ಲಿ ನಡೆದ ಕೂಕು ದಂಗೆಯ ಪರಿಣಾಮವಾಗಿ ಪಂಜಾಬದ ಲೂದಿಯಾನ ಎಂಬಲ್ಲಿ ಡಿಪ್ಯೂಟಿ ಕಮಿಶನರಾದ ಮಿ॥ ಕೊವೆನ್ ಎಂಬವರ ದೂರ್ತತನದಿಂದ ಆ ವಿಷಾದಮಯ ಘಟನೆಯು ನಡೆದುಹೋಯಿತು ೪೯ ಕೈದಿಗಳನ್ನು ಫಿರಂಗಿಯ ಬಾಯಿಗಳಿಗೆ ಕಟ್ಟಲ್ಪಟ್ಟು (ಒಂದೊಂದು ಬಾರಿ ೬ ಜನರಂತೆ-ಅವರ ಕೊಲೆಯು ನಡೆಯುತ್ತಿಯವಾಗ, ಮಿಕ್ಕ ಕೈದಿಗಳು ದಿರದಿರನೆ ನೋಡುತ್ತಿದ್ದು) ಕತ್ತರಿಸಲ್ಪಟ್ಟರು ಕತ್ತರಿಸಲ್ಪಟ್ಟ ಕೈಕಾಲು, ಅಂಗ, ತಲೆಮುಂಡೆಗಳ ಸುರಿಮಳೆಯು ಸುರಿಯಿತು ಅಂದಿನ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ಕುರಿತು ಮಾತುಗಳು ಬರುವುದು ಬಹಳ ಕಡಿಮೆಯಾಗಿದ್ದರೂ ಈ ಮಹಾ ಕೊಲೆಯ ವಿಚಾರ ಪ್ರಶ್ನೆಗಳು ಕೇಳಲಾಗಿದ್ದವು ಮಹಾ ಕೊಲೆಯನ್ನು ನಡೆಯಿಸಿದ ಕೊವೆನನಿಗೆ ಶಿಕ್ಷೆಯಾಗಿ ಕೆಲಸದಿಂದ ಮಾತ್ರ ತಳ್ಳಿಹಾಕಿದರು

ಕೂಕರೆಂದರೆ ಅವರು ಸಿಖ್ಖರ ಒಂದು ವರ್ಗವು ಗುರುರಾಮಸಿಂಗನು ಅವರ ನಾಯಕನು ಮೊತ್ತಮೊದಲು ಬಡಗಿಯಾಗಿದ್ದವನು, ಅವನು ತನ್ನ ಪವಿತ್ರ ಸ್ವಭಾವ, ಶಾಳೆಗುಣ ಇತ್ಯಾದಿಗಳಿಂದ ಸಿಖ್ಖರಲ್ಲಿ ಗುರುವಾಗಿರುವಾದನು ಆತನ ಚಳವಳಿಯೆಲ್ಲ ಧರ್ಮರೂಪದಲ್ಲಿ ನಡೆಯುತ್ತಿದ್ದರೂ ಆತನ ಅನುಯಾಯಿಗಳು ಅದಕ್ಕೆ ರಾಜಕೀಯ ಬಣ್ಣವನ್ನು ಕೊಟ್ಟರು. ಕೂಕರು ಸರಕಾರಕ್ಕೆ ವಿರೋಧವಾಗಿ ಬೋಧೆಯನ್ನು ಪ್ರಾರಂಭಿಸಿದರು ಆದರೆ ಪೋಲೀಸರು ಅದರ ತಕ್ಕ ಸಿಗಾ ತೆಗೆದುಕೊಂಡುದರಿಂದ ೧೮೭೨ರಲ್ಲಿ ಕೂಕ ಚಳವಳಿವು ಮೇಲಕ್ಕೆ ಬಾರದೆ ಹೋಯಿತು.

ಆದರೆ, ಸ್ವಲ್ಪ ಸಮಯದಲ್ಲಿ ಪಂಜಾಬಿನ ಆನಂದಪುರದಲ್ಲಿ ನಡೆಯುವ ಮಹಾಸಂತೆಯಲ್ಲಿ ಕೂಕರ ಮಹಾ ಸಮೂಹವೊಂದು ಕೂಡಿತು ಭಾಷಣಗಳು ನಡೆದುವು. ಪೋಲೀಸರಲ್ಲಿದರ ತ್ತಿದ್ದರೆ ಗಲಭೆಯು ನಡೆಯುವ ಹಾಗಿತ್ತು. ಬ್ರಿಟಿಷರ ವಿರೋಧವಾಗಿ ಆದರ್ಶಗಳು ಹೊರಟವು ಅವುಗಳನ್ನು ತಡೆಯಲು ಅಸಾಧ್ಯವೆನಿಸಿತು ಅನ್ಯರ ಪ್ರಭುತ್ವವನ್ನು ತಪ್ಪಿಸಲು ಧರ್ಮದ ಹೆಸರಲ್ಲಿ ಒಂದು ಯುದ್ಧವನ್ನು ಹೂಡುವ ಪ್ರಯತ್ನಗಳು ನಡೆದುವು. ಕೆಲವುಂದಿ (ಸಾಧಾರಣ ನೂರು ಇನ್ನೂರಾಗಬಹುದು) ಶಸ್ತ್ರಧಾರಿಗಳಾಗಿ ಯುದ್ಧರಂಗಕ್ಕಿಳಿದರು. ಒಂದು ಪರ್ವತವನ್ನು ಕಾಲಿನಿಂದ ಒದೆದು ಬೀಳಿಸಬಹುದೆ? ಅದೇ ರೀತಿ ಈ ಕೂಕ ಸಮೂಹದಿಂದ ಏನುಮಾಡಲಾದೀತು? ಕಾದಾಡಿದರು. ಕೂಡಲೆ ಸದೆಬಡೆಯಲ್ಪಟ್ಟರು. ಕೆಲವರು ಸೆರೆಹಿಡಿಯಲ್ಪಟ್ಟರು. ಸೆರೆಹಿಡಿಯಲ್ಪಟ್ಟವರ ಮೇಲೆ ಹೇಳಿದ ಶಿಕ್ಷೆಯು ನಡೆಯಿತು.

ನೂತನ ರಷ್ಯಾ ಜರ್ಮನ್ ತಿಕ್ಕಾಟ.

ರಷ್ಯಕಕ್ಕೂ, ಜರ್ಮನಿಗ್ಗೂ, ಐರೋಪ್ಯದ ಹಲವು ಕಡೆಗಳಲ್ಲಿ ತಿಕ್ಕಾಟವು ಪ್ರಾರಂಭವಾಗಿದೆ. ಈ ತಿಕ್ಕಾಟದಿಂದ ಇನ್ನೊಂದು ಮಹಾ ಯುದ್ಧವು ಸದ್ಯದಲ್ಲಿ ನಡೆಯುವುದೆಂಬ ಭೀತಿಯು ಎಲ್ಲೆಲ್ಲೂ ಉಂಟಾಗಿದೆ. ಈ ತರದ ನೂತನ ಒಂದು ತಿಕ್ಕಾಟವು, ರಷ್ಯ-ಜರ್ಮನ್ ಗಡಿಯಲ್ಲಿರುವ ಜೆಕೊಸ್ಲೊವೆಕಿಯಾದಲ್ಲಿ ಪ್ರಾರಂಭವಾಗಿದೆ. ಅಲ್ಲಿನ ಸಂಗ್ರಾಮ ಇತ್ಯಾದಿ ಇಲಾಖೆಗಳಲ್ಲಿ ಸೋವಿಯಟ್ ಪ್ರೇರಣೆಯು ಕಾಣಿಸಿಕೊಳ್ಳುತ್ತದೆ ಎಂಬುದಾಗಿ, ನಿಜವಾಗಿ ಸ್ಥಿತಿ ಹಾಗಿಲ್ಲದಿದ್ದರೂ, ಕೆಲವು ಜರ್ಮನ್ ಪತ್ರಿಕೆಗಳು ಸುಳ್ಳು ಪ್ರಸಾರಣೆಯನ್ನು ಪ್ರಾರಂಭಿಸಿವೆ.

ಬ್ರಿಟಿಷ್ ಪಟ್ಟಕ್ಕೆ ಹಕ್ಕುದಾರರೆಂದು ನಟಿಸುವವರು.

ಬ್ರಿಟಿಷ್ ಸಿಂಹಾಸನದ ಮೇಲೆ ಈಗಿರುವ ಹೆನೊವರ ಮನೆತನವು ಅಧಿಕಾರಕ್ಕೆ ಬರುವ ಮೊದಲು. ಸ್ಟೂವರ್ಟ ವಂಶದ ಅರಸರು ಬ್ರಿಟಿಷ ಸಾಮ್ರಾಟರಾಗಿದ್ದರು ಸ್ಟೂವರ್ಟರು ಅಧಿಕಾರವನ್ನು ಕಳಕೊಂಡು ಎರಡು ಶತಮಾನಗಳಾಗಿದ್ದರೂ ಈಗಲೂ ಬ್ರಿಟಿಷ್ ಪಟ್ಟಕ್ಕೆ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಲು ಹಳೆ ರಿಕಾರ್ಡುಗಳನ್ನು ಪರಿಶೀಲಿಸುವುದರಲ್ಲಿ ಕಾಲ ಕಳೆಯುವವರು ಅನೇಕರಿದ್ದಾರೆ ಅಲ್ಲದೆ ಬ್ರಿಟಿಷ್ ಪಟ್ಟಕ್ಕೆ ತಮಗೂ ಹಕ್ಕಿದೆ ಎಂದು ಹೇಳಿಕೊಳ್ಳುವ ಅನೇಕರು ಇಂಗ್ಲಾಂಡಿನಲ್ಲಿರುವರು ಸ್ಟೂವರ್ಟ ವಂಶವು ಅಧಿಕಾರಕ್ಕೆ ಬರಬೇಕೆಂದು ಜೆಕೊಬ್ಬೈಟು ಎಂಬ ಪಕ್ಷವೊಂದು ಈಗಲೂ ಪರಿಶ್ರಮಿಸುತ್ತದೆ ವರ್ಷಂಪ್ರತಿ ಈ ಜೆಕೊಬ್ಬೈಟರ ಪ್ರದರ್ಶನಾ ಸಭೆಯೊಂದು ಲಂಡನಿನ ಟ್ರಫ್ಲಗಾರ್ ಸ್ಕ್ವೈಯಾರ್ ಎಂಬಲ್ಲಿ ಸ್ಟೂವರ್ಟ ಅರಸನಾದ ಒಂದನೆ ಚಾರ್ಲ್ಸನ ಪ್ರತಿಮೆಯ ಎದುರು ನಡೆಯುತ್ತದೆ ಇಂಗ್ಲಾಂಡಿನ ಒಕ್ಸಫೋರ್ಡಿನಲ್ಲಿ ಇದೇ ತರದ ಒಂದು ಚಾರ್ಲ್ಸ ಕ್ಲಬ್ ಎಂಬ ಸಂಸ್ಥೆಯಿದೆ ವರ್ಷಂಪ್ರತಿ ಸುಂದರ ಉಡುಪುಗಳನ್ನು ಧರಿಸಿ ಚಾರ್ಲ್ಸ ಅರಸರ ಸ್ಮಾರಕಾರ್ಥವಾಗಿ ಅವರು ಔತಣ ನಡೆಸುವುದುಂಟು ಇಂಗ್ಲಾಂಡಿನ ಅನೇಕ ಮಹಾ ವ್ಯಕ್ತಿಗಳು ಈ ಸಂಸ್ಥೆಯ ಸದಸ್ಯರಾಗಿರುವರು

ಸತ್ತನು ಎಡ್ವರ್ಡರ ಕಾಲದಲ್ಲಿ ಸ್ಟೂವರ್ಟ ಸಂಘದವರು ಬಹಳ ಚಳವಳಿಗಳನ್ನು ನಡೆಯಿಸಿದರು. ಅಂದು ಅವರು ಬ್ರಿಟಿಷ್ ಪಟ್ಟಕ್ಕೆ ನಿಜವಾದ ಹಕ್ಕುದಾರರಾದ ಸ್ಟೂವರ್ಟ ವಂಶದ ಜನರ ಒಂದು ಪಟ್ಟಿಯನ್ನು ಪ್ರಕಟಿಸಿದರು. ಆ ಪಟ್ಟಿಯಲ್ಲಿ ೫೦೪ ಹೆಸರುಗಳಿದ್ದವು. ಐರೋಪ್ಯದ ಒಂದೆರಡು ರಾಷ್ಟ್ರಗಳು ಬಿಟ್ಟು, ಮಿಕ್ಕ ರಾಷ್ಟ್ರಗಳ ಅರಸರ ಹೆಸರುಗಳು ಆ ಪಟ್ಟಿಯಲ್ಲಿದ್ದವು.

ಸ್ಟೂವರ್ಟ ವಂಶದ ಕೊನೆಯ ರಾಣಿಯಾದ ಏನಳ ಮಗನು ಮೃತನಾಗಲು (೧೭೦೦) ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನವರು ರೋಮನ್ ಕೆಥೊಲಿಕ್ ಅರಸರಾದ ಚಾರ್ಲ್ಸ, ಜೇಮ್ಸು ಇತ್ಯಾದಿ ಅರಸನ್ನುಹೊರಗಿಡಲು ಹೊಸತೊಂದು ಆಕ್ಟನ್ನು ಮಂಜೂರುಮಾಡಿ, ಈಗಿನ ಹೆನೊವರ ವಂಶವು ಪಟ್ಟಕ್ಕೆ ಬರುವಂತೆ ಚುನಾಯಿಸಿದರು. ಈ ವಿಷಯದ ಮೇಲೆ ಬಹಳ ಚರ್ಚೆಯು ನಡೆದಿತ್ತು ಹೆನೊವರ ವಂಶಕ್ಕೆ ಒಂದು ಮತವು ಹೆಚ್ಚಿಗೆ ದೊರಕಿದ್ದರಿಂದ ಅದು ಚುನಾಯಿತವಾಯಿತು. ಸ್ಟೂವರ್ಟ ವಂಶವನ್ನು ಆಧರಿಸುವ ಓರ್ವ ಪಾರ್ಲಿಮೆಂಟು ಸಭೆಗೆ ಬರಲು ಸ್ವಲ್ಪ ತಡವಾದುದರಿಂದ ಹಾಗಾಯಿತು

ಒಂದನೇ ಜೋರ್ಜರಲ್ಲಿ ಹೆನೊವರ ರಾಜವಂಶವು ಪ್ರಥಮತವಾಗಿ ಬ್ರಿಟಿಷ ಪಟ್ಟವನ್ನೇರಿತು. ಜರ್ಮನಿಯಲ್ಲಿ ಹುಟ್ಟಿಬೆಳೆದ ಆತನು ಜರ್ಮನನೆ ಆಗಿದ್ದನು ಆತನ ಕ್ರಮ, ವರ್ತನೆ, ಭಾಷೆ ಎಲ್ಲವೂ ಜರ್ಮನೀಯವಾಗಿತ್ತು ಅವನಿಂದಲೇ ಬ್ರಿಟಿಷ್ ಸಾರ್ವಭೌಮನಿಗೆ ಇರುವ ಅಧಿಕಾರವೆಲ್ಲ ಮಂತ್ರಿಮಂಡಳಕ್ಕೆ ಹೋದುದಾಗಿರುತ್ತದೆ ಕಾರಣ, ಆಂಗ್ಲೇಯವನ್ನರಿಯದ ಆತನು ಮಂತ್ರಿಮಂಡಳದ ಸಭೆಗಳಿಗೆ ಅಧ್ಯಕ್ಷನಾಗಿ ಬರಲಾರದವನಾದನು. ಹೇಗೆನೆ ಈ ಹೆನೊವರ ವಂಶವು ಮುಂದುವರಿದು ಇಂದಿಗೂ ಅದೇ ವಂಶವು ಪಟ್ಟದ ಮೇಲಿರುವುದು.

ಪಾರ್ಲಿಮೆಂಟಿಗೆ ಅರಸರನ್ನು ಚುನಾಯಿಸುವ ಹಕ್ಕಿಲ್ಲ ಜನನದ ದೆಸೆಯಿಂದ ಅರಸರು ಪಟ್ಟವೇರಬೇಕೆ ಎಂಬ, ಸ್ಟೂವರ್ಟರನ್ನು ಆಧರಿಸುವ ಜೆಕೊಬ್ಬೈಟರ ವಾದ ಇಂದಿಗೂ ಜೆಕೊಬ್ಬೈಟು ಸ್ಟೂವರ್ಟ ರಾಜರ ಪರಿವಾರ ಮಂಡಳವೊಂದಿರುವುದು

ಕೊವೆನನು ಆ ಮಹಾ ಕೊಲೆಯನ್ನು ನಡೆಯಿಸಿದುದು ತನ್ನ ಸ್ವಂತ ಸ್ವೇಚ್ಛೆಯಿಂದ ಕೈದಿಗಳ ವಿಚಾರಣೆ ನಡೆಯಬೇಕೆಂದು ಮೇಲಧಿಕಾರಿಗಳ ಅಪ್ಪಣೆಯಿದ್ದರೂ ಆತನು ಅದಕ್ಕೆ ವಿರೋಧವಾಗಿ ನಡೆದುಬಿಟ್ಟನು.

ಈ ಜೆಕೊಬ್ಬೈಟ್ ಸಂಘ ಒಂದಲ್ಲದೆ ಪಟ್ಟಕ್ಕೆ ಹಕ್ಕನ್ನು ತೋರಿಸುವ ಇತರ ಅನೇಕ ವಿಚಿತ್ರ ವ್ಯಕ್ತಿಗಳು ಇಂಗ್ಲಾಂಡಿನಲ್ಲಿರುವರು. ಚಾರ್ಲ್ಸ ಅರಸನು ತಮ್ಮ ಪಿತಾಮಹನೆಂದು ಹೇಳಿ ಕಳೆದ ಶತಮಾನದಲ್ಲಿ ಈರ್ವರು ಸಹೋದರರು ಪಟ್ಟಕ್ಕೆ ತಮ್ಮ ಹಕ್ಕು ತೋರಿಸುವವರಾದರು.. ಅವರ ಮುಖಗಳು ಆ ಚಾರ್ಲ್ಸ ಅರಸನನ್ನು ಹೋಲುತ್ತಿದ್ದುವು. ಅವರಿಗೆ ಆಧಾರವಾಗಿ ಅನೇಕ ಮಹನೀಯರು ಒಟ್ಟಾಗಿದ್ದರು.

ಶೀತ ಕೆಮ್ಮುಗಳು ಇಂದ್ರಜಾಲದಂತೆ ಗುಣಮಾಡಲ್ಪಡುತ್ತವೆ.

ಸುವಾಸನೆಯುಳ್ಳ ಪೆಪ್ಸ ವಿಷಹಾರಿ ಗುಳಿಗೆಗಳು ಕೆಮ್ಮು ಶೀತ, ಶೀತಜ್ವರಗಳನ್ನು ಗುಣಪಡಿಸುವುದರಲ್ಲಿ ಖಾತ್ರಿಯಾಗಿದ್ದು ಇದರಿಂದ ಬ್ರಾಂಕೈಟಿಸ್, ನಿಮೋನಿಯಾ, ಮತ್ತು ಕಾಸಗಳ ಭಯವಿರುವುದಿಲ್ಲ ಪೆಪ್ಸನ್ನು ನುಂಗುತ್ತಿರುವಾಗ ಅದು ಬಿಡುವ ಔಷಧ ಸಾರವು ಅಂಟು ರೋಗಾಣುಗಳನ್ನು ನಾಶಮಾಡಿ, ಗಂಟಲನ್ನು ತಣ್ಣಗೆ ಮಾಡುತ್ತದಲ್ಲದೆ ಶ್ವಾಸಕೋಶಗಳ ವೇದನೆಯನ್ನು ನಿಲ್ಲಿಸುತ್ತದೆ. ಗಂಟಲು, ಶ್ವಾಸಕೋಶಗಳ ತೊಂದರೆಗಳನ್ನು ಗುಣಪಡಿಸಲಿಕ್ಕೆ ಪೆಪ್ಸ ಗುಳಿಗೆಗೆ ಸರಿಸಮಾನವಾದುದು ಇನ್ನೊಂದಿಲ್ಲ.



ಎಲ್ಲಾ ಔಷಧಿ ಮಾರುವವರಲ್ಲಿಯೂ ಸಿಗುತ್ತದೆ.

ಸೀಸೆ ಒಂದಕ್ಕೆ ರೂ) ಮಾತ್ರ

ಪೆಪ್ಸ ಗುಳಿಗೆಗಳನ್ನು ತೆಗೆದುಕೊಳ್ಳಿರಿ.

ಏಜಂಟರು:—ಮೆಸರ್ಸ ದಾಥಾ ಎಂಡ್ ಕೊ, ಪಿ. ಟಿ. ಮದ್ರಾಸು.

ಪೆಪ್ಸ PEPS

TRUE COPY.

Nanjangood dated 20th Oct 36

From

B. M. Sivaramiah,

(Bellur M Sivaram)

First Grade Pleader,

Brindaban Kuteer, NANJANGOOD.

To

The Secretary,
The C. P. C. Co., Ltd.,
MANGALORE.

Sir,

From here I write to thank you heartily for the excellent convenience you were pleased to afford me in my lecture tours in South Kanara. Ever since, I got down from train at Hassan your service took charge of me and at Sakleshpur Puttur Mangalore, Udipi (especially) Someshwar and even at Agumbe your service was kind and all felicitous to me. I felt as if I had my own car with me throughout. I may say here that I observed that all other passengers also were treated alike and their conveniences attended to promptly properly and what is most remarkable courteously. I think I have derived from your service in my tour ten times the benefit I have really paid for the same. I conclude by saying yours is an excellent service and you deserve every praise for the public good you are doing all along.

Please accept my heartfelt thanks and congratulations.

Yours sincerely

(Sd) B. M. Sivaramiah.

ತಯಾರಾಗಿವೆ! 1937ನೇ ಇಸವಿಯ ಸಣ್ಣ ಮತ್ತು ದೊಡ್ಡ ಸೈಜಿನ ಶಾರದಾ ಡೈರಿಗಳು ಈಗಾಗಲೇ ಸಿದ್ಧವಾಗಿವೆ. ಸಣ್ಣ ಸೈಜು ಬರೇ ನಾಲ್ಕಾಣೆ – ದೊಡ್ಡದಕ್ಕೆ ಬರೇ ಎಂಟಾಣೆ **ತಯಾರಾಗಿವೆ!**

THE BOMBAY LIFE ASSURANCE CO., LTD.

Estd 1908

Church Gate Street, Fort - - BOMBAY

SPECIAL FEATURES.

1 Rebate on yearly payment of policies
2 Rebate for larger assurances
3. Accident Risk covered on small extra premiums
4 Attractive Bonuses

It pays you to represent this Company

Wanted Agents in unrepresented parts

Apply to.—

Messs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at -	P. B. 337, Mount Road, Madras	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S India	Charni Road, Bombay No. 4

ಮಂಗಳೂರು

ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಮುಹಮ್ಮದೀಯರ ಪರವಾಗಿ ಮಂಗಳೂರು, ಕುಂದಾಪುರ ಡಿವಿಜನ್ನಿಗೆ ಉಮೇದ್ವಾರರಾಗಿದ್ದ ಕಾರ್ಕಳದ ವಕೀಲ್ ಜನಾಬ್ ಸೈಯ್ಯದ್ ಹುಸ್ಸೇನ್ ಸಾಹೇಬ್ ಬಹದ್ದೂರ್ ಬಿ. ಏ. ಬಿ. ಎಲ್. ರವರು ಪ್ರತಿ ಪಕ್ಷಿಗಳಿಲ್ಲದೆ ಆರಿಸಲ್ಪಟ್ಟರೆಂಬ ಸಂಗತಿಯನ್ನು ತಿಳಿಸಲು ಸಂತೋಷ ಪಡು... (ಬಾತ್ಮಿ)

ನಂ. ೧ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದವರು ಇದೇ ಬರುವ ತಾ. ೩೧ಕ್ಕೆ ಒಂದು ಸಭೆಯನ್ನು ಕೂಡಿಸಲಿರುವರು. ತಾವು ಕಲಿತ ಶಾಲೆಯ ಸೇವೆಯನ್ನು ಯಾವ ಪರಿಣಾಮಕಾರಿ ಕಾರ್ಯಗಳಿಂದ ಮಾಡಬಹುದೆಂದು ನಿರ್ಣಯಿಸುವುದೇ ಅಂದಿನ ಸಭೆಯ ಉದ್ದೇಶ್ಯವೆಂದು ತಿಳಿದುಬಂದಿದೆ.

ಕಳೆದ ವಾರ ಬೋಳಾರದಲ್ಲಿ ಒಬ್ಬ ಮಾಪಿಳ್ಳೆ ಹುಡುಗನು ಒಂದು ಮೋಟಾರ ಬಂಡಿಯ ಅಡಿಯಲ್ಲಿ ಬಿದ್ದು ಮೃತಪಟ್ಟನು. ಅಧಿಕಾರಿಗಳು ತನಿಖೆ ನಡೆಸುತ್ತಾರೆ.

ಕಳೆದ ಆದಿತ್ಯವಾರ ಚುನಾವಣೆಯ ಪ್ರಚಾರ ಕಾರ್ಯದ ಸಭೆ ಲೈನ್‌ಮೈದಾನದಲ್ಲಿ ಸೇರಿತ್ತು. ಶ್ರೀಯುತರುಗಳಾದ ಅಧಿಕಾರಿಗಳು, ಮಲ್ಯರು, ಉಮಾನಾಥರಾಯರು ಮತ್ತು ನಾರಾಯಣ ಕಿಲ್ಲೆಯವರು ದೇಶದ ಸಂಕಷ್ಟಗಳನ್ನು ವಿವರಿಸಿ ಭಾಷಣ ಕೊಟ್ಟು ಕಾಂಗ್ರೆಸ್ಸಿಗೆ ಯಾಕೆ ಓಟು ಕೊಡಬೇಕೆಂಬುದರ ಕುರಿತು ಉಪಯುಕ್ತ ಭಾಷಣಗಳನ್ನು ಮಾಡಿ, ದೇಶದ್ರೋಹಿಗಳ ಡೋಲು ಪ್ರಚಾರವನ್ನು ಖಂಡಿಸಿದರು. ಸಭೆಯ ಉತ್ಸಾಹವು ಕಾಂಗ್ರೆಸ್ ಕಡೆಗಿತ್ತೆಂದು ತಿಳಿಯಲಾಯಿತು.

ಇದೇ ತಿಂಗಳ ತಾ. ೧೬ರಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮುನ್ಸಿಪಲ್ ಶಾಲಾ ಅಧ್ಯಾಪಕರಾದ ಬಿ ಹಮ್ಮದ್ ಬ್ಯಾರಿಗಳವರ ಅಧ್ಯಕ್ಷತೆಯಲ್ಲಿ ನಮ್ಮ ಜಿಲ್ಲಾ ಐಡೆಡ ಪ್ರಾಥಮಿಕ ಶಾಲಾ ಅಧ್ಯಾಪಕರುಗಳ ಸಭೆಯೊಂದು ಸೇರಿ ದ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘವನ್ನು ಪ್ರಾರಂಭಿಸಲಾಯಿತು. ಸುಮಾರು ೪೦ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರುಗಳು ಹಾಜರಿದ್ದರು. ಟ್ರಿಪ್ಲಿ ವರ್ಷದ ಬಾಬ್ತು ಕುಲಶೇಕರ ಸೆಂಟ್ ಜೋಸೆಫ್ ಹಾ. ಎ ಶಾಲಾ ಅಧ್ಯಾಪಕರಾದ ಮ. ರಾ. ಗೋವಿಂದ ರಾಯರನ್ನು ಸಂಘದ ಅಧ್ಯಕ್ಷರನ್ನಾಗಿಯೂ ಕಾಪ್ಪಾಡು ವಿದ್ಯಾದಾಯಿನಿ ಶಾಲಾ ಅಧ್ಯಾಪಕರಾದ ಮ. ರಾ. ಎಲ್ಲಪ್ಪ ಹೆಗ್ಡೆಯವರನ್ನು ಕಾರ್ಯದರ್ಶಿಯರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಇದೇ ತಿಂಗಳ ೧೭ನೆಯ ತಾರೀಕು ಭಾನುವಾರ ಸಾಯಂಕಾಲ ೫ ಗಂಟೆಗೆ ಕಂಕನಾಡಿಯಿಂದ ಶ್ರೀ ಬಿ ವಿ ಗಣಪತಿ ಶ್ರೀ ಆನಂದ ಮೊದಲಾದವರ ನೇತೃತ್ವದಲ್ಲಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಒಂದು ಮೆರವಣಿಗೆ ಹೊರಟು ಸುತ್ತಲೂ ಇರುವ ನಾಲ್ಕಾರು ಹಳ್ಳಿಗಳಿಗೆ ಹೋಗಿ ಸಾಯಂಕಾಲ ೭ ಗಂಟೆಗೆ ಕಂಕನಾಡಿ ಮೈದಾನದ ಬಳಿಗೆ ಬಂದು ನಿಂತಿತು. ಮೆರವಣಿಗೆಯು ಹಳ್ಳಿ ಹಳ್ಳಿಗಳಿಗೆ ಹೋದಂತೆಲ್ಲಾ ಜನರು ಹೆಚ್ಚಾಗಿ ಅದರಲ್ಲಿ ಸೇರಿ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಬಹಳ ಉತ್ಸಾಹವನ್ನು ತೋರಿಸಿದರು.

ಈ ಮೆರವಣಿಗೆಯು ಕಂಕನಾಡಿಯನ್ನು ಮುಟ್ಟಿದ ಮೇಲೆ ಮೈದಾನದಲ್ಲಿ ಒಂದು ಸಭೆಯು ಸೇರಿತು ಶ್ರೀ ಎಸ್ ಎನ್ ಚಂದಾವರ ಮತ್ತು ಶ್ರೀ ಬಿ ವಿ ಗಣಪತಿ ಇವರು ಭಾಷಣ ಮಾಡಿದರು.

ಶ್ರೀ ಚಂದಾವರರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಕೈಕೊಂಡಿರುವ ಕಾರ್ಯವನ್ನು ನೆರೆದಿದ್ದ ಸಭಿಕರಿಗೆ ವಿವರಿಸಿ ಹೇಳಿ ಕಾಂಗ್ರೆಸ್ಸಿಗೆ ತಮ್ಮ ಓಟುಗಳನ್ನು ಕೊಟ್ಟು ಲೆಜಿಸ್ಲೇಟಿವ್ ಎಸೆಂಬ್ಲಿಗೆ ಕಾಂಗ್ರೆಸ್ಸಿನ ಪ್ರತಿನಿಧಿಗಳನ್ನೆ ಆರಿಸಿ ಬರುವಂತೆ ಮಾಡಬೇಕೆಂಬುದಾಗಿ ವಿನಂತಿ ಮಾಡಿದರು. ಮತ್ತು ಚುನಾವಣೆಯ ಮುಗಿದ ನಂತರ ನಮ್ಮ ಕೆಲಸವು ಮುಗಿಯಲಿಲ್ಲ. ಚುನಾವಣೆಯು ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕ್ರಮದಲ್ಲಿ ಒಂದು ಮಾತ್ರ. ಅದು ನಮ್ಮ ಸಂಪೂರ್ಣ ಕಾರ್ಯಕ್ರಮವಲ್ಲ. ಇದು ಮುಗಿದೊಡನೆಯೇ ನಾವು ಹೆಚ್ಚಿನ ಭರದಿಂದ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮವನ್ನು ಕೈಕೊಂಡು ಹಳ್ಳಿಗಳಿಗೆಲ್ಲ ಕಾರ್ಯವನ್ನು ಸಫಲಗೊಳಿಸುವಂತೆ ಮಾಡಿ ನಮ್ಮ ಸ್ವಾತಂತ್ರ್ಯ ಮಾರ್ಗದಲ್ಲಿ ಮುಂದೆ ಹೆಜ್ಜೆ ಇಡುತ್ತಾ ಹೋಗಬೇಕೆಂದು ತಿಳಿಸಿದರು.

ಅನಂತರ ಶ್ರೀ ಗಣಪತಿ ಇವರು ಕಂಕನಾಡಿಯ ಜನರು ಇದೇ ರೀತಿಯಲ್ಲಿ ಉತ್ಸಾಹವನ್ನು ತೋರಿಸಿ ಕಾಂಗ್ರೆಸ್ಸಿಗೆ ಜಯವಾಗುವಂತೆ ಮಾಡಬೇಕೆಂಬುದಾಗಿ ಜನರಲ್ಲಿ ಅರಿಕೆಮಾಡಿಕೊಂಡರು.

ಕಂಕನಾಡಿಯ ಯುವಕರು ಇದೇ ರೀತಿಯಲ್ಲಿ ಪ್ರತಿ ಭಾನುವಾರವೂ ಸುತ್ತು ಮುತ್ತಲಿನ ಹಳ್ಳಿಗಳಿಗೆ ಹೋಗಿ ಕಾಂಗ್ರೆಸ್ಸಿನ ಕಾರ್ಯಕ್ರಮದ ಸಲುವಾಗಿ ಪ್ರಚಾರ ಮಾಡಲು ಹೊರಡುವುದಾಗಿ ನಿಶ್ಚಯಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಭೆಯೊಂದು ತಾ. ೨೦—೧—೧೯೩೭ನೇ ದಿನ ಬೋರ್ಡಿನ ಆಫೀಸಿನಲ್ಲಿ ಜರಗಿತು.

ದಿವಂಗತ ಪಂಚಮ ಜೋರ್ಜರ ಸ್ಮಾರಕ ನಿಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ತಾ. ೧೫—೧—೩೭ರ ತನಕ ಒಟ್ಟು ರೂ. ೧೩೭೧೯—೯—೭ ಜಮೆಯಾಗಿರುತ್ತದೆಂದು ತಿಳಿದುಬರುತ್ತದೆ.

ಕಳೆದ ಆದಿತ್ಯವಾರ ಮುಸ್ಲಿಮರ ಹಿತೋದ್ಯೋಗ (welfare) ಸಂಘದವರು ಜ ಹಾಜಿ ಸೈದ್ ಹುಸ್ಸೇನ ಸಾಹೇಬರವರ ಅಧ್ಯಕ್ಷತೆಯಲ್ಲಿ ಬದರಿಯಾ ಶಾಲೆಯಲ್ಲಿ ಒಂದು ಮಹಾ ಸಭೆ ಸೇರಿದ್ದಿತು. ಉರ್ದು, ಅರಬಿ ಮತ್ತು ಕನ್ನಡ ಭಾಷೆಗಳನ್ನು ಕಲಿಸುವ ರಾತ್ರಿ ಶಾಲೆಯೊಂದನ್ನು ಹುಡುಗರಿಗಾಗಿ ತೆರೆಯಬೇಕೆಂದು ನಿರ್ಣಯಿಸಿದ ಪ್ರಕಾರ ತಾ ೧೮ರಲ್ಲಿ ರಾತ್ರಿ ಶಾಲೆಯಲ್ಲಿ ಯುವಕರಿಗಾಗಿ ಶಿಕ್ಷಣ ಏರ್ಪಾಡುಗಳು ಪ್ರಾರಂಭವಾದವು. ಸಂಜೆ ೭ರಿಂದ ೯ರ ವರೆಗೆ ಶಾಲೆಯು ತೆರೆದಿರುವುದು.

ಮುಸ್ಲಿಂ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಇದೇ ಬರುವ ತಾ ೩ನೇ ಫೆಬ್ರವರಿ ತಿಂಗಳ ಶನಿವಾರ ದಿನ ಜಿಲ್ಲಾ ಮುಸ್ಲಿಂ ಉಪಾಧ್ಯಾಯರ ಸಭೆ ಸೇರಿಸುವ ಏರ್ಪಾಡಾಗಿದೆ. ಎಲ್ಲಾ ಕಡೆಯ ಮುಸ್ಲಿಂ ಉಪಾಧ್ಯಾಯರು ಅಂದಿನ ಸಭೆಗೆ ಬಂದು ಈ ಕಾರ್ಯಕ್ರಮಗಳಿಗೆ ಸಹಕರಿಸಿ, ಸಹಾನುಭೂತಿ ಒಳ್ಳೇ ಸಲಹೆಗಳನ್ನು ಕೊಟ್ಟು ಸಹಕರಿಸಬೇಕಾಗಿಯೂ, ವಿಶೇಷ ಸಲಹೆಗಳಿದ್ದಲ್ಲಿ ಅವನ್ನು ಬರಹಮೂಲಕ ತಾ ೨೮ ಒಳಗೆ ಮಂಗಳೂರು ಮುಸ್ಲಿಂ ಉಪಾಧ್ಯಾಯರ ಸಂಘದ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ಕೋರಲಾಗಿದೆ.

ಕಳೆದ ತಾ ೧೭ಕ್ಕೆ ಜಿಲ್ಲಾ ಕಾಂಗ್ರೆಸ್ ಸಭೆಯು ಸೇರಿದ್ದು ಚುನಾವಣೆಯ ಯೋಗ್ಯ ಕಾರ್ಯಕ್ರಮಗಳನ್ನು ಮಾಡಲು ನವಿ ತಯೊಂದು ಏರ್ಪಾಡಾಗಿ ಕಾರ್ಯಕ್ರಮಗಳನ್ನು ಆಲೋಚಿಸಲಾಯಿತು.

ದ ಕ ಅತ್ಲೆಟಿಕ ಎಸೋಸಿಯೇಶನವರು ಏರ್ಪಡಿಸಿದ ಕ್ರೀಡಾ ಪಂದ್ಯಾಟಗಳು ನಡೆಯುತ್ತಲಿವೆ. ಉತ್ತಮ ಶಾಲೆಗಳು ಭಾಗವಹಿಸುತ್ತಿವೆ.

ಶಿಕ್ಷಣ ಪ್ರಚಾರದ ಉದ್ದೇಶದಿಂದ ಏರ್ಪಡಿಸಲಾಗಿದ್ದ ಶಿಕ್ಷಣ ಪ್ರದರ್ಶನವು ತಾ ೧೬ಕ್ಕೆ ಕೊನೆಗೊಂಡಿತು. ಪ್ರದರ್ಶನಕ್ಕೆ ತುಂಬಾ ಶಾಲೆಗಳಿಂದ ವಸ್ತುಗಳು ಬಂದಿದ್ದವು. ಸ್ಥಳದಭಾವದಿಂದಲೂ, ವಿಪರೀತ ಜನ ದಿ ಪ್ರೇಕ್ಷಕರಿಂದಲೂ ವಸ್ತುಗಳನ್ನು ಸರಿಯಾಗಿ ನೋಡಲಿಕ್ಕಾಗಲಿಲ್ಲ. ಈ ಸಂದರ್ಭದಲ್ಲಿ ವಿವಿಧ ಭಾಷಣಗಳೇರ್ಪಾಡಾಗಿದ್ದವು.

ನೆನ್ನೆ ದಿನ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು 'ಮನ್ಮಥ ವಿಜಯ' ಎಂಬ ನಾಟಕವನ್ನು ಇಲ್ಲಿ ಪ್ರಥಮಬಾರಿ ಆಡಿತೋರಿಸಿದರು. ಪ್ರೋತ್ಸಾಹವು ಎಂದಿನಂತೆ ತುಂಬಾ ಇತ್ತು.

ಇಲ್ಲಿಯ ಚಿತ್ರಾ ಟಾಕೀಸಿನಲ್ಲಿ ಸದ್ಯದಲ್ಲಿ ಪ್ರಭಾತ ಫಿಲ್ಮ್ ಕಂಪೆನಿಯವರ "ಅಮರಜ್ಯೋತಿ" ಎಂಬ ಚಿತ್ರವು ಪ್ರದರ್ಶಿಸಲಾಗುವುದು. ಈ ಚಿತ್ರವು ಹಿಂದೀಯ ಚಲಚ್ಚಿತ್ರಗಳಲ್ಲಿ ಶ್ರೇಷ್ಠವಾದುದಾಗಿದ್ದು ದೇಶವಿದೇಶಗಳಲ್ಲಿ ಕೀರ್ತಿಪಡೆದಿರುತ್ತದೆ.

ಕಳೆದ ಆದಿತ್ಯವಾರ 'ಬಾಂಧವ ಬಳಗ'ದವರ ನವ—ಕೋತ್ಸವವು ಕೆನರಾ ಹೈಸ್ಕೂಲಿನ ಸುಬ್ರಾಯ ಪೈ ಮೆಮೋರಿಯಲ್ ಹೋಲಿನಲ್ಲಿ ಆಚರಿಸಲಾಯಿತು. ಸರಕಾರಿ ಕಾಲೇಜಿನ ಕಿರಿಯ ಕನ್ನಡ ಪಂಡಿತರಾದ ಶ್ರೀ ಕೆ ವಿ. ಕೃಷ್ಣಭಟ್ ವಿದ್ವಾನ್ ಇವರು ಅಧ್ಯಕ್ಷರಾಗಿದ್ದರು.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಹೊಸ್ಟೆಲಿನ ವಿದ್ಯಾರ್ಥಿ ಸಂಘದವರು ತಮ್ಮ ಜಾತಿಬಾಂಧವರು ಕಾಂಗ್ರೆಸ್ಸೇತರರನ್ನು ಪ್ರೋತ್ಸಾಹಿಸುವುದನ್ನು ಖಂಡಿಸಲಿಕ್ಕಾಗಿ ಒಂದು ಸಭೆ ಸೇರಿ, ಆ ಮುಖಂಡರ ಮನಸ್ಥಿತಿಯನ್ನು ಸರಿಗೊಳಿಸುವ ಏರ್ಪಾಡು ಮಾಡಬೇಕೆಂಬ ನಿರ್ಧಾರಗಳೂ ಆದವು.

ತಾಲೂಕುಗಳಿಂದ.

ಕೋಟೇಶ್ವರ:—ದಿವಂಗತ ಕಾರ್ನಾಡು ಸದಾಶಿವ ರಾಯರ ಮರಣದ ದುಃಖಸೂಚಕವಾಗಿ ತಾರೀಕು ೧೧—೧—೧೯೩೭ನೇ ಸೋಮವಾರ ಕೋಟೇಶ್ವರ, ಕಲ್ಪಾಡಿ ಹಗ್ಗೆರ ಗ್ರಾಮಗಳ ಪ್ರಜಾಜನರ ಮಹಾಸಭೆಯು ಕೋಟೇಶ್ವರ ಶಾಲಾವರಣದಲ್ಲಿ ಜರಗಿತು. ಶ್ರೀಯುತರುಗಳಾದ ಉಭಯ ಗೋಪಾಲ ಕೃಷ್ಣ ರಾಯರೂ, ಕಲ್ಪಾಡಿ ಸಾಂಭಪ್ಪ ಶೈಗಳವರೂ ದಿವಂಗತ ದೇಶಭಕ್ತರ ಗುಣಕಥನಗಳನ್ನು ಸಭೆಗೆ ವಿಶದೀಕರಿಸಿದರು. ದಿವಂಗತರ ಮರಣದಿಂದ ಅವರ ಕುಟುಂಬಕ್ಕೆ ಹೆಚ್ಚಾಗಿ ಅಖಿಲ ಹಿಂದುಸ್ಥಾನಕ್ಕೂ ಉಂಟಾದ ನಷ್ಟಕ್ಕೆ ಸಭೆಯು ಬಹಳ ವ್ಯಸನಪಟ್ಟಿತು. ಅನಂತರ ದಿವಂಗತರ ಛಾಯಾಚಿತ್ರವನ್ನು ಹಿಡಕೊಂಡು ಭಜನೆಯಿಂದೊಡಗೂಡಿದ ಮೆರವಣಿಗೆಯು ಶಾಲೆಯಿಂದ ಹೊರಟು ಸಾರಸ್ವತ ಕೊಲೋನಿಯ ವರೆಗೆ, ಪುನ ಹಿಂದೆ ಕೋಟೇಶ್ವರ ಪೇಟೆ ದಾಟಿ ಬಂಗ್ಲೆ ವರೆಗೆ ಬಂತು. ಹೆಚ್ಚಾಗಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಬಯಸಿ, ದುಃಖದಿಂದ ಸಭೆಯು ಮುಕ್ತಾಯವಾಯಿತು.

ಮೂಡಬಿದ್ರಿ:—ಮೂಡಬಿದ್ರಿ ಉಪಾಧ್ಯಾಯರ ಸಂಘದ ೬ನೇ ಸಾಮಾನ್ಯ ಸಭೆಯು ಇದೇ ೧೯೩೭ನೇ ಜನವರಿ ತಾರೀಕು ೧೬ಲ್ಲ ದಿಗಂಬರ ಜೈನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದೇರೆಬೈಲ್ ಶಾಲಾ ಹೆಡ್ಮಾಸ್ತರರಾದ ಮ. ರಾ. ರಾ. ಕೆ ಪಿ ನೇಮಿರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಸಂಘದ ೬೬ ಮೆಂಬರರ ಪೈಕಿ ೫೫ ಮಂದಿ ಅಧ್ಯಾಪಕರು ಹಾಜರಿದ್ದರು. ಮೂರ್ನಾಡು ಬಿ ಇ. ಎಂ ಶಾಲಾ ಹೆಡ್ಮಾಸ್ತರರಾದ ಮ. ರಾ. ರಾ. ಆರ್ ಕಲ್ಯಾಣಿರವರು ನ್ಯಾಷನೆಲ್ ಕ್ಲಾಸಿನ ಉನ್ನತಿಗೆ ಲೆಕ್ಕಭಿನ್ನರಾಶಿಯಲ್ಲಿ ಮಾದರಿ ಪಾಠವನ್ನು ಬಹು ಸೊಗಸಾಗಿ ಕೊಟ್ಟರು. ಬರುವ ಸಭೆಯು ಫೆಬ್ರವರಿ ೧೩ಕ್ಕೆ ಮೂಡಬಿದ್ರಿ ಬೋರ್ಡ ಶಾಲೆಯಲ್ಲಿ ಜರಗಿಸಲ್ಪಡುವುದೆಂದು ಈ ಮೂಲಕ ತಿಳಿಸೋಣಾಗಿದೆ.

ಉಡುಪಿ

ನಮ್ಮ ಸ್ವಂತ ಬಾತ್ಮೀದಾರರಿಂದ

ಇಂದಿಗೆ ೬—೮ ತಿಂಗಳಿಂದ ಸ್ಥಳೀಯ ಶಾಲಾ ವಿದ್ಯಾರ್ಥಿಗಳಲ್ಲಿ ಸಾಮೂದಾಯಿಕ ವ್ಯಾಯಾಮ ಅಭ್ಯಾಸಗಳನ್ನು ವ್ಯವಸ್ಥೆಗೊಳಿಸಿದ್ದು ಹಲವು ಪ್ರದರ್ಶನಗಳನ್ನು ಬಹಿರಂಗವಾಗಿ ಮಾಡಿದ್ದಲ್ಲದೆ ೧—೨ ತಿಂಗಳಿಂದ ಶಾಲಾ ವಿದ್ಯಾರ್ಥಿನಿಯರಲ್ಲೂ ಇಂತಹ ವ್ಯವಸ್ಥೆಗಳನ್ನು ಮಾಡಲಾಗಿದ್ದು ಕೆದಿಯೂರಿನ ಶ್ರೀ ಗೋಪಾಲಕೃಷ್ಣ ರಾಯರಿಂದ ಸಂಗೀತದೊಡನೆ ಕೋಲಾಟ, ಲೇಜಿಮ್ ನರ್ತನಗಳ ಅಭ್ಯಾಸವು ನಡೆಸಲ್ಪಟ್ಟು ಕಳೆದ ತಾರೀಕು ೯ನೇ ಸಾಯಂಕಾಲ ಒಂದು ಪ್ರದರ್ಶನವೂ ಜರಗಿಸಲಾಯಿತು. ಅಭ್ಯಾಸ ಕಾಲ ಆಯಾ ಶಾಲಾ ವಿದ್ಯಾರ್ಥಿನಿಯರು ಅವರವರ ಉಪಾಧ್ಯಾಯಿನಿಯರೊಡನೆ ಬಂದು ಕ್ಲಪ್ತ ರೀತಿಯಲ್ಲಿ ತರಬೇತಿಯಾಯಿತು. ಸದ್ರಿ ಪ್ರದರ್ಶನವು ಎಲ್ಲ ಬಗೆಗಳಲ್ಲಿ ಜನಮನಾನಂದವನ್ನು ಉಂಟುಮಾಡಿತು. ಮೇಲಾಗಿ ಸರಸ್ವತಿ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯರ ಪ್ರೌಢ ಲೇಜಿಮ್ ಆಟವು ಉತ್ಕೃಷ್ಟವಾಗಿತ್ತು. ಮ್ಯುನಿಸಿಪಲ್ ಅಧ್ಯಕ್ಷ, ಸದಸ್ಯರು ಮತ್ತು ಅನೇಕ ಗೃಹಸ್ಥರೂ ಗೃಹಿಣಿಯರೂ ಹಾಜರಿದ್ದರು. ಕೊನೆಗೆ ಗರ್ಲ್ ಗೈಡ್ಸರ ಶಿಬಿರಾಗ್ನಿ ವಿನೋದಗಳು ಆಗಿ ರಾತ್ರಿ ೮ ತಾಸಿಗೆ ಸಮಾರಂಭವು ಕೊನೆಗಂಡಿತು. ವಿದ್ಯಾರ್ಥಿನಿಯರಿಗೆ ಮ್ಯುನಿಸಿಪಲ್ ಚೆಯರ್ಮೇನ ಶ್ರೀ ಎ ಲಕ್ಷ್ಮೀನಾರಾಯಣ ಬಿ ಎ ಬಿ ಎಲ್ ಮತ್ತು ಶ್ರೀ ಎಸ್. ಕಿಶೋ ಕಾಮತ್ ಬಿ ಎ ಬಿ ಎಲ್ ರವರ ಲೆಕ್ಕಕ್ಕೆ ಹಾಲು ಹಂಚಲಾಗಿತ್ತು. ಈ ಹೊಸ ಸಂಯೋಜನೆಯನ್ನು ಹೂಡಿ ಇಷ್ಟರಿಂದ ಉತ್ತಮ ಯಶಸ್ವೀರೀತಿಯಲ್ಲಿ ಫಲಕಾರಿ ಮಾಡಿದ ಬಗ್ಗೆ ಶ್ರೀ ವಿಠಲ ಕಮ್ತಿಯವರು ಸರ್ವರ ಅಭಿನಂದನೆಗೆ ಪಾತ್ರರಾದರು.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು, ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ, ಮಲಗುವ ಮನೆಯಲ್ಲಿ ಸ್ತ್ರೀಪುರುಷರ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೫ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂಡಲೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1 / ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್.

ಡಾಕ್ಟರ ವಾಮನ ಗೋಪಾಳರವರ

ಬಹಿರಾಯಿತ್ಸ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ
೫೫ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ.

ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟಾಕಿಸ್ಟ್—ಪಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ರಾಶಿ ಅಕ್ಕಿ ..	3— 6	3—10
ಮುಸ್ಕಿ ..	8— 4	4— 4
ಗುಡ್ಡ ಸುಗ್ಗಿ ...	3—10	3—14
ಊರ ಅವ್ವಲ್ ಬೆಳ್ತಿಗೆ ..	4— 0	4— 4
ರಂಗೂನು ಬಿ. ಗೋ. ಗಿಳ್ಳ..	7 — 0	7— 4
ಎಲ್ಲರುಬಿ. ಮು. ಗಿಳ್ಳ .	3—14	3—14
ಗೋದಿ ಗೋಣಿ ಗಿಳ್ಳ ..	11 — 0	13— 0
ತೊಗರಿ ಗೋಣಿ ಗಿಳ್ಳ	9 — 8	12— 8
ಹುರುಳಿ ಗೋಣಿ ಗಿಳ್ಳ .	5— 0	5 — 2
ಕಡಲೆ ಗೋಣಿ ಗಿಳ್ಳ .	8 — 0	12 — 8
ತೊಗರಿಬೇಳೆ ಗೋಣಿ ಗಿಳ್ಳ	11— 0	19— 0
ಉದ್ದು ಗೋಣಿ ಗಿಳ್ಳ	9— 0	8 — 8
ಹೆಸರು ಗೋಣಿ ಗಿಳ್ಳ .	7—12	8— 0
ಊರುಬೆಲ್ಲ ಖಂಡಿ ಗಿಳ್ಳ ..	30— 0	32— 8
ಉಪ್ಪು ಗೋಣಿ ಗಿಳ್ಳ ..	4— 4	4—12
ಕೊಬ್ರಿ ಖಂಡಿ ಗಿಳ್ಳ	75— 0	84— 0
ಕೊಬ್ರಿ ಹಿಂಡಿ ಖಂಡಿ ಗಿಳ್ಳ...	80— 0	30— 8
ಎಳ್ಳೆಂಡಿ ಖಂಡಿ ಗಿಳ್ಳ	27 — 8	30 — 0
ಕೊಬ್ರಿ ಎಣ್ಣೆ ಮಣ ಗಿಳ್ಳ .	6— 0	7 — 0
ಎಳ್ಳೆಣ್ಣೆ ಮಣ ಗಿಳ್ಳ .	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಿಳ್ಳ...	6— 5	7— 5
ಮೋರಿಸ ಸಕ್ಕರೆ ಮ. ಗಿಳ್ಳ ..	3— 2	3 — 4
ಮೆಣಸು	2— 8	4— 8
ಸಾಸಿವೆ ಮುಡಿ ಗಿಳ್ಳ	6 — 4	6— 0
ಕಾಳುಮೆಣಸು ಖ. ಗಿಳ್ಳ	100— 0	120 0
ಮೆಂತ್ಯಬೀಜ ಮಣ ಗಿಳ್ಳ	80— 0	85 — 0
ಗೇರುಬೀಜ ಮ. ಗಿಳ್ಳ	3 — 0	3 — 8
ಕಚ್ಚಿಣ ಖಂಡಿ ಗಿಳ್ಳ	35— 0	37 — 8
ತಾಂಬ್ರಪತಗಡು ಮ. ಗಿಳ್ಳ	12— 4	12 8
ತಾಂಬ್ರಪಾತ್ರಗಳು ಮ. ಗಿಳ್ಳ	12— 8	14— 0
ಟೀಬಿಳ್ಳಿ ಸೇರು ಗಿಳ್ಳ	13— 8	15 — 0
ಹಿತ್ತಾಳೆ ತಗಡು ಮ. ಗಿಳ್ಳ	10— 0	10— 8
ಹವಸು ಗಿಳ್ಳ	22— 7	22— 8
ಹುಣಸೆ ಹುಳಿ ಖಂಡಿ ಗಿಳ್ಳ	40— 0	45— 0
ನೇಟಿವ್ ಕಾಫಿ ಖಂಡಿ ಗಿಳ್ಳ	145— 0	150— 0
ಫಿಟೇಂ ಕಾಫಿ ಖಂಡಿ ಗಿಳ್ಳ	175— 0	195— 0
ಖಾದಿಕೇರಿ ಬೀಳಕ್ಕಿ	50— 0	55 — 0

ಹೊಟ್ಟೆನೋವಿನಿಂದ ಹೊರಳಾಡ ಬೇಕಾಯಿತು.

ಒಬ್ಬ ನರ್ಸಳ ಅನುಭವ

ರೋಗವನ್ನು ಗುಣಪಡಿಸುವ ವಿಧಾನವು ನರ್ಸ್‌ಗಳಿಗೆ ಇತರರಿಗಿಂತ ಚೆನ್ನಾಗಿ ಗೊತ್ತಿರುತ್ತದೆ. ಡಿ. ಡಬ್ಲ್ಯು. ಎಂಬ ನರ್ಸಳೊಬ್ಬಳು ಕಠಿಣ ಹೊಟ್ಟೆನೋವಿಗೆ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಿಂದ ಚಿರಗುಣ ಪಡೆದವಳು

"ನಾನು ಯೋಚಿಸಲಿಕ್ಕಾಗುವುದಕ್ಕಿಂತಲೂ ಹೆಚ್ಚು ವರ್ಷ ಹೊಟ್ಟೆನೋವಿನಿಂದ ನರಳಿದೆನು ಅದು ಸ್ಪೈಸ್ಮ ಎಂಬ ಕಠಿಣತರದ ಹೊಟ್ಟೆನೋವು ಎಂದು ನನ್ನ ತಾಯಿಯು ಹೇಳುತ್ತಿದ್ದಳು. ಹಲವು ಸಾರಿ ವಿಪರೀತ ಹೊಟ್ಟೆನೋವಿನಿಂದ ನೆಲದಲ್ಲಿ ಹೊರಳಾಡಿ ದೇಹವನ್ನು ಮುದುಡಿಕೊಳ್ಳುತ್ತಿದ್ದೆ ಇನ್ನೊಂದು ಕ್ಷಣ ದೇಹವನ್ನು ಅಲುಗಿಸದೆ ಬೀಳುತ್ತಿದ್ದೆ ಅಲುಗಿಸಿದರೆ ನೋವು ಎಲ್ಲಾದರೂ ತಿರುಗಿ ಹೆಚ್ಚಾಗಬಹುದೆಂದು ಹೆದರುತ್ತಿದ್ದೆ. ವಿವಿಧ ಔಷಧಿಗಳನ್ನು ಸೇವಿಸಿ ನೋಡಿದೆ ಒಂದೂ ಸಫಲವಾಗಲಿಲ್ಲ ಕಳೆದ ವರ್ಷ ನೋವು ವಿಪರೀತವಾದುದರಿಂದ ಶಸ್ತ್ರಕ್ರಿಯೆ ನಡೆಸಬೇಕಾಯಿತು.

"ನನ್ನ ತಂಗಿಯೊಬ್ಬಳು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಮನೆಯಲ್ಲಿ ಯಾವಾಗಲೂ ಇಟ್ಟುಕೊಳ್ಳುತ್ತಿದ್ದಳು ಅವಳ ಒತ್ತಾಯದ ಮೇಲೆ ಒಂದು ಡೋಜನ್ನು ತೆಗೆದುಕೊಂಡೆ ಒಂದು ಡೋಸ್ ಮೆಕ್ಲೀನ್ ಪೌಡರು ಅಷ್ಟು ಗುಣಶಕ್ತಿಯುಳ್ಳದ್ದೆಂದು ನಾನು ನಂಬಿರಲಿಲ್ಲ ಡೋಸನ್ನು ನುಂಗುತ್ತಲೇ ನನಗೆ ತಂಪಾಯಿತು ಮತ್ತು ಹೊಟ್ಟೆನೋವು ಮಾಯವಾಗುತಾ ಬಂತು

"ನನ್ನ ಕೃತಜ್ಞತೆಯನ್ನು ಉದ್ದವಾಗಿ ಹೇಳುವುದು ಅನಾವಶ್ಯಕವಾದರೂ ಇದು ಕೃತಜ್ಞಾಪೂರ್ವಕವಾದುದು ಹೊಟ್ಟೆನೋವಿನ ಕುರುಹನ್ನು ಕಂಡೆನೆಂದರೆ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಕಡೆಗೆ ಧಾವಿಸುತ್ತೇನೆ" ಹೀಗೆಂದು ಆ ನರ್ಸಳು ಬರೆದಿರುವಳು

ನಿಮ್ಮ ಹೊಟ್ಟೆನೋವು ಎಷ್ಟು ಕೆಟ್ಟದಿದೆ? ಮೇಲೆ ಹೇಳಿದ ನರ್ಸಳದಕ್ಕಿಂತ ನಿಮ್ಮದು ಕಠಿಣವಿದ್ದರೂ ನೀವದನ್ನು ಮೆಕ್ಲೀನ್ ಬ್ರೇಂಡ್ ಪೌಡರಿಂದ ಗುಣಪಡಿಸಿಕೊಳ್ಳಬಹುದು ಆದರೆ



ಎಂಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ ಇಂತಹ ನಮೂನೆಯ ಕಡಿಮೆ ದರದ ಬದಲಿಯ ಮಾಲನ್ನು ಪಡೆದು ಮೋಸಹೋಗಬೇಡಿ ಅದು ಚಿಲ್ಲರೆಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
೧೫ ತಂಕಂರಾವು ಚೆಟ್ಟಿ ಸ್ಟ್ರೀಟ್, ಮದ್ರಾಸ್,
ಇಲ್ಲಿಗೆ ಬರೆಯಿರಿ



S No 62

Break Chills!

Take To-Night

Prepared by a Sage out of Amber Saffron Gold Musk with Himalayan Drugs restore lost energy Strength Nervous Debility and all Disorders in Spinal Cord Regains lost vitality Gives marvellous effect 60 Pills Rs 5 Sample 30 Pills Rs 3 List Free

Dr A S MURTHI CHICACOLE

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳ್ಳುಳ್ಳ (**ಭಕ್ತಶಿಖಾಮಣಿ ದಾಮಾಜಿಪಂತ**) ಸಂಗೀತ ನಾಟಕ.

ಬರೆದವರು —ಶ್ರೀ ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು, ಯೋಗಿ ಹೃದಯದೊಳಿಲ್ಲ, ಸೂರ್ಯನೊಳಗಿಲ್ಲ, ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ ನೆಲೆಗೊಳ್ಳುವೆನು ನಾನು, ನಾರದ ಮುನಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳು ಕಥಾಸಿದ್ಧಹಸ್ತದ ಚಮತ್ಕಾರ, ಭಾಷೆಯ ಲಾಲಿತ್ಯ ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಯಾಯ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೬೦ನೆಯ ಧಾತು ಸಂವತ್ಸರದ ಪುಷ್ಯ ಬ॥ ೪ ಶನಿವಾರದಿಂದ, ಪುಷ್ಯ ಬ॥ ೯ ಶುಕ್ರವಾರದ ವರೆಗಿನ ಪಂಚಾಂಗ (೧೯೩೯ನೇಯ ಮಕರ (ಪುಯಿಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
30	ಶನಿ	೪	೪೪	ಪುಬ್ಬ	೧	೧೬	
31	ರವಿ	೫	೪೮	ಉತ್ತರ	೫	೧೭	
1	ಸೋಮ	೬	೫೩	ಹಸ್ತ	೧೦	೧೮	
2	ಕುಜ	೭	೫೭	ಚಿತ್ರ	೧೬	೧೯	
3	ಬುಧ	೮	೬೦	ಸ್ವಾತಿ	೨೩	೨೦	
4	ಗುರು	೮	೨	ವಿಶಾಖ	೨೯	೨೧	
5	ಶುಕ್ರ	೯	೮	ಅನುರಾಧ	೩೬	೨೨	

THE COMMON WEALTH ASSURANCE CO, LTD, POONA

CHAIRMAN —Mr N C KELKAR

On Endowment Rs 37—8—0 per Thousand — Triennial Bonus in 2nd VALUATION — **On Whole Life Rs. 45 per Thousand**

(1) Low Premium Rates! *(2) Permanent Disability* *(3) Double Indemnity* *(4) Extended Assurance Benefit*

(5) HOUSE PURCHASE SCHEME FOR POLICY HOLDERS are the special features Liberal first year and hereditary renewal commissions for its representatives

Wanted Agents to represent South Kanara

For further particulars please apply to:-

Messrs GAVANKER & SONS,
CHICKPET, BANGALORE CITY.

Chief Agents for—MYSORE STATE, COORG, SOUTH KANARA AND CEDED DISTRICTS

ಜೈಲಿನಲ್ಲಿ ಸಂಬಳ

ಶೆವಿನ್ ಸ್ಕಿಗ್ ಎಂಬವನ ಕೆಲಿಫೋರ್ನಿಯಾ ದೊಡ್ಡ ಶ್ರೀಷ್ಟ ನ್ಯಾಯಾಧೀಶನು. ನ್ಯಾಯ ವಿರುದ್ಧ ಒಂದು ಕಾರ್ಯ ನಡೆಸಿದನೆಂಬ ಅಪರಾಧದ ಮೇಲೆ ಹ್ಯಾಕೋರ್ಟಿನವರು ಅವನಿಗೆ ಒಂದು ವರ್ಷದ ಜೈಲು ವಿಧಿಸಿದರು ಆದರೆ ಅವನು ನ್ಯಾಯಾಧೀಶನಾಗಿ ಮಾಡಿದ ಸೇವೆಗಾಗಿ ಸರಕಾರದವರು ಅವನಿಗೆ ೧೦,೦೦೦ ಡಾಲರ್ ಸಂಬಳವನ್ನು ಕೊಡುತ್ತಾರೆ

Note . . . . . s—ನೋಟುಗಳು

'ಉಮೇದ್ವಾರರಾಗಿರುವ ನನ್ನ ವಿಶ್ವಾಸಿಗಳೇ' ಎಂದೊಬ್ಬ ಮಹಾಶಯರು ನಮಗೆ ಒಂದು ಪತ್ರ ಬರೆದಿರುವರು. ಇವರು ಇಷ್ಟು ಪರಿಶ್ರಮಪಟ್ಟು ಶ್ವಾಸ ವ್ಯಯಮಾಡಿರುವ ಕಾರಣ, ಇವರು ವೋಟರರ ವಿಶ್ವಾಸಯೋಗ್ಯರಾಗಬಹುದೇನೊ?

ಂ ಂ ಂ

ಇಪ್ಪರವರೆಗೆ ನ್ಯಾಯವಿಧಾಯಕ ಕೌನ್ಸಿಲು ಅಥವಾ ಎಸೆಂಬ್ಲಿ ಎಂಬ ಸ್ಮರಣೆಯೇ ತನಗಿರಲಿಲ್ಲದುದರಿಂದ, ಈಗ ನಿಷ್ಪಕ್ಷವಾಗಿ ಅವುಗಳನ್ನು ಕುರಿತು ತಾಜಾ ಅಭಿಪ್ರಾಯಕೊಡಲು ನಾನು ಯೋಗ್ಯನು

ಂ ಂ ಂ

'ನನ್ನಲ್ಲಿ ಈ ರೀತಿಯಾಗಿ ಥಕ್ಕನೆ ಉತ್ತೇಜನ ಹುಟ್ಟಿರುವುದೂ ದೈವಪ್ರೇರಣೆಯಿಂದ ಹೊರತು ಬೇರೆ ಕಾರಣದಿಂದಲ್ಲ. ನಾನೇ ಅತಿ ಯೋಗ್ಯ ಉಮೇದ್ವಾರನೆಂದು ಅದರಿಂದ ಖಂಡಿತ, ಇದಿರುವಾದಿ ಯಾರೂ ಇರಬಹುದಾದರೂ ಅವನು ಕಸಕ್ಕೆ ಸಮ. ಅವನಿಗೆ ಹೇಗೆ ಪುನಃ ದೇವರು ಈ ಪ್ರೇರಣೆ ಕೊಟ್ಟಿರಬಹುದು?

ಂ ಂ ಂ

ಸರಕಾರ ಪಕ್ಷವು ದೀನವಾಗಿ ನನ್ನ ಮೋರೆಯನ್ನೇ ನೋಡುವ ಹಾಗೆ ಅದನ್ನು ಕೌನ್ಸಿಲುಗಳಲ್ಲಿ ಎದುರಾಡಲು ನಾನೇ ಕೆಲವು ಕಠಿಣ ಉಪಾಯಗಳನ್ನು ಬಲ್ಲೆನು. ವೋಟು ಕೊಡಿರಿ ಆಗ ನಿಮಗೆ ಅವನ್ನು ರುಜುಪಡಿಸುವೆನು.

ಂ ಂ ಂ

'ಕೌನ್ಸಿಲು ಎಂಬುದು ಒಣಹಣ್ಣು. ಅದರಲ್ಲಿ ಸವಿಯಬಹುದಾದ ರಸವೇ ಇಲ್ಲ. ಆದರೂ ನಾನು ಉಳಿದೆರಡು ತಟಗಳನ್ನು ಚೀಪಬಲ್ಲೆನು, ಬಲ್ಲವನು. ಕಲ್ಲಿನಿಂದ ನೀರನ್ನು ಹೀರಬಲ್ಲ ನನಗೆ ಇದೆಲ್ಲಿಯ ಅದ್ಭುತ!'

ಂ ಂ ಂ ಂ

'ಅತ್ಯಗತ್ಯ ಸಂದರ್ಭಗಳಲ್ಲಿ ನೀವು ನನ್ನ ಮೀಸೆಗಳನ್ನು ನೋಡಬೇಕು. ಅವು ಎಷ್ಟು ಜೋರಾಗಿ ನೆಟ್ಟಗೆ ಕಸಪೊರಕೆಯಂತೆ ಎದ್ದು ನಿಂತಾವು! ಆಗ ನನಗೆ ಇದಿರಾಡುವವನ್ಯಾರು? ಹಾಗೆಂದು ಅಗತ್ಯ ಸಂದರ್ಭಗಳಲ್ಲಿ ಪುನಃ ಬೆಣ್ಣೆಯಂತೆ, ಬೆಕ್ಕಿನ ರೋಮದಂತೆ ಸಯವಾಗುವುವು ನನ್ನ ಮೀಸೆಗಳು. ಈ ಪ್ರವೀಣತೆ ಇನ್ನಾರಲ್ಲಿದೆ?

ಂ ಂ ಂ

'ನಿಮಗಾಗುವ ಒಂದೇ ವೋಟನ್ನು ನನಗೆ ಕೊಟ್ಟುಬಿಡಿರಿ. ನನ್ನ ಮನಸ್ಸಾಕ್ಷಿಯನ್ನೆ ನಾನು ನಿಮಗೆ ಆಗಲೆ ಬಿಟ್ಟುಕೊಡುವೆನು'

ಂ ಂ ಂ

ಹೀಗಿದ್ದರೂ ಈ ಉಮೇದುವಾರರಿಗೆ ವೋಟು ಸಿಗದಿದ್ದರೆ,—ದೈವಚಿತ್ತವೆನ್ನಬೇಡವೆ? ನಿಜವಾಗಿಯೂ ವೋಟರರಿಗೆ ಭಾಗ್ಯವಿಲ್ಲ. ಪ್ರತಿಭಾಶಾಲಿಗಳನ್ನು ಮೂಲೆಯಲ್ಲಿಡುವುದು ಅವರ ಧರ್ಮವಲ್ಲ. ಕೈಕಲ್ಲಿ ದೊರೆತ ವೋಟಿನ ಅಧಿಕಾರವನ್ನು ಅವರು ಕೇಳಿದಾಗ ಕೊಟ್ಟುಬಿಡುವುದರಿಂದ ಪುಣ್ಯ ಸಂಪಾದನೆ, ಗಣ್ಯತೆ ದೊರಕಿಸಿಕೊಳ್ಳಬಹುದಲ್ಲವೇ?

ಂ ಂ ಂ

ಇಂತಹವರು ಗೆದ್ದರೆ ನಾವು ಅಭಿನಂದಿಸಬೇಡವೆ? ಸೋತರೆ ಕೂಡಲೆ ಸಹಸಂತಾಪ ಸೂಚಿಸಬೇಡವೆ? ಅದನ್ನು ಹಿಂದಿಡದೆ ಈಗಲೆ ಒಪ್ಪಿಸಿಬಿಡೋಣ

ಂ ಂ ಂ

ಸಭೆಗಳಿಗೆ ಬರುವವರು ಕೊಳೆತ ಮೊಟ್ಟೆ, ಪಾಪಾಸು, ಕಲ್ಲುಗಳು ಮೊದಲಾದುವನ್ನು ತರುವ ವಾಡಿಕೆ ಇತ್ತ ಹೆಚ್ಚುತ್ತಾ ಇದೆ. ವಿಲಾಯತಿ ಸುಧಾರಣೆ ಹರಡುತ್ತದೆಂಬುದಕ್ಕೆ ಒಂದು ಉದಾಹರಣೆ.

ಂ ಂ ಂ

'ಸಭಾಕಾರ್ಯಗಳು' ಯಾವ ಅಥವಾ ಎಂತಹ ಸಭೆಗಳೇ ಆಗಲಿ ಮಾತಿನಲ್ಲಿ ಮುಗಿಯುತ್ತಿದ್ದುವು. ಜನರಿಗೆ ತಾಳ್ಮೆಯಿತ್ತು, ಹೇಳಿಕೇಳುತಿದ್ದರು. ಈಗ ಯಾವ ಆಕ್ಷೇಪಣೆಗಳಿಗೂ ಕಾರಣವಿಲ್ಲದಿರುವಾಗ, ಧೋಲು ಬಡೆಯುವುದು, ಪಾಪಾಸು ಬಿಸಾಡುವುದು, ಒಣಗುಲ್ಲು ಎಬ್ಬಿಸುವುದು ಇತ್ಯಾದಿ ಚತುರೋಪಾಯಗಳಿಗೆ ಪ್ರಾರಂಭವಾಗುತ್ತದೆ. ಸಭೆಗಳಿಗೆ ಆತಂಕಪಡಿಸುವವರು ಹಿಂದೆ ರಾಕ್ಷಸರು, ಈಗ ಅಸಭ್ಯರು ಎಂಬುದನ್ನು ಹೋಲಿಸಿ ಹೇಳಬಹುದು

ಂ ಂ ಂ

ಮಾಲವೀಯರಿಗೆ ಅಸಭ್ಯತೆಯ ಪ್ರದರ್ಶನ ಮಾಡಿದುದರ ಪ್ರಾಯಶ್ಚಿತ್ತಕ್ಕೆಂದು ಒಬ್ಬರು ಎಂಟು ದಿನ ಉಪವಾಸಮಾಡುವರಂತೆ. ಯಾರು ಯಾರಿಗೆ ಮಾಡುವ ತಂಟೆಗೆ ಯಾರೊಬ್ಬರು ಉಪವಾಸ ಹಿಡಿಯುವ ಕಾರಣವುಂಟೆ?

ಂ ಂ ಂ

'ಹಿಂದೂದೇಶದ ಹಳ್ಳಿಗರು' ಎಂಬ ವಿಷಯವಾಗಿ ಲಾರ್ಡ್ ವಿಲಿಂಗ್ಡನರು ಇಂಗ್ಲೆಂಡಿನಲ್ಲಿ ಎಪ್ರಿಲ್ ತಿಂಗಳಲ್ಲಿ ಯುವಕರಿಗೆ ಭಾಷಣ ಮಾಡುವರು. ಅವರಿಗೆ ಗೊತ್ತಾಗಿರುವ ಹಳ್ಳಿಗಳೆಂದರೆ,—ಸಿಮ್ಲಾ, ಢಿಲ್ಲಿ, ಕಲ್ಕತ್ತಾ, ಬೆಂಗಳೂರು, ಮುಂಬಾಯಿ ಇತ್ಯಾದಿ. ಕಾವಳಕಟ್ಟೆ ಮೊದಲಾದುವು ಅವರಿಗೆಲ್ಲಿಯ ಗೊತ್ತಿನವು?

ಂ ಂ ಂ

ಇದರಿಂದ ಇಂಗ್ಲೀಷ ಯುವಕರು ಸರಿಯಲ್ಲದ ಅನುಭವವನ್ನು ಮಾತ್ರ ಮಾಜಿ ವೈಸರಾಯರಿಂದ ಪಡೆದಂತಾಗುವುದು. ಈ ದೋಷ ನಿವಾರಣೆಗಾಗಿ, ಮುಂದೆ ಹೆಚ್ಚಿನ ಅನುಭವ ಕೊಡಲು ಕ್ರಿಕೆಟ್ ಮೊದಲಾದ ಆಟ ಆಡುವ ವಂಗಡಗಳಲ್ಲಿ ಸೇರಿ ಇಂಗ್ಲೆಂಡಿಗೆ ಹೋಗಬಹುದಾಗಿರುವ ಕೆಲವು ಶಿಕ್ಷಿತ ಯುವಕರು ಈ ಹಳ್ಳಿಗಳಲ್ಲಿ ನಾನಾ ಬಗೆಯ ಮಾತಾಡು ಅಭ್ಯಾಸ ಮಾಡುತ್ತಿರುವಂತಾಗಿ ಕಾವಳಕಟ್ಟಿನ ವಾರ್ತೆ ನಿಜವಿರಬಹುದು

ದಮ್ಮು

ಸಮೂಲ ಹೇಗೆ ನಾಶವಾಗುವದು? ಡಾಕ್ಟರರ ದೃಷ್ಟಿಯು ಖರೇ ಗುಣ ಹೇಗಾಗುವದು ಇದರ ಕಡೆಗೆ ಇರುತ್ತದೆ ಡಾಕ್ಟರರನ್ನು ಯಾರೂ ವಂಚಿಸರು.

ಆದುದರಿಂದಲೇ ದಮ್ಮಿನಿಂದ ಜರ್ಜರಿತರಾದ ರೋಗಿಗಳಿಗೆ ನಾವು ಪುರೋಹಿತ ಶ್ವಾಸಹಾರಿಯ ಯೋಜನೆ ಮಾಡಿದ ಕೂಡಲೇ ಗುಣವಾಗುವದಾಗಿ ನಮ್ಮ ಖಾತ್ರಿಯದೆ, ಇದು ನಿಶ್ಚಯ

ಚಟಕ ಹೊಡೆಯುವಷ್ಟರಲ್ಲಿ ದಮ್ಮು ಕಳೆಯುವ... ದಮ್ಮು ಐದು ಮಿನಿಟಿನಲ್ಲಿ ... ನಲ್ಲಿ, ಅರ್ಧ ತಾಸಿನಲ್ಲಿ ಕಡಿಮೆಯಾಗುವದು. ಈ ಹೇಗೆ ಈ ಇಂಜಕ್ಷನ್ ತೆಗೆದುಕೊಂಡ ಕೂಡಲೇ ದಮ್ಮು ... ಹೀಗೆ ಹೇಳುವ ಅನೇಕ ಔಷಧಗಳನ್ನು ಯೋಜಿಸಿ ಅನುಭವ ಪಡೆದಿರುವೆವು ಇವೆಲ್ಲ ದಮ್ಮು ಪೂರ್ಣ ಗುಣವಾಗದಂತೆ ... ಯೋಗಿ ಇದ್ದು ಈ ಔಷಧಗಳಿಂದ ತಿರುಗಿ ಒಂದು ದಮ್ಮು ಬಹಳೇ ತ್ರಾಸದಾಯಕವಿರುವುದೆಂದು ನಮ್ಮ ನಿಶ್ಚಿತ ಮತವಾಗಿರುತ್ತದೆ

ದಮ್ಮಿನ ಮೂಲ ಕಾರಣಗಳನ್ನು ಶೋಧಿಸಿ, ಅದರ ಮೇಲೆ ತನ್ನ ಪ್ರಭಾವವನ್ನು ತೋರಿಸಿ ನಿಧಾನವಾದರೂ ನಿಶ್ಚಿತ ಗುಣಕಾರಿಯಾದ ಔಷಧಗಳೇ ದಮ್ಮಿನವರನ್ನು ಉಳಿಸುವವು.

ಪುರೋಹಿತ ಶ್ವಾಸಹಾರಿಯು ದಮ್ಮಿನ ಮೂಲ ಕಾರಣ ಶೋಧಿಸಿ ದಮ್ಮು ಸಂಪೂರ್ಣ ಕಡಿಮೆ ಮಾಡತಕ್ಕ ಔಷಧಗಳಲ್ಲಿ ಅಗ್ರೇಸರವಿದೆ ಎಂಬುದಾಗಿ ನಮ್ಮ ಅನುಭವವಿದೆ. ದಮ್ಮು, ಧಾಪ ಹತ್ತುವದು, ಮುಂಜಾವಿನ ದಸಿಕೆ, ಕಂಠದಾಹ ಮಾಡುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗಗಳನ್ನೂ ನಿವಾರಿಸಲು ಪುರೋಹಿತ ಶ್ವಾಸಹಾರಿ ಪ್ಲೇನ ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತು ಅಮ್ಲಪಿತ್ತ ಹೆಚ್ಚಾದವ ... ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ಈ ಔಷಧ ತೆಗೆದುಕೊಂಡರೆ ಹೆಚ್ಚು ಲಾಭಕರ

ಎಲ್ಲ ಸ್ಥಳಗಳ ಕೆಮಿಸ್ಟ್ಸ ಸ್ಟೋರ್ಸ್ ಅಂಗಡಿಗಳಲ್ಲಿ ಈ ಔಷಧವು ರೂ ೨, ರೂ ೩—೮—೦ ಮತ್ತು ರೂ ೬ ಹೀಗೆ ಬೇರೆ ಬೇರೆ ಬೆಲೆಯ ಮೂರು ವಿಧ ಪ್ಯಾಕಿಂಗಗಳಲ್ಲಿ ಮಾರಲು ಸಿಗುವದು ಮುಂಬಯಿ ಏಜೆಂಟ್ಸ್:—

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್ ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ನಂಬ್ರ ೨

(ಹೊರಗಿನ ಊರುಗಳ ವ್ಯಾಪಾರಿಗಳು ಮುಂಬಯಿ ಏಜೆಂಟರಿಂದ ಮಾಲು ತರಿಸಬೇಕು)

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಎಷ್ಟು ತಂಪು ಮತ್ತು ದಣುವಪರಿಹಾರಿಯೋ ಅಷ್ಟೇ ಪುಷ್ಟಿಕರವಾದದ್ದು.

ಬೇಸಿಗೆ ಕಾಲದಲ್ಲಿ ತಣ್ಣಗಿನ ಓವಲ್ಟೀನನ್ನು ತೆಗೆದುಕೊಂಡರೆ ಅದು ತಂಪನ್ನು ... ದೇಹದ ಶಕ್ತಿ ... ಪುಷ್ಟಿ ... ಅದರಲ್ಲಿ ಸಮೃದ್ಧಿಯಾಗಿವೆ

ಪ್ರಕೃತಿಯಲ್ಲಿರುವ ಉತ್ತಮ ಶಕ್ತಿವರ್ಧಕ ಆಹಾರಗಳಿಂದ ... ಓವಲ್ಟಿನ ... ಬೇಸಿಗೆ ಕಾಲದಲ್ಲಿ ನಿಮ್ಮ ಆರೋಗ್ಯ ... ಅಲ್ಲದೆ ಓವಲ್ಟಿನನಲ್ಲಿ ... ಇದೆ

ಓವಲ್ಟಿನ ... ತೆಗೆದುಕೊಂಡು ... ಓವಲ್ಟಿನಿಗೆ ... ನಿರಾಕರಿಸಿರಿ

ಓವಲ್ಟಿನ್

ಇದನ್ನು ತಣ್ಣಗೆ ತೆಗೆದುಕೊಂಡರೆ, ಅದು ಬೇಸಿಗೆ ಕಾಲದ ಉತ್ತಮ ಪಾನೀಯವಾಗಿರುತ್ತದೆ.

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಲ್ಲ

ಏಜಂಟರು—ಜೇಮ್ಸ್ ರೈಟ್ ೬೫ ಎ ಕ್ಲಿವ್ ಸ್ಟ್ರೀಟ್, ಕಲ್ಕತ್ತಾ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿಯೂ ಸಿಗುತ್ತದೆ

ಚುನಾವಣೆಗಳು

ಚುನಾವಣೆಗಳು ನಿರಾಕ್ಷೇಪಕರವಾಗಿ ನಡೆವಂತೆ ಯಾವ ಮನೋಧರ್ಮವಿರಬೇಕೋ ಅದನ್ನು ನಮ್ಮಲ್ಲಿ ಬೆಳೆದು ಬಂದಿಲ್ಲವೆಂದೇ ಹೇಳಬಹುದು. ಚುನಾವಣೆಯ ಕ್ರಮಗಳು ಸಹ ನಮ್ಮಲ್ಲಿ ರೂಢಿಗೆ ಬಂದಿರುವಷ್ಟು ಕಾಲವು ನಮ್ಮಲ್ಲಿ ಅವುಗಳನ್ನು ಕುರಿತು ನ್ಯಾಯವಾದ ಭಾವನೆಗಳನ್ನು ಬೆಳೆಸಲು ಸಾಕಾಗಿಲ್ಲವೆಂದರೂ ಹೇಳಬಹುದು. ದೇಶದ ಹಿತವನ್ನೆ ಹಾರಯಿಸುವ ಯಾವನಾದರೂ ಈ ದುಃಸ್ಥಿತಿಯನ್ನು ನೋಡಿ ಸುಮ್ಮನಿರಲಾಗುವುದಿಲ್ಲ. ಹಿಂದಣದ ಸೂತ್ರಧಾರಿಗಳು ನಡೆಸುವ ಕೌಶಲ್ಯಯುಕ್ತವಾಗಿರುವ ತಂತ್ರಗಳನ್ನು ತಿಳಿದರೆ, ಎಂತೆಂತಹ ಪಂಗಡಗಳ ತೃಪ್ತಿಗಾಗಿ ಮಾತ್ರವೇ ದೇಶದಲ್ಲಿ ಚುನಾವಣೆಗಳು ನಡೆಯುತ್ತವೋ ಎಂದು ತೋರುವುದಲ್ಲದೆ, ದೇಶೋದ್ಧಾರದ ಉದ್ದೇಶವೇ ಹಿಂದೆ ಉಳಿದಂತೆ ಭಾವಿಸಬೇಕಾಗುತ್ತದೆ. ದುಡ್ಡು ಪುಡಿಯಾಗುವುದೆಷ್ಟು! ಒತ್ತಾಯ ಹಂಗುಗಳ ಬಲಾತ್ಕಾರವೆಷ್ಟು! ಇವರಡೇ ಚುನಾವಣೆಗಳ ಅಗತ್ಯ ಲಕ್ಷಣಗಳಾಗಿವೆಯೋ ಎಂದೂ ಪ್ರಶ್ನೆ ಕೇಳಬೇಕಾಗುತ್ತದೆ

ಕೆಲವರೇ ಮಾತ್ರವಾದರೂ ದೇಶೋದ್ಧಾರ ಕಾರ್ಯಕ್ಕಾಗಿ ತಾವು ರಂಗಸ್ಥಳಕ್ಕೆ ಇಳಿದಿರುವರೆಂಬುದನ್ನು ತಿಳಿದುಕೊಂಡಿರುವ ಹಾಗೂ ಅದಕ್ಕಾಗಿಯೇ ಅವರು ದುಡಿಯುತ್ತಿರುವರೆಂಬ ಹಾಗೂ ತಿಳುವಳಿಕೆಗೆ ಬರುವುದು ಸರ್ವರೂ ಇವರಂತೆಯೆ ಏಕೆ ಅದೊಂದೇ ಉದ್ದೇಶವನ್ನಿಟ್ಟುಕೊಳ್ಳಲಾರರೋ ತಿಳಿಯದು ಪಂಗಡಗಳ ಮಾರಾಮಾರಿಯಲ್ಲಿ,— ಕೋಣನೆರಡೂ ಹೋರಿ ಗಿಡುವಿಂಗೆ ಮೃತ್ಯು ಎಂಬಂತೆ ಜನತೆಗೆ ತಲೆಗೆಡುವಂತಾಗಿ ದೇಶಕಾರ್ಯವು ರಸಾತಳಕ್ಕಿಳಿಯುವ ಸ್ಥಿತಿಯುಂಟಾಗಿದೆ

ರಾಜ್ಯದ ಆಡಳಿತವೆಂಬುದು ರಾಜ್ಯದ ಉನ್ನತಿಗೆ ಸಹಾಯಕವಾಗುವಂತೆ ಗ್ರಾಮಸ್ಥರು ತಲೆಯೆತ್ತಿ ನಿಲ್ಲುವಂತೆ, ಜನತೆಯ ಲಕ್ಷಣಗಳು ಗೌರವಪೂರ್ಣವಾಗುವಂತೆ, ನಮಗಿಂತ ಚೆನ್ನಾಗಿ ನಮ್ಮ ನಂತರದವರು ಸಂಪನ್ನರಾಗುವಂತೆ, ಯಾವ ವಿಧಾನಗಳಾಗಬೇಕೋ ಅವು ರೂಢಿಗೆ ಬರುವ ಹಾಗೆ ಚುನಾವಣೆಯಲ್ಲಿ ಸೇರುವವರ ಪ್ರಯತ್ನಗಳಾಗಬೇಕು, ಆಳರಸರ ರೀತಿನೀತಿಗಳು ಈ ಉದ್ದೇಶಗಳಿಗೆ ಬಂಧಕಕರವಾಗಿರುವಲ್ಲಿ ಅಥವಾ ಸಾಧಕಕರವಾಗದಿರುವಲ್ಲಿ ನಮಗೆ ಲಾಭವೇನು? ನೋಕರಿಗೆ ಸೇರುವವರಲ್ಲಿ ಈ ವಿಷಯಗಳ ಪರಿಚಯವಿದೆಯೋ? ನೋಕರರಾಗಿ ಅವರು ಇದನ್ನು ಸಾಧಿಸುವುದುಂಟೆ?

ಇಂಗ್ಲೆಂಡಿನಲ್ಲಿ ಯಾವ ಪಂಗಡಗಳೇ ಸರಕಾರದ ಸೂತ್ರಗಳನ್ನು ಹಿಡಿದಿದ್ದರೂ, ನೋಕರರು ಈ ಪಂಗಡಗಳಿಂದ ಸ್ವತಂತ್ರರಾಗಿಯೇ ಇರುವರು ಅಲ್ಲಿನ ಮಂತ್ರಿಗಳಾಗಲೀ ಪಾರ್ಲಿಮೆಂಟಿನ ಮೆಂಬರರಾಗಲಿ, ಯಾವನೊಬ್ಬ ನೋಕರನಿಗೆ ಅತನು ಯಾವ ಪಂಗಡದವನೆಂದು ಕೇಳುವಧೈರ್ಯಹೊಂದಿಲ್ಲ. 'ನೀನು ಜಸ್ಟಿಸ್ ಪಕ್ಷದವನೇ, ಉದಾರಪಕ್ಷದವನೇ? ಮುಂದೆ ಚುನಾವಣೆಗಳಾದಲ್ಲಿ ನಿನ್ನ ಸಹಾಯ ನನಗೆ ದೊರೆಯುವುದುಂಟೆ? ಎಂದು ಯಾರೂ ನೋಕರರನ್ನು ಕೇಳುವುದೂ ಇಲ್ಲ ಕೇಳುವ ಅಪೇಕ್ಷೆ ಸಹ ಅವರಲ್ಲಿ ಇರಲಾರದು ಯಾರೂ ಹೀಗೆ ಮನಸ್ಸಿನಲ್ಲಿ ಎಣಿಸಿದರೂ, ಅದು ಗೃಹಸ್ಥಮಾರ್ಗವಾಗಿಲ್ಲವೆಂದೇ ಪಾರ್ಲಿಮೆಂಟು ಸಹ ನಿರ್ಧರಿಸೀತು ಯಾವನೂ ನೋಕರನನ್ನು ಬಲಾತ್ಕರಿಸಿ ಯಾವುದೊಂದು ಪಂಗಡವು ತನ್ನ ಅಧೀನವಾಗಿ ಮಾಡಿಕೊಳ್ಳಲಾರದು. ಕಾನೂನಿಗೆ ಸರಿಯಾಗಿ ರಾಜ್ಯದ ಆಡಳಿತವು ಸಾಗುವುದು ಇಂತಹ ಸ್ಥಿತಿಯು ನಮ್ಮ ರಾಜಕೀಯ ಜೀವನದಲ್ಲಿ ಉಂಟಾಗದೆ ಇರುವುದಾದರೆ, ನಮಗೆ ಚುನಾವಣೆಗಳಿಂದ ಯಾವ ಪ್ರಯೋಜನವೂ ಇಲ್ಲ ಶ್ರೀ ಶಾಸ್ತ್ರಿಗಳು ಹೇಳುವಂತೆ,—"ನಮ್ಮ ಮಂತ್ರಿಗಳೂ

ಶ್ರೀ ಎಂ ಎನ್. ರಾಯ್‌ಯವರು.
ಇವರು ಸದ್ಯದಲ್ಲಿಯೇ ರಾಜಕೀಯ ಸಹಬಾಂಧವರಿಗಳನ್ನೊಳಗೊಂಡ ಒಂದು ಪತ್ರಿಕೆಯನ್ನು ಪ್ರಕಟಿಸಲಿರುವರು

ನಮ್ಮ ಶಾಸನ ಸಭಾಸದಸ್ಯರೂ ಕೆಲವೇಳೆ ತಮ್ಮ ವರ್ಗದ ಬಂಧುವ ಸರಕಾರದ ನೋಕರರನ್ನು ತನ್ನ ನೋಕರರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಬೇಕೆಂಬ ಇಚ್ಛೆ ತೋರಿಸಿದುಂಟು ಇದು ಎಷ್ಟು ಸತ್ಯವೋ ಬಲ್ಲವರೇ ಬಲ್ಲರು

ಜನರನ್ನು ಜಾತಿವಾರಾಗಿ ವಿಂಗಡಿಸಿ, ಜನತೆಯು ಏಕಮುಖವಾಗಿ ಬೆಳೆಯದಂತೆ ಮಾಡಿದುದು ಇನ್ನೂ ದುಃಖೋಚಿತವಿಯ ವಿಷಯವಾಗಿದೆ ಸರಕಾರದ ನೋಕರರಲ್ಲಿ ತನ್ನ ಜಾತಿಯನ್ನೆ ನೋಡುತ್ತ ಕೆಲಸಮಾಡುತ್ತಿರುವವನು ಕೃತಾರ್ಥನು ಎಂಬ ದುರ್ಭಾವನೆ ಏಕೆ ಮೂಡಿತೋ? ಅದಕ್ಕೆ ಕಾರಣವಿದೆ ನೋಕರನು ಬ್ರಾಹ್ಮಣ ಮುಸ್ಲಿಮ ಪಾರ್ಸಿ ಕ್ರೈಸ್ತನೆಂತಾದರೆ ಆಯಾ ಜಾತಿಯ ಕೌನ್ಸಿಲುಮೆಂಬರರ ತೃಪ್ತಿಗೆ ಮಾತ್ರ ತಾನು ದುಡಿಯುವುದರ ಧ್ಯೇಯವಾಯಿತೆಂದು ತಾನು ಸಂಬಳವು ದುಂಟೆಂದೂ ಶ್ರೀ ಶಾಸ್ತ್ರಿಗಳೆನ್ನುವರು ಜನತೆಯ ನೋಕರನಾಗಿ ತಾನಿರಬೇಕೆಂದೂ ಯಾವುದೊಂದು ಮತ ಸಮಾಜ ಜಾತಿಯ ಮಾತ್ರ ನೋಕರನಲ್ಲ ದು ಪ್ರತಿಯೊಬ್ಬ ನೋಕರನು ತಿಳಿದ ಕೊಂಡಿರುವ ತನಕ ಚುನಾವಣೆಗಳಲ್ಲಿ ದೋಷವೇ ಇದೆ ಎನ್ನಬಹುದು

ಯಾವುದೊಂದು ಸಮಾಜದ ಅತಿ ನಿಪುಣರಾದ ಯುವಕರಿಗೆ ಸರಕಾರದ ಎಂದರೆ ಜನತೆಯ ನೋಕರಿಯು ಸಿಗಲಾರದಂತೆ ವಿಧಾನಗಳನ್ನು ಮಾಡುವಂಗಪಷ್ಟೆ ಕೆಲಸಗಾರಿಯದ ಹಿಂದೆ ಸರಕಾರದ ಚಾಕರಿಯೆಂದ ಕೂಡಲೆ, ಅದೇನೋ ಒಂದು ಬಗೆಯ ಗೌರವದ ಪರಮಾವಧಿ ಎಂದಾಗಲಿ ದಾಸ್ಯದ ಸೂಚನೆ ಎಂದಾಗಲಿ ಭಾವಿಸುವ ಇತ್ತಂಡಗಳ ನಮ್ಮಲ್ಲಿದ್ದವು ಅದೆಲ್ಲವೂ ಇನ್ನು ನಾಶವಾಗಬೇಕು ಈಗ ಜನಾಧಿಕಾರವು ಹೆಚ್ಚುತ್ತ ಬರುವ ಕಾರಣ, ಜನಾಂಗದ ಇಚ್ಛೆಗಳನ್ನು ಪೂರಯಿಸಲು ಜನಾಂಗದ ಪ್ರತಿನಿಧಿಗಳೇ ಕಾರ್ಯನಿರ್ವಾಹಕರಾಗುವ ಕಾರಣ, ಅತ್ಯುತ್ತಮರೂ ಮೇಧಾವಿಗಳೂ ಆದವರೇ ಮುಂದೆ ಬಂದು ಜನಾಂಗ ಹಿತವನ್ನು ಸಾಧಿಸುವುದಕ್ಕಾಗಿ ನೋಕರರಾಗುವಂತೆ ಅನುಕೂಲತೆ ಪಡೆಯಬೇಕು ಮೂರನೇ ತರಗತಿಯವರನ್ನು ಅವರು ಈ ಅಥವಾ ಆ ಜಾತಿಯವರೆಂದು, ಸರಕಾರೀ ನೋಕರರನ್ನಾಗಿ ನೇಮಿಸುವಂತಾಗುವುದು ಯಾರಿಗೆ ಹಿತಸಾಧಕವೋ ತಿಳಿಯದು ಸಂಬಳ ಹುದ್ದೆ ಇವೆರಡನ್ನೂ ನೋಡದೆ, ಸೇವೆ ಎಂಬುದನ್ನೆ ಪ್ರಮುಖ ವಿಚಾರವನ್ನಾಗಿ ಇಟ್ಟುಕೊಂಡು ನೋಕರರಾಗಲು ಯಾರು ಯೋಗ್ಯರೋ ಅವರನ್ನೆ ನೇಮಿಸುವುದು ಅಗತ್ಯವೆಂದು ಎಲ್ಲರೂ ತಿಳಿದಿರುವ ತನಕ ಚುನಾವಣೆಗಳು ಎಂತಹದಾದರೂ ದೇಶಕ್ಕೆ ಪ್ರಯೋಜನವಿರದು

ಹೀಗಿರುವ ಕಾರಣ, ದೇಶಸೇವೆಗಾಗಿ ಸೊಂಟಕಟ್ಟಿರುವೆವೆಂದು ಚುನಾವಣೆಯ ಉಮೇದುವಾರರಾಗಿ ಮುಂದೆ ಬಂದಿರುವವರು ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಚುನಾವಣೆಯಲ್ಲಿ ಕೊಳಕು ವಿಚಾರಗಳು ಸುಳಿಯದಷ್ಟು ಗಾಂಭೀರ್ಯವನ್ನೂ ಶುದ್ಧತೆಯನ್ನೂ ಕಾಪಾಡುತ್ತ, ಜನತೆಯ ಅತ್ಯುತ್ತಮ ಪ್ರತಿನಿಧಿಗಳೇ ಸಭೆಗಳಿಗೆ ಹೋಗುವ ಹಾಗೆ ಸಾಧಿಸುವಂತಾದರೆ, ನೋಕರರೆಲ್ಲ ಗೌರವದಿಂದಲೂ ನಿರ್ಬಾಧಿತವಾಗಿಯೂ ಯಾವುದೊಂದು ಪಂಗಡದ ಹಂಗಿಗೆ ಒಳಗಾಗದಂತೆ ತಮ್ಮ ಅತ್ಯುಜ್ವಲ ಯೋಗ್ಯತೆ ಸದ್ಗುಣಗಳಿಂದಲೇ ಜನಹಿತಸಾಧಕರಾಗುವಂತೆ ನೇಮಕಹೊಂದುವಂತೆ ಮುಂದೆ ಪ್ರಯತ್ನಗಳಾಗುವಂತೆ ಸಾಧಿಸಿದರೇನೇ ದೇಶಕ್ಕೆ ಉತ್ತಮ

ಇಂತಹ ಯಾವ ಧ್ಯೇಯವೂ ಇಲ್ಲದೆ, ಸ್ವಾರ್ಥವೂ ಜಾತಿಯ ಮೂಕೂ ಔದಾರ್ಯದ ಗಂಧವೂ ಹೇಗೂ ಮಾಡಿ ಗೆಲ್ಲಬೇಕೆಂಬ ಹಟವೂ ಹರಡಿ ಚುನಾವಣೆಗಳಾದಲ್ಲಿ, ಚುನಾವಣೆ ನಿಷ್ಫಲ, ಚುನಾವಣೆಯ ನಂತರ ಅತೃಪ್ತಿ, ಗಂಡಾಂತರ, ವೈಷಮ್ಯ, ಅಂತಃಕಲಹ, ಅಶಾಂತಿ

ಉಮೇದುವಾರರಿಗಿಂತ ಹೆಚ್ಚಾಗಿ ವೋಟರರು ಈ ಮಾತುಗಳ ಕಡೆಗೆ ಲಕ್ಷ್ಯವನ್ನಿಟ್ಟು ನಡೆಯಲಿ

ಪ್ರಕಟಣೆ

ಮಂಗಳೂರು ತಾಲೂಕು ನಂಬ್ರ 50ನೇ ಇಡ್ಯಾ ಗ್ರಾಮದಲ್ಲಿರುವ ರುಜಾರಿ ಡಿಸೋಜರ ಮಗ ಶಾಬಿ ಯಾನೆ ಜವಾಂವು ಡಿಸೋಜನಾದ ನಾನು ಎಲ್ಲಾ ಜನರು ತಿಳಿಯುವಂತೆ ಪ್ರಕಟಿಸುವುದೇನಂದರೆ ನನ್ನ ತಾಯಿ ಯಾದ ಪೊರ್ಸಿನೋಜ ಬ್ಯಾ ಯೆಂಬವಳು ಈಗ್ಗೆ ಸುಮಾರು ನಾಲ್ಕು ತಿಂಗಳ ಲಾಗಾಯ್ತು ಮಂದಿತನದ ಬುದ್ಧಿಗೇಡಿತನದ ಭ್ರಮೆಯಿಂದ ಕಂಡವರ ಮಾತನ್ನು ಕೇಳಿ, ಅವರ ಹೇಳಿಕೆಯಂತೆ ಕಂಡಾಬಟ್ಟೆ ತಿರಗಾಡುತ್ತಾ ಹೇಳಿದುದಕ್ಕೆಲ್ಲಾ ತನ್ನ ಕೈಯ ಹೆಬ್ಬೆರಳನ್ನು ಕೊಡುತ್ತಾ ಬರುತ್ತಲೇ ಹಾಗೆ ಅವಳು ಬುದ್ಧಿ ಭ್ರಾಂತಳಾಗಿರುವ ಸಂಗತಿಯು ಕಳೆದ ತಾರೀಕು 18-11 36ರಲ್ಲು ಒಬ್ಬರ ಹೆಸರಿಗೆ ತನ್ನ ಹೆಸರಲ್ಲಿ ಇದ್ದ ಆಸ್ತಿಯನ್ನು ವಿಕ್ರಯಿಸುವೆನೆಂದು ಬರಕೊಟ್ಟ ಸ್ಟಾಂಪು ಹಚ್ಚಿದ ಒಂದು ಯಾದಿಸ್ತು ಪಟ್ಟಿಯೇ ಮುಖ್ಯ ಸಾಕ್ಷಿಯಾಗಿದೆ ಅದನ್ನು ಹ್ಯಾಗೂ ನಾನು ಸ್ವಾಧೀನ ಪಡೆದಿರುತ್ತೇನೆ ಸದಿಯವಳು ನನ್ನ ತಾಯಿಯೆಂಬ ವಿಶ್ವಾಸದಿಂದ ಅವಳ ಹೆಸರಲ್ಲಿ ನಾನು ದರ್ಖಾಸ್ತಿಗೆ ಮಾಡಿಸಿರುವ ಇಡ್ಯಾ ಗ್ರಾಮದ ಸರ್ವೆ ನಂಬ್ರ 180—1/2 ನೇ ಸ್ಥಳಗಳು ಅವುಗಳಲ್ಲಿರುವ ಕಟ್ಟಡ ಭಾವಿ, ಮರಗಿಡ, ಮುಂತಾದುವುಗಳು ಕೂಡ ನನ್ನ ಕಾಯಕಷ್ಟದಿಂದಲೇ ಉಂಟಾದವುಗಳಾಗಿರುವದಲ್ಲದೇ ಮು ರಿ ಆ ನಂಬ್ರ 2672/1934 ನೇ ರೂ 200ರ ಸ್ಥಿರ ಆಸ್ತಿಯ ತೋರಡವು ದಸ್ತಾವೇಜು ಕೂಡ ನನ್ನ ಸಂಪಾದನೆಯ ಹಣವನ್ನು ಕೊಟ್ಟು ನಾನೇ ಸದ್ರಿ ಅವಳ ಹೆಸರಲ್ಲಿ ಮಾಡಿಸಿದ್ದಾಗಿದೆ ಇದರ ಹೊರತು ನಮಗೆ ಎಷ್ಟಾದರೂ ಸಾಲ ಕೂಡ ಇರುವುದಿಲ್ಲ ಹೀಗಿರುತ್ತ ಯಾರಾದರೂ ನನ್ನ ಸೇರುವಿಕೆಯ ವಿನಹ ಸದ್ರಿ ಆಸ್ತಿ ವಗೈರೆಯನ್ನು ಕುರಿತು ಸದಿ ಅವಳಿಂದಲೇ ಯಾವದೊಂದು ವಿಧದ ದಸ್ತಾವೇಜು ವಗೈರೆ ಮಾಡಿಸಿದಲ್ಲಿ ಅದು ಎಷ್ಟಕ್ಕೂ ಸಿಂಧುವಾಗಲಾರದು ಮ ಸದ್ರಿ ಆಸ್ತಿ ವಗೈರೆಗೆ ಎಷ್ಟನ್ನಾದರೂ ಬಾಧಿಸಲಾರದು ಎಂಬ ಸಂಗತಿಯನ್ನು ಸಕಲರೂ ತಿಳಿದಿರಬೇಕು

ಜುವಾಂವು ಡಿ'ಸೋಜ.

ವಿಚಿತ್ರಗಳು

ಒಬ್ಬ ಮನುಷ್ಯನು ಒಂದು ದಿವಸಕ್ಕೆ 4 ಮಿಲ್ಲಿಯ ಕ್ಯುಬಿಕ್ ಇಂಚುಗಳಷ್ಟು ಗಾಳಿಯನ್ನು ಉಸಿರಾಡುತ್ತಾನಂತೆ.

ಕಲ್ಲಿದ್ದಲಿನಿಂದ 800 ತರದ ಉಪವಸ್ತುಗಳನ್ನು ತೆಗೆಯುತ್ತಾರೆ. ಸುಭ್ರವಾದ ಪಂಚವರ್ಣಗಳು ಕಲ್ಲಿದ್ದಲಿನಿಂದ ತೆಗೆಯಬಹುದು

NOTICE.

Sub Court of South Kanara
MANGALORE

S C No 731/1936.

Between

M R Bhatt Plaintiff

and

1 U Narnappa, 2 A Sitharam, Sub Registrar, Now at Feroke—Defendants.

To the Second Defendant

Please take notice that the above Suit filed by the Plaintiff for recovery of the amounts due under two hundies executed by the Defendants in favour of the Plaintiff on 24-6-1936, for Rs 160-0-0 and 300-0-0 is fixed for hearing in the above court at 11 A M on 25-2 1937 and that in default of your appearance it will be decided exparte

Mangalore 25-1-1937 K P Gopalkrishna Rao Vakil for Plaintiff

NOTICE.

In the Court of the District Munsiff of Mangalore

S C No 657 of 1936.

Between—

V R Angappa Muddaliar Plaintiff

and

M Srinivasa Prabhu & another Defendants

To

2nd defendant B Janardhan Rao Cloth Merchant, Udipi

Please take notice that the above named plaintiff has filed the above suit for recovery of Rs 66 2-10 due in respect of dealings with the plaintiff from 4-12-1931 till 12-9 1933 and the suit stands posted to 4—2-1937 for final disposal

Mangalore 14-1 1937 A C Gonsalves, Advocate for plaintiff

ಬಿಳಿ ತೊನ್ನು ಮತ್ತು ಕುಷ್ಠರೋಗ

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುದು. ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ನಿಘಾ ತೆಗೆದುಕೊಳ್ಳಲಾಗಲಿಕ್ಕಿಲ್ಲ.

Vaidyaraj Akil Kishore Ram,
No 62 P O Katrisarai (Gaya)

ಮತಪ್ರಚಾರಕರಿಗೆ ಗಾಂಧಿಗಳ ಮಾತು.

"ಹಿಂದೂ ಮತದಲ್ಲಿರುವ ಅನೇಕ ಮೂಢ ನಂಬಿಕೆಗಳ ವಿಷಾದ ವಿಷಯವು ನನಗೆ ಗೊತ್ತಿದೆ. ಆದರೂ, ನಾನೊಬ್ಬ ಹಿಂದೂವಾಗಿರ ಬಯಸುವೆನು: ಯಾಕೆಂದರೆ, ಹಿಂದೂಧರ್ಮವು ಪ್ರಪಂಚದ ಯಾವ ಶ್ರೇಷ್ಠ ಮತಕ್ಕೂ ಕಿರಿದೆನಿಸುವುದಿಲ್ಲವೆಂಬ ವಿಚಾರವು ನನಗೆ ಸ್ಪಷ್ಟವಾಗಿ ತಿಳಿದಿದೆ. ನಾವು ಮತವಿಚಾರಗಳಲ್ಲಿ ಮುಳುಗಿರದೆ, ಭಕ್ತಿಪೂರ್ವಕವಾಗಿ ನಮ್ಮಲ್ಲಿ ಕೀಳಾದವರ ಸೇವೆಯನ್ನು ಮಾಡಿದರೆ, ಅದರಲ್ಲಿಯೇ ನಿಜವಾದ ವಿಶ್ವಶಾಂತಿಯ ಮತ್ತು ವಿಶ್ವವಾತ್ಸಲ್ಯದ ತತ್ವಗಳು ಅಡಗಿರುತ್ತವೆಂಬುದರಲ್ಲಿ ಸಂದೇಹವಿಲ್ಲ'', ಹೀಗೆಂದು ಮಹಾತ್ಮರು ಕ್ರೈಸ್ತಬಾಂಧವರನ್ನುದ್ದೇಶಿಸಿ ಮಾಡಿದ ಒಂದು ಭಾಷಣದಲ್ಲಿ ತಿಳಿಸಿರುವರು

ಲಖ್ನೋದ ಹರಿಜನರೊಬ್ಬರು ಕೌನ್ಸಿಲು ಚುನಾವಣೆಗೆ ನಿಂತಿದ್ದರು. ಅವರಿಗೆ ಅನೇಕ ಹೆದರಿಕೆಯ ಪತ್ರಗಳು ಬಂದುವಂತೆ— ಉಮೇದ್ವಾರಿಕೆಯನ್ನು ಹಿಂತೆಗೆಯಬೇಕೆಂದು ಕೆಲವು ದಿವಸಗಳ ಹಿಂದೆ ಅವರ ಪತ್ನಿಯ ಕೊಲೆಯಾಗಿದೆ

ಕಲ್ಕತ್ತದಲ್ಲಿ ಒಬ್ಬ ಪೋಲೀಸ್ ದಫೆದಾರನು ಅಲ್ಲಿಯ ಆಸ್ಪತ್ರೆಯೊಂದರ ದಿನ ವರದಿಯನ್ನು ತೆಗೆದುಕೊಳ್ಳಲು ಹೋದವನು ಹೊರಗೆ ಬರುವಾಗ, ಸುತ್ತಲೂ ತುಂಬಾ ಜನರು ನಿಂತಿರುವುದನ್ನು ನೋಡಿ ಅವರನ್ನು ಚದರಲು ಅಪ್ಪಣೆ ಕೊಟ್ಟನಂತೆ ಜನರು ಚದರದಿರಲು, ಅವನು ಬಲಾತ್ಕಾರ ನಡೆಸಬೇಕಾಯಿತು ಅಷ್ಟರೊಳಗೆ ಹಿಂದಿನಿಂದ ಒಬ್ಬನು ಬಂದು ಅವನನ್ನೂ, ಅವನ ಸಹಾಯಕ್ಕೆ ಬಂದ ಇನ್ಸ್ಪೆಕ್ಟರನ್ನೂ ಚೂರಿಯಿಂದ ತಿವಿದು ಘಾಯಗೊಳಿಸಿದನು

ಸಿಕ್ಖರ ವಿಚಿತ್ರಕರ ವರ್ತನೆ.

ಪಾಟ್ನಾದಲ್ಲಿ ಶ್ರೀ ಗುರು ಗೋವಿಂದಸಿಂಗರ ಜನ್ಮದಿನಾಚರಣೆಯು ನಡೆಯುತ್ತಿರುವಾಗ, ಆಕಸ್ಮಾತ್ ಸಿಕ್ಖರ ಪಂಗಡವೊಂದು ಪ್ರಾರ್ಥನೆ ಮಾಡುವ ದೇಶವಿದೇಶಗಳ ಸಿಕ್ಖ ಯಾತ್ರಿಕರ ಮೇಲೆ ಬಿದ್ದು, ಸುಮಾರು ಜನರನ್ನು ಘಾಯಗೊಳಿಸಿರುವರು. ಕಾರಣವು ಗೊತ್ತಾಗಲಿಲ್ಲ

ಕವಿರವೀಂದ್ರರಿಗೆ ಪೆರಿಸ್ ನಿಂದ ಆಮಂತ್ರಣ.

ಕವಿರವೀಂದ್ರರನ್ನು ಪೆರಿಸ್ ಪ್ರದರ್ಶನ ಸಮಯದಲ್ಲಿ ನಡೆಯಲಿರುವ ಶಾಂತಿ ಸಮ್ಮೇಳನೋತ್ಸವಕ್ಕೆ ಆಹ್ವಾನಿಸಿರುವರು. ಒಂದು ಪಕ್ಷಕ್ಕೆ ಅವರಿಗೆ ಬರಲವಕಾಶ ಸಿಗದಿದ್ದಲ್ಲಿ ಅವರ ಶಾಂತಿ ಸಮ್ಮೇಳನದ ವಿಷಯ ಒಂದು ಕವಿತೆಯನ್ನಾಗಲೀ ಅಥವಾ ಒಂದು ಚಿತ್ರವನ್ನಾಗಲೀ ಬರೆದು ಕಳುಹಿಸಬೇಕೆಂದು ಕೇಳಿಕೊಂಡಿರಲಾಗಿದೆ.

ಕಾಂಗ್ರೆಸ್ ಅಧಿವೇಶನದ ಚಿತ್ರ.

ಬೆಜವಾಡದ ಸರಸ್ವತಿ ಫಿಲ್ಮ್ ಕಂಪೆನಿಯವರು ಫೈಜಪುರ ಕಾಂಗ್ರೆಸಾಧಿವೇಶನದ ಚಿತ್ರವನ್ನು ತೆಗೆದಿರುವರು. ಅದರ ಉದ್ದವು ೧೬೦೦ ಅಡಿಗಳಾಗಿದ್ದು, ಅದಕ್ಕೆ ಈಗ ಪ್ರದರ್ಶಿಸುವ ಹುಕುಂ ಸಿಕ್ಕಿರುವುದು. ಅಧ್ಯಕ್ಷ ಭಾಷಣ, ರಾಷ್ಟ್ರ ಧ್ವಜಾರೋಹಣ, ಪ್ರಚಂಡ ಜನಸ್ತೋಮ ಇವುಗಳನ್ನು ಆ ಚಿತ್ರದಲ್ಲಿ ನೋಡಿ ಕೇಳಬಹುದು.

ನೆಹರುಗಳ ಸಂಚಾರ.

ಪಂಡಿತ ಜವಾಹರಲಾಲ ನೆಹರುಗಳು ಬಿಹಾರಸಂಚಾರದಲ್ಲಿ ಚಿರ್ಕುಂಡಾ ಎಂಬ ಹಳ್ಳಿಯಲ್ಲಿ ಒಂದು ಭಾಷಣ ಏರ್ಪಾಡಾಗಿತ್ತು. ಭಾಷಣ ಸ್ಥಳಕ್ಕೆ ಒಂದು ಓಣಿಯಿಂದ ಹೋಗಬೇಕು. ಪಂಡಿತರು ತಮ್ಮ ಮೋಟಾರನ್ನು ನಿಲ್ಲಿಸಿ, ಆ ಸ್ಥಳಕ್ಕೆ ಓಡಿದರು ಜನಸ್ತೋಮವೂ ಅವರ ಹಿಂದೆಯೇ ಓಡತೊಡಗಿತು ಅರ್ಧ ದಾರಿಯಲ್ಲಿ ನೆಹರುಗಳು ತಮ್ಮ ಗಡಿಯಾರವನ್ನುನೋಡಿ ಕಾಲವಿಳಂಬವಾಯಿತೆಂದು ಹಿಂತಿರುಗಿ ಮೋಟಾರಿನ ಕಡೆ ಓಡಿದರು ಜನಸಂದಣಿಯು ಪುನಃ ಅವರ ಹಿಂದೆ ಓಡಿ ಬಂತು— ಜೈ ಜೈ ಕಾರಗಳು ಬಿದ್ದವು ಅವರಿಗೆ ಇನ್ನು ಎರಡು ಗಂಟೆಯೊಳಗೆ ೮೦ ಮೈಲು ದೂರದ್ದ ಬಾಡ್ವಾರ್ನಿಗೆ ಹೋಗಬೇಕಾಗಿತ್ತು

ಪುರಾಣಗಳಲ್ಲಿ ವಿಮಾನಗಳು.

ಭಾರತದ ವೃದ್ಧ ಪಿತಾಮಹರೂ ವಿಖ್ಯಾತ ವಿಜ್ಞಾನಿಗಳೂ ಆದ ಸರ್ ಪಿ ಸಿ ರೋಯ್ ಇವರು, ಪುರಾಣ ಕಾಲಗಳಲ್ಲಿ ವಿಮಾನ, ರೇಡಿಯೋಗಳಿದ್ದುವೆಂಬ ತರ್ಕವನ್ನು ನಿಜವೆಂದು ಕಂಡುಹಿಡಿದಿರುವರು ಕ್ರಿಸ್ತ ಪೂರ್ವ ಹಲವು ಸಾವಿರ ವರ್ಷಗಳ ಹಿಂದೆ ನಡೆದ ರಾಮಾಯಣ ಕಥೆಯ ಕಾಲದಲ್ಲಿ ಪುಷ್ಪಕ ವಿಮಾನಗಳಿದ್ದುವೆಂದೂ, ಜನರು ವಾರ್ತೆಗಳನ್ನು ಗಾಳಿ ಮೂಲಕ ಕಳುಹಿಸುತ್ತಿದ್ದರೆಂಬ ಪುರಾಣ ಉಲ್ಲೇಖವು, ಈಗಿನ ವಿಮಾನ ರೇಡಿಯೋಗಳ ವಿಷಯವಾಗಿರುತ್ತದೆಂತಲೂ, ಅವುಗಳು ಆ ಕಾಲದಲ್ಲಿ ನಿಜವಾಗಿ ಇದ್ದುವೆಂದೂ ಅವರು ತರ್ಕಿಸಿರುವರು. ತಮ್ಮ ಈ ಹೊಸ ತತ್ವವನ್ನವರು ಅಂತರ್ರಾಷ್ಟ್ರೀಯ ವಿಜ್ಞಾನಿಗಳ ಸಮ್ಮೇಳನದಲ್ಲಿ ಪ್ರಕಟಪಡಿಸಲಿರುವರೆಂದೂ ತಿಳಿಯಲಾಗಿದೆ

ದರೋಡೆ

ಇಬ್ಬರು ವ್ಯಾಪಾರಿಗಳು ಒಂದು ಪೂರ್ತಿ ದಿನದ ಸಮಾರಂಭವನ್ನು ಮುಗಿಸಿಕೊಂಡು ತಮ್ಮ ಅಂಗಡಿಗೆ ಬಂದು ಮಲಗಿದರು ಕಾದುಕೊಂಡಿದ್ದ ಡಕಾಯಿತರು ಅಂಗಡಿಯನ್ನು ನುಗ್ಗಿ ಈರ್ವರನ್ನೂ ಬಂದೂಕಿಗೆ ಬಲಿಯಿತ್ತು ೨೦೦೦೦ ರೂಪಾಯಿಗಳನ್ನು ಅಪಹರಿಸಿದರೆಂಬ ವಾರ್ತೆಯು ಕ್ವೆಟ್ಟಾದಿಂದ ಬಂದಿರುತ್ತದೆ

ಅಮೇರಿಕಾದಲ್ಲಿ ಘೋರ ಭಯಂಕರ ಜಲಪ್ರಳಯ

ಸಂಯುಕ್ತ ಸಂಸ್ಥಾನಕ್ಕೆ ಸೇರಿದ ೧೨ ಪ್ರಾಂತ್ಯಗಳು ಭಯಂಕರ ಜಲಪ್ರಳಯಕ್ಕೆ ತುತ್ತಾಗಿರುವುವು. ಓಹಿಯೊ ನದಿಯು ನೆರೆನೀರಿನ ಮಟ್ಟಕ್ಕಿಂತ ೨೦ ಅಡಿಗಳಷ್ಟು ಮೇಲೇರಿರುತ್ತದೆ ಇಷ್ಟರವರೇಗೆ ೨ ಲಕ್ಷ ಮನೆಮಾರುಗಳು ಕೊಚ್ಚಿಹೋಗಿರುವವು ಲಕ್ಷಗಟ್ಲೆ ಜನರು ನಿರಾಶ್ರಿತರಾಗಿ ಸಾವಿರಗಟ್ಲೆ ಜನರು ನೀರುಪಾಲಾಗಿರುವರು ನೀರು ಇನ್ನೂ ಉಕ್ಕುತ್ತಲಿದೆಯಂತೆ ಅನೇಕ ಅಂಟು ರೋಗಗಳು ಅಲ್ಲಿ ತಲೆದೋರಿ ಕಳ್ಳಕಾಕರ ಭೀತಿಯು ತಡೆಯದಾಗಿದೆ ಕಳ್ಳರನ್ನು ಕಂಡಲ್ಲಿ ಕೊಲ್ಲುವಂತೆ ಸರಕಾರದಾಜ್ಞೆಯಾಗಿದೆ ಈ ಮಧ್ಯೆ ಜೈಲುಗಳಿಂದ ಕಳ್ಳರು ತಪ್ಪಿಸಿಕೊಂಡು, ಪುನಃ ಹಿಡಿಯಲ್ಪಟ್ಟಿರುವರು

ಸೈಕಲ್ ಸವಾರಿಗೆ ನಾಯಿ:—
ಹೆನ್ಸಲ್ ಎಂಬ ಈ ನಾಯಿಯು ಬರ್ಲಿನ ಪೋಲೀಸ ಖಾತೆಗೆ ಸೇರಿದುದು ಅಲ್ಲಿ ನಡೆಯಲಿರುವ ನಾಯಿಗಳ ಸ್ಪೋರ್ಟ್ ಜಾಥಾದಲ್ಲಿ ಭಾಗವಹಿಸುವುದಕ್ಕಾಗಿ ಮೇಲೆ ಕಾಣುವ ನಾಯಿಯು ಅಭ್ಯಾಸಮಾಡುತ್ತಲಿದೆ.

ಜಪಾನ್

ಟೋಕಿಯೋದಲ್ಲಿ ಸೈನ್ಯಖಾತೆಯ ಸಿಡಿಮದ್ದಿನ ಮನೆಗೆ ಬೆಂಕಿ ತಗಲಿ ಸ್ಫೋಟನವಾಗಿ ಐದು ಜನರು ಸತ್ತು ಮೂವರಿಗೆ ಗಾಯಗಳಾಗಿವೆ

ಜಪಾನಿನಲ್ಲಿ ಪುನಃ ರಾಜಕೀಯ ಘರ್ಷಣೆಗಾರಂಭವಾಗಿದೆ ಈಗಿನ ಸರಕಾರಕ್ಕೂ

No 130/1936

ತೆಹರಣೆಯಲ್ಲಿ— ಸೈನ್ಯಾಧಿಪತಿಗಳಿಗೂ ರಾಜ... ಯಲ್ಲಿ ಮನಸ್ತಾಪವುಂಟಾಗಿ ತನ್ನ ಹೊಸ ಸದಸ್ಯರು ರಾಜೀನಾಮೆ... ಪೆಸಿಸಂ ಸ್ಥಾಪನೆಯಾಗಬೇಕೆಂದು... ತೆಯ ಅಭಿಪ್ರಾಯ.

ಸ್ಪೈನ್.

ಫೆಸಿಸ್ಟ ರಾಜ್ಯಗಳು ಸ್ಪೈನ್... ಜಯವನ್ನು ಸಹಿಸಲಾರವು. ... ಜನರಲ್ ಗೋರಿಂಗ್‌ರವರೂ, ... ಕಡೆಯವರಿಗೆ ಸೋಲನ್ನು ತಂದೊಡ್ಡಲು ... ಕ್ತಿಸುತ್ತಿರುವರು ಮೆಡ್ರಿಡ್ ಹತ್ತಿರದ ... ಈಚೆಗೆ ಮಾಡಿದ ಒಂದು ದಾಳಿಯಲ್ಲಿ ... ಗಾರ ಪಕ್ಷದವರ ಮಹಾಹತುಗಳು ... ಗಿವೆ ಸ್ಥಿತಿಯು ಉಗ್ರರೂಪವನ್ನು ತಾಳಿದೆ

ರಷ್ಯ.

ಸರಕಾರವನ್ನು ಮುಣ್ಣುಕೆಡ... ತ್ನದಲ್ಲಿದ್ದ ಹದಿನೆಂಟು ಮಂದಿಗಳನ್ನು ... ಈಗ ಸೆರೆಹಿಡಿದಿರುವರು. ಎಲ್ಲರೂ ... ತಮ್ಮ ತಪ್ಪನ್ನು ಒಪ್ಪಿರುವರಂತೆ. ಅವರನ್ನು ... ಗಲ್ಲಿಗೇರಿಸುವರೊ, ಸೆರೆಮನೆಯಲ್ಲಿ ಇಡುವರೊ ಎಂದು ಇನ್ನೂ ಗೊತ್ತಾಗಲಿಲ್ಲ. ... ಗಾಗಿ ಕೆಲವು ಸಮಯ ಹಾಗೆ ಕೆಲವರು ... ಪಾಸಿಗೆ ಕೊಟ್ಟಿದ್ದರು

ಟರ್ಕಿ.

ಫ್ರಾನ್ಸ-ಟರ್ಕಿಯೊಳಗೆ ಒಪ್ಪಂದ ವಿಚಾರದ ಮಾತುಕತೆಗಳು ನಡೆಯುತ್ತಲಿವೆ. ಅಲೆಕ್ಸಾಂಡ್ರಾಟಾ ಎಂಬ ಒಂದು ಬಂದರಿನ ವಿಷಯ ಬಂದ ವಿವಾದದ ಕುರಿತು ಫ್ರಾನ್ಸು ಇಟೆಲಿಗಳೊಳಗೆ ಕೆಲವು ಸಮಯದ ಹಿಂದೆ ... ಗಲಾಟೆಯಾಗಿತ್ತು ಅದು ಟರ್ಕಿಗೆ ಸೇರಿದ್ದು ಇಟೆಲಿಗೆ ಅಲ್ಲಿ ಸ್ಥಳ ಸಿಕ್ಕಿದರೆ ಫ್ರಾನ್ಸಿಗೆ ತೊಂದರೆಯುಂಟು ಅದಕ್ಕಾಗಿ ಈಗಿನ ಒಪ್ಪಂದದ ಯೋಜನೆ

ಚಕ್ರವರ್ತಿಗಳ ಸಂಬಳ

ಚಕ್ರವರ್ತಿ ಆರನೇ ಜಾರ್ಜರು ವಿವಾಹಿತರಾದುದರಿಂದ, ಅವರಿಗೆ ವರ್ಷಕ್ಕೆ ೬೦ ಸಾವಿರ ಪವನು ಕೊಡುವುದಾಗಿ ನಿಶ್ಚಯಿಸಿರುತ್ತದೆ.

ಮಾಜಿ ಅಪ್ಪನು ಎಡ್ವರ್ಡರಿಗೆ ೨೫ ಸಾವಿರ ಪವನ ಗಳನ್ನು ಕೊಡಬೇಕೆಂತಲೂ, ಅವರ ಸ್ಥಾನಮಾನಗಳೂ ಅವರಿಗೆ ಮುಂಚಿನಂತೆ ಇರಬೇಕೆಂತಲೂ ಪಾರ್ಲಿಮೆಂಟಿನಲ್ಲಿ ನಿಷ್ಕರ್ಷೆಯಾಗಿರುತ್ತದೆ

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD. 1906.

CANARA BANK,
LIMITED.

ಸೂಚಿ.

ಚುನಾವಣೆಗೂ	೩
ಸ್ವದೇಶಿ ಯಾತ್ರೆ	೫
ಅದನ್ನು ನಮ್ಮಲ್ಲಿ ಹೇಳಬಹುದು.	೧೧
ಸಹ ನಮ್ಮಲ್ಲಿ	೧೦
ನಮ್ಮಲ್ಲಿ ಅಷ್ಟು	"
ಭಾವನೆಗಳನ್ನು	
ಊರುಗಳಿಂದ, ತಾಲೂಕುಗಳಿಂದ	೧೪
ಸ್ವಲ್ಪ ಸಹಾಯ	೧೮

ತಾ. ೨೯ನೇ ಶುಕ್ರವಾರ ಜನವರಿ ೧೯೩೭

ಸ್ವದೇಶಾಭಿಮಾನಿ.

ವೋಟಿನ ಭ್ರಾಂತಿ ವಿಲಾಸ

ಪ್ರಪಂಚದ ಭ್ರಾಂತರಿಗಾಗಿ ಕ್ರಿಶ್ಚಿಯನ್ ಪೂಜಾ ಮಂದಿರಗಳು ನಿರ್ದೇಶಿಸಿರುವ ಎಪ್ರಿಲ್ ಒಂದನೇ ತಾರೀಖಿಗೆ ಸರಿಯಾಗಿ, ನಮ್ಮ ದೇಶದಲ್ಲಿ ಹೊಸ ರಾಜ್ಯಾಂಗ ರಚನೆಯು ಜಾರಿಗೆ ಬರುವಂತೆ, ಪಾರ್ಲಿಮೆಂಟು ಶಾಸನ ಮಾಡಿರುವುದನ್ನು ನೋಡಿದರೆ, – ಪ್ರಪಂಚದಲ್ಲಿ ಭ್ರಾಂತರೆಂದರೆ ಭಾರತೀಯರೇ ಅಥವಾ ಪಾರ್ಲಿಮೆಂಟಿನವರೇ ಎಂದು ಪ್ರಶ್ನೆ ಏಳಬಹುದಾದರೂ, ಆ ಪ್ರಶ್ನೆಯ ಮಾತಂತಿರಲಿ, ಈಗಣ ವಿದ್ಯಮಾನಗಳು ಭ್ರಾಂತಿ ವಿಲಾಸವನ್ನೆ ಸೂಚಿಸುತ್ತಿದೆ. ಕಮ್ಯೂನಲ್ ಎವಾರ್ಡಿನ ವರದು ವಿಚಿತ್ರ ಶಾಸನವನ್ನು ಮಾಡಿಕೊಟ್ಟ ಆ ಮೆಕ್ ಡೋನಾಲ್ಡರು ಈ ವಿಚಾರಗಳನ್ನು ಸಂಪೂರ್ಣ ತಿಳಿದವರಾಗಬೇಕು ಅದಾದ ಬಳಿಕವೇ ಅವರಿಗೆ ದೃಷ್ಟಿದೋಷ ಉಂಟಾಗಿ ಎರಡೆರಡು ಸಲ ಶಸ್ತ್ರಚಿಕಿತ್ಸೆ ನಡೆದು, ಮಂತ್ರಿಪದವನ್ನೆ ಅವರು ತ್ಯಜಿಸಿ ಮಂತ್ರಿಮಂಡಲದಲ್ಲಿ ಸೇರಿ ಹೆಚ್ಚು ಸಂಬಳ ಪಡೆದಂತಾಯಿತು, ಇದು ಈ ಭ್ರಾಂತಿ ವಿಲಾಸದ ಮಹಾತ್ಮೆಯೆನ್ನಬಹುದು

ನೂತನ ರಾಜ್ಯಾಂಗ ಪದ್ಧತಿಯನ್ನು ಹೊಗಳುವವರೆಂದರೆ, ಅದನ್ನು ರಚಿಸಿದವರೇ ವಿನಾ ಇನ್ನಾರೂ ಇಲ್ಲ ಇದು ವ್ಯರ್ಥವೆಂದು ತೆಗಳುವರಲ್ಲಾದರೂ ಯಥಾರ್ಥವಾಗಿ ಹಾಗೆ ಹೇಳುತ್ತಾರೆಯೋ, ಅದು ಬಾಯಿಮಾತೇ ಹೊರತು ಅಂತರಂಗದ ಸತ್ಯವಿಚಾರವೇ ಎಂದಾದರೂ ತಿಳಿಯಲು ಉಪಾಯವಿಲ್ಲ ... ಗಿಯವರು ಕೂಡ, ಅವರ ಮಾತೆತ್ತಿದರೆ ಗಲೀ ... ಮಾಡಿ ಮುರಿಯುತ್ತಾ ... ರೆ, ಹೊರತು, ಬ್ರಿಟಿಷರೆಂದರೆ ಹಾಗೆ ಹೀಗೆಂದು ಮೊದಲಿಲ್ಲ ಕೊಂಡಾಡುತ್ತಿದ್ದವರು ಸಹ ನಮಗೆ ಭ್ರಮೆ ಹಿಡಿದಿತ್ತೆಂದೇ ಈಗ ಹೇಳುವಂತಾಗಿದೆ ಇವರ ಅಭಿಪ್ರಾಯದಲ್ಲಿ, ನ್ಯಾಯವಿಧಾಯಕ ಸಭೆಗಳಲ್ಲಿ ತಮ್ಮ ಭಾಷಣಗಳಿಂದ ಬೇಕಾದಷ್ಟು ಹೆಚ್ಚಿನ ಗಲಭೆಯನ್ನುಂಟುಮಾಡಿಬಿಡುವೆವೆಂದೂ ಈ ಶಾಸನವನ್ನೆ ಗಂಟಲಕನಕ ಹೂಳಿಬಿಡುವೆವೆಂದೂ ಇವರ ವಾಗ್ದಾನವಾಗಿದೆ.

ಕೊಂಗ್ರೆಸ್ ಪಂಗಡದವರು, ಈ ಆಕ್ಷನ್ನೆ ಹಿಡಿದು, ಚೂರುಗಳನ್ನೆಲ್ಲ ಗಾಳಿಯಲ್ಲಿ ಚೆಲ್ಲದೆ ಬಿಡುವುದಿಲ್ಲವಾಗಿ ಸಾರುತ್ತಿದ್ದಾರೆ ಇದನ್ನು ಅವರು ಹೇಗೆ ಮಾಡುವರೆಂಬುದು, ಸರದಾರ ವಲ್ಲಭಭಾಯಿ ಪಟೇಲರೊಬ್ಬರ ತಲೆಯಲ್ಲೇ ಇದೆ ಚುನಾವಣೆಗಳು ಮುಗಿದು ಕೊಂಗ್ರೆಸ್ಸು ಬಹುಮತವನ್ನ ಸಂಪಾದಿಸುವಂತಾದಲ್ಲಿ, ವೋಟರರು ಸಹನಾಶೀಲರಾಗಿ ಕಾದಿರುವಲ್ಲಿ, ... ಅಂದು ಬಯಲಿಗೆ ಬರುವುದು ಹೊರತು ಮೊದಲಲ್ಲ ಅಧ್ಯಕ್ಷರನ್ನು ನೋಡಿ ... ರನ್ನು ನೋಡಿ, ಸುಮ್ಮನಿರಿ; ವೋಟು

ಸ್ಫುಟ ವಿಚಾರಗಳು

ಚುನಾವಣೆಗಾಗಿ

ಹಣ ಪೋಲುಮಾಡುವ ಪ್ರಸಂಗವೆದ್ದಿದೆ. ಒಂದೊಂದು ಚುನಾವಣೆಯ ಕುಳದ ಎಷ್ಟೇ ದೊಡ್ಡದಾಗಿರುವ ನಮ್ಮ ಪ್ರಾಂತ್ಯದಲ್ಲಿ, ವೋಟರರನ್ನು ವೋಟುಕೊಡುವ ಸ್ಥಳಕ್ಕೆ ಕರದೊಯ್ಯುವ (ಮರಳಿ ಕಳುಹುವ ಕೃಪೆ ತೋರಿಸುವವರು ಹೆಚ್ಚಿಲ್ಲ) ಖರ್ಚೇ ಸಾಕಷ್ಟಿದೆ. ನಿರಕ್ಷರರನ್ನು ಕರದೊಯ್ಯುವ ಭಾರವು ವಾಹನದ ಮೇಲೆ ಬೀಳುವುದಕ್ಕಿಂತ ಹೆಚ್ಚಾಗಿ ಉಮೇದುವಾರನ ಮೇಲೆ ಬೀಳುತ್ತದೆ ಮಾತ್ರವಲ್ಲದೆ, ಫಲಾಹಾರ, ತಿಂಡಿ, ತೀರ್ಥ? ಸಮಯ ನಷ್ಟಕ್ಕೆ ಭರ್ತಿ ಆಯ, ಭೋಜನಾದಿಗಳನ್ನು ಏರ್ಪಡಿಸುವವರಿರುವರು ಏರ್ಪಡಿಸುವವರಿಗಿಂತ ಅಪೇಕ್ಷಿಸಿ ನಿರೀಕ್ಷಿಸುವವರಿರುವರು ಶ್ರೀಮಂತರಿಗೆ ಮಾತ್ರವೇ ಈ ಉದ್ಯಮವಿದ್ದರೆ ಉತ್ತಮ್ಮ ಕೊಂಗ್ರೆಸ್ಸಿನ "ನಾಲ್ಕಾಣೆ ವೋಟರರನ್ನು" ಹೀಗೆ ಆದರಿಸಿ ಸತ್ಕರಿಸುವುದು ಕೊಂಗ್ರೆಸ್ಸಿನ ಉಮೇದುವಾರರಿಗೆ ತೀರ ಕಠಿಣವಾದುದೆಂಬುದನ್ನು ಪಂಡಿತ ಜವಾಹರಲಾಲರು ತಿಳಿಸಿರುವರು ದೇಶಪ್ರೇಮದಿಂದಲೇ ಕೊಂಗ್ರೆಸ್ಸಿಗಾಗಿ ಉಪವಾಸವಿದ್ದು ಶ್ರಮವಹಿಸಿ ವೋಟು ಕೊಟ್ಟು ಬರುವವರ ಜನೋತ್ಸಮರಿನ್ನೆಬಹುದು ಆದರೆ, ಜನೋತ್ಸವಾದರೂ ಉಪವಾಸ ಮರೆವರೆ ಸಾಧ್ಯವಿದೆಯೆ? ಮಾತ್ರವಲ್ಲ, ಇತರ ಪಕ್ಷಗಳ ಉಮೇದುವಾರರು, ವೋಟು ಕೊಡುವಲ್ಲಿಲ್ಲ ಹೊಸ ಹೋಟ್ಲುಗಳನ್ನು (ಗಡಂಗುಗಳನ್ನು) ಸ್ಥಾಪಿಸಿದರೆ, ವ್ಯಾಮೋಹಕ್ಕೆ ಬಲಿಬೀಳುವರು ಹೇಗೆ ಇರಾದುವರೋ ತಿಳಿಯದು

ಮುಸ್ಲಿಮ ವಿದ್ಯಾರ್ಥಿಗಳು

ಸುವಿವೇಕಿಗಳೆಂದೇ ತೋರಿಸಿಕೊಂಡರು ಲಕ್ನೋದಲ್ಲಿ ಅಖಿಲಭಾರತದ ಮುಸ್ಲಿಮ ವಿದ್ಯಾರ್ಥಿಗಳ ಪರಿಷತ್ತು ಜರುಗಿದಾಗ, ಇವರು ದೇಶಪ್ರೇಮವನ್ನು ಪ್ರದರ್ಶಿಸಿದುದು ಶ್ಲಾಘನೀಯವಾಗಿದೆ ಅಖಿಲಭಾರತದ ವಿದ್ಯಾರ್ಥಿಗಳ ಪರಿಷತ್ತಿಗೆ ವಿರುದ್ಧವಾಗಿ ಅಖಿಲಭಾರತದ ಮುಸ್ಲಿಮ ವಿದ್ಯಾರ್ಥಿಗಳ ಪರಿಷತ್ತನ್ನ ಸ್ಥಾಪಿಸುವುದಕ್ಕಾಗಿ ಕೆಲವರು ಬಹಳ ಸಾಧಿಸಿದ್ದರು ಹೀಗಾಗಿ ಈ ಪರಿಷತ್ತನ್ನ ಕರೆದರು ಹೀಗೆ ಪ್ರತ್ಯೇಕಿಸಿ ಪಂಗಡಗಳನ್ನುಂಟುಮಾಡುವ ಸಾಹಸವು ನಿಂದನೀಯವೆಂದೇ ಈ ವಿದ್ಯಾರ್ಥಿಗಳ ರುಜುವಾತಿಸಿ ಪುದಕ್ಕಾಗಿ, ಪರಿಷತ್ತು ಕರೆದವರ ಆಶಯವು ಕೈಗೂಡದಂತೆ ಮಾಡಿದರು ಕೌನ್ಸಿಲ್ ಆಫ್ ಸ್ಟೇಟ್ ಸಭಾಮೆಂಬರರಾಗಿರುವ ಶ್ರೀ ಹಸ್ಸೇನ್ ಕಿದ್ವಾಯಿಯವರು ಪರಿಷತ್ತಿನ ಅಧ್ಯಕ್ಷರಾಗಿ ಭಾಷಣಮಾಡುತ್ತ, ವಿದ್ಯಾರ್ಥಿಗಳಲ್ಲಿ ಹೀಗೆ ಪಂಗಡಗಳನ್ನುಂಟುಮಾಡುವವರ ಮನೋಭಾವವನ್ನು ಖಂಡಿಸಿದರು

ಅಲಿಘರ ಯುನಿವರ್ಸಿಟಿಯ ಮುಸ್ಲಿಮ ವಿದ್ಯಾರ್ಥಿಗಳು

ಕೊಂಗ್ರೆಸ್ಸಿನೊಡನೆ ಸೇರಿಯೆ ಸರ್ವರ ಕೂಡಿ, ಎಲ್ಲ ವಿಧದಿಂದ ಬರುವುದು ಎಂಬೀ ಅವರ ಆಶ್ವಾಸನ ನಮ್ಮಲ್ಲಿ ವಿಶ್ವಾಸವಿರುವುದಾದರೆ, ಇದಾದರೂ ಆಗುವುದು, ವೃಥಾ ಪ್ರಶ್ನೆ ಹಾಕುವುದು ಉತ್ತಮವಲ್ಲ, ಆಗಾಗ ಬೇರೆ ಭೇದ ಮಾತೂ ಹೊರಡುವಂತಿಲ್ಲ

ಪಂಡಿತ ಜವಾಹರಲಾಲರ ವಿವೇಕದಿಂದ ಸೊಶಲಿಸ್ಟ್ ಪಂಗಡದಲ್ಲಿ ವಿವೇಕೋದಯವಾಯಿತು ಈ ಪಂಗಡವು ಈಗ ಕೊಂಗ್ರೆಸ್ ನಾಯಕರನ್ನು ಹಿಂಬಾಲಿಸುವುದೇ ವಿನಾ ಎದುರಾಡುವಂತಿಲ್ಲ ಪಂಜಾಬಿನ ಹಿಂದೂ ಮಹಾಸಭೆಯೊಂದು ಹೊರತು ಮತ್ತಾರೂ ಕೊಂಗ್ರೆಸಿನ ವಿರುದ್ಧ ಪಂಜಾಬಿನಲ್ಲಿ ಪ್ರತ್ಯಕ್ಷ ಆದುತ್ತಿಲ್ಲವಾದ ಕಾರಣ, ಈಗ ತಾನೆ ಅತ್ತ ಭಾಷಣಗಳನ್ನು ಮಾಡುತ್ತಿರುವ ಸರೋಜಿನಿ ದೇವಿಯವರು ಹಿಂದೂ ಮಹಾಸಭೆಯ ಭ್ರಾಂತಿಯನ್ನು ತಮ್ಮ ಸುಮಧುರ ಹಾಡುಗಳಿಂದ ತೊಲಗಿಸಬಹುದಾಗಿ ನಂಬಬಹುದಾಗಿದೆ.

ವಿವೇಕಿಗಳು ಕಾರ್ಯಸಾಧನೆ ಮಾಡತಕ್ಕದ್ದೆಂದೇ ನಿರ್ಧರಿಸಿದರು. ಇದರಿಂದ ಮನಸ್ಸಿಗೇನೊ ಸಂತೋಷ ನಿಜ, ಆದರೆ, ಇಷ್ಟು ದೂರ ಸ್ಪಷ್ಟವಾಗಿ ತಿಳಿಸುವ ಪ್ರಸಂಗವುಂಟಾದುದನ್ನು ನೋಡಿದರೆ, ಮುಂದಾಳುಗಳಲ್ಲಿ ಅಂಧಶ್ರದ್ಧೆ ಬಹಳವಿದೆ ಎಂದು ತೋರುವುದಿಲ್ಲವೆ? ವಿದ್ಯಾರ್ಥಿಗಳು ಭವಿಷ್ಯವಾದಿಗಳು, ಅವರಿಗೆ ನಾಳಿನಲ್ಲಿ ನಂಬುಗೆ ಹೆಚ್ಚು, ಕುರುಡುತನ, ಸಂಕೋಚಭಾವ ಅವರಲ್ಲಿರುವುದಿಲ್ಲ ಸಮಾನತೆ, ಸೋದರತೆ, ಸ್ವಾತಂತ್ರ್ಯಗಳಿಗಾಗಿ ಪರಿಶ್ರಮಪಡುವ ಸೈನಿಕರೆ ಇವರು ಇಂತಹರೊಳಗೆ ಸಹ ಪಂಗಡಗಳು ಉಂಟಾಗುವಂತೆ ಯತ್ನಿಸುವ ಮುಂದಾಳುಗಳನ್ನು ಕಂಡರೆ, ಮೊದಲೆ ಭಿನ್ನಜಾತಿಗಳ ಒಡಕಿನಿಂದ ಹಾಳಾಗುತ್ತಿರುವ ನಮ್ಮ ಜನತೆಗೆ ಮುಂದೆ ಗತಿಯೇ ಇಲ್ಲವೆಂದು ತೋರದೆ? ಮುಂದಾಳುಗಳಿಗೆ ಬುದ್ಧಿ ಕಲಿಸಿದ ಈ ವಿದ್ಯಾರ್ಥಿಗಳನ್ನು ನಿಜವಾಗಿಯೂ ಕೊಂಡಾಡತಕ್ಕದ್ದು

ಸ್ಪೇಯಿನಿನಲ್ಲಿ

ಜನರಲ್ ಫ್ರೆಂಕೋ ಬಹಳ ಸುಂದರಿ ದಂತಿಲ್ಲವಲ್ಲ! ಇತರ ರಾಷ್ಟ್ರಗಳ ಸಹಾಯದಿಂದಲಾದರೂ ಇನ್ನು ರಾಜಧಾನಿಯನ್ನು ಸ್ವಾಧೀನಪಡಿಸಿಕೊಂಡಿಲ್ಲ ಯುದ್ಧ ನಡೆಯುತ್ತಲೇ ಇದೆ ಇಟಲಿಗೆ ಈ ಫ್ರೆಂಕೋವಿನ ಸಹಾಯಕ್ಕೆ ಬಂದುದೇ ಬೇಸರವಾಗಿ ತೋರುತ್ತಲಿದೆ ಜರ್ಮನಿಯು ಹೊಸತಾಗಿ ಏನೊ ದುಸಹಾಯ ಮಾಡಲೂ ಮುಂದೆ ಬರುವಂತಿಲ್ಲ ಫ್ರೆಂಕೋ ಹೀಗಾಗಿ ಹಿಂಜರಿವನೆ ದೂಷಿ ... ಬ್ರಿಟನ್ನು ಫ್ರಾನ್ಸುಗಳ ಸ್ಪೇಯಿನಿಗೆ ಕಾಲಿಡುವ ಇತರ ದೇಶಗಳ ಸ್ವಯಂಸೇವಕರ ದಳಗಳನ್ನು ತಡೆಗಟ್ಟಲು ಸಹಾಯ ಮಾಡುವುದಾದರೆ ಯುದ್ಧವು ಅಲ್ಲೇ ಮುಗಿಯಬಹುದ ಆದರೆ ಈ ಸ್ವಯಂಸೇವಕರನ್ನು ಸಂಪೂರ್ಣವಾಗಿ ತಡೆಗಟ್ಟಲು ಬರುವುದುಂಟೆ? ಎಂಬ ಪ್ರಶ್ನೆ ಉಳಿದಿದೆ ಫ್ರಾನ್ಸಿನಿಂದ ಸ್ವಯಂಸೇವಕರನ್ನು ಹೋಗದಂತೆ ನಿರ್ಬಂಧಿಸಲಾಗಿದೆ ಆದರೆ ಇತರ ರಾಷ್ಟ್ರಗಳಿಂದ ಸ್ವಯಂಸೇವಕರು ಇನ್ನೂ ಬರುತ್ತಿರುವಲ್ಲಿ ಫ್ರಾನ್ಸು ಸುಮ್ಮನಿರಲಾರದು' ಎಂದು ಫ್ರೆಂಚ ಮಂತ್ರಿಗಳೆನ್ನುವಾಗ ಫ್ರಾನ್ಸಿನ ಆತಂಕವು ಸಂಪೂರ್ಣವಾಗಿದೆ, ಸ್ವಯಸೇವಕರ ಬಲದಿಂದಲೇ ಯುದ್ಧವು ... ದೆ ಸಂಗತಿ ಹದೆಂದ, ತೋರುವುದಲ್ಲವೆ?

ಬಿಳಿ ಮತ್ತು ಇತರ ಬಣ್ಣಗಳು

ದಕ್ಷಿಣಾಫ್ರಿಕದಲ್ಲಿ ತೋರಾಡುತ್ತಲೇ ಇವೆ ಆಸ್ಯಖಂಡದ ಜನರು ಯುರೋಪೀಯರೊಡನೆ ಸಮಾನವಾಗಿ ನಡೆಯಬಾರದೆಂದೂ ಅಲ್ಲಿನ ರೀತಿಯಾಗಿದೆ ಹಿಂದೀಯರ ಮೇಲಂತೂ ಈ ರೀತಿಯು ಹೀಡೆ ಎಂದೆಂದಲೂ ಬಹಳವಾಗಿದೆ ಈಗ ಅಲ್ಲಿ ನಡೆದ ಒಂದು ವೃತ್ತಾಂತವು ವಿಚಿತ್ರವಾಗಿದೆ ಚೀನ್ಯಾದ್ದದ ಪ್ರಾನ್ಯುಮ್ಮ ರಾಯಭಾರಿಗೂ ಆತನ ಹಸ್ತಕರಿಗೂ ಉಪದ್ರವುಂಟಾಗಿದೆ ಇವರು ರಾಯಭಾರಿಗಳು, ಆದರೆ ಇವರ ಪ್ರೈಬ್ಬ ಬಿಳಿಯದಲ್ಲ ಇವರ ದೇಶ ಸ್ವತಂತ್ರವಾಗಿದೆ, ಆದರೆ ಇವರು ಸ್ವತಂತ್ರ ರಾಷ್ಟ್ರದವರೆಂದು ಮನ್ನಣೆ ಹೊಂದಿಲ್ಲ ಯಾವುದೊಂದು ಹೊಟೇಲಿನಲ್ಲಿ ಇವರಿಗೆ ಆಹಾರ ಬಡಿಸುವುದಿಲ್ಲ, ಒಂದು ಮನೆ ಬಾಡಿಗೆಗೆ ಬೇಕಾದರೆ, ಇವರನ್ನುಬೀದಿಯಿಂದ ಬೀದಿಗೆ ಯೂರೋಪೀಯರು ಓಡಿಸುತ್ತಾರೆ, ಬಸ್ಸು ಟ್ರಾಮುಗಳನ್ನು ಹತ್ತುವುದಕ್ಕೂ ಇಲ್ಲ; 'ನೇಟಿವ'ರಲ್ಲಿಗೆ ಹೋಗಿ ತಾನೆ ಕ್ಷೌರಮಾಡಿಸಿಕೊಳ್ಳಬೇಕು ಸಿಕ್ಕವರು ಸಿಕ್ಕಾ ಬಟ್ಟೆ ವಿಚಾರಣೆ ಮಾಡುತ್ತಿದ್ದಾರೆ ಇವರ ಜೀವನವು ಸೆರೆಮನೆಯಲ್ಲಿರುವ ಕೈದಿಯ ಜೀವನದಂತಾಗಿದೆ ಎಂದೇ ಇವರು ಚೀನಾ ಸರಕಾರಕ್ಕೆ ಬರೆದುಕೊಂಡಿರುವರು

ಡಾ। ಅಂಬೇಡ್ಕರರು

ವಿಲಾಯಿತಿ ಸಂಚಾರ ಮುಗಿಸಿ ಮರಳಿದರು ಇವರ ಆರೋಗ್ಯ ಚೆನ್ನಾಗಿದ್ದಿಲ್ಲವಂತೆ ಈಗ ಅಲ್ಲಿನ ಹವೆ ಚೆನ್ನಾಗಿ ಹಿಡಿದಿದೆ ಶರೀರದ ಮಟ್ಟಿಗೆ ಚೆನ್ನಾಗಿದ್ದಾರೆ ಸಮುದ್ರದ ಆಚೆಗೆ ಪ್ರವಾಸ ಮಾಡಿ ಬಂದರಾದರೂ, ಮತಾಂತರ ಹೊಂದುವುದು ಅಗತ್ಯವೆಂಬ ಅವರ ಹಿಂದಣ ಬುದ್ಧಿ ಬದಲಾಗಲಿಲ್ಲ ಇವರನ್ನು ವಿಚಾರಿಸಿದಾಗ,-ಹಿಂದೂ ಮತವನ್ನು ಬಿಟ್ಟೇ ಬಿಡುವುದು ಖಂಡಿತ ಆದರೆ ಇನ್ನಾವ ಮತ ಸೇರಲಿ ಎಂದೇ ಇನ್ನೂ ನಿರ್ಧರಿಸಿಲ್ಲ ಎನ್ನುವರು ಇನ್ನುಳಿದ ಕೆಲವೇ ವರ್ಷ ಆಯುಷ್ಯವನ್ನು ಯಾವ ಮತ ಸೇರಿ ಕೃತಾರ್ಥವಾಗಬಹುದು ಎಂಬ ವಿಚಾರ ಮಾಡಲು, ಅವರಿಗೆ ಇನ್ನೂ ಸಾವಕಾಶ ಅವಕಾಶ ಸಿಗಲೇ ಇಲ್ಲ ಇದರಿಂದ ಕೆಡುಕಿದೆ ಹೀಗೆಂದು ಧರ್ಮ ವಿಚಾರದಲ್ಲಿ ವಿಳಂಬಿಸಬಾರದು ಆದರೆ, ವಿಶ್ವಾಸವೊಂದೇ ಕಾರಣದಿಂದ ಮತಾಂತರ ಹೊಂದಬೇಕೆನ್ನುವವರಿಗೆ ಹೆಚ್ಚಿನ ವಿಳಂಬ ಮಾಡಲು ಕಾರಣವಿಲ್ಲವಾದರೂ, ಅಂದ... ದೇ ... ವಿಲ್ಲದಂಗೆ ಬಹು ಕಾಲ ದೀರ್ಘಕಾಲ ವಿಳಂಬವು ಅಗತ್ಯವೆ ಸದೆ ಇರಲಾರದಷ್ಟೆ

ಇಂಗ್ಲಾಂಡಿನ ಗಂಡಾಂತರ

ಅದಕ್ಕಾಗಿ ನೌಕಾಸೇನೆಗಳ ... ವರಿ ಸಲ ಧನಸಹಾಯ ಮಾಡಿ... ದ ಲೋಡ ... ವಿಳ್ಯಾನವರ ಸಾರುತ್ತಿರುವರು ... ತರ ಎಂಬುದು ಯುದ್ಧದ ದೆಸೆ... ದ ಎಂದ ... ಬರೆಯ ಬೇಕಾಗಿಲ್ಲ ಮತ... ಯುದ್ಧವು ದ... ಪ್ರಥಮ ದಂತೆ ಪಕ್ಕನೆ ಉಂಟಾಗಲಿಕ್ಕಿಲ್ಲ ಎಂಬುದನ್ನು ಅತಿ ಅಲ್ಪಮತಿಗಳೂ ಈಗ ತಿಳಿದ ಇರವರು ಯಾವ ಮುಹೂರ್ತದಲ್ಲಿ ಎಂದ ಮಾತ್ರ ಹೇಳಬರ ವಂತಿಲ್ಲ ಕೆಲವರು, ಇನ್ನು ಐದು ವರ್ಷಗಳ ಸಿದ್ಧತೆಯಾಗದೆ ಯಾವ ಜನಾಂಗವೂ ಯುದ್ಧಕ್ಕೆ ಕೈಹಚ್ಚದ ಎನ್ನುತ್ತಿದ್ದಾರೆ ಇವ ಅದೆಲ್ಲ ಇತರರ ಸಮಾಧಾನಕ್ಕಾಗಿ ಹೊರತು ಅತ್ಯಂತರಕ್ಕಾಗಿ ಅಲ್ಲವೆಲ್ಲರ ಅಭಿಪ್ರಾಯ ದಲಿ ಐದು ತಿಂಗಳ ಅವಧಿ ಕೂಡ ತಿಳಿದುಬರ ಪುದಿಲ್ಲ ಅಥವಾ ಬೇಗನೆ ಹಣ ಕೂಡಿ ಬರಲಿ ಎಂದೇ ಅವರು ಹೀಗೆ ದಿರಬಹುದಾದರೂ, ಎಲ್ಲರ ಮನಸ್ಸಿನಲ್ಲಿ ಯುದ್ಧದ ಭಯವನ್ನು ಬಿತ್ತಿದ ಪರಿಣಾಮವಾದರೂ ಅವರ ದ ಗ ರದಿಂದ ಉಂಟಾಗದೆ ಇರಲಾರದು

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7th and 14th packets at the
Office C. P C Co., Ltd

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಗಾಂಧಿಜಿಯವರು ಕಾಂಗ್ರೆಸ್ ಶಿಸ್ತಿನ ಪ್ರಕಾರ ನಡೆಯಬೇಕು.

ಕಾಂಗ್ರೆಸ್ ಶಿಸ್ತನ್ನು ಮುರಿಯಲು ತನ್ನ ಸದಸ್ಯರಿಗೆ ಬಿಡಲೊಲ್ಲದು, ಮಹಾತ್ಮಾ ಗಾಂಧಿಯವರು ಕೂಡಾ ಕಾಂಗ್ರೆಸ್ ಶಿಸ್ತಿಗೆ ಬಗ್ಗಿರಬೇಕು. ಅವರು ಅದನ್ನು ಮುರಿದಲ್ಲಿ, ಅವರ ಮೇಲೆಯೂ ಶಿಕ್ಷೆ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದು ಎಂದು ಪಂಡಿತ ಜವಾಹರಲಾಲರು ಇತ್ತೀಚಿನ ಒಂದು ಭಾಷಣದಲ್ಲಿ ನುಡಿದರು.

ಬಂಗಾರ ಹೋಯಿತೇ ಹೋಯಿತು.

ಕಳೆದ ವಾರ ಮುಂಬೈಯಿಂದ ೮೧,೦೩,೧೮೩ ರೂ. ಗಳಷ್ಟು ಬಂಗಾರವು ವಿಲಾಯತಿಗೆ ಹೋಯಿತು. ಇಂಗ್ಲೆಂಡು ಬಂಗಾರದ ಬೆಲೆಯನ್ನು ಇಂಡಿಯಾದಲ್ಲಿ ಏರಿಸಿದಂದಿನಿಂದ ೨,೯೩,೦೩,೩೫,೭೭೯ ರೂಪಾಯಿ ಮೌಲ್ಯದ ಬಂಗಾರವು ಇಂಗ್ಲೆಂಡಿನಲ್ಲಿ ದಾಸ್ತಾನಾಯಿತು.

ಹಿಂದೀ ವ್ಯಾಪಾರೀ ಕೂಟ

ಮೇಲಿನ ಸಂಘದ ರಾಷ್ಟ್ರೀಯ ಸದಸ್ಯರಾದ ಹದಿನೈದು ಮಂದಿಗಳು, ಮುಂಬೈ ವ್ಯಾಪಾರಿಗಳು ಬೆಂಬಲವನ್ನು ಕಾಂಗ್ರೆಸ್ಸಿಗೆನೇ ಕೊಡ ಪುದಾಗಿ ತಿಳಿಸಿರುವರು.

ಕಾಂಗ್ರೆಸಿನಿಂದ ಕೌನ್ಸಿಲ್ ಆಫ್ ಸ್ಟೇಟಿಗೆ ಹರಿಯಾಳಾಗಿ ಕಳುಹಲ್ಪಟ್ಟ ಶ್ರೀ. ಗೋವಿಂದಲಾಲ್ ಶಿವಲಾಲರು ಯಶಸ್ವಿಯಾಗಿ ಚುನಾಯಿತರಾಗಿರುವರು. ಇದನ್ನು ನೋಡಿದರೆ ಭಾರತೀಯ ವ್ಯಾಪಾರಿಗಳ ಕಾಂಗ್ರೆಸ್ಸಿನ ಬೆಂಬಲಕ್ಕೆ ಇರುವರೆಂದು ತಿಳಿಯುತ್ತದೆ ಎಂದೂ ಅವರ ತಿಳಿಸಿರುವರು.

ಚುನಾವಣಾ ಪ್ರಚಾರಕಾಯ್ೆಗಳಲ್ಲಿ ತಂತೀಟಪ್ಪಾಲು ಇಲಾಖೆಯವರು ಯಾವ ಪಕ್ಷದವರಿಗೂ ಯಾವ ರೀತಿಯ ಭೇದವನ್ನೂ ತೋರಿಸದೆ ಎಲ್ಲರಲ್ಲಿಯೂ ಒಂದೇ ರೀತಿಯಿಂದ ನಿಷ್ಪಕ್ಷಪಾತದೃಷ್ಟಿ ಇಡಬೇಕು ಎಂದು ಡೈರೆಕ್ಟರ್ ಜನರಲ್ ರವರು ಹುಕುಂ ಹೊರಡಿಸಿರುತ್ತಾರೆ.

ಡಾ॥ ಅಂಬೇಡ್ಕರರು ವಿಲಾಯತಿಗೆ ಹೋದಾಗ ಆಂಗ್ಲೇಯರ ವ್ಯಾಪಾರ ನೆರವಾದರೆಂದ ವರ್ತಮಾನವು ಹರಡಿತ್ತು. ಅದು ಸುಳ್ಳೆಂದೂ, ತಾನು ಅಂತಹ ಕೆಲಸ ಮಾಡುವವನಲ್ಲವೆಂದೂ ಹೇಳಿರುತ್ತಾರೆ.

ಅಹಮ್ಮದಾಬಾದ ನಗರ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಎಂಟು ಸಾವಿರ ಸ್ತ್ರೀಯರು ಒಂದು ಸಭೆ ಸೇರಿ ಸ್ತ್ರೀ ಓಟರೆಲ್ಲರೂ ಕಾಂಗ್ರೆಸ್ಸಿಗೇ ಓಟುಕೊಡುವಂತೆ ಪ್ರಚಾರ ಮಾಡಬೇಕೆಂದು ನಿರ್ಧರಿಸಿರುವರು.

ಕಳ್ಳನ ಬೆನ್ನಹಿಡಿತ

ಡಿಲ್ಲಿಯ ದ್ವಾರಕಾದಾಸ ಮೇಹತಾರವರ ಮನೆಯಲ್ಲಿ ಕೆಲಸಕ್ಕಿದ್ದ ಸಿದ್ಧನಾಥ ಎಂಬ ಕೆಲಸಗಾರನು ರೂ. ೭೫ನ್ನು ಕದ್ದು ಓಡಿಹೋದನೆಂದು ಪೋಲೀಸರಿಗೆ ತಿಳಿಸಿದಾಗ, ಇನ್‌ಸ್ಪೆಕ್ಟರರು ಅವನನ್ನು ನೋಟಾರುಕಾರಿನಲ್ಲಿ ಹಿಂಬಾಲಿಸಿದರು. ಕಳ್ಳನು ಹುಬ್ಬಳ್ಳಿ ಡಿಲ್ಲಿಯಿಂದ ಹತ್ತು ಮೈಲು ದೂರದ ಗಾಜಿಯಾಬಾದಿಗೆ ಗಾಡಿಬಿಟ್ಟದ್ದನು. ಗಾಜಿಯಾಬಾದಿನಲ್ಲಿ ಅವನು ಅಧಿಕಾರಿಗಳ ವಶವಾದನು. ಅವನಲ್ಲಿ ಕದ್ದ ಹಣವೂ ಸಿಕ್ಕಿತು.

ಕಳ್ಳನ ಮದುವೆಪ್ರಸ್ತಾಪ ಪ್ಲೇನ್

ಹೊರಾಬಾದಿನ ಮೋಹನನೆಂಬವನು, ಜೋಳಿ ವಾಸದ ರಾಮಚಂದರ್ ಎಂಬವನ ಮನೆಗೆ ಬಂದು, ತನ್ನ ಮಗಳ ಮತ್ತು ರಾಮಚಂದರನ ಮಗನ ಮದುವೆ ವಿಚಾರ ತಾನು ಬಂದಿರುವನೆಂದು ಹೇಳಿದನು. ಅಂದು ರಾತ್ರಿ ಆತನಿಗೆ ರಾಮಚಂದರನ ಮನೆಯಲ್ಲಿಯೇ ಇರ ಹೇಳಿದರು. ಬೆಳಿಗ್ಗೆ ಎದ್ದು ನೋಡುವಾಗ ಮೋಹನನು ಪರಾರಿ. ಹೋಗುವಾಗ ಜೊತೆಯಲ್ಲಿ ಕೆಲವು ಸಾಮಾನನ್ನು ತೆಗೆದುಕೊಂಡು ಹೋಗಿದ್ದನು. ಈಗ ಹಿಡಿದಿರುವರು.

ಡಿಲ್ಲಿಯಲ್ಲಿ ಸ್ಕೌಟ್ ಸಮ್ಮೇಳನ.

ಫೆಬ್ರವರಿ ತಾ. ೧೮ರಿಂದ ೭ರ ವರೆಗೆ ನಡೆಯಲಿರುವ ಡಿಲ್ಲಿಯಲ್ಲಿನ ಅಖಿಲ ಭಾರತ ಸ್ಕೌಟ್ ಸಮ್ಮೇಳನಕ್ಕೆ, ಪ್ರಪಂಚದ ಸ್ಕೌಟ್ ಮುಖಂಡರಾದ ಲಾರ್ಡ್ ಬೇಡನ್ ಪಾವೆಲ್ಲರು ಅಧ್ಯಕ್ಷರಾಗಿರುವರು. ಆ ಸಮಯದಲ್ಲಿ ಸ್ಕೌಟ್ ಚಳವಳಕ್ಕೆ ಸಂಬಂಧಪಟ್ಟ ಅನೇಕ ಆಟಿಪಾಟಗಳ ಪ್ರದರ್ಶನ ಏರ್ಪಾಡಾಗಿದೆ. ದೇಶದ ಎಲ್ಲಾ ಕಡೆಗಳ ಸ್ಕೌಟ್ ದಳಗಳಿಗೆ ಆಹ್ವಾನವಿರುವುದು.

ಎಂ. ಆರ್. ಮಸಾನಿಯವರು.

ಪಾಶ್ಚಾತ್ಯ ದೇಶಕ್ಕೆ ಹೊಕ್ಕಲಿದ್ದ ಪ್ರಖ್ಯಾತ ಸೋಶಲಿಸ್ಟ ಮುಖಂಡರಾದ ಶ್ರೀ. ಎಂ. ಆರ್. ಮಸಾನಿಯವರ ಪಾಸ್‌ಪೋರ್ಟನ್ನು ಸರಕಾರದವರು ಸ್ವಾಧೀನಪಡಿಸಿಕೊಂಡಿರುವರು.

ರೈಲು ೬೫ ಕುರಿಗಳನ್ನು ಕೊಂದಿತು.

ಪಾಟ್ನಾದ ಪಶ್ಚಿಮದ ಮಾರ್ಗವೊಂದರಲ್ಲಿ ಕುರಿಗಳ ಹಿಂಡನ್ನು ಕುರುಬನು ಹೊಡೆದುಕೊಂಡು ಹೋಗುತ್ತಿದ್ದನು. ದಾರಿಯಲ್ಲಿ ಈಸ್ಟ ಇಂಡಿಯನ್ ರೈಲ್ವೇ ಕಂಪೆನಿಯ ಎಕ್ಸ್‌ಪ್ರೆಸ್ ಬಂಡಿಯೊಂದು ಓಡುತ್ತಿದ್ದಾಗ ... ಕುರಿಗಳು ಅಡ್ಡವಾಗಿ ಹೋಗಿದ್ದುದರಿಂದ ಆಳದ ಕುರಿಗಳು ಅವನ್ನು ಹಿಂಬಾಲಿಸಿದುದರಿಂದ, ೬೫ ಕುರಿಗಳು ಚಕ್ರಗಳಡಿಗೆ ಬಿದ್ದು ಸತ್ತುಹೋದುವು.

ರೂಪಾಯಿ ೨೫,೦೦೦ ಉದಾರ ದಾನ.

ನಾಸಿಕದಲ್ಲಿ ಏರ್ಪಡಿಸಲಾಗುವ ಬಾನ್ಸ್ ಸೈನ್ಯ ಶಿಕ್ಷಣ ಶಾಲೆಗೆ, ಇಂದೂರಿನ ಮಹಾರಾಜರು ರೂ. ೨೫ ಸಾವಿರದ ಉದಾರ ದಾನ ದಯಪಾಲಿಸಿರುವರೆಂದು ತಿಳಿಯುತ್ತದೆ.

ಗುಂಡು ಹೊಡೆದರು.

ಪಾಂಡುಚೇರಿಯ ಪೌರ ಸಭಾಧ್ಯಕ್ಷರಾದ ವಿಕ್ಟರ್ ಜೋಸೆಫ್ ಡೇವಿಡ್‌ರವರು ಬೆಳಿಗ್ಗಿನ ಹೊತ್ತು ದೇವಾಲಯಕ್ಕೆ ಪ್ರಾರ್ಥನೆಗಾಗಿ ಹೋಗುತ್ತಿದ್ದಾಗ ಯಾವನೋ ದುರಾತ್ಮನು ಅವರ ಮೇಲೆ ಗುಂಡು ಹೊಡೆದನು. ಅವರಿಗೆ ತೊಡೆಯಲ್ಲಿ ಗಾಯವಾಗಿರುವುದು ಒಂದು ಗುಂಡು ಪಕ್ಕದ ಒಬ್ಬ ವಿದ್ಯಾರ್ಥಿಗೆ ಬಿದ್ದು ಅವನು ಆಸ್ಪತ್ರೆಯಲ್ಲಿ ಮಡಿದನು. ವ್ಯಕ್ತಿಯು ಪತ್ತೆಯಾಗಲಿಲ್ಲ.

ಅಂಡಮಾನ್ ದ್ವೀಪಗಳಲ್ಲಿ ಟ್ರೇಂ ಬಂದಿಗಳನ್ನು ಹಾಕುವುದಕ್ಕೂ, ಬೊಂಬೈ ಬ್ರೋಡ್‌ಕಾಸ್ಟಿಂಗ್ ಸ್ಟೇಶನಿಗೆ ಹೊಸ ಭವನವನ್ನು ಕಟ್ಟಿಸುವ ಏರ್ಪಾಡಿಗೂ, ಮತ್ತು ಚಿತಗಾಂಗಿನಲ್ಲಿ ಒಂದು ಸುಂಕದ ಮಂದಿರವನ್ನು ಕಟ್ಟಿಸಲಿಕ್ಕೂ ಸರಕಾರವು ಕೆಲವು ಲಕ್ಷ ರೂಪಾಯಿಗಳನ್ನು ಬೇರೆ ತೆಗೆದಿಟ್ಟಿರುವರು. ಅಂಡಮಾನ ಟ್ರೇಂ ಸ್ಟೇಶನಿಗೆ ೩ ಲಕ್ಷ ರೂಪಾಯಿಗಳು ಬೇಕಾಗುವುವಂತೆ. ಬೊಂಬಾಯಿಯ ಮಂದಿರಕ್ಕೆ ೩ ಲಕ್ಷ, ಚಿತಗಾಂಗಿನ ಸುಂಕದ ಭವನಕ್ಕೆ ೨ ಲಕ್ಷ ೯೦ ಸಾವಿರ ಆಗ್ಗೆ ಖರ್ಚು.

ಎಪ್ರಿಲ್ ತಾ. ೨೩ನೇ ದಿನ ಆರನೇ ಜಾರ್ಜರು ತಮ್ಮ ತಂದೆಯವರ ಪ್ರಾಪಚಿತ್ರ ಅನಾವರಣ ಸಮಾರಂಭವನ್ನು ವಿಂಡಸರಿನಲ್ಲಿ ಮಾಡಲಿರುವರು.

ಜವಾಹರಲಾಲರ ಬಗ್ಗೆ ಡಾರು ನೀಚ ವರ್ತನೆ.

No 130/1936.

ಲ್ಯವಹರಣೆಯಲ್ಲಿ –

ಕಾನ್‌ಪುರದ ಪೆರೆಡ್ ಮೈದಾನದಲ್ಲಿ ಏರ್ಪಾಟಾಗಿದ್ದ ಒಂದು ಸಾರ್ವಜನಿಕ ಸಭೆಯಲ್ಲಿ ಪಂ॥ ಜವಾಹಿರಲಾಲರು ಭಾಷಣ ಮಾಡುವುದಕ್ಕೆ ಮುಂಚೆ ಪಂಡಿತರ ಕಡೆಗೆ ಒಂದು ಜೋಡನ್ನು ಯಾರೋ ಒಬ್ಬರು ಎಸೆದರು. ಪಂಡಿತರು ವೇದಿಕೆಯ ಮೇಲೆ ನಿಂತು ಲೌಡ್ ಸ್ಪೀಕರನ್ನು ಇರಿಸುತ್ತಿದ್ದರು. ಆಗ ಈ ಘಟನೆಯಾದುದು.

ದನಗಳಿಗೂ ಕಾನೂನು.

ನವಡಿಲ್ಲಿಯ ಸರಕಾರೀ ಮನೆಗಳಲ್ಲೂ ಮತ್ತು ಇತರ ಸ್ವತಂತ್ರ ಮನೆಗಳಲ್ಲೂ ದನಗಳನ್ನು ಸಾಕಬಾರದೆಂದು ನವಡಿಲ್ಲಿ ಮುನಿಸಿಪಲ್ ಸಭೆಯಿಂದ ಹೊರಟ ಕಾನೂನು ನಾಗರೀಕರಲ್ಲಿ ಬಹಳ ತೊಂದರೆಯನ್ನುಂಟುಮಾಡಿದೆ. ದನಗಳನ್ನು ಸಾಕದಿದ್ದರೆ ಹಾಲಿಗೆ ಎಲ್ಲಿ ಹೋಗೋಣ? ಹಾಲಿಲ್ಲದಿದ್ದ ಮೇಲೆ ರೋಗ ಬಂದರೆ ಯಾರನ್ನು ಕೇಳೋಣ? ಎಂಬೀ ಅಭಿಪ್ರಾಯವನ್ನೊಳಗೊಂಡ ಪ್ರಜಾಪ್ರತಿನಿಧಿ ಕೂಟಗಳು ಪೌರಸಭೆ ಅಧಿಕಾರಿಗಳಲ್ಲಿ ತಮ್ಮ ದೂರು ಕೊಡಲಿರುವವು.

ಅದೃಶ್ಯವಾಗಬಹುದು'

ಕೆಲವು ಕಿರಣಗಳ ಪ್ರಕಾಶಬಿದ್ದ ವಸ್ತುವು ಅದೃಶ್ಯವಾಗಿ ತೋರುವುದೆಂಬುದರ ಕುರಿತ ಶೋಧಗಳಾಗಿದ್ದು ಈಗ ಇಟಲಿಯ ಪ್ರೊ॥ ವ್ಯಾನ್‌ಸ್ಕಿಯವರು ಒಂದು ಯಂತ್ರವನ್ನು ತಯಾರಿಸಿರುವರು. ಅದರ ಹತ್ತಿರ ಬರುವ ಮನುಷ್ಯ ಅಥವಾ ವಸ್ತುವು ಕಣ್ಣಿಗೆ ಗೋಚರವಾಗುವುದಿಲ್ಲ. ಈ ಯಂತ್ರಶೋಧವು ವಿಜ್ಞಾನಪ್ರಪಂಚದಲ್ಲಿ ಬಹಳ ಕ್ರಾಂತಿಯನ್ನುಂಟುಮಾಡಿರುವುದು. ಇದರ ಸಹಾಯದಿಂದ ಗುಂಪಾಗಿ ನಿಂತ ಮನುಷ್ಯರ ಕೂಟವನ್ನೆ ಅದೃಶ್ಯಗೊಳಿಸಬಹುದಂತೆ. ಈ ಯಂತ್ರ ಉಪಯೋಗದಿಂದ ಯಾವ ಹಾನಿಯೂ ಇಲ್ಲವೆಂದು ಸಾರಿರುತ್ತಾರೆ. ಇದನ್ನು ಹೆಚ್ಚಾಗಿ ವಸಾಹತು ಪ್ರೊಫೆಸರರು ಪ್ರಯತ್ನಿಸುತ್ತಿರುವರು.

ಸುಂಕಕ್ಕೆ ರೇಷ್ಮೆ

ಟ್ರಾಂಕ್ವಿಬಾರಿನ ಸುಂಕ ಅಧಿಕಾರಿಗಳು, ಪಾಲೂರಿನ ರಾಮಲಿಂಗ ಚೆಟ್ಟಿ ಎಂಬವನ ಮನೆ ಸುಗ್ಗಿ ಅವನು ಸುಂಕ ಕೊಡದೆ ತಂದ ರೇಷ್ಮೆದಾರವನ್ನು ವಶಪಡಿಸಿಕೊಂಡಿರುವರು.

ಮನೆ ಜಪ್ತಿಮಾಡಿದರು'

ದೇಹಲಿ ಪೋಲೀಸರು ಪ್ರಸಿದ್ಧ ಸೋಸಿಯಲಿಸ್ಟರಾದ ಶ್ರೀ॥ ಸತ್ಯವತಿ ದೇವಿಯವರ ಮನೆಯನ್ನು ಶೋಧಿಸಿರುವರು. ಅನೇಕ ಪುಸ್ತಕಗಳನ್ನು ವಶಪಡಿಸಿಕೊಳ್ಳಲಾಗಿದೆ.

ವೋಟು.

ಕೆಲವು ಸಮಯದ ಹಿಂದೆ ಲಾಹೋರಿನಲ್ಲಿ ವೋಟಾರುಗಳಿಗೆ ಬೆಂಕಿಕೊಡುವ ಕಾಟಕ್ಕೆ ಸೇರಿದ್ದ ಹಿರಾಲಾಲ್ ಸೇಟ್ ಎಂಬವನನ್ನು ಹಿಡಿದಿದ್ದಾರೆ. ಚುನಾವಣೆಗಳಲ್ಲಿ ತನಗೆ ಓಟಿನ ಹಕ್ಕು ಕೊಡಬೇಕೆಂದು ಕೇಳಿದಾಗ ಅವನನ್ನು ಕೈಕೋಳ ಹಾಕಿ ಓಟು ಹಾಕುವ ಸ್ಥಳಕ್ಕೆ ಕೆಗೆದುಕೊಂಡು ಹೋಗಿ, ಅವನ ಓಟನ್ನು ಹಾಕಿಸಿರುವರು.

ಬಂಧನೆ.

ಅಮೃತಸರಿನ 'ಶೇರ್' ಪತ್ರಿಕೆಯ ಸಂಪಾದಕರಾದ ಶ್ರೀ॥ ಮೋಹನಲಾಲರನ್ನು ಸೆರೆಹಿಡಿದಿರುವರು. ಸರಕಾರದಿಂದ ಬಹಿಷ್ಕರಿಸಲ್ಪಟ್ಟ 'ಲಾಲ್ ಢಂಡೋರಾ' ಎಂಬದನ್ನು ಪ್ರಕಟಿಸಿದುದೇ ಅವರ ತಪ್ಪು.

ಮೌಲಾನಾ ಶೌಕತಾಲಿಯವರು.

ಪ್ರಾಂತಿಕ ಚುನಾವಣೆಗಳಲ್ಲಿ ಪಕ್ಷಪಾತ ವಹಿಸಿ ಸರಕಾರದ ನೀತಿಕಾಂಡ ಮೇಜರ್ ನವರ್‌ಸೋಲ್ ಮತ್ತು ಖಾಸಿಮ್ ಕೈದರ್ ಎಂಬೀವರು ಸರಕಾರದ ಆಜ್ಞೆಯನ್ನುಲ್ಲಂಘಿಸಿದಂತಾಯಿತೆಂದು ಮೌಲಾನಾ ಶೌಕತಾಲಿಯವರು ವ್ಯಾಪ್‌ರಾಯ್ ಅಸೆಂಬ್ಲಿಯಲ್ಲಿ ಆಕ್ಷೇಪ ತಂದಿರುವರು.

'ಸ್ವಾತಂತ್ರ್ಯ ಪ್ರತಿಜ್ಞೆ'ಯನ್ನು ತನ್ನ ಹೊಸ ಕಳೆದ ೨೬ನೇ ತಾರೀಕಿನ ದಿನ ಯಾ 'ಸ್ವಾತಂತ್ರ್ಯ ದಿನಾಚರಣೆಯ' ದೇಶದ ... ಗಳಲ್ಲಿಯೂ ಬಹಳ ಉತ್ಸಾಹದಿಂದ ಆಚರಿಸಲ್ಪಟ್ಟ... ದೇಶದಲ್ಲಿ ಇದರಿಂದ ಏನಾದರೂ ಗಲಾಟೆಯಾಗಬಹು ದೆಂಬ ಉದ್ದೇಶದಿಂದ ಎಲ್ಲಾ ಪ್ರಾಂತ್ಯಗಳ ಗವರ್ನರುಗಳೂ, 'ಸ್ವಾತಂತ್ರ್ಯ ಪ್ರತಿಜ್ಞೆ'ಯನ್ನು ಅಕ್ರಮವೆಂದು ಪ್ರಕಟಿಸಿ, ಕಾನೂನು ವಿರೋಧಿಗಳಿಗೆ ಶಿಕ್ಷೆಯೆಂದು ಸಾರಿದರು. ಆದರೆ ಪ್ರಕಾರ ರಾಷ್ಟ್ರಪತಿಗಳಾದ ಪಂಡಿತ ಜವಾಹರಲಾಲರ ನೇತೃತ್ವದಲ್ಲಿ ಸರಕಾರದವರು ಹೊರಡಿಸಿದ ಕಾನೂನನ್ನು ಯಾರೂ ಉಲ್ಲಂಘಿಸಕೂಡದೆಂದೂ, ಆದರೆ ... ನಡೆಯುವ ಸಂದರ್ಭಕ್ಕೆ ಭಾಷಣಗಳ ಮೇಲೆ ಸರಕಾರದವರು ಯಾವ ಕಾನೂನನ್ನು ಹೊರಡಿಸಿಲ್ಲವೆಂದು ... ಅವುಗಳನ್ನು ಸ್ವಾತಂತ್ರ್ಯವಾಗಿ ಮಾಡಬಹುದೆಂದೂ ಅಪ್ಪಣೆಕೊಡಿಸಿದ ಮೇರೆಗೆ ಎಲ್ಲಾ ಕಡೆಗಳಲ್ಲೂ, ಸಭೆ ಮೆರವಣಿಗೆ ಭಾಷಣಗಳು [illegible]

ಹಣದ

ಚಿಕ್ಯಾಗೋ ನಗರದ ಚಿಕ್ಕ ಹುಡುಗ

ರಾಬರ್ಟ ವಾದ್ಲೋ ಎಂಬ ಹೆಸರಿನ ಈ ಹುಡುಗನಿಗೆ ೧೮ನೇ ವರ್ಷ ಪ್ರಾಯ. ಇವನ ಉದ್ದವು ಏಳು ಅಡಿ ೫ ಇಂಚು. ಮೇಲಿನ ಚಿತ್ರದಲ್ಲಿ ರಾಬರ್ಟನು ದರ್ಜಿಯ ಅಂಗಡಿಯಲ್ಲಿ ಕೋಟು ಅಳತೆ ತೆಗೆಸುವುದನ್ನು ನೋಡಬಹುದು.

ಹಾರ್ಮೋನಿಯಮ್, ತಬಲಾ ಮತ್ತು ಜಾದೂಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನದ ರಸ್ತೆ, ಮಂಗಳೂರು.

ESTD 1931

12 ವರ್ಷದೊಳಗಿನ ಬಾಲಕಬಾಲಿಕೆಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್, ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ಯಾವಿಶಾರದ.

...ರ್ಥಿ ಬದಲಿಗೆ ಗುರು.

ಚುನಾವಣೆಗ... ನಡೆವಂತೆ ಯಾವ... ಅದನ್ನು ನಮ್ಮಲ್ಲಿ ...ವಿದ್ಯಾಲಯದ ರಾಮು ಹೇಳಬಹುದು. ...ಶ್ರೀಮಂತ ವಿದ್ಯಾರ್ಥಿಯು ಸಹ ನಮ್ಮಲ್ಲಿ ರ... ಕುಳಿತುಕೊಳ್ಳಲು ಧೈರ್ಯ ನಮ್ಮಲ್ಲಿ ಅವ... ಭಾವನೆಗಳನ್ನ...ನಾಥ (ಇಂದ್ರಿಯಗಳನ್ನು ಗೆದ್ದ ...ರ್ಥಿ ಎಂಬ ತನ್ನ ಉಪಾಧ್ಯಾಯ ...ಗೆ ರೂ. ೫೦೦ನ್ನು ಕೊಟ್ಟು ಅವನನ್ನು ...ಉತ್ತರ ಬರೆಯುವ ಪ್ರತಿನಿಧಿಯಾಗಿ ...ಮಾಡಿದನು. ಅಂತೆಯೇ ಜಿತೇಂದ್ರಿ...ನ ಬದಲಿಗೆ ತಾನೇ ಬರೆದು, ಉತ್ತರ ...ಒಪ್ಪಿಸಿದನು. ಆದರೆ, ಗ್ರಹಚಾರಕ್ಕೆ ...ಎಂಬವನೊಬ್ಬನು ಇವರ ಮಾತುಕತೆ...ನ್ನು ...ದಲೇ ಕೇಳಿದವನಾದುದರಿಂದ, ಈ ...ಯವನ್ನು ಅಧಿಕಾರಿಗಳಿಗೆ ತಿಳುಹಿದನು ...ಗುರುಶಿಷ್ಯರನ್ನು ಸೆರೆಹಿಡಿದಿರುವರು

ಈಜುವ ಮಗು.

...ಮೊಂಗ್ ಖಾನ್ ಎಂಬುದು ೪ ವರ್ಷದ ...ರ್ಮಾ ದೇಶದ ಮಗು ಬರ್ಮಾದಲ್ಲಿನ ...ನ್ನು ಈಜಾಟದಿಂದಲೇ ದಾಟಿ ...ರಂಗೂ... ದಂಗುಬಡೆದಿರುವುದು ಆ ...ವರ್ಷದಲ್ಲೇ ಈಜುವಿಕೆಯನ್ನು ...ಕೊಂಡಿತ್ತಂತೆ. ಅದು ತನ್ನ ಹೆಚ್ಚಿನ ...ವನ್ನು ನೀರಿನಲ್ಲೇ ಕಳೆದು, ಊಟತಿಂಡಿ...ನ್ನು ಕೂಡ ಈಜುವಾಗಲೇ ತೆಗೆದುಕೊಳ್ಳು...

ಇಂದ್ರಜಾಲಕ್ಕಾಗಿ ಶಿಕ್ಷೆ

ದುರ್ಜೋಧನ್ ದಾಸ್ ಎಂಬವನು ಭಾರಿ ಇಂದ್ರಜಾಲಗಾರ... ಅವನ ಅನೇಕ ಪ್ರದರ್ಶನಗಳಲ್ಲಿ 'ರಾಕ್ಷಸ ಭೋಜನ' ಎಂಬದೂ ಒಂದು ...ದನ್ನು ಮಾಡಿತೋರಿಸಲಿಕ್ಕಾಗಿ ಅವನು ೨ ...ಆಡುಗಳನ್ನು ಹಸಿಹಸಿಯಾಗಿ ತಿಂದು ಬಿಟ್ಟನಂತೆ. ಅದು ಬಹಳ ಕ್ರೂರಕೃತ್ಯವೆಂದು ...ಪ್ರಥಮ ದರ್ಜೆ ಮೇಜಿಸ್ಟ್ರೇಟರು ಅವನಿಗೆ ರೂಪಾಯಿ ...ರ ಜುಲ್ಮಾನೆ ಮತ್ತು ೧॥ ತಿಂಗಳ ಶಿಕ್ಷೆಯನ್ನು ವಿಧಿಸಿರುವರು ಪುಣ್ಯಕ್ಕೆ ಅವನು ...ರ್ಟಿನಲ್ಲಿ ಇಂದ್ರಜಾಲ ಮಾಡಲಿಲ್ಲ

ಢಿಲ್ಲಿಯಲ್ಲಿ ನರರಕ್ಕಸ

ಭಯಂಕರ ಕ್ರೂರ ಕೃತ್ಯಗಳನ್ನು ಮಾಡಿದ ಒಬ್ಬ ನರಪಿಶಾಚಿಯನ್ನು ಡಿಲ್ಲಿಯಲ್ಲಿ ಸೆರೆಹಿಡಿದಿರುವರು. ಕೆಲವು ತಿಂಗಳ ಹಿಂದೆ ಸುಖದೇವಿ ಎಂಬೊಬ್ಬ ವಿವಾಹಿತೆ ತರುಣಿಯೋರ್ವಳು ...ನ್ನ ಚಿಕ್ಕ ಮಗುವಿನೊಂದಿಗೆ ಭೋಪಾಲಿನ ...ಗೆ ಪ್ರಯಾಣ ಮಾಡುತ್ತಿದ್ದಳು ಖುದುಸ್ ಎಂಬ...ನು ...ದಿಯು ಡಿಲ್ಲಿ ಸಮೀಪದಲ್ಲಿ ಅವಳ ...ಡಿಯನ್ನು ನುಗ್ಗಿದನು ಉದ್ದವಾದ ಚೂರಿ...ನ್ನು ತೆಗೆದು ಕೊಲ್ಲುವೆನೆಂದು ಹೆದರಿಸಿ, ಬಲಾತ್ಕಾರದಿಂದ ಅವಳ ಮಾನನಷ್ಟಪಡಿಸಿ...ನು. ಆ ಮೇಲೆ ಅವಳ ಮೈಮೇಲಿನ ಆಭರಣಗಳನ್ನು ಕಿತ್ತುಬಿಟ್ಟು, ಅವಳನ್ನು ತುಂಬಾ ...ಗಾಯಪಡಿಸಿದನು ನಂತರ ಅವಳ ಕೂಸನ್ನು ...ಸೆಳೆದು, ಅದನ್ನ ಜಜ್ಜಿ ಅದರ ಒಂದು ಕಣ್ಣನ್ನು ...ಹೊರಗೆ ಕೀಳಿದನಂತೆ

ಮುಂದಿನ ಸ್ಟೇಷನಿನಲ್ಲಿ ಸುಖದೇವಿಯು ...ಬೊಬ್ಬಿಟ್ಟು ಗಲಬೆ ಮಾಡಬಹುದೆಂದು ತಿಳಿದು ಅವನು ಚೂರಿಯನ್ನು ಹಿಡಕೊಂಡು ಜೀವಂತ ಕೊಲ್ಲುವುದಾಗಿ ಹೆದರಿಸಿದನು ಪುಣ್ಯವಶಾತ್ ಅದೇ ರೈಲಿನಲ್ಲಿದ್ದ ಆ ತರುಣಿಯ ತಮ್ಮನು ಆ ಅವಸ್ಥೆಯನ್ನು ಕಂಡು ಬೊಬ್ಬಿಡಲು, ಕೇಡಿ ...ಖುದುಸನು ಓಡಲೆತ್ನಿಸಿದನು ಆಗ ಪೋಲೀಸರಿಂದ ಬಂಧಿಸಲ್ಪಟ್ಟಿರುವನು ಪೋಲೀಸರು ಅವನನ್ನು ಠಾಣೆಗೆ ಎಳೆದೊಯ್ಯುತ್ತಿರುವಾಗ, ಅವನು ಒಬ್ಬ ಇನ್ಸಪೆಕ್ಟರನ ಹೆಬ್ಬೆಟ್ಟನ್ನು ಕಚ್ಚಿ ...ಬಿಟ್ಟನಂತೆ. ಹೀಗೆ 'ಇಂಥ ನಾಲ್ಕೈದು ...ಅಪರಾಧಗಳಿಗಾಗಿ ಅವನಿಗೆ ಈಗ ೨೪ ವರ್ಷ ...ಸಜೆ ವಿಧಿಸಿರುವರು.

ಚಕ್ರಾಧಿಪತ್ಯಗಳನ್ನು ಮಣ್ಣುಗೂಡಿಸಿದ ವಜ್ರ – ಕೊಹಿನೂರು.

ಇಂಗ್ಲೆಂಡಿನ ಮಹಾರಾಣಿಯ ಮಕುಟದಲ್ಲಿ ಮೆರೆಯುವ ದೊಡ್ಡ ವಜ್ರದ ಮಹಿಮೆಯು ಅಷ್ಟೇ ದೊಡ್ಡದಿರುವುದು ಕೊಹಿನೂರು ೭೦೦ ವರ್ಷಗಳ ಹಿಂದಿನಿಂದಲೂ ಚರಿತ್ರೆಯಲ್ಲಿ ಉಲ್ಲೇಖಿಸಿರುತ್ತಾರೆ ಬಾಬರನು ಹಿಂದೂಸ್ಥಾನವನ್ನು ಮುತ್ತಿದಾಗ ಕೊಹಿನೂರು ಹಿಂದೂದೇಶದಲ್ಲಿನ ಮೂರು ಚಕ್ರಾಧಿಪತ್ಯಗಳನ್ನು ಅಧಃಪತನಕ್ಕೆ ಇಳಿಸಿ, ಆಗಿನ ಢಿಲ್ಲೀಶ್ವರನ ವಶದಲ್ಲಿತ್ತು. ಅವನು ಅದನ್ನು ಬಾಬರನಿಗೆ ಕೊಟ್ಟನು, ಬಾಬರನ ನಂತರ ಅದು ಮೊಗಲರ ಕಡೇ ಚಕ್ರವರ್ತಿಯನ್ನು ಸುಲಿಗೆ ಮಾಡಿದ ನಾದಿರ ಶಹನ ವಶವಾಯಿತು ನಾದಿರ ಶಹನ ನಂತರ ಅವನ ವಂಶಸ್ಥನೊಬ್ಬನು ಅದನ್ನು ರಂಜಿತ್‌ಸಿಂಗನಿಗೆ ಮಾರಿದನು ರಂಜಿತಸಿಂಗನು ಕೆಲವೇ ವರ್ಷಗಳಲ್ಲಿ ನಾದಿರಶಹಾನ ವಂಶಕ್ಕೆ ಅಂತ್ಯವನ್ನು ತಂದನು ರ ಜಿತನ ವಂಶಸ್ಥನೊಬ್ಬನು ಅದನ್ನು ಒಬ್ಬ ವ್ಯಾಪಾರಿಗೆ ಮಾರಿದನು—ಕೆಲವು ಸಮಯದಲ್ಲಿ ಅವನ ವಂಶವೂ ಅಂತ್ಯವಾಯಿತು ಕೆಲವು ಸಮಯ ಅದು ಲಾಹೋರು ಸಂಸ್ಥಾನದಲ್ಲಿತ್ತು ಈಸ್ಟ್ ಇಂಡಿಯಾ ಕಂಪೆನಿಯವರು ಅದನ್ನು ಶಸ್ತ್ರಾಸ್ತ್ರಗಳನ್ನು ಕೊಟ್ಟು ಪಡಕೊಂಡರು ವಿಕ್ಟೋರಿಯಾ ಮಹಾರಾಣಿ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಮಾಯವಾಯಿತು ಇದರ ಕಾರಭಾರವನ್ನು ತಿಳಿದ ಮಹಾರಾಣಿಯವರು ಅದನ್ನು ಇಂಗ್ಲೆಂಡಿನ ಅರಸಿಯರಲ್ಲದೆ ಅರಸರು ಧರಿಸಬಾರದಾಗಿ ಬರೆದಿಟ್ಟಿರುವರು.

ಜಮ್ನಾಲಾಲರ ದಾನ

ಸೇಟ್ ಜಮ್ನಾಲಾಲ ಬಜಾಜರವರು ಡಿಲ್ಲಿಯ ಜಮಿಯಾ ಮಿಲಿಯಾ ರಾಷ್ಟ್ರೀಯ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ರೂ ೧೬,೦೦೦ ವನ್ನು ದಾನಮಾಡಿರುವರು

ಗುಪ್ತ ಪೋಲೀಸ್?

ಪಾಟ್ನಾದ ಹತ್ತಿರದ ಬಾಕುಲಾಹನ್ ಎಂಬಲ್ಲಿ ಒಬ್ಬ ಶ್ರೀಮಂತನ ಮನೆಯನ್ನು ೫೦ ಮಂದಿ ದರೋಡೆಯವರು ಸುಲಿಗೆ ಮಾಡಿ,೧೭೦೦೦ ರೂಪಾಯಿ ಬೆಲೆಬಾಳುವಷ್ಟು ಸಾಮಾನುಗಳನ್ನು ದೋಚಿಕೊಂಡು ಹೋದರು ಕಳ್ಳರೆಲ್ಲರೂ ಪೋಲೀಸ್ ದುಸ್ತು ಶಿಸ್ತಿನಲ್ಲಿದ್ದರು ಅವರ ಮುಖಂಡನು ಒಬ್ಬ ಸಬ್ ಇನ್ಸಪೆಕ್ಟರನ ಹಾಗೆ ವೇಷ ಹಾಕಿದ್ದನು ಮನೆಯ ಯಜಮಾನನ ಕೈಕಾಲುಗಳನ್ನ ಕಟ್ಟಿಹಾಕಿದ್ದರು. ಗಲಾಟೆಯಾಗಿ ನೆರೆಕರೆಯವರು ಕಳ್ಳರನ್ನು ಹಿಡಿಯಲು ಪ್ರಯತ್ನಿಸಿದಾಗ, ಅವರು ಬಂದೂಕು ಪ್ರಯೋಗ ಮಾಡಿ ಕುದುರೆ ಹತ್ತಿ ಓಡಿಹೋದರು

ತರುಣರಿಬ್ಬರ ಕೊಲೆ.

ಊರ ಹೊರಗಿನ ಮೈದಾನದಲ್ಲಿ ತಿರುಗಾಟಕ್ಕೆ ಹೋದ ರಾವಲ್‌ಪಿಂಡಿಯ ಇರ್ವರು ಯುವಕರನ್ನು ಯಾರೋ ಗುಂಡಿಕ್ಕಿ ಕೊಂದಿರುವರು. ಅಪರಾಧಿಗಳ ಪತ್ತೆಯಾಗಲಿಲ್ಲ.

ಕ್ರೈಸ್ತರು ಕಾಂಗ್ರೆಸಿನೊಡನೆ ಕೈಸೇರಿಸಬೇಕು.

ಕ್ರಿಶ್ಚಿಯನ್‌ರಲ್ಲಿ ಜೋರ್ಜ ಜೋಸೆಫರ ಭಿನ್ನಹ.

'ಇಂದಿನ ವರೆಗೆ ಭಾರತೀಯ ಕ್ರೈಸ್ತರು ದೇಶದ ರಾಜಕೀಯ ಘಟನಾವಳಿಗಳ ಕಡೆಗೆ ಅಸಡ್ಡೆಯಿಂದ ಇದ್ದರು. ಆದರೆ ಇಂದು ಕ್ರೈಸ್ತ ಬಾಂಧವರೆಲ್ಲರೂ, ತಮ್ಮ ಸ್ವಂತ ಹಿತಸಾಧನೆಯನ್ನು ಗಮನಿಸದೆ, ದೇಶದ ಉದ್ಧಾರಕ್ಕೆ ಭಾಗಿಗಳಾಗಿ, ಭುಜಕ್ಕೆ ಭುಜವನ್ನು ಕೊಟ್ಟು, ಎಲ್ಲಾ ಜಾತಿಮತಗಳ ಐಕ್ಯತೆಯ ಸಂಘವಾದ ಕಾಂಗ್ರೆಸ್ಸನ್ನು ಸೇರಿ, ಕಾಂಗ್ರೆಸ್ ಉಮೇದುವಾರರನ್ನು ಚುನಾಯಿಸಬೇಕು ಕಾಂಗ್ರೆಸ್ ಸಂಸ್ಥೆಯು ಇಂದಲ್ಲ ನಾಳೆಯಾದರೂ ದೇಶದ ಅಧಿಕಾರ ಸೂತ್ರವನ್ನು ತನ್ನಲ್ಲಿ ತೆಗೆದುಕೊಳ್ಳುತ್ತದೆ ಈಗ ನಮ್ಮನ್ನಾಳುವ ಸರಕಾರದವರಾದರೂ ಕಾಂಗ್ರೆಸಿನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವ ಪ್ರಸಂಗವು ಸದ್ಯದಲ್ಲಿಯೇ ಬರಲಿದೆ' ಹೀಗೆಂದು ತಂಜಾವೂರ್–ಮಧುರೆ–ರಾಮನಾಡ್ ಕ್ಷೇತ್ರಕ್ಕೆ ಕ್ರೈಸ್ತ ಉಮೇದ್ವಾರರಾದ ಜೋರ್ಜ ಜೋಸೆಫ್‌ರವರು ಒಂದು ಮನವಿಯನ್ನು ತಮ್ಮ ಕ್ರೈಸ್ತ ಬಾಂಧವರಲ್ಲಿ ಮಾಡಿಕೊಂಡಿರುವರು

ಮುಂದುವರಿದು ಅವರು 'ಕ್ರೈಸ್ತರು ಹಿಂದೂದೇಶದಲ್ಲಿ ಬರಿ ಅಲ್ಪ ಸಂಖ್ಯಾತರು ನಮ್ಮಲ್ಲಿ ಹೆಚ್ಚಿನವರು ಬಡವರು ಕೂಲಿಕಾರರು. ದೇಶದಲ್ಲಿನಬಡತನವನ್ನು ಹೋಗಲಾಡಿಸಿ ಹಣದ ಮುಗ್ಗಟ್ಟಿನಿಂದ ಜನರನ್ನು ಪಾರುಗಾಣಿಸಲು ಕಂಕಣ ತೊಟ್ಟಿದ್ದ ಕಾಂಗ್ರೆಸ್ಸಿನಂತಾ ಮಹಾ ಸಂಸ್ಥೆಯೊಂದಿಗೆ ಕ್ರೈಸ್ತ ಬಾಂಧವರೆಲ್ಲರೂ ಸಹಕರಿಸಿ, ಶ್ರೀ ಯೇಸುಕ್ರಿಸ್ತನ ತತ್ವಗಳನ್ನು ಕಾರ್ಯತಃ ಪರಿಪಾಲಿಸಬೇಕಾಗಿ ನಾನು ಬೇಡಿಕೊಳ್ಳುತ್ತೇನೆ' ಎಂದರು

ಇನ್ನೊಂದು ಕಡೆಯಲ್ಲಿ ಕೊಟ್ಟ ಒಂದು ಭಾಷಣದಲ್ಲಿ ಶ್ರೀ ಜೋರ್ಜ ಜೋಸೆಫ್‌ರವರು ಹೀಗೆಂದಿರುವರು —

'ಕಾಂಗ್ರೆಸು ರಷ್ಯದ ಕಮ್ಯೂನಿಸಮಿನ ಧೋರಣೆಯುಳ್ಳದ್ದು, ಅದರಲ್ಲಿರುವವರು ಸಮತಾವಾದ (Socialists) ಗಳು, ಆದುದರಿಂದ ನಮ್ಮ ಮತಕ್ಕೆ ಭಂಗಬರಬಹುದು ಎಂದು ಕೆಲವರು ತಿಳಿದಿರುವರು–ಇನ್ನು ಕೆಲವರು ಹಾಗೆ ಸಾರುತ್ತಿರುವರು ಆದರೆ ಅದು ಶುದ್ಧ ಸುಳ್ಳು. ಕಾಂಗ್ರೆಸ್ ಜಾತಿಮತಗಳ ಕಡೆಗೆನೇ ತನ್ನ ಗಮನವನ್ನು ಕೊಡದೆ, ಬಡತನ, ಸ್ತ್ರೀಸ್ವಾತಂತ್ರ್ಯ ಇವುಗಳನ್ನು ಪ್ರತಿಪಾದಿಸಿ, ಅದನ್ನು ಧ್ಯೇಯವಾಗಿಟ್ಟುಕೊಂಡಿರುವುದು ವ್ಯಕ್ತಿ ಹಿತಸಾಧನೆಗೆ ಕಾಂಗ್ರೆಸಿನಲ್ಲಿ ಎಡೆ ಇಲ್ಲವೆಂಬುದಕ್ಕೆ ಸಂಶಯವಿಲ್ಲ ಮಹಾತ್ಮಾ ಗಾಂಧಿ, ಪಟೇಲ್, ರಾಜೆನ್ ಬಾಬು ಸರೋಜಿನಿ ಮೊದಲಾದ ಸುರಿತ ಮುಖಂಡರಿಂದ ನಡೆಸಲ್ಪಡುವ ಕಾಂಗ್ರೆಸ್ಸು ಯಾವ ರೀತಿಯಲ್ಲಿಯೂ ತಪ್ಪುಹಾದಿಯನ್ನು ಹಿಡಿಯಲಾರದು ಎಂದು ನಾನ ನಿಮಗೆ ಖಂಡಿತವಾಗಿ ಹೇಳುತ್ತೇನೆ ಕ್ರೈಸ್ತ ಬಾಂಧವರು, ತಮ್ಮ ಕಡೆಯಿಂದ ಸ್ವಂತ ಉಮೇದ್ವಾರರ ವ್ಯಕ್ತಿ ಹಿತ, ಆಡಂಬರಗಳಿಗೆ ಮನಸೋಲದೆ ಕಾಂಗ್ರೆಸ್ ಉಮೇದ್ವಾರರನ್ನು ಚುನಾಯಿಸಿ ದೇಶಹಿತಸಾಧನೆ ಮಾಡಿ ಕ್ರಿಸ್ತನ ಯೋಗ್ಯ ಅನುಯಾಯಿಗಳಾಗಿರಬೇಕೆಂದು ನಾನು ಆಶಿಸುತ್ತೇನೆ

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣೆ, ಆಕಸ್ಮಿತ ಅನಾಹುತ, ದುಸ್ಸಹವಾದ ನಿರಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

೪೦ ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾಸನ್ ಮಾತ್ರೆಗಳೇ!

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ, ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ. ಜನಸಾಮಾನ್ಯರಲ್ಲಿರುವ ಭೂತ–ಪ್ರೇತ–ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪರ್ಮಾಸನ್ ಮಾತ್ರೆಗಳನ್ನು ಉಪಯೋಗಿಸಿರಿ

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ. 4—0—0. ವಿ. ಪಿ. ಚಾರ್ಜು ಬೇರೆ.

ರೋಗಿಯ ಈ ಕೆಳಗಿನ ವಿವರಗಳನ್ನು ವಿಶದವಾಗಿ ಬರೆಯಿರಿ —

ಹೆಸರು, ವಿಳಾಸ, ಜಾತಿ, ಸ್ತ್ರೀಯಾ ಪುರುಷ, ಪ್ರಾಯ, ದೇಹದ ಭಾರ, ವಿವಾಹಿತನೋ ಅಲ್ಲವೋ, ರೋಗದ ಲಕ್ಷಣ ನಿದ್ರೆ, ಆಹಾರ, ಮಲಶೋಧನೆ, ಅಲ್ಲದೆ ಉಬ್ಬಸ ಜ್ವರ, ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು.

ಪರ್ಮಾಸನ್ ಪ್ರೊಡಕ್ಟ್ಸ್, (ಇಂಡಿಯಾ.)

ಬ್ರೆಂಚ್:
ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್,
366, ಲೇಮಿಂಗ್ಟನ್ ರೋಡ್, ಮುಂಬಯಿ.

ಸಿ. ವಿ ಕಾಮತ್,
ಹಿಸ್ಟೀರಿಯಾ ಎಂಡ್ ಇನ್ಸೆನಿಟಿ ಎಕ್ಸ್‌ಪರ್ಟ್,
ಮಾರ್ಕೆಟ್ ರೋಡ್, ಉಡುಪಿ

ಶ್ರೀ ರಾಜರಾಜೇಶ್ವರೀ ಪ್ರಸೀದ

ಸಾಹಿತ್ಯಸಾಮ್ರಾಜ್ಯ

ನಾಟಕ ಮಂಡಳಿ, ಮೈಸೂರು

ಇವರು

ಮಂಗಳೂರು ಮೈದಾನಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ

ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ೩೦ — 1 — 37ನೇ ಶನಿವಾರ ರಾತ್ರಿ 9-30 ಗಂಟೆಗೆ

ಆ ಶಾ ಪಾ ಶ

ಎಂಬ ನಾಟಕವನ್ನು ಪ್ರದರ್ಶಿಸುವರು

ತಾ 31 — 1 — 37ನೇ ಭಾನುವಾರ ಸಾಯಂಕಾಲ 6 ಗಂಟೆಗೆ

ಮ್ಯಾಟಿನಿ ಮ್ಯಾಟಿನಿ

'ರಾ ಷ್ಟ್ರ ವೀ ರ'

ನಾಟಕಕ್ಕೆ ಮಾತ್ರ ಸ್ಥಳ ಪರಸ್ಥಳಗಳ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲ್ಲಾ ತರಗತಿಗಳಲ್ಲಿಯೂ ಅರ್ಧ ದರ ಏರ್ಪಡಿಸಿರುತ್ತದೆ

ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಎಂ. ವಿ ಸುಬ್ಬಯ್ಯ ನಾಯಡು, ಆರ್. ನಾಗೇಂದ್ರ ರಾವ್, ಪ್ರೊಪ್ರೈಟರ್ಸ್

ಬಹಿರಂಗ ಏಲಂ ಇಸ್ತಿಹಾರು

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟು

O P No 130/1936

ದಿ ಲಕ್ಷ್ಮೀ ಫೋರಿಸ್ಟು ಕಂಪೆನಿ, ಲಿಮಿಟೆಡ್—ಲಿಕ್ವಿಡೇಶನ್ ವ್ಯವಹರಣೆಯಲ್ಲಿ—

ಮೇಲ್ಕಂಡ ಲಿಕ್ವಿಡೇಶನ್ ವ್ಯವಹರಣೆಯಲ್ಲಿ ಮಂಗಳೂರು ಒಫೀಶಿಯಲ್ ಲಿಕ್ವಿಡೇಟರವರ ಸ್ವಾಧೀನದಲ್ಲಿರುವ ದಿ ಲಕ್ಷ್ಮೀ ಫೋರಿಸ್ಟು ಕಂಪೆನಿಯ ಬಾಬ್ತು ಸದ್ರಿ ಕಂಪೆನಿಯ ಮಂಗಳೂರು ಆಫೀಸಿನ ಬಾಬ್ತು ಈ ಕೆಳಗೆ ತಪಸೀಲು ಕಾಣಿಸಿದ ಚರಸೊತ್ತುಗಳನ್ನು ತಾ 10-2-1937 ರಲ್ಲು ಪೂರ್ವಾಹ್ನ ಗಂಟೆ 10ರಿಂದ ಮಂಗಳೂರು ಶಹರ ಹಳೇ ಮಚ್ಚಿ ಬಜಾರದಲ್ಲಿರುವ ದಿ ಲಕ್ಷ್ಮೀ ಫೋರಿಸ್ಟು ಕಂಪೆನಿಯ ಬ್ರೇಂಚು ಆಫೀಸಿನಲ್ಲಿ ಈ ಕೆಳಗಣ ಶರ್ತಗಳಿಗೆ ಒಳಪಟ್ಟು ಬಹಿರಂಗವಾಗಿ ಏಲಂ ಮಾಡಲಾಗುವುದು

ಮಾರಾಟದ ಶರ್ತಗಳು

1 ಏಲಂ ಕರೆಯುವ ಮೊಬಲಗು ಇಷ್ಟೆಂದು ಒಫೀಶಿಯಲ್ ಲಿಕ್ವಿಡೇಟರರು ಮೊದಲೇ ನಿಶ್ಚಯಿಸಲಾದೀತು

2 ಯಾವದಾದರೂ ಒಂದ ವಸ್ತುವಿನ ಯಾ ಲೋಟಿನ ದರಖಾಸ್ತನ್ನು ಸಂದಾಯ ಮಾಡ ದಿದ್ದರೆ ಕೂಡಲೇ ಮರುವಿಕ್ರಯ ಮಾಡಲಾದೀತು

3 ದರಖಾಸ್ತುದಾರನು ತನ್ನ ಹೆಸರಿಗೆ ದರ್ಖಾಸ್ತಾದ ಐಟಮು ಯಾ ಲೋಟಿನ ಬಾಬ್ತು ದರ್ಖಾಸ್ತು ಐವೇಜನ್ನು ಕೂಡಲೇ ಪಾವತಿ ಮಾಡಿ, ಸೊತ್ತನ್ನು ಸ್ವಾಧೀನ ಪಡಕೊಳ್ಳಬೇಕಾಗಿರುತ್ತದೆ

ಸೊತ್ತುಗಳು

ಸುಮಾರು, ಹಲಿಗೆಗಳ 1689, ಪಕಾಸುಗಳು 1285, ಬೀಮುಗಳು 46, ರೀಪುಗಳ 44 ಕಟ್ಟು, ಸಣ್ಣ ದೋಣಿ 1, ಕುರ್ಚಿಗಳು 18, ಬೆಂಚುಗಳು 8, ಮೇಜುಗಳು 7, ಸ್ಟೂಲು 1, ಗಡಿಯಾರಗಳು 2; ಲೆಟರ್ ರೇಕು 1, ಕಾಗ್ದ ಕಟ್ಟೆ 3, ಕಾಗ್ದ ಬೀನು 1, ಹಳೇ ಸೈಕಲ್ಲು 1, ತ್ರಾಸು, ಅಳತೆ ಕಲ್ಲಿನೊಂದಿಗೆ 1 ಗರಗಸ 1; ಪೆಟ್ರೊಮೇಕ್ಸ್ ಲೈಟು 1, ಕಬ್ಬಿಣದ ಪೆಟ್ಟಿಗೆ 1, ಅಳತೆ ಪಟ್ಟಿ 1, ಹಂಚುಗಳು 34, ಸುಮಾರು 2000 ಹಂಚುಗಳಿರುವ 100 × 19 ಅಡಿಗಳಷ್ಟರ ಮರದಾಸ್ತಾನು ಕೊಟ್ಟಿಗೆ 1 ವಗೈರೆ ಸಹಾ.

ಷರಾ — ಮರ ದಾಸ್ತಾನ ಕೊಟ್ಟಿಗೆಯನ್ನು ದರ್ಖಾಸ್ತಿಗೆ ಪಡೆದವರು ಅವರ ಖರ್ಚಿನಿಂದಲೇ 3 ದಿವಸಗಳೊಳಗೆ ಬಿಚ್ಚಿಕೊಂಡು ಹೋಗತಕ್ಕದ್ದು

(*Sd.*) **A Moosabba,**
Official Liquidator,
MANGALORE

ಬಂತೇ ಬಂತು! ಬಂತೇ ಬಂತು

ಭಾರತದ ಕಲಾ ಶ್ರೇಷ್ಠತೆಯ ಮಹತ್ವ!

ಇದುವರೆಗೆ ಭರತಖಂಡದಲ್ಲಿ ತಯಾರಾದ ಚಲನಚಿತ್ರಗಳಲ್ಲೆಲ್ಲಾ ಅತೀವ ಶ್ರೇಷ್ಠವಾದುದು

ಹಲವು ಹನ್ನೆರಡು ಚಿತ್ರಗಳಿಗಿಂತ ಇದೊಂದನ್ನು ಕಂಡು ನಿಮ್ಮ ಜೀವನ ಸಾರ್ಥಕ ಮಾಡಿಕೊಳ್ಳಿರಿ

ಪ್ರಭಾತ ಚಿತ್ರ

ಅಮರಜ್ಯೋತಿ

ದುರ್ಗಾ ಖೋಟೆ—

ವಸಂತಿ—

ಚಂದ್ರಮೋಹನ—

ಶಾಂತಾ ಆಪ್ಟೆ

ಅಲ್ಲದೆ ಸಾವಿರಾರು ಮಂದಿ ಇತರರು

ಶ್ರೀ ಚಿತ್ರಾ ಟಾಕೀಸ್, ಮಂಗಳೂರು.

ತಾರೀಕು 2-2-1937ನೇ ಮಂಗಳವಾರದಿಂದ.

ಎಲ್ಲೆಲ್ಲೂ ಕಾಂಗ್ರೆಸ್ಸಿನ ಜಯ.

ಬಂಗಾಲದ ಕೌನ್ಸಿಲಿನಲ್ಲಿ ಕಾಂಗ್ರೆಸ್ ಉಮೇದ್ವಾರರು ಸ್ಥಾನಗಳನ್ನು ಶೇಖರಿಸುತ್ತಲಿರುವರು. ಕೌನ್ಸಿಲು ಅಧ್ಯಕ್ಷರಾದವರೊಬ್ಬರು ಓಟಿಗೆ ನಿಂತು ಸೀಟು ಕಳಕೊಂಡರು. ಕಾಂಗ್ರೆಸ ಉಮೇದ್ವಾರರಾದ ಡಾ। ಸುರೇಶ್ಚಂದ್ರ ಬೆನರ್ಜಿಯವರು ೨೬,೦೨೭ ಓಟುಗಳನ್ನು ಪಡೆದು ಗೆದ್ದಿರುವರು. ಎದುರುವಾದಿಗಳಾದ ಸ್ವತಂತ್ರ ಪಕ್ಷದವರಿಗೆ ಕಮ್ಮಿ ವೋಟುಗಳು ಸಿಕ್ಕಿದುದರಿಂದ ಅವರು ಭದ್ರತೆಯನ್ನು ಕಳಕೊಂಡಿರುವರು. ಕಾಂಗ್ರೆಸ್ಸೇತರರಲ್ಲಿ ಹೆಚ್ಚಿನ ಉಮೇದ್ವಾರರಿಗೆ ಒಂದೆರಡು ಸಾವಿರ ಓಟುಗಳು ಸಿಗುವುದು ಕಷ್ಟವಾಗಿದೆ.

ಕಲ್ಕತ್ತಾದಿಂದ ಶ್ರೀ ಸರತ್ಚಂದ್ರಭೋಸರು ಬೊಂಬಾಯಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಕಳುಹಿಸಿದ ತಂತಿಯಲ್ಲಿ ಈ ರೀತಿ ತಿಳಿಸಿರುವರು:— ಬಂಗಾಲ ಕೌನ್ಸಿಲಿನ ಸ್ಥಾನಗಳಿಗೆ ಕಾಂಗ್ರೆಸು ೪೮ ಉಮೇದ್ವಾರರನ್ನು ಕಳುಹಿಸಿದೆ. ಅವರಲ್ಲಿ ೪೪ ಜಯಿಸುವರಾಗಿ ನಿರೀಕ್ಷಿಸಲಾಗಿದೆ.

ಒರಿಸ್ಸಾದಲ್ಲಿ ಕಾಂಗ್ರೆಸ್ ಜಯ.

ಇಷ್ಟರ ತನಕ ಒರಿಸ್ಸಾದಲ್ಲಿ ಆರು ಕೇಂದ್ರಗಳ ಉಮೇದ್ವಾರರ ಓಟುಗಳನ್ನು ಲೆಕ್ಕಮಾಡಿರುವರು. ಅವರಲ್ಲಿ ನಾಲ್ಕು ಜನ ಕಾಂಗ್ರೆಸ್ಸಿನವರು ವಿಶೇಷ ಬಹುಮತದಿಂದ ಚುನಾಯಿತರಾಗಿರುವರು. ಕಾಂಗ್ರೆಸೇತರ ಉಮೇದ್ವಾರರು ಕೆಲವರು, ತಮ್ಮ ಭದ್ರತೆ ಹಣವನ್ನು ಕೂಡಾ ಕಳೆದುಕೊಂಡಿರುವರು.

ಕಲ್ಕತ್ತಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭ ಭಾಷಣವನ್ನು ಕೊಡಲು ಕವಿ ರವೀಂದ್ರರನ್ನು ಆಹ್ವಾನಿಸಿರುವರು.

ದಕ್ಷಿಣ ಅಮೇರಿಕದ ಚಿಲ್ಲಿ ಪ್ರಾಂತ್ಯದ ತಾಮ್ರ ಗನಿಯೊಂದರಲ್ಲಿ, ಸಿಡಿಮದ್ದಿನ ಗುದಾಣಕ್ಕೆ ಬೆಂಕಿ ತಗಲಿ ೩೦ ಮಂದಿಗಳು ಸತ್ತು ಹೋಗಿರುವರು.

ಅಬಿಸೀನಿಯಾದ ಲಿಬಿಯಾದಿಂದ ಈಜಿಪ್ಟಿನ ಗಡಿಗಳ ತನಕ ಕಡಿಯಲ್ಪಟ್ಟ ೧೧೭೭ ಮೈಲು ಉದ್ದದ ಹೊಸಮಾರ್ಗವನ್ನು ಬರುವ ಮೇ ತಿಂಗಳಲ್ಲಿ ಮುಸಲೋನಿಯು ತೆರೆಯಲಿರುವನು. ಮಾರ್ಗದ ಖರ್ಚು ೧೧ ಲಕ್ಷ ಪವನುಗಳು.

ಬಿಹಾರಿನಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯಕ್ಕಾಗಿ ಉಪಯೋಗಿಸಲ್ಪಟ್ಟ ಒಂದು ವಿಮಾನವು ಒಂದು ಮರಕ್ಕೆ ಢಿಕ್ಕಿ ಹೊಡೆದಿರುತ್ತದೆ. ಒಳಗಿನವರಿಗೆ ಚಿಕ್ಕ ಚಿಕ್ಕ ಗಾಯಗಳಾಗಿವೆ.

ಶಿಸ್ತು ಉಲ್ಲಂಘನೆ ಮಾಡಿದುದಕ್ಕಾಗಿ ಲಕ್ನೋ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ। ಮಾಹಂತ ಜಗನ್ನಾಥ ಬುಕ್ಸಿಂಗರನ್ನು ಕಾಂಗ್ರೆಸ್ಸಿನವರು ಪದವಿಯಿಂದ ತೆಗೆದು ಹಾಕಿರುವರು. ಅಲ್ಲದೆ ಇತರ ಮೂರು ಜನರನ್ನೂ ರದ್ದುಮಾಡಿರುವರು.

ಸಿಮ್ಸನಳು ಚಲಚಿತ್ರ ತಾರೆ.

ಹೊಲಿವುಡ್‌ನ ಗೋಮೊಂಟ್ ಬ್ರಿಟಿಷ ಸಿನೆಮ ಕಂಪೆನಿಯವರಿಂದ ವಾಲಿ ಸಿಮ್ಸನಳಿಗೆ ಒಂದು ಮಿಲಿಯ ಡೊಲ್ಲರು ಆಹ್ವಾನವಿತ್ತಿರುವರು. 'ಚಿತ್ರತಾರೆಯಲ್ಲಿ ಇರಬೇಕಾದ ತಾಯಿತಿ ಪೃಥಗಾತ್ಮತೆಯು ಈಕೆಯಲ್ಲಿರುವುದೆಂದು ಹೊಲಿವುಡ್ಡಿನ ಪರ್ಣಲೀಪ ಚತುರ (ಮೇಕ್-ಅಪ್ ಎಕ್ಸ್‌ಪರ್ಟ್) ನಾದ ಡೊಟ್ ಪೋನ್‌ಡೆಲನು ಹೇಳುತ್ತಿರುವನು.

ಇಂಗ್ಲೆಂಡಿನ ಪ್ರಖ್ಯಾತ ನಗರದಲ್ಲಿ ಮತಸಂಬಂಧ ದಂಗೆಗಳು.

ಬ್ರಿಟಿಷ ಚಕ್ರಾಧಿಪತ್ಯದಲ್ಲಿ ಗ್ಲಾಸ್ಗೋ ಎಂಬುದು ಎರಡನೇ ದೊಡ್ಡ ನಗರ. ಅಲ್ಲಿಯೂ ಪೋಲಿ ಜನರು ಇದ್ದೇ ಇದ್ದಾರೆ. ಇವರಿಗೆ ಜಾತಿ ಮತವೆಂಬುದಿಲ್ಲ. ಆದರೆ, ಯಾವದಾದರೂ ಮತವೈಷಮ್ಯ ಕಲಹಗಳ ಸಂದರ್ಭಗಳಲ್ಲಿ ಇವರು ಜಗಳಕ್ಕೆ ಒಂದು ದಾರಿ ಹುಡುಕಿ ಇಲ್ಲದ ಅನಾಹುತಗಳನ್ನು ಮಾಡುವರಂತೆ. ಇವರು ರೋಮನ್ ಕೆಥೋಲಿಕ್ ಅಥವಾ ಪ್ರೊಟೆಸ್ಟಾಂಟ ಮತಸ್ಥರಿದ್ದು ಚಿಕ್ಕಂದಿನಿಂದಲೂ ಜಾತಿಮತ ವೈಷಮ್ಯದಲ್ಲಿ ಬೆಳೆದವರಾಗಿರುತ್ತಾರೆ. ಈ ಎರಡು ಪಂಗಡದವರ ಮಕ್ಕಳು ಒಂದೇ ಶಾಲೆಯಲ್ಲಿ ಓದುತ್ತಿದ್ದರೆ, ಹಬ್ಬ ದಿನಗಳಲ್ಲಿ ಅವರೊಳಗೆ ಜಗಳವು ಇದ್ದೇ ಇರುತ್ತದೆ. ದೊಡ್ಡವರಾದ ಮೇಲೆ ಇವರು ಅಮಲು ಪದಾರ್ಥ ಸೇವನೆಗೆ ಬಿದ್ದು, ಕೆಲಸಗಳ್ಳರಾಗಿ ಅಲೆಯುತ್ತಾ, ಜಗಳ ಸಂದರ್ಭಗಳಿದ್ದಾಗ, ಸಿಕ್ಕಿದ ಹಾಗೆ ಕೊಳ್ಳೆ ಹೊಡೆದು ಜೀವಿಸುವುದೇ ಇವರ ಕಸಬು ಆಗಿರುತ್ತದೆ.

ಇಂಥ ಕೇಡಿಗಳ ಗುಂಪುಗಳು ಗ್ಲಾಸ್ಗೋ ನಗರದ ಗಲ್ಲಿಗಳಲ್ಲಿ ಯಾವಾಗಲೂ ಕಾಣಬಹುದಂತೆ. ಒಬ್ಬನಿಗೆ ಶಿಕ್ಷೆಯಾದರೆ ಅಂದಿನ ದಿವಸ ಅವನು ಎಲ್ಲರ ಸ್ತುತಿಗೂ ಪಾತ್ರನಾಗುವನು. ಅವನಿಗೆ ತಕ್ಕಂತೆ ಅಲ್ಲಿ ಗತಿಗೋತ್ರವಿಲ್ಲದ ಕೆಲ ತರುಣಿಯರಿರುವರು. ಇವರಿಗೆ ಈ ಕೇಡಿಗಳೆಂದರೆ ಮಹಾ ಪ್ರಾಣ. ಯಾವ ಕೇಡಿಯು ದೊಂಬಿಗಳಲ್ಲಿ ಹೆಚ್ಚು ಸಾಹಸ ಮಾಡಿ, ಹೆಚ್ಚು ಕ್ರೂರ ಕೊಲೆ, ಘಾಯಗಳನ್ನು ಮಾಡುವನೋ ಅಂಥವರನ್ನು ಈ ಕ್ರೂರ ತರುಣಿಯರು ಬಹಳವಾಗಿ ಮೆಚ್ಚುತ್ತಾರಂತೆ. ಒಡೆದ ಸೀಸೆಗಳು, ಚೂರಿಗಳು, ಕ್ಷೌರ ಕತ್ತಿಗಳು ಇವೇ ಅವರ ಮುಖ್ಯ ಆಯುಧಗಳು.

ಇವರಿಗೆ ನಿಜವಾಗಿಯೂ ಮತವೇನು, ದೇವರೇನು ಎಂಬ ವಿಚಾರವು ಗೊತ್ತೇ ಇಲ್ಲ. ಆದಿತ್ಯವಾರ ದಿವಸವು ಅವರು ಜಗಳವನ್ನು ಹೆಚ್ಚಾಗಿ ನಿರೀಕ್ಷಿಸಿಕೊಂಡಿರುವ ದಿವಸ. ಆ ದಿನ ಅವರು ಏನಾದರೂ ಮಾಡಿ ಜಗಳ ಹುಡುಕುವ ಪ್ರಯತ್ನಮಾಡದಿರರು. ಇಷ್ಟೆಲ್ಲ ಗಲಾಟೆ ಮಾಡುವವರಾದರೂ ಇವರು ಪೋಲೀಸರ ಕೈಗೆ ಸಿಗುವವರಲ್ಲ. ತಮ್ಮ ಕಡೆಯವನಾರಾದರೂ ಪೋಲೀಸರ ಕೈಗೆ ಸಿಗುತ್ತಾನೆಂದು ತಿಳಿದರೆ, ಶಕ್ತ ಪ್ರಯತ್ನಮಾಡಿ, ಅವನನ್ನು ಬಿಡಿಸಿಕೊಡುವರು. ಇಷ್ಟೆಲ್ಲ ಅವಸ್ಥೆಯು ಇಂಗ್ಲೆಂಡಿನಲ್ಲೂ ಇದೆ.

ಸ್ಪೈಯಿನಿನ ಗುಟ್ಟು.

ಪ್ರೊ. ಜೆ. ಬಿ. ಎಸ್. ಹಾಲ್ಡೆನರ ಪ್ರಶಂಸೆ.

ಪ್ರಖ್ಯಾತ ಜೀವವಿಜ್ಞಾನಶಾಸ್ತ್ರ ಪಾರಂಗತರಾದ, ಪ್ರೊ। ಜೆ. ಬಿ. ಎಸ್. ಹಾಲ್ಡೇನ್‌ರವರು, ಸ್ಪೈನ್ ಸರಕಾರಕ್ಕೆ ವಿಷಗ್ಯಾಸ್ ರಕ್ಷಣೋಪಾಯಗಳ ಕುರಿತು ಸಲಹೆಕೊಡಹೋಗಿದ್ದವರು ಈಗ ಹಿಂತಿರುಗಿರುವರು. ಅವರು ಕೆಲವು ಗೂಢವಿಚಾರಗಳನ್ನು ಈಗ ಪ್ರಕಟಿಸಿರುವರು.

'ಸ್ಪೈನಿನ ಹತ್ತಿರ ಇರುವ ವಿಷಗ್ಯಾಸ್ ರಕ್ಷಣೆಯ ಮುಖವಾಡಗಳು ಅಷ್ಟು ಕೆಟ್ಟದಾಗಿಲ್ಲ. ಅಲ್ಲಿಯ ಅವಸ್ಥೆಯು ವಿಪರೀತವೇನೂ ಆಗಿಲ್ಲ; ಜನರ ಪ್ರೋತ್ಸಾಹವು ಕುಂದಿರದೆ ಸರಕಾರದ ಕಡೆಗೇನೇ ಇರುತ್ತದೆ' 'ಸ್ಪೈನಿನ ಜಗಳವು ಎಷ್ಟು ಸಮಯ ಮುಂದುವರಿಯಬಹುದು' ಎಂದೊಬ್ಬ ಪತ್ರಿಕಾಗಾರರು ಅವರನ್ನು ಕೇಳಿದರು. ಆಗ ಅವರು 'ಹಿಟ್ಲರನು ಎಷ್ಟರತನಕ ದಂಗೆಗಾರರಿಗೆ ಯುದ್ಧ ಸಾಮಾನುಗಳನ್ನು ಕಳುಹಿಸುವನೋ ಅಷ್ಟು ಕಾಲ ಯುದ್ಧ ಮುಂದುವರಿವುದು' ಎಂದರು. ಸ್ಪೈನ್ ಸರಕಾರದವರಿಗೆ ಇಟೇಲಿಯ ಹೆದರಿಗೆ ಇಲ್ಲವಂತೆ. ಆಹಾರವಸ್ತುಗಳು ಕಮ್ಮಿಯಾಗಿವೆ ಎಂಬುದು ಸುಳ್ಳು; ಆದರೆ ದಹನವಸ್ತುಗಳಿಗೆ ಅಭಾವವಾಗಿದೆಯಂತೆ. ಐದು ನಿಮಿಷದಲ್ಲಿ ಯಾರನ್ನಾದರೂ ಸಮತಾವಾದಿಗಳನ್ನಾಗಿ ಮಾಡುವಷ್ಟು ರುಚಿಯುಳ್ಳ ಮಾಂಸವು ರಷ್ಯದಿಂದ ಸ್ಟೀಮರುಗಳಲ್ಲಿ ಸ್ಪೈನಿಗೆ ಬರುತ್ತಿದೆಯಂತೆ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. ನಂಬ್ರ 813/1936.

ದಿ ಪ್ಯಾಮಸಿ ಬೇಂಕ್ ಲಿಮಿಟೆಡ್, ಮಂಗಳೂರು—ವಾದಿ.

ಮತ್ತು

ಕ್ರಿಶ್ಚನ್ ಕರಿಂಪ್ಪಪ್ಪ ಕೂಡಾ—ಪ್ರತಿವಾದಿರು.

8ನೇ ಪ್ರತಿವಾದಿ ವಿಕ್ಟರ್ ಸೆರಾವು, ಫ್ರಾನ್ಸಿಸ್ ಸೆರಾವುರ 'ಮಗ,' ಮಂಗಳೂರು ಶಹರ ಕೋರ್ಟುರಸ್ತೆ ಬಳಿಯಲ್ಲಿರುವವ.

ವಾದಿಯು ಪ್ರತಿವಾದಿರ ಮೇಲೆ ದಾಖಲ್ಲುಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ 8ನೇ ಪ್ರತಿವಾದಿ ಸಬ್ಸಿಟೂಟೆಡ್ ಸರ್ವಿಸು ನೋಟೀಸು ಹುಕುಂ ಮಾಡಿ ತಾ. 1—2—37ಕ್ಕೆ ತಸ್ಸಿಗೆ ಇಟ್ಟಿರುತ್ತದೆ. ಸದ್ರಿ 8ನೇ ಪ್ರತಿವಾದಿ ಏನಾದರೂ ಸ್ಟೇಟ್‌ಮೆಂಟ್ ಕೊಡುವುದಿದ್ದರೆ ಆ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಗಲು ಘಂಟೆ 11ಕ್ಕೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

ಮಂಗಳೂರು, 22—1—37 | G. Narayana Rao, Vakil for Plaintiff

NOTICE

In the Court of the subordinate Judge of South Kanara.

O. S. 115/1936.

Between

M. Mohamed Bin Shaik Ahmed ... PLAINTIFF

and

K. R. Gurzdar .... DEFENDENT.

Please take notice that the above suit has been filed for recovery of a sum of Rs. 3408-2-3 with interest and costs due under a Demand promissory note and the same has been posted to 13-2-'37 for the appearance of the Defendant

Date, 27 1—1937. | A. Moosabba, *Vakil for Plaintiff.*

ಕಾರ್ನಾಡ ಸದಾಶಿವರಾಯರ ಅಂತಿಮ ದರ್ಶನ.



ಶೃಂಗರಿಸಿದ ಅವರ ಪುಣ್ಯ ಶರೀರವನ್ನು ರುದ್ರಭೂಮಿಗೆ ತೆಗೆದುಕೊಂಡು ಹೋಗುವ ದೊಡಲು ತೆಗೆದ ದೃಶ್ಯ. ಅವರ ಅರ್ಧ ಕವಿರಿಯರು ಶವದ ಹತ್ತಿರ ಕುಳಿತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಯರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ದಕ್ಷಿಣ ಕನ್ನಡದ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

TRUE COPY.

Nanjangood, dated 29th Oct. 36

From

B. M. Sivaramiah,
(Bellur M. Sivaram)
First Grade Pleader,
Brindaban Kuteer, NANJANGOOD.

To

The Secretary,
The C. P. C. Co., Ltd.,
MANGALORE.

Sir,

From here I write to thank you heartily for the excellent convenience you were pleased to afford me in my lecture tours in South Canara. Ever since, I got down from train at Hassan your service took charge of me and at Sakleshpur, Puttur, Mangalore, Udipi (especially), Someshwar and even at Agumbe your service was kind and all felicitous to me. I felt as if I had my own car with me throughout. I may say here that I observed that all other passengers also were treated alike and their conveniences attended to promptly, properly and what is most remarkable courteously. I think I have derived from your service in my tour ten times the benefit I have really paid for the same. I conclude by saying yours is an excellent service and you deserve every praise for the public good you are doing all along.

Please accept my heartfelt thanks and congratulations.

Yours sincerely

(Sd) B. M. Sivaramiah.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908

Church Gate Street, Fort - - BOMBAY.

——1936——

OUR VALUATION YEAR

Take a BOMBAY LIFE Policy now, and share in the profits



SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4. Attractive Bonuses.

It pays you to represent this Company

Wanted Agents in unrepresented parts

Apply to:—

Messs Kochikar Brothers,
Madras Branch Secretaries.

Branches at:-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No. 4

ಮಂಗಳೂರು

ಇದೇ ತಾ. ೨೩ನೇ ಅಪರಾಹ್ಣ ಗಂಟೆ ೪ಕ್ಕೆ ದಕ್ಷಿಣ ಕನ್ನಡ ಕುಷ್ಠರೋಗ ನಿವಾರಣಾ ಸಮಿತಿಯು ಕೂಡಿತ್ತು.

ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯವರು ಪ್ರತಿ ಗುರುವಾರ, ಶನಿವಾರಗಳಲ್ಲಿ ಸ್ಟೀಮರು ಹೊರಡುವ ಸಮಯವನ್ನು ಪೂರ್ವಾಹ್ನ ಗಂಟೆ ೭ ರಿಂದ ೮ಕ್ಕೆ ಇಟ್ಟಿರುವರು. ಪ್ರಯಾಣಿಕರಿಗೆ ಇದು ಇನ್ನೂ ಅನುಕೂಲವಾಗಿರುವುದು.

ಶ್ರೀ ಎ. ಬಿ. ಶೆಟ್ಟಿ, ಶ್ರೀ ನಾರಾಯಣ ಕಿಲ್ಲೆ ರಾಮರಾಯ ಮಲ್ಯರೇ ಮೊದಲಾದವರು ಚುನಾವಣಾ ಪ್ರಚಾರ ಕಾರ್ಯಕ್ಕಾಗಿ ತಾ. ೨೫ರಲ್ಲಿ ಮೂಡಬಿದ್ರೆಯಲ್ಲಿಯೂ, ೨೬ರಲ್ಲಿ ಉಡುಪಿಯಲ್ಲಿಯೂ, ೨೭ರಲ್ಲಿ ಬ್ರಹ್ಮಾವರದಲ್ಲಿಯೂ, ಅದೇ ದಿನ ಪೇತ್ರಿಯಲ್ಲಿಯೂ, ತಾ. ೨೮ರಲ್ಲಿ ಹಿರಿಯಡ್ಕದಲ್ಲಿಯೂ, ತಾ. ೨೯ರಲ್ಲಿ ಕಾಪುವಿನಲ್ಲಿಯೂ ಸಭೆಗಳನ್ನು ಜರಗಿಸಿದ್ದರು. ತಾ. ೩೦ರಲ್ಲಿ ಕಲ್ಯಾಣಪುರ ಮತ್ತು ಮಲ್ಪೆಗಳಲ್ಲಿಯೂ ಸಭೆಗಳನ್ನು ಜರಗಿಸುವಂತೆ ನಿಶ್ಚೈಸಿರುವರು.

ಉಡುಪಿಯ ಕೆನರಾ ಬೇಂಕಿಂಗ್-ಸಿಂಡಿಕೇಟ್ ಲಿಮಿಟೆಡ್ ಇದರ ಶಾಖೆಯೊಂದು ಶಿರ್ವದಲ್ಲಿ ರಾ| ಬಾ| ಗೋನ್ಸಾಲ್ವಿಸ್ ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿರುತ್ತದೆ.

ಇಲ್ಲಿಯ ಆರ್. ಎಮ್. ಎಸ್. ದಲ್ಲಾದ ಟಪ್ಪಾಲು ಚೀಲಗಳ ಕಳವಿನ ವಿಷಯ ತನಿಖೆ ನಡೆಸುತ್ತಿದ್ದರೂ ಈ ವರೆಗೂ ಕಳ್ಳರ ಪತ್ತೆ ಹತ್ತದ ಸಂಗತಿಯು ಬಹು ವಿಷಾದಕರವಾಗಿರುತ್ತದೆ.

ಚಿತ್ರಾ ಟಾಕೀಸದಲ್ಲಿ ಭೂಲೋಕದ ಒಂದು ಅಮೋಘ ಚಿತ್ರವೆಂದು ಕರೆಯಲ್ಪಡುವ ಪ್ರಭಾತ್ ಫಿಲ್ಮ್ ಕಂಪೆನಿಯವರು "ಅಮರಜ್ಯೋತಿ"ಯು ಫೆಬ್ರವರಿ ತಿಂಗಳ ಪ್ರಥಮ ಪಕ್ಷದಲ್ಲಿ ಪ್ರದರ್ಶಿಸಲ್ಪಡುವುದು

ಕಲಾಭಿಮಾನಿಗಳ ಆಗ್ರಹದ ಮೇರೆಗೆ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ಇನ್ನೊಂದು ತಿಂಗಳ ಅವಧಿವರೆಗೆ ತಮ್ಮ ಅಮೋಘ ನಾಟಕಗಳನ್ನು ಪ್ರದರ್ಶಿಸಲು ಯತ್ನಿಸುತ್ತಾರಾಗಿ ತಿಳಿದುಬರುತ್ತದೆ

ಸರಕಾರದ ಪ್ರಕಟಣೆ:-ಚುನಾವಣೆಯ ವಿಚಾರದಲ್ಲಿ ಸರಕಾರದವರು ತಮ್ಮ ಧೋರಣೆಯನ್ನು ಈ ರೀತಿ ಪ್ರಕಟಿಸಗೊಳಿಸಿರುವರು ರಾಜಕೀಯ ಸಂಗತಿಗಳನ್ನು ನಿಷ್ಪಕ್ಷಪಾತದಿಂದ ನೋಡುವಂತೆ ಸರಕಾರಿ ಅಧಿಕಾರಿಗಳಿಗೆ ಹುಕುಂ ಕೊಟ್ಟಿರುವುದಲ್ಲದೆ, ಚುನಾವಣೆಗೆ ಸಮ್ಮಂಧವಾದ ಮೆರವಣಿಗೆಗಳು ಗಲಾಟೆಗೆ ಆಸ್ಪದವಾಗದಂತೆ ನೋಡಿಕೊಳ್ಳುವಂತೆಯೂ, ವಿರೋಧಪಕ್ಷಗಳ ಮೆರವಣಿಗೆಗಳು ಏಕಕಾಲದಲ್ಲಿ ಒಂದೇ ರಸ್ತೆಯಲ್ಲಿ ಒಂದೇ ಸ್ಥಳಕ್ಕೆ ಹೋಗಲು ಅವಕಾಶಕೊಡಬಾರದಂತೆಯೂ ವಿಧಿಸಿರುವರು ಮನೆಗಳ ಸಮೀಪ ವಿರೋಧಪಕ್ಷದ ಸಭೆಗಳಾಗಲು ಅವಕಾಶ ಕೊಡಲ್ಪಡುವುದಿಲ್ಲ. ಮಾತ್ರವಲ್ಲದೆ, ಭಾಷಣಗಳು ನ್ಯಾಯವಾದ್ದಿರಬೇಕು. ಎದುರುಕಡೆಯ ಉಮೇದ್ವಾರರನ್ನು ಮನಬಂದಂತೆ ಖಂಡಿಸಿ ಮಾತಾಡಿ ಆಕ್ಷೇಪಕರವಾಗಿ ನುಡಿದದ್ದಾದರೆ ಮ್ಯಾಜಿಸ್ಟ್ರೇಟರಾಗಲೀ ಪೋಲೀಸಿನವರಾಗಲೀ ಶಾಂತಿಸ್ಥಾಪನೆಯ ಕಾರ್ಯಕ್ಕೆ ಪ್ರವೇಶಿಸಬೇಕಾಗುವುದು. ಎಂದು ಮದ್ರಾಸ್ ಸರಕಾರದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಮಾರ್ಕೆಟಿಂಗ್ ಅಧಿಕಾರಿಗಳು:—ಮದ್ರಾಸ್ ಸರಕಾರದ ಮಾರ್ಕೆಟಿಂಗ್ ಆಫೀಸರರಾದ ಮಿ. ಕೆ. ಗೋಪಾಲಕೃಷ್ಣ ರಾಜು ಮತ್ತು ಮಿ. ಕೆ. ಡಬ್ಲ್ಯು ಚಕ್ರವರ್ತಿ ಮಾರಾರ್ ಇವರುಗಳು ಆಲುಗಡ್ಡೆ, ಕಾಫಿ, ತೆಂಗಿನ ಕಾಯಿ ಇತ್ಯಾದಿ ವ್ಯಾಪಾರದ ಸ್ಥಿತಿಗತಿಗಳನ್ನು ವಿಚಾರಿಸುವುದಕ್ಕಾಗಿ ಬಂದವರು ಕಳೆದ ತಾ. ೧೩ರಲ್ಲಿ ಮಂಗಳೂರನ್ನು ಸಂದರ್ಶಿಸಿ ಇಲ್ಲಿನ ಮುಖ್ಯ ವ್ಯಾಪಾರಿಗಳನ್ನು ಕಂಡು ಮಾತಾಡಿ ದವಸಧಾನ್ಯಗಳಾಗುವ ವಿಚಾರ ವಿಕ್ರಯಿಸುವ ಸಮಯ ಸರಬರಾಯಿಯಲ್ಲಿ ಯಾವಾಗ ಹೆಚ್ಚುಕಡಿಮೆಯಾಗುವುದು ಎಂಬುದನ್ನು ವಿಚಾರಿಸಬೇಕಾದ ಮಾಹಿತಿಯನ್ನು ಪಡಕೊಂಡಿರುವರು.

ಮಂಗಳೂರಿನಲ್ಲಿ ೨೬ನೇ ತಾರೀಕಿನ ದಿನವನ್ನು "ಸ್ವಾತಂತ್ರ್ಯ ದಿನಾಚರಣೆ"ಯಾಗಿ ಆಚರಿಸಲ್ಪಟ್ಟಿತು. ಅಂದು ಪ್ರಾತಃಕಾಲ ಪ್ರಭಾತಭೇರಿಯೂ, ಸಾಯಂಕಾಲ ಮೆರವಣಿಗೆಯೂ, ಮೈದಾನಿನಲ್ಲಿ ಸಾರ್ವಜನಿಕ ಸಭೆಗಳೂ ಆದವು. ಜನರು ಬಹಳ ಉತ್ಸಾಹದಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಪೌರ ಸಭಾಧ್ಯಕ್ಷ ಡಾ| ಪಿ.ಎಲ ಶೆಟ್ಟಿ ಸ್ವಾತಂತ್ರ್ಯ ದಿನಾಚರಣೆಯ ವಿಶೇಷತೆಯ ಕುರಿತು ತುಳುವಿನಲ್ಲಿ ಭಾಷಣವಿತ್ತರು.

ನಗರದ ಅನೇಕ ಭಾಗಗಳಲ್ಲಿ ವಾಂತಿಭೇದಿಯ ರೋಗವು ತಲೆದೋರಿರುವುದರಿಂದ ಪೌರಜನರು, ಜಾಗರೂಕರಾಗಿದ್ದು, ತಕ್ಕ ತಡೆಯ ಉಪಾಯಗಳನ್ನು ಮಾಡತಕ್ಕದ್ದು.

ಮುಸ್ಲಿಂ ಉಪಾಧ್ಯಾಯ ಸಂಘದವರ ವಾರ್ಷಿಕ ಮಹೋತ್ಸವವು ಫೆಬ್ರವರಿ ತಿಂಗಳ ತಾ ೫, ೬, ೭ರಲ್ಲಿ ಮಂಗಳೂರು ಮಹಮ್ಮದನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುವ ಸಂದರ್ಭದಲ್ಲಿ ಶಿಕ್ಷಣ ಪ್ರದರ್ಶನವನ್ನು ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ್ ದೊರೆಗಳವರು ತೆರೆಯುವರು.

ಇದೇ ಸಂದರ್ಭದಲ್ಲಿ ಶ್ರೀಮತಿ ಬೇಗಮ್, ಮೀರ್ ಅಮೀರುದ್ದೀನ್‌ರವರು ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಕುರಿತು ಭಾಷಣ ಕೊಡಲಿಕ್ಕಿರುವರು. ಮತ್ತು ಶ್ರೀಮತಿ ಶಾಂಭವೀ ಪೂಂಜರವರ, ಶ್ರೀಮತಿ ಬೇಗಮರ ಭಾಷಣಗಳನ್ನು ಸಮರ್ಥಿಸಿ ಮಾತನಾಡುವರು ಇದಾದ ಮೇಲೆ ಶ್ರೀಯುತ ಎಸ್ ಎನ್ ಹೊಳ್ಳ ಮತ್ತು ಪಾರ್ಟಿಯವರ ನಾಟಕ ಮತ್ತು ಹಾಸ್ಯ ಪ್ರದರ್ಶನಗಳು ತೋರಿಸಲ್ಪಡುವುದು ಇತರ ಕಾರ್ಯಕ್ರಮಗಳನ್ನು ಪ್ರಕಟಿಸಲಾಗುವುದು.

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆಯಲ್ಲಿ ಎಲಿಮೆಂಟರಿ ಶಾಲಾ ಉಪಾಧ್ಯಾಯ ಸಂಘದವರು ಶಿಕ್ಷಣ ಪ್ರದರ್ಶನವನ್ನು ತೆರೆಯುವುದು ಇದೇ ಮೊದಲನೇ ಸಾರಿಯಾಗಿರುವುದರಿಂದ, ಎಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರೂ ಈ ಶಿಕ್ಷಣಪ್ರದರ್ಶನದಲ್ಲಿ ಸಹಭಾಗಿಗಳಾಗಿ, ಪ್ರೋತ್ಸಾಹವನ್ನಿತ್ತು, ಅದನ್ನು ಹೆಚ್ಚು ಉತ್ತಮವಾದ ಶಿಕ್ಷಣಕ್ಕೆ ಸಮ್ಮಂಧಪಟ್ಟ ಸಾಧನಗಳನ್ನು ಕಳುಹಿಸಿಕೊಡುವುದು ತಮ್ಮ ಕರ್ತವ್ಯವೆಂಬುದನ್ನು ಮರೆಯಬಾರದಾಗಿ ವಿನಂತಿ

ಕೆಲವು ಸಮಯದ ಹಿಂದೆ, ಗುರುಪುರದ ಹತ್ತಿರದಲ್ಲಿ ಕೆಲವರಿಗೆ ಖೂನಿ ಮಾಡಿದ ಹೆಂಗಸನನ್ನು ಫಾಸಿ ಶಿಕ್ಷೆಗೆ ಗುರಿಪಡಿಸಿರುವರು

ಮಂಗಳೂರು ಕೊ-ಆಪರೇಟಿವ್ ಟೌನ್ ಬೇಂಕಿನ ಡೈರೆಕ್ಟರರ ಸಭೆಯು ಇದೇ ತಾ ೧೮-೧-೩೭ಕ್ಕೆ ಕೂಡಿ ಬೇಂಕಿನ ಪ್ರಥಮ ಉಪಾಧ್ಯಕ್ಷರಾದ ದೇಶಭಕ್ತ ಕಾರ್ನಾಡು ಸದಾಶಿವರಾಯರ ನಿಧನದ ಕುರಿತು ಸಂತಾಪ ಸೂಚಕ ಠರಾವಾಗಿ ದಿವಂಗತ ವ್ಯಕ್ತಿಯವರಿಗೆ ಸದರಿ ಠರಾವನ್ನು ಕಳುಹಿಸಲಾಯಿತು

ಡಾ| ಎಂ ಆರ ಭಟ್ಟರ ಅಧ್ಯಕ್ಷತೆಯಲ್ಲಿ ಜೆಪ್ಪು ಮೈದಾನದಲ್ಲಿ ಇದೇ ೨೪ನೆಯ ತಾರೀಕು ಭಾನುವಾರ ಸಾಯಂಕಾಲ ೫ ಘಂಟೆಗೆ ಒಂದು ಬಾಹೀರ ಸಭೆ ಕೂಡಿತ್ತು, ಬಹಳ ಮಂದಿ ಸಭೆಯಲ್ಲಿ ನೆರೆದಿದ್ದರು

ಮುಂದಿನ ಚುನಾವಣೆಯಲ್ಲಿ ಸ್ವತಂತ್ರಪ್ರಿಯರಾದ ಹಾಗೂ ಜನತೆಯ ಹಿತವನ್ನು ಕೋರುವವರೆಲ್ಲರೂ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗೇ ಓಟುಗಳನ್ನು ಕೊಡಬೇಕೆಂದು ಅಧ್ಯಕ್ಷರು ವಿನಂತಿಮಾಡಿದರು ಡಾ| ಪಿ.ಎಲ ಶೆಟ್ಟರೂ, ಶ್ರೀ ಕುಸ್ಮಾರಿ ವೈದ್ಯರೂ ಮತ್ತು ಶ್ರೀ ನಾರಾಯಣ ಕಿಲ್ಲೆಯವರೂ ಬಡಜನರ ಹಿತವಾಗಬೇಕಾದರೆ ಕಾಂಗ್ರೆಸ್ಸಿನ ಆಜ್ಞೆಯನ್ನು ಪಾಲಿಸಬೇಕು, ಕಾಂಗ್ರೆಸ್ ಬಡವರ ಹಿತಕ್ಕಾಗಿ ಕಳೆದ ಹತ್ತಾರು ವರ್ಷಗಳಿಂದ ಶ್ರಮಿಸುತ್ತಿದೆ ಕಾಂಗ್ರೆಸ್ಸಿನ ಉಮೇದ್ವಾರರಿಗೆ ಓಟುಗಳನ್ನು ಕೊಡುವುದು ಹಿಂದೀಯರ ಕರ್ತವ್ಯವೆಂಬ ಅಭಿಪ್ರಾಯ ಭಾಷಣದಲ್ಲಿ ತಿಳಿಸಿದರು

ಅಧ್ಯಕ್ಷರ ಭಾಷಣವು ಮುಗಿದ ನಂತರ ಸಭೆಯು ಮುಕ್ತಾಯವಾಯಿತು

ಇದೇ ಸಾಯಂಕಾಲ ಕಂಕನಾಡಿಯಲ್ಲೊಂದು ದೊಡ್ಡ ಸಭೆ ಕೂಡಿತ್ತು. ಡಾ| ಯು ಪಿ ಮಲ್ಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಡಾ| ಪಿ.ಎಲ ಶೆಟ್ಟರು ಮತ್ತು ಶ್ರೀ ನಾರಾಯಣ ಕಿಲ್ಲೆಯವರು ಭಾಷಣಮಾಡಿದರು. ಭಾಷಣಕಾರರು ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ವಿವರಿಸಿ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗೇ ತಮ್ಮ ಓಟುಗಳನ್ನು ಕೊಡಬೇಕೆಂದು ವಿನಂತಿಮಾಡಿಕೊಂಡರು. ಸ್ವಯಂಸೇವಕರ ದಳಗಳು ಜೆಪ್ಪು ಮತ್ತು ಕಂಕನಾಡಿಯಲ್ಲೆಲ್ಲಾ ಮೆರವಣಿಗೆಗಳನ್ನು ತೆಗೆದುಕೊಂಡು ಹೋಗಿ ಸಭೆಯ ಕಾಲಕ್ಕೆ ಬಂದು ಸೇರಿದರು. ಜನರಲ್ಲಿ ಬಹಳ ಉತ್ಸಾಹವು ತುಂಬಿತ್ತು. ನೆರೆದಿದ್ದವರೆಲ್ಲರೂ ಕಾಂಗ್ರೆಸ್ಸಿಗೇ ಓಟು ಕೊಡುವುದಾಗಿ ನಿಶ್ಚಯಮಾಡಿಕೊಂಡು ಹೋದರು. ರಾತ್ರಿ ೯ ಗಂಟೆಯ ಹೊತ್ತಿಗೆ ಉರ್ವ ಮೈದಾನದಲ್ಲಿ ಒಂದು ಸಭೆಯು ಕೂಡಿತ್ತು. ಶ್ರೀ ನಾರಾಯಣ ಕಿಲ್ಲೆಯವರು ಭಾಷಣಮಾಡಿದರು.

ತಾಲೂಕುಗಳಿಂದ

ಕಡಬ:—ತಾ. ೧೩ ಮತ್ತು ೧೪ನೇ ತಾರೀಕುಗಳಲ್ಲಿ ನೆರೆದ ಸಭೆಗಳಲ್ಲಿ ಕೆಲವು ವರ್ಷಗಳ ಹಿಂದೆ ರೋಮನ್ ಕೆಥೋಲಿಕ್ ಮತಕ್ಕೆ ಸೇರಿದ ೩೮ ಮಂದಿ ಹರಿಜನರನ್ನು ಪುನಃ ಹಿಂದೂಮತಕ್ಕೆ ಶುದ್ಧಿಗೊಳಿಸಿದುದಲ್ಲದೆ ತಾ. ೧೭ರಲ್ಲಿ ನಡದ ಕಾರ್ಯದಲ್ಲಿಯೂ ೩೦ ಮಂದಿಯನ್ನೂ ಶುದ್ಧಿಗೊಳಿಸಿ ಹಿಂದೂ ಮತಕ್ಕೆ ಸೇರಿಸಿಕೊಳ್ಳಲಾಯಿತು.

ಮೂಲ್ಕಿ:—ರಾಷ್ಟ್ರಪತಿ ಜವಾಹಿರಲಾಲರು ಸ್ವಾತಂತ್ರ್ಯ ದಿನಾಚರಣೆಯನ್ನು ದೇಶದಲ್ಲಿ ಹೇಗೆ ಆಚರಿಸಬೇಕೆಂದು ಅಪ್ಪಣೆಕೊಡಿಸಿದಂತೆ ಇಲ್ಲಿಯೂ ನಿನ್ನೆ (೨೬-೧-೩೭ರಲ್ಲಿ) ನಿಯಮಿಸಿದ ಕಾರ್ಯಕ್ರಮದಂತೆ ಬೆಳಗ್ಗೆ ೫-೩೦ಕ್ಕೆ ಬಂಗ್ಲೆಕಾರರಲ್ಲಿಂದ ಪ್ರಭಾತ ಫೇರಿಯು ಹೊರಟು ಎಲ್ಲಾ ಮುಖ್ಯ ಮುಖ್ಯ ರೋಡುಗಳಲ್ಲಿ ಹೋಗಿ ಗಾಂಧಿ ಮೈದಾನಿನಲ್ಲಿ ಶ್ರೀಯುತ ಎಂ. ರಾಮಕೃಷ್ಣ ಪೂಂಜರಿಂದ ಧ್ವಜಾರೋಹಣ ಮಾಡಿಸಲ್ಪಟ್ಟಿತು. ಗಂಟೆ ೯-೩೦ಕ್ಕೆ ಸ್ಥಳೀಯ ಬಂಗ್ಲೆಕಾರದಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನೆರೆದಿತ್ತು. ಕಾಂಗ್ರೆಸ್ಸಿನ ನಿಯಮ ಕಾಂಗ್ರೆಸು ಕೈಕೊಂಡಿರುವ ಹಳ್ಳಿಗಳಲ್ಲಿ ಕಾಂಗ್ರೆಸು ಪ್ರಚಾರದ ಆವಶ್ಯಕತೆ, ಇವೇ ಮೊದಲಾದ ವಿಷಯಗಳಲ್ಲಿ ಭಾಷಣಕೊಟ್ಟರು. ಸಾಯಂಕಾಲ ೫-೩೦ಕ್ಕೆ ಊರ ಜನರು ಬಂಗ್ಲೆಗಾರರಲ್ಲಿಂದ ಬ್ಯಾಂಡುವಾದ್ಯದೊಡನೆ ಮೆರವಣಿಗೆ ಹೊರಟು ಗಾಂಧಿ ಮೈದಾನಿನಲ್ಲಿ ಶ್ರೀಯುತ ರಾಮಣ್ಣ ಶೆಟ್ರು ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ಹಲವು ಸಂರಸ್ಯವಾದ ಭಾಷಣಗಳಾದವು

ಉಡುಪಿ

ನಮ್ಮ ಸ್ವಂತ ವಾರ್ತಾದಾರರಿಂದ

ತಾ. ೨೩ರಲ್ಲಿ ಶ್ರೀಮತಿ ಕಮಲಾದೇವಿಯವರು ಉಡುಪಿಯಲ್ಲಿ ಚುನಾವಣಾ ಸ್ವಯಂಸೇವಕರು ಕೆಲಸಗಾರರನ್ನು ಒಟ್ಟುಗೂಡಿಸಿ, ಚುನಾವಣೆಯ ಕಾರ್ಯಭಾಗವನ್ನು ರೂಪಿಸಗೊಳಿಸಿದರು ಅಂದು ಸಾಯಂಕಾಲ ಶಿರ್ವ ಮತ್ತು ಕಟಪಾಡಿಯ ಕೆಲಸಗಾರರನ್ನೂ, ೨೪ಕ್ಕೆ ಬ್ರಹ್ಮಾವರ ಮತ್ತು ಕುಂದಾಪುರದ ಕೆಲಸಗಾರರನ್ನೂ ಭೇಟಿಯಾಗಿ ವ್ಯವಸ್ಥೆಯನ್ನು ಮಾಡಿ ತಾ ೨೫ಕ್ಕೆ ಮಂಗಳೂರಿಗೆ ಮರಳುತ್ತ ಮಧ್ಯದ ಸೀಮೆ ಬೈಲೂರಲ್ಲಿಯೂ ಪ್ರಚಾರಕಾರ್ಯ ಗೈಯ್ದರು ಕುಂದಾಪುರ ಡಿವಿಜನಿನಲ್ಲಿ ಕಾಂಗ್ರೆಸ್ ಉಮೇದ್ವಾರರಿಗೆ ಪ್ರೋತ್ಸಾಹವು ಬಹಳ ಚೆನ್ನಾಗಿದೆಯೆಂದಿರುವರು

ತಾ ೨೬ನೇಗೆ ಸ್ವಾತಂತ್ರ್ಯ ದಿನಾಚರಣೆಯು. ಪ್ರಾತಃ ಪ್ರಭಾತಫೇರಿ ಮತ್ತು ಧ್ವಜವಂದನೆಯಿಂದಲೂ ಅಪರಾಹ್ನ ೪ ಘಂಟೆಗೆ ಮೆರವಣಿಗೆಯಿಂದಲೂ ರಥಬೀದಿಯಲ್ಲಿ ಮಹಾಸಭೆ ಭಾಷಣಗಳಿಂದಲೂ ಸಾಂಗವಾಗಿ ನೆರವೇರಿತು ಸರಕಾರದಿಂದ ಸ್ವಾತಂತ್ರ್ಯ ದಿನದ ಪ್ರಕಟಣೆಯು ನಿಷೇಧಿಸಲ್ಪಟ್ಟಿದರಿಂದ ರಾಷ್ಟ್ರಪತಿ ಪಂಡಿತ ಜವಾಹಿರಲಾಲರ ಆಜ್ಞೆಯಂತೆ ಕಾನೂನು ಉಲ್ಲಂಘನೆ ಮಾಡುವುದಿಲ್ಲವಾಗಿದ್ದರೂ, ಸಭಾಸ್ಥಳಕ್ಕೆ ರಥಬೀದಿಯಲ್ಲಿ ಪೋಲೀಸರೂ ಸ್ಟೇಶನರಿ ಸಬ್ ಮೆಜಿಸ್ಟ್ರೇಟರೂ ಹಾಜರಿದ್ದರು. ಶ್ರೀ ವಾಂತ್ಯಾರು ಅನಂತ ಪದ್ಮನಾಭ ಭಟ್ಟರನ್ನು ಸಭಾಧ್ಯಕ್ಷರನ್ನಾಗಿ ಆರಿಸಲಾದ ಮೇಲೆ, ಶ್ರೀ ಕೆ. ರಾಮರಾಯ ಮಲ್ಯರು ಸಭೆಯ ಉದ್ದೇಶವನ್ನು ವಿವರಿಸಿ, ರಾಷ್ಟ್ರಪತಿಗಳ ಅನುಜ್ಞೆಯಂತೆ ಸ್ವಾತಂತ್ರ್ಯ ಪ್ರತಿಜ್ಞೆಯು ಕೈಕೊಳ್ಳಲಾಗುವುದಿಲ್ಲವೆಂದರು. ಅನಂತರ ಶ್ರೀ ನಾರಾಯಣ ಕಿಲ್ಲೆಯವರು ಸದ್ಯ ಕಾಂಗ್ರೆಸು ಕೈಕೊಂಡಿರುವ ಎಸೆಂಬ್ಲಿ ಚುನಾವಣೆಯ ಕುರಿತು ಪ್ರಸ್ತಾಪಿಸಿ, ಈಗ್ಗೆ ಪಾರ್ಟಿಗಳ ಪತಿಯಿಂದ ಉಮೇದ್ವಾರರು ನಿಂತಿರುತ್ತಾ ಸರಕಾರದವರೂ ಕೂಡ ಇದನ್ನು ಅಂಗೀಕರಿಸಿ, ಆಯಾಯ ಪಾರ್ಟಿಗಳಿಗೆ ಬಣ್ಣಗಳ ರೀತ್ಯಾ ಮತಗಳ ದಾನವನ್ನು ಹೊಸ ರೀತಿಯಲ್ಲಿ ಮಾರ್ಪಡಿಸಿದ್ದುದರ ಸಂಗತಿಯನ್ನು ವಿಶದಗೊಳಿಸಿದರು ಅನಂತರ ಕಾಂಗ್ರೆಸ್ಸು ಇಂದಿಗೆ ೫೦ ವರ್ಷಗಳಿಂದಲೂ ಸ್ವರಾಜ್ಯ ಸಾಧನೆಗೆ ಬಡವರ ಉದ್ಧಾರಕ್ಕೆ ಕೈಕೊಂಡ ಕಾರ್ಯಕಲಾಪಗಳನ್ನೂ ಇತ್ತ ಜಸ್ಟಿಸ್ ಪಾರ್ಟಿಯವರು ಮಾಡಿದ ಕಾರ್ಯ ವಿಶೇಷಗಳನ್ನೂ ವಿಶದಗೊಳಿಸಿ, ಸಮಸ್ತರೂ ಕಾಂಗ್ರೆಸ್ಸಿಗೆ ಮತಗಳನ್ನೀಯುವ ಆವಶ್ಯಕತೆ ಔಚಿತ್ಯದ ಕುರಿತು ಸವಿಸ್ತಾರವಾದ ಭಾಷಣವನ್ನು ಕೊಟ್ಟರು. ಶ್ರೀ ಕೆ. ವಿ ಉಪಾಧ್ಯಾಯ, ಬಿ ಎ, ಎಲ್. ಎಲ್. ಬಿ. ಯವರು ಕಾಂಗ್ರೆಸ್ಸನ್ನು ಸಮರ್ಥಿಸುತ್ತಾ, ಜಸ್ಟಿಸ್ ಪಕ್ಷದವರು ಬ್ರಾಹ್ಮಣ ಬ್ರಾಹ್ಮಣೇತರರೊಳಗೆ ಭೇದವನ್ನುಂಟು ಮಾಡಿದ, ಬ್ರಾಹ್ಮಣವರ್ಗಕ್ಕೆ ಘಾತಮಾಡಿದ ಬಗೆಯನ್ನು ವಿವರಿಸಿ, ಬ್ರಾಹ್ಮಣ ಬಂಧುಗಳೇ ಇಂತಹ ಘಾತಕ ಜಸ್ಟಿಸ್ ಪಕ್ಷದವರನ್ನು ಪ್ರೋತ್ಸಾಹಿಸುವುದರ ಅಸಾಂಗತ್ಯ ಅಸಂಬದ್ಧತೆಯನ್ನು ಸ್ಪಷ್ಟಗೊಳಿಸಿದರು ಒಟ್ಟಿನ ಮೇಲೆ ಬ್ರಾಹ್ಮಣರು ತಮ್ಮ ಮೇಲ್ಮೆಯನ್ನು ಸ್ವರಾಜ್ಯವನ್ನು ಬಯಸುವಲ್ಲಿ ಕಾಂಗ್ರೆಸಿಗೇ ಒಮ್ಮನಸ್ಸಿನಿಂದ ಮತಗಳನ್ನೀಯಬೇಕೆಂದು ಕೇಳಿಕೊಂಡರು. ಶ್ರೀ ಎ ಬಿ ಶೆಟ್ಟಿ ಎಂ ಎಲ್ ಸಿ ಯವರೂ ಕೆಲ ಮಾತುಗಳಿಂದ ಕಾಂಗ್ರೆಸು ಉಮೇದ್ವಾರರಿಗೆ ಬೆಂಬಲವಿತ್ತು ಕಾಂಗ್ರೆಸಿನ ಯಶಸ್ಸು ಬೆಳಗುವಂತೆ ಪ್ರಯತ್ನಿಸಬೇಕೆಂದು ವಿನಂತಿಸಿದರು. ಈಗ್ಗೆ ಹಲವು ವರ್ಷಗಳಿಂದ ಕಂಡು ಕೇಳದ ಉತ್ಸಾಹವು ಜನರಲ್ಲಿ ತಲೆದೋರಿತ್ತು, ಸುಮಾರು ೩೦೦೦ ಜನರು ಸಭೆಗೆ ನೆರೆದಿದ್ದರು, ಎಲ್ಲಾ ಕಾರ್ಯಕ್ರಮವು ಸಾಂಗವಾಗಿ ನೆರವೇರಿತು

ತಾ ೨೬-೨೭ರಲ್ಲು ಜಿಲ್ಲಾ ವಿದ್ಯಾಧಿಕಾರಿಗಳ ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಾರ್ಷಿಕ ಇನ್ಸ್‌ಪೆಕ್ಷನ್ ಜರಗಿದ್ದು ತಾ ೨೭ನೇ ಸಾಯಂಕಾಲ ೭ ಗಂಟೆಗೆ ಟೀ ಪಾರ್ಟಿ ಮತ್ತು ಗರ್ಲ್ಸ್ ಗ್ಯಾದರಿಂಗ್ ಇದ್ದಿತಾಗಿ, ವಿನೋದಾವಳಿಗಳು ಸದ್ರಿ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿದುವು ಪ್ರೇಕ್ಷಕ ವರ್ಗ ತುಂಬಿತ್ತು, ಸಮಾರಂಭವು ಆಕರ್ಷಕವಿತ್ತು.

ತುರಿಸಿ ತೊಂದರೆ ಕೊಡುವ ವ್ರಣ, ಕುರು ಇವುಗಳಿಂದ ಪಾರಾಗಿರಿ.

ತುರಿಸುವ ಜಾಗವು, ಕಲೆಯು ಅಥವಾ ಅರೆಯು ಎಷ್ಟೇ ಚಿಕ್ಕದಿರಲಿ, ಝಾಂಬಕನ್ನು ಅದರಮೇಲೆ ಮೆಲ್ಲನೆ ಸವರಿಡಿ ಇದು ಕಜ್ಜಿ, ತುರಿಕಜ್ಜಿ ಮತ್ತು ಇತರ ದೀರ್ಘ ಚರ್ಮ ರೋಗಗಳನ್ನು ದೂರಮಾಡಿಸಿರುತ್ತದೆ ಅಮೂಲ್ಯ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದರಿಂದ ಝಾಂಬಕ್ಕು ಚರ್ಮರಂಧ್ರಗಳನ್ನು ಹೊಕ್ಕು ನೋವನ್ನು ಇಂದ್ರಜಾಲದಂತೆ ಕಡಿಮೆಗೊಳಿಸಿ, ಕಲ್ಮಶವನ್ನು ಹೊರಗೆ ಸೆಳೆಯುತ್ತದೆ. ಝಾಂಬಕ್ಕಿನಿಂದ ಗುಣವಾದ ಜಾಗದಲ್ಲಿ ಕಲೆಗಳು ಉಳಿಯುವುದಿಲ್ಲ ಆದುದರಿಂದ ನಿಮ್ಮ ಎಲ್ಲಾ ಚರ್ಮ ವ್ಯಾಧಿಗಳಿಗೂ ಅದನ್ನು ಉಪಯೋಗಿಸಲು ಗುತ್ತಿಮಾಡಿರಿ ಎಲ್ಲಾ ಔಷಧ ವ್ಯಾಪಾರಿಗಳಿಂದ ಮಾರಲ್ಪಡುತ್ತದೆ ಬೆಲೆ ರೂ 1 ಅಥವಾ 1-4-0ಕ್ಕೆ ಸಿಗುತ್ತದೆ

ಝಾಂಬಕ್ ನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ.

ಏಜಂಟರು. — ಮೆಸರ್ಸ್ ದಾಧಾ ಎಂಡ್ ಕೊ, ಪಿ. ಟಿ ಮದ್ರಾಸು.

ಝಾಂಬಕ್

Zam Buk

ಹೆಣ್ಣು ಗಂಡು ಆಯಿತು

ಬೊಸಿಲ್ಯೊ ಸೆಪ್ಪಿಯಾನೊಫ ಎಂಬವನು ಬಳ್ಗೇರಿಯಾದ ಹದಿನಾರು ವರ್ಷಗಳ ವರೇಗೆ ಹೆಣ್ಣಾಗಿದ್ದನು. ಕಾರಣಾಂತರದಿಂದ ಅವನಿಗೆ ಆಸ್ಪತ್ರೆಗೆ ಹೋಗಬೇಕಾಯಿತು. ಅಲ್ಲಿಯ ಡಾಕ್ಟರರು ಅವನಲ್ಲಿ ಪುರುಷ ಲಕ್ಷಣಗಳನ್ನು ಕಂಡು, ಶಸ್ತ್ರಚಿಕಿತ್ಸೆ ನಡೆಸಲಾಗಿ ಅವನು ಗಂಡಾಗಿ ಮಾರ್ಪಟ್ಟನು. ಅವನಿಗೆ ಗಡ್ಡಮೀಸೆ ಬೆಳೆಯಲಾರಂಭಿಸಿತು. ಆರು ವರುಷಗಳ ನಂತರ ಈಗ ಅವನಲ್ಲಿ ಪುನಃ ಸ್ತ್ರೀ ಲಕ್ಷಣಗಳು ಕಾಣುತ್ತಿವೆಯಂತೆ. ಅಷ್ಟಲ್ಲದೆ ಅವನೊಬ್ಬ ತರುಣನಲ್ಲಿ ಮೋಹಗೊಂಡಿರುವನಂತೆ. ಈಗ ತನ್ನನ್ನು ಪುನಃ ಹೆಣ್ಣಾಗಿ ಮಾಡಬೇಕೆಂತಲೂ ಮತ್ತು ಆರು ವರುಷಗಳ ಕೆಳಗೆ ಡಾಕ್ಟರರು ತಪ್ಪು ಮಾಡಿದ್ದಾರೆಂತಲೂ, ಅವರ ಮೇಲೆ ದಾವೆ ಮಾಡಿರುವನು.

ಹಕ್ಕಿಗಾಗಿ

ಚಿಕಾಗೊ ನಗರದಲ್ಲಿ ಒಬ್ಬನು ತನ್ನ ಅಣ್ಣನ ಮನೆಯ ಐದನೇ ಮಹಡಿಯು ತನ್ನ ಹಕ್ಕಿನದೆಂದು ವಾದಿಸಿ, ಅಣ್ಣನು ಬರುವಾಗ ಅವನು ಮರವಜ್ರ ಅಥವಾ ಅಂಟುಗೊಂದಿನಿಂದ ತನ್ನ ದೇಹವನ್ನು ಆ ಮಹಡಿಯ ನೆಲಕೆ ಅಂಟಿಸಿಕೊಂಡು ಮಲಗಿದ್ದನಂತೆ. ಇದೂ ಒಂದು ಸತ್ಯಾಗ್ರಹ ಅಲ್ಲವೆ?

ಇಂಗ್ಲೆಂಡಿನಲ್ಲಿ ಅಂಗಡಿಗಳು

ಇಂಗ್ಲೆಂಡಿನ ಜನಸಂಖ್ಯೆಯು 44 ಮಿಲಿಯು. ಅಲ್ಲಿ ಒಟ್ಟು ಇರುವ ಅಂಗಡಿಗಳು ಒಂದು ಮಿಲಿಯು, ಅಂದರೆ ಪ್ರತಿ 44 ಜನರಿಗೆ ಒಂದು ಅಂಗಡಿಯಂತೆ ಇದೆ. 44ರಲ್ಲಿ ಹದಿನೆರಡು ಜನರು ಸಾಮಾನು ಸಾಗಿಸುವಿಕೆಯಿಂದ ಜೀವನ ಮಾಡುತ್ತಾರೆ.

ನದಿಯ ವಿಚಿತ್ರ ಹೆಸರು

ಆಫ್ರಿಕದ ರೊಡೆಸಿಯಾದಲ್ಲಿ ಒಂದು ನದಿ ಇರುವುದು. ಅದರ ಹೆಸರು 'ಮ ಪುಮುಪು ಮುಪು' ಎಂದು. ಭೂಗೋಳ ವಿಜ್ಞಾನಿಗಳು ಕೆಲವರು ಆ ವಿಚಿತ್ರ ಹೆಸರಿನ ಬಗ್ಗೆ ಶೋಧ ನಡೆಸಿದರು. ಆಫ್ರಿಕ ದೇಶದ ಭಾಷಾ ಪರಿಚಯವಿದ್ದವನೊಬ್ಬನ, ಆಗ ಅಲ್ಲಿ ಬಂದ ಐರೋಪ್ಯರೊಬ್ಬರು ಜೊತೆಯಲ್ಲಿದ್ದ ಒಬ್ಬ ನಿಗ್ರೋವಿನ ಹತ್ತಿರ ಆ ನದಿಯ ಹೆಸರೇನೆಂದು ಕೇಳಿದಾಗ ಅವನು 'ಮುಪು' (ನೀರು ಕುಡಿ), ನದಿ ಎಂದು ಹೇಳಿದನು. ಅವನಿಗೆ ಸ್ವಲ್ಪ ನಾಲಿಗೆ ತಡವರಿಸುತಿತ್ತಂತೆ.

ಜೀವಕ್ಕೆ ಜೀವ

ರಷ್ಯದ ದೇಹಶಾಸ್ತ್ರ ಸಂಶೋಧನಾಲಯದವರು 'ಮರಣ ಮತ್ತ ಪುನರ್ಜೀವನದ' ಕುರಿತು ಹೊಸ ವಿಷಯಗಳನ್ನು ಪ್ರಕಟಿಸಿರುವರು. ಅಲ್ಲಿಯ ವಿಜ್ಞಾನ ಮುಖಂಡರು ಇನ್ನು ಕೆಲವೇ ವರ್ಷಗಳಲ್ಲಿ ಸತ್ತವರನ್ನು ಜೀವಕ್ಕೆ ತರುವ ವಿಧಾನವನ್ನು ಸಂಪೂರ್ಣಗೊಳಿಸಬಲ್ಲೆವೆಂದು ಸಾರಿರುವರು. ಅವರ ಸಂಶೋಧನೆಯ ಪ್ರಕಾರ ಪ್ರಾಣಿಗಳಿಗೆ ಮರಣವು ಒಂದೇ ಸವನೆ ಉಂಟಾಗದೆ ಬೇರೆ ಬೇರೆ ಸ್ಥಾನಗಳಿಂದ ಉಂಟಾಗುತ್ತಿರುವಂತೆ ಈಗ ಅವರು ಕಂಡು ಹಿಡಿಯುತ್ತಿರುವದು, ಯಾವ ಸ್ಥಾನದಲ್ಲಿ ಪ್ರಾಣವನ್ನು ಯಾವ ವಿಧಾನದಿಂದ ಬದುಕಿಸಬಹುದು, ಮತ್ತು ಯಾವ ಸ್ಥಾನದಲ್ಲಿ ವಿಧಾನಗಳೆಲ್ಲವೂ ನಿರುಪಾಯವಾಗುವುವು ಎಂದು. ಅವರು ಸಂಶೋಧನೆಗೆ ಒಳಪಡಿಸಿದ ಅನೇಕ ನಾಯಿಗಳು ಮರಣಪಟ್ಟಿದ್ದು, ಅವರು ಅದಕ್ಕೆ ಹೊಸ ಜೀವವನ್ನು ಕೊಟ್ಟಿರುವರು. ಆ ನಾಯಿಗಳೀಗ ಮುಂಚಿನಂತೆ ಇವೆಯಂತೆ. ಹೃದಯ ಕೋಶದಂತೆ ರಕ್ತವನ್ನು ಶುದ್ಧಗೊಳಿಸುವ ಕೃತಕ ಎದೆಗುಂಡಿಗೊಂದನ್ನು ತಯಾರಿಸಿದರೆ ಮನುಷ್ಯನನ್ನು ಅಮರನನ್ನಾಗಿ ಮಾಡಲು ಸಾಧ್ಯವಿದೆಯೆಂದು ಅವರೆನ್ನುವರು. ಅದೊಂದು ಬಾಕಿ ಉಳಿದಿದೆ.

ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು

ಇಂದಿಗೆ ಎರಡು ತಿಂಗಳಿಂದಲೂ, ನಮ್ಮೂರಲ್ಲಿ ಶ್ರೇಷ್ಠ ತರಗತಿಯ ನಾಟಕಾಭಿನಯಗಳ ಪ್ರದರ್ಶನವಿತ್ತು ನಮ್ಮೂರವರದೇ ಅಲ್ಲದೆ, ಇಡೀ ಜಿಲ್ಲೆಯ ಅಭಿಮಾನ ಪ್ರೋತ್ಸಾಹಗಳಿಗೆ ಪಾತ್ರರಾದ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು, ಇಲ್ಲಿಯ ಕಾರ್ಯಕ್ರಮವನ್ನು ಪೂರ್ತಿಗೊಳಿಸಿ ಮುಂದಕ್ಕೆ ಶುಭಪ್ರಯಾಣ ಮಾಡಲಿರುವರೆಂಬ ಸಂಗತಿಯು, ಕಲಾಭಿಮಾನಿಗಳೆಲ್ಲರಲ್ಲಿಯೂ, ಕಳವಳವನ್ನುಂಟು ಮಾಡಿರುತ್ತದೆ. ಕಲಾಭಿರುಚಿಗೊಪ್ಪುವಂತಹ ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ನಾಟಕಾಭಿನಯಗಳ ಪ್ರದರ್ಶನವಿತ್ತು ಜನಮನರಂಜನೆಗೆ ಪಾತ್ರರಾದ ಈ ನೂತನ ಸಂಪದವರು, ಬಹಳ ಜನಪ್ರಿಯತೆಯನ್ನು ಪಡೆದಿರುವರೆಂದು ಪ್ರತ್ಯೇಕವಾಗಿ ಬರೆಯುವ ಅವಶ್ಯಕತೆ ಇಲ್ಲ.

೩೨೦. ತಮ್ಮ ಸಂಪಸ್ಥಾಪನಾರಂಭದಿಂದ ಕೆಲವು ಧ್ಯೇಯಗಳನ್ನಿಟ್ಟುಕೊಂಡೇ ತಮ್ಮ ಕಾರ್ಯಕ್ಷೇತ್ರದಲ್ಲಿ ಮುಂದಿರುವರೆಂಬ ಸಂಗತಿಯು ಇವರ ಸುವ್ಯವಸ್ಥಿತ ಆಡಳಿತ ಸಪ್ರಾಮಾಣಿಕತೆ, ಶ್ರೇಷ್ಠ ಕಥಾ ವಸ್ತುಗಳಿಂದ ಕೂಡಿದ ನಾಟಕ ಪ್ರದರ್ಶನ ಮತ್ತು ಮುಖ್ಯವಾಗಿ ಇವುಗಳೆಲ್ಲದರ ಸಕಾಲ ನಿರ್ವಹಣ, ಇವುಗಳಿಂದ ಖಚಿತವಾಗುತ್ತದೆ. ಇವರ ನಾಟಕಗಳನ್ನು ಹಲವು ದೃಷ್ಟಿಕೋನಗಳಿಂದ ಪರ್ಯಾಲೋಚಿಸಿದುದಾದರೆ ಅವುಗಳು ದೇಶದಲ್ಲಿನ ಪರಿಸ್ಥಿತಿಗಳಿಗನುಗುಣವಾಗಿರುವುದು ಮಾತ್ರವಲ್ಲದೆ, ಕಲಾದೃಷ್ಟಿಯಿಂದಲೂ ಅವುಗಳು ಸರ್ವಶ್ರೇಷ್ಠವಾಗಿವೆ. 'ರಾಷ್ಟ್ರವೀರ ಎಂಬ' ಅವರ ನಾಟಕವು ಮುಖ್ಯವಾಗಿ ಹಿಂದೂ ಮುಸ್ಲಿಂ ಐಕ್ಯತೆಯನ್ನು ಸಾರುವಂತಹುದಾಗಿದ್ದು, ರಾಜಭಕ್ತಿ ರಾಜಸಿಂಹ ನಾಟಕಗಳಲ್ಲಿ ಉಜ್ವಲ ಸ್ವದೇಶಾಭಿಮಾನಿಯ ಅಭಿನಯವನ್ನು ಕಾಣಬಹುದು. ಆಶಾಪಾಶ, ಗ್ರಾಂಬ ನಾಟಕವು ಸಾಮಾಜಿಕ ನ್ಯೂನತೆಗಳನ್ನು ಒಡೆದು ತೋರಿಸುವಂತಿದ್ದು, ಶಿಕ್ಷಣ ದೃಷ್ಟಿಯಿಂದಲೂ ತ ಬಾ ಸ್ತುತ್ಯಾರ್ಹವಾಗಿದೆ. ಎಲ್ಲಾ ನಾಟಕಗಳಲ್ಲಿಯೂ, ಅರ್ಥಗರ್ಭಿತ ಉಚ್ಚ ಹಾಸ್ಯರಸವು ತುಂಬಿದ ನಾಟಕಗಳ ಕಳೆಗೆ ಮಿರುಗು ಕೊಡುತ್ತಿರುವುದು ಸರಳ ಹಾಸ್ಯಾಭಿನಯ ಚಾತುರ್ಯದಿಂದ ಸಕಲ ಪ್ರೇಕ್ಷಕ ವರ್ಗವನ್ನು ನಗುವಾನಂದದಲ್ಲಿ ಮುಳುಗಿಸುವಂತೆ ಮಾಡುವ ಶ್ರೀ ಹಿರಣಯ್ಯನವರನ್ನು ಈ ಸಂದರ್ಭದಲ್ಲಿ ತುಂಬಾ ಅಭಿನಂದಿಸಬೇಕಾಗಿದೆ. ಕರ್ನಾಟಕ ರಂಗಭೂಮಿಯ ಹಾಸ್ಯಗಾರರ ಶ್ರೇಣಿಯಲ್ಲಿ ಇವರೂ ಒಂದು ಶ್ರೇಷ್ಠಸ್ಥಾನವನ್ನು ಪಡೆಯಲರ್ಹರೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಇವರ ಪ್ರಹಸನವು ಪ್ರಾರಂಭದಿಂದ ಅಂತ್ಯದ ವರೆಗೂ ಒಂದಿಷ್ಟು ಬೇಸರವನ್ನು ಹುಟ್ಟಿಸದೆ, ಪ್ರೇಕ್ಷಕರು ಅದನ್ನು ಹೆಚ್ಚಾಗಿ ಕೋರುವಂತೆ ಮಾಡುವುದು. ಇವರು ಬರೀ ಹಾಸ್ಯಗಾರರಾಗಿರದೇ, ಉತ್ತಮ ಲೇಖಕರೂ, ಕವಿಗಳೂ ಆಗಿರುತ್ತಾರೆ. ಸಂಘದವರಾಡುವ ರಾಷ್ಟ್ರವೀರ, ಆಶಾಪಾಶ ಎಂಬೀ ನಾಟಕಗಳು ಶ್ರೀ ಹಿರಣಯ್ಯನವರ ಲೇಖನಿಯಿಂದ ಜನ್ಮಿಸಿದುದಾಗಿರುತ್ತವೆ.

ಒಟ್ಟಿನ ಮೇಲೆ ಸ್ವಮ್ಮ ನಾಟಕ ಮಂಡಳಿಯವರು ನಮ್ಮೂರಿನ ಹಬ್ಬದಿನಗಳ ಸಮಯದಲ್ಲಿ ಬಿಟ್ಟುಹೋಗುವುದೆಂದರೆ ಬಹಳ ಅಸಮಾಧಾನವೆನಿಸುತ್ತಿದೆ. ಬರುವ ನಮ್ಮೂರಿನ ರಥೋತ್ಸವಕ್ಕೆ ಊರಪರವೂರಿನಿಂದ ಬರುವ ಸಾವಿರಗಟ್ಟಲೆ ಜನರಿಗೆ ನೂತನ ಸಂಘದವರು ತಮ್ಮ ಜನಪ್ರಿಯ ನಾಟಕಗಳ ಪ್ರದರ್ಶನ ಸಂದರ್ಭಗಳನ್ನು ಒದಗಿಸಿಕೊಡುವುದಕ್ಕಾದರೂ ಅವರು ತಮ್ಮ ಅವಧಿಯನ್ನು ಕೆಲಕಾಲದ ಮಟ್ಟಿಗಾದರೂ ಮುಂದುವರಿಸುವರೆಂದು ಆಶಿಸಲಾಗಿದೆ.

ಪದ್ಮ

ಲೋಕದ ಸಾರಸ್ಯ ಸಂಗತಿಗಳು

ತುಚ್ಛೀಕಾರಕ್ಕೆ ಶಿಕ್ಷೆ

ಮೋಟಾರ್ ಅನಾಹುತಕ್ಕೆ ಕಾರಣರಾದವರಿಗೆ ಶಿಕ್ಷೆ, ಜುಲ್ಮಾನೆ ಅಥವಾ ಚಬುಕಿನೇಟು ಇವುಗಳಿಂದ ದಂಡಿಸುವುದು ಎಲ್ಲಾ ಕಡೆಗಳಲ್ಲೂ ಸಾಮಾನ್ಯವಾಗಿದೆ. ಆದರೆ ಟೊರೊಂಟೊ ನಗರದ ಒಬ್ಬನು ಹದಮೀರಿದ ಕುಡಿತದಿಂದ ಮಿತಿಮೀರಿದ ವೇಗದಿಂದ ಬಂಡಿಯನ್ನು ಬಿಟ್ಟನೆಂಬದಕ್ಕೆ ಅಲ್ಲಿಯ ಮೆಜಿಸ್ಟ್ರೇಟರು ಅವನಿಗೆ ಒಂದು ನವೀನ ಶಿಕ್ಷೆ ವಿಧಿಸಿರುವರು. ಎರಡು ವರುಷಗಳ ತನಕ ಅವನು ಮದ್ಯಪಾನ ಮಾಡಬಾರದು. ಆ ಅವಧಿಯೊಳಗೆ ಅವನು ಕುಡಿದುದೇ ಆದರೆ ಆ ವಿಷಯವನ್ನು ಅವನ ಹೆಂಡತಿಯು ಪೋಲೀಸರಿಗೆ ತಿಳಿಸಬೇಕು ಎಂಬ ಶರ್ತದ ಮೇಲೆ ಅವನನ್ನು ಬಿಟ್ಟಿದ್ದಾರೆ.

ಗಂಡನನ್ನು ಬಿಡಲು ಕಾರಣಗಳು

ನಸಡಿನದ ವಿ ಸಿ ಎಂಬವಳು ತನ್ನ ಗಂಡನನ್ನು ಬಿಟ್ಟು ಬಿಟ್ಟಳು. ಅವಳು ತನ್ನ ವಿವಾಹ ವಿಚ್ಛೇದನಕ್ಕೆ ಕೋರ್ಟಿನಲ್ಲಿ ಕೊಟ್ಟ ಕಾರಣಗಳು — ಅವನು ಎರಡು ಕೈವಸ್ತ್ರಗಳನ್ನಿಟ್ಟುಕೊಂಡಿರುತ್ತಾನಂತೆ— ಒಂದು ನಿರ್ಮಲ, ಒಂದು ಕೊಳಕು. ಹೀಗೆ ಎರಡು ಮಾತಾಡುವಾಗ ತಡವರಿಸುವನಂತೆ. ಬಿದ್ದುಹೋದ ಎದುರಿನ ಹಲ್ಲನ್ನು ಸರಿಪಡಿಸಲು ದಂತವೈದ್ಯನನ್ನು ಕಾಣಲು ಅವನು ಒಪ್ಪುವುದಿಲ್ಲವಂತೆ. ಹೋಟ್ಲು ಹುಡುಗರಿಗೆ ಅವನ ಬೈಯುವನಂತೆ. ತನ್ನ ಪ್ರಣಯ ವಿಚಾರವನ್ನು ಬಹಿರಂಗ ಪಡಿಸುವನಂತೆ. ಕೂದಲು ಬಾಚಿಕೊಳ್ಳುವುದಿಲ್ಲ ಮತ್ತು ಉಗುರು ಸ್ವಚ್ಛವಾಗಿಡುವುದಿಲ್ಲ. ಅಪಸ್ವರದ ಸೀಳು ಹಾಕುತ್ತಾ ಕುಳಿತಿರುವನಂತೆ. ಮಲಗುವಾಗ ಕಾಲು ಚೀಲಗಳನ್ನು ತೆಗೆಯಲೊಪ್ಪುವುದಿಲ್ಲ. ಇಷ್ಟೆ ಕಾರಣಗಳು. ನಮ್ಮೂರ ಹೆಂಗಸರೂ ಈ ರೀತಿಯಾದರೆ ಅಸಂಖ್ಯಾತ ಎಷ್ಟು ಗಂಡಂದಿರು ಪತ್ನಿಸಹಿತರಾಗಿ ತಿರುಗಬೇಕಾದೀತೊ?

ಹೊಸ ಶಿಕ್ಷೆ

ಜರ್ಮನಿಯ ಬ್ರನ್ಸ್‌ವಿಕ್ ನಗರದವನೊಬ್ಬನಿಗೆ ನಾಲ್ಕು ತಿಂಗಳ ಶಿಕ್ಷೆ ವಿಧಿಸಿರುವರು. ಅವನ ತಪ್ಪು ದೊಡ್ಡದೇನಲ್ಲ. ಪತ್ರಿಕೆ ಮಾರುವ ಹೆಂಗುಸೊಬ್ಬಳ ಅವನಲ್ಲಿ ಪತ್ರಿಕೆ ಬೇಕೇ ಎಂದು ಕೇಳಿದಾಗ ಅವನ 'ಥು ಹಾಳು ಪತ್ರಿಕೆ, ಅದರಲ್ಲಿರುವುದೆಲ್ಲಾ ಬರೀ ಹುಚ್ಚು' ಎಂದಷ್ಟು ಹೇಳಿದ್ದೆ ಅವನ ತಪ್ಪಂತೆ. ಆ ಮಾತುಗಳಿಂದ ಅವನು ಆ ಪತ್ರಿಕೆಯ ಕೆಲಸಗಾರರ ಅಪಮಾನ ಮಾಡಿದನೆಂದು ಕೋರ್ಟಿನವರ ತೀರ್ಪು. 'ಸ್ವದೇಶ ಸೇವೆ ಮಾಡುವ ಪತ್ರಿಕೆಯೊಂದಕ್ಕೆ ಹಾಗೆ ಟೀಕಿಸುವುದೆಂದರೆ ಬಹಳ ಅನ್ಯಾಯವೆಂಬುದೇ' ನ್ಯಾಯಾಧೀಶನ ಕಡೇ ಮಾತು. ಆ ಕಾನೂನು ನಮ್ಮ ಊರಲ್ಲಿ ಇರುತ್ತಿದ್ದರೆ ಈಗ ಎಷ್ಟೊ ವಿಮರ್ಶಾಕಾರರು ಸೆರೆಮನೆಯಲ್ಲಿರುತ್ತಿದ್ದರು.

ಮೇಣದ ಮನುಷ್ಯ

ಹರಿಯೊ ನಗರದಲ್ಲಿ ಫ್ರೆಡ್ ಆರ್ಚರ್ ಎಂಬವನು ಮೋಟಾರ್ ರಿಪೇರಿ ಕೆಲಸ ಮಾಡುತ್ತಲಿದ್ದನು. ಬರಬರುತ್ತ ಅವನಿಗೆ ಅದರಲ್ಲಿ ಬೇಸರ ಹುಟ್ಟಿತು. ಹಣಸಂಪಾದನೆಯ ಹೊಸ ಯೋಜನೆ ಮಾಡಬೇಕೆಂದು ನಿಗನಿಸಿತು. ಅಂಗಡಿಗಳಲ್ಲಿ ಪ್ರದರ್ಶನಕ್ಕಾಗಿ ಇಟ್ಟಿರುವ ಮೇಣದ ಗೊಂಬೆಗಳ ಕಡೆಗೆ ಅವನ ಗಮನವು ಸೆಳೆಯಲ್ಪಟ್ಟಿತು. 'ಜೀವಂತ ಗೊಂಬೆ ಯಾಕಾಗಬಾರದು?' ಎಂದು ತರ್ಕಿಸಿ ಅವನು, ಹದಿನೆಂಟು ತಿಂಗಳ ವರೆಗೆ ಮನೆಯಲ್ಲಿ ಸ್ನಾಯು ಸಂಯಮನದ ಯುಕ್ತಿಯನ್ನು ಮಾಡಿದನು. ಈಗ ಅವನು ಮೇಣದ ಗೊಂಬೆಗಳಂತೆ, ನಟಿಸಬಲ್ಲನಂತೆ. ಒಂದು ದೊಡ್ಡ ಬಟ್ಟೆ ವ್ಯಾಪಾರಿಗಳು ಅವನನ್ನು ಕೆಲಸದಲ್ಲಿಟ್ಟುಕೊಂಡಿರುವರು. ವರ್ಷಕ್ಕೆ 10,000 ರೂ ಸಂಬಳ ಅವನಿಗೆ. 85 ಮಿನಿಟುಗಳ ತನಕ ಅವನು ಕಲ್ಲು ಗೊಂಬೆಯಂತೆ, ಕಣ್ಣಿನ ರೆಪ್ಪೆ ಅಲ್ಲಾಡಿಸದೆ ಕೂತುಕೊಳ್ಳಬಲ್ಲನಂತೆ ಆಶ್ಚರ್ಯ.

ಗಿಳಿಗಳಿಗೆ ಮೀಲು

ಬಾಲ್ಟಿಮೋರ್ ನಗರದ ಮಿಸ್ ರಾಚೆಲ್ ವಿಮ್ಸ್ ಎಂಬವಳು ಎರಡು ಗಿಳಿಗಳನ್ನು ಸಾಕಿದ್ದಳು. ಅವುಗಳನ್ನು ಅವಳು ಬಹಳವಾಗಿ ಪ್ರೀತಿಸುತ್ತಿದ್ದಳು. ಆ ಪ್ರೀತಿಯ ಕುರುಹಾಗಿ, ಅವಳು ಸಾಯುವಾಗ ಒಂದು ಮೀಲನ್ನು ಬರೆದಿಟ್ಟಿದ್ದಾಳೆ. 600 ಪವನುಗಳನ್ನು ಅವುಗಳಿಗೆ ಬಿಟ್ಟು ಅದರ ಉತ್ಪತ್ತಿಯಿಂದ ಅವುಗಳನ್ನು ಸಾಕಬೇಕೆಂದು ಆ ಮೀಲಿನಲ್ಲಿ ಬರೆದಿರುವಳು.

ಹೊಟ್ಟೆ ಇಲ್ಲದ ಮನುಷ್ಯ

ಕಾನಡಾದ ಟೊರೊಂಟೊದಲ್ಲಿ ಹೊಟ್ಟೆಗಳ ಅವಯವವಿಲ್ಲದ ಮನುಷ್ಯನೊಬ್ಬನಿರುವನು. ಅವನಿಗೆ ಜೀರ್ಣಶಕ್ತಿಯೇ ಇಲ್ಲ. ಕೃತಕ ಜೀರ್ಣರಸವನ್ನು ಆಹಾರದೊಂದಿಗೆ ಬೆರಸಿಕೊಟ್ಟರೆ ಮಾತ್ರ ಅವನು ತಿಂದ ಆಹಾರವು ಜೀರ್ಣವಾಗುವುದಂತೆ. ಅವನೀಗ ಮಾಂಸವನ್ನು ಕೂಡಾ ತಿನ್ನುವನು. ಆದರೆ ಜೊತೆಗೆ ಜೀರ್ಣರಸವನ್ನು ತೆಗೆದುಕೊಳ್ಳುತ್ತಾನೆ. ಅವನ ಆರೋಗ್ಯವು ಚೆನ್ನಾಗಿರುವುದು.

ತಲೆಗಿಂಬಿನಲ್ಲಿ ಸಂಗೀತ

ಪಾಶ್ಚಿಮಾತ್ಯ ರೈಲ್ವೆ ಕಾರ್ಖಾನೆಯವರು, ಪ್ರಯಾಣಿಕರ ಸೌಕರ್ಯಕ್ಕಾಗಿ ತಮ್ಮ ಬಂಡಿಗಳಲ್ಲಿ ಸಂಗೀತ ಹಾಡುವ ತಲೆಗಿಂಬುಗಳನ್ನು ಜೋಡಿಸಿರುವರು. ಪ್ರಯಾಣಿಕರು, ಅದರ ಮೇಲೆ ತಲೆಯನ್ನು ಒರಗಿಸಿದ ಕೂಡಲೇ ಅವರಿಗೆ ಮಾತ್ರ ಸುಶ್ರಾವ್ಯ ಸಂಗೀತವು ಕೇಳಬರುವುದು. ರೇಡಿಯೋವನ್ನು ಈ ವಿಧಾನದಲ್ಲಿ ಉಪಯೋಗಿಸಿಕೊಂಡಿರುವರಂತೆ.

ನಗುವಾಗ ನಿದ್ರೆ

ಲಂಡನ್ ಆಸ್ಪತ್ರೆಯಲ್ಲಿ ಒಬ್ಬ ವಿಚಿತ್ರ ರೋಗಿಯನ್ನು ಸೇರಿಸಿರುವರು. ಅವಳೊಬ್ಬ ಮಿಂಬಲ್ಡನ್ ನಗರದ ಹೆಂಗುಸು. ಅವಳು ವಿಶೇಷ ಉತ್ಸಾಹಪಟ್ಟರೆ ಅವಳಿಗೆ ಕೂಡಲೇ ನಿದ್ರೆ ಬರುವುದು. ಬೇರೆಯವರು ನಗುವುದನ್ನು ನೋಡಿದರೆ ಅವಳಿಗೆ ತೂಕಡಿಕೆ ಹತ್ತುವುದಂತೆ. ಇದೊಂದು ನರಗಳ ದುರ್ಬಲತೆಯಿಂದಾಗುವ ರೋಗವೆಂದು ವೈದ್ಯರು ಅಭಿಪ್ರಾಯಪಡುತ್ತಾರೆ.

ತಾರುಣ್ಯದಲ್ಲಿ ಮುಪ್ಪು

ಹೆಂಗಸರು ತಾರುಣ್ಯದಲ್ಲಿರುವಾಗಲೇ ಮುದಿತನವು ಬಂದು ಸಾಯುವ ರೋಗವೊಂದನ್ನು ವೈದ್ಯವಿಜ್ಞಾನಿಗಳು ಕಂಡುಹಿಡಿದಿರುವರು. ಸಿಮಂಡ್ಸ್ ಡಿಸೀಸ್ ಎಂದು ಆ ರೋಗದ ಹೆಸರು. ಈ ರೋಗವು ಲಂಡನಿನ ಒಬ್ಬ 28 ವರುಷದ ತರುಣಿಗೆ ತಗಲಿ, ಅವಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಲಾಯಿತು. ಅಲ್ಲಿ ಅವಳ ಅವಳಿ ಜವಳಿ ಮಕ್ಕಳನ್ನು ಹೆತ್ತಳು. ಎರಡನೇ ಮಗು ಹುಟ್ಟಿದ ಕ್ಷಣವೇ ಅವಳ ಪ್ರಾಣವು ಹೋಗುತ್ತಾ ಬಂತು. ಮೂರು ದಿವಸಗಳ ನಂತರ ಅವಳಿಗೆ ವಿಪರೀತ ತಲೆನೋವು ಬಂದು ನಿದ್ರೆ ಇಲ್ಲದಾಯಿತು. ಅವಳ ತೂಕವು ದಿನೇ ದಿನೇ ಇಳಿಯುತ್ತಾ ಕೂದಲು ಬೀಳಲಾರಂಭಿಸಿತು. ನಿರುಪಾಯರಾಗಿ ವೈದ್ಯರು ಅವಳನ್ನು ಆಸ್ಪತ್ರೆಯಿಂದ ಬಿಟ್ಟರು. ಕೆಲವು ದಿವಸಗಳೊಳಗೆ ಅವಳು ಅಪ್ಪುದು, ಕಚ್ಚಿ ಮೈಕೈಯನ್ನು ತಿರುಪಲಾರಂಭಿಸಿದಳು. ಅನಂತರ ಐದು ಗಂಟೆಗಳೊಳಗೆ ಅವಳ ಪ್ರಾಣವಾಯುವು ಹಾರಿಹೋಯಿತು.

ಸ್ತ್ರೀಯರ ಸೌಖ್ಯಕ್ಕೆ 'ಲೋಧ್ರ'ಕ್ಕಿಂತಲೂ ಉತ್ತಮವಾದ ಮತ್ತು ಶಕ್ತಿಯುತವಾದ ಔಷಧಿಯು ಬೇರೊಂದಿಲ್ಲ. ಇದು ಮುಟ್ಟಿನ ಕಾಲಕ್ರಮವನ್ನೂ, ಮುಟ್ಟು ಸ್ರಾವವನ್ನೂ ಸರಿಪಡಿಸಿ, ಹದಮೀರಿ ಹರಿಯುವ ಮುಟ್ಟು ಸ್ರಾವವನ್ನೂ ತಡೆಕಟ್ಟುತ್ತದೆ. ರುತುಕಾಲದಲ್ಲಾಗುವ ಎಲ್ಲಾ ವಿಧದ ನೋವನ್ನೂ, ಹೊಟ್ಟೆ ನೋವು, ಬೆನ್ನುನೋವುಗಳನ್ನೂ ಗುಣಪಡಿಸುತ್ತದೆ. ಇದಲ್ಲದೆ ಆರೋಗ್ಯವನ್ನೂ ಶಕ್ತಿಯನ್ನೂ ಸದಾ ಕಾಲವೂ ಸರಿಯಾಗಿ ಇರಿಸುವುದಕ್ಕೆ ಇದು ಉತ್ತಮ ಟಾನಿಕ್ ಕೂಡಾ ಆಗಿರುತ್ತದೆ

'ಲೋಧ್ರ'

ಗರ್ಭಾಶಯ ರೋಗ ನಿವಾರಿಣಿ · ಪ್ರತಿಯೊರ್ವ ಸ್ತ್ರೀಗೂ ಬೇಕಾಗಿರುವುದು

ಕೇಸರಿ ಕುಟೀರಂ,

ಎಗ್ಮೋರ್ .·. ಮದರಾಸು.

'Dil Roz' (Regd)

'Dil Roz' is a sure cure for Oriental sores local sores, all kinds of deeprooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2.
Postage extra.

TAHIR DIN,
Anarkali, LAHORE.

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH WATCHES GTD 3 YEARS. ROUND NICKEL 2/14/-, RADIUM DIAL 3/12/-; GOLDEN 3/14/-. SQUARE NICKEL 4/8/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 6/8/-. POSTAGE ETC. FREE ON 3. C.T.CO. 186 HARRISON RD CALCUTTA

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ

ಯಲ್ಲೇ ಕೊಡಿರಿ.

BEHAR CHEMICAL WORKS, BHAGALPUR.

ಬಿ. ಸಿ. ರಸಾಯನಿಕ ವೈದ್ಯಶಾಲೆಯ
ಚ್ಯವನ ಪ್ರಾಸ ಲೇಹ್ಯ.

ಮಾನವ ಶರೀರದ ಮೇಲೆ ಅತ್ಯಾಶ್ಚರ್ಯೋಗಕರವಾದ ಶಕ್ತಿವರ್ಧಕ ಹಾಗೂ, ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ

ಸೀತ, ನೆಗಡಿ ಕೆಮ್ಮು ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಕಾರದ ಮೇಲೆ ಈ ದಿವ್ಯೌಷಧಿಯು ವಿಶೇಷವಾಗಿ ಚವನ ಋಷಿಗಳು ಇದರ ಗುಣವನ್ನು ಒತುಕೇಳವಾಗಿ ಮನಗಂಡಿರುವುದರಿಂದಲೂ ಸಮ್ಮೆಲ್ಲಿಯ ಕವಿ ರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ, ಇದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ, ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ, ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು,

1 ತಿಂಗಳ ಉಪಯೋಗದ ಸೇರ್ 1ಕ್ಕೆ ರೂ. 1 8-0

ಏಜೆಂಟರು.—ಷಾ ಕಂಪೆನಿ,
ಗವರ್ನ್‍ಮೆಂಟ್ ಕಾಲೇಜ್ ಎದುರು
ಮಂಗಳೂರು.

TEST YOUR EYES

By the Electro Ophthalmoscope







All Varities of Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ 5 ವರ್ಷಗಳ ಮೌಲ್ಯವೀಕ್ಷಣದ ಫಲಿತಾಂಶವಾಗಿ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗಿದೆ.

ನಮ್ಮ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿ, ವ್ಯವಹಾರಕುಶಲರಾದ ಯೋಗ್ಯ ಏಜಂಟರು ಬೇಕು!

ಇವರಿಗೆ ಪ್ರತಿ ತಿಂಗಳಿಗೆ 80 ರೂಪಾಯಿಗಳ ವೇತನವು ದೊರೆಯುವುದು.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

"ಬ್ರೇಕ್ ಪಿಲ್ಸ್"

Invented by a Himalayan Sage.

ಸ್ತ್ರೀಪುರುಷರಿಗೆ ಆನಂದವನ್ನುಂಟು ಮಾಡುವುದು ಈ ಮಾತ್ರೆಗಳೆ.

ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು.

ಇದರಲ್ಲಿ ರಸವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು.

ಗುಣವಿಲ್ಲದಿದ್ದಲ್ಲಿ ಹಣ ವಾಪಾಸು.

೬೦ ಮಾತ್ರೆಗಳು ರೂ ೫-೦-೦. ೩೦ ಮಾತ್ರೆಗಳು ರೂ ೩-೦-೦.

(ಕಾಗದ ಪತ್ರಗಳು ಇಂಗ್ಲಿಷಿನಲ್ಲಿರಲಿ)

ಡಾ| ಎ. ಎಸ್ ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರ್ಸ್ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಶಕ್ತಿಯಿಲ್ಲದಂತಾಗಿ ಸಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊಡಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ESTD· 1906·

The Canara Banking Corporation Udipi Ltd.

INCORPORATED IN BRITISH INDIA

NOTICE TO SHAREHOLDERS.

The Ordinary Annual General Meeting of the share-holders of the Corporation will be held at its Registered Office at Udipi on SUNDAY the 14th February 1937 at 10 A M to transact the following business —

1 To receive and consider the Balance Sheet for the year ended 31-12—1936 with the Auditors' Certificate, the Profit & Loss Statement and the Directors' Report.

2 fixing the rate of dividend and bonus to be paid to the Share-holders

3 Appointment of new Directors in the place of.—
Messrs 1 K Nagesh Pai,
2 B. Shankraya Shetty,
3. Dr. U. Padmanabha Mallya,
4 M. Govinda Pai,
who retire under Art. 57 & 60.
(All are eligible for re-election under Art; 61)

4 The appointment of an Auditor or Auditors for the current year and fixing the amount of his or their remuneration (The last year's Auditors are eligible for re-election and are willing to accept the office)

It is requested that you will be good enough to attend the meeting. If it should be inconvenient for you to attend the meeting in person you may appoint a Share-holder of this Corporation as your proxy

The proxy should be stamped with 2 one anna revenue stamps bear your signature and should reach the Head-office by 10 A M on 11—2-1937.

N. B. The transfer Books of the Corporation will remain closed from 28-1-1937 to 21-2-1937 both days inclusive

(By order)

Office of the Corporation,
UDIPI,
17th January 1937

M. Srinivas Prabhu,
Manager

"ದಿ ಮುಲ್ಕಿ ಗ್ರೇಂಡ್ ರೇಫ್‌ಲ್"

(ಮುಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ ದ ಕನ್ನಡ.

ಲಿಕ್ಕ ಆಫೈರು ಆಗುವ ತಾ. 25—1—'37. ಸೋಡ್ತಿ ತೆಗೆಯುವ ತಾ 31-1-'37

ಟಿಕೇಟು ಒಂದರ ಕ್ರಯ ಆಣೆ 4 ಮಾತ್ರ.

20 ಟಿಕೇಟುಗಳಿರುವ ಪುಸ್ತಕಕ್ಕೆ ಒಂದಕ್ಕೆ ರೂ. 5—0—0 ಮಾತ್ರ.

ಜಾಗ್ರತೆ ಮಾಡಿರಿ!

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ.

ಸೋಡ್ತಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸಿಡೋಣವಾಗಲಿಕ್ಕಿಲ್ಲ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ

ಕಾರ್ಯದರ್ಶಿ,
ದಿ ಮುಲ್ಕಿ ಗ್ರೇಂಡ್ ರೇಫ್‌ಲ್,
ಮೂಲ್ಕಿ ದ ಕನ್ನಡ.

THE PIE-MONEY BANK LTD,
Mardan Road MANGALORE

Undertakes all kinds of Banking Business Current account at 2½% per annum Savings Bank Deposits at [illegible] per annum

FIXED DEPOSITS

For 2 Years 7, 1 Year 6 [illegible] months [illegible] months [illegible]

Auction Chit Funds ranging from Rs 100—0—0 run regularly on systematic lines Unique Banking facilities to Businessmen and interested Public

Apply for particulars— **K R. GURU,** *Managing Director*

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೀಟಾದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾ। ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಪುರ ಇವರು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ ಪಿ. ಆಣೆ ೮

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಶಿಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳೆನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನು ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ 2 8—0. ಮೂರು ಬಾಟ್ಲಿಗಳಿಗೆ ರೂ 7—0—0

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ **ಬಾಟ್ಲಿ 1ಕ್ಕೆ ರೂ 1—8—0.**

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್
ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ ಬಿಕ ಮಂಗಳೂರ 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ ಕಾಸರಗೋಡು 3 ಮಾಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಯಿ 4 ಕೆ [illegible] ಹೆಗ್ಡೆ ಮರ್ಚಂಟ್ ತೀರ್ಥಹಳ್ಳಿ

ಈಗಿನ ದಿವಸಗಳಲ್ಲಿ ಬೇಕಾದದ್ದು ಉತ್ತಮವಾದದ್ದು. ಅಗ್ಗವಾದದ್ದಲ್ಲ!

ಪರಿಮಳದಲ್ಲಿಯೂ ರುಚಿಯಲ್ಲಿಯೂ ಪರಿಪೂರ್ಣವಾದದ್ದು.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್ ಇದ್ದು ಅಂದವಾದ ಪೊಟ್ಟಗಳಲ್ಲಿ ಸಿಗುತ್ತದೆ.

ಶ್ರೇಷ್ಠಗುಣಗಳು ನಿಮ್ಮನ್ನು ಕಣ್ಣನ್ ದೇವನ್ ಚಹಾವನ್ನೇ ಕೊಂಡುಕೊಳ್ಳುವಂತೆ ಒತ್ತಾಯ ಮಾಡುತ್ತದೆ.

ಕಣ್ಣನ್ ದೇವನ್ ಚಹಾ ಪೊಟ್ಟಗಳ ಬರುವಿಕೆಯನ್ನು ನಿರೀಕ್ಷಿಸಿರಿ.

Sole Agents: **The Kerala Tea Syndicate,**
PONANI—(S. Malabar)

Edited Printed & Published By A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

ESTABLISHED 1906

SWADESHABHIMANI

ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ। ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ। ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ। ಗರವ ಮಥಿಸಲು ಸುರರಿಗದರಿಂ। ಹರುಷವಾಯಿತೆ' ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ' ಸುಧೆಯನು। ಪುರಿತು ಕ್ಷುದ್ರರ ತೆರದಿ ಕುಳಿತರೆ। ತೆರಳ ಬಲ್ಲರೆ' ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಕ ೩೧ | ಮಂಗಳೂರು ತಾ. ೧೨ನೇ ಫೆಬ್ರವರಿ ೧೯೩೭ | (12–2–'37) | ಸಂಚಿಕೆ ೬

ಹಿಂದೀ ಸ್ವಾತಂತ್ರ್ಯ, ದಾರಿದ್ರ್ಯ ನಿವಾರಣೆ ಎಂಬೀ ತತ್ವಗಳನ್ನು ಎಣಿಸಿಯೇ ಹೊರತು, ಉಮೇದುವಾರರನ್ನು ಗಣನೆಗೆ ತಾರದೆ ಕೊಂಗ್ರೆಸಿಗೆ ಮತಕೊಡಿರಿ. ಈ ತತ್ವಗಳು ಸರ್ವರಿಗೂ ಸಮಾನವಾಗಿಯೆ ಇವೆ. ಜಾತಿ ಮತ ಇತ್ಯಾದಿಗಳು ಭಿನ್ನವಾಗಿರಬಹುದು; ಆದರೆ ಸಾಂಪತ್ತಿಕ ಮತ್ತು ರಾಜಕೀಯ ಪ್ರಶ್ನೆಗಳು ಸರ್ವರಿಗೂ ಒಂದೇ ಸಮಾನವಾಗಿವೆ. ಇಲ್ಲಿನ ಚುನಾವಣೆಯಲ್ಲಿ ಶ್ರೀ ಬಾಳಿಗರು, ಶ್ರೀ. ಕಾರಂತರು, ಶ್ರೀ. ಶೆಟ್ಟರು, ಶ್ರೀ. ದಾಶಿರ್ಯರು, ಶ್ರೀ ಈಶ್ವರನವರು ಕೊಂಗ್ರೆಸಿನ ಪಕ್ಷವಾಗಿ ನಿಂತಿರುವರು. ಇವರು ಕೊಂಗ್ರೆಸಿನಲ್ಲಿ ಯೋದ್ಧರಾಗಿ ಬಂದು, ನಮ್ಮ ದೇಶವು ಯಾವ ಸಂಸ್ಥೆಯಲ್ಲಿ ಭರವಸೆಯನ್ನಿಟ್ಟಿದೆಯೋ ಅದರ ಸಲುವಾಗಿ ಕೆಲಸ ಮಾಡುವಂತೆ ಅವರನ್ನು ಚುನಾಯಿಸಿರಿ. — ಪಂಡಿತ ಶ್ರೀ। ಜವಾಹರಲಾಲ ನೆಹರು

[೧೧ನೆ ಪುಟ ನೋಡಿ]

ILLUSTRATED WEEKLY

ಯಾಕೆ ವೋಟು ಕೊಡಬೇಕು?

ಚುನಾವಣೆಯು ಬರುತ್ತಿದೆ ... ಎಲ್ಲರಿಯುತ್ತಾರೆ ... ಮತವನ್ನು ಯಾರಿಗೆ ಕೊಡಬೇಕೆಂಬ ... ಉಳ್ಳವರು ...

ಕೊಂಗ್ರೆಸು, ಗಿಲ್ಲಾರಲ್ಲಿ ಸ್ಥಾಪಿಸಲ್ಪಟ್ಟ ಸಾರ್ವಜನಿಕ ಸಂಸ್ಥೆಯಾಗಿ ಅಖಿಲ ಇಂಡಿಯಾದಲ್ಲಿ ದೇಶೋದ್ಧಾರದ ಕೆಲಸವನ್ನು ಕೈಕೊಂಡಿರುವದು. ಎಲ್ಲೆಲ್ಲಿಯೂ ಜನತೆಯಲ್ಲಿ ದೇಶಭಕ್ತಿಯು ಉಂಟುಮಾಡುವ ಯಾವತ್ತು ಕೆಲಸವನ್ನೂ ಅದು ಮುಂದರಿಸಿಯದೆ. ಇತ್ತೀಚೆಗೆ ಗ್ರಾಮ ಉದ್ಧರಣೆಯು ಕೆಲಸವೂ ಪ್ರಾಮುಖ್ಯವೆಂತಲೂ, ಅದನ್ನು ಕೈಕೊಳ್ಳುವುದು ಅತೀ ಅಗತ್ಯವೆಂಬುದಾಗಿ ಅಭಿಪ್ರಾಯಪಟ್ಟು ಅದನ್ನು ಕೈಕೊಂಡಿರುತ್ತದೆ. ಈ ಕಾರಣದಿಂದ ಕೊಂಗ್ರೆಸ್ಸು ಕಳೆದ ಅಧಿವೇಶನವನ್ನು ಫೈಜಾಪೂರ ಎಂಬ ಗ್ರಾಮದಲ್ಲಿ ಕೊಂಗ್ರೆಸ್ಸಿನವರು ಮಾಡಿದ್ದಾರೆ ಈ ಗ್ರಾಮೋದ್ಧರಣೆಯ ಕೆಲಸಕ್ಕೆ ದ್ರವ್ಯ ಸಹಾಯವೂ ಅತೀ ಅಗತ್ಯ ತೀರ್ವೆಯು ಹೆಚ್ಚಾಗಿ ಗ್ರಾಮಗಳಲ್ಲಿಯೇ ವಸೂಲು ಆಗುತ್ತದೆ ಹೀಗೆ ವಸೂಲಾದ ತೀರ್ವೆಯನ್ನು ಗ್ರಾಮೋದ್ಧರಣೆಯ ಕೆಲಸಕ್ಕೆ ಹಾಕುವುದು ಸರಿಯಲ್ಲವೇ? ಈ ಕೆಲಸವನ್ನು ಮುಂದರಿಸಬೇಕಾದರೆ ಸರಕಾರವು ಜನತೆಯ ಸ್ವಾಧೀನಯಿರಬೇಕು ಕೊಂಗ್ರೆಸು ಜನತೆಯ ಸಂಸ್ಥೆಯಾಗಿರುತ್ತದೆ ಈ ಸರಕಾರವನ್ನು ಈಗ ಇರುವ ಪ್ರಾತಿನಿಧ್ಯ ಸಂಸ್ಥೆಯು ತತ್ವದ ಮೇರೆಗೆ ತನ್ನ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಅದು ಪ್ರಯತ್ನಿಸುತ್ತದೆ

ಸರಕಾರವನ್ನು ಹೊಸ ಸುಧಾರಣೆಯ ಮೇರೆಗೆ ಕೈಕೊಳ್ಳಬೇಕಾದರೆ ನಮ್ಮ ನ್ಯಾಯ ವಿಧಾಯಕ ಸಭೆಯಲ್ಲಿ ನಮ್ಮ ಕೊಂಗ್ರೆಸ್ಸು ಉಮೇದ್ವಾರರು ಬಹುಮತದಲ್ಲಿ ಇರಬೇಕು ಅಲ್ಲಿ ಅವರು ಬಹುಮತದಿಂದ ಇದ್ದರೆ ಸರಕಾರವು ಈ ಗ್ರಾಮೋದ್ಧಾರದ ವ ಇತರ ದೇಶೋದ್ಧಾರದ ಕೆಲಸಗಳು ಮುಂದರಿಯುವವು ಈ ಕಾರಣದಿಂದ ಕಾಂಗ್ರೆಸ್ಸು ಉಮೇದ್ವಾರರನ್ನು ಕೌನ್ಸಿಲುಗಳಿಗೆ ಹೋಗುವಂತೆ ಮಾಡುವದು ಪ್ರತಿಯೊಬ್ಬ ವ್ಯಕ್ತಿಯ ಕೆಲಸವಾಗಿರುತ್ತದೆ ಈ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯು ಬರುವ ಚುನಾವಣೆಯಲ್ಲಿ ತನ್ನ ಓಟನ್ನು ಕೊಂಗ್ರೆಸ್ಸಿಗೆ ಕೊಡಬೇಕು ಪ್ರತಿಯೊಬ್ಬನ ಮತವು ಸಹಾ ಈ ಚುನಾವಣೆಯಲ್ಲಿ ಉಪಯೋಗವುಳ್ಳದ್ದು ವ್ಯಕ್ತಿಗಳ ಮತಗಳು ಸಮುದಾಯಕವಾಗಿ ಪ್ರಯೋಜನವುಳ್ಳವುಗಳು ಕೊಂಗ್ರೆಸ್ ಈ ಮೊದಲು ಕೌನ್ಸಿಲುಗಳನ್ನು ಪ್ರವೇಶಿಸಲಿಲ್ಲ ಈಗ ೧೬ ವರ್ಷಗಳಿಂದ ಜಸ್ಟಿಸ್ ಪಾರ್ಟಿಯವರು ನಮ್ಮ ಸರಕಾರವನ್ನು ನಡಿಸಿ ನಮ್ಮ ದೇಶೋದ್ಧಾರದ ಕೆಲಸದಲ್ಲಿ ನಿಜವಾದ ತಕ್ಕದಾದ ಚೈತನ್ಯವನ್ನು ತೋರಿಸಲಿಲ್ಲ ಆಳರಸರ ಪ್ರೀತಿಗೆ ಒಳಗಾಗಿ ರಾಜಕೀಯ ಚಳವಳದಲ್ಲಿ ಅವರ ಸರಕಾರಕ್ಕೆ ಕೊಟ್ಟ ಸಹಾಯವು ನಿಂದ್ಯಾಸ್ಪದವಾಗಿರುತ್ತವೆ ಕೊಂಗ್ರೆಸ್ ದೇಶೋದ್ಧಾರದ ಕೆಲಸವನ್ನು ಮುಂದುವರಿಸುವ ಬಗ್ಗೆ ಹೊಸ ಪ್ರಯೋಗಗಳನ್ನು ಹುಡುಕುತ್ತದೆ ಕೊಂಗ್ರೆಸ್ಸಿನ ಮುಖಂಡರು ಉಜ್ವಲ ದೇಶಾಭಿಮಾನಿಗಳು, ರಾಜತಂತ್ರದಲ್ಲಿ ನಿಪುಣರು ಈ ಪ್ರಯೋಜನವಿಲ್ಲದ ಸಂಗತಿಗಳಲ್ಲಿ ಆ ರಾಜಕೀಯ ಪ್ರಯೋಗವನ್ನು ಅವರು ಬಿಟ್ಟುಬಿಡುವರು ಈಗಿನ ರಾಜಕೀಯ ತತ್ವವು ಕೌನ್ಸಿಲಿನಲ್ಲಿ ಪ್ರವೇಶವಾಗುವದು. ಕೊಂಗ್ರೆಸ್ಸು ಈ ವರೆಗೆ ದೇಶದ ಸೇವೆಯನ್ನು ಉತ್ತಮ ರೀತಿಯಲ್ಲಿ ಮಾಡಿಯದೆ ಇನ್ನು ಅದನ್ನು ಮಾಡುವುದಕ್ಕೆ ಧೀಕ್ಷೆಯನ್ನು ತಕ್ಕೊಂಡಿದೆ. ಕೌನ್ಸಿಲಿನಲ್ಲಿ ಪ್ರವೇಶವಾದ ನಂತರ ತಮಗೆ ಯೋಗ್ಯವೆಂತ ಕಂಡರೆ ಕೊಂಗ್ರೆಸ್ಸಿನವರೇ, ಮುಖ್ಯ ಪದವನ್ನು ಹೊಂದುವರು. ಶ್ರೀ, ಚಕ್ರವರ್ತಿ ರಾಜಗೋಪಾಲಾಚಾರ್ಯರು ಪ್ರಮುಖ ಮಂತ್ರಿಯಾಗಬೇಕೆಂದು ನಿಲ್ಲಲಾರರು. ಇವರು ಮಹಾತ್ಮಾ ಗಾಂಧಿಯವರ ಸ್ನೇಹಿತರು, ಪಟ್ಟಶಿಷ್ಯರು, ಮಹಾ ತ್ಯಾಗಿಗಳು. ಇವರು ಮುಖಂಡರಾಗಿ ಕೌನ್ಸಿಲಿನಲ್ಲಿದ್ದರೆ ಬರುವ ೩ ವರ್ಷಗಳಲ್ಲಿ ನಮ್ಮ ಅಧಿಪತ್ಯದ ಅಭಿವೃದ್ಧಿಯ ಮಿತಿಯನ್ನು ಹೇಳಲು ಸಾಧ್ಯವಿಲ್ಲ. ಈ ಸುಸಂಧಿಯಲ್ಲಿ ತಮ್ಮ ಮತಗಳನ್ನು ಕೊಂಗ್ರೆಸು ಪ್ರತಿನಿಧಿಗಳಿಗೆ ಕೊಡುವದು ನಮ್ಮ ಅಗತ್ಯದ ಕೆಲಸವಾಗಿರುತ್ತದೆ.

ಕೆ. ಎಲ್. ಕುಡುವ,

ಪ್ರೆಸಿಡೆಂಟ್,

ಕಾರ್ಕಳ ತಾಲೂಕು ಕಾಂ। ಪಾರ್ಲಿಮೆಂಟರಿ

ಬೋರ್ಡ್

ದಮ್ಮಿನ ಪ್ರಕಾರ ಬಹಳ ಇವೆ.

ಆದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮನಾಗಿ ಗುಣಕಾರಿಯಾಗದು ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ನೂರಾರು ದಮ್ಮಿನವರಿಗೆ ಪುರೋಹಿತ ಶ್ವಾಸಹಾರಿಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ತರದ್ದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢ ವಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು

ಎಫಿಡ್ರೀಮಿನ ಗುಳಿಗೆ ಹೊಗೆಯ ಔಷಧ ಇಂಜಕ್ಷನ್‌ಗಳಂಥ ದಮ್ಮು ತಾತ್ಕಾಲಿಕ ನಿಲ್ಲಿಸುವ ಪಷ್ಟಳ ಔಷಧಗಳು ನನಗೆ ಗೊತ್ತಿದ್ದು ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸವಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು ಅವರೆಲ್ಲರಿಗೆ ದಮ್ಮನ್ನು ನಿಧಾನ ಆದರೂ ಪೂರ್ಣ ಗುಣಮಾಡುವಂಥ ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು ದಮ್ಮು, ತರದಾಹ ಮಾಡುವ ಹಳೇ ಕೆಮ್ಮು ಕೋಡಗಳೆಮ್ಮು, ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ ಪುರೋಹಿತ ಶ್ವಾಸಹಾರಿ ಫ್ಲೇನ ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು ಅಲ್ಲದೆ ಆಮ್ಲ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಂಪೌಂಡ (ಕೆಂಪು ಪೇಕಿಂಗ್) ದ ಶಿಫಾರಸು ಮಾಡುವೆನು

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂಪಾಯಿ 2, ರೂ 3-8-0 ಮತ್ತು ರೂ 6 ಬೆಲೆಯ ಸಣ್ಣ, ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು

ಮುಂಬಯಿ ಏಜಂಟ್ಸ—

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್!

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ 2.

ಡಾ॥ ಪುರೋಹಿತ ಫಾರ್ಮಸಿ,

ಕೊಲ್ಹಾಪುರ.

ಮಗುವಿನ ಆರೋಗ್ಯಕ್ಕೆ ಮೊಲೆ ಹಾಲೇ ಶ್ರೇಷ್ಠವಾದದ್ದು

ತಾಯಿ ಜನಾದ ಪ್ರತಿಯೊಬ್ಬರೂ ತನ್ನ ಮಗುವನ್ನು ಪ್ರಕೃತಿಯ ರೀತಿಯಲ್ಲಿ ಬೆಳೆಸಬೇಕು ಆಹಾರ ದೋಷಗಳಿಂದಾಗಿ ಆಗುವ ರೋಗಗಳ ತಪ್ಪಿಸಲಿಕ್ಕೆ ಮೊಲೆ ಹಾಲಿನ ಉಣ್ಣಿಸುವಿಕೆಯೇ ಮಕ್ಕಳ ಆರೋಗ್ಯದ ಕಲಹದಿ

ಇಂಥ ಶ್ರೇಷ್ಠ ಮೊಲೆಹಾಲಿಂದ ನಿಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸಬೇಕೆಂಬುದರ ಭಾರತೀಯರಿಗೆ ಓವಲ್ಟಿನ್ನನ್ನು ಉಪಯೋಗಿಸಿದ್ದಲ್ಲಿ ತಾಯಿಂದಿರಲ್ಲಿ ಅವ ಮಕ್ಕಳಿಗೆ ಬೇಕಾದ ಶ್ರೇಷ್ಠ ಮೊಲೆಹಾಲನ್ನುಂಟು ಮಾಡುತ್ತದ . ಏಕೆ ಓವಲ್ಟಿನ್‌ನಲ್ಲಿ ಅಂಥಾ ಪುಷ್ಟಿಕ್ಷೀರ ಶಕ್ತಿ ರವುದು ಇದನ್ನು ಎಳೇ ಮಕ್ಕಳ ತಾಯಿಂದಿರು ಕುಡಿದಲ್ಲಿ ಅವರಿಗೆ ಶಕ್ತಿ ಚೈತನ್ಯಗಳುಂಟಾಗುವುದು

ಓವಲ್ಟಿನ್ ಶುದ್ಧವಾದ ಪ್ರಕೃತಿಯ ತಯಾರಿಕೆಯಾಗಿದ್ದು ಆದರಲ್ಲಿ ಶಕ್ತಿ ಬಾರ್ಲಿ ಸತ್ವವೂ ದನದ ಕೆನೆ ಹಾಲು ಕೂಡಿದೆ ಶಕ್ತಿ ಆರೋಗ್ಯಗಳನ್ನು ಬೆಳೆಸಬೇಕಾಗುವ ಎಲ್ಲ ಪುಷ್ಟಿಕ ಆಹಾರಗಳು ಅದರಲ್ಲಿ ಕೂಡಿಕೊಂಡಿವೆ ಓವಲ್ಟಿನ್ನು ಪದಕೋಶ ಬದಲು ... ದ್ರವ್ಯಾಲುಗಳನ್ನು ಕೃಷಿಸಿ

ಓವಲ್‌ಟಿನ್

ತಾಯಿಂದಿರಿಗೆ ಮಕ್ಕಳನ್ನು ಮೊಲೆಯುಣ್ಣಿಸಿ ಬೆಳೆಸ ಲಿಕ್ಕೆ ಶಕ್ತಿಯನ್ನು ಕೊಡುತ್ತದೆ

OVALTINE

ಟಾನಿಕ್ ಆಹಾರ ಪಾನೀಯ—

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರೆಕುತ್ತದೆ

ಏಜಂಟರು —ಜೇಮ್ಸ್ ರೈಟ್, 85 ಎ ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ

OV 403

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 7% 1 Year 6% For 6 months 5½ 3 months 4½%

Auction Chit Funds ranging from Rs 100—0—0 run regularly on systematic lines. Unique Banking facilities to Businessmen and interested Public.

Apply for particulars— **K. R. GURU,** *Managing Director*

ಯೂರೋಪಿನಲ್ಲಿ ಹಿಂದೂ ಮತ ಪ್ರಚಾರ

ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವ

ಐರೋಪ್ಯದಲ್ಲಿ ಅವರ ತತ್ವಬೋಧೆ.

ಶ್ರೀ ರಾಮಕೃಷ್ಣರ ಶತಮಾನೋತ್ಸವವು ದೇಶ ವಿದೇಶಗಳಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಭಾರತದಲ್ಲಿಲ್ಲಾ ನವ ಹುರುಪು, ನವ ಉತ್ಸಾಹವೂ ಕಾತುರತೆಯೂ, ತೋರಿಬರುತ್ತದೆ ಈ ಸಮಯದಲ್ಲಿ ಪಾಶ್ಚಾತ್ಯ ದೇಶಗಳಲ್ಲಿಯೂ ಭಾರತೀಯ ಮಹಾತ್ಮರುಗಳ ಜೀವನ ಚರಿತ್ರೆಗಳಿಗೂ, ಅವರ ತತ್ವಬೋಧೆಗಳಿಗಾಗಿಯೂ ಒಂದು ಕಾತುರತೆಯು ಎದ್ದಿರುವುದು

ಇಟಲಿಯ ಪ್ರಾಮುಖ್ಯ ನಗರ ಒಂದರಲ್ಲಿರುವ ಒಂದು ಪ್ರೊಟೆಸ್ಟೆಂಟ್ ಕ್ರೈಸ್ತರ ದೇವಾಲಯದಲ್ಲಿ, ಅಲ್ಲಿನ ಮುಖ್ಯ ಬೋಧಕರು ಫ್ರೆಂಚ ಭಾಷೆಯಲ್ಲಿ ಬರೆದ ಶ್ರೀ ರಾಮಕೃಷ್ಣರ ಜೀವನ ಮತ್ತು ಬೋಧೆಗಳುಳ್ಳ ಒಂದು ಪುಸ್ತಕವನ್ನು ತ್ವರಿತವಾಗಿ ತರಿಸಿ, ಅದರಲ್ಲಿ ಕೆಲವು ತತ್ವಗಳನ್ನು ಅಂದಿನ ಬೋಧನಸಭೆಯ ಮುಖ್ಯ ವಸ್ತುವಾಗಿಟ್ಟುಕೊಂಡಿದ್ದರು 'ಸ್ವಾನುಭವದ ವಿಶೇಷತೆಯ ಕುರಿತು ಭಾರತೀಯ ತತ್ವಶಾಸ್ತ್ರಗಳು ಎಷ್ಟು ಸಮಂಜಸವಾಗಿ ಬೋಧಿಸುತ್ತವೆಂದು ಆ ಸಭೆಯಲ್ಲಿ ಸಾರಿಹೇಳಲಾಯಿತು ಮುಕ್ತಿಸಾಧನೆಗೆ ಒಂದು ಮಾರ್ಗ ಎಂಬ ತತ್ವವನ್ನೂ ಅದೇ ಸಭೆಯಲ್ಲಿ ಸಾರಲಾಯಿತು

ಪೆಲೆಸ್ತೀನದಲ್ಲಿನ ಅರಬರ ದಂಗೆಯ ನಾಯಕನಾದ ಫೌಜಿ ಕವಾಕ್ಜಿ ಎಂಬ ಮಹಸೀಯನಿವನು ಇವನನ್ನು ಹಿಡಿದುಕೊಟ್ಟವರಿಗೆ ೫೦೦ ಪವನು ಇನಾಮಾಗಿ ಬ್ರಿಟಿಷ ಸರಕಾರದವರು ಪ್ರಕಟಗೊಳಿಸಿದರಂತೆ ಅದೇ ಪ್ರಕಾರ ಇವನು ಕೂಡಾ ಅಲ್ಲಿನ ಬ್ರಿಟಿಷ ಕಪ್ತಾನನೊಬ್ಬನ ತಲೆಯನ್ನು ತಂದುಕೊಡುವವನಿಗೆ ೮೦೦೦ ಪವನುಗಳನ್ನು ಕೊಡುತ್ತೇನೆಂದು ಸಾರಿದನಂತೆ ಆದರೆ ಇವನು ಸಿಕ್ಕಬೀಳುವ ದಂಗೆಖೋರನಲ್ಲ ಈಗ ಬಗ್ದಾದಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವನು

ಬೇಡುವವರ ಪತ್ರಿಕೆ

ಹಂಗೇರಿ ದೇಶದಲ್ಲಿ ಭಿಕ್ಷೆ ಬೇಡಿ ಜೀವನ ಮಾಡುವವರು ಒಟ್ಟುಗೂಡಿ ಒಂದು ವಾರ್ತಾಪತ್ರಿಕೆಯನ್ನು ಹೊರಡಿಸಿರುವರು 'ಬುಡಾಪೆಸ್ಟ ಬೆಗ್ಗರ್ಸ್ ಬುಲೆಟಿನ್' ಎಂದು ಆ ಪತ್ರಿಕೆಯ ಹೆಸರು ಬುಡಾಪೆಸ್ಟ್ ಎಂಬುದು ಹಂಗೇರಿಯ ಕೇಂದ್ರ ನಗರ ನಗರದ ಭಿಕ್ಷುಕರ ಸೇವೆ ಮಾಡಬೇಕೆಂಬುದೇ ಆ ಪತ್ರಿಕೆಯ ಉದ್ದೇಶವಾಗಿರುತ್ತದೆ ಭಿಕ್ಷುಕ ವೃತ್ತಿ ಬಿಟ್ಟಿರುವ ಕೆಲವು ಭಿಕ್ಷುಗಳು, ಆ ವೃತ್ತಿಗೆ ಸಾಧನವಾಗುವ ಸಾಮಾನುಗಳನ್ನು ಹೊಸತಾಗಿ ಭಿಕ್ಷೆಗೆ ಇಳಿದವರಿಗೆ ಬೇಕಾದಲ್ಲಿ, ಬಹಳ ಕಮ್ಮಿ ಕ್ರಯಕ್ಕೆ ಕೊಡುವರೆಂಬ ಜಾಹೀರಾತುಗಳು ಆ ಪತ್ರಿಕೆಯಲಿ ತುಂಬಾ ಇವೆ ಗಾಜಿನ ಕಣ್ಣುಗಳು ಹಳೇ ವಸ್ತ್ರಗಳು, ಭಿಕ್ಷೆ ಪಾತ್ರೆಗಳು, ವಾಹನಗಳು, ಇವೆಲ್ಲಾ ಕ್ರಯಕ್ಕೆ ಸಿಗುತ್ತವೆ ಕೈವಾದ್ಯಗಳ ಮಂಗಗಳು, ಗಿಳಿಗಳು ಹಾವುಗಳು ಮತ್ತು ಭಿಕ್ಷಾ ಸಾಧನಗಳಾದ ಅನೇಕ ತರದ ವಸ್ತುಗಳೂ ದಿನ, ವಾರ ಅಥವಾ ತಿಂಗಳ ಬಾಡಿಗೆಗೆ ಸಿಗುತ್ತವೆಂಬ ಜಾಹೀರಾತುಗಳೂ ಅದರಲ್ಲಿವೆ ಪತ್ರಿಕೆಯ ಸಂಪಾದಕನು ಬೇಡುವವರಿಗೆ ಬೇಕಾದ ಸಲಹೆಗಳನ್ನು ಕೊಟ್ಟು ಅವರು ಜನರಲ್ಲಿ ಕರುಣೆ ಹುಟ್ಟಿಸುವ ವಿಧಾನಗಳನ್ನು ಉಪಯೋಗಿಸಬೇಕೆಂದು ಬೋಧನೆ ಕೊಡುವನು ಒಬ್ಬ ಬೇಡುವವನಿಗೆ ಹದಿನೇಳು ಜನ ಹೆಂಡತಿಯರಿಂದ ಸುಮಾರು ... ಮಕ್ಕಳಿದ್ದು ... ಅವನು ... ಸಹಾಯವನ್ನು ಕೇಳಿ ... ಬರೆಯುವನಂತೆ ...

ಜಪಾನಿನಲ್ಲಿ ಚಹಾಪಾನ ಮಾಡುವುದು ಒಂದು ಶ್ರದ್ಧೆಯುಕ್ತ ಕಾರ್ಯವಾಗಿದೆ ಅಲ್ಲಿನ ... ದರ್ಜೆಯೊಬ್ಬ ಸಿದ್ದನೆ ... ಎಂದು ಹಬ್ಬದ ದಿನಗಳಲಿ ಅತಿಥಿಗಳಿಗೆ ಚಹಾವನ್ನು ಹಂಚಲು ಅವನು ಒಂದು ಸಾವಿರ ಪವನು ಬೆಲೆಬಾಳುವ ಒಂದು ಬಂಗಾರದ ಪಾತ್ರೆಯನ್ನು ಮಾಡಿಸಿದನು ಬರೀ ಚಹಾ ಹಂಚಲಿಕ್ಕೆ

ಮಾತನ್ನಾಡುವುದು ಆರೋಗ್ಯಕರ

ಶ್ವಾಸಕೋಶ ಪರೀಕ್ಷಾ ವಿಶಾರದರೊಬ್ಬರು, ಹೆಚ್ಚು ಮಾತನ್ನಾಡುವುದು ಒಂದ ಒಳ್ಳೆ ದೇಹಾರೋಗ್ಯಕರವಾದದೆಂದು ಹೇಳುತ್ತಾರೆ ಶ್ವಾಸಕೋಶಗಳ ದುರ್ಬಲತೆಯಿಂದ ಅನೇಕ ರೋಗಗಳು ಉಂಟಾಗುತ್ತವೆ ಹೆಚ್ಚಾಗಿ ಮಾತನ್ನಾಡುತ್ತಿದ್ದರೆ ಈ ಕೋಮಲ ಅವಯವಗಳು ಶಕ್ತಿ ಹೊಂದುತ್ತವೆ ಹೆಂಗುಸರು ಬಹಳ ಮಾತುಪ್ರಿಯರಾಗಿರುವುದರಿಂದ ಇಂದು ಜಗತ್ತಿನೊಳಗೆ ಗಂಡಸರ ಸಂಖ್ಯೆಗಿಂತ ಹೆಂಗುಸರದ್ದೇ ಜಾಸ್ತಿಯಾಗಿರುತ್ತದೆ ಇದು ಹೆಚ್ಚು ಮಾತನ್ನಾಡುದುದರ ಪರಿಣಾಮವೆಂದು ಅವರು ತಮ್ಮ ವಾದವನ್ನು ಸಮರ್ಥಿಸುತ್ತಿರುವರು

ಜರ್ಮನಿಯಲ್ಲಿ ಗೃಹ ಶಿಕ್ಷಣಕ್ಕೆ ಡಿಗ್ರಿ

ಜರ್ಮನ್ ಸ್ತ್ರೀಯರಲ್ಲಿ ಗೃಹಶಿಕ್ಷಣ ಪ್ರಚಾರವನ್ನು ಮಾಡಬೇಕೆಂದು ಪ್ರಯತ್ನಗಳು ನಡೆಯುತ್ತಿವೆ 5 ವರ್ಷಗಳ ಗೃಹ ವ್ಯವಸ್ಥೆಗಳ ಅನುಭವವಿದ್ದವಳೊಬ್ಬಳು ಮಾತ್ರ ಈ ವಿಶೇಷ ತರಬೇತಿ ಶಿಕ್ಷಣಕ್ಕೆ ಅರ್ಹಳಾಗುವಳು ಅವಳ ವಯಸ್ಸು 24ಕ್ಕೆ ಕಮ್ಮಿ ಇರಬಾರದು. ಈ ತರಬೇತಿಯಲ್ಲಿ ಯಶಸ್ವಿಯಾಗಿ ತೇರ್ಗಡೆ ಹೊಂದಿದರೆ ಅವಳಿಗೆ ಒಂದು ಬಿರುದು ಸಿಗುವುದು.

ಅದೃಷ್ಟ ಚುಂಬನ

ಫ್ರಾನ್ಸಿನ ಪ್ರಾಮುಖ್ಯ ನಗರಗಳಲ್ಲಿ ... ನರ್ತಕಿಯರು, ನಟಿಯರು ಮತ್ತು ಉದ್ಯೋಗದಲ್ಲಿದ್ದ ತರುಣಿಯರು, ನವವರ್ಷದ ಪ್ರಾರಂಭ ದಿನದಲ್ಲಿ ಬೆಂಕಿ ಆರಿಸುವ ಇಲಾಖೆಯ ತರುಣ ಅಧಿಕಾರಿಗಳ ಚುಂಬನವನ್ನು ತೆಗೆದುಕೊಳ್ಳಲು ಬಹಳ ಪ್ರಯತ್ನಪಡುತ್ತಾರಂತೆ ಆ ದಿನದಲ್ಲಿ ಅವನಿಗೆ ಮೊದಲನೇ ಚುಂಬನ ಕೊಟ್ಟವಳಿಗೆ ಉದ್ಯೋಗದಲ್ಲಿ ಬಡ್ತಿ ಸಿಕ್ಕಿ ಸಂಬಳ ಹೆಚ್ಚುವ ಪುಣ್ಯ ಬರುತ್ತದೆಂದು ಅವರ ನಂಬಿಕೆ

ಅಮೇರಿಕದಲ್ಲಿ ನೆರೆಹಾವಳಿಯ ನಷ್ಟ

ನೆರೆಯ ಹಾವಳಿಯಿಂದ ಆಕಸ್ಮಿಕ ಮೃತ್ಯು ನಷ್ಟಗಳು

ಒಸೆಯೋಲಾ (ಆರ್ಕಾನ್‌ಸಾಸ್) ಯೆಂಬಲ್ಲಿ ಮೃತಪಟ್ಟವರು 35 ಮಂದಿ ಮನೆ ಮಾರು ಇಲ್ಲದವರು 45 ಸಾವಿರ

ಇವಾನ್ಸ್‌ವಿಲ್ಲೆ (ಇಂಡಿಯಾನಾ ಎಂಬಲ್ಲಿ) ಮೃತಪಟ್ಟವರು 11, ಮನೆಯಿಲ್ಲದೆ ಕಷ್ಟಪಡುವವರು 26½ ಸಾವಿರ, ನಷ್ಟವು ಸಾಧಾರಣ 10ರಿಂದ ಮಿಲಿಯ ಪವನಗಳಿಗೆ ಮಿಕ್ಕಿರುತ್ತದೆ

ಹಂಟಿಂಗ್‌ಟನ್ (ವೆಸ್ಟ್‌ವಿರ್ಜೀನಿಯ ವೆಂಬಲ್ಲಿ) ಎರ್ಜೀನಿಯದಲ್ಲಿ ಮೃತಪಟ್ಟವರು 14 ಮಂದಿ, ಮನೆಯಿಲ್ಲದೆ ಇರುವವರು 10 ಸಾವಿರ ನಷ್ಟವು ಸುಮಾರು 1 ಕೋಟಿ 2 ಮಿಲಿಯ ಪೌಂಡಗಳಿಗೆ ಮಿಕ್ಕಿರುತ್ತದೆ

ಸಿನ್ಸಿನಾಟಿಯದಲ್ಲಿ ಮೃತಪಟ್ಟವರು 14, ದೇಶಕ್ಕೆ ಸುಮಾರು 3 ಕೋಟಿ ಪೌಂಡುಗಳಿಗೆ ಮಿಕ್ಕಿರುತ್ತದೆ ಸರಕಾರದವರಿಗೆ 5 ಕೋಟಿ 4 ಮಿಲಿಯ ಪೌಂಡಗಳಷ್ಟು ನಷ್ಟವಾಗಿರುತ್ತದೆ

ನೆರೆಯ ಹಾವಳಿಯು ಬಹು ಜೋರಾಗಿದ್ದುದರಿಂದ ಇಷ್ಟು ನಷ್ಟವಾಯಿತು ಎಷ್ಟೋ ಜನರು ಬಹುತರದ ಸಂಕಷ್ಟಗಳಿಗೊಳಗಾದರು ಸರಕಾರದವರು ಈ ಬಡ ಜನರಿಗೆ ಬಹಳ ಮಟ್ಟಿಗೆ ಸಹಾಯವನ್ನು ಮಾಡುತ್ತಾರೆ

ಅಮೇರಿಕದ ದೇಸಂತ ಸೆಟ್ಸನ ಗ್ಲಾಸ್ಗೋ ನಗರದಲ್ಲಿರುವ ಈ ಬಾಲಕನ ಹೆಸರ ಜಾಸೆಫ್ ಗ... ಎಂದ — ಇವನ ಭಾರವು ... ದಲ್ಲಿದ್ದಾನೆ ಅವನ ಎತ್ತರವು ... ಅಂಗುಲವಿದ್ದು ಅವನ ಪ್ರಾಯವು ಮಾತ್ರ ಬರೀ ... ವರ್ಷಗಳಷ್ಟೆ ... ರಾತ್ತಲುಗಳಷ್ಟು ಅವನ ಭಾರವು ಹೆಚ್ಚುತ್ತಲಿದೆಯಂತೆ

ವಧುವಿನ ಅರಿಕೆ

ಯುಗೊಸ್ಲೋವಿಯದಲ್ಲಿ ಒಬ್ಬ ತರುಣ ಬ್ರಹ್ಮಚಾರಿ ಮದುವೆಯಾಗಬೇಕೆಂಬ ಆಶೆ ಅವನಿಗಾಗಿದೆ ಆದರೆ ಆತನು ಕೆಲವು ಶರ್ತಗಳನ್ನು ಪ್ರಕಟಿಸಿದ್ದಾನೆ ಹುಡುಗಿಯು ಸರ್ಬಿಯಾ ದೇಶಸ್ಥಳಾಗಿದ್ದು ನ್ಯಾಯ ... ಗಿರಬೇಕು, ಸುಂದರಿಯಾಗಿದ್ದು, ... ಗಿರಬೇಕು, ಅವಳ ತಲೆಕೂದಲು ... ಬೇಕು, ಆರೋಗ್ಯವು ಅವಳಲ್ಲಿ ಚೆನ್ನಾಗಿದ್ದು, ಒಳ್ಳೇ ಮನೋಸ್ಥಿತಿಯವಳಾಗಿರಬೇಕು, ಅವಳ ಪೂರ್ವಜೀವನವು ಕಳಂಕರಹಿತವಾದುದಾಗಿದ್ದು ಅವಳು ಬಡವಳಾಗಿ ಅಶಿಕ್ಷಿತೆಯಾಗಿದ್ದರೂ ಚಿಂತಿಲ್ಲ ಆದರೆ ಅವಳ ಎತ್ತರವು ... ಅಡಿ ... ಅಂಗುಲಕ್ಕೆ ಕಮ್ಮಿ ಇರಬಾರದು ಇಷ್ಟೆಲ್ಲ ಆ ತರುಣನ ಶರ್ತಗಳು ಇವುಗಳನ್ನು ಪೂರೈಸುವ ತರುಣಿಗೇನೇ ಆತನು ಮದುವೆಯಾಗುವನಂತೆ. ಯುಗೊಸ್ಲೋವಿಯದಲ್ಲಿರುವ ... ಲಕ್ಷ ಅವಿವಾಹಿತ ತರುಣಿಯರು ಈ ಶರ್ತಗಳನ್ನು ಪೂರೈಸಿ ಒಬ್ಬಳಾದರೂ ಆತನ ಪತ್ನಿಯಾಗಬೇಕೆಂದಿರುವರಂತೆ

ಜಿರಾಫೆ ಕತ್ತಿನ ಹೆಂಗಸು

ಬರ್ಮಾದೇಶದ ಈ ಒಂದು ಜಾತಿಯ ಸ್ತ್ರೀಯರು ಕುತ್ತಿಗೆಯನ್ನು ಬೇಕೆಂತಲೇ ಉದ್ದವಾಗಿ ಬೆಳೆಸಿದ್ದುದಾಗಿರುತ್ತದೆ ಅದಕ್ಕಾಗಿ ಅವಳ ಕತ್ತಿನಲ್ಲಿ ಹಾಕಿದ ಕಬ್ಬಿಣದ ಬಳೆಗಳನ್ನು ಕಾಣಬಹುದು

ಭಿಕ್ಷುಕರ ಸಂಸ್ಥೆ

ಹದಿನೇಳು ಅಂಧ ಭಿಕ್ಷುಕರಿಂದ ನಡೆಸಲ್ಪಡುತ್ತಿದ್ದ 'ಬೆಗ್ಗರ್ಸ್ ಲಿಮಿಟೆಡ್' ಎಂಬೀ ಸಂಸ್ಥೆಯು ಕೆಲವು ಸಮಯ ಹಿಂದೆ ಟರ್ಕಿಯಲ್ಲಿ ಪ್ರಾರಂಭಿಸಲ್ಪಟ್ಟಿದ್ದು ಅಧಿಕಾರಿಗಳು ಅದನ್ನು ರದ್ದುಮಾಡಿದ್ದರು ಆ ಸಂಸ್ಥೆಯ ಉದ್ದೇಶವೆಂದರೆ ... ಸಂಬಳಕ್ಕೆ ಇಟ್ಟುಕೊಂಡು ಅವರು ಬೇಡಿ ತಂದ ಹಣವನ್ನು ... ದಿವಸ ... ತಿಂಗಳ ... ಸಂಬಳ ಕೊಟ್ಟು ಲಾಭವನ್ನು ... ಅವರ ಹತ್ತಿರ ಭಿಕ್ಷಾ ಸಾಧನೆಗೆ ಬೇಕಾದ ... ತರದ ... ಗಳಿದ್ದುವು ಹೀಗೆ ಒಂದು ವರ್ಷದಲಿ ಅವರು ... ಸಾವಿರ ಪವನುಗಳಷ್ಟು ... ಅವರಲ್ಲಿ ... ತಮ್ಮ ... ಗಳನ್ನು ... ಇಬ್ಬರು ಮಾತ್ರ ... ಉಳಿದವರು ... ಅಧಿಕಾರಿಗಳ ... ಇದ್ದ ... ಸಂಸ್ಥೆಯ ಹಣವನ್ನು ಹಂಚಿ ಉಳಿದವರಿಗೆ ... ಕೆಲಸಕ್ಕೆ ಹಚ್ಚಿದರು.

ವಿಲಾಯತಿಯಲ್ಲಿ ವೃತ್ತಪತ್ರಿಕೆಗಳ ಮಾರಾಟ

ಇಂಗ್ಲೆಂಡಿನಲ್ಲಿ ಇಂದ ಒಂದ ವಾರಕ್ಕೆ ... ಮಿಲಿಯ ... ಪತ್ರಿಕೆಗಳ ಮಾರಾಟವಾಗುತ್ತವೆ ... ದೈನಿಕ ಪತ್ರಿಕೆಗಳು ಅಲ್ಲಿ ದಿನಕ್ಕೆ ಪತಿಯೊಂದರ ... ಮಿಲಿಯಗಳಷ್ಟು ಮಾರಿಹೋಗುತ್ತವೆ ಅಲ್ಲಿಯ ವಾರಪತ್ರಿಕೆಗಳ ಒಂದು ವಾರಕ್ಕೆ ... ಮಿಲಿಯಗಳಷ್ಟು ಖರ್ಚಾಗುತ್ತವಂತೆ

ಇಂಗ್ಲೆಂಡಿನಲ್ಲಿ ಒದವರಿಗೆ ಜೈಲಿಲ್ಲ

ಕೆಲವು ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ೧೫,೦೦೦ಕ್ಕೆ ಕಮ್ಮಿಯಾಗಿ ಜೈಲು ಸೇರುವವರಿರಲಿಲ್ಲ ಆದರೆ ಇಂದು ಅದೇ ಸಂಖ್ಯೆಯು ... ಸಾವಿರಕ್ಕೆ ಇಳಿದಿದೆ ಕಾರಣ ಇಂಗ್ಲೆಂಡಿನ ಹೊಸ ಕಾನೂನು ಪ್ರಕಾರ ಶಿಕ್ಷೆಯಹೊಂದುವನು ತೀರ ಬಡವನೆಂದು ಕಂಡುಬಂದಲ್ಲಿ, ಅವನಿಗೆ ಶಿಕ್ಷೆ ವಿಧಿಸಬಾರದೆಂದು ನ್ಯಾಯಾಧಿಕಾರಿಗಳಿಗೆ ಆಜ್ಞೆ ಇದೆ. ಹೀಗಾದಿ ಅಪರಾಧಿಗಳೆಂದು ಕಂಡುಬಂದವರಲ್ಲಿ ಯಾವ ಸೊತ್ತು ಇರದಲ್ಲಿ ಅವರು ಶಿಕ್ಷೆಗೆ ಗುರಿಯಾಗಲಾರರು, ಸೊತ್ತು ಇದ್ದು ಅದನ್ನು ತೆರಲಾರದವರು ಮಾತ್ರ ಜೈಲು ಸೇರಲೇ ಬೇಕಿತ್ತು.

THE 'POPULAR' AGAIN!

NOW WITH

NEW PLANS

Progressive Benefit Assurance
Deferred Assurance for Children
Special whole Life Policy
Guaranteed Profit Policy

ADDITIONAL PRIVILEGES

Extended Assurance, Accident Indemnity, Savings Bank Arrangement Loans Considered up-to Paid-up Values, & A special Rebate of as. 8/ and Re 1/ per Rs. 1000/ for Assurances of over Rs 3000/ and Rs 5000 respectively

BETTER TERMS

Direct Head Office Connection, Heriditary Renewal Commission Renewals after Termination and other very liberal features.

Economic Management

Bonus Declared Rs. 10/ per annum per Rs 1000/

Gilt-Edged Investments

Chief and General Agencies invited for unrepresented areas

Experienced men preferred

Apply right now — The MANAGING DIRECTOR,

The Popular Insurance Company Ltd., H. O. Mangalore.



ಭಯಂಕರ ವಿಷಕಾರಿ!

ಸರ್ಪದ ವಿಷವು ತಕ್ಷಣ ಮರಣವನ್ನುಂಟುಮಾಡುತ್ತದೆ ದೌರ್ಬಲ್ಯವು ಅಷ್ಟೇ ಹಾನಿಕರವಾದದ್ದು. ಇದು ಕ್ರಮೇಣ ಮಾನುಷಿಕ ದೇಹ ನಿರ್ಮಾಣವನ್ನು ಸೂರೆಗೈಯುತ್ತದೆ ಸರ್ಪ ಕಡಿತಕ್ಕೆ ಯಾವ ಗುಣಕಾರಿಯೂ ಇಲ್ಲ ಆದರೆ ಅದೃಷ್ಟವಶಾತ್ ದೌರ್ಬಲ್ಯತೆಗೆ ಒಂದೇ ಔಷಧಿ ಇದೆ ಅದೇ

ಅಮೃತ

ಇದು ದೌರ್ಬಲ್ಯತೆಯನ್ನು ಮೈಲುಗಳಷ್ಟು ದೂರಮಾಡಿ, ಉತ್ತಮ ದೇಹಶಕ್ತಿಯನ್ನೂ ಮಾನಸಿಕ ಶಕ್ತಿಯನ್ನೂ ಕೊಡುತ್ತದೆ

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ

ತಯಾರಿಸುವವರು — ಕೇಸರಿ ಕುಟೀರಂ ಎಗ್ಮೋರ್, ಮದರಾಸು

ಮಂಗಳೂರ ಪ್ರವರ್ತಕರು — ದಿ. ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

TEST YOUR EYES

By the Electro Ophthalmoscope



All Varities of Frames & Lenses.

AT

The Mangalore Trading Association Ltd.

Sight Testing Ophthalmic Opticians,
Car Street, MANGALORE.

'Dil Roz' (Regd)

'Dil Roz' is a sure cure for Oriental sores local sores, all kinds of deep rooted sores, skin eruptions, Pimples, Eczema, Ringworm Sinus, Fistula auxillary-Abscess

There is no need of dressing the wounds nor are bathe prohibited

Price Rs. 2
Postage extra

TAHIR DIN,
Anarkali, LAHORE



ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ

ಯಲ್ಲೇ ಕೊಡಿರಿ.

BEHAR CHEMICAL WORKS, BHAGALPUR

ಗೊನೊಕ್ಯೂರು

ಕೆಟ್ಟ ಬಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ದಿವ್ಯವಾದ ಔಷಧವಾಗಿದೆ ಒಂದೇ ದಿನದ ಔಷಧಿ ಉಪಯೋಗದಿಂದ ಗುಣ ಕಂಡುಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ—ಧಾತು ದಪ್ಪವಿದ್ದು ಸರದಿ ಬಣ್ಣವಾಗಿ ಹೋಗುವುದು ಶಕ್ತಿಗಂಧಿಗಳ ಸಂಬಂಧವಾಗಿ ಆತೀಯವಾದ ಗುಳ್ಳೆಗಳು ಏಳೋಣ ಮೂತ್ರವಾಗುವಾಗ್ಗೆ ಉರಿಯುವುದು ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧ ಸೀಸೆ 1ಕ್ಕೆ ರೂ 2—0—0

ವ್ಯಾಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ ವಿದ್ಯಾರ್ಥಿಗಳು ತಮ್ಮ ಹಿರಿ ವಿಳೆಯಲ್ಲಿಯೇ ಅಶಕ್ತರಾಗಿದ್ದು ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಿಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕಶಕ್ತಿಯನ್ನು ಕಳೆದುಕೊಂಡು ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ, ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಶಕ್ತಿ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ, 2-0-0

ಏಜೆಂಟರು — ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು
ಮಂಗಳೂರು.

"ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು. ಅದನ್ನು ನಾನು ಹೊಂದಲೇ ಬೇಕು" ಎಂಬ ಲೋಕಮಾನ್ಯರ ಅಮರವಾಣಿಯು ಮೂವತ್ತೈದು ಕೋಟಿ ಭಾರತೀಯರ ಕಿವಿಗೆ ಮುಟ್ಟಿರುವುದು. ಆದರೆ ಈ ಬಗ್ಗೆ ಪ್ರಯತ್ನವು ನಡೆದಿರುವುದೇ? ಯಾವ ಪುಣ್ಯ ಸುವರ್ಣ ಭೂಮಿಯು ಅತುಲ ಐಶ್ವರ್ಯದಿಂದಲೂ, ಧೀರ ಯೋಧರಿಂದಲೂ, ಯೋಗ್ಯ ಮೇಧಾವಿಗಳಿಂದಲೂ ಪರಿವೇಷ್ಟಿತಳಾಗಿ ಸ್ವಾತಂತ್ರ್ಯ ಶಿಖರದಲ್ಲಿ ಮೆರೆದು ಹಲವು ಸಹಸ್ರ ವರ್ಷಗಳಿಂದ ಮೆರೆದಿದ್ದಳೋ ಅದೇ ಭಾರತಮಾತೆಯು ಈಗ ಕೆಲವೇ ವರ್ಷಗಳಿಂದ ಮ್ಲೇಂಛರ ಅಧೀನಳಾಗಿ ಮೂವತ್ತೈದು ಕೋಟಿ ಮಕ್ಕಳ ಸಮೇತ ದಾಸ್ಯ ಶೃಂಖಲೆಗಳಿಂದ ಬಿಗಿಯಲ್ಪಟ್ಟಿರುವಳು ಹಲವು ಸ್ವಾರ್ಥಿ ವಿಶ್ವಾಸಘಾತಕರ ಕುಟಿಲನೀತಿಗಳಿಂದ ಹೀಗಾಯಿತೇ ಹೊರತು ಅಜೇಯವಾದ ಭಾರತ ಯೋಧರಿಗೆ ಇದಿರಾಗುವ ವೈರಿಸಮೂಹವು ಅದೆಲ್ಲಿರುವುದು? ಗೃಹಕಲಹವೇ ಅನಾದಿಕಾಲದಿಂದಲೂ ಭಾರತಮಾತೆಯನ್ನು ಗೋಳಿಡಿಸಿ ಹೀನಸ್ಥಿತಿಗೆ ತಂದದ್ದಾಗಿರುವುದು ಆದರೆ ಅದಕ್ಕೆ ಬೇಕಾದ ವಿಷಬೀಜಗಳು ಮೂರನೇಯವರಿಂದ ಬಿತ್ತಲ್ಪಟ್ಟಿರುವುದಾದರೂ ತಿಳಿದೂ, ತಿಳಿಯದವರಂತೆ ನಾವು ಆಚರಿಸುವುದರಿಂದಲೇ ನಾವು ಬಂಧಿಗಳಾಗಿದ್ದೇವೆ ಇದು ಸ್ವಾತಂತ್ರ್ಯದ ಜನ್ಮ ಇರುವ ಪ್ರತೀ ಒಬ್ಬ ಭಾರತೀಯನಿಗೆ ಲಜ್ಜಾಸ್ಪದವಲ್ಲವೇ?

ಯಾವ ಸ್ವಾತಂತ್ರ್ಯವನ್ನು ಗಳಿಸಲಿಕ್ಕಾಗಿ ವೀರ ಜಪಾನರು ರಕ್ತವನ್ನು ಕಾಲುವೆಗಳಾಗಿ ಹರಿಸಿದರೋ, ಯಾವ ಸ್ವಾಭಿಮಾನಕ್ಕಾಗಿ ಜರ್ಮನರು ಫಿರಂಗಿಗಳ ಬಾಯಿಗೆದುರಾಗಿ ಸರ್ವಸ್ವವನ್ನು ಕಳಕೊಂಡರೋ, ಯಾವ ದೇಶಾಭಿಮಾನಕ್ಕಾಗಿ ತುರ್ಕಿಯವರು ದೇಹಗಳ ಪರಿವೆಯಿಲ್ಲದೆ ಸರ್ವಸ್ವವನ್ನು ಕಳಕೊಂಡರೋ, ಯಾವ ಸ್ವಾತಂತ್ರ್ಯದ ರುಚಿಗಾಗಿ ಸ್ಪೇಯಿನ್ ದೇಶದವರು ದಂಗೆಗಾರರ ವಿಮಾನಗಳಿಂದ ಫಿರಂಗಿಗಳ ಘಾತಕಕ್ಕೀಡಾಗಿ ತಮ್ಮ ದೇಹಗಳನ್ನು ಸಮರ್ಪಿಸುತ್ತಿರುವರೋ ಅದೇ ಸ್ವಾತಂತ್ರ್ಯಕ್ಕಾಗಿ ಭಾರತೀಯರಾದ ನಾವು ಪ್ರಾಣವನ್ನು ಕೊಡಬೇಕಾಗಿಲ್ಲ ಸೆರೆಮನೆಗಳಿಗೆ ಹೋಗಬೇಕಾಗಿಲ್ಲ ಆದರೆ ಇದೇ ಬರುವ ಎಸೆಂಬ್ಲಿ ಇಲೆಕ್ಷನಿನ ಸಮಯ ನಮಗಿರುವ ಒಂದೇ ಒಂದು ಓಟನ್ನು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಕೌನ್ಸಿಲ್ ವ ಎಸೆಂಬ್ಲಿಗೆ ಹೋಗಿ ಕೆಲಸಮಾಡುವ ಕಾಂಗ್ರೆಸ್ ಉಮೇದ್ವಾರರಿಗೆ ಕೊಡುವುದಾಗಿದೆ ತಮ್ಮ ತಮ್ಮ ದೇಶದ ಮೇಲ್ಮೆಗಾಗಿ ಕೆಲವೇ ವರ್ಷಗಳ ಸಾಧನೆಯಿಂದ ಮೇಲೆ ಕಾಣಿಸಿದ ಜರ್ಮನಿ, ಜಪಾನ್ ಹಾಗೂ ತುರ್ಕಿಸ್ಥಾನವು ಯಾವ ವೈಭವದಲ್ಲಿ ಮೆರೆಯುವುದೋ ಎಂಬುದನ್ನು ಪರಿಶೀಲಿಸೋಣ ಅದೇ ದೇಶಗಳಲ್ಲಿ ಇರುವ ಸಹಾಯ ಅನುಕೂಲತೆಗಳು ಸವಿಸ್ಮ ಭಾರತಭೂಮಿಯಲ್ಲಿ ಇಲ್ಲದಿಲ್ಲ ಆದರೆ ಅದನ್ನು ಉಪಯೋಗಿಸಲು ಆಲಸ್ಯವೆಂಬ ಮಹಾ ರೋಗದಿಂದ ನಾವು ಮತ್ತೂ ಮತ್ತು ಹಿಂದೆ ಹೋಗುತ್ತಿರುವುದು ಕಾಣುತ್ತಿದೆ

ಸ್ವತಂತ್ರ ಹೊಂದಿದ ದೇಶಸ್ಥರು ಸ್ವಾತಂತ್ರ್ಯಕ್ಕಾಗಿ ನಮ್ಮ ದೇಶಗಳಲ್ಲಿ ತಮ್ಮ ಸರ್ವಸ್ವವನ್ನು ಅರ್ಪಿಸುತ್ತಿರುವಾಗ್ಗೆ ನಾವೆಲ್ಲ ಮಾಡುತ್ತಿರುವುದೇನನ್ನು? ನಮ್ಮನ್ನು ತುಳಿದು ಆಳುತ್ತಿರುವವರಿಗೆ ಸಹಾಯಕರಾಗಿ ಅವರ ಶಕ್ತಿಯನ್ನು ಮತ್ತೂ ಹೆಚ್ಚಿಸುವುದಾಗಿದೆ ಹಲವು ಪಾರ್ಟಿಗಳಾಗಿ ಒಬ್ಬರನ್ನೊಬ್ಬರು ಸೆಣಗಾಡುವುದು ಉಚಿತವಲ್ಲ ರಾಷ್ಟ್ರಪತಿ ಜವಾಹರರೆಂದಂತೆ ಅದು ಸ್ವಾತಂತ್ರ್ಯ ಹೊಂದಿದ ದೇಶಗಳಲ್ಲಾದರೆ ಚಿಂತಿಲ್ಲ ಒಂದೊಂದು ಪಾರ್ಟಿಯವರು ತಮ್ಮ, ತಮ್ಮ ದೇಶಕ್ಕಾಗಿ ಹಲವು ಪಂಗಡಗಳನ್ನು ಮಾಡಬಹುದು ಆದರೆ ಸ್ವಾತಂತ್ರ್ಯಕ್ಕೆ ಒಳಗಾದ ಭಾರತದ ದಾಸ್ಯ ಶೃಂಖಲೆಯನ್ನು ಬಿಡಿಸಲು ಸರ್ವ ಪಂಗಡಗಳು ಒಟ್ಟಾಗಿ ದೇಶದಲ್ಲಿ ಎರಡೇ ಪಾರ್ಟಿಗಳಾಗಬೇಕೆಂದು ಅನ್ನುತ್ತಿರುವ(ಒಂದು ಕಾಂಗ್ರೆಸ್ ಮತ್ತೊಂದು ಸರಕಾರ)ದು ಕಾಲೋಚಿತವಾಗಿದೆ

ಚುನಾವಣೆಯ ರಣರಂಗ!

ಮತದಾರರ ಕರ್ತವ್ಯ.

(By M B Narsappa)

ಜಸ್ಟೀಸ್ ಪಾರ್ಟಿಯವಾಗಲೀ, ಪೀಪಲ್ಸ್ ಪಾರ್ಟಿಯಾಗಲೀ, ಇನ್ನಿತರ ಪಾರ್ಟಿಗಳಾಗಳಾಗಲೀ, ದೇಶದ್ದೇ ಆದರೂ ದೇಶದ ಸ್ವಾತಂತ್ರ್ಯಕ್ಕಾಗಿ ಹಗಲಿರುಳೂ ದುಡಿದು ಸರ್ವಸ್ವವನ್ನೂ ದೇಶಕ್ಕಾಗಿ ವಿನಿಯೋಗಿಸಿರುವ ದೇಶದ ಮಹಾ ಸಂಸ್ಥೆಯಾದ ರಾಷ್ಟ್ರೀಯ ಸಭೆಗೆ ಎದುರು (ವಿರೋಧ) ಪಾರ್ಟಿ ಇರುವುದು ಅನುಚಿತವೇ ಸರಿ ಅಂಥಾ ವಿರೋಧ ಪಾರ್ಟಿಗಳು ಈಗ ಕಾಂಗ್ರೆಸ್ಸಿನಲ್ಲಿ ಐಕ್ಯವಾಗುವುದು ಇಲ್ಲವೇ ಲೀನವಾಗುವುದು ಕಾಲೋಚಿತವಾಗಿದೆ ದೇಶದ ಒಂದೇ ಅಣ್ಣ ತಮ್ಮಂದಿರುವ ಒಂದೇ ಮನೆಯ ತಿಂಡಿ ತಿನಸುಗಳನ್ನು ತಿಂದು ಒಂದೇ ಪೆಟ್ಟಿಗೆಯ ಹಣವನ್ನು ಹಾಳುಮಾಡಿ ಇಬ್ಬರ ನ್ಯಾಯ ಮೂರನೇಯವನಿಗೆ ಆದಾಯವನ್ನಾಗಿ ಮಾಡುವುದು ಈ ಸಂಧಿಗ್ಧ ಸಮಯದಲ್ಲಿ ಉಚಿತವಲ್ಲ

ಯಾವ ಪಾರ್ಟಿಯವರಾಗಲೀ ಅವರು ಪ್ರಥಮತ ಭಾರತೀಯರು. ನಂತರ ಇನ್ನಿತರರು ಆದ್ದರಿಂದ ಅವರಿಗೆ ದೇಶ ಸ್ವಾತಂತ್ರ್ಯದ ಅಭಿಲಾಷೆ ಇದ್ದೇ ತೀರಬೇಕು. ಪರರ ಕೈಗೊಂಬೆಗಳಾಗಿ ಅವರ ಸೂತ್ರವಿರುವನಕ ಕ್ಷಣಿಕ ಸುಖಕ್ಕಾಗಿ ಕುಣಿದು ನಂತರ ಸೂತ್ರದಪ್ಪಿದ ಕ್ಷಣಕ್ಕೆನೇ ನರಕಕೂಪದಲ್ಲಿ ಬಿದ್ದು ಒದ್ದಾಡುವುದು ಸಮಂಜಸವಲ್ಲ ಕೆಲಸ ಮಿಂಚಿ ಹೋದ ನಂತರ ದೇಶದ್ರೋಹಿ ಅನ್ನಿಸಿಕೊಳ್ಳುವುದಕ್ಕಿಂತ "ಸಂಘೇ ಶಕ್ತೀ ಕಲೋಯುಗೇ" ಎಂಬ ವಾಣಿಯಂತೆ ಸಂಘ ಶಕ್ತಿಯೇ ಈಗ ಭಾರತಕ್ಕೆ ಅತ್ಯಗತ್ಯ ಬೇಕಾಗಿರುವ ಸಂಜೀವನವಾದುದರಿಂದ ಚಂಚಲ ಮನಸ್ಸಿನ ಪ್ರತೀ ಒಬ್ಬ ಭಾರತೀಯನೂ ದೃಢಪ್ರತಿಜ್ಞೆಯನ್ನು ಹೊಂದಿ, ತನ್ನ ಮನ ಪ್ರಕೃತ್ಯವನ್ನು ತೋರಿಸುವ ಪರ್ವಕಾಲವು ಇದೇ ಆಗಿರುತ್ತದೆ ಇದಕ್ಕೆ ವಿರುದ್ಧವಾಗಿ ಆಚರಿಸುವ ಯಾವ ಮೇಧಾವಿಯೇ ಆಗಲಿ, ಯಾವ ರಾಷ್ಟ್ರಹಿತನಾಗಲೀ, ಯಾವ ಕೋಟ್ಯಾಧೀಶನಾಗಲೀ ಅವನು ಭಾರತದ ದ್ರೋಹಿ, (ಮಾತಾ ದ್ರೋಹೀ)ಯಾಗುವನು

ದೇಶದ ಶೇಕಡಾ ಎಂಭತ್ತಕ್ಕಿಂತ ಜಾಸ್ತಿ ಬಡಜನಾಂಗಕ್ಕಾಗಿ ದುಡಿಯುವ ಕಾಂಗ್ರೆಸ್ಸೆಂಬ ಮಹಾ ಸಂಸ್ಥೆಯು ಈಗ ಸರ್ವ ಶಕ್ತಿಯನ್ನೂ ಹೊಂದಿಕೊಂಡಿದೆ ದೇಶದಲ್ಲಿ ಒಕ್ಕಟ್ಟನ್ನು ನೆಲೆಗೊಳಿಸಿ ಶಾಂತಿಯುಕ್ತವಾದ ಚಳವಳದಿಂದ ದೇಶಜಾಗ್ರತಿಯನ್ನುಂಟುಮಾಡಿ ಗತಿಸಿಹೋದ ದೇಶದ ವೈಭವವನ್ನು ಪುನರಪಿ ಹೊಂದಿಸಬೇಕೆಂಬ ಸದುದ್ದೇಶದಿಂದ ಕೆಲಸಮಾಡುತ್ತಿದೆ ಈ ಸಂಸ್ಥೆಗೆ ಇಡೀ ದೇಶಕ್ಕೆ ದೇಶವೇ ಬೆಂಬಲವಾಗಿ ನಿಂತಿದೆ ಕೆಲಸಮಾಡುವ ಕಟ್ಟಾಳುಗಳಿದ್ದರೆ ಹಣದ ಸಹಾಯವು ತನಗೆ ತಾನೇ ಬಂದು ಸೇರುತ್ತದೆ ಗತಿಸಿದ ಚರಿತ್ರೆಯಲ್ಲಿ ಸ್ವಾತಂತ್ರ್ಯಕ್ಕಾಗಿ ದುಡಿದ ಛತ್ರಪತಿ ಶಿವಾಜಿಯ ಕಾಲದಲ್ಲಿ ಶ್ರೀಸಮರ್ಥರೂ, ಹುಕ್ಕ ಬುಕ್ಕರ ಕಾಲದಲ್ಲಿ ವಿದ್ಯಾರಣ್ಯರೂ ಬೇಕಾದ ಹಣ ಗಳಿಸಿದಂತೆ ಪೂಜ್ಯ ಗಾಂಧಿಜೀಯವರು ಕತ್ತಾಲಕ್ಕೆ ಬೇಕಾದ ಹಣವನ್ನು ಸಂಗ್ರಹಿಸಿಯೇ ಸಂಗ್ರಹಿಸುವರು. ಚಿನ್ನಗಳ ರಾಶಿಗಳು ಅರಬಿ ಸಮುದ್ರವನ್ನು ದಾಟಿದರೂ, ಧೀರ ಯೋದ್ಧರೂ ಮೇಧಾವಿಗಳೂ ಪರಂಧಾಮವನ್ನು ಹೊಂದಿದರೂ ಪುಣ್ಯ ಭಾರತವು ಬಡವಳಾಗಲಿಕ್ಕಿಲ್ಲ ಶ್ರೀಭಗವಂತನಿಂದ ದೊರಕಿದ ಪ್ರಕೃತಿ ಸೌಂದರ್ಯವು ಭಾರತವನ್ನು ಎಂದೂ ಬಡವಳಾಗಿ ಮಾಡಲಿಕ್ಕಿಲ್ಲ. ಆದರೆ ಸ್ವಾರ್ಥಿಗಳು ತಮ್ಮ ದುರಾಭಿಲಾಷೆಗಾಗಿ ಬಡವರ ರಕ್ತವನ್ನು ಹೀರುವ ಶ್ರೀಮಂತರ ವರ್ತನವು ಮಾತ್ರ ಸಹಿಸಲಾಗದ ಸಂಗತಿಯಾಗಿದೆ.

ಬಿರಳೆಣಿಕೆಯ ಶ್ರೀಮಂತರ ಅಗಾಧವಾದ ಶ್ರೀಮಂತಿಕೆಯ ರಕ್ಷಣೆಗಾಗಿ ಆಳರಸರಿಂದ ಬೇಕಾದ ಕಾನೂನುಗಳು ಜನನಹೊಂದಿ ಕೇಸಗಾರರ ಕಾರ್ಯಕ್ರಮಗಳಿಗೆ ಅಡ್ಡದಾರಿಯನ್ನು ರಚಿಸಿ ನಮ್ಮ ವೈಖರಿಯನ್ನು ಮೆರಿಸಬಹುದು. ಕ್ಷಣಿಕ ಸ್ವಸುಖಕ್ಕಾಗಿ ಕೆಲವು ಅಷಾಢಭೂತಿಗಳು ರಣರಂಗದಲ್ಲಿ ಕುಣಿಯಬಹುದು ಹಾಗೂ ತಮ್ಮ ಅಧಿಕಾರ ದರ್ಪಗಳಿಂದಲೂ ಹಣದ ಮದದಿಂದಲೂ ತಮ್ಮ ಇಚ್ಛೆಯನ್ನು ಕ್ಷಣಿಕ ಸಮಯಕ್ಕಾಗಿ ಚಲ್ಯಾಸಬಹುದು ಆದರೆ ಎಚ್ಚೆತ್ತ ಭಾರತವನ್ನು ಬಲೋದ್ಬಂಧದಲ್ಲಿಡುವುದು ಇನ್ನು ಸಾಧ್ಯವಿಲ್ಲ ರಕ್ತದ ಸವಿಯನ್ನುಂಡ ಮ್ಲೇಂಛರಿಗೆ ಭಾರತದ ಶಾಂತಿಯುಕ್ತವಾದ ಚಳವಳವು ರುಚಿಸದಿರುವುದು ಸ್ವಾಭಾವಿಕವಾಗಿದೆ ಆದರೆ ಅದರ ಶಕ್ತಿಯನ್ನ ಭಾರತೀಯರಾದ ನಾವು ತಿಳುಕೊಂಡಿರುವೆವು ಆದಕ್ಕೆ ಬೇಕಾದ ಸಾಧನ ಉಪಕರಣಗಳನ್ನ ನಾವು ತಿಳಿದೂ ತಿಳಿಯದವರಂತೆ ಉದಾಸೀನರಾಗಿದ್ದೇವೆ. ಆದರೆ ಮೊನ್ನೆ ಫೈಜಪುರದಲ್ಲಿ ಮಹಾತ್ಮಾಜೀಯವರು ಪುನರಪಿ ಎಂಬಂತೆ ಸಮಗ್ರ ಭಾರತವನ್ನು ತನ್ನ ಅಂತರಾಳದಿಂದ ಹೊರಸೂಸಿದ ವಾಕ್‌ಸರಣಿಯಿಂದ ಎಚ್ಚರಿಸಿದ್ದು "ನಮ್ಮ ನಿಯಮಿತ ಕಾರ್ಯವನ್ನು ಸರಿಯಾಗಿ ಮಾಡದ್ದರಿಂದಲೇ ಸ್ವಾತಂತ್ರ್ಯವನ್ನ ಹೊಂದಲು ಹಿಂದೆಹೋಗಿರುವೆವು ದೇಶಪ್ರೇಮ, ಸ್ವದೇಶಿ ಪ್ರೋತ್ಸಾಹವೇ ದೇಶದ ಏಳ್ಗೆಗೆ ಬೇಕಾದ ಪ್ರಥಮ ಸೋಪಾನಗಳು ೧೯೨೦—೨೧ರ ನೆನಪು ಈಗಲೂ ತನ್ನಲ್ಲಿದೆ ಆದರೆ ಅದರಂತೆ ಆಚರಿಸುವವರಾಗಬೇಕು" ಎಂತ ಪೂಜ್ಯರು ತಿಳಿಸಿದ್ದೂ ಅದನ್ನೇ ಆ ಬಗ್ಗೆ ನಮ್ಮ ಮುಂದಿನ ಕರ್ತವ್ಯವೇನು?

ಹೊಸ ಸುಧಾರಣೆ(?) ಎಂದು ಮುಂದಕ್ಕೆ ಭಾರತೀಯರ ಇದ್ದ ಹಕ್ಕುಗಳನ್ನೂ ಸೆಳೆಯುವ ಹೊಂಚು ನಡೆಯಲಿದೆ ಅಂತಹ ಹೊಂಚನ್ನು ಉಚ್ಚಾಟನೆಮಾಡಲಿಕ್ಕಾಗಿ ಹಲವು ದೇಶಧುರೀಣರು ಎಲ್ಲಾ ಕೌನ್ಸಿಲ್ ಹಾಗೂ ಎಸೆಂಬ್ಲಿಗಳಿಗೆ ಪ್ರವೇಶ ಬೇಕೆಂದು ಪ್ರಯತ್ನಮಾಡಿರುವರು ಕಳೆದ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪ್ರಜಾಪಕ್ಷಕ್ಕೆ (ಕಾಂಗ್ರೆಸಿಗೆ) ಬಹುಮತದೊರಕಿ ಹೆಚ್ಚಿನ ಮೆಂಬರರು ಎಸೆಂಬ್ಲಿಗೆ ಹೋದದ್ದು ಪ್ರತಿಯೊಬ್ಬ ಭಾರತೀಯನಿಗೆ ತಿಳಿದ ಸಂಗತಿಯೇ ಆಗಿದೆ ಪ್ರತೀ ಒಬ್ಬ ಹಳ್ಳಿಯವನಿಗೆ ಕೂಡಾ ಎಸೆಂಬ್ಲಿ ಎಂದರೇನು? ಅಲ್ಲಿ ಅಧಿಕಾರಗಳು ಹೇಗೆ ಚಲಾಯಿಸಲ್ಪಡುತ್ತದೆಂಬುದ (ನಮಗೆ) ತಿಳಿಯಲು ಅಸ್ಪದವಾಯಿತು ಇನ್ನೂ ಹೆಚ್ಚಿನ ಸಂಗತಿಗಳು ತಿಳಿಯಬೇಕಾದರೆ ಪ್ರತೀ ಒಂದು ಸಂಸ್ಥೆಯನ್ನೂ ಕಾಂಗ್ರೆಸು ಆಕ್ರಮಿಸುವುದು ಒಳ್ಳೆಯದೆಂದು ತಿಳಿದೇ ಕಾಂಗ್ರೆಸಿನವರು ಚುನಾವಣಾ ರಣರಂಗಕ್ಕೆ ಇಳಿದಿರುವರು. ಎಲ್ಲ ಪರಿಗೂ ಜಯ ದೊರಕು ಬಹುಪಕ್ಷ ಕಾಂಗ್ರೆಸು ಮೆಂಬರರೇ ಆರಿಸಿಬರುವಂತೆ ನೋಡಿಕೊಳ್ಳುವುದು ಭಾರತೀಯರಾದ ನಮ್ಮ ಪ್ರಥಮ ಕರ್ತವ್ಯ

ಕಾಂಗ್ರೆಸ್ಸಿಗೆದುರಾಗಿ ಉಮೇದ್ವಾರರಾಗಿ ನಿಂತವರು ನಮ್ಮ ಸಹೋದರರಾಗಿರಬಹುದು, ನೆಂಟಮಿತ್ರರಾಗಿರಬಹುದು, ಇಲ್ಲವೇ ನಮ್ಮ ಯಜಮಾನರಾಗಿರಬಹುದು ಆದರೆ ದೇಶದ ದೃಷ್ಟಿಯಲ್ಲಿ ಅವರು ದೇಶದ್ರೋಹಿಗಳೆಂದು ಕರೆಯಲ್ಪಡುವರು ಆದುದರಿಂದ ಉಪಾಯ ಕಾಣದೆ ನಾವು ಸಹಾಯಮಾಡಬೇಕಾಗುತ್ತದೇನೋ ಸಹಜ. ಆದರೆ ಅದು ಯಾವ ವಿಷಯದಲ್ಲಿ? ಅನಾರೋಗ್ಯರಾಗಿದ್ದರೆ ಅವರಿಗೆ ಬೇಕಾದ ಉಪಚಾರ, ಹಣ ಶೂನ್ಯರಾಗಿದ್ದರೆ ಧನಸಹಾಯ, ಕಷ್ಟದಲಿ ಸಿಕ್ಕಿರುವರಾದರೆ ಶಕ್ತಿಸಹಾಯ ಮಾಡುವಂಥಾದು ನಮ್ಮ ಧರ್ಮ. ಆದರೆ ಇದು ಹಾಗಲ್ಲ. ದೇಶದ ಏಳ್ಗೆಗಾಗಿ, ದೇಶದ ಬಡ ಸಮಾಜಕ್ಕಾಗಿ, ಹಗಲಿರುಳು ದುಡಿದು, ಸರ್ವಸ್ವವನ್ನೂ ಅರ್ಪಿಸಿದ್ದ ಹಾಗೂ ಅರ್ಪಿಸಲಿರುವ ದೇಶದ ಒಂದೇ ಒಂದು ಸಂಸ್ಥೆಯಾದ ಕಾಂಗ್ರೆಸ್ಸಿಗೆ ಎದುರಾಗಿ ನಿಲ್ಲುವವರಿಗೆ ಸರ್ವಥಾ ಪ್ರೋತ್ಸಾಹ ಕೊಡಕೂಡದು ಭಾರತಮಾತೆಯು ಹೆತ್ತ ಜನನಿಗಿಂತಲೂ ಶ್ರೇಷ್ಠಳಾಗಿರುವುದರಿಂದ ಪೂಜ್ಯ ಮಾತೆಯೇ ಆಗಿರುತ್ತಾಳೆ ಕಳೆದ ೧೭೫ ವರ್ಷಗಳಿಂದ ಪರಾವಲಂಬಿಯಾಗಿ ಬಂಧಿತಳಾದ ಆ ಮಾತೆಯನ್ನು ಬಂಧವಿಮುಕ್ತಳನ್ನಾಗಿ ಮಾಡುವ ಕರ್ತವ್ಯವು ಭಾರತೀಯರಾದ (ಪ್ರತೀ ಒಂದು ಪಂಗಡದವರೂ ಕೂಡಾ) ನಮ್ಮ ಪಾಲಿಗೆ ಸೇರಿದ್ದಾಗಿರುತ್ತದೆ

ವ್ಯಕ್ತಿದ್ವೇಷ, ಪರಮತ ದ್ವೇಷ, ಸ್ವಾರ್ಥಾಭಿಲಾಷೆಗಾಗಿ ದೇಶದ ಹಿತವನ್ನು ಮಾರುವುದಾದರೆ ಅದಕ್ಕಿಂತ ಮಿಕ್ಕಿದ ಪಾಪವು ಬೇರೆ ಯಾವುದೂ ಇಲ್ಲ ಸಾವಿರಕ್ಕಿಂತಲೂ ಮಿಕ್ಕಿದ ಕಾಂಗ್ರೆಸ್ ಉಮೇದ್ವಾರರಿಗಿಂತ ಒಬ್ಬೊಬ್ಬರು ವಿರೋಧಿ ಪಂಗಡದ ಮೆಂಬರರು ನಮ್ಮನ್ನು ತ್ಯಜಿಸಿದರೂ ಚಿಂತಿಲ್ಲ ನಮ್ಮ ಪ್ರತೀ ಒಂದು ಓಟನ್ನು ಕಾಂಗ್ರೆಸ್ ಉಮೇದ್ವಾರರಾಗಿ ಕೊಟ್ಟು ಭಾರತೀಯರೆಂಬುದನ್ನು ಸಾರ್ಥಕಗೊಳಿಸುವ, ಕಥಾಸ್ತು

(ಪ್ರತೀ ಒಂದು ರಾಷ್ಟ್ರೀಯ ಪತ್ರಿಕೆಗಳೂ ಕಾಂಗ್ರೆಸಿನ ಸಹಾಯಕ್ಕೆ ನಿಲ್ಲಬೇಕಾಗಿದೆ ಕಾಂಗ್ರೆಸಿಗಾಗಿ ನಡೆಯುವ ಪ್ರಚಾರದ ಲೇಖನವನ್ನು ಜನಃ ಮುದ್ರಿಸಿ, ಜಾಗ್ರತಗೊಳಿಸಬೇಕಾಗಿದೆ ಹಾಗಿರುವಾಗ್ಗೆ ಇಚ್ಛೆಯಿರುವ ಪತ್ರಿಕಾಕರ್ತರು ಈ ಲೇಖನವನ್ನು ಪುನರ್ಮುದ್ರಿಸಬಹುದು —ಲೇಖಕ)

ಮುದಿಯಳಿಗೂ ಮದುವೆ ಬೇಕು

ಟರ್ಕಿಯ ಇಗಿರ್‌ಕಾವ್ರೂವಾ ಎಬ್ಬೊಂದು ಹಳ್ಳಿಯಲ್ಲಿ ಜೀವಿಸುತ್ತಿದ್ದ ಪೆದ್ಮಾಯಿಲ್ ನ್ಯಾನ್ ಎಂಬ ೯೦ ವರ್ಷ ಪ್ರಾಯದ ಮುದುಕಿಯು ೪೫ ವರ್ಷ ಪ್ರಾಯದ ಅಬ್ದುಲ್ಲಾ ಎಂಬೋರ್ವ ಸೀರು ಮಾಡುವವನನ್ನು ಗಂಡನಾಗಿ ಸ್ವೀಕರಿಸಿದಳು. ಇದ ಆ ಹಳ್ಳಿಯಲ್ಲಿ ಒಂದ ಸಂತೋಷ ಸಮಾರಂಭವಾಗಿ ಪರಿಣಮಿಸಿರುವುದು ಮಂದ ಕಿವಿ, ಮುಂಚೆ ನಾಲ್ಕು ಜನ ಗಂಡಂದಿರನ್ನ ಕಳಕೊಂಡಿರುವಳು ಸಂಗಾತಿಯೊಬ್ಬನಿರದೆ ಜೀವನ ನಡಿಸುವುದು ನನಗೆ ಅಸಾಧ್ಯವೆದು ಅವಳು ಹೇಳುತ್ತಿರುವಳ ಅವಳಿಗೆ ಇನ್ನೂ [illegible] ವರ್ಷ ಆಯುಸ್ಸು ಇರುವುದೆಂದು ತಿಳಿದುದೇ ಅವಳ ಪಂಚಮ ವಿವಾಹಕ್ಕೆ ಕಾರಣ

DIAMONDS! DIAMONDS!
BEST BRILLIANCY
K. R. K. SHET,
Near Mission High School,
MANGALORE
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ
ವಜ್ರಗಳು!
ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ
ನಮ್ಮಲ್ಲಿ ಬಂದು ಸ್ವತಹಾ ಪರೀಕ್ಷಿಸಿ ನೋಡಿದಲ್ಲ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ
ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಶನ್ ಹೈಸ್ಕೂಲ್ ಬಳಿ, ಮಂಗಳೂರು.

ಮದನಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖಾಭಿಲಾಷೆಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಬೇಧಿಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ಸ್ಥಿರ[illegible] ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂಡಲೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1

ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,

ಪೋಸ್ಟು ಬೋಕ್ಸ್ ನಂ. 287 ಮದರಾಸ್.

ಡಾಕ್ಟರ ವಾಮನ ಗೋಪಾಳರವರ

ಬಹಿಷ್ಕಾರಯುಕ್ತ

ಸಾರ್ಸ ಪರಿಲಾ.

ಕೆಟ್ಟ ರಕ್ತಕ್ಕೆ ಪರಮೌಷಧ ೬೫ ವರ್ಷದ ಅನುಭವ.

ಉಪಯೋಗಿಸಿದವರೇ ಹೇಳಿದ್ದಾರೆ.

ಡಾ|| ಗೌತಮ ರಾವ್ ಕೇಶವರವರ

ಪ್ರೊಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ

ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪

ಸ್ಟೋಕಿಸ್ಟ್—ಪೈ ಕಂಪೆನಿ, ಮಂಗಳೂರು,

(ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ)

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳುಳ್ಳ **ಭಕ್ತಶಿಖಾಮಣಿ ದಾಮಾಜಿಪಂತ** ಸಂಗೀತ ನಾಟಕ.

ಬರೆದವರು:—ಶ್ರೀ| ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ; ಸೂರ್ಯನೊಳಗಿಲ್ಲ; ॥
ಎನ್ನ ಭಕ್ತರು ಎಲ್ಲಿ ಪಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮುನಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟ ಚಾಲಿನ ಮನೋಹರವಾದ ೩೫ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯೈಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೮ನೆಯ ಧಾತು ಸಂವತ್ಸರದ ಮಾಘ ಶು| ೨ ಶನಿವಾರದಿಂದ, ಮಾಘ ಶು| ೯ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ ಕುಂಭ (ಮಾಯಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
13	ಶನಿ	೨	೧೨	ಪೂ. ಭಾ	೪೭	೨	[illegible]
14	ರವಿ	೩	೮	ಪೂ. ಭಾ	೪೪	೩	
15	ಸೋ.	೪	೫೪	ರೇವತಿ	೪೧	೪	
16	ಕುಜ	೫	೫೨	ಅಶ್ವಿನಿ	೩೭	೫	
17	ಬುಧ	೬	೪೬	ಭರಣಿ	೩೩	೬	
18	* ಗುರು	೮	೪೦	ಕೃತ್ತಿಕ	೨೯	೭	
19	ಶುಕ್ರ	೯	೩೫	ರೋಹಿಣಿ	೨೫	೮	

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3—6	3—10
ಮಸ್ತ್ರಿ ...	3—8	4—4
ಗುಡ್ಡು ...	3—10	3—14
ಊರ ಅವ್ವಲ್ ಬೆಲ್ಲಗೆ ...	4—0	4—4
ರಂಗೂನು ಬಿ. ಗೋ. ಇಕ್ಕೈ...	7—0	7—4
ಎಲ್ಲೂರು ಬೆ. ಮು. ಇಕ್ಕೈ...	3—12	3—12
ಗೋದಿ ಗೋಣಿ ಇಕ್ಕೈ ...	11—0	13—0
ತೊಗರಿ ಗೋಣಿ ಇಕ್ಕೈ ...	9—8	12—8
ಹುರುಳಿ ಗೋಣಿ ಇಕ್ಕೈ ...	5—0	5—6
ಕಡಲೆ ಗೋಣಿ ಇಕ್ಕೈ ...	8—0	12—8
ತೊಗರಿಬೇಳೆ ಗೋಣಿ ಇಕ್ಕೈ...	11—0	19—0
ಉದ್ದು ಗೋಣಿ ಇಕ್ಕೈ ...	9—0	9—8
ಹೆಸರು ಗೋಣಿ ಇಕ್ಕೈ ...	7—12	8—0
ಊರುಬೆಲ್ಲ ಖಂಡಿ ಇಕ್ಕೈ ...	30—0	32—8
ಉಪ್ಪು ಗೋಣಿ ಇಕ್ಕೈ ...	4—2	5—4
ಕೊಬ್ರಿ ಖಂಡಿ ಇಕ್ಕೈ ...	75—0	84—0
ಕೊಬ್ರಿ ಹಿಂಡಿ ಖಂಡಿ ಇಕ್ಕೈ...	26—8	28—8
ಎಳ್ಳಿಂಡಿ ಖಂಡಿ ಇಕ್ಕೈ ...	26—4	27—8
ಕೊಬ್ರಿ ಎಣ್ಣೆ ಧುಮ ಇಕ್ಕೈ...	6—0	7—0
ಎಳ್ಳೆಣ್ಣೆ ಧುಮ ಇಕ್ಕೈ ...	7—0	7—0
ಬಿಮಿಣಿಎಣ್ಣೆ ಪೆಟ್ಟಿಗೆ ಇಕ್ಕೈ...	6—5	7—5
ಮೋರಿಸ ಸಕ್ಕರೆ ಮು. ಇಕ್ಕೈ...	3—2	3—4
ಮೆಣಸು ...	2—8	5—0
ಸಾಸಿವೆ ಮುಡಿ ಇಕ್ಕೈ ...	5—4	5—8
ಕಾಳುಮೆಣಸು ಖ. ಇಕ್ಕೈ ...	100—0	120 0
ಯೇಲಕ್ಕಿ ಬೀಜ ಮಣ ಇಕ್ಕೈ...	80—0	85—0
ಗೇರುಬೀಜ ಮು. ಇಕ್ಕೈ ...	3—4	3—8
ಕಬ್ಬಿಣ ಖಂಡಿ ಇಕ್ಕೈ ...	35—0	37—8
ತಾಂಬ್ರ ತಗಡು ಮ. ಇಕ್ಕೈ...	12—4	12—8
ತಾಂಬ್ರ ಪಾತ್ರಗಳು ಮ. ಇಕ್ಕೈ	12—8	14—0
ಬೀಡಿಎಲೆ ಸೇರು ಇಕ್ಕೈ ...	13—8	15—0
ಹಿತ್ತಾಳೆ ತಗಡು ಮ. ಇಕ್ಕೈ...	10—0	10—8
ಸೀಸವು ಇಕ್ಕೈ ...	22—7	22—8
ಹುಣಸೆ ಹುಳಿ ಖಂಡಿ ಇಕ್ಕೈ	40—0	45—0
ಪ್ಲಾಂಟೇಷನ್ ಕಾಫಿ ಖಂಡಿ ಇಕ್ಕೈ	170—0	180—0
ಪೀಬೇರಿ ಕಾಫಿ ಖಂಡಿ ಇಕ್ಕೈ...	175—0	195—0
ಮಡಿಕೇರಿ ಏಲಕ್ಕಿ ...	50—0	55—0

Break Pills!

Take To-Night

Prepared by a Sage out of Amber Saffron Gold Musk with Himalayan Drugs recreit lost energy Strength Nervous Debility and all Disorders in Spinal Cord. Regains lost vitality Gives marvellous effect. 60 Pills Rs. 5. Sample 30 Pills Rs. 3. List Free.

Dr. A S. MURTHI. CHICACOLE.

೧೧ ವರುಷಗಳಿಂದಲೂ ಕರುಳಿನಲ್ಲಿಯ ಅಸ್ವಾಸ್ಥ್ಯತೆಯಿಂದ ನರಳುತ್ತಿದ್ದೆ.

ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಅದನ್ನು ಅದ್ಭುತವಾದ ರೀತಿಯಲ್ಲಿ ಶಮನಗೊಳಿಸಿತು.

ಹೊಟ್ಟೆನೋವಿನ ಅರಿವು ಇದ್ದವರು ಹೊಟ್ಟೆನೋವು ತುಸು ಪ್ರಾರಂಭವಾದೊಡನೆಯೇ ಅದನ್ನು ಭಯಂಕರವಾದ ರೀತಿಯಲ್ಲಿ ತ್ರಾಸಗೊಳಿಸುವುದಾಗಿ ನೆನಸಿ ಬೇಗನೆ ಔಷಧಿಯನ್ನು ತೆಗೆದುಕೊಳ್ಳುವರು. ನಿಶ್ಚಿಂತತೆ ಮತ್ತು ಆಲಸ್ಯತನವು ಹಲವು ಜನರನ್ನು ಇಂತಹ ದುಃಸ್ಥಿತಿಗೆ ಈಡುಮಾಡಿದೆ. ಇಂತಹ ವೇಳೆಯಲ್ಲಿ ಒಳ್ಳೇ ಔಷಧಿಯೆಂದರೆ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರ್, ಇದು ಹೊಟ್ಟೆಯ ಎಂತಹ ವೇದನೆಯಿದ್ದರೂ ಕೂಡ ಪರಿಹರಿಸಿ, ಸುಖವನ್ನೀಯುತ್ತದೆ.

"11 ವರುಷಗಳಿಂದಲೂ ನಾನು ಉದರವೇದನೆಯಿಂದ ಪೀಡಿತನಾಗಿದ್ದೆ. ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಲು ಪ್ರಾರಂಭಿಸಿದೊಡನೆಯೇ ನನ್ನ ಪ್ರಕೃತಿಯು ನೆಟ್ಟಗಾಯಿತು.

ಮಿ| ಎಫ್. ಎ.

ಆರೋಗ್ಯವನ್ನು ಪಡೆದೆನೆಂಬ ಸಂತೋಷದಿಂದ ಬರೆದ ಕಾಗದವಿದು. ನಿಮಗೂ ಇಂತಹ ವೇದನೆಯಿದ್ದರೆ ಈ ಔಷಧಿಯ ಸೇವನೆಯಿಂದ ಮಿ| ಎಫ್. ಎ ಗೆ ಸಿಕ್ಕಿದ ಲಾಭವು ನಿಮಗೂ ದೊರಕೀತು. ಆದುದರಿಂದ

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆದುಕೊಳ್ಳಿರಿ. ಇಂತಹ ನಮೂನೆಯ ಕಡಿಮೆ ದರದ ಪರಕೀಯ ಪ್ಯಾಕನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ದೊರಕುತ್ತದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವದು ಕಷ್ಟವಾದಲ್ಲಿ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುಂರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ



S. No. 51

THE

BANK OF MANGALORE LTD.,

MANGALORE.

ESTD. 1931.

Branches:-

Panemangalore, Mudabidri & Padubidri.

Chairman:—**Philip J. Chandran, Esq.,**

Retd. Dt. Registrar of Joint Stock Companies.

On & from 1st of January 1937,

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*

ಬಿಳಿ ತೊನ್ನು ಮತ್ತು ಕುಷ್ಠರೋಗ.

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುದು. ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ. ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು. ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ನಿಘಾ ತೆಗೆದುಕೊಳ್ಳಲಾಗಲಿಕ್ಕಿಲ್ಲ.

Vaidyaraj Akil Kishore Ram,

No. 62 P. O. Katrisarai (Gaya)

ಈ ವಿಷಯ ಬಲ್ಲಿರಾ?

ಕಲ್ಕತ್ತಾ ನಗರದ ಜನಸಂಖ್ಯೆಯು ಬೊಂಬಾಯಿ ನಗರಕ್ಕಿಂತಲೂ ಹೆಚ್ಚು. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಕಲ್ಕತ್ತಾ ನಗರವು ಜನಸಂಖ್ಯೆಯ ಮಟ್ಟಿಗೆ ಎರಡನೇ ದೊಡ್ಡ ನಗರವಾಗಿರುವುದು. ಮೊದಲನೇದ್ದು ಲಂಡನ್ ನಗರ.

ಪ್ರಾತಃಕಾಲದ 5 ಘಂಟೆಯ ಕಾಲವು ಬಹಳ ಚಳಿಯಾದ ಸಮಯವು.

ಹಾಡುವ ಜಾತಿಯ ಹಕ್ಕಿಗಳು ಜುಲಾಯಿ ತಿಂಗಳಲ್ಲಿ ನಿಶಬ್ದವಾಗಿರುವವು.

ಮನುಷ್ಯನ ಮುಂಡಭಾಗದಲ್ಲಿ 77 ಸ್ನಾಯುಗಳಿರುವವು.

ಧ್ರುವ ಪ್ರದೇಶಗಳಲ್ಲಿ ಅಖಂಡ ಬಂಡೆಯ ಕಲ್ಲು ಕಾಣಸಿಗುವುದಿಲ್ಲ.

ಬಣ್ಣದ ಕೂದಲಿರುವವರು ಹೆಚ್ಚು ಕಾಲ ಬಾಳುತ್ತಾರೆ.

ಇಂಗ್ಲೆಂಡಿನ ಕೋಳಿಗಳ ಸಂಖ್ಯೆಯು, 27 ಮಿಲಿಯ.

ಕೊಂಗ್ರೆಸಿಗೆ ಏಕೆ ಓಟು ಕೊಡಬೇಕು

ಬರುವ ಎಸೆಂಬ್ಲಿ ಚುನಾವಣೆಗೆ ನಿಂತಿರುವ ಉಮೇದ್ವಾರರ ಪೈಕಿ ನಾವು ವ್ಯಕ್ತಿಗಳ ಕಡೆಗೆ ನ ಜಾತಿಯ ಕಡೆಗೆ ನೋಡದೆ ಕಾಂಗ್ರೆಸ್ ಉಮೇದ್ವಾರರಿಗೇನೆ ನಮ್ಮ ವೋಟುಗಳನ್ನು ಕೊಡಬೇಕು ಈ ಚುನಾವಣೆಯು ಜಿಲ್ಲಾ ಬೋರ್ಡು ಪಂಚಾಯತ ಬೋರ್ಡ ಅಥವಾ ಅಥವಾ ಮುನಿಸಿಪಾಲಿಟಿಯ ಚುನಾವಣೆಗಳ ಹಾಗಲ್ಲ. ಈ ಚುನಾವಣೆಯ ಫಲಿತಾಂಶದಲ್ಲಿ ನಮ್ಮ ಇಡೀ ಹಿಂದೂಸ್ಥಾನದ ಭವಿಷ್ಯವು ಹೊಂದಿಕೊಂಡಿದೆ ನಮ್ಮ ಮದರಾಸ್ ಎಸೆಂಬ್ಲಿಗೆ ಇರುವ ೨೧೫ ಸ್ಥಾನಗಳಲ್ಲಿ ಒಂದು ಸ್ಥಾನವನ್ನಾದರೂ ಕೊಂಗ್ರೆಸ್ಸಿಗೆ ಕಳೆದುಕೊಳ್ಳಲು ಸಾಧ್ಯವಿಲ್ಲ ಪ್ರತಿಯೊಂದು ಸ್ಥಾನವೂ ಮುಖ್ಯವಾಗಿದೆ ಕಾಂಗ್ರೆಸು ತನ್ನ ಅಖಂಡ ತ್ಯಾಗದಿಂದಲೂ ೫೧ ವರ್ಷಗಳಲ್ಲಿ ಮಾಡಿದ ಜನತಾ ಸೇವೆಯಿಂದಲೂ ಇಡೀ ದೇಶದ ವಿಶ್ವಾಸವನ್ನು ಪಡೆಂದ ಅಷ್ಟು ದೊಡ್ಡ ರಾಜಕೀಯ ಸಂಸ್ಥೆಯು ನಮ್ಮ ದೇಶದಲ್ಲಿ ಬೇರೆ ಇಲ್ಲ ಕಾಂಗ್ರೆಸಿಗೆ ಸೇರಿದ ವ್ಯಕ್ತಿಗಳಲ್ಲಿ ಕೆಲವು ಕುಂದುಕೊರತೆಗಳಿರಬಹುದು ಅದರಿಂದ ಇಡೀ ಸಂಸ್ಥೆಯನ್ನು ದೂರಲು ಸಾಧ್ಯವಿಲ್ಲ ವ್ಯಕ್ತಿಗಳು ಮನುಷ್ಯರು, ದೇವರಲ್ಲ ಆದ ದರಿಂದ ಕೆಲವು ವ್ಯಕ್ತಿಗಳಲ್ಲಿ ಕೊರತೆಗಳಿರುವುದೂ ಸ್ವಾಭಾವಿಕವು ಅವುಗಳನ್ನು ತಿದ್ದಿಕೊಳ್ಳಲು ನಾವು ಸಂದರ್ಭ ಕೊಡಬೇಕು ಈ ಚುನಾವಣೆಯಲ್ಲಿ ವ್ಯಕ್ತಿಗಳು ಸ್ವತಂತ್ರರಾಗಿ ಏನೂ ಒಳ್ಳೇದಾಗಲೀ ಕೆಟ್ಟದಾಗಲೀ ಮಾಡಲಿಕ್ಕೆ ಸಾಧ್ಯವಿಲ್ಲ ವ್ಯಕ್ತಿಗಳು ಯಾವ ಪಾರ್ಟಿಗೆ ಸೇರಿದವರೂ ಆ ಪಾರ್ಟಿಯವರು ಈ ವರೆಗೆ ನಮಗೆ ಒಳ್ಳೇದು ಮಾಡಿದ್ದರೋ ಕೆಟ್ಟದು ಮಾಡಿದ್ದರೋ ಎಂಬುದನ್ನು ನೋಡಬೇಕು.

ಈ ಸಾರಿ ಕಾಂಗ್ರೆಸಿಗೆ ಏಕೆ ನಮ್ಮ ವೋಟುಗಳನ್ನು ಕೊಡಬೇಕೆಂದರೆ -(೧) ಕಾಂಗ್ರೆಸಿನಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆಯೆಂಬುದನ್ನು ಇಡೀ ಭೂಲೋಕಕ್ಕೆ ವ್ಯಕ್ತಪಡಿಸುವುದಕ್ಕೆ (೨) ಕಾಂಗ್ರೆಸಿನವರು ಜೈಲಿಗೆ ಹೋಗಿ ಕಷ್ಟಪಡುತ್ತಿರುವ ಸಮಯದಲ್ಲಿ ತಮ್ಮ ಸ್ವಾರ್ಥದೃಷ್ಟಿಯಿಂದ ಕೌನ್ಸಿಲುಗಳೊಳಗೆ ನುಗ್ಗಿ ಅಧಿಕಾರ ಸ್ವೀಕಾರ ಮಾಡಿ ಕಳೆದ ೧೫ ವರ್ಷಗಳಲ್ಲಿ ನಮಗೆ ಅನೇಕ ಕೆಡುಕುಗಳನ್ನುಂಟುಮಾಡಿದರು ಈಗ ಕಾಂಗ್ರೆಸನ್ನು ವಿರೋಧಿಸುವ ಜಸ್ಟಿಸ್ ಪಾರ್ಟಿಯಲ್ಲಿ ನಮಗೆ ವಿಶ್ವಾಸವಿಲ್ಲವೆಂಬುದನ್ನು ತೋರಿಸುವುದಕ್ಕೆ (೩) ನಮ್ಮ ಮೇಲೆ ಬಲಾತ್ಕಾರದಿಂದ ಹೊರಿಸಲ್ಪಟ್ಟಂಥಾ ಹೊಸ ರಾಜ್ಯಘಟನೆಯನ್ನು ಮುರಿಯುವುದಕ್ಕೆ (೪) ಸ್ವಾತಂತ್ರ್ಯ ಚಳವಳವನ್ನು ಕೌನ್ಸಿಲಿನೊಳಗೂ ಹೂಡಲಿಕ್ಕೆ ಎಲ್ಲಿಯಾದರೂ ಕಾಂಗ್ರೆಸ್ ಕಡೆ ಉಮೇದ್ವಾರರು ಸೋತುಹೋದರೆಂದರೆ ಆ ಸೋಲು ಆ ಉಮೇದ್ವಾರರಿಗಲ್ಲ, ಕಾಂಗ್ರೆಸಿಗೆ ಹಾನಿಯೆ. ಅವರು ಜಯಿಸಿದರೆಂದರೆ ಆ ಜಯ ಅವರಿಗಲ್ಲ ಕಾಂಗ್ರೆಸಿಗೆ

ಆದುದರಿಂದ ವೋಟರ ಮಹಾಶಯರೇ ನೀವು ವ್ಯಕ್ತಿಗಳ ಕಡೆಗೆ ವ ಜಾತಿಯ ಕಡೆಗೆ ನೋಡದೆ ಯಾವಲ್ಲಿ ದೇಶಭಿಮಾನವು ಇರುವುದಾದರೆ ನೀವು ದೇಶದ್ರೋಹಿಗಳಲ್ಲವಾದರೆ ನಿಮ್ಮೆಲ್ಲರ ಪವಿತ್ರವಾದ ಓಟನ್ನು ಕಾಂಗ್ರೆಸಿನವರ ಹಳದಿ ಬಣ್ಣದ ಪೆಟ್ಟಿಗೆಗೆ ಹಾಕಿ ಕಾಂಗ್ರೆಸಿನ ಜಯಭೇರಿ ಕೇಳಿಸಿ ಆನಂದಪಡಿರಿ

ಎಂ ಎಸ್ ಅಧಿಕಾರಿ

ಭಾವಚಿತ್ರದ ಬಹುಮತಿಯು 31-3-37 ಮುಗಿಯುವುದು.

ನಿಮ್ಮ ಹೆಸರನ್ನು ವಿಳಾಸದೊಂದಿಗೆ ಟಿ. ಟಿ. ಕೃಷ್ಣಮಾಚಾರಿ, 11/14, ಅರಮನೆಕಾರ ಬೀದಿ, ಮದರಾಸು. ಈ ವಿಳಾಸಕ್ಕೆ 5 ದೊಡ್ಡ ಲಕ್ಸ್ ಟಾಯಿಲೆಟ್ ಸೋಪ್ ರಾಪ್ಪರೊಂದಿಗೆ ಕಳುಹಿಸಿದರೂ ಅಥವಾ ತಂದರೂ, ಪ್ರಖ್ಯಾತಿಯೊರೆ ಸಿನಿಮಾ ತಾರೆಯರ ಒಂದು ಭಾವಚಿತ್ರವನ್ನು ಹೊಂದುವಿರಿ

B-LTB X 274-333A KANARESE

ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಯುವಕರ ಮತ್ತು ವಿದ್ಯಾರ್ಥಿಗಳ ಕರ್ತವ್ಯ

ಎಸೆಂಬ್ಲಿ ಚುನಾವಣೆಗೆ ಇನ್ನು ಕೆಲವು ದಿವಸಗಳು ಮಾತ್ರ ಇವೆ ಈ ಸಮಯದಲ್ಲಿ ಯುವಕರು ಮತ್ತು ಶಾಲಾ ವಿದ್ಯಾರ್ಥಿಗಳು ತಾವು ಮಾಡತಕ್ಕ ಕರ್ತವ್ಯ ಮತ್ತು ಸೇವೆ ಏನಿದೆಯೆಂಬುದನ್ನು ಆಲೋಚಿಸುವದು ಅಗತ್ಯವಿದೆ ಯಾವ ಜನಾಂಗಗಳ ಮತ್ತು ರಾಷ್ಟ್ರಗಳ ಏಳಿಗೆಯು ಆಗಬೇಕಾದರೆ ಅದು ಯುವಕರಿಂದಲೇ ಆಗಬೇಕು ನಮ್ಮ ದೇಶದ ಭವಿಷ್ಯವು ನಮ್ಮ ಯುವಕರ ಮೇಲೆ ಹೊಂದಿಕೊಂಡಿದೆ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದ ಇತರ ದೇಶಗಳಲ್ಲಿ ಯುವಕರು ರಾಷ್ಟ್ರೀಯ ಚಳವಳದಲ್ಲಿ ಹೆಚ್ಚಿನ ಭಾಗವನ್ನು ವಹಿಸಿದ್ದರಿಂದಲೇ ಅವುಗಳಿಗೆ ಸ್ವಾತಂತ್ರ್ಯ ದೊರಕಿದೆ 1914ನೇ ಇಸವಿಯ ಯೂರೋಪಿನ ಘೋರ ಯುದ್ಧದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಕಾಲೇಜುಗಳಿಂದ ಹೊರಗೆ ಬಂದು ಯುದ್ಧದಲ್ಲಿ ಭಾಗವಹಿಸಿದ ಸಂಗತಿಯು ನಮಗೆ ಗೊತ್ತಿದೆ ಆದರೆ ಮಹಾತ್ಮಾ ಗಾಂಧಿಯವರು ನಮ್ಮ ದೇಶದಲ್ಲಿ ಅಸಹಕಾರ ಮತ್ತು ಕಾಯಿದೆಭಂಗ ಚಳವಳಗಳನ್ನು ಹೂಡಿ ವಿದ್ಯಾರ್ಥಿಗಳನ್ನು ಶಾಲೆಗಳಿಂದ ಮತ್ತು ಕಾಲೇಜುಗಳಿಂದ ಹೊರಗೆ ಬರಬೇಕೆಂದು ಕೇಳಿದಾಗ ಅದಕ್ಕೆ ಹೆಚ್ಚಿನ ವಿದ್ಯಾರ್ಥಿಗಳ ಪ್ರೋತ್ಸಾಹವು ಸಿಕ್ಕಲಿಲ್ಲ ನಮ್ಮ ದೇಶದಲ್ಲಿ ಯುವಕರ ಚಳವಳವು ಸರಿಯಾಗಿ ಬೆಳೆದಿರಲಿಲ್ಲ ಮಹಾತ್ಮಾ ಗಾಂಧಿಯವರು ನಮ್ಮ ದೇಶದ ಯುವಕರಲ್ಲಿಟ್ಟಿದ್ದ ನಿರೀಕ್ಷಣೆ ಮತ್ತು ಆಶಯದಲ್ಲಿ ತಪ್ಪಿಹೋದರು ನಮ್ಮ ದೇಶದ ಜನರು ಮತ್ತು ಯುವಕರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಇನ್ನು ಸಂಪೂರ್ಣವಾಗಿ ತಯಾರಿಲ್ಲವೆಂದು ಎಣಿಸಿ ಕಾಂಗ್ರೆಸು ಮಹಾತ್ಮಾಗಾಂಧಿಯವರ ಉಪದೇಶದ ಮೇರೆಗೆ ಸತ್ಯಾಗ್ರಹ ಮತ್ತು ಕಾಯಿದೆಭಂಗ ಚಳವಳಗಳನ್ನು ಹಿಂತೆಗೆದುಕೊಂಡು ದೇಶದ ಪ್ರಕೃತದ ಪರಿಸ್ಥಿತಿಯನ್ನು ಪರಿಗಣಿಸಿ ಈ ಸರಕಾರ ಕಾಯಿದೆಮಂಡಲಗಳಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿ ಅಲ್ಲಿ ಕೂಡಾ ಸರಕಾರದವರೊಡನೆ ಹೋರಾಡಬೇಕೆಂದು ನಿಶ್ಚಯಿಸಿದೆ ಕಾಂಗ್ರೆಸು ಈಗ ಯುವಕರೊಡನೆ ಜೈಲಿಗೆ ಹೋಗಬೇಕೆಂದು ಅಥವಾ ಲಾಠಿ ಪೆಟ್ಟು ತಿನ್ನಬೇಕೆಂದು ಕೇಳುವುದಿಲ್ಲ ಏನೂ ತ್ಯಾಗವು ಅವಶ್ಯವಿಲ್ಲದ ಈ ಚುನಾವಣೆಯ ಚಳವಳದಲ್ಲಿಯಾದರೂ ಯುವಕರು ಮತ್ತು ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ಮರೆಯುವರೇ ಎಂದಿಗೂ ಮರೆಯಲಿಕ್ಕಿಲ್ಲವೆಂದು ನಿರೀಕ್ಷಿಸಬಹುದಾಗಿದೆ

ಹಾಗಾದರೆ ಯುವಕರು ಮತ್ತು ವಿದ್ಯಾರ್ಥಿಗಳು ಈ ಚುನಾವಣೆಯಲ್ಲಿ ಯಾವ ಸೇವೆಯನ್ನು ಮಾಡಬಹುದು ಎಂಬುದನ್ನು ಸ್ವಲ್ಪ ವಿಚಾರಿಸುವ ಈ ಚುನಾವಣೆಯಲ್ಲಿ ಕಾಂಗ್ರೆಸನ್ನು ವಿರೋಧಿಸುವವರ ಕೂಡೆ ಧನಬಲವಿದೆ ಅಧಿಕಾರ ಬಲವಿದೆ ಆದರೆ ಕಾಂಗ್ರೆಸ್ಸು ಬಡ ಮತ್ತು ಬಡವರ ಸಂಸ್ಥೆ ಜನರ ವಿಶ್ವಾಸ ಮತ್ತು ಪ್ರೀತಿಯೇ ಅದರ ಐಶ್ವರ್ಯ ಒಂದು ಪಕ್ಷಕ್ಕೆ ಕಾಂಗ್ರೆಸಿನವರ ಕೂಡೆ ಯಥೇಷ್ಟ ಹಣವಿದ್ದರೂ ಇಂಥಾ ಚುನಾವಣೆಗಳಲ್ಲಿ ಅವರು ಹಣವನ್ನು ಹಾಳುಮಾಡಲಾರರು ಈ ಚುನಾವಣೆಯಲ್ಲಿ ಯುವಕರು ಮತ್ತು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಮುಂದೆ ಬರಬೇಕು. ಚುನಾವಣೆಯ ಮುಂಚಿನ ಒಂದು ವಾರವನ್ನು ಇಡೀ ಜಿಲ್ಲೆಯಲ್ಲಿ ಪ್ರತಿಯೊಂದು ಪಟ್ಟಣದಲ್ಲಿಯೂ ಗ್ರಾಮದಲ್ಲಿಯೂ 'ಕಾಂಗ್ರೆಸ್ ಚುನಾವಣೆಯ ವಾರ'ವನ್ನಾಗಿ ಆಚರಿಸಬೇಕು. ಪ್ರತಿದಿನವೂ ಆಯಾಯ ಪಟ್ಟಣ ಮತ್ತು ಗ್ರಾಮಗಳ ಯುವಕರು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ರಾಷ್ಟ್ರೀಯ ಗೀತಗಳನ್ನು ಹಾಡಿಕೊಂಡು 'ಕಾಂಗ್ರೆಸಿಗೆ ಓಟು ಕೊಡಿರಿ! ಸ್ವಾತಂತ್ರ್ಯವನ್ನು ಗಳಿಸಿ ದೇಶದ ಬಡತನವನ್ನು ನಿವಾರಣೆ ಮಾಡಿರಿ' ಎಂದು ಹೇಳಿಕೊಂಡು ಮೆರವಣಿಗೆಯಲ್ಲಿ ಪ್ರತಿಯೊಂದು ಹಳ್ಳಿಯ ಮತ್ತು ಪಟ್ಟಣದ ಮೂಲೆ ಮೂಲೆಗೆ ಹೋಗಿ ಜನರಲ್ಲಿ ಜಾಗ್ರತಿಯನ್ನೂ ಉತ್ಸಾಹವನ್ನೂ ಉಂಟುಮಾಡಬೇಕು. ಚುನಾವಣೆಯ ದಿನ ಆಯಾಯ ಗ್ರಾಮಗಳ ಮತ್ತು ಪಟ್ಟಣಗಳ ಸ್ವಯಂಸೇವಕರು ಪ್ರಾತಃಕಾಲ 6 ಘಂಟೆಗೆ ಎದ್ದು ತಮ್ಮ ತಮ್ಮ ಒಳಗೆ ಸಂಗಡಿಗಳನ್ನು ಮಾಡಿ ಮೇಲಿನ ಘೋಷಣೆಗಳನ್ನು ಹೇಳಿಕೊಂಡು ಮೆರವಣಿಗೆಯಲ್ಲಿ ಕಾಲುನಡೆಯಿಂದ ಓಟರರನ್ನು ಸಮ್ಬಂಧಪಟ್ಟ ಪೋಲಿಂಗ್ ಸ್ಟೇಶನಿಗೆ ಕರೆದುಕೊಂಡು ಹೋಗಿ ಕಾಂಗ್ರೆಸಿಗೆ ಅವರ ಓಟುಗಳನ್ನು ಕೊಡಿಸಬೇಕು ಏನೂ ತ್ಯಾಗವಿಲ್ಲದ ಈ ಅಲ್ಪ ಸೇವೆಯನ್ನು ಮಾಡಿ ಕಾಂಗ್ರೆಸಿನ ಗೌರವವನ್ನೂ ಯಶಸ್ಸನ್ನೂ ಕಾಪಾಡಿ ಕಾಂಗ್ರೆಸಿನ ಜಯ ಧ್ವಜವನ್ನು ಎತ್ತಿ ಹಿಡಿಯಬೇಕಾಗಿ ಜಿಲ್ಲೆಯ ಎಲ್ಲಾ ಯುವಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ.

ಎಂ ಎಸ್. ಅಧಿಕಾರಿ.

ಸ್ವಾರಸ್ಯದ ವಿಷಯಗಳು.

ಇಂಗ್ಲೆಂಡಿನ ಲ್ಯೂಸ್ ಎಂಬಲ್ಲಿನ ಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದ, ಜಸ್ಟಿಸ್ ಮೆಕಿನರವರು ೨ ಘಂಟೆ ೫೪ ಮಿನಿಟು ನಡೆದ ಕೋರ್ಟು ವ್ಯವಹರಣೆಯಲ್ಲಿ ೪೨ ವಿವಾಹ ವಿಚ್ಛೇದ ಅರ್ಜಿಗಳನ್ನು ವಿಚಾರಿಸಿ ಹುಕುಂ ಇತ್ತಿರುವರು.

ಇಡೀ ಇಂಗ್ಲೆಂಡಿನಲ್ಲಿ ಬಟ್ಟನೇ ಬಟ್ಟ ಕುರುಡ ವ್ಯಾಪಾರಸ್ಥನಿದ್ದಾನೆ ಪೊಲ್ಲಿ ಪೆರ್ಕಿನ್ಸ್ ಎಂದು ಅವನ ಹೆಸರು ಇವನ ಅಂಗಡಿಯಲ್ಲಿ ಸುಮಾರು ೨೦೦ ಬಗೆಯ ಸಾಮಾನುಗಳಿರುವುವು ಗಿರಾಕಿಗಳು ಕೇಳಿದ ಸಾಮಾನನ್ನು ಅವನು ಯಾವ ತೊಂದರೆಯೂ ಇಲ್ಲದೆ ಹುಡುಕಿ ತೆಗೆದುಕೊಡುವನು.

ಬಾಗಿಲುಗಳಿಗೆ ಬೀಗಹಾಕುವ ಕಾಲವು ಹೋಯಿತು ವಿಜ್ಞಾನಿಗಳು ವಿದ್ಯುತ್‌ಶಕ್ತಿಯಿಂದ ಎರಡು ಬಾಗಿಲುಗಳನ್ನು ಸೂಜಿಕಲ್ಲಿನ ಶಕ್ತಿಯಿಂದ ಒಂದಕ್ಕೊಂದು ಹಿಡಿದುಕೊಂಡಿರುವಂತೆ ಒಂದು ನವೀನ ಕ್ರಮವನ್ನು ಕಂಡು ಹಿಡಿದರು. ಅದನ್ನು ತೆರೆಯಲು ಮುಚ್ಚಲು ಒಂದು ವಿಧಾನವಿರುವುದು ಅದು ಯಜಮಾನನಿಗೇ ಗೊತ್ತು ಕಳ್ಳರು ಪ್ರಯತ್ನಪಟ್ಟರೆ, ಆ ವಿಧಾನವು ಕ್ರಮತಪ್ಪಿ, ಕೂಡಲೇ ಗಂಟೆ ಬಾರಿಸಲ್ಪಡುವುದು

ಇಂಗ್ಲೆಂಡಿನ ಅರಸನಾದ ಎಂಟನೇ ಹೆನ್ರಿಯ ಕಾಲದಲ್ಲಿ ಜಾರಿ ಮಾಡಿದ ಕಾನೂನು ಪ್ರಕಾರ ಪ್ರತಿಯೋರ್ವ ವೈದ್ಯಕೀಯ ವಿದ್ಯಾರ್ಥಿಯೂ ಕೂಡ ಲಂಡನಿನ ಬಿಶಪರಿಂದ ಶಿಫಾರಸು ಪಡೆದು ಆ ಮೇಲೆ ಉದ್ಯೋಗವನ್ನಾರಂಭಿಸಬೇಕು

ಕಳೆದ ವರ್ಷದ ಪ್ರತಿ ತಿಂಗಳಲ್ಲಿ ಐದೈದು ಡಾಕ್ಟರುಗಳು ಚಿಕಾಗೋದಲ್ಲಿ ಕಳ್ಳರ ಸುಲಿಗೆಗೆ ಒಳಗಾಗಿದ್ದಾರೆ ಅವರನ್ನು ಹಿಡಿಯಲು ೫೦ ಡಾಲರುಗಳ ಬಹುಮಾನವಿಟ್ಟಿರುವರು

ಎರಡು ಭಾಷೆ ಬಲ್ಲ ಗಿಳಿ

ಆಫ್ರಿಕದ ಆರೆಂಜ್ ಫ್ರೀ ಸ್ಟೇಟಿನ 'ಹೂಪ್ ಸ್ಟೆಡ್', ಎಂಬಲ್ಲಿ ೧೦೩ ವರ್ಷ ಪ್ರಾಯದ ಒಂದು ಗಿಳಿಯು ಸತ್ತುಹೋಯಿತು. ಅದು ಇಂಗ್ಲಿಷ್ ಮತ್ತು ಆಫ್ರಿಕಾ ದೇಶದ ಭಾಷೆಗಳನ್ನು ಚೆನ್ನಾಗಿ ಮಾತನಾಡುತ್ತಿತ್ತಂತೆ. ಅದು ಉಚ್ಚರಿಸುವ ಪ್ರತಿವಾಕ್ಯವೂ ಮೊದಲು ಇಂಗ್ಲಿಷಿನಿಂದಲೂ ಇದ್ದು ನಂತರದ ಇನ್ನೊಂದು ವಾಕ್ಯವನ್ನು ಇಂಗ್ಲಿಷಿನ ಭಾಷಾಂತರಮಾಡಿ ಆಫ್ರಿಕಾ ದೇಶದ ಭಾಷೆಯಲ್ಲಿ ನುಡಿಯುತ್ತಿತ್ತಂತೆ. ಹೀಗೆ ಒಂದೇ ಅರ್ಥದ ವಾಕ್ಯವನ್ನು ಅದು ಎರಡು ಭಾಷೆಗಳಲ್ಲಿ ಹೇಳಿ ತೋರಿಸುತ್ತಿತ್ತು.

ಬೊಬ್ಬಿಲಿ ರಾಜರ ಸಂಸ್ಥಾನದಲ್ಲಿ ಸರೋಜಿನೀ ದೇವಿಯವರ ಅನುಭವಗಳು.

ಆಂಧ್ರದೇಶದಲ್ಲಿ ಊರಿಂದೂರಿಗೆ ಸಂಚರಿಸುತ್ತ ಭಾಷಣ ಕೊಡುತ್ತ ಶ್ರೀ ಸರೋಜಿನೀ ದೇವಿಯವರು ಪ್ರವಾಸ ಮಾಡುತ್ತಿರುವರಷ್ಟೆ. ಒಂದೂವರೆ ತಿಂಗಳಿಂದ ಹಿಂದೂಸ್ಥಾನದಲ್ಲೆಲ್ಲ ಸಂಚರಿಸುತ್ತ ಬರುತ್ತಿರುವ ದೇವಿಯವರಿಗೆ ವಿಚಿತ್ರವಾದ ಅನುಭವಗಳು ಬೊಬ್ಬಿಲಿಯಲ್ಲಿ ಉಂಟಾದುವು. ರಾಷ್ಟ್ರಪತಿ ಜವಾಹರಲಾಲರಿಗೇ ಆತಂಕಗಳು ನಡೆದ ಬೊಬ್ಬಿಲಿಯಲ್ಲಿ ಜನರಿಗೆ ನ್ಯಾಯವನ್ನು ಮಾಡುವ ಉದ್ದೇಶವನ್ನಿಟ್ಟುಕೊಂಡವರೆಂಬ ಜಸ್ಟಿಸ್ (ನ್ಯಾಯ ಕಾರೀ) ಪಕ್ಷದ ಅಧಿನಾಯಕ ರಾಜರ ಸಂಸ್ಥಾನವಿದು ಅವರ ತಿಳುವಳಿಕೆಯಿಂದ ಈ ಅಪೂರ್ವ ಘಟನೆಗಳಾಗುವುವೆಂದು ಯಾರೂ ತಿಳಿಯಲಾರರಾದರೂ, ಅಲ್ಲಿನ ವಾತಾವರಣವನ್ನೆ ಹಾಳುಮಾಡುವಷ್ಟು ತವಕಗೊಳ್ಳುವ ಸಾಧಕರು ರಾಜರ ಸ್ವೀಕೃರ್ಥವಾಗಿ ಕೈಕೊಳ್ಳುವ ಏರ್ಪಾಡುಗಳನ್ನು ಕಂಡರೆ, ರಾಜರಿಗೆ ಹೇಗೆನಿಸಬಹುದೋ ದೇವಿಯವರಿಗಂತೂ ಮನಸ್ಸು ಉದ್ವಿಗ್ನಗೊಂಡಿದೆಯಾದರೂ ಅವರು ಶಾಂತಚಿತ್ತರಾಗಿ ಅಲ್ಲೀ ನೆರೆದ ಜನರಿಗೆ ನಾಲ್ಕು ಮಾತು ತಿಳಿಸಿರುವರು ಈ ಮಾತುಗಳಲ್ಲಿ ನ್ಯಾಯ (ಜಸ್ಟಿಸ್) ಎಷ್ಟಿದೆ ಎಂಬುದನ್ನು ವಾಚಕರು ತಾವಾಗಿ ತಿಳಿದುಕೊಂಡು ಬೇಕಾದ ಅಭಿಪ್ರಾಯಗಳನ್ನು ಮಾಡಿಕೊಳ್ಳಬಹುದು

ಬೊಬ್ಬಿಲಿಯಲ್ಲಿ ಕೊಂಗ್ರೆಸ್ ಪಕ್ಷದ ಸಭೆಯು ಖಾಸಗಿ ಜಾಗದಲ್ಲೇ ಸೇರುವುದಾಗಿತ್ತು ದೇವಿಯವರ ಜತೆಯಾಗಿ ಒಂದು ಬಸ್ಸು ತುಂಬಾ ಪೋಲಿಸರೂ ಡೆಪ್ಯೂಟಿ ಸುಪರಿಂಟೆಂಡೆಂಟರೂ ದಯಮಾಡಿಸಿದ್ದರು ಸಭೆ ಬೇಕಾದ ಸ್ಥಳದಲ್ಲೆಲ್ಲ ಆರಕ್ಷಕರುಗಳಾಗಿದ್ದವು' ಅಲ್ಲಿಗೆ ಹೋಗುವ ದಾರಿಗಳಿಗೆಲ್ಲ "ಖಾಸಗಿ" ಎಂದು ನೋಟೀಸು ತೂಗಿಸಿದ್ದಿತು ಅಲ್ಲಿಗೆ ಬಂದ, ಬರುತ್ತಿದ್ದ ಜನರನ್ನು ಅಲ್ಲಿಂದ ಹಿಂದೆ ಕಳುಹುತ್ತಿದ್ದರೆಂದೂ ಊಹೆ ಆದರೂ ದೇವಿಯವರು ಪ್ರಯಾಣಮಾಡುತ್ತಿರುವಾಗಲೆಲ್ಲ ಅಲ್ಲಲ್ಲಿ ಜನರ ಗುಂಪುಗಳಿದ್ದುವು ಸಭೆಗೆ ಆರಂಭವಾಗುವಾಗ ಅಲ್ಲಿ ೨೦೦ ಜನರೇ ಮಾತ್ರವಿದ್ದರೂ, ಪೋಲಿಸರು ಅಲ್ಲಿಗೆ ಬಂದುದರಿಂದ ಧೈರ್ಯಗೊಂಡು, ಹಲವು ಸಾವಿರ ಜನರು ಅಲ್ಲಿ ಸೇರಿದರು ಎಲ್ಲವೂ ಮೌನವೂ ಶಾಂತವೂ ಆಗಿದ್ದಿತು ದೇವಿಯವರ ಭಾಷಣದ ಸಾರಾಂಶವು ಹೀಗಿದ್ದಿತು —

ಕೊಂಗ್ರೆಸ್ಸಿಗೆ ವಿರುದ್ಧವಾಗಿರುವ ಪಕ್ಷವು ಇಲ್ಲಿ ಈ ಚುನಾವಣೆಗಳ ಕಾಲದಲ್ಲಿ ಕೆಲವು ಕೃತ್ಯಗಳನ್ನು ಮಾಡುತ್ತಲೇ ಇದೆ ಈ ಕೃತ್ಯಗಳಿಗೆ ಜವಾಬ್ದಾರಿಯನ್ನು ಆ ಪಕ್ಷಕ್ಕೆ ಸಂಬಂಧಿಸಿರುವ ಯಾವನೊಬ್ಬನಾಗಲೀ, ಆ ಪಕ್ಷವೇ [illegible] ಬಹಿರಂಗವಾಗಿ ಒಪ್ಪಿಕೊಳ್ಳುವ ಹಾಗಿಲ್ಲ ಬೊಬ್ಬಿಲಿ ರಾಜರ ಕೈಕೆಳಗಿನವರು ಅವರ ಹೆಸರಲ್ಲಿ ಕೆಡುಕರಂತೆ ವರ್ತಿಸಿದುದನ್ನು ಕೇಳಿದ್ದೇವೆ ಈ ಹಾಳು ವರ್ತನವು ಜನಾಂಗದ ಮುಂದಾಳುವು ಇಲ್ಲ ಎಂದಾಗಲೂ ಪ್ರಕಟವಾಗುತ್ತಲೇ ಇದೆ ಈಗ ನಾನೇ ಕಣ್ಣಾರೆ ಕಂಡುದಾಯಿತು. ಮರ್ಯಾದೆಯುಳ್ಳ ಯಾವ ಸಮಾಜವೂ ಇಂತಹ ಕೃತಿಗಳನ್ನು ಸಹಿಸಲಾರದು ಸುಧಾರಿತವಾದ ಯಾವುದೊಂದು ದೇಶದಲ್ಲಿ ಚುನಾವಣೆಗೆ ನಿಂತ ಪ್ರತಿ ಉಮೇದುವಾರನಿಗೂ ಓಟರರಿಂದ ಅಭಿಪ್ರಾಯ ಪಡೆಯಲು ಬೊಬ್ಬಿಲಿಯಲ್ಲಿ ಓಟರರನ್ನು ಕಾಣುವುದಕ್ಕೂ ವಿರುದ್ಧ ಪಕ್ಷದವರಿಗೆ ಸಾಧ್ಯವಾಗದಂತೆ ವ್ಯವಸ್ಥಿತ ರೀತಿಯಲ್ಲಿ ಕೆಡುಕರ ತಂಟೆಗಳಿವೆ ಇಂದು ನಾನು ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಬೊಬ್ಬಿಲಿಯ ರಾಜರ ಹೆಸರಲ್ಲಿ ಅವರ ಕೈಕೆಳಗಿನ ಆಳುಗಳು ಮಾಡುತ್ತಿರುವ ಕೃತಿಗಳನ್ನು, ಆ ರಾಜರು ತಿಳಿದಿಲ್ಲವೆಂದು ಭಾವಿಸುತ್ತೇನೆ. ಇವು ಆ ರಾಜರ ಹೆಸರಿಗೆ ಗೌರವನ್ನುಂಟುಮಾಡಲಾರವು ಯಶಸ್ಸನ್ನುಂಟುಮಾಡಲಾರವು ಬೊಬ್ಬಿಲಿ ರಾಜರ ವರ್ಗದ ಹಲವು ಜನರನ್ನು ನಾನು ತಿಳಿದಿರುವೆನು ಇಂಥವರ ಆತಿಥ್ಯವು ನನಗೆ ದೊರೆತಿದೆ ಹೀಗಿರುವುದರಿಂದಲೇ ಈ ರಾಜರ ಹೆಸರಿಂದ ಇಲ್ಲಿ ನಡೆದ ನೀಚ ಮತ್ತು ಗೋಪ್ಯವಾದ ದುಷ್ಕೃತಿಗಳು ಅವರಿಗೆ ತಿಳಿದಿಲ್ಲವೆಂದೇ ನಾನು ಎಣಿಸಬೇಕಾಗಿದೆ ಎದುರು ಪಕ್ಷದವರ ಮೋಟಾರುಗಳ ಮೇಲೆ ಕಲ್ಲೆಸೆಯುವುದು, ತನ್ನ ಮೋಟಾರನ್ನು ಎದುರುಪಕ್ಷದವರ ಮೋಟಾರುಗಳ ನಡುವೆ ತಂದು ಧಕ್ಕೆ ಬಡಿಸುವುದು, ಢೋಲು ಬಾರಿಸುವುದು, ಆನೆಗಳನ್ನು ಜನಸ್ತೋಮ ಕೂಡಿದ ಸಭೆಯ ಮೇಲೆ ಎರಗಿಸುವುದು ಮೊದಲಾದ ಕೃತಿಗಳಿಂದ ರಾಜಾಗೆ ಹೆಚ್ಚಿನ ಓಟುಗಳು ದೊರೆವಂತೆ ಸಾಧಿಸಲಾರದು ಪ್ರಪಂಚವು ಎಷ್ಟೆಂದರೂ ಈಗ ಕಿರಿದಾಗುತ್ತ ಬಂದಿದೆ, ನನಗಿಲ್ಲಿ ಇಂದು ಉಂಟುಮಾಡಿರುವ ಹಿಂಸೆಯು ಕೆಲವೇ ತಾಸುಗಳಲ್ಲಿ ಎಲ್ಲರ ಕಿವಿಗೂ ಬೀಳದಿರದು ನಾನು ಬೊಬ್ಬಿಲಿಯ ಜನರ ಕಡೆಯನ್ನು ಕೇಳಿಯೇ ಬಂದೆನು ಅವರ ಆತಿಥ್ಯವನ್ನು ಪಡೆಯುವ ನಾನು, ಆತಿಥ್ಯ [illegible] ಗೆ ವಿರುದ್ಧವಾದ ಹಾಗೂ ಆಕ್ಷೇಪಕವಾದ ರೀತಿಯಲ್ಲಿ ವರ್ತಿಸಲಾರೆನು ರಾಜರು ತಮ್ಮ ಹೆಸರನ್ನು ಉಚ್ಚಸ್ಥಾನದಲ್ಲಿ ಇಡಬೇಕಾಗಿ ಬಯಸಿರುವರು, ಅವರ ಹೆಸರ ಮೇಲೆ ನಾನು ಸುಲಭವಾಗಿ ಕೆಸರೆರಚಬಹುದು ಆದರೆ, ನಾನೂ ಅವರೂ ಭಾರತವಾಸಿಗಳು, ಒಂದೇ ಜನಾಂಗದವರು, ಭಾರತವರ್ಷವು ಸ್ವರಾಜ್ಯಹೊಂದಿದಾಗ ಅವರೂ ಅದೇ ಸ್ವರಾಜ್ಯ ಧ್ವಜದ ನೆಳಲಲ್ಲಿ ಜೀವನಮಾಡಬೇಕಾಗ ವುದು ಎಂದು ತಿಳಿದೇ ಅವರ ಹೆಸರಿಗೆ ಅಗೌರವವನ್ನೇನೂ ನುಡಿಯುವುದಿಲ್ಲ

ಎಷ್ಟೆಂದರೂ, ಒಬ್ಬ ಮನುಷ್ಯನ ಯೋಗ್ಯತೆಯನ್ನು ಆತನ ಆಡಂಬರ ವಿಜೃಂಭಣೆಗಳಿಂದ ಭಂಡಾರದಿಂದ, ಅವನ ಆನೆ, ಕುದುರೆಗಳ ಸಂಖ್ಯೆಯಿಂದ ಯಾರೂ ನಿರ್ಧರಿಸುವುದಿಲ್ಲವಷ್ಟೆ ಮನುಷ್ಯನ ಯೋಗ್ಯತೆಯನ್ನು ನಿರ್ಧರಿಸುವುದು, ಅವನ ಹಣವಲ್ಲ ಅವನ ಗುಣ ವಿವೇಕ, ರೀತಿನೀತಿಗಳ ಭಾರತೀಯರ ದಾಸ್ಯ ಜನಾಂಗವಾಗಿದೆ ಇಬ್ಬರು ದಾಸರು ನಿಮ್ಮೆದುರಲ್ಲಿರುವರು ಅವರಲ್ಲೊಬ್ಬರ ಶ್ರೀಮಂತ ಜಮೀನ್ದಾರರಾಗಿರುವ ಬೊಬ್ಬಿಲಿಯ ರಾಜರು, ಇನ್ನೊಬ್ಬರು ಹತ್ತು ಸಹಸ್ರ ಬೊಬ್ಬಿಲಿಯ ರಾಜರೂ ಪಡೆಯಲಸಾಧ್ಯವಾಗಿರುವ ಭಕ್ತಿಯನ್ನು ಪಡೆಯುತ್ತಿರುವ ಹಾಗೂ ಪ್ರಪಂಚದ ಕಣ್ಣುಗಳೇ ದಿಟ್ಟಿಸುತ್ತಿರುವ ಬಡ ದಾಸರಾಗಿರುವ ಪಂಡಿತ ಜವಾಹರಲಾಲರು ಎರಡನೇಯವರಾಗಿರುವ ಇವರು ಜನಾಂಗದ ಪ್ರತಿನಿಧಿಯರಾಗಿದ್ದು, ಜನಾಂಗದ ವಾತ್ಸಲ್ಯವನ್ನೂ ಗೌರವವನ್ನೂ ಸಂಪಾದಿಸಿರುವರು ಜನಾಂಗದ ಹಿತಕ್ಕೆ ಸರಿಯಾಗದಂತೆ ಸರಕಾರದೊಡನೆ ಸಹಕರಿಸುವವರ ಪ್ರತಿನಿಧಿಗಳನ್ನು ಜನರು ತೊಲಗುತ್ತಾರೆ ದೀನ ದರಿದ್ರ ದಳಿತರ ಸಮಿತಿಯಾದ ಕೊಂಗ್ರೆಸ್ಸಿಗನೇ ಓಟುಕೊಡಿರಿ ನಿಮ್ಮನ್ನು ಲಂಚದಿಂದ ವಶಪಡಿಸಲೂ ಬೆದರಿಸಿ ಬಲಾತ್ಕರಿಸಲೂ ಒಲ್ಲದ ಶ್ರೀ ವಿ ವಿ ಗಿರಿಯವರಿಗೆನೇ ನಿಮ್ಮ ಓಟು ಕೊಡಿರಿ

ಎಲ್ಲಾ ತರದ
ಶುದ್ಧ ಖಾದಿಗೆ
ಸ್ವದೇಶಿ ವಸ್ತುಗಳಿಗೆ
ಮಂಗಳೂರು ಸ್ವದೇಶಿ ಸ್ಟೋರ್ಸ್
ರಥಬೀದಿ, ಮಂಗಳೂರು

ಅಧ್ಯಕ್ಷಾಗಮನಂ

ಸ್ವಾಗತಗೀತೆ

ಧಾಟಿ —(ಮೋಹನಮಂತ್ರ)

ಸ್ವಾಗತಂ ಸ್ವರಾಜ್ಯ[illegible]ರ ।
ರಾಷ್ಟ್ರಪತಿ ಜವಾಹರ ।ಪ।
ಸ್ವಾಗತಂ ಸ್ವತಂತ್ರ ಭಾರ
ತೀ ವಿಚಾರ ಮಂದಿರ ।ಅ ಪ।
ದೇಶಹಿತ ಸಮರ್ಥನದಾ ।
ಶೋಕಮಾನ್ಯ ಸಂಪದ
ದೇಶಬಂಧು ಕುಲವಿನೋದ
ದೀನಜನ ಸ ಖಾಸ್ಪದ ೧ ॥
ಭಾರತಾಯ ಜೀವಜ್ಯೋತಿ
ಘನವ ಹಾತ್ಮ ಸಾರಥಿ ।
ಧಾರಿಣೀಂದ್ರ ನಿಭವಿಭೂತಿ
ಅನಭಿಷಿಕ್ತ ಭೂಪತಿ ೨
ರಾಷ್ಟ್ರಸಭಾಧ್ಯಕ್ಷ ಕಾರ್ಯ
ದಕ್ಷ ಭಾರತೀಪ್ರಿಯ
ರಾಷ್ಟ್ರಪತಿ ಸ್ವದೇಶನಿಲಯ ।
ಸದಯ ಹೃದಯ ನಿರ್ಭಯ ॥ ೩
ಸ್ವಾಗತಂ ಸ್ವರ್ಗೀಯ ಕಮಲಾ
[illegible]ಹೃದ ಯ ನೋಮಂಗಲ ।
ಸ್ವಾಗತಂ ಸ ಕೀರ್ತಿ ವಿಮಲ ।
ಭಾವಿ [illegible] ಸುಮಂಗಲ ।೪
ಸ್ವಾಗತಂ ಸುರೇಂದ್ರ ವಿಭವ ।
ಮೋತಿಲಾಲ ಸಂಭವ ।
ಸ್ವಾಗತಂ ಮಹಾನುಭಾವ ।
ನವಜಯಂತ ವೈಭವ ।೫॥
ಸ್ವಾಗತಂ ಸಾಮ್ರಾಜ್ಯಸಮರ
ವಿಜಯ ವಿಜಯ ಭಾಗ್ಯ
ಸ್ವಾಗತಂ ಸ್ವತಂತ್ರಭಾರ
ತಾಭಿರಾಮ ಶ್ರೀಕರ ೬ ॥

ಪುಂಡೂರು
ಲಕ್ಷ್ಮೀನಾರಾಯಣ ಪುಣಿಂಚತ್ತಾಯ

ಸಕ್ಕರೆ ಕದ್ದಕ್ಕೆ ಟಾಪು ಶಿಕ್ಷೆ

ಜಲಂಧರಿನ ಜೀವನ್ ಎಂಬವನು ಒಂದು ರೈಲ್ವೇ ದಾಸ್ತಾನು ಕೋಣೆಯಿಂದ ೧॥ ರೂಪಾಯಿ ಬೆಲೆಬಾಳುವ ಸಕ್ಕರೆಯನ್ನು ಕದ್ದನೆಂಬ ಅಪರಾಧದ ಮೇಲೆ ಅವನಿಗೆ ಜನ್ಮಾಂತರ ಟಾಪು ಶಿಕ್ಷೆಯನ್ನು ವಿಧಿಸಿರುವರು ಈ ಪುಣ್ಯಾತ್ಮನಿಗೆ ೩೨ ವರ್ಷಗಳ ಜೈಲು ಅನುಭವವಿದೆಯಂತೆ

ಪ್ರಾಂತೀಕ ಕಾಂ. ಕಮಿಟಿಗಳಲ್ಲಿ ರಾಷ್ಟ್ರಾಧ್ಯಕ್ಷರ ಕೇಳಿಕೆ.

ನಮ್ಮೆದುರಿಗಿರುವ ಸಮಯವು ಬಹಳ ಸ್ವಲ್ಪವೇ ಆಗಿರುವುದರಿಂದ ಎಲ್ಲಾ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು, ತಮ್ಮ ಕೆಳಗಿನ ಸ್ಥಳೀಯ ಎಲ್ಲ ಕಮಿಟಿಗಳನ್ನು ಅಧಿಕಾರ ಸ್ವೀಕಾರದ ಪ್ರಶ್ನೆಯ ಕುರಿತು ತಿಳಿಸಿ ಅವರ ಅಭಿಪ್ರಾಯಗಳನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಗೆ ತಿಳಿಸಬೇಕಾಗಿ ವಿನಂತಿಸುತ್ತೇನೆ, ಅಭಿಪ್ರಾಯಗಳನ್ನು ಬರೆದು ಕಳುಹಿಸುವಾಗ ಅವುಗಳು ಸಂಕ್ಷಿಪ್ತವಾಗಿರದೆ, ಸವಿಸ್ತಾರವಾಗಿರಬೇಕು ಕಾಂಗ್ರೆಸು ನವರಾಜ್ಯಾಂಗದ ಆಚರಣೆಯನ್ನು ನಿರಾಕರಿಸಲಿಕ್ಕಾಗಿ ನಿರ್ಧರಿಸಿ ಠರಾವು ಮಾಡಿದುದನ್ನು ಯಾವ ರೀತಿಯಲ್ಲಿ ನಿರ್ವಹಿಸಬಹುದೆಂದು, ಪ್ರಾಂತೀಕ ಸಭೆಗಳಿಂದ ಬಂದ ಈ ಅಭಿಪ್ರಾಯಗಳಿಂದ ತಿಳಿಯಲು ಅನುಕೂಲವಾಗುತ್ತದೆ '

ಪ್ರತಿ ಪ್ರಾಂತ್ಯಗಳಲ್ಲಿ ಜಯಶೀಲರಾದ ಕಾಂಗ್ರೆಸ್ ಉಮೇದವಾರರ ಸವಿಸ್ತಾರ ವರದಿಯನ್ನು ಅಖಿಲ ಭಾರತ ಕಾಂಗ್ರೆಸ್ ಸಭೆಗೆ ಕಳುಹಿಸಿಕೊಡಬೇಕೆಂದೂ ಅದರಲ್ಲಿ ಎಷ್ಟು ಮಂದಿ ಮತದಾರರು ಕಾಂಗ್ರೆಸ್ಸಿಗೆ ಓಟು ಕೊಟ್ಟಿರುವರೆಂಬ ವಿಷಯವನ್ನು ತಿಳಿಸಬೇಕಾಗಿಯೂ ಪಂ ಜ ನೆಹರುರವರು ಪ್ರಕಟಿಸಿರುವರು

ಪೋಲಿಂಗಿನ ಸಮಯದಲ್ಲಿ ಯಾವ ಯಾವ ಅಧಿಕಾರಿಗಳು ಏನೇನು ಮಾಡಿರುವರೆಂಬ ಸಂಗತಿಯನ್ನು ತಿಳಿಸತಕ್ಕದ್ದು

ಚುನಾವಣೆ ದಿನ ಯಾವದಾದರೂ ವಿಶೇಷ ಸಂಘಟನೆಗಳಾದರೆ ಅದನ್ನು ಅದರಲ್ಲಿ ತಿಳಿಸಬೇಕು

ದೊಡ್ಡ ಜಮೀನ್ದಾರರು ಯಾ ಅವರ ಕಡೆಯವರು ಒಕ್ಕಲಿಗರಿಗೆ ಭೀತಿ ತೋರಿಸಿದ ಸಂದರ್ಭಗಳನ್ನು ತಿಳಿಸತಕ್ಕದ್ದು

ಟಿನ್ನವೆಲ್ಲಿಯ ಕ್ರೈಸ್ತರ ಕಡೆಯಿಂದ ಜೆ ಎಲ್ ಪಿ ರುಚ್ ವಿಕ್ಟೋರಿಯಾ ಎಂಬವರ ಕಾಂಗ್ರೆಸ್ ಉಮೇದವಾರರಾಗಿ ನಿಯಮಿಸಲ್ಪಟ್ಟಿರುವರು ಅ ಭಾ ಕಾಂಗ್ರೆಸ್ ಪತ್ರಿಕೆಯನ್ನು ಮಾಡಿರುವರು

ಶ್ರೀಮತಿ ಸರೋಜಿನಿದೇವಿ ನಾಯ್ಡುಗಳು ತಮ್ಮ ಆಂಧ್ರದೇಶದ ಪ್ರವಾಸವನ್ನು ಮುಗಿಸಿ ಹೈದರಾಬಾದಿನಿಂದ ಮುಂಬಾಯಿಗೆ ಪಯಣ ಬೆಳೆಸಿದರು

ತಮಿಳುನಾಡಿನಲ್ಲಿ ಸಂಚಾರಮಾಡುತಿದ್ದ ಶ್ರೀ ರಾಜಗೋಪಾಲಾಚಾರ್ಯರವರು, ಭರದಿಂದ ಚುನಾವಣೆ ವಿಚಾರ ಪ್ರಚಾರಮಾಡುತ್ತಿರುವರು

ದೇವರು ಮುನಿದನೇ?

ಮೊರದಾಬಾದಿನಲ್ಲಿ ಮೌಲ್ವಿ ಆಶಾಕ್ ಉದ್ದೀನ್ ಎಂಬವನ ಅಕಸ್ಮಾತ್ ಮರಣದಿಂದಾಗಿ ತುಂಬಾ ಕಳವಳವೆದ್ದಿದೆ ಗಂಡನನ್ನು ಕಳಕೊಂಡ ಒರ್ವ ಮಹಿಳೆಯ ಮಗುವನ್ನು ಅವಳ ಸಂಬಂಧಿಕರು ಕಳಕೊಂಡದ್ದಕ್ಕೆ ಆ ವಿಧವೆಯು ದಾವೆ ಮಾಡಿದಳು ಸಾಕ್ಷಿಗಾಗಿ ಮೇಲಿನ ಮೌಲ್ವಿ ಆಶಾರುದ್ದೀನರನ್ನೂ ಕರೆಸಲಾಯಿತು ಕೋರ್ಟಿನಲ್ಲಿ ವಿಚಾರಣೆ ಸಮಯದಲ್ಲಿ ಮೌಲ್ವಿಯವರು ಹೀಗೆಂದರು 'ನಾನು ಸುಳ್ಳು ಹೇಳಿದ್ದಲ್ಲಿ ದೇವರ ಕೋಪವು ನನ್ನ ಮೇಲೆ ಬೀಳಲಿ', ವಿಚಾರಣೆಯು ಮುಂದುವರಿಯುತ್ತಿದೆ ಮೌಲ್ವಿಯವರು ಕೋರ್ಟಿನಿಂದ ಮನೆಗೆ ಬಂದೊಡನೆ ಅತಿಸಾರ ರೋಗದಿಂದ ಮರಣಪಟ್ಟರು ಈ ಶೋಚನೀಯ ಪರಿಸ್ಥಿತಿಯು ಅಲ್ಲಿನ ಜನರಲ್ಲಿ ದಿಗಿಲನ್ನುಂಟುಮಾಡಿದೆ

“ಕಾಂಗ್ರೆಸಿನ ಬಲವು ಅಧಿಕವಾಗಿರುತ್ತದೆ”

ಸರಕಾರದವರು ಚುನಾವಣೆಯಲ್ಲಿ ಯಾವತ್ತೂ ತರದ ಪ್ರೇರಣೆಯನ್ನು ನಡೆಯಿಸುವುದಿಲ್ಲವೆಂಬ ಭರವಸೆಯು ಈ ಮೊದಲೇ ದೊರಕಿತ್ತು. ಆದರೆ ಸಂಯುಕ್ತ ಪ್ರಾಂತ್ಯದವರು ಈ ಭರವಸೆಗೆ ವಿರೋಧವಾಗಿ ವರ್ತಿಸುತ್ತಿದ್ದಾರೆಂದು ವಾರ್ತೆ ಬಂದಿದೆ ಇತ್ತೀಚೆಗೆ ಜಿಲ್ಲಾ ಅಧಿಕಾರಿಗಳಿಗೆ ಒಂದು ಸರ್ಕಿಲಾರನ್ನು ಕಳುಹಿಸಿಕೊಟ್ಟಿರುತ್ತದೆ ಚುನಾವಣೆ ಕಾರ್ಯಕಲಾಪಗಳು ಅತಿ ಶಾಂತರೀತಿಯಿಂದಲೂ, ಅಹಿಂಸಾಧರ್ಮ ಸೂತ್ರವನ್ನನುಸರಿಸಿಯೂ ನಡೆಯುತ್ತಿದ್ದರೂ, ಈ ಸರ್ಕಿಲಾರು ಹೊರಟಿರುತ್ತದೆ. ಸ್ಥಿತಿಯು ಕೆಡದಂತೆ ಸೆಡಿಶನ್ ಆಕ್ಟನ್ನು ಅನುಸರಿಸಿ, ಜಿಲ್ಲಾ ಅಧಿಕಾರಿಗಳು ದಸ್ತಗಿರಿ ನಡೆಯಿಸಬಹುದೆಂದು ಈ ಸರ್ಕಿಲಾರಿನಲ್ಲಿದೆ ಈ ತರದ ಸರ್ಕಿಲಾರಿನಿಂದ ಕಾಂಗ್ರೆಸ್‌ವಾಲರಲ್ಲದಿರುವ ಅಸೆಂಬ್ಲಿ ಸದಸ್ಯರಿಗೂ ಆಶ್ಚರ್ಯ ಕಾಣಿಸಿದೆ ಆದರೂ ಕಾಂಗ್ರೆಸ್ಸಿಗೆ ನೂರಕ್ಕೆ ಮಿಕ್ಕಿದ ಸದಸ್ಯಸ್ಥಾನಗಳು ದೊರಕುವವೆಂಬ ಭರವಸೆಯಿದೆ.

ಈ ಕುರಿತು, ರಾಷ್ಟ್ರಪತಿ ಜವಾಹರಲಾಲ ನೆಹರೂಗಳು ಒಂದು ಪ್ರಕಟಣೆಯನ್ನು ಮಾಡಿರುವರು. ಅದರಲ್ಲವರು ಸರಕಾರದವರ ವರ್ತನೆಯನ್ನು ತೀವ್ರವಾಗಿ ಖಂಡಿಸಿರುವರು ಸೆಡಿಶನ್‌ನ ನೆಪದಿಂದ, ಕಾಂಗ್ರೆಸಿನ ಪರವಾಗಿ ಶಾಂತರೀತಿಯಲ್ಲಿ ಪ್ರಚಾರ ನಡೆಸುತ್ತಿರುವ ಅನೇಕ ಕಾಂಗ್ರೆಸ್ ವ್ಯಕ್ತಿಗಳು ಅಧಿಕಾರಿಗಳ ದಸ್ತಗಿರಿಗೊಳಗಾಗಿ, ಕೆಲವರು ಬಂಧಿಸಲ್ಪಟ್ಟ ವಾರ್ತೆಯು ಸಂಯುಕ್ತ ಪ್ರಾಂತ್ಯಗಳ ಅನೇಕ ಕಡೆಗಳಿಂದ ಬರುತ್ತಿದೆಯೆಂಬುದಾಗಿ ರಾಷ್ಟ್ರಪತಿಯವರ ಪ್ರಕಟಣೆಯಲ್ಲಿದೆ ಕಾಂಗ್ರೆಸ್ಸಿಗೆ ಬಲವು ಅಧಿಕವಾಗಿರುವುದರಿಂದಲೂ, ಕಾಂಗ್ರೆಸ್ಸಿಗೆ ಭೂರಿಜನರ ಮೇಲೆ ಸಂಪೂರ್ಣ ಶಕ್ತಿ ದೊರಕಿದುದರಿಂದ, ಸರಕಾರವು ಭೀತಿವಶವಾಗಿ ಹಾಗೆ ವರ್ತಿಸಿತೆಂದು ಶ್ರೀ ನೆಹರೂಗಳು ಈ ಪ್ರಕಟಣೆಯಲ್ಲಿ ಪ್ರಚುರಪಡಿಸಿರುವರು

ಯುರೋಪ್ಯದ ವಾತಾವರಣವು ಹೇಗಿದೆ?

ಹಿಟ್ಲರ ಮತ್ತು ಮುಸಲೀನಿಯ ಊಹನೆ ಪ್ರಕಾರ, ಸ್ಪೈಯಿನಿನಲ್ಲಿ ಪೆಸಿಯುಷ್ಟ ನಾಯಕನಾದ ಜನರಲ್ ಫ್ರೆಂಕೋವಿಗೆ ಇನ್ನೂ ಜಯ ಲಭಿಸಲಿಲ್ಲ ಬದಲಾಗಿ, ಆತನಿಗೆ ಅನೇಕ ಅಪಜಯಗಳು ಒದಗಿರುತ್ತವೆ ಆತನಿಗಾಗಿ ಯುದ್ಧಮಾಡಲು ಬಂದ ಜರ್ಮನ್ ಸಂಗ್ರಾಮ ಸ್ವಯಂಸೇವಕರು, ಸರಕಾರದ ಪೆಟ್ಟುಗಳನ್ನು ಸಹಿಸಲಾರದವರಾಗಿ, ಜನರಲ್ ಫ್ರೆಂಕೋನನ್ನು ತ್ಯಜಿಸಿಬಿಟ್ಟಿರುವರು ರೋಮನ್ ಕೆಥೋಲಿಕರ ಸಹಾನುಭೂತಿಯು ದಂಗೆಖೋರರೊಡನಿರುವುದು ರೋಮನ್ ಕೆಥೋಲಿಕ್ ಧರ್ಮಗುರುಗಳು ದಂಗೆಖೋರರನ್ನು ಅನೇಕ ಕಡೆಗಳಲ್ಲಿ ಹರಸಿ, ಕಳುಹಿಸಿಕೊಟ್ಟಿರುವರು!

ಸ್ಪೈಯಿನಲ್ಲಿ ಪೆಸಿಯುಷ್ಟ ಗತಿಯು ಹೀಗಾಗಲು ಹಿಟ್ಲರ ಮುಸಲೋನಿಯರು ತಮ್ಮ ವರ್ತನೆಯನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿಬಿಟ್ಟಿರುವರು. ಸ್ಥಿತಿಯು ಕೆಟ್ಟಿತು, ಮೀರಿ ನಡೆದರೆ ಎಲ್ಲವೂ ಕೆಡುವುದು ಎಂಬುದಾಗಿ ಅವರ ಮನಸ್ಸಿನಲ್ಲಿ ಮೂಡಿದುದರಿಂದ, ಯುಕ್ತಿವಂತರಾದ ಈರ್ವರು ಈಗ ಶಾಂತಿಗಾಗಿ ಪ್ರೇರೇಪಿಸುತ್ತಿದ್ದಾರೆ ತಮಗೆ ಅನುಕೂಲವಾಗುವ ವರೆಗೆ ಶಾಂತಿಯು ಮಾತ್ರ ಅವರಿಗೆ ಬೇಕಾಗಿದೆ

ಮುಂದಕ್ಕೆ ಉಂಟಾಗಬಹುದಾದ ಮಹಾ ಯುದ್ಧದಲ್ಲಿ ಈ ಕೆಳಗೆ ಸೂಚಿಸಿದಂತೆ ಎರಡು ಪಕ್ಷಗಳಾಗುವವು. ಜರ್ಮನ್, ಇಟಲಿ, ಜಪಾನ್, ರಷ್ಯಾ, ಫ್ರಾನ್ಸ್, ಬ್ರಿಟನ್ ಮತ್ತು ಯುರೋಪ್ಯದ ಇತರ ಸಣ್ಣ ರಾಷ್ಟ್ರಗಳು

ರಾಷ್ಟ್ರಪತಿಯವರ ಚುನಾವಣಾ ಪ್ರವಾಸ

ಅನೇಕ ದಿನಗಳಿಂದ ರಾಷ್ಟ್ರಪತಿಯವರು ಕಾಂಗ್ರೆಸ್ಸಿನ ಪರವಾಗಿ ಚುನಾವಣೆ ಪ್ರಚಾರ ಕಾರ್ಯವನ್ನು ಮಾಡಲು, ಸಮಸ್ತ ಭಾರತ ಪ್ರವಾಸ ಮಾಡುತ್ತಿದ್ದು, ತಮ್ಮಲ್ಲಿರುವ ಆ ಘನವಾದ ಶಕ್ತಿಯನ್ನು ಜನತೆಗೆ ತೋರಿಸುತ್ತಿರುವರು ರೈಲು, ಮೋಟಾರುಗಳು ಬಹಳ ಮೆಲ್ಲನೆ ನಡೆಯುತ್ತದೆಂದು ಅವರಿಗೆ ಕಂಡುಬಂದು, ಅವರು ಅನೇಕ ಸಂದರ್ಭಗಳಲ್ಲಿ ವಿಮಾನವನ್ನು ಉಪಯೋಗಿಸುತ್ತಿರುವರು ಈ ಪ್ರಚಾರಕಾರ್ಯದಲ್ಲಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ ಮುಂಜಾನೆ ಎದ್ದವರು ಮಧ್ಯರಾತ್ರಿಯ ವರೆಗೆ ಪ್ರವಾಸ ಮಾಡುತ್ತಿದ್ದು ಅನೇಕಾನೇಕ ಭಾಷಣಗಳನ್ನು ಮಾಡುತ್ತಿದ್ದಾರೆ

ರಾಷ್ಟ್ರಪತಿಗಳ ಪರಿಶ್ರಮಗಳ ಫಲವೇನಾಯಿತು? ಎಲ್ಲೆಲ್ಲೂ ಕಾಂಗ್ರೆಸ್ಸಿಗೆ ಇಷ್ಟರ ತನಕ ಮಹಾ ಜಯವು ಲಭಿಸಿರುತ್ತದೆ ಅವರು ಹೋದೆಡೆಗಳಲ್ಲಿ ಅವರನ್ನು ಆಲಿಸಲು, ಜನರು ಲಕ್ಷಗಟ್ಟಳೆಯಲ್ಲಿ ಕೂಡಿಬಂದರು ಕಾಂಗ್ರೆಸ್ ಜನಪ್ರಿಯವಾಯಿತು ಕಾಂಗ್ರೆಸ್ಸಿನ ಕೀರ್ತಿಯು ತೇಜಸ್ಸು ಸಮಸ್ತ ಹಿಂದೂದೇಶದಲ್ಲೂ ಹರಡಿತು ರಾಷ್ಟ್ರಪತಿಯವರ ಪ್ರವಾಸದಿಂದ ಕಾಂಗ್ರೆಸ್ ಉಮೇದ್ವಾರರಿಗೆ ಮಹಾಜಯಗಳು ಲಭಿಸಿದುದು ಮಾತ್ರವಲ್ಲದೆ, ಹಿಂದೂದೇಶದ ಭೂರಿಜನರ ಮೇಲೆ ಕಾಂಗ್ರೆಸ್ಸಿನ ಪ್ರೇರಣೆಯು ಬಹಳ ಪ್ರಶಸ್ತವಾಗಿ ನಡೆದಂತಾಗಿದೆ ಕಾಂಗ್ರೆಸ್ಸಿನ ಕೀರ್ತಿಯು ಸಾಧಾರಣ ತರದ್ದೊ? ಅದರ ಬಲವು ಕಡಿಮೆ ತರದ್ದೊ? ನಮಗೆ ಸ್ವಾತಂತ್ರ್ಯ ಬೇಕು ಅದು ನಮಗೆ ದೊರಕುವುದು ಮಹಾ ಸಂಸ್ಥೆಯಾದ ಕಾಂಗ್ರೆಸಿನಿಂದಲೇ ಎಂಬ ಮನೋಭಾವವು ಅಧಿಕ ಜನ ಭಾರತೀಯರಲ್ಲಿ ಉಂಟಾಗಿದೆಂದು ಕಳೆದ ವಾರ ಪ್ರಾರಂಭವಾದ ಪ್ರಾಂತೀಯ ಚುನಾವಣೆಗಳಿಂದ ವ್ಯಕ್ತವಾಗುತ್ತದೆ ಜನರೆಲ್ಲ ಕಾಂಗ್ರೆಸ್ಸಿಗೇನೇ ಮತ್ತು ಕಾಂಗ್ರೆಸ್ಸಿನ ಸಹಾನುಭೂತಿಯು ಇರುವ ಪಕ್ಷಗಳಿಗೇನೇ ತಮ್ಮ ಮತಗಳನ್ನೀಯುತ್ತಿದ್ದಾರೆ ಈ ವಿಚಾರದಲ್ಲಿ ನಮ್ಮ ಜಿಲ್ಲೆಯು ನಾವೂ ಸ್ವಾತಂತ್ರ್ಯ ಹೋರಾಟದಲ್ಲಿದ್ದೇವೆಂದು ಸೂಚಿಸಲು ಮುಂದೆ ಬರುವರೆಂಬ ಭರವಸೆಯು ನಮಗಿದೆ

ಲೆಂಕೆಶ್ಯಾರಿಗೆ ಇನ್ನೂ ತೃಪ್ತಿಯಾಗಲಿಲ್ಲ

ಕೆಲ ಸಮಯದ ಹಿಂದೆ, ಲೆಂಕಶಯರಿನ ವಸ್ತ್ರ ಒಡವೆಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲಾಯಿತು ಅದರ ಪರಿಣಾಮವೇನಾಯಿತು? ಅನೇಕ ಅಭಾವಗಳಿಂದ ನರಳುತ್ತಿರುವ ಅತಿ ಮೆಲ್ಲನೆ ಪ್ರಗತಿಹೊಂದುತ್ತಿರುವ ಭಾರತೀಯ ಗಿರಣಿ ಕೈಗಾರಿಕೆಯ ಮೇಲೆ ಘನವಾದ ಹೊರೆಯುಟ್ಟಂತಾಯಿತು ಅನೇಕ ಪ್ರತಿಕೂಲತೆಗಳು ಅಂದು ಹೊರಟಿದ್ದರೂ, ಅವು ವ್ಯರ್ಥವಾದುವು

ಆದರೆ, ಲೆಂಕಶಯರಿಗೆ ಇನ್ನೂ ತೃಪ್ತಿಯಾಗಲಿಲ್ಲ ಅಲ್ಲಿ ರಾಶಿ ಬಿದ್ದಿರುವ ಕಲ್ಲಿದ್ದಲ್ಲನ್ನು ಉಪಯೋಗಿಸಲು, ಅಸಂಖ್ಯಾತ ಜನರಿಗೆ ಉದ್ಯೋಗವನ್ನು ದೊರಕಿಸಲು, ಸಾಂಪತ್ತಿಕ ಪ್ರಗತಿಮಾಡಿಕೊಳ್ಳಲು ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ಕೊಡಬೇಕೆಂದು ಅಲ್ಲಿನ ಪಾರ್ಲಿಮೆಂಟ್ ಸದಸ್ಯರೊಬ್ಬರು ಸರಕಾರದೊ

ಈ ತರದ ಏರ್ಪಾಡೊಂದು ನಮಗೂ ಬೇಕಲ್ಲವೆ?

ಜಗತ್ತಿನಲ್ಲೆಲ್ಲಾ ರಣಧ್ವನಿಯು ಹರಡಲು ಇತರ ಜನಾಂಗಗಳಂತೆ ಬ್ರಿಟನು, ಸಂಗ್ರಾಮ ಸಿದ್ಧತೆಯನ್ನು ಕೈಗೊಂಡಿತು ಸೈನ್ಯಬಲವನ್ನು ವೃದ್ಧಿಪಡಿಸುವರೆ ಜವಾನರನ್ನು ಹುಡುಕಿತು ಆದರೆ ಆರಿಸಿದವರಲ್ಲನೇಕರನ್ನು ಅಸಮರ್ಥರೆಂದು ಬಿಟ್ಟುಬಿಡಬೇಕಾಯಿತು ಒಟ್ಟಾದ ಸೈನಿಕರ ಸಂಖ್ಯೆಯು, ಸಂಗ್ರಾಮ ಇಲಾಖೆಯ ಊಹನೆಗಿಂತ ಕಡಿಮೆಯಾಗಿ, ಸಂಗ್ರಾಮಾಧಿಕಾರಿಗಳು ಉಭಯಸಂಕಟಕ್ಕೆ ಒಳಗಾದರು ಸೈನಿಕರಾಗುವ ಯೋಗ್ಯತೆಯು, ಕೆಲವೆ ಮಂದಿ ಆಂಗ್ಲೇಯರಲ್ಲಿರುವುದೆಂದೂ ಮಿಕ್ಕವರ ದೇಹಪ್ರಕೃತಿಯು ನೆಟ್ಟಗಾಗಿರುವುದಿಲ್ಲವೆಂದೂ ಸರಕಾರದ ಗೋಚರಕ್ಕೆ ಬಂದುಬಿಟ್ಟಿತು

ಅದು ಈಗ ಹೊಸತೊಂದು ಯೋಜನೆಯನ್ನು ಹೊರಡಿಸಿದೆ ಪ್ರತಿಯೋರ್ವ ತರುಣರಿಗೆ ಕಡ್ಡಾಯವಾಗಿ ದೇಹಾಭಿವೃದ್ಧಿ ಶಿಕ್ಷಣವು ಕೊಡಲಾಗುವ ಏರ್ಪಾಡು ಮಾಡಲಾಗುವುದು ತಮ್ಮ ದೇಶದಲ್ಲಿ ದೃಢಕಾಯ ತರುಣರನ್ನು ಆರಿಸಲಾಗದ ಬ್ರಿಟಿಷ ಮಂತ್ರಿಗಳು, ಆಂಗ್ಲೇಯ ತರುಣನ ಆರೋಗ್ಯ, ಉದ್ಧಾರದ ಬಗ್ಗೆ ಹೆಚ್ಚಿನ ಉತ್ಸಾಹ ಪಡುತ್ತಿದ್ದಾರೆ ನಾವು ಇನ್ನೂ ಸಿಥಿಲರಾಗಬಹುದು, ಹಾಗಾಗಬಾರದು ಎಂಬ ಧ್ಯೇಯದಿಂದ ಬ್ರಿಟನಿನ ನ್ಯಾಶನಲ್ ಸರಕಾರವು ಶ್ರಮಪಡುತ್ತಿದೆ ಬ್ರಿಟನಿನ ಎಲ್ಲಾ ಕಡೆಗಳಲ್ಲಿ (ಶಾಲೆ ಇತ್ಯಾದಿ ಸಂಸ್ಥೆಗಳಲ್ಲಿ) ಶಾರೀರಿಕ ಶಿಕ್ಷಣವು ಕಡ್ಡಾಯವಾಗಿ ನಡೆಯುವ[illegible] ಬ್ರಿಟನಿನ ಉದ್ಧಾರ ಮಾಡುವುದೆ ಮೇಲಿ[illegible] ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಯು ಈಗ ಪ್ರಥಮತ ಮೂರು ವರ್ಷಗಳಲ್ಲಿ ನಡೆಯಿಸಲು ಅದಕ್ಕಾಗಿ ೨ ಮಿಲಿಯ ಪವನ್ನುಗಳನ್ನು ವ್ಯಯಿಸಲು, ಅಲ್ಲದೆ ಮುಂದಕ್ಕೆ ವರ್ಷಂಪ್ರತಿ ಅದಕ್ಕಾಗಿ ಒಂದೂವರೆ ಲಕ್ಷ ಪವನುಗಳನ್ನು ವ್ಯಯಿಸಲು ಸರಕಾರವು ನಿರ್ಣಯ ಮಾಡಿರುತ್ತದೆ

ಇಂಗ್ಲಾಂಡಿನ ತರುಣರ ಕುರಿತ ಜನಿತ ಪತ್ರಿಕೆಯಲ್ಲಿ ಒಂದು ಪತ್ರವನ್ನು ಬರೆದಿರುವರು ಆದರೆ, ಹಿಂದೂದೇಶದ ಸಾಂಪತ್ತಿಕ ಸ್ಥಿತಿಯು ಉದ್ಧಾರವಾಗುವುದು ಬೇಡವೇ ಅವರ ಬಡತನದ ಗೋಳು ನಿವಾರಣೆಯಾಗುವುದೆಂದು? ಭಾರತೀಯ ವ್ಯಾಪಾರ ಅಭಿವೃದ್ಧಿಯಾಗಬೇಡವೇ? ನಮ್ಮಲ್ಲಿನ ನಿರುದ್ಯೋಗ ನಿವಾರಣೆಯಾಗುವುದು ಬೇಡವೇ? ಕೈಗಾರಿಕೆಯ ದೇಶವಾಗಿ ಬಹಳ ಕೀರ್ತಿ ಪಡೆದ ಬಾಳಿದ ಮಹಾ ಅನುಕೂಲಗಳುಳ್ಳ ಹಿಂದೂದೇಶವು ಜಗತ್ತಿನ ಇತರ ರಾಷ್ಟ್ರಗಳಂತೆ ಅಭ್ಯುದಯ ಹೊಂದಬಾರದೆ? ಹಸಿವೆಯಿಂದ ನರಳುವ ಮಿಲಿಯಾಂತರ ಜನರಿಗೆ ಅನ್ನ ಬೇಡವೆ? ನಮ್ಮನ್ನು ಸಂರಕ್ಷಿಸುವ ಒಂದೇ ಒಂದು ಸಂಸ್ಥೆ ಎಂದರೆ ಅದು ಕಾಂಗ್ರೆಸು ಕಾಂಗ್ರೆಸು ಸಮಸ್ತ ಭಾರತೀಯರದು ಕಾಂಗ್ರೆಸ್ಸು ಭಾರತೀಯ ಸಂಸ್ಥೆಯು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇನೇ ಮತವಿತ್ತು ತಮ್ಮ ತವ ಸ್ವಾತಂತ್ರ್ಯ ಸಾಧನೆಯನ್ನು ಮಾಡುವುದು ಪ್ರತಿಯೋರ್ವ ಭಾರತೀಯನ ಆದ್ಯ ಕರ್ತವ್ಯವಾಗುತ್ತದೆ

ಇಂಗ್ಲಾಂಡಿನ ತರುಣರ ಕುರಿತ ಸಂಗ್ರಾಮಯೋಗ್ಯತೆಯ ಕುರಿತು ಇಷ್ಟು ವ್ಯಾಕುಲತೆ ಹೊಂದಿಕೊಂಡು ಶ್ರಮವಹಿಸಿದ ನ್ಯಾಶನಲ್ ಸರಕಾರವು ಹಿಂದೂದೇಶದ ಕುರಿತು, ಆ ವಿಷಯ ಯಾವತ್ತೂ ತರದ ಗಣನೆ ಮಾಡಲು ಸಿದ್ಧವೆಇಲ್ಲ ಹಿಂದೂದೇಶಕ್ಕೇನು ವೈರಿಗಳಿಲ್ಲವೆ? ಒಂದು ದಿಕ್ಕಿನಲ್ಲಿ ಅರಬೀಯರು ಇನ್ನೊಂದು ದಿಕ್ಕಿನಲ್ಲಿ ಜಪಾನೀಯರು ದಂಡೆತ್ತಿ ಬಂದರೆ, ಭಾರತೀಯರು ಹೇಗೆ ರಕ್ಷಣೆಮಾಡಿಕೊಳ್ಳಬೇಕು ಭಾರತೀಯ ತರುಣನಿಗೆ ಆತನ ದೇಶರಕ್ಷಣೆಗಾಗಿ ಯಾವ ತರದ ಸಂಗ್ರಾಮ ತರಬೇತು ಕೊಡಲಾಗುತ್ತಿದೆ ಒಂದಾನೊಂದು ಕಾಲದಲ್ಲಿ ಶೂರರೆಂದೆನಿಸಿಕೊಂಡ ಭಾರತೀಯರು ಈಗ ನಿರ್ಬಲರಾಗಿ, ಏನೂ ಮಾಡದವರಾಗಿರುತ್ತಾರೆ ಭಾರತೀಯರಲ್ಲಿರುವ ಸಂಗ್ರಾಮಶೂರತೆ ಎಂದೊ ಮಾಯವಾಗಿರುತ್ತದೆ. ಅನೇಕರು ಹಿಂದೂದೇಶದ ಮೇಲೆ ಹೊಂಚು ಹಾಕಿಕೊಂಡಿರುವಾಗ ನಮ್ಮ ಸ್ಥಿತಿಯು ಹೀಗಿರಬಹುದೆ?

ನಾವು ಇಂದಿನ ಈ ಸಂಗ್ರಾಮ ಜಗತ್ತಿನಲ್ಲಿ ಸುರಕ್ಷಿತರಾಗಿ ಬಾಳಬೇಕಾದರೆ, ನಮ್ಮ ತರುಣರು ಸಂಗ್ರಾಮವಂತರಾಗಬೇಕು, ನಮ್ಮಲ್ಲಿ ಆಧುನಿಕ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳು ರಚನೆಯಾಗಬೇಕು, ವಿಮಾನ ಮೋಟಾರು ಇತ್ಯಾದಿಗಳನ್ನು ತಯಾರಿಸುವ ವಿಭಾಗಗಳಾಗಬೇಕು, ಹಿಂದೂದೇಶದ ಕರಾವಳಿಯಲ್ಲಿ ಉತ್ತಮತರದ ಯುದ್ಧನೌಕೆಗಳ ಮುಖಾಂತರ ಹಿಂದೂದೇಶವನ್ನು ಅನ್ಯರಿಂದ ರಕ್ಷಿಸುವರೆ, ಆಧುನಿಕ ಯುದ್ಧ ನೌಕೆಗಳನ್ನು ತಯಾರಿಸುವ ಸಂಸ್ಥೆಗಳು ಮಾಡಬೇಕು ಇವುಗಳಿಂದ ಹಿಂದೂದೇಶಕ್ಕೆ ಈ ಜಗತ್ತಿನಲ್ಲಿ ಯೋಗ್ಯಸ್ಥಾನವು ದೊರಕುವುದಲ್ಲದೆ, ಮೇಲಿನ ಸಂಗ್ರಾಮ ಕೈಗಾರಿಕೆಗಳಿಂದ ಹಿಂದೂದೇಶದಲ್ಲಿ ಹರಡಿದ ದುರ್ಭಿಕ್ಷವನ್ನು ಹೆಚ್ಚಿನ ಮಟ್ಟಿಗೆ ಸುಧಾರಿಸಬಹುದು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಲುರವರ

ಬಾಲಭಾಸ್ಕರ.

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು.—ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ವಿಷಯಸೂಚಿಕೆ

[illegible]	೨
[illegible] ಟುಕಪ್ಯಟಾರ	೩
[illegible] ರಂಗ	೫
[illegible] ಪೋಟು ಕೊಡಬೇಕು	೬
[illegible] ಸಮಾಚಾರಗಳು	೧೧
[illegible]	
[illegible] ಕಾನೂನು	೧೦
ಸ್ಫುಟವಿಚಾರಗಳು	
[illegible] ಜ್ಞಾನ ಸಂಗ್ರಹ	
[illegible] ಶಾಖಾನ್ ಒಪ್ಪಂದ	೧೩
ಕಾಂಗ್ರೆಸಿನ ಬಲವು	೯
[illegible] ರಾಜರ ಸಂಸ್ಥಾನದಲ್ಲಿ	೮
ನಮ್ಮ ಪೋಟು ಯಾರಿಗೆ	೧೪
ಗ್ರಾಮೋದ್ಧಾರ	೧೫

[illegible]೨೧ ನೇ ಶುಕ್ರವಾರ ಫೆಬ್ರವರಿ ೧೯೩೭

ಸ್ವದೇಶಾಭಿಮಾನಿ

ವಿಮಾ ಕಾನೂನು

ಬಹುದಿನಿಂದಲೂ ಒಂದು ವಿಮಾಕಾನೂನು ಆಗುವುದಾಗಿಯೂ, (ಅದು ಆಗುವುದುತ್ತಮವೆಂದು ಅಭಿಪ್ರಾಯವು ಪ್ರಕಟವಾದಂತೆ) ಅದರ ಮಸೂದೆಯು ಎಸೆಂಬ್ಲಿಯ ಮುಂದೆ ಬಂದಿದೆಯೆಂದೂ ಕೇಳಿರುವ ನಮಗೆ, ಅದೀಗ ಸಿಲೆಕ್ಟ್ ಕಮಿಟಿಯ ತಿದ್ದುಪಡಿಗಳಿಂದ ತೀವ್ರ ಸುಧಾರಣೆಗಳನ್ನು ಹೊಂದುತ್ತ ಹೊರಬಿದ್ದಿದೆಯಾಗಿಯೂ ತಿಳಿದುಬರುತ್ತಿದೆ

ಇನ್ಶೂರೆನ್ಸ್ ಕಂಪೆನಿಗಳು ಎಲ್ಲೆಲ್ಲಿಯೂ ಹಲವು ರೀತಿಯಲ್ಲಿ ಉಂಟಾಗುತ್ತಲಿರುವ ಕಾರಣ, ಉತ್ತಮವಾಗಿ ಹಿತಕರವಾಗಿರುವ ಕಂಪೆನಿಗಳಿಗೆ ಆತಂಕವೂ, ಇಂತಹ ಹೊಸ ರೀತಿಯವನ್ನು ನಂಬಿರುವವರಿಗೆ ಮೋಸವೂ ಉಂಟಾಗುವುದನ್ನ ಸರಕಾರವು ಪ ಜೆಗಳ ಪ್ರತಿನಿಧಿಗಳಿಂದಲೇ ತಿಳಿದುಕೊಂಡಿದೆ ಸರಕಾರವೇ ವಿಮಾಕಾರ್ಯವನ್ನು ಕೈಕೊಂಡಿದ್ದರೆ ಅಷ್ಟು ಆಕ್ಷೇಪಗಳಾವುವೂ ಉಂಟಾಗುತ್ತಿರಲಿಲ್ಲ ಖಾಸಗಿಯಾಗಿ ಕಂಪೆನಿಗಳು ಉಂಟಾಗುವಾಗ ಅವುಗಳೊಳಗೆ ಸ್ಪರ್ಧೆಯುಂಟಾಗಿ, ಅದರಿಂದ ಅಪೆನ್ಸಯು ಹೆಚ್ಚುವುದು, ಅನಗತ್ಯವಾದ ಕಂಪೆನಿಗಳು ಉಂಟಾಗುವುವು ಸರಕಾರವೇ ಮುಂದೆ ಬಂದು ವಿಮಾಕಾರ್ಯವನ್ನೆಲ್ಲ ಕೈಕೊಂಡರೆ ಲಾಭವು ಇತರ ದೇಶಹಿತ ಕಾರ್ಯಗಳಿಗೆ ಸಿಗುವುದೆಂಬ ದೂ ಒಂದು ಅಭಿಪ್ರಾಯ ಆದರೆ ಇಲ್ಲಿ ಎಂತೂ ಹಲವು ನೂರು ವಿಮಾ ಕಂಪೆನಿಗಳಿರುವ ಕಾರಣ, ಇವು ನ್ಯಾಯವಾದ ರೀತಿಯಲ್ಲಿ ಕೆಲಸಮಾಡುತ್ತ, ಹಣಕ್ಕೆ ತಕ್ಕ ಭದ್ರತೆ ದೊರೆವಂತೆ, ವಿಮೆಯಲ್ಲಿ ವಿಶ್ವಾಸ ಉಳಿಯುವಂತೆ ಬಾಳಬೇಕೆಂದೇ ಸರಕಾರವು ನಿಯಮಗಳನ್ನು ಮಾಡಬೇಕಾಗಿ ಬಂದಿದೆ

ಹೊಸ ಮಸೂದೆಯಲ್ಲಿ ಐದು ತಿದ್ದುಪಡಿಗಳಿವೆ ಪ್ರತಿಯೊಂದು ವಿಮಾಸಂಪನ್ನ ವಿಮಾ ಸುಪರಿಂಟೆಂಡೆಂಟರಿಂದ ಸರ್ಟಿಫಿಕೇಟನ್ನು ಪಡೆಯಬೇಕಾಗಿದೆ ಇಂತಹ ಸರ್ಟಿಫಿಕೇಟುಗಳು ಇನ್ನುಮುಂದೆ ಸಿಗಬೇಕಾದರೆ, ಅಂತಹ ಕಂಪೆನಿಗೆ ೫೦೦೦೦ ರೂಪಾಯಿಗಳ ಭಾಂಡವಲವಾದರೂ ಇರಬೇಕಾಗಿದೆ ವಿಮೆಯ ತರಗತಿಗಳನ್ನು (ವಿಧ) ವಿಭಾಗಿಸಿ, ಪ್ರತಿಯೊಂದರ ಲೆಕ್ಕವನ್ನು ಪ್ರತ್ಯೇಕ ಬರೆದಿಡಬೇಕು ಪ್ರತಿಯೊಂದು ವಿಧದ ವಿಮೆಯ ಸಲುವಾಗಿ, ಪ್ರಥಮದಲ್ಲಿ ತೆರಬೇಕಾಗಿರುವ ಠೇವಣಾತಿಯೆ ಬೇರೆ, ಜೀವವಿಮೆಗಾದರೆ ಎರಡು ಲಕ್ಷ ರೂ ಕನಿಷ್ಟಮಿತಿ ಈ ವರ್ಷದ ಜನವರಿಯಿಂದ ಸ್ಥಾಪನೆಹೊಂದುವ ಹೊಸ ಕಂಪೆನಿಗಳು, ಈ ಮೊಬಲಗಿನ ಅರೆವಾಸಿಯನ್ನು ರಿಜಿಸ್ಟ್ರೇಶನ್ ಆಗುವ ಮೊದಲೂ, ಮುಂದಣ ಎರಡು ವರ್ಷಗಳೊಳಗೆ ಎರಡು ಸಮಕಂತುಗಳಲ್ಲಿ ಉಳಿದುದನ್ನು ತರಬೇಕಾಗಿದೆ ಹಳೆಯ ಕಂಪೆನಿಗಳು ಕಾಲಂಶವನ್ನು ರಿಜಿಸ್ಟ್ರೇಶನಿನ ಮೊದಲೂ ಉಳಿದುದನ್ನು ಐದು ವರ್ಷಗಳೊಳಗೆ ಇನ್ನುಳಿದ ಕಾಲಂಶವನ್ನು ಐದನೇ ಇಸವಿ ಜನವರಿಯೊಳಗೂ ಠೇವಣಾತಿ ಇಡಬೇಕಾಗಿದೆ.

ವಿಮಾಕಂಪೆನಿಯು ಜೀವವಿಮೆಗಾಗಿ ಪಡೆದ ಪ್ರೀಮಿಯಮುಗಳಿಂದ ಕರಾರಿನಂತೆ ತೆತ್ತ ವಿಮಾನೊಬಲಗನ್ನು ವಜಾಮಾಡಿ ಉಳಿದ ಹಣವನ್ನು ಲೈಫ್ ಎಶ್ಶೂರೆನ್ಸ್ ಫಂಡಿಗೆ ಜಮಾ ಮಾಡಬೇಕಾಗಿದೆ ಈ ಮೊಬಲಗನ್ನು ಜೀವ ವಿಮೆಗೇ ಬಳಸಬೇಕು. ಪ್ರತಿಯೊಂದು ಈ ದೇಶದ ಇನ್ಶೂರೆನ್ಸ್ ಕಂಪೆನಿಯ ಜಮಾ ಬಾಬ್ತು ಹಣದ ಮೂರರಲ್ಲೊಂದು ಅಂಶವನ್ನು ಸರಕಾರದ ಖಜಾನೆಯಲ್ಲಿ ಠೇವಣಾತಿಯಾಗಿಡಬೇಕಾಗಿದೆ (ಸೆಕ್ಯೂರಿಟಿಗಳಲ್ಲಿ) ಈ ದೇಶದಲ್ಲಿ ಕೆಲಸಮಾಡುವ ಇತರ ದೇಶಗಳ ವಿಮಾ ಕಂಪೆನಿಗಳು ಪ್ರಿಮಿಯಮ್ ಮೊಬಲಗಿನ ಮೂರರಲ್ಲೊಂದು ಅಂಶವನ್ನು ಇದೇ ರೀತಿ ಠೇವಣಾತಿಯಲ್ಲಿಡಬೇಕಾಗಿದೆ

ಈ ಕಾನೂನು ಜ್ಯಾರಿಗೆ ಬಂದ ತರುವಾಯ ಮೆನೇಜಿಂಗ್ ಏಜಂಟರನ್ನು ನೇಮಿಸಬಾರದು ಹಾಲಿ ಇರುವ ಕಂಪೆನಿಗಳ ಮೆನೆಜಿಂಗ್ ಏಜಂಟರುಗಳನ್ನು ಇನ್ನು ಮೂರು ವರ್ಷಗಳಲ್ಲಿ ನಿವೃತ್ತಿಗೊಳಿಸಬೇಕು ಹೀಗೆ ನಿವೃತ್ತರಾಗುವವರೆಗೆ ಏನೂ ಸಲ್ಲತಕ್ಕದ್ದಿಲ್ಲ ಇನ್ಶೂರೆನ್ಸ್ ಏಜಂಟರಿಗೆ ವೃತ್ತಿ ನಡಿಸುವವರಿಗೆ ಲೈಸೆನ್ಸ್ ಕೊಡುವ ಕ್ರಮವನ್ನು ಈ ಮಸೂದೆಯಲ್ಲಿ ಸೂಚಿಸಲಾಗಿದೆ ಅವರಿಗೆ ಜೀವವಿಮೆಯ ಸಲುವಾಗಿ ಮೊದಲನೆ ವರ್ಷದ ಪ್ರಿಮಿಯಮ್ ಹಣದಲ್ಲಿ ಸೇಕಡಾ ೪೦ ಮತ್ತು ನಂತರ ಸೇಕಡಾ ೫ರಂತೆ ಕಮಿಷನ್ ಸಿಗುವುದು, ಇತರ ಬಗೆಯ ವಿಮೆಗಳಿಗಾದಲ್ಲಿ ಪ್ರಿಮಿಯಮಿನ ಸೇಕಡಾ ೧೫ ಸಿಗುವುದು

ವಿಮಾಕಂಪೆನಿಗಳ ಮೇಲ್ವಿಚಾರವು ಸರಿಯಾಗುವ ಹಾಗೆ, ವಿಮಾ ಸುಪರಿಂಟೆಂಡೆಂಟರು ನೇಮಕಹೊಂದಿರುವರು ಇವರಿಗೆ ವಿಮಾಕಂಪನಿಗಳ (ವಿಮಾಮಾಡುವವರ) ಬೇಕಾದ ಲೆಕ್ಕಗಳನ್ನು ಕೋರಿಸಬೇಕು ಇವರ ಕೊಡುವ ಲೆಕ್ಕಗಳಲ್ಲಿ ಆ ಕೆಸಂಖ್ಯೆಗಳನ್ನು ಸುಪರಿಂಟೆಂಡೆಂಟರು ಪುನ ತನಿಖೆ ಮಾಡಿಸಬಹುದು ಕಂಪೆನಿಯ ಪಾಲುಗಾರರಲಿ ಹತ್ತರಲ್ಲೊಂದು ಸಂಖ್ಯೆಯವರು, ಅಥವಾ ೨೦೦೦೦ ರೂಪಾಯಿಗೆ ಕಡಿಮೆಯಾಗದ ಮೊಬಲಗಿನ ವಿಮೆಮಾಡಿದ ಒಟ್ಟು ೫೦ ಮಂದಿಯಾದರೂ ಪೋಲಿಸಿದಾರರು ಅರ್ಜಿಮಾಡಿದಲ್ಲಿ ಕಂಪನಿಯ ಲೆಕ್ಕಪತ್ರಗಳ ಸಂಪೂರ್ಣ ತನಿಖೆಯನ್ನು ಸುಪರಿಂಟೆಂಡೆಂಟರು ಮಾಡಬೇಕು

ಇವೇ ಕೆಲಸಿಯ ಗಳ ಹೆಚ್ಚಿನ ಪ್ರಯೋಜನ ಕೊಡಬಹುದು ಆದರೆ ಇನ್ನು ಕೆಲವು ನಿಯಮಗಳಲ್ಲಿ ಮಹಾ ಪ್ರಮಾದಗಳಿರುವಂತೆ ತೋರುತ್ತಿದೆ ಶಹರುಗಳಲ್ಲಿ ಕೆಲವೇ ಶ್ರೀಮಂತರಿಂದ ಸ್ಥಾಪಿತವಾದ ಕಂಪನಿಗಳಿಗೇ ಈ ನಿಯಮಗಳಿಂದ ಸಹಾಯವಿರುವಂತಿದೆ ಹೊರತು ಬೇರೆಯಿಲ್ಲ ಸರಕಾರದಲ್ಲಿ ಹಣ ಠೇವಣಾತಿ ಇಟ್ಟುದರ ಮೇಲೆ ಕಂಪೆನಿಯ ಭದ್ರತೆ ಏರಿತೆಂದರೆ ಏನೆನ್ನಬಹುದು? ಮ್ಯೂಚುವಲ್ ಸೊಸೈಟಿಗಳಿಗೆ ಈ ಮಸೂದೆಯಿಂದ ಬಾಧಕವಿದೆ, ಇಂತಹದನ್ನು ಸ್ಥಾಪಿಸುವುದೇ ಕಷ್ಟ. ಲಾಭವೆಲ್ಲ ಈ ಕಂಪೆನಿಗಳಲ್ಲಿ ಹಂಚಿಹೋಗುವ ಕಾರಣ ಠೇವಣಾತಿಗಳನ್ನು ಹೆಚ್ಚಿಸುತ್ತ ಹೇಗೆ ಬರಬೇಕು? ಪಾಲುಗಾರರಿಗೆ ಸಿಗುವ ಡಿವಿಡೆಂಟುಗಳ ಮೇಲೆ ಮಿತಿಯಿಲ್ಲವೇಕೆ? ಚಿಕ್ಕ ವಿಸ್ತೀರ್ಣದೊಳಗೆ ಕೆಲಸಮಾಡುವ ಸಂಘಗಳಿಗೆ, ವಾರ್ಷಿಕ ಆಯದ ಸೇಕಡ ೫೦ರಷ್ಟು ಠೇವಣಾತಿ ಇಡಲು ನಿಯಮವಿದ್ದರೆ, ನಿಯಮಿತ ಠೇವಣಾತಿ ಇಡುವರೆ ಇವುಗಳಿಗೆ ಅವಧಿ ದೊರೆಯುತ್ತಿತ್ತು ಪೋಲಿಸಿದಾರರ ಪ್ರತಿನಿಧಿ ಡೈರೆಕ್ಟರರ ವಿಚಾರವೂ ಈ ಮಸೂದೆಯಲ್ಲಿಲ್ಲ ಪ್ರಿಮಿಯಮ್‌ಗಳ ಕನಿಷ್ಟ ಮಿತಿಯ ಒಂದು ತಖ್ತೆಯನ್ನು ಸರಕಾರವೇ ನಿರ್ಧರಿಸಿದರೆ ಸ್ಪರ್ಧೆಯಿಂದ ಈ ಕಂಪೆನಿಗಳು ಸಿಕ್ಕಂತೆ ಪಟ್ಟಿಗಳನ್ನು ಪ್ರಕಟಿಸಲು ಆಸ್ಪದವಿರುತ್ತಿರಲಿಲ್ಲ.

ವಿಮಾಕರಾರುಳ್ಳವರು ಈ ಮಸೂದೆಯನ್ನು ಓದಿ ನೋಡಿ, ಅಭಿಪ್ರಾಯಗಳನ್ನು ಸರಕಾರಕ್ಕೆ ಪ್ರಕಟಿಸುವುದುತ್ತಮ.

ಸ್ಫುಟ ವಿಚಾರಗಳು

ಜನಸಂಖ್ಯೆ

ನಮ್ಮ ದೇಶದ ಜನಸಂಖ್ಯೆ ಈಗ 35 ಕೋಟಿಯಾಗಿದ್ದು, ಇನ್ನು ಆರು ವರ್ಷಗಳಲ್ಲಿ ಸುಮಾರು 40 ಕೋಟಿಯಾಗಬಹುದೆಂದು ಅಂದಾಜು ಹಾಕುವರು ಜನಸಂಖ್ಯೆಯ ಹೆಚ್ಚುಗೆಗೂ ಜನಜೀವನದ ರೀತಿಗೂ ಸಂಬಂಧವಿರುವುದರಿಂದ ಜನಸಂಖ್ಯೆ ಹೆಚ್ಚುತ್ತಲೇ ಜನಜೀವನದ ರೀತಿಯು ಕುಂದುತ್ತ ಬಂದು, ದುರ್ಭಾಗ್ಯವು ಹೆಚ್ಚುವುದಾಗಿ ಹೇಳುವವರುಂಟು ಈಗಣ ವಿದ್ಯಮಾನಗಳಲ್ಲಿ, ಬೆಳೆವ ಜನಸಂಖ್ಯೆಗೆ ಸಾಕಷ್ಟು ಅನ್ನಾಶ್ರಯವಿರುವುದಿಲ್ಲವೆಂದೂ ಬೋಧಿಸುತ್ತಿರುವರು ಜನರ ಸಂಪತ್ತು ಹೆಚ್ಚುತ್ತಿಲ್ಲವೆಂದೇ ಹೇಳಬೇಕಾಗಿದೆ ದಿನ ಹೋಗುವಂತೆ, ದೇಶವೇ ಬಡವಾಗುತ್ತ ಬರುತ್ತದೆ ಆದರೆ ಇಲ್ಲಿನ ಜಮೀನುಗಳನ್ನು ಸರಿಯಾಗಿ ಬಳಸುವವರಿದ್ದರೆ ಎಲ್ಲರೂ ಬಲು ಚೆನ್ನಾಗಿ ಸಂಭ್ರಮದಿಂದ ಜೀವನ ಮಾಡಲು ಆತಂಕಗಳಾವುವೂ ಇರಲಾರವೆಂದೂ ಎನ್ನುತ್ತಿದ್ದಾರೆ ಮುಖ್ಯವಾಗಿ ಇಲ್ಲಿನ ಉತ್ಪನ್ನಗಳು ಇಲ್ಲಿನ ನಿವಾಸಿಗಳಿಗೇ ಸಾಕಾಗವಷ್ಟು ಸಿಗದಿರುವ ಈ ಕಾಲದಲ್ಲಿ ಜನರು ಅದನ್ನು ಕೊಂಡುಕೊಳ್ಳಲೂ ದಾಸ್ತಾನು ಇಡಲೂ ಅನುಕೂಲತೆ ಕಾಣದಿರುವಲ್ಲಿ ನಮ್ಮ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳು ಬದಲಾಗದೆ ದೇಶವು ಅಭ್ಯುದಯ ಹೊಂದ ಲಿಕ್ಕಿಲ್ಲವೆಂದು ಪಬ್ಲಿಕ್ ಹೆಲ್ತ್ ಕಮಿಶನರರ ರಿಪೋರ್ಟನ್ನು ವಿಮರ್ಶಿಸಿದರೆ ತಿಳಿದುಬರುವಂತಿದೆ

ವ್ಯಾಪಾರ

1935–36ರಲ್ಲಿ ಹಿಂದೀಯರ ವ್ಯಾಪಾರವು ಅಭಿವೃದ್ಧಿ ಹೊಂದಿದೆ ಎನ್ನಬಹುದು ಸಾಮಾನುಗಳ ಬೆಲೆ ಏರಿದೆ ಆದರೆ ಆಗದ ಸರಕುಗಳ ಬೆಲೆ ಇಳಿದಿದೆ ಚಿನ್ನವು ಬಹಳವಾಗಿ ಪರದೇಶಗಳಿಗೆ ರಫ್ತಾಗುವ ಕಾರಣವೇ ದೇಶದ ವ್ಯಾಪಾರಕ್ಕೆ ಸುಸ್ಥಿತಿಯೊದಗಿದೆ ಎಂದು ಸರಕಾರದ ರಿಪೋರ್ಟುಗಳು ಎನ್ನುತ್ತಿವೆ ಮುಖ್ಯ ಜಿನಸು (ಇಲ್ಲಿಂದ ಪರದೇಶಗಳಿಗೆ ರಫ್ತಾಗುವುವುಗಳಲ್ಲಿ) ಹತ್ತಿಯು ಹಿಂದಣ ವರ್ಷಕ್ಕಿಂತ ಸ್ವಲ್ಪ ಕಡಿಮೆಯಾಗಿಯೇ ಈ ವರ್ಷ ರಫ್ತಾಗಿದೆ ಆದರೆ ಸೆಣಬು ನಾರು ಹೆಚ್ಚಾಗಿ ರಫ್ತಾಗಿದೆ ಸರಕಾರವು ಇದರ ಬೆಲೆ ಕಡಿಮೆಯಾಗುವ ಹಾಗೆ ಮಾಡಿದ್ದರಿಂದ ಬೆಲೆಯೂ ಚೆನ್ನಾಗಿ ದೊರೆತಿದೆ ನಮ್ಮ ದೇಶದ ಕೈಗಾರಿಕೆಗಳಲ್ಲಿ ನೇಯಿಗೆಯು ಹೆಚ್ಚಿಗೆ ಪಾಲನ್ನು ಹೊಂದಿರುವುದು ಗಿರಣಿಗಾರರಿಗೆ, ಸರಕಾರವು ಸಂರಕ್ಷಕ ತೆರಿಗೆಗಳನ್ನು ವಿಧಿಸಿದ ದೆಸೆಯಿಂದ ಲಾಭವು ಹೆಚ್ಚು ಹೆಚ್ಚಾಗಿ ಕೂಡಿಬರುತ್ತಿದೆ ಆದರೆ ಕೆಲಸಗಾರರಿಗಾಗಲಿ, ಗಿರಾಕಿಗಳಿಗಾಗಲಿ ಹತ್ತಿ ಬೇಸಾಯಗಾರರಿಗಾಗಲಿ ಎಷ್ಟು ಲಾಭ ದೊರೆತಂತೆ ತಿಳಿದು ಬರುವುದಿಲ್ಲವಲ್ಲ ಪ್ರಪಂಚದಲ್ಲೆಲ್ಲ ಯುದ್ಧ ಸರಂಜಾಮುಗಳು ಹೆಚ್ಚಾಗುತ್ತ ಬಂದುದರಿಂದ ಇಲ್ಲಿನ ಕಬ್ಬಿಣ ಉಕ್ಕುಗಳ ಕೈಗಾರಿಕೆಗೆ ವಿಶೇಷ ಪ್ರೋತ್ಸಾಹ ಉಂಟು

ಪ್ರಪಂಚದ ಉತ್ಪನ್ನಗಳನ್ನು

ಮುಖ್ಯ ದೇಶಗಳು ಹಂಚಿಕೊಳ್ಳುವಂತೆ ಉಪಾಯಗಳನ್ನು ಕಂಡುಹಿಡಿದು ಒಂದು ಕರಾರು ಮಾಡಿಕೊಂಡರೆ ಮತ್ತೆ ಯುದ್ಧಕ್ಕೆ ಆಸ್ಪದವಿರಲಾರದೆಂದು ಇಂಗ್ಲೆಂಡಿನಲ್ಲಿ ಸರ್ ಸಾಮುವೇಲ್ ಹೋರರು ಸಾರುತ್ತಿದ್ದಾರೆ ಸರಿಯಾಗಿ ಉತ್ಪನ್ನಗಳನ್ನು ಹಂಚಿಕೊಂಡು ಒಂದೇ ಕುಟುಂಬದವರಂತೆ ಸ್ಪರ್ಧೆಗೆ ಅವಕಾಶವಿಲ್ಲದೆ ನೆಮ್ಮದಿಯಾಗಿ ಬಾಳಬೇಕೆಂಬ ಆಸೆ ಇದಲ್ಲ ತಮತಮಗೆ ಬೇಕಾಗುವ ಸರಕಿನಲ್ಲಿ ಆಗುವಷ್ಟು ಹೆಚ್ಚಿನ ಭಾಗವನ್ನು ಬದಲಿಗೆ ಕೂಡಿಸಿಕೊಂಡು, ಕೆಲವರು ಕಡಿಮೆ ಭಾಗ್ಯವುಳ್ಳವರು ಹೊಟ್ಟೆಕಿಚ್ಚು ತೋರಿಸದಂತೆ ಅವರಿಗೂ ಅಲ್ಪಸ್ವಲ್ಪ ವಿಭಾಗಿಸಿಕೊಡುವುದೆಂಬುದೇ ಈ ಸಂಚಿಕೆಯ ಒಳಗುಟ್ಟು ಆದರೆ, ಯಾವ ದೇಶಗಳಲ್ಲಿ ಈ ಉತ್ಪನ್ನಗಳಾಗುತ್ತಿವೆಯೋ ಆ ದೇಶವಾಸಿಗಳ ಅಭಿಪ್ರಾಯಗಳನ್ನೇನೂ ಯಾರೂ ಕೇಳುವಂತಿಲ್ಲ ಬಲಿಷ್ಠರು ಬೇಕಾದಷ್ಟನ್ನು ಕೂಡಿಸಿಕೊಂಡು, ಅವರಷ್ಟು ಬಲಶಾಲಿಗಳಲ್ಲದವರಿಗೆ ಮನಸ್ಸಮಾಧಾನ ಪಡಿಸಿದರೆ ಸಾಕೆಂದು ಈ ಅಭಿಪ್ರಾಯವಿದೆ ಆದರೆ ಜರ್ಮನಿಯೂ ಇಟಲಿಯೂ ಈ ಉಪಾಯಕ್ಕೆ ಸಹಿ ಹಾಕುವುದಿಲ್ಲ ಇತರ ಬಲಿಷ್ಠರು ರಾಜ್ಯಗಳನ್ನು ಗೆದ್ದುಕೊಂಡು ತಾವೂ ಏಕೆ ವಶಪಡಿಸಿಕೊಳ್ಳಲಾರದು ಎಂದೇ ಇವು ಭಾವಿಸಿದೆ ಇದರ ಫಲವಾಗಿ ತಮ್ಮ ವಸಾಹತುಗಳನ್ನು ತಮಗೆ ಪುನಃ ಕೊಡಬೇಕಾಗಿ ಜರ್ಮನಿಯು ಈ ವಾರದಲ್ಲಿ ಹಿಟ್ಲರನ ಮೂಲಕ ಭಾಷಣ ಕೊಡಬಹುದು

ಭಾರತವರ್ಷದ ಉದ್ಧಾರಕ್ಕಾಗಿ

ಪ್ರತಿಯೊಂದು ವಿಚಾರಕ್ಕೂ ವಿದೇಶೀಯ ನಿಪುಣರನ್ನೇ ಕರತರುವುದೆಂದರೇನು ಎಂಬುದನ್ನು ಎಸೆಂಬ್ಲಿಯಲ್ಲಿ ಮೆಂಬರರ ಸಂಖ್ಯೆ ಕಡಿಮೆಯಿದ್ದ ಈ ಅಧಿವೇಶನದಲ್ಲಿ ಸಹ ಬಲವಾಗಿ ಚರ್ಚಿಸಿದರು ರೈಲ್ವೆಗಳಿಂದ ಪ್ರತಿವರ್ಷವೂ ನಷ್ಟವೇ ಹೆಚ್ಚುತ್ತ ಬರುವುದೇಕೆಂದು ನಿರ್ಣಯಿಸಲು ಒಟ್ಟಿಗರೇ ಮಾತ್ರವಲ್ಲ ದಕ್ಷಿಣಾಫ್ರಿಕದ "ಪುಣರೆಂಬವರನ್ನು ಸರಕಾರವು ಕರೆಯಿಸಿದೆ ಒಬ್ಬ ಹಿಂದೀಯನೂ ಸರಕಾರದ ದೃಷ್ಟಿಗೆ ಗೋಚರವಾಗಲಿಲ್ಲ ಇವರ ವಿಚಾರಣೆಗಳಿಗಾಗಿ ಸುಮಾರು ಎರಡು ಲಕ್ಷ ರೂ. ವ್ಯಯವಾಗುವುದು ಮೂರನೇ ತರಗತಿಯಲ್ಲಿ ಪ್ರಯಾಣ ಮಾಡುವವರು ಈಗ ಇಲ್ಲಿ ಬಸ್ಸುಗಳನ್ನೇ ಆಧರಿಸುತ್ತಾರೆ ಇದೇಕೆ ದಿ ತಿಳಿಯ ಬೇಕಾದರೆ ಈ ದೇಶವಾಸಿಗಳ ವಿದ್ಯಮಾನವನ್ನು ತಿಳಿಯದ ಮಹಾನಿಪುಣ ವಿದೇಶಿಯರನ್ನು ವಿಚಾರಿಸಿದರೆ ಸಮರ್ಪಕವಾದ ಉತ್ತರವು ದೊರೆತೀತೆ? ಬಾಡಿಗೆ ಮತ್ತು ಸೌಕರ್ಯ ಎಂಬವುಗಳ ಅರ್ಥವು ನಮ್ಮಲ್ಲಿ ಬೇರೆ, ಇತರ ದೇಶೀಯರಲ್ಲಿ ಬೇರೆಯಾಗಿದೆ ಜನಜೀವನದ ಮಾಹಿತಿ ಮತ್ತು ಇತಿಹಾಸ ತಿಳಿಯದವರಿಂದ ಇವುಗಳ ತಾತ್ಪರ್ಯವನ್ನು ಮಾಡಲು ಸುಲಭವೆನಿಸದು ನಮ್ಮ ರೈಲ್ವೆಗಳ ಉದ್ದೇಶವಾದರೂ ಪರದೇಶಗಳಲ್ಲಿನ ರೈಲ್ವೆಗಳ ಉದ್ದೇಶವಾಗಿಲ್ಲ ನೂರೈವತ್ತು ವರ್ಷದ ಬ್ರಿಟಿಷರ ಆಳ್ವಿಕೆಯ ಫಲವಾಗಿ ಭಾರತದ ಪಕ್ಷದಲಿ ಒಬ್ಬನಾದರೂ ರೈಲ್ವೆ ವಿಚಾರ ಬಲ್ಲ ನಿಪುಣನು ಸಿಗಲಿಲ್ಲವೆಂದರೆ ಸರಕಾರಕ್ಕೇ ಸಮಾಧಾನವಾದೀತೆ?

USE

KALYANPUR SUGAR

IT IS THE PUREST & THE SWEETEST

IT IS A UNIQUE PRODUCT OF OUR OWN DISTRICT.

available in 7lb and 14lb packets at the

Office C. P C Co., Ltd

ಕಲ್ಯಾಣಪುರ ಸಕ್ಕರೆಯನ್ನೇ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ

ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಮಂಗಳೂರಲ್ಲಿ ರಾಷ್ಟ್ರಪತಿ ನೆಹರುಗಳ ಭಾಷಣ. ಪ್ರಚಂಡ ಜನಸ್ತೋಮ!

ಎಲ್ಲೆಲ್ಲಿಯೂ ಉತ್ಸಾಹ — ರಾಷ್ಟ್ರಸಭೆಗೆ ಪ್ರೋತ್ಸಾಹ!

ಭಾಷಣದ ಸಾರಾಂಶ

ಕಾಂಗ್ರೆಸಿನ ಸಂದೇಶವನ್ನು ನಿಮಗೆ ಕೊಡಲು ಬಂದಿರುವೆನು. ಆ ಸಂದೇಶವು ಸ್ವಾತಂತ್ರ್ಯದ ಸಂದೇಶ, ಬಡತನವನ್ನೂ ಕ್ಲೇಶವನ್ನೂ ಹೋಗಲಾಡಿಸುವ ಸಂದೇಶ. ಈಗ ಎಲ್ಲೆಲ್ಲಿಯೂ ಚುನಾವಣೆಗಳನ್ನು ಕುರಿತು ಮಾತು ಬರುತ್ತದೆ, ಈ ವಿಚಾರದಲ್ಲೂ ನನಗೆ ಹೇಳಲಿಕ್ಕಿದೆ. ಕಾಂಗ್ರೆಸಿನ ಸಂದೇಶವನ್ನಷ್ಟೆ ಹೇಳುವುದಲ್ಲದೆ, ಜನರಿಗೆ ಸ್ವಾತಂತ್ರ್ಯದ ವಿಚಾರವಾಗಿಯೂ ನಾನು ಭಾಷಣಮಾಡಬೇಕೆಂದಿರುವೆನು. ನಾವೆಲ್ಲರೂ ಸ್ವತಂತ್ರರಾಗಬೇಕೆಂದು ನನ್ನಲ್ಲಿ ಆತುರತೆಯಿದೆ. ಈಗಣ ರಾಜಕೀಯ ಹಾಗೂ ಸಾಂಪತ್ತಿಕ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದು ನಾನು ನಂಬಿರುವ ಕಾರಣ ಅದನ್ನು ಕುರಿತು ನಾನು ಮಾತಾಡುವಾಗಲೇ ಕಾಂಗ್ರೆಸಿನ ಸಂದೇಶವನ್ನು ತಿಳಿಸುವೆನು. ಸರಕಾರೀ ನೌಕರರ ಆಸನಗಳವಲ್ಲಿಂದ ಈಗ ಕೇಳಬರುವ ಮಾತುಗಳು ಕೆಲದಿನಗಳ ತನಕ ಮಾತ್ರ ಕೇಳಿಸಬಹುದು. ನಂತರ ಅಲ್ಲಿ ಮುಖ್ಯ ಅತಿ ಮಹತ್ವದ್ದಾಗಿ ಈ ದೇಶದ ಬಡತನದ ಪ್ರಶ್ನೆಯಿದೆ. ಇದು ಅತಿ ಪ್ರಾಣಾಂತಕವಾಗಿ ಹರಡಿದೆ. ಇದರಿಂದಾಗಿಯೆ ನಮ್ಮ ಜನರಲ್ಲಿ ನಿರುದ್ಯೋಗತೆಯೂ ಹೆಚ್ಚಿದೆ—ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾವು ನಮ್ಮ ಬಡತನವನ್ನು ನಿವಾರಿಸುವುದಕ್ಕೆ ಪ್ರಯತ್ನಿಸಬೇಕು. ಹಿಂದೀ [illegible] ಸ್ವರಾಜ್ಯ ಸಾಧನೆಯು ಸಹ ಈ ದಾರಿದ್ರ್ಯ [illegible] ಸಲಹೆಗೆ ಎರಡನೆದಾಗಿದೆ. ಇದೇ ಮೊದಲನೆ ಪ್ರಶ್ನೆ—ಇದ್ದುದ ತರುವಾಯವೇ [illegible] ಸ್ವರಾಜ್ಯ ಸ್ವಾತಂತ್ರ್ಯಸಿದ್ಧಿಯ ಸಮಸ್ಯೆ.

ನಮ್ಮ ಜನಾಂಗವನ್ನು ಮರ್ದನಮಾಡುವ ದಾರಿದ್ರ್ಯವನ್ನು ನಾವು ಹೇಗೆ ನಿವಾರಿಸಬಹುದು? ನಾವು [illegible] ದಿನ್ನಪಗಳನ್ನೆ ಸಿದ್ಧಮಾಡಿಕೊಂಡು ನಮ್ಮ ಸ್ಥಿತಿಯು ಉತ್ತಮವಾಗುವಂತೆ ಈಗಣ ಸರಕಾರವನ್ನು ಬೇಡಿಕೊಂಡರೆ ನಮಗೆ ಇದು ಸಾಧ್ಯವೆ? ಇದೆಂದೂ ವ್ಯರ್ಥ ಪ್ರಯತ್ನ. ಈಗಣ ಸರಕಾರ ಕ್ರಮವು ಇರುವಷ್ಟು ಕಾಲಕ್ಕೆ ಈ ಜನಾಂಗದ ಹೃದಯದಲ್ಲಿ ದಾರಿದ್ರ್ಯದ ಶಾಪವು ಬೇಯುತ್ತಲೇ ಉಳಿಯುವುದು.

ಹಿಂದೀಯ ಕೈಯಲ್ಲಿ ಸತ್ತೆಯು ದೊರೆವಂತೆ, ಅದರಿಂದ ಮಾತ್ರ ಪ್ರಕೃತದ ಕಷ್ಟವನ್ನೂ ಬಡತನವನ್ನೂ ನಾವು ಕಳೆದುಕೊಳ್ಳಬಹುದಾದ ಕಾರಣ ನಾವು ಪ್ರಯತ್ನಿಸಬೇಕಾಗಿದೆ. ಸ್ವಾತಂತ್ರ್ಯ ಮತ್ತು ಸ್ವರಾಜ್ಯಗಳ ಪ್ರಶ್ನೆಯು ಮುಂದೆ [illegible] ಅಧಿಕಾರಿಗಳು [illegible] ಸದರಿರಲಿ ಹಿಂದೀಯರೇ ಇರಲಿ—ಅವರಿಗೆ ಸ್ವತಂತ್ರ [illegible] ಕಾರವು ದೊರೆವತನಕ ಬಡತನವನ್ನೂ ಕ್ಲೇಶವನ್ನೂ ಕೊನೆಗಾಣಿಸಬರುವಂತಿಲ್ಲವೆಂಬುದೇ ಅದಕ್ಕೆ ಕಾರಣವಾಗಿದೆ.

ಈ ಕಾರಣದಿಂದಲೇ ಸ್ವಾತಂತ್ರ್ಯದ ಪ್ರಶ್ನೆಯು ಮೊದಲನೆದಾಗಿದೆ. ಸ್ವಾತಂತ್ರ್ಯವಲ್ಲದೆ ನಮಗೆ ಅಭಿವೃದ್ಧಿ ಹೊಂದಲು ಬೇರೆ ಉಪಾಯವಿಲ್ಲ. ನಾವು ಅನ್ಯಥಾ ಬಡತನವನ್ನು ನೀಗಿಕೊಳ್ಳಲಾರೆವು—ಅದು [illegible] ರಾಷ್ಟ್ರಸಭೆಯು ಸ್ವರಾಜ್ಯದ ಸಮಸ್ಯೆಯನ್ನೆ ಎಲ್ಲಕ್ಕೂ ಮೊದಲನೆದಾಗಿಟ್ಟುಕೊಂಡಿದೆ.

ಹೀಗಾಗಿ, ನಮ್ಮೆದುರು ಇರುವ ಸಮಸ್ಯೆಗಳೆಂದರೆ, ನಮ್ಮ ಬಡತನ ನಿವಾರಣೆ, ಮತ್ತು ಅದನ್ನು ನಿವಾರಿಸಲು ಅಗತ್ಯವಿರುವ ಸ್ವಾತಂತ್ರ್ಯಸಿದ್ಧಿ. ಈಗ ಚುನಾವಣೆಗಳು ನಡೆವಾಗ, ಈ ಸಮಸ್ಯೆಗಳನ್ನು ಮರೆಯಬಾರದು. ಭಾರತವರ್ಷದ ಸಮಸ್ಯೆಯೂ ಭಾರತವರ್ಷದ ದಾರಿದ್ರ್ಯದ ಸಮಸ್ಯೆಯೂ ಉಳಿದೇ ಇವೆ. ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕಾಗಿ ರಾಷ್ಟ್ರಸಭೆಯು ಸುವ್ಯವಸ್ಥೆಯನ್ನು ಮಾಡಿದೆ. ಇವೇ ಕೆಲವು ವರ್ಷಗಳಿಂದ ಇಂಡಿಯಾ ಸರಕಾರದೊಡನೆ ಅದು ಹೋರಾಡುತ್ತಿರುವುದೂ ಈ ಸಮಸ್ಯೆಗಳು ಇರುವ ಕಾರಣವೇ. ಇದೇ ಕಾರಣದಿಂದ ~~ನಾವು ಈಗ ಚುನಾವಣೆಗಳಲ್ಲಿ ಭಾಗ ತೆಗೆದುಕೊಳ್ಳು~~ತ್ತಿದ್ದೇವೆ.

ನಮಗೆ ಸಂಪೂರ್ಣ ಬಲವು ಉಂಟಾದಲ್ಲಿ ನಮಗೆ ಸ್ವಾತಂತ್ರ್ಯವು ದೊರೆವುದು. ವ್ಯವಸ್ಥೆ ಮತ್ತು ಹೋರಾಟಗಳಿಂದ ತಾನೆ ನಮಗೆ ಬಲವು ಹೆಚ್ಚುವುದು. ಕಾಂಗ್ರೆಸ್ ಸಭೆಯು ಪ್ರಚಂಡವಾಗಿರುವ ವ್ಯವಸ್ಥೆ ಮಾಡಿರುವ ಕಾರಣವೇ, ಇಡೀ ದೇಶದಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸ್ಸಿನ ಕಾರ್ಯವು ಹರಡುತ್ತಿದ್ದು, ಅದು ಬ್ರಿಟಿಷ-ಸಾಮ್ರಾಜ್ಯಶಕ್ತಿಗೆ ವಿರುದ್ಧವಾಗಿ ನಿಂತಿದೆ. ಜನತೆಯು ಕಾಂಗ್ರೆಸ್ಸಿನ ಬೆಂಬಲಕ್ಕಿದೆ. ಈ ವ್ಯವಸ್ಥಿತ ಸಂಸ್ಥೆಯು ಈಗ ಜನರನ್ನು ಹಿಂದೆ ಎಂದೂ ಇಷ್ಟು ಚೆನ್ನಾಗಿ ಬಲಗೊಳಿಸದಷ್ಟು ಹೆಚ್ಚಾಗಿ ಈಗ ಸಬಲರನ್ನಾಗಿ ಮಾಡಿದೆ.

ನಮ್ಮ ದೇಶದಲ್ಲಿ ಹಲವು ವ್ಯವಸ್ಥಿತ ಸಂಸ್ಥೆಗಳಿವೆ,—ದೊಡ್ಡವು ಚಿಕ್ಕವು ಜಾತಿಗಳವು ಇತ್ಯಾದಿ. ಆದರೆ, ಸ್ವರಾಜ್ಯಕ್ಕಾಗಿ ಧೈರ್ಯದಿಂದ ಹೋರಾಡುವ ಸಂಸ್ಥೆ ಇದೊಂದೇ ಇದೆ ಎಂದು ಪ್ರತಿಯೊಬ್ಬರೂ ಬಲ್ಲರು. ಆದುದರಿಂದ ಸ್ವರಾಜ್ಯಸಾಧನೆಯಲ್ಲಿ ಸೇರಿ ಹೋರಾಡಬೇಕೆಂದವರು ಕಾಂಗ್ರೆಸಿನ ಧ್ವಜದ ನೆರಳಲ್ಲೇ ನಿಂತು ಹೋರಾಡಬೇಕಾಗಿದೆ. ಬೇರೆ ಉಪಾಯವಿಲ್ಲ. ಸೈನಿಕರಿಲ್ಲದಲ್ಲಿ ಯುದ್ಧಮಾಡಲಾಗುವುದಿಲ್ಲ; ವ್ಯವಸ್ಥೆಯಿದ್ದ ಸೈನಿಕರಿಂದ ಮಾತ್ರ ಯುದ್ಧಮಾಡಬರುವುದು. ಹೀಗಿರುವ ಕಾರಣ, ವ್ಯವಸ್ಥೆಯಿದ್ದ ಸ್ವರಾಜ್ಯಕ್ಕಾಗಿ ಹೋರಾಡುವುದು ಕಾಂಗ್ರೆಸ್ ಸಂಸ್ಥೆಯೊಂದೇ ಎಂದು ತಿಳಿದಿರುವ ನೀವು ಈ ಹೋರಾಟದಲ್ಲಿ ಸೇರಬೇಕೆಂದಿರುವಿರಾದರೆ ಕಾಂಗ್ರೆಸಿನೊಳಗಿದ್ದು ಹೋರಾಡುವುದುತ್ತಮವಲ್ಲದೆ, ಬೇರೆ ಪ್ರಯತ್ನಿಸಿದರೆ ಅದೆಲ್ಲವೂ ನಿಷ್ಫಲ, ನಿಮ್ಮ ಬಲವನ್ನೆ ವ್ಯರ್ಥಗೊಳಿಸಿದಂತೆ ಎಂದೆಂದೂ ತಿಳಿಯಿರಿ.

ಕಾಂಗ್ರೆಸನ್ನು ಅಪೂರ್ಣವಾಗಿ ಬಲಗೊಳಿಸಿ ಕಾಂಗ್ರೆಸನ್ನು ಹಳ್ಳಿಹಳ್ಳಿಗಳಲ್ಲೂ ಸ್ಥಾಪಿಸಿರಿ. ಮನೆಮನೆಗಳಲ್ಲೂ ಪ್ರತಿಷ್ಠಿಸಿರಿ. ಕಾಂಗ್ರೆಸಿನ ಸಂದೇಶವು ಈ ವಿಸ್ತಾರವಾದ ದೇಶದ ಯಾವತ್ತು ಗಂಡಸರಿಗೂ ಹೆಂಗಸರಿಗೂ ತಿಳಿಯುವಂತೆ ಸಾರಿರಿ. ಅವರೆಲ್ಲರೂ ಈ ಸಂದೇಶವನ್ನು ಕೇಳಿ ನಮ್ಮ ಅದೃಷ್ಟವು ಫಲಿಸುವಂತೆ ಸರ್ವರೂ ಒಂದಾಗಿ ಕಾರ್ಯೋದ್ಯುಕ್ತರಾಗುವಂತಾಗಲಿ.

ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿವೆ. ಅವುಗಳ ಕೆಳಗೆ ಗ್ರಾಮ ಕಮಿಟಿಗಳಿರುವುದಿಲ್ಲ. ಕೆಳಕಮಿಟಿಗಳಿಂದ ಈ ಜಿಲ್ಲಾ ಕಮಿಟಿಗಳನ್ನು ನಾನು ವ್ಯವಸ್ಥಿತ ಸಂಸ್ಥೆಗಳೆನ್ನುವುದಿಲ್ಲ. ಅಂತಹವು ಬರೀ ಹೆಸರಿಗೆ [illegible] ಸಂಸ್ಥೆಗಳೆ. ಕೆಲಸವು ಮಹಾ ಜನ ಸಮುದಾಯದ ವರೆಗೂ ವಿಶ್ವಾಸನೆ ಹೊಂದುತ್ತಿಲ್ಲವೊ ಅವರ ಆಶಯಗಳನ್ನು ಕೈಗೂಡಿಸಿಕೊಡಲಾರದವೋ, ಅಲ್ಲಿನವರಿಗೆ ಕಾಂಗ್ರೆಸ್ಸಿನ ಸಂದೇಶವು ತಿಳಿವುದೂ, ಸಂದೇಶವನ್ನು ಸಾರುವುದೂ ಕಷ್ಟವಾಗಿದೆ.

ಸ್ವರಾಜ್ಯವೆಂದರೇನು?

ನಾನು ಸ್ವರಾಜ್ಯವನ್ನು ಕುರಿತಾಡಿದೆನು. ಸ್ವರಾಜ್ಯವೆಂದರೇನ? ಬ್ರಿಟಿಷ ಅಧಿಕಾರಿಗಳ ಬದಲಾಗಿ ಇತರ ಅಧಿಕಾರಿಗಳನ್ನು ಸೇರಿಸುವುದರಿಂದ ಸ್ವರಾಜ್ಯವು ಸಿದ್ಧವಾಗುವುದಿಲ್ಲ. ಸರಕಾರದ ಅಧಿಕಾರಕ್ಕೆ ಮತಿಯನ್ನು ಹಾಕುವ ಹಾಗೆ ನಮ್ಮ [illegible] ಕೋಟಿ ಗಂಡಸರಿಗೂ ಹೆಂಗಸರಿಗೂ ಆವುದೇ ಯಾವ ಮತ ಜಾತಿಗಳಿಗೆ ಸೇರಿದ್ದರೂ ಸಮಾನವಾದ ಹಕ್ಕುಗಳು ಇರಬೇಕು. ನಾವೆಲ್ಲರೂ ಇಲ್ಲಿದ್ದು ನಮ್ಮ ಬಂದಣ ಸರಕಾರ ವ್ಯವಸ್ಥೆ ಮಾಡಲು ಅರ್ಹರು. ಈ ಅರ್ಹತೆಯಿಂದ ಅವರು ಸರಕಾರವನ್ನು ತಾವೆ ಮಾಡಿಕೊಳ್ಳುವಂತಾಗಬೇಕು. ಹಾಗಿದ್ದರೇ ಸ್ವರಾಜ್ಯ.

ನಾನು ಕಾಂಗ್ರೆಸ್ ಸಂಸ್ಥೆಯನ್ನು ಕುರಿತು ಆಡುವಾಗಲೂ ಮಹಾಜನ ಸಮೂಹವನ್ನು ಕುರಿತಾಗಿಯೆ ನಾನು ಭಾವಿಸುವಂತೆ ನೀವೂ ಭಾವಿಸಬೇಕಲ್ಲದೆ, ಜನಸಮೂಹದ ಮೇಲೆ ಅಧಿಕಾರ ನಡೆಸುವ ವೈಸ್ರಾಯರ ಗವರ್ನರರ, ರಾಜರ ಮಹಾರಾಜರ ಸಮಾಜದ ಸಂಸ್ಥೆಯೆಂದಲ್ಲ. ದೀನ ದರಿದ್ರರ ಜನಸಾಮಾನ್ಯರ ಸಂಸ್ಥೆಯೆಂದೇ ತಿಳಿಯಿರಿ. ದೀನರ ಸ್ಥಿತಿಯನ್ನು ಸಲ್ಲಿಸುವಾಗ ವಿವರಿಸಿ, ಅವರನ್ನು ದಬ್ಬಾಳಿಕೆಯಿಂದ ಒತ್ತುವವರ ಸಂಸ್ಥೆಯೆಂದು ತಿಳಿಯಬೇಡಿರಿ.

ಸ್ವರಾಜ್ಯ ಎಂಬುದೇನೆಂದು ತಿಳಿದುಕೊಂಡು ಅದನ್ನು ರಾಷ್ಟ್ರಸಭೆಯಲ್ಲಿ ಪ್ರಚಾರಕ್ಕೆ ತರಲೆತ್ನಿಸಬೇಕು. ಹೀಗಿರುವುದರಿಂದ ಜಿಲ್ಲಾ ಕಮಿಟಿಗಳನ್ನು ಸ್ಥಾಪಿಸಿದರಷ್ಟೆ ಸಾಲದು. ಪ್ರತಿಯೊಂದು ಹಳ್ಳಿಯಲ್ಲೂ ಕಾಂಗ್ರೆಸ್ ಕಮಿಟಿಗಳು ಇರಲೇಬೇಕಾಗಿದೆ. ಅದೇ ಹಿನ್ನೆಲೆ, ಅದೇ ಅಸ್ತಿವಾರ. ಅದನ್ನು ಆಧರಿಸಿಯೆ ಜಿಲ್ಲಾ ಕಮಿಟಿಗಳಾಗತಕ್ಕದು.

ಕಾಂಗ್ರೆಸ್ ಸಂಸ್ಥೆಯು ಯಾವಾಗ ಸ್ವರಾಜ್ಯಸಾಧನೆ~~ಗಾಗಿದೆಯೊ ಆಗಲೇ ಅದು ಗ್ರಾಮ ಕಮಿಟಿಗಳ ಆಧಾರ~~ ಹೊಂದಿಯೆ ಮುಂದರಿಸಬೇಕಾಗಿದೆ ಎಂಬುದನ್ನು ಪುನಃ ಒತ್ತಿಹೇಳುತ್ತೇನೆ. ಸ್ವರಾಜ್ಯವು ಸನಿಹಗೊಳಬೇಕು ಎಂಬುದನ್ನು ಪ್ರತಿಯೊಬ್ಬ ಗ್ರಾಮಸ್ಥನೂ ಹೇಳುವಂತಾಗಬೇಕು. ಇದು ಒದಗುವ ಕಾಲವು ತೀವ್ರವೇ ಸಮೀಪಿಸುತ್ತಿದೆ. ಜನರು ಈ ಕಾಲಕ್ಕೆ ಸಿದ್ಧರಾಗದೆ ಹೋದರೆ, ಯಾರು ಸಿದ್ಧರಿದ್ದಾರೋ ಅವರೇ ಅಧಿಕಾರಿಗಳಾಗುವರು. ಭೂಕಂಪದಂತೆ ಆಕಸ್ಮಿಕವಾಗಿ ಬರುವ ಈ ಆಯೋಚಿತ ಸಂಘಟನೆಗೆ ಸಿದ್ಧರಾಗದೆ ಜನರು ಮೋಸ ಹೊಂದದಂತೆ ಈಗಲೆ ಎಚ್ಚರವಾಗಿರಲಿ.

ಈ ಚಿತ್ರವನ್ನು ನಿಮ್ಮ ಕಣ್ಣಮುಂದಿಟ್ಟುಕೊಂಡು, ಈಗಲೆ ಬರುತ್ತಿರುವ ಚುನಾವಣೆಗಳನ್ನು ನಿರೀಕ್ಷಿಸಿರಿ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸು ಚುನಾವಣೆಗಳಲ್ಲಿ ಏಕೆ ಭಾಗವಹಿಸುತ್ತಿದೆ ನೋಡಿರಿ. ಕೆಲವರನ್ನು ನಾವು ಅಧಿಕ [illegible] ಈ ಚುನಾವಣೆಗಳಲ್ಲಿ ಭಾಗವಹಿಸುವುದಲ್ಲ. ಇದು ಕಾಂಗ್ರೆಸಿನ ರೀತಿಯೆ ಅಲ್ಲ. ಎಂದಿನಂತೆ ಕೌನ್ಸಿಲುಗಳಲ್ಲಿ ಕೆಲಸ ಮಾಡುವುದಕ್ಕಾಗಿ ಅಲ್ಲ. ಸ್ವರಾಜ್ಯ ಸಾಧನೆಗಾಗಿ ಮಾತ್ರ ಕಾಂಗ್ರೆಸು ಕೌನ್ಸಿಲುಗಳಲ್ಲಿ ಸೇರಿ ಒಳಗೂ ಹೊರಗೂ ಕೆಲಸ ನಿರ್ವಹಿಸಬೇಕೆಂದಿದೆ.

ಆದರೂ ನಮ್ಮ ನಿಜ ಕಾರ್ಯವು ಈ ಕೌನ್ಸಿಲುಗಳಿಂದ ಕೈಗೂಡಿ ಬರಲಾರದು. ಕೆಲವು ಭಾಷಣಗಳನ್ನು ಕೌನ್ಸಿಲುಗಳಲ್ಲಿ ಮಾಡಿ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವಂತಿಲ್ಲ. ನಮ್ಮ ಸಂತೆ ಕಲ್ಲೂ [illegible] ಇತರ [illegible] ಅದರಿಂದ ಪ್ರಯೋಜನವಿಲ್ಲ. ನಿಜವಾದ ನಮ್ಮ ಹೋರಾಟವು ಕೌನ್ಸಿಲಿನ ಹೊರಗೇ ನಡೆವುದು. ನಮ್ಮ ರಾಷ್ಟ್ರಸಭೆಯನ್ನು ಬಲಗೊಳಿಸಿದರೇ ಸ್ವರಾಜ್ಯವು ಸಿದ್ಧ [illegible] ದೇಶಕ್ಕೆ ಹಿತ ಮಾಡ [illegible] ಕೌನ್ಸಿಲುಗಳನ್ನು ಸೇರದಂತೆ ಮಾತ್ರ [illegible] ಪ್ರತಿನಿಧಿಗಳನ್ನು [illegible] ಬ್ರಿಟಿಷ ಸರಕಾರಕ್ಕೆ ಭಕ್ತಿಯನ್ನು ತೋರಿಸು [illegible] ಹಿಂದೀ ಜನಾಂಗಕ್ಕೆ ಅಹಿತವಾದ [illegible] ನಡೆಯುವುದುಂಟು. ಚುನಾವಣೆಗಳು ಆಗ [illegible] ಈ ಭಕ್ತಿಯ ಮಾತನ್ನೆತ್ತಿ ಸರಕಾರವು ಜನರ [illegible] ಹಾಗೂ, ಹಾಗೆ [illegible] ಜನರಿಂದ ದೂರವಾಗುವ ಹಾಗೂ, ಹೋರಾಟದಿಂದು ಹೀಗೆ ಜನತೆಯೊಂದು [illegible] ಸರಕಾರದ ಪಕ್ಷ [illegible] ಹೀಗೆ ಎರಡು ತಂಡಗಳಾಗುತ್ತವೆ. ಬ್ರಿಟಿಷ ಸರಕಾರವು ಕೆಲವರನ್ನು [illegible] ಕೆಲವರನ್ನು ಗೋಪನವಾಗಿಯೂ ಸಹಾಯ ಮಾಡುತ್ತಿದೆ. ಹೀಗಾಗಿ ಚುನಾವಣೆಗಳು ಈ ದೊಡ್ಡ [illegible] ಹೋರಾಟಗಳಾಗಿ [illegible] ಬ್ರಿಟಿಷ ಅಧಿಕಾರಕ್ಕಾಗಿ [illegible] ಎಂಬ ಈ ಎರಡು [illegible] ಉಂಟಾಗಿವೆ. ಕಾಂಗ್ರೆಸು [illegible] ಅಷ್ಟಕ್ಕೆ ಬ್ರಿಟಿಷ ಅಧಿಕಾರವು [illegible] ಇನ್ನೂ ಕೆಲವರಿದ್ದಾರೆ. ಇವರು ಕಾಂಗ್ರೆಸಿನ ಪಕ್ಷವೂ ಅಲ್ಲ [illegible] ಪಕ್ಷವೂ ಅಲ್ಲ. ಅವರು ಸ್ವಯಂ ಪ್ರತಿನಿಧಿ [illegible] ಎಂತ [illegible]

ಚುನಾವಣೆಯಲ್ಲಿ ನೀವು ಆರಿಸ [illegible] ಈ [illegible] ಈ ಪಕ್ಷ ಈ ಸಂಬಂಧಿ ಎಂದೇನೂ ತಿಳಿದು ಆರಿಸುವುದಿಲ್ಲ. ಅತನ [illegible] ತತ್ವಗಳೇನು [illegible] ವನೋ ತಿಳಿಯಿರಿ. ಭಾರತ ಸ್ವಾತಂತ್ರ್ಯಕ್ಕಾಗಿ ನಿಂತಿರುವನೇ? [illegible] ಅವನ ಹಿಂದೆ ವ್ಯವಸ್ಥಿತವಾಗಿ ಕಾರ್ಯಸಾಧನೆ ಮಾಡುವ ತತ್ವ [illegible] ಸ್ವಾತಂತ್ರ್ಯ ಸಾಧಕ ಸಂಸ್ಥೆಯುಂಟೆಂದು ತಿಳಿಯಿರಿ. ಅವನು ಇವನು ಎಂಬ ಮಾತೇ ಅನಾವಶ್ಯಕ. ನಾವು ಹೋದಲ್ಲೆಲ್ಲ ಈ ನಾವೆಂದು [illegible] ರೀತಿಗೆ [illegible]

ಗೊಳ್ಳುತ್ತಿಲ್ಲ. ಯಾರು ಕಾಂಗ್ರೆಸ್ [illegible] ದ್ವಾರೆಯಿಸಿ, ಅವರು ನಮ್ಮ ಸೈನಿಕರು. ಅವರು [illegible] ಜನಾಂಗಕ್ಕೆ ಪ್ರತಿನಿಧಿಗಳಾಗಲು ಯೋಗ್ಯರು, ಮತ್ತು ನನ್ನ ಕರ್ತವ್ಯವು ಅಂತಹರನ್ನು ಆಧರಿಸು [illegible] ಅವರು ವ್ಯಕ್ತಿಶಃ ಗೆದ್ದರೂ, ಆ ಗೆಲವು ಕೇವಲ ಹೋರಾಟ ಅವರಿಗಲ್ಲ.

ಚುನಾವಣೆಗಳು ಸ್ವರಾಜ್ಯ ಸಾಧನೆಗೆ ಸಹಾಯವಾಗುವಂತೆ ಮಾತ್ರ ಈಗ ವಿಶೇಷತ್ವ ಹೊಂದಿವೆ. ಕೋಮು ಪಕ್ಷಗಳೂ ಜಸ್ಟಿಸ್ ಪಕ್ಷಗಳೂ ಇಲ್ಲಿ ಹೋರಾಟವು [illegible] ಅಲ್ಲಲ್ಲಿ ಕೆಲವು ವ್ಯಕ್ತಿಗಳೂ ಪಂಗಡಗಳೂ ಅದೆ [illegible] ಪಕ್ಷವಮಾಡಿ ನಿಂತಿವೆ. ಇದೆಲ್ಲ [illegible] ವಿಚಾರವನ್ನು ನೋಡುತ್ತೀರಿ. ಬಿಹಾರದಲ್ಲೇನಾಗಿದೆ? ನನ್ನ ಸಂಯುಕ್ತ ಪ್ರಾಂತ್ಯದಲ್ಲಿ ಏನಾಗುತ್ತಿದೆ? [illegible] ದಲ್ಲೇನು? ಇನ್ನೂ ಹಲವು ಪ್ರಾಂತ್ಯಗಳ ಸ್ಥಿತಿಯನ್ನು ಒಂದೆರಡು ದಿನಗಳಲ್ಲೇ ತಿಳಿಯುವಿರಿ. ಎ [illegible] ದರೂ ಎಂತಹದೆಂದು ಸಹ ನನಗೆ ತಿ [illegible] ರನ್ನು ಕಾಂಗ್ರೆಸ್ ಪಕ್ಷವಾಗಿ [illegible] ಯಿತು. ಇಡೀ ಪ್ರಾಂತ್ಯವೇ ಅ [illegible] ಇದನ್ನು ಕಂಡು ಎಷ್ಟೋ ಉದ್ಯೋ [illegible] ವೆಸಿಸದಿರಲಾರದು. ಜನತೆಯ [illegible] ಎಷ್ಟು ಆತುರ! ಆದ್ದರಿಂದಾಗಿ ಕಾಂ [illegible] ಬಿಹಾರದಲ್ಲಿ ಅತ್ಯುತ್ಕೃಷ್ಟ ಯಶಸ್ಸು ಕೈಗೂಡ [illegible] ಕಾಣಿಸಿದು.

ಹಿಂದೀ ಸ್ವಾತಂತ್ರ್ಯ, ದಾರಿದ್ರ್ಯನಿವಾರಣೆ ತತ್ವಗಳನ್ನು ಎಣಿಸದೆ ಹೊರತು, ಉಪ [illegible] ಗಣನೆಗೆ ತಾರದೆ ಕಾಂಗ್ರೆಸಿಗೆ ಮತಕೊಡಿರಿ. [illegible] ಗಳು ಸರ್ವರಿಗೂ ಸಮಾನವಾಯಿ ಇವೆ. ಇತ್ಯಾದಿಗಳು ಭಿನ್ನವಾದ [illegible] ಆದರೆ [illegible] ತ್ರಿಕ [illegible] ಪಕ್ಷಗಳು ಸರ್ವರಿಗೂ ಒಂದೇ ಸಮಾನವಾಗಿವೆ. ಈ ಪ್ರಶ್ನೆಗಳಿಗೆ ಸರಿಯಾಗಿ ಸರ್ವರಿಗೂ ಸಮಾನವಾಗಿ ಉತ್ತರ ಪಾಲಿಸಬಲ್ಲುದು ಕಾಂಗ್ರೆಸ್ ಸಂಸ್ಥೆಯೊಂದೇ ಮಾತ್ರವಾಗಿದೆ.

ಇದರಿಂದಲೇ ನಾನಾ ಜಾತಿ ಸಮಾಜ ಧರ್ಮಗಳನ್ನು ಸೇರಿರುವ ಜನರಿರುವ ಒಡೆ ಬೇರೆ ಪ್ರಾಂತ್ಯಗಳಲ್ಲೂ ಕಾಂಗ್ರೆಸು ಗೆದ್ದು ಬರುತ್ತಿದೆ. ಇಲ್ಲಿನ ಚುನಾವಣೆಯಲ್ಲಿ ಶ್ರೀ [illegible] ಶ್ರೀ [illegible] ಶ್ರೀ [illegible], ಶ್ರೀ ನಾರ್ಕೆಲ್ಲರು ಶ್ರೀ [illegible] ಕಾಂಗ್ರೆಸಿನ ಪಕ್ಷವಾಗಿ ನಿಂತಿರುವರು. ಇವರು ಕಾಂಗ್ರೆಸಿನಲ್ಲಿ ಯೋಗ್ಯರಾಗಿ ಒಂದು ನಮ್ಮ ದೇಶವು ಯಾವ ಸಂಸ್ಥೆಯಲ್ಲಿ ಭರವಸೆಯನ್ನಿಟ್ಟದೆಯೋ ಅದಕ್ಕೆ ಸಲುವಾಗಿ ಕೆಲಸಮಾಡುವಂತೆ ಅವರನ್ನು ಚುನಾಯಿಸಿರಿ. ಹಾಗೆ ಮಾಡಿದರೆ, ಸಂಯುಕ್ತ ಪ್ರಾಂತ್ಯದಲ್ಲಾದಂತೆ ಅಪೂರ್ವ ದಿಗ್ವಿಜಯವು ಕಾಂಗ್ರೆಸಿಗೆ ಈ ಪ್ರಾಂತ್ಯದಲ್ಲೂ ಉಂಟಾಗುವುದು.

ಚುನಾವಣೆಯಲ್ಲಿ [illegible] ಮತದಾರರು [illegible] ಗೆದ್ದ ತರುವಾಯ ಸ್ವರಾಜ್ಯಸಾಧನೆ ನಡೆಯಬೇಕಾ [illegible] ಗೆದ್ದ ಕೂಡಲೆ ನಮ್ಮ ಕೆಲಸ ಮುಗಿಯದು. ಆದುದರಿಂದ ಸಿದ್ಧರಾಗಿರಿ. ಹೋರಾಡಿರಿ. [illegible] ಕಮಿಟಿಗಳನ್ನು ಸ್ಥಾಪಿಸಿರಿ, [illegible] ಯಥಾಶಕ್ತಿ [illegible] ವಿದ್ಯಮಾನಗಳನ್ನು ಎದುರಿಸಲು ಸಿದ್ಧರಾಗಿರಿ.

ನನಗೆ ಹಲವು ಮಾನಪತ್ರಗಳನ್ನೊಪ್ಪಿಸಿದಿರಿ. ಭಿನ್ನವಾದ ನಗರದಲ್ಲಿ ನನಗೆ ಸಂಭ್ರಮದಿಂದ ಸ್ವಾಗತವಿತ್ತಿರುವಿರಿ. ಅದೆಲ್ಲವೂ ನನಗಲ್ಲ, ನಾನು ಪ್ರತಿನಿಧಿಯಾಗಿರುವ ಸಂಸ್ಥೆಗೆ ಗೌರವ. ಕಾಂಗ್ರೆಸು ನಿಮಗಾಗಿ ಹೋರಾಡುವ ಸಂಸ್ಥೆಯೆಂದು ನೀವು ನಂಬಿರುವಂತೆಯೆ, ನಾನೂ ಹಾಗೆ ಹೋರಾಡುವವನೆಂದು ನಂಬಿಕೊಟ್ಟ ಈ ಸ್ವಾಗತಕ್ಕಾಗಿ ವಂದನೆಗಳು.

ಈ ಇಂದ್ರಜಾಲ ಔಷಧಿಯು ನವ ಚರ್ಮವನ್ನು ಬೆಳೆಸುತ್ತದೆ.

ಅಕಸ್ಮಾತ್ ಅಪಘಾತಗಳಿಗಾಗಿ ಝಾಂಬಕನ್ನು ಉಪಯೋಗಿಸಿರಿ [illegible]

ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. [illegible] ಝಾಂಬಕನ್ನು ನೀವು ಪ್ರಯೋಗಿಸಿದರೆ [illegible] ಗಾಯಗಳು [illegible] ಮೇಲಿನ ಚಿತ್ರದಲ್ಲಿ ಒಂದು [illegible] ಝಾಂಬಕಿನ ಪ್ರಯೋಗವು ಆ ಗಾಯವನ್ನು ಬಲು ಬೇಗನೆ ಗುಣಪಡಿಸುತ್ತದೆಂಬುದರಿಂದ ತಾಯಿ [illegible] ಸಂತೋಷವನ್ನೂ ಕಾಣಬಹುದು. ನೀವು ಕೂಡಾ ಇದೇ ಮಾದರಿಯನ್ನನುಸರಿಸಿದರೆ, ನಿಮ್ಮ [illegible] ಗಳು [illegible] ಝಾಂಬಕ್ಕು [illegible] ವೇದನೆಯನ್ನು ಇಂದ್ರಜಾಲದಂತೆ ಗುಣಪಡಿಸಿ, ಕಲೆಯಿಲ್ಲದಂತೆ ಮಾಡುತ್ತದೆ. ಔಷಧಿ ವ್ಯಾಪಾರಿಗಳಲ್ಲೆಲ್ಲ ಝಾಂಬಕನ್ನು ಪೆಟ್ಟಿಗೆಗೆ 1 ರೂಪಾಯಿ 2—4—0 ಗಳಂತೆ ಸಿಗುತ್ತದೆ.

ಏಜಂಟರು —ಮೆಸರ್ಸ್ ದಾಧಾ ಎಂಡ್ ಕೊ.,

ಪಿ ಬಿ ಮದ್ರಾಸು.

ಝಾಂಬಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ

ಝಾಂಬಕ್

Zam Buk

ಜರ್ಮನ್-ಜಪಾನ್ ಒಪ್ಪಂದದ ಪರಿಣಾಮವೇನಾಗುವುದು?

ಮಹಾಯುದ್ಧವನ್ನು ಕೊನೆಗೊಳ್ಳಿಸಿದ ಒಪ್ಪಂದದಿಂದ ಐರೋಪ್ಯದಲ್ಲಿ ... ಗೌರವ ಸ್ಥಾನವು ಕಳೆದು ... ಅದನ್ನು ಒಂದು ಕ್ಷೀಣತರದ ದೇಶ ... ಮಾರ್ಪಡಿಸಿಬಿಟ್ಟರು. ಜರ್ಮನಿಯ ... ಅನೇಕ ನಿರ್ಬಂಧಗಳು ಹೊರಿಸಲಾದವು ... ತರದ ಶೋಚನೀಯ ಸ್ಥಿತಿಯಿಂದ ... ರ್ಮನಿಯು ಅಂದಿನಿಂದ ಸಾಧಿ... ಕಾರ ಮಹಾ ವೈರಿಯಾದ ... ಲು, ಅದು ಬ್ರಿಟನಿನೊಡ ... ರಾಷ್ಟ್ರಗಳೊಡನೆಯೂ ನವಿದು ... ಸಾಧಿಸಿತು ಆದರೆ ಅವರ ... ಕು ನಿಷ್ಪ್ರಯೋಜನಕವಾದುವು ... ವು ಫ್ರಾನ್ಸಿನೊಡನೆ ಒಪ್ಪಂದ ಬೆಳೆ... ಜರ್ಮನಿಗೆ ಭೀತಿಯು ಇನ್ನಷ್ಟು ... ರಷ್ಯಾ-ಫ್ರಾನ್ಸು ಐಕ್ಯದ ಎದುರು ... ತಿದೊಂದು ಉಪಾಯವನ್ನು ಹುಡು... ಕೊಲಗಿತು. ಜಪಾನು ರಷ್ಯದ ಪರಮ ವೈರಿ. ಪೌರ್ವಾತ್ಯದಲ್ಲಿ ಅವರೀರ್ವರಿಗೂ ... ನಡೆಯುತ್ತಿದೆ ಅದರಿಂದ ತಾನು ಜಪಾನಿನೊಡನಿದ್ದರೆ, ರಷ್ಯಾಕ್ಕೆ ಸ್ವಲ್ಪ ಭೀತಿಯುಂಟಾಗಬಹುದೆಂದು, ಜರ್ಮನಿಯು ಅಭಿಪ್ರಾಯ ಹೊಂದಿದಾಗಿ, ಕಳೆದ ವರ್ಷ ನವಂಬರದಲ್ಲಿ ... ವ ಕೊಮ್ಯುನಿಸಂ ತತ್ವಕ್ಕೆ ವಿರೋಧವಾಗಿ ... ವೇಶದಲ್ಲಿ ಒಂದು ಒಪ್ಪಂದವನ್ನು ಬೆಳೆಯಿಸಿತು

ಜಪಾನು ಜರ್ಮನಿಯೊಡನೆ ಸೇರಿದುದರ ಪರಿಣಾಮವೇನಾಗಬಹುದು? ಐರೋಪ್ಯದಲ್ಲಿ ಜರ್ಮನಿಯ ಕೈಮೇಲಾದರೆ, ಅವರು, ಜಪಾನೀಯರು ಕೂಡಿ, ಬ್ರಿಟಿಷರ ಪೌರ್ವಾತ್ಯದ ಮತ್ತು ಪೆಸಿಫಿಕ್ ಸಾಗರದ ಹಿತಗಳ ಮೇಲೆ ಕೈಮಾಡದೆ ನಿಲ್ಲರು ಪೆಸಿಫಿಕ್ ಸಾಗರದ ಅಮೇರಿಕನ್ ಹಿತಗಳಿಗೂ, ಜಪಾನಿನಿಂದ ಹಾನಿ ಆಗಬಹುದು ಇದರಿಂದಾಗಿ ಬ್ರಿಟನು, ರಷ್ಯಾ ಫ್ರಾನ್ಸು, ಪಕ್ಷಕ್ಕೆನೆ ಸೇರಬೇಕಾಗಿದೆ ಜಪಾನಿಗೆ ಬುದ್ಧಿ ಕಲಿಸಲು ಅಮೇರಿಕಾವು ಅವರ ಬಳಿಗೆ ಸೇರಬಹುದು

ಆದರಿಂದ ಇನ್ನೊಂದು ಮಹಾ ಯುದ್ಧವು ಐರೋಪ್ಯದಲ್ಲಿ ಮಾತ್ರವಲ್ಲದೆ ಪೌರ್ವಾತ್ಯದಲ್ಲೂ ನಡೆಯುವ ಹಾಗಿದೆ ಅಲ್ಲಿ ಬ್ರಿಟಿಷರಿಗೆ ಜಪಾನೀಯರ ಮಹಾಯುದ್ಧ ನೌಕಾಪಡೆಗಳನ್ನೂ ಸೇನಾಮಂಡಳಗಳನ್ನು ಎದುರಾಯಿಸಬೇಕಾಗುವುದು ಅದಕ್ಕೆ ಹಿಂದೂದೇಶದಿಂದಲೆ ಅವರಿಗೆ ಅನುಕೂಲಗಳುಂಟಾಗಬೇಕಾಗಿವೆ ಕಳೆದ ಮಹಾಯುದ್ಧದಲ್ಲಿ ಹಿಂದೂದೇಶವು ವಹಿಸಿದ ಭಾರಗಿಂತ ಹೆಚ್ಚಿನ ಭಾರವನ್ನು ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಹೊರಬೇಕಾಗುವುದು ಜಪಾನೀಯರನ್ನು ಎದುರಾಯಿಸಲು, ಭಾರತೀಯ ಸೈನ್ಯಪಡೆಗಳು ಕೊಂಡೊಯ್ಯಲಾಗುವವು ಹಿಂದೂದೇಶದ ಸಹಾಯವಿಲ್ಲದಿದ್ದರೆ, ಅಮೇರಿಕಾದ ಸಹಾಯವು ಬ್ರಿಟಿಷರಿಗಿದ್ದರೂ, ಜಪಾನೀಯರನ್ನು ಎದುರಾಯಿಸಲು ಅವರಿಗೆ ಮಹಾ ಕಷ್ಟವೆನಿಸುವುದು

ಚೀನಾ ಜಪಾನು ವೈಶಮ್ಯವು ದಿನೆ ದಿನೆ ವೃದ್ಧಿಯಾಗುತ್ತಾ ಬಂದು, ಜಪಾನೀಯರನ್ನು ತಮ್ಮ ದೇಶದಿಂದ ಹೊಡೆದೋಡಿಸಲು, ಚೀನಾವು ಮಹಾಯುದ್ಧದ ಸಿದ್ಧತೆಗಳನ್ನು ಮಾಡುತ್ತಿದೆ. ಜಪಾನು ಜರ್ಮನಿಯೊಡನೆ ಸೇರಿದುದರಿಂದ ಚೀನಾವು ತನ್ನ ಕಾರ್ಯ ಸಾಧಿಸಲು, ರಷ್ಯಾ, ಬ್ರಿಟನು, ಫ್ರಾನ್ಸು, ಅಮೇರಿಕಾ, ಮಿತ್ರ ರಾಷ್ಟ್ರಗಳ ಪಕ್ಷವನ್ನು ಸೇರುವುದು

ಪೌರ್ವಾತ್ಯದಲ್ಲಿ ಬ್ರಿಟಿಷರಿಗೆ ಜಪಾನಿನಿಂದ ಅನೇಕ ತೊಂದರೆಗಳಾಗುತ್ತಿವೆ ಅಂತೆಯೆ ಅಮೇರಿಕಾಕ್ಕೆ. ಆದರಿಂದ ಇಷ್ಟರತನಕ ತಟಸ್ಥ ಭಾವವನ್ನು ಹೊಂದುವ ಆಲೋಚನೆಯನ್ನು ಮಾಡಿದ ಬ್ರಿಟನು, ಈಗ ಸೌಮ್ಯವಾದ ರಾಷ್ಟ್ರಗಳೊಡನೆ ಸೇರಬೇಕಾಗಿದೆ ಪೌರ್ವಾತ್ಯದಲ್ಲಿ ಜಪಾನೀಯ ಪ್ರೇರಣೆಯನ್ನು ಕಡಿಮೆ ಮಾಡಿದ ವಿನಹ ಅದಕ್ಕೆ ಸಮಾಧಾನವಾಗಲಾರದು

ಸತ್ತ ಮಾನವರನ್ನು ಜೀವಕ್ಕೆ ತರಬಹುದು

ಸತ್ತವರನ್ನು ಮತ್ತೊಮ್ಮೆ ಜೀವಕ್ಕೆ ತರುವ ಉಪಾಯವನ್ನು ರಷ್ಯಾದ ಮೊಸ್ಕೊವಿನ ಓರ್ವ ವಿಜ್ಞಾನಿಯು ಕಂಡು ಹಿಡಿದಿರುವನು ಐದಾರು ನಾಯಿಗಳನ್ನು ತರತರದ ರೀತಿಯಲ್ಲಿ ಕೊಲೆ ಮಾಡಿ, ತನ್ನ ಉಪಾಯದಿಂದ ಅವುಗಳನ್ನು ಮತ್ತೊಮ್ಮೆ ಜೀವಕ್ಕೆ ತಂದಿರುವನು

ಅಕಸ್ಮಾತ್ತಾಗಿ ಸತ್ತ ಮನುಷ್ಯರನ್ನು ಆತನ ಉಪಾಯದಿಂದ ಮತ್ತೊಮ್ಮೆ ಜೀವಕ್ಕೆ ತರಬಹುದಂತೆ.

ಈ ಉಪಾಯದಿಂದ ಎಲ್ಲಾ ಸತ್ತವರನ್ನು ಜೀವಕ್ಕೆ ತರಲಾಗುವುದಿಲ್ಲವಂತೆ.

ಅಮೇರಿಕಾದಲ್ಲಿ ಜಲಪ್ರಳಯ.

ಸಂಯುಕ್ತ ಅಮೇರಿಕಾದ ಒಹಿಯೋ ನದಿಯು ಉಕ್ಕಿ ಬಂದುದರಿಂದ, ಅಲ್ಲಿನ ಅನೇಕ ಪ್ರಾಂತ್ಯಗಳು ಜಲಪ್ರಳಯಕ್ಕೆ ಒಳಗಾಗಿವೆ ಮಿಸ್ಸಿಸಿಪ್ಪಿ ನದಿಯು ಇನ್ನೂ ಉಕ್ಕೇರುತ್ತಿದೆ ಎಂದು ವಾರ್ತೆ ಮುಂದಕ್ಕೆ ಮಳೆ ಬರವ ಹಾಗಿರುವುದರಿಂದ, ಅಲ್ಲಿನ ಇಂಜಿನಿಯರುಗಳಲ್ಲಿ ದಿಗಿಲು ಉಂಟಾಗಿದೆ ಸಂಯುಕ್ತ ಅಮೇರಿಕಾದ ಎಲ್ಲಾ ಕಡೆಗಳಿಂದ ಭಯಂಕರ ನೆರೆಯ ವಾರ್ತೆಗಳು ಬರುತ್ತಿದ್ದಾವೆ

ನೆರೆಹಾವಳಿಗೆ ಒಳಗಾದವರಿಗೆ ಯೋಗ್ಯ ಉಪಶಮನ ದೊರಕಿಸಲು ಸರಕಾರ ಮತ್ತು ಇತರ ಅನೇಕ ಸಾರ್ವಜನಿಕ ಸಂಸ್ಥೆಗಳು ಶ್ರಮಪಡುತ್ತಿದ್ದಾವೆ ಅಮೇರಿಕಾದ ರೆಡ್ ಕ್ರೋಸ್ ಸಂಸ್ಥೆಯವರು ... ಕುಟುಂಬಗಳ ಆರೈಕೆಮಾಡುತಿದ್ದಾರೆ ಉಪಶಮನದ ಬಗ್ಗೆ ಧಾರಾಳ ಹಣವು ಒಟ್ಟಾಗಿದೆ

ಮಿಸ್ಸಿಸಿಪ್ಪಿ ನದಿಯು ಉಕ್ಕೇರದಂತೆ ಮಾಡಲು ... ಸಾವಿರ ಜನರು ಹಗಲಿರುಳು ದಣಿಯುತ್ತಿದ್ದಾರೆ ನೆರೆಹಾವಳಿಗೆ ಒಳಗಾದ ಹತ್ತಿ ಬೆಳೆಸುವ ರೈತರಿಗೆ ಧನಸಹಾಯವಾಗುವ ಏರ್ಪಾಡು ಅಲ್ಲಿನ ಸರಕಾರದಿಂದ ಮಾಡಲಾಗಿದೆ

ಜರ್ಮನಿಯು ಮುಂದರಿಯುತ್ತಿದೆ

ವಾರ್ಸಲಿ ಸಂಕೋಲೆಯನ್ನು ಮುರಿದು ಹಾಕಿದ ಜರ್ಮನಿಯು ಈಗ ಸ್ವೇಚ್ಛೆಯಿಂದ ವರ್ತಿಸಲಾರಂಭಿಸಿದೆ ರ್ಹೈನ್ ಲೇಂಡಿನಲ್ಲಿ ಅದು ಸಂಗ್ರಾಮ ಏರ್ಪಾಡನ್ನು ಮಾಡಿಬಿಟ್ಟಿತು ಯುದ್ಧ ನಷ್ಟಗಳನ್ನು ತಾವು ಹೊರಲು ಸಿದ್ಧರಿಲ್ಲವೆಂದುಬಿಟ್ಟಿತು ವಾರ್ಸಲಿ ಒಪ್ಪಂದದ ಎಲ್ಲಾ ಶರ್ತಗಳನ್ನು ಮುರಿದುಬಿಟ್ಟಿತು ಈಗಿನ ಸ್ಥಿತಿಯಿಂದ, ಅವರ ವರ್ತನೆಯನ್ನು ಸರಿಪಡಿಸಲು ಮಿತ್ರರಾಷ್ಟ್ರಗಳಲ್ಲಿ ಯಾರಿಗೂ ಸಾಧ್ಯವಾಗಲಿಲ್ಲ

ಹಿಟ್ಲರನು ಈಗ ತನ್ನಿಂದ ಕಳೆದುಹೋದ ವಸಾಹತುಗಳನ್ನು ಕೇಳುತ್ತಿದ್ದಾನೆ ಅಲ್ಲದೆ, ವಾರ್ಸಲಿ ಒಪ್ಪಂದ ಪ್ರಕಾರ ಜರ್ಮನಿಯು ಆರ್ಥಿಕ ವಹಿವಾಟಗಳೆಲ್ಲಾ ಬಾಸ್ಲೆ ಬೇಕಂಟ ಸಂಸ್ಥೆಯ ಮೂಲಕ ನಡೆಯಬೇಕೆಂದಿತ್ತು ಅದನ್ನೀಗ ಅವರು ತಿರಸ್ಕರಿಸಿ ಆರ್ಥಿಕ ವಿಚಾರದಲ್ಲಿ ಸ್ವತಂತ್ರರಾಗಿ ವರ್ತಿಸುವೆವೆಂದು ಪ್ರಕಟನೆಯಾಗಿರುತ್ತದೆ

ಅನಂತಪುರ ಜಿಲ್ಲೆಯಲ್ಲಿ ವಜ್ರದ ಘನಿ

ಜಗತ್ತಿನ ಉತ್ತಮ ಲೋಹಗಳ ಶೇಖರಗಳು ಅಕಸ್ಮಾತ್ತಾಗಿ ಕಂಡುಹಿಡಿಯಲ್ಪಟ್ಟವುಗಳು. ಕೋಲಾರ ಚಿನ್ನದ ಘನಿ, ಆಸ್ಟ್ರೇಲಿಯದ ಚಿನ್ನದ ಘನಿ, ಆಫ್ರಿಕಾದ ವಜ್ರದ ಘನಿಗಳು, ಇವುಗಳೆಲ್ಲಾ ಅಕಸ್ಮಾತ್ತಾಗಿ ಕಂಡುಹಿಡಿಯಲ್ಪಟ್ಟು, ಒಂದಾನೊಂದು ಕಾಲದಲ್ಲಿ ನಿರ್ಜನವಾಗಿರುವ ಪ್ರದೇಶಗಳನ್ನು ಇಂದ್ರಲೋಕದ ವೈಭವಗಳಿಂದ ಮೆರೆಯುವಂತೆ ಮಾಡಿತು ದರಿದ್ರರು, ಧನಾಢ್ಯರಾದರು ಧನಾಢ್ಯರು ದರಿದ್ರರಾದರು ಹೀಗೆ ಒಟ್ಟಿನ ಮೇಲೆ ಬಂಗಾರ, ವಜ್ರ ಇತ್ಯಾದಿಗಳ ಮಹಿಮೆಯು ಬಹಳ ವಿಚಿತ್ರತರದೆನ್ನಬಹುದು

ಅನಂತಪುರದ ವಜ್ರಕರರು ಎಂಬಲ್ಲಿ ವಜ್ರಗಳು ದೊರಕಿವೆ ಆದರೆ, ಅಲ್ಲೊಂದು ವಜ್ರದ ಘನಿಯನ್ನು ನಿರ್ಮಿಸಲು ಮಾಡಿದ ಭೂಗರ್ಭ ಶಾಸ್ತ್ರಜ್ಞರ ಪ್ರಯತ್ನಗಳು, ಇನ್ನೂ ಸಫಲವಾಗಲಿಲ್ಲ ಅಲ್ಲಿ ವಜ್ರವಿರುವುದೊ ಎಂಬುದನ್ನು ಗೊತ್ತುಹಿಡಿಯುವುದರಲ್ಲಿ ಅನೇಕರು ಶ್ರಮಪಡುತ್ತಿದ್ದಾರೆ

ವಜ್ರಕರೂರಿನಲ್ಲಿ ವಜ್ರಘನಿಯು ಇರಬಹುದೆಂಬ ಊಹನೆಯುಂಟಾಗಲು ಕಾರಣವೇನು? ಕೆಲಕಾಲದ ಹಿಂದೆ ಮಹಾ ಬೆಲೆಬಾಳುವ ಒಂದು ವಜ್ರವು ಅಲ್ಲಿನ ಒಂದು ಗದ್ದೆಯಲ್ಲಿ ದೊರಕಿತು ಅಲ್ಲಿ ವಜ್ರದ ಶೇಖರವಿರುವುದರಿಂದಲೆ ಆ ವಜ್ರವು ದೊರಕಿರಬಹುದೆಂದು ಅನೇಕರ ಊಹನೆ

ವಜ್ರಕರೂರಿನಲಿ ವಜ್ರಗಳನ್ನು ಹುಡುಕಿ ತೆಗಿಯವರೆ ಅನೇಕ ವಿಜ್ಞಾನಿಗಳು ದಣಿಯುತ್ತಿದ್ದಾರೆ

... ಓರ್ವ ರೈತನು ... ರಿನ ಸರಾಫರೊಬ್ಬರಲ್ಲಿ ವಿಚಿತ್ರತರದ ಒಂದು ಕಲ್ಲನ್ನು ತರವನಾದನು ಅದೊಂದು ಸಾಮಾನ್ಯ ಸ್ಪಟಿಕದ ಕಲ್ಲೆಂದು ಹೆಚ್ಚಿನವರು ಭಾವಿಸಿದರು ಆದರೆ ಅದೊಂದು ವಜ್ರವಾಗಿರಬಹುದೆಂಬ ಊಹನೆಯುಂಟಾದ್ದರಿಂದ ಆತನು ಅದನ್ನು ಯಾರಿಗೂ ಕೊಡದೆ ಕೊನೆಗೆ ಒಂದಾನೊಂದು ದಿನ ಅನೇಕ ವಜ್ರವ್ಯಾಪಾರಿಗಳು ಅವನಲ್ಲಿಗೆ ಬಂದು ಆ ಕಲ್ಲನ್ನು ೫ ಸಾವಿರ ರೂಪಾಯಿಗಳಿಗೆ ಪಡಕೊಂಡರು ಸ್ವಲ್ಪ ಸಮಯದ ನಂತರ ಅದೊಂದು ಉತ್ತಮ ತರದ ವಜ್ರವೆಂದು ಕಂಡುಹಿಡಿಯಲಾಗಿ ಅದಕ್ಕೆ ರೂ ೫೦ ಸಾವಿರ ಸಿಕ್ಕಿತು ಹೀಗೆ ಓರ್ವ ಕ್ಷೌರಿಕನಿಗೂ ಇನ್ನೊಬ್ಬ ಸಾಹೇಬನಿಗೂ ಹೀಗೆ ವಜ್ರಗಳು ದೊರಕಿ ಅವರು ಮಹಾ ಸಂಪತ್ತನ್ನು ಗಳಿಸಿದ್ದಾರೆ ಕಳೆದ ವರ್ಷ ವಜ್ರಗಳನ್ನು ಹುಡುಕಿ ಕೊಂಡು ವಜ್ರಕರೂರಿಗೆ ೪ ಸಾವಿರ ಮಂದಿಗಳು ಬಂದು, ಸುತ್ತಾಡಿ ಹುಡುಕಾಡಿ ಸಿಂಗರಾಗಿ ... ಬಹಳ ದೂರದಿಂದ ಜನರು ಇಲ್ಲಿಗೆ ಬರುತಿದ್ದಾರೆ ಎಲ್ಲರೂ ವಜ್ರಗಳನ್ನು ಅಲ್ಲಿನ ಗದ್ದೆಗಳಲ್ಲಿ ಮಾತ್ರ ಹುಡುಕುತ್ತಿರುವರು ಅಲ್ಲಿನ ಮಣ್ಣನ್ನು ಅಗೆದು ಅದನ್ನು ತೊಳೆದು ಅವುಗಳನ್ನು ಹುಡುಕುವವರು ಅನೇಕರಿದ್ದಾರೆ

ವಜ್ರಗಳನ್ನು ಕೊಡುವ ತಾಯಿಕಲ್ಲು ವಜ್ರಕರೂರಿನಲ್ಲಿ ಇರಬಹುದೆಂದು ಬಲವಾದ ಊಹೆಯಿದೆ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಬೇಕಾದ ವಜ್ರಗಳೂ ವಜ್ರಕರೂರಿನಿಂದಲೇ ತೆಗೆಯಲಾಗಿದ್ದವೆಂದು ಚರಿತ್ರೆಯಿದೆ ಅಂದು ಹದಿನಾರನೇ ಶತಮಾನದಲ್ಲಿ ಅರ್ಧ ರಾತ್ರಿ ಬಿಂದರದ ವಜ್ರಗಳು ಇಲ್ಲಿಂದಲೇ ತೆಗೆಯಲಾಯಿತೆಂದು ಹೇಳಿಕೆಯುಂಟು

ಹಿಂದೂದೇಶದ ವಜ್ರಗಳು ಅತ್ಯಂತ ಶ್ರೇಷ್ಠವಾದುವುಗಳೆಂದು ಜಗತ್ತಿನ ಎಲ್ಲಾ ವಿಜ್ಞಾನಿಗಳ ಮಾತಾಗಿರುತ್ತದೆ ಆದ್ದರಿಂದ ಹಿಂದೂದೇಶದಲ್ಲಿ ವಜ್ರದ ಕೈಗಾರಿಕೆಯು ಬೇಗನೇ ಪ್ರಾರಂಭವಾಗಬೇಕ ಆಫ್ರಿಕಾದ ಕಿಂಬರ್ಲಿ ವಜ್ರದ ಘನಿಗಳಿಂದ ಎಷ್ಟು ಜನರಿಗೆ ಉದ್ಯೋಗವು ದೊರಕಲಿಲ್ಲ! ಸಮಸ್ತ ದಕ್ಷಿಣಾಫ್ರಿಕದ ಚರಿತ್ರೆಯು ವಜ್ರದಿಂದ ಸಂಪೂರ್ಣವಾಗಿ ಮಾರ್ಪಟ್ಟಿತು ವಜ್ರದಿಂದಲೇ ದಕ್ಷಿಣಾಫ್ರಿಕಕ್ಕೆ ಇಂದಿನ ಜಗತ್ತಿನ ಉನ್ನತ ಪದವಿಯು ದೊರಕಿರುತ್ತದೆ ವಜ್ರಕರೂರು ಕಿಂಬರ್ಲಿ ತರದ ಪ್ರದೇಶವಾಗಿರಬಹುದೇ? ಆ ಕುರಿತು ಶೋಧೆಯು ನಡೆದು ಹಿಂದೂದೇಶದಲ್ಲೂ ವಜ್ರಗನಿಯು ಉಂಟೆಂದು ತೀರ್ಮಾನವಾಗಬೇಕು

MATRIMONIAL

WANTED: Saraswat Girls and Widows above 18, for immediate marriage. No sections or sub sections, no provincial or language barriers With full particulars of present age, education and other qualifications — apply Saraswat Agency 270 Frere Road Fort Bombay Correspondence strictly confidential

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿಯಾದದ್ದು

ಮೇಹರೋಗ, ಶರೀರ ದುರ್ಬಲತೆ ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ಸ್ತ್ರೀ ರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕ 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ ಅಂಡ್ ಕೋ,

ಆಯುರ್ವೇದಿಕ ಸಮಾಜ ಪಂಡಿತ

I O Fendep (ನೆಲ್ಲೂರ ಡಿ)

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾಪ್ರದರ್ಶಕ ಸಂಗೀತ ಶಾಲೆ,

... ಶಂಕರನಾರಾಯಣ ...

12 ವರ್ಷದೊಳಗಿನ ಬಾಲಕಬಾಲಿಕೆಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,

ತಬಲಾ ಮಾ ... ಹಾರ್ಮೋನಿಯಮ್ ಎಕ್ಸ್‌ಪರ್ಟ್ ... ಸಂಗೀತವಿದ್ಯಾವಿಶಾರದ

ಬಹಳ ಕಡಿಮೆಯಾದ ಕ್ರಯ

ಆಟೋಮೆಟಿಕ್ ಅಲಾರಂ ಪಿಸ್ಟಲ್

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತೆ ಇರುವುದು ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು ಇದು ಒಂದು ನಿಮ್ಮಲ್ಲಿ ಇದ್ದರೆ ನಿಮ್ಮ ಸಹಾಯಕನಾಗಿರುವುದು ... ಉಪಯೋಗಿಸುವುದು ... ಇದನ್ನು ಉಪಯೋಗಿಸುವ ... ಪಿಸ್ತೂಲ್ ... ಪಿಸ್ತೂಲ್ ... ಸಹಿತ ... ಪ್ರತ್ಯೇಕ

ಸ್ವಾನ್ ಹೌಸ್,

ನಂ ೪ ... ಬೀದಿ ಮದ್ರಾಸು

ಪ್ರಕಟಣೆ

ಮುಂಬಾಯಿ ಶಹಾರದಲ್ಲಿರುವ ಮೆಸ್ಸರ್ಸ್ ಮೂಲ್ಜಿ ಲಕ್ಷ್ಮೀದಾಸ್ ಎಂಬ ಫರ್ಮಿನ ಪರವಾಗಿ ಮಂಗಳೂರು ವಕೀಲ್ ಬಿ. ವೈಕುಂಠ ಬಾಳಿಗನು ಈ ಮೂಲಕ ಪ್ರಕಟಿಸುವುದೇನೆಂದರೆ—

ಮೊದಲು ರತನ್ಜಿ ಶಾನ್ಜಿ ಶೇಟರವರ ಹಕ್ಕಿನದ್ದಾಗಿದ್ದು ಪ್ರಕೃತ ಮೇಲೆ ಹೆಸರು ಕಾಣಿಸಿದ ಮೆಸ್ಸರ್ಸ್ ಮೂಲ್ಜಿ ಲಕ್ಷ್ಮೀದಾಸ್ ಫರ್ಮಿನವರ ಸಂಪೂರ್ಣ ಹಕ್ಕಿನದ್ದಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿ ಕಟ್ಟೋಣ ವಗೈರೆಯನ್ನು ಯೋಗ್ಯ ಮೌಲ್ಯ ಸಿಕ್ಕದಲ್ಲಿ ವಿಕ್ರಯಿಸುವರೆ ನನ್ನ ಕಕ್ಷಿಗಾರರು ಅಪೇಕ್ಷಿಸುತ್ತಾರೆ ಆದುದರಿಂದ ಸದರಿ ಸೊತ್ತುಗಳು ವ ಅವುಗಳ ಪೈಕಿ ಯಾವದನ್ನಾದರೂ ಪಡೆಯಲು ಅಪೇಕ್ಷಿಸುವವರು ಯಾ ಉಮೇದ್ವಾರರು ಇತರ ಸಂಗತಿಗಳನ್ನು ವಿಚಾರಿಸಿ ತಿಳಕೊಳ್ಳಬಹುದು ಸದರಿ ಸ್ಥಿರಸೊತ್ತುಗಳಿಗೆ ಸಂಬಂಧಪಟ್ಟ ರಿಕಾರ್ಡು ವಗೈರೆಯನ್ನು ಮುಂಬಾಯಿ ವಕೀಲ ಎ ದಾಮೋದರ ಪೈಗಳ ಡೊಂಗರಕೇರಿ ಆಫೀಸಿನಲ್ಲಿ ತಾ 4-2-1987 ರಿಂದ ತಾ 28-2-1987ರ ವರೆಗೆ ಬೆಳಗ್ಗೆ ಗಂಟೆ 9ರಿಂದ 12ರ ವರೆಗೆ ನೋಡಿ ಪರಿಶೋಧಿಸಿ ಅನುಭವ ಪಡೆಯಬಹುದು ಸದರಿ ಸೊತ್ತುಗಳನ್ನು ಪಡಿಯಲು ಇಚ್ಛಿಸುವವರು ತಮ್ಮ ಮೌಲ್ಯದ ಅಭಿಪ್ರಾಯವನ್ನು ಬರಹದ ಮೂಲಕ ತಾ 28-2-1987ರ ಒಳಗೆ ಸೂಚಿಸಬೇಕಾಗಿ ವಿನಂತಿ

ಮಂಗಳೂರು,
ತಾ 29-1-37

B VAIKUNTA BALIGA,
ವಕೀಲ್

ಶೆಡ್ಯೂಲ್

1 ದಕ್ಷಿಣ ಕನ್ನಡಾ ರಿಜಿಸ್ಟ್ರೇಶನ ಮಂಗಳೂರು ಸಬ್ ಡಿಸ್ಟ್ರಿಕ್ಟಿಗೆ ಸೇರಿದ ಮಂಗಳೂರು ತಾಲೂಕು ಕಸಬಾ ಬಾಜಾರ ಗ್ರಾಮದ ಬಾಬ್ತು—

R S.No	T.S No	ಕಿಸಂ	ವಿಸ್ತೀರ್ಣ	ಕಿರ್ದಿ	ಶರಾ
1248	288	ಪುಂಜ	0-9	1-9-0	ಇದರಲ್ಲಿರುವ T S ನಂಬ್ರ 288 1ನೇ ಕಟ್ಟೋಣ ವಗೈರೆ ಇದು ರತನ್ಜಿ ಶಾನ್ಜಿ ಶೇಟರವರು ಸ್ವಂತ ವಾಸ್ತವ್ಯಕ್ಕೊಂಡಿದ್ದ ಉಪ್ಪರಿಗೆ ಮನೆಯಾಗಿರುತ್ತದೆ
1878	868	ಪುಂಜ	0-6	1-0-0	ಇದರಲ್ಲಿರುವ T S ನಂಬ್ರ 868 1 & 2ನೇ ಭಂಡಸಾಲೆ ಕಟ್ಟೋಣ ವಗೈರೆ ಇದು ಉಳ್ಳಾಲ ಸುಬ್ರಾಯ ನಾಯಕರು ಸಾಮಾನು ದಾಸ್ತಾನು ಮಾಡುವ ಭಂಡಸಾಲೆಯಾಗಿರುತ್ತದೆ
1879	869	ಪುಂಜ	0-2	0-5-0	ಇದರಲ್ಲಿರುವ T S ನಂಬ್ರ 869-1ನೇ ಭಂಡಸಾಲೆ ಕಟ್ಟೋಣ ವಗೈರೆ ಇದು ಕುಂಬ್ಳೆ ಅಣ್ಣಪ್ಪ ನಾಯಕರು ಸಾಮಾನು ದಾಸ್ತಾನು ಮಾಡುವ ಕಟ್ಟೋಣವಾಗಿರುತ್ತದೆ
1253/2	244/2	ಬಾಗಾಯ್ತು	0-52	8-13-0	ಇದರಲ್ಲಿರುವ T S ನಂಬ್ರ 244 1ನೇ ಕಟ್ಟೋಣ ವಗೈರೆ
1254	245	ಪುಂಜ	0-8	1-6-0	ಇದರಲ್ಲಿರುವ T S ನಂಬ್ರ 245 1 & 2ನೇ ಕಟ್ಟೋಣ ವಗೈರೆ
1255/1	246/1	ಬಾಗಾಯ್ತು	0-11	1-14-0	ಇದರಲ್ಲಿರುವ T S ನಂಬ್ರ 246/1-1ನೇ ಕಟ್ಟೋಣ ವಗೈರೆ (1253/2, 1254, 1255/1: ಇದು ರತನ್ಜಿ ಶಾನ್ಜಿ ಶೇಟರವರು ಸ್ವಂತ ವಾಸ್ತವ್ಯಕ್ಕೊಂಡಿದ್ದ ಮನೆಯ ಎದುರು ದಕ್ಕಿನಲ್ಲಿರುವ ಆಯರ್ನ್ ಶ್ರಮ ಎಂತ ಕರೆಲ್ಪಡುವ ಕಂಪೌಂಡು ಆಗಿರುತ್ತದೆ)
1875	865	ಪುಂಜ	0-1	0-8-0	
1877/B	867 B	ಪುಂಜ	0-1	0-3-0	
1877/C	867/C	ಪುಂಜ	0-1	0-2-0	(1875, 1877/B, 1877/C: ಇವುಗಳು ಮೇಲ್ಕಂಡ R S ನಂಬ್ರ 1878ನೇಗೆ ಲಗ್ತಿಯಾಗಿರುವ ಸ್ಥಳಗಳಾಗಿರುತ್ತವೆ)
1156	174	ಪುಂಜ	0-1	0-2-0	
1366	356	ಪುಂಜ	0-8	0-8-0	ಇದರಲ್ಲಿರುವ T S ನಂಬ್ರ 356/1 & 2ನೇ ಅಂಗಡಿ ಕಟ್ಟೋಣಗಳು ಇದು ಮುಂಡಪ್ಪ ಶೆಟ್ಟಿ ಎಂಬವರು ವ್ಯಾಪಾರ ಮಾಡುವ ಅಂಗಡಿ ಕಟ್ಟೋಣಗಳಾಗಿರುತ್ತವೆ
1468	454	ಪುಂಜ	0-4	0-11-0	ಇದರಲ್ಲಿರುವ T S ನಂಬ್ರ 454 1 & 2ನೇ ಕಟ್ಟೋಣ ವಗೈರೆ ಇದು ಮಿಜಾರ ನರಸಿಂಹ ಶ್ಯಾನುಭಾಗರು ಮತ್ತು ಬಿ ರಂಗಯ್ಯ ಬಾಳಿಗರು ಕಾಫಿ ಹೋಟೆಲು ಮಾಡಿಕೊಂಡಿರುವ ಕಟ್ಟೋಣವಾಗಿರುತ್ತದೆ
1587	527	ಪುಂಜ	0-6	1-0-0	ಇದರಲ್ಲಿರುವ T S ನಂಬ್ರ 527-1 to 8ನೇ ಭಂಡಸಾಲೆ ವ ಅಂಗಡಿ ಕಟ್ಟೋಣಗಳು ವಗೈರೆ, ಇವು ಯಂ ಬಾಲಕೃಷ್ಣ ಪೈ ಮತ್ತು ಎಸ್ ಮಂಜುನಾಥ ನಾಯಕ ಇವರು ವ್ಯಾಪಾರ ಮಾಡುವ ಭಂಡಸಾಲೆ ವ ಇದರ ಎಡ ವ ಬಲಪಾರ್ಶ್ವಗಳಲ್ಲಿರುವ 2 ಸಣ್ಣ ಅಂಗಡಿಗಳು ಸಹಾ ಆಗಿರುತ್ತವೆ
1585/8	526/8	ಪುಂಜ	0-1	1-18-0	ಇದು ಮೇಲ್ಕಂಡ R S ನಂಬ್ರ 1587ನೇಗೆ ಲಗ್ತಿಯಾಗಿರುವ ಸ್ಥಳವಾಗಿರುತ್ತದೆ
1148/A1	188/A1	ಬಾಗಾಯ್ತು	0-4	0-6-0	
1148/B1	188/B1	ಡಿ	0-8	0-12-0	
1148/C	188/C	ಡಿ	0-3	0-4-0	(1148/A1, 1148/B1, 1148/C: ಇವು ಮೇಲ್ಕಂಡ ಆಯರ್ನ್ ಶ್ರಮ ಎಂಬ ಕಂಪೌಂಡಿಗೆ ಲಗ್ತಿಯಾಗಿರುವ ಸ್ಥಳಗಳಾಗಿರುತ್ತವೆ)
1441/1	481/1	ಬಾಗಾಯ್ತು	0-12	2-1-0	
1441/2	481/2	ಡಿ	0-6	1-0-0	
1441/8	481/8	ಡಿ	0-25	4-4-0	(1441/1, 1441/2, 1441/8: ಇವುಗಳಲ್ಲಿರುವ T S ನಂಬ್ರ 481-1 to 8ನೇ ಕಟ್ಟೋಣ ವಗೈರೆ ಇದು ವರ್ತಕ ವಿಲಾಸ ಎಂತ ಕರೆಯಲ್ಪಡುವ ಮೂರು ಮಾಳಿಗೆಯ ಕಟ್ಟೋಣ ವಗೈರೆಯಾಗಿರುತ್ತದೆ)
1172/2	168/2	ಡಿ	0-4	0-11-0	ಇದರಲ್ಲಿರುವ T.S ನಂಬ್ರ 168-1ನೇ ಕಟ್ಟೋಣ ವಗೈರೆ
1880/B1	870/B1	ಡಿ	0-1	0-8-0	ಇದರಲ್ಲಿರುವ T.S ನಂಬ್ರ 870/B 1ನೇ ಅಂಗಡಿ ಕಟ್ಟೋಣಗಳು ವಗೈರೆ. ಇದು ಮೇಲ್ಕಂಡ ಕುಂಬ್ಳೆ ಅಣ್ಣಪ್ಪ ನಾಯಕರು ಸಾಮಾನು ದಾಸ್ತಾನು ಮಾಡುವ R. S. ನಂಬ್ರ 1875ನೇ ಭಂಡಸಾಲೆ ಕಟ್ಟೋಣದ ಹಿಂದುಗಡೆಯಲ್ಲಿರುವ ಅಂಗಡಿ ಕಟ್ಟೋಣವಾಗಿರುತ್ತದೆ.

2. ಸದರಿ ಸಬ್ ಡಿಸ್ಟ್ರಿಕ್ಟಿಗೆ ಸೇರಿದ ಮಂಗಳೂರು ತಾಲೂಕು ಕೊಡಿಯಾಲಬೈಲ್ ಗ್ರಾಮದ—

R S.No	T.S No	ಕಿಸಂ	ವಿಸ್ತೀರ್ಣ	ಕಿರ್ದಿ	ಶರಾ
866	199	ಬಾಗಾಯ್ತು	0-20088 sq. ft.	2-12-0	ಇದರಲ್ಲಿರುವ ಮನೆ ಕಟ್ಟೋಣ ವಗೈರೆ.

B. Vaikunta Baliga, ವಕೀಲ್.

ಶುಭ ಸಮುದಾಯದ ಕಡೆಯ ವಾರ

ರಥೋತ್ಸವದ ಪ್ರಯುಕ್ತ ಈ ವಾರದಲ್ಲಿ ಪ್ರತಿ ದಿವಸವೂ ನಾಟಕ ಉಂಟು

ಶ್ರೀ ರಾಜರಾಜೇಶ್ವರೀ ಪ್ರಸೀದ

ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ, ಮೈಸೂರು

ಇವರು

ಮಂಗಳೂರು ಮೈದಾನಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ

ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ 13-2-37ನೇ ಶನಿವಾರ ರಾತ್ರಿ 9-30ಕ್ಕೆ

ಲಂಕಾದಹನ ಎಂಬ ಪೌರಾಣಿಕ ನಾಟಕವನ್ನಭಿನಯಿಸುವರು;

ತಾ. 14-2-37ನೇ ಭಾನುವಾರ ಮ್ಯಾಟಿನಿ ಸಾಯಂಕಾಲ 6 ಗಂಟೆಗೆ

ಭೂ-ಕೈಲಾಸ ನಾಟಕಕ್ಕೆ ಮಾತ್ರ ಸ್ಥಳಪರಸ್ಥಳಗಳ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲ್ಲಾ ತರಗತಿಗಳಲ್ಲಿಯೂ ಅರ್ಧ ದರ ಏರ್ಪಡಿಸಿರುತ್ತದೆ

ತಾ. 15-2-37ನೇ ಸೋಮವಾರ ರಾತ್ರಿ 9-30ಕ್ಕೆ

ಕಡೇ ಧ್ರುವವಿಜಯ ಈ ನಾಟಕವನ್ನು ಪುನಹ ಅಭಿನಯಿಸಲಾಗುವುದಿಲ್ಲ

ತಾ 16-2-37ನೇ ಮಂಗಳವಾರ ರಾತ್ರಿ 9-30ಕ್ಕೆ

ಕಡೇ ವಿರಾಟಪರ್ವ ಎಂಬ ಪೌರಾಣಿಕ ಹೊಸ ನಾಟಕವನ್ನಭಿನಯಿಸುವರು

ಭೂ-ಕೈಲಾಸ ತಾ 17-2-37ನೇ ಬುಧವಾರ

ಆಶಾಪಾಶ 18-2-37ನೇ ಗುರುವಾರ ಕಡೇ

ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಯಂ. ವಿ ಸುಬ್ಬಯ್ಯ ನಾಯ್ಡು, ಆರ್. ನಾಗೇಂದ್ರ ರಾವ್, ಪ್ರೊಪ್ರೈಟರ್ಸ್



ಮೂರು ಕೈಗಡಿಯಾರಗಳು ಮತ್ತು 195 ವಿವಿಧ ವಸ್ತುಗಳಿಗೆ ರೂ. 2-8-0 ಮಾತ್ರ.

[illegible] ರೂ 2-8-0ಗೆ [illegible] ಈ ಕೆಳಗಿನ ವಸ್ತುಗಳು [illegible] 1 ಒಂದು [illegible] 1, [illegible] 1 [illegible] 1 ಬ್ರಶ್ 1 ಕನ್ನಡಿ 1, [illegible] 1 [illegible] 1 [illegible] 1, [illegible] 1 [illegible] 1 [illegible] 1 ಚೈನ್ ಸಮೇತ [illegible] 1 [illegible] 1 [illegible] ಅಥವಾ [illegible] ವರ್ಷ ಗ್ಯಾರಂಟಿ [illegible] 1 ಟಪ್ಪಾಲು ಪ್ಯಾಕಿಂಗ್ ಹಾಸಲು ಆಣೆ 14 ಪ್ರತ್ಯೇಕ

Dutt & Co 10 1 Jax Mittra street P O Hatkhola Calcutta

LATEST NEWS

ಮಲಗಾ ಪ್ರದೇಶವು ಸ್ಪೈನಿನ ದಂಗೇಖೋರರ ವಶವಾಯಿತು ಅವರು ಪಟ್ಟಣವನ್ನು ಸೂರೆ ಮಾಡುತ್ತಲಿದ್ದಾರೆ ಎಲ್ಲೆಲ್ಲಿಯೂ ಬೆಂಕಿ ಉರಿಯುತ್ತಲಿದೆ ಒಂದೇ ಮಾರ್ಗದಲ್ಲಿ ೧೦೦ ಕೊಲೆಗಳಾಗಿವೆ ಸರಕಾರದ ಕಡೆಯಿಂದ ೫ ಸಾವಿರ ಮಂದಿ [illegible] ದಿರುವರು. ದಂಗೇಖೋರರಲ್ಲಿ ೩೦೦ ಮಂದಿ ಹತರಾಗಿರುವರು

ಜಪಾನ್ ಬರ್ಮಾಗಳೊಳಗೆ ವಾಣಿಜ್ಯ ಸಂಬಂಧ ಮಾತುಕತೆಗಳು ನಡೆಯುತ್ತಲಿವೆ

ಬರ್ಮಾದಲ್ಲಿ ಬೆಂಕಿ ಪೆಟ್ಟಿಗೆಯ ಮೇಲೆ ವಿಶೇಷ ತೆರಿಗೆಯನ್ನು ಹಾಕಲು ಸರಕಾರವು ನಿರ್ಧರಿಸಿದೆ ಕಾನೂನು ಎಪ್ರಿಲಿನಿಂದ ಜ್ಯಾರಿಗೆ ಬರುವುದು.

ಸ್ಪೈನಿನಿಂದ ೧೭ ಸಾವಿರ ಜನರು ಹೊರಗೆ ಬಂದಿರುವರು. ಇವರು ೫೦ ವಿವಿಧ ಜಹಾಂಗಿ ಕರಂತೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪರಿಶೋಧನಾಲಯದ ನಿರ್ಮಾಣಕ್ಕೆ ಕಾಲು ಮಿಲಿಯ ಪವನುಗಳು ಶೇಖರವಾಗಿರುತ್ತದೆ.

ಲಿಂಚಿಂಗ್ ಲೆಖ್ಖ

ಅಮೇರಿಕದಲ್ಲಿರುವ ನಿಗ್ರೋಗಳಿಗೂ ಬಿಳಿಯರಿಗೂ ಯಾವಾಗಲೂ ಕಚ್ಚಾಟವಿರುತ್ತದೆ ಬಿಳಿಯರಿಗೆ ಏನೂ ಅನ್ಯಾಯ ಮಾಡಿದರೂ ಹಿಡಿಯುತ್ತದೆ ಆದರೆ ಅಲ್ಲಿನ ಕಪ್ಪು ನಿಗ್ರೋಗಳೇನಾದರೂ ಬಿಳಿಯರ ಆಗ್ರಹಕ್ಕೆ ಪಾತ್ರರಾದರೆಂದರೆ ಅವರನ್ನು ಬಹಿರಂಗ ಸ್ಥಳದಲ್ಲಿ ಸಜೀವ ಸುಳಿದ ಸುಟ್ಟುಬಿಡುತ್ತಾರೆ ಇಲ್ಲವೇ ಕಲ್ಲುಗಳಿಂದ ಹೊಡೆದು ಕೊಲ್ಲುವರು ಈ ತರ ತೀರಗಳು ಸುಲಿದ ಕೊಳ್ಳುವುದಕ್ಕೆ ಲಿಂಚಿಂಗ್ ಎಂದು ಹೇಳುತ್ತಾರೆ ಈಚೆಗೆ ಇಂಥಾ ಪ್ರಸಂಗಗಳು ಅಲ್ಲಿ ಕಮ್ಮಿಯಾಗಿರುತ್ತವಂತೆ ಕಳೆದ ವರ್ಷ ಅಲ್ಲಿ ಒಟ್ಟು ೬ ಲಿಂಚಿಂಗ್ ಪ್ರಕರಣಗಳಾಗಿವೆಯಂತೆ ೧೯೩೫ರಲ್ಲಿ ೧೭ ಆಗಿವೆ. ೧೯೩೪ರಲ್ಲಿ ೧೫ ಆಗಿದ್ದುವಂತೆ ೧೯೩೩ರಲ್ಲಿ ೨೮ ನಿಗ್ರೋಗಳು ತತ್ತಾಗಿರುವರು

ಇಂಥಾ ೩೫ ಪ್ರಸಂಗಗಳು ಸರಕಾರದ ಅಧಿಕಾರಿಗಳಿಂದ ತಡೆಯಲ್ಪಟ್ಟಿವೆ ಜನಸಮೂಹದ ಆಗ್ರಹಕ್ಕೆ ತುತ್ತಾಗಲಿದ್ದ ಒಟ್ಟು ೬೯ ಜನರಲ್ಲಿ ೭ ಮಂದಿಗಳು ಬಿಳಿಯರೇ ಆಗಿದ್ದರು. ಉಳಿದ ೬೨ ಮಂದಿಗಳು ನಿಗ್ರೋಗಳು. ಇವರನ್ನು ಅಧಿಕಾರಿಗಳು ಸಕಾಲದಲ್ಲಿ ಬದುಕಿಸಿರುವರು.

ನಮ್ಮ ವೋಟು ಯಾರಿಗೆ?

ಲೇಖಕ:— ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ.

ರಾಜಕೀಯ ಸುಧಾರಣೆಗಳ ಸಂಬಂಧವಾದ ಹೊಸ ಮಸೂದೆಗನುಸಾರವಾಗಿ ಇದೇ ಬರುವ ಫೆಬ್ರವರಿ ತಿಂಗಳ ಮಧ್ಯಭಾಗದಲ್ಲಿ ಆಗಲಿರುವ ಪ್ರಾಂತಿಕ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಚುನಾವಣೆಯಲ್ಲಿ ಮತದಾರರಾಗಿರುವ ನಾವು ನಮ್ಮ ಮತಗಳನ್ನು ಯಾವ ಪಕ್ಷದ ಉಮೇದುವಾರರಿಗೆ ಕೊಡಬೇಕೆಂಬುದನ್ನು ನಿರ್ಣಯಿಸುವ ಮೊದಲು ಪೂರ್ವಾಪರ ಕೆಲವು ವಿಷಯಗಳನ್ನು ಆಲೋಚಿಸುವದು ಅಗತ್ಯವಾಗಿದೆ. ರಾಷ್ಟ್ರ ನಿರ್ಮಾಣ ಮತ್ತು ರಾಷ್ಟ್ರೋನ್ನತಿಯು ಸಾಧ್ಯಾ ಸಾಧ್ಯತೆಯು ದೇಶದಲ್ಲಾಗುವ ಉಪಯುಕ್ತ ಶಿಕ್ಷಣಪ್ರಚಾರವನ್ನವಲಂಬಿಸಿರುವದು. ಮತ್ತು ಇಂಥ ಯಾವತ್ತು ಶಿಕ್ಷಣ ಪ್ರಚಾರಕ್ಕೆ ಪ್ರಾಥಮಿಕ ಶಿಕ್ಷಣವು ತಳಹದಿಯಾಗಿರುತ್ತದೆ ನಮ್ಮ ದೇಶದ ಆಡಳಿತ ಸೂತ್ರವನ್ನು ಬ್ರಿಟಿಷರು ಕೈಕೊಂಡು ೧೫೦ ವರ್ಷಗಳ ದೀರ್ಘಕಾಲವು ಕಳೆದುಹೋಯಿತಾದರೂ ಈ ವರೆಗೆ ಪ್ರತಿ ೧೦೦ರಲ್ಲಿ ೮ ಮಂದಿಯಂತೆ ಮಾತ್ರ ಜನರು ಓದುಬರಹದ ಜ್ಞಾನವುಳ್ಳವರಾಗಿದ್ದಾರೆ. ನಿಜವಾಗಿ ಶಿಕ್ಷಿತರೆನ್ನಿಸಿಕೊಂಡಿರುವವರ ಸಂಖ್ಯೆಯು ನಮ್ಮ ದೇಶದಲ್ಲಿ ಬಹಳ ಕಡಿಮೆ ಇರುತ್ತದೆ. ಶಿಕ್ಷಣಪ್ರಚಾರಕ್ಕೆಂದು ವ್ಯಯವಾಗುತ್ತಿರುವ ಹಣದ ಒಂದು ದೊಡ್ಡ ಅಂಶವು ಕಸರಿನ (Wastage) ರೂಪದಲ್ಲಿ ಅಪವ್ಯಯವಾಗುತ್ತದೆ ನಮ್ಮ ಒಂದು ಪ್ರಾಂತ್ಯದಲ್ಲಿಯೇ ಪ್ರಾಥಮಿಕ ಶಿಕ್ಷಣಕ್ಕಾಗಿ ವ್ಯಯವಾಗುತ್ತಿರುವ ವರ್ಷಾವಧಿ ೨ ಕೋಟಿ ರೂಪಾಯಿಗಳಲ್ಲಿ ೧೦ರಲ್ಲಿ ಒಂದು ಪಾಲು ಮಾತ್ರ ಸದ್ವ್ಯಯವಾಗುತ್ತಿದೆ ಎನ್ನಬಹುದು ಆದರೆ ಈ ಪ್ರಾಂತ್ಯದ ಬೇರೆ ಬೇರೆ ಪ್ರಾಥಮಿಕ ಶಾಲೆಗಳಲ್ಲಿ ಒಂದನೆ ದರ್ಜೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ೧೧ ಲಕ್ಷವಾಗಿರುವರಾದರೂ ಅವರೊಳಗಿಂದ ಬರೆ ಒಂದು ಲಕ್ಷ ವಿದ್ಯಾರ್ಥಿಗಳು ಮಾತ್ರ ೫ನೆ ದರ್ಜೆಯ ತನಕ ಓದಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣ ಪಡೆಯುತ್ತಾರೆ ಶಿಕ್ಷಣ ಮಾಡುವಂಥ ಮಹತ್ಕಾರ್ಯದ ಒಂದು ದೊಡ್ಡ ಪಾಲು ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುವ ಉಪಾಧ್ಯಾಯರುಗಳ ಹೆಗಲ ಮೇಲೆ ಬಿದ್ದಿರುವದಾದರೂ, ಅವರಿಗೆ ದೊರೆಯುವ ದ್ರವ್ಯರೂಪವಾದ ಸಂಭಾವನೆಯು ಮಾತ್ರ ಸರಳ ರೀತಿಯ ಸುಖಜೀವನಕ್ಕೆ ಸಾಲದಷ್ಟು ಅಲ್ಪವಾಗಿರುತ್ತದೆ.

೧೯೩೭ನೆ ಇಸವಿಯ ತನಕ ಶಿಕ್ಷಣಪ್ರಚಾರದ ಯಾವತ್ತು ಜವಾಬುದಾರಿಯು ಸರಕಾರದ ಮೇಲಿತ್ತಾದರೂ, ಅನಂತರ ಪ್ರಾಪ್ತವಾದ ರಾಜಕೀಯ ಸುಧಾರಣೆಗಳ ಪ್ರಕಾರ ಆ ಜವಾಬುದಾರಿಯು ಪ್ರಜೆಗಳಿಂದ ಆರಿಸಲ್ಪಟ್ಟು, ಕೌನ್ಸಿಲುಗಳಲ್ಲಿ ಬಹುಮತ ಪಡೆದಿರುವ ಮಂತ್ರಿಮಂಡಳಗಳ ಕೈಗೆ ಬಂದಿತ್ತು. ಆಗಲಾದರೂ ಪ್ರಜೆಗಳಿಂದ ಆರಿಸಲ್ಪಟ್ಟು ನಮ್ಮ ಕಾಯದೆಮಂಡಳಗಳ ಪ್ರತಿನಿಧಿಗಳಿಗೆ ದೇಶಾಭ್ಯುದಯವನ್ನು ಸಾಧಿಸುವ ಒಂದೇ ಒಂದು ಉದ್ದೇಶವಿರುತ್ತಿದ್ದರೆ, ನಿಶ್ಚಯವಾಗಿಯೂ ಪ್ರಾಥಮಿಕ ಶಿಕ್ಷಣಪ್ರಚಾರ ಮಾಡಲಿಕ್ಕೆ ಎದುರುಬರುವ ಎಷ್ಟೋ ತೊಡರುಗಳು ಈ ಮುಂಚೆ ಎಂದೋ ಇಲ್ಲದಂತಾಗುತ್ತಿದ್ದವು. ಆದರೆ ದೇಶದ ದೌರ್ಭಾಗ್ಯದಿಂದ ಹಾಗಾಗಲಿಲ್ಲ. ೧೯೩೭ರ ನಂತರ ಅಧಿಕಾರಕ್ಕೆ ಬಂದ ಮಂತ್ರಿಮಂಡಳಗಳು ಈ ೧೫ ವರ್ಷಗಳಲ್ಲಿ ಶಿಕ್ಷಣಾಭಿವೃದ್ಧಿಗಾಗಿ ಮಾಡಿದ್ದು ಏನಾದರೂ ಇದ್ದರೆ, ಅದು ಬಹಳ ಕಡಿಮೆಯಾದುದೆಂಬುದನ್ನು ಖೇದದಿಂದ ಒಪ್ಪಬೇಕಾಗಿದೆ ೧೯೩೮—೩೯ರಿಂದ ೧೯೪೨—೪೩ರ ವರೆಗೆ ಆದ ಶಿಕ್ಷಣಪ್ರಚಾರದ ಷಟ್ವಾರ್ಷಿಕ ವರದಿಯನ್ನು ಪರಿಶೀಲಿಸಿದಾಗಲೂ ಕೂಡ, ಪ್ರಾಥಮಿಕ ಶಿಕ್ಷಣದ ಉನ್ನತಿಯಾಗುವದರ ಬದಲಿಗೆ ಅವನತಿ ಆದದ್ದೇ ವಿಶೇಷವಾಗಿ ಕಂಡುಬರುತ್ತದೆ. ಈ ವರದಿ ಕಾಲದಲ್ಲಿ ಜನಸಂಖ್ಯೆಯೂ ಶಾಲೆಗೆ ಹೋಗುವ ಪ್ರಾಯವುಳ್ಳ ಮಕ್ಕಳ ಸಂಖ್ಯೆಯೂ ಹೆಚ್ಚಿತು. ಆದರೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ಬಹು ಸ್ವಲ್ಪಮಟ್ಟಿನ ಪ್ರಗತಿಯಾದ ಅದೊಂದು ಸಣ್ಣ ವಿಷಯವನ್ನು ಬಿಟ್ಟುಬಿಟ್ಟರೆ, ಈ ವರದಿ ಕಾಲದಲ್ಲಿ ಬ್ರಿಟಿಷ ಇಂಡಿಯದಲ್ಲಿ ಮಕ್ಕಳ ಶಾಲೆಗಳ ಸಂಖ್ಯೆ, ಅವುಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ, ಆ ಶಾಲೆಗಳಿಗಾಗಿ ಖರ್ಚಾಗುತ್ತಿದ್ದ ಒಟ್ಟು ಹಣ, ಸರಕಾರವೂ ಲೋಕಲ್ ಬೋರ್ಡುಗಳೂ ಆ ಶಾಲೆಗಳ ಬಗ್ಗೆ ವ್ಯಯಿಸಿದ ಹಣ ಎಲ್ಲವೂ ಹಿಂದಿನ ವರ್ಷಗಳಿಗಿಂತ ಬಹಳ ಕಡಿಮೆಯಾಗಿದ್ದವು ದೇಶೋನ್ನತಿಯು ಯಾವ ಪ್ರಾಥಮಿಕ ಶಿಕ್ಷಣದ ಪ್ರಚಾರವನ್ನು ಅವಲಂಬಿಸಿರುವದೋ, ಅದೇ ಪ್ರಾಥಮಿಕ ಶಿಕ್ಷಣಪ್ರಚಾರವು ಹೀಗೆ ಕಾಲಕಳೆದಂತೆ ಕಡಿಮೆ ಕಡಿಮೆಯಾಗುತ್ತ ಬಂದರೆ, ಆಗ ದೇಶಾಭ್ಯುದಯವಾಗುವದು ಎಷ್ಟೋ ಕಾಲದ ಅನಂತರದ ಮಾತಾಗಿ ಉಳಿಯುವದು ಅಂಥ ಸಂದರ್ಭದಲ್ಲಿ ನಮ್ಮ ಮುಂದಿನವರ ಭವಿಷ್ಯವು ತೀರಾ ನಿರಾಶಾಮಯವಾಗುವದೆಂಬುದರಲ್ಲಿ ಸಂದೇಹವೇ ಇರುವುದಿಲ್ಲ.

ಧರ್ಮಾರ್ಥ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆನ್ನುವ ಸೊಲ್ಲು ಈಗ ಅಪರೂಪವಾಗಿ ಕೇಳಿಬರುತ್ತದೆ ಆ ಮಾತು ಕಾರ್ಯರೂಪಕ್ಕೆ ಬರಲಿಕ್ಕೆ ಮಂತ್ರಿಮಂಡಳಗಳು ಮಹತ್ತಾದ ಪ್ರಯತ್ನಗಳನ್ನು ಮಾಡಿದಂತೆ ತೋರಲಿಲ್ಲ ಅಲ್ಲಲ್ಲಿ ಕೆಲಕೆಲವು ಸರ್ಕ್ಯೂಲಾರುಗಳನ್ನು ಹೊರಡಿಸಿ ಮಂತ್ರಿಮಂಡಳಗಳು ಶಿಕ್ಷಣಪ್ರಚಾರದಲ್ಲಿ ತಮಗಿರುವ ಲವಲವಿಕೆಯನ್ನು ಹೊರಪಡಿಸಿರುವವಾದರೂ, ಇಷ್ಟರವರೆಗೆ ಏನಾದರೂ ಮಹತ್ಕಾರ್ಯವನ್ನು ಸಾಧಿಸುವ ಮಂತ್ರಿಮಂಡಳಗಳು ಈಗ ತಾನೇ, ಚುನಾವಣೆಯ ಸಂಧಿಕಾಲದಲ್ಲಿ ಈ ಸರ್ಕ್ಯೂಲಾರುಗಳನ್ನು ಹೊರಡಿಸಿ ತಮ್ಮ ಶಿಕ್ಷಣ ಪ್ರೇಮವನ್ನು ಪ್ರಕಟಿಸಿರುವದರಿಂದ ಆ ಸರ್ಕ್ಯೂಲಾರುಗಳ ಯಥಾರ್ಥತೆಯ ಕುರಿತು ನಾವು ಸಂದೇಹಪಡುವಂತಾಗಿದೆ ಶಿಕ್ಷಣಪ್ರಚಾರವು ದೇಶವ್ಯಾಪಿಯಾಗಿ ಆಗಬೇಕಾದರೆ ಬಹಳ ಹಣ ಬೇಕಾಗುವದೆಂಬುದು ನಿಜ. ಈಗಾಗಲೇ ಪ್ರಾಥಮಿಕ ಶಿಕ್ಷಣಪ್ರಚಾರಕ್ಕಾಗಿ ಬ್ರಿಟಿಷ ಇಂಡಿಯದಲ್ಲಿ ವರ್ಷಕ್ಕೆ ಸುಮಾರು ೨೬॥ ಕೋಟಿ ರೂಪಾಯಿಗಳು ಖರ್ಚಾಗುತ್ತವೆ ಇಷ್ಟು ಹಣ ವ್ಯಯವಾಗಿಯೂ ಬಡ ಉಪಾಧ್ಯಾಯರಿಗೆ ತಿಂಗಳಿಗೆ ದೊರೆಯುವದು ೧೦—೧೨ ರೂಪಾಯಿಗಳು ಮಾತ್ರ! ಮುಂದೆ ಸಾಗಬೇಕಾದ ಕಾರ್ಯದ ಮಹತ್ವನ್ನೂ ಅದಕ್ಕಾಗಿ ದೊರಕಿಸಿಕೊಳ್ಳಬೇಕಾದ ಹಣದ ಅಂದಾಜನ್ನೂ ಇಷ್ಟರಿಂದಲೇ ಮಾಡಿಕೊಳ್ಳಬಹುದು. ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ಅನ್ನವಸ್ತ್ರಗಳಿಗೆ ಬೇಕಾದಷ್ಟು ಸಂಭಾವನೆಯೂ ಅವರಿಗೆ ದೊರೆಯದಿರುವ ಈ ಕಾಲದಲ್ಲಿಯೇ ಹ್ಯಾದ ತಗಾದೆ ಇಷ್ಟು ಇರುವಾಗ ಅವರ ತಲಬು ಹೆಚ್ಚಿ ಸ್ಥಿತಿಗತಿಗಳು ಸುಧಾರಿಸಿಕೊಳ್ಳುವಾಗ ಪ್ರಾಥಮಿಕ ಶಿಕ್ಷಣವು ದೇಶವ್ಯಾಪಿಯಾದಾಗ ಈಗಿನಕ್ಕಿಂತ ಹತ್ತಾರು ಪಾಲು ಹೆಚ್ಚು ಹಣ ಖರ್ಚುಮಾಡಬೇಕಾಗುವದೆಂಬುದು ನಿಜ

ದೇಶೋನ್ನತಿಯಾಗಬೇಕಾದರೆ ಇಷ್ಟು ಹಣ ಬೇಕೇಬೇಕು. ಆದರೆ ಅದು ಎಲ್ಲಿಂದ ಬರಬೇಕು ಎಂಬುದು ಪ್ರಶ್ನೆ. ಸರಕಾರದ ಆಡಳಿತ ಕ್ರಮವು ಈಗಿನಂತೆಯೇ ಇದ್ದರೆ, ಶಿಕ್ಷಣ ಖಾತೆಗೆ ಈಗಿನಷ್ಟು ಹಣವಾದರೂ ಮುಂದೆ ದೊರೆಯುವದು ಕಷ್ಟವಾಗಬಹುದು ಅದ್ದರಿಂದ ಸರಕಾರದ ಆಡಳಿತಕ್ರಮದಲ್ಲಿ ಬದಲಾವಣೆಗಳು ಅತ್ಯಗತ್ಯವಾಗಿವೆ ಇಂಥ ಬದಲಾವಣೆಗಳನ್ನು ಸುಲಭದಲ್ಲಿ ಮಾಡಿಕೊಳ್ಳುವಂಥ ಅನುಕೂಲ ಪರಿಸ್ಥಿತಿಯನ್ನುಂಟುಮಾಡಲಿಕ್ಕೆ ಹಿಂದಿನ ಮಂತ್ರಿಮಂಡಳಗಳು ಪ್ರಯತ್ನಿಸಲಿಲ್ಲ ಮುಂದೆ ಶಿಕ್ಷಣ ಖಾತೆಯು ಬೆಳೆದು ಬರುವ ಖರ್ಚಿಗೆಂದು ಕರಳುದಾಯಗಳನ್ನು ಹೆಚ್ಚಿಸಲಿಕ್ಕೂ ಇಲ್ಲ. ಈಗಾಗಲೇ ಹೆಚ್ಚಿದ ಕರಕಂದಾಯಗಳ ಭಾರದಿಂದ ಜನತೆಯು ಮುಗ್ಗರಿಸಿ ಬಿದ್ದು ಏಳಲಾರದೆ ಹೋಗಿರುವದು ಎಂದಿನತನಕ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ದೊರೆಯುವ ದ್ರವ್ಯರೂಪವಾದ ಸಂಭಾವನೆಯು ಈಗಿನಕ್ಕಿಂತ ದುಬಾರಿಯಾಗುವದಿಲ್ಲವೋ, ಅವರ ಸ್ಥಿತಿಗತಿಗಳು ಸುಧಾರಿಸಲ್ಪಡುವದಿಲ್ಲವೋ, ಅವರಿಗೆ ತಮ್ಮ ಉದ್ಯೋಗದಲ್ಲಿ ತೃಪ್ತಿ ಸುಖಸಮಾಧಾನಗಳು ಇರುವುದಿಲ್ಲವೋ, ಅಂದಿನತನಕ ಬರೇ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿ ಆ ಬಗ್ಗೆ ಸ್ವಲ್ಪ ಸ್ವಲ್ಪ ಹಣ ಹೆಚ್ಚಿಗೆ ಖರ್ಚುಮಾಡುತ್ತಿರುವುದರಿಂದ ಉಪಯುಕ್ತ ಪ್ರಾಥಮಿಕ ಶಿಕ್ಷಣದ ಪ್ರಚಾರವು ದೇಶವ್ಯಾಪಿಯಾಗಿ ಸರ್ವಥಾ ಆಗಲಾರದು ಸರಕಾರದ ಇಂಥ ನೀತಿಯಿಂದ ಪರಿಣಾಮವು ಎಂದೆಂದೂ ಶುಭಕಾರಿಯಾಗದು

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕಂಡುಬರುವ ಮೇಲೆ ಹೇಳಿದಂಥ ಎಲ್ಲ ಎಡರುತೊಡರುಗಳು, ಲೋಪದೋಷಗಳು, ಕುಂದುಕೊರತೆಗಳು ದೂರವಾಗಿ ಪ್ರಚಾರಕ್ಕೆ ಅಗತ್ಯಬೇಕಾದ ಅನುಕೂಲವಾತಾವರಣ ಉಂಟಾಗಬೇಕಾದರೆ ಸರಕಾರದ ಆಡಳಿತಕ್ರಮದಲ್ಲಿ ಬದಲಾವಣೆ, ಅದರ ಮೂಲಕ ಅದರ ಆರ್ಥಿಕ ನೀತಿಯ ಬದಲಾವಣೆ ಮತ್ತು ಸರಕಾರದ ಉಚ್ಚ ಅಧಿಕಾರಿಗಳ ಮಿತಿಮೀರಿದ ತಲಬನ್ನು ತಿಂಗಳಿಗೆ ೫೦೦ ರೂಪಾಯಿಗೆ ತಂದಿಳಿಸದಿರುವ ಧೋರಣೆ— ಇವುಗಳಲ್ಲಿ ಬದಲಾವಣೆಗಳಾಗಬೇಕಾಗಿವೆ. ಮುಂದೆ ಬರುವ ಸುಧಾರಣೆಗಳ ಮೂಲಕ ನಿಜವಾದ ಸ್ವಾತಂತ್ರ್ಯವು ಪ್ರಾಪ್ತವಾಗುವುದಿಲ್ಲವಾದುದರಿಂದ, ಮೇಲೆ ಹೇಳಿದಂಥ ಕಾರ್ಯಗಳನ್ನು ಸಾಧಿಸುವದು ಯಾವ ಮಂತ್ರಿಮಂಡಲಕ್ಕಾದರೂ ಅಸಾಧ್ಯ ಸಂಗತಿಯಾಗುವದು. ಈಗಿನ ಸುಧಾರಣೆಗಳು ಹಿಂದೆ ಪ್ರಾಪ್ತವಾದ ಸ್ವಾತಂತ್ರ್ಯವನ್ನು ತಿರುಗಿ ಕಸಕೊಳ್ಳುವ ಸಾಧನಗಳಾಗಿರುವ ಕಾರಣದಿಂದಲೂ, ರಾಜಕೀಯಕ್ಕೆ ಸಂಬಂಧಪಟ್ಟ ಇತರ ಕಾರಣಗಳಿಂದಲೂ ಈ ಸುಧಾರಣೆಗಳು ನಮಗೆ ಸಂಪೂರ್ಣ ಅತೃಪ್ತಿಕರ ಮತ್ತು ತಿರಸ್ಕಾರಯೋಗ್ಯವಾಗಿರುವವೆಂದು ನಮ್ಮ ದೇಶದ ಗಣ್ಯಮಾನ್ಯ ಪ್ರತಿಯೊಂದು ರಾಜಕೀಯ ಪಕ್ಷವೂ ಪ್ರತಿಯೊಬ್ಬ ಪ್ರಜಾಪ್ರಮುಖನೂ ಹೇಳುತ್ತ ಬಂದಿರುವನು ಅದ್ದರಿಂದ ಕಾಂಗ್ರೆಸು ಈ ಸುಧಾರಣೆಗಳ ಮಸೂದೆಯು ಜ್ಯಾರಿಗೆ ಬಾರದಂತೆ ನೋಡಲು ಟೊಂಕಕಟ್ಟಿದೆ. ಆ ಕಾರ್ಯಸಾಧನೆಗಾಗಿ ಹೊರಸಿನಿಂದ ಚಳುವಳಿಯನ್ನೆಬ್ಬಿಸುವದು ಮಾತ್ರವಲ್ಲದೆ, ಕೌನ್ಸಿಲು ಎಸೆಂಬ್ಲಿಗಳಿಗೆ ಹೋಗಿ ಅವುಗಳ ಒಳಗಿನಿಂದಲೂ ಮಸೂದೆಯನ್ನು ವಿರೋಧಿಸುವ ಕಾರ್ಯಕ್ರಮವನ್ನಿಟ್ಟುಕೊಂಡಿದೆ ಇದರಲ್ಲಿ ಅದಕ್ಕೆ ಸಫಲತೆಯು ಪ್ರಾಪ್ತವಾಗಿ ದೇಶಕ್ಕೆ ನಿಜವಾದ ಹಕ್ಕು ಸ್ವಾತಂತ್ರ್ಯಗಳು ಪ್ರಾಪ್ತವಾದಲ್ಲಿ ಸರಕಾರ ಕ್ರಮದಲ್ಲಿ ಮೇಲೆ ಹೇಳಿದಂಥ ಬದಲಾವಣೆಗಳನ್ನು ಮಾಡಿ ರಾಷ್ಟ್ರೋನ್ನತಿಯನ್ನು ಮಾಡಿಕೊಳ್ಳುವದು ಸುಲಭವಾಗುವುದು ಕಾಂಗ್ರೆಸ್ಸಿನವರಷ್ಟು ವ್ಯಾಪಕವಾದ ಮತ್ತು ಉಪಯುಕ್ತವಾದ ಎಸೆಂಬ್ಲಿ ಮತ್ತು ಕೌನ್ಸಿಲು ಕಾರ್ಯಕ್ರಮವನ್ನು ಬೇರಾವ ರಾಜಕೀಯ ಪಕ್ಷವೂ ಇಟ್ಟುಕೊಂಡುದಿಲ್ಲವೆಂದು ಗೊತ್ತೇ ಇದೆ ಅದ್ದರಿಂದ ಮತದಾರರಾಗಿರುವ ನಾವು ನಮ್ಮ ಮತಗಳನ್ನು ಕಾಂಗ್ರೆಸ್ಸಿನ ಕಡೆಯಿಂದ ನಿಂತ ಉಮೇದ್ವಾರರಿಗೆನೇ ಕೊಟ್ಟು ನಮ್ಮ ಕರ್ತವ್ಯಪಾಲನೆಮಾಡಬೇಕಾಗಿದೆ ಇಲ್ಲವಾದರೆ ಕೊಡಲಿಯ ಕಾವು ಕುಲಕ್ಕೆ ಕೇಡಾಗಿ ಪರಿಣಮಿಸಿದಂತೆ ನಮ್ಮ ಓಟೇ ನಮಗೆ ಘಾತುಕವಾಗಿ ಪರಿಣಮಿಸಬಹುದು

A VOTE

For CANARA BANK

VOTE FOR FREEDOM

FROM FINANCIAL WORRIES

ESTD 1906

CANARA BANK

RESOURCES OF A CRORE

LIMITED.

TRUE COPY.

Nanjangood, dated 29th Oct 35

From

B. M. Sivaramiah,

(Bellur M. Sivaram)

First Grade Pleader,

Brindaban Kuteer, NANJANGOOD.

To

The Secretary,
The C. P. C. Co., Ltd.,
MANGALORE.

Sir,

From here I write to thank you heartily for the excellent convenience you were pleased to afford me in my lecture tour in South Canara. Ever since, I got down from train at Hassan your service took charge of me and at Saklaspur, Puttur, Mangalore, Udipi (especially) Someshwar and even at Agumbe your service was kind and all felicitous to me. I felt as if I had my own car with me throughout. I may say here that I observed that all other passengers also were treated alike and their conveniences attended to promptly, properly and what is most remarkable courteously. I think I have derived from your service in my tour ten times the benefit I have really paid for the same. I conclude by saying yours is an excellent service and you deserve every praise for the public good you are doing all along.

Please accept my heartfelt thanks and congratulation.

Yours sincerely

(Sd) B. M. Sivaramiah.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies
2. Rebate for larger assurances
3. Accident Risk covered on small extra premiums
4. Attractive Bonuses

It pays you to represent this Company

Wanted Agents in unrepresented parts

Apply to:—

Messrs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at:-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No. 4

ಮಂಗಳೂರು

ಪ್ರೊಫೆಸರ್ ಸಿ. ಜಿ. ವಾರ್ಕಿ, ಎಂ. ಎ., ಎಲ್. ಟಿ. ಇವರ ಉಮೇದುವಾರಿಕೆಗೆ ಮಂಗಳೂರಿನಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟಿರುವ "ಮಂಗಳೂರು ಕೆಥೋಲಿಕ್ ಮರ್ಚೆಂಟ್ಸ್ ಎಸೋಸಿಯೇಷನ್" ಮತ್ತು 'ಮಂಗಳೂರು ಕೆಥೋಲಿಕ್ ವಕೀಲ್ಸ್ ಎಸೋಸಿಯೇಷನ್' ನವರದು ತುಂಬಾ ಸಹಾಯವು ದೊರೆಕಿರುತ್ತದೆ.

ಸಿ. ಜಿ. ವಾರ್ಕಿಯವರು ಆದಿತ್ಯವಾರ ದಿವಸ ಕುಂದಾಪುರದಿಂದ ಬಂದವರು ಸೋಮವಾರ ಬೆಳಗ್ಗಿನ ಮೈಲಿನಲ್ಲಿ ಮಲಬಾರಿಗೆ ಹೋಗಿ, ಅಲ್ಲಿ ಹಲವು ಕಡೆಗಳಲ್ಲಿ ಭಾಷಣ ಮಾಡಿ, ರಾಷ್ಟ್ರಪತಿ ಪಂಡಿತ ಜವಾಹರಲಾಲರೊಂದಿಗೆ ಮಂಗಳೂರಿಗೆ ಬಂದಿರುವರು

ಮಂಗ್ಳೂರಿಗೆ ರಾಷ್ಟ್ರಪತಿಯವರ ಆಗಮನ

ರಾಷ್ಟ್ರಾಧ್ಯಕ್ಷ ಪಂಡಿತ ಜವಾಹರಲಾಲ ನೆಹರೂರವರು ಇದೇ ತಾ ೧೧ಕ್ಕೆ ಬೊಂಬಾಯಿಂದ ವಿಮಾನದ ಮೂಲಕ ಕಣ್ಣನೂರಿಗೆ ಹೋಗಿ ಅಲ್ಲಿ ಮಧ್ಯಾಹ್ನದ ಮೈಲು ಹತ್ತಿ, ಸಾಯಂಕಾಲ ಸಾಧಾರಣ ೫ ಗಂಟೆ ಮಂಗಳೂರಿಗೆ ತಲ್ಪಿದರು. ಪಂಡಿತರ ದರ್ಶನಕ್ಕಾಗಿ ಹಳ್ಳಿಹಳ್ಳಿಗಳಿಂದಲೂ ಜನಸ್ತೋಮವು ಬಂದಿದ್ದು ರೈಲ್ವೇ ಸ್ಟೇಷನದಲ್ಲಿ ಕಿಕ್ಕಿರಿದು ನೆರೆದಿತ್ತು. ರೈಲಿನಿಂದ ಕೆಳಗಿಳಿದ ಕೂಡಲೇ ಪಂಡಿತರು ಯಾವ ಆಡಂಬರ ಸ್ವಾಗತಕ್ಕೂ ಗಮನಕೊಡದೆ ಕೂಡಲೇ ಪಳ್ನೀರಿನಲ್ಲಿ ರೋಮನ್ ಕೆಥೋಲಿಕರ ಕಡೆಯಿಂದ ಏರ್ಪಡಿಸಿದ ಲಘು ಉಪಾಹಾರಕ್ಕೆ ದಯಮಾಡಿಸಿ, ಕೆಥೋಲಿಕರಿಗೆ ರಾಷ್ಟ್ರ ಸಮರದಲ್ಲಿ ಭಾಗವಹಿಸುವರೇ ಪ್ರಾರ್ಥನೆ ಮಾಡಿ ಅಲ್ಲಿಂದ ನೆಹ್ರೂ ಮೈದಾನಿಗೆ ಆಗಮಿಸಿದರು. ಅಲ್ಲಿ ಏರ್ಪಡಿಸಿದ ಸಭಾವರಣವು ವಿಪರೀತ ಜನಸ್ತೋಮದ (ಸಾಧಾರಣ ೩೦ ಸಾವಿರ) ದಿಂದ ತುಂಬಿತ್ತು. ಜನರ ಉತ್ಸಾಹ, ಆತುರಗಳಿಗೆ ಮಿತಿಯಿರಲಿಲ್ಲ. ಎಲ್ಲರೂ ನೆಹರೂಗಳ ದರ್ಶನಕ್ಕಾಗಿ ಹಾತೊರೆಯುತ್ತಿದ್ದ. ಪಂಡಿತರ ಆಗಮನದೊಡನೆ ಅವರನ್ನು ಜಯಘೋಷಗಳಿಂದ ಸ್ವಾಗತೀಕರಿಸಿದರು. ಜನರ ಈ ಉತ್ಸಾಹಕ್ಕೆ ಮನಸೋತ ಪಂಡಿತರು ಬೇರೆ ಯಾವ ಮಾನಪತ್ರ ಅರ್ಪಣದ ಕಡೆಗೂ ಹೆಚ್ಚು ಗಮನಕೊಡದಾದರು. ಮೊದಲವರು, ವಾಲ ಗ್ರಾಹಕ ಯಂತ್ರ ಏರ್ಪಾಟಿನ ನ್ಯೂನತೆಯನ್ನು ಟೀಕಿಸಿ, ನೆರೆದ ಅರ್ಧ ಸಭಾಭಾಗಕ್ಕೆ ಅದರಿಂದ ಉಪಯೋಗವಿಲ್ಲದುದರಿಂದ ಅದನ್ನು ಅಲ್ಲಿಂದ ತೆಗಿಸಿ ಎತ್ತರವಾದ ವೇದಿಕೆಯ ಮೇಲೆ ನಿಂತು ಕಾಂಗ್ರೆಸ್ ವಾರ್ತೆಯನ್ನು ತಿಳಿಸಿದರು (೧೧ನೇ ಪುಟವನ್ನು ನೋಡಿರಿ) ಅಲ್ಲಿಂದ ಸುಮಾರು ೭ ಗಂಟೆಗೆ ಪಂಡಿತ ನೆಹರೂರವರು ಬಂಟ್ವಾಳಕ್ಕೆ ಪಯಣ ಬೆಳೆಸಿದರು

ತಾಲೂಕುಗಳಿಂದ

ಕುಂದಾಪುರ— ಇದೇ ತಾ ೬ನೇ ಶನಿವಾರ ದಿನ ಬೆಳಗ್ಗೆ ಪ್ರೊ ಸಿ. ಜಿ. ವಾರ್ಕಿಯವರು ತನ್ನ ಸ್ವಯಂಸೇವಕರೊಂದಿಗೆ ಇಲ್ಲಿಗೆ ಬಂದು ಹಲವು ಕಡೆಗಳಲ್ಲಿ ಭಾಷಣಮಾಡಿದರು. ಅವರ ಸ್ವಯಂಸೇವಕರು ಬಹಳ ಮಟ್ಟಿಗೆ ತಮ್ಮ ಕೆಲಸವನ್ನು ಸಾಗಿಸುತ್ತಿರುವರು. ಆದಿತ್ಯವಾರ ಸಾಯಂಕಾಲ ಪ್ರೊ ವಾರ್ಕಿಯವರು ಮಂಗಳೂರಿಗೆ ಹಿಂತಿರುಗಿದರು.

ಬಂಟ್ವಾಳ— ಇಲ್ಲಿಯ ಒಡ್ಡ ಕಟ್ಟಿ ಸಂಕದ ಎರಡು ಬಾಯಿಗಳಿಗೆ ಕಾಂಕ್ರೀಟು ಹಾಕಿ ೩ನೇ ತಾರೀಕಿಗೆ ಕುಂದದ ಕಲ್ಲು ಇಡಲಿಕ್ಕೆ ಮುಹೂರ್ತವಂತೆ. ಸದರಿ ಸಂಕವು ಮುಂಚಿಗಿಂತ ಇಪ್ಪತ್ತು ಫೀಟಿಗೆ ಎತ್ತಿ ಮಾಡುತ್ತಿದ್ದಾರೆ.

ಜಿಲ್ಲಾ ಕಲೆಕ್ಟರ್ ಥೋರ್ನ್‌ರವರು ಇಲ್ಲಿ ನಾಲ್ಕೈದು ದಿವಸದಿಂದ ಈ ಡಿವಿಜನಿನ ಜಮಾಬಂದಿ ನಡೆಸಿ ತಾ. ೩ಕ್ಕೆ ಮಂಗಳೂರಿಗೆ ಹಿಂತಿರುಗುತ್ತಾರೆ.

ಬಂಟ್ವಾಳದ ಸುತ್ತು ಅಸುಪಾಸುಗಳಲ್ಲಿ ಅನೇಕ ಸ್ಥಳಗಳಲ್ಲಿ ಕಾಲರಾ ಪ್ರಾರಂಭವಾಗಿ ಒಂದೆರಡು ಮರಣಗಳು ಆಗಿಹೋದುವು. ಇಲ್ಲಿ ದಾಕ್ಟರ ಶ್ರೀಯುತ ನೇಮಿ ರಾಜ ಅಜ್ರಿಯವರೂ ಮತ್ತು ಹೆಲ್ತ್ ಇನ್ಸ್‌ಪೆಕ್ಟರವರೂ ಬಹಳ ಶ್ರಮ ತಕ್ಕೊಂಡು ಹಬ್ಬದಂತೆ ಪ್ರಯತ್ನಿಸ್ತಾರೆ. ಹೆಲ್ತ್ ಆಫೀಸರವರೂ ಆಗಾಗ್ಗೆ ಬಂದು ಅನೇಕರಿಗೆ ಕಾಲರಾ ಇಂಜೆಕ್ಷನ್ ಮಾಡಿಸಿರುತ್ತಾರೆ. ದಿನ ದಿನ ಜನರು ಸದರಿ ದಾಕುಹಾಕಿಸಿಕೊಳ್ಳಲಿಕ್ಕೆ ಬರುತ್ತಿರುತ್ತಾರೆ. ಇಲ್ಲಿಯ ಮೀನುಮಾರ್ಕೆಟಿನಲ್ಲಿ ಇನ್ನೂ ಕೊಳೆತ ಮೀನು ಮಾರುವುದನ್ನು ನಿಲ್ಲಿಸಲ್ಪಡುವುದಿಲ್ಲ.

ರಾಷ್ಟ್ರಸಭಾಧಿಪತಿಗಳು ಬುಧವಾರ ಸಾಯಂಕಾಲ ಇಲ್ಲಿಗೆ ತಲುಪಿದರು. ಅಸುಪಾಸಿನ ಹಳ್ಳಿಗಳಿಂದ ಬಂದ ಅಗಾಧ ಜನಸ್ತೋಮವು ಪಂಡಿತರ ದರ್ಶನಕ್ಕಾಗಿ ಮಧ್ಯಾಹ್ನದಿಂದಲೂ ಕಾದಿತ್ತು. ಅಧ್ಯಕ್ಷರಾಗಮನದ ಸುದ್ದಿಯು ಜನರಲ್ಲಿ ಅಭೂತಪೂರ್ವ ಸ್ಫೂರ್ತಿಯನ್ನುಂಟುಮಾಡಿತು. ಜಯಕಾರಗಳು ದಿಗಂತವನ್ನು ತಲ್ಪಿದುವು. ಮಾರ್ಗ ಆಯಾಸದಿಂದ ಬಳಲಿದ ಪಂಡಿತರ ಧ್ವನಿಯಾದರೂ ಕುಗ್ಗಿರಲಿಲ್ಲ. ಗಂಭೀರವಾಣಿಯಿಂದ ಅವರು ಕಾಂಗ್ರೆಸು ವಾರ್ತೆಯನ್ನು ಸಾರಿದರು. ಅಂದು ಇಲ್ಲಿ ಸ್ವಲ್ಪ ವಿಶ್ರಮಿಸಿ ಮೂಡಬಿದರೆಗೆ ಮುಂದರಿದರು.

ಮೂಡಬಿದರೆ— ಬಂಟ್ವಾಳದಿಂದ ಪಂಡಿತರು ಇಲ್ಲಿಗೆ ಬಂದರು. ದಾರಿಯಲ್ಲಿನ ಚಿಕ್ಕ ಚಿಕ್ಕ ಹಳ್ಳಿಗಳ ಹತ್ತಿರ ಕೂಡಿದ ಜನರು ಪಂಡಿತರ ದರ್ಶನವನ್ನು ಪಡೆದರು. ಸುಮಾರು ೧೦ ಘಂಟೆಗೆ ಮೂಡಬಿದ್ರೆಯನ್ನು ತಲ್ಪಿದರು. ಇಲ್ಲಿ ಕೂಡಾ ೧೨, ೧೬ ಸಾವಿರಕ್ಕೆ ಕಡಿಮೆಯಾಗದ ಜನಸ್ತೋಮವು ಕೂಡಿತ್ತು. ಯಥಾ ಪ್ರಕಾರ ಪಂಡಿತರು ಕಾಂಗ್ರೆಸ್ ಸುವಾರ್ತೆಯನ್ನು ತಿಳಿಸಿದರು. ಮುಗಿಯುವಾಗ ರಾತ್ರಿ ೧೧॥ ಗಂಟೆಯಾಗಿರಬಹುದು

ಮೂಲ್ಕಿ—ರಾಷ್ಟ್ರಪತಿ ನೆಹರೂರವರು ಬೆಳಗ್ಗೆ ೯ ಗಂಟೆಗೆ ಸರಿಯಾಗಿ ಇಲ್ಲಿಗೆ ಚಿತ್ತೈಸಿ ಇಲ್ಲಿಯ ಕಾಂಟವಿ ಗಾರ್ಡನಿನಲ್ಲಿ ಶೃಂಗರಿಸಿದ ಸಭಾ ಮಂಟಪದಲ್ಲಿ ಕಾಂಗ್ರೆಸ್ಸಿನ ಸಂದೇಶವನ್ನು ತನ್ನ ಉತ್ತಮವಾದ ಭಾಷಶೈಲಿಯಿಂದ ಬೋಧಿಸಿದರಲ್ಲದೆ ತನ್ನ ಪ್ರಾಂತ್ಯವಾದ ಸಂಯುಕ್ತ ಸಂಸ್ಥಾನದ ಪ್ರಚಂಡ ಜಯವನ್ನು (೧೩೩ ಉಮೇದ್ವಾರರಲ್ಲಿ ೧೩೧ ಉಮೇದ್ವಾರರ ಫಲಕಾರಿ ಸಿಕ್ಕಿದುದನ್ನು) ಹೇಳಿದರು. ಜಯಜಯಕಾರವು ಕಿಕ್ಕಿರಿದು ನೆರೆದ ಸಭೆಯಿಂದ ಕೇಳಬಂತು. ಕಡೆಗೆ ಕಾಂಗ್ರೆಸು ಕಡೆಯ ಉಮೇದ್ವಾರರಿಗೆನೆ ಓಟನ್ನು ಕೊಡಬೇಕೆಂದೂ ಕರ್ನಾಟಕವೂ ಬಾಕಿ ಸಂಸ್ಥಾನಗಳಿಗಿಂತ ಹಿಂದುಳಿಯಲಾರದೆಂಬ ಭರವಸೆ ತನಗಿದೆ ಎಂದೂ ಸೂಚಿಸಿದರು. ಪ್ರತೀ ಒಂದು ಹಳ್ಳಿ ಗ್ರಾಮದಲ್ಲಿಯೂ ಜಾತಿ, ಮತ ಬೇಧಗಳಿಲ್ಲದೆ ಕಾಂಗ್ರೆಸು ಸಂಸ್ಥೆಗಳನ್ನು ಏರ್ಪಡಿಸಿ ತನ್ಮೂಲಕ ಕಾಂಗ್ರೆಸ್ಸಿನ ಪ್ರಚಾರಮಾಡಬೇಕೆಂಬುದನ್ನು ಜನತೆಗೆ ಬೋಧಿಸಿದರು.

ಸಭೆಯ ವಿಸರ್ಜನೆ ಮೂಲ್ಕಿ ಕಾಂ. ಕಮಿಟಿಯವರಿಂದ ಸುಸ್ವರದಿಂದ ಹಾಡಲ್ಪಟ್ಟಿತು. ಕಾಂಗ್ರೆಸು ಅಧ್ಯಕ್ಷರು ಮೂಲ್ಕಿಯಿಂದ ಕಿನ್ನಿಗೋಳಿ ಮುಂಡ್ಕೂರು, ಮತ್ತು ಪಡುಬಿದ್ರಿ ದಾರಿಯಾಗಿ ಉಡುಪಿಗೆ ಬೀಳ್ಕೊಟ್ಟರು.

ಕಾರ್ಕಳ— ಕಾಂಗ್ರೆಸಿನ ಕಡೆಯಿಂದ ಎಲೆಕ್ಷನ ಪ್ರಚಾರಕಾರ್ಯವು ಬಲು ಬಿರುಸಾಗಿ ನಡೆಯುತ್ತಲಿದೆ. ಈ ವರೆಗೆ ಆದ ಕಾರ್ಯದ ಆಲೋಚನೆ ಮಾಡಿದರೆ ನಮ್ಮ ತಾಲೂಕಿನಲ್ಲಿ ಕಾಂಗ್ರೆಸ ಉಮೇದುವಾರರಿಗೆ ಪ್ರಚಂಡ ಬಹುಮತ ದೊರೆಯಬಹುದಾಗಿ ಎಣಿಸಲಬಹುದು.

ನಿನ್ನೆ ಬೆಳಗ್ಗೆ ಶ್ರೀ ನೆಹರುಗಳು ಮೂಡಬಿದ್ರೆಯಿಂದ ಮುಂದರಿದು ೭ ಮೂರು ೮ ಗಂಟೆಗೆ ಕಾರ್ಕಳಕ್ಕೆ ತಲ್ಪಿದರು. ಇಲ್ಲಿಯೂ ಸುಮಾರು ೧೦–೧೨ ಸಾವಿರ ಜನರು ಪಂಡಿತರ ದರ್ಶನಾಕಾಂಕ್ಷಿಗಳಾಗಿ ನೆರೆದಿದ್ದರು. ಕಾಂಗ್ರೆಸ ವಾರ್ತೆಯನ್ನು ಪಂಡಿತರು ಇಲ್ಲಿಯೂ ಘೋಷಿಸಿದರು. ಸಂಯುಕ್ತ ಪ್ರಾಂತ್ಯದಲ್ಲಿ ಚುನಾವಣೆಗೆ ನಿಂತ ೧೩೩ ಉಮೇದ್ವಾರರಲ್ಲಿ ೧೩೧ ಮಂದಿ ಕಾಂಗ್ರೆಸ್ ಕಡೆಯಿಂದ ಚುನಾಯಿತರಾದುದನ್ನೂ ತಿಳಿಸಿ, ಇಲ್ಲಿಯೂ ಜನರು ಕಾಂಗ್ರೆಸ್ ಉಮೇದ್ವಾರರಿಗೇನೇ ತಮ್ಮ ಮತವನ್ನು ಕೊಡಬೇಕೆಂದು ಕೇಳಿಕೊಂಡು ಉಡುಪಿಗೆ ಪ್ರಯಾಣವನ್ನು ಬೆಳೆಸಿದರು

ಉಡುಪಿ

ನಮ್ಮ ಸ್ವಂತ ಬಾತ್ಮೀದಾರರಿಂದ

೩. ೯ನೇ ಬೆಳಗ್ಗೆ ೯ ಗಂಟೆಗೆ ಸ್ಥಳೀಯ ಕಾಂಗ್ರೆಸ್ ಚುನಾವಣಾ ಕಚೇರಿಯಲ್ಲಿ ಪ್ರಮುಖರೂ ಕೆಲಸಗಾರರೂ ಸಭೆ ಸೇರಿ ಚುನಾವಣಾ ದಿನದ ಏರ್ಪಾಡುಗಳ ಹಂಚಿಕೆಯನ್ನು ನಿರ್ಣಯಿಸಿರುವರು. ಸ್ವಯಂಸೇವಕರೂ ಕೆಲಸಗಾರರೂ ಮತದಾರರನ್ನು ಭೆಟ್ಟಿಮಾಡಿ ಕಾಂಗ್ರೆಸು ಪ್ರಚಾರವನ್ನು ಭರದಿಂದ ನಡೆಸುತ್ತಿರುವರು. ಅಂದೇ ಅಪರಾಹ್ನ ೪ ತಾಸಿಗೆ ಕಲ್ಯಾಣಪುರದಲ್ಲೂ, ಮರುದಿನ ಉದ್ಯಾವರದಲ್ಲೂ ಇಂತಹ ಏರ್ಪಾಟುಗಳು ಸಂಘಟಿಸಲಾಗಿವೆ. ಅಕ್ಕಪಕ್ಕದ ಹಳ್ಳಿಗಳಿಗೂ ಕಾಂಗ್ರೆಸ್ ಸಂದೇಶವು ಕೆಲಸಗಾರರಿಂದ ಹಬ್ಬಲಾಗುತ್ತದೆ. ಎಲ್ಲ ಕಡೆಗಳಲ್ಲೂ ಕಾಂಗ್ರೆಸು ಉಮೇದ್ವಾರರಿಗೆ ಬೆಂಬಲವು ಪ್ರೋತ್ಸಾಹವು ತುಂಬಾ ಪ್ರಕಟವಾಗುತ್ತಲಿದೆ

ತಾ. ೧೦ನೇ ಸಾಯಂಕಾಲ ೫ ತಾಸಿಗೆ ಮುನಿಸಿಪಲ್ ಆಫೀಸಿನಲ್ಲಿ ಮುನಿಸಿಪಲ್ ಸದಸ್ಯರ ಸಾಧಾರಣ ಸಭೆಯು ನಗರಾಧ್ಯಕ್ಷರ ಸಭಾಧಿಪತ್ಯದಲ್ಲಿ ಜರಗಿತು. ಮುನಿಸಿಪಲ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಬಳ ಕಡಿತದ ಪ್ರಶ್ನೆಯೇ ಪ್ರಾಮುಖ್ಯದ ವಿಷಯವಾಗಿತ್ತು. ಇದರ ತೀರ್ಮಾನವು ಮುಂದಣ ಸಭೆಗೆ ಮುಂದರಿಸಲಾಯಿತು. ಉಪಕಮಿಟಿಯವರು ತಯಾರಿಸಿದ ಮಾನಪತ್ರವು ರಾಷ್ಟ್ರಪತಿಗಳಿಗೆ ಒಪ್ಪಿಸಲ್ಪಡಲು ಮಂಜೂರಾಯಿತು.

ನಿನ್ನೆ ನಡುಮಧ್ಯಾಹ್ನ ಸಮಯಕ್ಕೆ ರಾಷ್ಟ್ರಪತಿಗಳು ಇಲ್ಲಿಗೆ ದಯಮಾಡಿಸಿದರು. ದರಿದ್ರ ರಕ್ಷಕನಾದ ಶ್ರೀ ಪರಮಾತ್ಮನ ತೀರ್ಥಕ್ಷೇತ್ರವಾದ ಉಡುಪಿಯು ಮತ್ತೊಬ್ಬ ಅವತಾರ ಪುರುಷನ ಆಗಮನದಿಂದ ಇನ್ನೂ ಪವಿತ್ರವಾಯಿತೆಂದೋ ಏನೋ ಉಕ್ಕಿದ ಉತ್ಸಾಹದ ಚೈತನ್ಯಯುಕ್ತ ಧ್ವನಿಯು ಜಯಕಾರಗಳನ್ನು ಘೋಷಿಸಿತು. ಮಾನಪತ್ರ ಅರ್ಪಣೆಯ ನಂತರ, ಪಂಡಿತರು ಕಾಂಗ್ರೆಸ್ಸಿನ ಸುವಾರ್ತೆಯನ್ನು ಜನಸ್ತೋಮಕ್ಕೆ ತಿಳಿಯಪಡಿಸಿ, ಈ ಭಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಿಗೇನೇ ಓಟು ಕೊಟ್ಟು ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡರು

ಪತ್ರವ್ಯವಹಾರ

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ—ಸ್ವ.

'ಪೇದ್ರು'ಗಳು ಚಿರಂಜೀವಿಗಳಾಗಿರಲಿ.

ಮಿಸ್ಟರ್ ಪೇದ್ರುಗಳಿಗೆ ಏನಾದರೂ ಪ್ರಾಸು ಯಾನೆ "ಮನಸ್ಸಿನ ಮಂಡಿಗೆ" ಇದ್ದರೆ ಅದೆಲ್ಲಾ ಆತಂಕ್ರವಾಯಿತೆಂದು ನಾನು ಆತನಿಗೆ ಹೇಳಬೇಕಾಗಿದೆ. ಅದು ಅವನ ವೇಷಧಾರಣೆಯಂತೆ ಸುಲಭದಲ್ಲಿ ಕಂಡುಹಿಡಿಯಲಾಗುತ್ತದೆ. ಕಾಂಗ್ರೆಸ್ಸಿನ ರಾಷ್ಟ್ರೀಯತ್ವದ ವೇಷಧಾರಣೆಯೊಡನೆ ಈ ಕುಣಿಯುತ್ತಿರುವ ಕೊಂಕಣಿ ಜಾತಿಯತೆಯನ್ನು ನಾನು ಕ್ಷಣದಲ್ಲಿ ಖಂಡಿಸಿದೆನು ಮತ್ತು ಇದರಿಂದ ಮಿ ಪೇದ್ರು ಎಚ್ಚೆತ್ತು ಒಂದು ಪ್ರತ್ಯೇಕ ಕಾಗದ ಬರೆದು ಆ ಬರೆಹದ ಸಾರಾಂಶವನ್ನು ಸರಿಹೋಲಿಸಿಕೊಂಡು ಕಾಂಗ್ರೆಸಿನ ಪೂರ್ಣಪಕ್ಷಪಾತಿಯ ಉಸ್ತುವಾರಿಗಾಗಿಯೂ ಅದೇ ಕಾಂಗ್ರೆಸ್ ಆರಾಧನೆಗೆ ಒಬ್ಬ ಚು.ನಿ.ವಣೆ ಕೊಂಕಣಿ ಮತಾವಲಂಬಿಯಾಗಿ ನಿಂದ ಶ್ರೀ ವೆಂಕಟ್ರಾಯ ಬಾಳಿಗರ ಉಮೇದ್ವಾರಿಯ ವಕಾಲತಿಗಾಗಿಯೂ ನಿಂತಿರುವ ಸ್ವದೇಶಾಭಿಮಾನಿಯಲ್ಲಿ ನನ್ನ ಮೇಲೆ ಅಸಹ್ಯವಾದ ವೈಯಕ್ತಿಕವಾದ ಬೈಗುಳನ ಸುರಿಮಳೆ ಕರೆದನು. ಅದೇನೋ ಒಂದು ಗುಪ್ತವಾಗಿ ವೈರ ಹಚ್ಚಿಕೊಂಡ ಹೆಸರಿದ್ದರೂ ಮಿ ಪೇದ್ರು ಒಬ್ಬ ರೋಮನ್ ಕೆಥೋಲಿಕನಾಗಲಾರನು. ಪ್ರಾಯಶಃ ಆತನ ರೀತಿಯ ಜನಗಳಿಗೆ ವೇಷಧಾರಣೆ ಮಾಡುವುದೇ ಅವರ ಜನ್ಮಸಿದ್ಧವಾದ ಹಕ್ಕಾಗಿರಬಹುದು. ಅದು ಹೇಗಿದ್ದರೂ ಆ ಮೊಗವಾಡವು ಸುಲಭವಾಗಿ ತೆಗೆಯಲ್ಪಟ್ಟಿದ್ದು ಮಿ ಪೇದ್ರು "ಶೇಂಡಿ" ಪೇದ್ರುವೆನ್ನುವಲ್ಲಿ ನನಗೆ ಸಂದೇಹವಿಲ್ಲ.

ಒಳ್ಳೇದು. ಆತನ ಆ ದುಂಬೇಶನದ ಲೇಖನದ ಕುರಿತು ನಾನು ಆತನನ್ನು ಅಭಿನಂದಿಸಬೇಕು. ನಷ್ಟದ ಸ್ವಭಾವವುಳ್ಳ ಕೇವಲ ಸಂದೇಹವಾದ ಬೈಗುಳಿನಿಂದಲೂ ವೈಯಕ್ತಿಕ ಆಕ್ರಮಣಗಳಿಂದಲೂ ಮಾತ್ರವೆ ಕೂಡಿದ ಅಂತಹದೊಂದು ಲೇಖನವನ್ನು ಪ್ರಕಟಿಗೊಳಿಸುವುದರ ವಿಷಯದಲ್ಲಿ ಪ್ರಾಯಶಃ ಆವನು ತನ್ನ ಮಟ್ಟಿಗೆ ತಾನು ಭಯಗೊಂಡೇ ಇದ್ದಾನೆ. ಮಿ ಪೇದ್ರು ಹೀಗೆ ಗುಟ್ಟಿನಲ್ಲೇ ಏಕೆ ಇರಬೇಕೆಂಬುದಕ್ಕೆ ಇದೇ ಒಂದು ಕಾರಣವಾಗಿದ್ದರೂ ಇರಬಹುದು. ಆದರೆ ನಾನು ಇದಕ್ಕೆ ಅವಸರಪಡದೆ ಇನ್ನೇನು ಮಾಡಬಲ್ಲೆನು? ಕೆಲವು ವೇಳೆ ಕುಂಟಿತನವನ್ನು ನಿವಾರಿಸಲು ಕಾಲಾತೀತವಾದಾಗ ಆಗ ಮಾತ್ರ ಒಬ್ಬನ ಆಕ್ರಮಗಳ ಫಲಾಫಲಗಳು ಗೋಚರಕ್ಕೆ ಬರುತ್ತವೆ. ಸ.ನು. ವಕಾಲತ್ತು ವಹಿಸಿರುವ ಆ ಗುಟ್ಟನ್ನು ಬಿಚ್ಚಿಡಲಿಕ್ಕೆ ಆ ಉದ್ದೇಶಕ್ಕೆ ಆತನು ಉಪಯೋಗಿಸಿದ ಬೈಗುಳವು ತರ್ಕದ ಹಾದಿಯಲ್ಲ ಮತ್ತು ಕಠಿಣ ಶಬ್ದಗಳು ಮೂಳೆಗಳನ್ನು ಮುರಿಯುವುದೂ ಇಲ್ಲ. ಆತನ ಬತ್ತಳಿಕೆಯಲ್ಲಿ ಅತ್ಯಂತ ಹದಗೆಟ್ಟ ಭಾಷೆಯಲ್ಲಿ ಪೋಣಿಸಿದ ಅಸಹ್ಯ ಬೈಗುಳು ಅಲ್ಲದೆ ಇನ್ನೇನೂ ಇಲ್ಲ. ಆತನು ವಕಾಲತ್ತು ವಹಿಸಿದ ಆ ಉದ್ದೇಶದ ಪರವಾದ ಯಾವತ್ತೂ ತರ್ಕಸರಣಿಯು ದಿವಾಳಿಯಾಗಿದೆ ಎಂಬುದಕ್ಕೆ ಇದೇ ಒಂದು ದೃಷ್ಟಾಂತವಾಗಿದೆ. ಈ ಚುನಾವಣೆಯಲ್ಲಿ ತಮ್ಮ ಓಟುಗಳನ್ನು ಒಂದು ಬಗೆಯಲ್ಲಿ ಅಥವಾ ಇನ್ನೊಂದು ರೀತಿಯಲ್ಲಿ ಕೊಡುವ ಮೊದಲು ಸಮುಕೂಲದ ಬುದ್ಧಿಯುಳ್ಳವರೆಲ್ಲರು ಚೆನ್ನಾಗಿ ಆಲೋಚಿಸಬೇಕು ಎಂಬುದಲ್ಲದೆ ಇನ್ನೇನು ನನಗೆ ಬೇಕಾಗಿಲ್ಲ.

ಆದರೆ ಈ ಲೇಖನವನ್ನು ಪ್ರಕಟಿಸುವಲ್ಲಿ ಸಂಪಾದಕರು ಮತ್ತು ಮುದ್ರಕರೂ ತೆಗೆದುಕೊಂಡಿರುವ ವಿಶೇಷ ಅಪಾಯದ ಈ ಸಂಸ್ಥಿತಿಯು ಕುರಿತು ನನಗೆ ಆಶ್ಚರ್ಯವಾಗಿದೆ. ಜನರು ಜಾತಿಯ ಪ್ರೇಮದಿಂದ ಅಂಧರಾಗಿರುವಾಗ ಅವರೊಡನೆ ಕಾರಣಕೊಟ್ಟು ಮಾತಾಡುವುದರಿಂದ ಫಲವಿಲ್ಲವೆಂಬುದು ನನಗೆ ಗೊತ್ತು. ಇದರಲ್ಲಿ ಒಂದು ವಿಷಯವೇನಂದರೆ— ರಾಜನೀತಿಯಲ್ಲಿ ವಿರೋಧಿಯಾದ ನನ್ನ ಈ ಕಡೆಗೆ ಅವರು ತೋರಿರುವ ಆ ಸಂಸ್ಥಿತಿಯಿಂದಲೇ ಅವರ ಬಡಿವಾರದ ರಾಷ್ಟ್ರೀಯತ್ವವು ಕೋಮು ವಾದಾ ಮನಸ್ಸಾರರದೇಕಾದ ಅಹಿಂಸಾತತ್ವದ ಕಾಂಗ್ರೆಸಿನ ಧ್ಯೇಯವು ಅವರ ವರೆಗೆ ಕೂಡಾ ಪ್ರವೇಶಿಸಿಲ್ಲವೆಂದು ಖಂಡಿತವಾಗಿ ತೋರಿಸಿಕೊಡುತ್ತದೆಂದು ನಾನು ಅವರಿಗೆ ವಂದಿಸಬೇಕಾಗುತ್ತದೆ. ಕೊಂಕಣಸ್ಥರ ಕಪಟ ರಾಷ್ಟ್ರೀಯತ್ವದ ಖಂಡನೆಯಾಗಿ ನಾನು ಕ್ಷಣದಲ್ಲಿ ಹೇಳಿದ ಮಾತುಗಳನ್ನು ಸಂಪೂರ್ಣವಾಗಿಯೂ ಸಮರ್ಥಿಸುತ್ತಿದೆ. ಯಾವ ಸಂಸ್ಥೆಯ ಸೃಷ್ಟಿಕರ್ತರು ತಮ್ಮ ಸ್ವಜಾತಿಯ ಹಿತಸಾಧನೆಯ ಮೇಲ್ಮೈಗಾಗಿ ಈ ಕೆಲವರು ಮುಂದೊತ್ತುತ್ತಿರುವರೋ ಅಂಥ ಕಾಂಗ್ರೆಸ್ ಸಂಸ್ಥೆಯ ಮುಂಬರಿಗರ ಇವರ ಈ ತತ್ವಶನದ ಟೊಳ್ಳನ್ನು ನಾನು ಬಯಲಿಗೆ ತಂದಿದ್ದೇನೆ. ಆ ನಿಜ ವಿದ್ಯಮಾನಗಳ ನಿರೂಪಣೆಯ ವಿಷಯದಲ್ಲಿ ನಾನು ಸ್ವಲ್ಪವೂ ವ್ಯಸನಪಡುವುದಿಲ್ಲ. ಅಷ್ಟೇ ಅಲ್ಲದೆ ಅಯೋಗ್ಯವಾದ ಬೈಗುಳಲ್ಲದೆ ನನ್ನ ಹೇಳಿಕೆಯನ್ನು ವಿರೋಧಿಸುವುದಕ್ಕಾಗಲಿ ನನ್ನ ಸ್ಥಾನದಿಂದ ಕಾರಣಕೊಟ್ಟು ಜಾರಿಗೆಯಲಿಕ್ಕಾಗಲಿ ಯಾವ ನ್ಯಾಯಗಳ ಪ್ರಯತ್ನಗಳೂ ನಡೆದಿಲ್ಲವೆಂದು ನಾನು ತಿಳಿಯಲು ಬಹಳ ಸಂತೋಷಪಡುತ್ತೇನೆ

ಆದ ಕಾರಣ ಈ ಸಂದರ್ಭದಲ್ಲಿ [illegible] ಮಿಸ್ಟರ್ ನೆಹರೂಗಳಿಗೆ ಮಂಗಳೂರಲ್ಲಿ ಒಂದು ಎಡ್ರೆಸ್ ಒಪ್ಪಿಸಲ್ಪಡುತ್ತಿದೆ ಎಂದು ವಾರ್ತೆ. ಆಗ ಮಂಗಳೂರಿನ ಕಾಂಗ್ರೆಸ್‌ವೀರರು ರಾಷ್ಟ್ರೀಯ ವಿಚಾರಗಳಲ್ಲಿ ತಮ್ಮಿಂದ [illegible] ಕುರಿತು ಹೇಗೆ ವ್ಯವಹರಿಸುತ್ತಾರೆಂದೂ [illegible]

ಚಿರಾವಳಿಯ [illegible] ಮಿ ಪೇದ್ರುಗಳು ವಿದ್ಯಾಂಸರೆಂಬ [illegible] ಪ್ರವೇಶಿಸದೆ ಬರೇ ಚಿರಾವಳಿಯನ್ನು [illegible] ವುದರಿಂದ ನಾನು ಅವುಗಳಿಗೆ ಒಪ್ಪುವ ತಿರಸ್ಕಾರದೊಡನೆ ಅದನ್ನು ದೂರೀಕರಿಸುತ್ತೇನೆ. ಆದರೆ ಆತನು ಅದೊಂದು ಊಹನೆಯನ್ನು ಮಂಡಿಸಲು ಮಾತ್ರ ಪ್ರಯತ್ನಪಟ್ಟಿದ್ದಾನೆ. ಆ ಕುರಿತು ಆತನಿಗೆ ಕೊಂಚ ತೊಂದರೆಯೂ ಆದ ಹಾಗೆ ತೋರುತ್ತದೆ. ಕ್ಷಣದಲ್ಲಿ ನಾನು ಭಾಷಣ ಮಾಡಿದಾಗ ನಾನು ಕುಡಿದಿರಬೇಕೆಂದು ಆತನು ಊಹಿಸಿದ್ದಾನೆ. ನಾನು ಮಿ ಪೇದ್ರುವಿನ ಈ ತೊಂದರೆಯಲ್ಲಿ ಸಹಾನುಭೂತಿಯುಳ್ಳವನಾಗಿದ್ದೇನೆ ಮತ್ತು ಅವನನ್ನು ಆ ಸಂಕಟದಿಂದ ಪಾರುಮಾಡಬೇಕೆಂದಿದ್ದೇನೆ. ಇಂತಹ ಸಂದರ್ಭಗಳಲ್ಲಿ ಪ್ರತ್ಯಕ್ಷ ಪ್ರಮಾಣಗಳೇ ಇರದಾಗ ಒಬ್ಬನು ಊಹನೆಯಲ್ಲಿ ಮಾತ್ರವೇ ಸುತ್ತಾಡುವಂತೆ ಮಾತ್ರ ಆಗುವುದಿಲ್ಲ. ನಾನು ಕೆಲವು ವೇಳೆ ಸ್ನೇಹಿತರೊಡನೆ ಸ್ಟೆಷ್ಣರಲ್ಲಿಗೆ ಹೋಗಿರುತ್ತೇನೆ. ಅಲ್ಲಿಗೆ ಕೆಲವು ಜನರು ವಾದದ ಅಂತ್ಯದ ವಿನೋದಕ್ಕಾಗಿ ಬರುವ ಅಭ್ಯಾಸದಲ್ಲಿರುವರು. ಅಲ್ಲಿ ಶ್ರೀ ವೆಂಕಟ್ರಾಯ ಬಾಳಿಗರು ಅಲ್ಲಿ ನನ್ನನ್ನು ಅನೇಕಾವರ್ತಿ ಕಂಡಿದ್ದಾರೆ. ಮಿ. ಪೇದ್ರುಗಳು ಶ್ರೀ ವೆಂಕಟ್ರಾಯರ ಹತ್ತಿರವೇ ಈ ಬಗೆದ ವಿಷಯದಲ್ಲಿದ ವಿಚಾರಮಾಡಲೆಂದು ನಾನು ಅನ್ನುತ್ತೇನೆ. ನಾನು ಅಲ್ಲಿ ಯಾವ ಬಗೆಯ ಪಾನೀಯಗಳನ್ನು ತೆಗೆದುಕೊಳ್ಳುತ್ತಿದ್ದೇನೆ ಎಷ್ಟು ಮಟ್ಟಿಗೆ ಸ್ವೀಕರಿಸುತ್ತೇನೆ ಮತ್ತು ನಾನು ಕುಡಿದು ಉನ್ಮತ್ತನಾಗುತ್ತೇನೋ ಹೇಗೆ ಎಂದು ಶ್ರೀ ಬಾಳಿಗರೇ ತಿಳಿಸಬಲ್ಲರೆಂದು ನನಗೆ ಖಂಡಿತವಿದೆ. ಇದು ನನಗೆ ವಿರೋಧವಾಗಿಯೇ ಇದ್ದಾಗ್ಯೂ ಮದ್ಯಪಾನವನ್ನು ಸಂಪೂರ್ಣ ನಿಷೇಧಿಸಬೇಕೆಂಬ ಕಾಂಗ್ರೆಸ್ ತತ್ವದ ವಕಾಲತ್ತನ್ನು ನಾನು ವಹಿಸಿಲ್ಲವಾದ ಕಾರಣ, ನಾನು ಆ ತತ್ವವನ್ನು ಮುರಿದ ದೋಷಕ್ಕೆ ಪಾತ್ರನಾಗಲಾರೆನು. ಕೊನೆಯದಾಗಿ ನಾನು ಮಿ ಪೇದ್ರುಗಳ ಲೇಖನಕ್ಕಾಗಿ ವಂದಿಸುತ್ತೇನೆ. ಈ ಲೇಖನವು ಅನೇಕ ಮಂದಿ ವಿವೇಚನಾಶಕ್ತಿಯುಳ್ಳ ಮತದಾರರ ಅನೇಕಾನೇಕ ಓಟುಗಳನ್ನು ನಿಸ್ಸಂದೇಹವಾಗಿಯೂ ಜಸ್ಟಿಸ್ ಪಾರ್ಟಿಗೆ ದೊರಕಿಸಿಕೊಡದಿರದು. ಆದಕ್ಕಾಗಿ ಪೇದ್ರುಗಳು ಚಿರಂಜೀವಿಗಳಾಗಿರಲಿ ಎಂದು ನನ್ನದೊಂದು ಸಂದೇಶ.

ಎನ್ ಎಸ್ ಸುವರ್ಣ



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:– ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಸರಕಾರದಲ್ಲಿ ರಜಿಸ್ಟರಮಾಡಲ್ಪಟ್ಟ ಪ್ರಸಿದ್ಧವಾದ

ಸ್ಥಾಪನಾ 1909

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ರೋಗದ ನಾಮಗಳು — ಕ್ಷಯ ರೋಗ, ಬಾಲಂತಿರೋಗ ಹೆಡದ ಸಂಭು, ದಮ್ಮು, ಅಜಗ್ಯ, ಕಾಲರಾ, (ಮೋಡಶಾ) ಪ್ಲೇಗು, ಇನ ಪ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮಲ ರೋಗ, ಗಂಡುಮಾಲೆ ನಾರಹುಣ್ಣು, ಶಸ್ತ್ರಘಾಯ, ಶ್ವಿಶೂಲೆ, ಮೂಗಿನೊಳಗಿನ ಹಿನಿಸ ಮೊದಲಾದವುಗಳು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆ ಶೂಲೆ [illegible] ಪ್ರವಾಸಮಿತ್ರ ಮೂರ್ತಿಮಂತವೈದ್ಯ [illegible] ಹೊಟ್ಟೆ ದೊಡ್ಡದಾಗೋಣ, [illegible] ಹೊರಬೀಳೋಣ, ಮತ್ತು ಡಾಕ್ಟರರಿಗೆ ವೈದ್ಯರಿಗೆ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣವಾಗುವುದು. ಬೇರೆ ಸರ್ವ ಕಟ್ಟಿದ್ದಕ್ಕೆ ತತ್ ಕ್ಷಣ ಗುಣಬರುವದು. ಅನೇಕ ರೋಗಗಳಿಗೆ ಒಂದೆ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು. ಆದರೆ ಒಂದು ಸಾರಿ ತಂದು ನೋಡಬೇಕು. ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು [illegible] ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ.

[illegible] ತೊಲೆ ಬಾಟ್ಲಿ ಒಂದಕ್ಕೆ ರೂ. [illegible] ಚಿಕ್ಕ ಬಾಟ್ಲಿ ಒಂದಕ್ಕೆ [illegible] ಚಿಕ್ಕ ಬಾಟ್ಲಿ ಒಂದೇ ಸಾರಿ ಒಂದು ಡಜನ್ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. [illegible] ಖರ್ಚು [illegible] ತೊಲೆ ಬಾಟ್ಲಿ ಒಂದೇ [illegible] ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು. ಟಪಾಲು ಖರ್ಚು [illegible] ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ [illegible] ಟಪಾಲು ಖರ್ಚು [illegible] ಆಣೆ [illegible] ಎರಡು [illegible] ಔಷಧ ತರಿಸಿಕೊಂಡರೆ [illegible] ಆಣೆ ಬೀಳುವುದು.

ತಕ್ಕೊಳ್ಳುವ ಪ್ರಮಾಣ.— ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು [illegible] ಔಷಧವು [illegible] ಬಾಟ್ಲಿ [illegible] ತೆಗೆದುಕೊಂಡು ಹಣ ತಿರುಗಿ ಕೊಡುವೆವು. ನಮ್ಮ ಅರ್ಕಶಫಾದಂತೆ [illegible] ತಯಾರುಮಾಡುತ್ತಿರುತ್ತಾರೆ. ನಮ್ಮ ಫೋಟೋ ಮತ್ತು [illegible] ನೋಡಿ ತಕ್ಕೊಳ್ಳಬೇಕು. ಏಜಂಟ ಮತ್ತಾರೆ ಯಾರೂ ಇಲ್ಲ. [illegible] ಪರೀಕ್ಷೆಮಾಡಿ ತಕೊಳ್ಳಬೇಕು. [illegible] ಕನ್ನಡ [illegible] ಮರಾಠಿ, ಇಂಗ್ಲಿಷುಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು, ತಂದೆಯ ಹೆಸರು, ಅಡ್ಡಹೆಸರು ಇರುವ ಗ್ರಾಮ, ಪೋಸ್ಟಾಫೀಸು ತಾಲೂಕು, ಜಿಲ್ಲೆ ಸ್ಟೇಟ ಎಲ್ಲ ಖುಲಾಸ ಬರೆಯಬೇಕು.

ನಮ್ಮ ವಿಳಾಸ:— ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೊ ಶಹಾಪೂರ [ಬೆಳಗಾಂವಿ]

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9-50	ಸಂಜೆ 4-20
ಎಕ್ಸ್ಪ್ರೆಸ್	„ 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2.40
ಶಟಲ್	ಸಂಜೆ 5-25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 3.20	

ಕಳೆದ 30 ವರ್ಷಗಳಿಂದಲೂ ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡುತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

'ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. **ಬೆಲೆ ಆಣೆ 3.**

30, 60 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್ ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕಮಗಳೂರು. ಮುಖ್ಯವಾಗಿ ಇನಿತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ 'ಬಿಡಿ ಸಂಚಿಕೆ'ಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಶರ್ತಗಳಿಗಾಗಿ ಬರೆಯಿರಿ

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ.

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ — ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ — ಗರ್ಭಶೂಲೆ, ಗರ್ಭಸ್ರಾವಕ್ಕೆ.
ಚಂದ್ರಮುಸ್ — ವಾಂತಿಭೇದಿ, ಅತಿಸಾರಕ್ಕೆ.
ಕೃಷ್ಣಾರಕ್ — ಶ್ವಾಸಖಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ವೃದ್ಧಿಕಾಸವ — ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ — ನಪುಂಸಕತ್ವ, ಧಾತುಕ್ಷೀಣತೆಗೆ.
ಭುವನಾಂಜನ ಪೈನ್ ಬಾಮ್ — ಶಾರೀರಿಕ ನೋವುಗಳಿಗೆ.
ರಸಬಿಂದು — ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ — ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಗ್ರಾಮೋದ್ಧಾರ

ಮುದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟುದು.

ಗ್ರಾಮಗಳಲ್ಲಿ ಭೂರಂಧ್ರ ಪಾಯಖಾನೆಗಳನ್ನು ಒದಗಿಸುವ ವಿಶೇಷ ತರದ ಯೋಜನೆ.

ಇದಲ್ಲದೆ ಹಳ್ಳಿಗಳಲ್ಲಿ ಭೂರಂಧ್ರ ಪಾಯಖಾನೆಗಳನ್ನು ಒದಗಿಸುವ ಒಂದು ಯೋಜನೆಯನ್ನು ಸರಕಾರದವರು ಅಂಗೀಕರಿಸಿರುವರು ಪ್ರತಿಯೊಂದು ಜಿಲ್ಲೆಯ ಒಂದೊಂದು ತಾಲೂಕಿನಲ್ಲಿ 100 ಹಳ್ಳಿಗಳನ್ನು ಆರಿಸಿ, ಅವುಗಳಲ್ಲಿ ಈ ತರದ ಪಾಯಖಾನೆಗಳನ್ನು ಕಟ್ಟಿಸುತ್ತಾರೆ ಈ ಯೋಜನೆಯ ಮೇರೆಗೆ ಸರಕಾರದವರು 1 ಪ್ರತಿಯೊಂದು ಗ್ರಾಮದಲ್ಲಿಯೂ ನಾಲ್ಕು ನಾಲ್ಕು ಜನರು ಉಪಯೋಗಿಸಲಿಕ್ಕಾಗುವ ಸಾರ್ವಜನಿಕ ಪಾಯಖಾನೆಗಳೆರಡನ್ನು ಕಟ್ಟಿಸುತ್ತಾರೆ 2 ಪ್ರತಿಯೊಂದು ಹಳ್ಳಿಯಲ್ಲಿ ಕೆಲವು ಮನೆಗಳಲ್ಲಿ ಖಾಸಗಿ ಪಾಯಖಾನೆಗಳನ್ನು ಕಟ್ಟಿಸುವ ಬಗ್ಗೆ ಬೇಕಾಗುವ ರಂಧ್ರ ಕೊರೆಯುವ ಯಂತ್ರಗಳನ್ನು ಧರ್ಮಾರ್ಥವಾಗಿ ಒದಗಿಸಿಕೊಡುತ್ತಾರೆ ಮತ್ತು ಮನೆಯ ಮ್ಹಾಲೀಕರು ಕಲ್ಲಿನ ಹಲಿಗೆಗಳ ಅರ್ಧ ಕ್ರಯ ಕೊಟ್ಟು ಪಾಯಖಾನೆ ಮಾಡುವ, ನೆಲ ಕೊರೆಯುವ ಮತ್ತು ಸುತ್ತು ದರೆ ಹಾಕುವ ಖರ್ಚನ್ನು ಕೊಡುವಲಿಲ್ಲಾ ಅವರಿಗೆ ಬಹು ಗಟ್ಟಿಯಾದ ಸುಣ್ಣದ ಕಲ್ಲಿನ ಹಲಿಗೆಗಳನ್ನು ಅರ್ಧ ಕ್ರಯಕ್ಕೆ ಕೊಡುತ್ತಾರೆ

ಈ ಜಿಲ್ಲೆಯಲ್ಲಿ ಸಿಕ್ಕಿತ ಕೆಲವು ಹಳ್ಳಿಗಳಲ್ಲಿ ಸರಕಾರದವರು ಸಾರ್ವಜನಿಕ ಉಪಯೋಗದ ಬಗ್ಗೆ ಭೂಮಿ ಕೊರೆದು ನೂರುವ 40 ಪಾಯಖಾನೆಗಳನ್ನು ಕಟ್ಟಿಸುತ್ತಾರೆ ಹೀಗೆ ಈ ಸಿಕ್ಕಿತ ಗ್ರಾಮಗಳಲ್ಲಿ ಬಹಳ ಕಾಲದಿಂದ ಇರುವ ದೋಷಗಳು ಈ ಯೋಜನೆಯಿಂದ ದೂರವಾಗುವುವಲ್ಲದೆ—ಅಲ್ಲಿಯ ಕಾರ್ಯವು ಹತ್ತಿರವಿರುವ ಇತರ ಇತರ ಹಳ್ಳಿಗಳಿಗೂ ಆದರ್ಶರೂಪವಾಗಿ ಫಲಿಸಬಹುದೆಂದು ಸರಕಾರದವರ ಅಭಿಪ್ರಾಯವಾಗಿದೆ. ಪತಿತ ವರ್ಗದವರು ವಾಸ್ತವಿಸಿಕೊಂಡಿರುವ ಪ್ರದೇಶಗಳಲ್ಲಿಯೂ ಸರಕಾರದವರು ಈ ವಿಷಯ ಗಮನ ಕೊಡುತ್ತಾರೆ 1985ನೇ ಇಸವಿ ಅಕ್ಟೋಬರ 1ರಿಂದ 1985ನೇ ದಶಂಬರ 31ರ ನಡುವೆ 101 ಸಾರ್ವಜನಿಕ ಪಾಯಖಾನೆಗಳನ್ನೂ ಈ ಯೋಜನೆಗನುಸಾರವಾಗಿ ಕಟ್ಟಿಸಿದ್ದರು ಈ ಯೋಜನೆಯು ಸಂಪೂರ್ಣವಾಗಲಿಕ್ಕೆ 2 65 ಲಕ್ಷ ರೂಪಾಯಿ ಖರ್ಚಾಗುವುದು ಹಿಂದೀ ಸರಕಾರದವರು ಮದ್ರಾಸು ಸರಕಾರಕ್ಕೆ ಗ್ರಾಮಾಭಿವೃದ್ಧಿಗಾಗಿ ಕೊಟ್ಟ ಹಣದಿಂದ ಈ ಖರ್ಚನ್ನು ನೋಡಿಕೊಳ್ಳುವುದಾಗಿರುತ್ತದೆ

ಪ್ರಚಾರ

ಸಾರ್ವಜನಿಕ ಆರೋಗ್ಯ ಕುರಿತಾದ ಸಂಗತಿಗಳೂ ಜನಸಮುದಾಯಕ್ಕೆ ಸಂಬಂಧಿಸುವ ಆರೋಗ್ಯ ವಿಜ್ಞಾನದ ಸಂಗತಿಗಳೂ ಎಲ್ಲರಿಗೂ ತಿಳಿಯುವಂತೆ ತೀಕ್ಷ್ಣ ಪ್ರಚಾರ ಕಾರ್ಯವನ್ನು ನಡೆಸುತ್ತಾರೆ ಇದಕ್ಕಾಗಿ ಆರೋಗ್ಯ ಸಪ್ತಾಹಗಳನ್ನು, ಪುಸ್ತಕ ಪ್ರಕಟಣೆಗಳನ್ನು, ಮಾಯಾಲಾಂದ್ರ ಭಾಷಣಗಳನ್ನು ಚಲಚ್ಚಿತ್ರ ಪ್ರದರ್ಶನಗಳನ್ನು, ಶಿಶುಪ್ರದರ್ಶನಗಳನ್ನು ಮಾಡುತ್ತಾರೆ ಮೋಟಾರು ಬಂಡಿಗಳು, ರೇಡಿಯೋ ಮುಂತಾದವುಗಳಿದ್ದು ಎಲ್ಲಾ ಕಡೆ ಸಂಚರಿಸಿ ಪ್ರಚಾರಮಾಡುವ ಏಕಾವಳಿ ಶಿಬಂಧಿಗಳನ್ನೂ ನಿಯಮಿಸಿರುತ್ತಾರೆ

ಶಿಶುಪ್ರಸೂತೆಯರ ಜಾಗ್ರತೆ

ಈ ಅಧಿಪತ್ಯದಲ್ಲಿ ಶಿಶುಪ್ರಸೂತೆಯರ ಕುರಿತು ವಿಶೇಷ ತರದ ಜಾಗ್ರತೆ ಮಾಡುತ್ತಾರೆ ಈ ಕೆಲಸಕ್ಕಾಗಿಯೇ ಸಾರ್ವಜನಿಕ ಆರೋಗ್ಯದ ಆಡಳಿತೆಯ ಸಹಾಯಕ ಸ್ತ್ರೀ ಉದ್ಯೋಗಸ್ಥರೊಬ್ಬರು (ಅಸಿಸ್ಟಾಂಟ ಡ್ಯಾರೆಕ್ಟರ್ಸ್) ಇರುವರು. ಇವರು ಅಲ್ಲಲ್ಲಿ ಶಿಶುಪ್ರಸೂತೆಯರ ಕ್ಷೇಮಸಾಧಕ ಕರ್ಮಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಸಹಾಯ ಮಾಡುತ್ತಾರೆ; ಎಲ್ಲಾ ಜಿಲ್ಲೆಗಳಲ್ಲಿ ಪ್ರಚಾರ ಕೆಲಸವನ್ನು ಮಾಡುತ್ತಾರೆ ಅನೇಕ ಸ್ಥಳೀಯ ಸಂಸ್ಥೆಗಳು ಶಿಶುಪ್ರಸೂತಾ ಕ್ಷೇಮಸಾಧಕ ಕಾರ್ಯಕೇಂದ್ರಗಳನ್ನು ಸ್ಥಾಪಿಸಿರುತ್ತಾರೆ.

1984ನೇ ವರ್ಷದಲ್ಲಿ ಈ ಅಧಿಪತ್ಯದ ಹಳ್ಳಿಗಳಲ್ಲಿ ಶಿಶುಕ್ಷೇಮದ 77 ಕಾರ್ಯಕೇಂದ್ರಗಳಲಿ ಕೆಲಸ ನಡೆಯುತ್ತಿತ್ತು ಗರ್ಭಿಣಿಯರಿಗೆ ಪ್ರಸವ ಕಾಲದಲ್ಲಿ ಯೋಗ್ಯ ಸಹಾಯವು ದೊರಕುವಂತೆ 770 ತರಬೇತಾದ ಸೂಲಗಿತ್ತಿಯರನ್ನು ಕೆಲಸಕ್ಕೆ ಇಟ್ಟುಕೊಂಡಿತ್ತು

ಮಲೆಜ್ವರ

ಮಲೆಜ್ವರದ ಹಾವಳಿಯನ್ನು ತಗ್ಗಿಸಲಿಕ್ಕೆ ಸರಕಾರದವರು ಕೈಕೊಂಡಿರುವ ಧೋರಣೆಯು ಎರಡು ತರದ್ದಾಗಿರುತ್ತದೆ

1 ಸಾಧ್ಯವಾದಷ್ಟು ಚಿಕಿತ್ಸೆ ಹೊಂದಲಿಕ್ಕೆ ಅನುಕೂಲತೆಗಳನ್ನು ಕಲ್ಪಿಸುವುದು

2 ಸ್ಥಳೀಯ ಸಂಸ್ಥೆಗಳು ಈ ಕುರಿತು ಏನಾದರೂ ಒಳ್ಳೇ ಕಾರ್ಯಕ್ರಮವನ್ನು ಕೈಕೊಂಡು ಅದರ ಖರ್ಚಿನಲ್ಲಿ ಮೂರರಲ್ಲಿ ಎರಡಂಶ ತಾಳಿಕೊಳ್ಳಲು ಸಿದ್ಧರಿದ್ದರೆ ಉಳಿದ ಒಂದಂಶವನ್ನು ತಾವು ಕೊಡುವುದು

ಮಲೆಜ್ವರವಿರುವ ಪ್ರತಿಯೊಂದು ಹಳ್ಳಿಯಲ್ಲಿಯೂ ಕೊಯಿನಾ ಎಂಬ ಜ್ವರದ ಮದ್ದನ್ನು ಧರ್ಮಾರ್ಥವಾಗಿ ಹಂಚಲಿಕ್ಕೆ ಸರಕಾರದವರು ಪ್ರತಿ ವರ್ಷ 45,000 ರೂಪಾಯಿ ಖರ್ಚುಮಾಡುತ್ತಾರೆ ಈ ಜಿಲ್ಲೆಯ 408 ಗ್ರಾಮಗಳಲ್ಲಿ ಈ ಕೊಯಿನಾ ಮದ್ದನ್ನು ಧರ್ಮಾರ್ಥವಾಗಿ ಹಂಚುತ್ತಾರೆ ವರ್ಷ ಒಂದಕ್ಕೆ 600 ರಾತ್ತ್ಲ ಕೊಯಿನಾ ಈ ಜಿಲ್ಲೆಯಲ್ಲಿ ಖರ್ಚಾಗುತ್ತದೆ ಹಳ್ಳಿಗಳಲ್ಲಿ ಈ ಕೊಯಿನಾ ಆದಷ್ಟು ಜನರಿಗೆ ಸುಲಭದಲ್ಲಿ ದೊರಕುವಂತೆ ಕಡಿಮೆ ಕ್ರಯಕ್ಕೆ ಅದನ್ನು ಮಾರುವುದೂ ಉಂಟು ಈ ಅಧಿಪತ್ಯದ ನಿವಾಸಿಗಳಲ್ಲಿ ಸುಮಾರು ಒಂದು ಮಿಲಿಯ ಜನರಿಗೆ ಈ ಕೊಯಿನಾ ಧರ್ಮಾರ್ಥವಾಗಿ ಹಂಚುವುದರ ಪ್ರಯೋಜನವು ಸಿಕ್ಕುತ್ತದೆನ್ನಬಹುದು ಈಗಿನ ಯೋಜನೆಯ ಪ್ರಯೋಜನವನ್ನು ಹಿಂದೀ ಮಲೆಜ್ವರ ವೈದ್ಯಾಧಿಕಾರಿಯು ಡ್ಯಾರೆಕ್ಟರರು ಒಪ್ಪಿಕೊಂಡಿದಾರೆ ಜನರಲ್ಲಿ ಶಿಕ್ಷಣ ಪ್ರಚಾರ ಹೆಚ್ಚಿದಂತೆ ಕಾಲಕ್ರಮದಲ್ಲಿ ಈ ಯೋಜನೆಯು ಇನ್ನೂ ಜನಪ್ರಿಯವಾಗುವುದು ನಿಶ್ಚಯವೆಂದು ತೋರುತ್ತದೆ

ಗ್ರಾಮಾಭಿವೃದ್ಧಿಗೆ ಹಿಂದೀ ಸರಕಾರದಿಂದ ಸಿಕ್ಕಿದ ಗ್ರ್ಯಾಂಟಿನಿಂದ 50,000 ರೂಪಾಯಿಗಳನ್ನು ಮಲೆಜ್ವರದಿಂದ ಹೆಚ್ಚು ಪೀಡಿತವಾದ ಎರಡು ಘಾಟಿ ಸ್ಥಳಗಳಲ್ಲಿಯೂ ಮಲೆಜ್ವರವಿರುವ ಕರಾವಳಿಯ ಅನೇಕ ಗ್ರಾಮಗಳಲ್ಲಿಯೂ ಮಲೆಜ್ವರ ನಿವಾರಣೆಯ ಕಾರ್ಯಕ್ರಮಗಳನ್ನೆಲ್ಲಾ ಸದಾಕಾಲ ನಡೆಸುವ ಬಗ್ಗೆ ಮದ್ರಾಸು ಸರಕಾರದವರು ತೆಗೆದಿಟ್ಟಿರುತ್ತಾರೆ

ಪೂನಮಲ್ಲಿಯ ವಿಜಾತೀಯವಾದ ಗ್ರಾಮಾಭಿವೃದ್ಧಿ ಯೋಜನೆ

ಹಳ್ಳಿಗಳಲ್ಲಿ ಸಾರ್ವಜನಿಕ ಆರೋಗ್ಯ ವಿಷಯಗಳು ಸುವ್ಯವಸ್ಥೆಗೆ ಬರಬೇಕಾದರೆ ಇಡೀ ಅಧಿಪತ್ಯದಲ್ಲಿ ಸಾರ್ವಜನಿಕ ಆರೋಗ್ಯ ಕಾರ್ಯ ಕರ್ಮಚಾರಿಗಳೆಲ್ಲರೂ ಸುಸೂತ್ರವಾಗಿ ಒಕ್ಕಟ್ಟಿನಿಂದ ಕಾರ್ಯಗಳನ್ನು ನಡೆಸುವುದು ಅವಶ್ಯವೆಂದು ಈಗ ಸರಕಾರದವರ ತಿಳುವಳಿಕೆಗೆ ಬಂದಿರುತ್ತದೆ ಆದ್ದರಿಂದ ಪರೀಕ್ಷಾರ್ಥವಾಗಿ, ಪೂನಾಮಲ್ಲಿಯೇ ಮುಖ್ಯ ಕೇಂದ್ರಸ್ಥಾನವಾಗಿರುವ, ಚಿಂಗಲ್ಪಟ್ಟು ಜಿಲ್ಲೆಯ ಶ್ರೀ ಪೆರಂಬುದೂರು ತಾಲೂಕಿನ 25 ಹಳ್ಳಿಗಳು ಕೂಡಿರುವ ಒಂದು ವಿಸ್ತೀರ್ಣದಲ್ಲಿ ಆರೋಗ್ಯಶಾಖೆಯವರು ಆರೋಗ್ಯ ವರ್ಧನ ಕಾರ್ಯವನ್ನು ತೀಕ್ಷ್ಣಗತಿಯಿಂದ ನಡೆಸುವ ಯೋಜನೆಯೊಂದನ್ನು ಪ್ರಾರಂಭಿಸಿರುತ್ತಾರೆ. ಆರೋಗ್ಯದ ಕುರಿತು ಒಳ್ಳೇ ಸುವ್ಯವಸ್ಥಿತ ಕಾರ್ಯಕ್ರಮಗಳನ್ನು ನಡೆಸಿ ಹಳ್ಳಿಯ ಜನರ ಆರೋಗ್ಯ, ಕ್ಷೇಮಗಳನ್ನು ಹೇಗೆ ಉತ್ತಮ ಸ್ಥಿತಿಗೆ ತರಬಹುದೆಂದು ಪ್ರದರ್ಶಿಸುವುದಕ್ಕಾಗಿಯೂ ಜನತೆಯಲ್ಲಿ ಆ ಮೂಲಕ ಆರೋಗ್ಯ ವಿಚಾರಗಳ ಕುರಿತು ಜಾಗ್ರತೆಯನ್ನು ಹುಟ್ಟಿಸಲಿಕ್ಕಾಗಿಯೂ ಈ ಯೋಜನೆಯನ್ನು ಪ್ರಾರಂಭಿಸಿದ್ದಾಗಿರುತ್ತದೆ

ಈ ಯೋಜನೆಯನ್ನು ಉತ್ತಮ ತರಗತಿಯ ಆರೋಗ್ಯ ಅಧಿಕಾರಿಗಳೊಬ್ಬರ ಕೈಗೆ ಸಂಪೂರ್ಣ ಬಿಟ್ಟುಕೊಟ್ಟಿರುತ್ತಾರೆ ಮೇಲೆ ಹೇಳಿದ ವಿಸ್ತೀರ್ಣವನ್ನೆಲ್ಲಾ ನಾಲ್ಕು ಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ಭಾಗದಲ್ಲಿ ಒಟ್ಟಾರೆ 10,000 ಜನಸಂಖ್ಯೆ ಇರುವ ಆರೇಳು ಗ್ರಾಮಗಳನ್ನು ಸೇರಿಸಿರುತ್ತಾರೆ, ಒಂದೊಂದು ಭಾಗದಲ್ಲಿ ಆರೋಗ್ಯ ಮೇಲ್ವಿಚಾರಕರೊಬ್ಬರೂ ಒಬ್ಬ ಆರೋಗ್ಯ ಸಂದರ್ಶನಾಧಿಕಾರಿಯೂ ಇಬ್ಬರು ಸೂಲಗಿತ್ತಿಯರೂ ಇಬ್ಬರು ಸ್ತ್ರೀ ಪರಿಚಾರಕರೂ ಇರುವರು ಈ ಯೋಜನೆಯ ಖರ್ಚನ್ನೆಲ್ಲಾ "ರೋಕ್‌ಫೆಲ್ಲರ್ ಫೌಂಡೇಶನ್" ಸಂಸ್ಥೆಯವರೂ ಸರಕಾರದವರೂ ಕೂಡಿ ಸಂಪೂರ್ಣ ತಾಳಿಕೊಳ್ಳುವರು ಸರಕಾರದ ಪಾಲಿಗೆ 25,000 ರೂಪಾಯಿ ಖರ್ಚು ಬೀಳುತ್ತದೆ ಸರಕಾರದವರು ಈ ಖರ್ಚನ್ನು ಹಿಂದೀ ಸರಕಾರದವರು ಗ್ರಾಮಾಭಿವೃದ್ಧಿಗಾಗಿ ಅವರಿಗೆ ಕೊಟ್ಟ ಗ್ರ್ಯಾಂಟಿನಿಂದ ಕೊಡುತ್ತಾರೆ

ಕುಷ್ಠರೋಗ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1988ನೇ ವರ್ಷದಲ್ಲಿ ಜಿಲ್ಲಾ ಕುಷ್ಠರೋಗ ಸಮಿತಿಯೊಂದನ್ನು ಸ್ಥಾಪಿಸಿರುವರು ಅದಕ್ಕೆ ಜಿಲ್ಲಾ ಆರೋಗ್ಯಅಧಿಕಾರಿಯರೇ ಕಾರ್ಯದರ್ಶಿಗಳು ಈ ಸಮಿತಿಯವರು ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ 11 ಕ್ಲಿನಿಕ್ ಎಂಬ ಚಿಕಿತ್ಸಾಸ್ಪತ್ರೆಗಳನ್ನಿಟ್ಟಿರುವರು ಈ ಚಿಕಿತ್ಸಾಸ್ಪತ್ರೆಗಳಲ್ಲಿ 629 ರೋಗಿಗಳು ಈಗ ಚಿಕಿತ್ಸೆಯನ್ನು ಹೊಂದುತ್ತಿದ್ದಾರೆ

ಕುಷ್ಠರೋಗ ಮುಖ್ಯಾಧಿಕಾರಿಗಳೂ ಪ್ರಾಂತಿಕ ಅಧಿಕಾರಿಗಳೂ ಆಗಿಂದಾಗ್ಗೆ ಈ ಜಿಲ್ಲೆಗೆ ಬಂದು ಬೇಕಾದ ಅನುಭವ ಸೂಚನೆಗಳನ್ನು ಕೊಡುತ್ತಾರೆ

ಹೊಸ ವರ್ಷದ ರಿಯಾಯಿತಿ

ರಾಸ್ಕೋಪ್ ಲಿವರ್ ರೀಸ್ಟ್ ವಾಚುಗಳು

(೫ ವರ್ಷಗಳ ಅಖಂಡ ಗ್ಯಾರಂಟಿ)



ರಜತ (ಬೆಳ್ಳಿ) ವರ್ಣದ ಕರಡಿಗೆ ರಾಸ್ಕೋ ಚಲನಾಕ್ರಮದ ಅತ್ಯಾಧುನಿಕ ಮಾದರಿಯ ಆಕೃತಿ ಫಟ್ಟಿಮುಟ್ಟಾದ ಯಂತ್ರ ಸಾಮಗ್ರಿಗಳಿಂದ ಕೂಡಿದುದರಿಂದ ತಪ್ಪಿಲ್ಲದೆ ಸಮಯವನ್ನು ಕೊಡುತ್ತದೆ ಹೊಸ ವರ್ಷದ ಮಾರಾಟಕ್ಕಾಗಿ ಅಗಾಧ ರಿಯಾಯತಿ ದರಗಳು.

ಉರುಟಾದ ನಿಕ್ಕಲ್ ಕೇಸ್ ಇದ್ದುದಕ್ಕೆ ರೂ 3-6-0

ಉರುಟಾದ ಬಂಗಾರದವರ್ಣದ ಕೇಸ್ ಇದ್ದುದಕ್ಕೆ ರೂ 4-10-0

ಚೌಕ ಮತ್ತು ಆಯತ ಆಕಾರವುಗಳಿಗೆ

ಕ್ರೋಮಿಯಂ ಕೇಸ್ ಇದ್ದುದಕ್ಕೆ ರೂ 5-10-0

ಬಂಗಾರದಂತಹಾ ಕೇಸ್ ಇದ್ದುದಕ್ಕೆ ರೂ 6-10-0

ಹತ್ತು ವರ್ಷದ ಗ್ಯಾರಂಟಿ

ರೋಲ್ಡ್‌ಗೋಲ್ಡು ಕೇಸ್ ಇದ್ದುದಕ್ಕೆ ರೂ 11-8-0

9 ಕೆರೆಟ್ ಬಂಗಾರ ಕೇಸ್ ಇದುದಕ್ಕೆ ರೂ. 22-8 0

3 ವಾಚುಗಳನ್ನು ಕರಿಸುವವರಿಗೆ ಟಪ್ಪಾಲು ಖರ್ಚು ಮುಫತ್ತಾಗಿ ಬಿಡಲಾಗುತ್ತದೆ.

ವಾಚುಗಳು ಚೆನ್ನಾಗಿ ತೋರದಿದ್ದಲ್ಲಿ, ಹಣ ವಾಪಾಸು ಮಾಡುತ್ತೇವೆ

ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲೇ ಬರೆಯಿರಿ:—

Modern Trading Co.
119 Surendranath Banerjee Road,
CALCUTTA.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P 4/1937

ಅರ್ಜಿದಾರರು

1 ಸಾಂತಪ್ಪ ಮೆಸ್ತ 2 ಮ್ಯಾನರ ವೆಂಕಟೇಶ 3 ಮ್ಯಾನರ ವಾಸುದೇವ 4 ಮ್ಯಾನರ ಕಮಲಾಕ್ಷ
ತೊನ್ಸೆ ಬುದ್ದುಮೆಸ್ತನ ಮಕ್ಕಳು ಮ್ಯಾನರ 2-3-4ನೇ ಅರ್ಜಿದಾರರ ರಕ್ಷಕಳು ತಾಯಿ 5ನೇ ಅರ್ಜಿದಾರಳು ರುಕ್ಮಿಣಿ

5 ರುಕ್ಮಿಣಿ ಸದ್ರಿ ಬುದ್ದುಮೆಸ್ತನ ವಿಧವೆ ಕುಂದಾಪುರ ಕಸಬಾ ಗ್ರಾಮದಲ್ಲಿರುವವರು ರೈತರು. ಎದ್ರಿರು ಇಲ್ಲ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ ಕುಂದಾಪುರ ಕಸಬಾ ಗ್ರಾಮದಲ್ಲಿರುತ್ತಿದ್ದ 1-2-3-4ನೇ ಅರ್ಜಿದಾರರ ತಂದೆ ವ 5ನೇ ಅರ್ಜಿದಾರಳ ಗಂಡ ಹಾಲಿ ಮೃತ ತೊನ್ಸೆ ಬುದ್ದುಮೆಸ್ತನು ಬೊಂಬೈಲೈಫ್ ಎಸ್ಯೂರೆನ್ಸ ಕಂಪೆನಿಯ ಪೋಂಡವ ಪೊಲಿಸಿ ನಂ. 1862ನೇಗೆ ಮಾಡಿದ ಲೈಫ್ ಇನ್ಸೂರೆನ್ಸಿನ ಬಾಬ್ತು ಹಣ ವಸೂಲು ಮಾಡುವರೆ ಸದ್ರಿ ಬುದ್ದುಮೆಸ್ತನು ಮೃತಪಟ್ಟದ್ದರಿಂದ ತಾವು ಹಕ್ಕುದಾರರೆಂತಲೂ ಸದ್ರಿ ಹಣವನ್ನು ಪಡಕೊಳ್ಳುವರೆ ಅರ್ಜಿದಾರರ ಕುಟುಂಬದ ಕಡೆಯಿಂದ ಆಡಳಿತೆದಾರನಾದ 1ನೇ ಅರ್ಜಿದಾರನು ಹಕ್ಕುದಾರನಾದ್ದರಿಂದ 1ನೇ ಅರ್ಜಿದಾರನ ಹೆಸರಲ್ಲಿ ಸದ್ರಿ ಹಣ ವಸೂಲು ಕುರಿತು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ನಂಬ್ರಕ್ಕೆ ಅರ್ಜಿ ದಾಖಲು ಮಾಡಿದ್ದಾರೆ ಸದ್ರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 27-2-1937ಕ್ಕೆ ತನಿಖೆಗೆ ಇಡೋಣಾಗಿರುತ್ತದೆ ಆ ಕುರಿತು ಯಾರದಾದರೂ ಆಕ್ಷೇಪಣೆ ಇದ್ದರೆ ಮೇಲ್ಕಂಡ ಕೋರ್ಟಿನಲ್ಲಿ ಸದಿ ತಾರೀಕಿನ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಹಾಜರಾಗಿ ಜಾಹೀರುಮಾಡತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿರುತ್ತದೆ

ಕುಂದಾಪುರ,) B Narayana
[illegible]) [illegible]

ನೋಟೀಸು.

ದಕ್ಷಿಣ ಕನ್ನಡ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

R. I P 181 1936

O S 100 31

ಸೀತಾರಾಮ ಹೆಬ್ಬಾರ ಕೂಡಾ—ಅರ್ಜಿದಾರರು
ಮತ್ತು
ವೆಂಕಟ್ರಮಣ ಹೆಬ್ಬಾರ ಕೂಡಾ—ರೆಸ್ಪೋಂಡೆಂಟರು,

2ನೇ ರೆಸ್ಪೋಂಡೆಂಟ ಕೃಷ್ಣ, ಮೈನರ್, ಇವನ ಗಾರ್ಡಿಯನ್ ಕುದ್ಕೋಳಿ ಕೃಷ್ಣ ಕೆದಿಲ್ಲಾಯ, ರಾಮಣ್ಣ ಕೆದಿಲ್ಲಾಯರ ಮಗ, ಕೆಮ್ಮಿಂಜೆ ಗ್ರಾಮ, ಪುತ್ತೂರು ತಾಲೂಕು

ಮೇಲಿನ ಅಮಲ್ದಾರಿಯಲ್ಲಿ 2ನೇ ರೆಸ್ಪೋಂಡೆಂಟನ ಬಾಬ್ತು ಸ್ಥಿರಾಸ್ತಿಯನ್ನು ಏಲಂಪಡಿಸುವ ಬಗ್ಗೆ ಅರ್ಜಿದಾರರು ಅರ್ಜಿ ಕೊಟ್ಟಿರುತ್ತಾರೆ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ 18—2—37ಕ್ಕೆ ಅರ್ಜಿಯನ್ನು ತನಿಖೆಗೆ ಇಟ್ಟಿರುತ್ತದೆ ಆ ಕುರಿತು 2ನೇ ರೆಸ್ಪೋಂಡೆಂಟಿಗೆ ಏನಾದರೂ ಆಕ್ಷೇಪವಿದ್ದರೆ ಮೇಲಿನ ತಾರಿಕಿಗೆ 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವದು

(Bu)
S Venkat Rao,
Vakil for Petitioners.

"ಬ್ರೇಕ್ ಪಿಲ್ಸ್"

Invented by a Himalayan Sage.

ಸ್ತ್ರೀಪುರುಷರಿಗೆ ಆನಂದವನ್ನುಂಟು ಮಾಡುವುದು ಈ ಮಾತ್ರೆಗಳೆ.

ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು.

ಇದರಲ್ಲಿ ರಸವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು.

ಗುಣವಿಲ್ಲದಿದ್ದಲ್ಲಿ ಹಣ ವಾಪಾಸು

೬೦ ಮಾತ್ರೆಗಳು ರೂ ೫-೦-೦ ೩೦ ಮಾತ್ರೆಗಳು ರೂ ೩-೦-೦

(ಕಾಗದ ಪತ್ರಗಳು ಇಂಗ್ಲಿಷಿನಲ್ಲಿಯೇ)

ಡಾ| ಎ ಎಸ್ ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಗುತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಸಿಹಿಯಾಗಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಷಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು ಮಂಗಳೂರು

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಷಾ ಕಂಪೆನಿಯಲ್ಲಿ ದೊರೆಯುವುದು

ESTD· 1906·

The Canara Banking Corporation Udipi Ltd.

INCORPORATED IN BRITISH INDIA

NOTICE TO SHAREHOLDERS.

The Ordinary Annual General Meeting of the share-holders of the Corporation will be held at its Registered Office at Udipi on SUNDAY the 14th February 1937 at 10 A M to transact the following business:—

1 To receive and consider the Balance Sheet for the year ended 31-12—1936 with the Auditors' Certificate, the Profit & Loss Statement and the Directors' Report.

2 fixing the rate of dividend and bonus to be paid to the Share-holders

3 Appointment of new Directors in the place of:—

Messrs. 1 K. Nagesh Pai,
2 B. Shankraya Shetty,
3. Dr. U Padmanabha Mallya,
4. M. Govinda Pai,
who retire under Art: 57 & 60.
(All are eligible for re-election under Art: 61)

4. The appointment of an Auditor or Auditors for the current year and fixing the amount of his or their remuneration (The last year's Auditors are eligible for re-election and are willing to accept the office).

It is requested that you will be good enough to attend the meeting. If it should be inconvenient for you to attend the meeting in person you may appoint a Share-holder of this Corporation as your proxy.

The proxy should be stamped with 2 one anna revenue stamps bear your signature and should reach the Head-office by 10 A M on 11—2—1937

N. B. The transfer Books of the Corporation will remain closed from 28-1-1937 to 21-2-1937 both days inclusive.

(By order)

Office of the Corporation, UDIPI, 17th January 1937

M Srinivas Prabhu,
Manager

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣೆ, ಆಕಸ್ಮಿತ ಅನಾಹುತ, ದುಸ್ಸಹವಾದ ಸಿಟ್ಟಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

೩೦ ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ, ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪರ್ಮಾಸನ್ ಮಾತ್ರೆಗಳನ್ನು ಉಪಯೋಗಿಸಿರಿ

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ. 4—0—0. ವಿ. ಪಿ ಚಾರ್ಜು ಬೇರೆ.

ರೋಗಿಯು ಈ ಕುರಿತು ವಿವರಗಳನ್ನು ವಿಶದವಾಗಿ ಬರೆಯಿರಿ —

ಹೆಸರು, ವಿಳಾಸ, ಜಾತಿ, ಸ್ತ್ರೀಯಾ ಪುರುಷ, ಪ್ರಾಯ, ದೇಹದ ಭಾರ, ವಿವಾಹಿತನೋ ಅಲ್ಲವೋ ರೋಗದ ಲಕ್ಷಣ ನಿದ್ರೆ, ಆಹಾರ, ಮಲಶೋಧನೆ ಅಲ್ಲದೆ ಉಬ್ಬಸ ಜ್ವರ, ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು

ಪರ್ಮಾಸನ್ ಪ್ರೊಡಕ್ಸ್, (ಇಂಡಿಯಾ)

ಬ್ರೆಂಚ್	ಪಿ. ವಿ ಕಾಮತ್,
ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್,	ಹಿಸ್ಟೀರಿಯಾ ಎಂಡ್ ಇನ್ಸನಿಟಿ ಎಕ್ಸ್‌ಪರ್ಟ್
386 ಲೇಮಿಂಗ್ಟನ್ ರೋಡ್ ಮುಂಬಯಿ	ಮಾರ್ಕೆಟ್ ರೋಡ್ ಉಡುಪಿ

ಮುದ್ದಾದ ಮುದ್ರಣವನ್ನು ಆಶಿಸುವಿರೇ? ಹಾಗಾದರೆ, —

ಶಾರದಾ ಛಾಪಖಾನೆ, ಮಂಗಳೂರು

ಇಲ್ಲಿಗೆ ಬರೆಯಿರಿ, ಅಥವಾ ಬನ್ನಿರಿ.

ಗುಣಕಾರಿಯಾಗದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

— ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿರಿಯ, ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯದಿರುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾ|| ಬಿ. ಎ ವೈದ್ಯ ಎಲ್. ಸಿ. ಪಿ ಎಸ್ ಕೊಡುವಾರೂ ಹಿಡು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪–೦–೦, ವಿ. ಪಿ. ಅಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ 7—0—0

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ **ಬಾಟ್ಲಿ 1ಕ್ಕೆ ರೂ 1—8—0**

ಎಂ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ ಚಿಕ್ಕಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್ ಶ್ರೀರಾಮ ಪೇಟೆ ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಈಗಿನ ದಿವಸಗಳಲ್ಲಿ ಬೇಕಾದದ್ದು ಉತ್ತಮವಾದದ್ದು. ಅಗ್ಗವಾದದ್ದಲ್ಲ!

ಪರಿಮಳದಲ್ಲಿಯೂ ರುಚಿಯಲ್ಲಿಯೂ ಪರಿಪೂರ್ಣವಾದದ್ದು.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಇದ್ದು ಅಂದವಾದ ಪೊಟ್ಟಣಗಳಲ್ಲಿ ಸಿಗುತ್ತದೆ

ಶ್ರೇಷ್ಠಗುಣಗಳು ನಿಮ್ಮನ್ನು ಕಣ್ಣನ್ ದೇವನ್ ಚಹಾವನ್ನೇ ಕೊಂಡುಕೊಳ್ಳುವಂತೆ ಒತ್ತಾಯ ಮಾಡುತ್ತದೆ

ಕಣ್ಣನ್ ದೇವನ್ ಚಹಾ ಪೊಟ್ಟಣಗಳ ಬರುವಿಕೆಯನ್ನು ನಿರೀಕ್ಷಿಸಿರಿ.

Sole Agents: **The Kerala Tea Syndicate,**

PONANI—(S. Malabar.)

Edited Printed & Published By A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ಬಿಡಿ ಸಂಚಿಕೆಗೆ ಒಂದಾಣೆ. ESTABLISHED 1906

SWADESHABHIMANI

ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥
ದೊರೆಯಲನುಪಮರತ್ನಗಳ ಸಾಗರವ ಮಥಿಸಲು ಸುರರಿಗದರಿಂ ಹರುಷವುಂಟಾಗಿ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜದರೆ ಸುಧೆಯನು ಪಡೆತು ಕ್ಷುದ್ರ ತೆರದಿ ಕಳೆತರೆ ತೆರಳಬಲ್ಲರೆ ತೀರಿದ ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೩೧ | ಮಂಗಳೂರು ತಾ. ೧೨ನೇ ಫೆಬ್ರವರಿ ೧೯೩೭ | (12-2-'37) | ಸಂಚಿಕೆ ೬

ಹಿಂದೀ ಸ್ವಾತಂತ್ರ್ಯ, ದಾರಿದ್ರ್ಯ ನಿವಾರಣೆ ಎಂಬೀ ತತ್ವಗಳನ್ನು ಎಣಿಸಿಯೆ ಹೊರತು ಉಮೆ'ದುವಾರರನ್ನು ಗಣ
ನೆಗೆ ತಾರದೆ ಕೊಂಗ್ರೆಸಿಗೆ ಮತಕೊಡಿರಿ. ಈ ತತ್ವಗಳು ಸರ್ವರಿಗೂ ಸಮಾನವಾಗಿಯೇ ಇವೆ. ಜಾತಿ
ಮತ ಇತ್ಯಾದಿಗಳು ಭಿನ್ನವಾಗಿರಬಹುದು, ಆದರೆ ಸಾಂಪತ್ತಿಕ ಮತ್ತು ರಾಜಕೀಯ ಪ್ರಶ್ನೆಗಳು
ಸರ್ವರಿಗೂ ಒಂದೇ ಸಮಾನವಾಗಿವೆ. ಇಲ್ಲಿನ ಚುನಾವಣೆಯಲ್ಲಿ ಶ್ರೀ ಬಾಳಿಗರು,
ಶ್ರೀ ಕಾರಂತರು, ಶ್ರೀ ಶೆಟ್ಟರು, ಶ್ರೀ ವಾರ್ಕಿಯರು, ಶ್ರೀ ಈಶ್ವರನವರು
ಕೊಂಗ್ರೆಸಿನ ಪಕ್ಷವಾಗಿ ನಿಂತಿರುವರು. ಇವರು ಕೊಂಗ್ರೆಸಿನಲ್ಲಿ ಯೋಧ್ಧ
ರಾಗಿ ಬಂದು, ನಮ್ಮ ದೇಶವು ಯಾವ ಸಂಸ್ಥೆಯಲ್ಲಿ ಭರವಸೆ
ಯನ್ನಿಟ್ಟಿದೆಯೋ ಅದರ ಸಲುವಾಗಿ ಕೆಲಸ ಮಾಡುವಂತೆ
ಅವರನ್ನು ಚುನಾಯಿಸಿರಿ. — ಪಂಡಿತ ಶ್ರೀ ಜವಾಹರಲಾಲ ನೆಹರು

[೧೧ನೆ ಪುಟ ನೋಡಿ]

ILLUSTRATED WE

ಕಾಂಗ್ರೆಸ್ಸಿನ ಉಮೇದ್ವಾರರಿಗೆ ನಾವು ಯಾಕೆ ವೋಟು ಕೊಡಬೇಕು?

[illegible] ಚುನಾವಣೆಯು [illegible] ನಡೆಯುತ್ತಿ[illegible] ಉಮೇದ್ವಾರರು ಎಲ್ಲೆಲ್ಲಿಯೂ [illegible] ರುವರು. ಮತವನ್ನು ತಮಗೆ ಕೊಡಬೇಕಾಗಿ ಉಭಯಪಕ್ಷದವರು ಕೇಳುತ್ತಿರುವರು.

ಕೊಂಗ್ರೆಸು, ೧೮೮೫ರಲ್ಲಿ ಸ್ಥಾಪಿಸಲ್ಪಟ್ಟ ಸಾರ್ವಜನಿಕ ಸಂಸ್ಥೆಯಾಗಿ ಇಡೀ ಇಂಡಿಯಾದಲ್ಲಿ ದೇಶೋದ್ಧಾರದ ಕೆಲಸವನ್ನು ಕೈಕೊಂಡಿರುವದು. ಎಲ್ಲೆಲ್ಲಿಯೂ ಜನತೆಯಲ್ಲಿ ದೇಶಭಕ್ತಿಯು ಉಂಟುಮಾಡುವ ಯಾವತ್ತೂ ಕೆಲಸವನ್ನೂ ಅದು ಮುಂದರಿಸಿಯದೆ. ಇತ್ತೀಚೆಗೆ ಗ್ರಾಮ ಉದ್ಧರಣೆಯ ಕೆಲಸವೂ ಪ್ರಾಮುಖ್ಯವೆಂತಲೂ, ಅದನ್ನು ಕೈಕೊಳ್ಳುವುದು ಅತೀ ಅಗತ್ಯವೆಂಬುದಾಗಿ ಅಭಿಪ್ರಾಯಪಟ್ಟು ಅದನ್ನು ಕೈಕೊಂಡಿರುತ್ತದೆ. ಈ ಕಾರಣದಿಂದ ಕೊಂಗ್ರೆಸು ಕಳೆದ ಅಧಿವೇಶನವನ್ನು ಫೈಜಾಪೂರ ಎಂಬ ಗ್ರಾಮದಲ್ಲಿ ಕೊಂಗ್ರೆಸ್ಸಿನವರು ಮಾಡಿದ್ದಾರೆ. ಈ ಗ್ರಾಮೋದ್ಧರಣೆಯ ಕೆಲಸಕ್ಕೆ ದ್ರವ್ಯ ಸಹಾಯವೂ ಅತೀ ಅಗತ್ಯ. ತೀರ್ವೆಯು ಹೆಚ್ಚಾಗಿ ಗ್ರಾಮಗಳಲ್ಲಿಯೇ ವಸೂಲು ಆಗುತ್ತದೆ. ಹೀಗೆ ವಸೂಲಾದ ತೀರ್ವೆಯನ್ನು ಗ್ರಾಮೋದ್ಧರಣೆಯ ಕೆಲಸಕ್ಕೆ ಹಾಕುವುದು ಸರಿಯಲ್ಲವೇ? ಈ ಕೆಲಸವನ್ನು ಮುಂದರಿಸಬೇಕಾದರೆ ಸರಕಾರವು ಜನತೆಯ ಸ್ವಾಧೀನಯಿರಬೇಕು. ಕೊಂಗ್ರೆಸು ಜನತೆಯ ಸಂಸ್ಥೆಯಾಗಿರುತ್ತದೆ. ಈ ಸರಕಾರವನ್ನು ಈಗ ಇರುವ ಪ್ರಾತಿನಿಧ್ಯ ಸಂಸ್ಥೆಯು ತಕ್ಕವ ಮೇರೆಗೆ ತನ್ನ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಅದು ಪ್ರಯತ್ನಿಸುತ್ತದೆ.

ಸರಕಾರವನ್ನು ಹೊಸ ಸುಧಾರಣೆಯ ಮೇರೆಗೆ ಕೈಕೊಳ್ಳಬೇಕಾದರೆ ನಮ್ಮ ನ್ಯಾಯ ವಿಧಾಯಕ ಸಭೆಯಲ್ಲಿ ನಮ್ಮ ಕೊಂಗ್ರೆಸ್ಸು ಉಮೇದ್ವಾರರು ಬಹುಮತದಲ್ಲಿ ಇರಬೇಕು ಅಲ್ಲಿ ಅವರು ಬಹುಮತದಿಂದ ಇದ್ದರೆ ಸರಕಾರವು ಈ ಗ್ರಾಮೋದ್ಧಾರದ ವ ಇತರ ದೇಶೋದ್ಧಾರದ ಕೆಲಸಗಳು ಮುಂದರಿಯುವವು ಈ ಕಾರಣದಿಂದ ಕಾಂಗ್ರೆಸ್ಸು ಉಮೇದ್ವಾರರನ್ನು ಕೌನ್ಸಿಲುಗಳಿಗೆ ಹೋಗುವಂತೆ ಮಾಡುವದು ಪ್ರತಿಯೊಬ್ಬ ವ್ಯಕ್ತಿಯ ಕೆಲಸವಾಗಿರುತ್ತದೆ ಈ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯು ಬರುವ ಚುನಾವಣೆಯಲ್ಲಿ ತನ್ನ ಓಟನ್ನು ಕೊಂಗ್ರೆಸ್ಸಿಗೆ ಕೊಡಬೇಕು. ಪ್ರತಿಯೊಬ್ಬನ ಮತವು ಸಹಾ ಈ ಚುನಾವಣೆಯಲ್ಲಿ ಉಪಯೋಗವುಳ್ಳದ್ದು. ವ್ಯಕ್ತಿಗಳ ಮತಗಳು ಸಮುದಾಯಕವಾಗಿ ಪ್ರಯೋಜನವುಳ್ಳವುಗಳು ಕೊಂಗ್ರೆಸ್ ಈ ಮೊದಲು ಕೌನ್ಸಿಲುಗಳನ್ನು ಪ್ರವೇಶಿಸಲಿಲ್ಲ ಈಗ ೧೬ ವರ್ಷಗಳಿಂದ ಜಸ್ಟಿಸ್ ಪಾರ್ಟಿಯವರು ನಮ್ಮ ಸರಕಾರವನ್ನು ನಡಿಸಿ ನಮ್ಮ ದೇಶೋದ್ಧಾರದ ಕೆಲಸದಲ್ಲಿ ನಿಜವಾದ, ತಕ್ಕದಾದ ಚೈತನ್ಯವನ್ನು ತೋರಿಸಲಿಲ್ಲ. ಅಳರಸರ ಪ್ರೀತಿಗೆ ಒಳಗಾಗಿ ರಾಜಕೀಯ ಚಳವಳದಲ್ಲಿ ಅವರು ಸರಕಾರಕ್ಕೆ ಕೊಟ್ಟ ಸಹಾಯವು ನಿಂದ್ಯಾಸ್ಪದವಾಗಿರುತ್ತವೆ. ಕೊಂಗ್ರೆಸ್ ದೇಶೋದ್ಧಾರದ ಕೆಲಸವನ್ನು ಮುಂದುವರಿಸುವ ಬಗ್ಗೆ ಹೊಸ ಪ್ರಯೋಗಗಳನ್ನು ಹುಡುಕುತ್ತದೆ. ಕೊಂಗ್ರೆಸ್ಸಿನ ಮುಖಂಡರು ಉಜ್ವಲ ದೇಶಾಭಿಮಾನಿಗಳು, ರಾಜತಂತ್ರದಲ್ಲಿ ನಿಪುಣರು. ಈ ಪ್ರಯೋಜನವಿಲ್ಲದ ಸಂಸ್ಥೆಗಳಲ್ಲಿ ಆ ರಾಜಕೀಯ ಪ್ರಯೋಗವನ್ನು ಅವರು ಬಿಟ್ಟುಬಿಡುವರು. ಈಗಿನ ರಾಜಕೀಯ [illegible]ತ್ವವು ಕೌನ್ಸಿಲಿನಲ್ಲಿ ಪ್ರವೇಶವಾಗುವದು, [illegible]ಂಗ್ರೆಸ್ಸು ಈ ವರೆಗೆ ದೇಶದ ಸೇವೆಯನ್ನು [illegible]ಕ್ರಮ-ರೀತಿಯಲ್ಲಿ ಮಾಡಿಯದೆ. ಇನ್ನು [illegible]ನ್ನು ಮಾಡುವುದಕ್ಕೆ ದೀಕ್ಷೆಯನ್ನು ತಕೊ[illegible] ಕೌನ್ಸಿಲಿನಲ್ಲಿ ಪ್ರವೇಶವಾದ ನಂತರ [illegible]ಯೋಗ್ಯವೆಂತ ಕಂಡರೆ ಕೊಂಗ್ರೆಸ್ಸಿ[illegible]ಮುಖ್ಯ ಪದವನ್ನು ಹೊಂದುವರು. ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರು ಅಲ್ಲಿ ಮುಖ್ಯ ಮಂತ್ರಿಯಾಗದೆ ನಿಲ್ಲಲಾರರು. ಇವರು ಮಹಾತ್ಮಾ ಗಾಂಧಿಯವರ ಸ್ನೇಹಿತರು, ಪಟ್ಟ ಶಿಷ್ಯರು, ಮಹಾ ತ್ಯಾಗಿಗಳು. ಇವರು ಮುಖಂಡರಾಗಿ ಕೌನ್ಸಿಲಿನಲ್ಲಿದ್ದರೆ ಬರುವ ೩ ವರ್ಷಗಳಲ್ಲಿ ನಮ್ಮ ಅಧಿಪತ್ಯದ ಅಭಿವೃದ್ಧಿಯ ಮಿತಿಯನ್ನು ಹೇಳಲು ಸಾಧ್ಯವಿಲ್ಲ. ಈ ಸುಸಂಧಿಯಲ್ಲಿ ತಮ್ಮ ಮತಗಳನ್ನು ಕೊಂಗ್ರೆಸು ಪ್ರತಿನಿಧಿಗಳಿಗೆ ಕೊಡುವದು ನಮ್ಮ ಅಗತ್ಯದ ಕೆಲಸವಾಗಿರುತ್ತದೆ.

ಕೆ. ಎಲ್. ಕುಡುವ,
ಪ್ರೆಸಿಡೆಂಡ್,
ಕಾರ್ಕಳ ತಾಲೂಕು ಕಾಂ। ಪಾರ್ಲಿಮೆಂಟರಿ ಬೋರ್ಡು.

ದಮ್ಮಿನ ಪ್ರಕಾರ ಬಹಳ ಇವೆ.

ಅದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮನಾಗಿ ಗುಣಕಾರಿಯಾಗದು. ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ನೂರಾರು ದಮ್ಮಿನವರಿಗೆ ಪುರೋಹಿತ ಶ್ವಾಸಹಾರಿಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ತರದ್ದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢ ವಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು

ಎಫಿಡ್ರೀನಿನ ಗುಳಿಗೆ ಹೊಗೆಯ ಔಷಧ ಇಂಜಕ್ಷನ್‌ಗಳಂಥ ದಮ್ಮು ತಾತ್ಕಾಲಿಕ ನಿಲ್ಲಿಸುವ ಮುಷ್ಕಳ ಔಷಧಗಳು ನನಗೆ ಗೊತ್ತಿದ್ದು, ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸವಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು ಅವರೆಲ್ಲರಿಗೆ **ದಮ್ಮನ್ನು ನಿಧಾನ ಆದರೂ ಪೂರ್ಣ ಗುಣಮಾಡುವಂಥ** ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು ದಮ್ಮು, ಕಂಠದಾಹ ಮಾಡುವ ಹಳೇ ಕೆಮ್ಮು ಕೋಡಗಕೆಮ್ಮು, ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ **ಪುರೋಹಿತ ಶ್ವಾಸಹಾರಿ ಪ್ಲೇನ** ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು. ಅಲ್ಲದೆ, ಆಮ್ಮ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಂಪೌಂಡ (ಕೆಂಪು ಪೇಕಿಂಗ್)ದ ಶಿಫಾರಸು ಮಾಡುವೆನು.

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂಪಾಯಿ 2, ರೂ. 8-8-0 ಮತ್ತು ರೂ. 6 ಬೆಲೆಯ ಸಣ್ಣ, ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು.

ಮುಂಬಯಿ ಏಜಂಟ್ಸ—

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ 2.

ಡಾ। ಪುರೋಹಿತ ಫಾರ್ಮಸಿ,
ಕೊಲ್ಹಾಪುರ.

ಮಗುವಿನ ಆರೋಗ್ಯಕ್ಕೆ ಮೊಲೆ ಹಾಲೇ ಶ್ರೇಷ್ಠವಾದದ್ದು

ತಾಯಿ ಯಾವ ಪ್ರತಿಯೊಬ್ಬಳೂ ತನ್ನ ಮಗುವನ್ನು ಪ್ರಕೃತಿಯ ರೀತಿಯಲ್ಲಿ ಬೆಳೆಸಬೇಕು. ಆಹಾರ ದೋಷಗಳಿಂದಾಗಿ ಆಗುವ ರೋಗಗಳ ತಪ್ಪಿಕಕ್ಕೆ ಮೊಲೆ ಹಾಲಿನ ಉತ್ಕೃಷ್ಟತೆಯೇ ಮಕ್ಕಳ ಆರೋಗ್ಯದ ಕಲಹದಿ

ಇಂಥ ಶ್ರೇಷ್ಠ ಮೊಲೆಹಾಲಿನಿಂದ ನಿಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸಬೇಕೆಂಬುದರ ಭರವಸೆಗಾಗಿ ಓವಲ್ಟಿನ್ನನ್ನು ಉಪಯೋಗಿಸಿದ್ದಲ್ಲಿ ತಾಯಂದಿರಲ್ಲಿ ಅದು ಮಕ್ಕಳಿಗೆ ಬೇಕಾದ ಶ್ರೇಷ್ಠ ಮೊಲೆಹಾಲನ್ನುಂಟು ಮಾಡುವುದು ಏಕೆಂದರೆ ಓವಲ್ಟಿನ್‌ನಲ್ಲಿ ಅಂಥಾ ಮಾತೃಕ್ಷೀರದ ಸತ್ವವಿರುವುದು. ಇದನ್ನು ಎಳೇ ಮಕ್ಕಳ ತಾಯಂದಿರು ಕುಡಿದಲ್ಲಿ ಅವರಿಗೆ ಶಕ್ತಿ ಚೈತನ್ಯಗಳುಂಟಾಗುವುದು.

ಓವಲ್ಟಿನ್ ಶುದ್ಧವಾದ ಪ್ರಕೃತಿಯ ತಯಾರಿಕೆಯಾಗಿದ್ದು ಅದರಲ್ಲಿ ಪಕ್ವ ಬಾರ್ಲಿ ಸತ್ವವೂ, ದನದ ಕೆನೆ ಹಾಲೂ ಕೂಡಿದೆ. ಶಕ್ತಿ ಆರೋಗ್ಯಗಳನ್ನು ಬೆಳೆಸಬೇಕಾಗುವ ಎಲ್ಲ ಪುಷ್ಟಿಕರ ಆಹಾರಗಳೂ ಅದರಲ್ಲಿ ಕೂಡಿಕೊಂಡಿವೆ. ಓವಲ್ಟಿನ್ನನ್ನು ಪಡೆಕೊಳ್ಳಲು ಬದಲಿಯ ಕೃತಕ ವಸ್ತುಗಳನ್ನು ತ್ಯಜಿಸಿ

ಓವಲ್‌ಟಿನ್

ತಾಯಂದಿರಿಗೆ ಮಕ್ಕಳನ್ನು ಮೊಲೆಯುಣ್ಣಿಸಿ ಬೆಳೆಸಲಿಕ್ಕೆ ಶಕ್ತಿಯನ್ನು ಕೊಡುತ್ತದೆ.

OVALTINE

ಟಾನಿಕ್ ಆಹಾರ ಪಾನೀಯ—

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತ್ತದೆ.

ಏಜಂಟರು —ಜೇಮ್ಸ್ ರ್ಯಾಟ್, 85 ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ.

OV 463

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2¼% per annum. Savings Bank Deposits at 4½% per annum.

FIXED DEPOSITS.

For 2 Years 7% 1 Year 6% For 6 months 5% 3 months 4½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— **K. R. GURU,** *Managing Director.*

ಕಾಂಗ್ರೆಸಿಗೆ ಏಕೆ ಓಟು ಕೊಡಬೇಕು

ಬರುವ ಎಸೆಂಬ್ಲಿ ಚುನಾವಣೆಗೆ ನಿಂತಿರುವ ಉಮೇದ್ವಾರರ ಪೈಕಿ ನಾವು ವ್ಯಕ್ತಿಗಳ ಕಡೆಗೆ ವ ಜಾತಿಯ ಕಡೆಗೆ ನೋಡದೆ ಕಾಂಗ್ರೆಸ್ ಉಮೇದ್ವಾರರಿಗೇನೆ ನಮ್ಮ ವೋಟುಗಳನ್ನು ಕೊಡಬೇಕು. ಈ ಚುನಾವಣೆಯು ಜಿಲ್ಲಾ ಬೋರ್ಡು ಪಂಚಾಯತ ಬೋರ್ಡ ಅಥವಾ ಅಥವಾ ಮುನಿಸಿಪಾಲಿಟಿಯ ಚುನಾವಣೆಗಳಾಗಲ್ಲ. ಈ ಚುನಾವಣೆಯ ಫಲಿತಾಂಶದಲ್ಲಿ ನಮ್ಮ ಇಡೀ ಹಿಂದೂಸ್ಥಾನದ ಭವಿಷ್ಯವು ಹೊಂದಿಕೊಂಡಿದೆ. ನಮ್ಮ ಮದರಾಸ್ ಎಸೆಂಬ್ಲಿಗೆ ಇರುವ ೨೧೫ ಸ್ಥಾನಗಳಲ್ಲಿ ಒಂದು ಸ್ಥಾನವನ್ನಾದರೂ ಕಾಂಗ್ರೆಸ್ಸಿಗೆ ಕಳೆದುಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಂದು ಸ್ಥಾನವೂ ಮುಖ್ಯವಾಗಿದೆ. ಕಾಂಗ್ರೆಸು ತನ್ನ ಅಖಂಡ ತ್ಯಾಗದಿಂದಲೂ, ೫೦ ವರ್ಷಗಳಲ್ಲಿ ಮಾಡಿದ ಜನತಾ ಸೇವೆಯಿಂದಲೂ ಇಡೀ ದೇಶದ ವಿಶ್ವಾಸವನ್ನು ಪಡೆದಿದೆ. ಅಷ್ಟು ದೊಡ್ಡ ರಾಜಕೀಯ ಸಂಸ್ಥೆಯು ನಮ್ಮ ದೇಶದಲ್ಲಿ ಬೇರೆ ಇಲ್ಲ. ಕಾಂಗ್ರೆಸಿಗೆ ಸೇರಿದ ವ್ಯಕ್ತಿಗಳಲ್ಲಿ ಕೆಲವು ಕುಂದುಕೊರತೆಗಳಿರಬಹುದು. ಅದರಿಂದ ಇಡೀ ಸಂಸ್ಥೆಯನ್ನು ದೂರಲು ಸಾಧ್ಯವಿಲ್ಲ. ವ್ಯಕ್ತಿಗಳು ಮನುಷ್ಯರು ದೇವರಲ್ಲ. ಆದುದರಿಂದ ಕೆಲವು ವ್ಯಕ್ತಿಗಳಲ್ಲಿ ಕೊರತೆಗಳಿರುವುದೂ ಸ್ವಾಭಾವಿಕವು. ಅವುಗಳನ್ನು ತಿದ್ದಿಕೊಳ್ಳಲು ನಾವು ಸಂದರ್ಭ ಕೊಡಬೇಕು. ಈ ಚುನಾವಣೆಯಲ್ಲಿ ವ್ಯಕ್ತಿಗಳು ಸ್ವತಂತ್ರರಾಗಿ ಏನೂ ಒಳ್ಳೇದಾಗಲೀ ಕೆಟ್ಟದಾಗಲೀ ಮಾಡಲಿಕ್ಕೆ ಸಾಧ್ಯವಿಲ್ಲ. ವ್ಯಕ್ತಿಗಳು ಯಾವ ಪಾರ್ಟಿಗೆ ಸೇರಿದವರೋ ಆ ಪಾರ್ಟಿಯವರು ಈವರೆಗೆ ನಮಗೆ ಒಳ್ಳೇದು ಮಾಡಿದ್ದರೋ ಕೆಟ್ಟದು ಮಾಡಿದ್ದರೋ ಎಂಬುದನ್ನು ನೋಡಬೇಕು. ಈ ಸಾರಿ ಕಾಂಗ್ರೆಸಿಗೆ ಏಕೆ ನಮ್ಮ ವೋಟುಗಳನ್ನು ಕೊಡಬೇಕೆಂದರೆ (೧) ಕಾಂಗ್ರೆಸಿನಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆಯೆಂಬುದನ್ನು ಇಡೀ ಭೂಲೋಕಕ್ಕೆ ವ್ಯಕ್ತಪಡಿಸುವುದಕ್ಕೆ (೨) ಕಾಂಗ್ರೆಸಿನವರು ಜೈಲಿಗೆ ಹೋಗಿ ಕಷ್ಟಪಡುತ್ತಿರುವ ಸಮಯದಲ್ಲಿ ತಮ್ಮ ಸ್ವಾರ್ಥದೃಷ್ಟಿಯಿಂದ ಕೌನ್ಸಿಲುಗಳೊಳಗೆ ನುಗ್ಗಿ ಅಧಿಕಾರ ಸ್ವೀಕಾರಮಾಡಿ ಕಳೆದ ೧೫ ವರ್ಷಗಳಲ್ಲಿ ನಮಗೆ ಅನೇಕ ಕೆಡುಕುಗಳನ್ನುಂಟುಮಾಡಿದರು. ಈಗ ಕಾಂಗ್ರೆಸನ್ನು ವಿರೋಧಿಸುವ ಜಸ್ಟಿಸ್ ಪಾರ್ಟಿಯಲ್ಲಿ ನಮಗೆ ವಿಶ್ವಾಸವಿಲ್ಲವೆಂಬುದನ್ನು ತೋರಿಸುವುದಕ್ಕೆ (೩) ನಮ್ಮ ಮೇಲೆ ಬಲಾತ್ಕಾರದಿಂದ ಹೊರಿಸಲ್ಪಟ್ಟಂಥಾ ಹೊಸ ರಾಜ್ಯಘಟನೆಯನ್ನು ಮುರಿಯುವುದಕ್ಕೆ (೪) ಸ್ವಾತಂತ್ರ್ಯ ಚಳವಳವನ್ನು ಕೌನ್ಸಿಲಿನೊಳಗೂ ಹೂಡಲಿಕ್ಕೆ. ಎಲ್ಲಿಯಾದರೂ ಕಾಂಗ್ರೆಸ್ ಕಡೆ ಉಮೇದ್ವಾರರು ಸೋತುಹೋದರೆಂದರೆ ಆ ಸೋಲು ಆ ಉಮೇದ್ವಾರರುಗಳದ್ದಲ್ಲ, ಕಾಂಗ್ರೆಸಿಗೆ. ಹಾಗೆಯೇ ಅವರು ಜಯಿಸಿದರೆಂದರೆ ಆ ಜಯ ಅವರಿಗಲ್ಲ ಕಾಂಗ್ರೆಸಿಗೆ.

ಆದುದರಿಂದ ವೋಟರ ಮಹಾಶಯರೇ! ನೀವು ವ್ಯಕ್ತಿಗಳ ಕಡೆಗೆ ಜಾತಿಯ ಕಡೆಗೆ ನೋಡದೆ ನಿಮ್ಮಲ್ಲಿ ದೇಶಾಭಿಮಾನವು ಇರುವುದಾದರೆ ನೀವು ದೇಶದ ಹಿತೈಷಿಗಳಾದರೆ ನಿಮಗಿರುವ ಪವಿತ್ರವಾದ ಓಟನ್ನು ಕಾಂಗ್ರೆಸಿನವರ ಹಳದಿ ಬಣ್ಣದ ಪೆಟ್ಟಿಗೆಗೆ ಹಾಕಿ ಕಾಂಗ್ರೆಸಿನ ಜಯ ಧ್ವಜದ ಕೆಳಗೆ ಅನುಸರಿಸಿರಿ.

ಎಂ. ಎಸ್. ಅಧಿಕಾರಿ

ಭಾವಚಿತ್ರದ ಬಹುಮತಿಯು 31-3-37 ಮುಗಿಯುವುದು.

11/14, ಮದರಾಸು.

X-LTS X 274-333A KANARESE

ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಯುವಕರ ಮತ್ತು ವಿದ್ಯಾರ್ಥಿಗಳ ಕರ್ತವ್ಯ

ಎಸೆಂಬ್ಲಿ ಚುನಾವಣೆಗೆ ಇನ್ನು ಕೆಲವು ದಿವಸಗಳು ಮಾತ್ರ ಇವೆ. ಈ ಸಮಯದಲ್ಲಿ ಯುವಕರು ಮತ್ತು ಶಾಲಾ ವಿದ್ಯಾರ್ಥಿಗಳು ತಾವು ಮಾಡತಕ್ಕ ಕರ್ತವ್ಯ ಮತ್ತು ಸೇವೆ ಏನಿದೆಯೆಂಬುದನ್ನು ಆಲೋಚಿಸುವದು ಅಗತ್ಯವಿದೆ. ಯಾವ ಜನಾಂಗಗಳ ಮತ್ತು ರಾಷ್ಟ್ರಗಳ ಏಳಿಗೆಯು ಆಗಬೇಕಾದರೆ ಅದು ಯುವಕರಿಂದಲೇ ಆಗಬೇಕು. ನಮ್ಮ ದೇಶದ ಭವಿಷ್ಯವು ನಮ್ಮ ಯುವಕರ ಮೇಲೆ ಹೊಂದಿಕೊಂಡಿದೆ. ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದ ಇತರ ದೇಶಗಳಲ್ಲಿ ಯುವಕರು ರಾಷ್ಟ್ರೀಯ ಚಳವಳದಲ್ಲಿ ಹೆಚ್ಚಿನ ಭಾಗವನ್ನು ವಹಿಸಿದ್ದರಿಂದಲೇ ಅವುಗಳಿಗೆ ಸ್ವಾತಂತ್ರ್ಯ ದೊರಕಿದೆ. 1914ನೇ ಇಸವಿಯ ಯೂರೋಪಿನ ಘೋರ ಯುದ್ಧದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಕಾಲೇಜುಗಳಿಂದ ಹೊರಗೆ ಬಂದು ಯುದ್ಧದಲ್ಲಿ ಭಾಗವಹಿಸಿದ ಸಂಗತಿಯು ನಮಗೆ ಗೊತ್ತಿದೆ. ಆದರೆ ಮಹಾತ್ಮಾ ಗಾಂಧಿಯವರು ನಮ್ಮ ದೇಶದಲ್ಲಿ ಅಸಹಕಾರ ಮತ್ತು ಕಾಯಿದೆಭಂಗ ಚಳವಳಗಳನ್ನು ಹೂಡಿ ವಿದ್ಯಾರ್ಥಿಗಳನ್ನು ಶಾಲೆಗಳ ಮತ್ತು ಕಾಲೇಜುಗಳಿಂದ ಹೊರಗೆ ಬರಬೇಕೆಂದು ಕೇಳಿದಾಗ ಅದಕ್ಕೆ ಹೆಚ್ಚಿನ ವಿದ್ಯಾರ್ಥಿಗಳ ಪ್ರೋತ್ಸಾಹವು ಸಿಕ್ಕಲಿಲ್ಲ. ನಮ್ಮ ದೇಶದಲ್ಲಿ ಯುವಕರ ಚಳವಳವು ಸರಿಯಾಗಿ ಬೆಳೆಯಲಿಲ್ಲ. ಮಹಾತ್ಮಾ ಗಾಂಧಿಯವರು ನಮ್ಮ ದೇಶದ ಯುವಕರಲ್ಲಿಟ್ಟಿದ್ದ ಎಣಿಕೆ ಮತ್ತು ಆಶೆಯಲ್ಲಿ ತಪ್ಪಿಹೋದರು. ನಮ್ಮ ದೇಶದ ಜನರು ಮತ್ತು ಯುವಕರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಇನ್ನು ಸಂಪೂರ್ಣವಾಗಿ ತಯಾರಿಲ್ಲವೆಂದು ಎಣಿಸಿ ಕಾಂಗ್ರೆಸು ಮಹಾತ್ಮಾಗಾಂಧಿಯವರ ಉಪದೇಶದ ಮೇರೆಗೆ ಸತ್ಯಾಗ್ರಹ ಮತ್ತು ಕಾಯಿದೆಭಂಗ ಚಳವಳಗಳನ್ನು ಹಿಂತೆಗೆದುಕೊಂಡು ದೇಶದ ಪ್ರಕೃತದ ಪರಿಸ್ಥಿತಿಯನ್ನು ಪರಿಗಣಿಸಿ ಈ ಸರಕಾರ ಕಾಯಿದೆಮಂಡಲಗಳಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿ ಅಲ್ಲಿ ಕೂಡಾ ಸರಕಾರದವರೊಡನೆ ಹೋರಾಡಬೇಕೆಂದು ನಿಶ್ಚಯಿಸಿದೆ. ಕಾಂಗ್ರೆಸು ಈಗ ಯುವಕರೊಡನೆ ಜೈಲಿಗೆ ಹೋಗಬೇಕೆಂದು ಅಥವಾ ಲಾಠಿ ಪೆಟ್ಟು ತಿನ್ನಬೇಕೆಂದು ಕೇಳುವುದಿಲ್ಲ. ಏನೂ ತ್ಯಾಗವು ಅವಶ್ಯವಿಲ್ಲದ ಈ ಚುನಾವಣೆಯ ಚಳವಳದಲ್ಲಿ ಯಾದರೂ ಯುವಕರು ಮತ್ತು ವಿದ್ಯಾರ್ಥಿಗಳ ತಮ್ಮ ಕರ್ತವ್ಯವನ್ನು ಮರೆಯುವರೇ? ಎಂದಿಗೂ ಮರೆಯಲಿಕ್ಕಿಲ್ಲವೆಂದು ನಿರೀಕ್ಷಿಸಬಹುದಾಗಿದೆ.

ಹಾಗಾದರೆ ಯುವಕರು ಮತ್ತು ವಿದ್ಯಾ ವಿದ್ಯಾರ್ಥಿಗಳು ಈ ಚುನಾವಣೆಯಲ್ಲಿ ಯಾವ ಸೇವೆಯನ್ನು ಮಾಡಬಹುದು ಯೆಂಬುದನ್ನು ಸ್ವಲ್ಪ ವಿಚಾರಿಸುವ. ಈ ಚುನಾವಣೆಯಲ್ಲಿ ಕಾಂಗ್ರೆಸನ್ನು ವಿರೋಧಿಸುವವರ ಕೂಡೆ ಧನಬಲವಿದೆ, ಅಧಿಕಾರ ಬಲವಿದೆ. ಆದರೆ ಕಾಂಗ್ರೆಸ್ಸು ಬಡ ಮತ್ತು ಬಡವರ ಸಂಸ್ಥೆ. ಜನರ ವಿಶ್ವಾಸ ಮತ್ತು ಪ್ರೀತಿಯೇ ಅದರ ಐಶ್ವರ್ಯ. ಒಂದು ಪಕ್ಷಕ್ಕೆ ಕಾಂಗ್ರೆಸಿನವರ ಕೂಡೆ ಯಥೇಷ್ಟ ಹಣವಿದ್ದರೂ ಇಂಥಾ ಚುನಾವಣೆಗಳಲ್ಲಿ ಅವರು ಹಣವನ್ನು ಹಾಕುವವರಲ್ಲ. ಈ ಚುನಾವಣೆಯಲ್ಲಿ ಯುವಕರು ಮತ್ತು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಮುಂದೆ ಬರಬೇಕು. ಚುನಾವಣೆಯ ಮುಂಚಿನ ಒಂದು ವಾರವನ್ನು ಇಡೀ ಜಿಲ್ಲೆಯಲ್ಲಿ ಪ್ರತಿಯೊಂದು ಪಟ್ಟಣದಲ್ಲಿಯೂ ಗ್ರಾಮದಲ್ಲಿಯೂ 'ಕಾಂಗ್ರೆಸ್ ಚುನಾವಣೆಯ ವಾರ'ವನ್ನಾಗಿ ಆಚರಿಸಬೇಕು. ಪ್ರತಿದಿನವೂ ಆಯಾಯ ಪಟ್ಟಣ ಮತ್ತು ಗ್ರಾಮಗಳ ಯುವಕರು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ರಾಷ್ಟ್ರೀಯ ಗೀತೆಗಳನ್ನು ಹಾಡಿಕೊಂಡು 'ಕಾಂಗ್ರೆಸಿಗೆ ಓಟು ಕೊಡಿರಿ! ಸ್ವಾತಂತ್ರ್ಯವನ್ನು ಗಳಿಸಿ ದೇಶದ ಬಡತನವನ್ನು ನಿವಾರಣೆ ಮಾಡಿರಿ' ಎಂದು ಹೇಳಿಕೊಂಡು ಮೆರವಣಿಗೆಯಲ್ಲಿ ಪ್ರತಿಯೊಂದು ಹಳ್ಳಿಯ ಮತ್ತು ಪಟ್ಟಣದ ಮೂಲೆ ಮೂಲೆಗೆ ಹೋಗಿ ಜನರಲ್ಲಿ ಜಾಗೃತಿಯನ್ನೂ ಉತ್ಸಾಹವನ್ನೂ ಉಂಟುಮಾಡಬೇಕು. ಚುನಾವಣೆಯ ದಿನ ಆಯಾಯ ಗ್ರಾಮಗಳ ಮತ್ತು ಪಟ್ಟಣಗಳ ಸ್ವಯಂಸೇವಕರು ಪ್ರಾತಃಕಾಲ 6 ಘಂಟೆಗೆ ಎದ್ದು ತಮ್ಮ ತಮ್ಮ ಒಳಗೆ ತಂಗಡಗಳನ್ನು ಮಾಡಿ ಮೇಲಿನ ಘೋಷಣೆಗಳನ್ನು ಹೇಳಿಕೊಂಡು ಮೆರವಣಿಗೆಯಲ್ಲಿ ಕಾಲುನಡೆಯಿಂದ ಓಟರರನ್ನು ಸಮ್ಮಂಧಪಟ್ಟ ಪೋಲಿಂಗ್ ಸ್ಟೇಶನಿಗೆ ಕರೆದುಕೊಂಡು ಹೋಗಿ ಕಾಂಗ್ರೆಸಿಗೆ ಅವರ ಓಟುಗಳನ್ನು ಕೊಡಿಸಬೇಕು. ಏನೂ ತ್ಯಾಗವಿಲ್ಲದ ಈ ಅಲ್ಪ ಸೇವೆಯನ್ನು ಮಾಡಿ ಕಾಂಗ್ರೆಸಿನ ಗೌರವವನ್ನೂ ಯಶಸ್ಸನ್ನೂ ಕಾಪಾಡಿ ಕಾಂಗ್ರೆಸಿನ ಜಯ ಧ್ವಜವನ್ನು ಎತ್ತಿ ಹಿಡಿಯಬೇಕಾಗಿ ಜಿಲ್ಲೆಯ ಎಲ್ಲಾ ಯುವಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ.

ಎಂ. ಎಸ್. ಅಧಿಕಾರಿ.

ಸ್ವಾರಸ್ಯದ ವಿಷಯಗಳು.

ಇಂಗ್ಲೆಂಡಿನ ಲ್ಯೂಕ್ಸ್ ಎಂಬಲ್ಲಿನ ಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದ ಜಸ್ಟಿಸ್ ಮೆಕಿನರವರು ೩ ಘಂಟೆ ೫೪ ಮಿನಿಟ ನಡೆದ ಕೋರ್ಟು ವ್ಯವಹರಣೆಯಲ್ಲಿ ೮೨ ವಿವಾಹ ವಿಚ್ಛೇದ ಅರ್ಜಿಗಳನ್ನು ವಿಚಾರಿಸಿ ಹುಕುಂ ಇತ್ತಿರುವರು.

ಇಡೀ ಇಂಗ್ಲೆಂಡಿನಲ್ಲಿ ಒಬ್ಬನೇ ಒಬ್ಬ ಕುರುಡ ವ್ಯಾಪಾರಸ್ಥನಿದ್ದಾನೆ. ಪೋಲ್ಲಿ ಪೆರ್ಕಿನ್ಸ್ ಎಂದು ಅವನ ಹೆಸರು. ಇವನ ಅಂಗಡಿಯಲ್ಲಿ ಸುಮಾರು ೨೦೦ ಬಗೆಯ ಸಾಮಾನುಗಳಿರುವುವು. ಗಿರಾಕಿಗಳು ಕೇಳಿದ ಸಾಮಾನನ್ನು ಅವನು ಯಾವ ತೊಂದರೆಯೂ ಇಲ್ಲದೆ ಹುಡುಕಿ ತೆಗೆದುಕೊಡುವನು.

ಬಾಗಿಲುಗಳಿಗೆ ಬೀಗ ಹಾಕುವ ಕಾಲವು ಹೋಯಿತು. ವಿಜ್ಞಾನಿಗಳು ವಿದ್ಯುತ್ ಶಕ್ತಿಯಿಂದ ಎರಡು ಬಾಗಿಲುಗಳನ್ನು ಸೂಜಿಕಲ್ಲಿನ ಶಕ್ತಿಯಿಂದ ಒಂದಕ್ಕೊಂದು ಹಿಡಿದುಕೊಂಡಿರುವಂತೆ ಒಂದು ನವೀನ ಕ್ರಿಯೆಯನ್ನು ಕಂಡು ಹಿಡಿದಿರುವರು. ಅದನ್ನು ತೆರೆಯಲು ಮುಚ್ಚಲು ಒಂದು ವಿಧಾನವಿರುವುದು. ಅದು ಯಜಮಾನನಿಗೇ ಗೊತ್ತು. ಕಳ್ಳರು ಪ್ರಯತ್ನಪಟ್ಟರೆ, ಆ ವಿಧಾನವು ತಪ್ಪಿ ಕೂಡಲೇ ಗಂಟೆ ಬಾರಿಸಲ್ಪಡುವುದು.

ಇಂಗ್ಲೆಂಡಿನ ಅರಸನಾದ ೮ನೇ ಹೆನ್ರಿಯ ಕಾಲದಲ್ಲಿ ಜಾರಿ ಮಾಡಿದ ಕಾನೂನು ಪ್ರಕಾರ ಪ್ರತಿಯೊರ್ವ ವೈದ್ಯಕೀಯ ವಿದ್ಯಾರ್ಥಿಯೂ ಕೂಡ ಲಂಡನಿನ ಬಿಶಪರಿಂದ ಶಿಫಾರಸು ಪಡೆದು ಆ ಮೇಲೆ ಉದ್ಯೋಗವನ್ನಾರಂಭಿಸಬೇಕು.

ಕಳೆದ ವರ್ಷದ ಪ್ರತಿ ತಿಂಗಳಲ್ಲಿ ಐದೈದು ಡಾಕ್ಟರುಗಳು ಚಿಕಾಗೋದಲ್ಲಿ ಕಳ್ಳರ ಸುಲಿಗೆಗೆ ಒಳಗಾಗಿದ್ದಾರೆ. ಅವರನ್ನು ಹಿಡಿಯಲು ೫೦ ಡಾಲರುಗಳ ಬಹುಮಾನವಿಟ್ಟಿರುವರು.

ಎರಡು ಭಾಷೆ ಬಲ್ಲ ಗಿಳಿ

ಆಫ್ರಿಕದ ಆರೆಂಜ್ ಫ್ರೀಸ್ಟೇಟಿನ ಹೂಪ್‌ಸ್ಟೆಡ್, ಎಂಬಲ್ಲಿ ೧೦೩ ವರ್ಷ ಪ್ರಾಯದ ಒಂದು ಗಿಳಿಯು ಸತ್ತುಹೋಯಿತು. ಅದು ಇಂಗ್ಲಿಷ್ ಮತ್ತು ಆಫ್ರಿಕಾ ದೇಶದ ಭಾಷೆಗಳನ್ನು ಚೆನ್ನಾಗಿ ಮಾತನಾಡುತ್ತಿತ್ತಂತೆ. ಅದು ಉಚ್ಚರಿಸುವ ಪ್ರತಿವಾಕ್ಯವೂ ಮೊದಲು ಇಂಗ್ಲಿಷಿನಿಂದಲೂ ಇದ್ದು ನಂತರದ ಇನ್ನೊಂದು ವಾಕ್ಯವನ್ನು ಇಂಗ್ಲಿಷಿನ ಭಾಷಾಂತರಮಾಡಿ ಆಫ್ರಿಕಾ ದೇಶದ ಭಾಷೆಯಲ್ಲಿ ನುಡಿಯುತ್ತಿತ್ತಂತೆ. ಹೀಗೆ ಒಂದೇ ಅರ್ಥದ ವಾಕ್ಯವನ್ನು ಅದು ಎರಡು ಭಾಷೆಗಳಲ್ಲಿ ಹೇಳಿ ತೋರಿಸುತ್ತಿತ್ತು.

ಬೊಬ್ಬಿಲಿ ರಾಜರ ಸಂಸ್ಥಾನದಲ್ಲಿ ಸರೋಜಿನೀ ದೇವಿಯವರ ಅನುಭವಗಳು

ಆಂಧ್ರದೇಶದಲ್ಲಿ ಊರಿಂದೂರಿಗೆ ಸಂಚರಿಸುತ್ತ ಭಾಷಣ ಕೊಡುತ್ತ ಶ್ರೀ। ಸರೋಜಿನೀ ದೇವಿಯವರು ಪ್ರವಾಸ ಮಾಡುತ್ತಿರುವರಷ್ಟೆ. ಹಿಂದೂವರೆ ತಿಂಗಳಿಂದ ಹಿಂದೂಸ್ಥಾನದಲ್ಲೆಲ್ಲ ಸಂಚರಿಸುತ್ತ ಬರುತ್ತಿರುವ ದೇವಿಯವರಿಗೆ ವಿಚಿತ್ರವಾದ "ಅನುಭವಗಳು" ಬೊಬ್ಬಿಲಿಯಲ್ಲಿ ಉಂಟಾದುವು. ರಾಷ್ಟ್ರಪತಿ ಜವಾಹರಲಾಲರಿಗೇ ಆತಂಕಗಳು ನಡೆದ ಬೊಬ್ಬಿಲಿಯಲ್ಲಿ ಸಮಸ್ತರಿಗೆ ನ್ಯಾಯವನ್ನು ಮಾಡುವ ಉದ್ದೇಶವನ್ನಿಟ್ಟುಕೊಂಡವರೆಂಬ ಜಸ್ಟಿಸ್ (ನ್ಯಾಯಕಾರಿ) ಪಕ್ಷದ ಅಧಿನಾಯಕ ರಾಜರ ಸಂಸ್ಥಾನವಿದು. ಅವರ ತಿಳುವಳಿಕೆಯಿಂದ ಈ ಅಪೂರ್ವ ಘಟನೆಗಳಾಗುವುವೆಂದು ಯಾರೂ ತಿಳಿಯಲಾರರಾದರೂ, ಅಲ್ಲಿನ ವಾತಾವರಣವನ್ನೆ ಹಾಳುಮಾಡುವಷ್ಟು ತವಕಗೊಳ್ಳುವ ಸಾಧಕರು ರಾಜರ ಪ್ರೀತ್ಯರ್ಥವಾಗಿ ಕೈಕೊಳ್ಳುವ ಏರ್ಪಾಡುಗಳನ್ನು ಕಂಡರೆ, ರಾಜರಿಗೆ ಹೇಗೆನಿಸಬಹುದೋ ದೇವಿಯವರಿಗಂತೂ ಮನಸ್ಸು ಉದ್ವಿಗ್ನಗೊಂಡಿದೆಯಾದರೂ ಅವರು ಶಾಂತಚಿತ್ತರಾಗಿ ಅಲ್ಲೇ ನೆರೆದ ಜನರಿಗೆ ನಾಲ್ಕು ಮಾತು ತಿಳಿಸಿರುವರು ಈ ಮಾತುಗಳಲ್ಲಿ ನ್ಯಾಯ (ಜಸ್ಟಿಸ್) ಎಷ್ಟಿದೆ ಎಂಬುದನ್ನು ವಾಚಕರು ತಾವಾಗಿ ತಿಳಿದುಕೊಂಡು ಬೇಕಾದ ಅಭಿಪ್ರಾಯಗಳನ್ನು ಮಾಡಿಕೊಳ್ಳಬಹುದು

ಬೊಬ್ಬಿಲಿಯಲ್ಲಿ ಕೊಂಗ್ರೆಸ್ ಪಕ್ಷದ ಸಭೆಯು ಖಾಸಗಿ ಜಾಗದಲ್ಲೇ ಸೇರುವುದಾಗಿತ್ತು ದೇವಿಯವರ ಜತೆಯಾಗಿ ಒಂದು ಬಸ್ಸು ತುಂಬಾ ಪೋಲಿಸರೂ ಡೆಪ್ಯೂಟಿ ಸುಪರಿಂಟೆಂಡೆಂಟರೂ ದಯೆಮಾಡಿಸಿದ್ದರು ಸಭೆ ಬೇಕಾದ ಸ್ಥಳದಲ್ಲೆಲ್ಲ ಕಸಕುಪ್ಪೆಗಳಾಗಿದ್ದವು ಅಲ್ಲಿಗೆ ಹೋಗುವ ದಾರಿಗಳಿಗೆಲ್ಲ "ಖಾಸಗಿ ಎಂದು ನೋಟಿಸು ತೂಗಿಸಿದ್ದಿತು ಅಲ್ಲಿಗೆ ಬಂದ, ಬರುತ್ತಿದ್ದ ಜನರನ್ನು ಅಲ್ಲಿಂದ ಹಿಂದೆ ಕಳುಹುತ್ತಿದ್ದರಿಂದೂ ಊಹೆ ಲದರೂ ದೇವಿಯವರು ಪ್ರಯಾಣವಾಡುತ್ತಿರುವಾಗಲಿಲ್ಲ ಅಲ್ಲಲ್ಲಿ ಜನರ ಗುಂಪುಗಳಿದ್ದುವು ಸಭೆಗೆ ಆರಂಭವಾಗುವಾಗ ಅಲ್ಲಿ ೨೦೦ ಜನರೇ ಮಾತ್ರವಿದ್ದರೂ, ಪೋಲಿಸರು ಅಲ್ಲಿಗೆ ಬಂದುದರಿಂದ ಧೈರ್ಯಗೊಂಡು, ಹಲವು ಸಾವಿರ ಜನರು ಅಲ್ಲಿ ಸೇರಿದರು ಎಲ್ಲವೂ ಮೌನವೂ ಶಾಂತವೂ ಆಗಿದ್ದಿತು ದೇವಿಯವರ ಭಾಷಣದ ಸಾರಾಂಶವು ಹೀಗಿದ್ದಿತು —

ಕೊಂಗ್ರೆಸ್ಸಿಗೆ ವಿರುದ್ಧವಾಗಿರುವ ಪಕ್ಷವು ಇಲ್ಲಿ ಈ ಚುನಾವಣೆಗಳ ಕಾಲದಲ್ಲಿ ಕೆಲವು ಕೃತ್ಯಗಳನ್ನು ಮಾಡುತ್ತಲೇ ಇದೆ ಈ ಕೃತ್ಯಗಳಿಗೆ ಜವಾಬ್ದಾರಿಯನ್ನು ಆ ಪಕ್ಷಕ್ಕೆ ಸಂಬಂಧಿಸಿರುವ ಯಾವನೊಬ್ಬನಾಗಲೀ, ಆ ಪಕ್ಷವೇ ಆಗಲಿ ಬಹಿರಂಗವಾಗಿ ಒಪ್ಪುಕೊಳ್ಳುವ ಹಾಗಿಲ್ಲ ಬೊಬ್ಬಿಲಿ ರಾಜರ ಕೈಕೆಳಗಿನವರು ಅವರ ಹೆಸರಲ್ಲಿ ಕೆಡುಕರಂತೆ ವರ್ತಿಸಿದುದನ್ನು ಕೇಳಿದ್ದೇವೆ ಈ ಹಾಳು ವರ್ತನವು ಜನಾಂಗದ ಮುಂದಾಳುವು ಇಲ್ಲ, ಎಂದಾಗಲೂ ಪ್ರಕಟವಾಗುತ್ತಲೇ ಇದೆ ಈಗ ನಾನೇ ಕಣ್ಣಾರೆ ಕಂಡುದಾಯಿತು ಮರ್ಯಾದೆಯುಳ್ಳ ಯಾವ ಸಮಾಜವೂ ಇಂತಹ ಕೃತಿಗಳನ್ನು ಸಹಿಸಲಾರದು ಸುಧಾರಿತವಾದ ಯಾವುದೊಂದು ದೇಶದಲ್ಲಿ ಚುನಾವಣೆಗೆ ನಿಂತ ವ್ಯಕ್ತಿ ಉಮೇದುವಾರನಿಗೂ ಓಟರರಿಂದ ಅಭಿಪ್ರಾಯ ಪಡೆಯಲು ಬೊಬ್ಬಿಲಿಯಲ್ಲಿ ಓಟರರನ್ನು ಕಾಣವುದಕ್ಕೂ ವಿರುದ್ಧ ಪಕ್ಷದವರಿಗೆ ಸಾಧ್ಯವಾಗದಂತೆ ವ್ಯವಸ್ಥಿತ ರೀತಿಯಲ್ಲಿ ಕೆಡುಕರ ತಂಟೆಗಳಿವೆ ಇಂದು ನಾನು ಕಣ್ಣಾರೆ ಕಂಡು ಕಿವಿಯಾರೆ ಕೇಳಿದ ಬೊಬ್ಬಿಲಿಯ ರಾಜರ ಹೆಸರಲ್ಲಿ ಅವರ ಕೈಕೆಳಗಿನ ಆಳುಗಳು ಮಾಡುತ್ತಿರುವ ಕೃತಿಗಳನ್ನು ಆ ರಾಜರು ತಿಳಿದಿಲ್ಲವೆಂದು ಭಾವಿಸುತ್ತೇನೆ. ಇವು ಆ ರಾಜರ ಹೆಸರಿಗೆ ಗೌರವನ್ನುಂಟುಮಾಡಲಾರವು ಯಶಸ್ಸನ್ನುಂಟುಮಾಡಲಾರವು -ಬೊಬ್ಬಿಲಿ ರಾಜರ ವರ್ಗದ ಹಲವು ಜನರನ್ನು ನಾನು ತಿಳಿದಿರುವೆನು ಇಂಥವರ ಆತಿಥ್ಯವು ನನಗೆ ದೊರೆತಿದೆ, ಹೀಗಿರುವುದರಿಂದಲೇ ಈ ರಾಜರ ಹೆಸರಿಂದ ಇಲ್ಲಿ ನಡೆದ ನೀಚ ಮತ್ತು ಗೋಪ್ಯವಾದ ದುಷ್ಕೃತಿಗಳು ಅವರಿಗೆ ತಿಳಿದಿಲ್ಲವೆಂದೇ ನಾನು ಎಣಿಸಬೇಕಾಗಿದೆ ಎದುರು ಪಕ್ಷದವರ ಮೋಟಾರುಗಳ ಮೇಲೆ ಕಲ್ಲೆಸೆಯುವುದು, ತನ್ನ ಮೋಟಾರನ್ನು ಎದುರುಪಕ್ಷದವರ ಮೋಟಾರುಗಳ ನಡುವೆ ತಂದು ಢಕ್ಕೆ ಬಡಿಸುವುದು, ಢೋಲು ಬಾರಿಸುವುದು, ಆನೆಗಳನ್ನು ಜನಸ್ತೋಮ ಕೂಡಿದ ಸಭೆಯ ಮೇಲೆ ಎರಗಿಸುವುದು ಮೊದಲಾದ ಕೃತಿಗಳಿಂದ ರಾಜಾಗೆ ಹೆಚ್ಚಿನ ಓಟುಗಳು ದೊರೆವಂತೆ ಸಾಧಿಸಲಾರದು ಪ್ರಪಂಚವು ಎಷ್ಟೆಂದರೂ ಈಗ ಕಿರಿದಾಗುತ್ತ ಬಂದಿದೆ, ನನಗಿಲ್ಲಿ ಇಂದು ಉಂಟುಮಾಡಿರುವ ಹಿಂಸೆಯು ಕೆಲವೇ ತಾಸುಗಳಲ್ಲಿ ಎಲ್ಲರ ಕಿವಿಗೂ ಬೀಳದಿರದು ನಾನು ಬೊಬ್ಬಿಲಿಯ ಜನರ ಕಡೆಯನ್ನು ಕೇಳಿಯೆ ಬಂದೆನು ಅವರ ಆತಿಥ್ಯವನ್ನು ಪಡೆಯುವ ನಾನು ಅತಿಥ್ಯ ನಿಯಮಗಳಿಗೆ ವಿರುದ್ಧವಾದ ಹಾಗೂ ಆಕ್ಷೇಪಕರವಾದ ರೀತಿಯಲ್ಲಿ ವರ್ತಿಸಲಾರೆನು ರಾಜರು ತಮ್ಮ ಹೆಸರನ್ನು ಉಚ್ಚಸ್ಥಾನದಲ್ಲಿ ಇಡಬೇಕಾಗಿ ಆಶಿಸಿರುವರು, ಅವರ ಹೆಸರ ಮೇಲೆ ನಾನು ಸುಲಭವಾಗಿ ಕೆಸರೆರಚಬಹುದು ಆದರೆ ನಾನೂ ಅವರೂ ಭಾರತವಾಸಿಗಳು, ಒಂದೇ ಜನಾಂಗದವರು, ಭಾರತವರ್ಷವು ಸ್ವರಾಜ್ಯಹೊಂದಿದಾಗ, ಅವರೂ ಅದೇ ಸ್ವರಾಜ್ಯ ಧ್ವಜದ ನೆಳಲಲ್ಲಿ ಜೀವನಮಾಡಬೇಕಾಗವುದು ಎಂದು ತಿಳಿದೇ ಅವರ ಹೆಸರಿಗೆ ಅಗೌರವವನ್ನೇನೂ ನಡೆಯುವುದಿಲ್ಲ

ಎಷ್ಟೆಂದರೂ, ಒಬ್ಬ ಮನುಷ್ಯನ ಯೋಗ್ಯತೆಯನ್ನು ಆತನ ಆಡಂಬರ ವಿಜೃಂಭಣೆಗಳಿಂದ ಭಂಡಾರದಿಂದ, ಅವನ ಆನೆ ಕುದುರೆಗಳ ಸಂಖ್ಯೆಯಿಂದ ಯಾರೂ ನಿರ್ಧರಿಸುವುದಿಲ್ಲವಷ್ಟೆ ಮನುಷ್ಯನ ಯೋಗ್ಯತೆಯ ನಿರ್ಧರಿಸುವುದು ಆತನ ಗುಣವಲ್ಲ ಅವನ ಗುಣ ವಿವೇಕ ರೀತಿನೀತಿಗಳು ಭಾರತೀಯರ ದಾಸ್ಯ ಜನಾಂಗವಾಗಿದೆ ಇಬ್ಬರು ದಾಸರು ನಿಮ್ಮೆದುರಲಿರುವರು ಅವರಲೊಬ್ಬರ ಕೀರ್ತಿವಂತ ಜಮೀನ್ದಾರರಾಗಿರುವ ಬೊಬ್ಬಿಲಿಯ ರಾಜರು, ಇನ್ನೊಬ್ಬರು ಹತ್ತು ಸಹಸ್ರ ಬೊಬ್ಬಿಲಿಯ ರಾಜರೂ ಪಡೆಯಲಸಾಧ್ಯವಾಗಿರುವ ಭಕ್ತಿಯನ್ನು ಪಡೆಯುತ್ತಿರುವ ಹಾಗೂ ಪ್ರಪಂಚದ ಕಣ್ಣುಗಳೇ ದಿಟ್ಟಿಸುತ್ತಿರುವ ಒಡೆಯರಾಗಿರುವ ಪಂಡಿತ ಜವಾಹರಲಾಲರು ಎರಡನೇಯವರಾಗಿರುವ ಇವರು ಜನಾಂಗದ ಪ್ರತಿನಿಧಿಯರಾಗಿದ್ದು, ಜನಾಂಗದ ವಾತ್ಸಲ್ಯವನ್ನು ಗೌರವವನ್ನು ಸಂಪಾದಿಸಿರುವರು ಜನಾಂಗದ ಹಿತಕ್ಕೆ ಸರಿಯಾಗದಂತೆ ಸರಕಾರದೊಡನೆ ಸಹಕರಿಸುವವರ ಪ್ರತಿನಿಧಿಗಳನ್ನು ಜನರು ತೊಲಗುತ್ತಾರೆ ದೀನ ದೀದ ದಳಿತರ ಸಮಿತಿಯಾದ ಕೊಂಗ್ರೆಸ್ಸಿಗೆನೇ ಓಟ ಕೊಡಿರಿ ನಿಮ್ಮನ್ನು ಲಂಚದಿಂದ ವಶಪಡಿಸಲೂ ಬೆದರಿಸಿ ಬಲಾತ್ಕರಿಸಲೂ ಒಲ್ಲದ ಶ್ರೀ ವಿ ವಿ ಗಿರಿಯವರಿಗೇನೇ ನಿಮ್ಮ ಓಟು ಕೊಡಿರಿ

—

ಎಲ್ಲಾ ತರದ
ಶುದ್ಧ ಖಾದಿಗೆ
ಸ್ವದೇಶಿ ವಸ್ತುಗಳಿಗೆ
ಮಂಗಳೂರು ಸ್ವದೇಶಿ ಸ್ಟೋರ್ಸ್
ರಥಬೀದಿ ಮಂಗಳೂರು

ಅಧ್ಯಕ್ಷಾಗಮನಂ

ಸ್ವಾಗತಗೀತೆ

ಧಾಟಿ —(ಮೂರ್ತೀಮಂಕ್)

ಸ್ವಾಗತಂ ಸ್ವರಾಜ್ಯವೀರ।
ರಾಷ್ಟ್ರಪತಿ ಜವಾಹರ ।ಪ।
ಸ್ವಾಗತಂ ಸ್ವತಂತ್ರ ಭಾರ।
ತೀ ವಿಚಾರ ಮಂದಿರ ॥ ಅ ಪ ।
ದೇಶಹಿತ ಸಮರ್ಥಸದಾ
ಲೋಕಮಾನ್ಯ ಸಂಪದ
ದೇಶಬಂಧು ಕುಲವಿನೋದ।
ದೀನಜನ ಸಮಾಸ್ಪದ ।೧
ಭಾರತಾರ್ಯ ಜೀವಜ್ಯೋತಿ
ಘನಮಹಾತ್ಮ ಸಾರಥಿ
ಧಾರಿಣೀಂದ್ರ ವಿಭವಿಭೂತಿ
ಅನಭಿಷಿಕ್ತ ಭೂಪತಿ ॥ ೨ ।
ರಾಷ್ಟ್ರಸಭಾಧ್ಯಕ್ಷ ಕಾರ್ಯ
ದಕ್ಷ ಭಾರತೀಪ್ರಿಯ
ರಾಷ್ಟ್ರಪತಿ ಸ್ವದೇಶಸೇವ್ಯ ।
ಸದಯ ಹೃದಯ ನಿರ್ಭಯ ॥ ೩ ।
ಸ್ವಾಗತಂ ಸ್ವರ್ಗೀಯ ಕಮಲಾ
ನೆಹರು ಪ ನೇತ್ರ ಮಂಗಳ।
ಸ್ವಾಗತಂ ಸುಕೀರ್ತಿ ವಿರಳ
ಭಾವಿ ನೀ ಸುಮಂಗಳ ।೪।
ಸ್ವಾಗತಂ ಸರೇಂದ್ರಭವ।
ಮೋತಿಲಾಲ ಸಂಭವ
ಸ್ವಾಗತಂ ಮಹಾನುಭಾವ
ನವಜಯಂತ ವೈಭವ ॥ ೫ ॥
ಸ್ವಾಗತಂ ಸಾಮ್ರಾಜ್ಯಸಮರ
ವಿಜಯ ವಿಜಯ ನಿರ್ಭಯ।
ಸ್ವಾಗತ ಸ್ವತಂತ್ರ ಭಾರ
ತಾಭಿರಾಮ ಶ್ರೀಕರ ।೬।

ಪುಂಡೂರು
ಲಕ್ಷ್ಮೀನಾರಾಯಣ ಪುಣಿಂಚತ್ತಾಯ

ಸಕ್ಕರೆ ಕದ್ದಕ್ಕೆ ಟಾವು ಶಿಕ್ಷೆ

ಜಲಂದರಿನ ಜೀವನ್ ಎಂಬವನು ಒಂದು ರೈಲ್ವೇ ದಾಸ್ತಾನು ಕೋಣೆಯಿಂದ ೧॥ ರೂಪಾಯಿ ಬೆಲೆಬಾಳುವ ಸಕ್ಕರೆಯನ್ನು ಕದ್ದನೆಂಬ ಅಪರಾಧದ ಮೇಲೆ ಅವನಿಗೆ ಜನ್ಮಾಂತರ ಟಾವು ಶಿಕ್ಷೆಯನ್ನು ವಿಧಿಸಿರುವರು ಈ ಪುಣ್ಯಾತ್ಮನಿಗೆ ೩ ವರ್ಷಗಳ ಜೈಲು ಅನುಭವವಿದೆಯಂತೆ

ಪ್ರಾಂತೀಕ ಕಾಂ. ಕಮಿಟಿಗಳಲ್ಲಿ ರಾಷ್ಟ್ರಾಧ್ಯಕ್ಷರ ಕೇಳಿಕೆ.

ನಮ್ಮೆದುರಿಗಿರುವ ಸಮಯವು ಬಹಳ ಸ್ವಲ್ಪವೇ ಆಗಿರುವುದರಿಂದ ಎಲ್ಲಾ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು, ತಮ್ಮ ಕೆಳಗಿನ ಸ್ಥಳೀಯ ಎಲ್ಲ ಕಮಿಟಿಗಳನ್ನು ಅಧಿಕಾರ ಸ್ವೀಕಾರದ ಪ್ರಶ್ನೆಯ ಕುರಿತು ತಿಳಿಸಿ ಅವರ ಅಭಿಪ್ರಾಯಗಳನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಗೆ ತಿಳಿಸಬೇಕಾಗಿ ವಿನಂತಿಸುತ್ತೇನೆ, ಅಭಿಪ್ರಾಯಗಳನ್ನು ಬರೆದು ಕಳುಹಿಸುವಾಗ ಅವುಗಳು ಸಂಕ್ಷಿಪ್ತವಾಗಿರದೆ, ಸವಿಸ್ತಾರವಾಗಿರಬೇಕು ಕಾಂಗ್ರೆಸು ನವರಾಜ್ಯಾಂಗದ ಆಚರಣೆಯನ್ನು ನಿರಾಕರಿಸಲಿಕ್ಕಾಗಿ ನಿರ್ಧರಿಸಿ ಠರಾವು ಮಾಡಿದುದನ್ನು ಯಾವ ರೀತಿಯಲ್ಲಿ ನಿರ್ವಹಿಸಬಹುದೆಂದು, ಪ್ರಾಂತೀಕ ಸಭೆಗಳಿಂದ ಬಂದ ಈ ಅಭಿಪ್ರಾಯಗಳಿಂದ ತಿಳಿಯಲು ಅನುಕೂಲವಾಗುತ್ತದೆ '

ಪ್ರತಿ ಪ್ರಾಂತ್ಯಗಳಲ್ಲಿ ಜಯಶೀಲರಾದ ಕಾಂಗೆಸ್ ಉಮೇದವಾರರ ಸವಿಸ್ತಾರ ವರದಿಯನ್ನು ಅಖಿಲ ಭಾರತ ಕಾಂಗ್ರೆಸ್ ಸಭೆಗೆ ಕಳುಹಿಸಿಕೊಡಬೇಕೆಂದೂ ಅದರಲ್ಲಿ ಎಷ್ಟು ಮಂದಿ ಮತದಾರರು ಕಾಂಗ್ರೆಸಿಗೆ ಓಟು ಕೊಟ್ಟಿರುವರೆಂಬ ವಿಷಯವನ್ನು ತಿಳಿಸಬೇಕಾಗಿಯೂ ಪಂಡಿತ ನೆಹರುಗಳು ಪ್ರಕಟಿಸಿರುವರು

ಪೋಲಿಂಗಿನ ಸಮಯದಲ್ಲಿ ಯಾವ ಯಾವ ಅಧಿಕಾರಿಗಳು ಏನೇನು ಮಾಡಿರುವರೆಂಬ ಸಂಗತಿಯನ್ನು ತಿಳಿಸತಕ್ಕದ್ದು

ಚುನಾವಣೆ ದಿನ ಯಾವದಾದರೂ ವಿಶೇಷ ಸಂಘಟನೆಗಳಾದರೆ ಅದನ್ನು ಅದರಲ್ಲಿ ತಿಳಿಸಬೇಕ

ದೊಡ್ಡ ಜಮೀನ್ದಾರರು ಯಾ ಅವರ ಕಡೆಯವರು ಒಕ್ಕಲಿಗರಿಗೆ ಭೀತಿ ತೋರಿಸಿದ ಸಂದರ್ಭಗಳನ್ನು ತಿಳಿಸತಕ್ಕದ

ಟಿಸ್ಸುನೆಲ್ಲಿಯ ಕ್ರೈಸ್ತರ [illegible] ದರಿಂದ [illegible] ವರ ಕಾಂಗ್ರೆಸ್ ಉಮೇದವಾರರು [illegible] ಸಲ್ಪಟ್ಟಿರುವರ [illegible] ಪ್ರತಿಜ್ಞೆಯನ್ನು ಮಾಡಿರುವರು

ಶ್ರೀಮತಿ ಸರೋಜ ದೇವಿ [illegible] ತಮ್ಮ ಆಂಧ್ರದೇಶದ ಪ್ರವಾಸವನ್ನು [illegible] ಹೈದರಾಬಾದಿನಿಂದ [illegible] ಪಯಣ ಬೆಳಸಿದರು

ತಮಿಳುನಾಡಿನಲ್ಲಿ ಸ ಚಾರ [illegible] ಶ್ರೀ ರಾಜಗೋಪಾಲಾಚಾರ್ಯರವರ ಭರದಿಂದ ಚುನಾವಣೆ ಪ್ರಚಾರ ಮಾಡುತ್ತಿರುವರು

ದೇವರು ಮುನಿದನೇ?

ಮೊರದಾಬಾದಿನಲ್ಲಿ ಮೌಲ್ವಿ ಅಶಾಕ್ ಉದ್ದೀನ್ ಎಂಬವನ ಅಕಸ್ಮಾತ್ ಮರಣದಿಂದಾಗಿ ತುಂಬಾ ಕಳವಳವೆದ್ದಿದೆ ಗಂಡನನ್ನು ಕಳಕೊಂಡ ಒರ್ವ ಮಹಿಳೆಯ ಮಗುವನ್ನು ಅವಳ ಸಂಬಂಧಿಕರು ಕಳಕೊಂಡದ್ದಕ್ಕೆ ಆ ವಿಧವೆಯು ದಾವೆ ಮಾಡಿದಳು ಸಾಕ್ಷಿಗಾಗಿ ಮೇಲಿನ ಮೌಲ್ವಿ ಆಶಾರುದ್ದೀನರನ್ನು ಕರೆಸಲಾಯಿತು ಕೋರ್ಟಿನಲ್ಲಿ ವಿಚಾರಣೆ ನಡೆಯುವಲ್ಲಿ ಮೌಲ್ವಿಯವರು ಹೀಗೆಂದರು 'ನಾನು ಸುಳ್ಳು ಹೇಳಿದ್ದಲ್ಲಿ ದೇವರ ಕೋಪವು ನನ್ನ ಮೇಲೆ ಬೀಳಲಿ', ವಿಚಾರಣೆಯು ಮುಂದುವರಿಯುತ್ತಿದೆ ಮೌಲ್ವಿಯವರು ಕೋರ್ಟಿನಿಂದ ಮನೆಗೆ ಬಂದೊಡನೆ ಅತಿಸಾರ ರೋಗದಿಂದ ಮರಣಪಟ್ಟರು ಈ ಶೋಚನೀಯ ಪರಿಸ್ಥಿತಿಯು ಅಲ್ಲಿನ ಜನರಲ್ಲಿ ದಿಗಿಲನ್ನುಂಟುಮಾಡಿದೆ

"ಕಾಂಗ್ರೆಸಿನ ಬಲವು ಅಧಿಕವಾಗಿರುತ್ತದೆ"

ಸರಕಾರದವರು ಚುನಾವಣೆಯಲ್ಲಿ ಯಾವತ್ತೂ ತರದ ಪ್ರೇರಣೆಯನ್ನು ನಡೆಯಿಸುವುದಿಲ್ಲವೆಂಬ ಭರವಸೆಯು ಈ ಮೊದಲೇ ದೊರಕಿತ್ತು. ಆದರೆ ಸಂಯುಕ್ತ ಪ್ರಾಂತ್ಯದವರು ಈ ಭರವಸೆಗೆ ವಿರೋಧವಾಗಿ ವರ್ತಿಸುತ್ತಿದ್ದಾರೆಂದು ವಾರ್ತೆ ಬಂದಿದೆ. ಇತ್ತೀಚೆಗೆ ಜಿಲ್ಲಾ ಅಧಿಕಾರಿಗಳಿಗೆ ಒಂದು ಸರ್ಕ್ಯುಲಾರನ್ನು ಕಳುಹಿಸಿಕೊಟ್ಟಿರುತ್ತದೆ. ಚುನಾವಣೆ ಕಾರ್ಯಕಲಾಪಗಳು ಅತಿ ಶಾಂತರೀತಿಯಿಂದಲೂ, ಅಹಿಂಸಾಧರ್ಮ ಸೂತ್ರವನ್ನನುಸರಿಸಿಯೂ ನಡೆಯುತ್ತಿದ್ದರೂ, ಈ ಸರ್ಕ್ಯುಲಾರು ಹೊರಟಿರುತ್ತದೆ. ಸ್ಥಿತಿಯು ಕೆಡದಂತೆ ಸೆಡಿಸನ್ ಆಕ್ಟನ್ನು ಅನುಸರಿಸಿ, ಜಿಲ್ಲಾ ಅಧಿಕಾರಿಗಳು ದಸ್ತಗಿರಿ ನಡೆಯಿಸಬಹುದೆಂದು ಈ ಸರ್ಕ್ಯುಲಾರಿನಲ್ಲಿದೆ. ಈ ತರದ ಸರ್ಕ್ಯುಲಾರಿನಿಂದ ಕಾಂಗ್ರೆಸ್‌ವಾಲರಲ್ಲದಿರುವ ಅಸೆಂಬ್ಲಿ ಸದಸ್ಯರಿಗೂ ಆಶ್ಚರ್ಯ ತರಪಿಸಿದೆ. ಆದರೂ ಕಾಂಗ್ರೆಸ್ಸಿಗೆ ನೂರಕ್ಕೆ ಮಿಕ್ಕಿದ ಸದಸ್ಯತನಗಳು ದೊರಕುವವೆಂಬ ಭರವಸೆಯಿದೆ.

ಈ ಕುರಿತು, ರಾಷ್ಟ್ರಪತಿ ಜವಾಹರಲಾಲ ನೆಹರುಗಳು ಒಂದು ಪ್ರಕಟಣೆಯನ್ನು ಮಾಡಿರುವರು. ಅದರಲ್ಲವರು ಸರಕಾರದವರ ವರ್ತನೆಯನ್ನು ತೀವ್ರವಾಗಿ ಖಂಡಿಸಿರುವರು. ಸೆಡಿಸನ್‌ನ ನೆಪದಿಂದ, ಕಾಂಗ್ರೆಸಿನ ಪರವಾಗಿ ಶಾಂತರೀತಿಯಲ್ಲಿ ಪ್ರಚಾರ ನಡೆಸುತ್ತಿರುವ ಅನೇಕ ಕಾಂಗ್ರೆಸ್ ವ್ಯಕ್ತಿಗಳು ಅಧಿಕಾರಿಗಳ ದಸ್ತಗಿರಿಗೊಳಗಾಗಿ, ಕೆಲವರು ಬಂಧಿಸಲ್ಪಟ್ಟ ವಾರ್ತೆಯು ಸಂಯುಕ್ತ ಪ್ರಾಂತ್ಯಗಳ ಅನೇಕ ಕಡೆಗಳಿಂದ ಬರುತ್ತಿದೆಯೆಂಬುದಾಗಿ ರಾಷ್ಟ್ರಪತಿಯವರ ಪ್ರಕಟಣೆಯಲ್ಲಿದೆ. ಕಾಂಗ್ರೆಸ್ಸಿಗೆ ಬಲವು ಅಧಿಕವಾಗಿರುವುದರಿಂದಲೂ, ಕಾಂಗ್ರೆಸ್ಸಿಗೆ ಭೂರಿಜನರ ಮೇಲೆ ಸಂಪೂರ್ಣ ಕೈ ದೊರಕಿದುದರಿಂದ ಸರಕಾರವು ಭೀತಿವಶವಾಗಿ ಹಾಗೆ ವರ್ತಿಸಿತೆಂದು ಶ್ರೀ ನೆಹರೂಗಳು ಈ ಪ್ರಕಟಣೆಯಲ್ಲಿ ಪ್ರಚುರಪಡಿಸಿರುವರು.

— —

ಯುರೋಪ್ಯದ ವಾತಾವರಣವು ಹೇಗಿದೆ?

ಹಿಟ್ಲರ ಮತ್ತು ಮುಸಲೀನಿಯ ಊಹನೆ ಪ್ರಕಾರ, ಸ್ಪೈಯಿನಿನಲ್ಲಿ ಪೆಸಿಯುಷ್ಟ ನಾಯಕನಾದ ಜನರಲ್ ಫ್ರೆಂಕೋವಿಗೆ ಇನ್ನೂ ಜಯ ಲಭಿಸಲಿಲ್ಲ. ಬದಲಾಗಿ, ಆತನಿಗೆ ಅನೇಕ ಅಪಜಯಗಳು ಒದಗಿರುತ್ತವೆ. ಆತನಿಗಾಗಿ ಯುದ್ಧಮಾಡಲು ಬಂದ ಜರ್ಮನ್ ಸಂಗ್ರಾಮ ಸ್ವಯಂಸೇವಕರು, ಸರಕಾರದ ಪೆಟ್ಟುಗಳನ್ನು ಸಹಿಸಲಾರದವರಾಗಿ, ಜನರಲ್ ಫ್ರೆಂಕೋನನ್ನು ತ್ಯಜಿಸಿಬಿಟ್ಟಿರುವರು. ರೋಮನ್ ಕೆಥೋಲಿಕರ ಸಹಾನುಭೂತಿಯು ದಂಗೆಖೋರರೊಡನಿರುವುದು. ರೋಮನ್ ಕೆಥೋಲಿಕ್ ಧರ್ಮಗುರುಗಳು ದಂಗೆಖೋರರನ್ನು ಅನೇಕ ಕಡೆಗಳಲ್ಲಿ ಹರಸಿ, ಕಳುಹಿಸಿಕೊಟ್ಟಿರುವರು!

ಸ್ಪೈಯಿನಲ್ಲಿ ಪೆಸಿಯುಷ್ಟ ಗತಿಯು ಹೀಗಾಗಲು ಹಿಟ್ಲರ ಮುಸಲೋನಿಯರು ತಮ್ಮ ವರ್ತನೆಯನ್ನು ಸ್ವಲ್ಪ ಮಟ್ಟಿಗೆ ಬದಲಾಯಿಸಿಬಿಟ್ಟಿರುವರು. ಸ್ಥಿತಿಯು ಕೆಟ್ಟಿತು, ಮೀರಿ ನಡೆದರೆ ಎಲ್ಲವೂ ಕೆಡುವುದು ಎಂಬುದಾಗಿ ಅವರ ಮನಸ್ಸಿನಲ್ಲಿ ಮೂಡಿದುದರಿಂದ, ಯುಕ್ತಿವಂತರಾದ ಈವರ್ರು ಈಗ ಶಾಂತಿಗಾಗಿ ಪ್ರೇರೇಪಿಸುತ್ತಿದ್ದಾರೆ. ತಮಗೆ ಅನುಕೂಲವಾಗುವ ವರೆಗೆ ಶಾಂತಿಯು ಮಾತ್ರ ಅವರಿಗೆ ಬೇಕಾಗಿದೆ.

ಮುಂದಕ್ಕೆ ಉಂಟಾಗಲಬಹುದಾದ ಮಹಾಯುದ್ಧದಲ್ಲಿ ಈ ಕೆಳಗೆ ಸೂಚಿಸಿದಂತೆ ಎರಡು ಪಕ್ಷಗಳಾಗುವವು. ಜರ್ಮನ್, ಇಟೆಲಿ, ಜಪಾನ್, ರಷ್ಯಾ, ಫ್ರಾನ್ಸ್, ಬ್ರಿಟನು ಮತ್ತು ಯುರೋಪ್ಯದ ಇತರ ಸಣ್ಣ ರಾಷ್ಟ್ರಗಳು.

ರಾಷ್ಟ್ರಪತಿಯವರ ಚುನಾವಣಾ ಪ್ರವಾಸ

ಅನೇಕ ದಿನಗಳಿಂದ ರಾಷ್ಟ್ರಪತಿಯವರು ಕಾಂಗ್ರೆಸ್ಸಿನ ಪರವಾಗಿ ಚುನಾವಣೆ ಪ್ರಚಾರ ಕಾರ್ಯವನ್ನು ಮಾಡಲು, ಸಮಸ್ತ ಭಾರತ ಪ್ರವಾಸ ಮಾಡುತ್ತಿದ್ದು, ತಮ್ಮಲ್ಲಿರುವ ಆ ಘನವಾದ ಶಕ್ತಿಯನ್ನು ಜನತೆಗೆ ತೋರಿಸುತ್ತಿರುವರು. ರೈಲು, ಮೋಟಾರುಗಳು ಬಹಳ ಮೆಲ್ಲನೆ ನಡೆಯುತ್ತವೆಂದು ಅವರಿಗೆ ತಂದುಬಂದು, ಅವರು ಅನೇಕ ಸಂದರ್ಭಗಳಲ್ಲಿ ವಿಮಾನವನ್ನು ಉಪಯೋಗಿಸುತ್ತಿರುವರು. ಈ ಪ್ರಚಾರಕಾರ್ಯದಲ್ಲಿ ಅವಿಶ್ರಾಂತವಾಗಿ ದಣಿಯುತ್ತಿದ್ದಾರೆ. ಮುಂಜಾನೆ ಎದ್ದವರು ಮಧ್ಯರಾತ್ರಿಯ ವರೆಗೆ ಪ್ರವಾಸ ಮಾಡುತ್ತಿದ್ದು ಅನೇಕಾನೇಕ ಭಾಷಣಗಳನ್ನು ಮಾಡುತ್ತಿದ್ದಾರೆ.

ರಾಷ್ಟ್ರಪತಿಗಳ ಪರಿಶ್ರಮಗಳ ಫಲವೇನಾಯಿತು? ಎಲ್ಲೆಲ್ಲೂ ಕಾಂಗ್ರೆಸ್ಸಿಗೆ ಇಷ್ಟರ ತನಕ ಮಹಾ ಜಯವು ಲಭಿಸಿರುತ್ತದೆ. ಅವರು ಹೋದೆಡೆಗಳಲ್ಲಿ ಅವರನ್ನು ಲಾಲಿಸಲು, ಜನರು ಲಕ್ಷಗಟ್ಟಳೆಯಲ್ಲಿ ಕೂಡಿಬಂದರು. ಕಾಂಗ್ರೆಸ್ ಜನಪ್ರಿಯವಾಯಿತು. ಕಾಂಗ್ರೆಸ್ಸಿನ ಕೀರ್ತಿಯು ತೇಜಸ್ಸು ಸಮಸ್ತ ಹಿಂದೂದೇಶದಲ್ಲೂ ಹರಡಿತು. ರಾಷ್ಟ್ರಪತಿಯವರ ಪ್ರವಾಸದಿಂದ ಕಾಂ. ಉಮೇದ್ವಾರರಿಗೆ ಮಹಾಜಯಗಳು ಲಭಿಸಿದುದು ಮಾತ್ರವಲ್ಲದೆ, ಹಿಂದೂದೇಶದ ಭೂರಿಜನರ ಮೇಲೆ ಕಾಂಗ್ರೆಸ್ಸಿನ ಪ್ರೇರಣೆಯು ಬಹಳ ಯಶಸ್ವಿಯಾಗಿ ನಡೆದಂತಾಗಿದೆ. ಕಾಂಗ್ರೆಸ್ಸಿನ ಕೀರ್ತಿಯು ಸಾಧಾರಣ ತರದ್ದೊ? ಅದರ ಬಲವು ಕಡಿಮೆ ತರದ್ದೊ? ನಮಗೆ ಸ್ವಾತಂತ್ರ್ಯ ಬೇಕು. ಅದು ನಮಗೆ ದೊರಕುವುದು ಮಹಾಸಂಸ್ಥೆಯಾದ ಕಾಂಗ್ರೆಸಿನಿಂದಲೇ ಎಂಬ ಮನೋಭಾವವು ಅಧಿಕ ಜನ ಭಾರತೀಯರಲ್ಲಿ ಉಂಟಾಗಿದೆಂದು ಕಳೆದ ವಾರ ಪ್ರಾರಂಭವಾದ ಪ್ರಾಂತೀಯ ಚುನಾವಣೆಗಳಿಂದ ವ್ಯಕ್ತವಾಗುತ್ತದೆ. ಜನರೆಲ್ಲ ಕಾಂಗ್ರೆಸ್ಸಿಗೆನೇ ಮತ್ತು ಕಾಂಗ್ರೆಸ್ಸಿನ ಸಹಾನುಭೂತಿಯುಳ್ಳ ಪಕ್ಷಗಳಿಗೆನೇ ತಮ್ಮ ಮತಗಳನ್ನೀಯುತ್ತಿದ್ದಾರೆ. ಈ ವಿಚಾರದಲ್ಲಿ ನಮ್ಮ ಜಿಲ್ಲೆಯು ನಾವೂ ಸ್ವಾತಂತ್ರ್ಯ ಹೋರಾಟದಲ್ಲಿದ್ದೇವೆಂದು ಸೂಚಿಸಲು ಮುಂದೆ ಬರುವರೆಂಬ ಭರವಸೆಯು ನಮಗಿದೆ.

ಲೆಂಕೆಶ್ಯಾರಿಗೆ ಇನ್ನೂ ತೃಪ್ತಿಯಾಗಲಿಲ್ಲ

ಕೆಲ ಸಮಯದ ಹಿಂದೆ, ಲೆಂಕಶಯರಿನ ವಸ್ತ್ರ ಒಡವೆಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲಾಯಿತು. ಅದರ ಪರಿಣಾಮವೇನಾಯಿತು? ಅನೇಕ ಅಭಾವಗಳಿಂದ ನರಳುತ್ತಿರುವ ಅತಿ ಮೆಲ್ಲನೆ ಪ್ರಗತಿಹೊಂದುತ್ತಿರುವ ಭಾರತೀಯ ಗಿರಣಿ ಕೈಗಾರಿಕೆಯ ಮೇಲೆ ಘನವಾದ ಹೊರೆಯಿಟ್ಟಂತಾಯಿತು. ಅನೇಕ ಪ್ರತಿಕೂಲತೆಗಳು ಅಂದು ಹೊರಟಿದ್ದರೂ, ಅವು ವ್ಯರ್ಥವಾದುವು.

ಆದರೆ, ಲೆಂಕಶಯರಿಗೆ ಇನ್ನೂ ತೃಪ್ತಿಯಾಗಲಿಲ್ಲ. ಅಲ್ಲಿ ರಾಶಿ ಬಿದ್ದಿರುವ ಕಲ್ಲಿದ್ದಲನ್ನು ಉಪಯೋಗಿಸಲು, ಅಸಂಖ್ಯಾತ ಜನರಿಗೆ ಉದ್ಯೋಗವನ್ನು ದೊರಕಿಸಲು, ಸಾಂಪತ್ತಿಕ ಪ್ರಗತಿಮಾಡಿಕೊಳ್ಳಲು ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ಕೊಡಬೇಕೆಂದು ಅಲ್ಲಿನ ಪಾರ್ಲಿಮೆಂಟ್ ಸದಸ್ಯರೊಬ್ಬರು ಸರಕಾರದೊಡನೆ ಕೇಳಿಕೊಂಡು, ಮೆಂಚೆಸ್ಟರ್ ಗಾರ್ಡಿಯನ ಪತ್ರಿಕೆಯಲ್ಲಿ ಒಂದು ಪತ್ರವನ್ನು ಬರೆದಿರುವರು. ಆದರೆ, ಹಿಂದೂದೇಶದ ಸಾಂಪತ್ತಿಕ ಸ್ಥಿತಿಯು ಉದ್ಧಾರವಾಗುವುದು ಬೇಡವೇ? ಅದರ ಬಡತನದ ಗೋಳು ನಿವಾರಣೆಯಾಗುವುದೆಂದು? ಭಾರತೀಯ ವ್ಯಾಪಾರ ಅಭಿವೃದ್ಧಿಯಾಗಬೇಡವೇ? ನಮ್ಮಲ್ಲಿನ ನಿರುದ್ಯೋಗ ನಿವಾರಣೆಯಾಗುವುದು ಬೇಡವೇ? ಕೈಗಾರಿಕಾ ದೇಶವಾಗಿ ಬಹಳ ಕೀರ್ತಿಯಿಂದ ಬಾಳಲು ಮಹಾ ಅನುಕೂಲಗಳುಳ್ಳ ಹಿಂದೂದೇಶವು ಜಗತ್ತಿನ ಇತರ ರಾಷ್ಟ್ರಗಳಂತೆ ಅಭ್ಯುದಯ ಹೊಂದಬಾರದೆ? ಹಸಿವೆಯಿಂದ ನರಳುವ ಮಿಲಿಯಗಡಿ ಜನರಿಗೆ ಅನ್ನ ಬೇಡವೆ? ನಮ್ಮನ್ನು ಸುಧಾರಿಸುವ ಒಂದೇ ಒಂದು ಸಂಸ್ಥೆ ಎಂದರೆ ಅದು ಕಾಂಗ್ರೆಸು. ಕಾಂಗ್ರೆಸು ಸಮಸ್ತ ಭಾರತೀಯರದು. ಕಾಂಗ್ರೆಸ್ಸು ಭಾರತೀಯ ಸಂಸ್ಥೆಯು. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಮತಕೊಟ್ಟು ತಮ್ಮ ತಮ್ಮ ಸ್ವಾತಂತ್ರ್ಯ ಸಾಧನೆಯನ್ನು ಮಾಡುವುದು ಪ್ರತಿಯೋರ್ವ ಭಾರತೀಯನ ಆದ್ಯ ಕರ್ತವ್ಯವಾಗಿರುತ್ತದೆ.

ಈ ತರದ ಏರ್ಪಾಡೊಂದು ನಮಗೂ ಬೇಕಲ್ಲವೆ?

ಜಗತ್ತಿನಲ್ಲೆಲ್ಲಾ ರಣಧ್ವನಿಯು ಹರಡಲು ಇತರ ಜನಾಂಗಗಳಂತೆ ಬ್ರಿಟನು, ಸಂಗ್ರಾಮ ಸಿದ್ಧತೆಯನ್ನು ಕೈಗೊಂಡಿತು. ಸೈನ್ಯಬಲವನ್ನು ವೃದ್ಧಿಪಡಿಸುವರೆ ಜವಾನರನ್ನು ಹುಡುಕಿತು. ಆದರೆ ಆರಿಸಿದವರಲ್ಲನೇಕರನ್ನು ಅಸಮರ್ಥರೆಂದು ಬಿಟ್ಟುಬಿಡಬೇಕಾಯಿತು. ಒಟ್ಟಾದ ಸೈನಿಕರ ಸಂಖ್ಯೆಯು, ಸಂಗ್ರಾಮ ಇಲಾಖೆಯ ಊಹನೆಗಿಂತ ಕಡಿಮೆಯಾಗಿ, ಸಂಗ್ರಾಮಾಧಿಕಾರಿಗಳು ಉಭಯಸಂಕಟಕ್ಕೆ ಒಳಗಾದರು. ಸೈನಿಕರಾಗುವ ಯೋಗ್ಯತೆಯು, ಕೆಲವೆ ಮಂದಿ ಆಂಗ್ಲೇಯರಲ್ಲಿರುವುದೆಂದೂ ಮಿಕ್ಕವರ ದೇಹ ಪ್ರಕೃತಿಯು ನೆಟ್ಟಗಾಗಿರುವುದಿಲ್ಲವೆಂದೂ ಸರಕಾರದ ಗೋಚರಕ್ಕೆ ಬಂದುಬಿಟ್ಟಿತು.

ಅದು ಈಗ ಹೊಸತೊಂದು ಯೋಜನೆಯನ್ನು ಹೊರಡಿಸಿದೆ. ಪ್ರತಿಯೋರ್ವ ತರುಣರಿಗೆ ಕಡ್ಡಾಯವಾಗಿ ದೇಹಾಭಿವೃದ್ಧಿ ಶಿಕ್ಷಣವು ಕೊಡಲಾಗುವ ಏರ್ಪಾಡು ಮಾಡಲಾಗುವುದು. ತಮ್ಮ ದೇಶದಲ್ಲಿ ದೃಢಕಾಯ ತರುಣರನ್ನು ಆರಿಸಲಾಗದ ಬ್ರಿಟಿಷ ಮಂತ್ರಿಗಳು, ಆಂಗ್ಲೇಯ ತರುಣನ ಆರೋಗ್ಯ, ಉದ್ಧಾರದ ಬಗ್ಗೆ ಹೆಚ್ಚಿನ ಉತ್ಸಾಹ ಪಡುತ್ತಿದ್ದಾರೆ. ನಾವು ಇನ್ನೂ ನಿರ್ಬಲರಾಗಬಹುದು, ಹಾಗಾಗಬಾರದು ಎಂಬ ಧ್ಯೇಯದಿಂದ ಬ್ರಿಟನಿನ ನ್ಯಾಶನಲ್ ಸರಕಾರವು ಶ್ರಮಪಡುತ್ತಿದೆ. ಬ್ರಿಟನಿನ ಎಲ್ಲ ಕಡೆಗಳಲ್ಲಿ (ಶಾಲೆ ಇತ್ಯಾದಿ ಸಂಸ್ಥೆಗಳಲ್ಲಿ) ಶಾರೀರಿಕ ಶಿಕ್ಷಣವು ಕಡ್ಡಾಯವಾಗಿ ನಡೆಯಿಸಿ, ಬ್ರಿಟನಿನ ಉದ್ಧಾರ ಮಾಡುವುದೆ ಮೇಲಿನ ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಯು ಈಗ ಪ್ರಥಮತಃ ಮೂರು ವರ್ಷಗಳಲ್ಲಿ ನಡೆಯಿಸಲು ಅದಕ್ಕಾಗಿ ೨ ಮಿಲಿಯ ಪವನುಗಳನ್ನು ವ್ಯಯಿಸಲು, ಅಲ್ಲದೆ ಮುಂದಕ್ಕೆ ವರ್ಷಂಪ್ರತಿ ಅದಕ್ಕಾಗಿ ಒಂದೂವರೆ ಲಕ್ಷ ಪವನುಗಳನ್ನು ವ್ಯಯಿಸಲು ಸರಕಾರವು ನಿರ್ಣಯ ಮಾಡಿರುತ್ತದೆ.

ಇಂಗ್ಲಾಂಡಿನ ತರುಣರ ಕುರಿತು, ಸಂಗ್ರಾಮಯೋಗ್ಯತೆಯ ಕುರಿತು ಇಷ್ಟು ವ್ಯಾಕುಲತೆ ಹೊಂದಿಕೊಂಡು ಶ್ರಮವಹಿಸಿದ ನೇಶನಲ್ ಸರಕಾರವು ಹಿಂದೂದೇಶದ ಕುರಿತು, ಆ ವಿಷಯ ಯಾವತ್ತೂ ತರದ ಗಣನೆ ಮಾಡಲು ಸಿದ್ಧವಿಲ್ಲ. ಹಿಂದೂದೇಶಕ್ಕೇನು ವ್ಯಂಗಗಳಿಲ್ಲವೆ? ಒಂದು ದಿಕ್ಕಿನಲ್ಲಿ ಅರಬೀಯರು ಇನ್ನೊಂದು ದಿಕ್ಕಿನಲ್ಲಿ ಜಪಾನೀಯರು ದಂಡೆತ್ತಿ ಬಂದರೆ, ಭಾರತೀಯರು ಹೇಗೆ ರಕ್ಷಣೆಮಾಡಿಕೊಳ್ಳಬೇಕು. ಭಾರತೀಯ ತರುಣನಿಗೆ ಆತನ ದೇಶ ರಕ್ಷಣೆಗಾಗಿ ಯಾವ ತರದ ಸಂಗ್ರಾಮ ತರಬೇತು ಕೊಡಲಾಗುತ್ತಿದೆ. ಒಂದಾನೊಂದು ಕಾಲದಲ್ಲಿ ಶೂರರೆಂದೆನಿಸಿಕೊಂಡ ಭಾರತೀಯರು ಈಗ ನಿರ್ಬಲರಾಗಿ, ಏನೂ ಮಾಡದವರಾಗಿರುತ್ತಾರೆ. ಭಾರತೀಯರಲ್ಲಿರುವ ಸಂಗ್ರಾಮಶೂರತೆ, ಎಂದೊ ಮಾಯವಾಗಿರುತ್ತದೆ. ಅನೇಕರು ಹಿಂದೂದೇಶದ ಮೇಲೆ ಹೊಂಚು ಹಾಕಿಕೊಂಡಿರುವಾಗ, ನಮ್ಮ ಸ್ಥಿತಿಯು ಹೀಗಿರಬಹುದೆ?

ನಾವು ಇದಿನ ಈ ಸಂಗ್ರಾಮ ಜಗತ್ತಿನಲ್ಲಿ ಸುರಕ್ಷಿತರಾಗಿ ಬಾಳಬೇಕಾದರೆ, ನಮ್ಮ ತರುಣರು ಸಂಗ್ರಾಮಚತುರರಾಗಬೇಕು, ನಮ್ಮಲ್ಲಿ ಆಧುನಿಕ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳು ರಚನೆಯಾಗಬೇಕು, ವಿಮಾನ ಮೋಟಾರ ಇತ್ಯಾದಿಗಳನ್ನು ತಯಾರಿಸ [illegible]ಗಳಾಗಬೇಕು, ಹಿಂದೂದೇಶದ ಕರಾವಳಿಯಲ್ಲಿ ಉತ್ತಮತರದ ಯುದ್ಧನೌಕೆಗಳ ಪಂಕ್ತಿ. ಹಿಂದೂದೇಶವನ್ನು ಅನ್ಯರಿಂದ ರಕ್ಷಿಸುವರೆ, ಆಧುನಿಕ ಯುದ್ಧನೌಕೆಗಳನ್ನು ತಯಾರಿಸುವ ಸಂಸ್ಥೆಗಳು ಮಾತ್ರ ಬೇಕು. ಇವುಗಳಿಂದ ಹಿಂದೂದೇಶಕ್ಕೆ ಈ ಜಗತ್ತಿನಲ್ಲಿ ಯೋಗ್ಯಸ್ಥಾನವು ದೊರಕುವುದಲ್ಲದೆ ಮೇಲಿನ ಸಂಗಾವ ಕೈಗಾರಿಕೆಗಳಿಂದ ಹಿಂದೂದೇಶದಲ್ಲಿ ಹರಡಿದ ದುರ್ಭಿಕ್ಷವನ್ನು ಹೆಚ್ಚಿನ ಮಟ್ಟಿಗೆ ಸುಧಾರಿಸಬಹುದು.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಯರವರ



ಬಾಲಭಾಸ್ಕರ.

(ಗವರ್ನ್‌ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ದಕ್ಷಿಣ ಕನ್ನಡದ ಏಜಂಟರು.—ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಅನುಕ್ರಮಣಿಕೆ

ಕಾಂಗ್ರೆಸ್ ಬಗ್ಗೆ ... ಕೊಡಬೇಕು	೬
... ನಡಾವಳಿಗಳು	೧೧
ಅಗ್ರಲೇಖ	
ವಿಮಾ ಕಾನೂನು	೧೦
ಸ್ಫುಟವಿಚಾರಗಳು	
ವರ್ತಮಾನ ಸಂಗ್ರಹ	
ಜರ್ಮನ್ ಜಾಪಾನ್ ಒಪ್ಪಂದ	೩
ಕಾಂಗ್ರೆಸ್ಸಿನ ಬಲವು	೯
ಬೊಬ್ಬಿಲಿ ರಾಜರ ಸಂಸ್ಥಾನದಲ್ಲಿ	೮
ನಮ್ಮ ವೋಟು ಯಾರಿಗೆ	೧೪
ಗ್ರಾಮೋದ್ಧಾರ	೧೮

ತಾ೨೬ ನೇ ಶುಕ್ರವಾರ ಫೆಬ್ರವರಿ ೧೯೩೭

ಸ್ವದೇಶಾಭಿಮಾನಿ.

ವಿಮಾ ಕಾನೂನು

ಬಹಳ ಹಿಂದಿನಿಂದಲೂ ಒಂದು ವಿಮಾ ಕಾನೂನು ಆಗುವುದಾಗಿಯೂ, (ಅದು ಆಗುವುದುತ್ತಮವೆಂದು ಅಭಿಪ್ರಾಯವು ಪ್ರಕಟವಾದಂತೆ) ಅದರ ಮಸೂದೆಯು ಎಸೆಂಬ್ಲಿಯ ಮುಂದೆ ಬಂದಿದೆಯೆಂದೂ ಕೇಳಿರುವ ನಮಗೆ, ಅದೀಗ ಸಿಲೆಕ್ಟ್ ಕಮಿಟಿಯ ತಿದ್ದುಪಡಿಗಳಿಂದ ತೀವ್ರ ಸುಧಾರಣೆಗಳನ್ನು ಹೊಂದುತ್ತ ಹೊರಬಿದ್ದಿದೆಯಾಗಿಯೂ ತಿಳಿದುಬರುತ್ತಿದೆ

ಇನ್ಶೂರೆನ್ಸ್ ಕಂಪೆನಿಗಳು ಎಲ್ಲೆಲ್ಲಿಯೂ ಹಲವು ರೀತಿಯಲ್ಲಿ ಉಂಟಾಗುತ್ತಲಿರುವ ಕಾರಣ, ಉತ್ತಮವಾಗಿ ಹಿತಕರವಾಗಿರುವ ಕಂಪೆನಿಗಳಿಗೆ ಆತಂಕವೂ, ಇಂತಹ ಹೊಸ ರೀತಿಯುವನ್ನು ನಂಬಿರುವವರಿಗೆ ಮೋಸವೂ ಉಂಟಾಗುವುದನ್ನು ಸರಕಾರವು ಪ್ರಜೆಗಳ ಪ್ರತಿನಿಧಿಗಳಿಂದಲೇ ತಿಳಿದುಕೊಂಡಿದೆ ಸರಕಾರವೇ ವಿಮಾಕಾರ್ಯವನ್ನು ಕೈಕೊಂಡಿದ್ದರೆ ಅಷ್ಟು ಆಕ್ಷೇಪಗಳಾವುವೂ ಉಂಟಾಗುತ್ತಿರಲಿಲ್ಲ ಖಾಸಗಿಯಾಗಿ ಕಂಪೆನಿಗಳು ಉಂಟಾಗುವಾಗ ಅವುಗಳೊಳಗೆ ಸ್ಪರ್ಧೆಯುಂಟಾಗಿ, ಅದರಿಂದ ಅಪವ್ಯಯ ಹೆಚ್ಚುವುದು, ಅನಗತ್ಯವಾದ ಕಂಪೆನಿಗಳು ಉಂಟಾಗುವುವು ಸರಕಾರವೇ ಮುಂದೆ ಬಂದು ವಿಮಾಕಾರ್ಯವನ್ನೆಲ್ಲ ಕೈಕೊಂಡರೆ, ಲಾಭವು ಇತರ ದೇಶಹಿತ ಕಾರ್ಯಗಳಿಗೆ ಸಿಗುವುದೆಂಬುದೂ ಒಂದು ಅಭಿಪ್ರಾಯ ಆದರೆ ಇಲ್ಲಿ ಎಂತೂ ಹಲವು ನೂರು ವಿಮಾ ಕಂಪೆನಿಗಳಿರುವ ಕಾರಣ, ಇವು ನ್ಯಾಯವಾದ ರೀತಿಯಲ್ಲಿ ಕೆಲಸಮಾಡುತ್ತ, ಹಣಕ್ಕೆ ತಕ್ಕ ಭದ್ರತೆ ದೊರೆವಂತೆ, ವಿಮೆಯಲ್ಲಿ ವಿಶ್ವಾಸ ಉಳಿಯುವಂತೆ ಬಾಳಬೇಕೆಂದೇ ಸರಕಾರವು ನಿಯಮಗಳನ್ನು ಮಾಡಬೇಕಾಗಿ ಬಂದಿದೆ

ಹೊಸ ಮಸೂದೆಯಲ್ಲಿ ಐದು ತಿದ್ದುಪಡಿಗಳಿವೆ ಪ್ರತಿಯೊಂದು ವಿಮಾಸಂಘವು ವಿಮಾ ಸುಪರಿಂಟೆಂಡೆಂಟರಿಂದ ಸರ್ಟಿಫಿಕೇಟನ್ನು ಪಡೆಯಬೇಕಾಗಿದೆ ಇಂತಹ ಸರ್ಟಿಫಿಕೇಟುಗಳು ಇನ್ನುಮುಂದೆ ಸಿಗಬೇಕಾದರೆ, ಅಂತಹ ಕಂಪೆನಿಗೆ ೫೦೦೦೦ ರೂಪಾಯಿಗಳ ಭಾಂಡವಲವಾದರೂ ಇರಬೇಕಾಗಿದೆ ವಿಮೆಯ ತರಗತಿಗಳನ್ನು (ವಿಧ) ವಿಭಾಗಿಸಿ, ಪ್ರತಿಯೊಂದರ ಲೆಕ್ಕವನ್ನು ಪ್ರತ್ಯೇಕ ಬರೆದಿಡಬೇಕು ಪ್ರತಿಯೊಂದು ವಿಧದ ವಿಮೆಯ ಸಲುವಾಗಿ, ಪ್ರಥಮದಲ್ಲಿ ತೆರಬೇಕಾಗಿರುವ ಠೇವಣಾತಿಯ ಬೇರೆ, ಜೀವವಿಮೆಗಾದರೆ ಎರಡು ಲಕ್ಷ ರೂ ಕನಿಷ್ಠಮಿತಿ ಈ ವರ್ಷದ ಜನವರಿಯಿಂದ ಸ್ಥಾಪನೆಹೊಂದುವ ಹೊಸ ಕಂಪೆನಿಗಳು, ಈ ಮೊಬಲಗಿನ ಅರೆವಾಸಿಯನ್ನು ರಿಜಿಸ್ಟ್ರೇಶನ್ ಆಗುವ ಮೊದಲೂ, ಮುಂದಣ ಎರಡು ವರ್ಷಗಳೊಳಗೆ ಎರಡು ಸಮಾಂಶಗಳಲ್ಲಿ ಉಳಿದುದನ್ನು ತೆರಬೇಕಾಗಿದೆ ಹಳೆಯ ಕಂಪೆನಿಗಳು ಕಾಲಂಶವನ್ನು ರಿಜಿಸ್ಟ್ರೇಶನಿನ ಮೊದಲೂ ಉಳಿದುದನ್ನು ಗಳಿಕೆಯಿಂದ ಐದನೆಯ ವರ್ಷದೊಳಗೂ ಠೇವಣಾತಿ ಇಡಬೇಕಾಗಿದೆ

ವಿಮಾಕಂಪೆನಿಯು ಜೀವವಿಮೆಗಾಗಿ ಪಡೆವ ಪ್ರೀಮಿಯುಮಗಳಿಂದ ಕರಾರಿನಂತೆ ತೆತ್ತ ವಿಮಾಮೊಬಲಗನ್ನು ವಜಾಮಾಡಿ ಉಳಿದ ಹಣವನ್ನು ಲೈಫ್ ಎಶ್ಯೂರೆನ್ಸ್ ಫಂಡಿಗೆ ಜಮಾ ಮಾಡಬೇಕಾಗಿದೆ. ಈ ಮೊಬಲಗನ್ನು ಜೀವವಿಮೆಗೇ ಬಳಸಬೇಕು. ಪ್ರತಿಯೊಂದು ಈ ದೇಶದ ಇನ್ಶೂರೆನ್ಸ್ ಕಂಪೆನಿಯ ಜಮಾಬಾಬ್ತು ಹಣದ ಮೂರರಲ್ಲೊಂದು ಅಂಶವನ್ನು ಸರಕಾರದ ಖಜಾನೆಯಲ್ಲಿ ಠೇವಣಾತಿಯಾಗಿಡಬೇಕಾಗಿದೆ (ಸೆಕ್ಯೂರಿಟಿಗಳಲ್ಲಿ). ಈ ದೇಶದಲ್ಲಿ ಕೆಲಸಮಾಡುವ ಇತರ ದೇಶಗಳ ವಿಮಾ ಕಂಪೆನಿಗಳು ಪ್ರೀಮಿಯಮ್ ಮೊಬಲಗಿನ ಮೂರರಲ್ಲೊಂದು ಅಂಶವನ್ನು ಇದೇ ರೀತಿ ಠೇವಣಾತಿಯಲ್ಲಿಡಬೇಕಾಗಿದೆ

ಈ ಕಾನೂನು ಜ್ಯಾರಿಗೆ ಬಂದ ತರುವಾಯ ಮೆನೇಜಿಂಗ್ ಏಜಂಟರನ್ನು ನೇಮಿಸಬಾರದು ಹಾಲಿ ಇರುವ ಕಂಪೆನಿಗಳ ಮೆನೆಜಿಂಗ್ ಏಜಂಟರುಗಳನ್ನು ಇನ್ನು ಮೂರು ವರ್ಷಗಳಲ್ಲಿ ನಿವೃತ್ತಿಗೊಳಿಸಬೇಕು, ಹೀಗೆ ನಿವೃತ್ತರಾಗುವವರಿಗೆ ಏನೂ ಸಲ್ಲತಕ್ಕದ್ದಿಲ್ಲ ಇನ್ಶೂರೆನ್ಸ್ ಏಜಂಟರಾಗಿ ವೃತ್ತಿ ನಡಿಸುವವರಿಗೆ ಲೈಸೆನ್ಸ್ ಕೊಡುವ ಕ್ರಮವನ್ನು ಈ ಮಸೂದೆಯಲ್ಲಿ ಸೂಚಿಸಲಾಗಿದೆ ಅವರಿಗೆ ಜೀವವಿಮೆಯ ಸಲುವಾಗಿ ಮೊದಲನೆ ವರ್ಷದ ಪ್ರೀಮಿಯಮ್ ಹಣದಲ್ಲಿ ಸೇಕಡಾ ೪೦ ಮತ್ತು ನಂತರ ಸೇಕಡಾ ೫ರಂತೆ ಕಮಿಷನ್ ಸಿಗುವುದು, ಇತರ ಬಗೆಯ ವಿಮೆಗಳಿಗಾದಲ್ಲಿ ಪ್ರೀಮಿಯಮಿನ ಸೇಕಡಾ ೨೫ ಸಿಗುವುದು

ವಿಮಾಕಂಪೆನಿಗಳ ಮೇಲ್ವಿಚಾರವು ಸರಿಯಾಗುವಂತೆ ವಿಮಾ ಸುಪರಿಂಟೆಂಡೆಂಟರು ನೇಮಕಹೊಂದುವರು ಇವರಿಗೆ ವಿಮಾಕಂಪನಿಗಳ (ವಿಮಾಮಾಡುವವರ) ಬೇಕಾದ ಲೆಕ್ಕಗಳನ್ನು ತೋರಿಸಬೇಕು ಇವರ ಕೊಡುವ ಲೆಕ್ಕಗಳಲ್ಲಿ ಅಂಕಿಸಂಖ್ಯೆಗಳನ್ನು ಸುಪರಿಂಟೆಂಡೆಂಟರು ಪುನಃ ತಖ್ತೆ ಮಾಡಿಸಬಹುದು ಕಂಪನಿಯ ಪಾಲುಗಾರರಲ್ಲಿ ಹತ್ತರಲ್ಲೊಂದು ಸಂಖ್ಯೆಯವರು, ಅಥವಾ ೨೦೦೦೦ ರೂಪಾಯಿಗೆ ಕಡಿಮೆಯಾಗದ ಮೊಬಲಗಿನ ವಿಮೆ ಮಾಡಿದ ಒಟ್ಟು ೫೦ ಮಂದಿಯಾದರೂ ಪೋಲಿಸಿದಾರರು ಅರ್ಜಿಮಾಡಿದಲ್ಲಿ, ಕಂಪೆನಿಯ ಲೆಕ್ಕಪತ್ರಗಳ ಸಂಪೂರ್ಣ ತನಿಖೆಯನ್ನು ಸುಪರಿಂಟೆಂಡೆಂಟರು ಮಾಡಬೇಕು

ಇವೇ ಕೆಲನಿಯಮಗಳು ಹೆಚ್ಚಿನ ಪ್ರಯೋಜನ ಕೊಡಬಹುದು ಆದರೆ, ಇನ್ನು ಕೆಲವು ನಿಯಮಗಳಲ್ಲಿ ಮಹಾ ಪ್ರಮಾದಗಳಿರುವಂತೆ ತೋರುತ್ತಿದೆ ಶಹರುಗಳಲ್ಲಿ ಕೆಲವೇ ಶ್ರೀಮಂತರಿಂದ ಸ್ಥಾಪಿತವಾದ ಕಂಪೆನಿಗಳಿಗೇ ಈ ನಿಯಮಗಳಿಂದ ಸಹಾಯವಿರುವಂತಿದೆ ಹೊರತು, ಬೇರೆಯಿಲ್ಲ ಸರಕಾರದಲ್ಲಿ ಹಣ ಠೇವಣಾತಿ ಇಟ್ಟುದರ ಮೇಲೆ ಕಂಪೆನಿಯ ಭದ್ರತೆ ನಿಂತಿರೆಂದರೆ ಏನೆನ್ನಬಹುದು? ಮ್ಯೂಚುವಲ್ ಸೊಸೈಟಿಗಳಿಗೆ ಈ ಮಸೂದೆಯಿಂದ ಬಾಧಕವಿದೆ, ಇಂತಹದನ್ನು ಸ್ಥಾಪಿಸುವುದೇ ಕಷ್ಟ ಲಾಭವೆಲ್ಲ ಈ ಕಂಪೆನಿಗಳಲ್ಲಿ ಹಂಚಿ ಹೋಗುವ ಕಾರಣ, ಠೇವಣಾತಿಗಳನ್ನು ಹೆಚ್ಚಿಸುತ್ತ ಹೇಗೆ ಬರಬೇಕು? ಪಾಲುಗಾರರಿಗೆ ಸಿಗುವ ಡಿವಿಡೆಂಟುಗಳ ಮೇಲೆ ಮಿತಿಯಿಲ್ಲವೇಕೆ? ಚಿಕ್ಕ ವಿಸ್ತೀರ್ಣದೊಳಗೆ ಕೆಲಸಮಾಡುವ ಸಂಘಗಳಿಗೆ, ವಾರ್ಷಿಕ ಆಯದ ಸೇಕಡ ೫೦ರಷ್ಟು ಠೇವಣಾತಿ ಇಡಲು ನಿಯಮವಿದ್ದರೆ, ನಿಯಮಿತ ಠೇವಣಾತಿ ಇಡುವರೆ ಇವುಗಳಿಗೆ ಅವಧಿ ದೊರೆಯುತ್ತಿತ್ತು ಪೋಲಿಸಿದಾರರ ಪ್ರತಿನಿಧಿ ಡೈರೆಕ್ಟರರ ವಿಚಾರವೂ ಈ ಮಸೂದೆಯಲ್ಲಿಲ್ಲ ಪ್ರೀಮಿಯಮ್‌ಗಳ ಕನಿಷ್ಠ ಮಿತಿಯ ಒಂದು ತಖ್ತೆಯನ್ನು ಸರಕಾರವೇ ನಿರ್ಧರಿಸಿದರೆ ಸ್ಪರ್ಧೆಯಿಂದ ಈ ಕಂಪೆನಿಗಳು ಸಿಕ್ಕಂತೆ ಪಟ್ಟಿಗಳನ್ನು ಪ್ರಕಟಿಸಲು ಆಸ್ಪದವಿರುತ್ತಿರಲಿಲ್ಲ

ವಿಮಾಕರಾರುಳ್ಳವರು ಈ ಮಸೂದೆಯನ್ನು ಓದಿ ನೋಡಿ, ಅಭಿಪ್ರಾಯಗಳನ್ನು ಸರಕಾರಕ್ಕೆ ಪ್ರಕಟಿಸುವುದುತ್ತಮ.

ಸ್ಫುಟವಿಚಾರಗಳು

ಜನಸಂಖ್ಯೆ

ನಮ್ಮ ದೇಶದ ಜನಸಂಖ್ಯೆ ಈಗ 35 ಕೋಟಿಯಾಗಿದ್ದು, ಇನ್ನು ಆರು ವರ್ಷಗಳಲ್ಲಿ ಸುಮಾರು 40 ಕೋಟಿಯಾಗಬಹುದೆಂದು ಅಂದಾಜು ಹಾಕುವರು. ಜನಸಂಖ್ಯೆಯ ಹೆಚ್ಚುಗೆಗೂ ಜನಜೀವನದ ರೀತಿಗೂ ಸಂಬಂಧವಿರುವುದರಿಂದ ಜನಸಂಖ್ಯೆ ಹೆಚ್ಚುತ್ತಲೇ ಜನಜೀವನದ ರೀತಿಯು ಕುಂದುತ್ತ ಬಂದು, ದುರ್ಭಾಗ್ಯವು ಹೆಚ್ಚುವುದಾಗಿ ಹೇಳುವವರುಂಟು ಈಗಣ ವಿದ್ಯಮಾನಗಳಲ್ಲಿ, ಬೆಳೆವ ಜನಸಂಖ್ಯೆಗೆ ಸಾಕಷ್ಟು ಅನ್ನಾಶ್ರಯವಿರುವುದಿಲ್ಲವೆಂದೂ ಬೋಧಿಸುತ್ತಿರುವರು ಜನರ ಸಂಪತ್ತು ಹೆಚ್ಚುತ್ತಿಲ್ಲವೆಂದೇ ಹೇಳಬೇಕಾಗಿದೆ ದಿನ ಹೋಗುವಂತೆ, ದೇಶವೇ ಬಡವಾಗುತ್ತ ಬರುತ್ತದೆ ಆದರೆ ಇಲ್ಲಿನ ಜಮೀನುಗಳನ್ನು ಸರಿಯಾಗಿ ಬಳಸುವವರಿದ್ದರೆ ಎಲ್ಲರೂ ಬಲು ಚೆನ್ನಾಗಿ ಸಂಭ್ರಮದಿಂದ ಜೀವನ ಮಾಡಲು ಆತಂಕಗಳಾವುವೂ ಇರಲಾರವೆಂದೂ ಎನ್ನುತ್ತಿದ್ದಾರೆ ಮುಖ್ಯವಾಗಿ ಇಲ್ಲಿನ ಉತ್ಪನ್ನಗಳು ಇಲ್ಲಿನ ನಿವಾಸಿಗಳಿಗೇ ಸಾಕಾಗವಷ್ಟು ಸಿಗದಿರುವ ಈ ಕಾಲದಲ್ಲಿ, ಜನರು ಅದನ್ನು ಕೊಂಡುಕೊಳ್ಳಲೂ ದಾಸ್ತಾನು ಇಡಲೂ ಅನುಕೂಲತೆ ಕಾಣದಿರುವಲ್ಲಿ, ನಮ್ಮ ಸಾಂಪತ್ತಿಕ ಮತ್ತು ರಾಜಕೀಯ ಪರಿಸ್ಥಿತಿಗಳು ಬದಲಾಗದೆ ದೇಶವು ಅಭ್ಯುದಯ ಹೊಂದವಂತಿಲ್ಲವೆಂದು ಪಬ್ಲಿಕ್ ಹೆಲ್ತ್ ಕಮಿಶನರರ ರಿಪೋರ್ಟನ್ನು ವಿಮರ್ಶಿಸಿದರೆ ತಿಳಿದುಬರುವಂತಿದೆ

ವ್ಯಾಪಾರ

1935–36ರಲ್ಲಿ ಹಿಂದೀಯರ ವ್ಯಾಪಾರವು ಅಭಿವೃದ್ಧಿ ಹೊಂದಿದೆ ಎನ್ನಬಹುದು ಸಾಮಾನುಗಳ ಬೆಲೆ ಏರಿದೆ ಆಮದಾಗುವ ಸರಕುಗಳ ಬೆಲೆ ಇಳಿದಿದೆ ಚಿನ್ನವು ಬಹಳವಾಗಿ ಪರದೇಶಗಳಿಗೆ ಹೋಗುವ ಕಾರಣವೇ ದೇಶದ ವ್ಯಾಪಾರಕ್ಕೆ ಸುಸ್ಥಿತಿಯೊದಗಿದೆ ಎಂದು ಸರಕಾರದ ರಿಪೋರ್ಟುಗಳು ಎನ್ನುತ್ತಿವೆ ಮುಖ್ಯ ಜಿನಸು (ಇಲ್ಲಿಂದ ಪರದೇಶಗಳಿಗೆ ರಫ್ತಾಗುವವುಗಳಲ್ಲಿ) ಹತ್ತಿಯು ಹಿಂದಣ ವರ್ಷಕ್ಕಿಂತ ಸ್ವಲ್ಪ ಕಡಿಮೆ ಯಾಗಿಯೇ ಈ ವರ್ಷ ರಫ್ತಾಗಿದೆ ಆದರೆ ಸಣಬು ನಾರು ಹೆಚ್ಚಾಗಿ ರಫ್ತಾಗಿದೆ, ಸರಕಾರವು ಇದರ ಬೆಲೆ ಕಡಿಮೆಯಾಗುವಂತೆ ನಿಯಂತ್ರಿಸಿದುದರಿಂದ ಬೆಲೆಯೂ ಚೆನ್ನಾಗಿ ದೊರೆತಿದೆ ನಮ್ಮ ದೇಶದ ಕೈಗಾರಿಕೆಗಳಲ್ಲಿ ನೇಯಿಗೆಯು ಹೆಚ್ಚಿಗೆ ಪ್ರಾಬಲ್ಯ ಹೊಂದಿರುವುದು ಗಿರಣಿಗಾರರಿಗೆ ಸರಕಾರವು ಸಂರಕ್ಷಕ ತೆರಿಗೆಗಳನ್ನು ವಿಧಿಸಿದ ದೆಸೆಯಿಂದ ಲಾಭವು ಹೆಚ್ಚು ಹೆಚ್ಚಾಗಿ ಕೂಡಿಬರುತ್ತಿದೆ ಆದರೆ, ಕೆಲಸಗಾರರಿಗಾಗಲಿ, ಗಿರಾಕಿಗಳಿಗಾಗಲಿ ಹತ್ತಿ ಬೇಸಾಯಗಾರರಿಗಾಗಲಿ ಎಷ್ಟು ಲಾಭ ದೊರೆತಂತೆ ತಿಳಿದುಬರುವುದಿಲ್ಲ ಎಲ್ಲ ಪ್ರಪಂಚದಲ್ಲೆಲ್ಲ ಯುದ್ಧ ಸರಂಜಾಮುಗಳು ಹೆಚ್ಚಾಗುತ್ತ ಬಂದುದರಿಂದ, ಇಲ್ಲಿನ ಕಬ್ಬಿಣ ಉಕ್ಕುಗಳ ಕೈಗಾರಿಕೆಗೆ ವಿಶೇಷ ಪ್ರೋತ್ಸಾಹ ಉಂಟು

ಪ್ರಪಂಚದ ಉತ್ಪನ್ನಗಳನ್ನು

ಮುಖ್ಯ ದೇಶಗಳು ಹಂಚಿಕೊಳ್ಳುವಂತೆ ಉಪಾಯಗಳನ್ನು ಕಂಡುಹಿಡಿದು ಒಂದು ಕರಾರು ಮಾಡಿಕೊಂಡರೆ ಮತ್ತೆ ಯುದ್ಧಕ್ಕೆ ಆಸ್ಪದವಿರಲಾರದೆಂದು ಇಂಗ್ಲೆಂಡಿನಲ್ಲಿ ಸರ್ ಸಾಮುವೇಲ್ ಹೋರರು ಸಾರುತ್ತಿದ್ದಾರೆ ಸರಿಯಾಗಿ ಉತ್ಪನ್ನಗಳನ್ನು ಹಂಚಿಕೊಂಡು ಒಂದೇ ಕುಟುಂಬದವರಂತೆ ಸ್ಪರ್ಧೆಗೆ ಅವಕಾಶವಿಲ್ಲದೆ ನೆಮ್ಮದಿಯಾಗಿ ಬಾಳಬೇಕೆಂಬ ಆಸೆ ಇದಲ್ಲ ತಮತಮಗೆ ಬೇಕಾಗುವ ಸರಕಿನಲ್ಲಿ ಆಗುವಷ್ಟು ಹೆಚ್ಚಿನ ಭಾಗವನ್ನು ಬದಲಿಗೆ ಕೂಡಿಸಿಕೊಂಡು, ಕೆಲವರು ಕಡಿಮೆ ಭಾಗ್ಯವುಳ್ಳವರು ಹೊಟ್ಟೆಕಿಚ್ಚು ತೋರಿಸದಂತೆ ಅವರಿಗೂ ಅಲ್ಪಸ್ವಲ್ಪ ವಿಭಾಗಿಸಿಕೊಡುವುದೆಂಬುದೇ ಈ ಸಂಚಿಯ ಒಳಗುಟ್ಟು ಆದರೆ, ಯಾವ ದೇಶಗಳಲ್ಲಿ ಈ ಉತ್ಪನ್ನಗಳಾಗುತ್ತಿವೆಯೋ ಆ ದೇಶವಾಸಿಗಳ ಅಭಿಪ್ರಾಯಗಳನ್ನೇನೂ ಯಾರೂ ಕೇಳುವಂತಿಲ್ಲ ಬಲಿಷ್ಠರು ಬೇಕಾದಷ್ಟನ್ನು ಕೂಡಿಸಿಕೊಂಡು, ಅವರಷ್ಟು ಬಲಶಾಲಿಗಳಲ್ಲದವರಿಗೆ ಮನಸ್ಸಮಾಧಾನ ಪಡಿಸಿದರೆ ಸಾಕೆಂದು ಈ ಅಭಿಪ್ರಾಯವಿದೆ ಆದರೆ ಜರ್ಮನಿಯೂ ಇಟಲಿಯೂ ಈ ಉಪಾಯಕ್ಕೆ ಸಹಿ ಹಾಕುವುದಿಲ್ಲ ಇತರ ಬಲಿಷ್ಠರು ರಾಜ್ಯಗಳನ್ನು ಗೆದ್ದುಕೊಂಡು, ತಾವೂ ಏಕೆ ವಶಪಡಿಸಿಕೊಳ್ಳಲಾರದು ಎಂದೇ ಇವು ಭಾವಿಸಿವೆ ಇದರ ಫಲವಾಗಿ ತಮ್ಮ ವಸಾಹತುಗಳನ್ನು ತಮಗೆ ಪುನಃ ಕೊಡಬೇಕಾಗಿ ಜರ್ಮನಿಯು ಈ ವಾರದಲ್ಲಿ ಹಿಟ್ಲರನ ಮೂಲಕ ಭಾಷಣ ಕೊಡಬಹುದು

ಭಾರತವರ್ಷದ ಉದ್ಧಾರಕ್ಕಾಗಿ

ಪ್ರತಿಯೊಂದು ವಿಚಾರಕ್ಕೂ ವಿದೇಶೀಯ ನಿಪುಣರನ್ನೇ ಕರೆತರುವುದೆಂದರೇನ ಎಂಬುದನ್ನು ಎಸೆಂಬ್ಲಿಯಲಿ ಮೆಂಬರರು ಸಮ್ಮತಿ ಕಡಿಮೆ ... ಈ ಅಧಿವೇಶನದಲ್ಲಿ ಸಾಕಷ್ಟು ಬಲವಾಗಿ ಚರ್ಚಿಸಿದರು ರೈತರುಗಳಿಂದ ಪ್ರತಿವರ್ಷವೂ ನಷ್ಟವೇ ಹೆಚ್ಚುತ್ತ ಬರುವುದೇಕೆಂದು ವಿಮರ್ಶಿಸಲು ಬ್ರಿಟಿಷರೇ ಯಾಕೆ ಬೇಕು ... ದಕ್ಷಿಣಾಪ್ರದ ... ಪುಣರೆ ಒಬ್ಬರನ್ನು ಸರಕಾರವು ಕರೆಸಿದೆ ಒಬ್ಬ ಹಿಂದೀ ಗೃಹಸ್ಥ ಈ ಸರಕಾರದ ದೃಷ್ಟಿಗೆ ... ಇವರ ವಿಚಾರಣೆಗಳಿಗಾಗಿ ಸುಮಾರು ... ಲಕ್ಷ ರೂಪಾಯಿ ವ್ಯಯವಾಗಬಹುದು ... ರನೇ ... ಲ್ಲಿ ಪ್ರಯಾಣ ಮಾಡುವವರು ... ಇಲ್ಲಿ ಬಸ್ಸುಗಳನ್ನೇ ಆಧರಿಸುತ್ತಾರೆ ಇದೇಕೆಂದು ತಿಳಿಯಬೇಕಾದರೆ ಈ ದೇಶವಾಸಿಗಳ ವಿದ್ಯಮಾನವನ್ನು ತಿಳಿಯದ ಮಹಾ ನಿಪುಣ ವಿದೇಶಿಯರನ್ನು ವಿಚಾರಿಸಿದರೆ ಸಮರ್ಪಕವಾದ ಉತ್ತರವು ದೊರಕೀತೆ? ಒಡಿಗೆ ಮತ್ತು ಸೌಕರ್ಯ ಎಂಬವುಗಳ ಅರ್ಥವು ನಮ್ಮಲ್ಲಿ ಬೇರೆ, ಇತರ ದೇಶೀಯರಲ್ಲಿ ಬೇರೆಯಾಗಿದೆ ಜನಜೀವನದ ಮಾಹಿತಿ ಮತ್ತು ಇತಿಹಾಸ ತಿಳಿಯದವರಿಂದ ಇವುಗಳ ಇತ್ಯರ್ಥವನ್ನು ಮಾಡಲು ಸುಲಭವೆನಿಸದು ನಮ್ಮ ರೈಲ್ವೆಗಳ ಉದ್ದೇಶವಾದರೂ ಪರದೇಶಗಳಲ್ಲಿನ ರೈಲ್ವೆಗಳ ಉದ್ದೇಶವಾಗಿಲ್ಲ ನಾಲ್ಕೈವತ್ತು ವರ್ಷದ ಬ್ರಿಟಿಷರ ಆಳ್ವಿಕೆಯ ಫಲವಾಗಿ ಭಾರತದ ಪಕ್ಷದಲಿ ಒಬ್ಬನಾದರೂ ರೈಲ್ವೆ ವಿಚಾರ ಬಲ್ಲ ನಿಪುಣನು ಸಿಗಲಿಲ್ಲವೆಂದರೆ ಸರಕಾರಕ್ಕೇ ಸಮಾಧಾನವಾದೀತೆ?

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets at the
Office C. P C Co., Ltd

ಕಲ್ಯಾಣಪುರ ಸಕ್ಕರೆಯನ್ನೇ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಮಂಗಳೂರಲ್ಲಿ ರಾಷ್ಟ್ರಪತಿ ನೆಹರುಗಳ ಭಾಷಣ.

ಪ್ರಚಂಡ ಜನಸ್ತೋಮ!

ಎಲ್ಲೆಲ್ಲಿಯೂ ಉತ್ಸಾಹ — ರಾಷ್ಟ್ರಸಭೆಗೆ ಪ್ರೋತ್ಸಾಹ!

ಭಾಷಣದ ಸಾರಾಂಶ

ಕಾಂಗ್ರೆಸಿನ ಸಂದೇಶವನ್ನು ನಿಮಗೆ ಕೊಡಲು ಬಂದಿರುವೆನು. ಆ ಸಂದೇಶವು ಸ್ವಾತಂತ್ರ್ಯದ ಸಂದೇಶ, ಬಡತನವನ್ನೂ ಕ್ಲೇಶವನ್ನೂ ಹೋಗಲಾಡಿಸುವ ಸಂದೇಶ. ಈಗ ಎಲ್ಲೆಲ್ಲಿಯೂ ಚುನಾವಣೆಗಳನ್ನು ಕುರಿತು ಮಾತು ಬರುತ್ತದೆ. ಈ ವಿಚಾರದಲ್ಲೂ ನನಗೆ ಹೇಳಲಿಕ್ಕಿದೆ. ಕಾಂಗ್ರೆಸಿನ ಸಂದೇಶವನ್ನಷ್ಟೆ ಹೇಳುವುದಲ್ಲದೆ ಜನರಿಗೆ ಸ್ವಾತಂತ್ರ್ಯದ ವಿಚಾರವಾಗಿಯೂ ನಾನು ಭಾಷಣಮಾಡಬೇಕೆಂದಿರುವೆನು. ನಾವೆಲ್ಲರೂ ಸ್ವತಂತ್ರರಾಗಬೇಕೆಂದು ನನ್ನಲ್ಲಿ ಆತುರವಿರುವುದೆ. ಈಗಣ ರಾಜಕೀಯ ಹಾಗೂ ಸಾಂಪತ್ತಿಕ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದು ನಾನು ಬಂದಿರುವ ಕಾರಣ ಅದನ್ನು ಕುರಿತು ನಾನು ಮಾತಾಡುವಾಗಲೇ ಕಾಂಗ್ರೆಸಿನ ಸಂದೇಶವನ್ನೂ ತಿಳಿಸುವೆನು. ಸರಕಾರೀ ನೌಕರರ ಆಸನಗಳಲ್ಲಿಂದ ಈಗ ಕೇಳಬರುವ ಮಾತುಗಳು ಕೆಲದಿನಗಳ ತನಕ ಮಾತ್ರ ಕೇಳಿಸಬಹುದು. ನಂತರ ಅಲ್ಲಿ ಮೂಲಕ ಅತಿ ಮಹತ್ವದ್ದಾಗಿ ಈ ದೇಶದ ಬಡತನದ ಪ್ರಶ್ನೆಯಿದೆ—ಇದು ಅತಿ ಭಯಂಕರವಾಗಿ ಹರಡಿದೆ. ಇದರಿಂದಾಗಿಯೆ ನಮ್ಮ ಜನರಲ್ಲಿ ನಿರುದ್ಯೋಗತೆಯು ಹಬ್ಬಿದೆ—ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾವು ನಮ್ಮ ಬಡತನವನ್ನು ನಿವಾರಿಸುವುದಕ್ಕೆ ಪ್ರಯತ್ನಿಸಬೇಕು. ಹಿಂದೀ [illegible] ಸ್ವರಾಜ್ಯ ಸಾಧನೆಯೂ ಸಹ ಈ ದಾರಿದ್ರ್ಯ ನಿವಾರಣೆಯ ಸಲುವಾಗಿ ಎನಿಸಿದೆ. ಇದೇ ಮೊದಲನೆ ಪ್ರಶ್ನೆ—ಇದರ ಪರಿಹಾರವೇ ನಿಜವಾದ ಸ್ವರಾಜ್ಯ ಸ್ವಾತಂತ್ರ್ಯಸಿದ್ಧಿಯ ಸಮಸ್ಯೆ.

ನಮ್ಮ ಜನಾಂಗವನ್ನು ಬಾಧಿಸುತ್ತಿರುವ ದಾರಿದ್ರ್ಯವನ್ನು ನಾವು ಹೇಗೆ ನಿವಾರಿಸಬಹುದು? ನಾವು ಅರ್ಜಿ ದಿನ್ನಪಗಳನ್ನೆ ಸಿದ್ಧಮಾಡಿಕೊಂಡು ನಮ್ಮ ಸ್ಥಿತಿ ಉತ್ತಮವಾಗುವಂತೆ ಈಗಣ ಸರಕಾರವನ್ನು ಬೇಡಿಕೊಂಡರೆ ನಮಗೆ ಇದು ಸಿಧ್ಯವೆ? ಇದೊಂದು ವ್ಯರ್ಥ ಪ್ರಯತ್ನ. ಈಗಣ ಸರಕಾರ ಪ್ರಭುತ್ವ ಇರುವಷ್ಟು ಕಾಲಕ್ಕೆ ಈ ಜನಾಂಗದ [illegible] ದಾರಿದ್ರ್ಯ ಶಾಪವು ಬೀಸುತ್ತಲೇ ಉಳಿಯುವುದು.

ಹಿಂದೀಯ ಕೈಯಲ್ಲಿ ಶಸ್ತ್ರವು ದೊರೆವಂತೆ ಅದರಿಂದ ಮಾತ್ರ ಪ್ರಕೃತ ಕಷ್ಟವನ್ನೂ ಬಡತನವನ್ನೂ ನಾವು ಕಳೆದುಕೊಳ್ಳಬಹುದು. ಆ ಕಾರಣ ನಾವು ಪ್ರಯತ್ನಿಸಬೇಕಾಗಿದೆ. ಸ್ವಾತಂತ್ರ್ಯ [illegible] ಸ್ವರಾಜ್ಯಗಳ ಪ್ರಶ್ನೆಯು ಮುಂದೆ ಬರುವುದೇಕೆಂದರೆ [illegible] ನಮ್ಮ ದೊರೆವ [illegible] ಅಧಿಕಾರ [illegible] ಸರಕಾರ ಹಿಂದೀಯರ ಇದ—ಅವರಿಗೆ ಸ್ವತಂತ್ರಾಧಿಕಾರವು ದೊರೆವತನಕ ಬಡತನವನ್ನೂ ಕ್ಲೇಶವನ್ನೂ ಹೋಗಲಾಡಿಸಬರುವಂತಿಲ್ಲವೆಂಬುದೇ ಅದಕ್ಕೆ ಕಾರಣವಾಗಿದೆ.

ಈ ಕಾರಣದಿಂದಲೇ ಸ್ವಾತಂತ್ರ್ಯದ ಪ್ರಶ್ನೆಯು ಮೊದಲನೆದಾಗಿದೆ. ಸ್ವಾತಂತ್ರ್ಯವಲ್ಲದೆ ನಮಗೆ ಅಭಿವೃದ್ಧಿ ಹೊಂದಲು ಬೇರೆ ಉಪಾಯವಿಲ್ಲ. ನಾವು ಅನ್ಯಥಾ ಬಡತನವನ್ನು ನೀಗಿಕೊಳ್ಳಲಾರೆವು—ಅದು ಕಾರಣ ರಾಷ್ಟ್ರಸಭೆಯು ಸ್ವರಾಜ್ಯದ ಸಮಸ್ಯೆಯನ್ನೆ ಎಲ್ಲಕ್ಕೂ ಮೊದಲನೆದಾಗಿಟ್ಟುಕೊಂಡಿದೆ.

ಹೀಗಾಗಿ, ನಮ್ಮೆದುರು ಇರುವ ಸಮಸ್ಯೆಗಳೆಂದರೆ ನಮ್ಮ ಬಡತನ ನಿವಾರಣೆ ಮತ್ತು ಅದನ್ನು ನಿವಾರಿಸಲು ಅಗತ್ಯವಿರುವ ಸ್ವಾತಂತ್ರ್ಯಸಿದ್ಧಿ. ಈಗ ಚುನಾವಣೆಗಳು ನಡೆವಾಗ ಈ ಸಮಸ್ಯೆಗಳನ್ನು ಮರೆಯಬಾರದು. ಭಾರತವರ್ಷದ ಸಮಸ್ಯೆಯೂ ಭಾರತವರ್ಷದ ದಾರಿದ್ರ್ಯದ ಸಮಸ್ಯೆಯೂ ಒಳಿದೇ ಇವೆ. ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕಾಗಿ ರಾಷ್ಟ್ರಸಭೆಯು ಸುಮ್ಮನಿಲ್ಲವೆನ್ನುವುದನ್ನು ಮಾಡಿದೆ. ಇವೇ ಕೆಲವು ವರ್ಷಗಳಿಂದ ಇಂಡಿಯಾ ಸರಕಾರದೊಡನೆ ಅದು ಹೋರಾಡುತ್ತಿರುವುದೂ ಈ ಸಮಸ್ಯೆಗಳು ಇರುವ ಕಾರಣವೇ. ಇದೇ ಕಾರಣದಿಂದ ನಾವು ಈಗ ಚುನಾವಣೆಗಳಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದೇವೆ.

ನಮಗೆ ಸಂಪೂರ್ಣ ಬಲವು ಉಂಟಾದಲ್ಲಿ ನಮಗೆ ಸ್ವಾತಂತ್ರ್ಯವು ದೊರೆವುದು. ವ್ಯವಸ್ಥೆ ಮತ್ತು ಹೋರಾಟಗಳಿಂದ ತಾನೆ ನಮಗೆ ಬಲವು ಹೆಚ್ಚುವುದು. ಕಾಂಗ್ರೆಸ್ ಸಭೆಯು ಪ್ರಚಂಡವಾಗಿರುವ ವ್ಯವಸ್ಥೆಮಾಡಿರುವ ಕಾರಣವೇ, ಇಡೀ ದೇಶದಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸ್ಸಿನ ಕಾರ್ಯವು ಹರಡುತ್ತಿದ್ದು, ಅದು ಬ್ರಿಟಿಷ ಸಾಮ್ರಾಜ್ಯ ಸತ್ತೆಗೆ ವಿರುದ್ಧವಾಗಿ ನಿಂತಿದೆ. ಜನತೆಯು ಕಾಂಗ್ರೆಸ್ಸಿನ ಬೆಂಬಲಕ್ಕಿದೆ. ಈ ವ್ಯವಸ್ಥಿತ ಸಂಸ್ಥೆಯು ಈಗ ಜನರನ್ನು ಹಿಂದೆ ಎಂದೂ ಇಷ್ಟು ಚೆನ್ನಾಗಿ ಬಲಗೊಳಿಸದಷ್ಟು ಹೆಚ್ಚಾಗಿ ಈಗ ಸಬಲರನ್ನಾಗಿ ಮಾಡಿದೆ.

ನಮ್ಮ ದೇಶದಲ್ಲಿ ಹಲವು ವ್ಯವಸ್ಥಿತ ಸಂಸ್ಥೆಗಳಿವೆ,—ದೊಡ್ಡವು ಚಿಕ್ಕವು ಜಾತಿಗಳವು ಇತ್ಯಾದಿ. ಆದರೆ ಸ್ವರಾಜ್ಯಕ್ಕಾಗಿ ಧೈರ್ಯದಿಂದ ಹೋರಾಡುವ ಸಂಸ್ಥೆ ಇದೊಂದೇ ಇದೆ ಎಂದು ಪ್ರತಿಯೊಬ್ಬರೂ ಬಲ್ಲರು. ಆದುದರಿಂದ ಸ್ವರಾಜ್ಯಸಾಧನೆಯಲ್ಲಿ ಸೇರಿ ಹೋರಾಡಬೇಕೆಂದವರು ಕಾಂಗ್ರೆಸಿನ ಧ್ವಜದ ನೆಳಲಲ್ಲೇ ನಿಂತು ಹೋರಾಡಬೇಕಾಗಿದೆ. ಬೇರೆ ಉಪಾಯವಿಲ್ಲ. ಸೈನಿಕರಿಲ್ಲದಲ್ಲಿ ಯುದ್ಧಮಾಡಬರುವುದಿಲ್ಲ. ವ್ಯವಸ್ಥೆಯುಳ್ಳ ಸೈನ್ಯದಿಂದ ಮಾತ್ರ ಯುದ್ಧಮಾಡಬರುವುದು. ಹೀಗಿರುವ ಕಾರಣ, ವ್ಯವಸ್ಥೆಯುಳ್ಳ ಸ್ವರಾಜ್ಯಕ್ಕಾಗಿ ಹೋರಾಡುವುದು ಕಾಂಗ್ರೆಸ್ ಸಂಸ್ಥೆಯೊಂದೇ ಎಂದು ತಿಳಿದಿರುವ ನೀವು ಈ ಹೋರಾಟದಲ್ಲಿ ಸೇರಬೇಕೆಂದಿರುವಿರಾದರೆ ಕಾಂಗ್ರೆಸಿನೊಳಗಿದ್ದು ಹೋರಾಡುವುದುತ್ತಮವಲ್ಲದೆ ಬೇರೆ ಪ್ರಯತ್ನಿಸಿದರೆ ಅದೆಲ್ಲವೂ ನಿಷ್ಫಲ. ನಿಮ್ಮ ಬಲವನ್ನೆ ವ್ಯರ್ಥಗೊಳಿಸಿದಂತೆ ಎಂದೂ ತಿಳಿಯಿರಿ.

ಕಾಂಗ್ರೆಸನ್ನು ಆದುಕಾರಣವೇ ಬಲಗೊಳಿಸಿರಿ. ಕಾಂಗ್ರೆಸನ್ನು ಹಳ್ಳಿಹಳ್ಳಿಗಳಲ್ಲೂ ಸ್ಥಾಪಿಸಿರಿ. ಮನೆಮನೆಗಳಲ್ಲೂ ಪ್ರತಿಷ್ಠಿಸಿರಿ. ಕಾಂಗ್ರೆಸಿನ ಸಂದೇಶವು ಈ ವಿಸ್ತಾರವಾದ ದೇಶದ ಯಾವತ್ತು ಗಂಡಸರಿಗೂ ಹೆಂಗಸರಿಗೂ ತಿಳಿಯುವಂತೆ ಸಾರಿರಿ. ಅವರೆಲ್ಲರೂ ಈ ಸಂದೇಶವನ್ನು ಕೇಳಿ ನಮ್ಮ ಆದೃಷ್ಟವು ಫಲಿಸುವಂತೆ ಸರ್ವರೂ ಒಂದಾಗಿ ಕಾರ್ಯೋದ್ಯುಕ್ತರಾಗುವಂತಾಗಲಿ.

ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿವೆ. ಅವುಗಳ ಕೆಳಗೆ ಗ್ರಾಮಕಮಿಟಿಗಳಿರುವುದಿಲ್ಲ. ಕೆಳಕಾಣ [illegible] ಈ ಜಿಲ್ಲಾ ಕಮಿಟಿಗಳನ್ನು ನಾನು ವ್ಯವಸ್ಥಿತ ಸಂಸ್ಥೆಗಳೆನ್ನುವುದಿಲ್ಲ. ಇಂತಹವು ಬರೀ ಹೆಸರಿಗೆ ಮಾತ್ರ—ಯಾವಾಗ ಸಂಸ್ಥೆಗಳ ಕೆಲಸವು ಮಹಾಜನ ಸಮುದಾಯದ ವರೆಗೂ ವ್ಯಾಪನೆ ಹೊಂದುತ್ತಿಲ್ಲವೋ ಅವರ ಆಶಯಗಳನ್ನು ಕೈಗೂಡಿಸಿಕೊಡಲಾರದೋ ಅದುವರೆಗೆ ಅಲ್ಲಿ ನವರಿಗೆ ಕಾಂಗ್ರೆಸ್ಸಿನ ಸಂದೇಶವು ತಿಳಿವುದೂ ಸಂದೇಶವನ್ನು ಸಾರುವುದೂ ಕಷ್ಟವಾಗಿದೆ.

ಸ್ವರಾಜ್ಯವೆಂದರೇನು?

ನಾನು ಸ್ವರಾಜ್ಯವನ್ನು ಕುರಿತಾಡಿದೆನು. ಸ್ವರಾಜ್ಯವೆಂದರೇನು? ಬ್ರಿಟಿಷ ಅಧಿಕಾರಿಗಳ ಬದಲಾಗಿ ಇತರ ಅಧಿಕಾರಿಗಳನ್ನು ಸೇರಿಸುವುದರಿಂದ ಸ್ವರಾಜ್ಯವು ಸಿದ್ಧವಾಗುವುದಿಲ್ಲ. ಸರಕಾರದ ಅಧಿಕಾರಕ್ಕೆ ಹಿಂದೀಯರು [illegible] ನಮ್ಮ [illegible] ಕೋಟಿ [illegible] ಯಾವ ಮತ ಜಾತಿಗಳಿಗೆ ಸೇರಿದ್ದರೂ ಸಮಾನವಾದ ಹಕ್ಕುಗಳು ಇರಬೇಕು. ನಾವೆಲ್ಲರೂ ಇಲ್ಲದ್ದು ನಮ್ಮ [illegible] ಸರಕಾರ ವ್ಯವಸ್ಥೆ ಮಾಡಲು ಅರ್ಹರು. ಈ ಅರ್ಹತೆಯಿಂದ ಅವರು ಸರಕಾರವನ್ನು ತಾವೆ ನಡೆಸಿಕೊಳ್ಳುವಂತಾಗಬೇಕು. ಹಾಗಿದ್ದರೇ ಸ್ವರಾಜ್ಯ.

ನೀವು ಕಾಂಗ್ರೆಸ್ ಸಂಸ್ಥೆಯನ್ನು ಕುರಿತು ಅದು ವಾಗಲೂ ಮಹಾಜನ ಸಮುದಾಯವನ್ನು ಕುರಿತಾಗಿಯೆ, ನಾನು ಭಾವಿಸುವಂತೆ ನೀವೂ ಭಾವಿಸಬೇಕಲ್ಲದೆ, ಜನಸಮೂಹದ ಮೇಲೆ ಅಧಿಕಾರ ನಡೆಸುವ ವೈಸ್ರಾಯರ ಗವರ್ನರರ ರಾಜರ ಮಹಾರಾಜರ ನಾಯಕರ ಸಂಸ್ಥೆಯೆಂದಲ್ಲ. ದೀನ ದರಿದ್ರರ ಜನಸಾಮಾನ್ಯರ ಸಂಸ್ಥೆಯೆಂದೇ ತಿಳಿಯಿರಿ. ದೀನರ ಸ್ಥಿತಿಯನ್ನು ಸ್ಪಷ್ಟವಾಗಿ ವಿವರಿಸಿ ಅವರನ್ನು ದಬ್ಬಾಳಿಕೆಯಿಂದ ಬಿಡಿಸುವ ಸಂಸ್ಥೆಯೆಂದು ತಿಳಿಯಬೇಕು.

ಸ್ವರಾಜ್ಯ ಎಂಬುದೇನೆಂದು ತಿಳಿದುಕೊಂಡು ಅದನ್ನು ರಾಷ್ಟ್ರಸಭೆಯಲ್ಲಿ ಪ್ರಚಾರಕ್ಕೆ ತರಲೆತ್ನಿಸಬೇಕು. ಹೀಗಿರುವುದರಿಂದ ಜಿಲ್ಲಾ ಕಮಿಟಿಗಳನ್ನು ಸ್ಥಾಪಿಸಿದರಷ್ಟೆ ಸಾಲದು. ಪ್ರತಿಯೊಂದು ಹಳ್ಳಿಯಲ್ಲೂ ಕಾಂಗ್ರೆಸ್ ಕಮಿಟಿಗಳು ಇರಲೇಬೇಕಾಗಿದೆ. ಅದೇ ಹಿನ್ನೆಲ, ಅದೇ ಅಸ್ತಿವಾರ, ಅದನ್ನು ಅಧರಿಸಿಯೆ ಜಿಲ್ಲಾ ಕಮಿಟಿಗಳಾಗತಕ್ಕದು.

ಕಾಂಗ್ರೆಸ್ ಸಂಸ್ಥೆಯು ಯಾವಾಗ ಸ್ವರಾಜ್ಯಸಾಧನೆಗಾಗಿದೆಯೋ ಆಗಲೇ ಅದು ಗ್ರಾಮ ಕಮಿಟಿಗಳ ಆಧಾರ ಹೊಂದಿಯೇ ಮುಂದುವರಿಯಬೇಕಾಗಿದೆ ಎಂಬುದನ್ನು ಪುನಃ ಒತ್ತಿಹೇಳುತ್ತೇನೆ. ಸ್ವರಾಜ್ಯವು ಸಾಧಿಸಬೇಕು ಎಂಬುದನ್ನು ಪ್ರತಿಯೊಬ್ಬ ಗ್ರಾಮಸ್ಥನೂ ಹೇಳುವಂತಾಗಬೇಕು. ಇದು ಒದಗುವ ಕಾಲವು ತೀವ್ರವೇ ಸಮೀಪಿಸುತ್ತಲಿದೆ. ಜನರು ಈ ಕಾಲಕ್ಕೆ ಸಿದ್ಧರಾಗದೆ ಹೋದರೆ, ಯಾರು ಸಿದ್ಧರೋ ಅವರೇ ಅಧಿಕಾರಿಗಳಾಗುವರು. ಭೂಕಂಪದಂತೆ ಆಕಸ್ಮಿಕವಾಗಿ ಬರುವ ಈ ಅಯೋಚಿತ ಸಂಘಟನೆಗೆ ಸಿದ್ಧರಾಗದೆ ಜನರು ಮೋಸ ಹೊಂದದಂತೆ ಈಗಲೆ ಎಚ್ಚರವಾಗಿರಲಿ.

ಈ ಚಿತ್ರವನ್ನು ನಿಮ್ಮ ಕಣ್ಣುಮುಂದಿಟ್ಟುಕೊಂಡು, ಈಗಲೆ ಬರುತ್ತಿರುವ ಚುನಾವಣೆಗಳನ್ನು ನಿರೀಕ್ಷಿಸಿರಿ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸ್ಸು ಚುನಾವಣೆಗಳಲ್ಲಿ ಏಕೆ ಭಾಗವಹಿಸುತ್ತಿದೆ ನೋಡಿ. ಕೆಲವರನ್ನು ನಾವು ಅಧಿಕಾರ ಕೈಕೊಳ್ಳುವುದಕ್ಕಾಗಿ ಈ ಚುನಾವಣೆಗಳಲ್ಲಿ ಭಾಗವಹಿಸುವುದಲ್ಲ. ಇದು ಕಾಂಗ್ರೆಸಿನ ರೀತಿಯೆ ಅಲ್ಲ. ಎಂದಿನಂತೆ ಕೌನ್ಸಿಲುಗಳಲ್ಲಿ ಕೆಲಸ ಮಾಡುವುದಕ್ಕಾಗಿ ಅಲ್ಲ. ಸ್ವರಾಜ್ಯ ಸಾಧನೆಗಾಗಿ ಮಾತ್ರ ಕಾಂಗ್ರೆಸು ಕೌನ್ಸಿಲುಗಳಲ್ಲಿ ಸೇರಿ ಒಳಗೂ ಹೊರಗೂ ಕೆಲಸ ನಿರ್ವಹಿಸಬೇಕೆಂದಿದೆ.

ಆದರೂ ನಮ್ಮ ನಿಜ ಕಾರ್ಯವು ಈ ಕೌನ್ಸಿಲಗಳಿಂದ ಕೈಗೂಡಿ ಬರಲಾರದು. ಕೇವಲ ಭಾಷಣಗಳನ್ನು ಕೌನ್ಸಿಲಗಳಲ್ಲಿ ಮಾಡಿ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವಂತಿಲ್ಲ. ನಮ್ಮ ಸಂತೆಗಳಲ್ಲೂ ಕಾರ್ಯನಗಳಲ್ಲೂ ಇದಕ್ಕನುಗೆ ಆದರಿಂದ ಪ್ರಯೋಜನವಿಲ್ಲ. ನಿಜವಾದ ನಮ್ಮ ಹೋರಾಟವು ಕೌನ್ಸಿಲದ ಹೊರಗೇ ನಡೆವುದು. ನಮ್ಮ ರಾಷ್ಟ್ರಸಭೆಯನ್ನು ಬಲಗೊಳಿಸಿದರೆ ಸ್ವರಾಜ್ಯವು ಸಿಧ್ಯ. ನಮ್ಮ ದೇಶಕ್ಕೆ ಹಿತವಾದ ಮಸೂದೆಗಳನ್ನು ಕೌನ್ಸಿಲಗಳಲ್ಲಿ ಸೇರದಂತೆ ಮಾತ್ರ ಎಷ್ಟು ಶಾಸನಗಳನ್ನು [illegible] ಬ್ರಿಟಿಷ ಸರಕಾರಕ್ಕೆ ಶಕ್ತಿಯನ್ನು ಕೊಡಲು ಕೊಂಡವರು ಹಿಂದೀ ಜನರ [illegible] ಅಹಿತವಾದ ನೀತಿಯಲ್ಲಿ ನಡೆಯುವುದುಂಟು. ಚುನಾವಣೆಗಳು ಆಗುವಾಗಲೇ ಈ ಶಕ್ತಿಯು ಮಾತನ್ನಿತ್ತ ಸರಕಾರವು ಜನರನ್ನು ತನ್ನ ಕಡೆಗೆ ಸೆಳೆಯುವ ಹಾಗೂ, ಹಾಗೆ ಸೆಳೆಯಲ್ಪಟ್ಟವರು ಜನರಿಂದ ದೂರವಾಗುವ ಹಾಗೂ, ಕೊಳೆತುಹೋಗದಿದ್ದರೂ ಹೀಗೆ ಜನತೆಯಿಂದ [illegible] ಸರಕಾರದ ಪಕ್ಷ [illegible] ಕಡೆ ಹೀಗೆ ಎರಡು ತಂಡಗಳು ಎತ್ತಿವೆ. ಬ್ರಿಟಿಷ ಸರಕಾರವು ಕೆಲವರನ್ನು ಬಿರುದುಗಳಿಂದಲೂ ಕೆಲವರನ್ನು ಗೌರವ ಪದವಿಗಳಿಂದಲೂ ವಶಮಾಡುತ್ತಿದೆ. ಹೀಗಾಗಿ ಚುನಾವಣೆಗಳ ಈ ದಿನ [illegible] ಸ್ಥಳದಲ್ಲಿ ಎರಡು ಹೋರಾಟಗಳಾಗಿವೆ. ಒಂದೇ [illegible] ಬ್ರಿಟಿಷ ಅಧಿಕಾರಕ್ಕಾಗಿ [illegible] ಎಂಬ ಈ ಎರಡು ವರ್ಗಗಳು ಉಂಟು. ನೆ ಕಾಂಗ್ರೆಸು ಎಷ್ಟಕ್ಕೆ ಜಯಶೀಲವಾಗುವುದೋ ಅಷ್ಟಕ್ಕೆ ಬ್ರಿಟಿಷ ಅಧಿಕಾರವು ಜಯಶೀಲವಾಗದು. ಇನ್ನು ಕೆಲವರಿದ್ದಾರೆ. ಇವರು ಕಾಂಗ್ರೆಸಿನ ಪಕ್ಷವೂ ಅಲ್ಲ, ಸರಕಾರದ ಪಕ್ಷವೂ ಅಲ್ಲ. ಅವರು ಸ್ವಯಂ ಪ್ರತಿನಿಧಿಗಳು [illegible] ಎಂತ ಎರಡೂ ಇಲ್ಲದವರು.

ಚುನಾವಣೆಯಲ್ಲಿ ನೀವು ಅರಿಸುವವರ ಈ ಜಾತಿ ಈ ಮತ ಈ ಪಕ್ಷ ಈ ಸಂಬಂಧಿ ಎಂದೇನೂ ತಿಳಿದು ಆರಿಸುವುದಲ್ಲ. ಆತನ [illegible] ತತ್ವಗಳಿಗಾಗಿ ಎಂತಹವನೋ ತಿಳಿಯಿರಿ. ಆತ ಸ್ವಾತಂತ್ರ್ಯಕ್ಕಾಗಿ ನಿಂತಿರುವನೋ ವಿಚಾರಿಸಿ ನೋಡಿರಿ. ಆತನ ಹಿಂದೆ ವ್ಯವಸ್ಥಿತವಾಗಿ ಕಾರ್ಯಸಾಧನೆ ಮಾಡುವ ತಕ್ಕ ಬಲ ಸ್ವಾತಂತ್ರ್ಯ ಸಾಧಕ ಸಂಸ್ಥೆಯಾವುದೆಂದು ತಿಳಿಯಿರಿ. ಅವರು ಇವರು ಎಂಬ ಮಾತೇ ಅನಾವಶ್ಯಕ. [illegible] ಹೋದಲ್ಲೆಲ್ಲ ಈ ಸ್ವಾಮಿದ್ರೋಹ [illegible] ತಿಳಿಯದೆ ಹೋಗುತ್ತಿಲ್ಲ. ಯಾರು ಕಾಂಗ್ರೆಸ್ ಪಕ್ಷದವರಾಗಿ ಬಂದರೂ ಅವರು ನಮ್ಮ ಸೈನಿಕರು. ಅವರು ನಮ್ಮ ಜನಾಂಗಕ್ಕೆ ಪ್ರತಿನಿಧಿಗಳಾಗಲು ಯೋಗ್ಯರು. ನಮ್ಮೆಲ್ಲರ ಮತ್ತು ನನ್ನ ಕರ್ತವ್ಯವು ಅಂತಹರನ್ನು ಆರಿಸುವುದು. ಅವರು ವ್ಯಕ್ತಿಶಃ ಗೆದ್ದರೂ ಆ ಗೆಲವು ಕಾಂಗ್ರೆಸಿಗೇ ಹೊರತು ಅವರಿಗಲ್ಲ.

ಚುನಾವಣೆಗಳು ಸ್ವರಾಜ್ಯ ಸಾಧನೆಗೆ ಸಹಾಯವಾಗುವಂತೆ ಮಾತ್ರ ಈಗ ಪಕ್ಷಪತ್ತ ಹೊಂದಿವೆ. ಕಾಂಗ್ರೆಸ್ ಪಕ್ಷಕ್ಕೂ ಜಸ್ಟಿಸ್ ಪಕ್ಷಕ್ಕೂ ಇಲ್ಲಿ ಹೋರಾಟವಿದೆ. ಅಲ್ಲಲ್ಲಿ ಕೆಲವು ವ್ಯಕ್ತಿಗಳೂ ಪಂಗಡಗಳೂ ಆಚೆ ಈಚೆ ಪಕ್ಷವಾಗಿ ನಿಂತಿವೆ. ಇವೆಲ್ಲ ನಿಷ್ಫಲ. ಮುಖ್ಯವಾದ ವಿಚಾರವನ್ನು ನೋಡುತ್ತೀರಿ. ಬಿಹಾರದಲ್ಲೇನಾಗಿದೆ? ನನ್ನ ಸಂಯುಕ್ತ ಪ್ರಾಂತ್ಯದಲ್ಲಿ ಏನಾಗುತ್ತಿದೆ? ಒರಿಸ್ಸದಲ್ಲೇನು? ಇನ್ನೂ ಹಲವು ಪ್ರಾಂತ್ಯಗಳ ಸ್ಥಿತಿಯನ್ನು ಒಂದೆರಡು ದಿನಗಳಲ್ಲೇ ತಿಳಿಯುವಿರಿ. ಎಲ್ಲಿ ನೋಡಿದರೂ ಎಂತಹದೆಂದು ಸರಿ ನನಗೆ ತಿಳಿಯದ ಕೆಲವರನ್ನು ಕಾಂಗ್ರೆಸ್ ಪಕ್ಷವಾಗಿ ಚುನಾವಣೆಗೆ ನಿಲ್ಲಿಸಿದ್ದಾರಂತೆ. ಇದೇ ಪ್ರಾಂತ್ಯವೇ ಅವರ ಬೆಂಬಲಕ್ಕೆ ನಿಂತಿದೆ. ಇದನ್ನು ಕಂಡು ವಿಪಕ್ಷೀಯ ಉಮೇದುವಾರರಿಗೂ ಆಶ್ಚರ್ಯ ನಿಲಿಸದಿರಬಾರದು. ಜನತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಎಷ್ಟು ಆತುರ! ಅದಕ್ಕಾಗಿ ಕಾಂಗ್ರೆಸಿಗೆ ಎಷ್ಟು ಬೆಂಬಲ! ಬಿಹಾರದಲ್ಲಿ ಆಕ್ಟ್ಯಾಕ್ಟ ಯಾರನ್ನು ಕೈಗೂಡಿದುದರ ಕಾರಣವಿದು.

ಒಂದೀ ಸ್ವಾತಂತ್ರ್ಯ, ದಾರಿದ್ರ್ಯನಿವಾರಣೆ ಎಂಬೀ ತತ್ವಗಳನ್ನು ಬಿಡಿಸಿಯೆ ಹೊರತು, ಉಮೇದುವಾರರನ್ನು ಗಣನೆಗೆ ತಾರದೆ, ಕಾಂಗ್ರೆಸಿಗೆ ಮತಕೊಡಿರಿ. ಈ ತತ್ವಗಳು ಸರ್ವ [illegible] ಸಮಾನವಾಯಿ ಇವೆ. ಜಾತಿಮತ ಇತ್ಯಾದಿಗಳು ಭಿನ್ನವಾದರೆ ಉಂಟು. ಆದರೆ ಸ್ವಾತಂತ್ರ್ಯ ಮತ್ತು ರೊಟ್ಟಿಯ ಪ್ರಶ್ನೆಗಳು ಸರ್ವರಿಗೂ ಒಂದೇ ಸಮಾನವಾಗಿವೆ. ಈ ಪ್ರಶ್ನೆಗಳಿಗೆ ಸರಿಯಾಗಿ ಸರ್ವರಿಗೂ ಸಮಾನವಾಗಿ ಉತ್ತರ ಪಾಲಿಸಬಲ್ಲುದು, ಕಾಂಗ್ರೆಸ್ ಸಂಸ್ಥೆಯೊಂದೇ ಮಾತ್ರವಾಗಿದೆ.

ಇದರಿಂದಲೇ ನಾನಾ ಜಾತಿ ಸಮಾಜ ಧರ್ಮಗಳನ್ನು ಸೇರಿರುವ ಜನರಿರುವ ಬೇರೆ ಬೇರೆ ಪ್ರಾಂತ್ಯಗಳಲ್ಲೂ ಕಾಂಗ್ರೆಸು ಗೆದ್ದು ಬರುತಲಿದೆ. ಇಲ್ಲಿನ ಚುನಾವಣೆಯಲ್ಲಿ ಶ್ರೀ ಬಾಳಿಗರು, ಶ್ರೀ ಕಾಂತರು, ಶ್ರೀ ಶೆಟ್ಟರು, ಶ್ರೀ ವಾರ್ತುಯರು, ಶ್ರೀ ಅಜ್ಜಿನವರು ಕಾಂಗ್ರೆಸಿನ ಪಕ್ಷವಾಗಿ ನಿಂತಿರುವರು. ಇವರು ಕಾಂಗ್ರೆಸ್ಸಿನಲ್ಲಿ ಯೋಧರಾಗಿ ಬಂದು ನಮ್ಮ ದೇಶವು ಯಾವ ಸಂಸ್ಥೆಯಲ್ಲಿ ಭರವಸೆಯನ್ನಿಟ್ಟಿದೆಯೋ ಅದ ಸಲುವಾಗಿ ಕೆಲಸಮಾಡುವಂತೆ ಅವರನ್ನು ಚುನಾಯಿಸಿರಿ. ಹಾಗೆ ಮಾಡಿದರೆಂದರೆ ಸಂಯುಕ್ತ ಪ್ರಾಂತ್ಯದಲ್ಲಾದಂತೆ ಅಪೂರ್ವ ದಿಗ್ವಿಜಯವು ಕಾಂಗ್ರೆಸಿಗೆ ಈ ಪ್ರಾಂತ್ಯದಲ್ಲೂ ಉಂಟಾಗುವುದು.

ಚುನಾವಣೆಯಲ್ಲಿ ನಾವು ಮಾಡತಕ್ಕುದಿಷ್ಟೇ: ನೀವೆ ಗೆದ್ದ ತರುವಾಯ ಸ್ವರಾಜ್ಯಸಾಧನೆ ನಡೆಯಬೇಕಾದುದರಿಂದ ಗೆದ್ದ ಕೂಡಲೆ ನಮ್ಮ ಕೆಲಸ ಮುಗಿಯಲಿಲ್ಲ. ಅನುದಿನವೂ ಸಿದ್ಧರಾಗಿ ಹೋರಾಡಿ ಹಳ್ಳಿಗಳಲ್ಲಿ ಕಮಿಟಿಗಳನ್ನು ಸ್ಥಾಪಿಸಿ, ಆಗ ಯಥಾಕಾಲದಲ್ಲಿ ನಾವೆಲ್ಲರೂ ವಿದ್ಯಮಾನಗಳನ್ನು ಎದುರಿಸಲು ಸಿದ್ಧರಾಗುವೆವು.

ನನಗೆ ಹಲವು ಮಾನಪತ್ರಗಳನ್ನೊಪ್ಪಿಸಿದಿರಿ. ಈ ಭವ್ಯವಾದ ನಗರದಲ್ಲಿ ನನಗೆ ಸಂಭ್ರಮದಿಂದ ಸ್ವಾಗತವಿತ್ತಿರುವಿರಿ. ಅದೆಲ್ಲವೂ ನನಗಲ್ಲ. ನಾನು ಪ್ರತಿನಿಧಿಯಾಗಿರುವ ಸಂಸ್ಥೆಗೆ ಸೇರಿದ್ದು. ಕಾಂಗ್ರೆಸು ಧೀರವಾಗಿ ಹೋರಾಡುವ ಸಂಸ್ಥೆಯೆಂದು ನೀವು ನಂಬಿರುವಂತೆಯೆ, ನಾನೂ ಹಾಗೆ ಹೋರಾಡುವವನೆಂದು ನಂಬಿಕೊಟ್ಟ ಈ [illegible]ಕ್ಕಾಗಿ ವಂದನೆಗಳು.

ಈ ಇಂದ್ರಜಾಲ ಔಷಧಿಯು ನವ ಚರ್ಮವನ್ನು ಬೆಳೆಸುತ್ತದೆ.

ಆಕಸ್ಮಿಕ ಅಪಘಾತಗಳಿಗಾಗಿ ಝಾಂಬಕನ್ನು ಉಪಯೋಗಿಸಿರಿ

ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಆದರೆ ಝಾಂಬಕನ್ನು ನೀವು ಪ್ರಯೋಗಿಸಿದಲ್ಲಿ [illegible] ಗಾಯವು ನೋವು ಕೊಡಲಾರದು. [illegible] ಚಿತ್ರದಲ್ಲಿ ಒಂದು [illegible] ಗಾಯವಾದುದನ್ನು ಝಾಂಬಕಿನ ಪ್ರಯೋಗವು ಆ ಗಾಯವನ್ನು ಬಲು ಬೇಗನೆ ಗುಣಪಡಿಸುತ್ತದೆ. [illegible] ಮಕ್ಕಳಿಗಾದ ಸಂತೋಷವನ್ನು [illegible] ನೀವು ಕೂಡಾ ಇದೇ ಮಾದರಿಯನ್ನ ನಡಿಸಿದರೆ ನಿಮ್ಮ ಚರ್ಮರೋಗ ಗಳು, ಗಾಯಗಳೂ ಮಾಯವಾಗಿ ಹೋಗಿ ನೋವು ಝಾಂಬಕ್ಕು ನೋವನ್ನು ಇಲ್ಲದಂತೆ ಗುಣಮಾಡಿ ಕಲೆಯಿಲ್ಲದಂತೆ ಮಾಡುತ್ತದೆ. ಔಷಧ ವ್ಯಾಪಾರಿಗಳಲ್ಲೆಲ್ಲಾ ಝಾಂಬಕನ್ನು ಪೆಟ್ಟಿಗೆಗೆ 1 ರೂಪಾಯಿ 3—4—0ಗಳಂತೆ ಸಿಗುತ್ತದೆ.

ಏಜಂಟರು —ಮೆಸರ್ಸ್ ರಾಧಾ ಎಂಡ್ ಕೊ., ಪ್ರಿ ಟ ಮದ್ರಾಸು.

ಝಾಂಬಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ.

ಝಾಂಬಕ್

Zam Buk

ಜರ್ಮನ್-ಜಪಾನ್ ಒಪ್ಪಂದದ ಪರಿಣಾಮವೇನಾಗುವುದು?

ಕಳೆದ ಮಹಾಯುದ್ಧವನ್ನು ಕೊನೆಗೊಳಿಸಿದ ವಾರ್ಸೆಲ್ಲೆ ಒಪ್ಪಂದದಿಂದ ಯುರೋಪ್ಪದಲ್ಲಿ ಜರ್ಮನಿಗಿರುವ ಗೌರವ ಸ್ಥಾನವು ಕಳೆದು ಹೋಯಿತು. ಅದನ್ನು ಒಂದು ಕ್ಷೀಣತರದ ದೇಶವನ್ನಾಗಿ ಮಾರ್ಪಡಿಸಿಬಿಟ್ಟರು. ಜರ್ಮನಿಯ ಮೇಲೆ ಅನೇಕ ನಿರ್ಬಂಧಗಳು ಹೊರಿಸಲಾದವು.

ಈ ತರದ ಶೋಚನೀಯ ಸ್ಥಿತಿಯಿಂದ ಪಾರಾಗಲು ಜರ್ಮನಿಯು ಅಂದಿನಿಂದ ಸಾಧಿಸುತ್ತ ಬಂತು. ಅದರ ಮಹಾ ವೈರಿಯಾದ ಫ್ರಾನ್ಸನ್ನು ಮುರಿದಿಕ್ಕಲು, ಅದು ಬ್ರಿಟನಿನೊಡನೆಯೂ, ಇನ್ನಿತರ ರಾಷ್ಟ್ರಗಳೊಡನೆಯೂ ಒಪ್ಪಂದ ಬೆಳೆಸಲು, ಸಾಧಿಸಿತು ಆದರೆ ಅವರ ಸಾಧನೆಗಳು ನಿಷ್ಪ್ರಯೋಜನಕವಾದುವು.

ರಷ್ಯವು ಫ್ರಾನ್ಸಿನೊಡನೆ ಒಪ್ಪಂದ ಬೆಳೆಯಿಸಲು, ಜರ್ಮನಿಗೆ ಭೀತಿಯು ಇನ್ನಷ್ಟು ಹೆಚ್ಚಿತು. ರಷ್ಯಾ-ಫ್ರಾನ್ಸು ಪಕ್ಷದ ಎದುರು ನಿಲ್ಲಲು ಅದೊಂದು ಉಪಾಯವನ್ನು ಹುಡುಕಲು, ತೊಲಗಿತು. ಜಪಾನು ರಷ್ಯದ ಪರಮ ವೈರಿ. ಪೌರ್ವಾತ್ಯದಲ್ಲಿ ಅವರೀರ್ವರಿಗೂ ಕಚ್ಚಾಟ ನಡೆಯುತ್ತಿದೆ. ಆದರಿಂದ ತಾನು ಜಪಾನಿನೊಡನಿದ್ದರೆ, ರಷ್ಯಾಕ್ಕೆ ಸ್ವಲ್ಪ ಭೀತಿಯುಂಟಾಗಬಹುದೆಂದು, ಜರ್ಮನಿಯು ಅಭಿಪ್ರಾಯ ಹೊಂದಿದಾಗಿ, ಕಳೆದ ವರ್ಷ ನವಂಬರದಲ್ಲಿ ರಷ್ಯಾದ ಕೊಮ್ಯುನಿಸಂ ತತ್ವಕ್ಕೆ ವಿರೋಧವಾಗಿ ಎಂಟಿ ವೇಶದಲ್ಲಿ ಒಂದು ಒಪ್ಪಂದವನ್ನು ಬೆಳೆಯಿಸಿತು.

ಜಪಾನು ಜರ್ಮನಿಯೊಡನೆ ಸೇರಿದುದರ ಪರಿಣಾಮವೇನಾಗಬಹುದು? ಯುರೋಪ್ಪದಲ್ಲಿ ಜರ್ಮನಿಯು ಕೈಮೇಲಾದರೆ, ಅವರು, ಜಪಾನೀಯರು ಕೂಡಿ, ಬ್ರಿಟಿಷರ ಪೌರ್ವಾತ್ಯದ ಮತ್ತು ಪೆಸಿಫಿಕ್ ಸಾಗರದ ಹಿತಗಳ ಮೇಲೆ ಕೈಮಾಡದೆ ನಿಲ್ಲರು. ಪೆಸಿಫಿಕ್ ಸಾಗರದ ಅಮೇರಿಕನ್ ಹಿತಗಳಿಗೂ, ಜಪಾನಿನಿಂದ ಹಾನಿ ಬರಬಹುದು ಇದರಿಂದಾಗಿ ಬ್ರಿಟನು, ರಷ್ಯಾ-ಫ್ರಾನ್ಸು, ಪಕ್ಷಕ್ಕನೆ ಸೇರಬೇಕಾಗಿದೆ ಜಪಾನಿಗೆ ಬುದ್ಧಿಕಲಿಸಲು ಅಮೇರಿಕಾವು ಅವರ ಬದಿಗೆ ಸೇರಬಹುದು

ಆದರಿಂದ ಇನ್ನೊಂದು ಮಹಾ ಯುದ್ಧವು ಯುರೋಪ್ಪದಲ್ಲಿ ಮಾತ್ರವಲ್ಲದೆ, ಪೌರ್ವಾತ್ಯದಲ್ಲೂ ನಡೆಯುವ ಹಾಗಿದೆ ಅಲ್ಲಿ ಬ್ರಿಟಿಷರಿಗೆ ಜಪಾನೀಯರ ಮಹಾಯುದ್ಧ ನೌಕಾಪಡೆಗಳನ್ನೂ ಸೇನಾಮಂಡಳಗಳನ್ನು ಎದುರಾಯಿಸಬೇಕಾಗುವುದು ಅದಕ್ಕೆ ಹಿಂದೂದೇಶದಿಂದಲೆ ಅವರಿಗೆ ಅನುಕೂಲಗಳುಂಟಾಗಬೇಕಾಗಿವೆ ಕಳೆದ ಮಹಾಯುದ್ಧದಲ್ಲಿ ಹಿಂದೂದೇಶವು ವಹಿಸಿದ ಭಾರಗಿಂತ ಹೆಚ್ಚಿನ ಭಾರವನ್ನು ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಹೊಂಬೇಕಾಗುವುದು. ಜಪಾನೀಯರನ್ನು ಎದುರಾಯಿಸಲು, ಭಾರತೀಯ ಸೈನ್ಯಪಡೆಗಳು ಕೊಂಡೊಯ್ಯಲಾಗುವವು ಹಿಂದೂದೇಶದ ಸಹಾಯವಿಲ್ಲದಿದ್ದರೆ, ಅಮೇರಿಕಾದ ಸಹಾಯವು ಬ್ರಿಟಿಷರಿಗಿದ್ದರೂ, ಜಪಾನೀಯರನ್ನು ಎದುರಾಯಿಸಲು ಅವರಿಗೆ ಮಹಾ ಕಷ್ಟವೆನಿಸುವುದು.

ಚೀನಾ-ಜಪಾನು ವೈಶಮ್ಯವು ದಿನೆ ದಿನೆ ವೃದ್ಧಿಯಾಗುತ್ತಾ ಬಂದು, ಜಪಾನೀಯರನ್ನ ತಮ್ಮ ದೇಶದಿಂದ ಹೊಡೆದೋಡಿಸಲು, ಚೀನಾವು ಮಹಾಯುದ್ಧದ ಸಿದ್ಧತೆಗಳನ್ನು ಮಾಡುತ್ತಿದೆ. ಜಪಾನು ಜರ್ಮನಿಯೊಡನೆ ಸೇರಿದುದರಿಂದ ಚೀನಾವು ತನ್ನ ಕಾರ್ಯ ಸಾಧಿಸಲು, ರಷ್ಯಾ, ಬ್ರಿಟನು, ಫ್ರಾನ್ಸು, ಅಮೇರಿಕಾ, ಮಿತ್ರ ರಾಷ್ಟ್ರಗಳ ಪಕ್ಷವನ್ನು ಸೇರುವುದು.

ಪೌರ್ವಾತ್ಯದಲ್ಲಿ ಬ್ರಿಟಿಷರಿಗೆ ಜಪಾನಿನಿಂದ ಅನೇಕ ತೊಂದರೆಗಳಾಗುತ್ತಿವೆ. ಅಂತೆಯೆ ಅಮೇರಿಕಾಕ್ಕೆ. ಆದರಿಂದ ಇಷ್ಟರವರೆಗೆ ಚಿಟಸ್ಥ ಭಾವವನ್ನು ಹೊಂದುವ ಆಲೋಚನೆಯನ್ನು ಮಾಡಿದ ಬ್ರಿಟನು, ಈಗ ಸೌಮ್ಯವಾದ ರಾಷ್ಟ್ರಗಳೊಡನೆ ಸೇರಬೇಕಾಗಿದೆ. ಪೌರ್ವಾತ್ಯದಲ್ಲಿ ಜಪಾನೀಯ ಪ್ರೇರಣೆಯನ್ನು ಕಡಿಮೆ ಮಾಡಿದ ವಿನಹ ಅದಕ್ಕೆ ಸಮಾಧಾನವಾಗಲಾರದು.

ಸತ್ತ ಮಾನವರನ್ನು ಜೀವಕ್ಕೆ ತರಬಹುದು.

ಸತ್ತವರನ್ನು ಮತ್ತೊಮ್ಮೆ ಜೀವಕ್ಕೆ ತರುವ ಉಪಾಯವನ್ನು ರಷ್ಯಾದ ಮೊಸ್ಕೋವಿನ ಓರ್ವ ವಿಜ್ಞಾನಿಯು ಕಂಡು ಹಿಡಿದಿರುವನು ಐದಾರು ನಾಯಿಗಳನ್ನು ತರತರದ ರೀತಿಯಲ್ಲಿ ಕೊಲೆ ಮಾಡಿ, ತನ್ನ ಉಪಾಯದಿಂದ ಅವುಗಳನ್ನು ಮತ್ತೊಮ್ಮೆ ಜೀವಕ್ಕೆ ತಂದಿರುವನು ಅಕಸ್ಮಾತ್ತಾಗಿ ಸತ್ತ ಮನುಷ್ಯರನ್ನು ಆತನ ಉಪಾಯದಿಂದ ಮತ್ತೊಮ್ಮೆ ಜೀವಕ್ಕೆ ತರಬಹುದಂತೆ.

ಈ ಉಪಾಯದಿಂದ ಎಲ್ಲಾ ಸತ್ತವರನ್ನು ಜೀವಕ್ಕೆ ತರಲಾಗುವುದಿಲ್ಲವಂತೆ.

ಅಮೇರಿಕಾದಲ್ಲಿ ಜಲಪ್ರಳಯ.

ಸಂಯುಕ್ತ ಅಮೇರಿಕಾದ ಒಹಿಯೋ ನದಿಯು ಉಕ್ಕಿ ಬಂದುದರಿಂದ, ಅಲ್ಲಿನ ಅನೇಕ ಪ್ರಾಂತ್ಯಗಳು ಜಲಪ್ರಳಯಕ್ಕೆ ಒಳಗಾಗಿವೆ ಮಿಸ್ಸಿಸಿಪ್ಪಿ ನದಿಯು ಇನ್ನೂ ಉಕ್ಕೇರುತ್ತಿದೆ ಎಂದು ವಾರ್ತೆ ಮುಂದಕ್ಕೆ ಮಳೆ ಬರುವ ಹಾಗಿರುವುದರಿಂದ, ಅಲ್ಲಿನ ಇಂಜಿನಿಯರುಗಳಲ್ಲಿ ದಿಗಿಲು ಉಂಟಾಗಿದೆ ಸಂಯುಕ್ತ ಅಮೇರಿಕಾದ ಎಲ್ಲಾ ಕಡೆಗಳಿಂದ ಭಯಂಕರ ನೆರೆಯ ವಾರ್ತೆಗಳು ಬರುತ್ತಿದ್ದಾವೆ.

ನೆರೆಹಾವಳಿಗೆ ಒಳಗಾದವರಿಗೆ ಯೋಗ್ಯ ಉಪಶಮನ ದೊರಕಿಸಲು, ಸರಕಾರ ಮತ್ತು ಇತರ ಅನೇಕ ಸಾರ್ವಜನಿಕ ಸಂಸ್ಥೆಗಳು ಶ್ರಮಪಡುತ್ತಿದ್ದಾವೆ ಅಮೇರಿಕಾದ ರೆಡ್ ಕ್ರೋಸ್ ಸಂಸ್ಥೆಯವರು ೧೭೦,೦೦೦ ಕುಟುಂಬಗಳ ಆರೈಕೆಮಾಡುತ್ತಾರೆ ಉಪಶಮನದ ಬಗ್ಗೆ ಧಾರಾಳ ಹಣವು ಒಟ್ಟಾಗಿದೆ

ಮಿಸ್ಸಿಸಿಪ್ಪಿ ನದಿಯು ಉಕ್ಕೇರದಂತೆ ಮಾಡಲು ೧೨೦ ಸಾವಿರ ಜನರು ಹಗಲಿರುಳು ದಣಿಯುತ್ತಿದ್ದಾರೆ. ನೆರೆಹಾವಳಿಗೆ ಒಳಗಾದ ಹತ್ತಿ ಬೆಳೆಸುವ ರೈತರಿಗೆ ಧನಸಹಾಯಭಾಗುವ ಏರ್ಪಾಡು ಅಲ್ಲಿನ ಸರಕಾರದಿಂದ ಮಾಡಲಾಗಿದೆ.

ಜರ್ಮನಿಯು ಮುಂದರಿಯುತ್ತಿದೆ

ವಾರ್ಸೆಲೆ ಸಂಕೋಲೆಯನ್ನು ಮುರಿದು ಹಾಕಿದ ಜರ್ಮನಿಯು ಈಗ ಸ್ವೇಚ್ಛೆಯಿಂದ ವರ್ತಿಸಲಾರಂಭಿಸಿದೆ ರೈನ್ ಲೇಂಡಿನಲ್ಲಿ ಅದು ಸಂಗ್ರಾಮ ಏರ್ಪಾಡನ್ನು ಮಾಡಿಬಿಟ್ಟಿತು ಯುದ್ಧ ನಷ್ಟಗಳನ್ನು ತಾವು ಹೊರಲು ಸಿದ್ಧರಿಲ್ಲವೆಂದುಬಿಟ್ಟಿತು ವಾರ್ಸಲೆ ಒಪ್ಪಂದದ ಎಲ್ಲಾ ಶರ್ತಗಳನ್ನು ಮುರಿದುಬಿಟ್ಟಿತು ಈಗಿನ ಸ್ಥಿತಿಯಿಂದ, ಅವರ ವರ್ತನೆಯನ್ನು ಸರಿಪಡಿಸಲು ಮಿತ್ರರಾಷ್ಟ್ರಗಳಲ್ಲಿ ಯಾರಿಗೂ ಸಾಧ್ಯವಾಗಲಿಲ್ಲ.

ಹಿಟ್ಲರನು ಈಗ ತನ್ನಿಂದ ಕಳೆದುಹೋದ ವಸಾಹತುಗಳನ್ನು ಕೇಳುತ್ತಿದ್ದಾನೆ. ಅಲ್ಲದೆ, ವಾರ್ಸಲೆ ಒಪ್ಪಂದ ಪ್ರಕಾರ ಜರ್ಮನಿಯು ಆರ್ಥಿಕ ವಹಿವಾಟಗಳೆಲ್ಲಾ ಬಾಸ್ಲೆ ಬೇಂಕಿನ ಸಂಸ್ಥೆಯ ಮೊಲಕ ನಡೆಯಬೇಕೆಂದಿತ್ತು. ಅದ ಕ್ಕೀಗ ಅವರು ತಿರಸ್ಕರಿಸಿ ಆರ್ಥಿಕ ವಿಚಾರದಲ್ಲಿ ಸ್ವತಂತ್ರವಾಗಿ ವರ್ತಿಸುವೆವೆಂದು ಪ್ರಕಟಿತವಾಗಿರುತ್ತದೆ.

ಅನಂತಪುರ ಜಿಲ್ಲೆಯಲ್ಲಿ ವಜ್ರದ ಘನಿ

ಜಗತ್ತಿನ ಉತ್ತಮ ಲೋಹಗಳ ಶೇಖರಗಳು ಅಕಸ್ಮಾತ್ತಾಗಿ ಕಂಡುಹಿಡಿಯಲ್ಪಟ್ಟವುಗಳು. ಕೋಲಾರ ಚಿನ್ನದಘನಿ, ಆಸ್ಟ್ರೇಲಿಯದ ಚಿನ್ನದ ಘನಿ, ಆಫ್ರಿಕಾದ ವಜ್ರದ ಘನಿಗಳು, ಇವುಗಳೆಲ್ಲಾ ಅಕಸ್ಮಾತ್ತಾಗಿ ಕಂಡುಹಿಡಿಯಲ್ಪಟ್ಟು, ಒಂದಾನೊಂದು ಕಾಲದಲ್ಲಿ ನಿರ್ಜನವಾಗಿರುವ ಪ್ರದೇಶಗಳನ್ನು ಇಂದ್ರಲೋಕದ ವೈಭವಗಳಿಂದ ಮೆರೆಯುವಂತೆ ಮಾಡಿತು. ದರಿದ್ರರು, ಧನಾಢ್ಯರಾದರು, ಧನಾಢ್ಯರು ದರಿದ್ರರಾದರು ಹೀಗೆ ಒಟ್ಟಿನ ಮೇಲೆ ಬಂಗಾರ, ವಜ್ರ ಇತ್ಯಾದಿಗಳ ಮಹಿಮೆಯು ಬಹಳ ವಿಚಿತ್ರತರದೆನ್ನಬಹುದು.

ಅನಂತಪುರದ ವಜ್ರಕರರು ಎಂಬಲ್ಲಿ ವಜ್ರಗಳು ದೊರಕಿವೆ. ಆದರೆ, ಅಲ್ಲೊಂದು ವಜ್ರದ ಘನಿಯನ್ನು ನಿರ್ಮಿಸಲು ಮಾಡಿದ ಭೂಗರ್ಭಶಾಸ್ತ್ರಜ್ಞರ ಪ್ರಯತ್ನಗಳು, ಇನ್ನೂ ಸಫಲವಾಗಲಿಲ್ಲ. ಅಲ್ಲಿ ವಜ್ರವಿರುವುದೊ ಎಂಬುದನ್ನು ಗೊತ್ತುಹಿಡಿಯುವುದರಲ್ಲಿ ಅನೇಕರು ಶ್ರಮಪಡುತ್ತಿದ್ದಾರೆ

ವಜ್ರ ಕರೂರಿನಲ್ಲಿ ವಜ್ರಘನಿಯು ಇರಬಹುದೆಂಬ ಊಹನೆಯು ಉಂಟಾಗಲು ಕಾರಣವೇನು? ಕೆಲಕಾಲದ ಹಿಂದೆ ಮಹಾ ಬೆಲೆಬಾಳುವ ಒಂದು ವಜ್ರವು, ಅಲ್ಲಿನ ಒಂದು ಗದ್ದೆಯಲ್ಲಿ ದೊರಕಿತು ಅಲ್ಲಿ ವಜ್ರದ ಶೇಖರವಿರುವುದರಿಂದಲೆ ಆ ವಜ್ರವು ದೊರಕಿರಬಹುದೆಂದು ಅನೇಕರ ಊಹನೆ

ವಜ್ರಕರೂರಿನಲ್ಲಿ ವಜ್ರಗಳನ್ನು ಹುಡುಕುತ್ತೆಗೆಯುವರೆ, ಅನೇಕ ವಿಜ್ಞಾನಿಗಳು ದಣಿಯುತ್ತಿದ್ದಾರೆ

೧೯೩೩ರಲ್ಲಿ ಓರ್ವ ರೈತನು ವಜ್ರಕರೂರಿನ ಸರಾಫರೊಬ್ಬರಲ್ಲಿ, ವಿಚಿತ್ರ ತರದ ಒಂದು ಕಲ್ಲನ್ನು ತರುವವನಾದನು. ಅದೊಂದು ಸಾಮಾನ್ಯ ಸ್ಫಟಿಕದ ಕಲ್ಲೆಂದು ಹೆಚ್ಚಿನವರು ಭಾವಿಸಿದರು ಆದರೆ, ಅದೊಂದು ವಜ್ರವಾಗಿರಬಹುದೆಂಬ ಊಹನೆಯಿಂದ ರೈತನು ಅದನ್ನು ಯಾರಿಗೂ ಕೊಡದೆ, ಕೊನೆಗೆ ಒಂದಾನೊಂದು ದಿನ ಅನೇಕ ವಜ್ರವ್ಯಾಪಾರಿಗಳು ಅವನಲ್ಲಿಗೆ ಬಂದು ಆ ಕಲ್ಲನ್ನು ೫ ಸಾವಿರ ರೂಪಾಯಿಗಳಿಗೆ ಪಡಕೊಂಡರು ಸ್ವಲ್ಪ ಸಮಯದ ನಂತರ ಅದೊಂದು ಉತ್ತಮ ತರದ ವಜ್ರವೆಂದು ಕಂಡುಹಿಡಿಯಲಾಗಿ ಅದಕ್ಕೆ ರೂ ೫೦ ಸಾವಿರ ಮೌಲ್ಯ ಬಂತು. ಹೀಗೆ ಓರ್ವ ಕ್ರಾರಿಕನಿಗೂ ಇನ್ನೊಬ್ಬ ಸಾಹೇಬನಿಗೂ ಹೀಗೆ ವಜ್ರಗಳು ದೊರಕೆ ಅವರು ಮಹಾ ಸಂಪತ್ತನ್ನು ಗಳಿಸುವವರಾದರು. ಕಳೆದ ವರ್ಷ, ವಜ್ರಗಳನ್ನು ಹುಡುಕಿಕೊಂಡು ವಜ್ರಕರೂರಿಗೆ ೫ ಸಾವಿರ ಮಂದಿಗಳು ಬಂದು, ಗುತ್ತಾಧಿ, ಹುಡುಕಾಡಿ, ನಿರಾಶರಾಗಿ ಹಿಂತೆರಳಿದರು. ಬಹಳ ದೂರದಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ ಎಲ್ಲರೂ ವಜ್ರಗಳನ್ನು ಅಲ್ಲಿನ ಗದ್ದೆಗಳಲ್ಲಿ ಮಾತ್ರ ಹುಡುಕುತ್ತಿರುವರು ಅಲ್ಲಿನ ಮಣ್ಣನ್ನು ಅಗೆದು, ಅದನ್ನು ತೊಳೆದು ಅವುಗಳನ್ನು ಹುಡುಕುವವರು ಅನೇಕರಿದ್ದಾರೆ

ವಜ್ರಗಳನ್ನು ಕೊಡುವ ತಾಯಿಕಲ್ಲು ವಜ್ರಕರೂರಿನಲ್ಲಿ ಇರಬಹುದೆಂದು ಬಲವಾದ ಊಹೆಯಿದೆ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಬೇಕಾದ ವಜ್ರಗಳೂ ವಜ್ರಕರೂರಿನಿಂದಲೇ ತೆಗೆಯಲಾಗಿದ್ದವೆಂದು ಚರಿತ್ರೆಯಿದೆ ಅಂದು ಹದಿನಾರನೇ ಶತಮಾನದಲ್ಲಿ ಅರ್ಧ ರಾತ್ತು ಬಾರದ ವಜ್ರಗಳು ಇಲ್ಲಿಂದಲೇ ತೆಗೆಯಲಾಯಿತೆಂದು ಹೇಳಿಕೆಯುಂಟು

ಹಿಂದೂದೇಶದ ವಜ್ರಗಳು ಅತ್ಯಂತ ಶ್ರೇಷ್ಠವಾದುವುಗಳೆಂದು ಜಗತ್ತಿನ ಎಲ್ಲಾ ವಿಜ್ಞಾನಿಗಳ ಮಾತಾಗಿರುತ್ತದೆ. ಆದ್ದರಿಂದ ಹಿಂದೂದೇಶದಲ್ಲಿ ವಜ್ರದ ಕೈಗಾರಿಕೆಯು ಬೇಗನೇ ಪ್ರಾರಂಭವಾಗಬೇಕು. ಆಫ್ರಿಕಾದ ಕಿಂಬರ್ಲಿ ವಜ್ರದ ಘನಿಗಳಿಂದ ಎಷ್ಟು ಜನರಿಗೆ ಉದ್ಯೋಗವು ದೊರಕಲಿಲ್ಲ? ಸಮಸ್ತ ದಕ್ಷಿಣಾಫ್ರಿಕದ ಚರಿತ್ರೆಯು ವಜ್ರದಿಂದ ಸಂಪೂರ್ಣವಾಗಿ ಮಾರ್ಪಟ್ಟಿತು. ವಜ್ರದಿಂದಲೇ ದಕ್ಷಿಣಾಫ್ರಿಕಕ್ಕೆ ಇಂದಿನ ಜಗತ್ತಿನ ಉನ್ನತ ಪದವಿಯು ದೊರಕುತ್ತದೆ ವಜ್ರಕರೂರು ಕಿಂಬರ್ಲಿ ತರದ ಪ್ರದೇಶವಾಗಿರಬಹುದೇ? ಆ ಕುರಿತು ಶೋಧೆಯು ನಡೆದು ಹಿಂದೂದೇಶದಲ್ಲೂ ವಜ್ರ ಗನಿಯು ಉಂಟೆಂದು ಸಿದ್ಧವಾಗಬೇಕು.

MATRIMONIAL.

WANTED: Saraswat Girls and Widows above 18, for immediate marriage. No sections, or sub sections, no provincial or language barriers. With full particulars of present age, education and other qualifications, — apply Saraswat Agency, 270 Frere Road, Fort Bombay Correspondence strictly confidentual

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿಯಾದದ್ದು.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ ಸಮಾಜ, ಪೆಂಡೆಪಿ

ಲೋನ ನಂಬ್ರ S L 76/35 ಸಾಲಗಾರರ ಹೆಸರು ಮತ್ತು ವಿಳಾಸ ಇನ್ನವಳ್ಳಿ ವಾಮು ಬ್ಯಾರಿ ಇದ್ದಿನ ಬ್ಯಾರಿಗಳ ಮಗ, ಇನ್ನವಳ್ಳಿ ಗ್ರಾಮ ಅರ್ಕುಳ ಪೋಸ್ಟು, ಸಾಲದ ಮೊಬಲಗು ರೂ 10—ಬಾಕಿಯಾಗುವ ಬಡ್ಡಿ ಯಾ ಖರ್ಚು ಸಹಾ 2-2-9

ಲೋನ ನಂಬ್ರ S L 120/35 ಇಸ್ಮಾಲಿ ಬ್ಯಾರಿ-ಮೈದಿನ ಬ್ಯಾರಿ ಮಗ, ವೊಂಟೆಪದವು, ನರಿಂಗಣ ಗ್ರಾಮ, ಮಂಜೇಶ್ವರ ಪೋಸ್ಟು, ಸಾಲದ ಮೊಬಲಗು ರೂ 10—ಬಾಕಿಯಾಗುವ ಬಡ್ಡಿ ಯಾ ಖರ್ಚು 1-15 8

ಲೋನ ನಂಬ್ರ S L 101/35 ಪೂವಪ್ಪ ಪೂಜಾರಿ ಐತು ಪೂಜಾರಿ—ಐತು ಪೂಜಾರಿ ಮಗ, ಕುರ್ನಾಡ … ಸಾಲದ ಮೊಬಲಗು ರೂ 10—ಬಾಕಿಯಾಗುವ ಬಡ್ಡಿ ಯಾ ಖರ್ಚು ಸಹಾ 1-18 4

ಲೋನ ನಂಬ್ರ L 282/34 ಚಕ್ಕಬ್ಬ ಬ್ಯಾರಿ, ಮರ್ಚಂಟ್ ಕಂಚಾರ ಗ್ರಾಮ ಬಜಪ್ಪೆ ಪೋಸ್ಟು, ಸಾಲದ ಮೊಬಲಗು ರೂ 50—ಬಾಕಿಯಾಗುವ ಬಡ್ಡಿ ಯಾ ಖರ್ಚು ಸಹಾ 6-8-2

ಬೇಂಕಿನ ಆಫೀಸು ತಾ 24-2 193 — M Mukund Kini *Agent.*

ತುಂಡು ಸುದ್ದಿಗಳು

ಗಡಿನಾಡಿನಲ್ಲಿ ಬಿ. ಬೀಟಿ ಎಂಬವರ ಕೊಲೆಯಾಗಿರುತ್ತದೆ ಇವರು ಒಬ್ಬ ಇಂಗ್ಲಿಷ ಸೈನ್ಯಾಧಿಕಾರಿಗಳು ಕೊಲೆಮಾಡಿದವರನ್ನು ಹಿಡಿದುಕೊಟ್ಟವರಿಗೆ ೧೦ ಸಾವಿರ ರೂಪಾಯಿಗಳ ಬಹುಮಾನವನ್ನು ಕೊಡುವುದಾಗಿ ಗಡಿನಾಡಿನ ಸರಕಾರದವರು ಪ್ರಕಟಿಸಿರುವರು

ಸಿಂಧಪ್ರಾಂತ್ಯದ ಅಸೆಂಬ್ಲಿ ಚುನಾವಣೆಯಲ್ಲಿ ಗವರ್ನರರ 'ಅಡ್ವೈಸರ'ರಾದ ಸರ್ ಶಾ ನವಾಬ್ ಖಾನ್ ಬುಟೋರವರು ಪರಾಜಯಹೊಂದಿರುತ್ತಾರೆ

ಮದ್ರಾಸ್ ನಗರಸಭೆಯು ಭಿಕ್ಷುಕಪೋಷಣಾಲಯಕ್ಕೆ ತಿರುವಾಂಕೂರಿನ ಮಹಾರಾಜರು ಒಂದು ಸಾವಿರ ರೂಪಾಯಿಗಳನ್ನು ಸಹಾಯವಾಗಿ ಕೊಟ್ಟಿರುವರು

ಸಂಯುಕ್ತ ಪ್ರಾಂತ್ಯದಲ್ಲಿ ಕತ್ತೆಕಿರುಬಗಳ ಕಾಟವು ಬಹಳ ಹೆಚ್ಚಿದೆ ಅನೇಕರು ಅವುಗಳಿಗೆ ಆಹುತಿಯಾಗಿರುವರಂತೆ ಅವುಗಳನ್ನು ಕೊಂದವರಿಗೆ ವಿಶೇಷ ಬಹುಮಾನಗಳನ್ನು ಕೊಡುವುದಾಗಿ ಸರಕಾರದವರು ನಿಶ್ಚಯಿಸಿರುವರು

ಹೈದರಾಬಾದ್ ಜಿಲ್ಲೆಗೆ ಸೇರಿದ ಗ್ರಾಮವೊಂದರಲ್ಲಿ ಒಬ್ಬ ಸುಹಾಗ್ಯವತಿಯು ಮರಣೋನ್ಮುಖಳಾಗಿ ಮಲಗಿದ್ದನು ಯಾರ ಮೇಲೆ ಪ್ರೀತಿ ಜಾಸ್ತಿ ಇರುವುದೆಂದು ತರ್ಕವುಂಟಾಗಿ ಅವನ ಕಿರಿಯ ಹೆಂಡತಿಯರೊಳಗೆ ಕಲಹವುಂಟಾಗಿ ಹಿರಿಯಳು ಕಿರಿಯಳನ್ನು ಕೊಂದಿಟ್ಟಳು ಈಗ ಅವಳ ದಸ್ತಗಿರಿಯಾಗಿದೆ

ಖಾನ್‌ಪುರದಿಂದ ಬೊಂಬಾಯಿಗೆ ಮುದ್ರೆ ಹಾಕಿದ ಪೆಟ್ಟಿಗೆಯಲ್ಲಿ ಕಳುಹಿಸಲ್ಪಟ್ಟ ೫೦ ಸಾವಿರ ರೂಪಾಯಿ ಬೆಲೆಬಾಳುವ … ಗಾರದ ಗಟ್ಟಿಯೊಂದ ನಾಪತ್ತೆಯಾಗಿದೆ ಅದರ ಬದಲಿಗೆ ಕಬ್ಬಿಣದ ತುಂಡುಗಳು ಇದ್ದವಂತೆ

ಬೊಬ್ಬಿಲಿ ಮಹಾರಾಜರು ಚುನಾವಣೆಯಲ್ಲಿ ಸೋತರು

ಕಾಂಗ್ರೆಸ್ ಉಮೇದ್ವಾರಿಗಳಾದ ವಿ ವಿ ಗಿರಿಯವರು ಜಯಶಾಲಿಗಳಾದರು

ಡಾ|| ಯು ರಾಮರಾಯರ ವಿಜಯ

ಮದ್ರಾಸ ನಗರದಿಂದ ಕಾಂಗ್ರೆಸು ಉಮೇದ್ವಾರಾಗಿ ಕಾಂಗ್ರೆಸ್ ಕಡೆಯದ ನಿಂತಿದ್ದ ಕನ್ನಡ ಮುಂದಾಳುಗಳಾದ ಡಾ|| ಯು ರಾಮರಾಯರೂ ಇನ್ನೊಬ್ಬ ಕೊಂಗ್ರೆಸು ಉಮೇದ್ವಾರಿಯೂ ಹೆಚ್ಚಿನ ಬಹುಮತದಿಂದ ಆರಿಸಿಬಂದಿರುವರು ಮದ್ರಾಸ ನಗರದಿಂದ ಕಾಂಗ್ರೆಸಿಗೆ ವಿರೋಧ ಜಸ್ಟಿಸು ಪಕ್ಷೀಯರಲ್ಲಿ ಒಬ್ಬರೂ ಆರಿಸಲ್ಪಡಲಿಲ್ಲ

ಬ್ರಿಟಿಷ ಅಭಿಪ್ರಾಯ

ಲಂಡನ್ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ತನ್ನ ಅಗ್ರಲೇಖದಲ್ಲಿ ಭಾರತದ ಹಿತದೃಷ್ಟಿಯಲ್ಲಿ ಕಾಂಗ್ರೆಸ್ಸು ಬಹುಮತವಿದ್ದ ಪ್ರಾಂತ್ಯಗಳಲ್ಲಿ ಅಧಿಕಾರ ಸ್ವೀಕಾರ ಮಾಡಬೇಕೆಂದು ಬರೆಯುತ್ತದೆ ರಾಜ್ಯಾಂಗ ರಚನೆಯು ಫಲಿಸುವಂತೆ ಮಾಡಿದ ನ್ಯಾಯ ಪ್ರಯತ್ನದಿಂದ ಕಾಂಗ್ರೆಸ್ಸಿನ ಯಾವ ಧ್ಯೇಯಕ್ಕೆ ಕುಂದುಂಟಾಗುವದೆಂಬುದೂ ಪೂರ್ಣ ವಿರೋಧದಿಂದ ಪ್ರಯೋಜನವೇನೆಂಬುದು ತಿಳಿಯುವುದಿಲ್ಲವೆಂದೂ ಅದು ಹೇಳಿದೆ

ಪೆಲೆಸ್ತೀನದಲ್ಲಿ ಭಯಂಕರ ದಂಗೆ

ಟ್ರಿಬಸ್ಸ್‌ದಲ್ಲಿ ಅರಬರಿಗೂ ಜ್ಯೂ ಜನರಿಗೂ ತಾ ೨೦ರಲ್ಲಿ ಭಯಂಕರ ಹೊಡೆದಾಟವಾಗಿ, ಅನೇಕ ಪೋಲೀಸರಿಗೆ ತುಂಬಾ ಗಾಯಗಳಾಗಿವೆ ಪೋಲೀಸರು ಗುಂಡು ಹಾರಿಸಿದರು ಸೈನ್ಯವನ್ನು ಕರೆಸಿಕೊಳ್ಳಬೇಕಾಯಿತು ಸೈನಿಕರೂ ಗುಂಡು ಹಾರಿಸಿದರು ಇದರಿಂದ ೬೦ ಜನರು ಮರಣಹೊಂದಿದರು

ಈಗ ನಗರದಲ್ಲಿ ಶಾಂತತೆಯನ್ನು ಸ್ಥಾಪಿಸುವುದಕ್ಕಾಗಿ ಕರಫ್ಯೂ ಆರ್ಡರು ಹೊರಡಿಸಲ್ಪಟ್ಟಿದೆ.

ಅಸೆಂಬ್ಲಿಯಲ್ಲಿ ಪ್ರಶ್ನೆಯನ್ನು ಕೇಳುವ ವಿಚಾರದಲ್ಲಿ ನವನಿಬಂಧನೆಗಳಾಗಿದ್ದುವು. ಇದನ್ನು ಖಂಡಿಸುವುದಕ್ಕಾಗಿ ಮಿ| ಆಸಫ್ ಅಲಿಯವರು ಒಂದು ಅವಸರದ ಠರಾವನ್ನು ಲಿ| ಅಸೆಂಬ್ಲಿಗೆ ಸೂಚಿಸಿದ್ದಾರೆ

ಬೆಂಗಳೂರಲ್ಲಿ ಭಾರತ ವಿಜ್ಞಾನ ಪರಿಷತ್ತಿನ ಕೌನ್ಸಿಲ್ ಮೀಟಿಂಗು ಇದೇ ತಿಂಗಳ ತಾ ೨೫ನೇ ದಿನ ಭಾರತ ವಿಜ್ಞಾನ ಪರಿಷತ್ತಿನ ಆವರಣದಲ್ಲಿ ನಡೆಯುವುದು

ಪರಿಷತ್ತಿನ ೧೭ನೇ ವೈಜ್ಞಾನಿಕ ಸಭೆಯು ಇದೇ ಬರುವ ಮಾರ್ಚ ತಾ ೬ನೇ ಶನಿವಾರ ಸಾಯಂಕಾಲ ೫ ಗಂಟೆಗೆ ತಾತಾ ವಿಜ್ಞಾನ ಮಂದಿರದಲ್ಲಿ ಸೇರುವುದು

ನೋಟೀಸು

ಕುಂದಾಪುರದ ಡಿ ಮು ಕೋರ್ಟಿನಲ್ಲಿ.

R L P 760/36

ಮುಳಿಗೆ ಸಣ್ಣಯ್ಯ ಹಂಡೆ-ಅರ್ಜಿದಾರ

ರಾಮಕೃಷ್ಣ ಶ್ಯಾನಭಾಗ ಗಿಳಿಯಾರು ಗ್ರಾಮದ ಪರಂಪ್ತೀರ್ಥ ಪೇಟೆ-ಎದುರು

ಸದ್ರಿ ಎದುರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಮೇಲ್ಕಂಡ ಆ ಮುಲ್ … ಯಲ್ಲಿ ಏಲಂ ಇಸ್ತಿಹಾರಿನ ಶರತ ನಿರ್ಣಯಿಸುವರೆ ವ ಪರ್ಮಿಶನ್ ಬಗ್ಗೆ ಕೊಟ್ಟ ಅರ್ಜಿ ಸಹಾ ತಾ 1-3-37ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆಕ್ಷೇಪ ಇರುವುದಾದರೆ ಸಹ ಈ ದಿನ ಹಗಲು 11 ಗಂಟೆಗೆ ಮದ್ದಾನ್ಹರು ಕೋರ್ಟಿನಲ್ಲಿ ಹಾಜರಾಗಿ ವಾದಿಸಿಕೊಳ್ಳುವುದು

(Sd) A V N Hebbar
Pleader for Dft

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

… ಬಿಲ್ಡಿಂಗ್ಸ್ ಹಂಪನಕಟ್ಟೆ ಮಂಗಳೂರು

ESTD 193

12 ವರ್ಷದೊಳಗಿನ ಬಾಲಕಬಾಲಿಕೆಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್ ನಾರಾಯಣರಾವ್,
… ವಿದ್ವಾನ್ ಹಾರ್ಮೋನಿಯಂ … ಮತ್ತು … ಸಂಗೀತ …

MATRIMONIAL

WANTED: Saraswat Girls and Widows above 18 for immediate marriage No sections or sub sections, no provincial or language barriers With full particulars of present age education and other qualifications — apply Saraswat Agency 270 Frere Road Fort Bombay Correspondence strictly confidential

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿಯಾದದ್ದು

ವೀರ್ಯದೋಷ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅನೋಘವಾದದ್ದು ಸ್ತ್ರೀ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ.1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ …, ಪೆರ್ಡೆಪು
P. O. Perdepu

ಮದನಶಾಸ್ತ್ರ ಎಂಬ ಪ್ರೇಮ ರಹಸ್ಯಗಳು— ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಕಟವಾಗಿದೆ, ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಫ್ರಾಂಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿವೆ, ಮಲಗುವ ಮನೆಯಲ್ಲಿ ವ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೊನೆಗೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1 ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ 287 ಮದರಾಸ್.

ಡಾಕ್ಟರ ವಾಮನ್ನ ಗೋಪಾಳರವರ



ಅಪೂರ್ವಯುಕ್ತ ಸಾರ್ವಕಾಲಿಕ. ಶಕ್ತಿ ರಕ್ತ ವರ್ಧನೌಷಧ ೪೫ ವರ್ಷದ ಅನುಭವ. ಉಪಯೋಗಿಸಿದವರೇ ಹೇಳಿದ್ದಾರೆ.—
ಡಾ॥ ಗೌತಮ ರಾವ್ ಕೇಶವರವರ ಫೋಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟೋಕಿಸ್ಟ— ಪಾ ಕಂಪೆನಿ, ಮಂಗಳೂರು,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!
೫ ಅಂಕಗಳುಳ್ಳ) ಭಕ್ತಶಿಖಾಮಣಿ ದಾಮಾಜಿಪಂತ (ಸಂಗೀತ ನಾಟಕ
ಬರೆದವರು,—ಶ್ರೀ. ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.
ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—
"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಕೇಳುತಿರು!" ॥
ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ತಿಳಿ ವುದಲ್ಲದೆ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಮನೋಹರವಾದ ೩೫ ಗೀತಗಳನ್ನೂ ಕಥಾಪ್ರಾರಂಭದಲ್ಲಿ ಪಾತ್ರಗಳ ಚಿತ್ರವನ್ನೂ, ಭಾಷೆಯ ಲಾಲಿತ್ಯ, ಸಂಗೀತದ ಚಮತ್ಕಾರ—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ
ಪುಸ್ತಕದ ಪ್ರತಿಗಳು ಸಿಗುವ ಸ್ಥಳಗಳು—1. ಎಲ್ಯಾಯ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೮ನೇಯ ಧಾತು ಸಂವತ್ಸರದ ಮಾಘ ಬ॥ ೨ ಶನಿವಾರದಿಂದ,
ಮಾಘ ಬ॥ ೮ ಶುಕ್ರವಾರದ ವರೇಗಿನ ಪಂಚಾಂಗ. (೧೯೩೭ನೇಯ ಕುಂಭ (ಮಾಯಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಹಬ್ಬ
27	ಶನಿ	೨	೨೨	ಉತ್ತರ	೨೪	೧೬	
28	ರವಿ	೩	೨೮	ಹಸ್ತ	೨೯	೧೭	
1	ಸೋ	೪	೩೦	ಚಿತ್ರ	೩೫	೧೮	
2	ಕುಜ	೫	೩೫	ಸ್ವಾತಿ	೪೧	೧೯	
3	ಬುಧ	೬	೪೦	ವಿಶಾಖ	೪೭	೨೦	
4	ಗುರು	೭	೪೫	ಅನುರಾಧ	೫೪	೨೧	
5	ಶುಕ್ರ	೮	೫೦	ಜ್ಯೇಷ್ಟ	೫೯	೨೨	

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	3— 6	3— 10
ಮುಷ್ಟಿ ...	3— 8	4— 4
ಗುಡ್ಡ ...	3—10	3—14
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬಿ. ಗೋ. ಅಕ್ಕಿ ...	7 — 0	7— 4
ಎಲ್ಲೂರು ಬಿ. ಮು. ಅಕ್ಕಿ .	3—12	3—12
ಗೋದಿ ಗೋಣಿ ೧ಕ್ಕೆ ..	11— 0	13— 0
ಕೊಂಗು ಗೋಣಿ ೧ಕ್ಕೆ ...	9 — 8	12— 8
ಹುರುಳಿ ಗೋಣಿ ೧ಕ್ಕೆ ...	5— 0	5 — 6
ಕಡಲೆ ಗೋಣಿ ೧ಕ್ಕೆ ...	8 — 0	12 — 8
ತೊಗರಿಬೇಳೆ ಗೋಣಿ ೧ಕ್ಕೆ ...	11— 0	19— 0
ಉದ್ದು ಗೋಣಿ ೧ಕ್ಕೆ ..	9— 0	9 — 8
ಹೆಸರು ಗೋಣಿ ೧ಕ್ಕೆ ...	7—12	8— 0
ಊರುಬೆಲ್ಲ ಖಂಡಿ ೧ಕ್ಕೆ ...	30— 0	32— 8
ಉಪ್ಪು ಗೋಣಿ ೧ಕ್ಕೆ ...	4— 2	5— 4
ಕೊಬ್ರಿ ಖಂಡಿ ೧ಕ್ಕೆ ..	75— 0	84— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ..	26 — 8	28— 8
ಎಳ್ಳಿಂಡಿ ಖಂಡಿ ೧ಕ್ಕೆ ...	26 — 4	27 — 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	6— 0	7 — 0
ಎಳ್ಳೆಣ್ಣೆ ಮಣ ೧ಕ್ಕೆ ...	7— 0	7— 0
ಹರಳೆಣ್ಣೆ ಬಟ್ಟಿಗೆ ೧ಕ್ಕೆ ..	6— 5	7— 5
ಮೋರಿಸ ಸಕ್ಕರೆ ಮು. ೧ಕ್ಕೆ .	3— 2	3 — 4
ಮೆಣಸು	2— 8	5— 0
ಸಾಸಿವೆ ಮುಡಿ ೧ಕ್ಕೆ	5 — 4	5— 8
ಕಾಳುಮೆಣಸು ಖ ೧ಕ್ಕೆ	100— 0	120 0
ಮೆಂತ್ಯೆಬೀಜ ಮುಡಿ ೧ಕ್ಕೆ	80— 0	80— 0
ಗೇರುಬೀಜ ಮು. ೧ಕ್ಕೆ	3 — 4	3 — 8
ಕಚ್ಚಿಲ ಖಂಡಿ ೧ಕ್ಕೆ	35— 0	37— 8
ತಾಂಬ್ರದ ತಗಡು ಮ ೧ಕ್ಕೆ .	12— 4	12— 8
ತಾಂಬ್ರದ ಪಾತ್ರೆಗಳು ಮ ೧ಕ್ಕೆ	12— 8	14— 0
ಜೇನಮೇಣ ಸೇರು ೧ಕ್ಕೆ	13— 8	15— 0
ಹಿತ್ತಾಳೆ ತಗಡು ಮ. ೧ಕ್ಕೆ	10— 0	10— 8
ಜವಸು ೧ಕ್ಕೆ .	22— 7	22— 8
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0
ಪೇಟೆಂಟ್ ಕಾಫಿ ಖಂಡಿ ೧ಕ್ಕೆ	170— 0	180— 0
ಫ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	175— 0	195— 0
ಮಡಕೇರಿ ಏಲಕ್ಕಿ .	50— 0	55 — 0

Break Pills!

Take To-Night

Prepared by a Sage out of Ambar Saffron Gold Musk with Himalayan Drugs recover lost energy Strength Nervous Debility and all Disorders in Spinal Cord Regains lost vitality Gives marvellous effect 60 Pills Rs 5 Sample 30 Pills Rs 3 List Free

Dr A S. MURTHI CHICACOLE

DIAMONDS! DIAMONDS!
BEST BRILLIANCY
K. R. K. SHET,
Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಏನ್ಟ್ವರ್ಪದಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಪಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ, ಮಂಗಳೂರು

ಹೊಸ ವರ್ಷದ ರಿಯಾಯಿತಿ
ರಾಸ್ಕೋಪ್ ಲಿವರ ರಿಸ್ಟ್ ವಾಚುಗಳು
(೫ ವರ್ಷಗಳ ಅಖಂಡ ಗ್ಯಾರಂಟಿ)



ರಜತ (ಬೆಳ್ಳಿ) ವರ್ಣದ ಕರಡಿಗೆ ರಾಸ್ಕೋಪ ಲಿವರ ವಾಚ್ ಗಳು ಅತ್ಯಾಧುನಿಕ ಮಾದರಿಯ ಉತ್ಕೃಷ್ಟ ಶಿಲ್ಪ—ಉತ್ತಮ ಯಂತ್ರ ಸಾಮಗ್ರಿಗಳಿಂದ ರಚಿತವಾದುದರಿಂದ ತಪ್ಪಿಲ್ಲದ ಸಮಯವನ್ನು ತೋರುತ್ತವೆ. ಹೊಸ ವರ್ಷದ ಮಾರಾಟಕ್ಕಾಗಿ ಅಗಾಧ ರಿಯಾಯಿತಿ ದರಗಳು

ಉರುಟಾದ ನಿಕ್ಕಲ್ ಕೇಸ್ ಇದ್ದುದಕ್ಕೆ ರೂ 3 6-0
ಉರುಟಾದ ಬಂಗಾರದ ವರ್ಣದ ಕೇಸ್ ಇದ್ದುದಕ್ಕೆ ರೂ 4-10-0
ಬೆಳಕ ಮತ್ತು ಅಯಿತ ಅಳವಡುಗಳ
ಕ್ರೋಮಿಯಂ ಕೇಸ್ ಇದ್ದುದಕ್ಕೆ ರೂ 5-10-0
ಬಂಗಾರದಂತಹ ಕೇಸ್ ಇದ್ದುದಕ್ಕೆ ರೂ 6-10-0
ಹತ್ತು ವರ್ಷದ ಗ್ಯಾರಂಟಿ
ರೋಲ್ಡ್ ಗೋಲ್ಡು ಕೇಸ್ ಇದ್ದುದಕ್ಕೆ ರೂ. 11-8-0
9 ಕೆರೆಟ್ ಬಂಗಾರ ಕೇಸ್ ಇದ್ದುದಕ್ಕೆ ರೂ 22-8-0
3 ವಾಚುಗಳನ್ನು ತರಿಸುವವರಿಗೆ ಟಪ್ಪಾಲು ಖರ್ಚು ಮುಫತ್ತಾಗಿ ದೊರೆಯುತ್ತದೆ.
ವಾಚುಗಳು ಚೆನ್ನಾಗಿ ತೋರದಿದ್ದಲ್ಲಿ, ಹಣ ವಾಪಾಸು ಮಾಡುತ್ತೇವೆ.
ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲೇ ಬರೆಯಿರಿ—

Modern Trading Co.
119 Surendranath Banerjee Road,
CALCUTTA.

THE
BANK OF MANGALORE LTD.,
MANGALORE
ESTD 1931

Branches–
Panemangalore, Mudabidri & Padubidri

Chairman—Phillip J. Chandran, Esq.,
Retd Dt. Registrar of Joint Stock Companies

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.
Saving Bank deposit 3½% on daily balances
All kinds of banking business transacted
U. R. PAI, N. U. PAI, *Managing Directors.*

ಬಿಳಿ ತೊನ್ನು ಮತ್ತು ಕುಷ್ಠರೋಗ

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷಗಳಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುವು. ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ. ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು. ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ಉತ್ತರ ತೆಗೆದುಕೊಳ್ಳಲಾಗಲಿಕ್ಕಿಲ್ಲ

Vaidyaraj Akil Kishore Ram,
No 62 P. O Katrisarai (Gaya)

ಎಲ್ಲಾ ತರದ
ಶುದ್ಧ ಖಾದಿಗೆ
ಸ್ವದೇಶಿ ವಸ್ತುಗಳಿಗೆ
ಮಂಗಳೂರು ಸ್ವದೇಶಿ ಸ್ಟೋರ್ಸ್
ರಥಬೀದಿ, ಮಂಗಳೂರು.

ಪ್ರಪಂಚ ವಿಚಾರ.

ಭೂಪಟ ಚಿತ್ರಗಳನ್ನು ತಯಾರಿಸುವುದರಲ್ಲಿ ಅಗ್ರಗಣ್ಯನಾದ ಫರ್ಡಿನಾಂಡ್ ಬಿಯರ್ನೇಕ್ ಎಂಬ ವೈಮಾನಿಕನು ಅಲ್ಪ ಪ್ರದೇಶದ ಹಿಮ ಪ್ರಾಂತ್ಯದಲ್ಲಿ ಆಟವಾಡುತಿದ್ದಾಗ ಮೃತಪಟ್ಟಿರುವನು. ಅವನು ಹಿಮಾಲಯದ ಸಂಧ್ಯಾಪ್ರಭಾತದ ಶಿಖರದ ಭೂಪಟವನ್ನೂ ತಯಾರಿಸಿರುವನು.

ಪ್ರಖ್ಯಾತ ಇಂಗ್ಲೀಷ್ ನಾಟಕ ಲೇಖಕರೂ, ವಿಮರ್ಶಾಗಾರರೂ ಆದ ಮಿ। ಎಡ್ವರ್ಡ ಗಾರ್ನೆಟ್‌ರವರು ಮರಣಪಟ್ಟಿರುವರು.

ಜಿನಿವಾದಲ್ಲಿ ಮಾರ್ಚ ೮ನೇ ತಾರೀಕಿಗೆ ನಡೆಯಲಿರುವ ಅವಶ್ಯ ಪದಾರ್ಥಗಳ ಸಮ್ಮೇಳನಕ್ಕೆ ಜರ್ಮನಿಯು ಸಹಕರಿಸಲಾಗುವುದಿಲ್ಲವೆಂದು ತಿಳಿಸಿರುವುದು

ಯುರೋಪಿನಲ್ಲಿ ಇನ್ನೊಂದು ಯುದ್ಧವು ಸಂಭವಿಸಿದರೆ ಜರ್ಮನಿಗೆ ಅದರಿಂದ ಬಹಳ ಕೇಡು ಸಂಭವಿಸುವುದೆಂದು ಹರ್ ಹಿಟ್ಲರನೇ ಒಂದು ಭಾಷಣದಲ್ಲಿ ತಿಳಿಸಿರುವನು.

ಸರ್ಪಗಳಿಂದ ಕಡಿಸಿಕೊಳ್ಳುವುದೇ, ಜೊಹಾನ್ಸ್‌ಬರ್ಗನ ಜಾನ್ ಹೆನ್ರಿ ಎಂಬವನಿಗೆ ಒಂದು ಸಂತೋಷ ಅವನಿಗೆ ೪೦ ಸಲ ಸರ್ಪ ಕಡಿತವಾಗಿದ್ದರೂ ಅವನು ಸಾಯಲಿಲ್ಲ ಕಡೆಗೆ ೪೧ನೇ ಸಲ ಒಂದು ಹಾವಿಗೆ ನೀರು ಕೊಡುತ್ತಿರುವಾಗ, ಅದು ಕಚ್ಚಿದಾಗ ಮಾತ್ರ ಅವನು ಸತ್ತುಹೋದನು

ದ ಆಫ್ರಿಕಾದಯೂನಿಯನ್ ಕ್ಯಾಬಿನೆಟ್ಟಿನಲ್ಲಿ ವಿವಾಹ ಮಸೂದೆಗಳ ಬಗ್ಗೆ ಮಂತ್ರಿಗಳಲ್ಲಿ ಮನಸ್ತಾಪವುಂಟಾಗಿದೆ ಮಿ। ಹಾಫ್‌ಮೇಯರವರು ರಾಜಿನಾಮೆ ಕೊಟ್ಟಿರುವರು

ಎಕ್ಸರೇ ವಿಧಾನದ ಮೂಲಕ ಕಿತ್ತಳೇ ಹಣ್ಣಿನೊಳಗಿನ ಭಾಗವನ್ನು ನೋಡಲಾಗುವ ಒಂದು ಯಂತ್ರವನ್ನು ಕಂಡುಹಿಡಿದಿರುವರು. ಇದರಿಂದ ಹಣ್ಣು ಒಳ್ಳೆಯದೋ ಕೆಟ್ಟದೋ ಎಂದು ಮೊದಲೇ ನೋಡಿಕೊಳ್ಳಬಹುದು ಒಂದು ಯಂತ್ರದಿಂದ ಘಂಟೆಗೆ ೩೩ ಸಾವಿರ ಹಣ್ಣುಗಳನ್ನು ಪರೀಕ್ಷಿಸಬಹುದು

ಬ್ರೆಜಿಲಿನ ವೈನಾನ್ ಜೆರಾಸ್ ಎಂಬಲ್ಲಿನ ಮುನಿಸಿಪಲ್ ಚುನಾವಣೆಗಳಲ್ಲಿ ಸರಕಾರಿ ನೌಕರರು ಭಾಗವಹಿಸಲಿಲ್ಲವೆಂಬುದಕ್ಕೆ ಇದಕ್ಕಾಗಿ ಅವರನ್ನು ಕೆಲಸದಿಂದ ತೆಗೆದುಹಾಕುವುದಾಗಿ ಬ್ರೆಜಿಲ್ ಸರಕಾರವು ನಿರ್ಧರಿಸಿದೆ

೧೯೩೬ನೇ ವರ್ಷದ ೯ ತಿಂಗಳಲ್ಲಿ ಬ್ರಿಟನು ೧೩೭,೫೮೯,೯೦೦ ಪೌಂಡುಗಳ ಶಸ್ತ್ರಾಸ್ತ್ರಗಳನ್ನು ತಯಾರಿಸಿರುವುದು

ಇಂಗ್ಲೆಂಡಿನ 'ಚಿಚೆಸ್ಟರ್ ಬಿಷಪರಾದ, ಜೆ. ಕೆ ಪಿ ಬೆಲ್‌ರವರು, 'ಚಿಚೆಸ್ಟರ್ ಡಯೋಸೀಜನ್ ಗಜೆಟ್' ಎಂಬ ಪತ್ರಿಕೆಯಲ್ಲಿ ಚಕ್ರವರ್ತಿಗಳ ಕಿರೀಟಧಾರಣ ಮಹೋತ್ಸವದ ವಿಷಯದಲ್ಲಿ ಬರೆಯುತ್ತಾ, ಸಾವಿರಾರು ಜನರು ಹೊಟ್ಟೆಗೆ ಅನ್ನವಿಲ್ಲದೆ ಸಾಯುತ್ತಿರುವರೆಂದೂ, ದೇಶದ ಈ ಪರಿಸ್ಥಿತಿಯಲ್ಲಿ ಕಿರೀಟಧಾರಣ ಉತ್ಸವಕ್ಕೆಂದು ವಿಶೇಷ ದುಡ್ಡು ಖರ್ಚುಮಾಡುವುದು ಶುದ್ಧ ಮೂರ್ಖತನವೆಂದೂ ಅಭಿಪ್ರಾಯಪಟ್ಟಿರುತ್ತಾರೆ

ರೋಗಿಗಳು ಒಂದು ದಿನದಲ್ಲಿ ಬಹಳ ಹೊತ್ತು ಹಾಸಿಗೆಯನ್ನು ಹಿಡಿದು ಮಲಗಿದರೆ ರೋಗವು ಜಾಗ್ರತೆಯಾಗಿ ಗುಣವಾಗುವುದಿಲ್ಲವೆಂದು ಜರ್ಮನಿಯ ಸುಪ್ರಸಿದ್ಧ ವೈದ್ಯರೊಬ್ಬರು ಅಭಿಪ್ರಾಯಪಟ್ಟಿರುವರು

ಕೆಲಸಗಾರರ ವರ್ಗದವರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡುವುದರಲ್ಲಿ ಇಂಗ್ಲೆಂಡು ಇತರ ರಾಷ್ಟ್ರಗಳಿಗಿಂತ ಬಹಳ ಮುಂದೆ ಇದೆ

ಕಿರೀಟಧಾರಣ ಮಹೋತ್ಸವ ಸ್ಮಾರಕವಾಗಿ ಮಾದರಿ ನಮೂನೆಯ ಹೊಸ ಬಂಗಾರದ ನಾಣ್ಯಗಳನ್ನು ಹೊರಪಡಿಸುವ ಏರ್ಪಾಡಾಗಿದೆಯಾಗಿ ಖಜಾನೆಯ ಕಾರ್ಯದರ್ಶಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ.

ಮ್ಯಾಡ್ರಿಡ್ಡಿನಲ್ಲಿ ನಡೆಯುತ್ತಿರುವ ಕದನದಲ್ಲಿ ದಂಗೆಕಾರರು ಇಂಟರ್ ನ್ಯಾಶನಲ್ ಸೈನ್ಯದ ೩೫ ಮಂದಿ ಬ್ರಿಟಿಷರನ್ನು ಕೈದುಮಾಡಿರುವರೆಂದು ತಿಳಿದಿದೆ.

ಲಂಡನಿನಲ್ಲಿರುವ ಬಂಗಾಳೀ ವಿದ್ಯಾರ್ಥಿಗಳು ಸರಸ್ವತಿ ಪೂಜೆಯನ್ನು ಬಹು ಸಂಭ್ರಮದಿಂದ ಮಾಡಿದರು. ಅಂದಿನ ಕಾರ್ಯಕ್ರಮಗಳು ಹಿಂದೂ ಶಾಸ್ತ್ರಕ್ಕನುಗುಣವಾಗಿ ನಡೆದುವು. ಪವಿತ್ರ ಗಂಗಾಜಲವನ್ನು ಈ ಸಂದರ್ಭದಲ್ಲಿ ಹಂಚಿದರಂತೆ.

ಆಫ್ರಿಕದಲ್ಲಿ ಸಂಚರಿಸುತಿದ್ದ ಆಗಾಖಾನರು ನೈರೊಬಿಗೆ ಪತ್ನೀಸಹಿತರಾಗಿ ಬರಲಿರುವಾಗ ಅವರಿಗೆ ಅಭೂತಪೂರ್ವ ಸ್ವಾಗತವನ್ನು ಕೊಡಲು ಸಾವಿರಾರು ಭಾರತೀಯರು ಆಫ್ರಿಕಾದ ಎಲ್ಲಾ ಕಡೆಗಳಿಂದಲೂ ಸಹಕರಿಸಲಿರುವರು.

ಮಾಜಿ ಅರಸರು ಎಡ್ವರ್ಡರಿಗೆ ವರ್ಷಾವಧಿ ಪರಮಾನವನ್ನು ಕೊಡಿಸಬೇಕೆಂದುದರ ಮೇಲೆ ಚರ್ಚೆಯು ಪಾರ್ಲಿಮೆಂಟಿನಲ್ಲಿ ಬಂದಿದ್ದು ಲೇಬರ್ ಪಕ್ಷದವರ ಎದುರಾಳಿತ್ವದಿಂದ ಆ ಠರಾವು ಬಿದ್ದುಹೋಯಿತು ಈಗ ರಾಜಕುಟುಂಬದವರು ತಮ್ಮ ಸ್ವಂತ ಖಜಾನೆಯಿಂದ ಅವರಿಗೆ ತೆರುವರೆಂದು ತಿಳಿದುಬಂದಿದೆ.

ಅಮೇರಿಕದ ಸುಪ್ರಸಿದ್ಧ ವೈಮಾನಿಕ ಧುರೀಣರಾದ ಕರ್ನಲ್ ಲಿಂಡ್‌ಬರ್ಗರವರು ಪತ್ನಿಯೊಂದಿಗೆ ಹಿಂದೂದೇಶವನ್ನು ಸಂಚರಿಸುಲಿದ್ದಾರೆ ಕೆಲವು ವರ್ಷಗಳ ಕೆಳಗೆ, ಇವರ ಮಗುವನ್ನು ಹಾಪ್ಟಮೇನ್ ಎಂಬವನು ಅಪಹರಿಸಿದ್ದು, ಆ ಕಥೆಯು ಪ್ರಪಂಚವನ್ನು ದಿಗಿಲುಮಾಡಿರುತ್ತದೆ " ಈಗ ಇವರ ಜೋಧಪುರದಲ್ಲಿರುವರು

ಇಂಗ್ಲೆಂಡಿನಲ್ಲಿ ಇನ್ನುಮುಂದೆ ನಡೆಯುವ ಚುನಾವಣೆಗಳಲ್ಲಿ ಉಮೇದುವಾರರು, ತಮ್ಮ ವೋಟರರೊಂದಿಗೆ ಟೆಲಿಫೋನುಗಳ ಮುಖಾಂತರ ಮಾತನಾಡಿ ಪ್ರಚಾರಕಾರ್ಯ ನಡೆಸುವರಂತೆ

ಇಂಡಿಯಕ್ಕೆ ಮಾಜಿ ಸೆಕ್ರೆಟರಿ ಆಫ್ ಸ್ಟೇಟರಾಗಿದ್ದ ವಿ ವೆಜ್‌ವುಡ್ ಬೆನ್‌ರವರು ಪಾರ್ಲಿಮೆಂಟ್ ಮೆಂಬರರಾಗಿ ಚುನಾವಣೆ ಹೊಂದಿರುವರು ಕಾಯಿದೇಭಂಗ ಸತ್ಯಾಗ್ರಹ ಚಳವಳಿ ಕಾಲದಲ್ಲಿ ಇವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿದ್ದರು.

ಗೆಷೆರಿನ್ ಪೊಷೆ ಎಂಬ ಟಿಬೇಟ್ ದೇಶದ ಪಂಡಿತನೊಬ್ಬನು, ಹಿಂದೀಯ ರಾಜಕೀಯ, ಮತವಿಚಾರಗಳನ್ನು ತಿಳಕೊಳ್ಳಲಿಕ್ಕಾಗಿ ಭಾರತ ಸಂಚಾರ ಮಾಡುತ್ತಲಿದ್ದಾರೆ

ಕೊಲೊಂಬೊ ಜೈಲಿನೊಳಗಿದ್ದ ಕೈದಿಯೋರ್ವನು ಒಂದೇ ಸಾರಿ ೧೦ ಘಂಟೆಯ ಕಾಲ ತನ್ನ ಕೊಠಡಿಯಿಂದ ಕಾಣೆಯಾಗಿದ್ದನು. ಮಾರನೇ ದಿನ ಆತನು ಜೈಲು ಅಧಿಕಾರಿಯ ಬಳಿಗೆ ಬಂದು, ತನ್ನ ಹೆಂಡತಿಮಕ್ಕಳು ಅನ್ನವಿಲ್ಲದೆ ಸಾಯುತ್ತಿರುವರೆಂದು ಸ್ವಪ್ನ ಬಿತ್ತಂತಲೂ, ಅದಕ್ಕಾಗಿ ಅವನು ಜೈಲಿನಿಂದ ಪರಾರಿಯಾಗಿ ತನ್ನ ಸ್ನೇಹಿತನೋರ್ವನಿಂದ ಹಣವನ್ನು ಸಾಲವಾಗಿ ಪಡಕೊಂಡು ಹೆಂಡತಿಗೆ ಕೊಟ್ಟು ಬಂದಿರುವೆನೆಂದು ಹೇಳಿದನಂತೆ.

ಆಸ್ಸಾಮ್

ಅಸ್ಸಾಮಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸಧ್ಯದಲ್ಲೇ ಸಭೆಸೇರಿ ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ಚರ್ಚಿಸಲಿರುವುದು. ಕಾ. ಕೇಂದ್ರಗಳು ಅಧಿಕಾರ ಸ್ವೀಕಾರಕ್ಕೆ ಒಪ್ಪಿಗೆಯಿತ್ತವೆಂಬ ಅಭಿಪ್ರಾಯವನ್ನು ಕೊಡುತ್ತವಂತೆ

ಸ್ಥಾನ ತಪ್ಪಿದ ಹೃದಯ

ಹಂಗೇರಿಯ ಗ್ಯುಲಾ ಕೈಲ್ವಿ ಸ್ಟೇಶನ್ ಮಾಸ್ತರನೊಬ್ಬನ ಹೆಂಡತಿಯ ದೇಹದಲ್ಲಿ ಎದೆಗುಂಡಿಗೆಯು ಸ್ಥಾನತಪ್ಪಿ ಇದೆಯಲ್ಲದೆ ಅದು ತಲೆಕೆಳಗಾಗಿದೆಯಂತೆ. ಅವಳ ಹೆಸರು ಕಿಸ್ಸೆಲಿ ಎಂದು. ಈ ವಿಚಾರವು, ಅವಳೊಂದು ದಿನ ದೇಹ ಪರೀಕ್ಷೆಗಾಗಿ ಆಸ್ಪತ್ರೆಗೆ ಹೋಗಿದ್ದಾಗ, ಅವಳನ್ನು ಎಕ್ಸರೇ ಮೂಲಕ ಪರೀಕ್ಷೆ ಮಾಡಿದ ವೈದ್ಯರಿಗೆ ಈ ವಿಚಿತ್ರ ವಿಷಯವು ತಿಳಿಯಿತು. ಇಂಥಾ ಸಂಗತಿಯು ಪ್ರಪಂಚದಲ್ಲೆಂದೂ ಆಗಲಿಲ್ಲವಂತೆ.

ಹಣ್ಣಿನಿಂದ ಹಣ

ಬ್ರಿಟನ್ನಿನ ಥಾಮಸ್ ವಾಲ್ಟನ್ ಎಂಬ 4 ವರ್ಷದ ಹುಡುಗನು ಲಂಡನ್ ನಗರದಲ್ಲಿ ಹಣ್ಣು ಹಂಪಲುಗಳನ್ನು ಮಾರಿ ಜೀವನ ಮಾಡುತ್ತಲಿದ್ದನು ಇದು 50 ವರ್ಷಗಳ ಹಿಂದೆ. ಮೊನ್ನೆ ಅವನು ತನ್ನ 61ನೇ ವರ್ಷದಲ್ಲಿ ಸತ್ತುಹೋದನು. ಸಾಯುವಾಗ ಅವನಲ್ಲಿ ಮಿಲಿಯಾಂತರ ಹಣವಿತ್ತು ಲಂಡನಿನಲ್ಲಿ ಅವನಿಗೆ 128 ಹಣ್ಣಿನ ದೊಡ್ಡ ಅಂಗಡಿಗಳಿವೆಯಂತೆ

ಅಜೀರ್ಣದಿಂದ ಪಕ್ಷಿಗಳ ಮರಣ

ಆಸ್ಟ್ರೇಲಿಯಾದ ಕೆಂಪರ್ಡೌನ್ ಎಂಬಲ್ಲಿ ಒಂದು ತರದ ಹುಳುಗಳು ಪೈರುಪಚ್ಚೆಯನ್ನು ಹಾಳುಮಾಡುತ್ತಿದ್ದುವು ರೈತರು ಬಹಳ ಕಷ್ಟಕ್ಕೆ ಒಳಗಾದರು ಆ ಕೂಡಲೇ ಒಂದು ಜಾತಿಯ ಪಕ್ಷಿಗಳು ಸಾವಿರಗಟ್ಲೆಯಿಂದ ಅಲ್ಲಿಗೆ ಬಂದು ಆ ಹುಳಗಳನ್ನೆಲ್ಲಾ ತಿಂದುಬಿಟ್ಟವು ಈಗ ಅಲ್ಲಿ ನೋಡಿದ್ದಲ್ಲಿ ಗದ್ದೆಗಳಲ್ಲೆಲ್ಲಾ ಪಕ್ಷಿಗಳ ಮೃತದೇಹಗಳು ತುಂಬಹೋಗಿದ್ದುವಂತೆ. ಅವುಗಳಿಗೆ ಆ ಹುಳಗಳನ್ನು ತಿಂದು ಅಜೀರ್ಣವಾಗಿರಬಹುದೆಂದು ಊಹಿಸಲಾಗಿದೆ

ಬೇರೆ ಬೇರೆ ವರ್ಷಗಳಲ್ಲಿ ಹುಟ್ಟಿದ ಅವಳಿಜವಳಿ ಮಕ್ಕಳು

ಅಮೇರಿಕದ ನ್ಯೂಹೇವನ್ ಎಂಬಲ್ಲಿನ ವಟಾಲಿಫ್ಲೋಡ್‌ಕ್ರಿಸ್ಸ ಎಂಬ ಮಹಿಳೆಗೆ ಅವಳಿಜವಳಿ ಮಕ್ಕಳು ಹುಟ್ಟಿದರು ಅವುಗಳೊಳಗೆ ಒಂದು ವರ್ಷದ ವ್ಯತ್ಯಾಸವಿದೆ ಅದು ಹೇಗೆಂದರೆ ಮೊದಲನೇ ಮಗು ಹುಟ್ಟಿದ್ದು 1936ನೇ ಡಿಶಂಬರ ತಾ 31ನೇ ರಾತ್ರೆ 11 ಘಂಟೆಗೆ ಅಂದು ರಾತ್ರಿ 12 ಗಂಟೆಗೆ 1936ನೇ ವರುಷವು ಕೊನೆಗೊಳ್ಳುತ್ತದೆ ಆಮೇಲಿಂದ 1937ನೇ ವರ್ಷವು ಆರಂಭವಾಗುತ್ತದೆ ಇದು ಇಂಗ್ಲಿಷ ಲೆಕ್ಕಾಚಾರ ಪ್ರಕಾರ ಈಗ ಮೊದಲನೇ ಮಗು ಹುಟ್ಟಿದ 1½ ಗಂಟೆ ಮೇಲೆ ಅಂದರೆ 1937ನೇ ಇಸವಿ ಜನವರಿ ಒಂದನೇ ತಾರೀಕು 12-30ಕ್ಕೆ ಎರಡನೇ ಮಗು ಹುಟ್ಟಿತು

ದೀರ್ಘಾಯುಷ್ಯಕ್ಕೆ ಕಾರಣ

ಹಂಗೇರಿಯಲ್ಲಿ ಮೆಸರ್ಸ ಜಾಸೆಫ್ ಸ್ಕರಾ ಎಂಬ ಮಹಿಳೆಯು ತನ್ನ 104 ಆಯುಷ್ಯವನ್ನು ಮುಗಿಸಿಸ್ವರ್ಗಸ್ಥಳಾದಳು. ಸಾಯುವ ಮುಂಚೆ ಕೊಟ್ಟ ಹೇಳಿಕೆಯಲ್ಲಿ ಅವಳು ನಾನು ನನ್ನ ಜೀವಮಾನದಲ್ಲಿ ರೈಲು ಬಂಡಿಯಲಿ ಪ್ರಯಾಣ ಮಾಡಿರಲಿಲ್ಲವಾದುದರಿಂದಲೇ ಇಷ್ಟು ವರ್ಷ ಬದುಕಿದೆ ಎಂದು ಹೇಳಿದಳಂತೆ

ಮಾರ್ಗಸ್ಥರ ಸ್ವರ್ಗ

ಕಿಂಬರ್ಲಿಎಂಬದು ದಕ್ಷಿಣ ಆಫ್ರಿಕಾದಲ್ಲಿರುವ ಪ್ರಖ್ಯಾತ ವಜ್ರ ಗನಿಗಳ ಕೇಂದ್ರ. ಅದು ಒಂದು ದೊಡ್ಡ ನಗರ. ವಿಪರೀತ ಜನಸಂಖ್ಯೆಯುಳ್ಳದ್ದು. ಕಳೆದ ವರ್ಷ ಅಲ್ಲಿನ ಮಾರ್ಗಗಳಲ್ಲಿ ಒಂದೇ ಒಂದು ಅಪಘಾತವಾಗಲಿಲ್ಲವಂತೆ. 1935ರಲ್ಲಿ ಒಂದು ಅಪಘಾತ ಮಾತ್ರ ಸಂಭವಿಸಿತಂತೆ. ಕೆಲವು ಚಿಕ್ಕ ಅಪಘಾತ ಅನಾಹುತಗಳಾಗಿದ್ದುವಂತೆ. ಆದರೆ, ಪಾದಚಾರಿಗಳಿಗೆ ಅವುಗಳಿಂದ ಏನೂ ಹಾನಿ ಸಂಭವಿಸಲಿಲ್ಲವಂತೆ.

ಕ್ಷೌರಕತ್ತಿ ಇಲ್ಲದೆ ಕ್ಷೌರ

'ದರ್ಬಾರ್ ಸೋಪ್' ರೋಮನಾಶಿನಿ ಮೊದಲಾದವುಗಳಿಂದ ನಮಗೆ ಬೇಕಾದ ಜಾಗದಿಂದ ರೋಮವನ್ನು ತೆಗೆಯಬಹುದಷ್ಟೇ? ಈಗ ಕ್ಷೌರಕ್ಕೆ ಮತ್ತೊಂದು ಔಷಧವನ್ನು ಕಂಡುಹಿಡಿದಿರುವರು. ಇದು ಹೇಗೆಂದರೆ ಒಂದು ಪಿಂಗಾಣಿ ತಟ್ಟೆಯಲ್ಲಿ ಸ್ವಲ್ಪ ಇದ್ದಲನ್ನೂ 'ಪ್ಲಾಸ್ಟರ್ ಆಫ್ ಪ್ಯಾರಿಸ'ನ್ನೂ ಹಾಕಿ ಭದ್ರವಾಗಿ ಮುಚ್ಚಿ ಸ್ಪಿರಿಟ್ ಲೇಂಪಿನಿಂದ ಪಿಂಗಾಣಿಯನ್ನು ಚೆನ್ನಾಗಿ ಕಾಯಿಸಿದರೆ ಇದ್ದಲು ಬೆಂಕಿ ಹಿಡಿದು ಉರಿಯುವದು ಆ ಮೇಲೆ ಅದು ಕೇಲ್ಸಿಯಂ ಸಲ್ಫೈಡ್ ಎಂಬ ಒಂದು ಪುಡಿಯಾಗುವದು ಈ ಪುಡಿಗೆ ಸ್ವಲ್ಪ ನೀರು ಹಾಕಿ ಅಂಟುಮಾಡಿ ಕ್ಷೌರವಾಗಬೇಕಾದಲ್ಲಿಗೆ ಹಚ್ಚಿದರೆ ಯಾವ ತೊಂದರೆಯೂ ಇಲ್ಲದೆ ರೋಮವೆಲ್ಲಾ ಉದುರುವದು ಇದರಿಂದ ಚರ್ಮದಲ್ಲಿ ಉರಿಯಾಗಲೀ ಕಲೆಯಾಗಲೀ ಉಂಟಾಗುವುದಿಲ್ಲ

ಕುಡಿದರೆ ಅಮಲೇರುವದೇಕೆ?

ಶರೀರದಲ್ಲಿ ಸಾಕಷ್ಟು ಆಮ್ಲಜನಕ ವಾಯುವಿಲ್ಲದವರು ಸರಾಯಿ ಮೊದಲಾದ ಅಮಲು ಪದಾರ್ಥಗಳನ್ನು ಕುಡಿದರೆ ಅವರಿಗೆ ವಿಶೇಷ ಅಮಲೇರುತ್ತದೆ ಎಂದು ಸರಾಯಿಯು ಹೊಟ್ಟೆಯೊಳಗೆ ಹೋದ ಕೂಡಲೇ ಒಳಗಿದ್ದ ಆಮ್ಲಜನಕವನ್ನು ಸೇರಿಕೊಂಡು ಅದನ್ನು ಹೀರಿಬಿಡುವದು ಹಾಗೆಯೇ ಪರ್ವತವನ್ನೇರಿದವರಿಗೆ ತಲೆ ತಿರುಗಿದಂತಾಗಲಿಕ್ಕೆ ಕೂಡಾ ಆಮ್ಲಜನಕದ ಅಭಾವವೇ ಕಾರಣವೆಂದು ಸಂಶೋಧನೆ ಮಾಡಿರುವರು ಕುಡಿದು ಅಮಲೇರಿದವರಿಗೆ ಆಮ್ಲಜನಕವು ದೊರಕುವಂತೆ ಮಾಡಿದರೆ ಅವರ ಮದ ಇಳಿಯುವುದು ಖಂಡಿತ

NOTICE.

In the Court of the Subordinate Judge of South Kanara

O S No 65 of 1936

Between

Nagar Narayana Shanbogue— Plaintiff

and

Devamma & others Defendants

To defendants

(8) Laxmimathi daughter of Gunamakke and wife of Ammu Padivala, Kadeshwalya Village, Mangalore Taluk

(9) Sridevi daughter of Muttamma residing in Maninalkur Village Mangalore Taluk

Notice is hereby given that the above suit filed by the plaintiff for recovery of Rs 19,016-1-0 due under a mortgage deed dated 1-12-1920 and excuted by defendants 1 to 6 and 8 and some other members of the defendants family in favour of Plaintiff's Brother Nagar Damodar Shanbogue is posted for hearing to 8-3-37 The above named defendants 8 & 9 are hereby informed that if they fail to appear at 11 A. M on the said date, in person or by pleader, the suit will be proceeded with ex-parte in their absence

Mangalore, 23-2-1937

G. S. Nagarkar, Advocate for Pltf.

ನಿದ್ರೆ-ಆದರ ಮಹತ್ವ

ಬರೆದಾತ "ಪದ್ಮ"

ಹಸಿವು, ಬಾಯಾರಿಕೆ, ಕೋಪ, ದ್ವೇಷ, ಅನುರಾಗ, ಪ್ರೇಮ ಇಂಥಾ ಅನೇಕ ಲಕ್ಷಣಗಳು ಪ್ರಾಣಿವರ್ಗದಲ್ಲಿ ಸಾಮಾನ್ಯವಾಗಿ ತೋರಿಬರುವಂತವುಗಳು, ಅಂತೆಯೇ ನಿದ್ರೆಯೂ ಈ ಹಲವು ಲಕ್ಷಣಗಳ ಒಂದು ಬಂಧು. ಆದರೆ ನಿದ್ರೆಗೆ ಇರುವ ಮಹತ್ವವು ಅದರ ಇತರ ಬಂಧು ಲಕ್ಷಣಾದಿಗಳಿಗೆ ಇರುವುದಿಲ್ಲವೆಂಬ ವಿಷಯವು ಮನುಷ್ಯರು ನಿದ್ರೆಯನ್ನು ಬಹಳವಾಗಿ ಪೂಜಿಸುವುದರಿಂದ ತಿಳಿಯಬರುತ್ತದೆ. ಮಹಾ ಮಹಾ ವಿಜ್ಞಾನಿಗಳು ಕೂಡಾ ನಿದ್ರೆ ಎಂದರೆ ಹೆದರುತ್ತಾರೆ. ಆ ಹೆದರಿಕೆಯು ಯಾರಲ್ಲಿ ತುಂಬಾ ಇರುವುದೊ ಅವನಿಗೆ ಕೂಡಲೇ ನಿದ್ರೆ ಬರುತ್ತದೆ. ಇದು ಇನ್ನೊಂದು ಆಶ್ಚರ್ಯ ನಿದ್ರೆ ಸರಿಯಾಗಿ ಬೀಳಲಿಲ್ಲವೆಂಬ ಭಾವನೆಯು ಒಬ್ಬನಲ್ಲಿ ಬಂತೆಂದರೆ ಅವನ ಮನಸ್ಸಿನಲ್ಲಿ ನಿದ್ರಾನಾಶದ ಪರಿಣಾಮಗಳು ಕೂಡಲೇ ಮೂಡಿ, ಆರೋಗ್ಯ ಶಾಸ್ತ್ರದ ಪ್ರಾಮುಖ್ಯ ತತ್ವಗಳು ಅವನ ಮನಸ್ಸಿನಲ್ಲಿ ಒಂದರ ಮೇಲೊಂದು ಬಂದು ಬೀಳುತ್ತವೆ. ಆದುದರಿಂದ ನಿದ್ರೆಯು ಹೆದರಿಕೆಯನ್ನು ಉಂಟುಮಾಡಬಲ್ಲುದು, ಅಷ್ಟು ಮಾಡದಿದ್ದರೆ ಮನುಷ್ಯನು ನಿದ್ರೆಯನ್ನು ತಿರಸ್ಕರಿಸಿ, ನಿದ್ರಾದೇವಿಗೆ ಅವಮಾನ ಮಾಡಿದಂತಾಗುತ್ತದೆ ನಿದ್ರಾದೇವಿಯು ಈ ಅವಮಾನವನ್ನು ಸಹಿಸಲಾರದು ಮಾನನಷ್ಟ ಮೊಕದ್ದಮೆ ಮಾಡುವಷ್ಟು ಹೇಡಿಯು ನಿದ್ರಾದೇವಿಯಲ್ಲ ಅಂದರೆ ಅವಳು ತನ್ನ ಛಲವನ್ನು ಬಿಡಲೊಲ್ಲಳು ನಿದ್ರೆಯನ್ನು ತಿರಸ್ಕರಿಸಿ, ಜಾಗ್ರತೆಯಿದ್ದವನೊಬ್ಬನನ್ನು, ಆ ದೇವಿಯು ಮೇಲಿಂದ ಮೇಲೆ ಪೀಡಿಸಹತ್ತುವಳು ಅವನಲ್ಲಿ ಬುದ್ಧಿಭ್ರಮೆಯುಂಟುಮಾಡುವಳು ಕಡೆಗಂತು ಆ ಅಸಾಮಿಯು ನಿದ್ರೆಮಾಡಲೇ ಬೇಕಾಗಿ ಬರುತ್ತದೆ ಒಂದು ಸಾರಿಗೆ ಪೂರ್ತಿಯಾಗಿ ಒಬ್ಬನು ಅವಳಿಗೆ ವಶನಾದನೆಂದರೆ, ಆ ಮೇಲೆ ಸುಮಾರು ೧೨ ಘಂಟೆಯ ವರೆಗೆ ಅವಳು ಅವನನ್ನು ಬಾಧಿಸುತ್ತಿರುವುದಿಲ್ಲ

ಕ್ಷೌರಿಕನಿಗೆ ಚಕ್ರವರ್ತಿಯಾದರೂ ತಲೆ ಬಗ್ಗಿಸಬೇಕೆಂದು ಹಜಾಮರು ಹೆಮ್ಮೆಪಡಬಹುದು ಆದರೆ ಚಕ್ರವರ್ತಿಯೋರ್ವನು, ಕ್ಷೌರಕತ್ತಿಯನ್ನು ತನ್ನ ದೇಹಕ್ಕೆ ಮುಟ್ಟಗೊಡೆನೆಂದು ಪ್ರತಿಜ್ಞೆಮಾಡಿಕೊಂಡು, ಕೋಲುದ್ದ ಕೂದಲನ್ನು ಬೆಳೆಸಿ ಬದುಕಬಹುದು ಆದರೆ ಈ ನಿದ್ರೆಯ ಹತ್ತಿರ ಈ ಪ್ರತಿಜ್ಞೆ ಏನೂ ಸಾಗಲಾರದು ಆದರೆ ನಿದ್ರೆಯನ್ನು ದೂರ ತೊಲಗಿಸುವ ಪ್ರತಿಜ್ಞೆಗಳನ್ನು ನಾವು ಕೆಲವು ಏಟದ ಜಾಗಗಳಲ್ಲಿಯಾಗಲೀ ಭೂತದ ಕೋಲ ನಡೆಯುವ ಯಾತ್ರೆ ಸ್ಥಳಗಳಲ್ಲಿಯಾಗಲೀ ಸಂದರ್ಭಾನುಸಾರ ಕೇಳಿರಬಹುದು ಆದರೆ ಆ ಪ್ರತಿಜ್ಞೆಯನ್ನು ಹೇಳುತ್ತಿರುವಾಗಲೇ ಅವರು ತೂಕಡಿಸುವ ವಿಷಯವು ಸ್ಪಷ್ಟವಾಗಿ ಕಾಣುತ್ತದೆ ಯಾಕೆಂದರೆ ಜಾಗ್ರತನಾಗಿರುವವನು ಹೆಚ್ಚಾಗಿ ಎಂದೂ ಅಂಥಾ ಪ್ರತಿಜ್ಞೆಯನ್ನು ಮಾಡುವುದಿಲ್ಲ ಚಕ್ರವರ್ತಿಗಳು ನಿದ್ರೆಯನ್ನು ಹೊಡೆದೋಡಿಸಲಾರರು ಯಾವ ಕೋಟೆ ಕಂದಕಗಳೂ ಅದಕ್ಕೆ ಅಡ್ಡಾಗಲಿಕ್ಕಿಲ್ಲ ನಿದ್ರೆಯು ಫಿರಂಗಿ ಬಾಂಬುಗಳ ಸಿಡಿತಕ್ಕೆ ಸಿಗಲಾರದು ಯಾಕೆ? ನಿದ್ರೆಯ ಶಕ್ತಿಯು ಅಷ್ಟು ದೈವೀಕವಾದದ್ದು ಅಂದ ಮೇಲೆ ಅದನ್ನು ದೂಷಿಸುವುದೇಕೆ? ಅದಕ್ಕೂ ಕಾರಣವಿದೆ

ನಿದ್ರೆಗೆ ಎಲ್ಲರೂ ಏಕಸಮಾನರು ಭೇದಭಾವವೆಂಬುದು ಅದರಲ್ಲಿ ಇಲ್ಲ ಲಕ್ಷ್ಮಿಯಲ್ಲಿ ಭೇದಭಾವವಿದೆ ಕಾರಣ ಅವಳು ಒಬ್ಬನನ್ನು ಒಲಿಯುವಳು, ಇನ್ನೊಬ್ಬನಲ್ಲಿ ಕಲೆಯುವಳು, ಮತ್ತೊಬ್ಬನನ್ನು ದೂರ ಸರಿಸುವಳು ಆದರೆ ನಿದ್ರೆ? ಪಾಪ ಪಕ್ಷಪಾತವೇ ನಿದ್ರಾದೇವಿಯಲ್ಲಿ ಖಂಡಿತವಾಗಿಯೂ ಇಲ್ಲ ನಿದ್ರಾದೇವಿಯು ಶ್ರೀಮಂತರಲ್ಲಿಯೂ ಇರುತ್ತಾಳೆ, ಬಡವರಲ್ಲಿಯೂ ಮೆರೆಯುತ್ತಾಳೆ. ಇದರಿಂದ ಲಕ್ಷ್ಮೀಪ್ರಸಾದವಿಲ್ಲದ ಬಡವರು, ನಿದ್ರಾದೇವಿಯ ವರದಾನದಿಂದ ಸಂತೃಪ್ತರಾಗಿ, ನಿದ್ರೆಯ ಮಟ್ಟಿಗಾದರೂ ನಾವು ಶ್ರೀಮಂತರೆಪ್ಪಾ ಎಂದು ಹೊಟ್ಟೆಯನ್ನು ತಣ್ಣಗಿರಿಸಿಕೊಳ್ಳಬಹುದು ಶ್ರೀಮಂತನೊಬ್ಬನು ನಿದ್ರಾದೇವಿಯಿಂದ ಆಶೀರ್ವದಿಸಲ್ಪಟ್ಟಲ್ಲಿ ಅವನಷ್ಟು ಭಾಗ್ಯವಂತರು ಧರಿತ್ರಿಯಲ್ಲಿ ಇಲ್ಲವೆನ್ನಬೇಕು ಒಂದು ವೇಳೆ ಆ ಪುಣ್ಯವು ಅವನಿಗಿಲ್ಲದಲ್ಲಿ ಅವನು ಬಡ ನಿದ್ರಾಶ್ರೀಮಂತರ ಪರಿಹಾಸ್ಯಕ್ಕೆ ಪಾತ್ರನಾಗಬೇಕಾಗುವುದು "ಇವನು ಹಣದಲ್ಲಿ ಶ್ರೀಮಂತನಿರಬಹುದು, ಆದರೆ ನಿದ್ರೆಯಲ್ಲಿ ದರಿದ್ರನಲ್ಲವೆ, ಪಾಪ! ಒಟ್ಟಾರೆ ಇವನು ನಿದ್ರಾಶಾಲಿಯಲ್ಲ' ಎಂದು ಎಲ್ಲವೂ ಅವನ ದುರಾದೃಷ್ಟಕ್ಕೆ ವ್ಯಥೆಪಡುವರು ನಿದ್ರಾರಹಿತರು ಒಂದು ಲೆಕ್ಕದಲ್ಲಿ ದುರ್ಭಾಗಿಗಳೇ ಎಂದು ಹೇಳಬೇಕು ಈ ವಿಷಯವನ್ನು ವೈದ್ಯಶಾಸ್ತ್ರದಲ್ಲಿ ಎಷ್ಟೊ ಸಾವಿರ ವರ್ಷಗಳ ಹಿಂದೆಯೇ ಬರೆದಿಟ್ಟಿರುವುದರಿಂದ ಹೆಚ್ಚಿನ ತರ್ಕದ ಅವಶ್ಯಕತೆ ಇಲ್ಲ

ಜಾಗ್ರತನಾಗಿರುವಾಗ ಮನುಷ್ಯನು ತನ್ನ ಸ್ಥಾನಮಾನಗಳನ್ನು ಎಣಿಸಿಕೊಂಡು ತನ್ನ ವರ್ತನೆಯನ್ನು ಸರಿಯಾದ ಶಿಸ್ತಿನಲ್ಲಿ ಇಡುತ್ತಾನೆ ಜಾಗ್ರತಾವಸ್ಥೆಯಲ್ಲಿ ಮಾತ್ರ ನಮ್ಮ ವೇಷವನ್ನು ಮೆರದಾಟ ಸಭ್ಯಗೃಹಸ್ಥತೆ (ಜಂಟಲ್ ಮನ್‌ಗಿರಿ) ಇವುಗಳೆಲ್ಲ ಆದರೆ ನಿದೆಯಲ್ಲಿ ಇವುಗಳ ಪ್ರದರ್ಶನವೊಂದೂ ಬೇಕಾಗಿಲ್ಲ ನಿದ್ರಾವಶವರ್ತಿಯಾದ ಚಕ್ರವರ್ತಿಯಾದರೂ ಸಾವಿರ ಕೃತಕ ತೆಯೇ ದಿವ್ಯ ಸುಖವನ್ನು ಪಡೆಯಬೇಕು ಅದಕ್ಕಿಂತ ಹೆಚ್ಚಿನದೇನೂ ಇಲ್ಲ ಸ್ಥಾನಮಾನಗಳನ್ನು ನೋಡಿ ನಿದ್ರೆಯು ಮನುಷ್ಯನನ್ನು ಆವರಿಸುವುದಿಲ್ಲ ಇಲ್ಲವೆ ಜ್ಞಾನಿ ಅಜ್ಞಾನಿಗಳೆಂದೂ ನಿದ್ರೆಗೆ ಪಕ್ಷಪಾತವಿಲ್ಲ ಹಾಗೇನಾದರೂ ಇರುತ್ತಿದ್ದರೆ ನಿದ್ರಾರೂಪಗಳು ನಾನಾ ತರವಾಗಿರುತ್ತಿದ್ದವು ಗರ್ವಿಷ್ಠನಾದವನಿಗೆ ಗರ್ವಿಷ್ಠನಾದ ನಿದ್ರೆ ಎಂಬುದಿಲ್ಲ ಇಲ್ಲವೇ ಅವನು ಹೊಡೆಯುವ ಗೋರಿಕೆಯಲ್ಲಿ ಗರ್ವದ ಕುರುಹುಗಳು ತೋರಿಬರುವುದಿಲ್ಲ ಅಂತೆಯೇ ಸಂಗೀತಗಾರನೊಬ್ಬನ ಹೊಡೆಯುವ ಗೋರಿಕೆಯು ಸಂಗೀತ ಗೊತ್ತಿಲ್ಲದವನೊಬ್ಬನ ಗೋರಿಕೆಯಂತೆ ಇರುತ್ತದಲ್ಲದೆ ಅದರಲ್ಲೇನಾದರೂ ಸುಸ್ವರವಾದ ರಾಗಗಳು ಉದ್ಭವವಾಗುತ್ತದೆಂದು ನಿರೀಕ್ಷಿಸಲಾಗುವುದಿಲ್ಲ

ನಿದ್ರೆಗೂ ಮರಣಕ್ಕೂ ಕೊಂಚ ಹೆಚ್ಚು ಕಮ್ಮಿ ನಿದ್ರೆಯು ಸ್ವಲ್ಪ ದೀರ್ಘವಾದಲ್ಲಿ ಮರಣವೆಂದೆನಿಸುತ್ತದೆ ಮೃತಪಟ್ಟವರಲ್ಲಿ ಪ್ರಾಣಲಕ್ಷಣಗಳಿರುವುದಿಲ್ಲ ನಿದ್ರೆ ಮಾಡುವವನಲ್ಲಿ ಪ್ರಾಣವಿರುತ್ತದೆ ಆದರೆ ಆ ಸಮಯದಲಿ ಆ ಪ್ರಾಣವು ಪರಾಧೀನತೆಗೆ ಪೂರ್ಣ ಒಳಗಾಗಿರುತ್ತದೆ ಹೆಚ್ಚು ಕಮ್ಮಿ ಸತ್ತ ಹಾಗೆ

ನಿದ್ರೆಯು ಸಮಸ್ಯೆಯು ವಿಜ್ಞಾನಿಗಳನ್ನು ಬೆಡಗು ಬಡಿದಿರುತ್ತದೆ ಆರೋಗ್ಯ ಶಾಸ್ತ್ರಜ್ಞರು ಅವರ ಪರಿಹಾರ ಉಪಾಯಗಳ ಸಂಶೋಧನೆ ನಡಿಸುತ್ತಲಿದ್ದಾರೆ ನಿದ್ರೋಪಾಸಕರು ಅವರ ಪ್ರಯತ್ನ ವಿಫಲಕಾರಿಯಾಗಲೆಂದು ಎಷ್ಟು ಪ್ರಾರ್ಥಿಸುತ್ತಿರುವರೋ ಈ ಸಂಶೋಧನೆಗೆ ಕೈಹಚ್ಚಿರುವ ವಿಜ್ಞಾನಿಗಳು ನಿದ್ರೆಯಿಲ್ಲದೆ ಕೆಲಸಮಾಡುತ್ತಿರುವರೇನು? ಎಂದಿಗೂ ಇಲ್ಲ

ವೈದ್ಯರು ಅನೇಕ ವರುಷಗಳ ಅನುಭವದ ಮೇಲೆ ನಿದ್ರಾನಾಶಕ್ಕೆ ಬೇಕಾಗುವ ಚಳಿಯೋ ಔಷಧಿಗಳನ್ನು ಕಂಡುಹಿಡಿದು, ಅದನ್ನು ಮಾನವ ಕೋಟಿಯ ಉಪಯೋಗಕ್ಕಾಗಿ ಮಾರಾಟಕ್ಕೆ ಇಟ್ಟಿರುತ್ತಾರೆ ನಿದ್ರೆ ಬೀಳದೆ ಬಳಲುತ್ತಿರುವವರು, ದಿನಕ್ಕೆ 23 ಘಂಟೆ ನಿದ್ರೆ ಮಾಡುವವರ ಬಳಿಯಲ್ಲಿ ಕೆಲವು ಗೂಢಾಂಶಗಳನ್ನು ತಿಳಕೊಂಡರೆ, ಆರ್ಥಿಕ ದುಸ್ಥಿತಿ ಕಾಲದಲ್ಲಿ ಬಹಳ ಒಳಿತೆನಿಸುತ್ತದೆ ಹಾಗೆ ಎಲ್ಲರೂ ಮಾಡಿದರೆ ನಿದ್ರೆ ಶಾಸ್ತ್ರಜ್ಞರು ತಮ್ಮ ಅನುಭವ ನಿರೂಪಣೆಗಳಿಗೆ ತಕ್ಕ ಬೆಲೆ ದೊರಕಬೇಕೆಂದರೆ, ಅದೂ ಕಷ್ಟ.

ನಿದ್ರಾದೇವಿಯು ತನಗೆ ಆಹುತಿ ಬಿದ್ದವನ ಮೇಲೆ ಹೆಚ್ಚು ಕರುಣೆಯುಳ್ಳವಳೆಂದು ಹೇಳಬರುವುದಿಲ್ಲ. ಅವಳಲ್ಲಿಯೂ ಒಂದು ಶಿಸ್ತು ಇದೆ ಇದನ್ನು ತಪ್ಪಿದರೆ ಮಹಾ ಕೇಡು ಸಂಭವಿಸುತ್ತದೆ. ಉದಾಹರಣೆಗಾಗಿ ಓರ್ವ ರೈಲು ಗಾರ್ಡನು ಸ್ವಲ್ಪ ನಿದ್ರಾದೇವಿಯ ಮೋಹಕ್ಕೆ ಒಳಪಟ್ಟನೆಂದರೆ, ರೈಲು ಕಂಬಿತಪ್ಪಿ, ಅನಾಹುತವಾಗಿ, ಎಷ್ಟು ಮರಣ ಎಷ್ಟು ನಷ್ಟ ಆಗುವುದಿಲ್ಲ ಕಣ್ಣು ತಪ್ಪಿ ನಿದ್ರೆ ಮಾಡಿದ ಎಷ್ಟು ಮೋಟಾರು ಡ್ರೈವರರು ಪ್ರಾಣ ಕಳಕೊಳ್ಳಲಿಲ್ಲ ಸ್ವಲ್ಪ ವಿಪರೀತ ನಿದ್ರೆಯು ಎಷ್ಟು ಕಳ್ಳರ ಸಹಕಾರಿಯಾಗಲಿಲ್ಲ? ಅದೆಷ್ಟು ದೊಡ್ಡ ದೊಡ್ಡ ಅಧಿಕಾರಿಗಳು ಮರ್ಯಾದಸ್ಥರು, ನಿದ್ರೆಯ ಮಬ್ಬಿಗೆ ಮರುಳಾಗಿ ಅಪಹಾಸ್ಯಕ್ಕೆ ಗುರಿಯಾಗಲಿಲ್ಲ? ನಿದ್ರೆಯ ವಿಚಾರ ವಿಜ್ಞಾನಿಗಳನ್ನು ಕೇಳಿದರೆ ಒಬ್ಬೊಬ್ಬರು ಒಂದೊಂದು ವಿಧದ ಅಭಿಪ್ರಾಯಗಳನ್ನು ಹೇಳುತ್ತಿರುತ್ತಾರೆ ಒಬ್ಬರ ಅಭಿಪ್ರಾಯದಲ್ಲಿ ಮನುಷ್ಯನಿಗೆ 4 ಗಂಟೆ ನಿದ್ರೆ ಸಾಕಂತೆ ಇನ್ನೊಬ್ಬನು 8 ಗಂಟೆ ಬೇಕೆಂದು ಸಾರುತ್ತಾನೆ ಮತ್ತೊಬ್ಬನು ಬರಾಬರಿ ಹದಿನೆರಡು ಗಂಟೆ ನಿದ್ರೆ ಮನುಷ್ಯನಿಗೆ ಅತ್ಯಗತ್ಯವೆಂದು ಹೇಳುತ್ತಾನೆ ಈ ಕಡೆಯವನ ಅಭಿಪ್ರಾಯವು ನಮ್ಮಲ್ಲಿ ಹೆಚ್ಚಿನವರ ಅನುಭವದ ಮೇಲೆ ಬಹಳ ಸಮಂಜಸವಾದದ್ದೆಂದು ಒಪ್ಪಿಕೊಳ್ಳಬೇಕು ಅದಕ್ಕೆ ಎರಡು ಗಂಟೆ ಜಾಸ್ತಿ ಕೂಡಿಸಿದರೂ ಸೈ ಮಧ್ಯರಾತ್ರಿಯ ಮೊದಲು ಬೀಳುವ ಒಂದು ಗಂಟೆಯ ನಿದ್ರೆಯು ಅದರ ನಂತರದ ಎರಡು ಗಂಟೆಯದಕ್ಕಿಂತಲೂ ಉತ್ತಮವೆಂದೂ ದುರ್ಜನ ಗಾಢ ಸೂರ್ಯೋದಯದ ನಂತರದ 2 ಗಂಟೆಯ ... ಮಧ್ಯಾಹ್ನದ ನಂತರದ ... ಇವೆರಡರಷ್ಟು ... ಇಲ್ಲವೆಂದು ನನ್ನ ಅನುಭವ

ಆಫೀಸುಗಳಲ್ಲೆಲ್ಲಾ ಊಟಕ್ಕೆ ಸರುಯ ಟಿಫನ್ನಿಗೆ ಸಮಯ ಇವಕ್ಕೆಲ್ಲಾ ಸಮಯ ಕೊಡುತ್ತಾರೆ ಅದೇ ಪ್ರಕಾರ ಮಧ್ಯಾಹ್ನದ ನಿದ್ರೆಗೆ ಒಂದು ಅರೆ ಗಂಟೆ ಅಂತ ಮಾಡುತ್ತಿದ್ದರೆ ಎಷ್ಟೊಂದು ನಿದ್ರೋಪಾಸಕರ ಸಂಘಗಳು ಸಂಸ್ಥಾ ಮಾಲಿಕರನ್ನು ಆಶೀರ್ವದಿಸುವುದಿಲ್ಲ ಕೆಲಸ ಸಮಯದಲ್ಲಿ ನಿದ್ರೆಮಾಡಬಾರದೆ ಬ ನಿಯಮವನ್ನು ಮಾಡಿಟ್ಟವನು ಯಾರೋ ನಿದ್ದೆ ಇಲ್ಲದೆ ತಾಪತ್ರಯಪಟ್ಟ ಮಹನೀಯನಾಗಿರಬೇಕು ಹಾಗೆ ಶಾಲೆಗಳಲ್ಲಿಯೂ, ಪಾಠಸಮಯದ ನಿದ್ರೆಗಾಗಿ ಪ್ರತ್ಯೇಕ ಒಂದು ಸಮಯವನ್ನು ತೆಗೆದಿಟ್ಟು ಆ ಸಮಯದಲ್ಲಿ ಎಲ್ಲರೂ ಗೋರಿಕೆ ಹೊಡಿಯಲು ಪ್ರಾರಂಭಿಸಬೇಕು ಆಗ ಒಬ್ಬರನ್ನೊಬ್ಬರು ಹಾಸ್ಯ ಮಾಡುವ ಸಂದರ್ಭವಿರುವುದಿಲ್ಲ ಆ ಸಮಯದಲ್ಲಿ ಯಾರೇನು ಎಚ್ಚರಿಸುವ ಆಗತ್ಯವೂ ಬೀಳುವುದಿಲ್ಲ ಎಲ್ಲರೂ ಗಾಢನಿದ್ರಾಸಕ್ತರಾಗಿ ಮೂಗಿನಸೊಳ್ಳೆಗಳನ್ನು ದಪ್ಪಮಾಡಿ ನಾದವನ್ನು ಪ್ರಾರಂಭಿಸಿ ಅದು ದೊಡ್ಡದಾಗುತ್ತಲೇ, ಆ ಗಲಾಟೆಗೆ ಎಲ್ಲರೂ ತಾವಾಗಿ ಎದ್ದು ಪುನಃ ತಮ್ಮ ತಮ್ಮ ಕೆಲಸ ಕಾರ್ಯದಲ್ಲಿ ತೊಡಗಬಹುದು

ಹೀಗೆ ನಿದ್ರೆಯ ಎಲ್ಲಾ ಮಹತ್ವವನ್ನು ತಿಳಕೊಂಡ ಮೇಲೆ ದೇವರೇ ನನಗೆ ಸಿರಿಯು ಬೇಡ ದಯಮಾಡಿ ಕುಂಭಕರ್ಣನಿಗೆ ಕೊಟ್ಟ ವರಗಳ ಅರ್ಧಾಂಶವನ್ನಾದರೂ ದಯೆಪಾಲಿಸಿ ಆಶೀರ್ವದಿಸಿದರೆ ಅಷ್ಟಕ್ಕೆ ಧನ್ಯನಾಗುವೆನು ಎಂದು ಬೇಡಿ ಅಡ್ಡಾಗಬೇಕು

ಲಿವರ್ ವಾಚುಗಳು.

ಒಂದು ವಾರದ ತನಕ ಪರೀಕ್ಷೆಗಾಗಿ ನಿಮ್ಮಲ್ಲಿ ಇಟ್ಟುಕೊಳ್ಳಿ

ನಮ್ಮ ಈ ಗಡಿಯಾರವು ಇದರ ನಾಲ್ಕರಷ್ಟು ಬೆಲೆಯಿರುವ ವಾಚುಗಳಷ್ಟು ಬಾಳಿಕೆಯುಳ್ಳದ್ದು ಕಮ್ಮಿ ಬೆಲೆಯ ಲಿವರ್ ರಿಸ್ಟ್ ವಾಚುಗಳು 5 ವರ್ಷಗಳ ಅಖಂಡ ಗ್ಯಾರಂಟಿ ಕೊಡುತ್ತೇವೆ ಗ್ಯಾರಂಟಿ ತೃಪ್ತಿಯನ್ನೂ ಕೊಡುತ್ತದೆ ಸುಂದರವಾಗಿಯೂ ಚಿಕ್ಕದಾಗಿಯೂ ಇರುವುದಲ್ಲದೆ ಶ್ರೇಷ್ಠವಾದ ಲಿವರ್ ಯಂತ್ರ ಚಲನಾಕ್ರಮದಿಂದ ಕೂಡಿದ್ದಾಗಿರುತ್ತದೆ ಅನೇಕ ವರ್ಷಗಳ ವರೆಗೆ ರಿಪೇರಿ ಅವಶ್ಯಕತೆ ಇಲ್ಲದೆ ಬಾಳಿಕೆ ಬರುತ್ತದೆ ಮತ್ತು ಒಂದು ಸೆಕುಂಡಿಗೆ ತಪ್ಪದಂತೆ ಕಾಲವನ್ನು ತೋರಿಸುತ್ತದೆ

ರಿಯಾಯತಿ ದರಗಳು

ನಿಕ್ಕೆಲ್ ಕೇಸಿನ ರಿಸ್ಟ್‌ವಾಚ —	ರೂ 3-4 0
ಶ್ರೇಷ್ಠವಾದುದು	4-8 0
ಬಂಗಾರ ಗಿಲ್ಟಿನ ಶ್ರೇಷ್ಠವಾದ ಕೇಸುಳ್ಳದ್ದು	5 12 0
ಬಂಗಾರ ಗಿಲ್ಟ್ ಕೇಸುಳ್ಳ ಸಾಧಾರಣದ್ದು	5 12-0
ನಿಕ್ಕೆಲ್ ಕೇಸುಳ್ಳ ಆಯತಾಕಾರವುಳ್ಳ ಶ್ರೇಷ್ಠವಾದ ವಾಚು	5 0-0
ಬಂಗಾರ ಗಿಲ್ಟಿನ ಆಯತಾಕಾರದ್ದು	7 4 0
ಪಾಕೆಟ್ ವಾಚು	3-0-0
ಟೈಂಪೀಸು	2-8-0

ಟಪ್ಪಾಲು ಖರ್ಚು ಅಣೆ 7 ಪ್ರತ್ಯೇಕ

ಒಂದೇ ಸರ್ತಿ 3 ವಾಚುಗಳಿಗೆ ಆರ್ಡರು ಕೊಡುವವರಿಗೆ ಟಪ್ಪಾಲು ಖರ್ಚು ಇಲ್ಲ

ಈ ವಿಳಾಸಕ್ಕೆ ಬರೆಯಿರಿ —

South India Export Agency,
4/C Apoorba Mitter Road Kalighat
P O Calcutta.

ಉದರವೇದನೆಯಿಂದ ಜೀವನದ ಸಾರವೇ ಮಾಸಿಹೋಗುವಂತಾಯಿತು

ಆದರೆ ಈಗ ಸಂತೋಷವೇ ನನ್ನ ಸಾಮ್ರಾಜ್ಯವಾಗಿದೆ

ನಿಮಗೂ ಆಗಾಗ ಹೊಟ್ಟೆಶೂಲೆಯಾಗುತ್ತಿದೆಯೆ? ಒಂದಿಷ್ಟು ಆಹಾರವನ್ನು ಸೇವಿಸಿದೊಡನೆ ಅದು ನಿಮ್ಮ ಜೀವವನ್ನೆ ಉಕ್ಕಿ ಬರುವಂತೆ ಮಾಡುತ್ತಿದೆಯೇ? ಹಾಗಾದರೆ ಮಿ। ಜೆ ಡಬ್ಲ್ಯು ಎಂಬವರು ಬರೆದ ಕಾಗದವನ್ನು ಓದಿರಿ ಅಂದರೆ ನಿಮ್ಮ ರೋಗವನ್ನು ಹೇಗೆ ಖಂಡಿತವಾಗಿಯೂ ಶಮನಗೊಳಿಸಬಹುದೆಂಬುದನ್ನು ತಿಳಿಯುವಿರಿ

ಈಗ ನನ್ನ ಹೊಟ್ಟೆನೋವು ಸಂಪೂರ್ಣ ಗುಣವಾದುದರಿಂದ ಸರಿಯಾಗಿ ಆಹಾರವನ್ನು ಸೇವಿಸಲು ಸಾಧ್ಯವಾಗುವುದರಿಂದ ನನ್ನ ಧನ್ಯವಾದಗಳನ್ನು ಅವರಿಗೆ ಕಳುಹಿಸದೆ ನನ್ನ ಮನಸ್ಸಮಾಧಾನವಾಗಲಿಲ್ಲ ನಾನು ಮೊದಲು ಎಲ್ಲಾ ನಮೂನೆ ಔಷಧಿಗಳನ್ನು ಸೇವಿಸಿ ... ತುಂಬಾ ವ್ಯಸನಪಟ್ಟೆನು ... ನನ್ನ ನೋವು ಬಹಳ ವಿಪರೀತವಾದುದರಿಂದ ... ಇಂತಹ ಹೊಟ್ಟೆನೋವು ... ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸಿ ಗುಣಲಾಭವನ್ನು ಹೊಂದಿರುವರು ... ಅದನ್ನು ... ಉಪಯೋಗಿಸೆಂದು ಹೇಳಿದ್ದರಿಂದ ... ಮೊದಲು ನನಗೆ ಅದರಲ್ಲೂ ವಿಶ್ವಾಸವಿರಲಿಲ್ಲ ಆದರೆ ಈಗ ನನಗೆ ಸಂಪೂರ್ಣ ಗುಣ ... ದರಿಂದ ... ಅದನ್ನು ಶಿಫಾರಸು ಮಾಡ ಬಯಸ

ಮಿ। ಜೆ ಡಬ್ಲ್ಯು ಇವರಿಗೆ ಸಿಕ್ಕಿದ ಲಾಭವು ನಿಮಗೂ ಸಿಕ್ಕಬೇಕಾದರೆ ಈ ಔಷಧವನ್ನೇ ಉಪಯೋಗಿಸಿರಿ ಆದರೆ

ಎಂಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡಕೊಳ್ಳಿರಿ ಇಂತಹ ನಮೂನೆಯ ಕಡಿಮೆ ದರದ ಪರಕೀಯ ಪುಡಿಗಳನ್ನು ಪಡೆದು ಮೋಸಹೋಗಬೇಡಿ ಅದು ಚಿಲ್ಲರೆಯಾಗಿ ದೊರೆಯುವುದಿಲ್ಲ ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ದೊರೆಯುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
ನಂ ಸಂಕರಾಮ ಚಟ್ಟ ಸ್ಟ್ರೀಟ್, ಕಲ್ಕತ್ತಾ,
ಇಲ್ಲಿಗೆ ಬರೆಯಿರಿ

S No 58

ರಾಷ್ಟ್ರೀಯ ಪರಿಷತ್ತು (National Convention) ಮತ್ತು ಸ್ಥಳೀಯ ಕಾಂ| ಕಮಿಟಿಗಳ ಕರ್ತವ್ಯ.

ಲೇಖಕ — ಎಸ್. ಎಸ್ ಚಂಡೂರ

ಪ್ರಾಂತೀಯ ಕಾಯಿದೆ ಮಂಡಲಗಳಿಗೆ ನಡೆಯುವ ಚುನಾವಣೆಗಳು ಮುಗಿದ ಒಡನೆಯೇ, ಇವುಗಳಲ್ಲಿ ಆರಿಸಿಬಂದ ಬೇರೆ ಬೇರೆ ಪ್ರಾಂತಗಳಲ್ಲಿಯ ಹಾಗೂ ಮಧ್ಯವರ್ತಿ ಕಾಯಿದೆಮಂಡಲಗಳ ಕಾಂಗ್ರೆಸ್ ಸದಸ್ಯರು ಮತ್ತು ವರ್ಕಿಂಗ್ - ಕಮಿಟಿಯು ಆಮಂತ್ರಣ ಕೊಡುವಂತಹ ಇನ್ನಿತರ ಕಾಂಗ್ರೆಸ್ ಸಭಾಸದರಿಂದ ಕೂಡಿದ ರಾಷ್ಟ್ರೀಯ ಪರಿಷತ್ತೊಂದನ್ನು (National Convention) ಕೂಡಿಸಬೇಕೆಂಬುದಾಗಿ ಪೈಜಪುರದಲ್ಲಿ ನಡೆದ ರಾಷ್ಟ್ರ ಮಹಾಸಭೆಯ ಅಧಿವೇಶನದಲ್ಲಿ ನಿರ್ಣಯವಾಯಿತು

ಈಗಾಗಲೇ ಕೆಲವು ಪ್ರಾಂತ್ಯಗಳಲ್ಲಿ ಚುನಾವಣೆಗಳು ಮುಗಿದಿವೆ ಇನ್ನೊಂದು ವಾರದೊಳಗಾಗಿ ಉಳಿದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಚುನಾವಣೆಗಳು ಮುಗಿದುಹೋಗುವವು- ೧೯೩೫ನೆಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಪ್ರಕಾರವಾಗಿ ಹೊಸ ಸುಧಾರಣೆಯು ಎಪ್ರಿಲ್ ೧ನೆಯ ತಾರೀಕಿನಿಂದ ಆರಂಭವಾಗುವುದು. ಅಲ್ಲದೆ ಈಗ ಹೊಸದಾಗಿ ಚುನಾಯಿಸಲ್ಪಟ್ಟಿರುವ ಸದಸ್ಯರು ಹೊಸ ರಾಜ್ಯ ಘಟನೆಯನ್ನು ಅನುಸರಿಸಿ ಬರಲಿರುವ ಕಾಯಿದೆಮಂಡಲಗಳಲ್ಲಿ ಕುಳಿತು ಕೆಲಸಮಾಡಬೇಕಾಗುವುದು ಈ ವೇಳೆಗಾಗಿ, ಈ ರಾಷ್ಟ್ರೀಯ ಪರಿಷತ್ತು ಸೇರಿ ಯಾವ ರೀತಿಯಲ್ಲಿ ಕಾಂಗ್ರೆಸ್ ಪ್ರತಿನಿಧಿಗಳು ಹೊಸ ಕಾಯಿದೆಮಂಡಲಗಳಲ್ಲಿ ಕಾರ್ಯವನ್ನು ಕೈಕೊಳ್ಳಬೇಕೆಂಬುದನ್ನು ನಿರ್ಧರಿಸುವುದು ಮಾರ್ಚ ತಿಂಗಳ ಅಂತ್ಯದೊಳಗಾಗಿ ದೇಹಲಿಯಲ್ಲಿ ಈ ಪರಿಷತ್ತು ಜರಗುವುದೆಂದು ಒಕ್ಕಣೆ ಆಗಿದೆ ಆದ್ದರಿಂದ ಕಾಂಗ್ರೆಸ್ ಸದಸ್ಯರು, ಸ್ಥಳೀಯ ಕಾಂಗ್ರೆಸ್ ಕಮಿಟಿಗಳು ಕಾಯಿದೆಮಂಡಲಗಳಲ್ಲಿಯ ಕಾಂಗ್ರೆಸ್ ಪ್ರತಿನಿಧಿಗಳು ಇದರ ಸಂಬಂಧವಾಗಿ ವಿಚಾರ ನಡೆಸಿ ಮುಂದೆ ಯಾವ ರೀತಿಯಲ್ಲಿ ಕಾಂಗ್ರೆಸ್ ಪ್ರತಿನಿಧಿಗಳು ಕಾಯಿದೆಮಂಡಲಗಳಲ್ಲಿ ವರ್ತಿಸಬೇಕೆಂಬುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗುವುದು

ನಮ್ಮ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸುವುದರ ಸಲುವಾಗಿಯೇ ಈ ಪರಿಷತ್ತು ಕೂಡಿರುವುದರಿಂದ ಪ್ರತಿಯೊಂದು ಸ್ಥಳೀಯ ಸಂಸ್ಥೆಯೂ ಈ ಬಗ್ಗೆ ವಿಚಾರವಿನಿಮಯ ನಡೆಸಲೇಬೇಕು. ಏಕೆಂದರೆ ಸ್ಥಳೀಯ ವಿದ್ಯಮಾನಗಳನ್ನು ಸ್ಥಳೀಯ ಸಂಸ್ಥೆಗಳೇ ನಡೆಸಬಲ್ಲವು ಮೇಲಿನಿಂದ ಬರುವ ಪ್ರಾಂತೀಯ ಮುಂದಾಳುಗಳೆನಿಸಿದವರಿಗಾಗಲೀ ಅಥವಾ ರಾಷ್ಟ್ರದ ಮುಂದಾಳುಗಳಿಗಾಗಲೀ ಸ್ಥಳೀಯ ಸ್ವಾಸುಖಗಳು ಸ್ಪಷ್ಟವಾಗಿ ಅಥವಾ ವಿವರವಾಗಿ ಗೊತ್ತಾಗಲು ಶಕ್ಯವಿಲ್ಲ ಈ ರೀತಿಯಾದ ವಿವರವನ್ನು ತಿಳಿಯದೆ ಚಳವಳಿಯ ಮಾರ್ಗವನ್ನಾದರೂ ನಿಶ್ಚಯಿಸಲು ಸಾಧ್ಯವಿಲ್ಲ ಕಾಯಿದೆಮಂಡಲಗಳಲ್ಲಿ ನಮ್ಮ ಪ್ರತಿನಿಧಿಗಳು ಆಚರಿಸಬೇಕಾದ ಕಾರ್ಯಕ್ರಮವನ್ನು ನಿರ್ಣಯಮಾಡಲು ಸಾಧ್ಯವಿಲ್ಲ ಇದೇ ಈ ಪರಿಷತ್ತಿನ ಮಹತ್ವ ಈ ಮಹತ್ವವನ್ನು ಅಂತೂ ನಾವು ಬಹು ಜಾಗರೂಕತೆಯಿಂದ ಕೆಲಸ ಮಾಡಬೇಕು. ಕಾಂಗ್ರೆಸ್ಸಿನ ಪ್ರತಿನಿಧಿಗಳು ತಮ್ಮ ಮನಸ್ಸಿಗೆ ಬಂದಂತೆ ಕಾಯಿದೆಮಂಡಲಗಳಲ್ಲಿ ಕೆಲಸಮಾಡುವುದಲ್ಲ ಕಾಂಗ್ರೆಸ್ ಕಮಿಟಿಗಳು ಸ್ಥಳೀಯ ವಿದ್ಯಮಾನಗಳನ್ನರಿತು ಜನತೆಯ ಹಿತಚಿಂತನೆಯನ್ನೂ, ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಪುರೋಭಿವೃದ್ಧಿಯನ್ನೂ ಮನಸ್ಸಿನಲ್ಲಿಟ್ಟುಕೊಂಡು ನಿಶ್ಚಯ ಮಾಡಿದ ಕಾರ್ಯಕ್ರಮಗಳನ್ನು ಅನುಸರಿಸಲೇಬೇಕು. ಇಲ್ಲವಾದರೆ ಕಾಂಗ್ರೆಸ್ಸು ತನ್ನ ಪ್ರತಿನಿಧಿಗಳನ್ನು ಕಾಯಿದೆಮಂಡಲಗಳಿಗೆ ಕಳುಹಿಸುವ ಉದ್ದೇಶವಾದರೂ ನೆರವೇರಲಾರದು,

ಇತರ ಪಕ್ಷಗಳು ಕಾಯಿದೆಮಂಡಲಗಳಿಗೆ ಹೋಗುವಂತೆ ಕಾಂಗ್ರೆಸ್ಸು ಹೋಗುವುದಿಲ್ಲ ತನ್ನ ನಿಶ್ಚಿತ ಧ್ಯೇಯವಾದ ಸ್ವಾತಂತ್ರ್ಯವನ್ನು ಗಳಿಸುವದಕ್ಕಾಗಿ ನಡೆಯುವ ಸಂಗ್ರಾಮವನ್ನು ಮುಂದೊತ್ತುವ ಸಲುವಾಗಿ, ಇವುಗಳನ್ನು ಸಹ ಉಪಯೋಗಿಸಿಕೊಳ್ಳಲು ಹೋಗುತ್ತದೆ ಈ ದೃಷ್ಟಿಯನ್ನಿಟ್ಟುಕೊಂಡು ಸ್ಥಳೀಯ ಸಂಸ್ಥೆಯೂ ವಿಚಾರವಿನಿಮಯವನ್ನು ನಡೆಸಬೇಕಾಗಿ ಬರುತ್ತದೆ

ಕೆಲವರು ಈ ಪರಿಷತ್ತು ಮತ್ತೊಂದು ಸರ್ವಪಕ್ಷೀಯ ಪರಿಷತ್ತಿನಂತೆ (All Parties Convention) ಆಗುವುದೇ ಹೊರತು ಮತ್ತೇನೂ ಆಗಲಾರದೆಂದು ಹೇಳುತ್ತಾರೆ ಮತ್ತೆ ಕೆಲವರು ನಮ್ಮ ಪ್ರತಿನಿಧಿಗಳು ಕಾಯಿದೆ ಮಂಡಲಗಳಲ್ಲಿ ಬಹು ಸಂಖ್ಯೆಯಲ್ಲಿರುವಾಗ ಮಂತ್ರಿಪದವಿಯನ್ನು ಸ್ವೀಕರಿಸಬೇಕೋ, ಬೇಡವೋ ಎಂಬುದನ್ನು ನಿಶ್ಚಯಿಸುವುದಕ್ಕಾಗಿ ಸೇರುತ್ತದೆ ಎಂಬುದಾಗಿ ತಿಳಿಯುತ್ತಾರೆ ಇವೆರಡು ಅಭಿಪ್ರಾಯಗಳು ಸರಿಯಾದುವಲ್ಲ

ಈ ಪರಿಷತ್ತು ಸರ್ವಪಕ್ಷೀಯ ಪರಿಷತ್ತಲ್ಲ ಇದರಲ್ಲಿ ಕೇವಲ ಕಾಂಗ್ರೆಸ್ಸಿನವರು ಮಾತ್ರ ಇರುತ್ತಾರೆ ಕಾಂಗ್ರೆಸ್ಸಿನಲ್ಲಿ ಬೇರೆ ಬೇರೆ ವಿಚಾರಗಳುಳ್ಳ ಪಂಗಡಗಳಿರುವುದೇನೋ ನಿಜ ಆದರೆ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಒಪ್ಪಿಕೊಂಡಿರುವವರು ಇರುತ್ತಾರಾದ ಕಾರಣ ಇದು ಸರ್ವಪಕ್ಷೀಯ ಪರಿಷತ್ತಿನಂತಾಗಿ ಎಲ್ಲರಿಗೂ ಸರ್ವಸಾಮಾನ್ಯವಾದ ಒಂದು [illegible] ವನ್ನು ಸಿದ್ಧಗೊಳಿಸುವ ತರಹದಾಗಬಾರದು

ಮುಖ್ಯವಾಗಿ ಸ್ವಾತಂತ್ರ್ಯದ ಮಾರ್ಗದಲ್ಲಿ ಯಾವ ವಿಧವಾದ ಕಾರ್ಯಕ್ರಮವನ್ನು ಕೈಗೊಂಡು ನಾವು ನಮ್ಮ ಹೋರಾಟವನ್ನು ಬೆಳೆಸಬೇಕೆಂಬ ಮುಖ್ಯ ಧ್ಯೇಯವನ್ನಿಟ್ಟುಕೊಂಡು ಈ ಪರಿಷತ್ತು ವಿಚಾರಗಳನ್ನು ನಡೆಸುವುದು ಅಂದಮೇಲೆ ಮಂತ್ರಿಪದವಿ ಸ್ವೀಕಾರದ ನಿರ್ಣಯಮಾಡುವುದು ಮುಖ್ಯ ವಿಷಯವಲ್ಲ ಮಂತ್ರಿಪದವಿ ಸ್ವೀಕಾರದ ಪ್ರಶ್ನೆಯು ಕೇವಲ ಅಲ್ಪವಿಷಯ ಅದಕ್ಕೆ ನಾವು ಅಷ್ಟೊಂದು ಮಹತ್ವವನ್ನು ಕೊಡಬೇಕಾದ ಅವಶ್ಯಕತೆಯಿಲ್ಲ ಮಂತ್ರಿಪದವಿಯನ್ನು ಸ್ವೀಕರಿಸುವುದರಿಂದ ನಮ್ಮ ಹೋರಾಟವನ್ನು ಬೆಳೆಸಬಹುದೆಂದು ತೋರಿದರೆ ಅದನ್ನು ಸ್ವೀಕರಿಸುವುದಕ್ಕಾದರೂ ಅಡ್ಡಿಯಿಲ್ಲ ಹಾಗೆ ಆಗುವುದೇ ಇಲ್ಲವೆಂಬ ಪ್ರಶ್ನೆ ಬೇರೆ ಇದರ ನಿರ್ಣಯವು ಪರಿಸ್ಥಿತಿಯನ್ನೂ ಅನುಸರಿಸಿ ಆಗುವುದು.

ಮುಖ್ಯವಾಗಿ ಕಾಂಗ್ರೆಸ್ಸಿನ ಚುನಾವಣಾ ಪ್ರಸಿದ್ಧ ಪತ್ರಿಕೆಯಲ್ಲಿಯೂ, ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಪ್ರಸ್ತಾಪಗಳಾಗಿಯೂ ಹೇಳಿರುವಂತೆ ಅವುಗಳನ್ನು ಪೂರ್ಣಗೊಳಿಸಿ ಆ ಮೂಲಕವಾಗಿ ಜನತೆಯಲ್ಲಿ ಶೋಷಣೆಯಾಗುತ್ತಿರುವುದನ್ನು ಯಾವ ರೀತಿಯಲ್ಲಿ ನಿಲ್ಲಿಸಲು ಸಾಧ್ಯವಾಗುವುದು ಎಂಬ ಪ್ರಶ್ನೆಗೆ ಉತ್ತರಕೊಡುವುದೇ ನಮ್ಮ ಮುಖ್ಯ ಕರ್ತವ್ಯ ಸಾಮ್ರಾಜ್ಯಶಾಹಿಯ ಶೋಷಣಾ ಪದ್ಧತಿಯಲ್ಲಿ ಶೋಷಣಾ ವಿಧಾನದ ಪ್ರತಿಯೊಂದು ಕಲ್ಲನ್ನು ಸಡಲಿಸದಿದ್ದರೆ ಸಾಮ್ರಾಜ್ಯಶಾಹಿಯನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಸಾಧ್ಯವಿಲ್ಲ ಈ ರೀತಿಯಲ್ಲಿ ನಾವು ಪ್ರತಿಯೊಂದ ಕಲ್ಲನ್ನು ಸಡಲಿಸುತ್ತಿರುವಾಗ ಜನತೆಯಲ್ಲಿ ಜಾಗೃತಿಯುಂಟಾಗಿ ಸ್ವಾತಂತ್ರ್ಯ ಸಂಗ್ರಾಮವು ಮೇಲಿನ ಅಂತಸ್ತನ್ನು ಮುಟ್ಟುವುದು ಇದೀಗ ನಮ್ಮ ಕಾರ್ಯಕ್ರಮವನ್ನು ನಿರ್ಣಯಿಸುವುದರ ಮುಖ್ಯ ಉದ್ದೇಶ

ಮತ್ತೊಂದು ವಿಷಯವೆಂದರೆ ಫೈಜಪುರದ ಅಧಿವೇಶನದಲ್ಲಿ ಸ್ಪಷ್ಟಮಾಡಿದಂತೆ ಕಾಂಗ್ರೆಸ್ ಪ್ರತಿನಿಧಿಗಳು ಕಾಯಿದೆಮಂಡಲಗಳಿಗೆ ಹೋಗಿ ಬ್ರಿಟಿಷರು ತಮ್ಮ ಸ್ವಯಂನಿಯಂತ್ರಿತ ಅಧಿಕಾರದಿಂದ ಹಿಂದೂಸ್ಥಾನದ ಮೇಲೆ ಹೊರಿಸಿರುವ ರಾಜ್ಯಘಟನೆಯನ್ನು ಕೊನೆಗಾಣಿಸಲು ಪ್ರಯತ್ನ ಮಾಡತಕ್ಕದ್ದು ಪ್ರಾಂತೀಯ ರಾಜ್ಯರಚನೆಯನ್ನು (Provincial Structure) ಮಾತ್ರವಲ್ಲದೆ ಹಿಂದೂಸ್ಥಾನವನ್ನು ದೇಶಿರಾಜರು, ಜಮೀನುದಾರರೇ ಮೊದಲಾದ ಪ್ರತಿಗಾಮಿ (Reactionary) ಶಕ್ತಿಗಳ ಅಂಕುಶದಲ್ಲಿ ಸಿಕ್ಕಿಸಿ ಹಿಂದೀ ಜನತೆಯ ಶೋಷಣೆಯನ್ನು ಯಥಾಯೋಗ್ಯವಾಗಿ ನಡೆಸಲು ಅನುಕೂಲವಾಗುವಂತಹ ಫೆಡರೇಶನ್ (Federation)ನ್ನು ಅಸ್ತಿತ್ವಕ್ಕೆ ಬರದಂತೆಯೇ ಮಾಡಬೇಕಾಗುವುದು.

ಹಿಂದೂಸ್ಥಾನದ ಭಾವೀಸ್ವಾತಂತ್ರ್ಯ ಸರಕಾರವು ಲೋಕಶಾಹೀತತ್ವದಿದ್ದು ಅದರ ರಚನೆಯು ಹಿಂದೀ ಜನತೆಯ ಇಷ್ಟಪ್ರಕಾರವಾಗಿ ಆಗಬೇಕು. ಅರ್ಥಾತ್, ಪ್ರಾಪ್ತವಯಸ್ಕರಾದ ಹಿಂದೀಯರ ಪ್ರತಿನಿಧಿಗಳಿಂದಲೇ ಕೂಡಿದ ರಾಜ್ಯಾಂಗಸಭೆ ಅಥವಾ ಕಾನ್ಸಿಟ್ಯುಯಂಟ್ ಅಸೆಂಬ್ಲಿಯ (Constituent Assembly) ಮೂಲಕವಾಗಿ ಮಾತ್ರ ಆಗತಕ್ಕದ್ದು ಬ್ರಿಟಿಷರ ಸ್ವಯಂನಿಯಂತ್ರಿತ ಹಕ್ಕನ್ನು ಹಿಂದೀಯರು ಎಂದೆಂದಿಗೂ ಒಪ್ಪಿಕೊಳ್ಳತಕ್ಕವರಲ್ಲ. ಇದು ಜನಜನಿತವಾಗಿ ಮಾಡಲು ಬೇಕಾದ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸಿನ ಪ್ರತಿನಿಧಿಗಳು ಕಾಯಿದೇ ಮಂಡಲಗಳಲ್ಲಿ ಪ್ರವೇಶಮಾಡಬೇಕಾಗುವುದು, ಇದೀಗ ಕಾಂಗ್ರೆಸ್ಸಿನ ಪ್ರಸ್ತಾಪದ ಆಶಯ.

ಮೇಲೆ ಹೇಳಿದ ವಿಷಯಗಳೆಲ್ಲವೂ ಯೋಗ್ಯರೀತಿಯಿಂದ ತೀರ್ಮಾನವಾಗಬೇಕಾದರೆ ಗ್ರಾಮ, ತಾಲೂಕು ಮತ್ತು ಜಿಲ್ಲಾ ಕಮಿಟಿಗಳು ಈ ಕಡೆಗೆ ಹೆಚ್ಚು ಗಮನಕೊಟ್ಟು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವುದಲ್ಲದೆ ಈ ರಾಷ್ಟ್ರೀಯ ಪರಿಷತ್ತು ಅವುಗಳಿಗನುಸಾರವಾಗಿ ಕಾರ್ಯಕ್ರಮವನ್ನು ಹಾಕಿಕೊಡುವಂತೆ ನೋಡಿಕೊಳ್ಳಬೇಕು ಜನಜಾಗೃತಿಯುಂಟಾಗಿ ಸಾಮುಹಿಕ ರೀತಿಯಿಂದ ಕಾರ್ಯಕ್ರಮವನ್ನು ಕೈಗೊಂಡು ಸ್ವಾತಂತ್ರ್ಯಸಂಗ್ರಾಮದಲ್ಲಿ ಮುಂದೆ ಹೆಜ್ಜೆಯಿಡುವಂತಾಗಲು ಈ ಸ್ಥಳೀಯ ಕಾಂಗ್ರೆಸ್ ಕಮಿಟಿಗಳ ಮೇಲೆ ಜವಾಬ್ದಾರಿಯು ಬಹಳವಾಗಿದೆ ಇದನ್ನು ತಿಳಿದು ಸ್ಥಳೀಯ ಕಾಂಗ್ರೆಸ್ ಕಮಿಟಿಗಳು ಸರಿಯಾದ ಮಾರ್ಗದಲ್ಲಿ ಹೋದದ್ದೇ ಆದರೆ ನಾವು ಬೇಡುವ ವಸ್ತುವು ನಮಗೆ ಸುಲಭವಾಗಿ ದೊರೆಯುವುದು

ಈ ರೀತಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಯೋಗ್ಯ ರೀತಿಯಿಂದ ಬೆಳೆಸಲು ಈ ರಾಷ್ಟ್ರೀಯ ಪರಿಷತ್ತು ಒಂದು ಸಾಧನ ಈ ಸಾಧನದ ಮಹತ್ವವನ್ನು ತಿಳಿಯದ ಹೊರತು ಅದನ್ನು ಉಪಯೋಗಮಾಡಿಕೊಳ್ಳುವದಾದರೂ ಸಾಧ್ಯವಿಲ್ಲ

ಕಿಶ್ಚಿಂಗ್ಟನ್ - ಒಲ್ಲಿನ ಓರ್ವ ಚಮಗಾರನು ಒಂದು ಹಲ್ಲು ಕಳಕೊಂಡನು ಅದಕ್ಕೆ ಬದಲಾಗಿ ಕೃತಕ ಹಲ್ಲನ್ನು ಜೋಡಿಸಲು ಅವನು ದಂತವೈದ್ಯರನ್ನು ಕಾಣಲು ಅವನ ಬಾಯಿಗೆ ಆಗುವ ಹಲ್ಲು ಯಾವುದೂ ಸಿಗಲಿಲ್ಲ ಇದರಿಂದ ನಿರಾಶೆಗೊಂಡವನಾಗಿ ಆ ಚಮಗಾರನು ವಿಷಗಾಳಿ ಪ್ರಯೋಗ ಮಾಡಿ ಆತ್ಮಹತ್ಯೆ ಮಾಡಿಕೊಂಡನು

ESTD: 1906

CANARA BANK

LIMITED.

INCORPORATED IN BRITISH INDIA

Member, Reserve Bank of India.

~~Member, Clearing House Bombay~~

Subscribed Capital	6,00,000
Paid up Capital	3,83,240
Reserves	4,50,000
Deposits	79,64,000
Total Resources	98,00,000

Offices:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKAMAGALUR
ERNAKULAM.	ARSIKERE
COCHIN.	DAVANAGERE
CALICUT	HUBLI
CANNANORE	DHARWAR. Etc. Etc

ಅನುಕ್ರಮಣಿಕೆ.

ಟಿಪ್ಪಣಿಗಳು ... ೨
ರಾಷ್ಟ್ರಪತಿಗಳ ವಿನಂತಿ ... ೪
ಜನತೆಗೆ ಸ್ವಾತಂತ್ರ್ಯದಿಂದ ತಂದ ಪಾರ್ಟಿಗೆ ಜಯಶೀಲವಾಯಿತು ... ೫
ಪ್ರಪಂಚ ವಿಚಾರ ... ೭
ಸಿದ್ಧ ಆದರ ಮಹತ್ವ ... ೮
ವಿವಿಧ ಸಮಾಚಾರಗಳು ... ೧೧
ಅಗ್ರಲೇಖ
ಚುನಾವಣೆಗಳ ತರುವಾಯ ... ೧೦
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ ...
ಟ್ರಂಕ್ ರಸ್ತೆಗಳೂ ಎರಡನೇ ತರಗತಿ ರಸ್ತೆಗಳೂ ೧೮

ತಾ ೨೬ ನೇ ಶುಕ್ರವಾರ ಫೆಬ್ರವರಿ ೧೯೩೭

ಸ್ವದೇಶಾಭಿಮಾನಿ.

ಚುನಾವಣೆಗಳ ತರುವಾಯ

ಚುನಾವಣೆಗಳು ಹೇಗೂ ಮುಗಿದುವು; ಫಲಿತಾಂಶವೂ ಪ್ರಕಟವಾಯಿತು. ಮದ್ರಾಸು ಸಂಸ್ಥಾನದಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸ್ ಪಕ್ಷವೇ ಗೆದ್ದು, ತನ್ನ ಕಾರ್ಯಕ್ರಮವನ್ನು ವೋಟರರ ಸಮುದಾಯವು ಅಂಗೀಕರಿಸಿ ದೃಢಪಡಿಸಿತೆಂದು ರುಜುಮಾಡಿತು. ಚುನಾವಣೆಯ ಕಾಲದಲ್ಲಿ ಪಕ್ಷಪ್ರತಿಪಕ್ಷಗಳನ್ನು ಕಟ್ಟಿಕೊಂಡು ಗದ್ದಲವೆಬ್ಬಿಸಿದವರು, ಸುಧಾರಿತ ರಾಷ್ಟ್ರಗಳಲ್ಲಿ ಚುನಾವಣೆಗಳಾದ ತರುವಾಯ ವ್ಯಕ್ತಿಶಃ ವಾದ ಪ್ರತಿವಾದಗಳ ಕಾಲದಲ್ಲಿ ಉಂಟಾದ ಕಷ್ಟ ಕ್ಲೇಶಾದಿಗಳನ್ನು ಮರೆತುಬಿಡುವ ಸಾಧು ಬುದ್ಧಿಯು ನಮ್ಮ ಸುಧಾರಿತ ಸಮಾಜದಲ್ಲೂ ಇರುವುದೆಂದು ಬಲ್ಲೆವು. ಆದರೂ, ಪುನಃ ಪುನಃವಾಗಿ ಅದನ್ನೇ ಹೊರ ತೆಗೆದು, ಆಗಾಗ ಅದಕ್ಕೆ ವಿರುಗನ್ನಿಟ್ಟು ಮೆರೆಯಿಸಿ, ಚುನಾವಣೆ ಕಾಲದಲಿ ತಮ್ಮ ತೋಳತೀಟೆ, ನಾಲಗೆಯ ನಾಚಾಲಿತೆ, ಲೇಖನಿಯ ಪರಾಕ್ರಮ ಪ್ರದರ್ಶಿಸಿದಂತೆ ಮುಂದೆಯೂ ಅನಾವಶ್ಯಕವಾಗಿ ಪ್ರದರ್ಶಿಸಲೇಬೇಕೆಂದು ಪ್ರತಿಜ್ಞೆ ಹಾಕಿಕೊಂಡವರೂ ನಮ್ಮ ದೇಶದಲ್ಲಿ, ಇತರ ದೇಶಗಳಲ್ಲಿರುವಂತೆ ಇರುವರೆಂದೂ ಬಲ್ಲೆವು. ಚುನಾವಣೆಯ ಕಾಲದಲ್ಲಿ ತತ್ವದ ಪಡೆಯೊಂದು, ಕಾರ್ಯಕ್ರಮದ ಹೋಲಿಕೆಯಿಂದ ನಾನಾ ಟೀಕೆಗಳೂ ವಿಮರ್ಶೆಗಳೂ ಉಂಟಾಗಲೇಬೇಕು. ಅವುಗಳಿಗೂ ಒಂದು ಕ್ರಮವಿದೆ, ಅಕ್ರಮವಿಲ್ಲ. ಆದರೆ ಅವನ್ನು ಪದೇ ಪದೇ ಒತ್ತಿ ಹೇಳುತ್ತಾ ಮುಂದೆಯೂ ಕಾಲಕ್ಷೇಪಮಾಡಬೇಕೆನ್ನುವವರೂ ಇರಬಹುದು, ಸೋತವರನ್ನು ಹಿಯ್ಯಾಳಿಸುವುದೂ ಇವರ ಲಕ್ಷಣವಾಗಿದೆ. ಇದೆಲ್ಲವೂ ನೀಚ ವಿಕಾರವಾಗಿ ಚುನಾವಣೆಗೆ ಎದುರಾಳಿಗಳಾಗಿರುವರಲ್ಲಿ ಎಂದೂ ತೋರಿಬರದಾಗಿದೆ. ತತ್ವಕ್ಕಾಗಿ, ಕಾರ್ಯಕ್ರಮಕ್ಕಾಗಿ ಚರ್ಚೆ ಎಷ್ಟು ಬೇಕಾದರೂ ಟೀಕಿಸಿ ಮರ್ಶಿಸಬಹುದು; ಆದರೆ, ವ್ಯಕ್ತಿಗಳ ಖಾಸಗಿ ಗೃಹಜೀವನವನ್ನೂ ಚಾರಿತ್ರ್ಯವನ್ನೂ ಟೀಕಿಸುತ್ತಲಿರುವ ಕ್ರಮವಿಲ್ಲ. ಈ ಜಾತಿಯ ಪಾರ್ಟಿ ಎಂದು ಹೇಳುವುದೊಂದು ಜಾತಿಯನ್ನೇ, ಧರ್ಮವನ್ನೇ, ಒಂದು ಬಗೆಯಾಗಿ ಪಣವಾಗಿ ಇಟ್ಟುಕೊಂಡು ಚುನಾವಣೆಗೆ ಹೋರಾಟ ಹಿಯ್ಯಾಳಿಸಿದ ರೀತಿಯನ್ನು ಯಾರು ಎಲ್ಲಿ ತೋರಿಸಿ ದ್ದಾರೆಯೋ, ಸ್ವಾಭಿಮಾನವನ್ನು ಮಣ್ಣುಪಾಲು ಮಾಡಿ, ಎದುರಾಳಿಯೊಡನೆ ಧರ್ಮಯುದ್ಧ ನೀತಿಯನ್ನು ಕೈಕೊಳ್ಳದೆ ಹಿಂಸೆಯೇ ಮೊದಲಾದ ಕ್ರಮಗಳಿಂದ ಯಾರು ಚುನಾವಣೆ ಮಾಡಿದರೋ, ಯಾರು ಉದ್ಯುಕ್ತರಾಗಿದ್ದಾರೆಯೋ, ಎಲ್ಲಿ ಅಧಿಕಾರ ಧನ ಮೊದಲಾದುವು ಇದ್ದಾಗಲೇ ಗೆದ್ದರೆ ದೊರೆಯಬಹುದೆಂಬ ಲಾಲಸೆಯಿಂದಾಗಲಿ ಯಾರು ಎದುರು ಪಕ್ಷವನ್ನು ಸೆಣಸಿದ್ದಾರೆಯೋ ಅವರಿಗೆ ಅವರ ಈ ದುರಹಂಕಾರದ ಪರಿಣಾಮವಾಗಿ ದೊರೆತ ಅಪಜಯಕ್ಕೆ ಅವರೇ ಕಾರಣರೆಂದು ಖಂಡಿತವಾಗಿ ತಿಳಿಯುವ ಹಾಗೆ ಚುನಾವಣೆಗಳ ಪರಿಣಾಮವು ಪ್ರತಿಯೊಂದೂ ಪ್ರಾಂತ್ಯದಲ್ಲಿ ಉಂಟಾಗಿದೆ; ಇಲ್ಲದಿದ್ದರೆ, ಮುಂದೆ ಉಂಟಾಗದೆ ಇರಬಾರದು ಎಂದು ಅಂತಹ ಪ್ರಾಂತ್ಯಗಳಲ್ಲಿ ವಿವೇಕಿಗಳ ಮಾತಿದೆ. ಇಂತಹ ಪೀಕಲಾಟಗಳೆಲ್ಲವನ್ನು ಮರೆತುಬಿಡುವ; ಚುನಾವಣೆಗಳ ನಂತರದಲ್ಲಿ ಕಾಂಗ್ರೆಸಿನವರು ವಿಜಯ ಹೊಂದಿದ ಪ್ರಾಂತ್ಯಗಳಲ್ಲಿ ಏನೆಲ್ಲ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿದೆಯೋ ಅದನ್ನು ಇನ್ನೂ ತೀರ್ಮಾನಿಸಲು ಸ್ವಲ್ಪ ಕಾಲವಿದೆಯಾದರೂ, ರಾಷ್ಟ್ರಸಭೆಯ ಕಾರ್ಯಕಲಾಪಗಳು ಹೇಗಾಗಬಹುದೆಂಬುದು ಸ್ವಲ್ಪ ಪ್ರಕಟವೂ ಆಗಿದೆ.

ಕೌನ್ಸಿಲು ಪ್ರವೇಶಕ್ಕಾಗಿ, ಕಾಂಗ್ರೆಸ್ ಪಕ್ಷವು ನಿರ್ಧರಿಸಿ, ಚುನಾವಣೆಗೆ ಮುಂದುಬರುವಾಗಲೇ, ಕೌನ್ಸಿಲಿನಲ್ಲೂ ಕೌನ್ಸಿಲಿನ ಹೊರಗೂ ಯಾವ ರೀತಿ ಕೆಲಸ ಮಾಡಬೇಕೆಂದು ನಿರ್ಧರಿಸಿತ್ತು. ಕೌನ್ಸಿಲಿನ ಒಳಗೆ ಮಾಡತಕ್ಕ ಕಾರ್ಯಕ್ರಮವನ್ನು ಕೂಲಂಕಷವಾಗಿ ನಿರ್ದೇಶಿಸಲು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಇದೆ, ಅದನ್ನು ಸದ್ಯದಲ್ಲೇ ಸೇರಿ ತೀರ್ಮಾನಿಸುವುದು. ಕೌನ್ಸಿಲಿನ ಹೊರಗೆ ನಡೆಯಬೇಕಾಗಿರುವ ಕೆಲಸವನ್ನು ಮಾತ್ರ ರಾಷ್ಟ್ರಸಭಾಧ್ಯಕ್ಷರು ಕೆಲವು ತಿಂಗಳಲ್ಲೇ ಸೂಚಿಸಿದ್ದಾರೆ.

ಚುನಾವಣೆಯಿಂದ ತಿಳಿದಿರುವ ಪ್ರಾಥಮಿಕ ಬೋಧೆ ಇದೇ — ಜನಾಂಗದ ಸಮುದಾಯದಿಂದಲೇ ಕಾಂಗ್ರೆಸಿಗೆ ಬಲ ದೊರೆತಿದೆ. ಅವರು ನಾಲ್ಕಾಣೆ ಕಾಂಗ್ರೆಸ್ ವಾಲಂಟಿಯರರನ್ನು ಹಿಯ್ಯಾಳಿಸಿದವರು, ಇವರ ಪಟ್ಟ ಪರಿಶ್ರಮ ಅಮೌಲ್ಯವಾದುದರಿಂದ ಕಾಣೆಯಾಗಬೇಕಾಯಿತಲ್ಲ ಎಂದು ಕಾಂಗ್ರೆಸ್ ಅಧಿಕಾರಿಗಳೂ ಒಪ್ಪಿರುವರು. ಪ್ರತಿಯೊಂದು ಪ್ರಾಂತ್ಯದಲ್ಲಿ ನಡೆದ ಚುನಾವಣೆಯಲಿ ಬಡಜನರ ಸಹಾಯವೇ ಪ್ರಧಾನ ಸಹಾಯವಾಗಿ ಕಾಂಗ್ರೆಸಿಗೆ ಶ್ರೇಯಸ್ಸನ್ನು ತಂದುಕೊಟ್ಟಿದೆ. ಎಲ್ಲಿ ಸಾಮಾನ್ಯ ಜನರು ಸ್ವಾಭಿಮಾನದಿಂದ ಕಾಂಗ್ರೆಸಿನ ಸಂದೇಶವನ್ನು ಕೇಳಿರುವರೋ ಅಲ್ಲಿನ ಸಮುದಾಯದವರ ಕಾಂಗ್ರೆಸಿಗೆ ಒಂದುಬಲವಾಗಿ ಒದಗಿ ಎಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದರೋ ಅಲ್ಲಿ ಸ್ವಯಂಸೇವಕರು ಜನಸಾಮಾನ್ಯರ ಜನಾರ್ದನನ ಆರಾಧನೆ ಮಾಡಿದ್ದುದು ತೃಪ್ತಿಕರವಾಗಿದ್ದಲ್ಲದೆ, ತಿಳಿದು ಬಂದಿದೆ. ಅದೂ ಅಲ್ಲದ, ಕಿರಿದೇ ಮಹಾಜನರು ಹರಿಜನೈಕ್ಯ ಧನಿಕರಲಿ ಬೃಹದಾಕಾರವಾಗಿರಲಿ ದಕ್ಷಿಣಾಗರಲಿ ಅವರ ಸ್ವಾಭಿಮಾನದ ಜನಸಾಮಾನ್ಯರ ದಾರುಣನ್ನು ಒಲಿಸಿಕೊಳ್ಳುವುದು ಸಾಧ್ಯವಾಗಲಿಲ್ಲವೆಂದೂ ಕಾಂಗ್ರೆಸ ಈಗ ಪ್ರತ್ಯಕ್ಷವಾಗಿ ತೋರಿಸಿಕೊಟ್ಟಂತಾಗಿದೆ. ಈ ಪ್ರಬಲರ ಗುಂಪುಗಳ ದಿನಗಳು ಮುಗಿದುವು.

ಕಾಂಗ್ರೆಸ್ ಕಮಿಟಿಗಳು ಎಲ್ಲಿ ಸದಾ ಕಾಲವೂ ಕೆಲಸ ಮಾಡುತ್ತಿದ್ದುವೋ ಅಲ್ಲಿ ಚುನಾವಣೆಗಳ ಕಾರ್ಯವು ಸುಲಭಸಾಧ್ಯವಾಗಿ ವಿಜಯವನ್ನೇ ಉಂಟುಮಾಡಿದೆ. ಮಹಾಜನರೊಡನೆ ಸೇರುಗಿಯಾಗಿ ನಡೆದ ಕಾಂಗ್ರೆಸ್ ಕಮಿಟಿಗಳು ಇದಿರಾಳಿಗಳಿಗೆ ಅಪಜಯವನ್ನೇ ಉಂಟುಮಾಡಿದೆ.

ಚುನಾವಣೆಯು ನಮಗಿಂದ ಸರ್ವತ್ರವೂ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವು ಆಗುವಷ್ಟು ಹೆಚ್ಚು ಜನರಿಗೆ ತಿಳಿದು ಬಂದಂತಾಗಿದೆ. ದಾರಿದ್ರ್ಯ ದೀನತೆಗಳ ನಿವಾರಣೆಗಾಗಿ, ಕಾಂಗ್ರೆಸ್ ಸಭೆಯು ಹೋರಾಡುವುದೆಂದು ತಿಳಿದರೆ,— ಅದನ್ನೊಂದೇ ಒಂದು ಮುಖ್ಯವೆಂದು, ಯಾವುದೊಂದು ಪ್ರಾಂತ್ಯದವರ ಕೂಟ ಎನ್ನದಂತೆ, ವೋಟರರು ಬುದ್ಧಿ ಕಲಿಸಿರುವರು. ಯಾವುದೊಂದು ಮತ, ಜಾತಿ, ಪ್ರಾಂತ್ಯವನ್ನು ಕಾಂಗ್ರೆಸಿನವರೆಂದು ದೂರಿದರೋ, ಆಯಾ ಮತದ ಜಾತಿಯ, ಮತದ, ಪ್ರಾಂತ್ಯದ ಜನರಲ್ಲಿ ಒಕ್ಕಟನ್ನು ಎಂದೂ ಇದ್ದುದಕ್ಕಿಂತ ಹೆಚ್ಚಾಗಿ ಉಂಟುಮಾಡಿದಂತಾಗಿದೆ. ಕಾಂಗ್ರೆಸ್ ಸೇವೆಯನ್ನು ಕೈಕೊಂಡವರನ್ನು ಈ ರೀತಿಯಾಗಿ ದೂರಿದುದರಿಂದ, ದೂರಲ್ಪಟ್ಟವರಲ್ಲ ಪರಮೋತ್ತಮ ಜಾಗ್ರತಿಯುಂಟಾಗಿ, ಅವರಲ್ಲಿ ಇತರ ಯಾವ ವಿಧದಿಂದಲೂ ಉಂಟಾಗಲಾರದ ಐಕ್ಯವು ಉಂಟಾಗಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕೆ ಹೀಗೆ ದೂರಿದ ಮಹನೀಯರು ವಂದನಾರ್ಹರಾಗಿದ್ದಾರೆ.

ಹಾಗೆಂತೂ ಸುಲಭವಾಗಿ ಕಾಂಗ್ರೆಸ್ ಪಕ್ಷವು ಯಾವ ಪ್ರಾಂತ್ಯಗಳಲ್ಲಿ ಸುಲಭವಾಗಿ ಗೆದ್ದಿರುವುದೋ ಅಲ್ಲಿಯೂ ಎಲ್ಲೆಲ್ಲಿಯೂ ಕಾಂಗ್ರೆಸು ಇನ್ನು ಜನತೆಯ ಪ್ರತಿಯೊಂದು ವ್ಯಕ್ತಿಗೂ ತನ್ನ ಸಂದೇಶವನ್ನೊಪ್ಪಿಸಿ ಸೇವೆಯನ್ನು ಮಾಡುತ್ತಿರಬೇಕಾಗಿದೆ. ಕಾಂಗ್ರೆಸ್ ಪಕ್ಷವಾಗಿ ಚುನಾವಣೆ ಹೊಂದಿದವರು, ಕೌನ್ಸಿಲುಗಳಲ್ಲಿ ಈ ಬಗೆಯಾಗಿ ಮಹಾಜನರ ಸೇವೆಯನ್ನು ಮಾಡುತ್ತಲಿರಬೇಕು. ಆದರೆ, ಇವರು ತಮ್ಮನ್ನಾರಿಸಿರುವ, ಜನಸಂಖ್ಯೆಯಲಿ ಒಕ್ಕಲು 10ರಷ್ಟು ವೋಟರರ ಪರವಾಗಿ ಮಾತ್ರವಲ್ಲದ, ಉಳಿದ ಸೇಕಡಾ 90ರ ಸೇವೆಯನ್ನು ಮಾಡುತ್ತಿರಲೇ ಬೇಕಾಗಿರುವ ಜವಾಬ್ದಾರಿಯನ್ನು ಹೊತ್ತಿರುವರೆಂಬುದನ್ನು ಮರೆಯಬಾರದು. ಹೀಗಿರುವುದರಿಂದ, ಅವರ ಆ ಎಲ್ಲ ಒಕ್ಕಲು ಪಂಚಾಯತಿಯನ್ನು ಮಾಡಿಕೊಂಡ, ಅಲ್ಲಿ ದೊರೆತ ಅನುಭವದಿಂದ ಕೌನ್ಸಿಲುಗಳಲ್ಲಿ ತಮ್ಮ ಕಾರ್ಯಕ್ರಮವನ್ನು ನಿರ್ಧರಿಸಬಹುದಾಗಿದೆ. ಸ್ವರಾಜ್ಯ ಮತ್ತು ದಾರಿದ್ರ್ಯ ನಿವಾರಣ ಇವೆರಡು ಕಾಂಗ್ರೆಸಿನ ಮುಖ್ಯ ಆಶೋತ್ತರಗಳು. ಇವುಗಳನ್ನು ಸಾಧಿಸುವುದಕ್ಕೆ ಕೌನ್ಸಿಲುಗಳಲ್ಲಿ ಕಾದಾಡಿ ವೋಟು ಕೊಟ್ಟರೆ ಮಾತ್ರ ಸಾಲದು. ಇಲ್ಲ ಇದಕ್ಕಾಗಿ ಸವಿಸ್ತರವಾಗಿ ಸ್ಥಳೀಯರುಗಳನ್ನು ಸಂಪರ್ಕಿಸಿ ಅವರ ಇಂತಹ ಜನಸಮೂಹಗಳನ್ನೆಲ್ಲ ಸಮೀಕರಿಸಲು ಸುವ್ಯವಸ್ಥೆಗಾಗಿ ಕಾಂಗ್ರೆಸ್ಸಿಗೆ ಕಷ್ಟವಾಗಲಾರದು. ಪ್ರತಿಯೊಂದು ಗ್ರಾಮದಲ್ಲೂ ಒಂದೊಂದು ಕಾಂಗ್ರೆಸ್ ಕಮಿಟಿ ಈಗ ನಿರ್ಮಾಣ ಹೊಂದಬೇಕಾಗಿದೆ. ಇದನ್ನು ರಾಷ್ಟ್ರಪತಿಗಳು ಇದೇ ರಾಷ್ಟ್ರಸಭೆಯ ಚುನಾವಣೆಯ ಕಾಲದಲ್ಲಿಯೇ ಸೂಚಿಸಿದ್ದಾರೆ.

ಪಂಡಿತ ಜವಾಹರಲಾಲರ ಎಂಬ ಸಂತತಿಗಳೂ ಇವರೇ ಇತರ ರಾಷ್ಟ್ರೀಯ ಸಮಿತಿಗಳಿಗಾಗಿ ಗ್ರಾಮಸ್ಥರು ಹಚ್ಚಿನ ಆಸಕ್ತಿಯ ತೋರಿಸಬೇಕು. ಇದು ಹೊಸ ಬಗೆಯ ಕೆಲಸ. ಕೆಲವು ಡಿಗ್ರಿ ಪರೀಕ್ಷೆ ಹೋಗಲಿ. ರಾಷ್ಟ್ರ ಕಮಿಟಿಗಳೇ ಇಲ್ಲ ರೀತಿ ಸ್ಥಾಪಿಸಲು ಎಷ್ಟೋ ಕಾರ್ಯಭಾಗ ಮಾಡಿದ್ದರ ಇಂತಹ ಕಾರ್ಯಕ್ರಮವು ಕೈಕೊಂಡು, ಬಡವರ ಮನ ಎಲ್ಲಿಗೆ ಕಾಂಗ್ರೆಸು ಕರೆ ನೀಡುತ್ತಿದ್ದರೆ, ದೇಶದಲ್ಲಿ ಹಾದಿಯನ್ನು ಸಾಧಿಸುತ್ತ ಕೆಳಗಿನ ಬಳಗ ಕೆಲಸ ಮಾಡಿಸಿದ ದಕ್ಷಿಣ ಹೊತ್ತಿನ ಸದ್ವಿಷಯಗಳು ಉಂಟಾಗುವುವು.

ಸ್ಫುಟ ವಿಚಾರಗಳು

ಕಾಂಗ್ರೆಸಿನ ಕಾರ್ಯಕ್ರಮ

ಎಷ್ಟೋ ಪ್ರಾಂತ್ಯಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಅಧಿಕ ಮತವನ್ನು ಸಂಪಾದಿಸಿ ಗೆದ್ದಿದೆ. ಇನ್ನು ಕಾಂಗ್ರೆಸಿನ ಮುಂದಣ ಕಾರ್ಯಕ್ರಮವನ್ನು ನಿರ್ಧರಿಸಬೇಕಾಗಿದೆ. ಮದ್ರಾಸು ಪ್ರಾಂತ್ಯದಲ್ಲಿ ಕಾಂಗ್ರೆಸ್ ಸದಸ್ಯರೇ ಚುನಾವಣೆಯಲ್ಲಿ ಅಧಿಕಸಂಖ್ಯೆಯಲ್ಲಿ ಬಂದಿರುವ ಪ್ರಯುಕ್ತ, ಅವರ ಇದಿರಾಳಿಗಳಾಗಿ ನಿಂತ ಸ್ವಪಕ್ಷದವರ ವಿಷಯ ಏನನ್ನೂ ಈಗ ಹೇಳಬೇಕಾದುದಿಲ್ಲ. ಜಸ್ಟಿಸ್ ಪಾರ್ಟಿಯು ಮಾತ್ರ ನಿರ್ನಾಮವಾಯಿತು. ರಾಜಕೀಯ ಕ್ಷೇತ್ರದಲ್ಲಿ ಈ ಪಾರ್ಟಿಯು ಯಾವ ಭವಿಷ್ಯವನ್ನೂ ಹೊಂದಲಾರದು. ಜಸ್ಟಿಸ್ ಪಾರ್ಟಿಯಲ್ಲಿ ಇನ್ನು ಉಳಿದವರ ಸಂಖ್ಯೆ, ಚುನಾವಣೆ ಕಾಲದಲ್ಲಿದ್ದವರ ಸಂಖ್ಯೆಗಿಂತಲೂ ಕಡಿಮೆಯಾಗಿರುವ ಕಾರಣ, ಅದನ್ನು ಇದು ಪಾರ್ಟಿ ಎಂದು ಕರೆದು, ರಾಜಕೀಯ ಸಭಾರಂಗದಲ್ಲಿ ಎಣಿಕೆ ಮಾಡುವುದೇ ಕಷ್ಟವಾದೀತು. ಕೆಲವು ಸದಸ್ಯರು ಈ ಸಭೆಯಲ್ಲಿ, ಅಧಿಕಾರ ಸ್ವೀಕರಿಸಲು ಹಿಂಜರಿದರೆ ಏಕೆ ಎಲ್ಲ ಪಕ್ಷಗಳೂ ಸೇರ್ಪಡೆಗೊಳ್ಳುವುದಕ್ಕೆ ಸಹಾಯವಾದೀತೂ ಎಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. [illegible]

ಆದರೆ ಅಧಿಕಾರ ಸ್ವೀಕರಿಸಬೇಕೇ?

[illegible]

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets at the
Office C. P. C Co., Ltd
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಕಾಂಗ್ರೆಸ್ಸಿನ ಜಯ! ಇಂಗ್ಲಾಂಡಿನ ಭಯ! ಅನೇಕರು ಭದ್ರತಾ ಠೇವಣಿಯನ್ನು ಕಳಕೊಂಡರು!

ಕಾಂಗ್ರೆಸ್ಸಿನ ಜಯ ಪ್ರಚಂಡವಾಗಿದೆ, ಅಲ್ಲದೆ ನ್ಯಾಶನಲ್ ಕನ್ವೆನ್ಶನ್ ಎಂಬ ರಾಷ್ಟ್ರೀಯ ಪರಿಷತ್ತೊಂದು ಬೇಗನೆ ಸೇರಲಿದೆ. ಇದರಿಂದ ನವದಿಲ್ಲಿಯಲ್ಲೂ ಇಂಗ್ಲೆಂಡಿನಲ್ಲೂ ಮುಖಭಂಗವು ಉಂಟಾಗಿದೆಯೆಂದೂ ಈಗ ಉಂಟಾದ ವಿಘ್ನ ಮಾನಗಳನ್ನು ಎದುರಾಯಿಸ ಕಾಂಗ್ರೆಸ್ಸಿನ ಬಲವು ನಡೆಯುವಂತೆ ಪ್ರಯತ್ನಗಳು ನಡೆಯುತ್ತವೆಂದೂ ಮುಂಬಯಿ ನಗರದ ಟೈಮ್ಸ್ ಓಫ್ ಪತ್ರಿಕೆಯು ನವದಿಲ್ಲಿಯ ಪತ್ರಗಾರರ ಅಭಿಪ್ರಾಯವಾಗಿರುತ್ತದೆ.

ಮುಂದಕ್ಕೆ ನಮ್ಮ ರಾಜಕೀಯ ಪ್ರಪಂಚದಲ್ಲಿ ಪ್ರಾಮುಖ್ಯ ಚಟುವಟಿಕೆಗಳು ನಡೆಯಲಿವೆ.

ಕಾಂಗ್ರೆಸ್ಸ ಮಂತ್ರಿಪದ ಸ್ವೀಕಾರ ತಲಬು

ಕಾಂಗ್ರೆಸ್ಸು ಅಧಿಕಾರ ಸೂತ್ರವನ್ನು ವಹಿಸುವ ವರೆ, ಕರಾಚಿ ಕಾಂಗ್ರೆಸ್ಸಿನಲ್ಲಾದ ನಿರ್ಣಯ [illegible]

ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡುವುದೇ?

[illegible]

ನೇಶನಲ್ ಕನ್ವೆನ್ಶನ್.

[illegible] ಅನೆಂಬ್ಲಿ ಸದಸ್ಯರು ಪರಿಷತ್ತಿನ್ನು [illegible] ಸದಸ್ಯರು ಬಿಹಾರ್ ಡಿಸೆಂಬರ್ [illegible] ಕಾಂಗ್ರೆಸ್, ಅಸೆಂಬ್ಲಿಗಳಲ್ಲಿ ಕೇಂದ್ರ ಅಸೆಂಬ್ಲಿ ಸಭೆಗಳಲ್ಲೂ ಸಾಧಿಸುವುದು.

ಭಾರತೀಯ ಫೆಡರೇಶನ್

ಫೆಡರೇಶನೆಂದರೆ ಇಷ್ಟರ ತನಕ ಬೇರೆ ಬೇರೆಯಾಗಿರುವ ಬ್ರಿಟಿಷ ಪ್ರಾಂತಗಳನ್ನೂ ಸಂಸ್ಥಾನಗಳನ್ನೂ ಒಂದು ಮಾಡುವ ಒಂದು ಯೋಜನೆಯಾಗಿರುತ್ತದೆ. [illegible] ಫೆಡರೇಶನಲ್ಲಿ ಆಶ್ರಿತ ಸಂಸ್ಥಾನಗಳಿಗೆ ಸ್ಥಾನ ಕೊಡುವುದು.

ಫೆಡರೇಶನೂ ಕಾಂಗ್ರೆಸ್ಸೂ

ಈ ತರದ ಫೆಡರೇಶನ್ ಎಂದಿಗೂ ಜನ್ಮತೆತ್ತಬಾರದಾಗಿ ಕಾಂಗ್ರೆಸ್ಸು ಸಾಧಿಸುತ್ತಿದೆ. ಕಾರಣ ಈ ಫೆಡರೇಶನಿಂದ ಹಿಂದೂದೇಶಕ್ಕೆ ಹೆಚ್ಚಿನ ಉಪಕಾರವಾಗುವ ಬದಲಾಗಿ ಹಾನಿಯೂ ಉಂಟಾಗಬಹುದೆಂದು ಕಾಂಗ್ರೆಸ್ಸಿನ ಅಭಿಪ್ರಾಯ. ಈ ಫೆಡರೇಶನಲ್ಲಿ ಬ್ರಿಟಿಷ ಸಾರ್ವಭೌಮತ್ವಕ್ಕೆ ಅಧೀನರಾದ ಆಶ್ರಿತ ಸಂಸ್ಥಾನಗಳಿಗೆ ಸ್ಥಾನಗಳು ದೊರಕುವುದರಿಂದ ಹಿಂದೀಯರ ಸ್ವಾತಂತ್ರ್ಯ ಧ್ಯೇಯವಳಿದು ಅಲ್ಲಿ ನಡೆಯಲಾರದು.

ಪ್ರಾ. ಎಸೆಂಬ್ಲಿಗಳಲ್ಲಿ ಕಾಂಗ್ರೆಸ್ಸಿನ ಕಾರ್ಯಕ್ರಮ.

ಕಾಂಗ್ರೆಸ್ಸು ಅಧಿಕಾರ ಸೂತ್ರವನ್ನು ವಹಿಸಿ ಅದು ಯಾವ ತರದ ಕಾರ್ಯವನ್ನು ನಡೆಯಿಸುವುದು? ಬರೇ ಸಣ್ಣ ಸಣ್ಣ ರಿಯಾಯತಿಗಳಿಂದ ಅದಕ್ಕೆ ಸಮಾಧಾನವಾಗಲಾರದು. ದೊಡ್ಡ ದೊಡ್ಡ ಪ್ರಶ್ನೆಗಳನ್ನು ಮುಂದಕ್ಕೆ ತಂದು, ದೃಷ್ಟಾಂತವಾಗಿ, ಮುಂಬಯಿ ಅಧಿವೇಶನದಲ್ಲಿ ಅಸಹಕಾರ ಚಳವಳದ ಸಮಯ, ಸರಕಾರದವರು ವಶ ಮಾಡಿಕೊಂಡ ಆಸ್ತಿಪಾಸ್ತಿಗಳನ್ನು ಹಿಂದಕ್ಕೆ ಕೊಡುವ ವಿಚಾರವು ಅಪ್ರಾಳ ಕಾನೂನ ಮಾಡಿಸಲಿಕ್ಕೆ ಸರಕಾರದಿಂದಲೇ ಕ್ರಿಯೆಯನ್ನು ಕೇಳಿಸುವುದು. ಸಂಯುಕ್ತ ಪ್ರಾಂತ್ಯ [illegible] ಪ್ರಾಂತ್ಯದಲ್ಲಿ ರೈತರ [illegible] ರಿಯಾಯತಿಗಳನ್ನು ಮಂಜೂರು ಮಾಡುವುದು [illegible] ಪ್ರಶ್ನೆಗಳನ್ನು ಮುಂದಕ್ಕೆ [illegible] ಕಾಂಗ್ರೆಸ್ಸಿನ [illegible]

ಶ್ರೀ ಸುಭಾಷಚಂದ್ರಬೋಸರು

[illegible]

ಕಮಲಾ ನೆಹರು ಸ್ಮಾರಕ ನಿಧಿ

[illegible] ಕಾಂಗ್ರೆಸ್ [illegible] (ರೂ. ೫೦೦) [illegible] ಈ ನಿಧಿಗೆ ಕೊಡಲು [illegible]

ಚುನಾವಣೆಯಲ್ಲೇನಾಯಿತು?

[illegible] ಕಾಂಗ್ರೆಸ್ಸು [illegible] ಸಂಯುಕ್ತ ಪ್ರಾಂತ್ಯಗಳಲ್ಲಿ ಬಿಹಾರು ಮದ್ರಾಸ್, ಮಧ್ಯ ಪ್ರಾಂತ್ಯ [illegible] ಸ್ಥಾನಗಳು ಕಾಂಗ್ರೆಸ್ಸಿಗೆ [illegible] ಪ್ರಾಂತ್ಯಗಳಲ್ಲೂ ಕಾಂಗ್ರೆಸ್ಸ [illegible]

ಕಾಂಗ್ರೆಸ್ಸು ಉಮೇದ್ವಾರರು ಮಂತ್ರಿಪದವಿಯನ್ನು ಸ್ವೀಕರಿಸುವರೆ?

ಅಧಿಕಾರ ಸೂತ್ರವನ್ನು ವಹಿಸುವ ವಿಷಯದಲ್ಲಿ ಕಾಂಗ್ರೆಸ್ಸಿನ ಧ್ಯೇಯ [illegible] ಬೇಕಾದಷ್ಟು ಸಾಧಿಸಲು ಈಗಿನ ಈ ಸಂದರ್ಭವನ್ನು ಉಪಯೋಗಿಸಲು, ಕಾಂಗ್ರೆಸ್ಸು ಅಧಿಕಾರಸೂತ್ರವನ್ನು ವಹಿಸುವುದೆಂಬ ಬಲವಾದ ಊಹನೆಯಿದೆ. ಸಂಯುಕ್ತ ಪ್ರಾಂತ್ಯದಲ್ಲಿ ನವಂಬರ ಶಾಸನವನ್ನು ಛೇದಿಸುವ ಕಾರ್ಯವೇ ಶ್ರೀ [illegible] ಮಂತ್ರಿಗಳು ಅಧಿಕಾರಸೂತ್ರವನ್ನು ವಹಿಸಿ ನಡೆಯುವುದಾಗಿ ಎಂದು ವಾರ್ತೆಯಿದೆ.

ಸಂಯುಕ್ತ ಪ್ರಾಂತ್ಯಗಳ ಅಸೆಂಬ್ಲಿ ಚುನಾವಣೆಯಲ್ಲಿ, ಕಾಂಗ್ರೆಸ್ ಉಮೇದ್ವಾರರು ಮಾತ್ರ ಜವಾಹರ [illegible] ಮಂತ್ರಿಗಳನ್ನು ಸೋಲಿಸಿ ಅಧಿಕವಾಗಿ ಆರಿಸಲ್ಪಟ್ಟಿರುವರು [illegible] ಮಂದಿಗಳು ಆರಿಸಲ್ಪಟ್ಟಿರುವರು. ಶ್ರೀ [illegible] ಹರಿಜನ ಸೇವಕನೊಬ್ಬನು ಬಹುಮತದಿಂದ ಚುನಾಯಿಸಲ್ಪಟ್ಟವನು. ಕಾಂಗ್ರೆಸ್ಸಿಗೆ ವಿರೋಧವಾಗಿ ಸ್ಪರ್ಧಿಸಿದ ಉಮೇದ್ವಾರರು ತಾವು ಕಟ್ಟಿದ ಭದ್ರತಾ ಠೇವಣಿಯನ್ನು ಕಳಕೊಂಡಿರುವರು. [illegible] ಮತಗಳಲ್ಲಿ ಎಂಟರಲ್ಲಿ ಒಂದಂಶವೂ ಕೂಡ ಅವರಿಗೆ ದೊರಕಲಿಲ್ಲ.

ಫೆಡರೇಶನಿನ ಕುರಿತು ಕೈಸರ್‌ಹಿಂದ್ ಪತ್ರಿಕೆಯ ಅಭಿಪ್ರಾಯ

ಕಾಂಗ್ರೆಸ್ಸನ್ನು [illegible] ಫೆಡರೇಶನ [illegible] ಕಾಂಗ್ರೆಸ್ಸಿನ [illegible]

ಚುನಾವಣೆಯ ಫಲಿತಾಂಶಗಳು

[illegible] ಕಾಂಗ್ರೆಸ್ಸಿನ [illegible] ಕಾಂಗ್ರೆಸ್ಸಿಗೆ [illegible] ಜನ್ನು ಕಳಕೊಂಡಿರುವರು.

ಕಾಂಗ್ರೆಸ್‌ವಾಲರ ಮೇಲೆ ಶಿಸ್ತಿನ ಕಾಯಿದೆ.

ಕಾಂಗ್ರೆಸ್ಸಿನ ಸೂತ್ರಗಳಿಗೆ ವಿರೋಧವಾಗಿ ನಡೆಸಿದ ಕೆಲವು ಕಾಂಗ್ರೆಸ್‌ವಾಲರ ಮೇಲೆ ಶಿಸ್ತಿನ ಕಾಯಿದೆಯನ್ನು ಹೊರಿಸಲಿಕ್ಕೆ ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಿರ್ಣಯವಾಗಿರುವರು. ಕೆಲವು ಕಾಂಗ್ರೆಸ್ ಉಮೇದ್ವಾರರಿಗೆ ವಿರೋಧವಾಗಿ [illegible] ಕೆಲವು ಕಾಂಗ್ರೆಸ್ ಉಮೇದ್ವಾರರಲ್ಲದವರಿಗೆ ಸಹಾಯವನ್ನು ಮಾಡಿದವರು ಅಂಥವರನ್ನು ಕಾಂಗ್ರೆಸ್ಸ ಶಿಸ್ತಿನ ಕಾಯಿದೆಯಡಿ ವಹಿಸುವರು.

ಕೇಂದ್ರ ಅಸೆಂಬ್ಲಿ ಅಧಿವೇಶನ.

[illegible] ಅಧಿವೇಶನದಿಂದ ಗೈರುಹಾಜರಾದ ಕಾಂಗ್ರೆಸ್ ಸದಸ್ಯರೆಲ್ಲ ಮೊನ್ನೆ ದಿನ ದಿಲ್ಲಿಗೆ ತೆರಳಿರುವರು.

ಮಂಗಳೂರು ೩ನೇ ಮುನ್ಸೀಫ ಕೋರ್ಟಿನಲ್ಲಿ.

S C No 47/1937.

ಪಿಯೋಗ್ ಡಿ ಸೋಜ—ವಾದಿ

ಇನ್ನು ಮೂಲ ವೇದವಚ್ಚ, ಪ್ರಸ್ತುತ ವಾಸ ಕಾಸರ [illegible], ಮಂಗಳೂರು ತಾಲೂಕ. [illegible] ಗಣಪತಿ ದೇವಸ್ಥಾನದ [illegible] — ಪ್ರತಿವಾದಿ

ವಾದಿಯು ದಾಖಲೆ ಮಾಡಿದ ಮೊಕದ್ದಮೆ [illegible] 27-2-37ಕ್ಕೆ [illegible] 28-1-1937 [illegible]

ಮಂಗಳೂರು
21 [illegible]

C. L. Lobo,
Pltf's Pleader.

[illegible]

ತಗಣೆ ಕಾಟಕ್ಕೆ ವಿಷಗಾಳಿ!

ಕಳೆದ ಮಹಾಯುದ್ಧ ಕಾಲದಲ್ಲಿ ಉಪಯೋಗಿಸಲ್ಪಟ್ಟ ಕ್ಲೋರ್‌ಪಿಕ್ರಿನ್ ಎಂಬ ವಿಷಗಾಳಿಯು ಹೆಚ್ಚು ಪ್ರಯೋಜನಕಾರಿಯಲ್ಲವೆಂದು ಈಗ ತಿಳಿದುಬಂದಿದೆ. ಫ್ರೆಂಚ್ ವಿಜ್ಞಾನಿಗಳೊಬ್ಬರು, ಈ ವಿಷಗಾಳಿಯನ್ನು ಈಗ ತಗಣೆಗಳನ್ನು ನಾಶಮಾಡುವುದಕ್ಕೆ ಉಪಯೋಗಿಸಬಹುದೆಂದು ತಿಳಿಸಿರುವರು ಅದಕ್ಕಾಗಿ ಒಂದು ಚಿಕ್ಕ ಯಂತ್ರಸಾಧನವನ್ನು ತಯಾರಿಸಿರುವರು

ಮುಪ್ಪಿನ ಪ್ರಣಯ

ಹೊಲಿವೆ ಎಂಬಲ್ಲಿನ ಫಿಲಿಪ್ ರಸೆಲ್ ಎಂಬವನು ೭೮ ವರ್ಷದ ಮುದುಕ ಅವನು ೭೨ ವರ್ಷ ಪ್ರಾಯದ ಹೆಯೋ ಎಂಬೋರ್ವ ವಿಧವೆಯನ್ನು ಮೋಹಿಸಿದನು ಮದುವೆಗೆ ಒಪ್ಪಿದರು. ಹೆಯೋಳಿಗೆ ಅನೇಕ ಮಕ್ಕಳೂ ಮೊಮ್ಮಕ್ಕಳೂ ಕೂಡ ಇದ್ದವು ಅವರೆಲ್ಲ ಈ ಮದುವೆಯ ವಿಚಾರ ಆಕ್ಷೇಪ ತೆಗೆದರು ಲಗ್ನಕಾಲವು ಸಮೀಪಿಸುತ್ತಲೇ ಹೆಯೊಳು ತನ್ನ ಮನೋನಿರ್ಧಾರವನ್ನು ಬದಲಿಸಿದಳು, ತಾನು ಫಿಲಿಪನನ್ನು ಮದುವೆಯಾಗಲಾರೆನೆಂದು ತಿಳಿಸಿದಳು ಪ್ರಣಯವೇದನೆಯಿಂದ ಅವನು ಹಾಸಿಗೆ ಹಿಡಿದನು ಈಗ ಅವನು ಹ್ಯಾಗೇಟಿನ ಸೈಂಟ್ ಮೇರಿ ಆಸ್ಪತ್ರೆಯಲ್ಲಿ ಮರಣೋನ್ಮುಖನಾಗಿ ಮಲಗಿರುವನಂತೆ

ಹೆಂಡತಿಯ ಮೇಲೆ ಕಾನೂನು.

ಇಂಗ್ಲೆಂಡಿನ ಒಂದು ಕೋರ್ಟಿನಲ್ಲಿ ವಿವಾಹವಿಚ್ಛೇದನದ ಒಂದು ವಿಚಾರಣೆ ಬಂತು ಹೆಂಡತಿಯು ತನ್ನ ಕಾರಣಗಳನ್ನು ಕೊಡುತ್ತಾ ಗಂಡನು ಅವಳ ಮೇಲೆ ಹೊರಿಸಿದ ನಿರ್ಬಂಧಗಳನ್ನು ತಿಳಿಸಿದಳು ಅದು ಹೀಗಿತ್ತು – ಅವಳು ತನ್ನ ಹತ್ತಿರ ಒಂದು ಚಿಕ್ಕಾಸೂ ಇಟ್ಟುಕೊಳ್ಳಬಾರದು, ಮಕ್ಕಳನ್ನು ಪೋಷಿಸುವ ಸಂಪೂರ್ಣ ಜವಾಬುದಾರಿಯು ಅವಳದೇ ಆಗಿದ್ದು ಅವನಿಗೆ ಅದರ ತೊಂದರೆ ಇರಬಾರದು ಯಾವ ಮನೆಕೆಲಸವನ್ನು ಅವನಿಗೆ ಹೇಳಬಾರದು ಅವಳ ಸಂಬಂಧಿಕರಾರೂ ಅವನ ಮನೆಯೊಳಗೆ ಬರಬಾರದು ಅವನ ಸ್ನೇಹಿತ ಸಂಬಂಧಿಕರಿಗೆ ತಕ್ಕ ಸನ್ಮಾನವು ದೊರಕಬೇಕು ಹೆಂಡತಿಯು ಬೇಗ್ಗೆ ಎದ್ದು ಗುಡಿಸುವ ಕೆಲಸ ಮಾಡಬೇಕು, ಊಟ ತಯಾರು ಮಾಡಿಡಬೇಕು ಈ ನಿಬಂಧನೆಗಳಿಗನುಗುಣವಾಗಿ ನಡೆಯಲು ಸಾಧ್ಯವಿಲ್ಲದಿದ್ದುದರಿಂದ ಹೆಂಡತಿಯು ಗಂಡನ ಮೇಲೆ ದಾವೆಹೂಡಲು ಕಾರಣ

ಗಾಜಿನ ಮೊಳೆಗಳು.

ಗಾಜನ್ನು ಒಂದು ತರದ ವಿಧಾನದಿಂದ ಗಟ್ಟಿಮಾಡಿ ಕಬ್ಬಿಣದ ಮೊಳೆಗಳಂತೆ ಮಾಡುವ ಏರ್ಪಾಡು ಫ್ರೆಂಚ್ ಗಾಜಿನ ಕಾರ್ಖಾನೆಯಲ್ಲಿ ನಡೆದಿದೆ ಗಾಜಿನ ಈ ಮೊಳೆಗಳು ಕಬ್ಬಿಣದಂತೆ ಇದ್ದು ಎಲ್ಲ ಕೆಲಸಗಳಿಗೂ ಉಪಯೋಗಿಸಬಹುದಾಗಿದೆ

ಗಂಡಂದಿರು ಮಾರಾಟಕ್ಕೆ

ಪ್ರಪಂಚದ ಕೆಲವು ಭಾಗಗಳಲ್ಲಿ ಹೆಂಡಂದಿಯರನ್ನು ಹರಾಜುಹಾಕುವ ಪದ್ಧತಿ ಇತ್ತೆಂದೂ ಇದೆಯೆಂದೂ ನಾವು ಕೇಳಿರುತ್ತೇವೆ ಆದರೆ ಮಲಯಾ ದ್ವೀಪಸ್ತೋಮದ ಪೆಥಾಂಗ್ ಎಂಬಲ್ಲಿ ಹೆಂಡಂದಿಯರ ಕೈಯೇ ಮೇಲು. ಅಲ್ಲಿ ವಿವಾಹವಿಚ್ಛೇದನದ ಪದ್ಧತಿ ಇಲ್ಲ ಹೆಂಗುಸರು ತಮ್ಮ ಗಂಡಂದಿಯರನ್ನು ಹಣ್ಣುಹಂಪಲು ಮಾರಿದ ಹಾಗೆ ಹೆಚ್ಚು ಹಣಕೊಟ್ಟವರಿಗೆ ಮಾರುತ್ತಾರೆ. ಗಂಡಸರ ಪ್ರಾಯ, ರೂಪುಗಳಿಗೆ ತಕ್ಕಂತೆ ಅವರಿಗೆ ಸರಿಯಾದ ಬೆಲೆಯು ಬರುವುದಂತೆ. ಸುಂದರನಾದ ತರುಣನೋರ್ವನಿಗೆ ೨೦ ಪವನುಗಳ ತನಕ, ಬೆಲೆ ಕೊಡುತ್ತಾರೆ. ಅಲ್ಲಿ ಹೆಂಗುಸರೇ ಎಲ್ಲಾ ಕೆಲಸವನ್ನು ಮಾಡಿ ದುಡಿಯುತ್ತಿರುವುದರಿಂದಲೇ ಗಂಡಸರ ಮೇಲೆ ಅವರಿಗೆ ಅಧಿಕಾರ ಬರಲು ಕಾರಣವಂತೆ.

ಪ್ರಾಣಿ ಸ್ವಭಾವ

ವರ್‍ಲ್ಗಾರ್ಡನರ್ ಎಂಬ ಪಶುವೈದ್ಯ ಶಾಸ್ತ್ರಜ್ಞಳೋರ್ವಳು ೮೨ ದನಗಳನ್ನೂ ೭೨ ಕುದುರೆಗಳನ್ನೂ ಚೆನ್ನಾಗಿ ಪರೀಕ್ಷಿಸಿದ ಮೇಲೆ ದನಗಳ ಸ್ವಭಾವವು ಕುದುರೆಗಳಿಂದ ಬಹು ಘನವಾದದ್ದೂ ಸಾಪತ್ರ್ಯಮಾಣಿಕವಾದದ್ದೂ ಆಗಿರುತ್ತದೆಂದು ಸಕಾರಣವಾಗಿ ಹೇಳಿರುತ್ತಾಳೆ

ಕುದುರೆಗಳು ಮನುಷ್ಯನನ್ನು ಬಹಳವಾಗಿ ನಂಬಿಕೊಂಡಿರುತ್ತವೆ ಅಲ್ಲದೆ, ವಿಧೇಯತ್ವದಲ್ಲೂ ಕಷ್ಟತರವಾದ ಕೆಲಸಗಳಲ್ಲೂ ಕುದುರೆಯನ್ನು ಸರಿಗಟ್ಟುವ ಸಾಧುಮೃಗಗಳು ಒಂದೂ ಇಲ್ಲವಂತೆ ಆದರೆ ಕೆಲವು ಸಂದರ್ಭಗಳಲ್ಲಿ ಕುದುರೆಯು ಬಹಳ ಬುದ್ಧಿಗೇಡಿತನದಿಂದ ವರ್ತಿಸುವುದರಿಂದ, ತನ್ನ ಘನತೆಯನ್ನು ಕಳಕೊಳ್ಳುತ್ತದೆ ಆದರೆ, ದನಗಳು ಹಾಗಲ್ಲ ವಿಷಯಗಳನ್ನು ಬೇಗನೇ ತಿಳಕೊಂಡು ವರ್ತಿಸುವ ಶಕ್ತಿಯು ದನಗಳಲ್ಲಿರುತ್ತದೆ ಹೆಚ್ಚು ಹಾಲು ಕೊಡುವ ದನವು ಹೆಚ್ಚು ಬುದ್ಧಿಯುಳ್ಳದೆನ್ನಬಹುದು

ಕುರಿಯು ಬಹಳ ಮಂದ ಬುದ್ಧಿಯುಳ್ಳದಾದರೂ, ಅದಕ್ಕೆ ಚಿಕ್ಕ ಚಿಕ್ಕ ಚಮತ್ಕೃತಿ ಕಾರ್ಯಗಳನ್ನು ಕಲಿಸಬಹುದಂತೆ

ಇಂಗ್ಲೆಂಡ್ ಬೇಂಕಿನ ಭದ್ರತೆ

ಯುದ್ಧ ಕಾತುರತೆಯು ಯುರೋಪಿನಲ್ಲಿ ಹೆಚ್ಚುತ್ತಿದ್ದ ಹಾಗೆ ಅಲ್ಲಿನ ಜನಾಂಗಗಳು, ತಮ್ಮ ತಮ್ಮ ಖಜಾನೆಗಳ ಭದ್ರತೆಯ ಕಡೆಗೆ ವಿಶೇಷತರದ ಗಮನವನ್ನು ಕೊಡುತ್ತಿರುತ್ತವೆ ವಿಮಾನಧಾಳಿಯ ಕಾಲದಲ್ಲಿ ಕೋಟಿಕಟ್ಲೆ ಹಣವನ್ನು ಶೇಖರಿಸಲ್ಪಟ್ಟ ಬ್ಯಾಂಕುಗಳು ಅನಾಹುತಕ್ಕೆ ಸಿಕ್ಕಿ ಪ್ರಮಾದವಾಗಬಹುದೆಂಬ ಹೆದರಿಕೆಯು ಇಂಗ್ಲೆಂಡಿನ ಬೇಂಕಿನವರಿಗಾದರೂ ಬಿಡಲಿಲ್ಲ ಈ ಬ್ಯಾಂಕಿನ ಸುಸಜ್ಜಿತ ಭದ್ರತೆಗಾಗಿ ೯೦೦ ಜನರು ರಾತ್ರಿಹಗಲೆನ್ನದೆ ಕೆಲಸ ಮಾಡುತ್ತಲಿದ್ದಾರೆ ಮಾರ್ಗದ ತಳಕ್ಕಿಂತ ೫೦ ಅಡಿಗಳ ಕೆಳಗೆ ಈ ಕೆಲಸವು ನಡಿಯುತ್ತದೆ ಬೇಂಕಿನ ಅಧಿಕಾರಿಗಳಾಗಲೀ ಕೆಲಸಗಾರರಾಗಲೀ ಇದರ ಗುಟ್ಟು ಬಿಡಬಾರದಾಗಿ ಕಠಿನ ಆಜ್ಞೆಯಿರುವುದು

೫೦ ಅಡಿಗಳ ಕೆಳಗೆ ಭದ್ರವಾದ ಮುಚ್ಚಳಗಳಿಂದ ಕೂಡಿದ ೫೦ ಖಜಾನೆ ಕೊರಡಿಗಳು ಏರ್ಪಡುವುವು ಅವುಗಳಲ್ಲಿ ೧೫೦ ಮಿಲಿಯ ಪವನುಗಳನ್ನು ಇಡುವಷ್ಟು ಅನುಕೂಲವಿರುತ್ತದೆ ೮ ಅಡಿ ದಪ್ಪದ ಕಾಂಕ್ರೀಟ್ ಮತ್ತು ಉಕ್ಕಿನ ಗೋಡೆಗಳು ಈ ಖಜಾನೆಗಳ ಸುತ್ತು ಬರುತ್ತವೆ ಎಲ್ಲಾ ಏರ್ಪಾಡುಗಳು ವಿದ್ಯುಚ್ಛಕ್ತಿಯ ಮೂಲಕವೇ ನಡೆಯುವುವು ಅದಕ್ಕಾಗಿ ಪ್ರತ್ಯೇಕ ಒಂದು ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ತೆರೆಯುವರಂತೆ ಸಮಯದಲ್ಲಿ ಈ ಖಜಾನೆಗಳ ಸುತ್ತಲೂ ನೀರು ತುಂಬುವ ಏರ್ಪಾಡೂ ಇರುವುದು

ಕೆಲಸವು ಮುಗಿದ ಮೇಲೆ ಈ ಖಜಾನೆಯು ಯಾವ ಸಿಡಿಮದ್ದು, ಬಾಂಬು ಅಥವಾ ಇನ್ನಾವ ಯುದ್ಧ ಹತ್ಯಾರದಿಂದಲೂ ಕೆಡಹಲ್ಪಡುವುದಿಲ್ಲ

ಅರ್ಧ ಶತಮಾನದ ಪ್ರಣಯ!

ಚೀನದ ಚೈಂಗ್‌ಶಾಂಗ್ ಎಂಬ ಊರಲ್ಲಿ ಮಿನ್–ಪಾ ಎಂಬ ೧೮ ವರುಷದ ಯುವಕನೋರ್ವನು ನಿಹೀ ಎಂಬ ೧೧ ವರ್ಷದ ಬಾಲಿಕೆಯೋರ್ವಳನ್ನು ಬಹಳವಾಗಿ ಪ್ರೀತಿಸಿದನು. ಅವಳನ್ನು ಮದುವೆಮಾಡಿಕೊಳ್ಳಬೇಕಾಗಿ ನಿರ್ಧರಿಸಿದನು ಆದರೆ ದುರದೃಷ್ಟದಿಂದ ಅವನು ತನ್ನ ತಂದೆಯೊಂದಿಗೆ ಜಗಳವಾಡಿ ಮನೆಯಿಂದ ಓಡಿಹೋದನು ಜೀವನಕ್ಕಾಗಿ ಅವನು ಸೈನ್ಯಶಾಖೆಯನ್ನು ಸೇರಿದನು ಅಂದಿನಿಂದ ೫೦ ವರ್ಷಗಳು ಕಳೆದುವು ಈಗ ಅವನು ಸೈನ್ಯ ಇಲಾಖೆಯಲ್ಲಿ ಒಬ್ಬ ದೊಡ್ಡ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದು, ತನ್ನ ಸ್ವಂತ ಊರಿಗೆ ಹಿಂತಿರುಗಿದನು ಅಲ್ಲಿ ಅವನನ್ನು ಬಾಲ್ಯದಲ್ಲಿ ಮೋಹಿಸಿದ ಆ ನಿಹೀ ಎಂಬವಳು, ಯಾರನ್ನೂ ಮದುವೆಯಾಗಿರದೆ, ತನ್ನ ಪ್ರೀತಿ ಯುವಕನ ಸ್ಮರಣೆಯಲ್ಲಿಯೇ ೫೦ ವರ್ಷಗಳನ್ನು ಕಳೆದಿದ್ದಳು ಈಗ ಅವರೀರ್ವರೂ ಮದುವೆ ಮಾಡಿಕೊಂಡಿರುವರು ಮಿನ್ ಪಾಂಗೆ ಈಗ ೬೮ ವರ್ಷ ಅವನ ನವವಧುವಿಗೆ ೬೧ ವರ್ಷ

ವಿಚಿತ್ರ ವಾಣಿಜ್ಯ ಸಂಘ

ಮೆಕ್ಸಿಕೋದಲ್ಲಿ ಒಂದು ವಿಚಿತ್ರ ವಾಣಿಜ್ಯ ಸಂಘವಿದೆ ಮೆಕ್ಸಿಕೋದಲ್ಲಿನ ಅವಿವಾಹಿತ ತರುಣಿಯರು ಇದರ ಸದಸ್ಯರಾಗಬೇಕು. ಅವರ ಮದುವೆ ವಿಚಾರವನ್ನು ಸುಗಮವಾಗಿ ಸಂಘದ ಕಾರ್ಯಕಾರಿ ಮಂಡಳಿಯು ನೋಡಿಕೊಳ್ಳುವುದು ಮದುವೆಯಾಗಲಿಚ್ಛಿಸುವವರು ಇದರ ಸದಸ್ಯರಾದರೆ ಸರಿ, ಅವರಿಗೆ [illegible] ದಿನ ತಾಪತ್ರಯಗಳು ಕಡಿಮೆಯಾಗುತ್ತವೆ

ಮದುವೆ ಏರ್ಪಾಡುಮಾಡುವುದರಲ್ಲಿ ಈ ಸಂಘವು ಒಂದು ಸಾರಸ್ಯವಾದ ಉಪಾಯವನ್ನು ಕಂಡುಹಿಡಿದಿರುತ್ತಾರೆ ವಾರದಲ್ಲಿ ಎರಡಾವರ್ತಿ ತರುಣಿಯರಿಗೆ ಊರಿನ ತರುಣರೊಡನೆ ಸಮ್ಮಿಳನವಾಗುವಂತೆ ಈ ಸಂಘದವರು ಏರ್ಪಡಿಸಿರುತ್ತಾರೆ ಮದುವೆ ಇಚ್ಛೆಯುಳ್ಳ ಯುವಕರು ಈ ಸಂಘದ ತರುಣಿಯರಲ್ಲಿ ತನಗೆ ಒಪ್ಪಿದವಳನ್ನು ಅವಳ ಸಂಬಂಧಿಕರ ಮೂಲಕ ಮಾತನಾಡಿಸುತ್ತಾನೆ ಆ ಮೇಲೆ ಅವರೊಳಗಿನ ಸ್ನೇಹವು ಬೆಳೆಯುತ್ತಾ ಬರುತ್ತದೆ ಹುಡುಗನು ಕೆಲವು ಸಂಗೀತಗಾರರನ್ನು ಬಾಡಿಗೆಗೆ ಗೊತ್ತುಮಾಡಿ, ತನ್ನ ಪ್ರೇಯಸಿಯ ಮಹಡಿಯ ಕೆಳಗೆ ಸಂಗೀತ ಬಾರಿಸುವ ಏರ್ಪಾಡನ್ನು ಮಾಡುವನು ಆಗ ಅವಳು ತನ್ನ ಮೋಹನಾಂಗನನ್ನು ಔತಣಕ್ಕೆ ಆಹ್ವಾನಿಸುವಳು. ಆಗ ತರುಣನು ಅವಳ ಮನೆಯೊಳಗೆ ಪ್ರವೇಶಮಾಡಿದನೆಂದರೆ, ಅವರೊಳಗೆ ಮದುವೆಯು ಖಂಡಿತವೆಂದಾಯಿತು ಆ ಮೇಲೆ ಅದಕ್ಕೆ ಸರಕಾರಿ ರುಜುವಾತೇ ಬೇಕಾಗಿಲ್ಲ

ದುರಾದೃಷ್ಟದಿಂದೇನಾದರೂ ಅವರ ಮದುವೆ ನಿಶ್ಚಿತವು ನಿಂತುಹೋದರೆ, ಅಲ್ಲಿನ ಸರಕಾರಿ ಕಾನೂನು ಪ್ರಕಾರ, ಹುಡುಗನು ೨ ವರ್ಷಕ್ಕೆ ಮದುವೆಮಾಡಿಕೊಳ್ಳಲಾಗದು ಒಂದುವೇಳೆ ಲಗ್ನಕಾಲವು ನಿಶ್ಚಿತವಾದಲ್ಲಿ ಮೇಲಿನ ವಾಣಿಜ್ಯ ಸಂಘದವರು ತಮ್ಮ ಸಂಘದ ಸದಸ್ಯೆಯಾದ ವಧುವಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವ ಪ್ರಯತ್ನ ಮಾಡುವರು ವರನು ತನ್ನ ವಧುವನ್ನು ಸಂಯುಕ್ತ ಅಮೇರಿಕಕ್ಕಾಗಲೀ, ಮೆಕ್ಸಿಕೊ ನಗರಕ್ಕೆ ಆಗಲಿ, ಸಂಚಾರಾನುಭವಕ್ಕಾಗಿ ಕರೆದುಕೊಂಡುಹೋಗಬೇಕಾಗಿ ಕೇಳಿಕೊಳ್ಳುತ್ತಾರೆ ಅಲ್ಲದೆ ವಧುವಿಗೆ ತಕ್ಕ ಮನೆಯನ್ನೂ ಮಾಡಿಕೊಡುವ ಏರ್ಪಾಡು ಮಾಡುತ್ತಾರೆ

ಬುದ್ಧಿವಂತರು ಹೊಟ್ಟೆತುಂಬ ಉಣ್ಣುವುದಿಲ್ಲ.

ಅಮೇರಿಕದ ಹಾರ್ವರ್ಡ್ ಯುನಿವರ್ಸಿಟಿಯ ಮನಶ್ಶಾಸ್ತ್ರದ ಪ್ರೊಫೆಸರರೊಬ್ಬರು ಒಂದು ಪರೀಕ್ಷೆ ನಡೆಸಿದರು ಹೊಟ್ಟೆತುಂಬಾ ಉಂಡವನನ್ನೂ ಅರೆಹೊಟ್ಟೆ ಉಂಡವನನ್ನೂ ಹತ್ತಿರ ಕುಳ್ಳಿರಿಸಿ ಇಬ್ಬರ ಬಾಯಿಯಲ್ಲೂ ಒಂದು ವಿಧವಾದ ಇಕ್ಕಳಗಳನ್ನಿಟ್ಟು ಆ ಇಕ್ಕಳಗಳನ್ನು ಎಲೆಕ್ಟ್ರಿಕ್ [illegible] ತಗಲಿಸಿ ಅವರಿಗೆ ಪ್ರಶ್ನೆ ಹಾಕಿದರು. ಹೊಟ್ಟೆತುಂಬಾ ಉಂಡವನು ಒಂದು ಪ್ರಶ್ನೆಗೆ ಉತ್ತರ ಕೊಡುವದರೊಳಗೆ ಅರೆಹೊಟ್ಟೆ ಉಂಡವನು ೩ ಪ್ರಶ್ನೆಗಳನ್ನುತ್ತರಿಸಿದನು ಇದರಿಂದ ಬುದ್ಧಿವಂತರು ಯಾವಾಗಲೂ ಹೊಟ್ಟೆಬಾಕರಾಗಿರುವದಿಲ್ಲವೆಂಬುದು ಖಂಡಿತವಾಯಿತು

ಈ ಇಂದ್ರಜಾಲದಂತಹ ಗುಣಕಾರಿ ಔಷಧಿಯು ಎಲ್ಲರಿಗೂ ಅಗತ್ಯ
ಚರ್ಮ ವ್ಯಾಧಿಗಳಿಗೂ ಘಾಯಗಳಿಗೂ ಸಾಂಬಕನ್ನು ಪಯೋಗಿಸಿರಿ

ನಿಮಗೆ ಘಾಯ ಪೆಟ್ಟುಗಳಿಂದಲ್ಲಿ ಇಲ್ಲವೆ ಕೀವು ಮೈಪ್ರೊಡೆತದಿಂದಲೂ ಹುಣ್ಣಿನಿಂದಲೂ ಮತ್ತು ತುರಿಕಜ್ಜಿಯಿಂದಲೂ ನರಳುವುದಾದರೆ ಸಾಂಬಕ್ ಅದನ್ನು ಸಂಪೂರ್ಣ ಗುಣಮಾಡುತ್ತದೆ ಗಿಡದ ಎಲೆಗಳಿಂದ ತಯಾರಿಸಲ್ಪಟ್ಟ ಈ ಔಷಧಿಯು ಚರ್ಮರಂಧ್ರಗಳನ್ನು ಹೊಕ್ಕು ಕೆಲಸಮಾಡುತ್ತದೆ ಇದು ದೇಹದೊಳಗಿನ ವಿಷ ಮತ್ತು ರೋಗವಸ್ತುಗಳನ್ನು ಹೊರದೆಳದಿ, ಬಾತುಬಿಳಿಕೆಯನ್ನು ನಿಲ್ಲಿಸಿ ಕಲೆಯುಳಿಯದಂತೆ ಘಾಯಗಳನ್ನು ವಾಸಿಮಾಡುತ್ತದೆ ಮಡಿವೆ, ಕಜ್ಜಿ, ಮೂತ್ರ ಹುಣ್ಣು ಮತ್ತು ದೊಡ್ಡ ದೊಡ್ಡ ಘಾಯಗಳಿಗೆ ಸಾಂಬಕು ಹೊಗಳಲ್ಪಟ್ಟ ಔಷಧಿ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ ರೂ 1 ಮತ್ತು ರೂ 2–4–0ರಂತೆ ಮಾರಲ್ಪಡುತ್ತದೆ

ಏಜಂಟರು ಮೆಸರ್ಸ್ ದಾಥಾ ಎಂಡ್ ಕೋ, ಪಿ ಟಿ ಮದ್ರಾಸು

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ

ಸಾಂಬಕ್

Zam Buk

ರೋಗವೂ ರೋಗಾಣುಗಳೂ

ರೋಗಾಣುಗಳಿಂದ ರೋಗಗಳು ಉತ್ಪನ್ನವಾಗುತ್ತವೆಂಬುದು ವೈದ್ಯಶಾಸ್ತ್ರಗಳು ಬೋಧಿಸುತ್ತವೆ ಈಗ ಫ್ರೆಂಚ್ ವೈದ್ಯಕೀಯ ವಿಜ್ಞಾನಿಯೊಬ್ಬರು, ರೋಗಾಣುಗಳು ಮನುಷ್ಯನ ದೇಹಪ್ರಕೃತಿಯನ್ನು ಸೇರದಂತೆ ಮಾಡುವ ಒಂದು ವಿಧಾನವನ್ನು ಕಂಡುಹಿಡಿದಿರುವರು ಇದರ ಪ್ರಮುಂಚೆ ವೈದ್ಯಶಾಸ್ತ್ರಜ್ಞರು, ಪ್ರಾಣಿದೇಹವು ರೋಗಾಣುಗಳಿಂದ ಕೂಡಿಯೇ ಇರುತ್ತದೆಂಬ ಅಭಿಪ್ರಾಯವನ್ನಿಟ್ಟುಕೊಂಡಿದ್ದರು ಮೇಲೆ ಹೇಳಿದ ಫ್ರೆಂಚ್ ವಿಜ್ಞಾನಿಗಳು, ಕೆಲವು ಹಂದಿಗಳನ್ನು, ಪರಿಶೋಧನೆಗೆ ಒಳಪಡಿಸಿ, ಅವುಗಳ ದೇಹಗಳಲ್ಲಿ ಒಂದೇ ಒಂದು ರೋಗಾಣುವಾದರೂ ಇರದಂತೆ ಮಾಡಿರುವರು ಇದಕ್ಕಾಗಿ ಅವರು ಆರು ವರ್ಷಗಳ ತನಕ ಶ್ರಮಪಟ್ಟಿರುವರು ಇತರ ವಿಜ್ಞಾನಿಗಳು ಇವರು ಸಾಕಿದ ಹಂದಿಗಳನ್ನು ಪುನಃ ಪರೀಕ್ಷಿಸಲಿದ್ದಾರೆ

ಮೋಟರು ತಯಾರಿಕೆಯಲ್ಲಿ ಸುಪ್ರಸಿದ್ಧನೆನಿಸಿದ ಇಟೇಲಿಯ ವಿನ್ಸನ್ ಜೂಲಾನ್ ಪಿಯಾರವರು ನಿಧನಹೊಂದಿದರು



ಮೂರು ಕೈಗಡಿಯಾರಗಳು ಮತ್ತು 195
ವಿವಿಧ ವಸ್ತುಗಳಿಗೆ ರೂ. 2—8—0 ಮಾತ್ರ.

ನಮ್ಮ ಪ್ರಸಿದ್ಧ ಒಟೋಡೋಲಿನ ಹತ್ತು ಗುಳಿಗೆಗಳನ್ನು ರೂ. 2—8—0ಗೆ ಒಪ್ಪಿಗೆ ಪಡೆಕೊಳ್ಳುವಲ್ಲಿ ಈ ಕೆಳಗಿನ ವಸ್ತುಗಳು ಪುಕ್ಕಟೆಯಾಗಿ ಸಿಕ್ಕುವವು ಬಂಗಾರದ ಗಿಲೀಟಿನ ದಮ್ಮಿ ಕೈಗಡಿಯಾರ 1 ಚೆಂಡು, 1 ಬೈಲ್ಡ್ ಜೇಬು ದಮ್ಮಿಗಡಿಯಾರ 1, ಸೇಫ್ಟಿ ರೇಜರ್ 1 ಸೋಪು 1, ಬ್ರಶ್ 1 ಕನ್ನಡಿ 1, ಬಾಚಣಿಕೆ 1 ಪಾಕೆಟ್ ಪೌಡರು 1 ಕ್ಲಿಪ್ ಸಮೇತ ಪೆನ್ಸಿಲ್ 1, ಸಿಗ್ರೇಟು ಪೆಟ್ಟಿಗೆ 1, ಸಿಗ್ರೇಟು ಲ್ಯಾಟ್ 1 ಕೈವಸ್ತ್ರ 1 ಉಂಗುರ 1 ಕತ್ತರಿ 1, ಚೈನ್ ಸಮೇತ ಜೇಗದಲ್ಲಿ ಹಾಕುವ ಉಂಗುರ 1 ಪೆನ್ಸಿಲ್ ಸಪ್ಪಿ 1 ೧೫೦ ಫೀಟು ದೂರಕ್ಕೆ ಬೀಳುವ ಪೋಕಸಿಂಗ್ ಟೋರ್ಚ್‌ಲ್ಯಾಟು 1, ಅಥವಾ ಜರ್ಮನ್ ಬಿ ಮಾರ್ಕಿನ ಗಟ್ಟಿಯಾದ ಮೇಕನಿಯಲ್ಪ 5 ವರ್ಷ ಗ್ಯಾರಂಟಿ ಇರುವ ಟ್ಯಾಮ್ ಪೀಸು 1 ಟಪಾಲು ಪ್ಯಾಕಿಂಗ್ ಹಾಸಲು ಆಣೆ 11 ಪ್ರತ್ಯೇಕ

DUTTA & Co 15/1 Joymitter Street, *P O Hatkhola Calcutta*

ಪ್ರಚಂಡ ವಿಜಯ! ಪ್ರಚಂಡ ವಿಜಯ!

ಎಲ್ಲೆಲ್ಲಿಯೂ ಭಾರಿ ಬಹುಮತ.

ಸ್ವದೇಶದ { ಸ್ವಾತಂತ್ರ್ಯಕ್ಕಾಗಿ / ಅಭಿಮಾನಕ್ಕಾಗಿ / ಪ್ರೇಮದಿಂದ } ಜನರೆಲ್ಲರೂ ತಮ್ಮ ಓಟನ್ನು

'ಮಹಾಳಿ' ಪಂಪು ಸ್ಪ್ರೆಯರಿಗೇನೇ



ಕೊಟ್ಟಿರುವರು.

REGD NO 3012

ಅಡಿಕೆಯ ಕೊಳೆರೋಗದ ಕಾಳಗಕ್ಕೆ ಅತ್ಯುತ್ಕೃಷ್ಟವಾದ ಪಂಪು ಸ್ಪ್ರೆಯರು ಮಾತ್ರ ಸಾಕಷ್ಟು ಕಾರ್ಯಕಾರಿಯಾಗುವುದು ಬೆಲೆ ಅಗ್ಗವಾಗಿದ್ದರೂ ಕೊನೆಗೆ ಹಗ್ಗ 'ಮಹಾಳಿ' ಸ್ಪ್ರೆಯರು ಶ್ರೇಷ್ಠತರದ ಆಧುನಿಕ ಯೋಗ್ಯ ಯೋಜನೆಗಳಿಂದೊಡಗೂಡಿಕೊಂಡಿದ್ದು ಕೃಷಿ ಇಲಾಖೆಯ ಹಾಗೂ ಅನೇಕಾನೇಕ ಕೋವಿದರಾದ ತೋಟಗಾರರಿಂದಲೂ, ಕಾಫಿ ಪ್ಲಾಂಟರುಗಳಿಂದಲೂ, ಶ್ರೇಷ್ಠ ವರ್ಗದಿಂದ ಶಿಫಾರಸು ಪಡೆದಿದ ಸ್ವದೇಶಿ ಒಡವೆಯಾದರೂ, ಗುಣ, ಸಾಮರ್ಥ್ಯ, ಕಾರ್ಯಶಕ್ತಿ, ರಚನಾಕ್ರಮಗಳಲ್ಲಿ ಎಲ್ಲಾ ವಿಲಾಯತಿ, ಪರದೇಶಿ, ಸ್ಪ್ರೆಯರುಗಳೊಡನೆ ವಿಜಯಾರ್ಥಿಯಾಗಿ ಸ್ಪರ್ಧಿಸುವ ಪಂಪು ಸ್ಪ್ರೆಯರ 'ಮಹಾಳಿ' ಯೇ ಸರಿ

ಆದುದರಿಂದ ಬಹುಮತದಂತೆ ನಿಮ್ಮ ಆಯಿತೆಯೂ "ಮಹಾಳಿ" ಸ್ಪ್ರೆಯರಿಗೇ ಇರಲಿ

ಹೆಚ್ಚಿನ ಅನುಭವಕ್ಕೆ ಈ ಕೆಳಗಿನ ವಿಳಾಸದವರನ್ನು ವಿಚಾರಿಸಿರಿ.—

1 ಪುತ್ತೂರು ಡಿವಿಜನ್ ಮಹಾಳಿ ನಿವಾರಣಾ ಸಹಕಾರ ಸಂಘ, ಲಿಮಿಟೆಡ ಪುತ್ತೂರು
2 ಎಲ್ಲಾಡ್ ಟ್ರೇಡಿಂಗ್ ಕಂಪನಿ, ಮಂಗಳೂರು
3 ಬಾಸೆಲ್ ಮಿಶ್ಯನ್ ಬುಕ್ ಡಿಪೊ, ಮಂಗಳೂರು

ಚಿಂತಾರತ್ನ

ಇದರಲ್ಲಿ ೧ ಕಬ್ಬಿಣವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ, ೩ ಕಾಸ್ಟಿಕ್ ಸೋಡಾ ತಯಾರಿಸುವುದು ೪ ಬಿಸ್ಕಿಟ್ ತಯಾರಿಸುವುದು ೫ ದಂತಾಂಗ ತಯಾರ ಮಾಡುವುದು ೬ ಕರ್ಪೂರವನ್ನು ಮಾಡುವುದು ೭ ದೂಷದ ಭಟ್ಟಿ ಮಾಡುವುದು ೮ ಬಂಗಾರ ಮಾಡುವುದು ೯ ಬೆಳ್ಳಿ ತಯಾರ ಮಾಡುವುದು ೧೦ ಜರ್ಮನ್ ಸಿಲ್ವರ್ ಧಾತುವಾಡುವದು ೧೧ ಊದಿನ ಕಡ್ಡಿ ತಯಾರಮಾಡುವುದು ೧೨ ತಗಡಿನಶಾಟಿ ತಯಾರಮಾಡುವುದು ೧೩ ಕುಂಕುಮವನ್ನು ತಯಾರಿಸುವುದು ೧೪ ಹಸಿಕುಂಕುಮವನ್ನು ತಯಾರಿಸುವುದು ೧೫ ಗೋದಿ ಸರಿ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು ೧೭ ಪಿಂಪನಿ ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಮಾನುಗಳು ೧೯ ಭರ್ಪಿ ತಯಾರಮಾಡುವುದು, ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನು ಮಾಡುವುದು, ೨೨ ಮೆಂಥೀಲ ಎಣ್ಣೆ ತಯಾರಿಸುವುದು ೨೩ ಕನ್ನಡಿಯ ಮೇಲೆ ಬರೆಯುವುದು ೨೪ ದಂತಮಂಜನ ಮಾಡುವುದು ೨೫ ರಕ್ತ ಶುದ್ಧಿ, ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು ೨೭ ಕುಚಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು ೨೯ ಶಿಶ್ನವೃದ್ಧಿಗೆ ಔಷಧ ೩೦ ಪರಟತ್ತು ಮಾಡುವುದು ೩೧ ಚಳಿ–ಜ್ವರದ ಗುಳಿಗೆ ಮಾಡುವುದು ೩೨ ಓಟೆಪಾಲಿಶ ಮಾಡುವುದು ೩೩ ಮನೆ, ಪಖಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು ೩೪ ಕುರುಕು ಖಜ್ಜ ಮುಲಾಮು ೩೫ ನಾಸೀಪುಡಿಮಾಡುವುದು ಇತ್ಯಾದಿ ೧೬೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ. (ವಿ ಪಿ. ಖರ್ಚು ಬೇರೆ)
ವಿಳಾಸ–ಎಸ್. ಸಿ ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ ೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವ ಜಾತಿ ಪುರುಷನ ಲಕ್ಷಣ, ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ವ ಸ್ತು ಅವರಿಂದ ಹುಟ್ಟಿದ ಮಕ್ಕಳ ಫಲಟಾಬ (ಟೇಬಲ್) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛೆ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛೆ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಳೆಯ ಸ್ಥಾನಗಳು, ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ, ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೩೦೦ ವಿಷಯಗಳು ಇರುತ್ತವೆ,

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ.)
ವಿಳಾಸ–ಎಸ್ ಸಿ. ಸಾಲಿಮಠ ಎಂಡ್ ಸನ್ಸ್. ಗದಗ.

ಐರಾವತ.

ಇದು

ದೇವಲೋಕದ ಕಾಮಧೇನುವಿಗೆ ಸಮಾನವಾದ
ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ

ಇದರಲ್ಲಿ ವೈದ್ಯಶಾಸ್ತ್ರ ಕಾಮಶಾಸ್ತ್ರ, ಪಕ್ಷಿಭಾಗ, ಶಕುನ ಸಭಾಂಗ ಸ್ವರ ... ಇಂದ್ರಜಾಲ, ದೇಹದಂಡನೆ, ಲಕ್ಷಣ, ತಂತ್ರ, ಮಂತ್ರ, ಯಂತ್ರ ವಶೀಕರಣ ಇತ್ಯಾದಿ ಅನೇಕ ಮಹಾವಿದ್ಯೆಗಳು ಇರುತ್ತವೆ ಎಲ್ಲ ವಿಷಯಗಳನ್ನು ತಿಳಿಸಲು ಇಲ್ಲಿ ಸ್ಥಳ ಸಾಲದು. ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೂಲ್ಯ ಗ್ರಂಥದ ಬೆಲೆ ೧–೦–೦

ವಿಳಾಸ–ಎಸ್ ಸಿ ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಪುಸ್ತಕಗಳು ಪ್ರತಿಯೊಬ್ಬ ಬುಕ್ ಸೇಲರರಲ್ಲಿ ದೊರೆಯುತ್ತವೆ ಅವರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers —
S C. Salimath & Sons,
GADAG.

ಮಾತೃಪಿತೃಗಳು ತಮ್ಮ ಮಕ್ಕಳನ್ನು ಕೊಲ್ಲುತ್ತಿರುವರು!

ಸ್ಪೈಯಿನಿನಲ್ಲಿ ಅಮಾನುಷಿಕ ಕೃತ್ಯಗಳು.

ಇಡೀ ಯೂರೋಪಿನ ಚರಿತ್ರೆಯಲ್ಲಿ ಎಂದಿಗೂ ಸಂಭವಿಸಿರದ ಘಟನಾವಳಿಗಳೆಂದು ಸ್ಪೈನಿನಲ್ಲಿ ನಡೆಯುತ್ತಿರುತ್ತವೆ. ದಂಗೆಖೋರರು ತಮ್ಮ ಕಟುಕವೃತ್ತಿಯನ್ನು ಇನ್ನೂ ಬಿಡಲೊಪ್ಪುವುದಿಲ್ಲ. ಇಟಲಿ ಜರ್ಮನಿ ಇವುಗಳ ಸಹಾಯದಿಂದ ದಂಗೆಖೋರ ನಾಯಕನಾದ ಜನರಲ್ ಫ್ರೆಂಕೋವು ತನ್ನ ಧ್ಯೇಯಸಾಧನೆ ಮಾಡುತ್ತಿರುವನು ಮಲಾಗವು ದಂಗೆಖೋರರ ವಶವಾಯಿತು ಸರಕಾರ ಕೇಂದ್ರವು ಈಗ ವೆಲೆಂಶಿಯಾ ಎಂಬಲ್ಲಿರುವುದು ಅಲ್ಮೆರಾ ನಗರಕ್ಕೆ ಹೋಗುವ ಮಾರ್ಗದಲ್ಲಿ ಒಂದು ಕಡೆ ಅವಿತಿದ್ದ ನಿರಪರಾಧಿ ಜನರನ್ನು ದಂಗೆಕಾರರು ಗುಂಡಿನ ಬಾಯಿಗೆ ತುತ್ತಾಗಿರಿಸಿದರು ಅವರ ಹೆಣಗಳ ರಾಶಿಯು ಅಲ್ಲಿ ರಾಶಿ ರಾಶಿಯಾಗಿ ಬಿದ್ದಿರುವುದು. ಶಿಶುಮಕ್ಕಳ ತಾಯಂದಿರು ತಮ್ಮ ಮಕ್ಕಳನ್ನು ದಂಗೆಕಾರರ ವಶಪಡಿಸಲು ಮನಸ್ಸಿಲ್ಲದೆ, ಅವುಗಳನ್ನು ಕೊಂದು ತಾವು ತಲೆ ಚಚ್ಚಿ ಪ್ರಾಣಕಳೆಕೊಳ್ಳುತ್ತಿರುವರು ಕೆಲವರು ಮೋಟಾರು ವ ರೈಲುಬಂಡಿಗಳಡಿಯಲ್ಲಿ ಬಿದ್ದು ಸಾಯುತ್ತಾರೆ ರಕ್ತದ ಕೊಳಗಳು ಅಲ್ಲಿ ಹರಿಯುತ್ತಿವೆ ಮಾತೃಪಿತೃಗಳನ್ನು ಬಿಟ್ಟ ಅನೇಕಾನೇಕ ಮಕ್ಕಳು, ದಂಗೆಕಾರರ ಸೈನ್ಯಗಳ ಕಾಲಡಿಯಲ್ಲಿ ಬಿದ್ದು ನುಚ್ಚುನೂರಾಗಿವೆ

ಡಾ। ನಾರ್ಮನ್ ಬೆತ್ಯೂನ್ ಎಂಬೋರ್ವ ಕಾನಡಾ ದೇಶದ ವೈದ್ಯರು ತಮ್ಮ ಅನುಭವಗಳನ್ನು ಈ ಕೆಳಗಿನಂತೆ ತಿಳಿಸುತ್ತಾರೆ 'ನಾನು ಒಂದು ಮೋಟಾರು ಲಾರಿಯನ್ನು ತೆಗೆದುಕೊಂಡು ಘಾಯಪಟ್ಟವರ ಶುಶ್ರೂಷೆಗಾಗಿ ಔಷಧೋಪಕರಣಗಳನ್ನು ಮಲಗಾ ನಗರದ ಮಾರ್ಗದಲ್ಲಿ ತೆಗೆದುಕೊಂಡು ಹೋಗುತ್ತಿದ್ದೆ ಅಷ್ಟರಲ್ಲಿ ಇಟೇಲಿ—ಜರ್ಮನಿ ಕಡೆಯ ಎರಡು ವಿಮಾನಗಳು ಬಾಂಬುಗಳ ಸುರಿಮಳೆಯನ್ನು ಸುರಿಯಿತು ನೋಡುತ್ತಿದ್ದ ಹಾಗೆ ಹಲವರು ಮಡಿದರು ಕೆಲವರ ದೇಹಗಳು ಚೂರು ಚೂರಾಗಿ ಹೋದುವು ಆ ಸಮಯಕ್ಕೆ ಅಲ್ಮೆರಾದಿಂದ ೫೦ ಸಾವಿರ ನಿರಾಶ್ರಿತರು ಮಲಗಾಕ್ಕೆ ಬಂದರು ಅವರಲ್ಲಿ ೫ ಸಾವಿರ ಮಕ್ಕಳಿದ್ದುವು ಒಂದಕ್ಕೂ ಪೂರ್ತಿಯಾದ ಬಟ್ಟೆಬರೆ ಇರಲಿಲ್ಲ ನನ್ನ ಮೊದಲಿನ ಕರ್ತವ್ಯವು ಇವುಗಳನ್ನು ರಕ್ಷಿಸುವುದೆಂದು ತಿಳಿದು ಪ್ರಯತ್ನಗಳಾಗುವಷ್ಟರಲ್ಲಿ ಬಾಂಬಿನ ಸುರಿಮಳೆಗಾರಂಭವಾಯಿತು ಈಗ ಎಲ್ಲರೂ ವೆಲೆಂಶಿಯಾಕ್ಕೆ ಹೋಗಬೇಕೆಂದು ನಿಶ್ಚಯಿಸಿರುವರು ತರುಣರು ಸೈನ್ಯಖಾತೆಯನ್ನು ಸೇರುವರು ''

ರುಮೇನಿಯಾದಲ್ಲಿ ಗಲಾಟೆ.

ಸ್ಪೈನಿನ ದಂಗೆಕಾರರ ಕಡೆಯಿಂದ ಯುದ್ಧಕ್ಕೆ ನಿಂತು ಮಡಿದ ಇರ್ವ ಆಯರ್ನ್ ಗಾರ್ಡ್' ಪಂಗಡದ ಸೈನಿಕರ ಸಲುವಾಗಿ ಶೋಕಸೂಚಕ ಮೆರವಣಿಗೆಯೊಂದು ರುಮೆನಿಯಾದಲ್ಲಿ ಆಯಿತು ಅದರಲ್ಲಿ ಜರ್ಮನಿ, ಇಟೆಲಿ, ಪೋಲೆಂಡ್, ಜಪಾನ್, ಸ್ಪೈನ್ ದೇಶಗಳ ಫೆಸಿಸ್ಟ ಪ್ರತಿನಿಧಿಗಳು ಆ ಮೆರವಣಿಗೆಯಲ್ಲಿ ಭಾಗವಹಿಸಿದ್ದರಂತೆ. ಇದನ್ನು ಕಂಡ ರುಮೇನಿಯದ ದೊರೆಗಳಾದ ಕರೊಲ್‌ರವರು ತಮ್ಮ ಮಂತ್ರಿಗಳನ್ನು ಕರೆಯಿಸಿ, ಅದರ ಅರ್ಥವೇನೆಂದು ಕೇಳಿದರಂತೆ. ಈಗ ಅಲ್ಲಿ ಫೆಸಿಸ್ಟ ವ ಕ್ರೈ ನಾಜೀ ಪಂಗಡಗಳ ಬೆಳವಣಿಗೆಯನ್ನು ತಡೆಗಟ್ಟುವ ಸಾಧನೆಗಳು ಬಿರುಸಾಗಿ ನಡೆಯುತ್ತಿವೆ.

ಅಬಿಸೀನಿಯಾದ ವೈಸರಾಯರ ಮೇಲೆ ಬಾಂಬು.

ಅಬಿಸೀನಿಯಾದಲ್ಲಿ ವೈಸರಾಯರಾಗಿ ನೇಮಿಸಲ್ಪಟ್ಟಿದ್ದ ಮಾರ್ಶಲ್ ಗ್ರೇಜಿಯಾನಿಯವರು ಅಡಿಸ್ ಅಬಾಬದಲ್ಲಿ ಕೆಲವು ಕ್ರೈಸ್ತ ದೇವಾಲಯಗಳ ಮತ್ತು ಮಸೀದಿಗಳ ಎದುರಿನಲ್ಲಿ ಬಡಬಗ್ಗರಿಗೆ ಪಾರಿತೋಷಕಗಳನ್ನು ಹಂಚುತ್ತಲಿರುವಾಗ, ಯಾವನೋ ಓರ್ವ ಬುದ್ಧಿಭ್ರಮಣೆಯುಳ್ಳವನು ಅವರ ಮೇಲೆ ಬಾಂಬುಗಳನ್ನೆಸೆದನು. ಅವು ಸಿಡಿದು ಗ್ರೇಜಿಯಾನಿಯವರಿಗೆ ಸ್ವಲ್ಪ ಘಾಯಗಳಾಗಿವೆ ಅವರ ಜೊತೆಯಲ್ಲಿದ್ದ ಕೆಲವು ಅಧಿಕಾರಿಗಳಿಗೂ ಏಟು ಬಿದ್ದಿರುತ್ತದೆ ಜನರಲ್ ಲಿಯೊಟಾ ಎಂಬೊಬ್ಬ ಅಧಿಕಾರಿಯ ಕಾಲು ತುಂಡುಮಾಡಬೇಕಾಗಿ ಬಂದಿದೆ

ಆಸ್ಟ್ರಿಯಾದಲ್ಲಿ ರಾಜಪ್ರಭುತ್ವ

ಆಸ್ಟ್ರಿಯಾದಲ್ಲಿ ರಾಜಪ್ರಭುತ್ವವನ್ನು ಸ್ಥಾಪಿಸುವುದಕ್ಕಾಗಿ ಬಲವಾದ ಚಳವಳವು ನಡೆಯುತ್ತಿದೆ. ವಿಯಾನಾದಲ್ಲಿ ಸರಕಾರಿ ಪ್ರತಿನಿಧಿಗಳ ಸಭೆಯು ಸೇರಿದಾಗ ಸರ್ವಾಧಿಕಾರಿ ಡಾ। ಶೂಶ್‌ನಿಗರವರು ಆ ವಿಷಯವನ್ನೆತ್ತಿ ೨ ಘಂಟೆಯ ಕಾಲ ಪ್ರಸ್ತಾಪಿಸಿ ಬಿಗಿಯಾದ ಭಾಷಣ ಮಾಡಿದರು ರಾಜಪ್ರಭುತ್ವ ಸ್ಥಾಪನೆಯ ವಿಚಾರ ಆಸ್ಟ್ರಿಯಾದ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕೆಂದೂ, ಅದಕ್ಕಾಗಿ ಎಲ್ಲಾ ಜನರ ಬಹುಮತವನ್ನು ಪಡೆಯಬೇಕೆಂದೂ, ಆ ಮೇಲೆಯೇ ರಾಜ್ಯಾಂಗರಚನೆಯಾಗಬೇಕೆಂದೂ ತಿಳಿಸಿದರು ಆದರೆ ರಾಜ್ಯಪ್ರಭುತ್ವದ ಚಳವಳವು ಆಸ್ಟ್ರಿಯಾದ ರಾಜ್ಯ ಮೇರೆಯನ್ನು ದಾಟಿಹೋಗಿ, ಆದ ಇತರ ರಾಷ್ಟ್ರಗಳ ಮೇಲೆ ಪರಿಣಾಮಕಾರಿಯಾಗದಂತೆ ನೋಡಬೇಕು ಜನತೆಯ ಅಭಿಪ್ರಾಯ ಕೇಳುವುದಕ್ಕೆ ಒಂದು ಪ್ರತ್ಯೇಕ ದಿವಸವನ್ನು ನಿಯಮಿಸಬೇಕು ನಾಮಾಜಿಕ ಸುಧಾರಣಾಗಾರರ ಕೇಳಿಕೆಗಳನ್ನು ಶೂಶನಿಗರು ತಿರಸ್ಕರಿಸಿದ್ದು, ರಾಜಪ್ರಭುತ್ವದ ಕಡೆಗೆ ಅವರಿಗಿರುವ ದ್ವೇಷವನ್ನು ತೋರಿಸುತ್ತದೆ

ಡ್ಯೂಕ್ ಒಫ್ ವಿಂಡ್ಸರರ ಮದುವೆ ವಿಚಾರ

ಇಂಗ್ಲೆಂಡು, ಯೂರೋಪಿನಲ್ಲಿದ್ದ ಕೆಲವು ಪ್ರಾಮುಖ್ಯ ಪತ್ರಿಕಾ ಪ್ರತಿನಿಧಿಗಳು ಡ್ಯೂಕ್ ಆಫ್ ವಿಂಡ್ಸರ್ (ಮಾಜಿ ೮ನೇ ಎಡ್ವರ್ಡ) ರವರ ಮದುವೆಯ ವಿಚಾರ ಹೊಸ ಹೊಸ ಸುದ್ದಿಗಳನ್ನು ಪ್ರಕಟಣೆಗೆ ಕೊಡುತ್ತಾರೆ ಒಂದು ಪತ್ರಿಕೆಯು, ಅವರು ಎಪ್ರಿಲ್ ಮೊದಲನೆಯ ವಾರದಲ್ಲಿ ಮದುವೆಯಾಗುವರೆಂದೂ, ಇನ್ನೊಂದು, ಅವರಿಗೆ ಮೇ ತಿಂಗಳ ಎರಡನೇ ವಾರದ ವರೆಗೆ ಮದುವೆಮಾಡಿಕೊಳ್ಳಲಾಗುವುದಿಲ್ಲವೆಂದೂ, ಮತ್ತೊಂದು, ಅವರು ಬರುವ ವರ್ಷವೇ ಮದುವೆಮಾಡಿಕೊಳ್ಳಲು ನಿಶ್ಚಯಿಸಿರುವರೆಂದೂ ಪ್ರಕಟಿಸಿವೆ ಈಗ ವಿಂಡ್ಸರರನ್ನು ಕಾಣಹೋದ ಅವರ ತಂಗಿ ಮತ್ತು ಬಾವ ಅರ್ಲ್ ಆಫ್ ಹೇರ್‌ವೂಡ್ ಇವರುಗಳು ವಿಯನ್ನದಲ್ಲಿರುವರು ಕಡೆಯ ಸಲಕ್ಕೆ ವಿಂಡ್ಸರರನ್ನು ಅವರ ನಿರ್ಧಾರದಿಂದ ವಿಮುಖರಾಗುವಂತೆ ಕೇಳಿಕೊಳ್ಳಲು ಅವರು ಅಲ್ಲಿಗೆ ದಯಮಾಡಿಸಿರುವರೆಂದೂ ಒಂದು ಬಾತ್ಮಿ

ಇಷ್ಟೆಲ್ಲಾ ಇರುವಾಗ, ಯೂರೋಪಿನ ಪತ್ರಿಕೆಗಳ ವರ್ತಮಾನವೇ ಬೇರೆ ಸಿಂಪ್ಸನ್ ಮಹಿಳೆಯು ಬಹು ಆನಂದೋತ್ಸಾಹದಿಂದ ಕಾಲಕಳೆಯುತ್ತಿರುವಳೆಂದೂ ಆಗಾಗ್ಗೆ ಉಪಹಾರ, ಸಂಗೀತ ಕಚೇರಿಗಳನ್ನೇರ್ಪಡಿಸಿ ತನ್ನ ಪ್ರೀತಿಯ ರಾಗಗಳನ್ನು ವಿಂಡ್ಸರರ ಎದುರಿಗೆ ಹಾಡಿಸುವಳೆಂದೂ ಒಂದು ಪತ್ರಿಕೆಯು ಎನ್ನುತ್ತಿದೆ.

ಕಾರ್ಟಿಯರ್ ಎಂಬ ಪ್ರಖ್ಯಾತ ವಜ್ರವ್ಯಾಪಾರಿಯ ಕಡೆ ವಿಂಡ್ಸರರು ತನ್ನ ಅತ್ತೆಗಾಗಿ ೨೦ ಲಕ್ಷ ಪವನು ಬೆಲೆಬಾಳುವ ಆಭರಣಗಳನ್ನು ತೆಗೆದುಕೊಂಡಿರುವರೆಂದು ಪ್ಯಾರಿಸಿನ ಸುದ್ದಿ, ಅಲ್ಲದೆ ಅವರು ಸಿಂಪ್ಸನ್ನಳಿಗಾಗಿ ಸಾವಿರಗಟ್ಲೆ ಪವನು ಬೆಲೆಬಾಳುವ ವಸ್ತ್ರಭೂಷಣಗಳ ಆರ್ಡರನ್ನು ವಿಯನ್ನಾದ ಒಂದು ಬ್ರಿಟಿಷ ವಸ್ತ್ರ ವ್ಯಾಪಾರಿಗೆ ಕೊಟ್ಟಿರುವರೆಂದೂ ಒಂದು ವರದಿ

ಇಂಗ್ಲೆಂಡು ಮತ್ತು ಇತರ ಕಡೆಗಳಲ್ಲಿರುವ ಅವರ ಸ್ವಂತ ಆಸ್ತಿಪಾಸ್ತಿಗಳನ್ನು ಸರಕಾರವು ಮುಟ್ಟುಗೋಲು ಹಾಕುವುದೆಂದೂ ಒಂದು ವರ್ತಮಾನ ಅದೇ ಸಮಯದಲ್ಲಿ ಅವರಿಗೆ ೨೫ ಸಾವಿರ ಪವನಿನ ವರ್ಷಾವಧಿ ವೇತನವನ್ನು ಕೊಡಿಸಲು ಪಾರ್ಲಿಮೆಂಟಿನಲ್ಲಿ ಏರ್ಪಾಡಾಗುವುವಂತೆ. ಒಂದು ವೇಳೆ ಅದು ಬಹುಮತದಿಂದ ಬಿದ್ದುಹೋದಲ್ಲಿ, ರಾಜಕುಟುಂಬದ ಸದಸ್ಯರೆಲ್ಲರೂ ಕೂಡಿ ಮಾಜಿ ದೊರೆಗಳಿಗೆ ೫ ಲಕ್ಷ ಪವನುಗಳನ್ನು ತೀರಿಸಿ ಕೊಡುವರಾಗಿಯೂ ಒಬ್ಬ ಬಾತ್ಮಿದಾರನಿಂದ ತಿಳಿದು ಬರುತ್ತದೆ.

ಇಂಗ್ಲೆಂಡಿನ ಪತ್ರಿಕೆಗಳು ಕೆಲವು ಸಿಂಪ್ಸನ್ ಎಡ್ವರ್ಡರ ಮದುವೆನಂತರದ ಭವಿಷ್ಯವನ್ನು ಚರ್ಚಿಸುತ್ತವೆ. ಒಂದು ವೇಳೆ ಸಿಂಪ್ಸನ್—ಎಡ್ವರ್ಡ ಮದುವೆಯಾದರೆ, ಸಿಂಪ್ಸನ್ನಳಿಗೆ, ರಾಜಕುಮಾರರ ಧರ್ಮಪತ್ನಿಗೆ ಸಿಗಬೇಕಾದ ರಾಜಮರ್ಯಾದೆಯನ್ನು ಇಂಗ್ಲಿಷ ಜನತೆಯು ಕೊಡುತ್ತದೋ ಇಲ್ಲವೋ ಎಂದು ಸಂಶಯವು ಬಂದಿದೆ ಆ ಮೇಲೆ ಅರಮನೆಯ ರಾಜ ಉತ್ಸಾಹಗಳಲ್ಲಿ ಸಿಂಪ್ಸನ್ನಳಿಗೆ ಆಮಂತ್ರಣ ಸಿಗುತ್ತದೋ ಇಲ್ಲವೋ? ಹೀಗೆಂದು ಒಂದು ಬಾತ್ಮಿ

ಸಿಂಪ್ಸನ್ನಳು ಇಂಗ್ಲಿಷ ದೊರೆಯ ಪ್ರೇಯಸಿಯೆಂದು ಪ್ರಕಟವಾದೊಡನೆ ಆಂಗ್ಲಪತ್ರಿಕೆಗಳು ಅವಳನ್ನು ಕೀಳ ತರದ ಹಾಸ್ಯಗಳಿಂದ ಟೀಕಿಸಿದವು ಬೆದರಿಕೆಯ ಪತ್ರಗಳು ಅವಳಿಗೆ ಮೇಲಿಂದ ಮೇಲೆ ಬರತೊಡಗಿದುವಂತೆ ಎಡ್ವರ್ಡರು ಪಟ್ಟ ಪ ತ್ಯಾಗ ಮಾಡಿ ವಿಯಾನ್ನಾಕ್ಕೆ ತೆರಳಿದ ಮೊದಲನೇ ವಾರದಲ್ಲಿ ಸ್ಕೊಟ್ಲೆಂಡ್ ಯಾರ್ಡಿನ, ಗುಪ್ತ ಪೋಲೀಸರು ಅವರನ್ನು ರಾತ್ರಿ ಹಗಲು ಕಾಯುತ್ತಲಿದ್ದರು

ಬಿಗಿ ಕಾವಲು

ಯಾವುದಾದರೂ ಘಟನೆಗಳು ಸಂಭವಿಸುತ್ತವೆಂದು ನಿರೀಕ್ಷಿಸಿಕೊಂಡಿದ್ದ ಇಟೇಲಿಯವರು ಅಡಿಸ್ ಅಬಾಬದ ಕಾವಲಿಗೆ ೩೦ ಸಾವಿರ ಇಟೆಲಿಯನ ಸೈನ್ಯವನ್ನು ಇಟ್ಟಿದ್ದರು ಈಗ ಅವರು ಅನುಮಾನ ಕಂಡವರನ್ನು ಕೈದುಮಾಡುತ್ತಾರೆ ಒಟ್ಟಿಗೆ ೨ ಸಾವಿರ ಮಂದಿಯು ಪೋಲೀಸರ ವಶವಿರುವರು ಮಿಲಿಟರಿ ನಾಯಕರು ಅವರನ್ನು ವಿಚಾರಣೆಗೆ ಗುರಿಮಾಡಿ, ಬಾಂಬ್ ಪ್ರಕರಣದ ಮುಖ್ಯಸ್ಥನಿಗೆ ಶಿಕ್ಷೆಗೆ ಗುರಿಮಾಡಿದರು

ಚೀನಾದಲ್ಲಿ ಇಟೇಲಿಯಾನರ ಗಲಭೆ.

ಶಾಂಗ್ಹಾಯಲ್ಲಿನ ಒಂದು ಚಲಚ್ಚಿತ್ರ ಮಂದಿರದಲ್ಲಿ, ರಶ್ಯಾದೇಶದವರು ಇಟೇಲಿ—ಅಬಿಸೀನಿಯಾದ ಯುದ್ಧಸಂಬಂಧವಾಗಿ ತೆಗೆದ ಒಂದು ಚಿತ್ರವನ್ನು ಪ್ರದರ್ಶಿಸಲ್ಪಟ್ಟಿತು ಕೊಮ್ಯೂನಿಸಂ ಪ್ರಚಾರವು ಚೀನಾದಲ್ಲಿ ಚೆನ್ನಾಗಿ ನಡೆಯುತ್ತಿರುವುದು ಇಟಲಿಯವರಿಗೆ ಮುಂಚಿನಿಂದಲೂ ಸಹನೆಯಾಗಲಿಲ್ಲ ಈ ಸಮಯದಲ್ಲಿ ಕೆಲವು ಇಟೇಲಿಯನ್ ಸೈನಿಕ ಕಲಾಸಿಗಳು ಆ ಚಲಚ್ಚಿತ್ರವನ್ನು ನೋಡಲಿಕ್ಕೆ ಬಂದವರು, ಚಿತ್ರವನ್ನು ನೋಡಿ ರೇಗಿಕೊಂಡು ಗಲಾಟೆ ಎಬ್ಬಿಸಿದರು ಚಿತ್ರವನ್ನು ಬಿಡುವ ರಕ್ಷದ ಯಂತ್ರಕಾಮಗಾರಿಯನ್ನು ಚೆನ್ನಾಗಿ ಬಡೆದು ಯಂತ್ರವನ್ನು ಪುಡಿಮಾಡಿ, ಚಿತ್ರಗಳ ಬಿಂಬಗಳ ಪಟ್ಟಿಯನ್ನು ತೆಗೆದುಕೊಂಡು ಹೋದರು, ಅಷ್ಟರಲ್ಲಿ ಇನ್ನೂ ೫೦ ಮಂದಿ ಇಟೇಲಿಯಾನರು ಅವರನ್ನು ಸೇರಿ 'ಮುಸಲೋನಿಗೆ ಜಯವಾಗಲಿ' ಎಂದು ಘೋಷಿಸತೊಡಗಿದರು ನಂತರ ಅವರು ಮೋಟಾರುಕಾರಿನ ಮೇಲಿಂದ ಎತ್ತಕಡೆಗೊ ಓಡಿದರಂತೆ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಆವರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಲುರವರ

ಬಾಲಭಾಸ್ಕರ.

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ದಕ್ಷಿಣ ಕನ್ನಡದ ಏಜಂಟರು.—ಪೋಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

TRUE COPY

Nanjangood, dated 29th Oct 36

From

B. M. Sivaramiah,

(Bellur M. Sivaram)

First Grade Pleader,

Brindaban Kuteer, NANJANGOOD.

To

The Secretary,
The C. P. C. Co., Ltd.,
MANGALORE.

Sir,

From here I write to thank you heartily for the excellent convenience you were pleased to afford me in my lecture tours in our district. Ever since I got down from train at Hassan your service took charge of me and at Sakleshpur, Puttur, Mangalore, Udipi (especially) Someshwar and even at Agumbe your service was kind and all felicitous to me. I felt as if I had my own car with me throughout. I may say here that I observed that all other passengers also were treated alike and their conveniences attended to promptly, properly and what is more remarkable courteously. I think I have derived from your service in my tour ten times the benefit I have really paid for the same. I conclude by saying yours is an excellent service and you deserve every praise for the public good you are doing all along.

Please accept my heartfelt thanks and congratulations.

Yours sincerely

(Sd) B. M. Sivaramiah.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies
2. Rebate for larger assurances
3. Accident Risk covered on small extra premiums
4. Attractive Bonuses

It pays you to represent this Company

Wanted Agents in unrepresented parts

Apply to.—

Messrs Kochikar Brothers,

Madras Branch Secretaries.

——1936——

OUR VALUATION YEAR

Take a BOMBAY LIFE Policy now, and share in the profits



Branches at -	P. B 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4

ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸಿಗೆ ಪ್ರಚಂಡ ವಿಜಯ!

ಮಂಗಳೂರು.

ಶೃಂಗೇರಿ ಶ್ರೀ ಜಗದ್ಗುರು ಸಂಸ್ಥಾನ ಶ್ರೀಮಠದ ಧರ್ಮಾಧಿಕಾರಿಗಳ ಸಂಚಾರ

ಶ್ರೀ ಮಠದ ಆಸ್ಥಾನವಿದ್ವಾನ ಧರ್ಮಾಧಿಕಾರಿ ಸ್ಥಾನ ಯುಕ್ತರಾದ ಬ್ರಹ್ಮಶ್ರೀ ವಿದ್ವಾನ್ ಕೆ. ಶೇಷಶಾಸ್ತ್ರಿ ಮಹಾಶಯರು ನಮ್ಮ ಜಿಲ್ಲೆಯಲ್ಲಿರುವ ಶ್ರೀ ಸಂಸ್ಥಾನ ಶ್ರೀಮಠದ ಶಿಷ್ಯವರ್ಗದವರಲ್ಲಿ ಮುಖ್ಯವಾಗಿ ಸದರಿ ಸಂಸ್ಥಾನದ ಧರ್ಮಸಂದೇಶವನ್ನು ಬೀರುವುದಕ್ಕಾಗಿ ಮತ್ತೀತರ ವ್ಯವಸ್ಥೆಗೊಳಿಸುವುದಕ್ಕಾಗಿಯೂ ನಮ್ಮ ಜಿಲ್ಲೆಯನ್ನು ಸಂಚರಿಸುತ್ತಾ ಪ್ರಕೃತ ಶಂಕರನಾರಾಯಣದಲ್ಲಿ ಮೊಕ್ಕಾಂ ಮಾಡಿರುವರು. ಇದೇ ಬರುವ ಮಾರ್ಚಿ ತಿಂಗಳ ಮೊದಲನೆಯ ವಾರದಲ್ಲಿ ಇವರು ನಮ್ಮ ಮಂಗಳೂರಿಗೆ ದಯಮಾಡಿಸಲಿರುವರು. ಈ ಸಂಧರ್ಭದಲ್ಲಿ ಶ್ರೀ ಮಠದ ಸಕಲ ಶಿಷ್ಯವರ್ಗದವರು ತಮ್ಮ ಜಾತಿ, ಮಠ ಸಂಬಂಧವಾದ ತಗಾದೆಗಳಿದ್ದಲ್ಲಿ ಇವರ ಮೂಲಕ ನಿವೃತ್ತಿಸಿಕೊಂಡು, ಶ್ರೀಮಠದ ಧರ್ಮಸಂದೇಶವನ್ನು ಇವರಿಂದ ತಿಳಿದು ಶ್ರೀ ಜಗದ್ಗುರು ಮಹಾಸ್ವಾಮಿಗಳ ಆಜ್ಞೆಯಂತೆ ವರ್ತಿಸತಕ್ಕದ್ದಿದೆಯೆಂದು ಮಂಗಳೂರು ಶಹರ್ ಮಠಮುದ್ರಾಧಿಕಾರಿಗಳಾದ ಡಾ। ಬಿ ಕೆ ಪಿ ಶರ್ಮ ಇವರ ವಿನಂತಿ.

ಇದೇ ಬರುವ ಮಾರ್ಚಿ ತಿಂಗಳ ತಾ ೨ನೇ ಮಂಗಳವಾರ ದಿವಸ ಉರ್ವ ಮಾರಿಗುಡಿ ದೇವಸ್ಥಾನದಲ್ಲಿ ಜರಗಲಿಕ್ಕಿರುವ ವಿನಿಯೋಗಕ್ಕೆ ಜನರು ಹೂವು ಹಣ್ಣು ಕಾಯಿ, ಕುಂಕುಮ, ಕಾಂಚನಾದಿ ವಸ್ತುಗಳಿಂದ ದೇವಿಯನ್ನು ಆರಾಧಿಸಿ ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕು. ವ್ಯರ್ಥ ಕುರಿ ಕೋಳಿಗಳನ್ನು ಬಲಿಯಾಗಿ ಅರ್ಪಿಸಿದರಿಂದ ಪಾಪವು ಸಂಚಿತವಾಗುವುದಲ್ಲದೆ ಪುಣ್ಯವೆಂದೂ ಸಂಚಿತವಾಗದು. ಶಕ್ತಿಯಾಗಿರುವ ದೇವಿಯು ಸರ್ವ ಪ್ರಾಣಿಗಳಲ್ಲಿಯೂ ಚೈತನ್ಯಾತ್ಮಕಳಾಗಿರುವುದರಿಂದ ಅನಾಥ ಪ್ರಾಣಿಗಳಲ್ಲಿ ನಾವು ದಯೆ ತೋರಿಸಿ ದೇವಿಯ ಕೃಪೆಗೆ ಪಾತ್ರರಾಗುವುದು ಶ್ರೇಯಸ್ಕರವಾಗಿದೆ.

ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವ ಸಂಬಂಧವಾದ ಮುಖ್ಯ ಕಾರ್ಯಕ್ರಮಗಳು ಕಳೆದ ಶುಕ್ರವಾರ ಅವಭೃತಸ್ನಾನದೊಂದಿಗೆ ಕೊನೆಗೊಂಡವು. ಅಂದು ಓಕುಳಿ ಉತ್ಸವವು ಜಹಳ ವಿಜೃಂಭಣೆಯಿಂದ ನಡೆಯಿತು. ಅಂದು ಓಕುಳಿಸ್ನಾನದ ನೀರನ್ನು ಹಳದಿ ಬಣ್ಣದಲ್ಲಿಯೇ ಉಪಯೋಗಿಸಲ್ಪಟ್ಟಿತು.

ಶ್ರೀ ಶ್ರೀಗಳವರ ಕಾಶೀಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರ ದಿವ್ಯ ಸನ್ನಿಧಿಯಲ್ಲಿಯೇ ಎಲ್ಲಾ ಉತ್ಸವ ಅಭಿಷೇಕಾದಿಗಳು ನಡೆದುವು. ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಶಿಷ್ಯವರ್ಗವು ನೆರೆದಿತ್ತು. ಶ್ರೀ ಶ್ರೀಯವರು ಶ್ರೀ ದೇವರ ವಿಗ್ರಹದೊಂದಿಗೆ ರಥಾರೋಹಣವನ್ನು ಗೈದು ಸಕಲ ಶಿಷ್ಯವರ್ಗದವರೆದುರಿನಲ್ಲಿ ದೇವರನ್ನು ಪೂಜಿಸಿದರು.

ಸಮಾರಂಭಗಳ ಈ ವರ್ಷದ ಸ್ತುತ್ಯಾರ್ಹ ಸಂಗತಿಗಳೆಂದರೆ, ಸ್ವಜಾತಿ ಬಾಂಧವರ ಹೃತ್ಪೂರ್ವಕ ಸಹಕಾರ ಮತ್ತು ವಿಶೇಷ ತರದ ಸ್ವಯಂಸೇವೆ. ಬಹಳಷ್ಟಿಗೆ ಟೊಳಪಟ್ಟ ಯುವಕ ಸ್ವಯಂಸೇವಕರು ಸಮಾರಂಭವನ್ನು ಯಶಸ್ವಿಗೊಳಿಸುವುದರಲ್ಲಿ ತುಂಬಾ ಶ್ರಮ ವಹಿಸಿದುದಕ್ಕಾಗಿ ಆಡಳಿತಗಾರರು ಅವರನ್ನು ತುಂಬಾ ವಂದಿಸಿರುತ್ತಾರೆ.

ಊಟದ ಏರ್ಪಾಡುಗಳು ಎಲ್ಲದಕ್ಕಿಂತಲೂ ಬಹಳ ಸೊಗಸಾದ ರೀತಿಯಲ್ಲಿ ನಿರ್ವಹಿಸಲ್ಪಟ್ಟವು. ಭೋಜನ ಕಾಲದಲ್ಲಿ ಯಾವುದೊಂದು ಅವ್ಯವಸ್ಥೆ ಅನನುಕೂಲಗಳು ಆಗದಂತೆ ನೋಡಿಕೊಂಡು ಯೋಗ್ಯ ಏರ್ಪಾಡುಗಳನ್ನು ಮಾಡಿದ ಆಡಳಿತಗಾರರ ಪ್ರಮುಖ ಸಮಾಜಸ್ಥರು ತುಂಬಾ ಅಭಿವಂದನೆಗಳನ್ನು ಅರ್ಪಿಸಬೇಕು.

ಹದಿನಾಲ್ಕು ವರ್ಷಗಳ ದೀರ್ಘ ಅವಧಿಯ ನಂತರ ನಮ್ಮ ಜಿಲ್ಲೆಗೆ ದಯಮಾಡಿಸಿದ ಶ್ರೀ ಕಾಶೀಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರು ಸುಮಾರು ಒಂದು ವರ್ಷಕ್ಕೂ ಮೇಲ್ಪಟ್ಟ ಅವಧಿಯವರೇಗೆ ಜಿಲ್ಲೆಯ ಎಲ್ಲಾ ಕಡೆಗಳಲ್ಲಿರುವ ಶಿಷ್ಯವರ್ಗಕ್ಕೆ ದರ್ಶನ ಸುಸಂಧಿಯನ್ನು ಕೊಟ್ಟು ಆಶೀರ್ವದಿಸಿದರು. ರಾಮೇಶ್ವರದಲ್ಲಿ ಗೌಡಸಾರಸ್ವತ ಸಮಾಜದವರಿಗೆ ಸೇರಿದ್ದ ಶ್ರೀ ಕಾಶೀಮಠಕ್ಕೆ ಸಂಬಂಧಪಟ್ಟ ಶ್ರೀ ಕೋದಂಡ ರಾಮಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕಾಗಿ ಧನಸಂಗ್ರಹ ಮಾಡಬಂದ ಅವರ ಉದ್ದಿಶ್ಯವು ಶಿಷ್ಯವರ್ಗದ ಸಕಲರ ಸಹಾನುಭೂತಿಯಿಂದ ಯಶಸ್ವಿಯಾಯಿತು. ನೊನ್ನೆ ೨೦ನೇ ತಾರೀಕಿಗೆ ಶ್ರೀಯವರು ರಾಮೇಶ್ವರದ ದಿಗ್ವಿಜಯಕ್ಕೆ ಹೊರಟರು. ಶಿಷ್ಯವರ್ಗದವರು ಶಾಸ್ತ್ರೋಕ್ತ ರೀತಿಯಲ್ಲಿ ಗುರುವರ್ಯರನ್ನು ಬೀಳ್ಕೊಟ್ಟರು.

ಕಳೆದ ಮೂರು ತಿಂಗಳಿಂದಲೂ ಯಶಸ್ವಿಯಾಗಿ ನಾಟಕಗಳನ್ನು ಆಡುತ್ತಿದ್ದು ಇಡೀ ಜಿಲ್ಲೆಯ ಅಭಿಮಾನಗಳಿಗೆ ಪಾತ್ರರಾಗಿದ್ದ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳೀ ಮೈಸೂರು ಇವರು ಕಳೆದ ಮಂಗಳವಾರ ತಮ್ಮ ಶುಭಸಮುದಾಯದ ಕಡೇ ನಾಟಕವಾದ ಸಂಪೂರ್ಣ ರಾಮಾಯಣವನ್ನು ಪ್ರದರ್ಶಿಸಿ ಚಿಕ್ಕಮಗಳೂರಿಗೆ ಪ್ರಯಾಣಮಾಡಿದರು. ಅಂದು ಈ ನೂತನ ಸಂಘದವರಿಗೆ ಸನ್ಮಾನಿಸಲೋಸುಗ ಪುರಜನರ ಪರವಾಗಿ ಪಾರಿತೋಷಕಗಳು ಕೊಡಲಾದುವು. ಇವರ ಕಡೇ ನಾಟಕವು ಪ್ರಾರಂಭ ನಾಟಕಕ್ಕಿಂತಲೂ ಹೆಚ್ಚಿನ ಜನಸ್ತೋಮವನ್ನು ಆಕರ್ಷಿಸಿತೆಂಬ ವಿಷಯವು ಮಂಗಳೂರ ಜನರು ಅವರಿಗೆ ಕೊಟ್ಟ ಪ್ರೋತ್ಸಾಹದ ಕುರುಹಾಗಿರುತ್ತದೆ. ಈ ವಿಷಯದಲ್ಲಿ ಸಂಘಾಧಿಕಾರಿಗಳು ತಮ್ಮ ಧನ್ಯವಾದಗಳನ್ನು ಅರ್ಪಿಸಿ, ತಮಗೆ ಸನ್ಮಾನಿಸಿದಕ್ಕೆ ಪುರಜನರನ್ನು ಅಭಿನಂದಿಸಿದರು.

ಇಲ್ಲಿಯ ಬ ಎಸ್ಸಿಂ ಉಪಾಧ್ಯಾಯರ ಸಂಘದವರು ಏರ್ಪಡಿಸಿದ ಶಿಕ್ಷಣ ಪ್ರದರ್ಶನ ಸಮಾರಂಭವನ್ನು ದಕ್ಷಿಣ ಜಿಲ್ಲಾ ಕಲೆಕ್ಟರ್ ಧೊರೆಗಳವರು ಬರುವ ತಿಂಗಳ ೬ನೇ ತಾರೀಕಿನ ದಿವಸ ತೆರೆಯುವರು. ಅಂದಿನಿಂದ ಶಿಕ್ಷಣಕ್ಕೆ ಸಂಬಂಧವಾದ ಭಾಷಣಗಳೂ, ವಿವಿಧ ವಿನೋದಾವಳಿಗಳೂ ನಡೆಯಲಿರುವುವು. ಎಲ್ಲರಿಗೂ ಸ್ವಾಗತವಿದೆ.

ಇದೇ ಬರುವ ತಾ ೨೮ನೇ ಆದಿತ್ಯವಾರ ಪೂರ್ವಾಹ್ನ ಗಂಟೆ ೧೦ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ದ ಕ ಜಿಲ್ಲಾ ಐಡೆಡ್ ಎಲಿಮೆಂಟರಿ ಶಾಲಾ ಅಧ್ಯಾಪಕರ ಪರಿಷತ್ತು ಜರಗಲಿರುವುದರಿಂದ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಖಾಸಗೀ ಶಾಲಾ ಅಧ್ಯಾಪಕ ವರ್ಗದವರು ತಂಡತಂಡವಾಗಿ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮಂಗಳೂರು ನಗರಸಭಾ ಅಧ್ಯಕ್ಷರಾದ ಮ ರಾ ರಾ ಡಾಕ್ಟರ ಓಬ್ಬೀ ಶೆಟ್ರುವರು ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿರುವರು.

ಮದ್ರಾಸ್ ನ್ಯಾಯ ವಿಧಾಯಕ ಸಭೆಗೆ ಚುನಾಯಿಸಲ್ಪಟ್ಟಿರುವ ಪ್ರೊಫೆಸರ್ ಸಿ ಜೆ ವಾರ್ಕಿಯವರನ್ನು ಪರಿಷತ್ತನ್ನು ಕರೆಯಲು ಕೇಳಿಕೊಳ್ಳಲಾಗುವುದು ಎಂದು ದ ಕ ಜಿಲ್ಲಾ ಐಡೆಡ್ ಪ್ರಾಥಮಿಕ ಶಾಲಾ ಅಧ್ಯಾಪಕ ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಶ್ರೀಮತಿ ಕಮಲಾ ದೇವಿಯವರು ಮೈಸೂರು ಮತ್ತು ಬೆಂಗಳೂರಿನಲ್ಲಿ ಯಾವ ತರದ ಚುನಾವಣಾ ಪ್ರಚಾರಕಾರ್ಯ ನಡಿಸದಂತೆ ಖಾಸಗಿ ನಿವಾಸದಲ್ಲಿ ಸಭೆ ನಡಿಸದಂತೆ ಮೈಸೂರು ಸರಕಾರವು ನಿಷೇಧ ಹಾಕಿರುವುದನ್ನು ಪಂಡಿತ ಜವಾಹರಲಾಲರು ಖಂಡಿಸಿರುವರು. ಶ್ರೀಮತಿಯವರು ಇದೇ ತಾ ೨೦ರಲ್ಲಿ ಮಂಗಳೂರಿನಿಂದ ಮಡಿಕೇರಿಗೆ ಹೋಗಿ ಅಲ್ಲಿ ಕಾಂಗ್ರೆಸ್ ಪ್ರಚಾರದ ಕುರಿತು ಭಾಷಣಗಳನ್ನಿತ್ತು, ಅಲ್ಲಿಂದ ಬೊಂಬಾಯಿಗೂ ಬೊಂಬಾಯಿಂದ ಡೆಲ್ಲಿಯ ನೇಶನಲ ಕನ್ವೆನ್ಶನಿಗೂ ಹೋಗಿ ಎಪ್ರಿಲ್ ತಿಂಗಳ ಸುಮಾರಿಗೆ ದಕ್ಷಿಣ ಕನ್ನಡಕ್ಕೆ ಹಿಂತಿರುಗುವರು.

ಪುತ್ತೂರು— ಇಲ್ಲಿಯ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ವಕೀಲ್ ಶ್ರೀ ಬಿ ಶಿವರಾಯರು ತಮ್ಮ ಅಧ್ಯಕ್ಷತನಕ್ಕೆ ರಾಜೀನಾಮೆಯನ್ನು ಕಳುಹಿಸಿರುವರು. ಪುತ್ತೂರಿನಲ್ಲಿ ಕಾಂಗ್ರೆಸ ಕೆಲಸಗಾರರೊಳಗಿನ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣವೆಂದು ತಿಳಿಯಬರುತ್ತದೆ.

ಕುಂಬಳೆ— ಇಲ್ಲಿಯೂ ಸಹ ಎಸೆಂಬ್ಲಿ ಚುನಾವಣೆಯು ಏನೊಂದೂ ಗಲಾಟೆಯಿಲ್ಲದೆ ಯಶಸ್ವಿಯಾಗಿ ತಾ ೨೦ರಲ್ಲಿ ನಡೆಯಿತು. ಕಾಂಗ್ರೆಸ್ ಕೆಲಸಗಾರರ ಪ್ರಯತ್ನದಿಂದ ಕಾಂಗ್ರೆಸ್ಸಿಗೆ ಶೇಕಡಾ ೬೦ಕ್ಕೆ ಕಮ್ಮಿಯಾಗದಂತೆ ಓಟುಗಳು ಅರಸಿನ ಬಣ್ಣದ ಪೆಟ್ಟಿಗೆಗೆ ಬೀಳಬಹುದಾಗಿ ಅಂದಾಜು ಮಾಡಲಾಗಿದೆ. ಇಲ್ಲಿಯ ಪೋಲಿಂಗ್ ಸ್ಟೇಶನಿನಲ್ಲಿಯೂ ಕಾರು, ಬಸ್ಸುಗಳಿದ್ದರೂ, ಕಾಂಗ್ರೆಸ್ ಕೆಲಸಗಾರರ ಸಿಸ್ತಿನ ಪರಿಣಾಮವಾಗಿ ಮತದಾರರಾದ ಗಂಡಸರೂ ಹೆಂಗಸರನೇಕರೂ ಕಾಲುನಡಿಗೆಯಿಂದಲೇ ಬಂದು ಹಳದಿ ಪೆಟ್ಟಿಗೆಯಲ್ಲಿ ತಮ್ಮ ಓಟಿನ ಕಾಗದಗಳನ್ನು ಹಾಕಿದುದನ್ನು ನೋಡಿದುದಾದರೆ ಕಾಂಗ್ರೆಸ್ಸು ಸಂಸ್ಥೆಯ ಮೇಲಿನ ಜನರಿಗಿರುವ ವಿಶ್ವಾಸವು ವ್ಯಕ್ತಪಡಿಸುವುದು.

ತಾರೀಕು ೧೬ರಲ್ಲಿ ನಡೆದ ಕ್ರಿಶ್ಚಿಯನ್ ಸೀಟಿನ ಚುನಾವಣೆಯಲ್ಲಿಯೂ ಸಹ ಕಾಂಗ್ರೆಸ್ಸು ಉಮೇದ್ವಾರರಾದ ಪ್ರೊ। ಸಿ। ವಾರ್ಕಿಯವರಿಗೂ ಹೆಚ್ಚಿನ ಓಟುಗಳು ಸಿಕ್ಕಿ ಜಯಶೀಲರಾಗಿರಬೇಕೆಂಬುದಾಗಿ ಅಂದಿನ ಮತದಾರರ ಉತ್ಸಾಹದಿಂದಲೇ ತಿಳಿಯಬಹುದಾಗಿದೆ.

ಉಡುಪಿ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ ೧೬ರಲ್ಲು ನಡೆದ ಮದ್ರಾಸು ಕೌನ್ಸಿಲಿನ ಅಪ್ಪರ್ ಹೌಸಿನ ಸ್ಥಾನಕ್ಕೆ ಪ್ರತಿಸ್ಪರ್ಧಿಗಳಾಗಿದ್ದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಮತ್ತು ಶ್ರೀ। ಕೆ ಸದಾಶಿವ ಅಡಿಗರ ಪೈಕಿ ನಮ್ಮ ತಾಲೂಕಿನಲ್ಲಿ ಮೊದಲನೆಯವರಿಗೇ ಬಹುಮತ ಸಿಗಬಹುದಾಗಿ ವಿಶ್ವಾಸವಿದೆ. ಅಂತೆಯೇ ತಾ ೧೬ಕ್ಕೆ ನಡೆದ ಕ್ರಿಶ್ಚಿಯನ್ ಸೀಟಿಗೆ ಕಾಂಗ್ರೆಸ್ ಉಮೇದ್ವಾರರಾದ ಪ್ರೊ। ಸಿ ಜೆ ವಾರ್ಕಿಯವರಿಗೂ ಬಹಳ ಹೆಚ್ಚಿನ ಮತಗಳು ದೊರಕಿವೆಯೆಂದು ತಿಳಿದುಬರುತ್ತದೆ.

ತಾ ೧೮ಕ್ಕೆ ಜರಗಿದ ಮದ್ರಾಸು ಎಸೆಂಬ್ಲಿಯ ಸ್ಥಾನಕ್ಕೆ ನಿಂತಿದ್ದ ಜಸ್ಟೀಸ್ ಪಾರ್ಟಿಯ ಶ್ರೀ। ದಿವಾನ್ ಬಹದ್ದೂರ್ ಮಹಾಬಲ ಹೆಗ್ಡೆ ಮತ್ತು ಶ್ರೀ। ಎ ಬಿ ಶೆಟ್ಟಿ (ಕಾಂಗ್ರೆಸ್ ಉಮೇದ್ವಾರ) ರೊಳಗಣ ಸ್ಪರ್ಧೆಯು ಇಡೀ ಜಿಲ್ಲೆಯಲ್ಲಿ ಅತ್ಯಂತ ಉತ್ಸಾಹ ಪೋಟಾಪೋಟಿಯನ್ನುಂಟುಮಾಡಿತ್ತು. ಹಲವೆಡೆ ತಂಟೆತಕರಾರುಗಳಾಗಬಹುದೆಂದೂ ಊಹಿಸಲಾಗಿತ್ತು. ಪೋಲೀಸ ಬಂದೋಬಸ್ತು ಯೋಗ್ಯವಾಗಿದ್ದುದರಿಂದ ಕಾಂಗ್ರೆಸ್ ಕೆಲಸಗಾರರೂ ಸ್ವಯಂಸೇವಕರೂ ಶಾಂತತೆಯಿಂದ ವರ್ತಿಸಿದ ದರಿಂದ ಎಲ್ಲೂ ಶಾಂತಿಭಂಗವಾಗಲಿಲ್ಲ. ಕಲ್ಯಾಣಪುರದಲ್ಲಿ ಮಾತ್ರ ಜಸ್ಟೀಸ್ ಕಡೆಯ ಕೆಲಸಗಾರರ ವರ್ತನೆ ಯೋಗ್ಯವಾಗಿಲ್ಲದುದರಿಂದ ಪೋಲೀಸಿನವರು ಸ್ವಲ್ಪ ಬಲಾತ್ಕಾರ ಉಪಯೋಗಿಸಿ ಗಲಭೆಯೇಳದಂತೆ ಮಾಡಿದರು. ದಿವಾನ್ ಬಹದ್ದೂರರ ಪ್ರಬಲ ಸ್ಥಾನಗಳೆಂದಿದ್ದ ಬ್ರಹ್ಮಾವರ ಹಿರಿಯಡ್ಕ ಶಿರಿಯಾರ ಪಡುಬಿದ್ರಿ ಕಾಪು ಮೊದಲಾದೆಡೆಗಳಲ್ಲೂ ಕಾಂಗ್ರೆಸಿಗೆ ಬಹುಮತ ಸಿಕ್ಕಿರುವುದೆಂದು ತಿಳಿದುಬರುತ್ತದೆ. ಅಂತೂ ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಎ ಬಿ ಶೆಟ್ಟಿ ಮತ್ತು ಶ್ರೀ। ಕೆ ಈಶ್ವರನವರಿಬ್ಬರೂ ಯೋಗ್ಯ ಬಹುಮತದಿಂದ ಆರಿಸಿ ಬರುವುದರಲ್ಲಿ ಸಂದೇಹವಿಲ್ಲ.

ತಾ ೨೦ಕ್ಕೆ ಸ್ಥಳೀಯ ಸೈಂಟ್ ಸಿಸಿಲಿಯಾ ಗರ್ಲ್ಸ್ ಹೈಸ್ಕೂಲಿಗಾಗಿ ಹೊಸದಾಗಿ ಕಟ್ಟಿಸಲಾಗಿದ್ದ ಕಟ್ಟಡದೊಂದರ ಪ್ರವೇಶಸಮಾರಂಭವು ಮಂಗಳೂರಿನ ಬಿಷಪ್ಪರಿಂದ ಜರಗಿಸಲ್ಪಟ್ಟಿತು. ಊರ ಸಭ್ಯಸ್ಥರೂ ಮಹಿಳೆಯರನೇಕರೂ ಆಮಂತ್ರಿತರಾಗಿದ್ದರು. ವಿದ್ಯಾರ್ಥಿಗಳ ಪ್ರದರ್ಶನವೂ ವಿನೋದಾವಳಿಗಳೂ ಇದ್ದುವು.

ತಾ ೨೪ನೇ ಅಪರಾಹ್ನ ೪ ಗಂಟೆಗೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ಜರಗಲಿಕ್ಕಿದೆ. ಚಾಲ್ತಿ ವರ್ಷದ ಅಂದಾಜುಪಟ್ಟಿಯ ಪರಿಶೀಲನೆಯೂ ಮುಂದಣ ವರ್ಷದ ಅಂದಾಜುಪಟ್ಟಿಯ ಯೋಜನೆಯೂ ಆಗತಕ್ಕದ್ದಿದೆ. ಮುನಿಸಿಪಾಲಿಟಿಯನ್ನು ಹೂಡುವುದಕ್ಕೆ ಮುಂಚಿತವಾಗಿ ತಯಾರಿಸಲಾದ ಅನಂತರ ಸ್ಪೆಶಲ್ ಆಫೀಸರರು ಅಂದಾಜುಮಾಡಿದ್ದ ತಲುವಾಯಿ ಕೊತ್ತಿನ ತೆರಿಗೆಯ ಒಟಿನಲ್ಲಿ ರಿವಿಜನ್ ಮತ್ತು ಅಪ್ಪೀಲುಗಳ ಕನಿಕರದಿಂದ ಉತ್ಪನ್ನ ಬಹಳ ಕಡಿಮೆಯಾಗಿರುವುದೇನೋ ನಿಜ. ಆದರೆ ಎಲ್ಲಾ ಬಗೆಗಳ ತೆರಿಗೆಗಳು ಪ್ರಥಮ ಬಾರಿ ನಾಗರಿಕರ ಮೇಲೆ ಹೇರಿದ್ದು ತೀರಾ ಜಟಾಗಿರುತ್ತ ಇನ್ನೂ ಬರುವ ವರ್ಷದ ಆದಾಯವನ್ನು ಹೆಚ್ಚಿಸುವುದಕ್ಕಾಗಿ ತೆರಿಗೆಗಳನ್ನು ವೃದ್ಧಿಗೊಳಿಸುವ ಆಲೋಚನೆಯಿದೆಯೆಂದು ತಿಳಿದುಬರುತ್ತದೆ. ಸರಕಾರದ ಮಂಜೂರಿನಂತೆ ಕೊತ್ತಿನ ತೆರಿಗೆಯನ್ನು ಶೇಕಡಾ ೧೧ರಿಂದ ವಿದ್ಯಾ ತೆರಿಗೆಯು ಬಾಬ್ತು ೧೩ಕ್ಕೇರಿಸಿದ್ದರಿಂದ ಕೊತ್ತಿನ ತೆರಿಗೆಯನ್ನು ೮ಕ್ಕೆ ಇಳಿಸಬೇಕೆಂದೂ ಕೌನ್ಸಿಲಿನ ಠರಾವನ್ನು ಸರಕಾರವು ಅಂಗೀಕರಿಸಿಲ್ಲ. ಅದ್ದರಿಂದ ಯಾವ ಬಗೆಯಿಂದಲಾದರೂ ಸದ್ಯಕ್ಕೆ ಮುನಿಸಿಪಲ್ ತೆರಿಗೆಗಳನ್ನು ವೃದ್ಧಿಸದೆ ಆರ್ಥಿಕ ಮುಗ್ಗಟ್ಟಿನಿಂದ ಕಂಗೆಟ್ಟ ನಾಗರಿಕರ ಸ್ಥಿತಿಗತಿಗಳನ್ನು ಸರಿಯಾಗಿ ಪರ್ಯಾಲೋಚನೆಯಿಂದ ಕೌನ್ಸಿಲರು ವರ್ತಿಸುವರೆಂದು ಹಾರೈಸಲಾಗುತ್ತದೆ.

ಎಸೆಂಬ್ಲಿ ಚುನಾವಣೆಗೆ ಕುಂದಾಪುರ ಡಿವಿಜನ್ ಜನರಲ್ ಸೀಟಿಗೆ ಕೊಂಗ್ರೆಸ್ ಉಮೇದ್ವಾರರಾದ ಶ್ರೀ। ಎ ಬಿ ಶೆಟ್ಟಿಯವರಿಗೆ ೩೯,೮೦೧ ಮತ್ತು ಜಸ್ಟಿಸ್ ಉಮೇದ್ವಾರರಾದ ದಿವಾನ್ ಬಹದ್ದೂರ್ ಮ ಹಾಬಲಹೆಗ್ಡೆಯವರಿಗೆ ೧೫,೬೦೦ ಮತಗಳೂ ದೊರಕಿದ್ದು ಕೊಂಗ್ರೆಸ್ ಉಮೇದ್ವಾರರೇ ೨೪,೨೦೦ ಮತಗಳ ಹೆಚ್ಚಿಗೆಯಿಂದ ಆರಿಸಲ್ಪಟ್ಟಿರುತ್ತಾರೆ. ಅಲ್ಲದೆ ಹರಿಜನ ಸ್ಥಾನಕ್ಕೆ ಕಾಂ। ಉಮೇದ್ವಾರರಾದ ಶ್ರೀ। ಕೆ ಈಶ್ವರ ೧೪೨೫, ಜಸ್ಟಿಸ್ ಉಮೇದ್ವಾರರಾದ ಶ್ರೀ। ಬಾಬು ೮೭೮ ಮತ್ತು ಶ್ರೀ ಗೋಪಾಲ ಸಾಲಿಯಾನ (ಪೀಪಲ್ಸ್ ಪಾರ್ಟಿ) ೧೨೮೬ ಮತಗಳನ್ನು ಪಡೆದವರಾಗಿ, ಕೊಂಗ್ರೆಸ್ ಉಮೇದ್ವಾರರೇ ಜಯಶೀಲರಾಗಿರುತ್ತಾರೆ. ದಕ್ಷಿಣ ಕನ್ನಡದಲ್ಲಿ ಪ್ರಬಲ ಪೋಟಾಪೋಟಿಯ ಸ್ಥಳವೆಂದು ಜಸ್ಟೀಸ್ (ಸರಕಾರದ) ಪಕ್ಷಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಸ್ಪರ್ಧೆಯ ಪರೀಕ್ಷೆಯಲ್ಲಿ ಕಾಂಗ್ರೆಸ್ ಜಯಶೀಲವಾದುದು ಅತ್ಯಂತ ಗೌರವಾಸ್ಪದವೂ, ರಾಷ್ಟ್ರಪತಿಗಳು ಆಜ್ಞೆಯಿತ್ತ ಕಾಂಗ್ರೆಸು ಉಮೇದ್ವಾರರು ಸರ್ವರೂ ಜಯಶೀಲಗೊಳಿಸಬೇಕೆಂದು ಆಶಿಸಿದುದು ಸಫಲವಾಯಿತಕ್ಕೆ.

ಮದ್ರಾಸು ಎಸೆಂಬ್ಲಿ.

ಇಂಡಿಯನ್ ಕ್ರಿಶ್ಚಿಯನ್ (ದ ಕ ಮಲಬಾರು, ನೀಲಗಿರಿ)

ಪ್ರೊ। ಸಿ ಜೆ. ವಾರ್ಕಿ (ಕೊಂಗ್ರೆಸ್)
11,281 ವೋಟು.

ಮಿ। ಎಮ್ ಎಸ್ ಶ್ರೀನ್ನ (ಜಸ್ಟಿಸ್)
8,864 ಓಟುಗಳು

ಜನರಲ್ ಸೀಟುಗಳು

ಕುಂದಾಪುರ ಡಿವಿಜನ್

ಶ್ರೀ। ಎ ಬಿ. ಶೆಟ್ಟಿ, (ಕೊಂಗ್ರೆಸ್)
39,801 ವೋಟುಗಳು

ದಿ ಬಹದ್ದೂರ್ ಎಂ ಮಹಾಬಲ ಹೆಗ್ಡೆ
(ಜಸ್ಟಿಸ್) 15,600 ಓಟ ಗಳು

(ಶೆಡ್ಯೂಲ್ ಕಾಸ್ಟ್)

ಶ್ರೀ। ಕೆ ಈಶ್ವರ (ಕೊಂಗ್ರೆಸ್) 1425
ಶ್ರೀ। ಬಾಬು (ಜಸ್ಟಿಸ್) 878
ಶ್ರೀ। ಗೋಪಾಲ ಸಾಲಿಯಾನ
(ಪೀಪಲ್ಸ್) 1286

ಮಂಗಳೂರು ಡಿವಿಜನ್.—

ಶ್ರೀ। ವೆಂಕಟ್ರಾಯ ಬಾಳಿಗ
(ಕೊಂಗ್ರೆಸ್) 14 408

ಶ್ರೀ ಲಕ್ಷ್ಮಪ್ಪ ರೈ (ಜಸ್ಟಿಸ್) 5240 ಓಟುಗಳು

ಪುತ್ತೂರು ಡಿವಿಜನಿಂದ—

ಶ್ರೀ। ಕೆ ಆರ್ ಕಾರಂತ (ಕೊಂಗೆಸ)
18,427 ಓಟ ಗಳು

ಶ್ರೀ। ಪೈಂದೂರು ನರಸಿಂಗ ರಾವ್ (ಸ್ವತಂತ್ರ)
4 565 ಓಟುಗಳು

ಕೌನ್ಸಿಲು ಚುನಾವಣೆಯ ಫಲಿತಾಂಶ

ಕೌನ್ಸಿಲಿನ ಓಟುಗಳ ಗಣತಿಯು ಇದೇ ತಾ ೨೩-೨ ೩ನೇ ಮಂಗಳವಾರ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಸಮ್ಮುಖದಲ್ಲಿ ಕಲೆಕ್ಟರ್ ಆಫೀಸಿನಲ್ಲಿ ನಡೆಯಿತು.

ಧರ್ಮಸ್ಥಳ ಮಂಜಯ್ಯ ಹೆಗ್ಡೆ (ಸ್ವತಂತ್ರ
524 ಮತಗಳು)

ಶ್ರೀ ಕೆ ಸದಾಶಿವ ಅಡಿಗ (ಸ್ವತಂತ್ರ)
802 ಮತಗಳು

ನೋಟೀಸು.

ದಕ್ಷಿಣ ಕನ್ನಡ ಸಬ್ ಕೋರ್ಟಿನಲ್ಲಿ

ಓ ಎಸ್ 779 1936

ಗುರ್ಪುರ ನಾರಾಯಣ ಪ್ರಭು—ವಾದಿ

1 ಪೆರಂಪಳ್ಳಿ ರಾಮನಾಥ ನ್ಯಾಕ 2 ಪೆರಂಪಳ್ಳಿ ರಾಘವೇಂದ್ರ ನ್ಯಾಕ, 3 ಪೆರಂಪಳ್ಳಿ ಸುಂದರ ಮಗಾನೆ ನರಸಿಂಹ ನ್ಯಾಕ, ನಾಗಪ್ಪ ಯಾನೆ ಮಂಜ ನಾಥ ನ್ಯಾಕರ ಮಕ್ಕಳು ಉಡುಪಿ ಕಸಬೆಯಲ್ಲಿರುವವರು—ಪ್ರತಿವಾದಿಗಳು

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,—ಸದ್ರಿ ಪ್ರತಿವಾದಿಗಳು ಅವಿಭಕ್ತ ಕುಟುಂಬದವರಾಗಿ ನಡಿಸುವ ವ್ಯಾಪಾರದ ಪ್ರಯೋಜನಕ್ಕೆ ಪ್ರತಿವಾದಿರ ಬಗ್ಗೆ 1ನೇ ಪ್ರತಿವಾದಿಯು ತಾ. 21-7-36ರಲ್ಲಿ ವಾದಿಗೆ ಬರಕೊಟ್ಟ ಹುಂಡಿಯ ಅಸ್ಲು ರೂ 400 ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ 8-8-1937ಕ್ಕೆ ಇಟ್ಟಿರುವುದರಿಂದ, ಆ ದಿನ ಹಗ್ಲು 11 ಘಂಟೆಗೆ 2, 3ನೇ ಪ್ರತಿವಾದಿರು ಸ್ವತಃ ಯಾ ವಕೀಲರ ಮುಖಾಂತರ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಉದಾಹರಣೆಯನ್ನು ಕೊಡತಕ್ಕದ್ದು ತಪ್ಪಿದರೆ ಅವರ ಗೈರಹಾಜರಿಯಲ್ಲಿ ಸದ್ರಿ ದಾವೆ ಎಕ್ಸಪಾರ್ಟಿಯಾಗಿ ತೀರ್ಮಾನವಾಗುವುದು.

ಗುರ್ಪುರ ನಾರಾಯಣ ಪ್ರಭು.
ಮಂಗಳೂರು, 24-2-37. ವಾದಿ.

Distributors for South Kanara—.

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಸರಕಾರದಲ್ಲಿ ರಜಿಸ್ಟರ್ ಮಾಡಲ್ಪಟ್ಟ ಪ್ರಸಿದ್ಧವಾದ

ಸ್ಥಾಪನಾ 1909

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕೆಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿವಂತವೈದ್ಯ

ರೋಗಗಳ ನಾಮಗಳು—ಕ್ಷಯ ರೋಗ, [illegible] ಕಾಲರಾ (ಮಾರಿರೋಗ) ಪ್ಲೇಗು, [illegible] ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, [illegible] ರೋಗ, ಗಂಡಮಾಲೆ [illegible]

[illegible]

[illegible]

ತಕ್ಕೊಳ್ಳುವ ಪ್ರಮಾಣ—[illegible]

ನಮ್ಮ ವಿಳಾಸ — ಎಚ್. ಎಂ. ನಮುಲ್ಲಾ, ಸಂಪಾದಕ ಅರ್ಕೆಶಫಾ ಹೆಡ್ ಆಫೀಸು, [illegible] ಶಹಾಪೂರ [ಬೆಳಗಾಂವಿ]

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9-50	ಸಂಜೆ 4-20
ಮಿಕ್ಸಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ. 2-40
ಕಿಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1 20
ಕಾಸರಗೋಡು ಪೆಸೆಂಜರು	ಸಂಜೆ 3.20	

ಬಹಳ ಕಡಿಮೆಯಾದ ಕ್ರಯ.

ಆಟೊಮೆಟಿಕ್ ಅಲಾರಂ ಪಿಸ್ತಲ್.



ಇದು ನೋಡುವುದಕ್ಕೆ [illegible] ಅಸಲು ಪಿಸ್ತೂಲಿನಂತಿರುವುದು. ಇದರಿಂದ ಹತ್ತು ಸೆಕಂಡುಗಳಲ್ಲಿ [illegible] ಗುಂಡುಗಳನ್ನು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದು ಮನೆಯಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು. [illegible] ಉಪಯೋಗಿಸುವುದು [illegible] ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೂಲ್ ಕೂಡ ಕಳುಹಿಸುವೆವು. ಪಿಸ್ತೂಲ್ ಒಂದು ಆರ್ಡರು ಮಾಡುವವರಿಗೆ [illegible] ಸ್ಟಾರ್ಟ್ ಲೈಟ್ ಒಂದು ಇನಾಮ ಸೇರಿಸಿ ಕಳುಹಿಸುವೆವು. ಪಿಸ್ತೂಲು [illegible] ಸಹಿತ [illegible] ಟಪಾಲು ಖರ್ಚು ಪ್ರತ್ಯೇಕ.

ಸ್ವಾನ್ ಹೌಸ್,
ನಂ. ೩, ಇರುಳಪ್ಪನ ಬೀದಿ, ಮದ್ರಾಸು.

ಕಳೆದ 30 ವರ್ಷಗಳಿಂದಲೂ
ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡು
ತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

'ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕ ಪೇಟೆಗಳನ್ನು ಮುಖ್ಯವಾಗಿ ಇನ್ನಿತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ 'ಬಿಡಿ ಸಂಚಿಕೆ'ಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಶರ್ತಗಳಿಗಾಗಿ ಬರೆಯಿರಿ.

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

- ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ.
- ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.
- ಚಂದ್ರಮರ್ಸ್—ವಾಂತಿಭೇದಿ, ಅತಿಸಾರಕ್ಕೆ.
- ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
- ವೃದ್ಧಿಕಾಸವ—ನಿತ್ರಾಣಕ್ಕೆ.
- ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.
- ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.
- ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.
- ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಪ್ರಾಥಮಿಕ ಶಿಕ್ಷಣಪ್ರಸರಣಕ್ಕಾಗಿ ಸ್ಥಳೀಯ ಅಧಿಕಾರಿಗಳಿಗೆ ಸರಕಾರದವರು ಮಾಡುವ ಸಹಾಯ

ಆರ್ಥಿಕ ಅಭ್ಯಂತರಗಳಿಲ್ಲದಿರುವ ಎಲ್ಲಾ ಕಡೆಗಳಲ್ಲಿಯೂ ಪ್ರಾಥಮಿಕ ಶಿಕ್ಷಣವನ್ನು ಬೋರ್ಡು ಶಾಲೆಗಳ ಮೂಲಕವೇ ವಿಸ್ತರಿಸಬೇಕೆಂದು ಹಿಂದೀ ಸರಕಾರದವರು ನಿಶ್ಚಯಿಸಿದ್ದು ಅವರು 1918ರಲ್ಲಿ ಕೈಕೊಂಡ ಅವರ ವಿದ್ಯಾಧೋರಣೆಯಿಂದ ವ್ಯಕ್ತವಾಗುತ್ತದೆ. ಈ ಧೋರಣೆಗನುಸಾರವಾಗಿ ಸರಕಾರದವರು ಈ ಈ ಅಧಿಪತ್ಯದಲ್ಲಿರುವ ಸ್ಥಳೀಯ ಅಧಿಕಾರಿಗಳಿಗೆಲ್ಲ ಹೊಸ ಹೆಚ್ಚಿನ ಬಾಲಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಲಿಕ್ಕೂ ಆ ಶಾಲೆಗಳಲ್ಲಿ ಶಿಬಂದಿಯನ್ನು ಹೆಚ್ಚಿಸಿ ಅವುಗಳಲ್ಲಿಯ ಅಧ್ಯಾಪಕರ ಸಂಬಳವನ್ನು ಹೆಚ್ಚಿಸಲಿಕ್ಕೂ ಹೆಚ್ಚು ಹಣ ಸಹಾಯವನ್ನು ಮಾಡಿರುತ್ತಾರೆ. ಪ್ರಾಥಮಿಕ ಶಿಕ್ಷಣ ವಿಸ್ತರಣೆಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸುವುದಕ್ಕಾಗಿ 1920ರಲ್ಲಿ ಮದ್ರಾಸು ಪ್ರಾಥಮಿಕ ಶಿಕ್ಷಣದ ಆಕ್ಟೆಂಬ ಹೆಸರಿನ ಶಾಸನವನ್ನು ಮಾಡಿದರು ಈ ಆಕ್ಟಿನ ಮೇರೆಗೆ ಸರಕಾರದ ಅನುಮತಿಯನ್ನು ಪಡೆದು ಅಲ್ಲಲ್ಲಿಯ ಸ್ಥಳೀಯ ಅಧಿಕಾರಿಗಳು ವಿದ್ಯಾ ತೆರಿಗೆಯೊಂದನ್ನು ಹೊರಿಸಿ ಪ್ರಾಥಮಿಕ ಶಿಕ್ಷಣ ಪ್ರಸರಣಕ್ಕೋಸ್ಕರ ತಮಗೆ ಬೇಕಾಗುವ ಹೆಚ್ಚಿನ ಹಣವನ್ನು ಸಂಪಾದಿಸಿಕೊಳ್ಳಬಹುದು. ಈ ತೆರಿಗೆಯಿಂದ ಒಟ್ಟಾಗುವ ಪ್ರತಿಯೊಂದು ರೂಪಾಯಿಗೆ ಸರಕಾರದವರು ತಮ್ಮ ಪ್ರಾಂತಿಕ ಫಂಡಿನಿಂದ ಒಂದು ರೂಪಾಯಿ ಕೂಡಿಸಿ ಸ್ಥಳೀಯ ಅಧಿಕಾರಿಗಳಿಗೆ ಕೊಡುತ್ತಾರೆ ಈ ತೆರಿಗೆಯನ್ನು ಪ್ರಸ್ತುತದಲ್ಲಿ ಎಲ್ಲಾ ಜಿಲ್ಲಾ ಬೋರ್ಡುಗಳೂ ಇಲ್ಲಿಯ 82 (ಮ್ಯುನಿಸಿಪಾಲಿಟಿಗಳು) ಪೌರ ಸಭೆಗಳಲ್ಲಿ 45 ಪೌರ ಸಭೆಗಳು ವಸೂಲು ಮಾಡುತ್ತಾರೆ ಈ ತೆರಿಗೆಯಿಂದ ಒಟ್ಟಾರೆ ವರ್ಷಂಪ್ರತಿ ಅವರಿಗೆಲ್ಲ ಕೂಡಿ 21.89 ಲಕ್ಷ ರೂಪಾಯಿ ಸಿಕ್ಕುತ್ತದೆ, ಒಟ್ಟಾರೆ ಅವರಿಗೆಲ್ಲ ಹಂಚಲಿಕ್ಕೆಂದು ಸರಕಾರದವರೂ ವರ್ಷಂಪ್ರತಿ 21.89 ಲಕ್ಷ ರೂಪಾಯಿ ಕೊಡುತ್ತಾರೆ ಇದಲ್ಲದೆ ಸರಕಾರದವರಿಂದ ಪ್ರತ್ಯೇಕ ಅನುಮತಿಯನ್ನು ಸ್ಪಷ್ಟವಾಗಿ ಪಡೆದು ಸ್ಥಳೀಯ ಅಧಿಕಾರಿಗಳು ಸ್ಥಾಪಿಸಿರುವ ಇತರ ಕೆಲವು ಶಾಲೆಗಳನ್ನು ನಡೆಸುವುದಕ್ಕೆ ವರ್ಷಂಪ್ರತಿ 68 65 ಲಕ್ಷದಷ್ಟು ಗ್ರಾಂಟುಗಳನ್ನು ಸರಕಾರದವರು ಅವರಿಗೆ ಕೊಡುತ್ತಾರೆ. ಹೀಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರದವರು ಸ್ಥಳೀಯ ಅಧಿಕಾರಿಗಳಿಗೆ ಒಟ್ಟಾರೆ 85 54 ಲಕ್ಷ ರೂಪಾಯಿಯು ಸಹಾಯವನ್ನು ವರ್ಷಂಪ್ರತಿ ಮಾಡುತ್ತಾರೆ ಇದು ಸ್ಥಳೀಯ ಅಧಿಕಾರಿಗಳು ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುವ ಜುಮ್ಲಾ ಖರ್ಚಿನ ಶೇಕಡಾ 70 ಆಗುತ್ತದೆ

2. ಸ್ಥಳೀಯ ಅಧಿಕಾರಿಗಳ ಕಾರ್ಯಕ್ಷೇತ್ರಗಳೊಳಗೆ ನಿಶ್ಚಿತ ಕೆಲವು ಕಡೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಆಕ್ಟಿನಲ್ಲಿ ಎಡೆಯಿದೆ ಈ ತನಕ ಒಟ್ಟಾರೆ 27 ಪೌರ ಸಭೆಯವರು ಈ ಕಡ್ಡಾಯ ಶಿಕ್ಷಣದ ನಿಯಮಗಳಿಂದ ಪ್ರಯೋಜನವನ್ನು ಹೊಂದಿರುತ್ತಾರೆ, ಸರಕಾರದ ಅನುಮತಿಯನ್ನು ಪಡೆದು ಮಲಬಾರು, ಉತ್ತರ ಆರ್ಕಾಡು, ರಾಮನಾಡು ಚೆಂಗಲ್ಪಟ್ಟು ಮತ್ತು ಪಶ್ಚಿಮ ತಂಜಾಪೂರಿನ ಜಿಲ್ಲಾ ಬೋರ್ಡಿನವರು ತಮ್ಮ ತಮ್ಮ ಜಿಲ್ಲೆಗಳೊಳಗೆ ಕೆಲವು ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ರೂಪದಿಂದ ಜ್ಯಾರಿಗೆ ತಂದಿರುತ್ತಾರೆ

3. ಶಾಲೆಗಳನ್ನು ನಡೆಸುವುದಕ್ಕೆ ಕೊಡುವ ಗ್ರಾಂಟುಗಳನ್ನಲ್ಲದೆ ಪ್ರಾಥಮಿಕ ಶಾಲೆಗಳ ಬಗ್ಗೆ ಕಟ್ಟೋಣಗಳನ್ನು ಕಟ್ಟಿಸುವ ಖರ್ಚಿನ ಸಲುವಾಗಿಯೂ ಸರಕಾರದವರು ಸ್ಥಳೀಯ ಅಧಿಕಾರಿಗಳಿಗೆ ಗ್ರಾಂಟುಗಳನ್ನು ಕೊಡುತ್ತಾರೆ. ಸಾಧಾರಣವಾಗಿ ಅಂಥಾ ಕಟ್ಟೋಣಗಳಿಗೆ ಬೇಕಾಗುವ ಖರ್ಚಿನ ಅರ್ಧಾಂಶದಷ್ಟು ಗ್ರಾಂಟುಗಳನ್ನು ಕೊಡುತ್ತಾರೆ

4. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಕೆಳಗೆ 656 ಪ್ರಾಥಮಿಕ ಶಾಲೆಗಳಿವೆ ಅವುಗಳಲ್ಲಿ 806 ಶಾಲೆಗಳನ್ನು ಪ್ರಾಂತಿಕ ಫಂಡಿನಿಂದಲೇ ನಡೆಸುವುದಾಗಿರುತ್ತದೆ ಕಳೆದ ವರ್ಷದಲ್ಲಿ ಈ ಶಾಲೆಗಳನ್ನು ನಡೆಸುವ ಬಗ್ಗೆ ಜಿಲ್ಲಾ ಬೋರ್ಡಿನವರು 50,587 ರೂಪಾಯಿ ವಿದ್ಯಾ ತೆರಿಗೆಯನ್ನು ವಸೂಲು ಮಾಡಿ ಸರಕಾರದವರು ಅಷ್ಟೇ ಹಣವನ್ನು ಕೂಡಿಸಿಕೊಟ್ಟರು ಈ ಜಿಲ್ಲೆಯಲ್ಲಿರುವ 656 ಶಾಲೆಗಳಲ್ಲಿ 587 ಹುಡುಗರ ಶಾಲೆಗಳು, ಉಳಿದ 89 ಬಾಲಿಕಾ ಪಾಠಶಾಲೆಗಳು

ಈ ಜಿಲ್ಲೆಯಲ್ಲಿರುವ ಎಲ್ಲಾ ಶಾಲೆಗಳನ್ನು ನಡೆಸಲಿಕ್ಕಾಗಿ ಸರಕಾರದವರು ಜಿಲ್ಲಾ ಬೋರ್ಡಿಗೆ ಕಳೆದ ವರ್ಷ ರೂಪಾಯಿ 382,281 ಕೊಟ್ಟಿರುವರು

5 1ರಿಂದ 3ನೇ ತರಗತಿಯ ತನಕದ ಶಿಕ್ಷಣವನ್ನು ಎಲ್ಲಾ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಧರ್ಮಾರ್ಥವಾಗಿಯೇ ಕೊಡುತ್ತಾರೆ ಪತಿತ ವರ್ಗದವರು ಮತ್ತು ಮಾಪಿಳ್ಳೆ ಮುಕ್ಕವರ ಬಗ್ಗೆ ಸ್ಥಾಪಿಸಿದ ಶಾಲೆಗಳಲ್ಲಿಯೂ ಶಾಲಾ ಫೀಸನ್ನು ಕೊಡಬೇಕಾದ್ದಿಲ್ಲ. ಎಲ್ಲಾ ಮಹಮ್ಮದೀಯ ಬೋರ್ಡು ಶಾಲೆಗಳಲ್ಲಿ (ಇಂಥವು 77 ಹುಡುಗರ ಶಾಲೆಗಳೂ 11 ಬಾಲಿಕಾ ಪಾಠಶಾಲೆಗಳೂ ಇವೆ.) ಮತಸಂಬಂಧವಾದ ಶಿಕ್ಷಣವನ್ನು ಕೊಡುತ್ತಾರೆ. ಹೀಗೆಯೇ ಮಹಮ್ಮದೀಯ ವಿದ್ಯಾರ್ಥಿಗಳು 20 ಯಾ ಹೆಚ್ಚು ಇರುವ ಬೇರೆ ಶಾಲೆಗಳಲ್ಲಿಯೂ ಮತಸಂಬಂಧವಾದ ಶಿಕ್ಷಣವನ್ನು ಕೊಡುತ್ತಾರೆ.

6. ಪತಿತವರ್ಗದವರನ್ನು ಎಲ್ಲಾ ಬೋರ್ಡು ಶಾಲೆಗಳಲ್ಲಿಯೂ ಸೇರಿಸಿಕೊಳ್ಳುತ್ತಾರೆ ಪ್ರಸ್ತುತದಲ್ಲಿ ಅಂತಹ ಅನೇಕ ಶಾಲೆಗಳಲ್ಲಿ ಪತಿತವರ್ಗದ ವಿದ್ಯಾರ್ಥಿಗಳಿರುವರು ಪತಿತ ವರ್ಗದವರ ಶಿಕ್ಷಣ ಅಭಿವೃದ್ಧಿಗಾಗಿ ಲೇಬರ್ ಶಾಖೆಯವರು ಸ್ಥಾಪಿಸಿದ ಪ್ರತ್ಯೇಕ 47 ಶಾಲೆಗಳಿವೆ. ಇವುಗಳಲ್ಲಿ 1,877 ವಿದ್ಯಾರ್ಥಿಗಳು ಧರ್ಮಾರ್ಥವಾಗಿ ಶಿಕ್ಷಣ ಹೊಂದುತ್ತಾರೆ.

ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ

O. S. No. 66/1933 R. E. A. No. 113/1936 and R. E. P. No. 275/1935

ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನ ಅಮ್ಲಜ್ಯಾರಿ ಅರ್ಜಿದಾರ

ಮತ್ತು

ಬಿಸಮ್ಮ ಕೂಡಾ 9 ಜನರು....ರ್‍ಸ್ಪೊಂಡೆಂಟರು

ಇವರೊಳಗೆ

ಮೃತ ಅಹಮ್ಮದ ಇಬ್ರಾಹಿಮ್ಮರ ಹೆಂಡ್ತಿ ಅವ್ವಾಬಿರೀಗೆ—ಸಪ್ಲಿಮೆಂಟಲ್ 8ನೇ ರ್‍ಸ್ಪೊಂಡೆಂಟಳೀಗೆ —

ಮೇಲ್ಕಂಡ ವ್ಯಾಜ್ಯದಲ್ಲಿ ಆದ ಡಿಕ್ರಿಗೆ ಜವಾಬ್ದಾರಿ ಇರುವ ರ್‍ಸ್ಪೊಂಡೆಂಟರ ಹಕ್ಕಿನ ಸ್ಥಿರಾಸ್ತಿಗಳು ಏಲಂಪಡಿಸಬೇಕೆಂತ ವಗೈರೆ ಅಪೇಕ್ಷಿಸಿ ಮೇಲ್ಕಂಡ ಅರ್ಜಿದಾರನು ಸದ್ರಿ ರ್‍ಸ್ಪೊಂಡೆಂಟರ ಮೇಲೆ ದಾಖಲು ಮಾಡಿದ ಮೇಲ್ಕಂಡ ಅಮ್ಲಜ್ಯಾರಿಯಲ್ಲಿ ಸದ್ರಿ ಅರ್ಜಿದಾರನು ಪಾರ್ಟಿಗೆ ನಿಂತು ಆಸ್ತಿ ಪಡಕೊಳ್ಳುವರೆ ಮಾಡಿದ ಮೇಲ್ಕಂಡ R E A No 118/1936ನೇ ಅರ್ಜಿಯು 1937ನೇ ಇಸವಿ ಮಾರ್ಚಿ ತಿಂಗಳ ತಾ 10ನೇ ಬುಧವಾರ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ತನಿಕೆಗೆ ಇಟ್ಟಿದೆ. ಇದಲ್ಲದೆ ಸದ್ರಿ R. E P No 275/1935ನೇ ಅಮ್ಲಜ್ಯಾರಿಯು ಸಹಾ ಸೇಲ ನೋಟೀಸು ಬಗ್ಗೆಂತಾ ಮೇಲ್ಕಂಡ ತಾ 10-3-1937ಕ್ಕೆ ತನ್ನಿಗೆ ಇಟ್ಟಿದೆ. ಈ ತಾರೀಕಿಗೆ ನೀವುಸ್ವತಹಾ ಯಾ ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಲಿಕ್ಕೆ ತಪ್ಪಿದರೆ ನಿಮ್ಮನ್ನು ಶಿವಾಯಿ ಮಾಡಿ ಸದ್ರಿ R.E.A 118/1936 ಮತ್ತು R. E P No 275/1935ನೇ ವ್ಯವಹರಣೆಗಳು ಮುಂದರಿಸಲಾಗುವವು —ತಿಳಿದಿರುವದು

ಮಂಗಳೂರು, 20—2—'37. K P Gopalkrishna Rao, *Vakil for Petitioner*

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಟ್ರಂಕ್ ರಸ್ತೆಗಳೂ ಎರಡನೇ ತರಗತಿಯ ರಸ್ತೆಗಳೂ

ಮದ್ರಾಸು ಸರಕಾರದಿಂದ ಪ್ರಕಟಿಸಲ್ಪಟ್ಟದ್ದು.

ಪುತ್ತೂರಿನಿಂದ, ಕಾಸರಗೋಡು– ವಿಟ್ಲ ರಸ್ತೆಯಲ್ಲಿರುವ ಪೆರ್ಲ ಕ್ಕೆ,—ಅಯ್ಯಾಪು, ಇರ್ದೆ, ಬೆಟ್ಟಂಪಾಡಿ, ಪಾಣಾಜೆ, ವ ಇತರ ಯೂನಿಯನುಗಳಲ್ಲದ ಪಂಚಾಯತಗಳಿರುವ ಗ್ರಾಮಗಳನ್ನು ದಾಟಿ, ಶೀದಾ ಹೋಗಲಿಕ್ಕೆ ಮಾಡಿದ ಪರ್ಲ, ಪೆರ್ಲದ್ದು ಜುಬಿಲಿ ರಸ್ತೆಬಗ್ಗೆ ರೂ 12,000

ಯೂನಿಯನ ಗಳಲ್ಲದ ಪಂಚಾಯತಗಳ ಅಧಿಕಾರದ ಹೊರಗಿರುವ ಗ್ರಾಮಗಳ ಮಧ್ಯ ಜಿಲ್ಲಾ ಬೋರ್ಡಿನವರು ರಸ್ತೆಗಳನ್ನು ಮಾಡಿಸುವ ಬಗ್ಗೆ ರೂ 10,620

ಜಿಲ್ಲಾ ಬೋರ್ಡಿನವರು ಮಾಡಿಸುವ ಜುಬಿಲಿ ಭಾವಿಗಳಿಗೆ ರೂ 11,100

ಜಿಲ್ಲಾ ಕಲೆಕ್ಟರರೂ ರೆವೆನ್ಯು ಡಿವಿಜನಲ್ ಆಫೀಸರರೂ ತಾವು ಸರ್ಕೀಟು ಬೆಳೆಸುವಾಗ ರಸ್ತೆಗಳನ್ನು ಸಂದರ್ಶಿಸಿ ಅವುಗಳನ್ನು ಹೇಗೆ ಉತ್ತಮ ಸ್ಥಿತಿಗೆ ತರಬಹುದು ಎಂದು, ಅಗತ್ಯವಿರುವಲ್ಲೆಲ್ಲಾ ಜಿಲ್ಲಾ ಬೋರ್ಡಿಗೂ ಸರಕಾರಕ್ಕೂ ತಿಳಿಸುತ್ತಾರೆ

GODREJ

CHAVI BRAND

ಟ್ಯಾಲೆಟ್ ಸಾಬೂನುಗಳು



ನನ್ನ ಮುಖವನ್ನು ಸ್ವಲ್ಪ ನೋಡಿ. ಅದೆಷ್ಟು ಅಸಹ್ಯ ಕಾಣುತ್ತದೆ?

ಚರ್ಮಕ್ಕೆ ಕೆಡುಕನ್ನುಂಟುಮಾಡಿ, ಬೆವರಿನ ಬರುವಿಕೆಯನ್ನು ತಡೆಕಟ್ಟುವ, ಅನಿರ್ಮಲ ಮತ್ತು ಅಪಾಯಕರ ಸಾಮಾನುಗಳಿಂದ ತಯಾರಿಸಲ್ಪಟ್ಟ ಅಗ್ಗ ಬೆಲೆಯ ಸಾಬೂನುಗಳನ್ನು ಉಪಯೋಗಿಸಿದುದೇ ನನ್ನ ಈ ಅವಸ್ಥೆಗೆ ಕಾರಣವಾಗಿರುತ್ತದೆ

ಆದರೆ ಅದೇ ಮುಖವನ್ನು ಈಗ ನೋಡಿ–ಎಂಥಾ ಬದಲಾವಣೆಗಳು!

ಇದು ನಿರ್ಮಲವಾದ ಸಸ್ಯ ತೈಲಗಳಿಂದಲೇ ತಯಾರಿಸಲ್ಪಟ್ಟ ಗೊದ್ರೆಜ ಸಾಬೂನುಗಳ ಉಪಯೋಗದಿಂದಾದುದು ಗೊದ್ರೆಜ ಸಾಬೂನಿನ ಸುವಾಸನೆಯು ಮೃದು ನೊರೆಯು ಚರ್ಮರಂಧ್ರಗಳನ್ನು ಹೊಕ್ಕಿ ದೇಹದ ಮೇಲಿನ ಎಲ್ಲ ಕಲ್ಮಶಗಳನ್ನು ನಿರ್ಮೂಲಿಸಿ, ಮೋಹಕವಾದ ಶುಭ್ರ ಮುಖವರ್ಣವನ್ನು ಕೊಡುತ್ತದೆ

ಗೊಡ್ರೆಜ್ ಟ್ಯಾಲೆಟ್ ಸಾಬೂನುಗಳು

ನಂ 1 ಮತ್ತು 2

ಮನುಷ್ಯನ ಚರ್ಮಕ್ಕೆ ಅತ್ಯವಶ್ಯ ಸಹಕಾರಿ ವಸ್ತುಗಳಿಂದು ಪ್ರಪಂಚದ ಸ್ಪೆಷಲಿಷ್ಟರುಗಳಿಂದ ಪುರಸ್ಕರಿಸಲ್ಪಟ್ಟ ಸಾಧನಗಳಿಂದ ವಿಶೇಷ ಗೋದ್ರೆಜ್ ವಿಧಾನದಿಂದ ತಯಾರಿಸಿದ್ದುದು

ಎಲ್ಲಾ ನಮೂನೆಯ ಗೊದ್ರೇಜ್ ಸಾಬೂನು ಖಾತ್ರಿಯಾಗಿ ಪ್ರಾಣಿಚರ್ಬಿರಹಿತವಾಗಿರುತ್ತದೆ.

ನಕಲಿಗಳಿಗೆ ಮೋಸ ಹೋಗದಿರಿ.

ಪೆಟ್ಟಿಗೆಯ ಮೇಲೆ "ಚಾವಿ" ಗುರುತಿಲ್ಲದ ಯಾವ ತಯಾರಿಕೆಯೂ ಶ್ರೇಷ್ಠ ಗೊದ್ರೆಜ್ ತಯಾರಿಕೆಯಾಗಿರಲಾರದು

ಪ್ರಾಮುಖ್ಯ ಪ್ರತಿನಿಧಿಗಳ —

ನಾದಿರ್ ಷಾ ಪ್ರಿಂಟರ್ ಎಂಡ್ ಕೊ. ಬೊಂಬಾಯಿ.

ಕಾರ್ಖಾನೆ.—ಗೋದ್ರೆಜ್ ಸೋಪ್ಸ್ ಲಿಮಿಟೆಡ್

316 ದಿ ಲೆಸ್ಲಿ ರೋಡ್ ಬೊಂಬಾಯಿ 11

"ಬ್ರೇಕ್ ಪಿಲ್ಸ್"

Invented by a Himalayan Sage.

ಸ್ತ್ರೀಪುರುಷರಿಗೆ ಆನಂದವನ್ನುಂಟು ಮಾಡುವುದು ಈ ಮಾತ್ರೆಗಳೆ.

ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು.

ಇದರಲ್ಲಿ ರಸವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು.

ಗುಣವಿಲ್ಲದಿದ್ದಲ್ಲಿ ಹಣ ವಾಪಾಸು.

೬೦ ಮಾತ್ರೆಗಳು ರೂ ೫-೦-೦. ೩೦ ಮಾತ್ರೆಗಳು ರೂ ೩-೦-೦.

(ಕಾಗದ ಪತ್ರಗಳು ಇಂಗ್ಲಿಷಿನಲ್ಲಿಯೇ)

ಡಾ। ಎಂ. ಎಸ್. ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸಿಕ್ಟ್

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಷಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ESTD. 1906.

The Canara Banking Corporation Udipi Ltd.

INCORPORATED IN BRITISH INDIA

NOTICE.

Fixed Deposits

Will be received at all offices at the following rates:—

3 months	2½% p. a.
6 months & 9 ,,	3% p. a.
12 months......	3½% p. a.
24 months ...	4% p. a.

Office of the Corporation,
UDIPI,
15th February 1937.

M. Srinivas Prabhu,
Manager.

ನೋಟೀಸು.

ನಿರಖು ಠೇವಣಾತಿಗಳು

ನಮ್ಮ ಎಲ್ಲಾ ಆಫೀಸುಗಳಲ್ಲಿಯೂ ಈ ಕೆಳಗಿನ ಬಡ್ಡಿ ದರಗಳಲ್ಲಿ ಸ್ವೀಕರಿಸಲಾಗುವುದು.—

3 ತಿಂಗಳಿಗೆ	ಶೇಕಡಾ 2½%
6 ಮತ್ತು 9 ತಿಂಗಳಿಗೆ	,, 3%
12 ತಿಂಗಳಿಗೆ	,, 3½%
24 ತಿಂಗಳಿಗೆ	,, 4%

ಕೊರ್ಪರೇಶನ್ ಆಫೀಸು,
ತಾ. 15-2-1937.

ಎಂ. ಶ್ರೀನಿವಾಸ ಪ್ರಭು,
ಮೆನೇಜರ್

ಮನಶ್ಚಿಂತೆಗಳು, ವ್ಯಾಪಾರದಲ್ಲಿ ಆರ್ಥಿಕ ನಷ್ಟ, ಆಕಸ್ಮಿಕ ಅನಾಹುತ, ದುಸ್ಸಹವಾದ ಚಿಂತೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತೆ ಇತ್ಯಾದಿ ಸಾವಿರಾರು ಕಾರಣಗಳಿಂದ

ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

೩೦ ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾರಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ, ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ. ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ.

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪರ್ಮಾರಸನ್ ಮಾತ್ರೆಗಳನ್ನು ಉಪಯೋಗಿಸಿರಿ.

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ. 4—0—0. ವಿ. ಪಿ. ಚಾರ್ಜು ಬೇರೆ.

ರೋಗಿಯ ಈ ಕುರಿತು ವಿವರಗಳನ್ನು ವಿಶದವಾಗಿ ಬರೆಯಿರಿ:—

ಹೆಸರು, ವಿಳಾಸ, ಜಾತಿ, ಸ್ತ್ರೀಯೋ ಪುರುಷ, ಪ್ರಾಯ, ದೇಹದ ಭಾರ, ವಿವಾಹಿತನೋ ಅಲ್ಲವೋ, ರೋಗದ ಲಕ್ಷಣ ನಿದ್ರೆ, ಆಹಾರ, ಮಲಶೋಧನೆ, ಅಲ್ಲದೆ ಉಬ್ಬಸ ಜ್ವರ, ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು.

ಪರ್ಮಾರಸನ್ ಪ್ರೊಡಕ್ಟ್ಸ್, (ಇಂಡಿಯಾ.)

ಬ್ರೆಂಚ್: ಪಿ. ವಿ. ಕಾಮತ್,

ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್, ಹಿಸ್ಟೀರಿಯಾ ಎಂಡ್ ಇನ್ಸೆನಿಟಿ ಎಕ್ಸ್‌ಪರ್ಟ್,

೩೮೬, ಲೇಮಿಂಗ್ಟನ್ ರೋಡ್, ಮುಂಬಯಿ. ಮಾರ್ಕೆಟ್ ರೋಡ್, ಉಡುಪಿ.

ಮುದ್ದಾದ ಮುದ್ರಣವನ್ನು ಆಶಿಸುವಿರೇ? ಹಾಗಾದರೆ,—

ಶಾರದಾ ಛಾಪಖಾನೆ, ಮಂಗಳೂರು

ಇಲ್ಲಿಗೆ ಬರೆಯಿರಿ, ಅಥವಾ ಬನ್ನಿರಿ.

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ [illegible] ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗದೇ ಎಂದು ಇಚ್ಛಿಸುವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸಾಗುತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು, ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು:— ಡಾ॥ ಪಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳದಾಮಾಹಿಮ್; ಕಾಕೇ: ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಪಥ್ಯವು ಕ್ರಯ: ರೂ. ೪—೦—೦. ವಿ. ಪಿ. ಆಣೆ ೮.

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ.

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. **ಬಾಟ್ಲಿ 1ಕ್ಕೆ ರೂ. 1—8—0.**

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಳ್ಳಿ.

ಈಗಿನ ದಿವಸಗಳಲ್ಲಿ ಬೇಕಾದದ್ದು

ಉತ್ತಮವಾದದ್ದು. ಅಗ್ಗವಾದದ್ದಲ್ಲ!

ಪರಿಮಳದಲ್ಲಿಯೂ ರುಚಿಯಲ್ಲಿಯೂ ಪರಿಪೂರ್ಣವಾದದ್ದು.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್ ಇದ್ದು ಅಂದವಾದ ಪೊಟ್ಟಣಗಳಲ್ಲಿ ಸಿಗುತ್ತದೆ.



ಶ್ರೇಷ್ಠಗುಣಗಳು ನಿಮ್ಮನ್ನು ಕಣ್ಣನ್ ದೇವನ್ ಚಹಾವನ್ನೇ ಕೊಂಡುಕೊಳ್ಳುವಂತೆ ಒತ್ತಾಯ ಮಾಡುತ್ತದೆ.

ಕಣ್ಣನ್ ದೇವನ್ ಚಹಾ ಪೊಟ್ಟಣಗಳ ಬರುವಿಕೆಯನ್ನು ನಿರೀಕ್ಷಿಸಿರಿ.

Sole Agents: **The Kerala Tea Syndicate,**

PONANI—(S. Malabar.)

A3

Regd. No. M. 8406

ಸ್ವದೇಶಾಭಿಮಾನಿ

ESTABLISHED 1906

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರಧಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ದೊರೆಯಲನುಪಮರತ್ನಗಳು ಸಾಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ, ತೆರಳಬಲ್ಲರೆ ತೊರೆದ ಧೀರರು ನಿಶ್ಚಿತಾರ್ಥವನು ॥ ೧ ॥

ಮಂಗಳೂರು ತಾ. ೫ನೇ ಮಾರ್ಚಿ ೧೯೩೭ (5 – 3 – '37) ಸಂಚಿಕೆ ೯



ನಮ್ಮ ಜಿಲ್ಲೆಯು ನದನದಿಗಳ ತೊಲಗಿಗೆ ಹೆಸರಾದುದೆಂದು ಹೇಳಬೇಕಿಲ್ಲ. ಅದರ
ಸಾವಿರಾರು ಮನೋಹರ ದೃಶ್ಯಗಳಲ್ಲಿ ಇದೊಂದು. ಕುಮಾರಧಾರಾ
ನದಿಯು "ಕೋಣಮಜಲು" ಎಂಬ ಹಳ್ಳಿಯಲ್ಲಿ ಹಾಯುವಾಗ
ಉಂಟಾದ ಮಹಾ ಜಲಘರ್ಷಣವು ತೀರಾ ಗಂಭೀರವಾದ
ನೋಟವೇ ಸರಿ

A3

ಬೊಬ್ಬಿಲಿಯಂತಹ ಸಂಸ್ಥಾನದಲ್ಲಿ ವ್ಯಾಪ್ತಿ ಸ್ವರಶಹ ಅಧಿಕಾರಿಗಳು ಇರುವುದು ವಿಚಿತ್ರವಾಗಿಲ್ಲ. ಪಂಡಿತ ಜವಾಹರಲಾಲರಂತಹ ಪ್ರಮುಖರನ್ನು ಅಥವಾ ಶ್ರೀಮತಿ ಸರೋಜಿನಿದೇವಿಯರಂತಹ ಕವಿಯಿತ್ರಿಯುವರನ್ನು ಯಥೋಚಿತವಾಗಿ ಉಪಚರಿಸಲು ಇವರು ಮುಂಕೊಳ್ಳದಿದ್ದಲ್ಲಿ, ಬೊಬ್ಬಿಲಿಯ ಸಂಸ್ಥಾನಾಧಿಪತಿಯರ ಗೌರವಕ್ಕೆ ಕುಂದು ಉಂಟಾಗುತ್ತಿದ್ದಿಲ್ಲವೆ?

o o o

ನಮ್ಮ ಸಂಸ್ಥಾನದ ಪಾರುಪತ್ಯ ನೋಡುತ್ತಿದ್ದ, ಹದಿನೈದು ವರ್ಷಗಳ ಮಹಾನುಭವಿಗಳಾಗಿರುವ ಜಸ್ಟಿಸ್ ಪಂಗಡದವರ ಅಧಿನಾಯಕರಾಗಿರುವ ಬೊಬ್ಬಿಲಿಯ ರಾಜರು, ಅಖಿಲಭಾರತದ ಮುಖಂಡರೊಡನೆ ತಾವೂ ಒಬ್ಬರಾಗಿದ್ದು, ಅವರಲ್ಲಿಗೆ ಬಂದವರನ್ನು ಅವರ ಆಡಳಿತದಾರನು ಸತ್ಕರಿಸಲಾರದೆ ಹೋದನೆಂದರೆ ರಾಜರಿಗೆ ಏನು ಎನಿಸುತ್ತಿದ್ದಿತು?

o o o

ಅದಕ್ಕಾಗಿ, ಆ ಮುಖಂಡರು ಸಭೆಗೂಡಿಸಿದರೆ, ಸ್ಥಳವು ನಿರ್ಮಲವಾಗುವಂತೆ ಅಲ್ಲಿ ಸಭೆ ಗುಡಿಸುವವರೂ ಬಂದರು ಅತಿಥಿಗಳ ಮೆರವಣಿಗೆಗೆ ಬರಬೇಕಾಗಿದ್ದ ಆನೆಗಳು, ಅತಿಥಿಗಳನ್ನು ಸನ್ಮಾನಿಸಬಂದವರನ್ನು ಎಚ್ಚರವಾಗಿರಲೆಂದು ಬೆದರಿಸಿದುವು ಅತಿಥಿಗಳ ಭಾಷಣಕ್ಕೆ ಹಿಮ್ಮೇಳವಾಗಿ ಢೋಲು ಬಾರಿಸಲೂ ಬೇಕಾಗಿ ತೋರಿತು,—ಲೌಡ್‌ಸ್ಪೀಕರಿನ ಬದಲು ಅತಿಥಿಗಳು ಸನ್ಮಾನಿತರಾಗಿ ಹಿಂದೆ ಬಿಟ್ಟು ಹೋದ ಹೂಮಾಲೆಗಳನ್ನು ಕಸಗುಡಿಸುವವರು ತಮ್ಮ ಕಸಬರಿಕೆಗಳ ಮೇಲಿರಿಸಿ ಮೆರೆದರು

o o o

ಕೊನೆಯದು ಅನ್ಯಾಯ ಕಸಗುಡಿಸಿದರೆ ಸಂಸ್ಥಾನವು ನಿರ್ಮಲವಾಗುತ್ತಿತ್ತು ಅವರು ಹೂಮಾಲೆಗಳಿಂದ ಕಸಬರಿಕೆಯನ್ನಲಂಕರಿಸಿದರು ಸಂಸ್ಥಾನದಲ್ಲಿ,-ದೇಶವನ್ನು ನಿರ್ಮಲವಾಗಿರಿಸಲು, ಜನಸೇವೆಮಾಡುವ ಕೆಲಸಗಾರರಿಗೆಲ್ಲ ಇದರಿಂದ ಗೌರವ ದೊರೆಯಿತು

o o o

ರೈಲ್ವೆ ಕೆಲಸಗಾರರ ಮುಂದಾಳು ಶ್ರೀಯುತ ವಿ ವಿ ಗಿರಿಯವರು ಇವರೇ ಬೊಬ್ಬಿಲಿ ರಾಜರ ಎದುರಾಗಿ ಚುನಾವಣೆಗೆ ನಿಂತರು ರಾಜರು ಜಮೀನ್ದಾರರ ಪ್ರತಿನಿಧಿಗಳಾಗಿ ಬರುತ್ತಿದ್ದರೆ ಚೆನ್ನಾಗುತ್ತಿತ್ತು ಆದರೆ, ಪ್ರಜೆಗಳನ್ನು ಪಾಲಿಸುವುದರಲ್ಲಿ ಇವರ ಶ್ರೇಯಸ್ಸು ಹೆಚ್ಚಿನದೆಂದು ರುಜುವಡಿಸಲು ಈ ಸಾಮಾನ್ಯ ವೋಟರರಿಂದಲೇ ಚುನಾಯಿಸಿಕೊಳ್ಳಬೇಕೆಂದು ಅವರಲ್ಲಿ ಆಶ್ಯಸೆ ರಾಜರು ಕೆಲಸಗಾರರ ಮುಂದಾಳು ಹೀಗೆ ಚುನಾವಣೆ ನಡೆಯಿತು

o o o

ಕಸಬರಿಕೆಗೆ ಹೂಮಾಲೆ ಹಾಕಿದ್ದ ರೀತಿಯನ್ನು ಗೌರವಿಸಲು, ಬಡಜನಗಳು ಕಲಿತುಕೊಂಡರು ರಾಷ್ಟ್ರಸಭಾಧ್ಯಕ್ಷ ಜವಾಹರಲಾಲರ ಕೊರಳ ಹೂಮಾಲೆಗಳು ಬೊಬ್ಬಿಲಿಯ ಕಸಗುಡಿಸುವವರ ಕಸಬರಿಕೆಗಳನ್ನು ಅಲಂಕರಿಸಿದ ಬಳಿಕ, ಜನರು ಕೌನ್ಸಿಲುಗಳಲ್ಲಿ ಹದಿನೈದು ವರ್ಷಗಳಿಂದ ಕೂಡಿಸಿಟ್ಟ ಕಸದಕ್ಕುಂಗಾರ ಗುಡಿಸಲು ಅಗತ್ಯವಾಗಿಯೂ ಕೆಲಸಗಾರರ ಸಂಘದ ಮುಂದಾಳುಗಳನ್ನೆ ಚುನಾಯಿಸಬೇಕಾಯಿತು.

o o o

ಗಿರಿಯವರು ಗೆದ್ದರು. ಬೊಬ್ಬಿಲಿಯಲ್ಲಿ ಸಾ-ಸಾ-ಸಾವಿರಾರು ವೋಟರರು ರಾಜರಿಗೆ ವೋಟುಕೊಡಬಂದಿರುತ್ತಾ, ಕೊಂಗ್ರೆಸ್ ಒಲಂಟೀಯರರ ಬಾಧೆ, ಗಿರಿಯವರ ಚಿತ್ರದ ಬೀಸಾಟುಗಳಿಂದ ಬಾಧೆಯಾಯಿತೆಂದು, ವ್ಯಾಪ್ತ್ರೇಶ್ವರರು ಸೂಚಿಸಿದರು. ಪೋಲೀಸರಿಗೆ ಕೊಂಗ್ರೆಸ್ ಪಕ್ಷದವರನ್ನು ಹಾಸಿಹೊಂದದಂತೆ ಕಾಪಾಡುವುದೂ ಸಾಕಷ್ಟು ಕಷ್ಟವಾಯಿತು; ಅವರು



ಸಮೂಲ ಹೇಗೆ-ನಾಶವಾಗುವದು? ಡಾಕ್ಟರರ ದೃಷ್ಟಿಯು ಖರೇ ಗುಣ ಹೇಗಾಗುವದು ಇದರ ಕಡೆಗೆ ಇರುತ್ತದೆ. ಡಾಕ್ಟರರನ್ನು ಯಾರೂ ವಂಚಿಸರು.

ಆದುದರಿಂದಲೇ ದಮ್ಮಿನಿಂದ ಜರ್ಜರಿತರಾದ ರೋಗಿಗಳಿಗೆ ನಾನು ಪುರೋಹಿತ ಶ್ವಾಸಹಾರಿಯ ಯೋಜನೆ ಮಾಡಿದ ಕೂಡಲೇ ಗುಣವಾಗುವುದಾಗಿ ನನ್ನ ಖಾತ್ರಿಯದೆ ಇದು ನಿಶ್ಚಯ

ಚುಟಿಕೆ ಹೊಡೆಯ ಎವಷ್ಟರಲ್ಲಿ ದದ್ದು ಕಳೆಯುವನು ದಮ್ಮು ಐದು ಮಿನಿಟಿನಲ್ಲಿ ಕಾಲು ತಾಸಿನಲ್ಲಿ, ಅರ್ಧ ತಾಸಿನಲ್ಲಿ ಕಡಿಮೆಯಾಗುವದು ಈ ಹೊಗೆ ಈ ಇಂಜಕ್ಷನ್ ತೆಗೆದುಕೊಂಡ ಕೂಡಲೇ ದಮ್ಮು ಹಿಮ್ಮೆಟ್ಟುವದು ಹೀಗೆ ಹೇಳುವ ಅನೇಕ ಔಷಧಗಳನ್ನು ಯೋಜಿಸಿ ಅನುಭವ ಪಡೆದಿದ್ದೇನೆ ಇವಲ್ಲ ದಮ್ಮು ಪೂರ್ಣ ಗುಣವಾಗದೆ ಒಳಗೆ ಬಹಳ ಅಡಗಿದ್ದು ಈ ಔಷಧಗಳಿಂದ ತಡೆಗಿ ಬಂದ ದಮ್ಮು ಬಹಳೇ ತ್ರಾಸದಾಯಕವಿರುವುದೆಂದು ನನ್ನ ನಿಶ್ಚಿತ ಮತವಾಗಿರುತ್ತದೆ

ದಮ್ಮಿನ ಮೂಲ ಕಾರಣಗಳನ್ನು ಶೋಧಿಸಿ, ಅದರ ಮೇಲೆ ತನ್ನ ಪ್ರಭಾವವನ್ನು ತೋರಿಸಿ ನಿಧಾನವಾದರೂ ನಿಶ್ಚಿತ ಗುಣಕಾರಿಯಾದ ಔಷಧಗಳೇ ದಮ್ಮಿನವರನ್ನು ಉಳಿಸುವವು.

ಪುರೋಹಿತ ಶ್ವಾಸಹಾರಿಯು ದಮ್ಮಿನ ಮೂಲ ಕಾರಣ ಶೋಧಿಸಿ ದಮ್ಮು ಸಂಪೂರ್ಣ ಕಡಿಮೆ ಮಾಡತಕ್ಕ ಔಷಧಗಳಲ್ಲಿ ಅಗ್ರೇಸರವಿರುವದಾಗಿ ನನ್ನ ಅನುಭವವದೆ ದಮ್ಮು, ಛಾತಿ ಹತ್ತುವದು, ಮುಂಚಾವಿನ ಕಸಿಕೆ, ಕಂಠದಾಹ ಮಾಡುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗಗಳನ್ನೂ ನಿವಾರಿಸಲು ಪುರೋಹಿತ ಶ್ವಾಸಹಾರಿ ಪ್ಲೀನ ಉಪಯೋಗಿಸಬೇಕು ಬದ್ಧಕೋಷ್ಠ ಮತ್ತು ಆಮ್ಲಪಿತ್ತ ಹೆಚ್ಚಾದವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ್) ಈ ಔಷಧ ತೆಗೆದುಕೊಂಡರೆ ಹೆಚ್ಚು ಲಾಭಕರ

ಎಲ್ಲ ಸ್ಥಳಗಳ ಕೆಮಿಸ್ಟ್ಸ ಸ್ಟೋರ್ಸ್ ಅಂಗಡಿಗಳಲ್ಲಿ ಈ ಔಷದವು ರೂ ೩, ರೂ ೧-೮-೦ ಮತ್ತು ರೂ ೬ ಹೀಗೆ ಬೇರೆ ಬೇರೆ ಬೆಲೆಯ ಮೂರು ವಿಧ ಪ್ಯಾಕಿಂಗಗಳಲ್ಲಿ ಮಾರಲು ಸಿಗುವದು

ಮುಂಬಯಿ ಏಜಂಟ್ಸ್—

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್ ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ನಂಬ್ರ ೨

(ಹೊರಗಿನ ಊರುಗಳ ವ್ಯಾಪಾರಿಗಳು ಮುಂಬಯಿ ಏಜಂಟರಿಂದ ಮಾಲು ತರಿಸಬೇಕು)

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಹೆದರಿ ಹೆದರಿ ವೋಟುಕೊಟ್ಟರು ಗಿರಿಯವರಿಗೆ ಈ ಸಾ-ಸಾ-ಸಾವಿರ ದೊರೆಯದಿದ್ದರೂ, ಐದು ಸಾವಿರಕ್ಕೆ ಮೀರಿ ವೋಟುಗಳು ರಾಜರಿಗಿಂತ ಹೆಚ್ಚಿಗೆ ದೊರೆತುವು

o o o

ಪುನಃ ಕಸಬರಿಕೆಗೆ ಹೂಮಾಲೆ ಹಾಕಿ ಮೆರವಣಿಗೆ ಆಯಿತೋ ಇಲ್ಲವೊ ತಿಳಿದಿಲ್ಲ ಕಸಬರಿಕೆಗೆ ಮಾಲೆಹಾಕಿ ಮೂಲೆಯಲ್ಲಿಟ್ಟಿರಬಹುದೋ ಏನೊ!

o o o

'ಗಿರಿಯನ್ನೆತ್ತಿದನು ಗೋವರ್ಧನ ದಾರಿ! ಬೆಬ್ಬುಲಿಯು ತಬ್ಬಲಿಯಾಯಿತು!' ಎಂದೆಲ್ಲ ಗೋಡೆಗಳ ಮೇಲೆ ಬರೆದಿರುವರು. 'ಜಸ್ಟಿಸ್ ಪಕ್ಷವೊ ಅಧಿಕಾರವನ್ನು ಹದಿನೈದು ವರ್ಷವಾದರೂ ನೋಡಿದ ಪಕ್ಷ, ಇಂದು ಗೆದ್ದವರೆಂಬವರು ಯಾವಾಗ ಎಲ್ಲಿ ಎಷ್ಟು ಅಧಿಕಾರ ನೋಡಿದವರಂತೆ?' ಎಂದೆಲ್ಲ ಪತ್ರಿಕೆಗಳಲ್ಲಿ ಬರೆದಿರುವರು.

—

ಎಷ್ಟು ತಂಪು ಮತ್ತು ದಣುಪರಿಹಾರಿಯೋ ಅಷ್ಟೇ ಪುಷ್ಟಿಕರವಾದದ್ದು.

ಬೇಸಿಗೆ ಕಾಲದಲ್ಲಿ ತಣ್ಣಗಾದ ಓವಲ್ಟಿನನ್ನು ತೆಗೆದುಕೊಂಡರೆ ಅದು ತಂಪನ್ನೂ ನವಚೈತನ್ಯವನ್ನೂ ಕೊಡುವುದಲ್ಲದೆ ದೇಹದ ಶಕ್ತಿ ಚಟುವಟಿಕೆಯನ್ನು ಅಭಿವೃದ್ಧಿಮಾಡುವ ಪುಷ್ಟಿಯುಕ್ತ ಆಹಾರಗಳು ಅದರಲ್ಲಿ ಸಮೃದ್ಧಿಯಾಗಿವೆ

ಪ್ರಕೃತಿಯಲ್ಲಿರುವ ಉತ್ತಮ ಶಕ್ತಿವರ್ಧಕ ಆಹಾರಗಳಾದ ಹಸಿ ಬಾರ್ಲಿ ಸತ್ವದಿಂದಲೂ ದನದ ಕೆನೆ ಹಾಲಿನಿಂದಲೂ ಓವಲ್ಟಿನ ತಯಾರು ದಾಗಿರುತ್ತದೆ ಬೇಸಿಗೆ ಕಾಲದಲ್ಲಿ ನಿಮ್ಮ ಆರೋಗ್ಯಶಕ್ತಿಯನ್ನು ಉಳಿಸಿಕೊಳ್ಳುವ ಪೌಷ್ಟಿಕಗಳು ಓವಲ್ಟಿನಲ್ಲಿವೆ ಅಲ್ಲದೆ ಓವಲ್ಟಿನಲ್ಲಿ ಆರೋಗ್ಯಕ್ಕೆ ಬೇಕಾದ ಅತ್ಯಗತ್ಯ ವಸ್ತುಗಳಾದ ವಿಟಮಿನುಗಳೂ ಇವೆ

ಓವಲ್ಟಿನ ಪಾನೀಯವನ್ನು ತೆಗೆದುಕೊಂಡು ಅದು ಕೊಡುವ ಮಾನಸಿಕ ಮತ್ತು ದೈಹಿಕ ಚೈತನ್ಯಗಳ ಸುಖವನ್ನು ಅನುಭವಿಸಿರಿ ಓವಲ್ಟಿನಿಗೆ ಗುಣ ಸರಿಸಮಾನವಾಗದ ಬದಲಿಯುಗಳನ್ನು ತ್ಯಜಿಸಿರಿ

ಓವಲ್ಟಿನ್ ಎಲ್ಲರ ವ್ಯಯಕ್ತಿಕ ರುಚಿಗೊಪ್ಪುವಂತಿರುತ್ತದ ಏಕೆ?

ಅನೇಕ ವರ್ಷಗಳ ವರೆಗೆ ಸಂಶೋಧನೆ ಮಾಡಿದಾಗ ಓವಲ್ಟಿನಿನ ಸುವಾಸನೆಯ ರುಚಿಯು ಎಲ್ಲರ ಮಟ್ಟಿಗೂ ಒಪ್ಪುವಂತಹುದಾಗಿದೆ ಎಂದು ತಿಳಿಯ ಬಂದಿದೆ ಇತರ ಇಮಿಟೇಶನ್‌ಗಳಂತೆ ಓವಲ್ಟಿನಲ್ಲಿ ಅಳತೆಯನ್ನು ಹೆಚ್ಚೆಂದು ತೋರಿಸುವುದಕ್ಕಾಗಿ ಮತ್ತು ತಯಾರಿಕೆಯ ವೆಚ್ಚವನ್ನು ಕಮ್ಮಿ ಮಾಡುವುದಕ್ಕಾಗಿಯೂ ಸಕ್ಕರೆಯಂಥಾ ಅನ್ಯ ಪದಾರ್ಥಗಳ ಸಿಹಿಯು ರುಚಿಗೆ ಸಂಬಂಧಪಟ್ಟದ್ದು ಆದುದರಿಂದ ಓವಲ್ಟಿನಿಗೆ ಸಕ್ಕರೆಯನ್ನು ಬೇಕಾದರೆ ಮನೆಗಳಲ್ಲಿ ಉಪಯೋಗಿಸಬಹುದು ಸಕ್ಕರೆಗೆ ಅಮೂಲ್ಯವಾದ ಒಂದು ವಸ್ತುವೆಂದು ಯಾರೂ ಅದಕ್ಕೆ ಹೆಚ್ಚು ಬೆಲೆಯನ್ನು ಕೊಡಲೊಲ್ಲರು ದಿಲ್ಲ

ಓವಲ್‌ಟಿನ್

ಇದನ್ನು ತಣ್ಣಗಾಗಿ ತೆಗೆದುಕೊಂಡರೆ, ಅದು ಬೇಸಿಗೆ ಕಾಲದ ಉತ್ತಮ ಪಾನೀಯವಾಗಿರುತ್ತದೆ

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ

ಏಜಂಟರು —ಜೇಮ್ಸ್ ರೈಟ್ 85 ಎ ರಿಪನ್ ಸ್ಟ್ರೀಟ್, ಕಲ್ಕತ್ತಾ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿಯೂ ಸಿಗುತ್ತದೆ.

OV/470

ರಾಷ್ಟ್ರಪತಿಗಳಿಗೆ ಆಂಗ್ಲಪತ್ರಿಕೆಗಳ ಶ್ಲಾಘನೆ!

ಅವರು ಪ್ರಶಾಂತಸ್ವಭಾವದ ಗೃಹಸ್ಥರಂತೆ!

ಜವಾಹರಲಾಲರು ತಮ್ಮ ಪತ್ನಿಯ ಮರಣಾನಂತರ, ಯೂರೋಪಿನ ಮುಖ್ಯ ರಾಷ್ಟ್ರಗಳನ್ನು ಸಂದರ್ಶಿಸಿದರು. ರಷ್ಯಕ್ಕೂ ಅವರ ಸವಾರಿ ಚಿತ್ತೈಸಿತು. ಅಂದಿನಿಂದ ಅವರು ಸಮತಾವಾದದ ತತ್ವವು ಅದರಲ್ಲಿ ಚೆನ್ನಾಗಿ ಬೇರೂರಿದೆ ಎಂಬ ಈ ತರದ ವರ್ತಮಾನವೊಂದು ಒಂದು ಆಂಗ್ಲ ಪತ್ರಿಕೆಯಲ್ಲಿದೆ 'ಜವಾಹರಲಾಲರು ಸೆರೆಮನೆಯನ್ನು ಕಂಡಷ್ಟು ಸಾರಿ ಪ್ರಪಂಚದಲ್ಲಿ ರಾಷ್ಟ್ರ ಮುಖಂಡರೆನಿಸಿದವರಾರು ಕಾಣಲಿಲ್ಲ ಅವರು ರಷ್ಯದಿಂದ ಹಿಂತಿರುಗಿದಂದಿನಿಂದ ಅವರ ಸಮತಾವಾದದ ತತ್ವಗಳಿಗೆ ಮಹಾತ್ಮಾ ಗಾಂಧಿಯವರು ಕೂಡಾ ಮುಖರಂತಾಗಿದ್ದಾರೆ' ಮುಂದುವರಿಯುತ್ತಾ ಆ ಪತ್ರಿಕೆಯು ಹೀಗೆ ಬರೆಯುತ್ತದೆ. 'ಕಾಂಗ್ರೆಸ್ ಅಧ್ಯಕ್ಷರ ಗೃಹಜೀವನವು, ಬಹಳ ಮೋಹಕವಾದುದೂ ಆಗಿರುತ್ತದೆ ಇಂಗ್ಲೆಂಡಿನ ಶತ್ರುವಾದ ಇವರನ್ನು ಅವರ ಸ್ವಂತ ಮನೆಯಲ್ಲಿ ನೋಡಿದರೆ, ಅವರ ಆ ಲಘು ದೇಹ ಪ್ರಕೃತಿಯಿಂದಲೂ ಅವರ ಹರ್ಷಚಿತ್ತ ಮುಖಭಾವದಿಂದಲೂ ಅವರಲ್ಲಿರುವ ಆ ಅಖಂಡ ಸಿಥ್ಥಾರವು ತಿಳಿಯಲಾಗುವುದಿಲ್ಲ 'ಮಗಳಿಗೆ ತಂದೆಯ ಪತ್ರ' ಎಂಬ ನಾಮಾಂಕಿತ ಅವರ ಪುಸ್ತಕವು ಬಹಳ ಸಾರಸ್ಯವಾಗಿದ್ದು ತಂದೆಯಾದವರೆಲ್ಲರೂ ಅಗತ್ಯವಾಗಿ ಓದಲೇ ಬೇಕಾದ ಪುಸ್ತಕವಾಗಿರುತ್ತದೆ'

---

೯೭ ಜರ್ಮನ್ ವಿಮಾನಗಳನ್ನು ಕೆಡವಿದರು

ಸ್ಪೈನ್ ಸರಕಾರದ ಯುದ್ಧಾಧಿಕಾರಿಗಳು ಪ್ರಕಟಿಸಿರುವ ಒಂದು ವರದಿಯಲ್ಲಿ, ೯೭ ಜರ್ಮನ್ ವಿಮಾನಗಳನ್ನು ಕೆಡಹಲಾಗಿದೆ ಎಂದು ತೋರಿಸಿರುತ್ತಾರೆ ಈ ವರ್ತಮಾನವನ್ನು ಪೆರಿಸಿನಲ್ಲಿರುವ ಸ್ಪೈನಿನ ನ್ಯೂಸ್ ಏಜನ್ಸಿಯವರು ಪ್ರಕಟಿಸಿರುವರು

೯೭ರಲ್ಲಿ ೪೭ ವಿಮಾನಗಳು ಜರ್ಮನಿಯ ದೊಡ್ಡ ವಿಮಾನ ಕಾರ್ಖಾನೆಯಾದ ಹಿನ್ಕೆಲ್ ಫೆಕ್ಟರಿಯಿಂದ ತಯಾರಿಸಲ್ಪಟ್ಟಂತವುಗಳಂತೆ

ಹಿಟ್ಲರನಿಗೆ ವಿರುದ್ಧವಾಗಿ

ಜರ್ಮನಿಯಲ್ಲಿರುವ ಕೆಲವು ಸೋಶಿಯಲಿಸ್ಟ್, ಕೊಮ್ಯೂನಿಸ್ಟ್ ಮತ್ತು ಕೆಥೊಲಿಕ್ ಪಂಗಡದವರು ಒಂದು ಅಂತರಾಷ್ಟ್ರೀಯ ಸ್ನೇಹ ಸಂಘವನ್ನು ಸ್ಥಾಪಿಸಿರುವರು ಇವರು ಗುಪ್ತ ರೀತಿಯಲ್ಲಿ ಹಿಟ್ಲರನಿಗೆ ವಿರುದ್ಧವಾಗಿ ಕೆಲಸ ಮಾಡುತ್ತಲಿರುವರು

ಈ ಸಂಗತಿಯನ್ನು ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಪ್ರಕಟಿಸಿದೆ. ಮೊಸ್ಕೊ ನಗರದ ಕೊಮ್ಯೂನಿಸ್ಟ್ ಇಂಟರ್‌ನೇಶನಲ್ ಸಂಘದವರು ಮೇಲಿನ ಸಂಘದ ಗುಟ್ಟನ್ನು ರಟ್ಟುಮಾಡಿದವರು

೧೯೧೮ರಲ್ಲಿ ಜರ್ಮನಿಗಾದ ಅಪಜಯಕ್ಕಿಂತಲೂ ದೊಡ್ಡ ಅಪಜಯವು, ಯುದ್ಧವನ್ನು ಪ್ರೇರೇಪಿಸುವ ಹಿಟ್ಲರನಿಗೆ ಆಗಿಯೇ ಆಗುವುದು ಎಂದು ಇವರ ಅಭಿಪ್ರಾಯ.

ರಾಷ್ಟ್ರೀಯ ಅರಬ ಸಂಘ.

ಪೆಲೆಸ್ತೀನ್, ಸಿರಿಯಾ, ಇರಾಕ್ ಮತ್ತು ಯೇಮೆನ್ ಪ್ರಾಂತ್ಯಗಳ ರಾಷ್ಟ್ರೀಯ ಭಾವನೆಯ ಅರಬರು ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಲಿದ್ದಾರೆ.

ಪೆಲೆಸ್ತೀನದಲ್ಲಿ ಯಹೂದಿಗಳ ಅಭಿವೃದ್ಧಿಯನ್ನು ತಡೆಗಟ್ಟುವುದಕ್ಕೂ ಇಟೇಲಿ ಟರ್ಕಿಗಳಿಗೆ ಅರಬೀ ಪ್ರಾಂತ್ಯವನ್ನು ವಶಮಾಡಿಕೊಳ್ಳಬೇಕೆಂಬ ಆಶೆಯನ್ನು ತಡೆಗಟ್ಟುವುದಕ್ಕೂ ಇವರ ಈ ಒಪ್ಪಂದವೆಂದು ತಿಳಿದುಬಂದಿದೆ.

ಶ್ರೇಷ್ಠ ಕ್ರೈಸ್ತರೆಂದರೆ ಮಹಾತ್ಮಾ ಗಾಂಧಿಯವರೆನ್ನಬೇಕು!

ಒಬ್ಬ ಮಿಶನರಿಗಳ ಶ್ಲಾಘನೆ.

'ಶ್ರೇಷ್ಠ ಮನುಷ್ಯರೊಳಗೆ ಮಹಾತ್ಮಾ ಗಾಂಧಿಯವರು ಯಾರಿಗೂ ಎರಡನೆಯವರಲ್ಲ' ಹೀಗೆಂದು ರೆವರೆಂಡ್ ಡಬ್ಲ್ಯೂ ಹೆಚ್ ಇವರು ಒಂದು ಭಾಷಣದಲ್ಲಿ ಮಹಾತ್ಮಾ ಗಾಂಧಿಜೀಯವರನ್ನು ತುಂಬಾ ಶ್ಲಾಘಿಸಿದರು ಬ್ರಿಟಿಷ್ ಮತ್ತು ಫಾರೈನ್ ಬ್ಯಾಬಲ್ ಸೊಸ್ಯಾಟಿಯ ಆಶ್ರಯದಲ್ಲಿ ಇವರ ಭಾಷಣವು ಏರ್ಪಡಿಸಿತ್ತು ರೆವರೆಂಡ್ ಹೆಚ್‌ರವರು ೩೦ ವರ್ಷಗಳನ್ನು ಹಿಂದೂಸ್ಥಾನದಲ್ಲಿ ಕ್ರೈಸ್ತ ಮಿಶನರಿಗಳಾಗಿ ಸಂಚರಿಸಿದ್ದಾರೆ ಅಷ್ಟು ಸಮಯದಲ್ಲಿ ಅವರು ಪೋಲಿಸರಾಗಿಯೂ, ಮೇಜಿಸ್ಟ್ರೇಟರಾಗಿಯೂ ಹಿಂದೂಸ್ಥಾನದಲ್ಲಿ ಕೆಲಸಮಾಡಿರುತ್ತಾರೆ ಆದುದರಿಂದ ಅವರಿಗೆ ಹಿಂದೀಯ ರಾಜಕೀಯ ಜೀವನದ ತುಂಬಾ ಅನುಭವವಿದೆ ಭಾರತೀಯರ ಕೇಳಿಕೆಗಳನ್ನು ಪೂರೈಸದೆ ಬ್ರಿಟಿಷರು ತುಂಬಾ ತಪ್ಪುಮಾಡಿರುವರೆಂದು ಅವರು ಹೇಳುತ್ತಾರೆ

ಮಹಾತ್ಮಾ ಗಾಂಧಿಯವರ ವಿಚಾರ ಮಾತನಾಡುತ್ತಾ, ಹೆಚ್‌ರವರು ಹೀಗೆಂದರು 'ಮಹಾತ್ಮಾ ಗಾಂಧಿಯವರು ಉತ್ತಮ ಮನುಷ್ಯರು ಅವರು ಕ್ರೈಸ್ತರೆಂದೆನಿಸಿಕೊಳ್ಳಲಿಕ್ಕೆ ಇಷ್ಟಪಡುವುದಿಲ್ಲವಾದರೂ ಅವರು ಕಾರ್ಯರೂಪದಲ್ಲಿಯೂ ಭಕ್ತಿಯಲ್ಲಿಯೂ ಶ್ರೀ ಯೇಸು ಕ್ರಿಸ್ತನನ್ನು ನಂಬುತ್ತಾರೆ ಅವನಂತೆಯೆ ನಡೆಯುತ್ತಾರೆ

ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚಳವಳಿಕ್ಕಾಗಿ ಹೆಚ್‌ರವರು ತುಂಬ ಸಂತೋಷಪಟ್ಟರು ಹಿಂದೀಯರನ್ನು ಅಸಡ್ಡೆಯಿಂದ ಕಂಡುದರ ಫಲವೆಂದರು ಬ್ರಿಟಿಷರು ಭಾರತಮಾತೆಯನ್ನು ನೀಚತನದಿಂದ ಪೀಡಿಸುವುದೇ ಇದಕ್ಕೆ ಕಾರಣವೆಂದರು ಹಿಂದೀಯರು ಆಂಗ್ಲರನ್ನು ಟೀಕಿಸಿದುದು ಸರಿಯೆಂದು ಇವರು ಒಪ್ಪಿಕೊಂಡರು. ಯಾಕೆಂದರೆ,ಆಂಗ್ಲರು ತಮ್ಮ ಧರ್ಮಶಾಸ್ತ್ರವಾದ ಬ್ಯಾಬಲಿನಂತೆ ನಡೆಯುವುದಿಲ್ಲವೆಂದೂ ಹೇಳಿದರು

ಚೋರಶಾಲೆ.

ಪೆರಿಸಿನ ತರುಣಿಯರಿಗಾಗಿ

ಪೆಜಿನ್, ಅಥವಾ 'ಲಘು ಬೆರಳಿನ ಬುಲೂ' ಎಂದು ಪ್ರಖ್ಯಾತಿ ಪಡೆದಿರುವ ಓರ್ವ ಚೋರ ನಾರೀಶಿರೋಮಣಿಯನ್ನು ಪೆರಿಸಿನ ಪೋಲೀಸರು ಸೆರೆಹಿಡಿದಿರುವರು.

ಫೆಜಿನಳು ಪೆರಿಸಿನ ಅಂಗಡಿಯೊಂದರಲ್ಲಿ ಸಾಮಾನುಕೊಳ್ಳುತಿದ್ದ ಓರ್ವ ಮಹಿಳೆಯ ಕೈಚೀಲದಿಂದ ಹಣವನ್ನು ಅಪಹರಿಸುವ ಯತ್ನದಲ್ಲಿದ್ದಳು ಜೊತೆಯಲ್ಲಿ ಓರ್ವ ಬಾಲಿಕೆಯೂ ಇದ್ದಳು. ಫೆಜಿನಳು ಕದಿಯುತ್ತಿರುವಾಗ ಈ ಬಾಲಿಕೆಯು ಕಾವಲು ನಿಲ್ಲುತಿದ್ದಳು. ಅಂತೂ ಇವರೀರ್ವರನ್ನೂ ಕೋರ್ಟಿಗೆ ಎಳೆದೊಯ್ಯಲಾಯಿತು.

ಫೆಜಿನಳು ಪೆರಿಸಿನ ತರುಣಿಯರನ್ನು ಚೋರವಿದ್ಯೆಗಳನ್ನು ತರಬೇತಿಸುವ ಒಂದು ಶಾಲೆಯನ್ನು ನಡಿಸುತ್ತಿರುವಳೆಂದೂ, ತಾನು ಅಲ್ಲಿಯ ಓರ್ವ ವಿದ್ಯಾರ್ಥಿನಿಯೆಂದೂ ಆ ಬಾಲಿಕೆಯು ಪೋಲೀಸರಿಗೆ ತಿಳಿಸಿದಳು.

ಕೈದುಮಾಡಲ್ಪಟ್ಟ ಸಮಯದಲ್ಲಿ ಫೆಜಿನಳಲ್ಲಿ ೨೦ ಪವನುಗಳಿದ್ದು, ಅವನ್ನು ಅವಳು ೨ ಘಂಟೆಯ ಕಾಲದಲ್ಲಿ ಸಂಪಾದಿಸಿರುವ ಕೆಂದೂ ಹೇಳಿದಳು.

ಅಹಿಂಸಾತತ್ವಕ್ಕೆ ಅಪಜಯವಿಲ್ಲ!

ರಾಜಕೀಯದಿಂದ ನಿವೃತ್ತರಾದ ಮಹಾತ್ಮರ ಉದ್ಗಾರ!

ಪ್ರಸ್ತುತ ಮಹಾತ್ಮರು ರಾಜಕೀಯದಿಂದ ನಿವೃತ್ತರಾಗಿದ್ದಾದರೂ, ಅವರು ಭಾರತಮಾತೆಯ ಸ್ವಾತಂತ್ರ್ಯ ಸಂಗ್ರಾಮವನ್ನು ತ್ಯಜಿಸಿರುವರೆನ್ನುವುದಕ್ಕಾಗುವುದಿಲ್ಲ ಅವರು ಕೈಕೊಂಡಿರುವ ಹರಿಜನನೋದ್ಧಾರ, ಗ್ರಾಮ ಪುನರ್ಜೀವನ ಇವುಗಳನ್ನು ಅವರು ಸಾಧಿಸುವುದು ಜನತನ್ನು ಆರ್ಥಿಕ ಬಂಧನದಿಂದ ಬಿಡುಗಡೆ ಮಾಡಲಿಕ್ಕೆ ಎಂಬ ವಿಶಯವನ್ನು ಎಲ್ಲರೂ ಅರಿತಿರುತ್ತಾರೆ

'ಸ್ವರಾಜ್ಯ ಸಂಗ್ರಾಮವೆಂದರೆ ಅದೊಂದ ಅಂತ್ಯದ ತನಕ ಹೋರಾಡಲ್ಪಡುವ ಯುದ್ಧ, ಅಹಿಂಸಾ ತತ್ವದ ಶಾಸ್ತ್ರದಲ್ಲಿ ಅಪಜಯವೆಂಬ ಮಾತಿಗೆ ಸ್ಥಳವೇ ಇಲ್ಲ' ಹಾಗೆಂದು ಮಹಾತ್ಮರು ಹರಿಜನ ಪತ್ರಿಕೆಯಲ್ಲಿ ಬರೆದಿರುವರು

ಒಬ್ಬ ಪತ್ರಿಕಾ ಪ್ರತಿನಿಧಿಗಳು ಮಹಾತ್ಮರಿಗೆ ಕಾಗದ ಬರೆಯುತ್ತಾ "ನೀವು ಅಂದು ಉಪ್ಪು ಸತ್ಯಾಗ್ರಹದ ಸಮಯದಲ್ಲಿ, ಒಂದೊ ಜಯಶೀಲನಾಗಿ ಬರುತ್ತೇನೆ ಇಲ್ಲವೆ ನನ್ನ ಶವವು ಸಮುದ್ರದ ಮೇಲೆ ತೇಲಾಡಬೇಕು. ಎಂದಿರುವಿರಿ ಈಚೆಗೆ ನೀವು ಕೊಟ್ಟ ಅನೇಕ ಹೇಳಿಕೆಗಳಲ್ಲಿಯೂ ಇದೇ ವಿಚಾರವನ್ನು ಒತ್ತಿ ಹೇಳಿರುವಿರಿ ಹೀಗೆಲ್ಲಾ ಇರುವಾಗ ನೀವು ಈಗ ಕೈಕೊಂಡ ಗ್ರಾಮೋದ್ಧಾರದ ಕಾರ್ಯವನ್ನು ಅದು ಒಂದು ಸಂಗ್ರಾಮವೋ" ಅಥವಾ ಇನ್ನೇನಾದರೂ ಆಗಿರುತ್ತದೋ? ಈಗ ನೀವು ಸರಕಾರದ ಕೂಡೆ ಸಂಗ್ರಾಮವನ್ನು ಬಿಟ್ಟಂತೆ ತೋರುತ್ತದೆ' ಹೀಗೆಂದು ಟೀಕಿಸಿರುವರು

ಮಹಾತ್ಮರು ಉತ್ತರ ನೀಡುತ್ತಾ ಅಹಿಂಸಾತತ್ವದಿಂದ ಕೂಡಿದ ಸ್ವಾತಂತ್ರ್ಯ ಸಂಗ್ರಾಮವೆಂದರೆ ಅದು ಒಂದೇ ರೀತಿಯಿಂದ ಇರಬೇಕೆಂದಿಲ್ಲ ನಾನು ಯಾವ ಕಾರ್ಯವನ್ನು ಮಾಡಲಿ ಅದರಲ್ಲಿ ಅಹಿಂಸಾ ತತ್ವವನ್ನು ಪ್ರದರ್ಶಿಸಬೇಕೆಂಬುದೇ ನನ್ನ ಅಧ್ಯ ಧ್ಯೇಯವಾಗಿದೆ ಹಳ್ಳಿಗಳ ಉದ್ಧಾರಕ್ಕೆ ನಾನು ಮಾಡುತ್ತಿರುವ ಕಾರ್ಯವು ವಿಜ್ಞಾನಕ್ಕೆ ಸಂಬಂಧಪಟ್ಟ ಸಂಶೋಧನಾ ರೂಪದಿಂದಿರುತ್ತದೆ

ಯಾವ ರೀತಿಯಲ್ಲಿ ಜೀವನ ಎಂಬುದು ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯಾಗಿರುತ್ತದೋ ಅದೇ ಪ್ರಕಾರ ರಾಜಕೀಯ ಜೀವನದಲ್ಲಿಯೂ ಬೇಧಗಳಿಲ್ಲದೆ ಸ್ವರಾಜ್ಯ ಸಾಧನಗ ಅನೇಕ ಹೆದ್ದಾರಿಗಳಿವೆ ಸಮಯಾನುಸಾರ ಅಹಿಂಸಾತತ್ವಕ್ಕೆ ವ್ಯತಿರಿಕ್ತವಾಗದಂತೆ, ಯಾವದಾದರೂ ಒಂದು ದಾರಿಯಿಂದ ನಾವು ಸ್ವರಾಜ್ಯ ಸಾಧನೆಯನ್ನು ಮಾಡಿದರೆ, ನಮ್ಮ ಕೆಲಸವನ್ನು ಬಿಟ್ಟಂತಾಗುವುದಿಲ್ಲ ಹೀಗೆಂದಿರುವರು

ದುಂದುಗಾರಿಕೆಯಿಂದ

ದರಿದ್ರನಾದನು!

ಬುಡಾಪೆಸ್ಟ ನಗರದಲ್ಲಿ, ಸ್ಟೀಫನ್ ಫಾರ್ಕ್ಯಾಸ್ ಎಂಬವನೊಬ್ಬನು ಸಮ್ಮಗಾರ ವೃತ್ತಿಯಿಂದ ಜೀವಿಸುತ್ತಿದ್ದನು. ಕಳೆದ ವರ್ಷ ಅವನಿಗೆ ಸರಕಾರದ ಸೋಡ್ತಿಯಿಂದ ೭೦೦೦ ಪವನುಗಳು ಸಿಕ್ಕಿತು ಫಾರ್ಕ್ಯಾಸನ ಸಂತೋಷಕ್ಕೆ ಮಿತಿಯೇ ಇಲ್ಲದಾಯಿತು ಅವನ ಮನಸ್ಸು ಸಂಯಮನ ತಪ್ಪಿತು. ಉತ್ಸಾಹದ ಮಧ್ಯದಲ್ಲಿ ಅವನು ಹುಚ್ಚನಂತೆ ವರ್ತಿಸಿದನು

ಅವನು ತನ್ನ ಹಣವನ್ನು ಹೇಗೆ ಖರ್ಚುಮಾಡಬೇಕು, ಯಾವ ರೀತಿಯಲ್ಲಿ ಸಂತೋಷ ಸುಖಗಳನ್ನು ಪಡೆಯಬೇಕೆಂದು, ತಿಳಿಯದಾದನು. ಬುಡಾಪೆಸ್ಟ್ ನಗರದಲ್ಲಿರುವ ದೊಡ್ಡ ಹೊಟೇಲಿನಲ್ಲಿ ೧೧೦ ಜನರಿಗೆ ಬೇಕಾಗುವ ಶ್ರೇಷ್ಠ ಔತಣಕ್ಕೆ ಆಜ್ಞೆಮಾಡಿದನು. ೧೧೦ ಮಂದಿ ಸ್ನೇಹಿತರಿಗೂ ಆಹ್ವಾನಪತ್ರಿಕೆಗಳನ್ನೂ ಮೋಟಾರು ಬಂಡಿಗಳನ್ನೂ ಕಳುಹಿ ಔತಣ ಮಾಡಿಸಿದನು. ಅಂದು ಸಾಯಂಕಾಲ ಎಲ್ಲರನ್ನೂ ನಾಟಕ ಪ್ರದರ್ಶನಕ್ಕೆ ಕರಕೊಂಡು ಹೋಗಿ ಅವರಿಗೆ ಮೊದಲನೇ ತರಗತಿಯಲ್ಲಿ ಕುಳ್ಳಿರಿಸಿದನು.

ಅಲ್ಲಿ ಶೆಕೆಯು ವಿಪರೀತವಿದ್ದರೂ ಫಾರ್ಕ್ಯಾಸನು ಅರು ಮೃದು ರೋಮದ ನಿಲುವಂಗಿಗಳನ್ನು ತುಂಬಾ ಕ್ರಯ ಕೊಟ್ಟು ಪಡೆದು, ಅದನ್ನು ಕ್ಷಣಕ್ಕೊಂದು ಕೋಟೆನಂತೆ ಬದಲಾಯಿಸುತ್ತಲಿದ್ದನು ದಪ್ಪವಾದ ಬಂಗಾರದ ಸರಪಣಿಯು ಬಂಗಾರದ ಗಡಿಯಾರಗಳು ಅವನ ಕೋಟು ಜೇಬುಗಳನ್ನು ಅಲಂಕರಿಸಿದುವು

ಅವನು ಪ್ರತಿದಿನವೂ ತಪ್ಪದೆ ಪ್ರದರ್ಶನ ಮಂದಿರಗಳಿಗೂ, ದೊಡ್ಡ ದೊಡ್ಡ ಉಪಹಾರ ಮಂದಿರಗಳಿಗೂ ಹೋಗುತಿದ್ದು, ತನ್ನ ಖರ್ಚಿನ ಲೆಖ್ಖ ನೋಡುವುದಕ್ಕೆ ಓರ್ವ ಕಾರ್ಯದರ್ಶಿಯನ್ನೂ, ಊಟ ತಯಾರಿಸಲಿಕ್ಕೆ ಓರ್ವ ಬಟ್ಲರನನ್ನೂ ಇಟ್ಟುಕೊಂಡಿದ್ದನು ಇವರುಗಳ ಎದುರಿನಲ್ಲಿ ಅವನು ಹಣದ ನೋಟುಗಳನ್ನು ಸುಟ್ಟು ಹಾಕಿ ತುಂಬಾ ಸಂತೋಷಪಡುತಿದ್ದನು

ದುಂದುಗಾರಿಕೆಯು ಫಾರ್ಕ್ಯಾಸನನ್ನೂ ದಿವಾಳಿಮಾಡಿತು ಅವನ ಹಣದ ಚೀಲವು ಬರಿದಾಯಿತು ಈಗ ಅವನು ಚಿಕ್ಕಾಸಿಗೂ ಗತಿಯಿಲ್ಲದೆ ಬುಡಾಪೆಸ್ಟ ನಗರದ ಬೀದಿಯಲ್ಲಿ ಬೇಡುತಿದ್ದಾನೆ ಅವನನ್ನು ಏನು ಕದ್ದ ಅಪರಾಧಕ್ಕಾಗಿ ಕೋರ್ಟು ವಿಚಾರಣೆಮಾಡುತಿದ್ದಾಗ ಅವನ ಈ ವಿಚಿತ್ರ ಜೀವನಚರಿತ್ರೆಯು ಒದಲಾಯಿತು

ಎಲುಬು ಸಂಗ್ರಹ

ಜರ್ಮನಿ ಶಾಲಾ ವಿದ್ಯಾರ್ಥಿಗಳು, ಅಲ್ಲಿನ ಆರ್ಥಿಕ ದುಸ್ಥಿತಿಯನ್ನು ನಿವಾರಿಸುವ ಒಂದು ಉಪಾಯವಾಗಿ, ಸರಕಾರದೊಡನೆ ಸಹಕರಿಸಿ ಕೆಲಸ ಮಾಡುತಿದ್ದಾರೆ ಬರ್ಲಿನ್‌ನಲ್ಲಿರುವ ... ಶಾಲೆಗಳಿಗೆ ಸರಕಾರದಿಂದ ಡಬ್ಬಿಗಳನ್ನು ಕೊಡಲ್ಪಟ್ಟಿವೆ ಶಾಲಾಮಕ್ಕಳು ತಮ್ಮ ತಮ್ಮ ಮನೆಗಳಲ್ಲಿ ಊಟದ ನಂತರ ಉಳಿದ ಎಲುಬುಗಳನ್ನು ಕೂಡಿಸಿ ಆ ಡಬ್ಬಿಗಳಲ್ಲಿ ತುಂಬಿ ಸರಕಾರಕ್ಕೆ ಒಪ್ಪಿಸುತ್ತಾರೆ ಹೆಚ್ಚು ಎಲುಬುಗಳನ್ನು ತ್ವರೆಯಾಗಿ ಸಂಗ್ರಹ ಮಾಡುವುದಕ್ಕೆ ಅವರಲ್ಲಿ ಸ್ಪರ್ಧೆಯು ನಡೆಯುತ್ತದೆ ಸರಕಾರದವರು ಆ ಎಲುಬುಗಳನ್ನು ಗೊಬ್ಬರಕ್ಕಾಗಿಯೂ ಯುದ್ಧ ಸಾಮಗ್ರಿಗಳನ್ನು ತಯಾರಿಸಲಿಕ್ಕೂ ಉಪಯೋಗಿಸುತ್ತಾರೆ

ಫ್ರೆಂಚ್ ನೌಕಾ ಚಟುವಟಿಕೆ

ಫ್ರಾನ್ಸಿನ ನೌಕಾಬಲವನ್ನು ಹೆಚ್ಚಿಸುವ ಪ್ರಯತ್ನಗಳು ಅಲ್ಲಿ ನಡೆಯುತ್ತವೆ ಯುದ್ಧ ಇಲಾಖೆಯವರ ಕೈಕೊಂಡ ಒಂದು ಹೊಸ ಮೂರು ವರ್ಷದ ಯೋಜನೆಯು ಮುಗಿದೊಡನೆ ಫ್ರಾನ್ಸಿನ ನೌಕಾಬಲವು ಯುರೋಪಿನಲ್ಲಿ ಮೊದಲನೇ ಸ್ಥಾನವನ್ನು, ಪ್ರಪಂಚದಲ್ಲಿ ೩ನೇ ಸ್ಥಾನವನ್ನು ಪಡೆಯುವಂತಹದಾಗಿರುತ್ತದೆ

ಈಗ ಫ್ರಾನ್ಸಿನ ನೌಕಾಬಲವು ಯುರೋಪಿನಲ್ಲಿ ೨ನೇ ಸ್ಥಾನದಲ್ಲೂ, ಪ್ರಪಂಚದಲ್ಲಿ ೪ನೇ ತರಗತಿಗೆ ಸೇರಿದ್ದೂ ಆಗಿರುತ್ತದೆ

ಪಾದ್ರಿಗಳ ಕೊಲೆ.

ಪೋಪ್ ಸ್ವಾಮಿಯವರಿಂದ ಹೊರಡಿಸಲ್ಪಡುವ 'ಓಬ್ಸರ್‌ವೆಟೋರ್ ರೋಮೆನೋ' ಎಂಬ ಪತ್ರಿಕೆಯಲ್ಲಿ, ರೋಮಿನಲ್ಲಿರುವ ಸ್ಪೆನಿಶ್ ಕಾಲೇಜಿನ ವಿದ್ಯಾರ್ಥಿಗಳು ಕೊಟ್ಟ ಕೆಲವು ಸುದ್ದಿಗಳು ಪ್ರಕಟವಾಗಿವೆ

ಅದರಲ್ಲಿ ಪ್ರಕಟವಾಗಿರುವ ಪ್ರಕಾರ, ಸ್ಪೆನಿನ ಸರಕಾರದ ಸೈನ್ಯ ಖಾತೆಯವರು ೧೬,೭೫೦ ಪಾದ್ರಿಗಳನ್ನೂ, ೧೧ ಬಿಶಪರನ್ನೂ ಕೊಂದಿರುವರೆಂದು ತಿಳಿದುಬರುತ್ತದೆ.

THE 'POPULAR' AGAIN!

NOW WITH

NEW PLANS

Progressive Benefit Assurance
Deferred Assurance for Children
Special whole Life Policy
Guaranteed Profit Policy

ADDITIONAL PRIVILEGES

Extended Assurance, Accident Indemnity, Savings Bank Arrangement Loans Considered up-to Paid-up Values, & A special Rebate of as. 8/ and Re. 1/ per Rs. 1000/ for Assurances of over Rs. 3000/ and Rs. 5000 respectively.

BETTER TERMS

Direct Head Office Connection, Heriditary Renewal Commission Renewals after Termination and other very liberal features.

Economic Management

Bonus Declared Rs. 10/ per annum per Rs. 1000/

Gilt-Edged Investments

Chief and General Agencies invited for unrepresented areas.

Experienced men preferred

Apply right now— The MANAGING DIRECTOR,

The Popular Insurance Company Ltd., H. O. Mangalore.



ಭಯಂಕರ ವಿಷಕಾರಿ!

ಸರ್ಪದ ವಿಷವು ತಕ್ಷಣ ಮರಣವನ್ನುಂಟುಮಾಡುತ್ತದೆ. ದೌರ್ಬಲ್ಯವು ಅಷ್ಟೇ ಹಾನಿಕರವಾದದ್ದು. ಇದು ಕ್ರಮೇಣ ಮಾನುಷಿಕದೇಹ ನಿರ್ಮಾಣವನ್ನು ಸೂರೆಗೈಯ್ಯುತ್ತದೆ. ಸರ್ಪ ಕಡಿತಕ್ಕೆ ಯಾವ ಗುಣಕಾರಿಯೂ ಇಲ್ಲ. ಆದರೆ ಅದೃಷ್ಟವಶಾತ್ ದೌರ್ಬಲ್ಯತೆಗೆ ಒಂದೇ ಔಷಧಿ ಇದೆ. ಅದೇ

ಅಮೃತ

ಇದು ದೌರ್ಬಲ್ಯತೆಯನ್ನು ನ್ಯೂನತೆಗಳನ್ನು ದೂರಮಾಡಿ, ಉತ್ತಮ ದೇಹಶಕ್ತಿಯನ್ನೂ ಮಾನಸಿಕ ಶಕ್ತಿಯನ್ನೂ ಕೊಡುತ್ತದೆ.

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ತಯಾರಿಸುವವರು:— ಕೇಸರಿ ಕುಟೀರಂ, ಎಗ್ಮೋರ್, ಮದರಾಸು.

ಮಂಗಳೂರ ಪ್ರವರ್ತಕರು:— ದಿ. ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

TEST YOUR EYES



By the Electro Ophthalmoscope

All Varities of Frames & Lenses.

AT

The Mangalore Trading Association Ltd.

Sight Testing Ophthalmic Opticians,

Car Street, MANGALORE.

'Dil Roz' (Regd)

'Dil Roz' is a sure cure for Oriental sores. local sores, all kinds of deep-rooted sores, skin eruption. Pimples, Eczema, Ringworm, Sin es, Fistula auxillary-Abscess.

There is no need of dressing the wounds, nor are baths prohibited.

Price Rs. 2.

Postage extra.

TAHIR DIN,

Anarkali, LAHORE.

CHEAPEST RATE

VALUE BACK IF DISAPPROVED

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ

ಯಲ್ಲೇ ಕೊಡಿರಿ.

BEHAR CHEMICAL WORKS, BHAGALPUR.

ಗೊನೊಕ್ಯೂರು.

ಕೆಟ್ಟ ಚಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ನಿಸ್ಸಂದೇಹವಾದ ಔಷಧವಾಗಿದೆ. ಒಂದೇ ದಿನದ ಔಷಧಿ ಉಪಯೋಗದಿಂದ ಗುಣ ಕಂಡು ಬರುವುದು. ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು.

ಇದರ ಗುಣ—ಧಾತು ದಪ್ಪವಿದ್ದು ಜಳದಿ ಬಣ್ಣವಾಗಿ ಹೋಗುವುದು. ಶಕ್ತಿಗಂಧಿಗಳ ಸಂಬಂಧವಾಗಿ ಅತೀಯಾದ ಗುಳ್ಳೆಗಳು, ಏಳೋಣ, ಮೂತ್ರವಾಗುವಾಗ್ಗೆ ಉರಿಯುವುದು, ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧಿ. ಸೀಸೆ 1ಕ್ಕೆ ರೂ. 2—0—0.

ವ್ಯಾಟ್ಯಾಲಿಟಿ ಪಿಲ್ಸ್.

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ. ವಿದ್ಯಾರ್ಥಿಗಳು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅಸಕ್ತರಾಗಿದ್ದು, ನ್ಯಾಯಮಾರ್ಗವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಪ್ನಾತುರ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕಶಕ್ತಿಯನ್ನು ಕಳೆದುಕೊಂಡು, ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ. ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ. ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಚಟುಕ್ತ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ. 2-0-0.

ಏಜೆಂಟರು:— ಷಾ ಕಂಪೆನಿ,

ಗವರ್ನಮೆಂಟ್ ಕೊಲೆಜ್ ಎದುರು

ಮಂಗಳೂರು.

ಚುನಾವಣಾ ರಣರಂಗದಲ್ಲಿ ಕಾಂಗ್ರೆಸ್ಸಿನ ಜಯಭೇರಿ.

(By M. B. Narsappa)

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನ್ಯ ದೇಶಗಳಂತೆ ಭಾರತವೂ ಹಿಂದುಳಿಯಲಾರದೆಂಬುದಕ್ಕೆ ಈ ಸಲದ ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸಿನ ಪ್ರಚಂಡ ಜಯವೇ ಒಂದು ನಿದರ್ಶನವಾಗಿದೆ. ಆದರೆ ನಮ್ಮದು ಅಹಿಂಸಾಮಯವಾದ ಸಂಗ್ರಾಮವಾಗಿದೆ. ಅಖಿಲ ಭಾರತವೇ ಈ ಸಲದ ಚುನಾವಣಾ ರಣರಂಗದಲ್ಲಿ ಭಾಗಿಯಾಗಿತ್ತು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಕಾಂಗ್ರೆಸ್ಸಿನ ಈ ಸಲದ ಜಯಲಾಭವು ಸಾಮಾನ್ಯವಾದುದಲ್ಲ. ಕಾಂಗ್ರೆಸ್ಸಿನ ಬೆಂಬಲಕ್ಕಿದ್ದ ಜನತೆಯ ಮಹಾ ಪ್ರವಾಹವು ಅಲ್ಲಲ್ಲಿ ಸಿಕ್ಕಿಕೊಂಡಿದ್ದ ಕೊಳಕುಗಳನ್ನು ಕೊಚ್ಚಿಕೊಂಡು ಹೋಗಿ ಅಲ್ಲಲ್ಲಿ ಶುಭ್ರವನ್ನಾಗಿ ಮಾಡಿತು. ಇಲ್ಲವೇ ಪ್ರವಾಹದೊಡನೆ ಲೀನವಾಗಿ ಹೋಯಿತೆಂದು ಹೇಳಿದರೂ ತಪ್ಪಾಗಲಾರದು. ದೇಶಕ್ಕೆ ದೇಶವೇ ಕಾಂಗ್ರೆಸಿನ ವಾತಾವರಣವನ್ನು ಹೊಂದಿಕೊಂಡಿದ್ದು ಇನ್ನೂ ಬಹುಕಾಲವೂ ಅದೇ ಆಕರ್ಷಣವು ಚಿರಸ್ಥಾಯಿಯಾಗಿ ನಿಲ್ಲತಕ್ಕದ್ದಾಗಿದೆ.

ಒಂದು ಕಡೆ ಬಡ ಜನಾಂಗದ ಪ್ರತಿನಿಧಿಯಾಗಿ ನಿಂತು ಸ್ವಾತಂತ್ರ್ಯದ ಸವಿಯನ್ನು ಜನತೆಗೆ ತೋರಿಸಲು ನಿಂತ ರಾಷ್ಟ್ರೀಯ ಮಹಾಸಭೆ. ಇನ್ನೊಂದು ಕಡೆ ಹಣದ ರಾಶಿಗಳನ್ನು ಎದುರಿಗಿಟ್ಟು, ಮನಸೋಇಚ್ಛೆ ಚೆಲ್ಲಿ, ಅಧಿಕಾರ ದರ್ಪ, ಬಲಾತ್ಕಾರಗಳನ್ನು ತೋರಿಸಿ ಜನತೆಯನ್ನು ತಮ್ಮೆಡೆಗೆ ಆಕರ್ಷಿಸಲು ಎದುರು ನಿಂತ ಅನೇಕ ವಿರೋಧಪಾರ್ಟಿಗಳು. ಆದರೇನು? ಬಡತನ ಹಾಗೂ ಪರದಾಸ್ಯದ ತುಳಿತಕ್ಕೆ ಸಿಕ್ಕಿ ಪರಿತಪಿಸುತ್ತಿದ್ದ ಬಡಭಾರತವು ಒಮ್ಮಿಂದೊಮ್ಮೆಯೇ ಎಚ್ಚೆತ್ತು ಆ ಮಹಾಂತರ ಎದ್ದ ಮಹಾಕ್ಷೋಭೆಯ ಇದಿರಲ್ಲಿ ವಿರೋಧ ಪಂಗಡವು ಹೇಳಹೆಸರಿಲ್ಲದೆ ಮಾಯವಾಗಿ ಹೋಯಿತು. ಚುನಾವಣಾ ರಣರಂಗದಲ್ಲಿ ಹಲವರ ಆಹುತಿಯಾಯಿತು. ಕೆಲವರ ರಕ್ತವು ಧರಿತ್ರಿಗೆ ಸುರಿಯಿತು. ಆದರೆ ಜಯಲಕ್ಷ್ಮಿಯು ಜನತೆಗೆ ಒಲಿದು ಎಲ್ಲೆಲ್ಲಿಯೂ ಕಾಂಗ್ರೆಸಿನ ಜಯಭೇರಿಯು ಹೊಡೆಯಿತು. ಆಳರಸರೂ ಮೂಗಿಗೆ ಬೆರಳನ್ನಿಟ್ಟುಕೊಳ್ಳುವ ಸ್ಥಿತಿಯೂ ಬಂದುಹೋಗಿದೆ. ಧನ್ಯೆ! ಭಾರತಮಾತೆಯೇ ನೀನೇ ಧನ್ಯೆ!

ಕಾಂಗ್ರೆಸ್ಸಿನ ಪ್ರಚಾರವು ಈ ಸಲ ಚುನಾವಣಾ ಸಮಯದಲ್ಲಿ ಪ್ರಚಾರವಾದಷ್ಟು ಕಳೆದ ೬೦ ವರ್ಷಗಳ ಕಾಂಗ್ರೆಸು ವಾತಾವರಣದಲ್ಲಿ ನಡೆಯಲಿಲ್ಲ. ಬಡವನ ಮುರುಕು ಗುಡಿಸಲಿನಿಂದ ರಾಜಮಹಲಿನ ವರೆಗೂ, ಕೊಳಕು ಗಲ್ಲಿಗಳಿಂದ ರಾಜಬೀದಿಗಳ ವರೆಗೂ ಕಾಂಗ್ರೆಸ್ಸೆಂದರೇನು? ಕಾಂಗ್ರೆಸ್ ಉಮೇದ್ವಾರರೆಂದರೆ ಯಾರು? ಕಾಂಗ್ರೆಸ್ಸಿನ ಉಮೇದ್ವಾರರಿಗೆ ಮತದಾರರು ತಮ್ಮ ಮತಗಳನ್ನು ಯಾಕೆ ಕೊಡಬೇಕು ಎಂಬುದು ಸರ್ವ ಜನಾಂಗಕ್ಕೆ ತಿಳಿದುಬಂತು. ಇದನ್ನು ಕಂಡೇ ರಾಷ್ಟ್ರಪತಿ ಜವಾಹರರು ಚುನಾವಣೆಯಲ್ಲಿ ಪ್ರತಿನಿಧಿಗಳು ಜಯಶೀಲರಾಗಿ ಬರುವುದಕ್ಕಿಂತ ಮಿಗಿಲಾದ ಆನಂದವು ಚುನಾವಣಾ ಪ್ರಚಾರದಲ್ಲಿ ತನಗುಂಟಾಗಿದೆ' ಎಂದು ಹೇಳಿದ ಅಮೃತವಾಣಿಯು ಶಾಲೋಚಿತವಾಗಿದೆ.

ಕಾಂಗ್ರೆಸ್ಸಿನ ವಿರೋಧ ಪಂಗಡದವರಿಗೆ ಬಹುಮತಗಳು ದೊರಕಿ ಆರಿಸಿ ಬರಲಿಲ್ಲವೋ ಎಂಬ ಪ್ರಶ್ನೆ ಬರಬಹುದು. ಹೌದು, ಆರಿಸಿ ಬಂದಿರುವರು. ಆದರೆ ಯಾವ ರೀತಿಯಲ್ಲಿ? ಪ್ರಥಮತಃ ಹಣಗಳ ರಾಶಿಯನ್ನು ನೀರಿನಂತೆ ಚೆಲ್ಲಿ, ನಿರಕ್ಷರರು ಹಾಗೂ ಹಂಗಿಗರನ್ನು ಬಲಾತ್ಕರಿಸಿ, ಮರೆಯಲ್ಲಿ ನಿಂತು ಸಹಾಯಕರಾಗಿದ್ದ ಮೂರನೇಯವರ ಅಧಿಕಾರ ದರ್ಪದಿಂದ, ಮತ್ತೂ ಹೇಳುವುದಾದರೆ ನೆಂಟರಿಷ್ಟರ ಸಹಾಯತೆಯಿಂದ ಹಾಗೂ ರಕ್ತ ಸಂಬಂಧ ಕಡಿಯಬಹುದೆಂಬ ಸಮಾಜ ಪ್ರೇಮದಿಂದ. ಈ ರೀತಿ ನಾನಾ ಕುತಂತ್ರಗಳಿಂದ ಸ್ವಾರ್ಥಾಭಿಲಾಷೆಗಾಗಿ ಅಧರ್ಮದಿಂದ ಜಯಶೀಲರಾಗಿರಬಹುದು. ಇನ್ನೂ ಕೆಲವರು ಜಾತಿವಾರು ಲೋಭದಿಂದ ತಮ್ಮದೇ ಕೆಲವು ಪಾರ್ಟಿಗಳಿರಲೆಂದು ಅತ್ತ ಪಕ್ಷಿಯೂ ಅಲ್ಲ, ಇತ್ತ ಮೃಗವೂ ಅಲ್ಲ ಎಂಬಂತೆ ಗಬ್ಬಿಲ ವೇಶವನ್ನು ತೆಗೆದುಕೊಂಡವರೂ ಇದ್ದಾರೆ. ಇನ್ನು ಮತದಾರರು ಅವರ ಪಾರ್ಟಿಯ ಪ್ರೇಮದಿಂದ ಮತವನ್ನು ಕೊಟ್ಟಿಲ್ಲ. ಅವರಿಂದ ತಮಗೆ ದೊರಕಿದ ಹಣದ ಬಗ್ಗೆ ಅಲ್ಲದೆ ಅವರ ವ್ಯಕ್ತಿಪ್ರಭಾವಕ್ಕಾಗಿದೆ. ಆದರೆ ಅವರ ಪ್ರಯತ್ನವು ಕಾಂಗ್ರೆಸ್ಸಿನ ಎದುರಿಗೆ ಅಲ್ಪವೇ ಸರಿ. ಜನತೆಯ ಪ್ರತಿನಿಧಿಗಳ ಸಹಾಯಕ್ಕೆ ನಿಂತು ಕಷ್ಟ, ಕೋಟಲೆಗಳನ್ನು ಲೆಕ್ಕಿಸದೆ, ಹೆಂಗಸರು ಸಮೇತ ತಮ್ಮ ಪಾಲಿನ ಕೆಲಸವನ್ನು ಮಾಡಿರುವರು. ಸಂಬಳ ಕೊಡುವುದಾದರೆ ಯಾರಿಂದಲೂ ಸಾಧ್ಯವಿರಲಿಲ್ಲ. ಸಾವಿರಗಟ್ಟಲೆ ಸ್ವಯಂಸೇವಕರು ಕಾಂಗ್ರೆಸ್ಸಿನ ಧ್ವಜವನ್ನು ಎತ್ತಿ ಹಿಡಿದು ಕಾಂಗ್ರೆಸ್ಸಿನ ಮೇಲಿರುವ ತಮ್ಮ ಅಗಾಧವಾದ ಪ್ರೇಮವನ್ನು ಪ್ರದರ್ಶಿಸಿದ್ದರು. ಆದರೆ ವಿರೋಧ ಪಾರ್ಟಿಯವರ ಕಡೆಗಿದ್ದ ಬೆರಳೆಣಿಕೆಯ ಜನರೆಷ್ಟು? ಅದು ಕೂಡ ಎಲ್ಲಿಯ ವರೆಗೆ? ಕೈಯಲ್ಲಿ ಹಣ ಓಡಾಡುತ್ತಿದ್ದ ವರೆಗೆ, ಕಡೆಗೆ ಅಂದರೆ ಪೋಲಿಂಗ್ ದಿವಸದಲ್ಲಿ ತಪ್ಪಿದವರೆಷ್ಟೋ ಮಂದಿ ಇದ್ದರೆಂದು ಬೇರೆ ಹೇಳಬೇಕಾಗಿಲ್ಲ.

ಕಾಂಗ್ರೆಸ್ಸಿನ ಉಮೇದ್ವಾರರು ಸ್ವಯಂಸೇವಕರ ಸಹಕಾರ ಹಾಗೂ ಪ್ರೋತ್ಸಾಹವಿಲ್ಲದೆ ವೈಯಕ್ತಿಕವಾದ ಸಾಧನೆಯಿಂದ ಈ ತರದ ಪ್ರಚಂಡ ಜಯಲಾಭವನ್ನು ಹೊಂದುತ್ತಿರಲಿಲ್ಲ. ತಮ್ಮ ಸ್ವಂತದ ಹಣದಿಂದ ಹಲವು ಸಹಸ್ರ ಹಣವನ್ನು ಸದ್ವಿನಿಯೋಗ ಮಾಡಿದರೆಂದು ಹೇಳಬಹುದು. ಅಷ್ಟು ಹಣ ಖರ್ಚು ಮಾಡಿದ್ದರಿಂದ ಇಂದು ಎಂದೂ ಇಲ್ಲದ ಜನಜಾಗೃತಿಯು ದೇಶದಲ್ಲುಂಟಾಯಿತು. ಅದಕ್ಕಾಗಿ ಪ್ರತಿನಿಧಿಗಳು ವಂದನಾರ್ಹರು. ಕಾಂಗ್ರೆಸ್ಸಿನ ಜಯವೇ ಜನತೆಯ ಜಯ, ಕಾಂಗ್ರೆಸ್ಸಿನ ಕೀರ್ತಿಯೇ ದೇಶದ ಕೀರ್ತಿ, ಜನತೆಯ ಬೆಂಬಲವೇ ಕಾಂಗ್ರೆಸ್ಸಿನ ಜಯವೆಂಬುದು ಜಗಜ್ಜನಿತವಾಯಿತು. ವಿದೇಶೀಯರೂ ಕೂಡಾ ಕಾಂಗ್ರೆಸ್ಸಿನ ಪ್ರಚಂಡ ಜಯವನ್ನು ಕೊಂಡಾಡಿರುವರು. ಜನತೆಯು ಕಾಂಗ್ರೆಸ್ಸಿಗಾಗಿ ಎಂತಹ ಸ್ವಾರ್ಥತ್ಯಾಗವನ್ನಾದರೂ ಮಾಡಲು ಸಿದ್ಧವಿದೆ ಎಂಬುದನ್ನು ತಿಳಿಕೊಂಡರು.

ಬ್ರಿಟನಿನ ಧನಿಕರ ಸಂಖ್ಯೆ,

೧೯೩-೪೪ರಲ್ಲಿ ಬ್ರಿಟನಿನಲ್ಲಿರುವವರ ಆದಾಯದ ಲೆಕ್ಕಾಚಾರ ಪ್ರಕಾರ ಈ ಕೆಳಗಿನ ಸಂಖ್ಯೆಗಳು ಕಂಡುಬಂದಿವೆ:—

ಬ್ರಿಟನಿನಲ್ಲಿ ೬೯ ಮಂದಿಗಳಿಗೆ ೪ ಲಕ್ಷ ಪವನಿಗಿಂತಲೂ ಹೆಚ್ಚು ಲಾಭ ದೊರೆತಿದೆ.

೭೫ ಸಾವಿರದಿಂದ ೧ ಲಕ್ಷ ಪವನಿನ ವರೇಗೆ ಲಾಭ ಪಡೆದವರು ೬೦ ಮಂದಿ.

೫೫ ಸಾವಿರ ಪವನಿನಿಂದ ೬೫ ಸಾವಿರದ ವರೇಗೆ ಆದಾಯ ಪಡೆದವರು ೬ ಮಂದಿ.

ಅಂದರೆ, ಒಟ್ಟಾರೆ ೨೬೯ ಮಂದಿಗಳು ಲಕ್ಷಾಧೀಶರೆಂದು ಪರಿಗಣಿಸಲ್ಪಟ್ಟಿದ್ದಾರೆ.

೩,೫೦೦ ಮಂದಿಗಳಷ್ಟು ಜನರಿಗೆ ಪ್ರತಿವರ್ಷಕ್ಕೆ ೧೦ ಸಾವಿರ ಪವನಿನ ಆದಾಯವಾಗಿದೆ.

ವಿವಾಹಗಳು—ವಿಚ್ಛೇದಗಳು

೧೯೩೫ರಲ್ಲಿ ಬ್ರಿಟನಿನಲ್ಲಿ ಒಟ್ಟು ೩೯೬,೩೭೭ ವಿವಾಹಗಳು ಆಗಿವೆ. ಅವುಗಳಲ್ಲಿ ೫೨,೧೪೦ ವಧುಗಳು ೨೧ ವರ್ಷಕ್ಕೆ ಚಿಕ್ಕದವರು. ೫೫ ವರ್ಷಗಳಿಗೆ ಮೇಲ್ಪಟ್ಟ ೮೩೫೬ ಮುದುಕಿಯರು ಅಲ್ಲಿ ಮದುವೆಯಾಗಿದ್ದಾರೆ.

ಕರ್ಮಯೋಗಿ ವಿವೇಕಾನಂದ

ಕೆಲವು ದಿವಸಗಳ ಹಿಂದೆ ಕಲ್ಕತ್ತದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆಯನ್ನು ಜರಗಿಸಲ್ಪಟ್ಟಿತು. ಶ್ರೀ| ಬಿ. ಸಿ. ಚೆಟರ್ಜಿಯವರು ಅಂದಿನ ಸಮಾರಂಭದ ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿವೇಕಾನಂದರ ಸ್ಮರಣೆಗೆ ಉಜ್ವಲವಾದ ಅಭಿವಂದನೆಗಳನ್ನರ್ಪಿಸಿ ಹೀಗೆಂದರು "ಸನ್ಯಾಸಿಗಳೆಂದರೆ ಸ್ವಾಮಿ ವಿವೇಕಾನಂದರಂತಿರಬೇಕು. ಸ್ವಂತ ಹಿತಕ್ಕಾಗಿ, ಸ್ವಾರ್ಥಕ್ಕಾಗಿ ಕೆಲಸ ಮಾಡುವ ಸನ್ಯಾಸಿಗಳು ಅವರಲ್ಲ. ಮಾನವವರ್ಗದ ಸೇವೆಗಾಗಿ ಅವರು ದೇವರನ್ನು ನೋಡಬಯಸಿದ್ದರು. ಜನತೆಯ ಸೇವೆಯೇ ಜನಾರ್ಧನನ ಸೇವೆ,ಕರ್ಮಯೋಗವೆಂದರೆ ಅದು—ಹೇಗೆಂದು ಅವರು ನಮಗೆ ಕಾರ್ಯರೂಪವಾಗಿ ಮಾಡಿ ತೋರಿಸಿರುತ್ತಾರೆ. ಅಂದಿನಿಂದ ಬಂಗಾಳದ ಭಾರತೀಯರ ಜೀವನದಲ್ಲಿ ಒಂದು ಕ್ರಾಂತಿಯುಂಟಾಗಿದೆ. ಈ ಕರ್ಮಯೋಗದ ಮಹಿಮೆಯೇ ಇಂದಿನ ಭಾರತ ಯುವಕರನ್ನು ಸ್ಫೂರ್ತಿಗೊಳಿಸಿದುದು. ಆ ಕರ್ಮಯೋಗವೇ ಇಂದು ನಮ್ಮಲ್ಲಿ ಸೇವಾತುರತೆಯನ್ನು ಉಂಟುಮಾಡಿದೆ. ಜನತೆಯ ಸೇವೆಗೆಂದು ಅವರು ಸ್ಥಾಪಿಸಿದ ರಾಮಕೃಷ್ಣ ಮಿಶನ್ ಎಂಬ ಸಂಸ್ಥೆಯಂಥ ಜನೋಪಕಾರಿ ಸಂಸ್ಥೆಯನ್ನು ಕಾಣುವುದು ದುರ್ಲಭ. ನೆರೆ ಹಾವಳಿ, ಕ್ಷಾಮ ಇವುಗಳಿಂದ ಜನರು ನರಳುತ್ತಿರುವಾಗ ಈ ಸಂಘದವರು ಹಿಂದೂ, ಮುಸ್ಲಿಂ, ಕ್ರೈಸ್ತರೆಂಬ ಭೇದವಿಲ್ಲದೆ ಸಹಾಯವಿತ್ತರು. ಇವರ ಈ ತತ್ವವು ನಮ್ಮನ್ನು ಇಂದು ಜಾತೀಯತೆಯ ಅಂಧತನದಿಂದ ಪಾರುಮಾಡಿರುತ್ತದೆ.

ಸ್ವಾಮಿ ವಿವೇಕಾನಂದರವರು

"ವಿವೇಕಾನಂದರ ಹೆಸರು ಶ್ರೀ ರಾಮಕೃಷ್ಣರ ಹೆಸರನ್ನು ಬಿಟ್ಟಿಲ್ಲ. ಶ್ರೀ ರಾಮಕೃಷ್ಣರು ಇಂದಿನ ಪ್ರಪಂಚಕ್ಕೆ ಬೇಕಾಗುವ ಮತ್ತು ಎಲ್ಲಾ ಧರ್ಮಶಾಸ್ತ್ರಗಳು ಬೋಧಿಸುವ ಶ್ರೇಷ್ಠ ಸತ್ಯದ ತತ್ವಗಳನ್ನ ಪ್ರಪಂಚಕ್ಕೆ ತೋರಿಸಿಕೊಟ್ಟರು. ಅವರ ಶಿಷ್ಯರಾದ ವಿವೇಕಾನಂದರು ಅದನ್ನ ಪ್ರತಿಪಾದಿಸಿ, ನಾಗರೀಕ ಲೋಕಗಳೆನಿಸಿದ ಯುರೋಪ್ ಅಮೇರಿಕಾಗಳಲ್ಲೂ ಅದನ್ನು ಪ್ರಚಾರಿಸಿದರು. ಪ್ರಪಂಚದ ಜನತೆಯು ಸಮಾನತೆಯಿಂದ ಬಾಳಲುಬೇಕಾದ ಆ ತತ್ವವನ್ನು ಪ್ರಪಂಚದ ವಿವೇಕಪುರುಷರೂ ಒಪ್ಪಿರುವರು. ಮಾನವ ಪ್ರಪಂಚದ ಶಾಂತಿಯುಕ್ತ ಜೀವನಕ್ಕೆ ರಾಮಕೃಷ್ಣರ ತತ್ವವನ್ನು ಬಿಟ್ಟರೆ ಬೇರೆ ದಾರಿ ಕಾಣದು. ಎಲ್ಲಾ ಜಾತಿ ಮತಸ್ಥರು, ಎಲ್ಲಾ ಧರ್ಮಗಳ ಮೂಲಾಧಾರನಾದ ಆ ಪರಮಾತ್ಮನೆಂಬ ಶಕ್ತಿಯನ್ನು ಆರಾಧಿಸುವಂತೆ ಮಾಡುವ ತತ್ವಕ್ಕಿಂತಲೂ ಹೆಚ್ಚಿನದೇನಿದೆ?

"ಭಾರತ ಮಹಿಳಾವೃಂದವು ಇಂದು ಅಂಧಶ್ರದ್ಧೆಗಳ ಬಂಧನದಿಂದ ವಿಮುಕ್ತವಾಗ ನೋಡುತ್ತಿರುವುದಾದರೆ, ಇಂದು ಅವರ ಚಟುವಟಿಕೆಗಳು ಅಭಿವೃದ್ಧಿಹೊಂದುತ್ತಿರುವುದಾದರೆ, ಇಂದು ಅವರು ನಿರ್ಮಲ ಶಿಕ್ಷಿತ ಸುಧಾರಣೆಯಲ್ಲಿ ಮುಂದುವರಿಯುದಾದರೆ, ಅದು ಸ್ವಾಮಿ ವಿವೇಕಾನಂದರ ಕರ್ಮಯೋಗದ ಮಹಿಮೆ. ಅವರ ಶಿಷ್ಯೆಂದಿರಾದ ಭಗಿನಿ ನಿವೇದಿತರಿಂದಲೇ ಅವರು ಈ ಕಾರ್ಯವನ್ನು ಮಾಡಿಸಿರುವರು.

"ಕರ್ಮಯೋಗಿ ಸ್ವಾಮಿ ವಿವೇಕಾನಂದರು ಆಧುನಿಕ ಭಾರತದ ಪ್ರತಿಭಾಶಾಲಿಗಳು. ಅವರ ಶಿಷ್ಯ, ಶ್ರೀ ಅರವಿಂದ್ ಘೋಷ್‌ರವರು ಇಂದು ನಮ್ಮಿಂದ ತಪ್ಪಿಸಲ್ಪಟ್ಟಿದ್ದಾರೆ. ಅವರು ಇಂದು ಗುಪ್ತ ತಪಸ್ಸನ್ನಾಚರಿಸುತ್ತಿರುವರು. ಅವರು ತಪಸ್ಸನ್ನು ಬಿಟ್ಟು ಬಂದರೆ ಮಹದಾಶ್ಚರ್ಯಗಳನ್ನು ಮಾಡಬಲ್ಲರು. ಅವರನ್ನು ನಮ್ಮ ಮಧ್ಯಕ್ಕೆ ಬರಮಾಡುವಂತೆ ನಾನು ದೇವರಲ್ಲಿ ಬೇಡಿಕೊಳ್ಳುತ್ತೇನೆ."

ಲಿವರ್ ವಾಚುಗಳು,

ಒಂದು ವಾರದ ತನಕ ಪರೀಕ್ಷೆಗಾಗಿ ನಿಮ್ಮಲ್ಲಿ ಇಟ್ಟುಕೊಳ್ಳಿ

ನಮ್ಮ ಈ ಗಡಿಯಾರವು ಇದರ ನಾಲ್ಕರಷ್ಟು ಬೆಲೆಯುಳ್ಳ ವಾಚುಗಳಷ್ಟೆ ಬಾಳುವಿಕೆಯುಳ್ಳದ್ದು. ಕಮ್ಮಿ ಬೆಲೆಯ ಲಿವರ್ ರಿಸ್ಟ್ ವಾಚುಗಳು 5 ವರ್ಷಗಳ ಅಖಂಡ ಗ್ಯಾರಂಟಿ ಕೊಡುತ್ತೇವೆ. ಗ್ಯಾರಂಟಿ ತೃಪ್ತಿಯನ್ನು ಕೊಡುತ್ತದೆ. ಸುಂದರವಾಗಿಯೂ ಚಿಕ್ಕದಾಗಿಯೂ, ಇರುವುದಲ್ಲದೆ ಶ್ರೇಷ್ಠವಾದ ಲಿವರ್ ಯಂತ್ರ, ಚಲನಾಕ್ರಮ ಹೊಂದಿದ್ದಾಗಿರುತ್ತದೆ. ಅನೇಕ ವರ್ಷಗಳ ವರೆಗೆ ರಿಪೇರಿ ಅವಶ್ಯಕತೆ ಇಲ್ಲದೆ ಬಾಳುವಿಕೆ ಬರುತ್ತದೆ ಮತ್ತು ಒಂದು ಸೆಕುಂಡಿಗೆ ತಪ್ಪದೆ ಕಾಲವನ್ನ ತೋರಿಸುತ್ತದೆ.

ರಿಯಾಯುತಿ ದರಗಳು

ನಿಕ್ಕಲ್ ಕೇಸಿನ ರಿಸ್ಟ್‌ವಾಚು—	ರೂ 3-4-0
„ ಶ್ರೇಷ್ಠವಾದುದು ,	4-8-0
ಬಂಗಾರ ಗಿಲ್ಟಿನ ಶ್ರೇಷ್ಠವಾದ ಕೇಸುಳ್ಳದ್ದು	5-12-0
ಬಂಗಾರ ಗಿಲ್ಟ್ ಕೇಸುಳ್ಳ ಸಾಧಾರಣದ್ದು	5-12-0
ನಿಕ್ಕಲ್ ಕೇಸುಳ್ಳ ಆಯತಾಕಾರದ್ದು	
ಶ್ರೇಷ್ಠವಾದ ವಾಚು	5-0-0
ಬಂಗಾರ ಗಿಲ್ಟಿನ ಆಯತಾಕಾರದ್ದು	7-4-0
ಪಾಕೆಟ್ ವಾಚು	3-0-0
ಟ್ಯಾಂಬೀಸು	2-8-0

ಟಪ್ಪಾಲು ಖರ್ಚು ಆಣೆ 7 ಪ್ರತ್ಯೇಕ

ಒಂದೇ ಸರ್ತಿ 3 ವಾಚುಗಳಿಗೆ ಆರ್ಡರು ಕೊಡುವವರಿಗೆ ಟಪ್ಪಾಲು ಖರ್ಚು ಇಲ್ಲ.

ಈ ವಿಳಾಸಕ್ಕೆ ಬರೆಯಿರಿ —

South India Export Agency,
4 C Apoorba Mitter Road Kalighat
P O Calcutta.

Whenever you require the service of

PAINTERS

Please call on or write to:-

Simon & Co.,

Painters,

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸ್ಯಾನ್ ಬೋರ್ಡು ಇತ್ಯಾದಿಗಳನ್ನೂ

ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

ಮದನಕಲಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ, ಮಲಗುವ ಮನೆಯಲ್ಲಿ ಸ್ತ್ರೀಯರ ವಿನೋದಗಳು, ವೇಶ್ಯ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂತರೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು ಕ್ರಯ ರೂ 1

ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,

ಪೋಸ್ಟು ಬೋಕ್ಸ್ ನಂ 287 ಮದರಾಸ್

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೆ? ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTED 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,

ತಬಲಾ ವಿದ್ವಾನ್ ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ಯಾವಿಶಾರದ

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

(೨ ಅಂಕಗಳ್ಳುಳ್ಳ) ಭಕ್ತಶಿಖಾಮಣಿ ದಾಮಾಜಿಪಂತ (ಸಂಗೀತ ನಾಟಕ)

ಬರೆದವರು—ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ।
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮಂಗಳಕರ ಮನೋಹರವಾದ ೩೫ ಗೀತಗಳು, ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ—1. ಎಲ್ಯಾರ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು

ಶಾಲಿವಾಹನ ಶಕ ೧೮೫೮ನೆಯ ಧಾತು ಸಂವತ್ಸರದ ಮಾಘ ಬ ೯ ಶನಿವಾರದಿಂದ, ಮಾಘ ಬ ೩೦ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೆಯ ಕುಂಭ (ಮಾಘ)

6	ಶನಿ	೯	೫೩	ಮೂಲ	೩೦	೨೩	
7	ರವಿ	೧೦	೫೭	ಮೂಲ	೪	೨೪	
8	ಸೋ	೧೧	೫೭	ಪೂ.ಷಾಢ	೭	೨೫	
9	ಕುಜ	೧೨	೫೭	ಉ.ಷಾಢ	೧೦	೨೬	
10	ಬುಧ	೧೩	೫೫	ಶ್ರವಣ	೧೧	೨೭	
11	ಗುರು	೧೪	೫೩	ಧನಿಷ್ಠ	೧೧	೨೮	
12	ಶುಕ್ರ	೩೦	೪೯	ಶತಭಿಷ	೧೦	೨೯	

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3— 6	3—10
ಮುಸ್ಕಿ	3— 8	4— 4
ಗುಡ್ಡು	3—10	3—14
ಕ್ಯೂರ ಅವ್ವಲ್ ಬೆಲ್ಲಗೆ	4— 0	4— 4
ರಂಗೂನು ಬೆ ಗೋ ಗಳ್ಳಿ	7 — 0	7— 4
ಎಲ್ಲೂರು ಬೆ ಮು.ಗಳ್ಳಿ	3—12	3—12
ಗೋಧಿ ಗೋಣಿ ಗಳ್ಳಿ	11— 0	13— 0
ತೊಗರಿ ಗೋಣಿ ಗಳ್ಳಿ	9 — 8	12— 8
ಹುರುಳಿ ಗೋಣಿ ಗಳ್ಳಿ	5— 0	5 — 6
ಕಡಲೆ ಗೋಣಿ ಗಳ್ಳಿ ...	8 — 0	12 — 8
ತೊಗರಿಬೇಳೆ ಗೋಣಿಗಳ್ಳಿ...	11— 0	19— 0
ಉದ್ದು ಗೋಣಿ ಗಳ್ಳಿ	9— 0	9 — 8
ಹೆಸರು ಗೋಣಿ ಗಳ್ಳಿ ...	7—12	8— 0
ಊರುಬೆಲ್ಲ ಖಂಡಿ ಗಳ್ಳಿ ...	30— 0	32— 8
ಉಪ್ಪು ಗೋಣಿ ಗಳ್ಳಿ ..	4— 2	5— 4
ತೆಂಗಿನ ಖಂಡಿ ಗಳ್ಳಿ	75— 0	84— 0
ತೆಂಗಿನ ಹಿಂಡಿ ಖಂಡಿ ಗಳ್ಳಿ	26 — 8	28— 8
ಎಳ್ಳಿಂಡಿ ಖಂಡಿ ಗಳ್ಳಿ	26 — 4	27 — 8
ತೆಂಗಿನ ಎಣ್ಣೆ ಮಣ ಗಳ್ಳಿ	6— 0	7 — 0
ಎಳ್ಳೆಣ್ಣೆ ಮಣ ಗಳ್ಳಿ	7— 0	7— 0
ಬಿಳಿಎಣ್ಣೆ ಬೆಲ್ಲಗೆ ಗಳ್ಳಿ	6— 5	7— 5
ಮೋರಿಸ ಸಕ್ಕರೆ ಮು. ಗಳ್ಳಿ	3— 2	3 — 4
ಮೆಣಸು	2— 8	5— 0
ಸಾಸಿವೆ ಮುಡಿ ಗಳ್ಳಿ	5 — 4	5— 8
ಕಾಳುಮೆಣಸು ಖಂ ಗಳ್ಳಿ	100— 0	120 0
ಯೇಲಕ್ಕಿ ಬೀಜ ಮಣಗಳ್ಳಿ	80— 0	8ಂ— 0
ಗೇರುಬೀಜ ಮು. ಗಳ್ಳಿ	3 — 4	3 — 8
ಕಬ್ಬಿಣ ಖಂಡಿ ಗಳ್ಳಿ	35— 0	37— 8
ಕಾಂಪ್ರುತಗಡು ಮು ಗಳ್ಳಿ	12— 4	12— 8
ಕಾಂಪ್ರುಪಾತ್ರಗಳು ಮು ಗಳ್ಳಿ	12— 8	14— 0
ಚೀನಿಬೆಳ್ಳಿ ಸೇರು ಗಳ್ಳಿ	13— 8	15— 0
ಹಿತ್ತಾಳೆ ತಗಡು ಮು. ಗಳ್ಳಿ	10— 0	10— 8
ತವರು ಗಳ್ಳಿ	22— 7	22— 8
ಹುಣಸೆ ಹುಳಿ ಖಂಡಿ ಗಳ್ಳಿ	40 — 0	45— 0
ನೇಟಿವ್ ಕಾಫಿ ಖಂಡಿ ಗಳ್ಳಿ	170— 0	180— 0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳಿ	175— 0	195— 0
ಮಡಿಕೇರಿ ಏಲಕ್ಕಿ	50— 0	ಂ5 —

Break Pills!

Take To-Night

Prepared by Sage out of Amber Saffron Gold Musk with Himalayan Drugs recruit lost energy strength Nervous Debility and all Disorders in Spinal Cord Regains lost vitality Gives marvellous effect 60 Pills Rs 5 Sample 30 Pills Rs 3 List Free

Dr A. S MURTHI CHICACOLE

DIAMONDS! DIAMONDS!

BEST BRILLIANCY

K. R. K. SHET,

Near Mission High School,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್ ಕೆ ಶೆಟ್, ಜುವೆಲ್ಲರ್,

ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು

ಹೊಸ ವರ್ಷದ ರಿಯಾಯಿತಿ

ರಾಸ್ಕೋಫ್ ಲಿವರ್ ರೀಸ್ಟ್ ವಾಚುಗಳು

(೫ ವರ್ಷಗಳ ಅಖಂಡ ಗ್ಯಾರಂಟಿ)



ರಜತ (ಬೆಳ್ಳಿ) ವರ್ಣದ ಕಂಡೀಶ ರಾಸ್ಕೋಫ್ ಚಲನಾತ್ಮಕದ ಅತ್ಯಾಧಿಕ ಮಾದರಿ. ಆಕ್ಸಿ ಪಟ್ಟಿನ ಸ್ಟೀಲ್‌ದ ಮತ್ತು ಸಾಮಗ್ರಿಗಳಿಂದ ಕೂಡಿದ ದರಿಂದ ತಪ್ಪಿಲ್ಲದೆ ಸಮಯವನ್ನು ಕೊಡುತ್ತದೆ ಹೊಸ ವರ್ಷದ ವಾಚುಗಳಿಗೆ ಅಗಾಧ ರಿಯಾಯಿತಿ ದರಗಳು

ಉರುಟಾದ ನಿಕ್ಕಲ್ ಕೇಸ್ ಇದ್ದುದಕ್ಕೆ ರೂ 3 6 0

ಉರುಟಾದ ಬಂಗಾರವರ್ಣದ ಕೇಸ್ ಇದ್ದುದಕ್ಕೆ ರೂ 4–10–0

ಚೌಕ ವ ಕ್ತ್ಯ ಆಯತ ಆಕಾರಗಳಿಗೆ

ಕ್ರೋಮಿಯಂ ಕೇಸ್ ಇದ್ದುದಕ್ಕೆ ರೂ 5–10 0

ಬಂಗಾರದಂಥ ಕೇಸ್ ಇದ್ದುದಕ್ಕೆ ರೂ 6–10–0

ಹತ್ತು ವರ್ಷದ ಗ್ಯಾರಂಟಿ

ರೋಲ್ಡ್‌ಗೋಲ್ಡ್ ಕೇಸ್ ಇದ್ದುದಕ್ಕೆ ರೂ 11-6 0

9 ಕೆರೆಟ್ ಬಂಗಾರ ಕೇಸ್ ಇದ್ದುದಕ್ಕೆ ರೂ 22–8–0

3 ವಾಚುಗಳನ್ನು ಕೊಳ್ಳುವವರಿಗೆ ಟಪ್ಪಾಲು ಖರ್ಚು ಮಾಫಿಯಾಗಿ ಬಿಡಲಾಗುತ್ತದೆ

ವಾಚುಗಳು ಚೆನ್ನಾಗಿ ತೋರದಿದ್ದಲ್ಲಿ, ಹಣ ವಾಪಾಸು ಮಾಡುತ್ತೇವೆ

ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲೇ ಬರೆಯಿರಿ—

Modern Trading Co

119 Surendranath Banerjee Road,

CALCUTTA

THE

BANK OF MANGALORE LTD.,

MANGALORE

ESTD 1931

Branches— Panemangalore Mudabidri & Padubidri

Chairman:—Philip J Chandran, Esq.,

Retd Dt Registrar of Joint Stock Companies

On & from 1st of January 1937,

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted

U. R. PAI, N. U. PAI, *Managing Directors*

ಬಿಳಿ ತೊನ್ನು ಮತ್ತು ಕುಷ್ಠರೋಗ

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುದು ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ಸಿಫಾ ತೆಗೆದುಕೊಳ್ಳಲಾಗಲಿಕ್ಕಿಲ್ಲ

Vaidyaraj Akil Kishore Ram

No 62 P O Katrisarai (Gaya)

ಎಲ್ಲಾ ತರದ

ಶುದ್ಧ ಖಾದಿಗೆ

ಸ್ವದೇಶಿ ವಸ್ತುಗಳಿಗೆ

ಮಂಗಳೂರು ಸ್ವದೇಶಿ ಸ್ಟೋರ್ಸ್

ತುಂಡು ಸುದ್ಧಿಗಳು.

ಜನತೆಯ ಪರವಾಗಿ ಚುನಾಯಿತರಾದ ನಮ್ಮ ಜಿಲ್ಲೆಯ ಕೌನ್ಸಿಲ್ ಪ್ರತಿನಿಧಿಗಳು ಜನತೆಗೆ ತಮ್ಮ ವಂದನೆಗಳನ್ನು ಅರ್ಪಿಸುತ್ತಾರೆ.

ಅಲಹಾಬಾದಿನ ಸೋಶಿಯಲಿಸ್ಟ್ ಪಾರ್ಟಿಯವರು ಅಧಿಕಾರ ಸ್ವೀಕಾರದ ವಿಷಯ ಒಂದು ತರ್ಕಸ್ಪರ್ಧೆಯನ್ನು ಏರ್ಪಡಿಸಿರುವರು. ತರ್ಕವು ನೆಹರುಗಳ ಮನೆಯಾದ 'ಸ್ವರಾಜ್ಯಭವನ'ದಲ್ಲಿ ನಡೆಯುವುದು. ಪಂಡಿತ ನೆಹರುಗಳು ಇದರಲ್ಲಿ ಭಾಗವಹಿಸುವರೆಂದು ತಿಳಿದುಬಂದಿದೆ.

ಬೊಂಬಾಯಿ ಅಸೆಂಬ್ಲಿಯಲ್ಲಿ ಶ್ರೀ. ಕೆ. ಎಫ್. ನರಿಮಾನ್‌ರವರು ಕಾಂಗ್ರೆಸ್ ಪಾರ್ಟಿಯ ಮುಖಂಡತ್ವವನ್ನು ತೆಗೆದುಕೊಳ್ಳುವರು.

ಕಳೆದ ಫೆಬ್ರವರಿ ತಾ ೨೬ನೇ ದಿನ ಹಿಂದೂಸ್ಥಾನದಿಂದ ೩೪,೯೯,೬೨೦ ರೂಪಾಯಿ ಬೆಲೆಬಾಳುವ ಬಂಗಾರವು ವಿಲಾಯತಿಗೆ ಹೋಗಿರುತ್ತದೆ.

ಚಿತ್ತಗಾಂಗ್ ಜಿಲ್ಲೆಗೆ ಸೇರಿದ ಬನ್ಸ್‌ಖಾಳಿ ಎಂಬ ಗ್ರಾಮದಲ್ಲಿ ಒಂದು ಆನೆಯ ಹಾವಳಿಯಿಂದ ೧೫ ಜನರು ಕೊಲ್ಲಲ್ಪಟ್ಟಿರುತ್ತಾರೆ.

ಬಳ್ಳಾರಿಯ ಬಳಿ ಒಂದು ಗ್ರಾಮದಲ್ಲಿ ಒಬ್ಬ ಯುವಕನು ತನ್ನ ತಂದೆಯು ಪೂಜೆಯಲ್ಲಿದ್ದಾಗ ಆತನನ್ನು ಕೊಂದಿಕ್ಕಿರುವನು.

ಮದ್ರಾಸ್ ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಭೆಯು ಮೊಟಿಗೊಂಡು ಜರಗಿ, ಅದರಲ್ಲಿ ಅಧಿಕಾರ ಸ್ವೀಕರಿಸಬೇಕೆಂಬ ಅಭಿಪ್ರಾಯವನ್ನು ಒಪ್ಪಲಾಯಿತು.

ಲಾಹೋರ್ ಪ್ರಾಂತಿಕ ಸರಕಾರದಿಂದ ಅಲ್ಲಿನ ಸಿಟಿ ಮುನಿಸಿಪಾಲಿಟಿಗೆ ಸಿಗುತ್ತಿದ್ದ ೯,೮೦,೦೦೦ ರೂಪಾಯಿಗಳ ಗ್ರಾಂಟನ್ನು ನಿಲ್ಲಿಸಿರುವರು.

ನೂತನ ರಾಜ್ಯಾಂಗ ರಚನೆಯು ಜಾರಿಗೆ ಬಂದ ಮೇಲೆ ಪ್ರಾಂತಿಕ ಸರಕಾರದ ಆಡಳಿತಕ್ಕೊಳಪಟ್ಟ ಬಂದರಗಳು ಇಂಡಿಯಾ ಸರಕಾರದ ವಶವಾಗುವುವು.

ಸಿಂಧಪ್ರಾಂತ್ಯದಲ್ಲಿ ಭಾರ್ತರಾದಿ ಎಂಬ ಊರಿನಲ್ಲಿ ಒಂದು ಮಗುವಿನ ಕರ್ಟ್ ಗುಂಡಿಗಳನ್ನು (ಬಂಗಾರದ ಬೆಲೆಯ) ಕದ್ದನೆಂಬ ಅಪರಾಧದ ಮೇಲೆ ಒಬ್ಬ ಕಾನ್ಸ್‌ಟೇಬಲನು ೬ ತಿಂಗಳ ಕಠಿಣ ಸಜೆಗೆ ಗುರಿಯಾದನು.

ಬಂಕೀಪುರದ ಬಳಿ (ಬಿಹಾರ್) ಕ್ರಿ ಪೂ ಒಂದನೇ ಶತಮಾನಕ್ಕೆ ಸೇರಿದ ಸುಮಾರು ೩೦೦ ಬೆಳ್ಳಿ ನಾಣ್ಯಗಳು ಸಿಕ್ಕಿರುತ್ತವೆ. ಇದರಿಂದ ಇತಿಹಾಸಪ್ರಸಿದ್ಧ ಪಾಟಲೀಪುತ್ರ ನಗರದ ಚರಿತ್ರೆಯ ವಿವರವು ತಿಳಿಯಬಹುದಂತೆ.

ಮದರಾಸಿನಲ್ಲಿ ನೂತನ ರಾಜ್ಯಾಂಗ ರಚನೆಯು ಜಾರಿಗೆ ಬಂದಾಗ ಪ್ರಧಾನ ಮಂತ್ರಿಗಳಿಗೆ 2500 ರೂಗಳ ವೇತನವೂ ಇತರ ಮಂತ್ರಿಗಳಿಗೆ 2000 ರೂಗಳ ಸಂಬಳವನ್ನೂ ಕೊಡಲಾಗುವುದು.

ದನಗಳ ಅಪಹರಣದ ವಿಷಯಲ್ಲಿ ಪಿರೋಜಪುರದ ಸಿಕ್ಕರಿಗೂ ಮುಸ್ಲಿಮರಿಗೂ ಕಜ್ಜಾಟವಾಯಿತು. ಪರಿಣಾಮವಾಗಿ ಈರ್ವ ಮುಸಲ್ಮಾನರು ಸತ್ತರು. ಇತ್ತಂಡಗಳಲ್ಲಿಯ ಕೆಲವರಿಗೆ ಘಾಯಗಳಾಗಿವೆ.

ಸಿಂಧ ಪ್ರಾಂತ್ಯವು ವಿಂಗಡಿಸಲ್ಪಟ್ಟಂದಿನಿಂದ ಮೊದಲನೇ ಸಲಕ್ಕೆ 'ಪ್ರೆಸ್‌ಎಮರ್ಜನ್ಸಿ' ಕಾನೂನನ್ನು ಅಲ್ಲಿಯ ಅಲ್‌ವಾಹೀದ್ ಎಂಬ ದೈನಂದಿನ ಪತ್ರಿಕೆಯ ಮೇಲೆ ಜ್ಯಾರಿಮಾಡಿ ಅಲ್ಲಿಯ ಸರಕಾರವು 2000 ರೂಗಳ ಸೆಕ್ಯೂರಿಟಿ ಕೇಳಿರುತ್ತದೆ.

ಜಬ್ಬಲ್‌ಪುರದಲ್ಲಿ 40 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಒಂದು ಸಿಮೆಂಟ್ ಕಾರ್ಖಾನೆಯು ಇಷ್ಟರಲ್ಲೇ ಮುಚ್ಚಲ್ಪಡುವುದು. ಇದರ ಪರಿಣಾಮವಾಗಿ 30 ಸಾವಿರ ಜನಗಳಿಗೆ ನಿರುದ್ಯೋಗವು ಪ್ರಾಪ್ತವಾಗುವುದು.

ಅಧಿಕಾರವೊ? ಧಿಕ್ಕಾರವೊ?

ಅಧಿಕಾರ ಬೇಕೋ ಅಥವಾ ಬೇಡವೋ? ಎಂಬುದೆ ಇಂದಿನ ಎಲ್ಲವರ ತರ್ಕದ ಮಾತು. ಕಾಂಗ್ರೆಸ್ ಉಮೇದ್ವಾರರಂತೂ ಅಸೆಂಬ್ಲಿ ಚುನಾವಣೆಯಲ್ಲಿ ಗೆದ್ದದಾಯಿತು. ಸೋಲುವವರು ಸೋತರು. ಈಗ ಅಸೆಂಬ್ಲಿಯನ್ನು ಹೊಕ್ಕು ಮಂತ್ರಿಪದವಿಗಳನ್ನು ಸ್ವೀಕರಿಸಬೇಕೊ ಬೇಡವೊ ಎಂದು ಕಾಂಗ್ರೆಸು ತುಂಬಾ ಯೋಚಿಸಹತ್ತಿದೆ- ರಾಷ್ಟ್ರಪತಿಗಳು 'ಅಧಿಕಾರದಿಂದ ಏನೂ ಪ್ರಯೋಜನವಿಲ್ಲ' ಅನ್ನುತ್ತಾರೆ. ಸತ್ಯಮೂರ್ತಿಯವರು 'ಅದು ಬೇಕೇ ಬೇಕು' ಎಂದು ವಾದಿಸುತ್ತಾರೆ. ಈ ಮಧ್ಯದಲ್ಲಿ ಜನತೆಯು ಯಾರನ್ನು ಹಿಡಿಯಬೇಕು, ಯಾರನ್ನು ಬಿಡಬೇಕು ಎಂಬೀ ಕಳವಳದಲ್ಲಿ ಸಿಕ್ಕಿಕೊಂಡಿದೆ.

ಮೊನ್ನೆ ವರ್ಕಿಂಗ್ ಕಮಿಟಿಯಲ್ಲಿ ಮಹಾತ್ಮರು ಒಂದು ಬಹಳ ಒಳ್ಳೆ ಸೂಚನೆಯನ್ನು ಕೊಟ್ಟರು. ಸೂಚನೆ ಅಂದರೆ ಹಾಗಿರಬೇಕು. ಅಧಿಕಾರ ಸ್ವೀಕಾರಕ್ಕೆ ಮಹಾತ್ಮರ ಒಪ್ಪಿಗೆ ಇದೆ. ಆದರೆ ಒಂದ ಚಿಕ್ಕ ಶರ್ತದ ಮೇಲೆ. 'ಗವರ್ನರರು ತಮ್ಮ ವಿಶೇಷ ಅಧಿಕಾರವನ್ನು ಚಲಾಯಿಸದಂತೆಯೂ ಮತ್ತು ಕಾಂಗ್ರೆಸು ಪ್ರತಿನಿಧಿಗಳಿಗೆ ಜನೋಪಕಾರ ಕಾರ್ಯಗಳನ್ನು ಮಾಡಲು ಸಂದರ್ಭಗಳನ್ನು ಕಲ್ಪಿಸಿಕೊಡುವಂತೆಯೂ, ಬ್ರಿಟಿಷ್ ಸರಕಾರವು ಭರವಸೆ ಕೊಡುವುದಾದರೆ, ಅಧಿಕಾರ ಸ್ವೀಕಾರವನ್ನು ಮಾಡುವುದು ಒಳ್ಳೆತು' ಇದು ಮಹಾತ್ಮರು ಸೂಚಿಸಿದ ಚಿಕ್ಕ ಶರ್ತ-ಜೀರಿಗೆ ಮೆಣಸು ಇದ್ದಂತೆ ಸತ್ಯಮೂರ್ತಿಯವರು ಈ ಶರ್ತವನ್ನು ನಾವು ಅಧಿಕಾರ ಸ್ವೀಕರಿಸಿದ ನಂತರ, ಬ್ರಿಟಿಷ ಸರಕಾರದಿಂದ ಮಾಡಿಸುತ್ತೇವೆ ಎಂದು ಹೇಳಬಹುದು. ಅದೂ ಒಂದು ಹೌದು. ಅಂದರೆ ಮೊದಲು ಅಧಿಕಾರ ಸ್ವೀಕಾರ ಆಗಬೇಕು. ಅಷ್ಟರಲ್ಲಿ ಪ ಜವಾಹರಲಾಲ ನೆಹರುಗಳು, ಶಾರ್ದೂಲ ಸಿಂಗರವರು ಇವರು "ಅಧಿಕಾರ ಸ್ವೀಕರಿಸುವುದೆಂದರೆ ಸೋತ ಹಾಗೆ" ಎಂದು ಪುನಃ ಎಚ್ಚರಿಸುತ್ತಾರೆ. ಈ ಮಧ್ಯೆ ನಮ್ಮಂತವರು ಏನು ಮಾಡಬೇಕು?

ಒಂದು ಅಭಿಪ್ರಾಯ ನ್ಯಾಯವಾಗಿ ಕಾಣುತ್ತದೆ-ಮಂತ್ರಿ ಪದವಿಗೇರಿ ಅನಂತರ ರಾಜಿನಾಮೆ ಕೊಡುವುದಕ್ಕಿಂತಲೂ, ಸದಸ್ಯರಾಗಿಯೇ ಇದ್ದು, ಗವರ್ನರರಿಂದ ರದ್ದುಮಾಡಲ್ಪಟ್ಟರೆ ಒಳಿತೆಂದು ತೋರುತ್ತದೆ.

ಯಾವುದಕ್ಕೂ ಸ್ವಲ್ಪ ಸಮಯದಲ್ಲಿ ವರ್ಕಿಂಗ್ ಕಮಿಟಿಯ ನಿರ್ಧಾರವು ತಿಳಿಯುವುದು. ಅದು ಗುಟ್ಟು ಹೊರಬೀಳುವ ಸಮಯ. ಒಂದು ವೇಳೆ ಅಧಿಕಾರ ಸ್ವೀಕಾರ ವರ್ಕಿಂಗ್ ಕಮಿಟಿಗೆ ಬೇಡವಾದರೆ, ಅಧಿಕಾರಕ್ಕೆ ಯಾರು ಗತಿ? ಪುನಃ ಜಸ್ಟಿಸ್ ಪಾರ್ಟಿಯೇ?

ಮೊನ್ನೆ ವರ್ಕಿಂಗ್ ಕಮಿಟಿಯ ನಿರ್ಧಾರಗಳು ತೀರ ಕಠಿಣವಾಗಿರುವಂತೆ ಕಾಂಗ್ರೆಸ್ ಪ್ರತಿನಿಧಿಗಳಿಗೆ ತೋರಬಹುದು. ಆದರೆ ಅವು ಬರೀ ಸುಲಭವಾದುವುಗಳು. ಖಾದಿ ಧರಿಸುವುದು. ಅಷ್ಟೆ? ಇದನ್ನು ನಮ್ಮ ಕಾಂಗ್ರೆಸ್ ಪ್ರತಿನಿಧಿಗಳು ತಪ್ಪುವವರಲ್ಲವೆಂದು ನಂಬುತ್ತೇನೆ. ಇನ್ನೊಂದು ನಿರ್ಬಂಧ "ಕಾಂಗ್ರೆಸ್ ಪ್ರತಿನಿಧಿಗಳು ಗ್ರಾಮೋದ್ಧಾರದ ಕಾರ್ಯದ ಕಡೆಗೆ ಗಮನವನ್ನು ಇಡಬೇಕು' ಎಂದು. ಇದೇನೂ ಕಷ್ಟವಲ್ಲ.

'ಅಂಥಾ ಸಂಘಟನೆಯ ಸಮಯಗಳಲ್ಲಿ ಮಾತ್ರ ಗವರ್ನರರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸಿಕೊಳ್ಳುವರು. ನವ ರಾಜ್ಯಾಂಗರಚನೆಯು ನಿಮಗೆ, ನಿಮ್ಮದೇ ಆದ ಮತ್ತು ನಿಮ್ಮವರಿಂದಲೇ ಆಡಳಿತ ನೋಡಲು ಶುವ ಅಧಿಕಾರವು ನಿಮ್ಮವರ ಕೈಗೇನೇ ಕೊಡಲ್ಪಡುತ್ತದೆ. ಅಧಿಕಾರವನ್ನು ಸ್ವೀಕರಿಸುವ ಮಂತ್ರಿಗಳು, ಅವರು ಯಾವ ಪಂಗಡದವರೇ ಆಗಿರಲಿ ಪ್ರಾಂತಿಕ ಗವರ್ನರರು ತಮ್ಮ ಎಲ್ಲಾ ಭಾರವನ್ನು ವಹಿಸಿ ಅವರು ಮಾಡಿದ ಪ್ರತಿಯೊಂದು ಜನೋಪಕಾರದ ಕಾರ್ಯಗಳಲ್ಲಿ ಸಹಾಯಕರಾಗುವರೆಂದು ನಾನು ನಿಮಗೆ ಭರವಸೆಯೀಯುತ್ತೇನೆ 'ಎಂದು ಸಂಯುಕ್ತಪ್ರಾಂತ್ಯದ ಗವರ್ನರರು ಒಂದು ಭಾಷಣದಲ್ಲಿ ತಿಳಿಸಿದರು. ಮಹಾತ್ಮರು ಕೇಳಿದ್ದು ಗವರ್ನರರ ಭರವಸೆಯಲ್ಲ, ಬ್ರಿಟಿಷ ಸರಕಾರದ ಭರವಸೆ.

ಶೇದ್ಯ

ಬರ್ಮಾ ಕೌನ್ಸಿಲು.

ಬರ್ಮವು ಹಿಂದೂದೇಶದ ಸರಕಾರವನ್ನು ಬಿಟ್ಟು ಪ್ರತ್ಯೇಕವಾಯಿತು. ಬೇರೆ ಕೌನ್ಸಿಲು ಚುನಾವಣೆಹೊಂದಿಯೂ ಆಯಿತು. ಮಂತ್ರಿಮಂಡಲ ರಚಿಸುವುದೇ ಕಷ್ಟವಾಗಿ ಎಂತೂ ಸಾಗಿತು. ಕೌನ್ಸಿಲು ಪ್ರೆಸಿಡೆಂಟರು ರಾಜೀನಾಮೆ ಕೊಡತೊಡಗಿದರು. ಮುಖ್ಯ ಮಂತ್ರಿಯರು ತಾವೂ ಹಾಗೆಯೇ ಎನ್ನುವಂತಾಯಿತು. ಹೇಗೂ ಮಂತ್ರಿಮಂಡಲವಾಗಿ, ಬಜೆಟು ಹೊರಬಂತು. ಅಷ್ಟರಲ್ಲಿ, ಇಬ್ಬರು ಮಂತ್ರಿಗಳಲ್ಲಿ ಅವಿಶ್ವಾಸದ ಠರಾವುಗಳು ಮಂಜೂರಾದುವು. ಅವರಿಬ್ಬರೂ ರಾಜೀನಾಮೆ ಕೊಟ್ಟರು. ಹೊಸ ಮಂತ್ರಿಮಂಡಲ ಆಗಬೇಕಾಗಿದೆ. ಇಷ್ಟರಲ್ಲಿ, ಬಜೆಟಿನ ಫೈನೆನ್ಸ್ ಮಂತ್ರಿಗಳು ೧೨ ಮಿಲಿಯ ರೂಪಾಯಿಯ ಅಂದಾಜಿನ ಮೊಬಲಗಿನ ಸೆಂಕ್ಷನು ಕೇಳಿದರು. ಇದಕ್ಕೆ ಪ್ರತಿಕೂಲವಾಗಿ ೩೭, ಅನುಕೂಲವಾಗಿ ೧೧ ವೋಟುಗಳು ದೊರೆತು, ಇಡೀ ಫೈನೆನ್ಸ್ ಬಜೆಟು ನಿರಾಕರಣೆಹೊಂದಿತು.

Urgently Wanted

an energetic and respectable youth with experience in correspondence and typewriting to work in an Oldest and Premier Life office at Mangalore Candidates having Insurance knowledge preferred Apply stating qualifications to—

R
C/o Swadeshabhimani,
by the 10th inst

Canara Bank Ltd.,
Bantwal.
ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಅಡವಿನ ಮೇಲೆ ಸದ್ರಿ ಬ್ಯಾಂಕಿನಿಂದ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಕೊಡದೇ ಆ ಕುರಿತು ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸದ್ರಿ ಆಸಾಮಿಗಳ ಪೈಕಿ ಕೆಲವರು ಮೃತಪಟ್ಟದ್ದಾರಾಗಿಯೂ, ನೋಟೀಸುಗಳ ವಾಪಾಸು ಬಂದಿರುವುದರಿಂದಲೂ, ಕೆಲವರು ನೋಟೀಸು ಪಡಕೊಂಡು ಬಡ್ಡಿ ಕೊಡದೆ ಇರುವುದರಿಂದಲೂ ಸದ್ರಿ ಸಾಲಗಳಿಗೆ ಜವಾಬ್ದಾರಿಯಿರುವ ಡಾಗಿನೆಗಳನ್ನು ಇದೇ ಬರುವ ಎಪ್ರಿಲ್ ತಾ 3ನೇ ಶನಿವಾರ ಹಗಲು ಗಂಟೆ 12ಕ್ಕೆ ಯಾ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ಯಾವುದಾದರೂ ಒಂದು ದಿವಸ ಪುನಹ ನೋಟೀಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು ಎಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

(1) ಸಾಲದ ನಂಬ್ರ 220/34 ತಮ್ಮಯ್ಯ ಯಾನೆ ಸೋಮಪ್ಪ ಶೆಟ್ಟಿ, ಜಾರು ಅಳ್ವನ ಅಳಿಯ ಬೇಸಾಯಗಾರ, ಕುರಿಯಾಳಗ್ರಾಮ ಬಂಟ್ವಾಳ ಪೋಸ್ಟು. ಅಸ್ಲು ಮೊಬಲಗು ರೂಪ್ಯಾ 22-0-0.

(2) ಸಾಲದ ನಂಬ್ರ 229/34 ಮಂಜಪ್ಪ ಸಪಲ್ಯ, ದೂಮಪ್ಪ ಸಪಲ್ಯನ ಅಳಿಯ ಬೇಸಾಯಗಾರ ತಂಬೂರು ಗ್ರಾಮ ಬಂಟ್ವಾಳ ಪೋಸ್ಟು. ಅಸ್ಲು ರೂಪ್ಯಾ 10-0-0.

(3) ಸಾಲದ ನಂಬ್ರ 279/34 ಪೀರಪ್ಪ ಆಚಾರಿ, ತಿಮ್ಮ ಆಚಾರಿಯ ಮಗ ಎಲಿಯ ನಡುಗೋಡು ಗ್ರಾಮ ಬಂಟ್ವಾಳ ಪೋಸ್ಟು ಅಸ್ಲು ರೂಪ್ಯಾ 12-0-0.

Office of the Bank
Bantwal
3—3—37.

M. Damodara Baliga,
Agent.

NOTICE

In the Court of the Subordinate Judge of S K.

Original Suit No. 81 of 1935.
R. I. A Nos 3, 4, & 28 of 1937

Between

Mrs Margaret Mathias Petitioner Plaintiff)

and

1 F. X Saldanha Dt Forest Officer at Thana, Bombay Presidency
2 Helen Saldanha, wife of 1st defendant, residing with him at Thana

Respondents (Defts)

The above defendants respondents are hereby informed that the petitioner has applied for final decree in the above suit in I A 3/1937, for attachment of the immoveable properties described in the schedule annexed to the petition in I A 4/37 and for amendment of the preliminary decree in I A 28/1937 to this court The said three petitions are posted to 12—3—1937 for hearing If the defendants have any objections to the above they may submit the same before this court on the said date, Otherwise the petitions will be decided in their absence

Mangalore,
2—3 1937

S. Venkat Rao,
Vakil for Petitioner

Notice

In the Court of the District Munsif Mangalore

O P No 50/1936.

Between

Ithamma minor by next friend and father Hasane Beary Petitioner (Plff.)

and

Sumithra Bhatta and another Respondents (Defts)

To

2nd Respondent P. Anantha Rao, son of Mangesh Rao, Motor Driver Jedigudde, Mangalore town

Please take notice that the the petitioner has filed the above petition to institute a suit informa pauperis against you and the 1st respondent. The said petition is posted for final disposal on 9-3-'37 at 11 A M. and you may appear in person or by pleader and oppose the same. Failing which, the above petition will be decided in your absence.

Mangalore,
2—3—1937

A. Shanker Alva,
Vakil for Petitioner

ನೋಟೀಸು

Attur Vaikunta Prabhu Bank, Mangalore.

ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡಕೊಂಡ ನಂತರ ಕ್ಲುಪ್ತವ್ಯಾದಿಗೆ ಅಸಲು, ಬಡ್ಡಿ, ಕೊಡದೆ ಈ ವರೆಗೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು ಕೆಲವು ಜ್ಯಾರಿಯಾಗಿಯೂ, ಕೆಲವು ಅವರು ಮೃತಪಟ್ಟಿರುವರೆಂದು ಜ್ಯಾರಿಯಾಗದೆ ವಾಪಾಸು ಬಂದಿರುವದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1937ನೇ ಇಸವಿ ಮಾರ್ಚ ತಾ 10ನೇ ಬುಧವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ, ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1937ನೇ ಇಸವಿ ಮಾರ್ಚ ತಾ 10ನೇ ಬುಧವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 3 ಘಂಟೆಗೆ ಬಹಿರಂಗವಾಗಿ ಏಲಂ ಮಾಡುವೆವು

1 ಸಾಲಪಡಕೊಂಡವನ ಹೆಸರು ಮತ್ತು ವಿಳಾಸ ಹೆಲಿನ್ ಸೋನ್ಸ್ D/o ಅಸ್ಕೆಲ್ ಸೋನ್ಸ್, ಬರ್ಕೆತೋಟ, ಬೊಕ್ಕಪಟ್ಣ ಮಂಗಳೂರು ಸಾಲದ ನಂಬ್ರ A 271 ಮತ್ತು ಅಡವಿಟ್ಟ ತಾ 8-2-35 ಬರತಕ್ಕ ಅಸ್ಲು ರೂ 8-0 0

2 ಸಾಲಪಡಕೊಂಡವನ ಹೆಸರು ಮತ್ತು ವಿಳಾಸ ಚಂದು ಕುಟ್ಟಿ ಆಚಾರಿ S/o ಚಂದು, ಚಿನ್ನದ ಕೆಲಸ, ಗೋಳಿಕಟ್ಟಾ ಬಜಾರ್ ಮಂಗಳೂರು ಸಾಲದ ನಂಬ್ರ 650 ಮತು ಅಡವಿಟ್ಟ ತಾ. 26-5-36 ಬರತಕ್ಕ ಅಸಲು ರೂ 10—0—0.

3. ಸಾಲಪಡಕೊಂಡವನ ಹೆಸರು ಮತ್ತು ವಿಳಾಸ—ಕೆ. ಗೋಪಾಲ ಶೆಟ್ಟಿ N/o ದೋಜಿ ಮಾಡ; ಪೇದೆ, ಇಂಪೀರಿಯಲ್ ಬೇಂಕ್ ಮಂಗಳೂರು ಸಾಲದ ನಂಬ್ರ A 648 ಮತ್ತು ಅಡವಿಟ್ಟ ತಾ 1-4 35 ಬರತಕ್ಕ ಅಸಲು ರೂ 17-0-0

4 ಸಾಲಪಡಕೊಂಡವನ ಹೆಸರು ಮತ್ತು ವಿಳಾಸ ಕೃಷ್ಣಪ್ಪ ಮೇಲಂಟ S/o ನಕು ಮೇಲಂಟ ಬೊಕ್ಕಪಟ್ಣ ಬೋಳೂರು ಮಂಗಳೂರು ಸಾಲದ ನಂಬ್ರ A 127 ಮತ್ತ ಅಡವಿಟ್ಟ ತಾ 17—1—35 ಬರತಕ್ಕ ಅಸಲು ರೂ 20 0-0

Mangalore 2 2 37 } A Vaikunt Prabhu
Proprietor
A V P Bank

Change of Situation of the Registered Office.

Notice is hereby given that the registered office of the Company has been shifted to the premises of our factory at Kalyanpur South Canara District with effect from 21st Feb 1937

For the Kalyanpur Sugar Mills Ltd

Kalyanpur 2?th Feb 1937 } P G Nayak
Secretary

KANARA WATCH WORKS

WATCH MAKERS & GENERAL MERCHANTS
Hampankatta MANGALORE.

Dealers in — Watches Clocks Timepieces Rolled Gold Jewellery & Sporting Materials etc



Stockists of West End Zenith Mendium Swiss Watches of latest designs & tastes

Repairers — Watches Clocks, Timepieces and Gramophones

Japan 8 Inch	Octegon	Rs	6	0	0
8	Regulator	„	6	12	0
10	Octegon		6	8	0
10	Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು ವಾಚು, ಗಡಿಯಾರ, ವ ಗ್ರಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲುಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

ಹೊಟ್ಟೆ ವ್ಯಾಧಿಗಳಿಂದ ನರಳುವವರು

ಶ್ರೇಷ್ಟ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ವಿಚಾರ ಮೊದಲು ದೃಢಪಡಿಸಿಕೊಳ್ಳಿ.

ಈ ಕೆಳಗಿನ ಗುರುತಿನ ಕೆಂಪು ಮುದ್ರೆಯಿರುವ ತಾಜಾ ಕಾರ್ಟನುಗಳನ್ನೇ ನೋಡಿ ಪಡಕೊಳ್ಳಿರಿ.

MACLEAN Brand Stomach Powder

ಈ ಗುರುತುಗಳು ಹೀಗೆಯೇ ಮೇಲ್ಗಡೆ ಮತ್ತು ಕೆಳಗಡೆಯಲ್ಲಿಯೂ ಇರುವುವು ಇದರಲ್ಲಿ ತಾಜಾ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಇದೆ ನಿಮ್ಮ ಭದ್ರತೆಗಾಗಿ ಈ ಗುರುತುಗಳನ್ನು ನೋಡದೆ ತೋಕ ಹೋಗಬೇಡಿ

Alex C. Maclean

Martin & Harris Ltd



Martin & Harris Ltd

ಇಮಿಟೇಶನ್ ಪೌಡರನ್ನು ಉಪಯೋಗಿಸಿ ಆರೋಗ್ಯವು ಕೆಡದಂತೆ ಎಚ್ಚರವಿರಲಿ

ನಿಮ್ಮ ಭದ್ರತೆಗೆ ಮೇಲಿನ ಮುದ್ರೆಯನ್ನು ಪ್ರತಿ ಉತ್ತಮ ಪೊಟ್ಟಣಗಳ ಮೇಲಿನ ಮತ್ತು ಕೆಳಗಿನ ಭಾಗದಲ್ಲಿ ಅದು ಭಾಗವಾಗಿರದೆ ಅಲೆಕ್ಸ್ ಸಿ ಮೆಕ್ಲೀನ ಎಂಬ ಸಹಿಯೂ ಸರಿಯಾಗಿ ಇದ್ದರೆ ಮಾತ್ರ ಅದರೊಳಗೆ ಉತ್ತಮ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಇರುವುದೆಂದು ನಂಬತಕ್ಕದ್ದು

ಯಾವಾಗಲೂ ಬರೇ ಮೆಕ್ಲೀನ ಎಂಬುದಾಗಿ ಕೇಳಬೇಡಿ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರೆಂದು ಪ್ರತ್ಯೇಕವಾಗಿ ವಿಚಾರಿಸಿರಿ 516

ಬಾಬುಲಿನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟಿದು ಸೋಡಿಯಮಿನ ಲವಣ, ಮೆಗ್ನೆಶಿಯಮ್ ಪೊಟೇಶಿಯಮ್ ಮತ್ತು ಬಡಿಶೇಪ ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿದೆ ಚಿಕ್ಕಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛಪಡಿಸಿ ಬಲಗೊಳಿಸಿ ಕಾಪಾಡುವುದು

ಇವುಗಳಿಗೆ ಉಪಯೋಗ ... ಮಕ್ಕಳಿಗೆ ಹಲ್ಲು ... ಗಳನ್ನೆಲ್ಲಾ ... ಹೊಂದಿ

ಬಾಟ್ಲಿ 1ಕ್ಕೆ 14 ಆಣೆ

ಪ್ರೀಸ್ಕ್ರಿಪ್ಶನ್ ಪ್ರತ್ಯೇಕ

ಬಾಬ್ ಕೆಮಿಕಲ್ ವರ್ಕ್ಸ ಬೊಂಬಾಯಿ ಮತ್ತು ಕಲ್ಕತ್ತಾ.

ಎರಡಾಣೆ ಅಂಚೆ ಚೀಟನ್ನು ಕಳುಹಿಸಿದವರಿಗೆ, ಒಂದು ಸ್ಯಾಂಪಲ್ ಬಾಟಲಿ ಕಳುಹಲಾಗುವುದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಅಧಿಕಾರ ಸ್ವೀಕಾರವೊ ಅಥವಾ ಧಿಕ್ಕಾರವೊ?

ಅನೇಕ ಪತ್ರಿಕೆಗಳ ಮತ್ತು ಮುಖಂಡರುಗಳ ಅಭಿಪ್ರಾಯಗಳ ಮೇಲೆ ಈ ಲೇಖನವನ್ನು ಬರೆಯಲಾಗಿದೆ

ಚುನಾವಣೆಗಳ ಗಲಭೆಯು ಮುಗಿಯಿತು. ಕಾಂಗ್ರೆಸು ಎಲ್ಲೆಲ್ಲೂ ಜಯಶಾಲಿಯಾಗಿಯೇ ತನ್ನ ಪ್ರತಿಭೆಯನ್ನು ಬೀರಿತು. ಪ್ರಾಮುಖ್ಯ ಆರು ಪ್ರಾಂತ್ಯಗಳಲ್ಲಿ ಕಾಂಗ್ರೆಸು ವಿಶೇಷ ಬಹುಮತದಿಂದ ಚುನಾಯಿಸಲ್ಪಟ್ಟದ್ದ ಜನತೆಗೆ ಸೇರಿದ ಏಕಮಾತ್ರ ಸಂಸ್ಥೆ ಎಂದೂ ಜನತೆಯ ಪ್ರತಿನಿಧಿಯಾಗಿ ಅಧಿಕಾರವನ್ನು ವಹಿಸಬಲ್ಲ ಒಂದೇ ಸಂಘವೆಂದೂ, ಹೇಳಿಕೊಂಡ ತನ್ನ ವಾದವನ್ನು ಕಾರ್ಯತಃ ರುಜುಪಡಿಸಿತು. ಇಂಡಿಯಾ ಸರಕಾರದ ನವರಾಜಶಾಸನ ಪ್ರಕಾರ, ಸ್ವಲ್ಪಡಳಿತದ ಜವಾಬುದಾರಿಯನ್ನು ಹಿಂದೀಯರ ವಶಕ್ಕೆ ಒಪ್ಪಿಸಿ, ಬ್ರಿಟಿಷ್ ಮೇಲ್ವಿಚಾರದ ಮೇಲೆ ದೇಶಾಡಳಿತವು ನಡೆಯಬೇಕೆಂಬ ಈ ಉದ್ದೇಶವು ಒಂದುವೇಳೆ ಶಾಂತಿದಾಯಕವಾಗಿ ಏಕೆ ಪರಿಣಮಿಸಬಾರದು ಎಂಬ ಭಾವನೆಯು ಕಾಂಗ್ರೆಸ್ ಮುಖಂಡರ ಮನಸ್ಸನ್ನು ಹೊಕ್ಕಿತು. ಅಂತೆಯೇ ಕಾಂಗ್ರೆಸು ಕೌನ್ಸಿಲು ಚುನಾವಣೆಗಳಲ್ಲಿ ಭಾಗವಹಿಸಬೇಕೆಂದೂ ಅಲ್ಲಿ ಬಹುಮತಪಡೆದ ಕಾಂಗ್ರೆಸ್ ಪ್ರತಿನಿಧಿಗಳು ದೇಶಕ್ಕೆ ಹಿತಕರವಾಗುವಂತೆ ಶಾಸನಗಳನ್ನು ತಿದ್ದುಪಡಿಮಾಡುವ ಅಥವಾ ಅವುಗಳನ್ನು ಪೂರ್ಣ ರದ್ದುಮಾಡುವ ಕೆಲಸದಲ್ಲಿ ಭಾಗವಹಿಸಿ ತನ್ಮೂಲಕ, ಬ್ರಿಟಿಷ್ ಸರಕಾರದಿ ದ ಇಂಡಿಯಾ ಸರಕಾರದ ಹೆಸರಿನಲ್ಲಿ ಹೊರಡಿಸಲ್ಪಟ್ಟ ಈ ನವರಾಜ್ಯಾಂಗರಚನೆಯ ಟೊಳ್ಳುತನವನ್ನ ಹೊರಗೆಳೆಯಬೇಕೆಂದೂ ನಿರ್ಧರಿಸಿತ ಆ ಮೇಲೆಯೇ ಈ ಚುನಾವಣೆ ಗಲಭೆ ಆರಂಭ

ಇನ್ನು ಹೇಗಾದರೂ ಕಾಂಗ್ರೆಸ್ ಕೌನ್ಸಿಲಿನಲ್ಲೆಲ್ಲ ತುಂಬಿಕೊಂಡಿದೆ ಎಂದರೆ ಅತಿಶಯದ ಮಾತಾಗದು ಸಂಯುಕ್ತ ಪ್ರಾಂತ್ಯಗಳಲ್ಲಿ ೨೨೮ ಸ್ಥಾನಗಳಲ್ಲಿ ೧೩೩ ಕಾಂಗ್ರೆಸಿಗೆ ಮದ್ರಾಸಿನಲ್ಲಿ ೨೧೫ ಸ್ಥಾನಗಳಲ್ಲಿ ೧೫೯ ಸ್ಥಾನಗಳ ಹೀಗೆ ಇನ್ನೂ ನಾಲ್ಕು ಪ್ರಾಂತ್ಯಗಳಲ್ಲಿ ಇದೇ ಪ್ರಕಾರ ಹೆಚ್ಚಿನ ಸ್ಥಾನಗಳು ಕಾಂಗ್ರೆಸ್ ವಶವಾಗಿವೆ ನವರಾಜ್ಯಾಂಗಶಾಸನ ಪ್ರಕಾರ "ಬಹುಮತದಿಂದ ಚುನಾಯಿತರಾಗಿ ಕೌನ್ಸಿಲಿನಲ್ಲಿ ಒಂದು ಪಂಗಡವು ಎಲ್ಲ ಬೇರೆ ಪಂಗಡಗಳಿಗಿಂತಲೂ ಹೆಚ್ಚು ಸಂಖ್ಯೆಯಿಂದಿದ್ದರೆ, ಆ ಪಂಗಡದ ಮುಖಂಡನೇ ಮಂತ್ರಿಮಂಡಲವನ್ನು ರಚಿಸಿ, ಸಮರ್ಪಕ ಆಡಳಿತವನ್ನು [illegible]ಸುವ ಜವಾಬುದಾರಿ ವಹಿಸುವವನಾಗಬೇಕು" ಎಂದಿದೆ ಆದರೆ "ಪ್ರಾಂತ್ಯಾಧಿಕಾರಿಯಾದ ಗವರ್ನರರು ತಮಗೆ ಹಿತವೆಂದು ತೋರಿದ್ದಲ್ಲಿ, ಅಲ್ಪಸಂಖ್ಯಾಕರಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಓರ್ವ ಮಂತ್ರಿಯನ್ನು ಆರಿಸಬಹುದು" ಎಂದು ಅದೇ ಶಾಸನದಲ್ಲಿ ಬರೆದಿರುತ್ತದೆ "ಬಹುಮತದಿಂದ ಚುನಾಯಿತರಾಗಿ, ಬಹು ಸಂಖ್ಯಾಕರಾಗಿ ಮಂತ್ರಿ ಪದವಿಗಳನ್ನು ಸ್ವೀಕರಿಸಿದ ಪಂಗಡದ ರಾಜ್ಯಾಡಳಿತ ಕ್ರಮವು ಮಾನ್ಯ ಗವರ್ನರರಿಗೆ ಅತೃಪ್ತಿಯನ್ನುಂಟುಮಾಡಿದರೆ, ಅವರು ಆ ಮಂತ್ರಿಮಂಡಲವನ್ನು ರದ್ದುಮಾಡಿ, ಪುನಃ ಚುನಾವಣೆಗಳನ್ನು ಮಾಡಬಹುದು" ಎಂಬಂಥಾ ಈ ನಿರ್ಬಂಧಯುಕ್ತ ಕಾನೂನುಗಳೂ ಆ ನವಶಾಸನಗಳಲ್ಲಿ ಇವೆ.

"ಒಟ್ಟಿನ ಮೇಲೆ ಹೇಳುವುದಾದರೆ ನವರಾಜ್ಯಾಂಗಶಾಸನವು ಅಕ್ಷರಗಳ ಜೋಡಣೆಯಲ್ಲಿ ಬದಲಾವಣೆಯನ್ನು ತೋರಿಸುತ್ತದೆಯೇ ವಿನಹಾ, ಬ್ರಿಟಿಷ್ ಸರಕಾರದ ಧೋರಣೆಯನ್ನು ಬದಲಿಸುವ ಯಾವುದೂ ಅದರಲ್ಲಿ ಕಂಡುಬರುವುದಿಲ್ಲ" ಎಂಬ ಈ ಅಭಿಪ್ರಾಯವನ್ನು ಅಧಿಕಾರ ಸ್ವೀಕಾರದ ವಿರೋಧಿಗಳು ಸೂಚಿಸುತ್ತಾರೆ. ಇದಕ್ಕಾಗಿಯೇ ಪಂಡಿತ ಜವಾಹರಲಾಲ ನೆಹರುಗಳು ಪ್ರಾಂತಿಕ ಕಾಂಗ್ರೆಸ ಸಭೆ ಉಪಸಭೆಗಳಿಗೆ ಆಜ್ಞೆಗಳನ್ನು ಕೊಡುತ್ತಾ, ಅಧಿಕಾರ ಸ್ವೀಕಾರದ ವಿಷಯ ಅಭಿಪ್ರಾಯಗಳನ್ನು ತಿಳಿಸುವಾಗ, **ಅಧಿಕಾರ ಸ್ವೀಕಾರವು ನವರಾಜ್ಯಾಂಗ ಶಾಸನವನ್ನು ನಿರಾಕರಿಸುವುದಕ್ಕಾಗಿ** ಎಂಬ ಈ ಭಾವನೆಯುದಾಗಿರಬೇಕು ಎಂದು ತಿಳಿಸಿರುವರು ಅಂದರೆ "**ಭಾರತ ಹಿತಕ್ಕೆ ವಿರೋಧವಾಗಿರುವ ಈ ನವ ರಾಜ್ಯಾಂಗ ಶಾಸನವನ್ನು ಪೂರ್ಣ ರದ್ದುಮಾಡುವುದೇ ಅಧಿಕಾರ ಸ್ವೀಕರಿಸುವ ಕಾಂಗ್ರೆಸ್ಸುವಾಲರ ಉದ್ದೇಶವಾಗಿರಬೇಕು ವಿನಹ, ಬ್ರಿಟಿಷ ಸಾಮ್ರಾಜ್ಯ ಶಾಹೀ ಧೋರಣೆಯೊಂದಿಗೆ ಸಹಕರಿಸಲಿಕ್ಕಲ್ಲ**" ಎಂಬ ರಾಷ್ಟ್ರಪತಿಗಳ ಈ ಅಭಿಪ್ರಾಯದಿಂದ ಚುನಾವಣೆಗಳಲ್ಲಿ ಕಾಂಗ್ರೆಸು ಭಾಗವಹಿಸಿದ ಉದ್ದಿಶ್ಯ ಒಂದು ವೇಳೆ ಅಧಿಕಾರಸ್ವೀಕರಿಸುವುದಾದರೂ ಯಾವ ಉದ್ದಿಶ್ಯದಿಂದ ಎಂಬ ಈ ವಿಷಯಗಳು ಖಚಿತವಾಗುತ್ತವೆ

ಇನ್ನು ಅಧಿಕಾರವನ್ನು ಸ್ವೀಕರಿಸಲೇ ಬಾರದು ಎಂದು ಕೆಲವರು ಹೇಳುತ್ತಾರೆ ಯಾತಕ್ಕೆ? ಅದಕ್ಕೂ ಯೋಗ್ಯ ಕಾರಣಗಳಿವೆ ಕಾಂಗ್ರೆಸ್ ಎಂಬೀ ರಾಷ್ಟ್ರಸಂಸ್ಥೆಯು ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸುವುದೇ ತನ್ನ ಧ್ಯೇಯವಾಗಿಟ್ಟುಕೊಂಡು ಅರ್ಧ ಶತಮಾನದಿಂದಲೂ ಕೆಲಸವನ್ನ ಮಾಡಿಕೊಂಡುಬಂದಿದೆ ಈಗ ಅಧಿಕಾರವನ್ನು ಸ್ವೀಕರಿಸುವ ಉತ್ಸಾಹದಲ್ಲಿ ಕಾಂಗ್ರೆಸ್‌ವಾಲರು ತಮ್ಮನ್ನು ಚುನಾಯಿಸಿದವರನ್ನಾಗಿ ಮಾಡಲು ಕಾರಣಭೂತವಾದ ಕಾಂಗ್ರೆಸ್ಸಿನ ಆದ್ಯ ಉದ್ದೇಶವನ್ನೇ ಮರೆತುಬಿಡುವವರಾಗಬಹುದು ಕಾಂಗ್ರೆಸು ಅಧಿಕಾರವನ್ನು ಸ್ವೀಕರಿಸಿದೇ ಆದರೆ, ಅದು ಸ್ವಾತಂತ್ರ್ಯ ಸಾಧನೆಯ ತನ್ನ ಧ್ಯೇಯವನ್ನು ಬದಿಗಿಟ್ಟು ಸಾಮ್ರಾಜ್ಯ ಶಾಹಿತ್ವದೊಡನೆ ಸಹಕರಿಸಿ ಜನತೆಯ ಅವಿಶ್ವಾಸಕ್ಕೆ ಪಾತ್ರವಾಗಬೇಕಾಗುವುದು ಜನತೆಯ ವಿಶ್ವಾಸವು ಕಾಂಗ್ರೆಸ್ಸಿನ ಮೇಲೆ ಲೋಪವಾದೊಡನೆ, ಕಾಂಗ್ರೆಸು ಅದನ್ನು ಪುನಃ ಸಂಪಾದಿಸಲಾರದು ಅದುದರಿಂದ ಸರಕಾರದೊಡನೆ ಸಹಕರಿಸಿ ನಡೆಯುವಂತಾಗುವ ಈ ಅಧಿಕಾರ ಸ್ವೀಕಾರವು ನಿರರ್ಥಕವಾದುದು, ಇದರ ಬದಲಾಗಿ ಕಾಂಗ್ರೆಸು ಅಧಿಕಾರ ಸ್ವೀಕರಿಸದ, ಕೌನ್ಸಿಲಿನಲ್ಲಿ ಸರಕಾರಕ್ಕೆ ವಿರುದ್ಧ ಹೋರಾಡಿ, ರಾಜ್ಯಾಂಗ ರಚನೆಯನ್ನು ಮುಂದೆ ಸಾಗದಂತೆ ಮಾಡಿದರೆ ಎಷ್ಟೋ ಒಳ್ಳೆಯದಿದೆ ಅಧಿಕಾರ ಸ್ವೀಕಾರ ಮಾಡಿ ಆ ಮೇಲೆ ಸುಮ್ಮನೆ ರಾಜಿನಾಮೆ ಕೊಡುವುದಕ್ಕಿಂತಲೂ, ಅಧಿಕಾರ ಸ್ವೀಕರಿಸದೇ ಇರುವುದು ಉತ್ತಮ ಇದಿಷ್ಟು ವಿರೋಧಪಕ್ಷದವರ ಅಭಿಪ್ರಾಯ

ಇದನ್ನೇ ಸಮರ್ಥಿಸುತ್ತಾ, ರಾಷ್ಟ್ರಪತಿ ಜವಾಹರಲಾಲ ನೆಹರುರವರು ಫೈಜಾಪುರ ಕಾಂಗ್ರೆಸ್ ಅಧ್ಯಕ್ಷ ಭಾಷಣದಲ್ಲಿ ಹೀಗೆ ಅಪ್ಪಣೆ ಕೊಡಿಸಿದರು "ಅಧಿಕಾರ ಸ್ವೀಕಾರ ಮತ್ತು ಮಂತ್ರಿಮಂಡಲ ರಚನೆಯ ಗೋಜಿಗೆ ಹೋಗದೆ ಕಾಂಗ್ರೆಸ್ ತತ್ವದಂತೆ ನಡೆಯುವುದು ಉತ್ತಮವೆನಿಸುತ್ತಿದೆ ಈ ತತ್ವಕ್ಕೆ ತಪ್ಪಿದಲ್ಲಿ ನಾವು ನಾವಾಗಿಯೇ ಕಾಂಗ್ರೆಸ ತತ್ವವನ್ನು ಮುರಿದಂತಾಗುತ್ತದೆ ನವ ರಾಜ್ಯಾಂಗ ರಚನೆಯನ್ನು ಬಹಿಷ್ಕರಿಸುವ ಉದ್ದೇಶದಿಂದ ಅಧಿಕಾರವನ್ನು ಸ್ವೀಕರಿಸುವುದೆಂದರೆ ಅದು ಕಾಂಗ್ರೆಸ್ ತತ್ವವನ್ನು ವಿಸ್ತಾರದೆ ಆಗ ವುದಿಲ್ಲ ಅಧಿಕಾರ ಸ್ವೀಕರಿಸುವುದೆಂದರೆ ಬ್ರಿಟಿಷ ಸಾಮ್ರಾಜ್ಯಶಾಹಿ ಧೋರಣೆಯೊಂದಿಗೆ ನಾವು ಸಹಕರಿಸುವುದು ಎಂದೇ ಅರ್ಥವಾಗುತ್ತದೆ ವಿನಹ ಬೇರೇನೂ ಅಲ್ಲ ಇದರಿಂದ ನಮ್ಮವರನ್ನು ನಾವೇ ಕಷ್ಟಕ್ಕೆ ಗುರಿಮಾಡಿದಂತಾಗುತ್ತದೆ ಈ ಸ್ಥಿತಿಯಲ್ಲಿ ಅಧಿಕಾರ ಸ್ವೀಕಾರ ಮಾಡುವುದೂ ಮತ್ತು ನವ ರಾಜ್ಯಾಂಗ ಕಟ್ಟವನ್ನು ಮುರಿಯುವುದೂ ಈ ಎರಡು ಕಾರ್ಯಗಳನ್ನು ಒಂದೇ (ನಮ್ಮಿಂದ) ಸಲ ಮಾಡಬರುವುದಿಲ್ಲ ಇಷ್ಟರವರೆಗೆ ಶಾಸನ ಸಭೆಗಳಲ್ಲಿ ದೇಶಕ್ಕೆ ಅಹಿತವಾದ ಕಾರ್ಯಗಳನ್ನು ಮಾಡುವವರನ್ನು ಅಲ್ಲಿಂದ ಹೊರಹಾಕಲು ತಾವು ಶಾಸನ ಸಭೆಗಳನ್ನು ಪ್ರವೇಶಿಸುವೆವೆಂದು ಚುನಾವಣೆಗೆ ನಿಂತ ಉಮೇದ್ವಾರರು ತಮ್ಮ ಧ್ಯೇಯಗಳನ್ನು ತಿಳಿಸಿರುವರು ಆದರೆ ಈ ಕಾರ್ಯವು ಅಧಿಕಾರ ಸ್ವೀಕಾರದ ವಿಷಯ ಸರಿಯೆನಿಸಲಾರದು ನವ ಶಾಸನ ಸಭೆಗಳಲ್ಲಿ ಬಹುಮತ ಪಂಗಡವಾಗಿದ್ದರೆ ನಾವು ಅಧಿಕಾರ ಸ್ವೀಕರಿಸದೆ ಅಲ್ಲಿ ದೇಶ ಅಹಿತಕರಿಗಳನ್ನು ತಡೆಗಟ್ಟಿ ಮಂತ್ರಿಮಂಡಲ ರಚನೆಯಾಗದಂತೆ ಮಾಡಬಹುದು"

ಇನ್ನೊಂದು ರೀತಿಯಲ್ಲಿ ಕಾಂಗ್ರೆಸು ಕೌನ್ಸಿಲಿನಲ್ಲಿ ವರ್ತಿಸಬಹುದು. ಕೌನ್ಸಿಲಿನಲ್ಲಿರುವ ದೇಶ ಹಿತಕಾಂಕ್ಷಿಗಳ ಒಂದು ಪಂಗಡದ ಮುಖಂಡರಿಗೆ ಅಧಿಕಾರ ಸ್ವೀಕರಿಸುವಂತೆ ಮಾಡಿ, ಆ ಪಂಗಡವನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡು ಕೆಲಸಮಾಡಿಸಬಹುದು. ಒಂದು ವೇಳೆ ಆ ಪಂಗಡವು ವ್ಯತಿರಿಕ್ತವಾಗಿ ವರ್ತಿಸಿದಲ್ಲಿ, ಕಾಂಗ್ರೆಸ್ ಬಹುಮತದಿಂದ ಅದನ್ನು ಕೂಡಲೇ ರದ್ದುಮಾಡಬಹುದು. ಈ ಸಂದರ್ಭದಲ್ಲಿ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಪ್ರಾಮುಖ್ಯ ವಿಷಯವೆಂದರೆ, ರಾಷ್ಟ್ರಸಭೆಯ ಧೋರಣೆ "**ಬ್ರಿಟಿಷ ಸರಕಾರವು ಇಂಡಿಯಾ ಸರಕಾರದ ಹೆಸರಿನಲ್ಲಿ ಜ್ಯಾರಿಗೆ ತಂದಿರುವ ಈ ನವ ರಾಜ್ಯಾಂಗ ರಚನೆಯು ಭಾರತೀಯರಿಗೆ ಅಸಮ್ಮತವಾಗಿದೆಯೆಂದು ತೋರ್ಪಡಿಸಿ, ಅವರು ಅದನ್ನು ಕೂಡಲೇ ಹಿಂತೆಗೆಯುವಂತೆ ಮಾಡಿ, ಜವಾಬ್ದಾರೀಯುಕ್ತ ಇನ್ನೊಂದು ರಾಜ್ಯಾಂಗ ಕ್ರಮವನ್ನು ಜನತೆಗೆ ಒಪ್ಪುವಂತೆ ಮಾಡುವ ಹಾಗೆ ಪ್ರಯತ್ನಗಳಾಗಬೇಕು**"

ಕೌನ್ಸಿಲು ಪ್ರವೇಶ ಮಾಡಿದವರಲ್ಲಿ ಒಂದು ಪಂಗಡದವರು ನವರಾಜ್ಯಾಂಗ ರಚನೆಯಲ್ಲಿರುವ ಅಧಿಕಾರಗಳನ್ನೂ ಮಂತ್ರಿಪದವಿಗಳನ್ನೂ ಸ್ವೀಕರಿಸಿ ಶಾಂತ ರೀತಿಯಿಂದ ಅದನ್ನು ಚಲಾಯಿಸಬಹುದೆಂಬ ಅಭಿಪ್ರಾಯವನ್ನಿಟ್ಟುಕೊಂಡಿದ್ದಾರೆ ಅಲ್ಲದೆ, ಅದರಿಂದ ತುಂಬಾ ಒಳಿತು ಆಗುತ್ತದೆಂದೂ ನಂಬಿಕೊಂಡವರಿದ್ದಾರೆ ಆದರೆ ನಮ್ಮ ಗುರಿಯು ಒಂದೇಯಾಗಿರಬೇಕು ಸ್ವರಾಜ್ಯವು ನಮ್ಮ ಗುರಿ ಇದನ್ನು ಬಿಟ್ಟು ಇತರ ಚಿಕ್ಕ ಕೆಲಸಗಳಿಗೆ ನಾವು ಮನಸೋತರೆ, ದೇಶದ ಹಿತವು ಹಾಳಾಗಿ ಹೋಗುತ್ತದೆ ಆ ಸಂಪೂರ್ಣ ಸ್ವರಾಜ್ಯವೇ ನಮ್ಮ ಜನತೆಗೆ ಹಿತವನ್ನೂ ಸುಖವನ್ನೂ ಉಂಟುಮಾಡಬಲ್ಲದು

ಸರದಾರ ಶಾರ್ದೂಲ್‌ಸಿಂಗ್ ರವರು ಈ ವಿಚಾರ ಹೀಗೆ ಹೇಳಿದರು "ನಾವು ಆಡಳಿತದಲ್ಲಿ ಅಧಿಕಾರ ಸ್ವೀಕರಿಸಿದರೆಂದರೆ ಸರಕಾರದೊಡನೆ ಸಹಕರಿಸಬೇಕಾಗುವುದು. ಸಹಕಾರದಿಂದ ಅಸಹಕಾರವನ್ನುಂಟುಮಾಡಲಿಕ್ಕಾಗುವುದಿಲ್ಲ. ಇಲ್ಲವೆ ಸಣ್ಣ ಸಣ್ಣ ಚುಚ್ಚಾಟದಿಂದ ದೊಡ್ಡ ಯುದ್ಧವನ್ನೂ ಮಾಡಲಿಕ್ಕಾಗಲಿಕ್ಕಿಲ್ಲ ನಾವು ಮಾರ್ಗದ ಒಂದು ಬದಿಯಲ್ಲಿ ನಿಂತು ಅಲ್ಲಿ ಬಿದ್ದ ತಿಂಡಿಚೂರುಗಳನ್ನು ಹೆಕ್ಕಿತಿನ್ನುವ ಪ್ರಯತ್ನದಂತೆ ಮಾಡಿದರೆ ನಮ್ಮ ಕಾರ್ಯವು ಎಂದಿಗೂ ಸಫಲವಾಗಲಾರದು. ಸ್ವಾತಂತ್ರ್ಯವೇ ನಮ್ಮ ಗುರಿಯಾಗಿರಬೇಕು. ಹಾಗಿದ್ದರೆ ಯಾವ ದಬ್ಬಾಳಿಕೆಯೂ ನಮ್ಮನ್ನು ಹೆದರಿಸಲಾರದು

ಅಧಿಕಾರ ಸ್ವೀಕಾರವೆಂದರೆ ತಾವು ನಮ್ಮ ಪಕ್ಷಕ್ಕೆ ಸೋತುಹೋದ ಹಾಗೆ ಸ್ವಅಧಿಕಾರದಿಂದ ಮಂತ್ರಿಪದವಿಗಳನ್ನು ಸ್ವೀಕರಿಸದೇ ದರ್ಪದಿಂದ ಇರುವುದೇ ನಮ್ಮದಾಗಿರ ವಿಜಯದ ಹೆದ್ದಾರಿ ಇದು ವಿರೋಧಪಕ್ಷದವರ ಅಭಿಪ್ರಾಯ.

THE THUMPING

MAJORITY

IN OUR FAVOUR

PROVES THE

CONFIDENCE

REPOSED IN US BY A DISCRIMINATING PUBLIC

ESTD. 1906.

CANARA BANK

LIMITED.

RESOURCES OF A CRORE.

ಅನುಕ್ರಮಣಿಕೆ.

ನೋಟಿಸುಗಳು
ರಾಷ್ಟ್ರಪತಿಗಳಿಗೆ ಆಂಗ್ಲ ಪತ್ರಿಕೆಗಳ ಶ್ಲಾಘನೆ
ಕರ್ನಾಟಕದ ನಿವೇದನೆಯಿಂದ
ಪ್ರಪಂಚ ವಿಚಾರ
ವಿವಿಧ ಸಮಾಚಾರಗಳು
ಅಗ್ರಲೇಖ
ಇಂಡಿಯಾ ಸರಕಾರದ ಆಯವ್ಯಯ
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ಪಶುರೋಗ ಚಿಕಿತ್ಸೆ

ತಾ ೫ನೇ ಶುಕ್ರವಾರ ಮಾರ್ಚಿ ೧೯೩೭

ಸ್ವದೇಶಾಭಿಮಾನಿ.

ಇಂಡಿಯಾ ಸರಕಾರದ ಆಯ-ವ್ಯಯ

1937-'38

ಇಂಡಿಯಾ ಸರಕಾರದ ಆಯವ್ಯಯದ ಅಂದಾಜನ್ನು ಮಿ| ಗ್ರಿಗ್ ಸಾಹೇಬರು ಎಸೆಂಬ್ಲಿಯಲ್ಲಿ ಹೊರಗೆಡವಿದರು [ಈ ಅಂದಾಜು ಪಟ್ಟಿ ಮತ್ತು ಅವರ ಭಾಷಣ ಎರಡನ್ನೂ ಪ್ರಾಂತಿಕ ಸರಕಾರಗಳಿಗೆ ಅದೇ ಕಾಲ ತಲಪುವ ಹಾಗೆ ಟಪಾಲಿನದ್ವಾರಾ ಕಳುಹುವುದುಂಟು ಲಾಹೋರಿಗೆ ಕಳುಹಿದೊಂದು ಪ್ರತಿಯು ಮಾಯವಾಗಿದೆಯಂತೆ! ಇದರಿಂದ ಬಜೇಟಿನ ಕೆಲ ಅಂಶಗಳು ಮೊದಲೇ ಬಹಿರಂಗವಾಗುವ ಹಾಗಾಯಿತೋ ಎಂದು ಬೆದರಿ ವಿಚಾರ ನಡೆಯುತ್ತಿದೆ] ಎಂದಿನಂತೆ ಆಯವ್ಯಯವನ್ನು ಕಡಿಮೆಯೆಂದೆಣಿಸಿಯೂ, ಖರ್ಚನ್ನು ಹೆಚ್ಚಾಗಿ ಹಿಡಿದೂ, ಕೆಲವಿಷಯಗಳ ಖರ್ಚನ್ನು ಕಿಂಚಿತ್ತೂ ಕಡಿಮೆಮಾಡದೆಯೂ ಒಂದು ಬಗೆಯಾಗಿ ಲೆಕ್ಕಹಾಕುವ ಪದ್ಧತಿಯನ್ನು, ಅದನ್ನು ಲೆಕ್ಕ ಪರಿಶೋಧನ ಇಲಾಖೆಯವರೇ ಕೊಡದೆಂದರೂ ಸರಕಾರದ ಖಜಾನಾ ಮಂತ್ರಿಗಳು ಮಾಮೂಲಾಗಿ ಇಟ್ಟುಕೊಂಡಿದ್ದಾರೆ ಅದರಂತೆ, ಈ ೧೯೩೭-೩೮ನೇ ವರ್ಷದಲ್ಲಿ ೭೯೯೯ ಲಕ್ಷ ರೂಪಾಯಿ ಆಯವೆಂದೂ, (ಕಳೆದ ವರ್ಷಕ್ಕಿಂತ ೧೩೭ ಲಕ್ಷ ಕಡಿಮೆ) ಖರ್ಚು ೮೩೪೦ ಲಕ್ಷವೆಂದೂ, (ಕಳೆದ ವರ್ಷಕ್ಕಿಂತ ೮ ಲಕ್ಷ ಹೆಚ್ಚಿಗೆ) ಗಣನೆಗೆ ತಂದುಕೊಂಡು, ೩೪೨ ಲಕ್ಷ ನಷ್ಟವಾಗುವುದಾಗಿ ಅಂದಾಜು ಇದರಲ್ಲೂ ಶಿವಿನ್ನೂ ರಿಜರ್ವ ಫಂಡಿನಿಂದ ೧೫೪ ಲಕ್ಷವನ್ನು ಆಯಕ್ಕೆ ಎಳೆಕೊಂಡಲ್ಲಿ, ಬಿನ ನಷ್ಟವು ೧೫೮ ವಾಗುವುದಾಗಿ ನಿರ್ಧಾರ

ಖರ್ಚಿನ ವಿಷಯಗಳಲ್ಲೂ ಮರಿ, ಅವನ್ನು ಕಿಂಚಿತ್ತೂ ಇಳಿಸುವ ಇಚ್ಛೆಯಿಲ್ಲ ಎಂದು ಪರಂಪರೆಯಾಗಿ ಬಂದಿರುವ ಫೈನೆನ್ಸ ಮೆಂಬರರ ರೀತಿ ಅದರಂತೆ, ಸೈನ್ಯ ಇಲಾಖೆಗೆ ಈ ವರ್ಷದ ಖರ್ಚು ೪೫೩೩ ಲಕ್ಷವಿದೆಯಾದರೂ, ಬರುವ ವರ್ಷಕ್ಕೆ ಇದನ್ನು ಇನ್ನೂ ೬೩ ಲಕ್ಷ ಹೆಚ್ಚಿಗೆ ಕೂಡಿಸಿಯೆ ಖರ್ಚುಮಾಡಲು ಅಂದಾಜು ಹಾಕಲಾಗಿದೆ

ಹೀಗಿದ್ದರೂ,-ಪ್ರಾಂತಿಕ ಸರಕಾರಗಳಿಗೆ ಸ್ವರಾಜ್ಯಕೊಟ್ಟು, ಇಂಡಿಯಾವನ್ನೆ ಒಂದ ಸಂಯೋಜಿತರಾಜ್ಯವನ್ನಾಗಿ ಮಾಡುವರೆ ೭೩ ಯಾದ ಖರ್ಚು ಅಗತ್ಯವಾಗುವುದೆಂದೂ, ಅಷ್ಟು ಹಣವು ಇಂಡಿಯದ ಖಜಾನೆಯಲ್ಲಿ ಇರಲಾರದೆಂದೂ, ಸ್ವರಾಜ್ಯದ ಮಾತನ್ನೆ ಖಂಡಿಸುತಿದ್ದ ಕೆಲಮಂದಿ ಅಧ್ಯ ಬ್ರಿಟಿಷರಿಗೆ ಈ ಬಜೇಟನ್ನು ನೋಡಿ ವಿಸ್ಮಯವಾಗಬೇಕಾಗಿದೆ. ಸರಕಾರದ ಬದಲಾವಣೆಗೆ ಬೇಕಾಗಿರುವ ಎಲ್ಲ ಖರ್ಚನ್ನು ಪೂರಯಿಸಿಕೊಡಲು ಈಗ ಖಜಾನೆಯು ಶಕ್ತವಾಗಿಯೇ ಇದೆ ಎಂದು ಪ್ರಕಟವಾಗಿದೆ. ಸ್ವರಾಜ್ಯ ಕೊಡಬಾರದೆಂದು ಬೇಕಾದ ಕಾರಣ ಕೊಡಬಲ್ಲವರು, ಇದೊಂದು ಕಾರಣವು ತಾನಾಗಿ ಹುರುಳಿಲ್ಲದುದೆಂದು ತಿಳಿದು, ಸ್ವಲ್ಪ ಶಾಂತರಾಗಲಿ, ಇತರ ಕಾರಣಗಳೂ ಇಂತಹವೇ ಎಂದು ತಿಳಿಯಲಿ ಎಂದೇ ಫೈನೆನ್ಸ ಮೆಂಬರರ ಅಂದಾಜುಪಟ್ಟಿಯು ಸೂಚಿಸುವುದಿಲ್ಲವೆ?

ಆದರೆ, ಯಾವುದೊಂದು ಬಗೆಯಲ್ಲಿ ಜನರ ಮೇಲೆ ಬಿದ್ದಿರುವ ತೆರಿಗೆಯ ಭಾರವನ್ನು ಕಡಿಮೆಮಾಡಲಾಗಿದೆಯೆ? ಇಲ್ಲ, ಉಪಾಯವೇ ಇಲ್ಲ! ಕಳೆದ ವರ್ಷ ಒಂದು ಕೋಟಿ ರೂಪಾಯಿಗಳನ್ನು ಬರೋಡಾ ಸರಕಾರವು ಬರೋಡೆಗಾಗಿ ಮಾತ್ರ ಇಷ್ಟು ಮೊಬಲಗನ್ನು ವ್ಯಯಿಸಿದೆ) ಇಡೀ ಭಾರತವರ್ಷದ ಗ್ರಾಮಾಭ್ಯುದಯಕ್ಕಾಗಿ ವ್ಯಯಿಸಲಾಗಿದ್ದಿತಷ್ಟೆ ಈ ವರ್ಷ ಅದರ ಪ್ರಸ್ತಾಪವಿಲ್ಲ ಹೊಸ ಚುನಾವಣೆಗಳಾಗುವಾಗ, ಇದೊಂದು ಕೋಟಿಯ ನೆನವು ಜನಕೋಟಿಗೆ ಇರಲೆಂದು ಮಾಡಿದ್ದು ದೇನು?

ಕಸ್ಟಮ್ಸ್ ಸುಂಕವನ್ನೂ ಇನ್ಕಮ್‌ಟ್ಯಾಕ್ಸನ್ನೂ ಹೆಚ್ಚಿಸುವಾಗ ಸದ್ಯದ ಅಡಚಣಿಗಾಗಿ ಮಾತ್ರ ಎಂದು ಹೇಳಿ, ಈಗ ಅಂತಹ ಅಡಚಣೆಯೇನೂ ಇಲ್ಲವೆಂದು ಹೇಳುತ್ತಲೂ ಈ ಅರ್ಧ ಕಂದಾಯವನ್ನು ಇಳಿಸುವುದಿಲ್ಲವೇತಕ್ಕೆ? ಅದೇ ಸಮಯದಲ್ಲಿ ಸಂಬಳಗಳಲ್ಲಿ ಕಡಿತಮಾಡಿದ್ದುದನ್ನು ತೆರಿಗೆ ರದ್ದುಗೊಳಿಸುವ ಮೊದಲು ರದ್ದುಗೊಳಿಸಿದುದೇಕೆ? ಐದು ವರ್ಷಗಳ ಹಿಂದೆ ಇದ್ದಷ್ಟೆ ತೆರಿಗೆಗಳ ಭಾರವು ಇನ್ನೂ ಉಳಿಯಬೇಕೆ? ಬುಕ್‌ಪೋಸ್ಟುಗಳ ಮೇಲೆ ಅಂಚೆಯದರ ಇಳಿಸುವಾಗ, ಪಾರ್ಸೆಲುಗಳ ಮೇಲೆ ಹೆಚ್ಚಿಸಿದರೂ ಯಾರಿಗೂ ಪ್ರಯೋಜನವಿಲ್ಲ ಕಾರ್ಡು ಕಾಲಾಣೆಗೆ ದೊರೆಯುತ್ತಿದ್ದ ಯುಗವು ಮರೆವಹಾಗಾಗಿದೆಯಲ್ಲ ಮಹಾಯುದ್ಧದ ಮೊದಲು ನಿತ್ಯಜೀವನದ ಖರ್ಚು ಇದ್ದುದಕ್ಕಿಂತ ಈಗ ಎಷ್ಟೋ ಹೆಚ್ಚಿಗೆಯಾಗಿ ಜನರ ಆಯವು ಕಡಿಮೆಯಾಗುತ್ತ ಬಂದಿದೆಯಾದರೂ ಕಾರ್ಡಿನ ಬೆಲೆ ಮೂರು ಮಡಿಯಾಗಿ ನಿಂತಿದೆ ತೆರಿಗೆಗಳ ಭಾರವು ಹೆಚ್ಚಿಯೇ ಇದೆ ಕಬ್ಬನ್ನು ಬೆಳೆಸುವವರಿಗೆ ನಷ್ಟವಾಗುವ ಹಾಗೆ, ಸಕ್ಕರೆ ಕಾರ್ಖಾನೆಗಳ ಮಣಕ್ಕೆ ಹನ್ನೆರಡಾಣೆ ಹೆಚ್ಚಿಗೆಯಾಗಿ ಸುಂಕ ತರವಂತೆ ಮಾಡಿಯೂ, ಆಮದಾಗುವ ಸಕ್ಕರೆಯ ಮೇಲೆ ಮೂರಾಣೆ ಲಾಭವು ದೇಶೀಯ ಸಕ್ಕರೆಗೆ ರಿಯಾಯತಿಯಾದಂತೆ ತೋರಿಸುವ ರೀತಿಯಾವುದು?

ಬೆಳ್ಳಿಯನ್ನು ಜಮೆಮಾಡಿದಂತೆ ಬೆಳ್ಳಿಯ ಮೇಲೆ ಸುಂಕ ಏರಿಸಲಾಗಿದೆಯೆಂದು ಮಿ ಗ್ರಿಗ್‌ರವರು ವಿವರಿಸಿದ್ದಾರೆ ಬೆಳ್ಳಿಯನ್ನು ಕೊಂಡುಕೊಳ್ಳಲು ವ್ಯಯಿಸುವ ಹಣವನ್ನು ಇತರ ವಸ್ತುಗಳಿಗೆ ಉಪಯೋಗಿಸಲೆಂದು ಅವರ ಸದಿಚ್ಛೆಯಂತೆ ಅಂತಹ ಇತರ ವಸ್ತುಗಳನ್ನಾಗಲಿ ಕೊಂಡುಕೊಳ್ಳಲು ಜನರ ಕೈಯಲ್ಲಿ ಎಷ್ಟು ಹಣ ಉಳಿದಿದೆ? 'ಹಣವಿಷ್ಟು ರಾಶಿ ಬಿದ್ದಿದೆ, ಏನು ಮಾಡೋಣ?' ಎಂದು ಜನಕೋಟಿಯು ಚಿಂತಾಮಗ್ನವಾಗಿರುವುದೆ? ದೇಶಕ್ಕೆ ಬರುವ ಬೆಳ್ಳಿ, ಸರಾಫರ ಬೆಳ್ಳಿ ಹೊರತು ದಾಸ್ತಾನಿಗಾಗಿ ತರಿಸಲಾಗುವ ಬೆಳ್ಳಿಯಲ್ಲವಷ್ಟೆ ಅದರ ಮೇಲೆ ಸುಂಕವೇಕೆ ಏರಿಸಬೇಕು?

ಇನ್ನೊಂದು ವಿಚಿತ್ರವೆಂದರೆ,—ತೆರಿಗೆಯ ಭಾರವು ಅಲ್ಪ ಆಯವಿರುವವರ ಮೇಲೆ ಬೀಳುವುದಕ್ಕಿಂತಲೂ ದಾಮಾಶಾಯದಲ್ಲಿ ಕಡಿಮೆಯಾಗಿ ಅಧಿಕಆದಾಯವಿರುವವರ ಮೇಲೆ ಬೀಳುತ್ತಿದೆ ಇದೆಂದೂ ನ್ಯಾಯಸಮ್ಮತವಾದುದಲ್ಲ

ವಿಶೇಷವಾಗಿ, ನಮ್ಮ ದೇಶಕ್ಕೆ ಬರುವ ಸರಕಿನ ಮೌಲ್ಯವು ಮಹಾಯುದ್ಧದ ಮೊದಲು ಇದ್ದುದರ ಅರೆಪಾಲಿಯಷ್ಟೆ ಆಗಿದೆಯಾದರೂ, ಇದರಿಂದ ಸರಕಾರವು ಆಯಮಾಡಿಕೊಳ್ಳುವ ಸುಂಕವು ಎಂದಿನಷ್ಟೆ ಇದೆ,-ಎಂದರೆ ಸುಂಕವು ದುಬಾರಿಯಾಗಿದೆ, ಅವರಿಗೆ ಬೇಕಾಗುವ ವಸ್ತುಗಳಿಗೆ ಮೌಲ್ಯವು ಹೆಚ್ಚಿಯೇ ಇದೆ ಎಂದು ಅರ್ಥವಾಗುತ್ತಿಲ್ಲವೆ? ಹೆಚ್ಚಿಗೆಯಾಗಿ ದೊರೆವ ಕಂದಾಯವು ಶಿಕ್ಷಣ ಆರೋಗ್ಯ ಗ್ರಾಮೋದ್ಧಾರವೇ ಮೊದಲಾದ ವಿಷಯಗಳಿಗೆ ವ್ಯಯವಾಗುತ್ತಿದ್ದರೆ, ಒಂದು ವೇಳೆ ಸಮಸ್ತರಿಗೂ ಪ್ರಯೋಜನ ದೊರೆವಂತಾದರೂ, ವಿನಿಯೋಗಿಸುವ ಕಾರಣ, ಅಷ್ಟು ಆಕ್ಷೇಪಕರವಾಗುತ್ತಿದ್ದಿಲ್ಲ.

ಜನರ ಆಯವು ಕಡಿಮೆಯಾಗುತ್ತ ಬರುವಂತೆ, ದೇಹವೂ ದುರ್ಬಲವಾಗುತ್ತ ಬರುತ್ತಿದೆ ಇಂತಹ ಕಾಲದಲ್ಲಿ, ಪ್ರತಿಯೊಬ್ಬರಿಗೂ ಅಗತ್ಯವಾಗಿರುವ ವಸ್ತುಗಳ ಮೇಲೆ ಸುಂಕವನ್ನು ಇಳಿಸಿ, ಯಾವ ವಸ್ತುಗಳ ಉಪಯೋಗವು ಕಡಿಮೆ ಜನರಿಗೆ ಮಾತ್ರ ಇರವುದೋ, ಶ್ರೀಮಂತರ ಆಡಂಬರಕ್ಕೆ ಸಂಬಂಧಿಸಿದೆಯೋ ಅಂತಹವುಗಳ ಮೇಲೆ ಕರಭಾರವು ಹೆಚ್ಚಾಗುವಂತೆ ಮಾಡಿದ್ದರೆ, ಚೆನ್ನಾಗುತ್ತಿತ್ತು

ಮದ್ರಾಸಿನ ಗವರ್ನರರೊಬ್ಬರು ಹಿಂದೆ ಹೇಳಿದ ಮಾತು ಇಂದಿಗೂ ಮರೆತುಹೋಗುವಂತಿಲ್ಲ "ತೆರಿಗೆ ಇಳಿಸಲು ಉಪಾಯ ತೋಚದಾದರೂ, ಖರ್ಚನ್ನು ತಗ್ಗಿಸಲ ನಾನು ಉಪಾಯ ಹುಡುಕುವೆನು ಈ ಮಾತನ್ನು ಖಜಾನಾಧಿಕಾರಿಗಳು ನೆನಪಿನಲ್ಲಿಟ್ಟುಕೊಂಡಷ್ಟು ದೇಶಕ್ಕೆ ಸುಖ ಸಾಮ್ರಾಜ್ಯದ ದವಲತ್ತಿಗಾಗಿ ಸೈನ್ಯ, ಅತ್ಯಧಿಕ ಸಂಬಳದ ಹುದ್ದೇದಾರರು ಇರುವ ವರೆಗೆ ಈ ಮಾತುಗಳನ್ನು ಗಣನೆಗೆ ತರುವಂತಿಲ್ಲ

ಸ್ಫುಟವಿಚಾರಗಳು

ಸ್ಪೆಯಿನಿನ ಮಂತ್ರಿಗಳ ಪ್ರಲಾಪ

"ಶಾಂತಿಸಾಧನೆಯ ಭ್ರಮೆಯಿಂದ, ಯುರೋಪಿನಲ್ಲಿನ ರಾಷ್ಟ್ರಗಳು ಯುದ್ಧ ಮಾಡಬಾರದೆಂಬ ಸಾಧನೆಯಿಂದ, ಇಟಲಿ ಮತ್ತು ಜರ್ಮನಿಯವರು ಮುಂದೆ ಮುಂದೆ ಕಾಲಿಟ್ಟು ಬರುವಾಗಲೆಲ್ಲ ಕೆಲವು ದೇಶಗಳ ಸರಕಾರಗಳು ಸಮಾಧಾನ ವೃತ್ತಿಯನ್ನು ಕೈಕೊಂಡಿವೆ ೧೯೩೬ನೇ ಇಸ್ವಿ ಜುಲೈಯಿಂದ ಇವೆರಡು ರಾಜ್ಯಗಳು ಸ್ಪೆಯಿನಿನ ಮೇಲೆ ಕೈಯಿಕ್ಕುತ್ತಿವೆ ಪಶ್ಚಿಮ ಯುರೋಪಿನ ಸಲುವಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಯುದ್ಧ ಮಾಡುತ್ತಿರುವ ಸ್ಪೆಯಿನನ್ನು ಉಳಿದ ಸರಕಾರಗಳು ಇಟಲಿ ಜರ್ಮನಿಗಳ ಕೈಗೊಪ್ಪಿಸಿಕೊಟ್ಟಂತಾಗಿದೆ ಇಲ್ಲವಾದರೆ, ಯುದ್ಧವು ಹರಡಿತೆಂದೇ ಇವು ಗಾಬರಿಗೊಂಡಿವೆ ಅದರ ಫಲವಾಗಿ ಇವೆರಡು ಅಧಿಕಾರವು ಈಗ ಯುರೋಪಿನ ಮೇಲೆ ತನ್ನಷ್ಟಕ್ಕೆ ಆಕ್ರಮಣ ಮಾಡುತ್ತಲಿವೆ ಸ್ಪೆಯಿನಿನಲ್ಲಿ ಸರಕಾರಕ್ಕೆ ವಿರುದ್ಧನಾಗಿ ನಿಂತಿರುವ ಜನರಲ್ ಫ್ರಾಂಕೋವಿನಂತಹ ಒಬ್ಬ ಪುರುಷನು ಪ್ರತಿ ರಾಜ್ಯದಲ್ಲೂ ಇದ್ದಾನೆ, ಈತನನ್ನು ಬರ್ಲಿನ್ ಅಥವಾ ರೋಮ್ ನಗರದಿಂದ ಬಲಗೊಳಿಸಿ, ಆಯಾ ರಾಜ್ಯವನ್ನು ಸುಲಭವಾಗಿ ಅವೆರಡು ರಾಷ್ಟ್ರಗಳಿಗೆ ಒಪ್ಪಿಸಿಕೊಡ ಬರುವ ದಿನಗಳು ಬರುವುವು ಯುರೋಪಿನ ಸ್ವಾತಂತ್ರ್ಯವು ಮೆಡ್ರಿಡ್ ನಗರದ ರಕ್ಷಣೆಯ ಮೇಲೆ ಹೊಂದಿದೆ ಎಂದಿದೇ ಈ ಕೊನೆಯ ಪ್ರಲಾಪವಾಗಿ ಆ ಮಂತ್ರಿಗಳೆನ್ನುತ್ತಾರೆ ಈ ಪ್ರಲಾಪವು ಎಲ್ಲ ಇತರರಿಗೂ ಕೇಳಿಸುತ್ತಿದೆ ಆದರೆ ಮಾಡುವುದೇನು? ಯುದ್ಧವು ಸದ್ಯಕ್ಕೆ ತಮಗೆ ಬೇಡವೆನ್ನುವವರೇ ಹೆಚ್ಚು ಇನ್ನು ನಾಲ್ಕು ವರ್ಷಗಳಲ್ಲಿ ನೋಡೋಣವಂತೆ

ಸರಕಾರದ ಜಿಜ್ಞಾಸೆ.

ಮದ್ರಾಸು, ತಾ. 1-3-'37

ನಮ್ಮ ಸಂಸ್ಥಾನದಲ್ಲಿ ೨೧೪ ಜಿಲ್ಲಾ ಬೋರ್ಡು ಸೆಕೆಂಡರಿ ಶಾಲೆಗಳಿವೆ, ಇವುಗಳಲ್ಲಿ ೫೦,೦೦೦ ವಿದ್ಯಾರ್ಥಿಗಳಿರುವುದರಿಂದ ಸರಾಸರಿಯಾಗಿ ಶಾಲೆಗೆ ೩೩೪ ವಿದ್ಯಾರ್ಥಿಗಳಾಗುವರು ಇವುಗಳಲ್ಲಿ ಎಷ್ಟೋ ಶಾಲೆಗಳು ಬೋರ್ಡುಗಳಿಗೆ ನಷ್ಟವನ್ನೆ ಉಂಟುಮಾಡುವಂಥವಾಗಿವೆ. ಈ ಶಾಲೆಗಳ ಖರ್ಚಿಗೂ ವಿದ್ಯಾರ್ಥಿಗಳು ತೆರುವ ಸಂಬಳಕ್ಕೂ ಯೋಗ್ಯ ದಾಮಾಶಯವಿಲ್ಲ ಇದುದರಿಂದ ತುಂಬ ನಷ್ಟಕ್ಕೆ ಕಾರಣವಾಗುವ ಸೆಕೆಂಡರಿ ಶಾಲೆಗಳನ್ನು ವಜಾಮಾಡಿ, ಯೋಗ್ಯವಾಗಿರುವ ಶಾಲೆಗಳ ಮೇಲೆ ಬೋರ್ಡುಗಳು ಸಿಗಾ ಇಟ್ಟು ಹಣ ವ್ಯಯಿಸುವಂತಾದರೆ ಚೆನ್ನಾಗುವುದಾಗಿ ಸರಕಾರವು ಅಭಿಪ್ರಾಯಪಟ್ಟು ಎಲ್ಲಾ ಜಿಲ್ಲಾಬೋರ್ಡು ಪ್ರೆಸಿಡೆಂಟರು ಈ ವಿಷಯ ತಮ್ಮ ಅಭಿಪ್ರಾಯ ಸೂಚಿಸಿಕೊಳ್ಳುವಂತೆ ಈಗ ಕೇಳಿಕೊಂಡಿರುತ್ತಾರೆ

ನಮ್ಮ ಜಿಲೆಯಲ್ಲಿನ ಬೋರ್ಡ ಸೆಕೆಂಡರಿ ಶಾಲೆಗಳ ಸಂಖ್ಯೆ, ಮತ್ತು ಸ್ಥಿತಿ ಹೇಗಾಗುವುದು?

ಸಕ್ಕರೆಯ ಸಿಹಿ

ಈ ದೇಶದಲ್ಲಿ ಸಕ್ಕರೆ ಕಾರ್ಖಾನೆಗಳೊಳಗೆ ಸ್ಪರ್ಧೆಯುದ್ದುದರಿಂದ ಯಾರಿಗೂ ಹೆಚ್ಚಿಗೆ ಲಾಭ ಸಿಗದಷ್ಟು ಕಡಿಮೆಯಾಗಿ ಮಣಕ್ಕೆ ರೂ 6-8 0ಯಂತೆ ಸರಾಸರಿ ಮಾರಾಟವಾಗುತ್ತಿದೆ ಸರಕಾರದ ಅಂದಾಜಿನಲ್ಲಿ ಈ ಕ್ರಮ ರೂ [illegible] ಆಗದಿದ್ದಲ್ಲಿ ಕಾರ್ಖಾನೆಗಳಿಗೆ ನಷ್ಟವೆಂದು 1931ರಲ್ಲಿ ನಿರ್ಣಯವಿದ್ದಿತು ಆದರೆ ಈಗ ಸಕ್ಕರೆ ತಯಾರಿಸುವ ವಿಧಾನಗಳ ಪರಿಷ್ಕಾರವಾಗಿರುವ ಕಾರಣ, ಹೆಚ್ಚಿನ ಸಕ್ಕರೆಯಾಗುವ [illegible] ದಲ್ಲಿ ಆದರ ಬೆಲೆ [illegible] ರೂ [illegible] ತನಕವಿದೆ ಈಗ ಸರಕಾರವು ಮಣಕ್ಕೆ 8 ಆಣೆ ಸುಂಕ ಏರಿಸಬೇಕಾಗಿ ಬಜೇಟಿನಲ್ಲಿ ಸೂಚಿಸಿಯದೆ ಇದರಿಂದ ಕಾರ್ಖಾನೆಗಳಿಗೆ ನಷ್ಟ ಉಂಟಾಗುವ ನಿಶ್ಚಯ ಸಂಭವವಿದೆ ಸದ್ಯದಲ್ಲೇ ಕೆಲವು ಕಾರ್ಖಾನೆಗಳನ್ನು ಮುಚ್ಚಬೇಕಾಗಿ ಬರಬಹುದು ಹಾಗಾದಲ್ಲಿ ಕೃಷಿಕನೂ ನಷ್ಟ ಹೊಂದುವನು ಸಕ್ಕರೆಯ ಬಹಳಾಗಿ ಬೆಲ್ಲವನ್ನೆ ತಯಾರಿಸುವನು ಇದರಿಂದ ಅವನಿಗೆ ಹಿಂದಿನಂತೆ ನಫೆ ಸಿಗಲಾರದು ಸಕ್ಕರೆಯು ಪರದೇಶಗಳಿಂದ ಬರುವಾಗ ಹೆಚ್ಚಿಗೆ ಸುಂಕ ತೆರಬೇಕಾಗಿರುವ ಪ್ರಯುಕ್ತ, ಇಲ್ಲಿನ ಸಕ್ಕರೆಯ ಕಾರ್ಖಾನೆಗಳಿಗೆ ಸಂರಕ್ಷಣೆ ಮಾತ್ರಲಾಗಿದ್ದಿತು ಎಂದೇ ಕಬ್ಬು ಬೆಳೆವ ಜಮೀನು ಒಂದೂವರೆ ಮಿಲ್ಲಿಯ ಎಕ್ರೆ ಹೆಚ್ಚಾಗಿ ಬಂದಿತ್ತು ಇನ್ನು ಅದೂ ಕಡಿಮೆಯಾಗದಿರದು ಕೃಷಿಕನಿಗೆ ಈ ಸಕ್ಕರೆಯ ಸುಂಕದಿಂದ ಯಾವ ಪ್ರಯೋಜನವೂ ದೊರೆಯದೆಂದೂ ಸರ್ ವಿಜಯ ರಾಘವಾಚಾರ್ಯರು ಅಭಿಪ್ರಾಯಪಡುವರು ಕೃಷಿಯ ಇಲಾಖೆಯಲ್ಲಿ ಅತ್ಯುಚ್ಚ ಪದವಿಯಲ್ಲಿದ್ದ ಇವರೇ ಹೀಗೆನ್ನುವಾಗ ಬೇರೆ ಅಭಿಪ್ರಾಯಗಳೇಕೆ?

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR
OWN DISTRICT.
Available in 7lb and 14lb packets, at the
Office C. P C Co., Ltd
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಎಸೆಂಬ್ಲಿಯಲ್ಲಿ ಕೊಂಗ್ರೆಸ್ ಪಾರ್ಟಿಯವರ "ವೋಕ್ ಔಟ್"

ಕೊಂಗ್ರೆಸಿನವರ ಮೇಲೆ ಸರ್ ಗ್ರಿಗ್‌ರ ಅಪಹಾಸ್ಯ

ಸತ್ಯಮೂರ್ತಿ–ಗ್ರಿಗ್‌ರ ತರ್ಕ.

ಇಂಡಿಯಾ ಸರಕಾರದ ಬಜೆಟ್ ಇತಿಹಾಸದಲ್ಲಿ ಹಿಂದೆ ಎಂದೂ ನಡೆಯದ ಒಂದು ಪ್ರಸಂಗವು ಮಾರ್ಚಿ ತಾ. ೨೬ರಲ್ಲಿ ನಡೆದ ಬಜೆಟ್ ಅಧಿವೇಶನದ ಸಮಯದಲ್ಲಿ ನಡೆಯಿತು. ೧೯೩೪–೩೫ನೇ ವರ್ಷದ ಬಜೆಟಿನ ವರದಿಯನ್ನು ಅಸೆಂಬ್ಲಿ ಮುಂದಿಡುತ್ತಾ ಫೈನಾನ್ಸ್ ಮೆಂಬರರಾದ ಸರ್ ಜೇಮ್ಸ್ ಗ್ರಿಗ್‌ರವರು, ಆದಾಯ ನಷ್ಟಗಳನ್ನು ವಿವರಿಸಿ ಹೇಳಿ ಅದಕ್ಕೆ ಈ ದಿನವು ಕಾಂಗ್ರೆಸ್ ಪಾರ್ಟಿಯೆಂದೂ, ಅವರ "ಲ್ಯಾಟ್ ಹಾರ್ಟೆಡ್" ಓಟುಗಳೇ ಸರಕಾರಕ್ಕೆ ನಷ್ಟವನ್ನು ಉಂಟುಮಾಡಿತೆಂದೂ ಟೀಕಿಸಿದರು. ಸರ್ ಗ್ರಿಗ್ಗರ ಈ ಟೀಕೆಯು ಶ್ರೀ ಸತ್ಯಮೂರ್ತಿಯವರನ್ನು ಆವೇಶಗೊಳಿಸಿತು. ಅವರು ಕೂಡಲೆ ಎದ್ದು, "ಗ್ರಿಗ್ಗರು 'ಲ್ಯಾಟ್ ಹಾರ್ಟೆಡ್' ಎಂಬ ಆ ಮಾತುಗಳನ್ನು ಹಿಂತೆಗೆಯಬೇಕೆ"ಂದು ಗರ್ಜಿಸಿದರು. ಸರ್ ಗ್ರಿಗ್ಗರು ಮೊದಲು ಸ್ವಲ್ಪ ಅಲಕ್ಷ್ಯವನ್ನು ಸೂಚಿಸಿದರು. ಆಗ ಸತ್ಯಮೂರ್ತಿಯವರು, ಗ್ರಿಗ್ಗರು "ಲ್ಯಾಟ್ ಹಾರ್ಟೆಡ್" ಎಂಬ ಮಾತುಗಳನ್ನು ಹಿಂತೆಗೆಯುವಂತೆ ಅಪ್ಪಣೆಮಾಡಬೇಕೆಂದು ಅಸೆಂಬ್ಲಿ ಅಧ್ಯಕ್ಷರನ್ನು ಕೇಳಿದರು. ಅಧ್ಯಕ್ಷರು, ಗ್ರಿಗ್ಗರ ಆ ಮಾತು ಅಸಂಬದ್ಧವಾದುದು ಎಂದೂ, ಅದನ್ನು ಎಸೆಂಬ್ಲಿಯಲ್ಲಿ ಉಪಯೋಗಿಸಬಾರದೆಂದೂ, ಅದನ್ನು ಅವರು ಹಿಂತೆಗೆಯಬೇಕೆಂದೂ ಅಪ್ಪಣೆಮಾಡಿದರು. ಅಧ್ಯಕ್ಷರು ಇಷ್ಟನ್ನು ಹೇಳುತ್ತಿರುವಾಗ ಸರ್ ಗ್ರಿಗರವರು ಸ್ವಲ್ಪ ನಾಟಕೀಯ ಮುಖಭಾವವನ್ನು ತೋರಿಸಿದರು ಮತ್ತು "ನಾನು ಆ ಮಾತುಗಳನ್ನು ಹಿಂತೆಗೆಯುವೆನು. ಅವರ ಆ ಸ್ಥಾನದಲ್ಲಿ ಬೇರೆ ಯಾವ ಶಬ್ದವನ್ನು ಹಾಕಬೇಕೆಂದು ತೋರುವುದರಿಂದ ಭಾಷಣಾಂತ್ಯದಲ್ಲಿ ಆಲೋಚಿಸಿ ಹೇಳುವೆನು" ಎಂದು ಹೇಳಿದರು.

ಈ ಸಮಯದಲ್ಲಿ ಅಸೆಂಬ್ಲಿಯಲ್ಲಿ ನೆರೆದಿದ್ದವರೆಲ್ಲರೂ "ಹಿಂತೆಗೆ ಹಿಂತೆಗೆ" (with draw) ಎಂದು ಗಲಾಟೆಮಾಡಲಿಕ್ಕೆ ಪ್ರಾರಂಭಮಾಡಿದರು.

ಕಾಂಗ್ರೆಸ್ ಸದಸ್ಯರಾದ ಶ್ರೀ ಮೋಹನ್‌ಲಾಲ್ ಸಕ್ಸೇನಾರವರು ಸಿಟ್ಟಿನಿಂದ ಎದ್ದು ಹೊರಡಲು ಸಿದ್ಧರಾದರು. ಆಗ ಶ್ರೀ ಅಸಫ್ ಅಲಿಯವರು ಅವರನ್ನು ಶಾಂತಪಡಿಸಿದರು. ಶ್ರೀ ಸತ್ಯಮೂರ್ತಿಯವರು ಶ್ರೀ ಭುಲಾಭಾಯಿಯವರಿಗೆ ಒಂದು ಚೀಟನ್ನು ಕಳುಹಿಸಿದರು. ನ್ಯಾಶನಲಿಸ್ಟ್ ಮುಖಂಡರಾದ ಅವರು ತಾವು "ವೋಕ್ ಔಟ್" ಮಾಡುವುದಿಲ್ಲವೆಂದು ಬರೆದು ಕಳುಹಿಸಿದರು.

ಈ ಸಮಯಕ್ಕೆ ಸರ್ ಗ್ರಿಗ್‌ರವರು ತುಂಬಾ ಕಳವಳಕ್ಕೆ ಒಳಗಾದರು. ಅಧ್ಯಕ್ಷರು ಅವರಿಗೆ ಭಾಷಣಾಂತ್ಯದಲ್ಲಿ ತಮ್ಮ "ಲ್ಯಾಟ್ ಹಾರ್ಟೆಡ್" ಎಂಬ ಶಬ್ದವನ್ನು ಹಿಂತೆಗೆದು ಅದರ ಸ್ಥಾನದಲ್ಲಿ ಬೇರೆ ಶಬ್ದವನ್ನು ಹಾಕಲು ಅಪ್ಪಣೆ ಇತ್ತರು.

ಕಡೆಗೆ ಎಷ್ಟು ಹೊತ್ತಾದರೂ ಕಾಂಗ್ರೆಸ್ಸಿನ ಮಾನ ಕಾಯುವುದಕ್ಕೆ ಕಾತರರಾದ ಶ್ರೀ ಸತ್ಯಮೂರ್ತಿಯವರು ಸರ್ ಜೇಮ್ಸರು ಮಾಡಿದ ಈ ಅವಮಾನಕರ ಟೀಕೆಯನ್ನು ಸಹಿಸಿ ಕುಳ್ಳಿರುವುದು ಸರಿಯಲ್ಲವೆಂದು ನಿರ್ಧರಿಸಿ, ಸಭೆಯ ಓಟಿನ ಬಗ್ಗೆ ಅವಮರ್ಯಾದೆಯ ಭಾಷೆಯನ್ನುಪಯೋಗಿಸಿ ಟೀಕಿಸಿರುವುದನ್ನು ಅಧ್ಯಕ್ಷರ ಗಮನಕ್ಕೆ ತಂದು, ಸರ್ ಜೇಮ್ಸರ ಉತ್ತರವನ್ನು ಪ್ರತೀಕ್ಷಿಸದೆ ಅಸೆಂಬ್ಲಿಯಿಂದ ತಮ್ಮ ಪಾರ್ಟಿಯವರೊಂದಿಗೆ ಹೊರಬಂದೇ ಬಿಟ್ಟರು.

ಇದಾದ ಮೇಲೆ ಸರ್ ಗ್ರಿಗ್‌ರವರು ತಮ್ಮ ಭಾಷಣ ಮುಗಿಸಿ ತಾವು ಉಪಯೋಗಿಸಿದ "ಲ್ಯಾಟ್ ಹಾರ್ಟೆಡ್" ಶಬ್ದದ ಬದಲು "ಇಲ್ ಅಡ್ವೈಸ್ಡ್" (ಅಸಮಂಜಸವಾದ) ಎಂಬ ಶಬ್ದವನ್ನು ಹಾಕಿದರು. ಆಗ ಕಾಂಗ್ರೆಸ್ ಪಾರ್ಟಿಯವರು ಸಭೆಯಲ್ಲಿರಲಿಲ್ಲ.

ಈ ರೀತಿಯಾಗಿ ಬಜೆಟ್ ಅಧಿವೇಶನದ ಪ್ರಾರಂಭದಲ್ಲಿಯೇ ಕಾಂಗ್ರೆಸ್ ಸದಸ್ಯರು "ವೋಕ್ ಔಟ್" ಮಾಡಿದರು. ಅಸೆಂಬ್ಲಿಯಲ್ಲಿ ತುಂಬಿದ ಕಾಂಗ್ರೆಸ್ ಕಡೆಯವರು "ಬಜೆಟಿಗೆ ಸರಿಯಾದ ಗತಿಯಾಯಿತೆಂದರು".

ಶ್ರೀ ಸಿ. ಎಸ್. ಸತ್ಯಮೂರ್ತಿ

ಅಸೆಂಬ್ಲಿ ಸದಸ್ಯರ ದಸ್ತಗಿರಿ

ಕಳೆದ ತಿಂಗಳ ತಾ. ೨೮ನೇ ದಿನ ಸೇಟ್ ಭಗಚಂದ್ ಸೋನಿ ಎಂಬವರನ್ನು ನವಡಿಲ್ಲಿಯಲ್ಲಿ ದಸ್ತಗಿರಿ ಮಾಡಿರುತ್ತಾರೆ. ಇವರು ವ್ಯಾಪಾರಿಯೂ ಅಸೆಂಬ್ಲಿಯ ಒಬ್ಬ ಸದಸ್ಯರೂ. ಇಂಡಿಯಾ ಸರಕಾರದ ಆಯವ್ಯಯದ ಪಟ್ಟಿಯು ಗುಟ್ಟು ರಟ್ಟಾಗಿರುತ್ತಷ್ಟೆ. ಅದನ್ನು ರಟ್ಟು ಮಾಡಿದುದು ಇವರೇ ಎಂದು ಭಾವಿಸಲಾಗಿರುವರೆಂದು ಗುಪ್ತ ಪೋಲೀಸ ಖಾತೆಯವರು ಸಂಶಯಿಸಿದುದೇ ಇವರ ದಸ್ತಗಿರಿಗೆ ಕಾರಣವಂತೆ.

ಅಸೆಂಬ್ಲಿಯಲ್ಲಿ ಕೆಲವರು ಫೈನಾನ್ಸ್ ಮೆಂಬರರಾದ ಸರ್ ಜೇಮ್ಸ್ ಗ್ರಿಗ್ಗರನ್ನು ಭಗಚಂದ್ರರ ದಸ್ತಗಿರಿಯ ವಿಚಾರವೇನೆಂದು ಕೇಳಿದರು. ಅದಕ್ಕೆ ಗ್ರಿಗ್ಗರು "ಅದು ಸಾರ್ವಜನಿಕ ದೃಷ್ಟಿಯಿಂದ ಹಿತವಲ್ಲ"ವೆಂದು ಹೇಳಿ, ಯಾವ ಹೇಳಿಕೆಯನ್ನೂ ಕೊಡಲು ಒಪ್ಪಲಿಲ್ಲ.

ಇಂಡಿಯಾ ಸರಕಾರದ ೧೯೩೪–೩೫ನೆ ವರ್ಷದ ಬಜೆಟ್.

ಇಂಡಿಯಾ ಸರಕಾರದ ಆಯವ್ಯಯದ ಅಂದಾಜು ಪಟ್ಟಿ (ಬಜೆಟ್) ಯನ್ನು ಫೆಬ್ರವರಿ ೨೮ನೇ ತಾರೀಕಿನ ದಿನ ಹಣಕಾಸಿನ ಸಚಿವರಾದ ಸರ್ ಜೇಮ್ಸ್ ಗ್ರಿಗ್ಗರವರು ಅಸೆಂಬ್ಲಿಯ ಮುಂದಿಟ್ಟರು. ಈ ಸಲದ ಪಟ್ಟಿಯಲ್ಲಿ ಸರಕಾರಕ್ಕೆ ತುಂಬಾ ನಷ್ಟವಿದ್ದಂತೆ ಕಾಣುತ್ತದೆ. ೬ ಲಕ್ಷ ರೂಪಾಯಿಗಳ ಉಳಿತಾಯವಾಗುವುದೆಂದು ಅಂದಾಜುಮಾಡಲ್ಪಟ್ಟಿತು. ಆದರೆ, ಅದರ ಬದಲಿಗೆ ೨೫ ಲಕ್ಷ ರೂಪಾಯಿಗಳ ಖರ್ಚು ಜಾಸ್ತಿಯಾಗಿರುತ್ತದೆ. ಅಲ್ಲದೆ ೧೭೫ ಲಕ್ಷ ರೂಪಾಯಿಗಳ ಆದಾಯವು ಗವರ್ನಮೆಂಟಿಗೆ ತಪ್ಪಿಹೋಗಿರುತ್ತದೆ. ಈ ಸರ್ತಿ ಕಸ್ಟಮ್ಸ್ ಖಾತೆಯಿಂದ ಲಾಭವೇನೂ ಕಂಡುಬರಲಿಲ್ಲ.

ಸಕ್ಕರೆ ಆಮದು ಕಡಿಮೆಯಾದ್ದರಿಂದ ೧೮೫ ಲಕ್ಷಗಳ ವರಮಾನವು ಇಂಡಿಯಾ ಸರಕಾರಕ್ಕೆ ಕಡಿಮೆಯಾಗಿದೆ. ಬ್ರಿಟಿಷ ಪೀಸ್ ಗುಡ್ಸ್ ಆಮದು ಕಡಿಮೆಯಾದುದರಿಂದ ರೂ ೬೫ ಲಕ್ಷಗಳಷ್ಟು ಆಮದು ಕಡಿಮೆಯಾಗಿದೆ. ಹಿಂದುಸ್ಥಾನಕ್ಕೆ ಬರಬೇಕಾದ ತುಂಬಾ ಸ್ಟೀಲ್ ಮತ್ತು ಕಬ್ಬಿಣವು ಕಡಿಮೆಯಾಗಿರುತ್ತದೆ. ಯೂರೋಪಿನಲ್ಲಿ ಸಮರಸಿದ್ಧತೆಯಾಗುತ್ತಿರುವುದೇ ಇದಕ್ಕೆ ಕಾರಣ. ಸಕ್ಕರೆ ಕಂಪೆನಿಗಳೊಳಗಿನ ಸ್ಪರ್ಧೆಯಿಂದ ಸರಕಾರದ ತುಂಬ ವರಮಾನವು ಕಡಿಮೆಯಾಯಿತು. ಸೈನ್ಯದ ಖಾತೆಯ ಖರ್ಚು ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿದೆ. ಟಪ್ಪಾಲು ಮತ್ತು ತಂತಿ ಇಲಾಖೆಯಲ್ಲಿ ೮ ಲಕ್ಷಗಳ ಉಳಿತಾಯ ಕಂಡುಬಂದಿದೆ. ಬರ್ಮಾ ಪ್ರಾಂತ್ಯವನ್ನು ಪ್ರತ್ಯೇಕಿಸುವ ವಿಚಾರದಲ್ಲಿ ಸರಕಾರಕ್ಕೆ ೩೩೮ ಲಕ್ಷಗಳ ನಷ್ಟವಾಗಿದೆ. ಪ್ರಾಂತ್ಯಗಳ ಪ್ರತ್ಯೇಕತೆ ಅಥವಾ ಪ್ರಾವಿನ್ಸಿಯಲ್ ಅಟೋನಾಮಿಯಿಂದ ಸರಕಾರಕ್ಕೆ ೧೮೫ ನಷ್ಟವಾಗಿದೆಯಂತೆ.

೧೯೩೪–೩೫ನೇ ವರ್ಷದಲ್ಲಿ ೬೯೩೪ ಲಕ್ಷಗಳ ಆದಾಯವನ್ನೂ ೬೯೪೧ ಲಕ್ಷಗಳ ಖರ್ಚನ್ನೂ ನಿರೀಕ್ಷಿಸಲಾಗಿದೆ. ಸೈನ್ಯಕ್ಕಾಗಿ ಖರ್ಚು ೪೪೬೨ ಲಕ್ಷ ಬೇಕಾಗುತ್ತದೆಯಂತೆ. ತಂತಿ ಟಪ್ಪಾಲು ಖಾತೆಯಿಂದ ಈ ವರ್ಷ ೪ ಲಕ್ಷ ಉಳಿತಾಯವಾಗಬಹುದೆಂದು ನಿರೀಕ್ಷಿಸಿದೆ.

ಈ ಪ್ರಯುಕ್ತ, ಬುಕ್ ಪೋಸ್ಟಿನ ಬೆಲೆಯನ್ನು ಮೊದಲಿನ ೨॥ ತೊಲೆಗಳಿಗೆ ಅರ್ಧಾಣೆ ಮತ್ತು ನಂತರ ಪ್ರತಿ ೨॥ ತೊಲೆಗಳಿಗೆ ಕಾಲಾಣೆಯಂತೆ ಇಳಿಸಲಾಗಿದೆ. ಮುಂಚೆ ಮೊದಲನೇ ೫ ತೊಲೆಗೆ ೯ ಕಾಸು ಬೆಲೆ ಇತ್ತು. ಪಾರ್ಸಲುಗಳಿಗೆ ೨೦ ತೊಲೆಗಳ ವರೆಗೆ ಇದ್ದ ಎರಡಾಣೆ ದರವನ್ನು ೪೦ ತೊಲೆಗಳ ವರೆಗೆ ನಾಲ್ಕಾಣೆ ಎಂದು ಮಾಡಲಾಗಿದೆ.

ಈ ವರ್ಷ ಹೊಸ ಸಾಲಗಳಿಗೆ ಕಾರಣವಿರುವುದಿಲ್ಲವಂತೆ.

ಬೆಳ್ಳಿಯ ಮೇಲಿನ ಸುಂಕವನ್ನು ಒಂದು ಔನ್ಸಿಗೆ ೨ ಆಣೆಯಿಂದ ೩ ಆಣೆಗೆ ಹೆಚ್ಚಿಸಿದೆ. ಇದರಿಂದ ೫೦ ಲಕ್ಷಗಳ ಹೆಚ್ಚಿನ ಆದಾಯವು ನಿರೀಕ್ಷಿಸಲಾಗಿದೆ.

ಸಕ್ಕರೆಯ ಮೇಲಿನ ಡ್ಯೂಟಿಯನ್ನು ಹಂಡ್ರೆಡ್ ವೈಟಿಗೆ ರೂ. ೧–೪–೦ರಿಂದ ರೂ. ೨ಕ್ಕೆ ಏರಿಸಿದೆ. ಇದು ೧೫ ಲಕ್ಷಗಳ ಲಾಭ ತರಬಹುದೆಂದು ಆಶಿಸಿದೆ. ಹೊರಗಿಂದ ಬರುವ ಸಕ್ಕರೆಯ ಮೇಲೆ ಹಂಡ್ರೆಡ್‌ವೈಟಿಗೆ ರೂ. ೨–೪–೦ರಂತೆ ವಿಧಿಸಿದೆ.

ಮೇಲಿನ ರೀತಿ ತೆರಿಗೆ ಸುಂಕಗಳನ್ನು ಹೆಚ್ಚಿಸಿದಲ್ಲಿ ೧೯೩೪–೩೫ನೇ ವರ್ಷದಲ್ಲಿ ಆಗಬಹುದಾದ ೧೫೦ ಲಕ್ಷ ನಷ್ಟವನ್ನು ತಗ್ಗಿಸಿ ೭ ಲಕ್ಷದ ಉಳಿತಾಯವನ್ನು ತೋರಿಸಿದಂತಾಗುತ್ತದೆ. ಅಲ್ಲದೆ ೧೯೩೫–೩೬ನೇ ವರ್ಷದ ನಷ್ಟದಲ್ಲಿ ೧೫೨ ಲಕ್ಷಗಳಷ್ಟು ಮುಂದಿನ ಪ್ರಯತ್ನಗಳಾಗಬೇಕೆಂದು ಗ್ರಿಗರು ಸೂಚಿಸಿದ್ದಾರೆ.

ವರ್ಕಿಂಗ್ ಕಮಿಟಿಯ ನಿರ್ಧಾರಗಳು

ಫೆಬ್ರವರಿ ತಾ. ೨೮ಕ್ಕೆ ಕಾಂಗ್ರೆಸ್ ಕಮಿಟಿಯು ಪಾಟ್ನಾದಲ್ಲಿ ಸೇರಿತು. ಮಹಾತ್ಮಾ ಗಾಂಧಿಯವರು ಅಂದು ಸಭೆಗೆ ಬಂದಿದ್ದರು. ಅಧಿಕಾರ ಸ್ವೀಕಾರದ ವಿಷಯ ಎರಡು ಕಡೆಯವರ ತರ್ಕಗಳನ್ನು ಮಹಾತ್ಮರು ಆಲಿಸುತ್ತ ಕೂತಿದ್ದರು. ಅವರು ಯಾವ ಅಭಿಪ್ರಾಯವನ್ನಾಗಲೀ ಹೇಳಿಕೆಯನ್ನಾಗಲೀ ಕೊಡಲಿಲ್ಲ. ಮರುದಿನದ ಸಭೆಯಲ್ಲಿ ಅಂದರೆ ಮಾರ್ಚಿ ೧ರಲ್ಲಿ ಕೂಡಿದ್ದ ಸಭೆಯಲ್ಲಿ ಅವರು ಒಂದು ಸೂಚನೆಕೊಟ್ಟಂತೆ ವರ್ತಮಾನವಿದೆ. ಬಹುಮತ ಕಾಂಗ್ರೆಸ್ ಪ್ರತಿನಿಧಿಗಳು ಚುನಾಯಿಸಲ್ಪಟ್ಟ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸಿನವರು ಅಧಿಕಾರವನ್ನು ಸ್ವೀಕರಿಸುವ ಇಚ್ಛೆಯುಳ್ಳವರಾದರೆ ಆ ಪ್ರಾಂತ್ಯಗಳ ಗವರ್ನರರು ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಿಕೊಳ್ಳದಂತೆ (ಕಾಂಗ್ರೆಸಿನವರು ಬ್ರಿಟಿಷ್ ಸರಕಾರದಿಂದ ಭರವಸೆಯನ್ನು ಪಡೆಯಬೇಕು) ಯೂ, ಮತ್ತು ಕಾಂಗ್ರೆಸಿನ ಮುಂದಿನ ಅಧಿವೇಶನವು ೧೯೩೮ನೇ ಫೆಬ್ರವರಿಯಲ್ಲಿ ಗುಜರಾತ್ ಪ್ರಾಂತ್ಯದಲ್ಲಿ ಜರಗಬೇಕಾಗಿ ವರ್ಕಿಂಗ್ ಕಮಿಟಿಯು ನಿರ್ಧರಿಸಿತು.

ಚುನಾವಣೆಗಳಲ್ಲಿ ಬಹುಮತದಿಂದ ವಿಜಯ ಹೊಂದಿ ಬಹು ಸಂಖ್ಯಾತರಾಗಿ ಚುನಾಯಿತರಾದ ಕಾಂಗ್ರೆಸ್ ಪ್ರತಿನಿಧಿಗಳಿಗೆ ವರ್ಕಿಂಗ್ ಕಮಿಟಿಯು ಈ ಕೆಳಗಿನ ಸೂಚನೆಗಳನ್ನು ಕೊಟ್ಟಿರುತ್ತದೆ.

ಕಾಂಗ್ರೆಸು ಶಾಸನಸಭೆಗಳನ್ನು ಪ್ರವೇಶಿಸುವುದು ಸರಕಾರದೊಡನೆ ಸಹಕರಿಸಲಿಕ್ಕಲ್ಲ. ಇಂಡಿಯಾ ಸರಕಾರದ ಹೆಸರಿನಲ್ಲಿ ಬ್ರಿಟಿಷ ಸರಕಾರವು ಹೊರಡಿಸಿದ ಇಂಡಿಯಾ ಆಕ್ಟ್ ಎಂಬ ನವೀನ ಶಾಸನವನ್ನು ಮುರಿಯಲಿಕ್ಕೆ. ಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸಿನ ಗುರಿಯಾಗಿರುತ್ತದೆ. ಅಂದರೆ ಭಾರತೀಯರಿಗೆ ಸಂಪೂರ್ಣ ಅಧಿಕಾರ ಪಡೆಯುವಂತಾಗಬೇಕು.

ಕೌನ್ಸಿಲಿನಲ್ಲಿ ಕಾಂಗ್ರೆಸ್ ಸದಸ್ಯರು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯ ಬೇಡಿಕೆಯನ್ನು ಮುಂದುಮಾಡಬೇಕು. ಕೌನ್ಸಿಲಿನ ಹೊರಗೂ ಅವರು ಚೆನ್ನಾಗಿ ಚಳುವಳಿ ನಡೆಸಬೇಕು. ಹಿಂದುಸ್ಥಾನದಲ್ಲಿ ಬ್ರಿಟಿಷರ ದರ್ಬಾರ ಸ್ಥಿತಿಯನ್ನು ಹೆಚ್ಚಿಸುವ ಯಾವುದೊಂದು ಕೂಟ ಸಮಾರಂಭಗಳಲ್ಲಿಯೂ ಕಾಂಗ್ರೆಸ್ಸಿನವರು ಭಾಗವಹಿಸಕೂಡದು. ಸಂದೇಹಾಸ್ಪದ ವಿಷಯಗಳಲ್ಲಿ ಅವರು ಕಾಂಗ್ರೆಸ್ಸಿನ ಹತ್ತಿರ ಸಲಹೆ ಕೇಳಬೇಕು. ಕಾಂಗ್ರೆಸ್ ಸದಸ್ಯರು ಸರಕಾರದೊಡನೆಯಾಗಲೀ ಅದರ ಅಧಿಕಾರಿಗಳೊಡನೆ ಯಾವ ವ್ಯಕ್ತಿಗತ ಸಂಬಂಧವನ್ನು ಬೆಳೆಸಬಾರದು. ಕಾಂಗ್ರೆಸ್ ಸದಸ್ಯರೆಲ್ಲರೂ ಖಾದಿಯನ್ನು ಧರಿಸಬೇಕು. ಪ್ರಜೆಗಳ ಬೇಡಿಕೆಗಳನ್ನು ಪೂರೈಸಲು ಕೌನ್ಸಿಲಿನ ಒಳಗೂ ಹೊರಗೂ ಚಳುವಳಿಯನ್ನು ಮಾಡಬೇಕು.

ಕಾಂಗ್ರೆಸಿನ ಮೇಲೆ ಪ್ರೀತಿ ವಿಶ್ವಾಸ ಭರವಸೆಗಳನ್ನು ಇಟ್ಟು ಕಾಂಗ್ರೆಸಿಗೆ ಬಹುಮತ ದೊರೆಯಲು ಸಹಾನುಭೂತಿಯನ್ನು ತೋರಿಸಿದ ಮತ್ತು ಕಾಂಗ್ರೆಸ್ ಮಂತ್ರಿ ಪದವೀಧರರು ಜನತೆಗೆ ಉಪಯುಕ್ತವಾದ ಕಾರ್ಯಕ್ರಮವನ್ನು ಅನುಸರಿಸುವಂತೆ ಸಂದರ್ಭಗಳನ್ನು ಕಲ್ಪಿಸಿಕೊಡಬೇಕು. ಇಷ್ಟು ಗಾಂಧಿಜಿಯವರು ಕೊಟ್ಟ ಸಲಹೆ, ಇದನ್ನು ಅನುಸರಿಸುವುದು ಸೂಕ್ತವೆಂದು ಅವರು ಸೂಚಿಸಿರುವರು.

ಇದರ ನಂತರ ಸಭೆಯಲ್ಲಿ ಪುನಃ ಚರ್ಚೆಗಾದಂಥ ಮಂತ್ರಿಪದ ಸ್ವೀಕಾರ ಧೀಕ್ಷಾರ್ಥಿಗಳನ್ನು ಬೆಂಬಲಿಸುವ ಪಂಗಡದವರೊಳಗೆ ಒಂದು ವಿಧದ ಒಪ್ಪಂದವಾಗಿರುತ್ತದೆ.

ಕಾಂಗ್ರೆಸಿನ ತೀರ್ಮಾನವೇನೆ ಇರಲಿ, ಅಧಿಕಾರ ಸ್ವೀಕಾರ ಮಾಡಿದರೆ ಮಂತ್ರಿಗಳಿಗೆ ಕಡಿದಾದ ಷರತ್ತುಗಳನ್ನು ಹಾಕಲಾಗುತ್ತೆ. ಎಷ್ಟರವರೆಗೆ ಸರಕಾರವು ಪ್ರಜೆಗಳಿಗೆ ಉಪಯೋಗವಾಗುವಂತೆ ನಡೆಯುತ್ತಾರೋ ಇಲ್ಲವೋ ಎಂಬುದನ್ನು ಪೂರ್ಣವಾಗಿ ಪರೀಕ್ಷಿಸುವ ಕಾಲದ ಮಟ್ಟಿಗೆ ಸಕಲರಿಗೂ ವರ್ಕಿಂಗ್ ಕಮಿಟಿಯು ತನ್ನ ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಆಂಗ್ಲ ಚಕ್ರವರ್ತಿಯ ಕಿರೀಟ ಧಾರಣಾ ಮಹೋತ್ಸವಕ್ಕೆ ವ್ಯಾಪಾರಿಯ ಎಸೆಂಬ್ಲಿಯ ಅಧ್ಯಕ್ಷರಾದ ಸರ್ ಮೇನಕಟ ದಾಧಾಭಾಯಿ, ಸರ್ ಅಬ್ದುಲ್ ರಹೀಂ, ಸರ್ ಕವಾಸ್ಜಿ ಜಹಾಂಗೀರ್, ರಾ॥ ಬ॥ ರಾಮಸರ್ಕಾರ್ ದಾಸ್, ಸರ್ ಲೆಸ್ಲಿ ಹಡ್ಸನ್, ಸರ್ ಮಹಮ್ಮದ್ ಜಫರ್ ಮೊದಲಾದವರು ಆಹ್ವಾನಿಸಲ್ಪಟ್ಟಿರುವರು.

ಪಾಟಿಯಾಲದ ಮಹಾರಾಜರವರು.

ನರೇಂದ್ರ ಮಂಡಲದ ಅಧ್ಯಕ್ಷಪದವಿಯು ಕೊನೆಗೆ ಪಾಟಿಯಾಲಾ ಮಹಾರಾಜರ ವಶವಾಯಿತು. ಮಾಜಿ ಅಧ್ಯಕ್ಷರಾಗಿದ್ದ ಬೋಪಾಲ್ ನವಾಬರು ಮಹಾರಾಜರು ಪಾಟಿಯಾಲದ ಮೇಲೆ ತುಂಬಾ ಸ್ಪರ್ಧೆ ನಡಿಸಿದರೂ ೧೭ ಓಟುಗಳಿಂದ ಸೋತರು. ಇವರಿಗೆ ೧೩ ಓಟುಗಳೂ ಪಾಟಿಯಾಲರಿಗೆ ೩೦ ಓಟುಗಳೂ ದೊರೆತವು.

ನರೇಂದ್ರ ಮಂಡಲದ ಉಪಾಧ್ಯಕ್ಷರಾಗಿ ನವನಗರದ ಜಾಮ್ ಸಾಹೇಬರು ಚುನಾಯಿಸಲ್ಪಟ್ಟರು. ಮಾನ್ಯ ವೈಸರಾಯರು ಇವರೆಲ್ಲರಿಗೆ ಶ್ಲಾಘಿಸಿ ಸಂದೇಶವನ್ನು ಕೊಟ್ಟರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಯ್ಯ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡ ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore.

ಅಧಿಕಾರ ಸ್ವೀಕರಿಸಬೇಕು.

ಅಧಿಕಾರ ಸ್ವೀಕಾರದ ವಿಚಾರವಾಗಲೀ, ಧಿಕ್ಕಾರದ ವಿಚಾರವಾಗಲೀ ನಾವು ಮಾಡಬೇಕಾದ ಚರ್ಚೆಯು ನಮ್ಮ ನಮ್ಮೊಳಗಿನ ತಿಳುವಳಿಕೆಯ ಮೇಲೆ ಹೊಂದಿಕೊಂಡಿದೆ. ಅಲ್ಲದೆ ಅದರಿಂದ ಭೇದ ಅಥವಾ ಸಂಗಡ ವಿಭಾಗವಾಗುವ ಸಂದರ್ಭಗಳಿಗೆ ಎಡೆಯಿರಲಾರದು. ಕಾಂಗ್ರೆಸ್ಸಿನಲ್ಲಿ ಅಧಿಕಾರ ಸ್ವೀಕಾರದ ಅಭಿಲಾಷೆಯು ಹೆಚ್ಚುತ್ತಲಿದೆ, ಅದು ಸ್ವಾಭಾವಿಕವಾದುದು ಎಂದು ಮಹಾತ್ಮಾ ಗಾಂಧಿಯವರೆಂದಿರುವರು. ಅಸಹಕಾರ, ಕಾನೂನು ಭಂಗ, ಸಾರ್ವಜನಿಕ ಸತ್ಯಾಗ್ರಹ ಇವುಗಳನ್ನು ಅನೇಕ ಅನುಕೂಲತೆಗಳ ಮೇಲೆ ಕೈಕೊಳ್ಳಲಾರದವರು ಅಂದರೆ, ವಿಶೇಷ ತರದ ಕಾಂಗ್ರೆಸ್ ನಿಯಮಗಳನ್ನು ಅನುಸರಿಸಲಾರದವರು, ಜವಾಬುದಾರಿ ಅಧಿಕಾರಗಳನ್ನು ವಶಪಡಿಸಿ ಆ ಮೂಲಕ ದೇಶದ ಹಿತಸಾಧಿಸುವ ಸಲುವಾಗಿ ಕಾಂಗ್ರೆಸ್ಸನ್ನು ಸೇರಿದರು. ಅಧಿಕಾರವನ್ನು ಸ್ವೀಕರಿಸಬೇಕೆಂಬುದೇ ಇವರ ಮತ. ಅಂತೆಯೇ ಅವರು ತಮ್ಮ ತರ್ಕಗಳಿಗೆ ತಕ್ಕುದಾದ ಕಾರಣಗಳನ್ನು ಕೊಡುತ್ತಾರೆ. ನಾವೀಗ ಉಭಯತರ ತತ್ವಗಳನ್ನೂ ತರ್ಕಗಳನ್ನೂ ಸರಿಯಾಗಿ ವಿಚಾರಿಸಿ ನಮ್ಮ ನಮ್ಮ ಅಭಿಪ್ರಾಯಗಳನ್ನು ಸ್ವಂತವಾಗಿ ಮಾಡಿಕೊಳ್ಳಲಾಗುತ್ತದೆ.

ಕಾಂಗ್ರೆಸ್ ತತ್ವಕ್ಕನುಸಾರವಾಗಿ ಅಧಿಕಾರ ಸ್ವೀಕಾರ, ಧಿಕ್ಕಾರದ ಸಮಸ್ಯೆಯು ಅಖಿಲ ಭಾರತಕ್ಕೆ ಸಂಬಂಧಪಟ್ಟುದಾದರೆ ಮಾತ್ರ ಕಾಂಗ್ರೆಸು ಅದನ್ನು ಅನುಸರಿಸಲಪ್ಪಣೆ ಕೊಡುವುದು. ಅದಕ್ಕಾಗಿ ದೇಶದಲ್ಲಿನ ಎಲ್ಲ ಕಾಂ। ಸಭೆ, ಸಮಿತಿಗಳ ಅಭಿಪ್ರಾಯವನ್ನು ಕೊಡುವಂತೆ ರಾಷ್ಟ್ರಪತಿಗಳು ಆಜ್ಞೆ ಹೊರಡಿಸಿರುತ್ತಾರೆ. ಸರಿಯಾಗಿ ಯೋಚಿಸಿದರೆ, ಅಧಿಕಾರ ಸ್ವೀಕಾರದ ಪ್ರಶ್ನೆಯು ಅಖಿಲ ಭಾರತದ ಪ್ರಶ್ನೆಯಾಗಬೇಕೆಂದಿಲ್ಲ. ಕಾರಣ, ಹಿಂದೂಸ್ಥಾನದ ಎಲ್ಲ ಪ್ರಾಂತ್ಯಗಳಲ್ಲೂ ಕಾಂಗ್ರೆಸು ಬಹುಮತವನ್ನು ಪಡೆಯಲಾರದು. ಉದಾ: ಪಂಜಾಬ್, ಸಿಂಧು, ಇಲ್ಲೆಲ್ಲ ಅಧಿಕಾರ ಸ್ವೀಕಾರಕ್ಕಾಗಲೀ ಧಿಕ್ಕಾರಕ್ಕಾಗಲಿ ಕಾಂಗ್ರೆಸ್ಸಿನವರಿಗೆ ಬಹುಮತವಿಲ್ಲ. ಹೀಗಿರುವಾಗ, ಕಾಂಗ್ರೆಸು ಪ್ರಾಂತೀಕ ಧೋರಣೆಯನ್ನು ಅನುಸರಿಸುವುದು ಯೋಗ್ಯವಾಗಿದೆ. ಕಾಂಗ್ರೆಸ್ ಪ್ರತಿನಿಧಿಗಳು ಬಹುಮತವಿದ್ದಲ್ಲಿ ಅಧಿಕಾರವನ್ನು ಸ್ವೀಕರಿಸಬಹುದು ಎಂಬ ಈ ತೀರ್ಮಾನವನ್ನು ಅ। ಭಾ। ಕಾಂಗ್ರೆಸ್ ಸಭೆಯು ಮಾಡಬೇಕು.

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಮುಂದಿರುವ ಪ್ರಶ್ನೆಯು, ಅಧಿಕಾರವನ್ನು ಸ್ವೀಕರಿಸಿದರೆ ದೇಶಕ್ಕೇನಾದರೂ ಹಿತವಾಗುತ್ತದೆಯೋ ಅಥವಾ ಇಲ್ಲವೋ ಎಂಬುದಿಷ್ಟೇ. ಎಂದು ಕಾಂಗ್ರೆಸು ಶಿಸ್ತಿನ ಆಡಳಿತ ಕ್ರಮದಿಂದ ಆಡಳಿತ ಸೂತ್ರಗಳನ್ನು ಹಿಡಿದುಕೊಳ್ಳಬೇಕೆಂದು ಬಯಸಿತೋ ಅಂದೇ ಅಧಿಕಾರ ಸ್ವೀಕರಿಸುವುದೇ ಒಳಿತೆಂಬ ಅಭಿಪ್ರಾಯವು ಬಂದೇಬಂದಿರುತ್ತದೆ. ಇಂದು ಬಹುಮತ ಕಾಂಗ್ರೆಸ್ ಪಂಗಡವಿದ್ದ ಪ್ರಾಂತ್ಯಗಳಲ್ಲಿ ಅಧಿಕಾರವನ್ನು ಧಿಕ್ಕರಿಸಿದರೆ, ಅದು ಕಾಂಗ್ರೆಸಿನ ಬೆಲೆಗೆ ಸ್ವಲ್ಪ ಕುಂದನ್ನೂ ಯೋಗ್ಯತೆಗೆ ಕೊರತೆಯನ್ನೂ ಉಂಟುಮಾಡದಿರದು. ಚುನಾವಣೆಗೆ ನಿಲ್ಲದೆ, ಕಾಂಗ್ರೆಸ್ ಹೊರಗಿನಿಂದಲೇ ಚಳವಳವನ್ನು ಮಾಡುತ್ತಿದ್ದರೆ, ಅದೊಂದು ತರ ಬೇರೆಯಾಗುತ್ತಿತ್ತು. ಕೌನ್ಸಿಲುಗಳನ್ನು ಹೊಕ್ಕು, ಅಧಿಕಾರ ಸ್ವೀಕಾರಮಾಡದೆ, ಸರಕಾರದ ಧೋರಣೆಯನ್ನು ಮುರಿಯುವುದಾದರೆ, ಗತವರ್ಷ ದಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಬಹುಮತವಿದ್ದ ಸ್ವರಾಜ್ಯಪಾರ್ಟಿಯು ರಾಜೀನಾಮೆ ಕೊಡುತ್ತಿರಲಿಲ್ಲ.

ಅಧಿಕಾರ ಸ್ವೀಕಾರದ ಕುರಿತು ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರು, ಸರ್‌ದಾರ್ ಶಾರ್ದೂಲಸಿಂಗ್ ಮತ್ತು ಇತರ ಸಮತಾವಾದ ಪಂಗಡದವರು ವಿರೋಧ ಅಭಿಪ್ರಾಯಗಳನ್ನು ಕೊಡಬಹುದು. ಆದರೆ ಆ ಅಭಿಪ್ರಾಯಗಳು ವ್ಯಕ್ತಿಕವಾದುದರಿಂದ, ಅಧಿಕಾರ ಸ್ವೀಕಾರಕ್ಕೆ ಒಪ್ಪಿಗೆ ಇದ್ದವರು ಅದರಿಂದ ತಪ್ಪು ತಿಳಿಯುವ ಆವಶ್ಯಕತೆ ಇಲ್ಲ. ಪಂಡಿತ ಜವಾಹರಲಾಲ ನೆಹರುಗಳ ಅಭಿಪ್ರಾಯವು ಕಾಂಗ್ರೆಸಿನ ಅಭಿಪ್ರಾಯವಲ್ಲವೆಂದು ಎಲ್ಲರೂ ಸ್ಪಷ್ಟವಾಗಿ ತಿಳಕೊಳ್ಳಬೇಕು. ಒಂದು ವೇಳೆ ಪಂಡಿತ ಜವಾಹರಲಾಲರ ತತ್ವಗಳನ್ನು ಅನುಸರಿಸುವುದಿದ್ದರೆ, ಚುನಾವಣೆಗಳಿಗೆ ಕಾಂಗ್ರೆಸೂ ಎಂದೂ ಉಮೇದುವಾರರನ್ನು ಕಳುಹಿಸುತ್ತಿರಲಿಲ್ಲ. ಈ ವಿಷಯವೂ ಪಂಡಿತರಿಗೆ ತಿಳಿದೇ ಇರುತ್ತದೆ. ಆದರೆ ಘನವಾದ ಆ ರಾಷ್ಟ್ರಪತಿಗಳು ಬಹುಮತದವರ ಅಭಿಪ್ರಾಯವನ್ನು ಮನ್ನಿಸಿ ಇಂದು ಕೆಲಸಮಾಡುತ್ತಿದ್ದಾರೆ. ಕಾಂಗ್ರೆಸಿನ ಚುನಾವಣೆ ವಿಷಯದ ವರದಿಯಲ್ಲಿಯೂ, ದೇಶದ ಬಹುಮತಕ್ಕನುಸಾರವಾಗಿ ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುವುದೆಂಬ ಅಂಶವೂ ಸೂಚಿಸಲ್ಪಟ್ಟಿದೆ. ಹೀಗಿರುವಾಗ ಕಾಂಗ್ರೆಸ್ ಪಕ್ಷದವರು ಆಡಳಿತದ ಜವಾಬುದಾರಿಯನ್ನು ನಿರಾಕರಿಸಿದಲ್ಲಿ, ಅದೊಂದು ಶಾಲಾಮಕ್ಕಳ ಪುಕ್ಕತನವನ್ನು ತೋರ್ಪಡಿಸಿದಂತಾಗುತ್ತದೆ.

ಅಧಿಕಾರ ಸ್ವೀಕರಿಸಿದೊಡನೆ ಕಾಂಗ್ರೆಸಿನ ಧ್ಯೇಯವನ್ನು ಬದಲಾಯಿಸಿಕೊಂಡಂತೆ ಆಗುತ್ತದೆಂದು ಕೆಲವರ ಮತ. ಆದರೆ ವಿಷಯವು ಹಾಗಿರದೆ, ಕಾಂಗ್ರೆಸ್ ಉಮೇದುವಾರರು ಕೌನ್ಸಿಲುಗಳನ್ನು ಹೊಕ್ಕು, ಅಲ್ಲಿನ ಸ್ಥಾನಗಳನ್ನು ನಿರರ್ಥಕವಾದ ಕೆಲ ವ್ಯಕ್ತಿಗಳು ದುರುಪಯೋಗಪಡಿಸದಂತೆ ನೋಡಿ, ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಸರಿದೋರಿದ ಕಾರ್ಯಕ್ರಮವನ್ನೂ, ತಿದ್ದುಪಡಿಗಳನ್ನೂ ಮಾಡುವ ಪ್ರಯತ್ನ ಮಾಡಬೇಕು. ನ್ಯಾಯನಿಷ್ಠುಗಳೇ ಧ್ಯೇಯವಾಗಿಟ್ಟುಕೊಂಡಿದೆ ಎಂದು ಸಾರುವ ಸರಕಾರದ ನಿಜಸ್ಥಿತಿಯನ್ನು ಆಗ ಹೊರಗೆಳೆದಂತಾಗುತ್ತದೆ. ದೇಶದಲ್ಲಿನ ರೈತರಿಗೆ ವಿಶೇಷತರದ ಸಾಲಗಳನ್ನೂ, ರಿಯಾಯಿತಿಗಳನ್ನೂ ತೋರಿಸಬೇಕು ಮತ್ತು ಕಂದಾಯವನ್ನು ಒಂದಕ್ಕೆ ಅರ್ಧ ಇಳಿಸಬೇಕು ಎಂದು ಕಾಂಗ್ರೆಸ್ ಉಮೇದುವಾರರು ಕೌನ್ಸಿಲುಗಳಲ್ಲಿ ಹೇಳುವಾಗ, ಸರಕಾರವು ಯಾವ ರೀತಿ ವರ್ತಿಸುತ್ತದೆ, ಮತ್ತು ನ್ಯಾಯವಾದ ಈ ಕೇಳಿಕೆಗೆ ಸಮ್ಮತಿಸುತ್ತದೋ ಇಲ್ಲವೋ ಎಂಬ ಈ ವಿಷಯವು ಸ್ಪಷ್ಟವಾಗುತ್ತದೆ. ಒಂದು ವೇಳೆ ಸರಕಾರವು ಅದನ್ನು ಅನುಮೋದಿಸಲು ಅಡ್ಡಿ ತಂದಲ್ಲಿ ಸರಕಾರಕ್ಕೆ ರೈತರ ಹಿತವು ಎಷ್ಟರಮಟ್ಟಿಗೆ ಎಂಬ ವಿಷಯವು ಜನತೆಗೆ ಸಂಪೂರ್ಣವಾಗಿ ತಿಳಿದಂತಾಗುತ್ತದೆ. ಆಗ ಹೊರಗಿನಿಂದ ನಡೆಯುತ್ತಿರುವ ಚಳವಳಕ್ಕೆ ಒಳ್ಳೆ ಹುರುಪು ಸಿಕ್ಕಂತಾಗುತ್ತದೆ.

ಇಷ್ಟೆ ಅಲ್ಲದೆ, ಈಗ ಕಾಂಗ್ರೆಸಿನ ಮುಂದಿರುವ ವಿಷಯವೆಂದರೆ, ಜನತೆಗೆ ತಮ್ಮ ವರ್ತನೆಯನ್ನು ಸರಿಯೆಂದು ತಿಳಿಯಪಡಿಸುವುದು. ಬಹಳ ಉತ್ಸಾಹದ ಬಹುಮತ ವೋಟುಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಕೌನ್ಸಿಲುಗಳಿಗೆ ಹೋಗಿ ಅಧಿಕಾರ ಸ್ವೀಕರಿಸುವುದಿಲ್ಲ ಎಂಬ ವಿಷಯವು ಜನತೆಗೆ ತಿಳಿದಲ್ಲಿ, ಹೆಚ್ಚಾಗಿ ಅಶಿಕ್ಷಿತವಾಗಿರುವ ಜನತೆಯು ಅದನ್ನು ತಿಳಕೊಳ್ಳಲಾರದು. ಅಲ್ಲದೆ ಅಧಿಕಾರ ಸ್ವೀಕಾರ ಮಾಡುತಿದ್ದರೆ ಏನಾಗುತ್ತಿತ್ತು? ಅಧಿಕಾರ ಸ್ವೀಕರಿಸುವುದಿಲ್ಲವಾದರೆ, 'ನಮ್ಮ ಕಾಂಗ್ರೆಸು ಚುನಾವಣೆಗೆ ಏಕೆ ನಿಲ್ಲಬೇಕಿತ್ತು? ಎಂಬ ಪ್ರಶ್ನೆಗಳನ್ನು ಜನತೆಯು ತರ್ಕಿಸುವುದು. ಅಷ್ಟರಲ್ಲಿ ಜನತೆಗೆ ಕಾಂಗ್ರೆಸ್ ಪ್ರತಿನಿಧಿಗಳ ಮೇಲಿನ ಭರವಸೆಯು ಕುಂದುತ್ತಾ ಬರುತ್ತದೆ. ಆಗ ಜನತೆಯನ್ನು ತಿಳಿಯಗೊಳಿಸುವುದು ಕಷ್ಟಸಾಧ್ಯವಾದ ಕೆಲಸವಾಗುವುದು. ಅಧಿಕಾರ ಸ್ವೀಕಾರ ಮಾಡಿದುದರಿಂದ ತನ್ನಷ್ಟಕ್ಕೆ ತಾನೇ ಜನತೆಗೆ ಸರಕಾರದ ಗುಟ್ಟು ಎಲ್ಲಾ ವಿಷದವಾದಂತಾಗುತ್ತದೆ. ಅಲ್ಲದೆ ಕಾಂಗ್ರೆಸ್ ಪ್ರತಿನಿಧಿಗಳ ಮೇಲಿನ ಭರವಸೆಯು ಇನ್ನೂ ಜನರಲ್ಲಿ ಹೆಚ್ಚಾಗುತ್ತದೆ.

ಅಧಿಕಾರವನ್ನು ಸ್ವೀಕರಿಸದೆ, ಅಲ್ಪಸಂಖ್ಯಾತರ ಪಕ್ಷದ ಪ್ರತಿನಿಧಿಗಳನ್ನು ತಮ್ಮ ವತಿಯಿಂದ ಎಳೆದು ಅವರಿಗೆ ತಮ್ಮ ಬೆಂಬಲವನ್ನು ಕೊಟ್ಟು ಮಂತ್ರಿಪದವಿಯನ್ನು ಸ್ವೀಕರಿಸುವಂತೆ ಮಾಡಿ ಆ ಪಕ್ಷದ ಮುಖಂಡರಿಂದ ದೇಶಕ್ಕೆ ಬೇಕಾಗುವ ಹಿತಗಳನ್ನು ಬಹುಮತದಿಂದ ಅನುಮೋದಿಸಿ ಮಾಡುವ ಏರ್ಪಾಡೂ ಒಂದು ಇದೆ ಎಂದು ಅಧಿಕಾರ ವಿರೋಧಿಗಳು ಎನ್ನುವರು. ಇದು ಹೌದಾದರೆ, ಇವರು ಮಂತ್ರಿಪದವಿಯನ್ನು ಸ್ವೀಕರಿಸುವಂತೆ ಮಾಡುವ ಪಕ್ಷದವರು ಕಾಂ। ಪಕ್ಷವನ್ನು ಮೊದಲೇ ಸೇರಬಾರದೇತಕ್ಕೆ? ಇದೆಲ್ಲಾ ನಡೆಯುವ ಏರ್ಪಾಡುಗಳಲ್ಲ. ಅಂದು ಸ್ವರಾಜ್ಯ ಪಾರ್ಟಿಯು, ಸ್ವತಂತ್ರಪಕ್ಷದ ನಾಯಕರಾದ ಡಾ। ಸುಬ್ಬರಾಯನ್‌ರವರನ್ನು ಕೌನ್ಸಿಲಿನಲ್ಲಿ ಬೆಂಬಲಿಸಿ ಕಾಂಗ್ರೆಸ್ ಬೆಂಬಲದ ಮಂತ್ರಿಯಾಗಿ ಮಾಡಿದಾಗ ಅವರು ಸರಕಾರವನ್ನು ವಿರೋಧಿಸುವ ಧೈರ್ಯಪಡೆದರು.

ಈಗ ಮಂತ್ರಿ ಪದವಿಗಳನ್ನು ಸ್ವೀಕರಿಸಿ ಸರಕಾರದೊಡನೆ ಹೋರಾಡುವ ಕೆಲಸಕ್ಕೆ ಅಸಾಧಾರಣ ಧೈರ್ಯ ಬೇಕು. ಅದೇನು ಸುಲಭ ಕೆಲಸವಲ್ಲ. ಬಹಳ ತ್ಯಾಗಶಕ್ತಿಯೂ ಅದಕ್ಕೆ ಬೇಕು. ಅಂದ ಮೇಲೆ, ಸರಕಾರದೊಡನೆ ಕಡೆಯ ತನಕ ಹೋರಾಡುವುದೇ ಲೇಸಲ್ಲದೆ, ಕೌನ್ಸಿಲುಗಳನ್ನು ಪ್ರವೇಶಿಸಿ, ಅಧಿಕಾರ ಸ್ವೀಕರಿಸದೆ, ರಾಜ್ಯಾಂಗ ರಚನೆಯ ಗುಟ್ಟನ್ನು ಹೊರಗೆಳಹುವರೇ, ಏಕಾಏಕಿ ಮುರಿದಿಕ್ಕುವ ಪ್ರಯತ್ನಮಾಡುವಾಗ, ಗವರ್ನರರಿಂದ ಅಡ್ಡಿಮಾಡಲ್ಪಟ್ಟು ಅಲ್ಲಿಂದ ರಾಜಿನಾಮೆ ಕೊಟ್ಟು ಹೊರಗೆ ಬರುವುದಕ್ಕಿಂತಲೂ, ಅಧಿಕಾರ ಸ್ವೀಕರಿಸಿ ಜನತೆಗೆ ಹಿತವಾಗುವ ಕಾನೂನುಗಳನ್ನು ಅನುಮೋದಿಸುವ ಪ್ರಯತ್ನಮಾಡಿ, ಆ ಕಾಲದಲ್ಲಿ ಗವರ್ನರರಿಂದ ಅಡ್ಡಿಮಾಡಲ್ಪಟ್ಟಲ್ಲಿ, ರಾಜಿನಾಮೆಯಿತ್ತು ಜನತೆಯ ಭರವಸೆಯನ್ನು ಉಳಿಸಿಕೊಳ್ಳುವುದು ಎಷ್ಟೋ ಉತ್ತಮವಿದೆ.

ಜರ್ಮನಿಯಲ್ಲಿ ಭಾರತ ಸ್ವಾತಂತ್ರ ದಿನಾಚರಣೆ.

ಬರ್ಲಿನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿ ಸಂಘದವರು ಕಳೆದ ಜನವರಿ ತಾ ೨೬ನೇ ದಿನ ಭಾರತ ಸ್ವಾತಂತ್ರ್ಯ ದಿನವನ್ನು ಆಚರಿಸಿದರು. ಬರ್ಲಿನಿನ ಶ್ರೇಷ್ಠವಾದ ಒಂದು ಉಪಹಾರ ಮಂದಿರದ ಭವನವೊಂದರಲ್ಲಿ, ಜರ್ಮನಿಯ ಎಲ್ಲ ಕಡೆಗಳಿಂದಲೂ ಆಮಂತ್ರಿಸಲ್ಪಟ್ಟ ಭಾರತೀಯರು ಒಟ್ಟು ಕೂಡಿದ್ದರು. ಅಲ್ಲದೆ ಭಾರತ ಹಿತೈಷಿಗಳಾದ ಕೆಲವು ಜರ್ಮನರೂ ಆಹ್ವಾನಿಸಲ್ಪಟ್ಟಿದ್ದರು. ಭವನವು ಅಂದವಾಗಿ ಶೃಂಗರಿಸಲ್ಪಟ್ಟಿದ್ದು, ಮಹಾತ್ಮಾ ಗಾಂಧಿಯವರ ಭಾವಚಿತ್ರವು ಅಲ್ಲಿ ಅಲಂಕರಿಸಿ ಇಡಲ್ಪಟ್ಟಿತ್ತು.

"ವಂದೇ ಮಾತರಂ" ಪ್ರಾರ್ಥನೆಯೊಂದಿಗೆ ಕಾರ್ಯಕಲಾಪಗಳು ಪ್ರಾರಂಭವಾದವು. ಡಾ। ಗಂಗುಲಿಯವರು ಬಂಗಾಳಿಯಲ್ಲಿ ಸಾರಸ್ಯವಾದ ಭಾಷಣಮಾಡಿ, ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನೂ ಎತ್ತಿಹೇಳಿದರು.

ಜರ್ಮನಿಯ ಇಸ್ಲಾಮಿಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಹಬಿಬುಲ್ ರಹಿಮಾನರವರು ಹಿಂದೂಸ್ಥಾನಿಯಲ್ಲಿ ಬಹಳೇ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿ, ಭಾರತೀಯರೆಲ್ಲರೂ ತಮ್ಮ ತಮ್ಮ ಭೇದಾಭೇದಗಳನ್ನು ತೊರೆದು ಒಟ್ಟುಗೂಡಿ ಮಾತೃಭೂಮಿಯ ಸೇವೆಯನ್ನು ಮಾಡಬೇಕೆಂದೂ, ಪಂಡಿತ್ ಜವಾಹರಲಾಲ್ ನೆಹರುಗಳೇ ಭಾರತದಲ್ಲಿ, ಹಿಂದೂ ಮುಸಲ್ಮಾನರಿಂದ ಪ್ರೀತಿಸಲ್ಪಡುವ ಆದ್ಯ ಮುಖಂಡರೆಂದೂ ಹೇಳಿದರು. ಭಾಷಣಗಳೆಲ್ಲವೂ ಜರ್ಮನ್ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟಿದ್ದುವು.

ಶ್ರೀ ಎಂ. ಎನ್. ರಾಯ್‌ಯವರು

ಎಂ. ಎನ್. ರಾಯರ ವಿವಾಹ.

ಪ್ರಸಿದ್ಧ ಸಮತಾವಾದಿ ಪಂಗಡದ ಮುಖಂಡರಾದ ಶ್ರೀ। ಎಂ. ಎನ್. ರಾಯರವರು ಎಲಿನ್ ಗೆಟ್ಟ್‌ಚಾಕ್ ಎಂಬ ಅಮೇರಿಕನ್ ತರುಣಿಯನ್ನು ವಿವಾಹವಾಗ ನಿಶ್ಚಯಿಸಿದ್ದು ತಿಳಿದು ಬಂದಿದೆ. ಎಲಿನ್ ಗೆಟ್ಟ್‌ಚಾಕ್‌ರು ಮಾರ್ಚ ತಿಂಗಳ ಅಮೇರಿಕದಿಂದ ಬೊಂಬಾಯಿಗೆ ಬರಲಿರುವರು. ಶ್ರೀ ರಾಯ್‌ರು ಮುಂಬಯಿಯ ವಿವಾಹ ದಾಖಲು ನಿಲಯದ ಕಚೇರಿಗೆ ತಮ್ಮ ಈ ಇಚ್ಛೆಯನ್ನು ತಿಳಿಸಿರುವರು. ಮದುವೆ ತಾರೀಕು ಮುಂದೆ ನಿಶ್ಚಯಿಸಲಾಗುವುದು.

ಕಾನ್ಪುರದ ಕಾಂಗ್ರೆಸ್ ಸಭೆಯು ತಾ, ರಂದು ಸಭೆ ಸೇರಿ, ಅಧಿಕಾರವನ್ನು ಸ್ವೀಕರಿಸಬೇಕೆಂದು ಬಹುಮತದಿಂದ ಒಪ್ಪಲಾಯಿತು.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½%per annum. Savings Bank Deposits at 4½% per annum.

FIXED DEPOSITS

For 2 Years 7% 1 Year 6% For 6 months 5% 3 months 4½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for paticulars— **K. R. GURU,** *Managing Director.*

Combined Booking Agency
AND
Joint Booking Office.

ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು.

ಬಸ್ಸು ಸರ್ವೀಸುಗಳ ಮೇಲಾಟವನ್ನು ಹೋಗಲಾಡಿಸಿ,
ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಿ,
ಜನಸೇವೆಯನ್ನು ಮಾಡುವ ಉದ್ದೇಶದಿಂದ,
ನಾವೆಲ್ಲರೂ ಕೂಡಿ ಸರ್ವೀಸುಗಳ ವ್ಯವಸ್ಥೆಗಳನ್ನು ಮಾಡಿದ್ದೇವೆ
ಪ್ರಯಾಣಿಕರಿಗೆ ಯಾವುದೊಂದು ಅನಾನುಕೂಲವು ಒದಗಿದ್ದಾಪರೆ,
ಅಥವಾ
ಪ್ರಯಾಣ ಸೌಕರ್ಯದ ಉದ್ದೇಶದಿಂದ ಯಾರೊಬ್ಬರಿಗ ಯಾವುದೊಂದು ಸೂಚನೆ ಕೊಡಲಿದ್ದರೆ,
ಅವುಗಳನ್ನು ತಿಳಿಯಲು ನಾವು ಆತುರಪಡುತ್ತೇವೆ

ಮೇಲಿನ ಸಂಸ್ಥೆಗಳ ಜ್ಯೊಂಟ್ ಮೆನೇಜರ (Joint Manager) ರೊಡನೆ ಅಥವಾ ಕೆಳಗೆ ಹೆಸರು ಕಾಣಿಸಿದಯಾರೊಡನೆಯಾದರೂ
ಪತ್ರವ್ಯವಹಾರವನ್ನು ನಡೆಸಬಹುದು.

The Canara Public Conveyance Co. Ltd.
The Hanuman Transport Co., Ltd.
The Shanker Vittal Motor Co., Ltd.
The Durga Parameshwari Motor Service.
The Popular Motor Service Ltd.
The P. V. Motor Service
The Modern Motor Service of Mysore Ltd.
The Superb Motor Service.
The Mahalaxmi Motor Service.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908
Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses
It pays you to represent this Company
Wanted Agents in unrepresented parts

Apply to.—

Messrs Kochikar Brothers,
Madras Branch Secretaries.

1936
OUR VALUATION YEAR



Branches at:-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore	Udipi, S. India.	Charni Road, Bombay No. 4

ಮಂಗಳೂರು

ಇದೇ ೧೯೩೭ನೇ ಇಸವಿ ಮಾರ್ಚ ತಿಂಗಳ ತಾರೀಕು ೫, ೬, ೭ರಲ್ಲು ಮಂಗಳೂರು ಮುಸ್ಲಿಂ ಉಪಾಧ್ಯಾಯರ ಸಂಘದ ಶಿಕ್ಷಣ-ಪ್ರದರ್ಶನ ಮತ್ತು ವಾರ್ಷಿಕ ಮಹಾಸಭೆಯು ಮಂಗಳೂರು ಮಹಮ್ಮದನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುವುದು. ಇದೇ ತಾ. ೬ನೇ ಶನಿವಾರ ದಿನ ಸಾಯಂಕಾಲ ಗಂಟೆ ೫ಕ್ಕೆ ಜಿಲ್ಲಾ ಮುಸ್ಲಿಂ ಉಪಾಧ್ಯಾಯರ ಸಂಘದ ಮಹಾಸಭೆಯು ಜಿಲ್ಲಾ ಎಜ್ಯುಕೇಶನಲ್ ಆಫೀಸರರಾದ ಮ॥ ರಾ॥ ರಾ॥ ಯು. ಕಣ್ಣಪ್ಪ ಅವರ್ಗಳ್, ಎಂ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಸೇರುವುದು. ತಾರೀಕು ೭ನೇ ಆದಿತ್ಯವಾರ ದಿನ ಸಾಯಂಕಾಲ ಗಂಟೆ ೫ಕ್ಕೆ ಮಂಗಳೂರು ಮುಸ್ಲಿಂ ಉಪಾಧ್ಯಾಯ ಸಂಘದವರ ವಾರ್ಷಿಕ ಮಹೋತ್ಸವವು ಮಂಗಳೂರು ನಗರ ಸಭಾಧ್ಯಕ್ಷರಾದ ಮ॥ ರಾ॥ ರಾ॥ ಡಾಕ್ಟರ್ ಕೆ. ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗುವುದು ತಾರೀಖು ೬ನೇ ಶನಿವಾರ ದಿನ ಪೂರ್ವಾಹ್ನ ಗಂಟೆ ೧೦ರಿಂದ ೧೨ರ ವರೆಗೆ ಭಾಷಣ ಮ॥ ರಾ॥ ಗಳಾದ ಪಿ ಎಸ್ ಬಜೂರು ಅವರ್ಗಳ್ ಬಿ. ಎ. ಎಲ್ ಟಿ ಸ್ಕೌಟು ಶಿಕ್ಷಣವನ್ನು ಕುರಿತೂ, ಬೇಲಿಗದ್ದೆ ಅಪ್ಪಯ್ಯ ಅವರ್ಗಳ್, ಎಸ್ ಎನ್. ಜೋಶಿ ಅವರ್ಗಳ್, ತಾರೀಕು ೭ನೇ ಆದಿತ್ಯವಾರ ಅಪರಾಹ್ನ ಗಂಟೆ ೩ರಿಂದ ೪ರ ವರೆಗೆ ಪಾಲಾಡಿ ಸಂಜೀವ ರಾವ್ ಅವರ್ಗಳ್ ಬಿ ಎ ಎಲ್ ಟಿ, ಕೆ ಪಿ ಕೃಷ್ಣ ಭಟ್ ವಿದ್ವಾನ್, ಎಂ ಎಸ್ ಕಾಮತರವರು ಇವರುಗಳ ಶಿಕ್ಷಣ ವಿಚಾರವಾದ ವಿವಿಧ ಭಾಷಣಗಳಿವೆ

ತಾ ೨ನೇ ಮಂಗಳವಾರ ಸಂಜೆ ಇಲ್ಲಿನ ಗವರ್ನ ಮೆಂಟ್ ಕಾಲೇಜಿನ ಟ್ರೈನಿಂಗ್ ಉಪಾಧ್ಯಾಯರ ಸಂಘದ ಸತ್ಕಾರಕೂಟವು ನೆರವೇರಿತು ಮುಖ್ಯ ಉಪಾಧ್ಯಾಯರಾದ ರಾಮಚಂದ್ರಯ್ಯ ಬಿ ಎ ಎಲ್ ಟಿ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಫಲಾಹಾರಾದಿಗಳು ಮುಗಿದು, ಫೋಟೋ ತೆಗೆದನಂತರ, ಕಾಲೇಜ ಪ್ರಿನ್ಸಿಪಾಲರಾದ ಪಿ ನಾರಾಯಣ ಗೌಡ ಎಂ ಎ ಬಿ ಎಸ್ ಸಿ. ಯವರು ದೀರ್ಘವಾದ ಸರಸ ಭಾಷಣವನ್ನು ಕೊಟ್ಟರು ಜ್ಯೂನಿಯರ್ ಕ್ಲಾಸಿನ ಹುಡುಗರ ಪರವಾಗಿ ಬಿ. ಶಯ್ಯನರು, ಸೀನಿಯರ್ ಹುಡುಗರಿಗೆ ಅಭಿವಂದನೆಗಳನ್ನರ್ಪಿಸಿದರು ಕೆ ಕೆ ಕಲ್ಕುರರು ಸೀನಿಯರ್ ಹುಡುಗರ ಪರವಾಗಿ ತಮ್ಮ ಕೃತಜ್ಞಪೂರ್ವಕ ವಂದನೆಗಳನ್ನು ಉಪಾಧ್ಯಾಯರ ವೃಂದಕ್ಕೆ ಅರ್ಪಿಸಿದರು ನಂತರ ಎಜ್ಯುಕೇಶನಲ್ ಆಫೀಸರರಾದ ಯು ಕಣ್ಣಪ್ಪ ಎಂ ಎ ಎಲ್ ಟಿ ಇವರು ಉಪಾಧ್ಯಾಯರ ಮುಂದಿನ ಕರ್ತವ್ಯದ ವಿಷಯ ಒಂದು ಚಿಕ್ಕ ಭಾಷಣವನ್ನು ಕೊಟ್ಟರು ಅಧ್ಯಕ್ಷರು ಹುಡುಗರನ್ನು ಹರಸಿ, ತಮ್ಮ ಭಾಷಣವನ್ನು ಮುಗಿಸಿದರು ಸಂಘದ ಸೆಕ್ರೆಟರಿಯವರಾದ ಬಿಷ್ಣು ಶೆಟ್ಟಿಲ್ಲಾಯರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಏಡೆಡ್ ಶಾಲಾ ಅಧ್ಯಾಪಕರ ಪರಿಷತ್ತು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮ॥ ಕೆ ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ ಹಲವು ಪ್ರಮುಖ್ಯ ಠರಾವುಗಳು ಮಂಜೂರಾದುವು

ಇದೇ ತಾ ೩ನೇ ದಿನ ಬೋಳಾರ ಕಡೆಯ ಓರ್ವ ಮೊಗವೀರ ಜಾತಿಯವನು ಮೀನು ಹಿಡಿಯಲಿಕ್ಕೆ ಹೋದ ಸಮಯದಲ್ಲಿ, ಸಮುದ್ರದಲ್ಲಿ ಬಿದ್ದು ಸ್ವಾತಂತ್ಯ್ರವನು ದೊಡ್ಡ ಮೀನೊಂದರಿಂದ ಘಾಯಮಾಡಲ್ಪಟ್ಟು ಅವನ ಮೈಯಿಂದ ರಕ್ತಸುರಿಯುತ್ತಿತ್ತಂತೆ ಅವನಿದ್ದ ದೋಣಿಯವರು ಅವನನ್ನು ಒಂದು ದುಗ್ಗುಲಲ್ಲಿ ಕುಳಿತಿರುವಂತೆ ಹೇಳಿದರು ಸ್ವಲ್ಪ ಸಮಯದ ನಂತರ ಅವನು ರಕ್ತನಾಶದಿಂದ ಸ್ಮೃತಿತಪ್ಪಿ ಸಮುದ್ರದಲ್ಲಿ ಬಿದ್ದುದು ಯಾರಿಗೂ ತಿಳಿಯದಾಯಿತು ಅವನ ಶವ ವಿನ್ನೂ ಸಿಗಲಿಲ್ಲವೆಂದು ತಿಳಿದುಬಂದಿದೆ

ಕಳೆದ ಶುಕ್ರವಾರ ಸಂಜೆ ಒಬ್ಬ ಬಿಲ್ಲವ ಜಾತಿಯ ಗೃಹಸ್ಥರು, ಉಳ್ಳಾಲ ಸಂಕದ ಮೇಲೆ ನಿಂತು ಕೆಳಗೆ ನೀರಿಗೆ ಧುಮುಕಿದನು ಅಲ್ಲಿಯೇ ಮೀನು ಹಿಡಿಯುತ್ತಿದ್ದ ಕೆಲವರು ಅವನನ್ನು ಹಿಡಿದು ಆತ್ಮಹತ್ಯದಿಂದ ತಪ್ಪಿಸಿದರಂತೆ ಸಂಸಾರ ತಾಪತ್ರಯಗಳಿಂದ ಜೀವನದಲ್ಲಿ ಬೇಸರಗೊಂಡು ಹಾಗೆ ಮಾಡಲು ಕಾರಣವೆಂದು ತಿಳಿದು ಬರುತ್ತದೆ.

ಡಿಸ್ಟ್ರಿಕ್ಟ್ ಬೋರ್ಡ ಮೆಂಬರರ ಸಾಮಾನ್ಯ ಸಭೆಯು ಇದೇ ತಾ. ೧೩ನೇ ಶನಿವಾರ ದಿವಸ ೧೧ ಗಂಟೆಗೆ ಡಿಸ್ಟ್ರಿಕ್ಟ್ ಬೋರ್ಡ ಆಫೀಸಿನಲ್ಲಿ ಜರಗುವುದಾಗಿ ತಿಳಿದು ಬರುತ್ತದೆ

ಇದೇ ತಾ. ೩ರಲ್ಲು ಇಲ್ಲಿಯ ಕೋಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕ ವಿಸಾಚರಣೆಯು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಸಂಗೀತ ಕಛೇರಿಯೂ ಜರಗಿಸಲಾಗಿತು

ತಾಲೂಕುಗಳಿಂದ

ಉಳ್ಳಾಲ (ಕೋಟೆಕಾರು): — ಇದೇ ಕಳೆದ ಫೆಬ್ರುವರಿ ತಾ. ೨೬ನೇ ಶುಕ್ರವಾರ ಉಳ್ಳಾಲ ದೇವಸ್ಥಾನದಿಂದ ಗೋವಿಂದ ಕಿಣಿಯರ ನೇತೃತ್ವದಲ್ಲಿ ಬೇಂಡು ಘೋಷದಿಂದ ಒಂದು ಕಾಂಗ್ರೆಸ್ ಮೆರವಣಿಗೆ ಹೊರಟು ಸುಮಾರು ೪॥ ಗಂಟೆಗೆ ತೊಕ್ಕೊಟ್ಟಿನಲ್ಲಿ ಬಂದು ಭಾಷಣ ಮಾಡಿ ಅಲ್ಲಿಂದ ಕೋಟೆಕಾರಿಗೆ ಬಂದು ಮಾರು ಮಾರ್ಗದ ಹತ್ತಿರ ಇರುವ ಎಂಬಲ್ಲಿ ವಕೀಲ್ ಎಂ ಮಾಧವರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಕೀಲ್ ಗೋಪಾಲಕೃಷ್ಣರಾಯರು, ಉಳ್ಳಾಲದ ಒಬ್ಬ ಪಂಡಿತರೂ ಮತ್ತು ಗೋವಿಂದ ಕಿಣಿಯರೂ, ನಾರ್ಣಪ್ಪ ರೈಗಳವರೂ ಜಗನ್ನಾಥ ರೈಯವರೂ ಕಾಂಗ್ರೆಸ್ಸಿನ ಮುಂದಿನ ಕರ್ತವ್ಯದ ವಿಷಯವಾಗಿ ಭಾಷಣಮಾಡಿದರು ಸುಮಾರು ಇನ್ನೂರು ಯಾ ಮುನ್ನೂರು ಜನರು ನೆರೆದಿದ್ದರು ಸಭೆಯು ಶಾಂತರೀತಿಯಿಂದ ೬ ಗಂಟೆಗೆ ಮುಕ್ತಾಯವಾಯಿತು

ಮೂಲ್ಕಿ — ನಮ್ಮ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಉಮೇದ್ವಾರರು ಎಸೆಂಬ್ಲಿಗೆ ಆರಿಸಿ ಬಂದ ಸಂತೋಷ ಸೂಚನೆಗೆ ಕಳೆದ ತಾ ೨೫—೨—೩೭ನೇ ಗುರುವಾರ ಇಲ್ಲಿಯ ಕಾಂಗ್ರೆಸು ಕಮಿಟಿಯ ಅಪೇಕ್ಷೆಮೇರೆಗೆ ಊರವರ ಮೆರವಣಿಗೆಯೊಂದು ಕಾಂಗ್ರೆಸ್ ಕಚೇರಿಯಿಂದ ಹೊರಟು ಜಯಘೋಷದೊಡನೆ ಮುಖ್ಯ ಮುಖ್ಯ ರೋಡುಗಳಲ್ಲಿ ಹೋಯಿತು ಜನರು ಬಹಳವಾಗಿ ನೆರೆದಿದ್ದರು

ಕಾಂಗ್ರೆಸ್ಸಿನ ಸಂದೇಶದಂತೆ ಕಾರ್ನಾಡು ಚಿತ್ರಾಪುರ ಹೆಜಮಾಡಿಯ ಮತದಾರರು ಕಾಲುನಡಿಗೆಯಿಂದ ಮೆರವಣಿಗೆಯಲ್ಲಿ ಬಂದು ತಮ್ಮ ಮತಗಳನ್ನು ಹಳದಿ ಪೆಟ್ಟಿಗೆಯಲ್ಲಿ ಹಾಕಿದ್ದರು ಈ ಸ್ಥಳ ಹೆಜಮಾಡಿಯ ಪ್ರಯತ್ನವು ಸ್ತುತ್ಯ. ಎಲ್ಲಾ ಮತದಾರರನ್ನು ಪೋಲಿಂಗ್ ಬೂತಿಗೆ ಕರೆತಂದು ಬಂದು ತಮ್ಮ ಮತಗಳನ್ನು ಕೊಟ್ಟುಬಿಟ್ಟರು ಜಸ್ಟೀಸ್ ಕಡೆಯ ಕೆಲಸಗಾರರಾರೂ ಕಾಣಲಿಲ್ಲ ಎಲ್ಲಾ ಕಡೆಗಳಲ್ಲೂ ಹಳದಿ ಟೊಪ್ಪಿಗಳು ಮಾತ್ರ ಕಂಡುಬಂದಿದ್ದು, ಸ್ವಯಂಸೇವಕರು ಸರಿಯಾದ ರೀತಿಯಲ್ಲಿ ಓಟರು ತಮ್ಮ ಮತಗಳನ್ನು ಕೊಡ ವಂತೆ ಏರ್ಪಾಡು ಮಾಡಿದ್ದರು ಹೆಚ್ಚಿನ ಮತಗಳು ಹನ್ನೆರಡು ಗಂಟೆಯೊಳಗೆನೇ ಬಿದ್ದಿದ್ದವು

ಧರ್ಮಸ್ಥಳ — ಮಹನೀಯರೆ ನಾನ ಇದೇ ಫೆಬ್ರುವರಿ ತಿಂಗಳಲ್ಲಿ ಜರಗಿದ್ದ ಕೌನ್ಸಿಲು ಮೆಂಬರ ಚುನಾವಣೆ ವಿಷಯ ಸಾರ್ವಜನಿಕ ಕಾರ್ಯಗಳಲ್ಲಿ

ಇದೇ ತಾ ೨೬ನೆಯ ಶುಕ್ರವಾರ ಮಂಗಳೂರು ಪೌರಜನರು ಅಸೆಂಬ್ಲಿ ಚುನಾವಣೆಯಲ್ಲಿ ಜಯಶೀಲರಾದ ಮಹನೀಯರನ್ನು ಅಭಿನಂದಿಸಲು ಸಾವಿರಗಟ್ಟಲೆ ಕೂಡಿಬಂದಿದ್ದರು ಮಂಗಳೂರು ಕಾಂಗ್ರೆಸ್ ಭವನದಿಂದ ಜಯಶೀಲರಾದ ಕಾಂ। ಸದಸ್ಯರನ್ನು ಕೂಡಿಕೊಂಡು ಒಂದು ಮೆರವಣಿಗೆಯು ಹೊರಟು ನಗರದ ಪ್ರಾಮುಖ್ಯ ಬೀದಿಗಳಲ್ಲಿ ಸಂಚರಿಸಿತು. ಅಲ್ಲಲ್ಲಿ ಮಹನೀಯರು ಚುನಾಯಿತ ಕಾಂ। ಸದಸ್ಯರಿಗೆ ಪುಷ್ಪಹಾರಗಳನ್ನು ಹಾಕಿ ಸ್ವಾಗತೀಕರಿಸಿದರು. ಅನಂತರ ಮೆರವಣಿಗೆಯು ಮೈದಾನಿಗೆ ಮುಟ್ಟಿತು ಎಲ್ಲಾ ಸದಸ್ಯರ ಸರಸವಾದ ಭಾಷಣಗಳಾದ ಮೇಲೆ ಸಭೆಯು ಮುಕ್ತಾಯವಾಯಿತು

ಇಲ್ಲಿಯ ದ್ರಾವಿಡ ಬ್ರಾಹ್ಮಣ ಹೊಸ್ಟೆಲಿನಲ್ಲಿ ಇದೇ ತಾ ೨೫ನೇ ರಾತ್ರಿ ಶ್ರೀ। ಕೆ ಶಂಕರರಾಯರ ನೇತೃತ್ವದಲ್ಲಿ ಒಂದು ಸಭೆ ಸೇರಿ ಅಸೆಂಬ್ಲಿ ಚುನಾವಣೆಯಲ್ಲಿ ಜಯಶೀಲರಾದ ಕಾಂಗ್ರೆಸ್ ಸದಸ್ಯರನ್ನು ಅಭಿನಂದಿಸಿ ಠರಾವು ಮಾಡಿದರು.

The B nk of Hindustan Ltd

ದೊಡ್ಡ ವ್ಯಾಪಾರದ ಕೇಂದ್ರವಾಗಿ ದಿನೇ ದಿನೇ ಅಭಿವೃದ್ಧಿಯಾಗುತ್ತಲಿರುವ ಮಂಗಳೂರಿನಂಥಾ ದೊಡ್ಡ ಪಟ್ಟಣದಲ್ಲಿ ಬೇಂಕುಗಳ ಅವಶ್ಯಕತೆಯು ಬಹಳವಾಗಿ ಉಂಟು ಇದೇ ಮಾರ್ಚ ೧ನೇ ತಾರೀಕಿನ ದಿನ ಪ್ರಖ್ಯಾತ ಸಂಸ್ಥೆಯಾದ "ದಿ ಬ್ಯಾಂಕ್ ಆಫ್ ಹಿಂದೂಸ್ಥಾನ್" ಇದರ ಒಂದು ಶಾಖೆ ಇಲ್ಲಿಯ ಚರ್ಚ ಗೇಟ್ ರಸ್ತೆಯಲ್ಲಿರುವ ಹಳೇ ಬಾಶೆಲ್ ಮಿಶನ್ ಕಟ್ಟಡದ ಮಹಡಿಯಲ್ಲಿ ತೆರೆಯಲಾಯಿತು ಕೆನರಾ ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ। ಅಮ್ಮೆಂಬಳ ಶ್ರೀನಿವಾಸ ಪೈ ಬಿ. ಎ. ಬಿ ಎಲ್ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಅಂದು ಸಾಯಂಕಾಲ ಒಂದು ಸಾರಸ್ಯವಾದ ಕಾರ್ಯಕ್ರಮವು ಏರ್ಪಡಿಸಲ್ಪಟ್ಟಿತ್ತು.

ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು—ಇವರ ಮಾಜಿ ಏಜಂಟರಾಗಿದ್ದ ಶ್ರೀ। ಕೆ. ವೆಂಕಟರಾಯರು ಸಬ್ಬಾ ಸೆಂಟ್ರಲ್ ಬೇಂಕ್, ಲಿಮಿಟೆಡ್, ಮಂಗಳೂರು ಇದರ ಏಜಂಟರಾಗಿ ನೌಕರಿ ಹೊಂದಿದಾರೆ.

ಅಸೌಖ್ಯಯುಳ್ಳ ಕಾರಣದಿಂದ ನನ್ನ ಪಕ್ಷವಾಗಿ ಅಧಿಕಾರ ಹೊಂದಿದಂಥ ಏಜಂಟರುಗಳಾಗಿ ಪೋಲಿಂಗ್ ಸ್ಟೇಷನ್ ಗಳಲ್ಲಿ ಕಾರ್ಯ ವಹಿಸಿದ ಮಹನೀಯರುಗಳಿಗೂ, ಅಲ್ಲಿಗೆ ಬಂಡಿಂಥ ಓಟರರುಗಳ ಪರವಾಗಿ ಏನೂ ತೊಂದರೆ ಆಗದಂತೆ ಅವರ ಜಾಗ್ರತೆ ತೆಗೆದುಕೊಂಡ ಇತರ ಸ್ನೇಹಿತರುಗಳಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ನಾನು ಅರ್ಪಿಸುವುದಲ್ಲದೆ, ಅವರುಗಳು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಇನ್ನಷ್ಟು ಹೆಚ್ಚಾಗಿ ಭಾಗವಹಿಸಿ ಜನರ ಪ್ರೇಮಕ್ಕೆ ಪಾತ್ರರಾಗಲೆಂದು ಆಶಿಸು ತ್ತೇನೆ—ಡಿ ಮಂಜಯ್ಯ ಹೆಗ್ಡೆ

ಮೂಡಬಿದ್ರೆ — ಕುಂದಾಪುರ ಡಿವಿಜನಿನಿಂದ ಕಾಂಗ್ರೆಸ್ ಉಮೇದ್ವಾರರಾದ ರಾ। ಎ ಬಿ ಶೆಟ್ರು ಜಯಹೊಂದಿದ ಬಗ್ಗೆ ಇಲ್ಲಿಯ ಮಾರ್ಕೆಟಿನಲ್ಲಿ ಬಡ ಜನರಿಗೆ ಊಟವನ್ನು ಕೊಡಿಸಿದ ರಾ। ಬಿ ಚಂದಪ್ಪ ಇಂದ್ರ ಇವರಿಗೆ ಧನ್ಯವಾದಗಳು. ಆ ದಿನ ಸಾಧಾರಣ ೫೦೦ ಜನರು ಕಾಂಗ್ರೆಸ್ಸಿನ ಹೆಸರಿನಲ್ಲಿ ಸಂತೋಷದಿಂದ ಊಟಮಾಡಿ ರಾ। ಎ ಬಿ, ಶೆಟ್ರವರು ಜಯಹೊಂದಿದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಕಾಂಗ್ರೆಸಿನ ತತ್ವವನ್ನು ಪಾಲಿಸುವ ಪ್ರತಿಜ್ಞೆಯನ್ನು ಕೈಕೊಂಡರು

ಉಡುಪಿ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ ೨೬ಕ್ಕೆ ಸಾಯಂಕಾಲ ೭ ಗಂಟೆಗೆ ಕಾಂಗ್ರೆಸು ಉಮೇದ್ವಾರರಾಗಿ ಮದ್ರಾಸು ಎಸೆಂಬ್ಲಿಗೆ ಜಯಶೀಲರಾಗಿ ಆರಿಸಲ್ಪಟ್ಟಿರುವ ನಮ್ಮ ಜಿಲ್ಲೆಯ ಎಲ್ಲಾ ಪ್ರತಿನಿಧಿಗಳನ್ನು ಸನ್ಮಾನಿಸುವರೆ ಪ್ರಜೆಗಳ ಭಾರೀ ಮೆರವಣಿಗೆಯು ಜರಗಿತು ಅಂದು ಈ ಡಿವಿಜನಿನ ಪ್ರತಿನಿಧಿಗಳಾದ ಶ್ರೀ ಎ ಬಿ ಶೆಟ್ರುವರು ಇಲ್ಲಿ ಹಾಜರಿದ್ದ ಸಂದರ್ಭವನ್ನು ಕೈಕೊಂಡು ೭॥ಕ್ಕೆಂದು ನಿಶ್ಚಿತವಾದ ಈ ಮೆರವಣಿಗೆಯು ಮಂಗಳವಾದ್ಯದೊಡನೆ ನೆರವೇರಿಸಲಾಯಿತು ಶ್ರೀ ಎ ಬಿ ಶೆಟ್ಟರೂ ಪುರಪ್ರಮುಖರಲ್ಲಿ ಹಲವರೂ ಮೆರವಣಿಗೆಯಲ್ಲಿ ಇದ್ದರು. ಮೆರವಣಿಗೆಯು ಕಾಂಗ್ರೆಸ್ ಕಚೇರಿಯಿಂದ ಹೊರಟು ಸಂತೆಕಟ್ಟೆ ತಿಂಬೇರು ಕಲ್ಸಂಕ ಬಡಗಪೇಟೆ ರಥಬೀದಿ ತೆಂಕಪೇಟೆ ಕೊಳದ ಪೇಟೆ ಕೋರ್ಟು ಸ್ಟ್ರೀಟುಗಳಿಂದಾಗಿ ಗಾಂಧಿಮೈದಾನದ ಬಳಿಯ ಸಭಾಸ್ಥಾನ ಸೇರಿತು. ಸಭಾಂಗಣದಲ್ಲಿ ಶ್ರೀಯುತ ಶೆಟ್ಟರು ತಮ್ಮನ್ನು ಜಯಶೀಲವಾಗಿ ಆರಿಸಿದವರಿಗೆ ಸಹಕರಿಸಿ ಬೆಂಬಲವಿತ್ತ ಎಲ್ಲಾ ಮಹನೀಯರಿಗೆ ಕೆಲಸಗಾರರಿಗೆ ಕೃತಜ್ಞಪೂರ್ವಕ ಧನ್ಯವಾದಗಳನ್ನು ಅರ್ಪಿಸಿದುದಲ್ಲದೆ ಧನಬಲ ಅಧಿಕಾರ ಮದಗಳ ಲೆಕ್ಕವಿಲ್ಲದೆ ಹಾಗೂ ದಾಕ್ಷಿಣ್ಯವಿಲ್ಲದೆ ಜನತೆಯು ಕಾಂಗ್ರೆಸ್ಸನ್ನು ಪುರಸ್ಕರಿಸಿದುದು ಬಡಜನರ ಬಡಸಂಸ್ಥೆಯಾದ ಕಾಂಗ್ರೆಸ್ಸಿನ ಸಂದೇಶದ ಪ್ರಸರಣೆಯ ಸುಫಲವೆಂದೂ ಜನಹಿತ ಪಕ್ಷದ ವಿರೋಧಿಗಳಿಗೆ ಈಗಣ ವಿದ್ಯಮಾನಗಳಲ್ಲಿ ಎಡೆಯಿಲ್ಲವೆಂದೂ ಕೆಲವೇ ಮಾತುಗಳಿಂದ ಹೇಳಿದರು.

ತಾ ೩ನೇ ಸಾಯಂಕಾಲ ೫ ಘಂಟೆಗೆ ಕಾಂಗ್ರೆಸು ಕಚೇರಿಯಲ್ಲಿ ಉಡುಪಿ ತಾಲೂಕಿನ ಕಾಂಗ್ರೆಸು ಸದಸ್ಯರ ಮಹಾಸಭೆಯು ಸೇರಲಿದ್ದಾಗಿದೆ ಆಫೀಸು ಸ್ವೀಕಾರ ಮತ್ತು ಕಾಂಗ್ರೆಸು ಸಮಿತಿಗಳ ನಿರ್ಮಾಣದ ವಿಷಯಗಳು ಆಲೋಚನೆಯಾಗಲಿದೆ

ಗೌ। ಸಾರಸ್ವತ ಬ್ರಾಹ್ಮಣ ವೃಂದದ ಮಹಾಜನಗಳಲ್ಲಿ ವಿನಂತಿ

ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ನಮ್ಮ ಗುರುವರ್ಯರಾದ ಶ್ರೀ ಕಾಶೀ ಮಠದ ಶ್ರೀ ಪಾದಂಗಳವರು ಜೀರ್ಣೋದ್ಧಾರಗೊಳಿಸಿರುವ ತಮ್ಮ ಮಠ ಮತ್ತು ಶ್ರೀ ಕೋದಂಡರಾಮ ಸ್ವಾಮಿ ದೇವಸ್ಥಾನಗಳ ಪ್ರವೇಶ ಹಾಗೂ ಪ್ರತಿಷ್ಠಾ ಮಹೋತ್ಸವಗಳು ಇದೇ ಮಾರ್ಚ ತಾ ೧೫ ಮತ್ತು ೧೯ರಲ್ಲು ಜರಗಲಿಕ್ಕಿದ್ದೆಂಬುದು ತಮಗೆಲ್ಲ ವಿದಿತವಿದೆ. ಈ ಸಮಾರಂಭಕ್ಕೆ ರಾಮೇಶ್ವರಕ್ಕೆ ಹೋಗಲಿಕ್ಕಿರುವ ಬಾಂಧವರ ಸಲುವಾಗಿ ಸೌತ್ ಇಂಡಿಯಾ ರೈಲ್ವೆ ಕಂಪೆನಿಯವರೊಡನೆ ಪತ್ರವ್ಯವಹಾರ ನಡೆಸಿದ್ದಲ್ಲಿ ಇದೇ ಮಾರ್ಚ ತಾ ೧೨ರಿಂದ ೧೮ರವರೆಗೆ ರಿಯಾಯತಿ ದರದಲ್ಲಿ—ಸಾದಾ (ಒರ್ಡಿನರಿ) ಚಾರ್ಜಿನ ೧॥ ಅಂಶಕ್ಕೆ—ರಾಮೇಶ್ವರಕ್ಕೆ ಹೋಗಿ ವಾಪಾಸು ಬರುವುದಕ್ಕೆ ಟಿಕೇಟುಗಳನ್ನು ಸ್ಪೆಶಲ್ ಆಗಿ ಕೊಡಲು ಒಪ್ಪಿರುತ್ತಾರೆ, ಸದ್ರಿ ಪ್ರಯಾಣವನ್ನು ಇದೇ ಮಾರ್ಚ ತಾ ೨೫ನೆಯ ಮಧ್ಯ ರಾತ್ರಿಯ ಒಳಗೆ ಮುಗಿಸತಕ್ಕದ್ದಿದೆ ೩ ವರ್ಷಕ್ಕೆ ಮೇಲ್ಪಟ್ಟು ೧೨ ವರ್ಷದೊಳಗಣವರಿಗೆ ಅರ್ಧ ಚಾರ್ಜ ಮಾತ್ರ ಈ ಟಿಕೇಟುಗಳನ್ನು ಮದ್ರಾಸು ಮೈಲ್ ಅಥವಾ ಬೇರೆ ಟ್ರೈನುಗಳಲ್ಲಿ ಪ್ರಯಾಣ ಬೆಳೆಸಬಹುದು ಇಂತಹ ರಿಯಾಯತಿ ಟಿಕೇಟುಗಳು ಮಂಗಳೂರು ಉಳ್ಳಾಲ, ಮಂಜೇಶ್ವರ ಕುಂಬಳೆ ಕಾಸರಗೋಡು ಹೊಸದುರ್ಗ, ಕಣ್ಣಾನೂರು ತಲಚೇರಿ ಕಲ್ಲಿಕೋಟೆ ಮತ್ತು ಎರ್ನಾಕುಳ (ಕೊಚ್ಚಿ) ರೈಲ್ವೆ ಸ್ಟೇಶನುಗಳಲ್ಲಿ ದೊರೆಯುತ್ತವೆ

ದಕ್ಷಿಣ ಹಿಂದುಸ್ಥಾನದ ಮುಖ್ಯ ಕ್ಷೇತ್ರಗಳನ್ನು ಸಂದರ್ಶಿಸಲಿಚ್ಛಿಸುವವರು ರಾಮೇಶ್ವರಕ್ಕೆ ಹೋಗುವ ಟಿಕೇಟನ್ನು ಪಡಕೊಂಡು ಪ್ರತಿಷ್ಠಾಸಂಭ್ರಮ ಮುಗಿದೊಡನೆ ಈಸ್ಟರ್ನ್ ಕಡೆಯ ಸಂಬಂಧವಾದ ಗೋ-ಎಕ್ ಯಾ ಪ್ಲೀಸ್ ಟಿಕೇಟನ್ನು ರೂ ೧೨-೮-೦ಕ್ಕೆ ಪಡಕೊಂಡು ಅಂದಿನಿಂದ ೧೫ ದಿನಗಳ ಪ್ರವಾಸ ಮಾಡಲೂಬಹುದು

ಶ್ರೀ। ಕ್ಷೇತ್ರ ರಾಮೇಶ್ವರ ಯಾತ್ರೆಯ ಮತ್ತು ಪ್ರತಿಷ್ಠಾ ಮಹೋತ್ಸವಗಳಲ್ಲಿ ಭಾಗಿಯಾಗುವ ಪುಣ್ಯ ಫಲವನ್ನು ಪಡೆಯುವ ಈ ಸುಸಂಧಿಯನ್ನು ಬಾಂಧವರೆಲ್ಲ ಸದುಪಯೋಗಮಾಡಬೇಕಾಗಿ ವಿನಂತಿ

ಹೆಚ್ಚಿನ ವಿವರಗಳಿಗೆ ಶ್ರೀ ಓ ಪಾಂಡುರಂಗ ಒ-ದಾರಿ ಸಾಹುಕಾರ ರಥಬೀದಿ ಮಂಗಳೂರು ಇವರಲ್ಲಿ ವಿಚಾರಿಸಿಕೊಳ್ಳುವುದು.

ಪ ಜಾ—ಮಂಗಳೂರಿನಿಂದ ರಾಮೇಶ್ವರಕ್ಕೆ ಹೋಗಿಬರುವ ಈ ರಿಯಾಯತಿ ದರವು ರೂ ೧೩-೮-೦ ಮಾತ್ರ ಆಗಿದೆ

ಪಿ ಲಕ್ಷ್ಮೀನಾರಾಯಣ ನಾಯಕ್,
ಕೆ. ಶ್ರೀನಿವಾಸ ಪೈ
ಉಡುಪಿ

ಗಂಟಲು ಮತ್ತು ಶ್ವಾಸಕೋಶದ ತೊಂದರೆಗಳಿಗೆ ಅತ್ಯುತ್ತಮ ಔಷಧಿ

ನೆಗಡಿ ಕೆಮ್ಮು, ದಮ್ಮು, ಶೀತ ಮತ್ತು ಗಂಟಲು ನೋವು ಉಪದ್ರವಗಳಿಂದ ನರಳುವುದಾದರೆ ಪೆಪ್ಸ್ ಗುಳಿಗೆಗಳೇ ಶೀಘ್ರವಾದ ಮತ್ತು ಖಂಡಿತವಾದ ಗುಣಕಾರಿಯಾಗಿರುತ್ತದೆ ಆಶ್ಚರ್ಯಕರವಾದ ವಿಷಹಾರಿ ಶಕ್ತಿಯುಳ್ಳ ಈ ಸುವಾಸನೆಯ ಗುಳಿಗೆಗಳು ಶ್ರೇಷ್ಠ ಔಷಧಿಯ ಸಾರವು ಶೀತದ ಕ್ರಿಮಿಗಳನ್ನು ಕ್ಷಣದಲ್ಲಿ ನಾಶಮಾಡುತ್ತದೆ ಪೆಪ್ಸ್ ಗುಳಿಗೆಗಳು ಶ್ವಾಸಕೋಶದೊಳಗಿನ ಅವ್ಯವಸ್ಥೆಯನ್ನು ಸರಿಪಡಿಸಿ ಕಫವನ್ನು ಕತ್ತರಿಸಿ ಗಂಟಲ ಬಾಧೆಯನ್ನು ತಪ್ಪಿಸುತ್ತದೆ ಅಲ್ಲದೆ, ಎಲ್ಲಾ ಸಮಯದಲ್ಲಿಯೂ ಎದೆ ಶ್ವಾಸಕೋಶಗಳಿಗೆ ತಕ್ಕ ರಕ್ಷಣೆಯನ್ನು ಕೊಡುತ್ತದೆ

ಪೆಪ್ಸ್ ಗುಳಿಗೆಗಳು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಬಾಟ್ಲಿ ಒಂದಕ್ಕೆ ರೂ. 1ರಂತೆ ದೊರೆಯುತ್ತದೆ.

ಏಜಂಟರು — ಮೆಸರ್ಸ್ ದಾಧಾ ಎಂಡ್ ಕೋ., ಪಿ. ಟಿ ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ತೆಗೆದುಕೊಳ್ಳಿರಿ.

ಪೆಪ್ಸ್ PEPS

ರಾಮಮೋಹನ ಕಂಪೆನಿಯವರ

ಶ್ರೀ ಕೋದಂಡರಾಮ ಪ್ರತಿಷ್ಠೆಯ ಉದ್ದೇಶ್ಯರ ರಾಮೇಶ್ವರಕ್ಕೆ ಸ್ಪೆಶ್ಯಲ್ ರೈಲು ತಾ 14–8–37ಕ್ಕೆ ಬೆಳಿಗ್ಗೆ ಮಂಗಳೂರಿನಿಂದ ಹೊರಡುತ್ತದೆ ಇನ್ನು ಕೆಲವೇ ಟಿಕೇಟು ಬಾಕಿ ಇರುವುದರಿಂದ ಬುಕ್ಕಿಂಗ್ ಜರೂರು ಮಾಡಿರಿ

ಟಿಕೇಟು ಈ ಕೆಳಗಿನವರಲ್ಲಿ ಸಿಕ್ಕುತ್ತದೆ

ಬಿ. ಕೆ ಕ್ಯಾನುಭಾಗ, ರಾಮ್ ಮೋಹನ್ ಎನ್‌ಕ್ವಾಯರ್ ಆಫೀಸು,

ಬೀಬಿ ಅಲಾಬಿರೋಡ್, ಮಂಗಳೂರು

ಡಾಕ್ಟರ್ ಯು. ಎನ್. ನಾಯಕ್ಕ ಶ್ರೀ ರಾಮಕೃಷ್ಣ ನರಸಿಂಗ್ ಹೋಮ್

ಟೆಂಪಲ್ ಸ್ಕ್ವಾಯರ್ ಮಂಗಳೂರು



ಮೂರು ಕೈಗಡಿಯಾರಗಳು ಮತ್ತು 195 ವಿವಿಧ ವಸ್ತುಗಳಿಗೆ ರೂ. 2–8–0 ಮಾತ್ರ.

ನಮ್ಮ ಸುಗಂಧ ಬಿಟೋರೀಟಿನ ಹಳ್ಳು ಗುಳಿಗೆಗಳನ್ನು ರೂ 2–8–0ಗೆ ಒಮ್ಮೆಗೆ ಪಡೆಕೊಳ್ಳುವಲ್ಲಿ ಈ ಕೆಳಗಿನ ವಸ್ತುಗಳು ಪುಕ್ಕಟೆಯಾಗಿ ಸಿಕ್ಕುವವು ಬಂಗಾರ ಗಿಲಿಟಿನ ಜಮ್ಮ ಕೈಗಡಿಯಾರ 1 ಚೆಂಡು, 1 ರೈಲ್ವೆ ಜೇಬು ಜಮ್ಮ ಗಡಿಯಾರ 1, ಸೇಫ್ಟಿ ರೇಜರ್ 1, ಸೋಪು 1, ಬ್ರಶ್ 1 ಕನ್ನಡಿ 1, ಬಾಚಣಿಕೆ 1, ಪಾಕೆಟ್ ಚಾಕು 1, ಕ್ಲಿಪ್ ಸಮೇತ ಪೆನ್ಸಿಲ್ 1, ಸಿಗ್ರೇಟು ಪೆಟ್ಟಿಗೆ 1, ಸಿಗ್ರೇಟು ಲೈಟ್ 1 ಕೈವಸ್ತ್ರ 1, ಉಂಗುರ 1, ಕತ್ತರಿ 1, ಚೈನ್ ಸಮೇತ ಬೀಗದಕ್ಕೆ ಹಾಕುವ ಉಂಗುರ 1 ಪೆನ್ಸಿಲ್ ಶಾರ್ಪ್ 1 555 ಫೀಟು ದೂರಕ್ಕೆ ಬೀಳುವ ಫೋಕಸಿಂಗ್ ಟೋರ್ಚ್‌ಲೈಟು 1, ಅಥವಾ ಜರ್ಮನ್ ಬಿ ಮಾರ್ಕಿನ ಗಟ್ಟಿಮುಟ್ಟಾದ ಮುಚ್ಚಳಿಯುಳ್ಳ 5 ವರ್ಷ ಗ್ಯಾರಂಟಿ ಇರುವ ಟ್ಯಾಬ್ ಪೀಸು 1 ಟಪ್ಪಾಲು ಪ್ಯಾಕಿಂಗ್ ಹಾಸಲು ಆಣೆ 14 ಪ್ರತ್ಯೇಕ.

DUTTA & Co, 15/1, Joymitter Street, *P O Halkhola Calcutta*

ಪ್ರಚಂಡ ವಿಜಯ! ಪ್ರಚಂಡ ವಿಜಯ!

ಎಲ್ಲೆಲ್ಲಿಯೂ ಭಾರಿ ಬಹುಮತ.

ಸ್ವದೇಶದ { ಸ್ವಾತಂತ್ರ್ಯಕ್ಕಾಗಿ / ಅಭಿಮಾನಕ್ಕಾಗಿ / ಪ್ರೇಮದಿಂದ } ಜನರೆಲ್ಲರೂ ತಮ್ಮ ಓಟನ್ನು



REGD NO 3012

'ಮಹಾಳಿ' ಪಂಪು ಸ್ಪ್ರೈಯರಿಗೇನೇ ಕೊಟ್ಟಿರುವರು.

ಅಡಿಕೆಯ ಕೊಳೆರೋಗದ ಕಾಳಗಕ್ಕೆ ಅತ್ಯುತ್ಕೃಷ್ಟವಾದ ಪಂಪು ಸ್ಪ್ರೈಯರು ಮಾತ್ರ ಸಾಕಷ್ಟು ಕಾರ್ಯಕಾರಿಯಾಗುವುದು ಮಿಕ್ಕವು ಅಗ್ಗವಾಗಿದ್ದರೂ ಕೊನೆಗೆ ಹಗ್ಗ 'ಮಹಾಳಿ' ಸ್ಪ್ರೈಯರು ಶ್ರೇಷ್ಠತರದ ಆಧುನಿಕ ಯೋಗ್ಯ ಯೋಜನಗಳಿಂದೊಡಗೂಡಿಕೊಂಡಿದ್ದು ಕೃಷಿ ಇಲಾಖೆಯ ಹಾಗೂ ಅನೇಕಾನೇಕ ಕೋವಿದರಾದ ತೋಟಗಾರರಿಂದಲೂ ಕಾಫಿ ಪ್ಲಂಟರುಗಳಿಂದಲೂ ಶ್ರೇಷ್ಠ ವರ್ಗದ್ದೆಂದು ಶಿಫಾರಸು ಪಡೆದಿದೆ ಸ್ವದೇಶಿ ಒಡವೆಯಾದರೂ, ಗುಣ, ಸಾಮರ್ಥ್ಯ, ಕಾರ್ಯಶಕ್ತಿ, ರಚನಾಕ್ರಮಗಳಲ್ಲಿ ಎಲ್ಲಾ ವಿಲಾಯತಿ, ಪರದೇಶಿ, ಸ್ಪ್ರೈಯರುಗಳೊಡನೆ ವಿಜಯಾರ್ಥಿಯಾಗಿ ಸ್ಪರ್ಧಿಸುವ ಪಂಪು ಸ್ಪ್ರೈಯರೆಂದರೆ 'ಮಹಾಳಿ' ಯೇ ಸರಿ

ಆದುದರಿಂದ ಬಹುಮತದಂತೆ ನಿಮ್ಮ ಆಯಿಕೆಯೂ "ಮಹಾಳಿ" ಸ್ಪ್ರೈಯರಿಗೇ ಇರಲಿ

ಹೆಚ್ಚಿನ ಅನುಭವಕ್ಕೆ ಈ ಕೆಳಗಿನ ವಿಳಾಸದವರನ್ನು ವಿಚಾರಿಸಿರಿ:-

1 ಪುತ್ತೂರು ಡಿವಿಜನ್ ಮಹಾಳಿ ನಿವಾರಣಾ ಸಹಕಾರ ಸಂಘ, ಲಿಮಿಟೆಡ್ ಪುತ್ತೂರು

2 ಎಲ್ಲಾಡಾ ಟ್ರೇಡಿಂಗ್ ಕಂಪೆನಿ, ಮಂಗಳೂರು

3 ಬಾಸೆಲ್ ಮಿಷನ್ ಬುಕ್ ಡಿಪೊ, ಮಂಗಳೂರು

ಚಿಂತಾರತ್ನ

ಇದರಲ್ಲಿ—೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣ ಬತ್ತಿ ತಯಾರಿಸುವ ರೀತಿ, ೩ ಕಾಷ್ಟಿಕ್ ಸೋಡಾ ತಯಾರಿಸುವುದು ೪ ಬಿಸ್‌ಕ್ಯುಟ ತಯಾರಿಸುವುದು ೫ ಬಣ್ಣಗಳ ತಯಾರ ಮಾಡುವುದು ೬ ನೈಟ್ರಿಕಮೆಂಟು ಮಾಡುವುದು, ೭ ದೀಪದ ಕಾಗದ ಮಾಡುವುದು ೮ ಭಂಗಾರ ಮಾಡುವುದು, ೯ ಬೆಣ್ಣೆ ತಯಾರ ಮಾಡುವುದು ೧೦ ಜರ್ಮನ್ ಸಿಲ್ವರ್ ಧಾತುಮಾಡುವದು. ೧೧ ಊದಿನ ಕಡ್ಡಿ ತಯಾರಮಾಡುವುದು, ೧೨ ತಗಡಿನಡಬಿ ತಯಾರಮಾಡುವುದು, ೧೩ ಕುಂಕುಮವನ್ನು ತಯಾರಿಸುವುದು ೧೪ ಹಗಳಂಕುಷವನ್ನು ತಯಾರಿಸುವುದು ೧೫ ಗೋಧಿ ಸರಿ ಕೆಡದಂತೆ ಮಾಡುವುದು. ೧೬ ಬುಕ್ಕಿಟ್ಟು ಮಾಡುವುದು ೧೭ ಬೀಜ ಸರಿ ಯಾವಾಗಲೂ ಹಸಿರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಧನಗಳು ೧೯ ಧರ್ಪ ತಯಾರಮಾಡುವುದು, ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನು ಮಾಡುವುದು, ೨೨ ಮಂಕೀಲ ಎಣ್ಣೆ ತಯಾರಿಸುವುದು, ೨೩ ಕನ್ನಡಿಯ ಮೇಲೆ ಬರೆಯುವುದು, ೨೪ ದಂತಮಂಜನ ಮಾಡುವುದು, ೨೫ ರಕ್ತ ಶುದ್ಧಿ, ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು, ೨೭ ಕುಚಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು, ೨೯ ಶಿಶ್ನವೃದ್ಧಿಗೆ ಔಷಧ ೩೦ ಸರಬತ್ತು ಮಾಡುವುದು, ೩೧ ಚಿನ್ನ–ಬೆಳ್ಳಿಯ ಗುಳಿಗೆ ಮಾಡುವುದು. ೩೨ ಬೂಟುಪಾಲಿಶ ಮಾಡುವುದು, ೩೩ ಮನೆ, ಪಕಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು. ೩೪ ಹುರುಕು ಹಚ್ಚಿ ಮುಲಾಮು ೩೫ ನಾಸೀಪುಡಿಮಾಡುವುದು ಇತ್ಯಾದಿ ೧೫೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ. (ವಿ. ಪಿ ಖರ್ಚು ಬೇರೆ)

ವಿಳಾಸ:–ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ—೧ ಪುರುಷ ಸಾಮುದ್ರಿಕ ಲಕ್ಷಣ, ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ, ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯಳಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು, ೧೪ ಯಾವ ಯಾವ ಸ್ತ್ರೀಯಳಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚೇಷ್ಟೆ ಕಲೆಯ ಸ್ಥಾನಗಳು, ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೫೦ ವಿಷಯಗಳು ಇರುತ್ತವೆ.

ಬೆಲೆ ಒಂದು ರೂಪಾಯಿ. (ವಿ. ಪಿ. ಖರ್ಚು ಬೇರೆ.)

ವಿಳಾಸ.–ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

–: ಇದು :–

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ

ಇದರಲ್ಲಿ ವೈದ್ಯಶಾಸ್ತ್ರ, ಕಾಮಶಾಸ್ತ್ರ, ಪ್ರಶ್ನಭಾಗ, ಶಕುನಭಾಗ ಕೈಗಾರಿಕೆ ವಿಷಯ, ಕಾಯದೇಭಾಗ, ಇಂದ್ರಜಾಲ ಮಹೇಂದ್ರಜಾಲ, ಯಕ್ಷಿಣಿ, ತಂತ್ರ, ಮಂತ್ರ, ಯಂತ್ರ ವಶೀಕರಣ, ಇತ್ಯಾದಿ ಅನೇಕ ಮರ್ಮವಿದ್ಯೆಗಳು ಇರುತ್ತವೆ ಎಲ್ಲಾ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೌಲ್ಯ ಗ್ರಂಥದ ಬೆಲೆ ೧–೦–೦

ವಿಳಾಸ ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:–ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers —

S. C. Salimath & Sons,
GADAG.

ನೀವು ತಿಳಿದಿರುವಿರಾ?

ಹಿಂದೂದೇಶವು ವಿಶಾಲವಾದ ದೇಶ. ಸಕಲ ವಸ್ತುಗಳಿಂದ ಸಮೃದ್ಧಿಯಾಗಿರುವ ನಾಡು. ಅನೇಕಾನೇಕ ಜಾತಿಮತ, ಪಂಗಡಗಳಿಂದ ಕೂಡಿದ ಅಗಾಧ ಜನಸಂಖ್ಯೆಯ ನಾಡು–ನಮ್ಮ ಭಾರತವರ್ಷ. ಸಂಪತ್ತು ಇಲ್ಲಿ ತುಂಬಿ ತುಳುಕುತಿತ್ತು. ಆದರೆ ಈಗ ಮಿಲಿಯಾವಧಿಗಳು ಅರೆಹೊಟ್ಟೆಯಿಂದ ಜೀವನ ನಡೆಸಬೇಕಾಗಿ ಬಂದಿದೆ—ನಮ್ಮ ಹೊನ್ನಿನ ಭೂಮಿಯಲ್ಲಿ. ಅಂಥಾ ಈ ಪುಣ್ಯ ಭೂಮಿಯ ಜನಸಂಖ್ಯೆಯ ಅಂದಾಜು ಲೆಖ್ಖವನ್ನು ಈ ಕೆಳಗೆ ಕೊಟ್ಟಿರುತ್ತದೆ.

○ ○ ○

ನಮ್ಮ ದೇಶವು ೧,೮೦೮,೬೭೯ ಚಚೌಕ ಮೈಲುಗಳಷ್ಟು ವಿಶಾಲವಾಗಿದೆ. ಇದರಲ್ಲಿ ೧,೩೧೮,೩೪೬ ಚಚೌಕ ಮೈಲುಗಳಷ್ಟು ಬ್ರಿಟಿಷ್ ಅಧಿಕಾರಕ್ಕೂ, ೪೯೦,೩೩೩ ಚಚೌಕ ಮೈಲುಗಳಷ್ಟು ಆಶ್ರಿತ ರಾಜರುಗಳ ಅಧಿಕಾರದಲ್ಲಿಯೂ ಇದೆ.

○ ○ ○

ಭರತಭೂಮಿಯ ಒಟ್ಟು ಜನಸಂಖ್ಯೆಯು ೩೫ ಕೋಟಿ, ೨೯ ಲಕ್ಷ, ೮೯ ಸಾವಿರದ ಎಂಟುನೂರ ೭೬ ಆಗಿರುತ್ತದೆ. (೩೫,೨೯,೮೯,೮೭೬) ಇದು ಇಡೀ ಜಗತ್ತಿನ ಜನಸಂಖ್ಯೆಯ ೫ರಲ್ಲಿ ಒಂದು ಭಾಗವಾಗಿರುತ್ತದೆ. ಇಷ್ಟು ಜನಸಂಖ್ಯೆಯಲ್ಲಿ ಇಂಗ್ಲಿಷ್ ಭಾಷೆ ಬಲ್ಲವರು, ೩ ಮಿಲಿಯ ಮಂದಿ, ಅಂದರೆ ಶೇಕಡಾ ೩ರಂತೆ.

○ ○ ○

ಇದರಲ್ಲಿ ಹಿಂದೂಗಳ ಸಂಖ್ಯೆಯು ೨೩೮,೩೩೦,೯೧೨ ಆಗಿರುತ್ತದೆ. ಹೆಚ್ಚುಕಮ್ಮಿ ಮೂರರಲ್ಲಿ ಎರಡು ಅಂಶ. ೧೨,೬೮೬,೮೦೬ ಜನರು ಬೌದ್ಧಮತಾವಲಂಬಿಗಳಾಗಿರುತ್ತಾರೆ.

○ ○ ○

೬೭,೬೮೩,೯೦೨ ಇಷ್ಟು ಜನ ಮಹಮ್ಮದೀಯರು ಹಿಂದೂಸ್ಥಾನದಲ್ಲಿದ್ದಾರೆ.

○ ○ ○

ಹಿಂದೀ ಕ್ರಿಸ್ತರ ಸಂಖ್ಯೆಯು ಒಟ್ಟು ೫,೯೬೧,೭೯೪. ಸಿಖ್ ಮತಸ್ಥರು ಹಿಂದೂಸ್ಥಾನದಲ್ಲಿ ೪,೩೦೬,೪೪೨ ಇಷ್ಟು ಮಂದಿ ಇದ್ದಾರೆ.

○ ○ ○

ಭಾರತದಲ್ಲಿ ಹೆಚ್ಚು ಜನಸಂಖ್ಯೆಯುಳ್ಳ ನಗರವು ಕಲ್ಕತ್ತಾ ನಗರ. ಇಲ್ಲಿಯ ಜನಸಂಖ್ಯೆಯು ಒಂದುವರೆ ಮಿಲಿಯ ಆಗಿರುತ್ತದೆ.

○ ○ ○

ಎರಡನೇಯದಾಗಿ ಬೊಂಬಾಯಿ–ಇಲ್ಲಿನ ಜನಸಂಖ್ಯೆ ೧,೧೫೭,೮೫೧.

○ ○ ○

ಮದ್ರಾಸಿನ ಜನಸಂಖ್ಯೆಯು ೬೪೭,೨೨೮.

○ ○ ○

ಹಿಂದೀಯರಿಂದಲೇ ಕೂಡಿದ್ದಾಗಿದ್ದು, ಹಿಂದೂಸ್ಥಾನದಲ್ಲಿ ಇರುವ ಸೈನ್ಯದ ಸಂಖ್ಯೆಯು ೧೫೦,೦೦೦ ಆಗಿರುತ್ತದೆ.

○ ○ ○

ಹಿಂದೂಸ್ಥಾನದ ಸೈನ್ಯಶಾಖೆಯಲ್ಲಿರುವ ಬ್ರಿಟಿಷ್ ಮಿಲಿಟರಿ ಸೈನಿಕರ ಸಂಖ್ಯೆಯು ೬೦,೦೦೦ ಉಂಟು.

○ ○ ○

ಲಕ್ಷವೆಂದರೆ ಸಾವಿರಕ್ಕಿಂತಲೂ ಹೆಚ್ಚು. ಮಿಲಿಯವೆಂದರೆ ಲಕ್ಷಗಿಂತಲೂ ಹೆಚ್ಚು. ಇನ್ನು ಕೋಟಿಯೆಂದರೆ ಮಿಲಿಯಗಿಂತಲೂ ಹತ್ತು ಪಾಲಷ್ಟು. ಈ ಬಿಲಿಯನ್ ಎಂಬ ಸಂಖ್ಯೆಯು ಎಲ್ಲದಕ್ಕಿಂತಲೂ ದೊಡ್ಡದು. ಎಷ್ಟು ದೊಡ್ಡ ಸಂಖ್ಯೆ ಎಂದರೆ, ಒಂದು ಮಿನಿಟಿಗೆ ೨೦೦ರಂತೆ ಎಣಿಸಿದರೆ, ಒಂದು ಬಿಲಿಯನ್ ರೂಪಾಯಿಗಳನ್ನು ಎಣಿಸಬೇಕಾದರೆ ೯೫೧೨ ವರ್ಷಗಳೂ ೩೪ ೭ ದಿನಗಳೂ, ೫ ಗಂಟೆಗಳೂ, ೨೦ ಮಿನಿಟುಗಳೂ ಬೇಕಾಗುತ್ತವೆಯಂತೆ.

○ ○ ○

ವಿಜ್ಞಾನ ಪರಿಶೋಧಕರು ಕಂಡುಹಿಡಿದುದರಲ್ಲಿ, ತ್ವರೆಯಾಗಿ ಹಾರುವ ಪಕ್ಷಿಯೆಂದರೆ ಇಂಗ್ಲೆಂಡಿನಲ್ಲಿ ಕಾಣಸಿಗುವ 'ಸ್ವಿಪ್ಟ್' ಎಂಬ ಪಕ್ಷಿಯು. ಇದು ಗಂಟೆಗೆ ೨೨೦ ಮೈಲುಗಳ ವೇಗದಲ್ಲಿ ಹಾರಬಲ್ಲುದಂತೆ.

ಒಂದು ಒಂಟೆಯು, ಆಹಾರ ನೀರಿಲ್ಲದೆ ದಿನಕ್ಕೆ ೮೦ ಮೈಲುಗಳಂತೆ ೧೪ ದಿವಸಗಳ ತನಕ ಒಂದೇ ಸವನೆ ಪ್ರಯಾಣಮಾಡಬಲ್ಲುದಂತೆ.

○ ○ ○

ಪಾರ್ಸಿಗಳ ಪಂಚಾಂಗದಲ್ಲಿ ತಿಂಗಳ ೩೦ ದಿವಸಗಳಿಗೂ ಬೇರೆ ಬೇರೆ ಹೆಸರುಗಳಿವೆ.

○ ○ ○

ಜ್ವಾಲಾಮುಖಿಗಳಿಂದ ತುಂಬಿದ ಕ್ಯೂಬಾ ದ್ವೀಪಸ್ತೋಮಗಳಲ್ಲಿ ಒಂದು ತರದ ಗಿಡಗಳು ಇವೆ. ಈ ಗಿಡಗಳಿಗಾಗುವ ಹೂವುಗಳು ಜ್ವಾಲಾಮುಖಿಯ ಬರುವಿಕೆಯನ್ನು ತಿಳಿಸುವುವಂತೆ. ಜ್ವಾಲಾಮುಖಿಗಳಾಗುವ ಕೆಲವು ಗಂಟೆಗಳ ಮೊದಲು ಈ ಹೂವುಗಳು ತಮ್ಮ ವರ್ಣವನ್ನು ಬದಲಾಯಿಸುವವಂತೆ, ಅಲ್ಲಿಯ ಜನರು ಇದನ್ನು ಕಂಡು ತಮ್ಮ ಪ್ರಾಣದ ಎಚ್ಚರ ಮಾಡಿಕೊಳ್ಳುವರು.

○ ○ ○

ಪ್ರಪಂಚದಲ್ಲಿ ಪ್ರತಿಮಿನಿಟಿಗೆ ೩೦೦,೦೦೦ ಬೆಂಕಿ ಕಡ್ಡಿಗಳು ಹಚ್ಚಿಸಲ್ಪಡುವವಂತೆ.

○ ○ ○

ಪ್ರಪಂಚದ ಮೂರನೇ ಒಂದಂಶದ ಜನಸಂಖ್ಯೆಯು ಸಮುದ್ರಕ್ಕೆ ಸಂಬಂಧಪಟ್ಟ ಕೈಗಾರಿಕೆಗಳಿಂದ ಜೀವನ ನಡಿಸುತ್ತದಂತೆ.

○ ○ ○

ಅಮೇರಿಕದ ಅಮೆಜಾನ್ ಅರಣ್ಯಗಳಲ್ಲಿ ಮೃಗಪಕ್ಷಿಗಳನ್ನು ಬೇಟೆಯಾಡುವ ೩ ಅಡಿ ಅಗಲದ ಜೇಡರ ಹುಳಗಳಿವೆಯಂತೆ.

○ ○ ○

ಒಂದು ಔನ್ಸಿನಷ್ಟು ಗುಲಾಬಿ ಪರಿಮಳ ಸಾರವನ್ನು ತೆಗೆಯಬೇಕಾದರೆ ೫೦೦ ರಾತ್ತುಲ್ಗಳಷ್ಟು ಗುಲಾಬಿ ಹೂವುಗಳು ಬೇಕಾಗುವವು.

○ ○ ○

ಜಪಾನೀ ಭಾಷೆಯ ಅಕ್ಷರ ಮಾಲೆಯಲ್ಲಿ ಎರಡು ರೀತಿಯವುಗಳಿವೆ. ಹಿಡನಕಾ ಎಂಬ ಒಂದು ರೀತಿಯನ್ನು ಜಪಾನಿ ಹೆಂಗುಸರು ಮಾತ್ರ ಉಪಯೋಗಿಸುವರು. ಕಿಡನಕಾ ಎಂಬ ಇನ್ನೊಂದು ರೀತಿಯನ್ನು ಗಂಡಸರು ಮಾತ್ರವೇ ಉಪಯೋಗಿಸುತ್ತಾರೆ.

○ ○ ○

ಪ್ರಪಂಚದ ಅತೀ ದೊಡ್ಡ ಗಡಿಯಾರವು ಅಮೇರಿಕಾದ ಕಾಲ್ಗೇಟ್ ಸಾಬೂನು ಕಾರ್ಖಾನೆಯ ಕಟ್ಟಡದಲ್ಲಿ ಅಲಂಕೃತವಾಗಿದೆ. ಇದು ೫೦ ಅಡಿ ಅಗಲವಾಗಿದೆ. ಇದರ ಗಂಟೆ ತೋರಿಸುವ ಮುಳ್ಳು ೧೯॥ ಅಡಿ ಉದ್ದವೂ, ಮಿನಿಟು ತೋರಿಸುವ ಮುಳ್ಳು ೨೭॥ ಅಡಿ ಉದ್ದವೂ ಆಗಿರುತ್ತದೆ. ಮೂರು ಮೈಲುಗಳ ದೂರದಿಂದ ಈ ಗಡಿಯಾರ ಮೇಲಿನ ಗಂಟೆಯನ್ನು ಸ್ವಚ್ಛವಾಗಿ ಕಾಣಬಹುದಂತೆ.

○ ○ ○

ಅಮೇರಿಕದ ಪ್ರಖ್ಯಾತ ವೈದ್ಯ ವಿಜ್ಞಾನಿಗಳೊಬ್ಬರು ಮಾನವ ಶರೀರಕ್ಕೆ ಸಂಬಂಧಪಟ್ಟ ಕೆಲವು ಆಶ್ಚರ್ಯಕರ ವಿಷಯಗಳನ್ನು ಕೊಟ್ಟಿರುವರು:—

ಸಾಧಾರಣ ೫ ಮಣ ಭಾರವಿರುವ ಮನುಷ್ಯನ ದೇಹದಲ್ಲಿ ಹತ್ತು ಗೆಲನ್ ನೀರು ತುಂಬಿಕೊಂಡಿರುತ್ತದೆ. ೭ ಬಾರು ಸಾಬೂನುಗಳಿಗೆ ಬೇಕಾಗುವ ಚರ್ಬಿ ಇರುತ್ತದೆ.

೯೦೦೦ ಪೆನ್ಸಿಲುಗಳಿಗೆ ಬೇಕಾಗುವ ಇದ್ದಲು ಮಸಿಯು ನಮ್ಮ ದೇಹದಲ್ಲಿದೆ.

೨೨೦೦ ಬೆಂಕಿಕಡ್ಡಿಗಳಿಗೆ ಬೇಕಾಗುವ ಫೊಸ್ಫರಸ್ ಉಂಟು.

ಸಾಧಾರಣ ಆಕೃತಿಯ ಮೊಳೆಯನ್ನು ತಯಾರಿಸಲು ಬೇಕಾಗುವ ಕಬ್ಬಿಣವು ನಮ್ಮ ದೇಹದೊಳಗಿದೆ.

ಒಂದು ಸರ್ಕಿ ವೀಳ್ಯ ತಿನ್ನಲು ಬೇಕಾಗುವ ಸುಣ್ಣವೂ ಇದೆ.

ಒಂದು ತೊಲೆ ಗಂಧಕವೂ ಸಿಗುತ್ತದೆ.

ಮಾನವ ದೇಹದಲ್ಲಿ ಸಿಗುವ ಈ ಪದಾರ್ಥಗಳ ಒಟ್ಟು ಬೆಲೆಯು (ಅಂಗಡಿಗಳಲ್ಲಿ ಪಡೆಯುವುದಾದರೆ) ರೂಪಾಯಿ ೪ ಮಾತ್ರ ಆಗುತ್ತದೆ.

○ ○ ○

ಹೊಂಗ್‌ಕೊಂಗ್‌ನಲ್ಲಿ ಇರುವ ಕೆಲವು ಸರೋವರಗಳಲ್ಲಿ ಒಂದು ಜಾತಿಯ ಅಮೆಗಳು ಇವೆ. ಇವುಗಳಿಗೆ ನಾಲ್ಕೈದು ಅಂಗುಲದ ಗಡ್ಡವಿರುತ್ತದೆಯಂತೆ.

○ ○ ○

ದಕ್ಷಿಣ ಅಮೇರಿಕದ ಪರಾಗುವಾ ಪ್ರಾಂತ್ಯದಲ್ಲಿ ನವಾಮಾ ನದೀಪ್ರದೇಶದಲ್ಲಿ ಇಂದಿಗೆ ಮುನ್ನೂರು ವರ್ಷಗಳಿಂದ ನಿಲ್ಲದೆ ಮಳೆ ಬೀಳುತ್ತಿದೆಯಂತೆ.

○ ○ ○

"ಲಿರಿಯಸ್ ನ್ಯೂಮರಿಟ್ಯಾನ್" ಎಂಬ ಒಂದು ಜಾತಿಯ ಎರೆ ಹುಳುವು ೪ ಅಡಿ ಉದ್ದವಿರುತ್ತದೆ. ಇದು ಒಂದೇಸವನೇ ೪೫ ಅಡಿಗಳಷ್ಟು ಉದ್ದವಾಗಬಲ್ಲುದಂತೆ.

○ ○ ○

ಪ್ರಪಂಚದ ಏಳು ಮಹಾ ಉತ್ಕೃಷ್ಟಗಳಲ್ಲಿ ಒಂದೆನಿಸಿಕೊಂಡಿದ್ದ ಇಟಲಿಯ ಪಿಸಾ ನಗರದಲ್ಲಿನ ವಾಲುವ ಗೋಪುರವು ಈಗ ನೆಟ್ಟಗಾಗುತ್ತಾ ಬರುತ್ತಿದೆಯಂತೆ. ಕೆಲವು ವರ್ಷಗಳ ಹಿಂದೆ ಅದು ೧೬೪ ಅಡಿಗಳಷ್ಟು ವಾಲಿತ್ತು. ಈಗ ಅದು ವಾಲಿಕವು ೧೪ ಅಡಿಗಳಾಗಿವೆ.

○ ○ ○

ಅಮೇರಿಕದ ಸಿಂಗ್‌ಸಿಂಗ್ ಜೈಲು ಪ್ರಪಂಚದಲ್ಲಿ ಅತೀ ದೊಡ್ಡದು. ಅದರಲ್ಲಿ ಭದ್ರವಾದ ೨೦೦೦ ಬೇರೆ ಬೇರೆ ಕೊಠಡಿಗಳಿವೆ.

ವೃದ್ಧ ವೃಕ್ಷ.

ಕೆಲಿಫೋರ್ನಿಯಾದಲ್ಲಿ ಒಂದು ಮರವು ೧೩೪೧ ವರ್ಷಗಳಷ್ಟು ಹಳೆದೆಂದು ಎಣಿಸಲ್ಪಟ್ಟಿದೆ. ಇದು ಸುಮಾರು ೫ನೇ ಇಸವಿಯಲ್ಲಿ ಹುಟ್ಟಿ ಬೆಳೆದು, ಅಖಂಡಾಕೃತಿಯ ಮರವಾಗಿ ಮೆರೆಯಿತು. ೧೮೯೧ರಲ್ಲಿ ಅಂದರೆ ೧೩೪೧ ವರ್ಷಗಳ ನಂತರ, ಅತೀ ಮುದಿಯಾಗಿದೆಯೆಂದು ಕಡಿಯಲ್ಪಟ್ಟಿತು. ಅದರ ಕಾಂಡದ ಅಗಲವು ೧೬॥ ಅಡಿಗಳಾಗಿದ್ದು, ೧೫೦ ಅಡಿಗಳ ಸುತ್ತಳತೆಯುಳ್ಳದ್ದಾಗಿದೆ.

NOTICE

In the Court of the Subordinate Judge of S. K.

O. S. No. 9/1937.

Between:

The Paugal Nayak Bank Ltd., by its Secretary P. Laxman Nayak—Plaintiff.

and

1. Moolky Udiavar Sridhar Vittappa Shenoi. 2. U. Venkatraya Annappa Baliga & Co., Commission Agents, by its partner, (a) V. Venkatraya Annappa Baliga, (b) Kochikar Anandraya Pai—Defendants.

To: U. Venkatraya Annappa Baliga Residing in Udipi, Kasba Village, Dft. 2 (a)

Notice is hereby given that the above suit filed by the Plaintiffs against you for recovery of Rs. 3208-2-5 is posted to 26—3—'37 for hearing. If you fail to appear in person or by pleader at 11 a. m. on the said date, the suit will be proceeded with exparte in your absence.

Mangalore, 1—3—1937 — **B. V. BALIGA**, Pleader for Plaintiff

---

MATRIMONIAL.

WANTED: Saraswat Girls and Widows above 18, for immediate marriage. No sections, or sub sections, no provincial or language barriers. With full particulars of present age, education and other qualifications, — apply Saraswat Agency, 270 Frere Road, Fort Bombay. Correspondence strictly confidential.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 387, ಮದರಾಸು.

ದಕ್ಷಿಣ ಕನ್ನಡದ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿಯಾದದ್ದು.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ.1-4-0.(ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರಡೇಪಿ,

P. O. Peridepi (ನೆಲ್ಲೂರು ಜಿ.)



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಸರಕಾರದಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ರೋಗದ ನಾಮಗಳು —ಕ್ಷಯ ರೋಗ, ಬಾಣಂತಿರೋಗ, ಹಳೆದ ಸಂಚು ದಮ್ಮು, ಆಡಗ್ಗೆ ಕಾಲರಾ, (ಮಾರಿಕಾ,) ಪ್ಲೇಗು, ಇನ ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ, ಗಂಡುಮಾಲೆ ನಾರಹುಣ್ಣು, ಶಸ್ತ್ರಘಾಯ, ಶಿಬಿಶೂಲೆ, ಮೂಗಿ ನೊಳಗಿನ ಪಿನಸಿ ಮೊದಲಾದುವುಗಳು, ಕಣ್ಣಿನ ರೋಗ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ [illegible] ರೋಗಗಳ [illegible] ಹೊಟ್ಟೆ ದೊಡ್ಡದಾಗೋಣ [illegible] ಹೊರಬೀಳೋಣ, ಮತ್ತು ಡಾಕ್ಟರರಿಗೂ ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದು [illegible] ಗುಣಪಡುವುದು [illegible] ಪ್ರಖ್ಯಾತ ವಾಸಮಿತ್ರ ಮೂರ್ತಿಮಂತವೈದ್ಯ [illegible] ಗುಣಪಡಿಸಿದ [illegible] ಅನೇಕ ರೋಗಗಳಿಗೆ ಒಂದೆ ಔಷಧವೆಂದರೆ ಜನರಿಗೆ ಹಾಸ್ಯ [illegible] ಸ್ಥಾಪನಾ ಆಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು [illegible] ಇದರ ಬಗ್ಗೆ ನಮಗೆ ಒಹಳ ಶಿಫಾರಸು ಮಾಡಬೇಕಾಗಿಲ್ಲ [illegible] ಕರ್ನಾಟಕದಲ್ಲೆಲ್ಲಾ ಹೋಗುತ್ತದೆ.

೧॥ ತೊಲೆ ಬಾಟ್ಲಿ ಒಂದಕ್ಕೆ ರೂ. ೨ [illegible] ತೊಲೆದ ಬಾಟ್ಲಿ ಒಂದಕ್ಕೆ [illegible] ಚಿಕ್ಕ ಬಾಟ್ಲಿ ಒಂದೇ ಸಾರಿ ಒಂದು ಡಜನ್ ತರಿಸಿಕೊಳ್ಳುವ ವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು [illegible] ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ, ಟಪ್ಪಾಲ ಖರ್ಚು ೧೧ ಆಣೆ ೧॥ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು, ಟಪ್ಪಾಲ ಖರ್ಚು ೧೧ ಆಣೆ ಬೀಳುವುದು ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ ಸಣ್ಣ ಬಾಟ್ಲಿ ಒಂದೇ ಬೇಡಿದರೆ [illegible] ಟಪ್ಪಾಲ ಖರ್ಚು [illegible] ಆಣೆ [illegible] ಔಷಧ ತರಿಸಿಕೊಂಡರೆ [illegible] ಆಣೆ ಬೀಳುವುದು.

ತಿಳಿದುಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು [illegible] ಔಷಧವು [illegible] ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು ನಮ್ಮ ಅರ್ಕಶಫಾದಂತೆ [illegible] ನಮ್ಮ ಫೋಟೋ ಮತ್ತು ಜಾಹಿರಾತ ನೋಡಿ ತಿಳಿದುಕೊಳ್ಳಬೇಕು. ಏಜಂಟರಿಗೆ ಯಾರೂ ಇಲ್ಲ [illegible] ಬೇಡ [illegible] ಕನ್ನಡ ಮರಾಠಿ, ಇಂಗ್ಲಿಷ ಇವುಗಳಲ್ಲಿ ಸ್ಪಷ್ಟ ಬರೆಯಬೇಕು ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು ಇರುವ ಗ್ರಾಮ ಪೋಸ್ಟಾಫೀಸು ತಾಲೂಕು ಜಿಲ್ಲ ಸ್ಟೇಶನ ಎಲ್ಲ ಖುಲಾಸ ಬರೆಯಬೇಕು

ನಮ್ಮ ವಿಳಾಸ—ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೋ ಶಹಾಪೂರ [ಬೆಳಗಾಂವಿ]

ರೈಲು ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4-20
ಮಿಕ್ಸಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ. 2-40
ಶಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8 25	ಮ. 1-20
ಕಾಸರಗೋಡು ಪೆಸೆಂಜರು		ಸಂಜೆ 8.20

ಬಹಳ ಕಡಿಮೆಯಾದ ಕ್ರಯ.

ಆಟೋಮೆಟಿಕ್ ಅಲಾರಂ ಪಿಸ್ತಲ್.

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲ ನಂತಿರುವುದು ಇದರಿಂದ ಹತ್ತು ಸೆಕೆಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು, ಇದು ಒಂದು ನಮ್ಮಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು, ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೂಲ್ ಕೂಡೆ ಕಳುಹಿಸುವೆವು. ಪಿಸ್ತೂಲ್ ಒಂದು ಆರ್ಡರು ಮಾಡುವವರಿಗೆ ೨ ಟಿಟಂ ಹಾಕಿದ ಸ್ಟ್ರೀಮ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು, ಪಿಸ್ತೂಲು ೧೦೦ ತೋಟೆಗಳ ಸಹಿತ ೭—೮—೦ ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೬ ಇರುಳಪ್ಪನ ಬೀದಿ, ಮದ್ರಾಸು

ಕಳೆದ 30 ವರ್ಷಗಳಿಂದಲೂ ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡು ತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

"ಸ್ವದೇಶಾಭಿಮಾನಿ"

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕಮಗಳೂರ ಮುಖ್ಯವಾಗಿ ಇನಿತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ 'ಬಿಡಿ ಸಂಚಿಕೆ'ಗಳನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಶರ್ತಗಳಿಗಾಗಿ ಬರೆಯಿರಿ

ಸ್ವದೇಶಾಭಿಮಾನಿ ಕಾರ್ಯಾಲಯ,

ರಥಬೀದಿ, ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್. ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ

ಕುಷ್ಮಾಂಡಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ಮೃದ್ವೀಕಾಸವ—ನಿತ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸತ್ವ ಕತ್ವ, ಧಾತುಕ್ಷೀಣತೆಗೆ.

ಭುವನಾಂಜನ ಪೈನ್‌ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಪಶುರೋಗ ಚಿಕಿತ್ಸೆ

ಗೊಣ್ಣೆಮಾರಿ, ಯಾನೆ ಗೋವುಗಳ ಮಹಾಮಾರಿ ರೋಗ, ರಕ್ತಸ್ರಾವ, ರಕ್ತಕೊಳೆ, ನೆಪ್ಪೆರೋಗ ಕಾಲುಕುಂಟು, ಮೊದಲಾದ ಅನೇಕ ಅಂಟುರೋಗಗಳಿಂದ ವರ್ಷಂಪ್ರತಿ ಸಾವಿರಾರು ಜಾನುವಾರುಗಳು ಸಾಯುತ್ತವೆ. ಈ ರೋಗಗಳ ಹಾವಳಿಯನ್ನು ಕಡಿಮೆ ಮಾಡಲಿಕ್ಕೆಂದು ಟೂರಿಂಗ್ ವೆಟರ್ನರಿ ಅಸಿಸ್ಟಾಂಟ ಸರ್ಜನರೆಂಬ ಗ್ರಾಮಸಂಚಾರ ಮಾಡುವ ಪಶುವೈದ್ಯರನ್ನು ಸರಕಾರದವರು ನೇಮಕ ಮಾಡಿರುತ್ತಾರೆ.

ಸರಕಾರಿ ಪಶು ವೈದ್ಯಾಲಯವು ಇರುವಲ್ಲಿ ಆ ವೈದ್ಯಾಲಯದ ಪಶುವೈದ್ಯರು ಪಶುಗಳಿಗೆ ಬೇಕಾದ ಚಿಕಿತ್ಸೆಯನ್ನು ಮಾಡುತ್ತಾರೆ. ಅಂಥಾ ವೈದ್ಯಾಲಯಗಳು ಇಲ್ಲದಿರುವಲ್ಲಿ ಈ ಟೂರಿಂಗ್ ವೆಟರ್ನರಿ ಅಸಿಸ್ಟಾಂಟ ಸರ್ಜನರು ಗ್ರಾಮಗಳಲ್ಲಿ ಅಂಟುರೋಗಗಳ ಹಾವಳಿ ಇಲ್ಲದಿರುವಾಗ, ತಮ್ಮ ಮುಖ್ಯ ವಾಸ್ತವ್ಯದ ಸ್ಥಳದಲ್ಲಿ ಚಿಕಿತ್ಸೆಗಾಗಿ ಅಲ್ಲಿಗೆ ತಂದ ಪಶುಗಳಿಗೆ ಚಿಕಿತ್ಸೆಯನ್ನು ಮಾಡುತ್ತಾರೆ. ಈ ಟೂರಿಂಗ್ ವೆಟರಿನರಿ ಅಸಿಸ್ಟಾಂಟ ಸರ್ಜನರು ತಿಂಗಳಿಗೆ 20 ದಿನಗಳಿಗೆ ಕಡಿಮೆಯಾಗದಂತೆ ಗ್ರಾಮ ಸಂಚರಣೆಯನ್ನು ಮಾಡಬೇಕಾಗಿರುತ್ತದೆ. ಹೀಗೆ ಸಂಚರಣೆಯನ್ನು ಮಾಡುವಾಗ ಅವರು ಪ್ರತಿ ಗ್ರಾಮದಲ್ಲಿ ಸುಮಾರು 10 ದಿನಗಳ ತನಕ ಉಳಕೊಂಡು ಅಲ್ಲಿ ಹಂಗಾಮಿ ವೈದ್ಯಾಲಯವನ್ನು ನಿರ್ಮಿಸಿ, ಜಾನುವಾರುಗಳಿಗೆ ತಗಲುವ ಅಂಟುರೋಗವಲ್ಲದ ಸಾಧಾರಣ ತರದ ವ್ಯಾಧಿಗಳಿಗೆಲ್ಲಾ ಮದ್ದುಕೊಟ್ಟು ಧರ್ಮಾರ್ಥವಾಗಿ ಅವುಗಳಿಗೆ ಕಸಿ (ಬೀಜ ತೆಗೆಯುವುದು) ಯನ್ನು ಮಾಡಿಕೊಡುತ್ತಾರೆ.

ಮಹಾಮಾರಿ ರೋಗವು ಎಂದೂ ತಲೆದೋರದಂತೆ ಅವರು ಜಾನುವಾರುಗಳಿಗೆಲ್ಲಾ ಸಂದರ್ಭ ಸಿಕ್ಕಿದ ಹಾಗೆ ದಾಳು ಹಾಕುತ್ತಾರೆ ಜಾತ್ರೆ—ಸಂತೆಗಳು ನಡೆಯುವಲ್ಲಿ ಅವರು ಮಾಯಾಲಾಂಧ್ರ ಪ್ರದರ್ಶನಗಳನ್ನು ತೋರಿಸಿ, ಭಾಷಣಗಳನ್ನು ಕೊಟ್ಟು ಪಶುರೋಗ ಚಿಕಿತ್ಸೆಗಳ ಕುರಿತು ರೈತರಿಗೆ ಜ್ಞಾನವುಂಟಾಗುವಂತೆ ಪ್ರಯತ್ನ ನಡಿಸುತ್ತಾರೆ ಇಂಥಾ ಪ್ರಯತ್ನಗಳಿಂದ ಪಶುವೈದ್ಯ ಇಲಾಖೆಯವರ ಸಹಾಯವನ್ನು ತಾವು ಯಾವ ರೀತಿ ಪಡೆದು ಪ್ರಯೋಜನವನ್ನು ಹೊಂದಬಹುದೆಂಬುದು ರೈತರಿಗೆ ಗೊತ್ತಾಗುತ್ತದೆ. ಅಂಟುರೋಗಗಳು ಎಲ್ಲಿಯಾದರೂ ಸಂಭವಿಸಿ ಅವುಗಳನ್ನು ತಿಳುವಳಿಕೆಗೆ ತಾರದಿದ್ದದ್ದನ್ನು ಕಂಡುಹಿಡಿಯುವುದು—ಗ್ರಾಮ ಉದ್ಯೋಗಸ್ಥರು ಈ ಬಾಬಿನಲ್ಲಿ ಇಡುವ ರಿಜಿಸ್ಟ್ರವ ಲೆಕ್ಕಗಳನ್ನು ತನಿಖೆ ಮಾಡಿ ಪರೀಕ್ಷಿಸುವುದು – ಪಶುರೋಗಗಳ ಕುರಿತು ಶೋಧನೆ ನಡಿಸುವ ಉದ್ದೇಶ್ಯ ಬೇಕಾದ ಲೆಕ್ಕ ವೃತ್ತಾಂತಗಳನ್ನು ಸಂಪಾದಿಸಿಕೊಳ್ಳುವದು—ಇವುಗಳು ಸಹಾ ಈ ಗ್ರಾಮ ಸಂಚಾರ ಮಾಡುವ ಪಶುವೈದ್ಯ ಇಲಾಖೆಯ ಅಧಿಕಾರಿಗಳ ಮುಖ್ಯ ಕೆಲಸಗಳಾಗಿರುತ್ತವೆ ಪಶುವೈದ್ಯದ ಪ್ರಯೋಜನವು ಗ್ರಾಮಗಳಲ್ಲಿ ಪ್ರತಿಯೊಬ್ಬರ ಮನೆಬಾಗಿಲಿಗೂ ಮುಟ್ಟುವಂತಾಗುತ್ತದೆ ಕಳೆದ ಐದು ವರುಷಗಳಲ್ಲಿ ಸರಕಾರದವರು ವರುಷಂಪ್ರತಿ ರೂ 20,400 ಖರ್ಚು ತಗಲುವ 12 ಮಂದಿ ಗ್ರಾಮ ಸಂಚಾರದ ಪಶು ವೈದ್ಯರಿರುವ ಹೆಚ್ಚಿನ ಶಿಬಂಧಿಯನ್ನು ನೇಮಕ ಮಾಡಿರುತ್ತಾರೆ.

ಧರ್ಮಾರ್ಥವಾಗಿ ಹಾಕುವ 'ಸೀರಮ್ ಸ್ಯಾಮ್ಯುಲ್ಟನಿಯಸ್'' ಎಂಬ ದಾಳಿನಿಂದ ಜಾನುವಾರುಗಳಿಗೆ ಸಾಧಾರಣ ಮುಂದೆ ಎಂದೂ ಮಹಾಮಾರಿ ರೋಗವು ತಗಲದಂತೆ ರಕ್ಷಣೆಯಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಹೀಗೆ ದಾಳು ಹಾಕಿದ ಜಾನುವಾರುಗಳ ಸಂಖ್ಯೆಯನ್ನು ಈ ಕೆಳಗೆ ಕಾಣಿಸಿರುತ್ತದೆ:—

(ಮೂರನೇ ಕಲಮನ್ನು ನೋಡಿರಿ.)

1930—31	147,880
1931—32	113,566
1932—33	101,415
1933—34	189,252
1934—35	115,180

ಈ ದಾಳನ್ನು ಹಾಕಲಿಕ್ಕೆ ಮಹಾಮಾರಿ ರೋಗನಾಶಕ ರಸಿಕೆಯು ಜರೂರಾಗಿ ಹೆಚ್ಚು ಬೇಕಾಗುವುದರಿಂದ 1932ನೇ ಇಸವಿಯಲ್ಲಿ ಮದ್ರಾಸಿನಲ್ಲಿ ಈ ತರದ 'ರಸಿಗೆ' ವ ನಂಜಿನ ರಸಬೇಕಾದಷ್ಟು ತಯಾರಿಸುವ ಸೀರಮ್ ಇನ್ಸ್ಟಿಟ್ಯೂಟ್ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ. ಈ ಸಂಸ್ಥೆಯ ಬಗ್ಗೆ ವರುಷಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ.

ಇಷ್ಟರ ತನಕ ಈ ಜಿಲ್ಲೆಯಲ್ಲಿ ನಾಲ್ಕು ಜನ ಟೂರಿಂಗ್ ವೆಟರಿನರಿ ಅಸಿಸ್ಟಾಂಟ ಸರ್ಜನರಿದ್ದರು ೧೯೩೬ನೇ ಇಸವಿ ಮೇ ತಾರೀಕು ೧ರಿಂದ ಈ ತರಗತಿಯ ಹೆಚ್ಚಿನ ಒಬ್ಬ ಪಶುವೈದ್ಯರನ್ನು ನೇಮಕ ಮಾಡಿರುತ್ತಾರೆ. ಜಿಲ್ಲೆಯ ಆರು ತಾಲೂಕುಗಳನ್ನು ಅವರೊಳಗೆ ಹಂಚಿ ಹಾಕಿರುವುದರಿಂದ ಅವರು ಎಲ್ಲಾ ಕಡೆಯಲ್ಲಿಯೂ ಬೇಕಾದ ಸಹಾಯವನ್ನು ಮಾಡುತ್ತಾರೆ.

ಮಂಗಳೂರಿನಲ್ಲಿ ಒಂದು, ಪುತ್ತೂರಿನಲ್ಲಿ ಒಂದು, ಹೀಗೆ ಎರಡು ಪಶುವೈದ್ಯಾಲಯಗಳನ್ನು ಸರಕಾರದವರು ಈ ಜಿಲ್ಲೆಯಲ್ಲಿ ಸ್ಥಾಪಿಸಿರುತ್ತಾರೆ ಆ ವೈದ್ಯಾಲಯಗಳಿಗೆ ಚಿಕಿತ್ಸೆಯ ಬಗ್ಗೆ ಕೊಂಡುಹೋದ ಪಶುಗಳಿಗೆ ಅಲ್ಲಿ ಮದ್ದು ಕೊಡುತ್ತಾರೆ ಶಸ್ತ್ರೋಪಯೋಗ ಬೇಕಾದಲ್ಲಿ ಶಸ್ತ್ರೋಪಯೋಗವನ್ನು ಮಾಡಿ ಚಿಕಿತ್ಸೆ ಮಾಡುತ್ತಾರೆ

	ದೊಪ್ಪ ಯಾನೆ ನೆರಡೀ ರೋಗ	ಗೋಮಾರಿ ಯಾನೆ ಗೋವುಗಳ ಮಹಾಮಾರಿ ರೋಗ
೧೯೩೦-೩೧	೧೪೮	೬,೭೨೯
೧೯೩೧-೩೨	೨೫೬	೯೦೨
೧೯೩೨-೩೩	,,	೧,೪೬೯
೧೯೩೩-೩೪	,,	೬,೦೦೬
೧೯೩೪-೩೫	,,	೨,೦೪೫
	೪೦೪	೧೭,೧೫೧

(ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟದ್ದು.)

NOTICE.

The Pangal Nayak Bank, Ltd; Mangalore.

ಈ ಕೆಳಗೆ ಹೆಸರು ಕಾಣಿಸಿದವರು-ಚಿನ್ನಾಭರಣಗಳ ಅಡವಿನ ಮೇಲೆ ಈ ಬೇಂಕಿನಿಂದ ಪಡೆದ ಸಾಲದ ಬಡ್ಡಿ ವಗೈರೆಯನ್ನು ಕೊಡದೆ ಇದ್ದುದರಿಂದಲೂ ಆ ಕುರಿತು ರಿಜಿಸ್ತ್ರ ನೋಟಿಸು ಕೊಟ್ಟಲ್ಲಿ ನೋಟೀಸು ತಲ್ಪಿದರೂ ಬಡ್ಡಿ ಇತ್ಯಾದಿಗಳನ್ನು ಕೊಡದೆ ಇದ್ದುದರಿಂದಲೂ, ಕೆಲವರು ನೋಟೀಸು ಜಾರಿಗೆ ತಪ್ಪಿಸಿಕೊಳ್ಳುವರಾಗಿ ನಮಗೆ ತಿಳಿದು ಬಂದಿರುವುದರಿಂದಲೂ ಮತ್ತೆ ಕೆಲವರಿಗೆ ನೋಟೀಸು ಜಾರಿ ಆಗದೆ ಪುನಃ ಬಂದುದರಿಂದಲೂ, ಕೆಲವರು ಮೃತಪಟ್ಟಿದ್ದಾರೆಂದು ತಿಳಿದು ಬಂದಿರುವುದರಿಂದಲೂ; ಸದರಿ ಸಾಲಗಳಲ್ಲಿ ಜವಾಬ್ದಾರಿ ಇರುವ ಚಿನ್ನಾಭರಣಗಳನ್ನು ಇದೇ ಬರುವ ಮಾರ್ಚಿ ತಿಂಗಳ ತಾರೀಕು 13ನೇ ಶನಿವಾರ ಘಂಟೆ 1-30ಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಬೇರೆ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲ್ಪಡುವುದು ಏಲಂನಿಂದ ಹುಟ್ಟಿಬಂದ ಐವೇಜಿನಿಂದ ಸಾಲದ ಅಸಲು, ಬಡ್ಡಿ ನೋಟೀಸು ಖರ್ಚು ವಗೈರೆ ವಜಾ ಮಾಡಿ ಉಳಿಯುವ ಹಣವನ್ನು ಆಯಾ ಆಸಾಮಿಗಳ ಅಮಾನಾತು ಖಾತೆಗೆ ಸಿ ಬಡ್ಡಿಯಿಂದ ಜಮಾ ಇಡಲ್ಪಡುವುದು ಏಲಂನಿಂದ ಹುಟ್ಟಿಬಂದ ಐವೇಜು ಸಾಲವನ್ನು ಪಾರೀಗತು ಮಾಡುವರೆ ಕಡಿಮೆಬಿದ್ದ ಪಕ್ಷದಲ್ಲಿ ಸದರಿ ಕಡಿಮೆಬಿದ್ದ ಹಣಕ್ಕೆ ಆಯಾ ಆಸಾಮಿಗಳ ಮೇಲೆ ವ್ಯಾಜ್ಯ ದಾಖಲು ಮಾಡಲ್ಪಡುವುದೆಂತ ಈ ಮೂಲಕ ತಿಳಿಸಲ್ಪಡೋಣಾಗುವುದು

ಲೋನು ನಂಬ್ರ 174/34 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಎ. ರಾಮಚಂದ್ರ, ಪಿಯೋನ್ ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ ಮಂಗಳೂರು. ಅಸ್ಲು ರೂಪಾಯಿ 65 0 0

ಲೋನು ನಂಬ್ರ 1010/34 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಈಶ್ವರ ಶೆಟ್ಟಿ, ಜಾತರ್ಕೆಗಳ ಮಗ, ಐವಾನುದಾರ, ಬಾಳೆಪುಣಿ, ಗ್ರಾಮ ಚೆಕ್ಸ್ರಾಲಿ ಪೋಸ್ಟು ಮಂಜೇಶ್ವರ ಅಸ್ಲು ರೂ 50 0 0

ಲೋನು ನಂಬ್ರ 1040/34 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಕೊರಗ ಪೂಜಾರಿ, ಶಾಂತು ಪೂಜಾರಿಗಳ ಅಳಿಯ ರೈತ, ಅಳಪೆ ಗ್ರಾಮ ಪೋಸ್ಟು ಕಂಕನಾಡಿ ಅಸ್ಲು ರೂಪಾಯಿ 35 0 0

ಲೋನು ನಂಬ್ರ 2534/34 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಗುರ್ವ ಪೂಜಾರಿ, ಕೊರಗ ಪೂಜಾರಿಗಳ ಮಗ ರೈತ, ಕೋಟೆಕಾರಗ್ರಾಮ, ಮಾಡೂರು ಮನೆ ಪೋಸ್ಟು ಉಳ್ಳಾಲ ಅಸ್ಲು ರೂ 60 0 0.

ಲೋನು ನಂಬ್ರ 821/35 ಮತ್ತು 628/35 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ದುಂಬು ಮಲ್ಯ, ನಾರಾಯಣ ಮಲ್ಯರ ಮಗ, ಸರಾಫ್ ಗೋಳಿಕಟ್ಟೆ ಬಜಾರು ಮಂಗಳೂರು ಅಸ್ಲು ರೂ 75—0—0 ಮತ್ತು 135 0 0

ಲೋನು ನಂಬ್ರ 1318/35 ಲೋನು ಇಟ್ಟವರ ಹೆಸರು ಮತ್ತು ವಿಳಾಸ ಮಮ್ಮದಬ್ಯಾರಿ, ಮೊಯಿದಿನ್ ಬ್ಯಾರಿ ಮಗ ಸೋಮೇಶ್ವರ ಗ್ರಾಮ, ಉಚ್ಚಿಲ ಪೋಸ್ಟು ಉಳ್ಳಾಲ ಅಸ್ಲು ರೂ 40 0 0

ಲೋನು ನಂಬ್ರ 2315/35 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಸಂಕುಶೆಟ್ಟಿ, ಗಂಗಯ್ಯ ಶೆಟ್ಟರ ಮಗ, ಅಟ್ಟಾವಾಲ ಮಂಗಳಾದೇವಿ ರೋಡು, ಬೋಳಾರ ಮಂಗಳೂರು ಅಸ್ಲು ರೂ. 25 0 0.

ಲೋನು ನಂಬ್ರ 2380/35 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಬಿ, ಲೋಕಯ್ಯ, ಕಂಟ್ರಾಕ್ಟರ್ ಬೋಳಾರ, ಮಂಗಳೂರು. ಅಸ್ಲು ರೂ. 50 0 0.

ಲೋನು ನಂಬ್ರ 57/36 ಲೋನು ಇಟ್ಟವರ ಹೆಸರು ಮತ್ತು ವಿಳಾಸ—ಮೊಯಿದಿನ್ ಕುಂಞಬ್ಯಾರಿ, ಕುಂಞಾಮ್ಮದ ಬ್ಯಾರಿಗಳ ಮಗ, ತಲಪಾಡಿ ಗ್ರಾಮ ಪೋಸ್ಟು ಮಂಜೇಶ್ವರ. ಅಸ್ಲು ರೂ. 26 0 0.

Office of the Bank Mangalore 1—3—1937.

P. Narasimha Nayak, *Agent.*

GODREJ

CHAVI BRAND

ಟ್ಯಾಲೆಟ್ ಸಾಬೂನುಗಳು



ನನ್ನ ಮುಖವನ್ನು ಸ್ವಲ್ಪ ನೋಡಿ. ಅದೆಷ್ಟು ಅಸಹ್ಯ ಕಾಣುತ್ತದೆ?

ಚರ್ಮಕ್ಕೆ ಕೆಡುಕನ್ನುಂಟುಮಾಡಿ, ಬೆವರಿನ ಒರುವಿಕೆಯನ್ನು ತಡೆಕಟ್ಟುವ, ಅನಿರ್ಮಲ ಮತ್ತು ಅಪಾಯಕರ ಸಾಮಾನುಗಳಿಂದ ತಯಾರಿಸಲ್ಪಟ್ಟ ಅಗ್ಗ ಬೆಲೆಯ ಸಾಬೂನುಗಳನ್ನು ಉಪಯೋಗಿಸಿದುದೇ ನನ್ನ ಈ ಅವಸ್ಥೆಗೆ ಕಾರಣವಾಗಿರುತ್ತದೆ

ಆದರೆ ಅದೇ ಮುಖವನ್ನು ಈಗ ನೋಡಿ-ಎಂಥಾ ಬದಲಾವಣೆಗಳು!

ಇದು ನಿರ್ಮಲವಾದ ಸಸ್ಯ ತೈಲಗಳಿಂದಲೇ ತಯಾರಿಸಲ್ಪಟ್ಟ ಗೊದ್ರೆಜ ಸಾಬೂನುಗಳ ಉಪಯೋಗದಿಂದಾದುದು ಗೊದ್ರೆಜ ಸಾಬೂನಿನ ಸುವಾಸನೆಯ ಮೃದು ನೊರೆಯು ಚರ್ಮರಂಧ್ರಗಳನ್ನು ಹೊಕ್ಕ ದೇಹದ ಮೇಲಿನ ಎಲ್ಲ ಕಲ್ಮಶಗಳನ್ನು ನಿರ್ಮೂಲಿಸಿ, ಮೋಹಕವಾದ ಶುಭ್ರ ಮುಖವರ್ಣವನ್ನು ಕೊಡುತ್ತದೆ

ಗೊದ್ರೆಜ್ ಟ್ಯಾಲೆಟ್ ಸಾಬೂನುಗಳು

ನಂ 1 ಮತ್ತು 2

ಮನುಷ್ಯನ ಚರ್ಮಕ್ಕೆ ಅತ್ಯವಶ್ಯಕ ಸಹಕಾರಿ ವಸ್ತುಗಳಿಂದೂ ಪ್ರಪಂಚದ ವೈದ್ಯವಿದ್ವಾಂಸರಿಗಳಿಂದ ಪುರಸ್ಕರಿಸಲ್ಪಟ್ಟ ಸಾಮಾನುಗಳಿಂದ ವಿಶೇಷ ಗೋದ್ರೆಜ್ ವಿಧಾನದಿಂದ ತಯಾರಿಸಿದುದು

ಎಲ್ಲಾ ನಮೂನೆಯ ಗೊದ್ರೇಜ್ ಸಾಬೂನು ಖಾತ್ರಿಯಾಗಿ ಪ್ರಾಣಿಚರ್ಬಿರಹಿತವಾಗಿರುತ್ತದೆ.

ನಕಲಿಗಳಿಗೆ ಮೋಸ ಹೋಗದಿರಿ.

ಪೆಟ್ಟಿಗೆಯ ಮೇಲೆ "ಚಾವಿ" ಗುರುತಿಲ್ಲದ ಯಾವ ತಯಾರಿಕೆಯೂ ಶ್ರೇಷ್ಠ ಗೊದ್ರೆಜ್ ತಯಾರಿಕೆಯಾಗಿರಲಾರದು.

ಪ್ರಾಮುಖ್ಯ ಪ್ರತಿನಿಧಿಗಳು —

ನಾದಿರ್ ಷಾ ಪ್ರಿಂಟರ್ ಎಂಡ್ ಕೊ. ಬೊಂಬಾಯಿ.

ಕಾರ್ಖಾನೆ—ಗೋದ್ರೆಜ್ ಸೋಪ್ಸ್ ಲಿಮಿಟೆಡ್

316 ದಿ ಲೆಸ್ಲಿ ರೋಡ್ ಬೊಂಬಾಯಿ 11.

"ಬ್ರೇಕ್ ಪಿಲ್ಸ್"

Invented by a Himalayan Sage.

ಸ್ತ್ರೀಪುರುಷರಿಗೆ ಆನಂದವನ್ನುಂಟು ಮಾಡುವುದು ಈ ಮಾತ್ರೆಗಳೆ.

ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು.

ಇದರಲ್ಲಿ ರಸವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಇಡಿ ರಮಿಸಲು ಉಲ್ಲಾಸವನ್ನು ಮಾಡುವುದು

ಗುಣವಿಲ್ಲದಿದ್ದಲ್ಲಿ ಹಣ ವಾಪಾಸು

ಮಾತ್ರೆಗಳು ರೂ ೫-೦-೦. ೩೦ ಮಾತ್ರೆಗಳು ರೂ ೩-೦-೦.

(ಕಾಗದ ಪತ್ರಗಳ ಇಂಗ್ಲಿಷಿನಲ್ಲಿಯೇ)

ಡಾ| ಎಂ ಎಸ್. ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಆದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನು ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ದುರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳ ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಚಳಿಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಪೈ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು ಮಂಗಳೂರು

ಅಮೃತಾಂಜನ

ತಲೆನೋವು ಶಿರೋವೇದನೆ ಉಳುಕು ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು ಗಾಯಗಳು ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ ತಲೆಹುಣ್ಣು ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಪೈ ಕಂಪೆನಿಯಲ್ಲಿ ದೊರೆಯುವುದು

ESTD· 1906·

anara Banking Corporation Udipi Ltd.

INCORPORATED IN BRITISH INDIA

IOTICE.

Fixed Deposits

ived at all offices at the following

ıths	2½% p. a.
ıths & "	3% p. a
ıonths	... 3½% p. a.
onths	4% p. a

M. Srinivas Prabhu,
Manager.

ನೋಟೀಸು.

ನಿರಖು ಠೇವಣಾತಿಗಳು

ನಮ್ಮ ಎಲ್ಲಾ ಆಫೀಸುಗಳಲ್ಲಿಯೂ ಈ ಕೆಳಗಿನ ಬಡ್ಡಿ ದರಗಳಲ್ಲಿ ಸ್ವೀಕರಿಸಲಾಗುವುದು:—

3 ತಿಂಗಳಿಗೆ	ಸೇಕಡಾ 2½%
6 ಮತ್ತು 9 ತಿಂಗಳಿಗೆ	" 3%
12 ತಿಂಗಳಿಗೆ	" 3½%
24 ತಿಂಗಳಿಗೆ	" 4%

ಕೊರ್ಪರೇಶನ್ ಆಫೀಸು,
ತಾ. 15-2-1937

ಎಂ. ಶ್ರೀನಿವಾಸ ಪ್ರಭು,
ಮೆನೇಜರ್.

Best Cheap Durable

Use only 515 Red & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by:—

The West Coast Soap Factory

ನಮ್ಮ 515 ಕೆಂಪು ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಹೆಮ್ಮೆ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು! ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agents.

Panchmal Krishnaya Shenoy & Son

Bunder, MANGALORE.

ಗುಣವಾಗದಿದ್ದರೆ [illegible]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. [illegible]

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ)

[illegible]

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಕದ, ಮುತ್ತು)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನು ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-

ಕಸ್ತೂರಿ ಪುಷ್ಪ ದಶಮೂಲ

ಬಾಣಂತಿಯರಿಗೆ ಅಪೇಕ್ಷಿತವಾದ ಶಕ್ತಿವರ್ಧಕ ರಸಾಯನ [illegible] ಇದನ್ನು ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1-8-

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್

ರಥಬೀದಿ ನಂಬ್ರ 3 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: [illegible] ಮಂಗಳೂರು. 2 ಶ್ರೀರಾಮ [illegible] 3. ಮೆಸರ್ಸ್ ಕಾಮತ್ ಎಂಡ್ ಕೋ., [illegible] 4. [illegible] ಹೆಗ್ಡೆ ಮರ್ಚೆಂಟ್ [illegible]

ಹೊಸ ಮಾಲನ್ನು ನಿರೀಕ್ಷಿಸಿರಿ!

?

ಗಿರಾಕಿಗಳಿಗೆ ಒಳ್ಳೇ ಸುಸಂದರ್ಭ!

Sole Agents:- **The Kerala Tea Syndicate,**

PONANI—(S. Malabar.)

Edited Printed & Published By A. S. Kamath at the Sharada Press, Car Street, M.

ಸ್ವದೇಶಾಭಿಮಾನಿ

ESTABLISHED 1906

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

12 [illegible]–'37

They are the best and foremost in the Market.

They are the unique products of our Province.

Many have tried & found satisfied Buy now and you will also be convinced

Manufactured by:—

The West Coast Soap Factory

ನಮ್ಮ 515 ಕೆಂಪು ಮತ್ತು 232 ಬಿಳಿ
ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಹೆಮ್ಮೆ, ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು! ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder, MANGALORE

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C

೧೮೭೭ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ 2 8—0 ಮೂರು ಬಾಟ್ಲಿಗಳಿಗೆ ರೂ 7 0-

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಇದ ತಿಂದು ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8

ಎಂ ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯ

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ 1 ಎಚ್ ಪದ್ಮನಾಭ ಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್ ಶ್ರೀರಾಮಪೇಟೆ ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ 4 ಹೆಗ್ಡೆ ಮರ್ಚೆಂಟ್ ಶಿರ್ಶಿ.

ಹೊಸ ಮಾಲನ್ನು ನಿರೀಕ್ಷಿಸಿರಿ!

?

ಗಿರಾಕಿಗಳಿಗೆ ಒಳ್ಳೇ ಸುಸಂದರ್ಭ!

Sole Agents: **The Kerala Tea Syndicate,**

PONANI—(S. Malabar.)

Edited Printed & Published By A. ...

ಸ್ವದೇಶಾಭಿಮಾನಿ

ESTABLISHED 1906

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
[illegible] ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ [illegible] ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರನಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುರತ್ನಕ್ಕೆ ಬರುತಿರುವ ॥
[illegible]ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥ [illegible]

[illegible] ೧೨ನೇ ಮಾರ್ಚಿ ೧೯೩೭ (12-3-'37) ಸಂಚಿಕೆ ೧೦

...ಬಜೆಟ್ಟಿನ ಪವಾಡಗಳು

...ನವ ಬಜೆಟ್ಟಿನ ಪ್ರವಾಂತರ ಹಾಗಿರಲಿ. ...ಗೆ ಮಹಾಯುದ್ಧದ ಗುಡುಗಿಂತಲೂ ನಿರ್ವಾರಣೆ ...ಗಾಗಿ ಇನ್ನೊಂದು ಮಿಲ್ಲಿಯ ಪವನನ್ನು ಹೆಚ್ಚಿಗೆ ವ್ಯಯಿಸುತ್ತಿರುವಾಗಲೂ, ಬಂಧೂ ಕಾಲು ಮಿಲ್ಲಿಯ ಪವನನ್ನು ಶಿಕ್ಷಣ ಪ್ರಚಾರ ಕ್ಕಾಗಿ ಹೆಚ್ಚಿಗೆ ವ್ಯಯಿಸುವುದು; ಲೋಕಲ್ ಬೋರ್ಡುಗಳಿಗೆ ಎಂಟು ಮಿಲ್ಲಿಯ ಪವನನ್ನೂ ಹೆಚ್ಚಿಗೆ ಕೊಡುವುದು ನಮ್ಮಲ್ಲಿ ಸೈನ್ಯವು ಅಷ್ಟು ಬೇಡವಾದರೂ ಸೈನ್ಯದ ಖರ್ಚು ಮುಕ್ಕಾಲು ಕೋಟಿ ರೂಪಾಯಿ ಹೆಚ್ಚಿಗೆ; ಬರೀ ಗ್ರಾಮೋದ್ಧಾರದ ನೆವದಿಂದ ಹಂಚುತ್ತಿದ್ದ ಒಂದು ಕೋಟಿ ರೂಪಾಯಿಗೆ ಸೊನ್ನೆ! ಸ್ವತಂತ್ರ ಜನಾಂಗಗಳ ಭಾಗ್ಯ!

o o o

ಅರ್ಥಾತ್ಯಯು ಪೋಸ್ಟ್ ಕಾರ್ಡಿನನ್ನೂ ಕನಸಿನ ಗಂಟು, ಭೂತಕಾಲದ ಭೂತ ಆದರೆ ವಿಮಾನದ ಮೂಲಕ ಹೆಚ್ಚಿನ ಟಪ್ಪಾಲು ವ್ಯಯೋಚಕ್ಕೆ, ಅಧಿಕ ಚಾರ್ಜು ಹಾಕಲಾಗಿದೆ! ಮಹಾ ಶ್ರೀಮಂತರಿಗೆ ಅತ್ಯನುಕೂಲ, ದರಿದ್ರರಿಗೆ ಒಂದು ಗುದ್ದು ಹೆಚ್ಚು. ನೈಸ್ರಾಯರು ಹಳ್ಳಿಗಳ ಉದ್ಧಾರಕ್ಕೆ ಹೊರಟಿರುವರು. ಹಳ್ಳಿಯವರ ಅನುಕೂಲಕ್ಕೆ ಬಜೇಟು ಅನುಕೂಲವಾಗಿಲ್ಲ. ದನವಾದರೆ ದೊರೆವ ಸುಖ ಈಗ ನಮ್ಮ ದೇಶದಲ್ಲಿ ಜನವಾದರೆ ಸಿಗದ ಹಾಗೇ

ದಮ್ಮಿನ ಪ್ರಕಾರ ಬಹಳ ಇವೆ.

ಆದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮನಾಗಿ ಗುಣಕಾರಿಯಾಗದು. ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ನೂರಾರು—ದಮ್ಮಿನವರಿಗೆ— ಪುರೋಹಿತ ಶ್ವಾಸಹಾರಿಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವತರದ್ದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢ ವಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು

ಎಫಿಡ್ರೀಮಿನ ಗುಳಿಗೆ ಹೊಗೆಯ ಔಷಧ ಇಂಜಕ್ಷನ್‌ಗಳಂಥ ದಮ್ಮು ತಾತ್ಕಾಲಿಕ ನಿಲ್ಲಿಸುವ ಮುಸ್ಕಳ ಔಷಧಗಳ ನನಗೆ ಗೊತ್ತಿದ್ದು ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸಹಾರಿಯನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು. ಅವರೆಲ್ಲರಿಗೆ ದಮ್ಮನ್ನು ನಿಧಾನ ಆದರೂ ಪೂರ್ಣ ಗುಣಮಾಡುವಂಥ ಪುರೋಹಿತ ಶ್ವಾಸ

'ಓವಲ್‌ಟಿನ್ನು' ಪುಷ್ಟವಾದ

ಚಟುವಟಿಕೆ

ವರನಿಗೆ ದಕ್ಷಿಣೆ

ಲೇಖಕಿ ಪದ್ಮ

[illegible] ನಾರಾಯಣರಾಯರಿಗೆ ಸರಕಾರಿ ಕೆಲಸದಲ್ಲಿ ಹದಿನೈದು ವರ್ಷಗಳ 'ಸರ್ವಿಸ್' [illegible] ಅವರಿಗೊಂದು ಘನ [illegible] ಕೆಲಸವೆಂದು ಭಾರವಾದ. ವೇತನವೂ [illegible] ಆದರೆ ಆ ವೇತನದ ಭಾರವು [illegible] ವಿಶಾಲವಾದ ಕುಟುಂಬದ ಪೋಷಣೆ [illegible] ಬರುತ್ತಿದ್ದಿಲ್ಲ. ಹೆಂಡತಿ, [illegible] ಮಕ್ಕಳು ಹೆಂಡತಿ ತಾಯಿ, ತಮ್ಮನ [illegible] ಮಕ್ಕಳು ಬೇರೆ, ಅಲ್ಲದೆ ಓರ್ವ ವಿಧವೆ [illegible] ಒಬ್ಬ ಹುಡುಗ, ಆ ಮೇಲೆ [illegible] ಹೋದವರು, ನೆಂಟರು ಇಷ್ಟರು, [illegible] ದಾನಧರ್ಮ, ಇನ್ನೆಲ್ಲಾ ಅವರು [illegible]ಬೇಕು. ನಾರಾಯಣರಾಯರು ಸ್ವಭಾವದಿಂದ (ನಟನೆಯಿಂದಲ್ಲ) ಒಳ್ಳೆ ಮನುಷ್ಯರು, ವಿಶಾಲ ಹೃದಯಿಗಳು, ಧರ್ಮ ಪರಾಯಣರು, ಮೇಲೆ ಸ್ವಾಭಿಮಾನಿಗಳು ಅಷ್ಟು ಇಲ್ಲದೆ ಇದ್ದರೆ ಅವರು ತನ್ನ ಪತ್ನಿ ಕಾಟಕ್ಕೆ ಬೆಚ್ಚಿ, ವಿಧವೆ ತಂಗಿಯನ್ನು ಮನೆಯಿಂದ ಎಂದೋ ಹೊರಡಿಸುತ್ತಿದ್ದರು. ಇರಲಿ ರಾಯರಿಗೆ ಐದು ಗಣ್ಯಾದ್ಯ ಮಕ್ಕಳು—ಮೂರು ಹೆಣ್ಣು [illegible]. ವಿಮಲೆಯು ಹಿರಿಯವಳು [illegible] ಮೇಲಿನ ತ್ರಿಕ ಈರ್ವರಲ್ಲಿ ಒಂದು ಹೆಣ್ಣು [illegible]. ವಿಮಲೆಯು ಈಗ ಶಾಲೆಯ ಮೇಲಿನ [illegible]ಗಳಲ್ಲಿ ಓದುತ್ತಿದ್ದಳು—ಹೆಣ್ಣು ಮಕ್ಕಳ [illegible] ಶಿಕ್ಷಣದ ಶಾಲೆಯೊಂದರಲ್ಲಿ ರೂಪಿನಲ್ಲಿ ಅವಳು ತನ್ನ ಜೊತೆಗಾತಿಯರ ಮಾತ್ರವಲ್ಲ ಎಲ್ಲರ ಮೆರಗು ಮನ್ನಣೆಗೆ ಪಾತ್ರಳಾಗಿದ್ದಳು. ಹಾಗೆಯೇ ವಿದ್ಯೆಯಲ್ಲಿಯೂ, ಬುದ್ಧಿಯಲ್ಲಿಯೂ ಅವಳು ತನ್ನ ಉಪಾಧ್ಯಾಯಿನಿಯರ ಮೆಚ್ಚುಗೆ ಗೌರವಗಳನ್ನು ಪಡೆದಿದ್ದಳು

ಮಕ್ಕಳು ಚಿಕ್ಕವಿರುವಾಗ ಆನಂದದಿಂದ ಕಾಲಕಳೆದ ನಾರಾಯಣರಾಯರಿಗೆ ಈಗ ಅದೇ ದಿನಗಳು ವ್ಯಸನದಲ್ಲಿ ಮುಳುಗಿಸುವಂತವುಗಳಾದವು ಸಂಸಾರ ಭಾರದೊಡನೆ ಅವರಿಗೆ ಈಗ ಚಿಂತೆಯ ಭಾರವೂ ಹಿಡಿದಿವೆ ಮನೆಗೆ ಬಂದೊಡನೆ ಅವರಿಗೆ ಹೆಂಡತಿ ಕಾಟ ಈಗ ಅವರ ವಿಧವೆ ತಂಗಿಯನ್ನು ಹೊರಗೆ ಹಾಕುವುದಕ್ಕಲ್ಲ, ಸೌಭಾಗ್ಯವತಿಯೂ, ತಾರ [illegible] ಕಳೂ ಆದ ತನ್ನ ಮಗಳು ವಿಮಲೆಯನ್ನು ಹೊರಹಾಕಬೇಕೆಂದು. ವಿವಾಹ ಪ್ರಾಯಸಮರ್ಥೆಯಾದ [illegible]ಗ್ಯವಾಡಿಸಿ, ಓರ್ವ ಅಳಿಯನನ್ನು ಮಾಡಿಕೊಂಡು ಮೆರೆಯಬೇಕೆಂಬುದೇ ಅವಳ ಆಶೆಯಾಗಿತ್ತು ಮಗಳ ಶಿಕ್ಷಣದ ಕಡೆಗೆ ಅವಳ ಲಕ್ಷ್ಯವು ಇರಲಿಲ್ಲ ಎಷ್ಟೋ ಸರ್ತಿ ಅವಳು ಸ್ತ್ರೀ ಶಿಕ್ಷಣ ಪದ್ಧತಿಯನ್ನು ಪ್ರಚಾರ ಮಾಡಿದವರನ್ನು, ದೇವರ ಮುಂದೆ ನಿಂತು ಶಪಿಸಿದ್ದಳು ಇವಳಿಗೆ ವಿರೋಧವಾದ ಮನೋಪ್ರಕೃತಿಯುಳ್ಳ ನಾರಾಯಣರಾಯರು ಮೊದಮೊದಲು ಇವಳ ಟೀಕೆ ಟಿಪ್ಪಣಿಗೆ ಲಕ್ಷ್ಯ ಕೊಡುತ್ತಿರಲಿಲ್ಲವಾದರೂ, ವಿಮಲೆಯು ತನ್ನ ಹದಿನೇಳನೇ ವಯಸ್ಸನ್ನು ದಾಟುತ್ತಿರುವಾಗ ಅವರ ನಿಜವಾದ ಚಿಂತೆಗೆ ಆರಂಭ

ವಿಮಲೆಯು ಮೆಟ್ರಿಕ್ ಪರೀಕ್ಷೆಯಲ್ಲಿ ಶ್ರೇಷ್ಠ ತರಗತಿಯಿಂದ ಉತ್ತೀರ್ಣಳಾದಳು ಇನ್ನೂ ಉಚ್ಚ ಶಿಕ್ಷಣದ ಅಗತ್ಯವು ಅವಳಿಗೂ ಅವಳ ತಂದೆಗೂ ತೋರಲಿಲ್ಲವಾದುದರಿಂದ, ಅವಳು ವಿದ್ಯಾಭ್ಯಾಸವನ್ನು ಅಷ್ಟಕ್ಕೆ ಮುಗಿಸಿದಳು ಗೃಹಕೃತ್ಯದಲ್ಲಿ ಬಹಳ ನಿಪುಣೆಯಾದ ವಿಮಲೆಯಾದರೂ, ತನ್ನ ಕಸೂತಿ, ಸಂಗೀತ ಈ ಅಭ್ಯಾಸಗಳೊಂದಿಗೆ, ತಾಯಿಯ ಜೊತೆಯಲ್ಲಿ ಮನೆ ಕೆಲಸದಲ್ಲಿ ಸಹಕರಿಸುತ್ತಿದ್ದಳು. ತಾಯಿಯು ಮಗಳನ್ನು ತುಂಬಾ ಪ್ರೀತಿಸುತ್ತಿದ್ದಳಾದರೂ, ಕೆಲಸಮಯ ವಿಮಲೆಯು ಸಮಾಜದ ಕ್ರಮ ಕಟ್ಟಳೆಗಳ ಮೇಲೆ ಮಾಡುತ್ತಿದ್ದ ಟೀಕೆಗಳಿಗೆ ರೋಷವಟ್ಟು ಅವಳನ್ನು ಬೈಯುತ್ತಿದ್ದಳು.—

"ಆ ತಂದೆಯ ಮಗಳು ನೀನು ಖರೆ." ಎಂಬ ಮಾತುಗಳನ್ನು ಅವಳು ತಂದೆ ಮಗಳ ಖಂಡನೆಗಾಗಿ ಆಗಿಂದಾಗ್ಗೆ ಉಪಯೋಗಿಸುದನ್ನು ಕೇಳಬರುತ್ತಿತ್ತು.

ಅಂದು ನಾರಾಯಣರಾಯರು ಆಫೀಸಿನಿಂದ ಮನೆಗೆ ಬಂದರು "ಅಲ್ಲಾ, ನಿಮಗೆ ಇನ್ನು ಯಾವಾಗ ಬುದ್ಧಿ ಬರುತ್ತೋ ಅಂತ ನನಗೆ ಒಂದೆ ಯೋಚನೆ'' ರಾಯರ ಅರ್ಧಾಂಗಿಯು ಪ್ರಾರಂಭ ಮಾಡಿಯೇ ಬಿಟ್ಟಳು

"ಅಲ್ಲ ಅಂದ್ರೆ, ಮನೆಯಲ್ಲಿ ಹೆಣ್ಣು ಮಗು ಬೆಳೆದಿದೆ, ಅದಕ್ಕೆ ಮದುವೆ ಆಗಬೇಕು, ಹುಡುಗನಿಗೆ ಆಗಲೇ ಹದಿನಾಲ್ಕು ವರುಷ ದಾಟಿತು, ಮುಂಜಿಯಾಗಬೇಕು ಒಂದೂ ಇಲ್ಲ ನೀವು, ನಿಮ್ಮ ಆಫೀಸು ಮತ್ತೆ ಪೇಪರು—ಇದೇನೋ ಪೇಪರಿನಲ್ಲೆಲ್ಲಾ ಬರೆದಿರುವುದು''

"ಏನೇ ಅದು ಸುಮ್ಮನೆ ಹರಡುತ್ತಿಯಾ'' ಎಂದು ರಾಯರು ಕಿಂಚಿತ್ ಕೋಪಗೊಂಡಂತೆ ನುಡಿದರು

"ಏನೆಂದು ಬಿಡಿಸಿ ಹೇಳಲಿ, ಅಯ್ಯೋ ದೇವರೇ ನನ್ನನ್ನೇತಕ್ಕೆ ಹುಟ್ಟಿಸಿದೆ, ಹುಟ್ಟಿಸಿ ಮಕ್ಕಳನ್ನೇತಕ್ಕೆ ಕೊಟ್ಟೆ ಈಗಲಾದರೂ ಇವರ ಎದುರಿನಲ್ಲಿಯೇ ಕೊಂಡುಹೋಗಬಾರದೇ ದೇವಾ! ಕಣ್ಣೀರ ಧಾರೆಯು ಅವಳ ಸೀರೆ ಸೆರಗನ್ನು ಒದ್ದೆ ಮಾಡಿತು

ರಾಯರ ಕೋಪವು ಅಣಗಿತು ಅವರೂ ತಾಪಕ್ಕೆ ಇಳಿದರು ಮೌನವಾದರು ಪತ್ರಿಕೆಯನ್ನು ಮೇಜಿನ ಮೇಲೆ ಬಿಸುಟು ಯೋಚನೆ ಮಾಡುತ್ತ ಕುಳಿತರು ನಾನೇನು ಮಾಡಲಿ ಹೇಳು, ಮದುವೆ ಎಂದರೆ ಆಟವೆ?' ಈಗ ರಾಯರು ಗಂಭೀರಭಾವದಿಂದ ಮಾತನಾಡತೊಡಗಿದರು.

"ಕನಿಷ್ಠಪಕ್ಷ ಒಂದೂವರೆ ಸಾವಿರ ರೂಪಾಯಿಗಳಾದರೂ ಬೇಡವೆ, ಮನೆಖರ್ಚಿನ ವಿಚಾರ ನಿನಗೆ ಗೊತ್ತಿದೆ, ಅಂದ ಮೇಲೆ ಈಗ ಹಣವನ್ನೆಲ್ಲಿಂದ ತರಹೋಗೋಣ ಹೇಳು ಮತ್ತೆ

ವ ಕ್ತು ಹಣವಿಲ್ಲದೆ, ಮಗಳ ಮದುವೆಯನ್ನು ಮಾಡಬೇಕೆಂದಿರುವಿಯೊ, ಸರಿಯಪ್ಪಾ, ನನ್ನ ಅಪ್ಪನ ಹತ್ತಿರ ತೆಗೆದುಕೊಂಡಿರಲ್ವಾ, ಒಂದು ಸಾವಿರ ರೂಪಾಯಿ ವರದಕ್ಷಿಣೆ, ಹಾಗೆ ಈಗ [illegible] ಮಗಳಿಗೂ ಕೊಡದಿದ್ದರೆ, ಯಾರು ತೆಗೆದುಕೊಂಡ ಹೋಗುತ್ತಾರೆ''

"ಎಲ್ಲಾ ಹೌದು, ಹಣದ ವಿಚಾರ ಹೇಳು'' ರಾಯರ ಸಲಹೆ ಕೇಳುವರು

"ಬೇಡಾ ನನಗೇನು, ಎಲ್ಲಿಯಾದರೂ ಜಾತಿ ಕೆಟ್ಟುಹೋಗಲಿ ನನಗೇನು? '

ನಾರಾಯಣರಾಯರು ಪುನಃ ಯೋಚನೆಗೆ ತೊಡಗುವರು

ಈ ಸಮಯದಲ್ಲಿ ವಿಮಲೆಯು ಮಹಡಿಯಲ್ಲಿ ತನ್ನ ಸಖಿಯರೊಂದಿಗೆ ಸಂಗೀತವಾಡುತ್ತಿದ್ದಳು ಗೋಧೂಳಿ ಸಮಯದ ಆ ಪ್ರಶಾಂತ ವಾತಾವರಣವು ಅವಳ ಸಂಗೀತಕ್ಕೆ ಹುರುಪನ್ನೂ ಸ್ಫೂರ್ತಿಯನ್ನೂ ಕೊಟ್ಟಿತು ಅವಳ ಕಂಠದಿಂದ ಹೊರಸೂಸುತ್ತಿದ್ದ ಆ ಆನಂದಮಯವಾದ ಕಲ್ಯಾಣರಾಗದ ಇಂಪು ನಾರಾಯಣರಾಯರ ವ್ಯಾಕುಲಚಿತ್ತ ಹೃದಯವನ್ನು ಹೊಕ್ಕು, ಒಂದು ಕ್ಷಣಕ್ಕೆ ಅದು ಉಬ್ಬಿತು ಮರುಕ್ಷಣಕ್ಕೆ ಅವರಲ್ಲಿ ಆ ರಾಗವನ್ನು ಹೊರಡಿಸಿದ ವಿಮಲೆಯ ನೆನಪು ಬಂದೊಡನೆ ಅವರ ಉಬ್ಬಿದ ಹೃದಯವು ಕುಗ್ಗಿತು ತನಗಾಗಿ ತನ್ನ ಮಾತಾಪಿತೃಗಳು ಪಡುತ್ತಿರುವ ಸಂಕಷ್ಟಗಳ ಅರಿವು ಆ ನಿಷ್ಕಲಂಕ ವಿಮಲೆಗೆ ಆಗಲಿಲ್ಲ ಅವಳು ತನ್ನ ಗಾನದಲ್ಲಿ ತಲ್ಲೀನಳಾಗಿದ್ದಳು

ಇರಲಿ

ಆ ಊರಲ್ಲಿ ನಾರಾಯಣ ಭಟ್ರೆಂದರೆ ಬಹಳ ಜನಪ್ರಿಯರು ಕಾರಣ, ಊರಿನ ಯಾವುದೇ ಶುಭಾಶುಭ ಸಮಾರಂಭಗಳೆಲ್ಲ ಆಗಲಿ ಅಲ್ಲಿ ಅವರು ಹಾಜರ್. ಮದುವೆ ಯಾ ಮರಣ ಉಪನಯನ ಅಥವಾ ಉಪಶಮನ, ಶ್ರವಣ ಇಲ್ಲವೆ ಶ್ರಾದ್ಧ, ಇವುಗಳು ಅವರಿಲ್ಲದೆ ಅಪೂರ್ಣವೆನ್ನಲೇ ಬೇಕು. ಹೆಚ್ಚಾಗಿ ಇವುಗಳೆಲ್ಲಾ ಕಾರಣಭೂತರೂ, ನಿರ್ವಾಹಕರೂ ಅವರೇ ಆಗಿರುತ್ತಾರೆ ಇದರಲ್ಲಿ ಯಾವುದೂ ಸಿಗದಿರುವಾಗ ಅವರಿಗೆ ಬೇರೆ ವ್ಯಾಪ್ತಿಯೂ ಇದೆ—ಅದರೆ ಅವರ ಜೀವನದ ಮುಖ್ಯ ದಾರಿ ಇವಿಷ್ಟು. ಜಾತಕದ ಮಟ್ಟಿಗೆ ಅವರೇ ಜ್ಯೋತಿಷ್ಯರು ಅವರು ಎರಡು ಜಾತಕಗಳನ್ನು ಕೈಯಲ್ಲಿ ಹಿಡಿದರೆಂದರೆ, ತಾರಾಮಂಡಲದ ನಕ್ಷತ್ರಗಳು ತಮ್ಮ ಸ್ಥಾನಗಳನ್ನು ಬಿಟ್ಟು, ಒಳ್ಳೆ ಮೇಳಾಮೇಳಿಯಾಗುವಂತೆ ಸೇರಿಕೊಳ್ಳುವುವು ಒಂದುವೇಳೆ ಅವುಗಳಾಗದಿದ್ದಲ್ಲಿ ಇವರು ಹಾಗೆ ಮಾಡಿ ತೋರಿಸುತ್ತಾರೆ ಅಂತೂ ಅವರು ಕೈಕೊಂಡ ಸಾಹಸವು ಇಷ್ಟರ ವರೆಗೆ ನಿಷ್ಫಲವಾಗಲಿಲ್ಲ ಇದರಿಂದ ಊರಿನವರಿಗೆ ಇವರ ಮೇಲೆ ತುಂಬಾ ಭರವಸೆ ಮನೆಗಳಲ್ಲಿ ಹೆಣ್ಣು ಮಕ್ಕಳು ಬೆಳೆದಿದ್ದಾವೆ ಅಂದ್ರೆ ಸಾಕು ಅಲ್ಲಿ ನಾರಾಯಣ ಭಟ್ರಿಗೆ ಆಹ್ವಾನ ಹೀಗಿರ ಪುದರಿಂದ ಎಷ್ಟು ಜನರು ತಮ್ಮ ಚಿಂತೆಗಳನ್ನು ದೂರ ಇಟ್ಟು ಸುಖವಾಗಿರುವರು ಅಂತಹದೇನೆಂದರೂ ಬಂದರೆ ನಾರಾಯಣ ಭಟ್ರು ಹ್ಯಾಗೂ ಇದ್ದಾರೆ ಇನ್ನೇನು?

ನಾರಾಯಣರಾಯರ ಪತ್ನಿಯರಾದರೂ ನಾರಾಯಣ ಭಟ್ರನ್ನು ಮರೆಯಲಿಲ್ಲ ಅವರನ್ನು ಕರೆಯಿಸಿ ವಿಷಯವನ್ನು ತಿಳಿಸಿದಳು ಕೂಡಲೇ ಭಟ್ರು ತಮ್ಮ ಚೀಲದಲ್ಲಿ ದಾಸ್ತಾನ ಬಿದ್ದ ಹಲವಲ್ಲಿ ಕೆಲವನ್ನುಕೊಟ್ಟು ಇದು ನೋಡಿ ಒಂದೂವರೆ ಸಾವಿರ ಇದು ಒಂದು ಸಾವಿರ ಇದು ಬೇಕಾದ್ರೆ ಆರ್ನೂರು ಇನ್ನೂ ಬೇಕಾದರೆ ಇದೆ, ನೋಡಿ ಇದು ಬರೀ ಮುನ್ನೂರು ರೂಪಾಯ್ದು, ನಿಮಗೆ ಯಾವುದ ಬೇಕೋ ಅದನ್ನು ಚುನಾಯಿಸಿಕೊಳ್ಳಿ ಎಂದರು ಆಗ ತಾನೇ ಅಲ್ಲಿ ಬಂದಿದ್ದ ವಿಮಲೆಯು ಭಟ ಮಾತುಗಳನ್ನು ತಿಳಿಯದಾದಳು

'ಏನಮ್ಮಾ ಇವು ಏನು? ಯಾವುದರ ಟಿಕೇಟುಗಳು? ಸಿನಿಮಾದ್ದೆ? ಅಥವಾ ನಾಟಕದ್ದೆ ಏನಮ್ಮ ಇವು ಎಂದು ಅವಳು ಕೇಳಿದಳು

ಮಗಳ ಮಾತಿಗೆ ಲಕ್ಷ್ಯಗೊಡದ ತಾಯಿಯು ಭಟ್ರೆ, ನಮ್ಮ ಮಟ್ಟಿಗೆ ಆರ್ನೂರದ್ದೆ ಸರಿ ಕಾಣುತ್ತದೆ ಅದರದ್ದೆ ವಿಲೆವಾರಿ ಮಾಡಿಬಿಡಿ ಎಂದಳು

' ಸರಿ, ಹಾಗಾದ್ರೆ ನಾಳೆ ಅವರೆಲ್ಲಾ [illegible] ನೆಗೆ ಬಂದಾಗ ಎಲ್ಲವನ್ನೂ [illegible] ಬರುವ ಹುಣ್ಣಿಮೆಯಾದ ನಂತರಕ್ಕೆ ಲಗ್ನ ನಿರ್ಣದಿಸೋಣ ಅಲ್ಲವೇ ಇಷ್ಟು ಹೇಳಿ ಭಟ್ರು ತಮ್ಮ ಥಂಡಿಬಿಟ್ಟರು.

ಎಲ್ಲವನ್ನೂ ತಿಳಕೊಂಡ ವಿಮಲೆಯು ಪುನಃ ತಾಯಿಯನ್ನು ಕೇಳಿದಳು

"ಇದೇನಮ್ಮಾ ನನ್ನ ಮದುವೆ ವಿಚಾರವೆ?''

'ಹೌದು ಮಗ ಅದೇ ವಿಚಾರ, ಏನು ಮಾಡಲಿ ನಮ್ಮಲ್ಲಿ ಹಣವಿಲ್ಲದೆ ಹೋಯ್ತಲ್ಲಾ, ಇಲ್ಲದಿದ್ದರೆ ನಿನಗೆ ಶ್ರೀಮಂತರಲ್ಲಿ ಹೆಚ್ಚು ವರದಕ್ಷಿಣೆ ಕೊಟ್ಟು ಕೊಡಬೇಕೆಂದು ಆಶೆ ಇತ್ತು ಮಗು, ಏನು ಮಾಡಲಿ ದುರಾದೃಷ್ಟ ದುರಾದೃಷ್ಟ' ಕಳುವಳು

'ವರದಕ್ಷಿಣೆ' ವರದಕ್ಷಿಣೆ, ಹಾಗೆಂದರೇನಮ್ಮಾ'

'ಇದೇನೆ ವಿಮಾ' ನಿನಗೆ ಗಂಡನಾಗತಕ್ಕವನು ನಿನ್ನನ್ನು ಸುಮ್ಮನೆ ಮದುವೆ ಮಾಡಿಕೊಳ್ಳುವನೆ?

"ಓಹೊ ಹಾಗೊ? ಸರಿ ಅಂದರೆ ನನ್ನನ್ನು ಆ ವರನಿಗೆ ಕೊಟ್ಟು, ಅದರ ಮೇಲೆ ಅವನಿಗೆ ದಕ್ಷಿಣೆ ಕೊಡಬೇಕು ಅಲ್ಲವೆ ಅಮ್ಮಾ''

"ಹೌದು ವಿಮಲಾ, ಅಷ್ಟೆ ಅಲ್ಲ ಮದುವೆ ಖರ್ಚು ಕೂಡಾ ನಾವೇ ನೋಡಬೇಕು''

"ಆ ವರನು ಅಷ್ಟು ಗತಿಹೀನನೆ' ಅಮ್ಮಾ ಅದರ ಬದಲಿಗೆ ನನ್ನನ್ನು ಬೇರೆ ಯಾರಿಗಾದರೂ ಸ್ವಲ್ಪ ಗತಿ ಇದ್ದವರಿಗಾದರೂ ಕೊಡಬಾರದೆ ಅಮ್ಮಾ''

"ಏನು ಮಾತಾಡುವೆ ವಿಮಲಾ, ಅವನೇನಾದರೂ ಗತಿ ಇಲ್ಲದೆ ದಕ್ಷಿಣೆ ಕೇಳುವನೆಂದು ತಿಳಿದೆಯಾ, ಇಲ್ಲ, ಗತಿ ನಮಗೆ ಇಲ್ಲ, ಇಲ್ಲದಿದ್ದರೆ ನಿನ್ನನ್ನು . . .

"ಅಮ್ಮಾ ಗರೀಬರಲ್ಲದಿದ್ದರೆ, ಅವರೇಕೆ ವರದಕ್ಷಿಣೆ ಕೇಳುವರು''

" ಛೀ ಬುದ್ಧಿಹೀನೆ, ಸುಡು ನಿನ್ನ ವಿದ್ಯೆ ಅದು ಒಂದು ಕ್ರಮ, ಕಟ್ಟಳೆ ಕಣೆ, ತಿಳಿಯಿತೆ''

"ಸರಿ ಅಮ್ಮ, ಆದರೆ ನಾಗರಿಕ ಲೋಕದಲ್ಲಿ ಈ ಕ್ರಮವನ್ನು ಕೇಳಿದರೆ ನಕ್ಕುಬಿಟ್ಟರಮ್ಮಾ ಆ ವರನಿಗೆ ದಕ್ಷಿಣೆಯನ್ನು ಹುಡುಗಿಯ ಕಡೆಯಿಂದ ಬೇಡಲು ನಾಚಿಕೆಯಾದರೂ ಬೇಡವೇ ಅಮ್ಮಾ?''

'ಸಾಕುಮಾಡು' ನಿನ್ನ ನಾಗರಿಕತೆ, ಗಟ್ಟಿ ಒದರಬೇಡ ಯಾರಾದರೂ, ಕೇಳಿ ನಿನ್ನ ಯೋಗ್ಯತೆಗೆ ಬೆಲೆ ಕಟ್ಟಿಯಾರು, ತಿಳಿಯಿತೆ, ಇಂದು ನಾಳೆ ಮದುವೆಯಾಗ ಪವಳು ನೀನು ಒಂದಿಷ್ಟು ನಾಚಿಗೆ ಬೇಡವೇನೆ ನಿನಗೆ, ನಡೆಯಾಚೆ' ಸಿಡಿಸಿಡನೆ ಚಡಪಡಿಸುವಳು ವಿಮಲೆಯು ತನ್ನ ಶಾಂತತೆಯನ್ನು ಬಿಡಲಿಲ್ಲ ಅವಳ ಮನಸ್ಸಿನಲ್ಲಿ ಪ್ರಚಂಡವಾದ ಯೋಚನಾ ತರಂಗಗಳು ಎದ್ದು ಬಿದ್ದುವು ಬಿದ್ದು ಪುನಃ ಎದ್ದುವು ಆಗಿನ ಅವಳ ಭಾವವು ಯಾವುದೋ ಒಂದು ನಿರ್ಧಾರವನ್ನು ಮಾಡುವಂತೆ ಸೂಚಿಸುತ್ತಿತ್ತು ಅವಳು ಅಲ್ಲಿಂದ ಎದ್ದು ಹೋದಳು

ಮರುದಿನ ಭಟ್ರ ಸವಾರಿಯು ವರನ ಕಡೆಯವರೊಂದಿಗೆ ನಾರಾಯಣರಾಯರ ಮನೆಗೆ ಚಿತ್ತೈಸಿತು. ಅವರ ವಿಮಲೆಯನ್ನು ನೋಡಿದರ 'ಕಲಿತ ಹುಡುಗಿ, ನಮಗೆ ಹೇಳಿದವಳು ಫ್ಯಾಶನಿನವಳ ಎಂದು ಅವರು ಟೀಕಿಸಿದರು ಆದರೆ ಭಟ್ರ ಒತ್ತಾಯಕ್ಕೆ ಸುಮ್ಮನಿದ್ದರ ರೂಪಾಯಿ ವಿಚಾರ ಬಂತ ಇನ್ನೆರಡು ದಿವಸಗಳಲ್ಲಿ ಕೊಟ್ಟರೆ ಆಗದೆ, ಈಗ ಅನುಕೂಲವಿಲ್ಲ,' ಎಂದೂ ನಮ್ಮ ರಾಯರ ನಾವು ಬರುತ್ತೇವೆ ಎಂದಿಷ್ಟು ಹೇಳಿ ನೆಂಟರು ಹೊರಟವರು ಆ ಮೇಲೆ ಈ ಕಡೆ ತಿರುಗಿದ್ದು ಯಾರೂ ನೋಡಲಿಲ್ಲವಂತೆ—ಇರಲಿ ಇಂತಹ ನಾಲ್ಕೈದು ಸಂದರ್ಭಗಳು ನಡೆದುವು ವಿಮಲೆಗೆ ಜೀವನದಲ್ಲಿ ಬೇಸರಿಕೆ ಹುಟ್ಟಿತು. ಅವಳು ಯೋಚನೆ ತೊಡಗಿದಳ ಕಣ್ಣು ಮುಚ್ಚಿದಳು ದೇವರನ್ನು ಪ್ರಾರ್ಥಿಸಿದಳ ಹೇ ದೇವಾ ನನಗೆ ಧೈರ್ಯವನ್ನು ಕೊಡು ನನ್ನನ್ನು ರಕ್ಷಿಸು, ಈ ಕ್ರೂರ ಕಟ್ಟಳೆಗಳಿಂದ ನನ್ನನ್ನು ತಪ್ಪಿಸು, ನನ್ನಂತೆ ನರಳುತ್ತಿರುವವರನ್ನು ಸಲಹು, ಇದೋ ನಿನಗೆ ಅನಂತ ನಮಸ್ಕಾರಗಳು.

ಇಂದು ನಾರಾಯಣರಾಯರ ಸಂಸಾರದಲ್ಲಿ ವರದಕ್ಷಿಣೆ ಎಂಬುದು ಪ್ರತಿಕ್ಷಣಕ್ಕೆ ಪ್ರತಿಧ್ವನಿಗೈಯುತ್ತಿದೆ [illegible] ಎದೆಯ ಬಡಿತದೊಂದಿಗೆ ಹೊರ ಬೀಳುತ್ತಿತ್ತು ಸರಳವಾಗಿ ಶಾಂತಿಯಿಂದ ಮುಂದುವರಿಯುತ್ತಿದ್ದ ಅವರ ಸಂಸಾರ ಯಾತ್ರೆಯ ಹೆದ್ದಾರಿಯಲ್ಲಿ ವರದಕ್ಷಿಣೆ ಎಂಬ ಸಮಾಜ ಕಟ್ಟಳೆಯು ಒಂದು ಅಸಾಧ್ಯವಾದ ಪರ್ವತದಂತೆಯೂ ದಾಟಲಸಾಧ್ಯವಾದ ಸಾಗರದಂತೆಯೂ, ಎದುರು ಬಂದಿರುತ್ತದೆ ಮುಂದುವರಿಯುವ ಉಪಾಯ ಕಾಣದೆ ಕಂಗೆಟ್ಟರವ ಯಾತ್ರಿಕರು ಮೂಕರಾಗಿರುವರು

ವಿಮಲೆಯು ತನ್ನ ನಿರ್ಧಾರದ ನಿರ್ವಹಣಕ್ಕಾಗಿ ಕಳವಳಗೊಂಡ ತನ್ನಚಿತ್ತದಶಾಂತಿಗಾಗಿಯೂ ಸಮಾಜವು ತನ್ನ ಮಾತೃಪಿತೃಗಳ ಮೇಲೆ ಹೊರಿಸಿದ ಕ್ರೂರ ಕಟ್ಟಳೆಗಳಿಗೆ ಬಲಿದಾನವಾಗಿ ತನ್ನ ಪವಿತ್ರ ದೇಹವನ್ನು ಕಾವೇರಿಮಾತೆಯ ಪವಿತ್ರ ಉದಕದಲ್ಲಿ ಬಲಿದಾನ ಮಾಡಿದಳು ಅವಳು ಬರೆದಿಟ್ಟ ಪತ್ರವೊಂದು ಸಮಾಜಸ್ಥರಿಗೆ 'ಪ್ರಿಯ ಮಾತೃಪಿತೃಗಳಿರಾ, ಸಮಾಜದ ಕ್ರೂರ ಕಟ್ಟಳೆಗಳೆಂಬ ಪಿಶಾಚದ ಕೈಗೆ ಸಿಲುಕಿರುವಂತಹ ಪುಣ್ಯಾತ್ಮರುಗಳೇ!, ನಿಮ್ಮ ಸಕಲ ತಾಪಕ್ಕೆ ಕಾರಣಭೂತಳಾದ ವಿಮಲೆಯು ಇಂದು ಅದನ್ನು ಪರಿಹರಿಸಲು ತನ್ನಪ್ರಾಣವನ್ನು, ಸಮಾಜದ ದೆಸೆಯಿಂದಾಗಿ ಉಂಟಾದ ಅಗ್ನಿಕುಂಡದಲ್ಲಿ ಬಲಿದಾನ ಮಾಡಿದಳು ಇನ್ನೆಷ್ಟು ನನ್ನ ಭಗಿನಿಯರು ಬಲಿದಾನ ಮಾಡುವರೋ ದೇವರೇ ಗತಿ. ಈಗಲಾದರೂ ಸಮಾಜವು ಕಣ್ಣು ತೆರೆಯಲಿ.'

—ವಿಮಲೆ.

THE 'POPULAR' AGAIN!

NOW WITH

NEW PLANS

Progressive Benefit Assurance
Deferred Assurance for Children
Special whole Life Policy
Guaranteed Profit Policy

ADDITIONAL PRIVILEGES

Extended Assurance, Accident Indemnity, Savings Bank Arrangement Loans Considered up-to Paid-up Values, & A special Rebate of as 8/ and Re 1/ per Rs. 1000/ for Assurances of over Rs 3000/ and Rs 5000 respectively

BETTER TERMS

Direct Head Office Connection, Heriditary Renewal Commission Renewals after Termination and other very liberal features.

Economic Management

Bonus Declared Rs 10/ per annum per Rs 1000/

Gilt-Edged Investments

Chief and General Agencies invited for unrepresented areas

Experienced men preferred

Apply right now – The MANAGING DIRECTOR,

The Popular Insurance Company Ltd., H. O. Mangalore.

ಭಯಂಕರವಾದ ಯಾತನೆ!

ಈ ನೋವು ನಿಮ್ಮನ್ನು ತಿಂದುಹಾಕುತ್ತದೆ ಜೀವನದಲ್ಲಿ ಬೇಸರಿಕೆ ಹುಟ್ಟಿಸುತ್ತದೆ ತಾಯಿತನದ ಸಂತೋಷವನ್ನು ಹೋಗಲಾಡಿಸುತ್ತದೆ ಎಚ್ಚರದಿಂದಿರಿ ಇದ

ಋತುಸಂಬಂಧವಾದ ನೋವು!

ಋತುಸಂಬಂಧವಾದ ಅಥವಾ ಮೂತ್ರ ಸಂಬಂಧವಾದ ನೋವನ್ನು ನಿವಾರಣೆಮಾಡದಿದ್ದರೆ ಹೆಂಗಸಿಗೆ ಸುಖಸಂತೋಷಗಳಿರುವುದಿಲ್ಲ 'ಲೋಧ್ರ'ವನ್ನು ತೆಗೆದುಕೊಂಡು ಆರೋಗ್ಯದಿಂದಲೂ ಸಂತೋಷವಾಗಿಯೂ ಇರಿ ಈ ದಿವಸವೇ ತೆಗೆದುಕೊಳ್ಳಿ. ಪ್ರಾರಂಭಿಸಿ

ಲೋಧ್ರ ಅತ್ಯುತ್ತಮ ಗರ್ಭಾಶಯ ರೋಗ ನಿವಾರಣೆ

ಕೇಸರಿ ಕುಟೀರಂ, ಎಗ್ಮೋರ್ .·. ಮದರಾಸು.

ಮಂಗಳೂರು ಪ್ರವರ್ತಕರು—ಪೋಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

'Dil Roz' (Regd)

'Dil Roz' is a sure cure for Oriental sores local sores, all kinds of deep rooted sores, skin eruptions, Pimples Eczema, Ringworm, Sinus Fistula auxillary Abscess

There is no need of dressing the wounds nor are baths prohibited

Price Rs. 2
Postage extra

TAHIR DIN,
Anarkali, LAHORE

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH WATCHES GTD 3 YEARS. ROUND NICKEL 2/14/- RADIUM DIAL 3/12/-; GOLDEN 3/14/-. SQUARE NICKEL 4/6/-; GOLDEN 4/14/-. RECTANGULAR NICKEL 4/-, GOLDEN 6/- VERY SMALL ROUND NICKEL 5/-, GOLDEN 6/8/-. POSTAGE EXTRA.
V/T. REF ON S. G. T. CO. 180 HARRISON ROAD, CALCUTTA.

ನಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ

ಯಲ್ಲೇ ಕೊಡಿ

BEHAR CHEMICAL WORKS, BHAGALPUR.

ಗೊನೊಕ್ಯೂರು

ಕೆಟ್ಟ ಬಂಗೆ ಸಿಕ್ಕ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ಬೇಕಾಗಿಲ್ಲದ ಔಷಧವಾಗಿದೆ ಒಂದೇ ದಿನದ ಔಷಧ ಉಪಯೋಗದಿಂದ ಗುಣ ಕಂಡು ಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ—ಧಾತು ಪಕ್ವವಿದ್ದು ಹಳದಿ ಬಣ್ಣವಾಗಿ ಹೋಗುವುದು ಶಕ್ತಿಗಂಧಿಗಳ ಸಂಬಂಧವಾಗಿ ಆತೀಯವಾದ ಗುಳ್ಳೆಗಳು ವಿಲೋಪ ಮುಕ್ತವಾಗುವಾಗ್ಯೆ ಉರಿಯುವುದು, ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ **ಗೊನೊಕ್ಯೂರು** ಖಾತ್ರಿಯಾದ ಔಷಧ ಸೀಸೆ 1ಕ್ಕೆ ರೂ 2—0—0

ವ್ಯಾಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ ಪೆಟ್ಟಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ ವಿದ್ಯಾರ್ಥಿಗಳು ತಮ್ಮ ಹಿಡುವಳಿಯಲ್ಲಿಯೇ ಅಸಕ್ತರಾಗಿದ್ದು, ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಿಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು ಇಂದ್ರಿಯ ಸ್ಖಲನ ಮತ್ತು ಜ್ವರಗಳ ದುರ್ಬಲತೆಗೆ ಸಿಲುಕುತ್ತಾರೆ ಅಲ್ಲದೆ ತಮ್ಮ ಹಿರಿಯರ ಕೂಡ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಚುರುಕು ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು ಸೀಸೆ 1ಕ್ಕೆ ರೂ 2-0-0

ಏಜೆಂಟರು—ಷಾ ಕಂಪೆನಿ,
ಗವರ್ನಮೆಂಟ್ ಕೊಲೆಜ್ ಎದುರು
ಮಂಗಳೂರು.

TEST YOUR EYES

By the Electro Ophthalmoscope



All Varities of Frames & Lenses.
AT

The Mangalore Trading Association Ltd.

Sight Testing Ophthalmic Opticians,
Car Street, MANGALORE.

ವಿಶೇಷ ವಾರ್ತೆಗಳು

ಸ್ವದೇಶ

ಬರ್ಮಾ ಪ್ರತಿನಿಧಿಗಳ ಸಭೆಯಲ್ಲಿ ಸರಕಾರವು ಹಣಕಾಸಿನ ವಿಚಾರ ತಂದ ಒಂದು ಸೂಚನೆಯು ಸಂಪೂರ್ಣವಾಗಿ ನಿರಾಕರಿಸಲ್ಪಟ್ಟಿತು.

ಓರಿಸ್ಸಾ ಪ್ರತಿನಿಧಿಗಳ ಸಭೆಯು ಅಲ್ಲಿನ ವಿದ್ಯಾಮಂತ್ರಿಗಳ ಮತ್ತು ಫಾರೆಸ್ಟ್ ಮಂತ್ರಿಗಳ ಮೇಲೆ ಅವಿಶ್ವಾಸದ (no confidence) ಠರಾವನ್ನು ಪಾಸ್ ಮಾಡಿದ ಪ್ರಯುಕ್ತ ಅವರು ರಾಜಿನಾಮೆ ಕೊಟ್ಟಿರುವರು

ಕಡಲೂರಿನಲ್ಲಿ ಓರ್ವ ಹೆಂಗಸು 8 ರೂಪಾಯಿಗಳನ್ನು ಕದ್ದಳೊ ಇಲ್ಲವೊ ಎಂಬುವ ಶಿಕ್ಷೆಗಾಗಿ ಅವಳ ಕೈಯನ್ನು ಕುದಿಯುವ ಎಣ್ಣೆಗೆ ಮುಳುಗಿಸಿ ಅದು ಸುಟ್ಟರೆ ಕದ್ದಳೆಂದೂ, ಸುಡದಿದ್ದರೆ ನಿರಪರಾಧಿ ಇರುವಳೆಂದೂ ತಿಳಿಯುವದೆಂದು ಅವಳ ಕೈಯನ್ನು ಬಲಾತ್ಕಾರದಿಂದ ಎಣ್ಣೆಯಲ್ಲಿ ಮುಳುಗಿಸೆ, ಅದು ಸುಟ್ಟುಹೋಯಿತು. ವಿಶಯವು ಕೋರ್ಟಿಗೆ ತಿಳಿದು, ಅದಕ್ಕೆ ಕಾರಣಭೂತರಾದ ಆ ಹೆಂಗಸಿನ ಕೆಲ ಸಂಬಂಧಿಕರನ್ನು ಒಂದೊಂದು ವರ್ಷಕ್ಕೆ ಕಳುಹಲಾಗಿದೆ

ಸಂಯುಕ್ತ ಪ್ರಾಂತ್ಯದಲ್ಲಿ ಕೆಲವು ಸಮಯದ ಹಿಂದೆ ಓರ್ವ ಹೆಂಗಸು ತನ್ನ ಗಂಡನ ಶವದ ಚಿತೆಯಲ್ಲಿ ಬಿದ್ದು ಭಸ್ಮವಾದಳು ಈ ಪದ್ಧತಿಯನ್ನು ಕೆಲವು ಕೋಮಿನವರು ಈಗಲೂ ಇಟ್ಟುಕೊಂಡಿರುವರಂತೆ

ಪಂಡಿತ ಮದನಮೋಹನ್ ಮಾಲವೀಯರಿಗೆ ಸ್ವಲ್ಪ ದೇಹಾಸ್ವಸ್ಥತೆಯುಂಟಾಗಿದೆ

ಹೋದ ವರ್ಷಕ್ಕಿಂತ ಈ ವರ್ಷ ಬ್ರಿಟಿಷ್ ಸೈನ್ಯದ ಖರ್ಚು 7 ಮಿಲಿಯ ಜಾಸ್ತಿಯಾಗಿದೆ

ಬಿಹಾರಿನ ಮಾಂಘೀರ್ ಜಿಲ್ಲೆಯಲ್ಲಿ ವ್ಯವಸಾಯದ ಕಲಹ ಪ್ರಾಪ್ತವಾಯಿತು ಈ ಸಂಬಂಧದಲ್ಲಿ 100 ಜನ ಕಿಸನ್ (ರೈತರು) ರನ್ನು ಕೈದುಮಾಡಲಾಗಿದೆ

ಶ್ರೀ ಎಂ ಎಸ್ ರಾಯ್‌ರನ್ನು ಮದುವೆಯಾಗಲು ಅಮೇರಿಕಾದ ಯುವತಿಯು ಬೊಂಬಾಯಿಗೆ ಬಂದಿರುವಳು

ಮದ್ರಾಸಿನ ಹೈಕೋರ್ಟಿಗೆ ಇತ್ತೀಚಿಗೆ ಸರ್ ಅಬ್ದುಲ್ ರಹಿಮಾನ್‌ರವರು ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ ಇವರು ದಿಲ್ಲಿಯಲ್ಲಿ ವಕೀಲಿ ವೃತ್ತಿಯಲ್ಲಿದ್ದರು 77 ವರ್ಷ ವಯಸ್ಸಿನವರು

ಬಂಗಾಳ ಸರಕಾರದ ಆಶ್ರಯದಲ್ಲಿ ಇಂಡಸ್ಟ್ರಿಯಲ್ ಕ್ರೆಡಿಟ್ ಕಾರ್ಪೊರೇಶನ್ ಎಂಬ ಕಂಪೆನಿಯೊಂದು ಕಲ್ಕತ್ತಾದಲ್ಲಿ ಸ್ಥಾಪನೆಯಾಗಿದೆ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಹಣಕಾಸಿನ ಅನುಕೂಲತೆಗಳನ್ನು ಕಲ್ಪಿಸಿ ಕೊಡುವುದೇ ಇದರ ಉದ್ದೇಶ್ಯವಿದೆ ಎಂದು ತಿಳಿದುಬಂದಿದೆ.

ಸೀವಲ್ಸ್ ಪಾರ್ಟಿಯ ಮುಖಂಡರಾಗಿದ್ದ ಪೀಠಾಪುರಂನ ಮಹಾರಾಜರ ಮೇಲೆ 7 ಲಕ್ಷ ರೂಪಾಯಿಗಳಿಗೆ ಡಿಕ್ರಿಯಾಗಿದೆ ಅವರಿಗೂ ಮತ್ತು ಗೊಲ್ಲಪ್ರೋಲ್ಲು ಜಮೀನ್ದಾರರಿಗೂ ಯಾವುದೋ ಆಸ್ತಿ ಹಕ್ಕಿನ ಸಂಬಂಧದಲ್ಲಿ ಕೋಕನಾಡ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿತ್ತು ಗೊಲ್ಲಪ್ರೋಲ್ಲು ಜಮೀನ್ದಾರರು ಪೀಠಾಪುರಂನವರ ಮೇಲೆ 7 ಲಕ್ಷಕ್ಕೆ ದಾವಾ ಹೂಡಿದ್ದರು.

ಪಂಜಾಬಿನಲ್ಲಿ ಒಂದು ರೈಲು ಹೋಗುತ್ತಿದ್ದ ಹಾಗೆ ಈರ್ವ ಯುವಕ ಡಕಾಯಿತರು ರೈಲ್ವೆ ಗಾಡಿಯನ್ನು ನುಗ್ಗಿ, ಆಯುಧಗಳಿಂದ ಪ್ರಯಾಣಿಕರನ್ನು ಹೆದರಿಸಿ, ಒಟ್ಟು 80 ರೂಪಾಯಿಗಳು ಅವರಿಗೆ ಸಿಕ್ಕಿದ್ದರೂ, ಸ್ಟೇಶನ್ ತಲ್ಪುತ್ತಲೆ ಅವರು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗ ಹಿಡಿಯಲ್ಪಟ್ಟರು ಅವರಲ್ಲಿ ಕೊಡಲಿಗಳಿದ್ದುವಂತೆ.

ವಿದೇಶ

ಆಸ್ಟ್ರೇಲಿಯದ ಒಂದು ಪ್ರಯಾಣಿಕರನ್ನು ಒಯ್ಯಲು ವಿಮಾನವು ನೆಲಕ್ಕುರುಳಿ 5 ಮಂದಿಗಳು ಸ್ವರ್ಗ ಸೇರಿದರು.

ಮೆಂಚಸ್ಟರಿನಲ್ಲಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಹಲ್ಲು ಚಿಕಿತ್ಸಾಲಯವನ್ನು ತೆರೆಯುವರು

ರುಮೇನಿಯದಲ್ಲಿ ಸದ್ಯಕ್ಕೆ ಎಲ್ಲಾ ಶಿಕ್ಷಣ ಕೇಂದ್ರಗಳೂ ಮುಚ್ಚಲ್ಪಟ್ಟವೆ ವಿದ್ಯಾರ್ಥಿಗಳು ರಾಜಕೀಯದಲ್ಲಿ ಕೈಹಾಕಬಾರದೆಂಬುದಕ್ಕೆ ಮಾಡಿದ ನವ ಕಾನೂನು ಇದಂತೆ

ಸ್ಪೆಸಿಫ್ ಸಮುದ್ರದಲ್ಲಿ ಗುರುತು ಗೊತ್ತಾಗದಿದ್ದ ಒಂದು ಹಡಗಿಗೆ ಬೆಂಕಿ ತಗಲಿ ಅದು ಪೂರ್ಣ ಸುಟ್ಟುಹೋಗಿರುತ್ತದೆ ಅನೇಕ ಪ್ರಯಾಣಿಕರು ಕಾಣೆಯಾಗಿರುವಂತೆ

ವಾಶಿಂಗ್ಟನ್‌ನಲ್ಲಿ ನಡೆಯುವ ಟೆಕ್ಸ್‌ಟೈಲ್ ಕಾನ್ಫರೆನ್ಸಿಗೆ ಹಿಂದೂಸ್ಥಾನದ ಪರವಾಗಿ ಬಿ ಎಂ ಬಿರ್ಲಾ ಮತ್ತು ಆರ್ ಆರ್ ಬಾಖಲೆ ಇವರುಗಳು ಹೋಗಲಿರುವರಂತೆ

ರಷ್ಯಾ ದೇಶದ ಶಾಲೆಗಳಲ್ಲಿ ಹುಡುಗರಿಗೆ ಕಡ್ಡಾಯ ಸೈನ್ಯ ಶಿಕ್ಷಣ ಕೊಡಿಸುವರೆ ಏರ್ಪಾಡುಗಳಾಗಿವೆ

ಇಟೆಲಿಯ ಜನಸಂಖ್ಯೆಯು ಬಹಳ ಕಡಿಮೆಯೆಂದು ತೋರಿರುವುದರಿಂದ ಸರಕಾರವು ದೀರ್ಘ ಯೋಚನೆಯಲ್ಲಿ ಬಿದ್ದಿದೆ

ಪ್ರಖ್ಯಾತ ಭಾರತೀಯ ನಾಟ್ಯ ಶಿರೋಮಣಿಯಾದ ಉದಯಶಂಕರನು ಮೊನ್ನೆ ಅಮೇರಿಕಾದಿಂದ ಇಂಗ್ಲೆಂಡಿಗೆ ಬಂದಿರುವನು ಇವನನ್ನು ಸತ್ಕರಿಸುವುದಕ್ಕೆ ಒಂದು ಸ್ವಾಗತ ಸಮಾರಂಭವು ಏರ್ಪಡಿಸಲ್ಪಟ್ಟಿದೆ ಇಂಡಿಯದ ಹೈ ಕಮಿಶನರಾದ ಸರ್ ಫಿರೋಜ್ ಖಾನ್ ನೂನ್‌ರವರು, ಮತ್ತು ವಿಲ್ಲಿಂಗ್ಡನ್ ದಂಪತಿಗಳೂ ಇದರಲ್ಲಿ ಭಾಗವಹಿಸುವರೆಂದು ತಿಳಿದು ಬಂದಿದೆ

'ಸ್ಪೆನಿಶ್ ಕಂಟ್ರೋಲ್' ವ್ಯವಸ್ಥೆ

ಸ್ಪೆಯಿನ ಅಂತರ ಕಲಹದಲ್ಲಿ ಹೊರಗಿನ ಯಾವ ಜನಾಂಗವೂ ಭಾಗವಹಿಸಬಾರದೆಂಬ ತೀರ್ಮಾನಕ್ಕೆ ಎಲ್ಲಾ ಜನಾಂಗಗಳೂ ಬಹುಮತದಿಂದ ಒಪ್ಪಿಕೊಂಡವು ನಾನಇಂಟರ್‌ವೆನ್‌ಶನ್ ಸಮಿತಿಯಲ್ಲಿ ಈಗ, ಸ್ಪೆಯಿನಿನಲ್ಲಿ ಇತರ ಜನಾಂಗಿಕರು ಒಳನುಗ್ಗದಂತೆ ಒಂದು ಕಾವಲನ್ನು ಇಡಿಸಬೇಕೆಂಬ ಪ್ರಶ್ನೆಯು ಬಂದಿದೆ ಅದರ ವಿಚಾರವಾಗಿ ಇಂಗ್ಲೆಂಡಿನ ವಿದೇಶೀಯ ವ್ಯವಹಾರ ಕಛೇರಿಯಲ್ಲಿ ನಾನ್ ಇಂಟರ್‌ವೆನ್‌ಶನ್ ಸಮಿತಿಯೊಂದು ಸೇರಿ ಈ ಪ್ರಶ್ನೆಯನ್ನು ಪರ್ಯಾಲೋಚಿಸಿತು

ಇದಕ್ಕಾಗಿ ಒಂದು ಅಂತರರಾಷ್ಟ್ರೀಯ ಸಮಿತಿಯು ಏರ್ಪಾಡಾಗುತ್ತದೆ ಅಂತರರಾಷ್ಟ್ರೀಯ ಸಮಿತಿಯು ಇದರ ಅಧ್ಯಕ್ಷನನ್ನು ನೇಮಿಸುವುದು, ಬ್ರಿಟನ್, ಜರ್ಮನ್ ಫ್ರೆಂಚ್ ರಶ್ಯನ್ ಮತ್ತು ಇಟಲಿಯನ್ ಪ್ರತಿನಿಧಿಗಳನ್ನು ಈ ಸಮಿತಿಗೆ ಕಳುಹಲಾಗುವುದು ಸ್ಪೆಯಿನಿನ ಕರಾವಳಿಗಳಿಂದ ಇತರ ಜನಾಂಗಿಕರು ಒಳನುಗ್ಗದಂತೆ ನೋಡಲು ೫೦೦ ಜನ ಕಾವಲುಗಾರರು ಬೇಕಂತೆ.

ಜುಬ್ಬಲ್ ಪುರದಲ್ಲಿರುವ ಸುಮಾರು 700 ಜಾಡಿ ವ್ಯಾಪಾರಿಗಳು ಮುಷ್ಕರ ಹಿಡಿದಿದ್ದಾರೆ. ಅವರೊಳಗೂ ಪಿಕೆಟಿಂಗ್ ಚಳವಳಿಯನ್ನು ಪ್ರಾರಂಭಿಸಿರುತ್ತಾರೆ.

ಎಂ. ಎ. ಪರೀಕ್ಷೆ ಕೊಡಲು ಎಂಟು ಮಂದಿ 'ಡೆಟಿನ್ಯೂ' ಕೈದಿಗಳಿಗೆ ವಿಶ್ವವಿದ್ಯಾಲಯದವರು ಅಪ್ಪಣೆ ಕೊಟ್ಟಿರುವರು.

ದಿಲ್ಲಿಯಲ್ಲಿ ಕನ್‌ವೆನ್ಶನ್ ಸಿದ್ಧತೆ

ಅನ್ಸಾರಿ ನಗರ ನಿರ್ಮಾಣ

ಸದ್ಯದಲ್ಲೇ ದಿಲ್ಲಿ ನಗರದಲ್ಲಿ ನಡೆಯುವ 'ನೇಶನಲ್ ಕನ್ವೆನ್ಶನ್'ನ ಸಿದ್ಧತೆಗಳು ಭರದಿಂದ ನಡೆಯುತ್ತವೆ ಈ ನೇಶನಲ್ ಕನ್ವೆನ್ಶನಿನಲ್ಲಿ ರಾಷ್ಟ್ರದ ಮುಂದಿನ ಧೋರಣೆಯೇನೆಂಬ ವಿಚಾರವನ್ನು ನಿರ್ಧರಿಸಲಾಗುವುದು. ದಿಲ್ಲಿಯ ಮುಖ್ಯ ರೈಲ್ವೆ ಸ್ಟೇಷನಿನ ಎದುರಿನಲ್ಲಿರುವ ಕ್ವೀನ್ಸ್ ಗಾರ್ಡನ್ಸ್ ಪಾರ್ಕಿನಲ್ಲಿ ಈ ಕನ್ವೆನ್‌ಶನ್ ಸಮಿತಿಯು ಸೇರುವರೆ ದೊಡ್ಡ ಚಪ್ಪರದ ಏರ್ಪಾಡುಗಳಾಗುತ್ತಿವೆ ಆ ಸ್ಥಳಕ್ಕೆ ಡಾ। ಅನ್ಸಾರಿಯವರ ಸ್ಮಾರಕಕ್ಕಾಗಿ ಅನ್ಸಾರಿ ನಗರವೆಂದು ಕರೆಯಲಾಗುವುದು

ಬರುವ ತಾ ೧೯ಕ್ಕೆ ರಾಷ್ಟ್ರಪತಿ ಪಂಡಿತ ಜವಾಹರಲಾಲರು ದಿಲ್ಲಿಗೆ ಆಗಮಿಸುವರು ಅಲ್ಲಿ ಅವರಿಗೆ ಒಂದು ಭಾರಿ ಸ್ವಾಗತವನ್ನು ಕೊಟ್ಟು ಮೆರವಣಿಗೆ ಮಾಡಲು ಏರ್ಪಾಡುಗಳಾಗುತ್ತಿವೆ

ಕನ್ವೆನ್‌ಶನ್ನಿಗೆ ಬರುವ ಪ್ರತಿನಿಧಿಗಳಿಗೆ ಸ್ವಾಗತಸಮಿತಿಯವರು ದಿನಕ್ಕೆ ವಸತಿಗೆ ರೂ ೨।, ಊಟಕ್ಕೆ ಆಣೆ ೧೨ರಂತೆ ಏರ್ಪಾಟು ಮಾಡಿದವರು

ಈ ಅನ್ಸಾರಿನಗರದಲ್ಲಿನ ಚಪ್ಪರವು ೬ ಮೂಲೆಗಳುಳ್ಳದ್ದಾಗಿದ್ದು ೬ ದೊಡ್ಡ ಪ್ರವೇಶ ದ್ವಾರಗಳಿಂದ ಕೂಡಿರುತ್ತದೆ ಚಪ್ಪರದ ಮೇಲೆ ೮೦ ಅಡಿ ಉದ್ದದ ಡೆಯಿಂದ ಕೂಡಿದ ರಾಷ್ಟ್ರಧ್ವಜವು ಹಾರುವುದು ಕಮಲಾ ಗೇಟ್ ನೆಹರು ಗೇಟ್ ಅನ್ಸಾರಿ ಗೇಟ್, ಅಜ್ಮಲ್ ಗೇಟ್ ಅಲಿಫ್ ಗೇಟ್ ಪಾಹೀರ್ ಗೇಟ್ ಎಂಬುದು ದ್ವಾರಗಳ ಹೆಸರುಗಳು

ನ್ಯೂ ತಾ ೧೯ರಲ್ಲಿ ಕಾಂಗ್ರೆಸ್ ಕಮಿಟಿಯ ಕಛೇರಿಯು ಅನ್ಸಾರಿ ನಗರದಲ್ಲಿ ತೆರೆಯಲಾಯಿತು. ಪ್ರತಿನಿಧಿಗಳಿಗೆ ಪ್ರವೇಶ ಪಾಸುಗಳನ್ನು ಇಲ್ಲಿಂದ ಕೊಡಲಾಗುವುವು ಪ್ರೇಕ್ಷಕರ ಪಾಸುಗಳನ್ನು ಸ್ವಾಗತ ಸಮಿತಿಯವರು ಕೊಡುವರು

ಪ್ರೇಕ್ಷಕರಿಗೆ ೧೦, ೫, ೨ ಮತ್ತು ೧ ರೂಪಾಯಿಗಳ ಫೀಯನ್ನು ಹಾಕಿದೆ

ಗಡಿನಾಡಿನ ಗಾಂಧಿಯೆಂಬ ಅಬ್ದುಲ್ ಗಫರ್ ಖಾನ್‌ರವರು ಆಗಲೇ ಇಲ್ಲಿಗೆ ದಯಮಾಡಿಸಿರುತ್ತಾರೆ ಅವರ ತಮ್ಮನಾದ ಡಾ। ಖಾನ್ ಸಾಹೇಬರು ಜತೆಯಲ್ಲಿ ಬರಲಿಕ್ಕೊಂಡಿರುವರು

ಅವಿವಾಹಿತರ ಸಂಸ್ಥೆ

ಬ್ರಿಟಿಷ್ ತರುಣಿಯರ ಸಾಧನೆ!

ಇಂಗ್ಲೆಂಡಿನ ಇಲ್ಫರ್ಡ್ ಎಂಬಲ್ಲಿ ಬ್ರಹ್ಮಚಾರಿಗಳ ಮತ್ತು ಸಂಸ್ಥೆಯೊಂದು ಸ್ಥಾಪಿಸಿರುತ್ತಾರೆ ಅನೇಕ ಅವಿವಾಹಿತ ತರುಣರೆಲ್ಲರೂ ಇದರ ಸದಸ್ಯರಾಗಿ ಸೇರಿರುತ್ತಾರೆ ಅಲ್ಲಿನ ತರುಣಿಯರು ಈಗ ಒಕ್ಕಟ್ಟಾಗಿ ಈ ಕೂಟವನ್ನು ಮುರಿಯುವ ಪ್ರಯತ್ನದಲ್ಲಿದ್ದಾರಂತೆ

ಇಡೀ ಲಂಡನಿನಲ್ಲಿ ಇಂತಹ ಸಂಸ್ಥೆಯು ಒಂದೇ ಇರುವುದಾಗಿರುತ್ತದೆ ಬ್ರಹ್ಮಚಾರಿಗಳಾದವರು ಸ್ತ್ರೀಯರ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಮಾಡಿಕೊಂಡ ಉಪಾಯವಂತೆ

ಈ ಕೂಟದ ಶಿಸ್ತಿನ ಪ್ರಕಾರ, ಅವರ ಯಾವನಾದರೊಬ್ಬ ಸದಸ್ಯನು ಓರ್ವ ತರುಣಿಯ ಹತ್ತಿರ ಮಾತನಾಡುತ್ತಿದ್ದುದು ಕಂಡುಬಂದರೆ ಅವನಿಗೆ ಜುಲ್ಮಾನೆ ವಿಧಿಸಲಾಗುವುದು. ಈ ತಪ್ಪನ್ನು ಅವನು ಮೂರು ಸರ್ತಿ ಮಾಡಿದ್ದಲ್ಲಿ ಅವನನ್ನು ಸದಸ್ಯಗಿರಿಯಿಂದ ತೆಗೆದು ಹಾಕುವರು ಈ ಕೂಟದ ಪ್ರತಿ ಸಭೆಗಳಲ್ಲಿ ಶಿಸ್ತನ್ನುಲ್ಲಂಘಿಸಿದ ಸದಸ್ಯರನ್ನು ಖಂಡನೆ ಮಾಡಿ ಭಾಷಣಗಳಾಗುವುವು.

ಆದರೆ ಅಲ್ಲಿನ ತರುಣಿಯರು ಈಗ ತಮ್ಮ ಶಕ್ತಿಯಲ್ಲಿರುವ ಎಲ್ಲಾ ಸಾಧನೆಗಳಿಂದಲೂ ಈ ಬ್ರಹ್ಮಚಾರಿಗಳನ್ನು ವ್ಯಾಮೋಹಕ್ಕೆ ಗುರಿಮಾಡಲು ಪ್ರಯತ್ನಮಾಡುತ್ತಿರುವುದರಿಂದ ಆ ಬ್ರಹ್ಮಚಾರಿಗಳ ಕೂಟವು ರಕ್ಷಣೆಗಲ್ಲ, ಶಿಕ್ಷೆಗೆ ಎಂಬ ಅಭಿಪ್ರಾಯವು ಹುಟ್ಟಿರುತ್ತದೆ

ಆ ಕೂಟದ ಕೆಲ ಸದಸ್ಯರಂತೂ ಬೇಸಿಗೆ ಕಾಲ ಒದಗುತ್ತಲೇ ಕೂಟದ ಕಾನೂನುಗಳನ್ನು ಮುರಿಯಲು ಸಮಯವನ್ನು ನಿರೀಕ್ಷಿಸುತ್ತಲಿದ್ದಾರೆ ಆ ಸಮಯ ಅಲ್ಲಿನ ತರುಣಿಯರು ವಿವಿಧ ವೇಷಾಲಂಕಾರಗಳಲ್ಲಿ ತಂಡ ತಂಡವಾಗಿ ತಿರುಗಲಾರಂಭಿಸುವರಂತೆ

NOTICE.

In the Court of the Subordinate Judge of South Kanara

O S 97/1936.

Between

M Narayana Chowta (Receiver appointed in O S No 72/1936 on file the of the Sub court, S Kanara) Plff,

and

Kambli Narayana Bhatta and others—Defts

To Defts

No (2) Rama Bhatta alias Rama Narayana Kadilkar Son of Kambli Narayana Bhatta, Hathyadka village Puttur village

No (3) Veereshwara Bhatta alias Veereshwara Narayan Kadilkar (minor by guardian ad litem Hathyadka village

No (6) Chaparamakk Sadashiva Bhatta Son of Rama Bhatta Hathyadka village

No (8) Subraya Bhatta, (9) Govinda Bhatta (10) Sadashiva Bhatta—Sons of murankallu Vinayaka Bhatta of whom 9 and 10 are minors by guardian ad litem and mother Subhadra alias Parwathi, Shibaje village, Puttur Taluk

Notice is hereby given that the above suit filed by the plaintiff as Receiver appointed to collect the outstanding due to the late Trasi Devi Ra alias Ananthavva under a registered indemnity bond for Rs 4000 dated 31-10-1924 executed by the 1st Defendant also as guardian of his sons defendants 2 and 3 in his favour is posted to 30-3-1937 for hearing You may appear at 11 A M on the said date in person or by pleader and oppose the claim failing which the suit will be proceeded with exparte in your absence

Mangalore, 6-3-1937 B Srinivas Pai, Vakil for Plff

WANTED.

For Adarsha Vanita Vidyalaya (girl school) a fully qualified and experienced lady teacher with B A, B T or L T degree.

Apply stating age qualifications, testimonials and salary expected to,

The Secretary, *Seva Samiti,* Margao, goa P O. 48.

ಪಡನಶಾಸ್ತ್ರ ಎಂಬ ಪ್ರೇಮ ರಹಸ್ಯ

ಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಅನೇಕ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ಸ್ವಭಿಚಾರಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೊನೆಗೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು ಕ್ರಯ ರೂ 1

ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ 287 ಮದರಾಸ್

ವಿವಾಹ, ಅವಲೋಕನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೆ? ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,
ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ ಮಂಗಳೂರು

ESTD 1931

12 ವರ್ಷದೊಳಗಿನ ಬಾಲಕಬಾಲಿಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್ ಹಾರ್ಮೋನಿಯಮ್ ಎಕ್ಸ್‌ಪರ್ಟ್
ಮತ್ತು ಉಭಯ ಸಂಗೀತವಿದ್ಯಾವಿಶಾರದ

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ

5 ಅಂಕಗಳುಳ್ಳ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ

ಬರೆದವರು —ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು । ಯೋಗಿ ಹೃದಯದೊಳಲ್ಲ ಸೂರ್ಯನೊಳಗಿಲ್ಲ ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು ನಾರದ ಮುನಿವರ." ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳಿವೆ ಕಥಾನಿರೂಪಣದ ಚಮತ್ಕಾರ ಭಾಷೆಯ ಲಾಲಿತ್ಯ ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ —12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ 1. ಎಲ್ಯಾಯ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೮ನೆಯ ಧಾತು ಸಂವತ್ಸರದ ಫಾಲ್ಗುಣ ಶು ೧ ಶನಿವಾರದಿಂದ ಫಾಲ್ಗುಣ ಶು ೭ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ ಮಾರ್ಚ (ಸ ೧೩)

ದಿನಾಂಕ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
13	ಶನಿ	೧	೪೫	ಪೂ ಭಾದ		೩೦	[illegible]
14	ರವಿ	೨	೪೦	ಉ ಭಾದ್ರ	೫	೧	
15	ಸೋ	೩	೩೪	ರೇವತೀ	೭	೨	
16	ಕುಜ	೪	೨೮	ಭರಣಿ	೫೩	೩	
17	ಬುಧ	೫	೨೨	ಕೃತ್ತಿಕ	೪೯	೪	
18	ಗುರು	೬	೧೬	ರೋಹಿಣಿ	೪೫	೫	
19	ಶುಕ್ರ	೭	೧೧	ಮೃಗಶಿರ	೪೨	೬	

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ರಾಶಿ ಅಕ್ಕಿ	3— 6	3— 10
ಮುಸ್ಕತಿ	3— 8	4— 4
ಗುಡ್ಡ	3—10	3—14
ಊರ ಅವ್ವಲ್ ಬೆಳ್ತಿಗೆ	4— 0	4— 4
ರಂಗೂನು ಟಿ ಗೋ ಗಳ್ಳೆ	7 — 0	7— 4
ಎಲ್ಲೂರು ಟಿ. ಮು. ಗಳ್ಳೆ	3—12	3—12
ಗೋದಿ ಗೋಣಿ ಗಳ್ಳೆ	11 — 0	13— 0
ತೊಗರಿ ಗೋಣಿ ಗಳ್ಳೆ	9 — 8	12— 8
ಹುರುಳಿ ಗೋಣಿ ಗಳ್ಳೆ	5— 0	5 — 6
ಕಡಲೆ ಗೋಣಿ ಗಳ್ಳೆ	8 — 0	12 — 8
ತೊಗರಿಬೇಳೆ ಗೋಣಿ ಗಳ್ಳೆ	11— 0	19— 0
ಉದ್ದು ಗೋಣಿ ಗಳ್ಳೆ	9— 0	9 — 8
ಹೆಸರು ಗೋಣಿ ಗಳ್ಳೆ	7—12	8— 0
ಊರುಬೆಲ್ಲ ಖಂಡಿ ಗಳ್ಳೆ	30— 0	32— 8
ಉಪ್ಪು ಗೋಣಿ ಗಳ್ಳೆ	4— 2	5— 4
ಕೊಬ್ರಿ ಖಂಡಿ ಗಳ್ಳೆ	75— 0	84— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	26 — 8	28— 8
ಎಳ್ಳಿಂಡಿ ಖಂಡಿ ಗಳ್ಳೆ	26 — 4	27 — 8
ಕೊಬ್ರಿ ಎಣ್ಣೆ ಮಣ ಗಳ್ಳೆ	6— 0	7 — 0
ಎಳ್ಳೆಣ್ಣೆ ಮಣ ಗಳ್ಳೆ	7— 0	7— 0
ಚಿಮಣಿಎಣ್ಣೆ ಪಟ್ಟಿಗೆ ಗಳ್ಳೆ	6— 5	7— 5
ಪೋರಿನ ಸಕ್ಕರೆ ಮ ಗಳ್ಳೆ	3— 2	3 — 4
ಮೆಣಸು	2— 8	5— 0
ಸಾಸಿವೆ ಮುಡಿ ಗಳ್ಳೆ	5 — 4	5— 6
ಕಾಳುಮೆಣಸು ಖಂ ಗಳ್ಳೆ	100— 0	120 0
ಯೇಲಕ್ಕಿ ಬೀಜ ಮಣ ಗಳ್ಳೆ	80— 0	85— 0
ಗೇರುಬೀಜ ಮು. ಗಳ್ಳೆ	3 4	3 — 8
ಅಡಿಕೆ ಖಂಡಿ ಗಳ್ಳೆ	35— 0	37— 8
ತಾಂಬ್ರತಗಡು ಮ ಗಳ್ಳೆ	12— 4	12— 8
ತಾಂಬ್ರಪಾತ್ರಗಳು ಮ ಗಳ್ಳೆ	12— 8	14— 0
ಜೇನುಬೆಳ್ಳಿ ಸೇರು ಗಳ್ಳೆ	13— 8	15— 0
ಹಿತ್ತಾಳೆ ತಗಡು ಮ ಗಳ್ಳೆ	10— 0	0— 8
ಕವನು ಗಳ್ಳೆ	22	22— 6
ಹುಣಸೆ ಹುಳಿ ಖಂಡಿ ಗಳ್ಳೆ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳೆ	170— 0	180— 0
ಫಟೀರಿ ಕಾಫಿ ಖಂಡಿ ಗಳ್ಳೆ	175— 0	195— 0
ಮಡಿಕೇರಿ ಏಲಕ್ಕಿ	50— 0	55 —

Break Pills!

Take To-Night

Prepared by a Sage out of Amber Saffron Gold Musk with Himalayan Drugs recr it Lost energy Strength Nervous Debility and all Disorders n Spinal Cord Regains lost vitality Gives marvellous Rfects 60 Pills Rs 5 Sample 30 Pills Rs 3 List Free

Dr A. S MURTHI CHICACOLE

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಿಂದ

ಹೊಟ್ಟೆಯ ಶಸ್ತ್ರಚಿಕಿತ್ಸೆಯ ಕಷ್ಟವು ತಪ್ಪಿಸಿದಂತಾಯಿತು.

ಎಂ ಬಿ ಎಂಬೊಬ್ಬರು ಹೀಗೆ ಬರೆಯುತ್ತಾರೆ.—ಫೆಬ್ರವರಿಯ ಮೊದಲನೇ ವಾರದ ಸುಮಾರಿಗೆ ನಾನು ಅಸ್ವಸ್ಥಬಿದ್ದೆ . ನಾನು ಬಹಳ ಕ್ಷೀಣನಾಗಿ, ನಡೆಯಲು ಬಲು ಕಷ್ಟವಾಗುತ್ತಿತ್ತು ಅಲ್ಲದೆ ಹೊಟ್ಟೆಯೊಳಗಿನ ಕಠಿಣ ನೋವಿನಿಂದಾಗಿ ನನಗೆ ಊಟ ಮಾಡಲಾಗುತ್ತಿರಲಿಲ್ಲ

ಒಂದು ವಾರದ ವರೆಗೆ ಹೀಗೆ ನಡೆದು ಆ ಮೇಲೆ ನನಗೆ ವಾಂತಿ ಶುರುವಾಯಿತು. ನನಗೆ ನೀರು ಕೂಡಾ ಕುಡಿಯಲಿಕ್ಕೆ ಆಗುತ್ತಿರಲಿಲ್ಲ. ನಾನು ಒಬ್ಬ ಡಾಕ್ಟರರನ್ನು ವಿಚಾರಿಸಲು ಅವರು ನನಗೆ ಜಠರದಲ್ಲಿ ಹುಣ್ಣುಗಳಾಗಿವೆಯೆಂದು ನನ್ನ ಹೆಂಡತಿಯೊಡನೆ ಹೇಳಿದರು. ನನಗೆ ಏನನ್ನೂ ತಿನ್ನಲಿಕ್ಕೆ ಆಗುತ್ತಿರಲಿಲ್ಲ. ಕಡೆಗೆ ಹಾಲು ಕೂಡಾ ತೆಗೆದುಕೊಳ್ಳುವುದನ್ನು ನಿಲ್ಲಿಸಿದೆ ನನ್ನನ್ನು ಆಸ್ಪತ್ರೆಗೆ ಕಳುಹಿಸಬೇಕೆಂದು ಡಾಕ್ಟರರು ಹೇಳಿದರು

ನಾನು ಮೆಕ್ಲೀನ್ ಬ್ರೆಂಡ್ ಸ್ಟೋಮಕ್ ಪೌಡರನ್ನು ತೆಗೆದುಕೊಳ್ಳಲು ಶುರುಮಾಡಿದ ಎರಡು ದಿನಗಳಲ್ಲಿ ನನ್ನ ವಾಕರಿಕೆಯು ನಿಂತುಹೋಯಿತು. ಇದು ನನಗೆ ದೈವಪ್ರಸಾದವಾಯಿತು ನಾನು ಬಹಳ ಗುಣಮುಖನಾಗುತ್ತೇನೆಂದು ಡಾಕ್ಟರರು ಹೇಳಿದರು ಅದನ್ನು ಮುಂದುವರಿಸುತಾ ಬಂದಲ್ಲಿ ಆಸ್ಪತ್ರೆಯ ಆವಶ್ಯಕತೆ ಇಲ್ಲವೆಂದರು. ಡಾಕ್ಟರರ ಹೇಳಿದಂತೆ ಮೆಕ್ಲೀನ್ ಪೌಡರಿನ ಪ್ರಯೋಗವನ್ನು ಮುಂದುವರಿಸುತ್ತಾ ಬಂದ ಹಾಗೆ ನನಗೆ ಒಂದಿಷ್ಟು ಆಹಾರ ತೆಗೆದುಕೊಳ್ಳುವಂತಾಯಿತು ಆದರೆ ಊಟಮಾಡಿದ ಮೇಲೆ ಸ್ವಲ್ಪ ಹೊಟ್ಟೆನೋವು ಆಗುತ್ತಿತ್ತು. ಒಂದು ವಾರದ ಮೇಲೆ ನನಗೆ ಹಾಸಿಗೆಯಿಂದ ಎದ್ದು ತಿರುಗಾಡಲನುಕೂಲವಾಯಿತು. ನನ್ನ ತೂಕವು ಬಹಳ ಇಳಿದಿತ್ತು ಹೇಗಾದರೂ ವಾರವಾರಕ್ಕೆ ನಾನು ಗುಣಮುಖನಾಗುತ್ತಾ ಬರುವ ಹಾಗೆ ಹೊಟ್ಟೆನೋವು ಕಡಿಮೆಯಾಗುತ್ತಾ ಬಂತು ನನಗೀಗ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳಲಿಕ್ಕಾಗುತ್ತಿದೆ

ಈ ಹೊತ್ತಿಗೆ ನಾನು ಸಂಪೂರ್ಣ ಗುಣಹೊಂದಿದೆ ನನ್ನ ತೂಕವು ಹೆಚ್ಚುತ್ತ ನನಗೀಗ ಯಾವ ನೋವೂ ಇಲ್ಲ . . . ಪ್ರಾಣವನ್ನು ಕಿನ್ನುವೆನ ಈ ರೋಗದ . . . ಗಾಣುತ್ತೇನೆ ದು ನೆನಸಿದ ನನಗೆ ಈಗ ಬಹಳ ಆಶ್ಚರ್ಯವಾಗುತ್ತಿದೆ ಇದೆಲ್ಲಕ್ಕೂ ನಾನು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿಗೆ ಚಿರಋಣಿಯಾಗಿರುತ್ತೇನೆ ಅದನ್ನು ಸಾವಿರಾರು ಬಾರಿ ವಂದಿಸುತ್ತೇನೆ ಎಂ ಬಿ ಯವರು ಮಾಡಿದ ಹಾಗೆ ನೀವೂ ಮೆಕ್ಲೀನ್ ಪೌಡರಿನಿಂದ ನಿಮ್ಮ ಹೊಟ್ಟೆಶೂಲೆಯನ್ನು ಪರಿಹರಿಸಿರಿ ನಿಮ್ಮ ನರಳಿಕೆಯು ಗುಣಹೊಂದಬೇಕಾದರೆ

ಎಂಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ ಇಂತಹ ಸಮಾನವಾದ ಕಡಿಮೆ ದರದ ಪಡಿಕೆಯ ಮಾಲನ್ನು ಪಡೆದು ಮೋಸಹೋಗಬೇಡಿ ಅದು ಚಿಲ್ಲರೆಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,
ಇಲ್ಲಿಗೆ ಬರೆಯಿರಿ

S No 61

THE
BANK OF MANGALORE LTD.,
MANGALORE

ESTD 1931

Branches

Panemangalore Mudabidri & Padubidri

Chairman —**Philip J Chandran, Esq.,**
Retd Dt Registrar of Joint Stock Companies

On & from 1st of January 1937

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Saving Bank deposit 3½% on daily balances

All kinds of banking business transacted

U. R. PAI, N. U. PAI, *Managing Directors*

ಬಿಳಿ ತೊನ್ನು ಮತ್ತು ಕುಷ್ಟರೋಗ

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಟರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುದು ಹಲವು ಹಕೀಮ್ ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ನಿಘಾ ತೆಗೆದುಕೊಳ್ಳಲಾಗಲಿಕ್ಕಿಲ್ಲ

Vaidyaraj Akil Kishore Ram,
No. 62 P O Katrisarai (Gaya)

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಪ್ರಕಟನೆ

ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೆ

ಕ. ಪ್ರಾ. ಕಾಂಗ್ರೆಸ್ ಕಮಿಟಿಯು ಮಾರ್ಚ ತಿಂಗಳ ಮೂರನೆಯ ವಾರದಲ್ಲಿ ಕೂಡಲಿಕ್ಕಿದ್ದಿದೆ. ಅದರ ಒಳಗಾಗಿ ತಾಲೂಕು ಜಿಲ್ಲಾ, ಸರ್ಕಲು, ಗ್ರಾಮ ಕಾಂಗ್ರೆಸ್ ಕಮಿಟಿಗಳು ಮಂತ್ರಿಪದವನ್ನು ಸ್ವೀಕರಿಸಬೇಕೋ ಬೇಡವೋ? ಎಂಬ ವಿಷಯವನ್ನು ಆಯಾ ಕಮಿಟಿಗಳ ಸಾಧಾರಣ ಸಭೆಗಳನ್ನು ಕರೆದು ಅಲ್ಲಿ ಚರ್ಚಿಸಿ ನಿರ್ಣಯಗಳನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಮಾರ್ಚ ತಿಂಗಳ ೧೦ ನೆಯ ತಾರೀಕಿನ ಒಳಗಾಗಿ ಕಳಿಸಿಕೊಡಬೇಕು ಹೀಗೆ ಎಲ್ಲ ಪ್ರಾಂತಗಳ ಕಮಿಟಿಗಳ ವಿಚಾರವನ್ನು ಮಾಡಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ವಿಚಾರ ಮಾಡುವದು ಆದ್ದರಿಂದ ಎಲ್ಲರೂ ಈ ಪ್ರಶ್ನೆಯನ್ನು ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಬಿನ್ನವಿಸುತ್ತೇವೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಅವಸರದ (Emergency) ಸಭೆಯು ಇದೇ ತಿಂಗಳ ೧೧ನೇ ತಾರೀಕು ಗುರುವಾರ ಬೆಳಗ್ಗೆ ೮ ಗಂಟೆಗೆ ಧಾರವಾಡದಲ್ಲಿ ಕಾಂಗ್ರೆಸ್ ಭವನದಲ್ಲಿ ಸೇರುವದು. ಈ ಸಭೆಯಲ್ಲಿ ಗ್ರಾಮ ಕಾಂಗ್ರೆಸ ಸಮಿತಿಗಳ ಸಂಘಟನೆ, ಎಪ್ರಿಲ್ ೧ನೇ ತಾರೀಕಿಗೆ ಆಚರಿಸಲ್ಪಡಬೇಕಾದ ಹರತಾಳದ ಕಾರ್ಯಕ್ರಮ ಮತ್ತು ಮಂತ್ರಿಪದ ಸ್ವೀಕಾರದ ಪ್ರಶ್ನೆ ಇದೇ ಮೊದಲಾದವುಗಳು ಚರ್ಚಿಸಲ್ಪಡುವವು

ಈ ಸಭೆಯು ಎಲ್ಲ ದೃಷ್ಟಿಯಿಂದಲೂ ಬಹಳ ಮಹತ್ವದ್ದಿರುವುದರಿಂದ ಹೊಸದಾಗಿ ಶಾಸನ ಸಭೆಗಳಿಗೆ ಕಾಂಗ್ರೆಸಿನ ವತಿಯಿಂದ ಚುನಾಯಿಸಲ್ಪಟ್ಟ ಸದಸ್ಯರಿಗೂ ಪ್ರಾಂತದ ಬೇರೆ ಪ್ರಮುಖ ಜನರಿಗೂ ಆಮಂತ್ರಣ ಕೊಡಲಾಗಿದೆ ಆಮಂತ್ರಿಸಲ್ಪಟ್ಟವರ ತಪ್ಪದೇ ಸಭೆಗೆ ಬರಬೇಕಾಗಿ ಬಿನ್ನಹ

ಇದೇ ತಿಂಗಳ ೧೦ನೇ ತಾರೀಕಿನ ದಿವಸ ಸಂಜೆಯ ೫ ಗಂಟೆಗೆ ಧಾರವಾಡ ಕಾಂಗ್ರೆಸ್ ಭುವನದಲ್ಲಿ ಕಾ ಪ್ರಾ ಕಮಿಟಿಯ ಕಾರ್ಯಕಾರೀ ಮಂಡಲದ ಸಭೆ ಸೇರುವದು ಅಲ್ಲಿ ಜವಾಹರಲಾಲರ ಇದೇ ಮೊದಲಾದ ವಿಷಯಗಳು ಚರ್ಚಿಸಲ್ಪಡುವುವು

ಅಂದೇ (ಬುಧವಾರ ೧೦) ಬೆಳಗ್ಗೆ ೮-೩೦ಕ್ಕೆ ಕಾರವಾರ ರೈತ ಸಹಾಯಕ ಮಂಡಲದ ಸಭೆಯೂ, ಮಧ್ಯಾಹ್ನ ೩ ಗಂಟೆಗೆ ಪಾರ್ಲಿಮೆಂಟರೀ ಬೋರ್ಡಿನ ಕ ಪ್ರಾ ಕಾ ಪಾ ಬೋರ್ಡ ಸಭೆಯೂ ಸೇರುವವು ಆಯಾ ಕಮಿಟಿಯ ಸದಸ್ಯರು ಆಯಾ ಸಭೆಗಳಿಗೆ ಬರಬೇಕಾಗಿ ಬಿನ್ನಹ

ಕ. ಪ್ರಾ. ಕಾ. ಕ ಧಾರವಾಡ

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O P No 16/1937

1 ಕೊನ್ನೆ ಗೋಪಾಲ ಕೃಷ್ಣ ಪೈ 2 ಕೊನ್ನೆ ರಾಮಕೃಷ್ಣ ಪೈ 3 ಕೊನ್ನೆ ಕೇಶವ ಪೈ

ಕೊನ್ನೆ ಮುಡ್ಲಗಿರಿ ಪೈಗಳ ಮಕ್ಕಳು

1ನೇ ಅರ್ಜಿದಾರ ಉಡ್ಪಿ ತಾಲೂಕು ಹಂದಾಡಿ ಗ್ರಾಮ 2ನೇ 3ನೇ ಅರ್ಜಿದಾರರು ಉಡ್ಪಿ ಕಸಬಾ—ಅರ್ಜಿದಾರರು

ಅರ್ಜಿದಾರರ ಸಹೋದರ ಮೃತ ಕೊನ್ನೆ ವೆಂಕಟೇಶ ಪೈ ಬಾಬ್ತು "The Empire of India Life Assurance Co. Ltd. Bombay"

ಈ ಕಂಪೆನಿಯಿಂದ Insurance Policy No. 133340ನೆ ಪೊಲಿಸಿ ಬಾಬ್ತು ಬರತಕ್ಕ ರೂ. 1006-6-0ನ್ನು ವಸೂಲಿ ಕುರಿತು 2ನೆ ಅರ್ಜಿದಾರಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖ್ಲೆ ಮಾಡಿದ ಸದ್ರಿ ಅರ್ಜಿಯು ತಾ. 23-5-37ರಲ್ಲು ಇಡೋಣಾಗಿಯದೆ—ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಜಾಹೀರು ಮಾಡತಕ್ಕದ್ದು.

Udipi, 8-3-37. } K. Ramanath Pai, Pleader for Petitioner

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಳಿಕಟ್ಟಾ ಬಜಾರ್, ಮಂಗಳೂರು

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 123/1931

ಕ್ರಮ ಆದ ಲ್ಜ್ಯಾರಿ ಅರ್ಜಿ ನಂಬ್ರ 761/1936

ಡೊಕ್ಟರ್ ಯಫ್ ಯಕ್ಸ್ ದ ಸೋಜ— ವಾದಿ ಅರ್ಜಿದಾರ

ಮತ್ತು

ಯ ರಾವ ಚಂದ್ರರಾವ್ ಕೂಡಾ 3 ಜನರು 1, 2 ವ 4ನೆ ಪ್ರತಿವಾದಿರು—ರೆಸ್ಪೊಂಡೆಂಟರು

1 ಯ ರಾವ ಚಂದ್ರರಾವ್ 2 ಭೋಜರಾವು—ಕೃಷ್ಣಯ್ಯನವರ ಮಗಂದಿರ — ಮಂಗಳೂರು ತಾಲೂಕು ಸಸಿಹಿತ್ಲು ಗ್ರಾಮದಲ್ಲಿರುವವರು

ಸದ್ರಿ 1 2ನೇ ರೆಸ್ಪೊಂಡೆಂಟರಿಗೆ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಹಾಜರ ಪಡಿಸಿದ ಇಸ್ತಿಹಾರಿನಲ್ಲಿ ವಿವರಿಸಿದ ರೆಸ್ಪೊಂಡೆಂಟರ ಬಾಬ್ತು ಸ್ತಿರಾಸ್ತಿಗಳ ವಿಕ್ರಯದ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಮಾಡಿದ್ದಾನೆ ಆದ ದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1937ನೇ ಇಸವಿ ಮಾರ್ಚ ತಿಂಗಳ 18ನೇ ತಾರೀಕು ನಿಶ್ಚಯಿಸೋಣಾಗಿವ ದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ

ಮಂಗಳೂರು 10 3 37 — P D'Souza, B A., B L., Vakil for Petitioner

NOTICE.

Sub Court of South Kanara Mangalore

S C No 33/1937

Between

Mr Keshava Prabhu Plaintiff

and

1 Vitla Pai, Son of Cherda Pai

2. Ramaraja Prabhu S/o Annappa Prabhu, Both reside in Nileshwara Kasba Village, Kasragod Taluk—Defendants

To the abovenamed Defendants

Please take notice that the above suit filed by the Plaintiff for recovery of the amounts due under a demand pronote executed by the Defendants in favour of the Plaintiff on 27-6-1934 for Rs. 500—0—0 fixed for hearing in the above court at 11 A. M on 25—3—1937 and that in default of your appearance it will be decided exparte.

Mangalore, 4-3-1937 — K P.Gopalkrishna Rao, Vakil for Plaintiff.

ನವರತ್ನಾ ಫಾರ್ಮಸಿ, ಕೊಚ್ಚಿ—ಇವರ

ಗೊನೋಕ್ಕೊಡೋನ್

(ರಿಜಿಸ್ಟರ್ಡ)

ಕೆಟ್ಟ ಜನರ ಸಂಭೋಗದಿಂದ ಜನನೇಂದ್ರಿಯದಲ್ಲಿ 'ಗೊನೂ ಕಾಯಿ' ಎಂಬ ಹೆಸರಿನ

ಸೂಕ್ಷ್ಮ ಜಂತುವಿನ ಪ್ರವೇಶವಾಗಿ ಈ ವಿಷದ ಪರಿಣಾಮವಾಗಿ ಅದರ ಗುಣದ ಪ್ರಕಾರ ತತ್ಕಾಲ ಇಲ್ಲವೆ ೪ ೮ ದಿನಗಳ ಮೇಲೆ ಇಂದ್ರಿಯದ ಮೇಲೆ ಕಲೆಬಿದ್ದು ಅದು ಬಾತು, ಅದರ ಮೇಲೆ ಸಣ್ಣ ಸಣ್ಣ ತೂತುಗಳು ಬೀಳುತ್ತವೆ ಉಷ್ಣತೆ ಹೆಚ್ಚಾಗಿ ಮೂತ್ರ ಮಾಡುವಾಗ್ಯೆ ಅದು ಉರಿಯುವುದು ಮತ್ತು ಹಸಿಹಸಿಯಾಗಿ ಮೂತ್ರವಾಗುವುದು ಮುಂದೆ ಮೂತ್ರದ್ವಾರವು ಸಂಕುಚಿತವಾಗಿ ಮೂತ್ರ ಬಂದಾಗುವುದರಿಂದ ಕೈಥೆಟರ (ನಳಿಕೆ) ಹಾಕಿ ಮೂತ್ರ ಮಾಡಿಸಬೇಕಾಗುವುದು ಇಂಥಾ ರೋಗಿಗಳಿಗೆ ಸಕಾಲಕ್ಕೆ ಯೋಗ್ಯ ಔಷಧ ಸಿಗದಿದ್ದರೆ ಈ ವಿಕಾರವು ಇನ್ನೂ ಹೆಚ್ಚಾಗುವದು ಈ ರೋಗವಿದ್ದ ಸ್ತ್ರೀಯರಿಗಾದರೂ ಈ ವಿಕಾರವುಂಟಾಗುವುದು ಮತ್ತು ಗರ್ಭಾಶಯವು ದೂಷಿತವಾದ್ದರಿಂದ ವಿಕಾರವಾಗಿ ಗರ್ಭಧಾರಣೆಯಾಗುವುದಿಲ್ಲ

ಮುಂದೆ ಭಯಂಕರ ಪ್ರಾಣಘಾತಕ ರೋಗವುಂಟಾಗಿ ಆಯುಷ್ಯವು ಕಡಿಮೆಯಾಗುವುದು ಆದುದರಿಂದ ಶರೀರ ಪಿಗೇನೇ ನವರತ್ನಾ ಕಂಪೆನಿಯ ವರ 'ಗೊನೊಕ್ಕೊಡೋನ್' ಉಪಯೋಗಿಸಿದರೆ ಈ ಎಲ್ಲಾ ಲಕ್ಷಣಗಳ ಕಡಮೆಯಾಗುವುವು

ವಿಶೇಷ ಸೂಚನೆ.—ಸ್ವಲ್ಪ ಗುಣವಾದೊಡನೆ ರೋಗಿಯು ಔಷಧವನ್ನು ಬಿಡತಕ್ಕದ್ದಲ್ಲ ಆದರೆ ಈ ರೋಗವು ಕೂಡಲೇ ಗುಣವಾಗ ನ್ಪದಿಲ್ಲೆಂಬುದು ಗೊತ್ತಿಲ್ಲದ ಕಾರಣ ಪ್ರಸಹ ಕಷ್ಟಕ್ಕೆ ಗುರಿಯಾಗುತ್ತಾನೆ ಆದುದರಿಂದ 2 ಅಥವಾ 3 ಬುದ್ದಿಗಳನ್ನು ಒಂದೇ ಸವನೆ ತೆಗೆದುಕೊಳ್ಳಬೇಕು

ಕ್ರಯ.—ಹತ್ತು ತೊಲೆಗಳಿಗೆ ರೂ. 1—4—0 ಅಥವಾ ನಾಲ್ಕು ಔನ್ಸುಗಳಿಗೆ ರೂ 1—4—0.

ತಯಾರಿಸುವವರು —

ನವರತ್ನಾ ಫಾರ್ಮಸಿ ಕೊಚ್ಚಿ

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಮುದ್ದಾದ ಮುದ್ರಣವನ್ನು ಅಪೇಕ್ಷಿಸುವಿರೇ? ಹಾಗಾದರೆ,—

ಶಾರದಾ ಛಾಪಖಾನೆ, ಮಂಗಳೂರು

ಇಲ್ಲಿಗೆ ಬರೆಯಿರಿ, ಅಥವಾ ಬನ್ನಿರಿ.

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣ, ಆಕಸ್ಮಿತ ಅನಾಹುತ, ದುಸ್ಸಹವಾದ ನಿರಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

30 ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲ ತರದ ಉನ್ಮಾದ (ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ ನಿದ್ರಾಭಂಗ ನ ನ್ಯೂರಾಸ್ತೆನಿಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಖಾತ್ರಿಯಾಗಿ ಗುಣಪಡಿಸುತ್ತವೆ ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲ ಮಾಡುವ ಗುಣ ಇವುಗಳಲ್ಲಿದೆ

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪರ್ಮಾಸನ್ ಮಾತ್ರೆಗಳನ್ನು ಉಪಯೋಗಿಸಿರಿ

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ 4—0—0. ವಿ ಪಿ. ಚಾರ್ಜು ಬೇರೆ

ರೋಗಿಯು ಈ ಕುರಿತು ವಿವರಗಳನ್ನು ವಿಶದವಾಗಿ ಬರೆಯಬೇಕು —

ಹೆಸರು, ವಿಳಾಸ, ಜಾತಿ, ಸ್ತ್ರೀಯಾ ಪುರುಷ, ಪ್ರಾಯ, ದೇಹದ ಭಾರ ವಿವಾಹಿತನೋ ಅಲ್ಲವೋ, ರೋಗದ ಲಕ್ಷಣ ನಿದ್ರೆ, ಆಹಾರ, ಮಲಶೋಧನೆ ಅಲ್ಲದೆ ಉಬ್ಬಸ ಜ್ವರ, ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು.

ಪರ್ಮಾಸನ್ ಪ್ರೊಡಕ್ಸ್, (ಇಂಡಿಯಾ)

ಬ್ರೆಂಚ್: ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್, 366, ಲೇಮಿಂಗ್ಟನ್ ರೋಡ್, ಮುಂಬೈ.

ಸಿ. ವಿ ಕಾಮತ್, ಹಿಸ್ಟೀರಿಯಾ ಎಂಡ್ ಇನ್ಸೆನಿಟಿ ಎಕ್ಸಪರ್ಟ್, ಮಾರ್ಕೆಟ್ ರೋಡ್, ಉಡುಪಿ

ಲಕ್ಸ ಟಾಯಿಲೆಟ್ ಸೋಪಿನ
ಸಿನೀಮಾನಟರ

ಭಾವಚಿತ್ರದ ಬಹುಮತಿಯು
3/-3-37
ನಿಲ್ಲಿಸಲ್ಪಡುವುದು.

ಈ ತಾರೀಖಿನಮೇಲೆ ಚಿತ್ರಪಟಗಳು ದೊರಕುವುದಿಲ್ಲ.

ಲಕ್ಸ ಟಾಯಿಲೆಟ್ ಸೋಪಿನ ರಾಪ್ಪರ್‌ಗಳಿಗೆ ಬದಲಾಗಿ ಪ್ರಖ್ಯಾತಿಯಾದ ಸಿನೀಮ ನಟರ ಸೊಗಸಾದ ಭಾವಚಿತ್ರವನ್ನು ಪಡೆಯಲು ಇದೇ ಕೊನೆಯ ಸಮಯ. 5 ದೊಡ್ಡ ಲಕ್ಸ ಟಾಯಿಲೆಟ್ ಸೋಪಿನ ರಾಪ್ಪರ್‌ಗಳನ್ನು ಈ ಕೆಳಗಿನ ವಿಳಾಸಕ್ಕೆ ಜರೂರಾಗಿ ಕಳುಹಿಸಿ ಈ ಬಹುಮತಿಯು ಮುಗಿಯುವುದಕ್ಕೆ ಮುಂಚೆ ನೀವು ಈ ಸೊಗಸಾದ ಪಟವನ್ನು ಹೊಂದಲು ಇನ್ನು ಸ್ವಲ್ಪ ಅವಕಾಶವಿದೆ.

ರಾಪ್ಪರ್‌ಗಳನ್ನು ಕಳುಹಿಸುವಾಗ ನಿಮ್ಮ ಹೆಸರನ್ನು ಮತ್ತು ವಿಳಾಸವನ್ನು ಬರೆಯಲು ಮರೆಯಬೇಡಿರಿ.

ವಿಳಾಸ: ಟಿ. ಟಿ. ಕೃಷ್ಣಮಾಚಾರ್ಯ,
11/14 ಅರಮನೆಕಾರ ಬೀದಿ, ಮದರಾಸು.

LUX TOILET SOAP



ಸಿನೀಮ ತರುಣಿಯರ ಸೌಂದರ್ಯದ ಸೋಪು

L-LTS 461-33 KANARESE — LEVER BROTHERS (INDIA) LIMITED

DIAMONDS! DIAMONDS!
BEST BRILLIANCY

K. R. K. SHET,
Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡ್ಯಾಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಉಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರು

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಸಾಜುಗಳಲ್ಲಿಯೂ ನ್ಯಾಯಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಹೊಸ ವರ್ಷದ ರಿಯಾಯಿತಿ
ರಾಸ್ಕೋಪ್ ಲಿವರ್ ರೀಸ್ಟ್ ವಾಚುಗಳು
(೫ ವರ್ಷಗಳ ಅಖಂಡ ಗ್ಯಾರಂಟಿ)



ರಜತ (ಬೆಳ್ಳಿ) ವರ್ಣದ ಕರಡಿಗೆ ರಾಸ್ಕೋಪ ಚಲನಾಕ್ರಮದ ಅತ್ಯಾಧುನಿಕ ಮಾದರಿಯ ಆಕೃತಿ ಘಟ್ಟಿಮುಟ್ಟಾದ ಯಂತ್ರ ಸಾಮಗ್ರಿಗಳಿಂದ ಕೂಡಿದುದರಿಂದ ತಪ್ಪಿಲ್ಲದ [illegible] ವನ್ನು ಕೊಡುತ್ತದೆ ಹೊಸ ವರ್ಷದ ಮೂರಾಟಕ್ಕಾಗಿ ಅಗಾಧ ರಿಯಾಯಿತಿ ದರಗಳ

ಉರುಟಾದ ನಿಕ್ಕಲ್ ಕೇಸ್ ಇದ್ದುದಕ್ಕೆ ರೂ	3 6 0
ಉರುಟಾದ ಬಂಗಾರದವರ್ಣದ ಕೇಸ್ ಇದ್ದುದಕ್ಕೆ ರೂ	4 10 0
ಚೌಕ ಮತ್ತು ಆಯತ ಆಕಾರವುಗಳಿಗೆ	
ಕ್ರೋಮಿಯಂ ಕೇಸ್ ಇದ್ದುದಕ್ಕೆ ರೂ	5 10-0
ಬಂಗಾರದಂಥಾ ಕೇಸ್ ಇದ್ದುದಕ್ಕೆ ರೂ	6 10-0
ಹತ್ತು ವರ್ಷದ ಗ್ಯಾರಂಟಿ	
ರೋಲ್ಡ್‌ಗೋಲ್ಡ್ ಕೇಸ್ ಇದ್ದುದಕ್ಕೆ ರೂ	11 8-0
9 ಕೆರೆಟ್ ಬಂಗಾರ ಕೇಸ್ ಇದುದಕ್ಕೆ ರೂ	22-8-0

3 ವಾಚುಗಳನ್ನು ತರಿಸುವವರಿಗೆ ಟಪ್ಪಾಲು ಖರ್ಚು ಮುಫತ್ತಾಗಿ ಬಿಡಲಾಗುತ್ತದೆ

ವಾಚುಗಳು ಚೆನ್ನಾಗಿ ತೋರದಿದ್ದಲ್ಲಿ, ಹಣ ವಾಪಾಸು ಮಾಡುತ್ತೇವೆ

ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಿಂದಲೇ ಬರೆಯಿರಿ –

Modern Trading Co
119 urendranath Banerjee Road,
CALCUTTA

ಲಿವರ್ ವಾಚುಗಳು,
ಒಂದು ವಾರದ ತನಕ ಪರೀಕ್ಷೆಗಾಗಿ ನಿಮ್ಮಲ್ಲಿ ಇಟ್ಟುಕೊಳ್ಳಿ

ನಮ್ಮ ಈ ಗಡಿಯಾರವು ಇದರ ನಾಲ್ಕರಷ್ಟು ಬೆಲೆಯಿರುವ ವಾಚ ಗಳಷ್ಟು ಬಾಳ್ವಿಕೆಯುಳ್ಳದ್ದು ಕಮ್ಮಿ ಬೆಲೆಯ ಲಿವರ್ ರಿಸ್ಟ ವಾಚುಗಳು 6 ವರ್ಷಗಳ ಅಖಂಡ ಗ್ಯಾರಂಟಿ ಕೊಡುತ್ತೇವೆ ಗ್ಯಾರಂಟಿ ತೃಪ್ತಿಯನ್ನೂ ಕೊಡುತ್ತದೆ ಸುಂದರವಾಗಿಯೂ ಚಿಕ್ಕದಾಗಿಯೂ, [illegible] ದಲ್ಲದೆ ಶ್ರೇಷ್ಠವಾದ ಲಿವರ್ ಯಂತ್ರ ಚಲನಾಕ್ರಮದಿಂದ ಕೂಡಿದ್ದಾಗಿರುತ್ತದೆ ಅನೇಕ ವರ್ಷಗಳ [illegible] ರಿಪೇರಿ ಅವಶ್ಯಕತೆ ಇಲ್ಲದೆ ಬಾಳಿಕೆ ಬರುತ್ತದೆ ಮತ್ತು ಒಂದು ಸೆಕುಂಡಿಗೆ ತಪ್ಪದಂತೆ ಕಾಲವನ್ನು ತೋರಿಸುತ್ತದೆ [illegible]

ರಿಯಾಯಿತಿ ದರಗಳು [illegible]

ನಿಕ್ಕಲ್ ಕೇಸಿನ ರಿಸ್ಟವಾಚು— ರೂ	3-4-0
„ „ „ ಶ್ರೇಷ್ಠವಾದುದು „	4-8-0
ಬಂಗಾರ ಗಿಲ್ಟಿನ ಶ್ರೇಷ್ಠವಾದ ಕೇಸುಳ್ಳದ್ದು	5 12 0
ಬಂಗಾರ ಗಿಲ್ಟ ಕೇಸುಳ್ಳ ಸಾಧಾರಣದ್ದು	5-12-0
ನಿಕ್ಕಲ್ ಕೇಸುಳ್ಳ ಆಯತಾಕಾರದುಳ್ಳ ಶ್ರೇಷ್ಠವಾದ ವಾಚು	5-0-0
ಬಂಗಾರ ಗಿಲ್ಟಿನ ಆಯತಾಕಾರದ್ದು	7-4-0
ಪಾಕೆಟ್ ವಾಚು	3-0-0
ಟೈಂಪೀಸು	2-8-0

ಟಪ್ಪಾಲು ಖರ್ಚು ಅಣೆ 7 ಪ್ರತ್ಯೇಕ

ಒಂದೇ ಸರ್ತಿ 3 ವಾಚುಗಳಿಗೆ ಆರ್ಡರು ಕೊಡುವವರಿಗೆ ಟಪ್ಪಾಲು ಖರ್ಚು ಇಲ್ಲ.

ಈ ವಿಳಾಸಕ್ಕೆ ಬರೆಯಿರಿ –

South India Export Agency,
4/C Apoorba Mitter Road Kalighat
P O Caloutta

KANARA WATCH WORKS
WATCH MAKERS & GENERAL MERCHANTS
Hampankatta MANGALORE

Dealers in:– Watches, Clocks, Timepieces, Rolled Gold Jewellery & Sporting Materials etc,



Stockists of West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones

Japan 8 Inch	Octegon	Rs 6	0	0
„ 8 „	Regulator	„ 6	12	0
„ 10 „	Octegon	„ 6	8	0
„ 10 „	Regulator	„ 7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾಗಿ ಸದಾ ಸಿದ್ಧವಿರುವುವು ವಾಚು, ಗಡಿಯಾರ, ಗ್ರೆಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,
ಹಂಪನಕಟ್ಟೆ, ಮಂಗಳೂರು.

Whenever you require the service of
PAINTERS
Please call on or write to:–
Simon & Co ,
Painters,
Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸ್ಯಾನ್ ಬೋರ್ಡು ಇತ್ಯಾದಿಗಳನ್ನೂ

ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಾಃ ಯಾ ಬರೆದು ತಿಳಕೊಳ್ಳಬಹುದು

ಚುನಾವಣೆಗಳಲ್ಲಿ ಭಾಗವಹಿಸಿದಕ್ಕೆ ಶಿಕ್ಷೆ!

ಅಮೃತಬಜಾರ ಪತ್ರಿಕೆಯ ಸೂಚನೆ.

ಸಂಯುಕ್ತ ಪ್ರಾಂತ್ಯದಲ್ಲಿ ಶಾಲಾ ವಿದ್ಯಾರ್ಥಿಗಳು ಚುನಾವಣೆ ಕಾಲದಲ್ಲಿ ಬಹಳ ಉತ್ಸುಕತೆಯಿಂದ ಭಾಗವಹಿಸಿದ್ದರು. ಇದಕ್ಕಾಗಿ ಅಲ್ಲಿನ ಶಾಲಾಧಿಕಾರಿಗಳು ಅವರ ಮೇಲೆ ಕಠಿಣವಾದ ನಿರ್ಬಂಧಗಳನ್ನು ಹೊರಿಸಿ, ಅವರನ್ನು ರಾಜಕೀಯದಿಂದ ದೂರವಿರಿಸಲು ಪ್ರಯತ್ನಪಟ್ಟರು. ಆದರೆ, ಈ ನಿರ್ಬಂಧಗಳನ್ನು ಲಕ್ಷಿಸದೆ ಕೆಲವು ವಿದ್ಯಾರ್ಥಿಗಳು ಚುನಾವಣೆ ಪ್ರಚಾರದಲ್ಲಿ ತುಂಬಾ ಶ್ರಮಪಟ್ಟರು. ಇಂಥ ವಿದ್ಯಾರ್ಥಿಗಳನ್ನು ಅಧಿಕಾರಿಗಳು ಕಠಿಣ ಶಿಕ್ಷೆಗೆ ಒಳಪಡಿಸಿದಾಗ ಅದನ್ನು ಸಹಿಸಲಾರದೆ ಓರ್ವ ವಿದ್ಯಾರ್ಥಿಯು ಆತ್ಮಹತ್ಯವನ್ನು ಮಾಡಿಕೊಂಡನು.

ಈ ವಿಚಾರವಾಗಿ ಪಂ. ಜವಾಹರಲಾಲ ನೆಹರುಗಳು, ಒಂದು ಪ್ರಕಟಣೆಯಲ್ಲಿ ಶಾಲಾಧಿಕಾರಿಗಳ ಈ ವರ್ತನೆಯನ್ನು ಖಂಡಿಸಿ, ಇದಕ್ಕೆ ಕಾರಣಕರ್ತರಾದ ಶಾಲಾ ಮಾಸ್ತರರನ್ನು ರದ್ದುಮಾಡಿಸಬೇಕೆಂದು ಸೂಚನೆ ಕೊಟ್ಟರು.

ಶಾಲಾ ಉಪಾಧ್ಯಾಯರ ವರ್ತನೆಯನ್ನು "ಅ. ಬ. ಪತ್ರಿಕೆಯು ಹೀಗೆ ಟೀಕಿಸುತ್ತದೆ ರಾಜಕೀಯ ಸಭೆಯೊಂದರಲ್ಲಿ ಹಾಜರಿದ್ದನೆಂಬ ಅಪವಾದದ ಮೇಲೆ ವಿದ್ಯಾರ್ಥಿಗಳನ್ನು ಶಿಕ್ಷೆಗೊಳಪಡಿಸಿದ ವರ್ತನೆಯು ತುಂಬಾ ಖಂಡನಾರ್ಹವೂ ಶೋಚನೀಯವೂ ಆಗಿದೆ ಇಂತಹ ವರ್ತನೆಗೆ ಕಾರಣಭೂತರಾದ ಉಪಾಧ್ಯಾಯರನ್ನು ಹೆಚ್ಚಿನ ಶಿಕ್ಷೆಗೆ ಒಳಪಡಿಸುವುದು ಬೇಡವಾದರೂ, ಅವರನ್ನು ಶಾಲೆಗಳಿಂದ ರದ್ದುಮಾಡುವುದು ಒಳಿತಾಗಿದೆ"

ಪೀಪಲ್ಸ್ ಪಾರ್ಟಿ.

"ರಾಜಕೀಯ ಅಧಿಕಾರ ಸೂತ್ರಗಳನ್ನು ಹಿಡಕೊಂಡ ಮತ್ತು ಅದು ತಮಗೆ ಬೇಕೆನ್ನುವ ಪಂಗಡಗಳೊಳಗೆ ಹೋರಾಟವು ಭರದಿಂದ ನಡೆಯುವಲ್ಲಿ, ಮೂರನೇ ಇನ್ನೊಂದು ಪಂಗಡಕ್ಕೆ ಅಲ್ಲಿ ಪ್ರಸ್ಥಾನಸಿಗಲಾರದು ಎಂದು ಪಂಡಿತ ಜವಾಹರಲಾಲರು ಹೇಳಿದ ಮಾತು ಅಕ್ಷರಶ ನಿಜವಾದುದು ಇದರಿಂದ ನಾವು ತಿಳಿಯಬಹುದಾದ ವಿಷಯವೆಂದರೆ, ನೆಹರುಗಳು ಒರೇ ಒಂದು ರಾಜಕೀಯ ಪಂಗಡದ ಮುಖಂಡರು ಮಾತ್ರವಲ್ಲ, ವಿಷಯಗಳ ಸತ್ಯಾಸತ್ಯತೆಯನ್ನು ತಿಳಿದ ಮೇಧಾವಿಗಳೂ ಆಗಿದ್ದಾರೆ" ಈ ರೀತಿ ಡಾನ್ ಪತ್ರಿಕೆಯು ಪೀಪಲ್ಸ್ ಪಾರ್ಟಿಯ ಅಪೂರ್ವ ಅಪಜಯದ ವಿಚಾರವಾಗಿ ಬರೆದ ಒಂದು ಲೇಖನದಲ್ಲಿ ತಿಳಿಸುತ್ತದೆ.

ಶುಭ ಸೂಚನೆ.

ಬೊಂಬಾಯಿಯ ಕ್ರೈಸ್ತರ ಪರವಾಗಿ ಕಾಂಗ್ರೆಸ್ಸಿನಿಂದ ನಿಲ್ಲಿಸಲ್ಪಟ್ಟು, ಚುನಾವಣೆಯಲ್ಲಿ ಅಪಜಯ ಹೊಂದಿದ ಶ್ರೀ ಜೋಕಿಂ ಆಳ್ವ ಇವರ ಕುರಿತು ಡಾನ್ ಪತ್ರಿಕೆಯು ಒಂದು ಲೇಖನದಲ್ಲಿ ಹೀಗೆ ಬರೆದಿದೆ.—ಬೊಂಬಾಯಿಯಲ್ಲಿ ಶಾಂತರೀತಿಯಲ್ಲಿ ನಡೆಯುವ ಚುನಾವಣೆಯನ್ನು ಸ್ಪೈನಿನ ಅಂತರಕಲಹವೆಂದು ತಪ್ಪು ತಿಳಿದು ಅಲ್ಲಿನ ಕ್ರೈಸ್ತ ಧುರಾಧಿಕಾರಿಗಳು ಜೋಕಿಮ್ ಆಳ್ವರನ್ನು ಸ್ಟೇಲಿನನ ಅನುಯಾಯಿಯೆಂದೂ ಟೀಕಿಸಿ, ಕಕ್ಷಿಯ ಕುವರನೆಂದು ಕಪಿಸಿದರು ಭಾರತೀಯ ರಾಜಕೀಯಗಳಲ್ಲಿ ದುರ್ಮಂತ್ರಿಕರಾಗಿ ಸರಿಯಾಗಿ ನಡೆಸಲ್ಪಡದ ಅರ್ಚಕರಿಗೆ ಜೋಕಿಂ ಆಳ್ವರ ಅಪಜಯವು ಒಂದು ಶುಭ ಸೂಚನೆಯಾಗಿರುತ್ತದೆ'

ಶಿಕ್ಷಣ ಸುಧಾರಣೆ.

'ನಾವು ನಮ್ಮ ವರದಿಯಲ್ಲಿ ಕೊಡಬಹುದಾದ ಹೇಳಿಕೆಗಳಿಂದ, ಭಾರತೀಯ ಶಿಕ್ಷಣ ಸುಧಾರಣೆಯಾಗುವಂತೆ ಇಲ್ಲ'. ಹೀಗೆಂದು ಮಿ| ಅಬ್ಬಟ್ ಮತ್ತು ಎಚ್ ಎಸ್. ವುಡ್ ಎಂಬ ಇರ್ವ ಅಧಿಕಾರಿಗಳು ಹೇಳಿದರು. ಇವರನ್ನು ಹಿಂದೀಯ ಶಿಕ್ಷಣಾವಸ್ಥೆಯ ವಿಚಾರಣೆಗಾಗಿ ಇಂಡಿಯಾ ಸರಕಾರದವರು ನಿಯಮಿಸಿದರು.

ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯ ವಿಮರ್ಶೆ—ಶಿಕ್ಷಣ ಕೊರತೆಗಳನ್ನು ಪರಿಶೋಧಿಸಿ ವರದಿಮಾಡಲು, ಒಂದು ಕಮಿಟಿಯನ್ನೂ ಒಂದು ಡಜನ್ ಅನುಭವಶಾಲಿಗಳನ್ನೂ ನೇಮಿಸಬೇಕೆಂಬ ಸೂಚನೆಯನ್ನು ಇಂಡಿಯಾ ಸರಕಾರವು ಕೊಟ್ಟಾಗಲೇ, ಹಿಂದೂಸ್ಥಾನದ ಎಲ್ಲಾ ಪತ್ರಿಕೆಗಳು ಇದು ಅನಾವಶ್ಯಕವೆಂದೂ, ಸಾರ್ವಜನಿಕ ಹಣದ ದುರುಪಯೋಗವು ಇದರಿಂದಾಗುವುದೆಂದೂ ತಮ್ಮ ಅಭಿಪ್ರಾಯವನ್ನು ಸೂಚಿಸಿದುವು ಸಾರ್ವಜನಿಕ ಅಭಿಪ್ರಾಯವನ್ನು ಮನ್ನಿಸದೆ, ಇಂಡಿಯಾ ಸರಕಾರವು ಹಣದ ಮುಗ್ಗಟ್ಟು ಎಂಬ ತನ್ನ ದಿನನಿತ್ಯದ ಹಾಡಿನೊಂದಿಗೆ, ಶಿಕ್ಷಣಖಾತೆಯ ಅಭಾವಗಳನ್ನು ತಿದ್ದಲು ಪ್ರಯತ್ನಪಡಲಿಲ್ಲ ಈಗ ನೇಮಿಸಲ್ಪಟ್ಟ ಅಧಿಕಾರಿಗಳು ಕೊಟ್ಟ ವರದಿಯನ್ನು ನೋಡಿ ಅನಾವಶ್ಯಕ ಖರ್ಚುಮಾಡಿದ ಗುದ್ದಿನ ಅರ್ಥವೇನೆಂದು ಅದೇ ಹೇಳಬೇಕು.

ಆರ್ಥಿಕ ದಸ್ಥಿತಿ

ಇಂದಿನ ಹಣದ ಮುಗ್ಗಟ್ಟಿನ ಒತ್ತಾಟವು ನಮ್ಮ ಇಡೀ ರಾಷ್ಟ್ರೀಯ ಜೀವನಕ್ರಮವನ್ನು ಕುಗ್ಗಿಸಿದೆ ಬಡತನವು ಕರಾಳ ರಾಕ್ಷಸಾಕೃತಿಯಲ್ಲಿ ಬೆಳೆಯುತ್ತಿದ್ದು ಅದರ ಹಿಡಿತಕ್ಕೆ ಗೋಳಾಡುತ್ತಿರುವ ಮಿಲಿಯಾವಧಿ ಭಾರತೀಯರ ಪಾಡು ಇಂದು ರಾಷ್ಟ್ರ ಮುಖಂಡರನ್ನು ಅಸಹನೀಯ ಸಂಕಷ್ಟಕ್ಕೊಳಪಡಿಸಿದೆ ಅಂತೆಯೇ ಅವರ ನಮ್ಮ ಜನಾಂಗವನ್ನು ಈ ಬಡತನದ ಯಾತನೆಯಿಂದ ಪಾರುಗಾಣಿಸಲು ತಮ್ಮ ಕನುವ ನಡನಗಳನ್ನು ಸವೆಯುತ್ತಿರುವುದು ನಮಗೆಲ್ಲರಿಗೆ ಅರಿಯದ ವಿಷಯವಲ್ಲ ನಮ್ಮನ್ನಾಳುವ ಘನ ಸರಕಾರಕ್ಕಾದರೂ ಈ ಆರ್ಥಿಕ ಮುಗ್ಗಟ್ಟಿನ ಅನುಭವವು ತುಂಬಾ ಇದೆ, ಮತ್ತು ಅವರು ಅದರ ನಿವಾರಣೆಗೆ ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರಾದರೂ ನಿರೀಕ್ಷಿಸಿದ ಫಲವು ಅದರಿಂದ ಉಂಟಾಗಲಿಲ್ಲ

ಆರ್ಥಿಕ ದುಸ್ಥಿತಿಯ ನಿವಾರಣೆಗಾಗಿ ಯಾವುದಾದರೊಂದು ಪ್ರಬಲ ಸಂಸ್ಥೆ ಯಾ ಸರಕಾರವೇಯಾಗಲಿ ಶ್ರಮಪಡುತ್ತಿರುವಾಗ ಅದರೊಂದಿಗೆ ಜನತೆಯು ಸಹಕರಿಸದಿದ್ದಲ್ಲಿ ಯಾವ ಪ್ರಯೋಜನವೂ ಸಿಗಲಾರದು ಅದುದರಿಂದ ಜನತೆಯು ಆರ್ಥಿಕ ದುಸ್ಥಿತಿ ಎಂದರೇನು ಮತ್ತು ಅದು ಹೇಗೆ ಉಂಟಾಗುತ್ತದೆ ಎಂಬ ವಿಷಯವನ್ನು ಮೊದಲು ತಿಳಕೊಳ್ಳಬೇಕು ನಮ್ಮ ದೇಶದ ಉತ್ಪತ್ತಿಯ ಬೆಲೆಗಿಂತ ನಮ್ಮ ಜೀವನಕ್ಕೆ ಬೇಕಾಗುವ ಅತ್ಯಗತ್ಯ ಸಲಕರಣೆಗಳನ್ನು ಕೊಂಡುಕೊಳ್ಳುವ ಬೆಲೆಯು ಹೆಚ್ಚಾದಾಗಲೇ ನಮಗೆ ಹಣಕಾಸಿನ ಬಿಕ್ಕಟ್ಟುಂಟಾಗುವುದು ಅಂದ ಮೇಲೆ ಜನಾಂಗದ ಮೇಲೆ ಸಾಲದ ಹೊರೆಯು ಬೀಳುವುದು ಸ್ವಾಭಾವಿಕವಾದದು ಸಾಲವು ಹೆಚ್ಚುತ್ತಾ ಇದ್ದರೆ ನಮ್ಮ ಉತ್ಪತ್ತಿಯನ್ನು ಅಭಿವೃದ್ಧಿಪಡಿಸಲು, ನಮ್ಮಲ್ಲಿ ಸಾಕಷ್ಟು ಹಣವಿಲ್ಲದಿದ್ದಾಗ ಹೇಗೆ ಸಾಧ್ಯವಾಗುವುದು? ನಮ್ಮ ಇಡೀ ಜನಾಂಗವೆಲ್ಲಾ ಇದೇ ಸ್ಥಿತಿಗೆ ಬಂದಿಳಿದಿದೆ.

ನಮ್ಮ ದೇಶವು ಕೆಲವು ಪ್ರಾಂತ್ಯಗಳಾಗಿಯೂ, ಪ್ರಾಂತ್ಯಗಳು ಜಿಲ್ಲೆಗಳಾಗಿಯೂ ವಿಂಗಡಿಸಲ್ಪಟ್ಟಿರುತ್ತದೆ. ಅಂದಮೇಲೆ ನಮ್ಮ ಜಿಲ್ಲೆಯೂ ದೇಶದ ಈ ಆರ್ಥಿಕ ದುಸ್ಥಿತಿಯಲ್ಲಿ ತನ್ನ ಫಲವನ್ನು ಅನುಭವಿಸಿರುತ್ತದೆ ಈಗಿರುವ ಅಕ್ಕಿ ಪೇಟೆ ಧರೆ ಬೆಲೆಯನ್ನು ನೋಡಿದರೆ, ಆರ್ಥಿಕ ದುಸ್ಥಿತಿಯ ಒಂದು ರೂಪವನ್ನು ತಿಳಕೊಂಡಂತಾಗುತ್ತದೆ ಮುಡಿಗೆ ೩ ರೂಪಾಯಿಗಳ ಬೆಲೆಯನ್ನು ಕೊಡುವುದು ಎಷ್ಟು ಕಷ್ಟಕರವೆನಿಸುತ್ತದೆ ಎಂಬ ಸಂಗತಿಯು ನಮ್ಮಲ್ಲಿ ಹೆಚ್ಚಿನವರಿಗೆ ತಿಳಿಯದೆ ಇಲ್ಲ ಹೀಗಿರುವಾಗ ನಮ್ಮಗಳ ಅನಾವಶ್ಯಕ ಖರ್ಚನ್ನು ಕಡಿಮೆಮಾಡಿಯೂ ಮಾಡಿದ ಖರ್ಚು ನಮ್ಮ ಜಿಲ್ಲೆ ನಮ್ಮ ದೇಶದೊಳಗೆ ಉಳಿಯುವಂತೆ ಪ್ರಯತ್ನಪಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

ಶಿಕ್ಷಣ ವಿಚಾರದಲ್ಲಿ ಕಾಂಗ್ರೆಸ್ ಧ್ಯೇಯ

ಬಹುಮತ ಪಡೆದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸು ಸರಕಾರ ರಚನೆಯನ್ನು ಮಾಡುವುದಾದರೆ, ಶಿಕ್ಷಣ ಸಮಸ್ಯೆಗಾಗಿ ಕಾಂಗ್ರೆಸ್ಸು ಕೈಕೊಳ್ಳುವ ಕಾರ್ಯಕ್ರಮವನ್ನು ಶ್ರೀ ಸತ್ಯಮೂರ್ತಿಯವರು "ದಿ ಸೌತ್ ಇಂಡಿಯನ್ ಟೀಚರ್" ಎಂಬ ಪತ್ರಿಕೆಯಲ್ಲಿ ತಿಳಿಸುತ್ತಾರೆ—

ರಾಷ್ಟ್ರೀಯ ಭಾವನೆಗಳಿಂದ ಪೌರ್ವಾತ್ಯ ಸಂಸ್ಕೃತಿಯ ಮೇಲೆ ಹೊಂದಿ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಹತ್ತು ವರ್ಷಗಳ ತನಕ ಮಾಡಲಾಗುವುದು ಇದರಿಂದ ಸಕಲರಿಗೂ ಅನುಕೂಲ ಸಂದರ್ಭಗಳು ದೊರಕುವುವು ಕಾರಣ ಶಾಲೆಗಳಲ್ಲಿನ ಮುಖ್ಯ ಭಾಷೆಯು ಆ ಪ್ರಾಂತ್ಯಕ್ಕೆ ತಕ್ಕಂತೆ ಉಪಯೋಗಿಸಲ್ಪಡುವುದು

ಉಪಾಧ್ಯಾಯರುಗಳಾದವರಿಗೆ ಉದ್ಯೋಗದ ಭದ್ರತೆಯನ್ನು ಕೊಡುವ ಮತ್ತು ವೇತನವನ್ನು ಹೆಚ್ಚಿಸುವ ಪ್ರಯತ್ನಗಳನ್ನು ಕಾಂಗ್ರೆಸ್ ಪಾರ್ಟಿಯು ಮಾಡುವುದೆಂದು ಭರವಸೆಯನ್ನು ಕೊಡುತ್ತದೆ ಉಪಾಧ್ಯಾಯರು ಯಾವದೊಂದು ಪ್ರತ್ಯೇಕ ರಾಜಕೀಯ ಪಂಗಡದ ಕೈಗೊಂಬೆಯಂತಿರಲು ನಮಗೆ ಒಪ್ಪದ ವಿಷಯ ಅವರ ಜೀವನಕ್ಕೆ ಬೇಕಾಗುವ ನಕ್ಕ ವೇತನವು ದೊರಕಿಸುವುದರಲ್ಲಿ ನನಗೆ ತುಂಬಾ ಆಶೆ ಇದೆ

ವಿದ್ಯಾರ್ಥಿಗಳಲ್ಲೊಂದು ವಿನಂತಿ.

ಗ್ರಾಮಾಭಿವೃದ್ಧಿಯ ಮೇಲ್ಮೆಯ ಕುರಿತು ವಿದ್ಯಾರ್ಥಿಗ ವಿದ್ಯಾರ್ಥಿನಿಯರು ತಮ್ಮ ರಜಾಕಾಲವನ್ನು ಈ ಕೆಲಸಕ್ಕೆ ಉಪಯೋಗಿಸುವುದು ಎಲ್ಲರಿಗೂ ಸಮ್ಮತವಾಗಿರುವುದು ಈ ಬಗ್ಗೆ ಮದ್ರಾಸು ಶಹರಿನ ಉತ್ಸಾಹ ತರುಣರು ಒಂದು ಸಂಘವನ್ನು ಏರ್ಪಡಿಸಿರುವ ಸಮಾಚಾರವನ್ನು ಇಲ್ಲಿಯವರು ಹಿಂದೆಯೇ ಓದಿರಬಹುದು ದೇಶಿಯ, ಸಾಮಾಜಿಕ, ಹಾಗೂ ನೈತಿಕ ವಾತಾವರಣದಲ್ಲಿ ಭಾಗಿಗಳಾಗಿ, ಪ್ರತಿ ಒಂದು ಹಳ್ಳಿಹಳ್ಳಿಯ ವಿದ್ಯೆಯ ಗಂಧ ಕೂಡಾ ಅರಿಯದ ಬಡ ರೈತರ ಏಳಿಗೆಯ ಬಗ್ಗೆ ಟೊಂಕಕಟ್ಟಿ ಅವರನ್ನು ಈ ಅಜ್ಞಾನಂದದಿಂದಲೂ, ಬಡತನದಿಂದಲೂ ಪಾರುಮಾಡಿಸಲು ಬಲ್ಲವರು ಮುಂದೊತ್ತಿ ಕೆಲಸಮಾಡಬೇಕಾಗಿದೆ ಆದುದರಿಂದ ಪ್ರತಿ ಒಂದು ಜಿಲ್ಲೆಯ ಸಂದುಗೊಂದುಗಳಲ್ಲಿ ಇಂತಹ ಸಂಘಗಳನ್ನು ಏರ್ಪಡಿಸಿ, ವಿದ್ಯಾರ್ಥಿ ವೃಂದವು ರಜೆ ವೇಳೆ ತಮ್ಮ ತಮ್ಮ ಮನೆಯನ್ನು ಸೇರುವವರಾದುದರಿಂದ ಇಂಥ ಸಂಘಗಳ ಸದುದ್ದೇಶವನ್ನು ಬೋಧಿಸಿ, ಅಲ್ಲಿ ತಮ್ಮ ಕರ್ತವ್ಯದಲ್ಲಿ ಭಾಗಿಗಳಾಗುವಂತೆ ಮಾಡಬೇಕಾಗಿದೆ ಅಲ್ಲದೆ ಇವರು ತಮ್ಮ ಗ್ರಾಮಾಭಿವೃದ್ಧಿಯ ಕೆಲಸದಲ್ಲಿ ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ಸಂಘದ ಕಾರ್ಯದರ್ಶಿಯವರಾಗಲೀ ಯಾ ಇತರ ಅಧಿಕಾರಿಗಳಾಗಲಿ ನೋಡಬೇಕಾಗಿದೆ. ಎಲ್ಲಾ ಮಾಹಿತಿ ಬಗ್ಗೆ ಮದ್ರಾಸು ಶಾಖಾ ಕಾರ್ಯದರ್ಶಿ, ಜಿ ಎಸ್ ನರಸಿಂಹ ರೆಡ್ಡಿ ಇವರಿಗೆ ಬರೆದುಕೊಳ್ಳಬೇಕಾಗಿ ವಿನಂತಿ

ಮೊದಲನೇ ಗಾಜಿನ ಕನ್ನಡಿಯು ಇಟಲಿಯ ವೆನಿಸ್ ನಗರದಲ್ಲಿ ಹದಿನಾಲ್ಕನೇ ಶತಮಾನದಲ್ಲಿ ತಯಾರಿಸಲ್ಪಟ್ಟಿತು

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿಯಾದದ್ದು.

ಮೇಹರೋಗ, ಶರೀರದ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟದಿಂದಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ ಪಂಡೇಲು

P O Peridepi (ನೆಲ್ಲೂರು ಡಿ)

ಕೊಚ್ಚಿನ್ ಭರಣಿಗಳನ್ನೇ



ಕೊಂಡುಕೊಳ್ಳಿರಿ.

ಪ್ರತಿ ಮನೆಗಳಲ್ಲಿಯೂ ಅಂಗಡಿಗಳಲ್ಲಿಯೂ ಉಪಯೋಗಿಸಬಹುದಾದ ವಿವಿಧ ಆಕೃತಿಗಳ ಸುಂದರ ಹಾಗೂ ಉತ್ತಮವಾದ ಭರಣಿಗಳು.

ಮುಖ್ಯ ಏಜಂಟರು: ಕೆ. ರಾಮ ನಾಯಕ್, ಜನರಲ್ ಮರ್ಚೆಂಟ್, ಕಾಸರಗೋಡು, ಮತ್ತು ಮಂಗಳೂರು, ದಕ್ಷಿಣ ಕನ್ನಡ.

ಅನುಕ್ರಮಣಿಕೆ

ನೋಟಗಳು
ಪರನಾಗಿ ಪತ್ರಿಕೆ ೩
ಕರ್ಮಯೋಗಿ ವಿವೇಕಾನಂದ ೫
ವಿಶೇಷ ವಾರ್ತೆಗಳು ೬
ವಿವಿಧ ಸಮಾಚಾರಗಳು ೧೧
ಅಗ್ರಲೇಖ
ಇಂಗ್ಲೆಂಡಿನಲ್ಲಿ ಕಾಂಗ್ರೆಸ್ ವಿಜಯವಾರ್ತೆಯ ಪರಿಣಾಮ ೧೦
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ಸಿನೆಮಾಪ್ರಪಂಚ ೧೮

ತಾ ೧೨ನೇ ಶುಕ್ರವಾರ ಮಾರ್ಚ ೧೯೩೭

ಸ್ವದೇಶಾಭಿಮಾನಿ.

ಇಂಗ್ಲೆಂಡಿನಲ್ಲಿ ಕೊಂಗ್ರೆಸ್ ವಿಜಯ ವಾರ್ತೆಯ ಪರಿಣಾಮ

ಇಂಗ್ಲೆಂಡಿನಲ್ಲಿ ನಮಗೆ ಅನುಕೂಲ ಮತ್ತು ಪ್ರತಿಕೂಲಗಳಾಗಿರುವ ಎರಡು ಪಕ್ಷಗಳು ಇದ್ದೇ ಇವೆ ಅನುಕೂಲ ಪಕ್ಷವು, ನಾವು ನಮ್ಮ ದೇಶದ ಆಡಳಿತವನ್ನು ಸ್ವತಂತ್ರವಾಗಿ ಕೈಗೊಳ್ಳುವುದು ವಿಹಿತವೆನ್ನುವುದಾದ ಕಾರಣ, ಕೊಂಗ್ರೆಸ್ ವಿಜಯವು ಈ ಪಕ್ಷಕ್ಕೆ ಆನಂದವನ್ನು ಉಂಟುಮಾಡಿಯದೆ ಆದರೆ, ಹೊಸ ಸುಧಾರಣೆಗಳನ್ನು ಕೂಡ ನಮಗೆ ಕೊಡಬಾರದೆಂದು ಆಕ್ಷೇಪಿಸಿದವರು ಹೇಗೆ? ನಾವು ಮೊದಲೇ ಹೇಳಿಲ್ಲವೆ? ಸಮಾಜಾನ್ವಯವಾಗಿ, ಜಾತಿಗಳಿಗೆಂದು ಪ್ರತ್ಯೇಕಿಸಿ, ಮೈನೋರಿಟಿಗಳಿಗೆ ಪ್ರತ್ಯೇಕ ಬೆಂಬಲವಿತ್ತು ನಾವು ಚುನಾವಣೆಗಳಲ್ಲಿ ಮಾಡಲಿಳಿಸಿ ಗೆಲ್ಲಬೇಕೆಂದಿದ್ದರೂ, ಸ್ವಾತಂತ್ರ್ಯವೇ ಧ್ಯೇಯವೆಂದ ಕೊಂಗ್ರೆಸಿಗೆ ಭಾರತ ವರ್ಷವನ್ನು ಬ್ರಿಟಿಷ ಸರಕಾರವು ಒಪ್ಪಿಸಿದಂತಾಗಿಲ್ಲವೆ? ಎನ್ನುತ್ತಾರೆ ಕೊಂಗ್ರೆಸೆಂಬುದು ಇವರಿಗೆ ಭೂತದಂತೆ ಬೇರೆ ದಿಗಿಲನ್ನುಂಟುಮಾಡಿಯದೆ

ನಮಗೆ ಅನುಕೂಲರಾಗಿರುವವರಲ್ಲೂ ಕೆಲವು ಅಭಿಪ್ರಾಯಗಳಿವೆ ಅಧಿಕಮತ ಇರುವಲ್ಲಿ ಕೊಂಗ್ರೆಸ್ ಪಕ್ಷವು ಅಧಿಕಾರ ಸ್ವೀಕರಿಸಬೇಕೆನ್ನುವುದು ಒಂದು ಅಭಿಪ್ರಾಯ ಆದರೆ, ಈ ಅಭಿಪ್ರಾಯವನ್ನು ಈಗ ಹೇಳುವವರಲ್ಲಿ ಹೆಚ್ಚಿನವರು ಹಿಂದೆ ಕೊಂಗ್ರೆಸು ಗೆಲ್ಲಬಹುದೆಂಬ ಕನಸನ್ನು ಸಹ ಕಂಡದಿಲ್ಲ 'ಜನತೆಯ ಬೆಂಬಲವು ಈ ಪಕ್ಷಕ್ಕಿಲ್ಲ ನಿರುಪಾಯವಾಗಿ ಉಗ್ರರು ಈ ಕೊಂಗ್ರೆಸನ್ನು ಈ ರೀತಿ ಮಾಡಿ ತಂದಿದ್ದಾರೆ' ಎನ್ನುತ್ತಿದ್ದರಿವರು ಹೀಗೆಂದೂ ಇವರು ಸುಧಾರಣಾ ಆಕ್ಟನ್ನು ಅನುಮೋದಿಸಿದವರು ಸ್ವರಾಜ್ಯಪ್ರಿಯರಲ್ಲದ ಯಾವುದೊಂದು ಪಂಗಡವು ಈ ಆಕ್ಟನ್ನು ಅಂಗೀಕರಿಸಿ ರಾಜ್ಯಭಾರವನ್ನು ಮುನ್ನಡೆಸಲು ಒದಗಬಹುದೆಂದು ಇವರು ನಂಬಿದ್ದರು ಆ ಭಾವನೆ ಬರೀ ಭ್ರಮೆಯಾಯಿತು ಕೊಂಗ್ರೆಸು ಅಧಿಕಸಂಖ್ಯಾಕವಾಗಿಯೆ ಪ್ರಾತಿನಿಧ್ಯವನ್ನು ಸೆಳೆದುಕೊಂಡಿತು. ಹೇಗೂ ಇರಲಿ, ಅನುಕೂಲರೂ ಪ್ರತಿಕೂಲರೂ ಕೊಂಗ್ರೆಸು ಅಧಿಕಾರ ಕಳೆದು ರಾಜ್ಯಭಾರ ವಹಿಸಿ ನೋಡಲಿ ಎಂದ ಪ್ರೋತ್ಸಾಹ ಕೊಡುತ್ತಿದ್ದಾರೆ ಅಲ್ಲಿ ತಾನ ಕೊಂಗ್ರೆಸಿನ ಯೋಗ್ಯತೆ ಹೊರಬೀಳುವುದಾಗಿ ಇತ್ತಂಡವೂ ನಂಬಿಕೊಂಡಿದೆ. ಚುನಾವಣೆಗೆ ಮೊದಲೇ ಕೊಂಗ್ರೆಸು ಅಧಿಕಾರಸ್ವೀಕಾರದ ಪ್ರಶ್ನೆಯನ್ನು ಇತ್ಯರ್ಥಿಸದೆ ಇದ್ದುದು ಇಂಗ್ಲಿಷ ಜನಗಳ ಅಭಿಪ್ರಾಯದಲ್ಲಿ ತಪ್ಪೆನಿಸಿಯದೆ. ಇದರ ಇತ್ಯರ್ಥ ತಿಳಿದಿದ್ದರೆ, ವೋಟರರು ಹೇಗೆ ವೋಟು ಕೊಡುತ್ತಿದ್ದರೆಂದು ಹೇಳಬರುವುದಿಲ್ಲವಾಗಿ ಅವರ ಅಭಿಪ್ರಾಯ.

ರಕ್ಷಾ ಸೂತ್ರಗಳು ಎಷ್ಟೇ ಇದ್ದರೂ, ರಾಜ್ಯಭಾರದ ನಿರ್ವಾಹಕ್ಕೆ ಕೊಂಗ್ರೆಸು ಒಲ್ಲದಿದ್ದರೆ, ತಪ್ಪಾಗುವುದೆಂದೂ ಅವರೆನ್ನುತ್ತಾರೆ. ಈ ವಿಧಾನಗಳನ್ನು ಅಂಗೀಕರಿಸಿ ಆಳುವುದಕ್ಕೆತೊಡಗುವುದರಿಂದ ಕೊಂಗ್ರೆಸಿನ ಧ್ಯೇಯಕ್ಕೆ ನಷ್ಟವೇನು ಇಲ್ಲವೆಂದೂ, ಆಟಕಾಯಿಸುವುದರಿಂದ ಲಾಭವೇನೂ ಇರದೆಂದೂ ಬ್ರಿಟಿಷರಲ್ಲಿ ಅಭಿಪ್ರಾಯವಾಗಿದೆ ಹೀಗಿದ್ದರೂ, ಈ ಪ್ರಶ್ನೆಯ ದೆಸೆಯಿಂದ ಕೊಂಗ್ರೆಸು ಎರಡಾಗುವುದೆಂದೂ ಕೆಲವರು ಹಿಗ್ಗಿಕೊಂಡಿದ್ದಾರೆ, ಅವರ ಮನಸ್ಸಿನ ಆಸೆ ಹಾಗಿರಬಹುದು, ಅದರಿಂದ ತಾನೆ ಈ ಪ್ರವಾದ

ಬ್ರಿಟಿಷರಲ್ಲಿ ಪ್ರಜಾಪಕ್ಷವು,—ಕೊಂಗ್ರೆಸಿನ ಪ್ರತಿನಿಧಿಗಳು ಮಂತ್ರಿಪದವಿಯನ್ನು ಅಂಗೀಕರಿಸಿ ಎಷ್ಟರ ತನಕ ಆಳಬಹುದೋ ಅಷ್ಟು ಆಳುವದಾದರೆ, ಹಾಗಿರುವಾಗಲೂ ಕೊಂಗ್ರೆಸಿನ ಧ್ಯೇಯಗಳನ್ನು ಕಣ್ಣೆದುರಲ್ಲಿಟ್ಟುಕೊಂಡು ಆಳುವದಾದರೆ, ಸರಕಾರದ ಕಾರ್ಯನಿರ್ವಾಹಕರ ಮೇಲೆ ಕೌನ್ಸಿಲುಗಳ ಅಧಿಕಾರವನ್ನು ನಡೆಯಿಸಲು ಅನುಕೂಲ ಸಂದರ್ಭಗಳು ಉಂಟಾಗುವುದಾಗಿ ಹೇಳುತ್ತಿದೆ ಕೌನ್ಸಿಲುಗಳಿಗೆ ಅಧಿಕಾರಿಗಳು ಜವಾಬುದಾರರಾಗಬೇಕಾದರೆ, ಒಂದೆರಡು ತಡವೆ ಪುನಃ ಚುನಾವಣೆಗಳು ಉಂಟಾಗಬೇಕಾಗಬಹುದು ಹೀಗಾದಲ್ಲಿ, ಭಾರತೀಯರಿಗೆ ಸಮ್ಮತವಾಗುವ ರೀತಿಯಲ್ಲಿ ಹೊಸ ಕ್ರಮಗಳ ರಾಜ್ಯಭಾರ ಶಾಸನವನ್ನು ಪಾರ್ಲಿಮೆಂಟು ಮಾಡಿಕೊಡಲೇ ಬೇಕಾಗುವುದು ಎಂದ ಪಾರ್ಲಿಮೆಂಟಿನಲ್ಲಿ ಭಾರತವಾಸಿಯರ ಆಶಯಗಳನ್ನು ಬಲಿವರ ಮಾತಾಗಿದೆ

ಫೆಡರೇಶನ ಆಗುವಷ್ಟು ತ್ವರೆಯಾಗಿ ಕೈಗೂಡಿ ಬರುವುದೆಂದು ಅಲ್ಲಿನ ನಂಬಿಕೆ ಕೇಂದ್ರ ಸ್ಥಾನದಲ್ಲೂ ಕೊಂಗ್ರೆಸು ಹೆಚ್ಚು ಪ್ರತಿನಿಧಿಗಳನ್ನು ಪಡೆವುದಾಗಿಯೂ, ಅಲ್ಲಿ ಅಧಿಕಾರಕ್ಕೆ ಎಷ್ಟು ಮೇರೆ ಹಾಕಲಾಗಿದೆಯಾದರೂ, ಹಲವು ಹದಿನೆಂಟು ಕೂಟಗಳ ನಡುವೆ ರಾಷ್ಟ್ರೀಯರಿಗೆ ವಿಶೇಷವಾದ ಪ್ರಾಬಲ್ಯವು ದೊರೆವುದು ಅಲ್ಲಿ ಕಷ್ಟವಾಗುವುದೆಂದ ತಿಳಿದೇ ಇರಬೇಕಾಗಿಯೂ ಆದರೂ ಪ್ರಾಂತ್ಯಗಳಲ್ಲಿ ಅಧಿಕಮತವನ್ನು ಪಡೆದ ಕೊಂಗ್ರೆಸು ತನ್ನ ಅಭಿಪ್ರಾಯವನ್ನು ಬ್ರಿಟಿಷ ಸರಕಾರವು ಅಗತ್ಯವಾಗಿಯೂ ಮನ್ನಿಸಬೇಕಾಗುವಷ್ಟು ಜಾಣ್ಮೆಯಿಂದ ಬಲವಾಗಿ ಕಾರ್ಯ ನಿರ್ವಹಿಸಲು ಅಡ್ಡಿಯಾಗದೆಂದೂ ಬ್ರಿಟಿಷ ಪತ್ರಿಕೆಗಳ ಸೂಚನೆಯಾಗಿದೆ

ಈಗ ಅನುಕೂಲವಾಗಿರ ಬಂಗಲೆ ಹೊರವಳಯ ಗಳನ್ನ ಗೆದ್ದುಕೊಂಡರೆ ತಾನೆ, ಮುಂದೆ ಒಳಕೋಟೆಯನ್ನ ಗೆಲ್ಲಲು ಸಾಮರ್ಥ್ಯವೂ ಅನುಕೂಲತೆಗಳೂ ಒದಗಬಹುದು '

ಯಾವುದೊಂದು ಬಗೆಯ ದಂಗೆ ಅಥವಾ ಕ್ರಾಂತಿಯ ಮೂಲಕವಾಗಿ ಬ್ರಿಟಿಷ ಸರಕಾರವು ನಮ್ಮ ಅಭಿಪ್ರಾಯವನ್ನ ಅಂಗೀಕರಿಸುವ ಹಾಗೆ ಮಾಡುವುದು ವ್ಯರ್ಥ ಆಲೋಚನೆ ಭಾರತ ವರ್ಷವು ಅಂತಹ ಪ್ರಯತ್ನಗಳನ್ನು ಮಾಡಲಾರದು, ಅದು ಇಲ್ಲಿನ ಸಂಸ್ಕೃತಿಗೆ ಒಪ್ಪತಕ್ಕದೇ ಅಲ್ಲ ಭಾರತವಾಸಿಯರ ಅಭಿಪ್ರಾಯವನ್ನು ಮೂಲೆಗೊತ್ತಿ ಎಂದೂ ಇಲ್ಲಿ ಆಳುವುದು ತಪ್ಪು ಎಂಬ ಅಭಿಪ್ರಾಯವು ಪಾರ್ಲಿಮೆಂಟಿನಲ್ಲಿ ಉಂಟಾಗುವ ಹಾಗೆ ಮಾಡುವುದೂ ಸ್ವಲ್ಪ ಕಠಿನ ಕಾರ್ಯ ಆದರೂ ನಮಗೆ ಈಗ ಕೊಟ್ಟಿರುವ ಈ ಶಾಸನವು ವಜ್ರಲಿಪಿಯಾಗಿಲ್ಲವಷ್ಟೆ ಹಾಗೆಯೆ, ಈಗ ಅಧಿಕಾರ ವಹಿಸಿರುವ ಕನ್ಸರ್ವೇಟಿವ ಪಕ್ಷವೂ ಚಿರಂಜೀವಿಯಾಗಿಲ್ಲವಷ್ಟೆ. ಭಾರತವಾಸಿಯರ ಆಕಾಂಕ್ಷೆಗಳನ್ನು ಪೂರಯಿಸಿ ಕೊಡಬಲ್ಲ ಪಾರ್ಲಿಮೆಂಟು ಸದ್ಯದಲ್ಲೇ ಚುನಾವಣೆ ಹೊಂದಿ ಬರಲಿಕ್ಕಿದೆಯೆಂದೂ, ಆ ಕಾಲದಲ್ಲೇ ಕೊಂಗ್ರೆಸ್ ಪಕ್ಷದವರೇ ಅಧಿಕಸಂಖ್ಯೆಯಲ್ಲಿರುವ ಕೌನ್ಸಿಲುಗಳು ಭಾರತವರ್ಷದಲ್ಲಿರುವಂತಾದಲ್ಲಿ ನಮಗೆ ನಮ್ಮ ಕೇಳಿಕೆಯಂತೆ ಕಾರ್ಯ ಸಾಧಿಸಿ ಕೊಡುವರೆ ಅಂತಹ ಪಾರ್ಲಿಮೆಂಟು ನಿರಾಕರಿಸಬಹುದೆ? ಹೀಗಿರುವ ಕಾರಣ ಕೊಂಗ್ರೆಸು ಈಗ ಅಧಿಕಾರ ಸ್ವೀಕರಿಸುವುದು ಬ್ರಿಟಿಷರಲ್ಲಿ ನಮಗೆ ಹಿತವಾಗಿರುವವರ ಅಭಿಪ್ರಾಯವಾಗಿದೆ ಮುಂದಣ ವಾರ, ಇದು ನಿಶ್ಚಿತವಾಗುವುದು.

ಸ್ಫುಟವಿಚಾರಗಳು

ಅಧಿಕಾರ ಸ್ವೀಕಾರದ ಪ್ರಶ್ನೆ.

ಕೊಂಗ್ರೆಸ್ ಪಕ್ಷವು ಕೌನ್ಸಿಲ್ ಪ್ರವೇಶಕ್ಕಾಗಿ ನಿರ್ಧರಿಸಿದಾಗ, ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ಇತ್ಯರ್ಥಿಸದೆ ಬಾಕಿಯಿಟ್ಟುದರಿಂದ, ಈಗ ಸ್ಥಳೀಯ ಕಮ್ಮಿಟಿಗಳ ಅಭಿಪ್ರಾಯಪಡೆದೇ ತೀರ್ಮಾನಮಾಡುವಂತೆ ನಿರ್ಧರಿಸಿದೆ ಸಮಾಜವಾದಿಗಳೂ ಉಗ್ರ ಸ್ವಾತಂತ್ರ್ಯಪ್ರಿಯರೂ ಅಧಿಕಾರ ಸ್ವೀಕರಿಸುವುದರಿಂದ ಸರಕಾರದೊಡನೆ, ಯಾಗೂ ಬೇಡವಾದರೂ ನಮಗೆ ಕೊಡಲಾಗುವ ಆಕ್ಟನ್ನು ಮುರಿದಿಕ್ಕುವ ಧ್ಯೇಯವುಳ್ಳ ಕೊಂಗ್ರೆಸು, ಈಗ ಸಹಕರಿಸುವಂತಾಗುವುದೆಂಬ ಆಕ್ಷೇಪವನ್ನಿತ್ತು, ಅಧಿಕಾರವನ್ನು ಸ್ವೀಕರಿಸಬಾರದೆಂದೇ ಹೇಳುವರು ಆದರೆ ಚುನಾವಣೆಗೆ ಮುಂದೆ ಬಂದಂದು, ಕೊಂಗ್ರೆಸು ಉಮೇದ್ವಾರರಾಗಲಿ ಮುಖಂಡರಾಗಲಿ ಜನತೆಯ ಮುಂದೆ ತಮ್ಮ ಕಾರ್ಯಕ್ರಮವನ್ನು ಬಹಳ ಚೆನ್ನಾಗಿ ವಿವರಿಸುತ್ತಾ, ಜನತೆಯಲ್ಲಿ ಅಧಿಕಾಂಶವಾಗಿರುವ ದರಿದ್ರರ ಸ್ಥಿತಿಗತಿಗಳನ್ನ ಉದ್ಧರಿಸಲು ಕೊಂಗ್ರೆಸ್ ಪಕ್ಷವು ಕೌನ್ಸಿಲುಗಳಲ್ಲಿ ಸಾಧಿಸುವುದಾಗಿ ತಿಳಿಸಿ, ಜನತೆಯಲ್ಲಿ ಈ ಆಸೆಯನ್ನ ಹುಟ್ಟಿಸಿದುದರಿಂದಲೇ ಅಷ್ಟು ಬಹುಮತ ದೊರೆತು ಈಗ ಚುನಾವಣೆಹೊಂದುವ ಹಾಗಾ ' ತೆಂಬುದನ್ನು ಮರೆಯಬಾರದು ಈ ಕಾರಣದಿಂದಲೇ ಅಧಿಕಾಂಶ ಕಮಿಟಿಗಳ ಅಧಿಕಾರ ಸ್ವೀಕಾರವೇ ಯೋಗ್ಯವಾದುದೆಂದ ತೀರ್ಮಾನಿಸಿವೆ ಎಂದು ವರದಿ ತಲುಪಿದೆ ಕೊಂಗ್ರೆಸ್ ಸದಸ್ಯರು ಬಹುಮತ ಪಡೆದಿರುವ ಪ್ರಾಂತ್ಯಗಳಲ್ಲಿ ಅಧಿಕಾರ ಸ್ವೀಕರಿಸಬೇಕೆಂದು ಸೂಚಿಸಿದ ಕಮಿಟಿಗಳೇ ಬಹಳವಿವೆ ಮ ಡಿತ ನೆಹರೂರವರ ಪ್ರಾಂತ್ಯ ಮತ್ತು ಪಂಜಾಬುಗಳಲ್ಲಿ ಮಾತ್ರ ಇದನ್ನು ನಿರಾಕರಿಸಲಾಗಿದೆ, ಅದು ಹಾಗಾಗುವುದೆಂದು ಅಂದಿನಿಂದಲೂ ಗೊತ್ತು ಜನತೆಯ ವಿಶ್ವಾಸವನ್ನು ಕೆಡಿಸಿಕೊಳ್ಳಲು ಕೊಂಗ್ರೆಸು ಸಿದ್ಧವಿಲ್ಲವಾದಲ್ಲಿ, ತಾವೂ ಒಂದು ಕೈನೋಡಿ ಬಿಡಬೇಕೆಂಬ ಕೊಂಗ್ರೆಸ್ಸಿನ ಮುಖಂಡರ ಇಚ್ಛೆಯನ್ನು ಅಖಿಲ ಭಾರತದ ಕೊಂಗ್ರೆಸ್ ಕಮಿಟಿಯು ಪೂರಯಿಸಿಕೊಡುವುದಾಗಿ ನಂಬಬೇಕಾಗಿದೆ

ಹಿಂದೀ ಸೈನ್ಯವೆಂಬುದರಲ್ಲಿ ಹಿಂದೀ ಅಧಿಕಾರಿಗಳು ಕಡಮೆ.

ಏಕೆ? ಹದಿನೇಳು ವರ್ಷಗಳಿಂದಲೂ ಈ ಪ್ರಶ್ನೆಯೇ ಎಸೆಂಬ್ಲಿಯಲ್ಲಿ ಚರ್ಚೆಗೆ ಬರುತ್ತಲೂ, ಸೈನ್ಯಾಧ್ಯಕ್ಷರು ಅದೊಂದು ವಿನೋದವೆಂಬಂತೆ ತೀರ್ಮಾನಿಸುತ್ತಲೂ ಅಲ್ಪಸ್ವಲ್ಪ 'ಹಿಂದೀಕರಣ' ತತ್ವಮರಣವನ್ನು ಬೋಧಿಸುತ್ತಲೂ ಕಾಲಹರಣಮಾಡುತ್ತಲಿದ್ದಾರೆ ಈ ಸಲ ಎಸೆಂಬ್ಲಿಯಲ್ಲಿ ಈ ಪ್ರಶ್ನೆಯೆದ್ದು ಸರಕಾರೀ ಪಕ್ಷವು ಸೋತಿದೆ ಮಿ| ಗ್ರಿಫಿತರೆಂಬ ಆಫಿಸರರು ಈ ಪ್ರಶ್ನೆಗೆ ಉತ್ತರಕೊಡುವ ಭಾಷಣದಿಂದ ಈ ಸೋಲು ಖಂಡಿತವಾಗುವಂತಾಯಿತೆನ್ನಬಹುದ ಹಿಂದೀ ಅಧಿಕಾರಿಗಳು ಹೆಚ್ಚಾಗಬೇಕೆಂಬುದು ಸ್ವಾರ್ಥದ ಅಥವಾ ಅಹಂಭಾವದ ಮಾತಲ್ಲ. ನಮ್ಮನ್ನು ಸೇನಾಗಿಸಿಡುವರೆಂಬ ಕಳವಳವೂ ಅಲ್ಲ. ಸ್ವರಾಜ್ಯವು ಕ್ರಮೇಣ ಸಿಗುವಂತೆ ಹೊಸ ಶಾಸನ ಕೊಟ್ಟಿರುವೆವೆಂಬ ಪಾರ್ಲಿಮೆಂಟಿಗೆ 'ಕ್ರಮೇಣ' ಎಂಬುದರ ಕಾಲವೆಷ್ಟು ಎಂಬುದನ್ನು ತಿಳಿದುಕೊಳ್ಳುವ ಶಕ್ತಿಯುತ್ತೇ ಎಂದು ಸಂದೇಹಪಡುವ ಹಾಗೆ ನಮ್ಮ ಸೈನ್ಯಾಧ್ಯಕ್ಷರು ವರ್ತಿಸುತ್ತಾರೆ. ದೇಶವನ್ನು ಸಂರಕ್ಷಿಸಿಕೊಳ್ಳಲು ಭಾರತೀಯರು ಸಿದ್ಧರಾಗುವ ತನಕ ಸಂಪೂರ್ಣ 'ಸ್ವರಾಜ್ಯ' ವನ್ನು ಕೊಡುವುದು ಹೇಗೆ ಎಂದು ಪ್ರತಿಯೊಬ್ಬ ಸಾಮ್ರಾಜ್ಯವಾದಿಯೂ ಗಳಗಳನೆ ಅತ್ತುಕೊಳ್ಳುತ್ತಾನೆ, ಇತ್ತ ರಕ್ಷಣೋಪಾಯ ಕಲಿತುಕೊಳ್ಳುವುದಕ್ಕೂ ಅವಕಾಶವಿಲ್ಲದಂತೆ ಪಂಕ್ತಿಯನ್ನೂ ಆತನೇ ಒದಗಿಸುತ್ತಾನೆ. ಗ್ರಿಫಿತರ ದೃಷ್ಟಿಯಲ್ಲಿ ಇದೊಂದು 'ಎಕ್ಸ್‌ಪೆರಿಮೆಂಟು!' ಕೇವಲ ಪರೀಕ್ಷೆ' ಎಂದರೆ ನಮಗೆ ಪೆಪ್ಪರಮೆಂಟನ್ನು ತಿನ್ನಗೊಟ್ಟು, ಅದು ಮುಗಿದ ಬಳಿಕ ಮತ್ತೊಂದನ್ನು ಕೊಡುತ್ತಾ ಬರುವಂತಲ್ಲದೆ, ನಮ್ಮ ಹೊಟ್ಟೆಗೆ ತೃಪ್ತಿಯಾಗುವಷ್ಟು ಆಹಾರವನ್ನು ಒಮ್ಮೆಗೇ ಒದಗಿಸುವ ಉದ್ದೇಶವಿಲ್ಲ.

ಹಿಂದೀಯರು ಕಾದಾಳುಗಳೇ!

ಯಾರು ಬಲ್ಲರು? ಭಾರತವರ್ಷದಲ್ಲಿ ಬ್ರಿಟಿಷರು ನೆಲೆಸಿಲ್ಲುವಂತೆ ಮಾಡಿಕೊಟ್ಟ ಕ್ಲೈವ ಕಾರ್ನವಾಲಿಸ್ ಮೊದಲಾದ ಮಹಾಸೈನ್ಯಾಧ್ಯಕ್ಷರು ಈಗ ಜೀವಿತರಾಗಿದ್ದರೆ, ಇದಕ್ಕೆ ಉತ್ತರಕೊಡುತ್ತಿದ್ದರು ಗ್ರಿಫಿತರ ಸಮಕ್ಷಮ ನಿಂತು, ಅವರು ಸತ್ಯವನ್ನಾಡುವ ಅಭ್ಯಾಸವುಳ್ಳವರಾಗಿದ್ದರೆ,—ನಮ್ಮ ಸಾಮ್ರಾಜ್ಯವೆಂಬುದನ್ನು ನಮಗೆ ಗೆದ್ದುಕೊಟ್ಟವರು ಹಿಂದೀ ಸಿಪಾಯಿಗಳು ಎಂದು ಖಚಿತ ತಿಳಿಸುತ್ತಿದ್ದರು ಗ್ರಿಫಿತರು ಸರಕಾರದ ಇಲಾಖೆಯಲ್ಲೇ ಇರುವವರು, ಅಲ್ಲೇ ಸಂಗ್ರಹವಾಗಿರುವ ರಿಕಾರ್ಡನ್ನು ಪರಾಂಬರಿಸಲು ಅವಕಾಶ ದೊರೆತರೆ, ಅವರು ಸ್ವಲ್ಪ ವಿವೇಕ ಹೊಂದಬಹುದು ಪುನಃ ಒಂದು ಯುದ್ಧವಾದರೆ, ಹಿಂದೀಯರ ಪರಾಕ್ರಮವನ್ನು ... ಬಹುದೆಂದು ಅವರು ವ್ಯಂಗ್ಯವಾಗಿ ... ಯುದ್ಧವು ಪ್ರಪಂಚಕ್ಕೆ ಬೇಡವೆಂದು ಭಾರತೀಯರು ಮನಸಾ ಪ್ರಾರ್ಥಿಸಿಕೊಳ್ಳುತ್ತಾರಾದರೂ ಗ್ರಿಫಿತರ ಆತ್ಮತೃಪ್ತಿಗಾಗಿಯೂ ಭಾರತೀಯರ ಯೋಗ್ಯತಾ ನಿರ್ಣಯಕ್ಕಾಗಿಯೂ ಒಂದು ಯುದ್ಧವಾದಲ್ಲಿ,—ಭಾರತೀಯರೇ ಸೇರಿರುವ ಸೈನ್ಯ ವಿಭಾಗಗಳನ್ನು ಗ್ರಿಫಿತರು ಎಷ್ಟು ತ್ವರೆಯಾಗಿ ವಿಲಾಯತಿಗೆ ಕಳುಹುವರೆಂಬುದನ್ನು, ಅಂದು ಮಹಾಯುದ್ಧದ ಇತಿಹಾಸ ಬಲ್ಲವರಿಗೆ, ತಿರಿಗಿ ಹೇಳಬೇಕಾಗಿಲ್ಲ ಹಿಂದೀಯರು ಆಗ ಯುದ್ಧರಂಗದಲ್ಲಿ ಪರಾಕ್ರಮ ತೋರಿಸಿದ್ದಿಲ್ಲವೆ? ಇಂಗ್ಲೆಂಡು ಸೈನ್ಯಭರಿತವಾಗಿ ಆಗ ಸಿದ್ಧವಾಗಿತ್ತೇ? ಇಂಗ್ಲೆಂಡಿನ ಯುವಕರೂ ವಯಸ್ಕರೂ ಆಗ ಸೈನ್ಯದಲ್ಲಿ ಸೇರಿ ಬೇಗನೆ ತರಬೇತು ಹೊಂದುತಿರುವಾಗ ಯುದ್ಧರಂಗದಲ್ಲಿ ಶತ್ರುಪಕ್ಷವನ್ನು ತಡೆಯಲ್ಲಿ ಮಾಡಿದವರಾರು? ಎಷ್ಟು ಮಂದಿ? ಗ್ರಿಫಿತ ಸಾಹೇಬರು ಪರಾಂಬರಿಸಲಿ

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets, at the
Office C. P C Co., Ltd.

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಅಸೆಂಬಿಯಲ್ಲಿ 'ಇಂಡಿಯನ್ನಾಯಿಜೇಶನ್' ಮೇಲಿನ ತರ್ಕ.

ಗ್ರಿಫಿತರ 'ಅಹಂಕಾರದ' ಮಾತುಗಳು.

ಸತ್ಯಮೂರ್ತಿಯವರು ಖಂಡಿಸಿದರು.

ಕಳೆದ ತಾ. ೩ರಲ್ಲಿ ಸೇರಿದ ಅಸೆಂಬ್ಲಿ ಅಧಿವೇಶನದಲ್ಲಿ ಬಿರುಸಾದ ತರ್ಕ ವಿವಾದಗಳು ನಡೆದುವು ಸ್ವಾರಸ್ಯವಾದ ಪ್ರಶ್ನೋತ್ತರಗಳೂ ಭಾಷಣಗಳೂ ಆದವು. ಸೈಯದ್ ಮುರ್ತಜಾ ಸಾಹೇಬರು ಇಂಡಿಪೆಂಡೆಂಟ್ ಪಾರ್ಟಿಯ ಪರವಾಗಿ ಮೊದಲನೇ ಕಟ್‌ಮೋಶನನ್ನು ಸಭೆಯ ಮುಂದಿಟ್ಟರು. ಸೈನ್ಯವನ್ನು "ಇಂಡಿಯನೈಜ್" ಮಾಡುವುದು ಅಥವಾ ಸೈನ್ಯದಲ್ಲಿ ಭಾರತೀಯರ ಸಂಖ್ಯೆಯನ್ನು ಹೆಚ್ಚಿಸಿ ಬ್ರಿಟಿಷರ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬುದೇ ಈ ಕಟ್ ಮೋಶನಿನ ಉದ್ದೇಶವಾಗಿತ್ತು.

ಸರ್ ಕವಾಸ್ಜೀ ಜಹಾಂಗೀರರು ಮಿ. ಮುರ್ತಜಾ ಸಾಹೇಬರ ಈ ಕಟ್‌ಮೋಶನನ್ನು ಬೆಂಬಲಿಸಿದರು. ಮಿ। ಗ್ರಿಫಿತ್ ಮತ್ತು ಮಿ। ಟೋಟಿನ್‌ಹ್ಯಾಂರವರುಗಳು ಸರಕಾರದ ಪರವಾಗಿ ಜವಾಬುಕೊಡುತ್ತಲಿದ್ದರು.

ಸರ್ ಕವಾಸ್ಜಿ ಜಹಾಂಗೀರ್, ಶ್ರೀ ಗಡ್ಗಿಲ್ ಮತ್ತು ಸತ್ಯಮೂರ್ತಿ ಇವರುಗಳು ಸೈನ್ಯವನ್ನು ಭಾರತೀಯವಾಗಿ ಮಾಡುವುದರ ಅವಶ್ಯಕತೆ ಮತ್ತು ಅದರಿಂದಾಗುವ ಅನುಕೂಲತೆಗಳನ್ನು ವಿವರಿಸಿ ಹೇಳಿದರು.

ಗ್ರಿಫಿತರ ಜವಾಬು—

"ಇಂದಿಗೆ ೧೫ ವರ್ಷಗಳಿಂದ ಇಂಡಿಯನೈಜೇಶನ್ ಪ್ರಶ್ನೆಯು ಎಸೆಂಬ್ಲಿ ಮುಂದೆ ಒಂದು ಬಿದ್ದು ಹೋಗಿರುತ್ತದೆ. ಸೈನ್ಯವನ್ನು ಇಂಡಿಯನೈಜ್ ಮಾಡಲಿಕ್ಕೆ ಈಗಿನ ಏರ್ಪಾಡುಗಳು ಒಂದು ಪ್ರಾರಂಭ ಪ್ರಯತ್ನವೆಂತಿರುತ್ತದೆ. ಸೈನ್ಯವನ್ನು ಇಂಡಿಯನೈಜ್ ಮಾಡುವ ಮೊದಲು ನಾವು ಯೋಚಿಸಬೇಕಾದ ಅನೇಕ ವಿಚಾರಗಳಿವೆ. ಮೊದಲನೆಯದಾಗಿ ಪರದೇಶಿಯವರಿಗೆ ಹಿಂದೂಸ್ಥಾನವನ್ನು ಸುಲಿಗೆಮಾಡಲಿಕ್ಕಿನ ಇಚ್ಛೆ. ಎರಡನೆಯದಾಗಿ ಅಂತರ್ ವಿಚಾರಗಳ ಭದ್ರತೆ. ಭಾರತೀಯರು ಹೋರಾಟದ ಜನಾಂಗೀಯರಲ್ಲ. ಅಲ್ಲದೆ ಭಾರತೀಯರಲ್ಲಿ ಸೈನ್ಯ ಮುಖಂಡತ್ವದ ಯೋಗ್ಯತೆ ಕಡಿಮೆ. ಹೀಗಿರುವಾಗ ಸೈನ್ಯವನ್ನು ಒಂದೇ ಸವನೆ, ಇಂಡಿಯನೈಜ್ ಮಾಡಿದರೆ ಪ್ರಮಾದವಾದೀತಾಗುವುದು"

ಸತ್ಯಮೂರ್ತಿಯವರ ಖಂಡನೆ

ಮಿ। ಗ್ರಿಫಿತರ ಭಾಷಣದ ತರ್ಕಗಳನ್ನು ಟೀಕಿಸಿ, ಅವರು ಭಾರತೀಯರ ಸೈನ್ಯ ಯೋಗ್ಯತೆಯನ್ನು ಅಳೆದು ತೋರಿಸಿದಕ್ಕೆ ಶ್ರೀ ಸತ್ಯಮೂರ್ತಿಯವರು ರೋಷದಾಯಕವೂ, ಸಂತಾಪಯುಕ್ತವೂ ಆದ ಒಂದು ಭಾಷಣದಲ್ಲಿ ಅದನ್ನು ಖಂಡಿಸಿದರು.

"ಸೈನ್ಯವನ್ನು ಇಂಡಿಯನೈಜ್" ಮಾಡುವುದಕ್ಕಾಗಿ ತಂದೇತುಗಳಾಗುತ್ತವೆಂಬ ಮಾತುಗಳು ಬಹಳ ಅಪಮಾನಕರವಾದವುಗಳು. ಇಂತಹ ಅಪಮಾನಕರವಾದ ಮತ್ತು ಅಹಂಕಾರ ಪ್ರದರ್ಶನೀಯವಾದ ಭಾಷಣಗಳನ್ನು ಕೇಳುವ ದುರಾದೃಷ್ಟವು ಇಂದು ನಮಗೆ ಮೊದಲನೇಯದು. ಭಾರತೀಯರು ತಮ್ಮನ್ನು ಕಾಪಾಡಿಕೊಳ್ಳುವ ಶಕ್ತಿಯುಳ್ಳವರಾಗಿದ್ದಾರೆ. ಬ್ರಿಟಿಷ ಸೈನ್ಯದ ಸಹಾಯವು ನಮಗೆ ಆಗತ್ಯವಿಲ್ಲ. ಅಂಥಾ ಸಹಾಯವು ನಮಗೆ ಬೇಕಾದಲ್ಲಿ ನಾವು ಅದನ್ನು ಬೇರೆ ಜನಾಂಗೀಕರಿಂದ ಕಡಿಮ್ಮ ಕರ್ಚಿನಲ್ಲಿ ಪಡೆಯುತ್ತೇವೆ. ಬ್ರಿಟಿಷ ಸೈನ್ಯದ ಈಗಿನ ಖರ್ಚು ತಡೆಯಲಸಾಧ್ಯವಾದದ್ದಿದೆ. ಬ್ರಿಟಿಷರು ಬರುವ ಮೊದಲು, ಹಿಂದೂಸ್ಥಾನವು ತನ್ನ ರಕ್ಷಣೋಪಾಯಗಳನ್ನು ನೋಡಿಕೊಂಡಿತ್ತು. ನಮ್ಮಲ್ಲಿ ಯೋಗ್ಯ ಸೈನಿಕರೂ ಇದ್ದರು. ಚರಿತ್ರೆಯಲ್ಲಿ ಬ್ರಿಟಿಷರು ಹಿಂದೀ ಸೈನಿಕರೊಡನೆ ಹೋರಾಡಿ ಗೆದ್ದ ಒಂದೇ ಒಂದು ನಿದರ್ಶನವನ್ನು ತೋರಿಸಿಕೊಡುವಿರೋ? ಹಿಂದೀಯರನ್ನು ಹಿಂದೀಯರ ಮೂಲಕ ಗೆಲ್ಲಬೇಕಾಯಿತು. ಸರ್ ಹೆನ್ರಿ ಗಿಡ್ನಿಯವರು ಭಾರತೀಯ ತರುಣ ಸೈನಿಕರನ್ನು ಬಹಳವಾಗಿ ಶ್ಲಾಘಿಸಿದ ವಿಚಾರವನ್ನು ನಾನು ಬಲ್ಲೆನು. ಅಂದ ಮೇಲೆ ಭಾರತೀಯರಲ್ಲಿ ಯೋಗ್ಯತೆ ಇಲ್ಲ ಎಂಬ ಗ್ರಿಫಿತರ ಅಪಮಾನಕರ ಮತ್ತು ಅಹಂಕಾರದ ಮಾತುಗಳಲ್ಲಿ ಅರ್ಥವೇನಿದೆ, "ನಮ್ಮ ವಿಚಾರ ಗ್ರಿಫಿತರು ಟೀಕಿಸುವುದೇಕೆ? ನೆಪೋಲಿಯಾನನು ಬ್ರಿಟಿಷರನ್ನು "ಅಂಗಡಿಗಾರರ ಜನಾಂಗ (nation of shop keepers') ವೆಂಬ ಅಭಿಪ್ರಾಯವನ್ನು ತಿಳಿಸಿ ಬ್ರಿಟಿಷರ ಸಮರ ಯೋಗ್ಯತೆಯನ್ನು ಬೆಳಕಿಗೆ ಎಳೆದಿರುವನು. ಗ್ರಿಫಿತರು ಇಂಥಾ ಭಾಷಣಗಳನ್ನು ಕೊಡುವಷ್ಟು ಧೈರ್ಯವಂತರಾದರಿಂದ ಮೇಲೆ ಯುದ್ಧಸಮಯದಲ್ಲಿ ಬ್ರಿಟಿಷರು ಭಾರತೀಯ ಸೈನಿಕರ ಸಹಾಯವನ್ನ ಬೇಡುವುದು ಬಹಳ ಆಶ್ಚರ್ಯಪ್ರದವಾಗಿರುತ್ತದೆ. ಶೀಘ್ರ ಘನಸ್ತಿಕೆಯಿಂದ "ನಿಮ್ಮನ್ನು ನಾವು ಗೆದ್ದದ್ದಾದುದರಿಂದ ಸೈನ್ಯದಲ್ಲಿ ನಿಮಗೆ ಸ್ಥಾನ ಸಿಗಲಾರದು" ಎಂದು ಧೈರ್ಯದಿಂದ ಹೇಳಬಹುದು ಅಲ್ಲದೆ, ಹಿಂದೀಯರು ಸೈನ್ಯಕ್ಕಾಗಿ ಅಯೋಗ್ಯರೆಂಬ ಮಾತುಗಳು ಅಪಮಾನಕರ ವಾದವುಗಳ."

ಶ್ರೀ ಗೆಡ್ಗಿಲ್ಲರ ವಾದ

"ಇಂಡಿಯನೈಜೇಶನ್" ಸಮಸ್ಯೆಯನ್ನು ಸರಕಾರವು ಸರಿಯಾಗಿ ವ್ಯವಸ್ಥೆಪಡಿಸುತ್ತಿದ್ದರೆ ಈಗಿನ ತೊಂದರೆಗಳಿರಲಿಲ್ಲ. ದೇಶದೊಳಗಿನ ಭದ್ರತೆಯ ವಿಚಾರವು ಹಣಕಾಸಿನ ವಿಚಾರವಾಗಿರುತ್ತದೆ. ಈ ಸೈನ್ಯದಲ್ಲಿ ಬ್ರಿಟಿಷರನ್ನು ಕಡಿಮೆ ಮಾಡಿ ಅವರ ಸ್ಥಾನದಲ್ಲಿ ಹಿಂದೀಯರನ್ನು ಇಟ್ಟರೆ ವರ್ಷಕ್ಕೆ ೩೦ ಕೋಟಿಗಳ ಉಳಿತಾಯವಾಗುತ್ತದೆ. ಇದನ್ನು ನಾವು ಸಮಾಜಿಕ ಏಳ್ಗೆಗಳೂ ದೇಶದ ಭದ್ರತೆಗೂ ಉಪಯೋಗಿಸಬಹುದು. ಆದರೆ ಸೈನ್ಯಾಧಿಕಾರವು ಹಿಂದೀಯರಿಗೆ ಇರದೆ ಈ ವಿಚಾರವು ನಡೆಯದ ಮಾತಾಗಿದೆ."

ಕವಾಸ್ಜಿ ಜಹಂಗೀರರ ತರ್ಕ

"ಶ್ರೇಷ್ಠ ಕುಟುಂಬದಲ್ಲಿ ಹುಟ್ಟಿ ಉಚ್ಚ ಶಿಕ್ಷಣವನ್ನು ಪಡೆದ ಕೆಲವು ಮಂದಿಗಳಿಗೆ ಮಾತ್ರ ಸೈನಿಕರಾಯರು ಸೈನ್ಯಾಧಿಕಾರವನ್ನು ಕೊಟ್ಟರೆ ಸಾಲದು. ಅವರು ಭಾರತೀಯರ ಇಂದಿನ ಮನೋಭಾವವನ್ನು ತಿಳಕೊಂಡು ಕೆಲಸಮಾಡಬೇಕು. ಅಲ್ಲದೆ ಸರಕಾರವು ಹಿಂದೂಸ್ಥಾನದಲ್ಲಿ ಸ್ವಲ್ಪ ಸಮಯವಿದ್ದು, ಇಲ್ಲಿನ ವಿಚಾರಗಳು ಚೆನ್ನಾಗಿ ಗೊತ್ತಿವೆಯೆಂದು ಕೊಚ್ಚಿಕೊಳ್ಳುವವರ ಮಾತಿನ ಮೇರೆಗೆ ನಡೆದರೆ ತುಂಬಾ ಕೆಡುಕುಂಟು. ಆದುದರಿಂದ ಸೈನಾಧಿಕಾರಿಗಳ ಸ್ಥಾನವನ್ನು ಭಾರತೀಯರ ಕೈಗೇನೆ ಒಪ್ಪಿಸಬೇಕು" ಎಂದು ಸರ್ ಕ ಜಹಂಗೀರರು ತಮ್ಮ ಭಾಷಣದಲ್ಲಿ ತಿಳಿಸಿದರು.

ಮಿ। ಟಾಟಿನ್‌ಹಾಂರ ಉತ್ತರ.

ಸರಕಾರದ ಕಡೆಯಿಂದ ಉತ್ತರಕೊಡುತ್ತ ಮಿ। ಟಾಟಿನ್‌ಹಾಂರು ಹೀಗೆ ತಿಳಿಸಿದರು—ಸರಕಾರವು ಸೈನ್ಯವನ್ನು "ಇಂಡಿಯನೈಜ್" ಮಾಡನೋಡುವ ಪ್ರಯತ್ನಗಳ ಫಲಿತಾಂಶವನ್ನು ಇನ್ನೂ ನೋಡಲಿದೆ. ಸರಕಾರವು ಸೈನ್ಯವನ್ನು ಒಂದೇ ಸಲಕ್ಕೆ ಇಂಡಿಯನೈಜ್ ಮಾಡಬಯಸುವುದಿಲ್ಲ. ಆ ವಿಚಾರವು ಕ್ರಮೇಣವಾಗಿ ಆಗಬೇಕು. ಈಗ ಮೊದಲು ಸೈನ್ಯದ ಒಂದು ಪ್ರತ್ಯೇಕ ಭಾಗವನ್ನು "ಇಂಡಿಯನೈಜ್" ಮಾಡುವ ಪ್ರಯತ್ನಗಳಾಗುತ್ತವೆ. ಹಾಗೆ ಕ್ರಮೇಣ ಇಡೀ ಸೈನ್ಯವೇ "ಇಂಡಿಯನೈಜ್"ಆಗುತ್ತದೆ. ಭಾರತೀಯ ಸಿಪಾಯಿಯೊಳಗೂ, ಬ್ರಿಟಿಷ ಸೈನ್ಯಾಧಿಕಾರಿಗಳೊಳಗೂ ಮೈತ್ರಿ ಬೆಳೆಸಬೇಕೆಂಬ ಉದ್ದೇಶದಿಂದ ವ್ಯಾಸ್‌ರಾಯರು ಶ್ರೇಷ್ಠ ತರಗತಿಯರೆನಿಸಿದವರನ್ನು ಸೈನಾಧಿಕಾರಿ ಸ್ಥಾನಕ್ಕೆ ಚುನಾಯಿಸಿ ತನ್ಮೂಲಕ ಆ ಮೈತ್ರಿಯನ್ನುಂಟುಮಾಡುವ ಪ್ರಯತ್ನಮಾಡುತ್ತಾರಲ್ಲದೆ, ಅದರಲ್ಲಿ ತಪ್ಪು ತಿಳುವಳಿಕೆಗೆ ಆಸ್ಪದವಿಲ್ಲ. ವಿಷಯಗಳು ಹೀಗಿರುವುದರಿಂದ ಸೈನ್ಯದಲ್ಲಿ ಬ್ರಿಟಿಷರ ಸಂಖ್ಯೆಯನ್ನು ತಗ್ಗಿಸಿ ಭಾರತೀಯರ ಸಂಖ್ಯೆಯನ್ನು ಹೆಚ್ಚಿಸಲು ಸರಕಾರವು ತಯಾರಿಲ್ಲ"ವೆಂದು ಅವರು ಖಡಾಖಡಿ ಹೇಳಿಬಿಟ್ಟರು.

ಸರಕಾರದ ಕಡೆಯಿಂದ ಎಷ್ಟು ಮಾತನ್ನಾಡಿದರೂ ಕಟ್‌ಮೋಶನನ್ನು ಸಭೆಯ ಅನುಮತಿಗಾಗಿ ಇಟ್ಟಾಗ ಅದು ವಿಭಜನೆಯಿಲ್ಲದೆ ಪಾಸ್ ಮಾಡಲ್ಪಟ್ಟಿತು.

ಫಾರೈನ್ ಎಕ್ಸ್‌ಪರ್ಟ್‌ಗಳ ಮೇಲೆ ಸುಂಕವೆ?

ಅಸೆಂಬ್ಲಿಯಲ್ಲಿ ಹಾಸ್ಯರಸ.

ಕಳೆದ ತಾ ೬ರಲ್ಲಿ ಸೇರಿದ ಅಸೆಂಬ್ಲಿಯಲ್ಲಿ ಕೆಲವು ತಮಾಷೆಗಳು ನಡೆದುವು. "ಇಂಡಿಯನೈಜೇಷನ್" ವಿಚಾರವಾಗಿ ಕಟ್‌ಮೋಶನೊಂದು ಅಸೆಂಬ್ಲಿ ಮುಂದೆ ಬಂತಷ್ಟೆ. ಸದಸ್ಯರ ಪ್ರಶ್ನೆಗಳಿಗೆ ಉತ್ತರವೀಯುತ್ತ ಮಿ। ಗ್ರಿಫಿತ್‌ರವರು "ಎಮ್ಮಿಂದು ಭಾಷಣವನ್ನು "ಈಗಿನ ತೊಂದರೆಗಳಿಗೆ ಕಾರಣವೇಂದರೆ" ಎಂದು ಪ್ರಾರಂಭಿಸಿದರು. ಆಗ ಪ್ರೊ ರಂಗಾ ಇವರು 'ನೀವೆ' ಎಂದು ಗಟ್ಟಿಯಾಗಿ ಹೇಳುವಾಗ ಎಲ್ಲರೂ ನಗಾಡಿದರು.

ಮಿ। ಟಾಟಿನ್ ಹಾಂರ ಇಂಡಿಪೆಂಡೆಂಟ್ ಪಾರ್ಟಿಯನ್ನು ಟೀಕಿಸುತ್ತಾ, ಅದೊಂದು "ಜೂ ಡ ಪಾ" ಎಂದು ಪರಿಹಾಸ್ಯಮಾಡಿದರು. ಇದಕ್ಕೆ ಉತ್ತರವಾಗಿ ಸರ್ ಕವಾಸ್ಜೀ ಜಹಾಂಗೀರರು (ಇವರು ಇಂಡಿಪೆಂಡೆಂಟ್ ಪಾರ್ಟಿಯ ಮುಖಂಡರು) ಒಂದು ಕಥೆಯನ್ನು ಹೇಳಿದರು. ಅದೇನೆಂದರೆ—ಪ್ರಖ್ಯಾತ ಬಂಗಾಲಿ ವಕೀಲರಾಗಿದ್ದ ಕೀರ್ತಿಶೇಷ ಸರ್ ರಾಶ್ ಬಿಹಾರಿ ಘೋಷರು (ಮಾಜಿ ಕಾಂಗ್ರೆಸ್ ಅಧ್ಯಕ್ಷರು) ರವರು ಕೋರ್ಟು ವ್ಯವಹಾರಕ್ಕಾಗಿ ತಮ್ಮ ಕಡೆಯ ಕಕ್ಷಿಗಾರರ ಲೆಖ್ಖಪತ್ರದ ಒಂದು ಪುಸ್ತಕಗಳ ಗಂಟನ್ನು ಕೋರ್ಟುಭವನದೊಳಗೆ ತಂದರು. ನ್ಯಾಯಾಧೀಶರು ಇದನ್ನು ನೋಡಿ ಪರಿಹಾಸ್ಯವಾಗಿ "ಎನ್ರಿ ಕೋರ್ಟಿನೊಳಗೆ ನಿಮ್ಮ ಪುಸ್ತಕಾಲಯವನ್ನೇ ತಂದುಬಿಟ್ಟಿರಲ್ಲಾ" ಎಂದರು. "ಹೌದು ಸ್ವಾಮಿ ನಿಮಗೆ ನ್ಯಾಯ ಕಲಿಸಲು ತಂದೆನು" ಎಂದು ಜವಾಬುಕೊಟ್ಟರು.

ಎಕ್ಸಪರ್ಟುಗಳ ಮೇಲೆ ಸುಂಕ

ಶ್ರೀ ಬಿ ದಾಸರು ಮಾತಾಡುತ್ತಾ, "ಒಟ್ಟಾವಾ ಒಪ್ಪಂದದಿಂದ ಸರಕಾರದ ಉತ್ಪತ್ತಿಗೆ ಏಟು ಬಿದ್ದಿದೆ. ಆರ್ಥಿಕ ದುಸ್ಥಿತಿಯನ್ನು ಪರಿಶೋಧಿಸಿ ವರದಿಮಾಡಲು ಇಂಗ್ಲೆಂಡಿನಿಂದ ಇಲ್ಲಿಗೆ ಸರಕಾರವು ತರಿಸುವ ಎಕ್ಸಪರ್ಟಗಳ (ನಿಪುಣರು) ಮೇಲೆ ಸುಂಕಹಾಕಿದರೆ ನಷ್ಟ ತುಂಬಬಹುದು" ಎಂದು ಹೇಳಿದರು.

ಇದಕ್ಕೆ ಉತ್ತರವಾಗಿ ಸರ್ ಗ್ರಿಗ ಸಾಹೇಬರು "ಎಕ್ಸಪರ್ಟ್‌ಗಳ ಮೇಲೆ ಸುಂಕ ಹಾಕಿದರೆ ಅವರನ್ನು ಉಪಯೋಗಿಸಿಕೊಳ್ಳುವವರೇ ಅದನ್ನು ಕೊಡಬೇಕಾಗುವುದು" ಎಂದು ತಮಾಷೆಯಾಗಿ ಹೇಳಿದರು.

ಸರ್ ಹೋಮಿ ಮೋಡಿಯವರು ಇನ್ನೂ ಸ್ವಲ್ಪ ಮುಂದೆ ಹೋದರು. "ಪರದೇಶಗಳಿಂದ ಇಲ್ಲಿಗೆ ವಿಷಯಗಳ ವಿಮರ್ಶೆಗಾಗಿ ಬರುವ ಎಕ್ಸ್‌ಪರ್ಟ್ ಯಾ ನಿಪುಣರುಗಳ ಮೇಲೆ ಎಕ್ಸ್ಪೋರ್ಟ್ ಡ್ಯೂಟಿಯನ್ನು ಹೊರಿಸಿರಿ" ಎಂದು ಸಲಹೆಕೊಟ್ಟರು.

ಕಳೆದ ತಾ. ೫ರಲ್ಲಿ ನಡೆದ ಅಸೆಂಬ್ಲಿ ಅಧಿವೇಶನದಲ್ಲಿ ಬಜೆಟ್ ವಿಚಾರವು ತುಂಬಾ ಚರ್ಚಿಸಲಾಯಿತು. ಡಿಫೆನ್ಸ್ ಅಥವಾ ರಕ್ಷಣೆಯ ಪ್ರಶ್ನೆಯ ಮೇಲೆ ಸರಕಾರಕ್ಕೆ ತುಂಬಾ ಅಪಜಯವಾಯಿತು. ಚುನಾಯಿತರಾದ ಓರ್ವ ಭಾರತೀಯ ಸದಸ್ಯರ ಓಟು ಕೂಡಾ ಸರಕಾರದ ಕಡೆಗೆ ಸಿಗುವುದು ಕಷ್ಟವಾಯಿತು. ಯುರೋಪಿಯನ್ ಸದಸ್ಯರು ಮಾತ್ರ ಸರಕಾರದ ಕಡೆ ಓಟು ಮಾಡಿದರು.

ಶ್ರೀ ಗೋ ವಲ್ಲಭ್ ಪಂತರು ರಕ್ಷಣೆಯ ವಿಚಾರ ಇಂಡಿಯಾ ಸರಕಾರವು ಅನುಸರಿಸುತ್ತಿದ್ದ ನೀತಿಯನ್ನು ಖಂಡಿಸಿ "ನಿಮ್ಮ ಟ್ಯಾರಿಫ್ ಬೋರ್ಡಿನ ಶಿಫಾರಸುಗಳನ್ನು ನೀವು ಅಲಕ್ಷ್ಯಮಾಡಿದ್ದೀರಿ" ಎಂದು ಆಕ್ಷೇಪಿಸಿದರು.

"ನೀವು ಅದನ್ನು ತುಂಬಾ ಹೊಗಳಿದರೇ ಹೊರತು ಅವುಗಳನ್ನು ಜ್ಯಾರಿಗೆ ತರಲು ಪ್ರಯತ್ನಪಡಲಿಲ್ಲ" ಎಂದು ಭುಲಾಭಾಯಿಯವರು ಎಂದರು.

ಸತ್ಯಮೂರ್ತಿಯವರು ಮಾತಾಡುತ್ತಾ "ಇಂಡಿಯಾ ಸರಕಾರವು ತೆರಿಗೆ ಹಣವನ್ನು ಒಳಗೆ ಹಾಕಿ, ಪ್ರಾಂತ್ಯಗಳಿಗೆ ಎಲ್ಲವನ್ನೂ ನೋಡಿಕೊಳ್ಳಿ" ಎಂದು ಹೇಳುತ್ತಿದೆ ಎಂದರು.

ಈ ವಿಷಯದ ಮೇಲೆ ಓಟು ತೆಗೆದಾಗ ೧೫ ಓಟುಗಳಿಂದ ಸರಕಾರವು ಸೋತುಹೋಯಿತು.

ಆ ಮೇಲೆ ರೆವಿನ್ಯೂ ಡ್ಯೂಟಿಗಳನ್ನು ಇಳಿಸಬೇಕೆಂದು ಶ್ರೀ ಜೆಂಟಿರವರು ವಾದಿಸಿ "ಎಲ್ಲ ದ್ದಿಯೂ ಸುಂಕಗಳನ್ನು ಕಡಿಮೆಮಾಡುತ್ತಿದ್ದಾರೆ. ನೀವೇಕೆ ಮಾಡಬಾರದು" ಎಂದರು.

ಜಫರುಲ್ಲಾ ಖಾನರ ತೊಂದರೆ.

ಅಸೆಂಬ್ಲಿ ಪ್ರಶ್ನೆಕಾಲದಲ್ಲಿ ಒಬ್ಬರು ಪಿ ಎಂಡ್ ಒ ಸ್ಟೀಮರ್ ಕಂಪೆನಿಯವರು ಭಾರತೀಯ ಅಧಿಕಾರಿಗಳನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಿಲ್ಲವೇತಕ್ಕೆಂದು ಕೇಳಿದಾಗ, ಕೈನೆನ್ಸ್ ಮೆಂಬರರಾದ ಸರ್ ಮಹಮ್ಮದ್ ಜಫರುಲ್ಲಾಖಾನ್‌ರು ತುಂಬಾ ಗಲಿಬಿಲಿಪಟ್ಟರು. ಅವರ ಉತ್ತರವು ತೃಪ್ತಿಕರವಾಗಿರಲಿಲ್ಲ.

ನಂತರ ಶ್ರೀ ಜೋಶಿಯವರು ಎರಡನೇ ಮೋಶನನ್ನು ತಂದರು. ಇದು "ಸೋಶಿಯಲ್ ಇನ್ಶ್ಯುರೆನ್ಸ್" ಅಥವಾ ಮಜೂರ ವರ್ಗಕ್ಕೆ ಅನುಕೂಲತೆಗಳನ್ನು ನಿರ್ಮಿಸುವ ಒಂದು ರಕ್ಷಣಾ ಸಂಘಸ್ಥಾಪನೆಯ ಕುರಿತು.

ಇದಕ್ಕೆ ಉತ್ತರವೀಯುತ್ತಾ ಸರ್ ಫ್ರಾ. ನೋಯ್ಸರು, "ನವರಾಜ್ಯಾಂಗರಚನೆಯ ನಂತರ ಪ್ರಾಂತ್ಯಗಳು ಕೇಂದ್ರ ಸರಕಾರದಿಂದ ದೂರವಿರುವುವಾದರಿಂದ ಈ ಪ್ರಶ್ನೆಯನ್ನು ಪ್ರಾಂತ್ಯ ಸರಕಾರಗಳು ತೀರ್ಮಾನಿಸುವುವು" ಎಂದರು. ಈ ಕಟ್‌ಮೋಶನ್ ಓಟಿಗೆ ಹಾಕಲ್ಪಟ್ಟಾಗ ಬಿದ್ದುಹೋಯಿತು.

ಅಧಿಕಾರ ಸ್ವೀಕಾರದ ಕುರಿತು ಜಿಲ್ಲಾ ಕಮಿಟಿಗಳ ಅಭಿಪ್ರಾಯ.

ರಾಷ್ಟ್ರಪತಿ ಪಂಡಿತ ಜವಾಹರಲಾಲರ ಸರ್ಕ್ಯುಲರಿನ ಮೇರೆಗೆ ಜಿಲ್ಲೆಯಲ್ಲಿಯ ಎಲ್ಲ ಕಾಂಗ್ರೆಸ್ ಕಮಿಟಿಗಳ ಸಭೆ ಸೇರಿ ಮೇಲಿನ ಪ್ರಶ್ನೆಯ ಕುರಿತು ಪರ್ಯಾಲೋಚಿಸಿ, ಒಡಂಬಡಿಕೆಯ ವಿಧದಲ್ಲಿ ಮಂತ್ರಿಪದಗಳನ್ನು ಸ್ವೀಕರಿಸಬೇಕಾಗಿ ಸರ್ವಸಮ್ಮತದಿಂದ ನಿರ್ಣಯಮಾಡಿರುವರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 3.1 1935 R I A 1433/1936

ವಾದಿ—ಸುಬ್ರಾಯ ಐತಾಳ, ಕೃಷ್ಣ ಐತಾಳರ ಮಗ ಕುಂದಾಪುರ ತಾಲ್ಲೂಕು ಕೇನಾಪುರ ಗ್ರಾಮದ ಬೆಳ್ವಾಡಿಯಲ್ಲಿರುವವ

ಪ್ರತಿವಾದಿಬು— 1. ಶೀಶೆಟ್ಟಿ, ಸುಬ್ಬಿಶೆಡ್ತಿ ಮಗ, 2 ಮಂಜಯ್ಯ ಶೆಟ್ಟಿ, ಸುಬ್ಬಿಶೆಡ್ತಿ ಮಗ 5 ಮ್ಯಾನರ ಹಿರಿಯಣ್ಣ, 6 ಮ್ಯಾನರ ಪದ್ಮ, 7 ಮ್ಯಾನರ ವೆಂಕಿ, ಸೂರಮ್ಮ ಶೆಡ್ತಿ ಮಕ್ಕಳು ಮ್ಯಾನರಲು, ಇವರ ಗಾರ್ಡಿಯನ್ 1ನೇ ಪ್ರತಿವಾದಿ ಕುಂದಾಪುರ ತಾಲ್ಲೂಕು ಕೇನಾಪುರಗ್ರಾಮದಲ್ಲಿರುವವರು.

ವಾದಿಯು ಪ್ರತಿವಾದಿ ಮೇಲೆ ಪಡೆದ ಮೇಲ್ಕಂಡ ಡಿಕ್ರಿಯ ಬಗ್ಗೆ ಫೈನಲ್ ಡಿಕ್ರಿ ಕೊಡಬೇಕಾಗಿ ವಾದಿಯು ದಾಖಲ್ಲ ಮಾಡಿದ ಮೇಲಿನ ಅರ್ಜಿಯು ತಾ 15-3-'37ಕ್ಕೆ ತನಿಖೆಗೆ ಇಟ್ಟಿರುವುದರಿಂದ, ಆ ಕುರಿತು ಆಕ್ಷೇಪ ಇದ್ದರೆ ಜ್ಯಾಹೀರು ಮಾಡತಕ್ಕದ್ದು. ಇಲ್ಲದಿದ್ದರೆ ಸದ್ರಿ ಅರ್ಜಿಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕುಂದಾಪುರ, 10-3-'37.

K. Raghunath Shenoi,
ಅರ್ಜಿದಾರನ ಕಡೆ ವಕೀಲ್

ಇಂಗ್ಲೆಂಡಿನಲ್ಲಿ ಭಾರತ ಚುನಾವಣೆಯ ವಿಷಯ ಸುದ್ದಿಗಳು!

ಲಂಡನಿನ 'ಸಂಡೇ ರೆಫರಿ' ಎಂಬ ಪತ್ರಿಕೆಯಲ್ಲಿ, ಮೆರಿಗೋಲ್ಡ್ ಫ್ಲವರ್ ಎಂಬವರೊಬ್ಬ ಬಾತ್ಮೀದಾರರು ಈ ಕೆಳಗಿನ ವರ್ತಮಾನವನ್ನು ಪ್ರಕಟಿಸಿರುತ್ತಾರೆ.

'ನವರಾಜ್ಯಾಂಗ ರಚನೆಯ ಪ್ರಕಾರ ಹಿಂದೂದೇಶದಲ್ಲಿ ೩೪ ಮಿಲಿಯ ಶಿಕ್ಷಿತರು ವೋಟಿನ ಹಕ್ಕುಳ್ಳವರೆನಿಸಿದರು. ಈ ಶಿಕ್ಷಿತರೆನಿಸಿದವರಲ್ಲಿ ಸರಿಯಾಗಿ ನೋಡಿದ್ದಲ್ಲಿ ಹೆಚ್ಚಿನವರೆಲ್ಲ ಅಶಿಕ್ಷಿತರು. ಅವರು ಎಷ್ಟರಮಟ್ಟಿಗೆ ಮೂಢರೆಂದರೆ, ಅವರಿಗೆ ಉಮೇದ್ವಾರರ ಹೆಸರುಗಳನ್ನು ತಿಳಕೊಳ್ಳುವಷ್ಟು ಯೋಗ್ಯತೆ ಕೂಡ ಇಲ್ಲ. ಉಮೇದ್ವಾರರು ಇವರ ತಿಳುವಳಿಕೆ ಅನುಕೂಲವಾಗುವಂತೆ ತಮಗೆ ಕೆಲವು ಸಂಜ್ಞಾದಾಯಕ ಹೆಸರುಗಳನ್ನಿಟ್ಟುಕೊಂಡಿರುವರು'.

'ಬಂಗಾಳದಲ್ಲಿ ಹೆಚ್ಚಿನ ಕೌನ್ಸಿಲು ಉಮೇದ್ವಾರರು, ನೇಗಿಲು, ತಾಳೇಮರ, ಗುಡಿಸಲು, ಕೈ, ಸನ್ನಿಕಲು, ಕೊಡಲಿ, ಛತ್ರಿ ಇಂತಹ ಸಂಕೇತ ನಾಮಗಳನ್ನು ಇಟ್ಟುಕೊಂಡಿದ್ದರು'

'ಓರ್ವ ಕೌನ್ಸಿಲು ಉಮೇದ್ವಾರರು ಮರಣ ಪರ್ಯಂತರ ಉಪವಾಸವನ್ನು ಕೈಕೊಂಡಿದ್ದಾರೆ–ಒಬ್ಬನು ಕರಾಚಿಯಲ್ಲಿ–ಒಬ್ಬ ಎದುರಾಳಿಯು ಹಿಂತೆಗೆಯಬೇಕೆಂದು. ಬಂಗಾಳದಲ್ಲಿ ಓರ್ವ ಮಹಿಳೆಯು ತನ್ನನ್ನು ಕಾಂಗ್ರೆಸು ಹುರಿಯಾಳಾಗಿ ನಿಲ್ಲಿಸಲಿಲ್ಲವೆಂದು ಉಪವಾಸವನ್ನಾಚರಿಸಿದ್ದಳು'

'ಬಂಗಾಳದಲ್ಲಿ ಒಬ್ಬ ಉಮೇದ್ವಾರರು ಕೊಲೆಮಾಡಲ್ಪಟ್ಟಿರುವರು. ಸಂಯುಕ್ತಪ್ರಾಂತ್ಯದಲ್ಲಿನ ಓರ್ವ ಉಮೇದ್ವಾರರ ಪತ್ನಿಯ ಕೊಲೆಯಾಗಿದೆ'

ಸಂಪಾದನೆಯ ಉಪಾಯ.

ಆಸ್ಟ್ರಿಯಾದ ಡ್ಯುಟ್ಸ್ ವೆಗ್ರಾಮ್ ಎಂಬ ಹಳ್ಳಿಗೆ ಸೇರಿದ ದಂಪತಿಗಳಿಬ್ಬರು ಸಂಪಾದನೆಗೆ ನವೀನ ಉಪಾಯವನ್ನು ಹುಡುಕಿದರು. ಅವರಿಗೆ ಆ ಹಳ್ಳಿಯಲ್ಲಿ ಭವ್ಯವಾದ ಮನೆಯೊಂದಿತ್ತಲ್ಲದೆ ಒಂದು ಮೋಟಾರು ಕೂಡಾ ಅವರಲ್ಲಿತ್ತು. ಗಂಡನಿಗೆ ಪ್ರತಿ ತಿಂಗಳಿಗೆ ಪೆನ್ಶನ್ ಬರುತಿತ್ತು. ಹೆಂಡತಿಯ ಬಳಿಯಲ್ಲಿ ಸಂಪತ್ತೂ ಇತ್ತು. ಅವರು ತಮ್ಮ ಮೋಟಾರಿನಲ್ಲಿ ಕೂತು ಇನ್ನೊಂದು ಹಳ್ಳಿಗೆ ಹೋಗಿ ಬೇಡುವವರ ಬಟ್ಟೆಬರೆಗಳನ್ನು ತೊಟ್ಟು ಬೇಡಿ ಹಣಸಂಪಾದನೆ ಮಾಡುತ್ತಿದ್ದರು. ಈ ಉಪಾಯವು ಕೊನೆಗೆ ಬರ್ಗಿನ ಪೋಲಿಸರಿಗೆ ತಿಳಿದು, ಈಗ ವಿಚಾರಣೆಗೆ ಗುರಿಯಾಗಿದ್ದಾರೆ. ಸಾರ್ವಜನಿಕ ಮೋಸದ ಅಪರಾಧದ ಮೇಲೆ ಅವರಿಗೆ ಶಿಕ್ಷೆ ವಿಧಿಸಲಾಗಿದೆ.

ವ್ಯಾಯಾಮ ಮುಖ್ಯವೆ.

"ಆಧುನಿಕ ಮನುಷ್ಯನ ದೇಹಪ್ರಕೃತಿಯನ್ನು ಕುಗ್ಗಿಸುವ ಮನೋಭಾವನೆ, ಭೀತಿಗಳನ್ನುಂಟುಮಾಡುವ ಪ್ರಾಮುಖ್ಯ ವಿಷಯಗಳು ಬೇರೆಯೇ ಇರುವಾಗ ಶರೀರ ವ್ಯಾಯಾಮದ ನ್ಯೂನತೆಗಾಗಿ ಶಾಲೆಗಳನ್ನು ದೂರುವುದರಲ್ಲಿ ಪ್ರಯೋಜನವೇನೂ ಇಲ್ಲ" ಹೀಗೆಂದು ಡಾ। ಮೆಕ್ಕಿ ಎಂಬ ಪ್ರಖ್ಯಾತ ಆಂಗ್ಲ ವೈದ್ಯರೊಬ್ಬರು ಅಭಿಪ್ರಾಯಪಡುತ್ತಾರೆ. ಮುಂದುವರಿಯುತ್ತಾ ಅವರು "ಭೀಕರವಾದ ಸಮರದ ಕಾರ್ಮೋಡಗಳು, ಅಶಾಂತಿಯ ಉಕ್ಕಿಬರುವ ತೆರೆಗಳು, ಬಡತನ ನಿರುದ್ಯೋಗ ಎಂಬೀ ರಾಕ್ಷಸನ ಕರುಳಾಕೃತಿಯನ್ನು, ಇವುಗಳು ಆಧುನಿಕ ಪ್ರಪಂಚವನ್ನು ಸರ್ವ ಕಡೆಗಳಿಂದಲೂ ಮುತ್ತುತ್ತಿರುವಾಗ ಶರೀರವು ಅದೇಗೆ ಬೆಳೆಯಬೇಕು. ಶರೀರ ಬೆಳವಣಿಗೆಗೆ ತೃಪ್ತಿ ಸಂತೋಷಗಳೇ ಮುಖ್ಯವಾಗಿ ಬೇಕು' ಎಂದರು.

ಎಡ್ವರ್ಡರಿಗೆ ಸುಖವಿಲ್ಲ.

ಆಂಗ್ಲ ಚರಿತ್ರೆಯನ್ನು ಪರಿಶೋಧಿಸಿದಲ್ಲಿ ಕೆಲವು ಸಾರಸ್ಯ ಸಂಗತಿಗಳು ವಿಷದವಾಗುತ್ತವೆ. ಎಡ್ವರ್ಡ ಎಂಬ ನಾಮಾಂಕಿತ ಆಂಗ್ಲ ರಾಜರು ಯಾರೂ ನೆಮ್ಮದಿಯಿಂದ ಬಾಳಿದಂತೆ ತೋರುವುದಿಲ್ಲ. ಇದರಲ್ಲಿ ಮೊದಲನೇ ಮತ್ತು ಮೂರನೇ ಎಡ್ವರ್ಡ ಪ್ರಭುಗಳು ಮಾತ್ರ ಸ್ವಲ್ಪ ಸುಖದಿಂದಿದ್ದರು.

ಎರಡನೇ ಎಡ್ವರ್ಡನು ಪಟ್ಟವೇರಿದಂದಿನಿಂದ ತನ್ನ ಪಾಳೆಯಗಾರರ ತೊಂದರೆಗೆ ಸಿಲುಕಿದ್ದನು. ಬನಕ್ ಬರ್ನ್ ಯುದ್ಧದಲ್ಲಿ ಅವನು ಸ್ಕೋಟ್ಸರಿಂದ ಸೋಲಿಸಲ್ಪಟ್ಟು, ನಿರ್ವಾವವಿಲ್ಲದೆ ಪಟ್ಟತ್ಯಾಗವಮಾಡಬೇಕಾಯಿತು. ಕೆಲವು ಸಮಯದ ನಂತರ ಅವನು ಕೊಲ್ಲಲ್ಪಟ್ಟನು.

ಇವನ ಮಗನಾದ ಐದನೇ ಎಡ್ವರ್ಡನು ಬರೀ ಮೂರು ತಿಂಗಳು ರಾಜ್ಯವಾಳಿ, ಕಡೆಗೆ ಕೊಲ್ಲಲ್ಪಟ್ಟನು.

ಎಂಟನೇ ಹೆನ್ರಿಯ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದ ಆರನೇ ಎಡ್ವರ್ಡನು ಅಲ್ಪ ಅವಧಿಯಲ್ಲಿಯೇ ರೋಗಪೀಡಿತನಾಗಿ ಮೃತಿಹೊಂದಿದನು. ಅವನ ಅಲ್ಪ ಆಳಿಕೆಯಲ್ಲಿ ಭಯಂಕರ ಮತಸಂಬಂಧ ಕಲಹಗಳಾದುವು.

ನಮ್ಮ ಏಳನೇ ಎಡ್ವರ್ಡರು ಸುಖವಾಗಿ ಆಳಿದರು. ಆದರೆ ಪಟ್ಟಕ್ಕೆ ಬರಬೇಕಾದರೆ ಅವರು ೫೯ ವರ್ಷ ಕಾಯಬೇಕಾಯಿತು. ಆದರೆ ಹತ್ತು ವರ್ಷದೊಳಗೆ ಅವರೂ ಮೃತಪಟ್ಟರು.

ನಂತರದ ಎಂಟನೆ ಎಡ್ವರ್ಡರ ವಿಚಾರ ಎಲ್ಲರಿಗೂ ತಿಳಿದೇ ಇದೆ. ಪಟ್ಟಕ್ಕೆ ಬಂದ ಒಂದು ವರ್ಷದ ಒಳಗೆ ಪದತ್ಯಾಗ ಮಾಡಿದರು.

ಮಕ್ಕಳ ಶ್ವಾಸ ಸೂಚನೆ.

ಶ್ವಾಸವನ್ನು ಬಾಯಿಯಿಂದ ಹೀರಿ, ಮೂಗಿನಿಂದ ಬಿಡುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳಸಲೇಬಾರದು. ಮೂಗಿನಿಂದ ಉಸಿರಾಡುವುದೇ ಸರಿಯಾದ ಕ್ರಮವು. ಬಾಯಿಯಿಂದ ಉಸಿರು ತೆಗೆದುಕೊಂಡು, ಬಾಯಿಯಿಂದಲೇ ಬಿಡುವ ಅಭ್ಯಾಸವು ಮಕ್ಕಳಲ್ಲಿ ಚಿಕ್ಕಂದಿನಲ್ಲಿಯೇ ಸರಿಪಡಿಸಬೇಕು.

ನಾಗರೀಕತೆಗೆ ಅಪಾಯ.

ನೇಪಲ್ಸ್‌ನ ಓರ್ವ ರೈತನು ಒಂದು ಹಬ್ಬದ ಮುಂಚಿನ ದಿವಸ ಕೆಲವು ಬಿರುಸು ಬಾಣಗಳ ಸಾಮಾನುಗಳನ್ನು ತನ್ನ ಮಕ್ಕಳಿಗಾಗಿ ಕೊಂಡುಕೊಂಡು, ಅವನ್ನು ಒಂದು ಹುಲ್ಲಿನ ಮೂಟೆಯೊಳಗೆ ಭದ್ರವಾಗಿ ಮುಚ್ಚಿಟ್ಟನು. ಅವನ ಮನೆಯ ಒಂದು ಹಂದಿಯು ಆ ಹುಲ್ಲನ್ನು ಹುಡುಕಿ ತಿನ್ನತೊಡಗಿ, ಅದರಲ್ಲಿರುವ ಒಂದು ಮದ್ದಿನ ಗುಂಡನ್ನು ನುಂಗುವಾಗ ಅದು ಸ್ಫೋಟನವಾಗಿ, ಹಂದಿಯು ಚೂರುಚೂರಾಯಿತು. ಅಲ್ಲದೆ ಹುಲ್ಲಿನ ಮೂಟೆಯು ಕೂಡಾ ಭಸ್ಮವಾಗಿ ಅದರಲ್ಲಿದ್ದ ಎಲ್ಲ ಬಿರುಸುಬಾಣಗಳೂ ಸುಟ್ಟುಹೋಗಿ ಹುಂಬಾ ನಷ್ಟವುಂಟುಮಾಡಿತಂತೆ.

ಸರ್. ಹೆನ್ರಿ ಗಿಡ್ನಿಯವರು.



ಸರ್ ಜೇಮ್ಸ್ ಗ್ರಿಗ್ಗರು ವ್ಯಾಸರಾಯರ ಅಸೆಂಬ್ಲಿಯ ಮುಂದಿಟ್ಟ ೧೯೩೬–೩೭ ಮತ್ತು ೩೭–೩೮ನೇ ವರ್ಷಗಳ ಆಯವ್ಯಯದ ಪಟ್ಟಿಯನ್ನು ಟೀಕಿಸುವುದರಲ್ಲಿ ಇವರೂ ಭಾಗಿಯಾಗಿದ್ದರು.

ರಕ್ಷಣೆ.

ಬೆಲ್‌ಗ್ರೆಡಿನ ನಿಶ್ ಆಸ್ಪತ್ರೆಯಲ್ಲಿ ಯಾವುದೋ ಒಂದು ರೋಗದಿಂದ ನರಳುತಿದ್ದ ಹೆಂಗುಸು, ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಆಸ್ಪತ್ರೆಕಟ್ಟಡದ ನಾಲ್ಕನೇ ಅಂತಸ್ತಿನಿಂದ ಕೆಳಗೆ ಧುಮುಕಿದಳು. ಆದರೆ ಅವಳು ಉಟ್ಟುಕೊಂಡಿದ್ದ ವಿಶಾಲವಾದ ಸೀರೆ ಲಂಗವು ಗಾಳಿಯಲ್ಲಿ ಹರಡಿಕೊಂಡು ಅವಳ ಬೀಳುವಿಕೆಯ ಭರವನ್ನು ಕಮ್ಮಿಮಾಡಿತು. ನೆಲಕ್ಕೆ ಮುಟ್ಟಿದಾಗ ಅವಳಿಗೆ ಹೆಚ್ಚಿನ ಅಪಾಯವೇನೂ ಆಗಲಿಲ್ಲ. ಕಾಲಿಗೆ ಸ್ವಲ್ಪ ಪೆಟ್ಟಾಯಿತು ಅಷ್ಟೆ. ಅಂತೂ ಬದುಕಿಕೊಂಡಳು.

ಮುಯ್ಯಿಗೆ ಮುಯ್ಯಿ.

ಲಂಡನಿನ ಗ್ರೀನ್‌ಫೀಲ್ಡ್ ರೋಡಿನ ಆನಿ ಫಿಂಚರ್ ಎಂಬ ಮಹಿಳೆಯ ಗಂಡನು ಫಿಲಿಪ್ ಬ್ಯಾಪ್ಟೋಟರ್ ಎಂಬವನ ಪತ್ನಿಯೊಂದಿಗೆ ಸಹವಾಸ ಬೆಳಸಿದನು. ಫಿಂಚರಳು ಇದನ್ನು ತಿಳಿದು ತಾನು ಬ್ಯಾಪ್ಟೋಟರನ ಜೊತೆಯಲ್ಲಿ ಸ್ನೇಹಬೆಳೆಸಿದಳು. ಈಗ ಇವರ್ವರೂ ತಮ್ಮ ಅಪರಾಧಗಳನ್ನು ಲಂಡನ್ ಕೋರ್ಟಿನಲ್ಲಿ ಅರಿಕೆ ಮಾಡಿಕೊಂಡು, ನ್ಯಾಯಾಧೀಶರ ಹುಕುಮನ್ನು ನಿರೀಕ್ಷಿಸುತ್ತಲಿರುವರು.

ನಾಗರೀಕತೆಗೆ ಅಪಾಯ.

'ವಿಜ್ಞಾನವು ವಿಕಾಸಗೊಳ್ಳುತ್ತಿದೆ. ಯಂತ್ರಶಿಲ್ಪವು ಪರಿಪೂರ್ಣತೆಯನ್ನು ಪಡೆಯುತ್ತಿದೆ. ಇವುಗಳೆರಡರಿಂದ ನಾಗರೀಕತೆಯು ಅಧೋಗತಿಗಿಳಿಯುತ್ತದೆ'. ಮಿಸ್ ಅನ್ನಿ ಬಿ. ಮ್ಯುರ್ ಎಂಬ ಮಹಿಳೆಯು, ಸ್ಕಾಟ್‌ಲೆಂಡಿನಲ್ಲಿ ಶಿಕ್ಷಣವಿಚಾರ ಮಾಡಿದ ಭಾಷಣ ಸಾರಾಂಶವಿದು. 'ಪರಸ್ಪರ ಅಪನಂಬಿಕೆ, ಹೆದರಿಕೆ ಇವುಗಳಿಂದ ರಾಷ್ಟ್ರಗಳು ಅಧಿಕಾರ ಪೂಜನೆಗೆ ಇಳಿದಿರುವುವು. ಒಂದು ಇನ್ನೊಂದನ್ನು ನುಂಗ ನೋಡುತ್ತದೆ. ಮಾನವನಿಗೆ ಸುಖಸಂತೋಷ, ತೃಪ್ತಿಗಳನ್ನುಂಟುಮಾಡುವ ವಿಧಾನಗಳನ್ನು ಪರಿಶೋಧಿಸುವುದನ್ನು ಬಿಟ್ಟು ಇಂದಿನ ವಿಜ್ಞಾನಿಗಳು ಪ್ರಾಣಹಾನಿ ಗೈಯುವ ಅತೀ ಭಯಂಕರ ಸಾಧನೆಗಳನ್ನು ಕಂಡುಹಿಡಿಯುವುದರಲ್ಲಿ ತಮ್ಮ ತನುವನ್ನು ಸವೆಯುತ್ತಿದ್ದಾರೆ. ಬಡತನ ನರಳುವಿಕೆಗಳನ್ನು ಯಂತ್ರಸಾಧನಗಳ ಮೂಲಕ ಕಮ್ಮಿಮಾಡ ನೋಡುವುದರಿಂದಲೇ, ಯಂತ್ರಗಳು ಮಾನವನನ್ನು ತನ್ನ ಹೆಬ್ಬೆಟ್ಟಿನ ಅಡಿಯಲ್ಲಿಟ್ಟುಕೊಂಡಿವೆ. ಆಧ್ಯಾತ್ಮಿಕ ವಿಚಾರಗಳು ಮನುಷ್ಯನ ಯಂತ್ರಪೂರಿತ ಮಿದುಳಿನಿಂದ ಹೊರಗೆ ಬಂದಿವೆ. ಇನ್ನು ಬರುವ ಅಲ್ಪ ಅವಧಿಯಲ್ಲಿಯೇ ಮಾನವಲೋಕವು ಯಂತ್ರ ಪಿಶಾಚಿಗೆ ಬಲಿಬೀಳುವುದು'. ಎಂದೂ ಅವಳು ಜಾಗ್ರತೆಯೀಯುತ್ತಾಳೆ.

ಜಸ್ಟಿಸ್ ವಿಧಿ.

"ಜಸ್ಟಿಸ್ ಪಾರ್ಟಿಯು ಅಪಜಯವಾದುದರಿಂದ ಅದಕ್ಕೆ ಯೋಗ್ಯ ವಿಧಿಯಾದಂತಾಯಿತು. ಅದಕ್ಕೆ ಮರ್ಯಾದೆ ಕೊಡುವವರಿಲ್ಲದಾದರು. ಅದರ ವಿಷಯ ಹಾಡುವವರಿಲ್ಲದಾದರು. ಇನ್ನು ಅದಕ್ಕಾಗಿ ಅಳುವವರೂ ಇಲ್ಲದಾದರು" ಹೀಗೆಂದು ನ್ಯೂ ಲಿಬರಲ್ ಪತ್ರಿಕೆಯು ಬರೆದಿರುತ್ತದೆ.

ESTD: 1906

CANARA BANK

LIMITED.

INCORPORATED IN BRITISH INDIA.

Member, Reserve Bank of India.

Member, Clearing House Bombay.

Subscribed Capital	6,00,000
Paid up Capital	3,33,240
Reserves	4,50,000
Deposits	79,64,000
Total Resources	98,00,000

Offices:

BOMBAY-FORT.
BOMBAY-MANDVI.
ALLEPPEY.
ERNAKULAM.
COCHIN.
CALICUT.
CANNANORE.

MANGALORE.
BANGALORE.
CHIKAMAGALUR.
ARSIKERE.
DAVANAGERE.
HUBLI.
DHARWAR, Etc., Et

ರಾಮಮೋಹನ ಕಂಪೆನಿಯವರ

ಶ್ರೀ ಕೋದಂಡರಾಮ ಪ್ರತಿಷ್ಠೆಯುಗೋಸ್ಕರ ರಾಮೇಶ್ವರಕ್ಕೆ ಸ್ಪೆಶ್ಯಲ್ ರೈಲು ತಾ 14—8—87ಕ್ಕೆ ಭೆಂಗ್ಳೆ ಮಂಗಳೂರಿನಿಂದ ಹೊರಡುತ್ತದೆ ಇನ್ನು ಕೆಲವೇ ಟಿಕ್ಕೇಟು ಬಾಕಿ ಇರುವುದರಿಂದ ಬುಕ್ಕಿಂಗ್ ಜರೂರು ಮಾಡಿರಿ

ಟಿಕೇಟು ಈ ಕೆಳಗಿನವರಲ್ಲಿ ಸಿಕ್ಕುತ್ತದೆ

ಬಿ. ಕೆ. ಶ್ಯಾನುಭಾಗ, ರಾಮ್‌ಮೋಹನ್ ಎನ್‌ಕ್ವಾಯರ್ ಆಫೀಸು,
ಬೀಬಿ ಅಲಾಬಿರೋಡ್, ಮಂಗಳೂರು

ಡಾಕ್ಟರ್ ಯು. ಎನ್. ನಾಯ್ಕ್ ಶ್ರೀ ರಾಮಕೃಷ್ಣ ನರಸಿಂಗ್ ಹೋಮ್
ಟೆಂಪಲ್ ಸ್ಕ್ವಾಯರ್ ಮಂಗಳೂರು



ಮೂರು ಕೈಗಡಿಯಾರಗಳು ಮತ್ತು 195 ವಿವಿಧ ವಸ್ತುಗಳಿಗೆ ರೂ. 2—8—0 ಮಾತ್ರ.

ನಮ್ಮ ಸುಗಂಧ ಎಣ್ಣೆಯ ಹತ್ತು ಸೀಸೆಗಳನ್ನು ರೂ 3—8—0ಗೆ ಒಮ್ಮೆಗೆ ಪಡೆಕೊಳ್ಳುವಲ್ಲಿ ಈ ಕೆಳಗಿನ ವಸ್ತುಗಳು ಪುಕ್ಕಟೆಯಾಗಿ ಸಿಕ್ಕುವವು ಬಂಗಾರ ಗಿಲೀಟಿನ ಹಮ್ಮಿ ಕೈಗಡಿಯಾರ 1 ಚೆಂಡು, 1 ರೈಲ್ವೆ ಜೇಬು ಗಡಿಯಾರ 1, ಸೇಫ್ಟಿ ರೇಜರ್ 1, ಸೋಪು 1, ಬ್ರಶ್ 1 ಕನ್ನಡಿ 1, ಬಾಚಣಿಕೆ 1, ಪೌಡರು 1, ಕ್ಲಿಪ್ ಸಮೇತ ಪೆನ್ಸಿಲ್ 1, ಸಿಗರೇಟು ಪೆಟ್ಟಿಗೆ 1, ಸಿಗರೇಟು ಲೈಟ್ 1 ಕೈವಸ್ತ್ರ 1 ಉಂಗುರ 1, ಕಕ್ಕಂ 1, ಚೈನ್ ಸಮೇತ ಬೆರಳಿಗೆ ಹಾಕುವ ಉಂಗುರ 1 ಪೆನ್ಸಿಲ್ ನೈಫ್ 1 556 ಫೀಟು ದೂರಕ್ಕೆ ಬೀಳುವ ಫೋಕಸಿಂಗ್ ಟಾರ್ಚ್‌ಲೈಟು 1, ಅಥವಾ ಜರ್ಮನ್ ಬಿ ವಾರ್ಕಿನ ಗಟ್ಟಿಮುಟ್ಟಾದ ಮಶಿನರಿಯುಳ್ಳ 3 ವರ್ಷ ಗ್ಯಾರಂಟಿ ಇರುವ ಟ್ಯಾಬ್ ಪೀಸು 1 ಟಪಾಲು ಪ್ಯಾಕಿಂಗ್ ಹಾಸಲು ಆಣೆ 14 ಪ್ರತ್ಯೇಕ

D' TTA & Co, 15/1 Joymitter Street *P O Halkhola Calcutta*

ಪ್ರಚಂಡ ವಿಜಯ! ಪ್ರಚಂಡ ವಿಜಯ!

ಎಲ್ಲೆಲ್ಲಿಯೂ ಭಾರಿ ಬಹುಮತ.

ಸ್ವದೇಶದ { ಸ್ವಾತಂತ್ರ್ಯಕ್ಕಾಗಿ / ಅಭಿಮಾನಕ್ಕಾಗಿ / ಪ್ರೇಮದಿಂದ } ಜನರೆಲ್ಲರೂ ತಮ್ಮ ಓಟನ್ನು



REGD NO 3012

ಮಹಾಳಿ' ಪಂಪು ಸ್ಪ್ರೆಯರಿಗೇನೇ ಕೊಟ್ಟಿರುವರು.

ಅಡಿಕೆಯ ಕೊಳೆರೋಗದ ಕಾಳಗಕ್ಕೆ ಅತ್ಯುತ್ಕೃಷ್ಟವಾದ ಪಂಪು ಸ್ಪ್ರಯರು ಮಾತ್ರ ಸಾಕಷ್ಟು ಕಾರ್ಯಕಾರಿಯಾಗುವುದು ಮಿಕ್ಕವು ಅಗ್ಗವಾಗಿದ್ದರೂ ಕೊನೆಗೆ ಹಗ್ಗ 'ಮಹಾಳಿ ಸ್ಪ್ರೆಯರು ಶ್ರೇಷ್ಠತರದ ಆಧುನಿಕ ಯೋಗ್ಯ ಯೋಜನಗಳಿಂದೊಡಗೂಡಿಕೊಂಡಿದ್ದು ಕೃಷಿ ಇಲಾಖೆಯ ಹಾಗೂ ಅನೇಕಾನೇಕ ಕೋವಿದರಾದ ತೋಟಗಾರರಿಂದಲೂ, ಕಾಫಿ ಪ್ಲಂಟರುಗಳಿಂದಲೂ, ಶ್ರೇಷ್ಠ ವರ್ಗದ್ದೆಂಬ ಶಿಫಾರಸು ಪಡೆದಿದೆ ಸ್ವದೇಶಿ ಒಡವೆಯಾದರೂ, ಗುಣ, ಸಾಮರ್ಥ್ಯ, ಕಾರ್ಯಶಕ್ತಿ, ರಚನಾಕ್ರಮಗಳಲ್ಲಿ ಎಲ್ಲಾ ವಿಲಾಯತಿ, ಪರದೇಶಿ, ಸ್ಪ್ರೆಯರುಗಳೊಡನೆ ವಿಜಯಾರ್ಥಿಯಾಗಿ ಸ್ಪರ್ಧಿಸುವ ಪಂಪು ಸ್ಪ್ರೆಯರೆಂದರೆ' ಮಹಾಳಿ ಯೇ ಸರಿ

ಆದುದರಿಂದ ಬಹುಮತದಂತೆ ನಿಮ್ಮ ಆಯಿತೆಯೂ "ಮಹಾಳಿ" ಸ್ಪ್ರೆಯರಿಗೇ ಇರಲಿ

ಹೆಚ್ಚಿನ ಅನುಭವಕ್ಕೆ ಈ ಕೆಳಗಿನ ವಿಳಾಸದವರನ್ನು ವಿಚಾರಿಸಿರಿ.—

1 ಪುತ್ತೂರು ಡಿವಿಜನ್ ಮಹಾಳಿ ನಿವಾರಣಾ ಸಹಕಾರ ಸಂಘ, ಲಿಮಿಟೆಡ್ ಪುತ್ತೂರು
2 ಎಲ್ಲಾಡ ಟ್ರೇಡಿಂಗ್ ಕಂಪೆನಿ, ಮಂಗಳೂರು
3 ಬಾಸೆಲ್ ಮಿಶ್ಯನ್ ಬುಕ್ ಡಿಪೋ, ಮಂಗಳೂರು

ಚಿಂತಾರತ್ನ

ಇದರಲ್ಲಿ—೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ, ೩ ಕಾಸ್ಟಿಕ್ ಸೋಡಾ ತಯಾರಿಸುವುದು ೪ ಬಿಸ್ಕತ್ತು ತಯಾರಿಸುವುದು ೫ ದಶಾಂಗ ತಯಾರ ಮಾಡುವುದು ೬ ಪೆಪ್ಪರಮೆಂಟು ಮಾಡುವುದು ೭ ದೂಪದ ಬತ್ತಿ ಮಾಡುವುದು ೮ ಶೃಂಗಾರ ಮಾಡುವುದು, ೯ ದೆಳ್ಳಿ ತಯಾರ ಮಾಡುವುದು ೧೦ ಜರ್ಮನ್ ಶಿಲ್ವರ್ ಧಾತು ಮಾಡುವದು. ೧೧ ಊದಿನ ಕಡ್ಡಿ ತಯಾರಮಾಡುವುದು, ೧೨ ಕಾಗದಿನ ಶಾಯಿ ತಯಾರಮಾಡುವುದು ೧೩ ಕುಂಕುಮವನ್ನು ತಯಾರಿಸುವುದು ೧೪ ಹಸಿಕುಂಕುಮವನ್ನು ತಯಾರಿಸುವುದು ೧೫ ಗೋಡೆ ಸರಿ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು. ೧೭ ವಿಚಿತ್ರ ಸರಿ ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅತ್ತರಗಂಧ ಸಾಮಾನುಗಳು ೧೯ ಧರ್ಮ ತಯಾರಮಾಡುವುದು ೨೦ ಕಬ್ಬಿಗೆ, ಬೋಳುಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನು ಮಾಡುವುದು, ೨೨ ಮೆಂಥೋಲ ಎಣ್ಣೆ ತಯಾರಿಸುವುದು, ೨೩ ಕನ್ನಡಿಯ ಮೇಲೆ ಬರೆಯುವುದು, ೨೪ ದಂತಮಂಜನ ಮಾಡುವುದು ೨೫ ರಕ್ತ ಶುದ್ಧಿ, ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು, ೨೭ ಕುಚಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು, ೨೯ ಶಿಶ್ನವೃದ್ಧಿಗೆ ಔಷಧ ೩೦ ಸರಬತ್ತು ಮಾಡುವುದು, ೩೧ ಚಳಿ—ಜ್ವರದ ಗುಳಿಗೆ ಮಾಡುವುದು. ೩೨ ಓಟಿಪಾಕ ಮಾಡುವುದು ೩೩ ಮನೆ, ಬಜಾರ, ಅಂಗಡಿ ಮೊದಲಾದವುಗಳಿಗೆ ಗಿಡ್ಡಲಿ ಹತ್ತದಂತೆ ಮಾಡುವುದು ೩೪ ಹುರುಕು ತುರಿ ಮುಲಾಮು ೩೫ ನಾಸೀಲ್ಕಡಿ ಮಾಡುವುದು ಇತ್ಯಾದಿ ೧೫೦ ವಿಷಯಗಳು ಇರುತ್ತವೆ.

ಬೆಲೆ ಒಂದು ರೂಪಾಯಿ. (ವಿ. ಪಿ. ಖರ್ಚು ಬೇರೆ)
ವಿಳಾಸ—ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ—೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜ ಜಾತಿ ಪುರುಷನ ಲಕ್ಷಣ ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು, ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಳೆಯ ಸ್ಥಾನಗಳು ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೫೦ ವಿಷಯಗಳು ಇರುತ್ತವೆ.

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ.)
ವಿಳಾಸ—ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

—. ಇದು :—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯಗಳಿಂದೊಡಗೂಡಿದ ಗ್ರಂಥ!

ಇದರಲ್ಲಿ ವೈದ್ಯಶಾಸ್ತ್ರ, ಕಾಮಶಾಸ್ತ್ರ, ಪ್ರಶ್ನಭಾಗ, ಶಕುನಭಾಗ ಶೃಂಗಾರಿಕ ವಿಷಯ ಕಾಯದೇಭಾಗ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ, ತಂತ್ರ, ಮಂತ್ರ,ಯಂತ್ರ ವಶೀಕರಣ, ಇತ್ಯಾದಿ ಅನೇಕ ಮರ್ಮವಿದ್ಯಗಳು ಇರುತ್ತವೆ ಎಲ್ಲ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು. ಒಂದೊಂದು ವಿಷಯ ಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೌಲ್ಯ ಗ್ರಂಥದ ಬೆಲೆ ೧—೦—೦
ವಿಳಾಸ—ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers—

S. C. Salimath & Sons,
GADAG.

ಪರದೇಶೀಯರ ಸುಲಿಗೆಯ ಮೇಲೆ ಗಾಂಧಿಜಿಯವರ ಟೀಕೆ.

ಪರದೇಶೀಯ ವರ್ತಕರು ಗಾಂಧಿಜಿಯ ವರೊಡನೆ ಕಳೆದ ವಾರ ಹಲವು ಮಾತುಗಳನ್ನು ನಡೆಸಿರುವುದನ್ನು ಶ್ರೀ। ಮಹಾದೇವ ದೆಸಾಯಿ ಯವರು 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ:

ಜಪಾನು, ಅಮೇರಿಕಾ ಇಂಗ್ಲೆಂಡು ದೇಶೀಯರಿಗಿಂತ ಇಂಡಿಯಾವನ್ನು ಸೂರೆಮಾಡು ವುದರಲ್ಲಿ ಅಗ್ರೇಸರವಾಗಿದೆ ಎಂಬ ಗಾಂಧಿಜಿಯ ವರ ಮಾತನ್ನು ಹಿಂತೆಗೆದಿರುವುದು.

ಗಾಂಧಿಜಿಯವರ ಉತ್ತರಕ್ಕೆ, ಅವರು ಜಪಾನು ವರ್ತಕರಲ್ಲೊಬ್ಬನು ಈ ರೀತಿ ಹೇಳಿ ರುವನು,—ಜಪಾನು ಅತೀ ಕಡಿಮೆ ಬೆಲೆಯ ಸರಕುಗಳನ್ನು ತಯಾರಿಸುತ್ತದೆ ಅದು ಯಾರಿಗೂ ಯಾವ ಕಾಲದಲ್ಲಿಯೂ ಪಡೆಯಲು ಅಸಾಧ್ಯವಿಲ್ಲ ಎಂದನು. ಅದಕ್ಕೆ ಗಾಂಧಿಜಿಯ ವರು, ಅವುಗಳಿಂದ ಬಾಧಕವೆಂದು ಹೇಳಲಾಗದು ಆದರೆ, ಹಿಂದೂದೇಶದ ಸಂಪತ್ತನ್ನು ಸೂರೆಮಾಡುವುದರಲ್ಲಿ ಅದು ಒಂದು ಸಾಧನ ವಾಗಿದೆ ಎಂದರು ಅದಕ್ಕೆ ವರ್ತಕನು, ಅಲ್ಪ ಬೆಲೆಯ ಸರಕುಗಳು ದೇಶೀಯ ಸಂಪತ್ತನ್ನು ಸೂರೆಮಾಡುತ್ತದೆಯೇ' 'ಇಲ್ಲ ಆದರೆ ನಿಮಗೆ ನಮ್ಮನ್ನು ವಂಚಿಸುವ ಕೆಲಸವಿಲ್ಲ ನಾವೇ ನಮ್ಮನ್ನು ಮರೆತಹಾಗಿದೆ'

'ಹಾಗಾದರೆ ನೀವು ಈಗಿನ ಯಂತ್ರ ಯುಗಕ್ಕೆ ವಿರೋಧಿಗಳಾಗಿರುವಿರೇನು?'

'ಹಾಗೆ ಹೇಳಲು ಅವು ನನ್ನ ಉದ್ದಿಶ್ಯ ವನ್ನು ನಿರರ್ಥಕಗೊಳಿಸುವವು ಆದರೆ, ಯಂತ್ರ ಗಳೇ ನಮ್ಮನ್ನು ಮಿಗಿಸುವಲ್ಲಿ, ನಾನು ಅವುಗಳಿಗೆ ತೀರಾ ವಿರುದ್ಧವಾಗಿರುವೆನು ಜಪಾನು ಇಂಗ್ಲೆಂಡು, ಅಮೇರಿಕಗಳು ಹಾಗೆ ಮಾಡುತ್ತಿ ರುವವು ಈಗ ಇಂಗ್ಲೆಂಡು ಜಪಾನುಗಳೊಳಗೆ ಇಂಥ ವ್ಯಾಪಾರ ಸಂಬಂಧವಾದ ಸ್ಪರ್ಧೆ ಗಳು ಬಾರದಂತೆ ಜಪಾನು ಇಂತಹ ಸ್ಪರ್ಧೆಗಳಿಗೆ ಎಡೆಕೊಡಬಾರದು ಇವು ನಮಗೂ ನಿಮಗೂ ಬಾಧಕವೆ ತಮ್ಮ ಒಳ್ಳಿತಕ್ಕೆ ತಾವೇ ಸಾಧಿಸದೆ ಇದ್ದರೆ, ಇತರರಾರೂ ಎಂದೂ ಬರಲಾರರು ನಮ್ಮ ದೇಶವು ಎಲ್ಲಾ ಸ್ವಾಭಾವಿಕ ವಿದ್ಯಮಾನಗಳನ್ನೊಳಗೊಂಡಿದೆ ನಮ್ಮ ಹತ್ತಿ ಯನ್ನು ಪರದೇಶಗಳಿಗೆ ಕಳುಹಿಸಿ ಅಲ್ಲಿಂದ ಬಟ್ಟೆಗಳನ್ನು ತರಿಸುವುದು ಎಂದೂ ಪುರುಷಾರ್ಥವಾಗಲಾರದು'

'ನೀವು ಎಂದಿಗೂ ಹಿಂದೂದೇಶವನ್ನು ಕೈಗಾರಿಕಾ ಪ್ರಪಂಚವಾಗಿ ಮಾಡಲಾರಿರಿ'

'ನನ್ನ ಬುದ್ಧಿವಂತಿಕೆ ಓಡುವ ತನಕ, ಎಂದು ಹಿಂದೂ ಜನರು ತಮ್ಮ ಕೈಲಾದ ಮಟ್ಟಿಗೂ ತಂತಮ್ಮ ಒಡವೆವಸ್ತುಗಳನ್ನು ತಾವೇ ತಯಾರಿಸಿ, ಅದನ್ನು ಇಲ್ಲಿಯ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಶಹಾರುಗಳಲ್ಲಿಯೂ ಅನುದು ಆಗುವಂತೆ ಮಾಡುವುದಿಲ್ಲವೋ ಬದಲಿಗೆ ಅಗ್ಗ ಬೆಲೆಯ ಪರದೇಶೀಯರ ಸರಕುಗಳನ್ನು ಕೊಂಡುಕೊಳ್ಳುವುವೋ, ಅವರು ತಮ್ಮ ಬಡತನವನ್ನು ಎಂದೂ ಹೋಗಲಾಡಿಸಲಾರರು'

ನ್ಯೂಜಿಲೆಂಡಿನ ಧ್ಯೇಯ

"ಬಾಹ್ಯಾಂಡಬರದ ಅನೇಕಾನೇಕ ಪ[illegible] ಮೆಗಳಿಗಿಂತಲೂ, ಶ್ರೇಷ್ಠ ಆರೋಗ್ಯವ[illegible] ಮಕ್ಕಳಿಂದ ಕೂಡಿದ ಜನಾಂಗವು ಕೀರ್ತಿಶೇಷ ಪಂಚಮ ಜಾರ್ಜರಿಗೆ ಬಹುತೇಕ ಪ್ರೀತಿಯ ಸ್ಮಾರಕವಾಗಿರುತ್ತದೆ" ಎಂಬೀ ಅಭಿಪ್ರಾಯ ವನ್ನು ನ್ಯೂಜಿಲೆಂಡಿನ ಲೇಬರ್ ಸರಕಾರವು ಸೂಚಿಸಿ, ದಿವಂಗತ ದೊರೆಗಳ ಸ್ಮಾರಕಗಳಿಗೂ ಕಿರೀಟಧಾರಣೆಯ ಉತ್ಸವಾದಿಗಳಿಗೂ ಯಾವ ಪ್ರೋತ್ಸಾಹವನ್ನೂ ಕೊಡಲಾಗುವುದಿಲ್ಲವೆಂಬ ತನ್ನ ಧ್ಯೇಯವನ್ನು ವಿಶದಪಡಿಸಿರುತ್ತದೆ

ರಾಷ್ಟ್ರಪತಿಗಳನ್ನು ಗೌರವಿಸುವುವರಲ್ಲಿ ಭಾಗವಹಿಸಿದ್ದಕ್ಕೆ ಶಿಕ್ಷೆ

ಫಿಲ್‌ಬಿತಿನ ಲಾಲಾ ಹರಸ್ವರೂಪ ಆಯುರ್ ವೇದಿಕ್ ಕಾಲೇಜಿನ ನೂರು ಮಂದಿ ವಿದ್ಯಾರ್ಥಿಗಳನ್ನು ವಿದ್ಯಾರ್ಥಿ ನಿಲಯದಿಂದ ಹೊರ ಹೊರಡಿಸಿದರು. ರಾಷ್ಟ್ರಪತಿ ಪಂ ನೆಹರುಗಳು ಅಲ್ಲಿಗೆ ಬಂದಿದ್ದಾಗ, ಅವರಿಗೆ ಮಾನ ಪತ್ರ ಅರ್ಪಿಸುವ ಸಮಾರಂಭದಲ್ಲಿ ಭಾಗವಹಿ ಸಿರುವುದೇ ಅವರ ತಪ್ಪೆಂದು ತಿಳಿದುಬಂದಿದೆ

ಗಡಿನಾಡಿನಲ್ಲಿ ಕಾಂ। ಧೋರಣೆ

'ಕಾಂಗ್ರೆಸ್ ಅಧಿಕಾರ ಸ್ವೀಕಾರಕ್ಕೆ ಒಪ್ಪಿದಲ್ಲಿ ನಮ್ಮ ಮೊದಲನೇ ಕರ್ತವ್ಯವೆಂದರೆ ಸರಕಾರವು ಗಡಿನಾಡು ಪ್ರಾಂತ್ಯದಲ್ಲಿ ಹೊರಿಸಿದ ನಿರ್ಬಂಧಗಳನ್ನು ಹಿಂತೆಗೆಯುವಂತೆ ಮಾಡುವುದು' ಹೀಗೆಂದು ಡಾ। ಖಾನ್ ಸಾಹೇಬರು ಒಂದ ಬೇಟಿಯಲ್ಲಿ ತಿಳಿಸಿದರು

ನಗ್ನಕಾಲಿನ ಚಿತ್ರ

ಅಮೇರಿಕದ ಟೆಕ್ಸಾಸ್ ಪ್ರಾಂತ್ಯದ ಸರಕಾರ ಮಂಡಲವು ಒಂದು ಠರಾವನ್ನು ಅನುಮೋದಿಸುತ್ತಾ ಅಲ್ಲಿನ ಪತ್ರಿಕೆಗಳು ಸ್ತ್ರೀಯರ ನಗ್ನಕಾಲಿನ ಚಿತ್ರಗಳನ್ನು ಪ್ರಕಟಿಸಬಾರದು ಎಂದು ನಿರ್ಬಂಧ ಹಾಕಿತು ಈ ಠರಾವನ್ನು ತಂದವರು ಸೆನೆಟರ್ ಒಲನ್ ಆರ್ ವೆನ್ ಚೆನ್ನ ಎಂಬ ಕುರುಡರೊಬ್ಬರು

ವಿಚಿತ್ರ ಶಿಕ್ಷೆ

ತನ್ನ ಹೆಂಡತಿಯು ಓರ್ವ ಸುಂದರ ಯುವಕನಲ್ಲಿ ಅನುರಕ್ತಳಾಗಿರುವ ವಿಷಯ ವನ್ನು ತಿಳಿದು ಯುಗೋಸ್ಲೋವಿಯದ ಮಿಲಿಂಕೊ ಡ್ಜಿಲಾಸ್ ಎಂಬ ರೈತನು, ರಾತ್ರಿ ಹೊತ್ತಿನಲ್ಲಿ ಆ ಯುವಕನ ಮನೆಯನ್ನು ಹೊಕ್ಕು ಅವನನ್ನು ಮಲಗಿದ್ದ ಮಂಚಕ್ಕೆ ಕಟ್ಟಿಹಾಕಿ, ಅವನ ಎಲ್ಲಾ ಹಲ್ಲುಗಳನ್ನು ಕಿತ್ತು ತೆಗೆದನಂತೆ

ರಶ್ಯದ ರಕ್ಷಣೆಗಾಗಿ

ರಶ್ಯದ ಸೋವಿಯಟ್ ಪತ್ರಿಕಾಲಯಗಳಿಂದ ಈಗ ತಾನೇ ಎಂಬಂತೆ ಹೊರಬಿದ್ದ ವರ್ತಮಾನ ಪ್ರಕಾರ, ರಷ್ಯದ ಪಶ್ಚಿಮ ಗಡಿನಾಡು ೧೦೦೦ ಮೈಲುಗಳಷ್ಟು ಉದ್ದಕ್ಕೆ ಮಜಿನಾಟ್ ಎಂಬ ಭೂಗರ್ಭ ಕೋಟೆಯಿಂದ ಭದ್ರಮಾಡಲ್ಪಟ್ಟಿರುತ್ತದೆಂದು ತಿಳಿದಿದೆ ನೆಲದಡಿಯಲ್ಲಿ ಕಟ್ಟಲ್ಪಟ್ಟ ಈ ಕೋಟೆಗಳು ಕಾಂಕ್ರಿಟ್ ಮತ್ತು ಉಕ್ಕಿನಿಂದ ಕಟ್ಟಲ್ಪಟ್ಟಿರುತ್ತವೆ ವಿಮಾನ ಧಾಳಿಯಿಂದಲೂ ಇದಕ್ಕೆ ಹಾನಿತಟ್ಟದಂತೆ ಇದರಲ್ಲಿ ಅನೇಕ ತರದ ಏರ್ಪಾಡುಗಳಿವೆ ಶತ್ರುಗಳು ಇದನ್ನು ಬಿಡದೆ ನಾಲ್ಕು ತಿಂಗಳುಗಳ ವರೆಗೆ ಮುತ್ತಿದರೂ, ಇದರಲ್ಲಿ ಅಷ್ಟು ಸಮಯಕ್ಕೆ ಬೇಕಾಗುವ ಆಹಾರ ಸದಾರ್ಥಗಳು ತುಂಬಿಸಿರುತ್ತಾರೆ ಒಂದು ವೇಳೆ ಜರ್ಮನಿಯು ರಶ್ಯದ ಮೇಲೆ ಬೀಳಲು ಹವಣಿಸಿದರೆ, ಅದು ಜೆಕೋಸ್ಲೊವೇಕಿಯಾದ ಯಕ್ರೆಸ್ ಎಂಬಲ್ಲಿಂದ ನಗ್ಗಲು ಪ್ರಯತ್ನಮಾಡುವುದು ಈ ಸ್ಥಳದಲ್ಲಿ ಕೋಟೆಯು ವಿಶೇಷವಾಗಿ ಭದ್ರಪಡಿಸಲ್ಪಟ್ಟಿದೆ

ಪ್ರಪಂಚದಲ್ಲಿ ೧೨ ಲಕ್ಷ ಕುರುಡರಿದ್ದಾರೆಂದು ಪರಿಶೋಧಿಸಲ್ಪಟ್ಟಿದೆ ಅದರಲ್ಲಿ ೪೪೩,೦೦೦ ಮಂದಿಗಳಷ್ಟು ಹಿಂದೂಸ್ಥಾನ ದಲ್ಲಿಯೇ ಇದ್ದಾರೆ

೦ ೦ ೦ ೦

ಕ್ರಿಸ್ತಪೂರ್ವ ಆರನೇ ಶತಮಾನದಲ್ಲಿ ವಿದ್ಯುಚ್ಛಕ್ತಿಯನ್ನು ಕಂಡುಹಿಡಿಯಲಾಗಿದೆ

'ಜವಾಹರಲಾಲರ ದಸ್ತಗಿರಿ'

ಬೊಂಬಾಯಿಯಲ್ಲಿ ಸುಳ್ಳು ಸುದ್ದಿಯ ಪ್ರಚಾರ.

ಕೆಲವು ದಿವಸಗಳ ಹಿಂದೆ ಬೊಂಬಾಯಿ ಯಲ್ಲಿ "ಜವಾಹರಲಾಲರು ಕೈದುಮಾಡಲ್ಪಟ್ಟಿದ್ದಾರೆ" ಎಂಬ ವರ್ತಮಾನವು ಹರಡಿತು ನಗರದಲ್ಲಿ ತುಂಬಾ ಕೋಲಾಹಲವೆದ್ದಿತು ಪತ್ರಿಕಾ ಪ್ರತಿನಿಧಿಗಳು ತಂಡತಂಡವಾಗಿ ಅಧಿಕಾರ ಯುಕ್ತ ಕಾಂಗ್ರೆಸ್ ಕೇಂದ್ರಗಳಿಗೆ ಹೋಗಿ ಜವಾಹರರ ದಸ್ತಗಿರಿಯ ವಿಚಾರದ ಸತ್ಯಾಸತ್ಯತೆಯನ್ನು ಕುರಿತು ಪರಿಶೋಧನೆ ನಡಿಸಿದ್ದಲ್ಲಿ ಸುದ್ದಿಯು ಸುಳ್ಳೆಂದು ಗೊತ್ತಾಯಿತು ಇದು ಕೆಲವು ಪತ್ರಿಕಾಪ್ರತಿನಿಧಿಗಳ ಊಹಾಪೋಹೆಯೆಂದೂ, ಇಂಥ ವರ್ತಮಾನವನ್ನು ಹಬ್ಬಿಸಿ ತಮ್ಮ ಪತ್ರಿಕೆಯ ಖರ್ಚನ್ನು ಜಾಸ್ತಿ ಮಾಡಲು ಇದೊಂದು ಉಪಾಯವೆಂದೂ ತಿಳಿದುಬಂದಿದೆ

ನೀವು ತಿಳಿದಿರುವಿರಾ?

ನೇಯಿಗೆ ಕಾಮಗಾರಿಯನ್ನು ಚೀನಾ ದೇಶದವರು ಪ್ರಾರಂಭಿಸಿದರಂತೆ

೦ ೦ ೦ ೦

ಕಾಗದ, ಬೆಂಕಿಪೆಟ್ಟಿಗೆ, ಇವುಗಳನ್ನು ಚೀನಿಯರೇ ಅನೇಕ ಸಾವಿರ ವರ್ಷಗಳ ಹಿಂದೆಯೇ ತಯಾರಿಸುತ್ತಿದ್ದರು

೦ ೦ ೦ ೦

ಹದಿನೈದನೇ ಶತಮಾನದಲ್ಲಿ ಮೊದಲನೇ ಮುದ್ರಣಾಯಂತ್ರವು ಜರ್ಮನಿಯಲ್ಲಿ ತಯಾರಿಸಲ್ಪಟ್ಟಿತು ಇದಕ್ಕಿಂತ ಒಂದು ಸಾವಿರ ವರ್ಷಗಳ ಹಿಂದಿನಿಂದಲೂ ಚೀನಾದೇಶದಲ್ಲಿ ಮುದ್ರಣ ಕೈಗಾರಿಕೆ ಇತ್ತಂತೆ

೦ ೦ ೦ ೦

ರೋಗ ಹರಡುವಿಕೆಯನ್ನು ತಡೆಗಟ್ಟಲು ದಾಕು ಹಾಕುವರಷ್ಟೆ ಈ ದಾಕಿನ ಸಿದ್ಧಾಂತ ವನ್ನು ೧೭೯೬ರಲ್ಲಿ ಸರ್ ಎಡ್ವರ್ಡ ಜೆನ್ನರ್ ಎಂಬ ಆಂಗ್ಲ ವೈದ್ಯ ವೇದಾವಿಗಳು ಕಂಡು ಹಿಡಿದರು

ಪೆಸಿಫಿಕ್ ಮಹಾ ಸಾಗರವು ಕೆಲವು ಕಡೆಗಳಲ್ಲಿ ೫ ಮೈಲುಗಳಷ್ಟು ಆಳವಿದೆಯಂತೆ.

೦ ೦ ೦ ೦

ಇಜಿಪ್ತಿನ ಅಲೆಕ್ಸಾಂಡ್ರಿಯಾ ಎಂಬಲ್ಲಿನ ಸಮುದ್ರ ಕರಾವಳಿಯಲ್ಲಿ ಮೊದಲನೇ ದೀಪಸ್ತಂಭವು ಕ್ರಿಸ್ತಪೂರ್ವ ೨೮೩ರಲ್ಲಿ ಕಟ್ಟಲ್ಪಟ್ಟಿತು

೦ ೦ ೦ ೦

ಪ್ರಪಂಚದಲ್ಲಿ ದೊಡ್ಡ ವಜ್ರವು, ದಕ್ಷಿಣ ಆಫ್ರಿಕಾದ ಪ್ರಿಟೋರಿಯಾದ ಹತ್ತಿರ ೧೯೦೫ರಲ್ಲಿ ಈ ವಜ್ರವು ಸಿಕ್ಕಿತು. ಇದರ ಭಾರವು ೩೦೩೦ ಅಕ್ಕಿ ಕಾಳುಗಳಷ್ಟಿದ್ದು ೧೫ ಮಿಲಿಯ ಪವನುಗಳ ಬೆಲೆಯುಳ್ಳದ್ದಾಗಿದೆ

೦ ೦ ೦ ೦

ಜಗತ್ತಿನಲ್ಲಿರುವ ಶ್ರೇಷ್ಠ ವಜ್ರಗಳ ಬೆಲೆಯು ಒಟ್ಟು ೩೦೦ ಮಿಲಿಯದ ಪವನುಗಳೆಂದು ಲೆಖ್ಖ ಹಿಡಿದಿದ್ದಾರೆ ಅದರಲ್ಲಿ ೩೦೦ ಮಿಲಿಯ ಪವನುಗಳ ಬೆಲೆಯವುಗಳು ಅಮೇರಿಕಾ ಖಂಡದಲ್ಲಿವೆಯಂತೆ

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ ರುಚಿಗೂ, ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು ನೀವೂ ಇಂದಿನಿಂದಲೇ ಉಪಯೋಗಿಸಿ [illegible]

CITY BISCUIT WORKS,
Flower Market South, Mangalore

THE PIE-MONEY BANK LTD.,
Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 7% 1 Year 6% For 6 months 5% 3 months 4½%

Auction Chit Funds ranging from Rs 100—0—0 run regularly on systematic lines Unique Banking facilities to Businessmen and Interested Public

Apply for paticulars— K R. GURU, *Managing Director*

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು — ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

Combined Booking Agency
AND
Joint Booking Office.

ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ
ಮತ್ತು
ಜ್ಯೋಂಟ್ ಬುಕ್ಕಿಂಗ್ ಆಫೀಸು.

ಬಸ್ಸು ಸರ್ವೀಸುಗಳ ಮೇಲಾಟವನ್ನು ಹೋಗಲಾಡಿಸಿ,
ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಿ,
ಜನಸೇವೆಯನ್ನು ಮಾಡುವ ಉದ್ದೇಶದಿಂದ,
ನಾವೆಲ್ಲರೂ ಕೂಡಿ ಸರ್ವೀಸುಗಳ ವ್ಯವಸ್ಥೆಗಳನ್ನು ಮಾಡಿದ್ದೇವ
ಪ್ರಯಾಣಿಕರಿಗೆ ಯಾವುದೊಂದು ಅನಾನುಕೂಲವು ಒದಗಿದ್ದಾದರೆ,
ಅಥವಾ
ಪ್ರಯಾಣ ಸೌಕರ್ಯದ ಉದ್ದೇಶದಿಂದ ಯಾರೊಬ್ಬರಿಗೆ ಯಾವುದೊಂದು ಸೂಚನೆ ಕೊಡಲಿದ್ದರೆ,
ಅವುಗಳನ್ನು ತಿಳಿಯಲು ನಾವು ಆತುರಪಡುತ್ತೇವೆ

ಮೇಲಿನ ಸಂಸ್ಥೆಗಳ ಜ್ಯೋಂಟ್ ಮೆನೇಜರ (Joint Manager) ರೊಡನೆ ಅಥವಾ ಕೆಳಗೆ ಹೆಸರು ಕಾಣಿಸಿದಯಾರೊಡನೆಯಾದರೂ ಪತ್ರವ್ಯವಹಾರವನ್ನು ನಡೆಸಬಹುದು.

The Canara Public Conveyance Co. Ltd.
The Hanuman Transport Co., Ltd.
The Shanker Vittal Motor Co., Ltd.
The Durga Parameshwari Motor Service.
The Popular Motor Service Ltd.
The P. V. Motor Service.
The Modern Motor Service of Mysore Ltd.
The Superb Motor Service
The Mahalaxmi Motor Service.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.
Estd 908
Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses
It pays you to represent this Company
Wanted Agents in unrepresented parts

Apply to—

Messrs Kochikar Brothers,
Madras Branch Secretaries.

1936
OUR VALUATION YEAR

Take a BOMBAY LIFE Policy now, and share in the profits



Branches at:-	P. B. 387, Mount Road, Madras.	Visveshwarapuram Circle, Bangalore City.	oumyalayam Puthiyara, Calicut.	Car Street, Mangalore.	Udipi, S. India	Charni Road, Bombay No 4

ತಾಲೂಕುಗಳಿಂದ

ಬಂಟವಾಳ:— ಕಾಂಗ್ರೆಸ್ ಮುಂದರಾದ ಶ್ರೀ ವೆಂಕಟ್ರಾಯ ಬಾಳಿಗರು ಮುಂದರಾಗಿ ಚುನಾವಣೆ ಪ್ರಚಾರ ಇಲ್ಲಿ ಭಾರೀ ಮೆರವಣಿಗೆಯು ನಡೆಯಿತು. ಆದರೆ ಶ್ರೀ ಬಾಳಿಗರು ಇಲ್ಲಿಗೆ ಬಂಟ್ವಾಳಕ್ಕೆ ಈ ಸಮಯ ಬಾರದೆ ಇದ್ದುದು ವಿಷಾದಕರ.

ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ನಡೆದ ಅನ್ಯಾಯದ ಕುರಿತು ಡಿಸ್ಟ್ರಿಕ್ಟ್ ಬೋರ್ಡಿನವರು ಕಣ್ಣುಮುಚ್ಚಿ ಇರುವುದರಿಂದ ಶಾಲೆಯ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಲಿಕ್ಕೆ ಹಿಂಜರಿಯುತ್ತಾರೆ. ಇನ್ನಾದರೂ ಕಣ್ಣುತೆರೆಯುವುದು ಒಳ್ಳೇದಲ್ಲವೇ?

ಬೋರ್ಡ್ ಹುಡುಗರ ಶಾಲೆಗಾಗಿ ಡಿ. ಬೋರ್ಡಿಗೆ ಸರಕಾರದವರು ಒಪ್ಪಿಸಿಕೊಟ್ಟ ಡೆಪ್ಯುಟಿ ತಹಶೀಲ್ದಾರರ ಹಳೇ ಕಚೇರಿಯ ಕಟ್ಟಡವನ್ನು ಸಂದರ್ಶಿಸಲಿಕ್ಕೆ ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟಿನ ಅಧಿಕಾರಿಯೊಬ್ಬರು ಹೋದಾಗ ಶಾಲೆಯ ಮಾಡನ್ನು ಸುಣ್ಣಬಳಿಯದೆ ಇರುವ್ದು, ಗೋಡೆಗಳನ್ನೂ ಗೋಡೆಯ ಮೇಲಿರುವ ಧೂಳು ಕಸ ಮುಂತಾದ್ದನ್ನು ನೋಡಿ, ಈ ಕಟ್ಟೋಣವನ್ನು ಸರಕಾರದವರು ತಿರಿಗಿ ವಹಿಸಿಕೊಳ್ಳುವದಿಲ್ಲವಾದರೆ ಕಟ್ಟೋಣ ಪೂರ್ಣ ಹಾಳಾದೀತೆಂಬ ಅಭಿಪ್ರಾಯಪಟ್ಟು ಹೋದರು.

ಪಾಣೆಮಂಗಳೂರು:— ಇಲ್ಲಿಯ ದೊಡ್ಡ ವರ್ಗದಾರರೂ ಮಹಾ ಉದಾರಿಗಳೂ ಆದ ರಾ॥ ನರಿಕೊಂಬು ರಾಮರಾಯರು ಸ್ವರ್ಗಸ್ಥರಾದರು. ಈ ಸಂಬಂಧ ೧೩ನೇ ದಿವಸ ಸಾಧಾರಣ ೪ ಸಾವಿರ ಜನರಿಗೆ ಮೃಷ್ಟಾನ್ನ ಭೋಜನವು ನಡೆಯಿತು. ಕಠಿಣ ಅಸ್ವಸ್ಥದಲ್ಲಿರುವ ಇವರ ಹಿರೇ ಮಗನಿಗೆ ಬೇಗನೇ ಗುಣವಾಗಲೆಂದು ಎಲ್ಲರ ಪ್ರಾರ್ಥನೆ.

ಶ್ರೀ॥ ವೆಂಕಟ್ರಾಯ ಬಾಳಿಗರಿಗೆ ಮೆಂಬರಿಕೆ ಸಿಕ್ಕಿದ ವಿಷಯದಲ್ಲಿ ಇಲ್ಲಿಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಭಾರೀ ಟೀಪಾರ್ಟಿ ನಡೆಯಿತು. ಅದೇ ಶಾಲೆಯಲ್ಲಿ ಅದೇ ಸಮಯ ರಾ॥ ನರಿಕೊಂಬು ರಾಮರಾಯರ ಮರಣದ ದುಃಖಸೂಚಕ ಸಭೆಯೂ ಜರಗಿತು.

ಕೆನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟಂಟು ಇನ್ಸ್‌ಪೆಕ್ಟ್ರೆಸರವರೂ ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಶಾಲಾ ಕೆಲಸವು ತೃಪ್ತಿಕರವಾಗಿ ನಡೆಯುತ್ತಿರುವುದನ್ನು ನೋಡಿ ಸಂತೋಷಪಟ್ಟರು.

ಉಡುಪಿ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. ೨ನೆಗೆ ಸ್ಥಳೀಯ ಮಿಶನ್ ಹೆಂಗಸು ಮಕ್ಕಳ ಆಸ್ಪತ್ರೆಯಲ್ಲಿ ಕ್ರೈಸ್ತಮತದ ಶ್ರೀಮತಿ ಮಾರ್ತಾ ಎಂಬಾಕೆಯು ಹೆತ್ತು ಮೂರು ಗಂಡು ಶಿಶುಗಳು ಜನಿಸಿವೆ; ಬಾಣಂತಿಯೂ ಮಕ್ಕಳೂ ಸುಖವಾಗಿರುವವು. ಇವರನ್ನು ನೋಡುವರೆ ಊರ ಪರವೂರ ಮಂದಿ ಬಹಳವಾಗಿ ಬಂದುಹೋಗುವರು.

ತಾ. ೩ನೆಗೆ ಸಾಯಂಕಾಲ ೬ ಗಂಟೆಗೆ ಕಾಂಗ್ರೆಸು ಕಚೇರಿಯಲ್ಲಿ ಶ್ರೀ॥ ಎಂ. ವಿಟ್ಠಲಕಾಮತ್ ಬಿ. ಎ. ಬಿ. ಎಲ್ ವಕೀಲರವರ ಅಧ್ಯಕ್ಷತೆಯಲ್ಲಿ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಸದಸ್ಯರ ಸಾಮಾನ್ಯ ಸಭೆಯು ಸೇರಿತು. ದ. ಕ. ಜಿಲ್ಲೆಯೊಳಗಿನಿಂದ ಕಾಂಗ್ರೆಸು ಉಮೇದ್ವಾರರಾಗಿ ಮದ್ರಾಸು ಎಸೆಂಬ್ಲಿಗೆ ಚುನಾವಣೆಗೆ ನಿಂತಿದ್ದ ಐವರೂ ಪ್ರಬಲ ಬಹುಮತದಿಂದ ಜಯಪ್ರದರಾಗಿ ಆರಿಸಿಬಂದುದರ ಬಗ್ಗೆ ಎಲ್ಲರನ್ನೂ ಅಭಿನಂದಿಸಿ ಠರಾವು ಅಧ್ಯಕ್ಷರಿಂದ ತರಲ್ಪಟ್ಟು ಸರ್ವಾನುಮತಿಯಿಂದ ಮಂಜೂರಾಯಿತು. ಅನಂತರ ಎಸೆಂಬ್ಲಿಯಲ್ಲಿ ಅಧಿಕಾರ ಸ್ವೀಕರಿಸಬೇಕೋ ಬೇಡವೋ ಎಂಬುದರ ಕುರಿತು ೨ ಗಂಟೆಯ ದೀರ್ಘವಾದ ವಿವಾದಗಳು ನಡೆದು, ಅಧಿಕಾರವನ್ನು ಸ್ವೀಕರಿಸುವುದು ಕಾಂಗ್ರೆಸು ಉದ್ದೇಶಕ್ಕೆ ಹಿತಕರವಲ್ಲವಾಗಿ, ಅದು ಕೂಡದೆಂಬ ಠರಾವು ಬರಲಾಗಿ, ಮತಗಳನ್ನು ತೆಗೆಯಲು ಸದರಿ ಠರಾವು ಬಹುಮತದಿಂದ ಬಿದ್ದುಹೋಯಿತು. ಅನೇಲ ಕಾಂಗ್ರೆಸು ಕಾರ್ಯಕಾರಿ ಮಂಡಳಿಯವರು ನಿರ್ಣಯಿಸಿರುವ ಶರ್ತಗಳಿಗನುಸಾರವಾಗಿ ಇನ್ನುಮುಂದೆ ಅಖಿಳ ಭಾರತ ಕಾಂಗ್ರೆಸ್ ಕಮಿಟಿಯವರು ನಿಯಮಿಸಲಿರುವ ಶರ್ತಗಳಿಗನುಸಾರವಾಗಿಯೂ ಅಧಿಕಾರ ಸ್ವೀಕರಿಸಬಹುದೆಂಬ ಠರಾವು ಸರ್ವಾನುಮತದಿಂದ ಮಂಜೂರಾಯಿತು. ಉಡುಪಿ ಕಡಿಗೊಂದು ಕಾಂಗ್ರೆಸ್ ಕಮಿಟಿಯನ್ನೂ ತಾಲೂಕಿನಲ್ಲಿ ಸಾಧ್ಯವಿದ್ದದೆಂಬಲ್ಲೆಲ್ಲ ಹಳ್ಳಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸುವ ಬಗ್ಗೆ ಕಾಂಗ್ರೆಸು ಕಾರ್ಯದರ್ಶಿಯವರನ್ನು ಕೇಳಿಕೊಳ್ಳಲಾಯಿತು.

ಮಂಗಳೂರು.

ಇಲ್ಲಿಯ ಜೋಡುಮಠದ ಬಳಿಯಲ್ಲಿರುವ ಶ್ರೀ ವೀರಮಾರುತಿ ವ್ಯಾಯಾಮ ಮಂಡಲದ ಪ್ರಥಮ ವರ್ಧಂತಿ ಉತ್ಸವವು ತಾ. ೪—೩—೩೭ನೇ ಗುರುವಾರ ರಾತ್ರಿ ಗಂಟೆ ೯ಕ್ಕೆ ಶ್ರೀಯುತ ಬಿ. ವೆಂಕಟ್ರಾಯ ಬಾಳಿಗ ಬಿ. ಎ. ಬಿ. ಎಲ್. ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನಗಳ ಕಾರ್ಯಕ್ರಮವಾದನಂತರ, ವ್ಯಾಯಾಮ ಮಂಡಲದ ಯುವಕರ ಭಾರಯೆತ್ತುವಿಕೆ, ರೆಸ್ಲಿಂಗ್, ಫಾಯರ್‌ಫ್ಲೇ ಆಟಗಳ ಪ್ರದರ್ಶನಗಳಾಗಿ, ಗೆದ್ದವರಿಗೆ ಅಧ್ಯಕ್ಷರಿಂದ ಪಾರಿತೋಷಕಗಳು ಹಂಚಲ್ಪಟ್ಟವು. ತರುವಾಯ ನೆರೆದ ಗೃಹಸ್ಥರಲ್ಲಿ ಡಾ॥ ಕೆ. ಗಿರಿಧರರಾವ್, ರಾ॥ ಎ. ಜಿ. ರಾವ್ ರವ ಮತ್ತು ಡಾ॥ ಯು. ಪದ್ಮನಾಭಪಾಲ್ಯ ಇವರು ಸಂಘಟನೆ, ನೈತಿಕ ಜ್ಞಾನಾಭಿವೃದ್ಧಿ, ಯುವಕರ ಕರ್ತವ್ಯ ಮೊದಲಾದ ವಿಷಯಗಳ ಕುರಿತು ಹಿತಸೂಚನೆಗಳನ್ನು ಕೊಟ್ಟರು. ಅಧ್ಯಕ್ಷರ ಉಪಸಂಹಾರ ಭಾಷಣವಾದ ಬಳಿಕ, ಸಂಘದ ಅಧ್ಯಕ್ಷರಿಂದ ರಾ॥ ಬಸ್ತಿ ದಾಸಪ್ಪ ಶೆಣೈಯವರು ನೆರೆದವರಿಗೆ ವಂದನೆಗಳನ್ನು ಅರ್ಪಿಸಿ, ಉಪಹಾರ ಸತ್ಕಾರವಾಗಿ ಸಮಾರಂಭವು ಕೊನೆಗೊಂಡಿತು.

ದೇಲಂಪಾಡಿಯಲ್ಲಿ ವರ್ಗದಾರರಾದ ಸುಬ್ಬಯ್ಯಶೆಟ್ಟಿ ಮತ್ತು ನಾರಾಯಣ ಶೆಟ್ಟಿ ಎಂಬಿಬ್ಬರನ್ನು ಮನೆಗೆ ಹೋಗುವಾಗ ದಾರಿಯಲ್ಲಿ ಯಾರೋ ಗುಂಡಿಟ್ಟು ಕೊಂದ ವಿಷಯದಲ್ಲಿ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರು ಮತ್ತು ಇನ್ನಿತರ ಅಧಿಕಾರಿಗಳು ತನಿಖೆ ನಡೆಸಿ ಇಬ್ಬರನ್ನು ದಸ್ತಗಿರಿ ಮಾಡಿರುತ್ತಾರೆಂದು ತಿಳಿದುಬರುತ್ತದೆ.

ಇದೇ ಕಳೆದ ತಾ. ೨ರಲ್ಲಿ ಕಾಂಗ್ರೆಸ್ ಕಡೆಯಿಂದ ಜಯಶೀಲರಾಗಿರುವ ಶ್ರೀ॥ ಕೆ. ಆರ್. ಕಾರಂತರು ಚುನಾವಣೆಯಲ್ಲಿ ಶ್ರಮವಹಿಸಿದ ಹಲವು ಅತ್ಮರಿಗೂ, ಹಿತೈಷಿಗಳಿಗೂ ಉಪಹಾರವಿತ್ತು ಸತ್ಕರಿಸಿದರು. ಆ ಸಂದರ್ಭದಲ್ಲಿ ಹಲವು ಮಹನೀಯರ ಭಾಷಣಗಳಿದ್ದುವು.

ನಮ್ಮ ಸ್ಥಳೀಯ ವೈದ್ಯರಲ್ಲಿ ಸುಪ್ರಸಿದ್ಧರಾದ ಡಾ॥ ಎನ್. ಡಿ. ಸುವರ್ಣರವರು ನಡೆಸಿಕೊಂಡು ಬರುತ್ತಿರುವ ಆರ್ತ ಚಿಕಿತ್ಸಾಭವನದ ವಾರ್ಷಿಕೋತ್ಸವವು ಜನಾಬ್ ಹಾಜಿ ಸಯ್ಯದ್ ಹುಸೇನ್ ಸಾಹೇಬ್ ಬಿ. ಎ. ಬಿ. ಎಲ್ (ಎಂ. ಎಲ್. ಎ.) ಇವರ ಅಧ್ಯಕ್ಷತೆಯಿಂದ ಕಳೆದ ಆದಿತ್ಯವಾರ ಸಂಜೆ ಜರಗಿತು. ಹಲವು ಮಂದಿ ಅಧ್ಯ ಗೃಹಸ್ಥರೂ, ಮಹಿಳೆಯರೂ ಈ ಸಮಾರಂಭದಲ್ಲಿ ಭಾಗಿಯಾಗಿದ್ದರು.

The United India Life Assurance Co. Ltd. Madras

"ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್ ಮದ್ರಾಸು" ಈ ಸಂಸ್ಥೆಯ ಶಾಖೆಯೊಂದು ಇದೇ ತಾ. ೧ರಲ್ಲಿ ಮಂಗಳೂರಿನ ವ್ಯಾಪಾರ ಕೇಂದ್ರವಾದ ಹಂಪನಕಟ್ಟೆಯಲ್ಲಿ ತೆರೆಯಲಾಯಿತು. ಇವರ ಡಿಸ್ಟ್ರಿಕ್ಟ್ ಮತ್ತು ಜನರಲ್ ಏಜೆಂಟರಾದ ಬಾಂಗಾಳಕಾರ್ ಬ್ರದರ್ಸರು ಈ ಸಂದರ್ಭದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ನಗರದ ಅಧ್ಯ ಗೃಹಸ್ಥರಲ್ಲನೇಕರು ಈ ಕೂಟದಲ್ಲಿ ಭಾಗವಹಿಸಿ ಅದನ್ನು ಯಶಸ್ವಿಯಾಗಿ ಮಾಡಿದರು. ಅತಿಥಿಗಳೆಲ್ಲರೂ ನಮ್ಮ ಪ್ರಾಂತ್ಯದ್ದೇ ಆದ ಈ ಸಂಸ್ಥೆಯ ವ್ಯವಹಾರ ಅಡಳಿತಗಳ ಪಟ್ಟಿಗಳನ್ನು ನೋಡಿ ತುಂಬಾ ಶ್ಲಾಘಿಸಿದರು. ಬಾಂಗಾಳಕಾರ ಬ್ರದರ್ಸರಂಥಾ ನಿಪುಣ ಅಡಳಿತಗಾರರು ಇದರ ಏಜಂಟರಾದುದು ಕಂಪೆನಿಯ ಅಭಿವೃದ್ಧಿಯನ್ನು ಇನ್ನೂ ಸೂಚಿಸುತ್ತದೆ.

ದಿ. ಬಾಯೊನಿಯರ್ ಎಂಡ್ ಜನರಲ್ ಇನ್ಶೂರೆನ್ಸ್ ಕಂಪೆನಿ ಒಫ್ ವೆಸ್ಟ್‌ಕೋಸ್ಟ್ ಇವರ ೧೯೩೭ನೇ ವರ್ಷದ ಕೆಲೆಂಡರು ನಮ್ಮ ಹಸ್ತಗತವಾಗಿದೆ.

ನಮ್ಮ ಜಿಲ್ಲೆಯಿಂದ ಅಪ್ಪರ್ ಹೌಸಿಗೆ ಆರಿಸಿಬಂದಿರುವ ಶ್ರೀಮಾನ್ ಡಿ. ಮಂಜಯ್ಯ ಹೆಗ್ಗಡೆಯವರ ಸನ್ಮಾನಾರ್ಥವಾಗಿ ಇಲ್ಲಿಯ ಜೈನ್ ಬೋರ್ಡಿಂಗಿನ ವಠಾರದಲ್ಲಿ ಒಂದು ಸಂತೋಷಕೂಟವು ಕೆಲವು ಮಂದಿ ದಾನಿಯರಿಂದ ಏರ್ಪಡಿಸಲ್ಪಟ್ಟಿತು. ಆ ಕೂಟವು ಕಳೆದ ಆದಿತ್ಯವಾರ ಸಂಜೆ ಹೊಸ ಸಭಾಸದನಗಳ ಸದಸ್ಯರು ಹಾಗೂ ಇತರ ಆಮಂತ್ರಿತರಾದ ಮಹಾಜನಗಳ ಸಮಾವೇಶದಿಂದ ಬಹು ಸಂಭ್ರಮದಿಂದ ಜರಗಿತು. ಶ್ರೀ॥ ಹೆಗ್ಗಡೆಯವರ ವಿಜಯದ ಕುರಿತಾದ ಭಾಷಣವೂ, ಅದಕ್ಕೆ ಅವರ ಸದುತ್ತರವೂ ನಡೆಯಿತಲ್ಲದೆ, ಸಂಗೀತ, ಬೇಂಡ್‌ವಾದ್ಯಗಳ ಘೋಷವೂ, ಫಲಾಹಾರ ಸತ್ಕಾರದ ವ್ಯವಸ್ಥೆಯೂ ಇದ್ದುವು. ವಠಾರವು ಮನೋಹರವಾಗಿ ವಿದ್ಯುದ್ದೀಪಗಳಿಂದಲೂ ಧ್ವಜಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು.

ದೇಶಭಕ್ತ ದಿವಂಗತ ಕಾರ್ನಾಡು ಸದಾಶಿವರಾಯರ ಸ್ಮಾರಕ ನಿಧಿಯ ಸಲುವಾಗಿ ಮಂಗಳೂರು ಟೌನು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸೇವಾದಳ ನಾಟಕಮಂಡಳಿಯವರು ಸದ್ಯದಲ್ಲಿಯೇ ಒಂದು ನಾಟಕವನ್ನು ಅಭಿನಯಿಸಲಿಕ್ಕಿರುವರು. ಮಹಾಜನರೆಲ್ಲರೂ ಈ ಸತ್ಕಾರ್ಯಕ್ಕೆ ಎಲ್ಲಾ ವಿಧದಲ್ಲಿಯೂ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

ಡಿಸ್ಟ್ರಿಕ್ಟ್ ಬೋರ್ಡ್ ಪ್ರಾಥಮಿಕ ಶಾಲಾ ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರ ಸಂಬಳದ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡ್ ಬಜೆಟ್ ಕಮಿಟಿಯವರು ೧೯೩೭ನೆ ವರ್ಷದ ಬಜೇಟನ್ನು ತಯಾರು ಮಾಡುವಾಗ್ಯೆ ಬೋರ್ಡ್ ಸ್ಕೂಲ್ ಅಧ್ಯಾಪಕರಿಗೆ ರೂಪಾಯಿಗೆ ೧೪ ಆಣೆಯಂತೆ ಕಡಿತ ಮಾಡಬೇಕೆಂದೂ, ಉಪಾಧ್ಯಾಯಿನಿಯರ ಸ್ಕೇಲಿನ ಹೆಚ್ಚಿನ ಸಂಬಳವನ್ನು ವಜಾ ಮಾಡಬೇಕೆಂದೂ ನಿರ್ಣಯ ಮಾಡಿರುತ್ತಾರಾಗಿ ಕೇಳುತ್ತೇವೆ. ಹಾಗೆ ಮಾಡಿಯೂ ೯೪ ಸಾವಿರ ರೂಪಾಯಿ ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಡೆಫಿಸಿಟ್ ನಿಂತಿದೆ. ಉಪಾಧ್ಯಾಯರ ಪರಿಸ್ಥಿತಿಯು ವರ್ಷಂಪ್ರತಿ ಹೀಗೆಯೇ ಆದರೆ ಬಹಳ ಕಷ್ಟದೇಸಂ. ಆದುದರಿಂದ ಈ ವಿಷಯದಲ್ಲಿ ನಾವು ಮಾಡತಕ್ಕ ಪ್ರಯತ್ನಗಳೇನು ಎಂದು ನಿರ್ಣಯಿಸುವ ಉತ್ಸಾಹವುಳ್ಳ ಉಪಾಧ್ಯಾಯ ಉಪಾಧ್ಯಾಯಿನಿಯರು ಬರುವ ಡಿಸ್ಟ್ರಿಕ್ಟ್ ಬೋರ್ಡ್ ಬಜೆಟ್ ಮೀಟಿಂಗಿನ ಮುಂಚಿನ ದಿನ ಪೂರ್ವಾಹ್ನ ೧೦ ಗಂಟೆಗೆ ಮಂಗಳೂರು ಕೊಡಿಯಾಲಬೈಲ್ ಬಂಟ್ಸ್ ಹಾಸ್ಟೆಲ್ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ಚಿತ್ತೈಸಬೇಕಾಗಿ ಅಪೇಕ್ಷಿಸುತ್ತೇನೆ. ಡಿ. ಬೋರ್ಡ್ ಬಜೆಟ್ ಮೀಟಿಂಗಿನ ತಾರೀಕನ್ನು ನೀವೇ ತಿಳಿದುಕೊಳ್ಳಬೇಕಾಗುವುದು. ಸಾಧ್ಯವಾದಷ್ಟು ಮಟ್ಟಿಗೆ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರನ್ನು ಆ ದಿವಸದ ಮೀಟಿಂಗಿಗೆ ಆಮಂತ್ರಿಸುತ್ತೇನೆ ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಮೈಸೂರ ಸ್ಟೇಟಿನ ಹೊಸ ನಗರದ ಮಿಲ್ಲಿನ ಪ್ರೊಪ್ರೈಟರರ ಮನೆಯಿಂದ ರೂ. ೧೪೧೫—೯—೯ ಕಳವು ಮಾಡಿ ಬಂದವನೊಬ್ಬನನ್ನು ಮಂಗಳೂರು ರೈಲ್ವೆಸ್ಟೇಶನಿನಲ್ಲಿ ತಾ. ೧೦—೩—೩೭ರಲ್ಲಿ ಬೆಳಗಿನ ಸಮಯದಲ್ಲಿ ರೈಲ್ವೆ ಪೋಲೀಸು ಹೆಡ್ ಕೊನ್‌ಸ್ಟೆಬಲರಿಬ್ಬರು ಕೂಡಿಕೊಂಡು ನೋಟು ಸಮೇತ ಹಿಡಿದಿರುವರಾಗಿ ತಿಳಿದುಬರುತ್ತದೆ.

ಸ್ಥಳೀಯ ಮಹಮ್ಮಡನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ವಾರ - ವಸ್ತುಪ್ರದರ್ಶನವು ಇಲ್ಲಿಯ ಮಾನ್ಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಇವರಿಂದ ತೆರೆಯಲ್ಪಟ್ಟು, ಹಲವು ವಿನೋದ ವ್ಯಾಖ್ಯಾನಗಳು, ಫಲಾಹಾರ, ಭಾಷಣಗಳಿಂದ ಕೊನೆಗೊಂಡಿತು. ಪ್ರದರ್ಶನದಲ್ಲಿ ಹಲವರಿಗೆ ಯಥಾ ಉಚಿತ ಬಹುಮಾನಗಳೂ ಸರ್ಟಿಫಿಕೇಟುಗಳೂ ದೊರೆತಿರುವುದು ಸಂತೋಷದ ಸುದ್ದಿ. ಪ್ರಾಮುಖ್ಯವಾಗಿ ಇಂತಹ ವಸ್ತುಪ್ರದರ್ಶನಗಳನ್ನು ನಮ್ಮ ಜಿಲ್ಲೆಯ ಪ್ರತಿಯೊಂದು ಶಾಲೆಯಲ್ಲೂ ಏರ್ಪಡಿಸುವುದರಿಂದ ಮಕ್ಕಳ ಶಿಕ್ಷಣಕ್ಕೆ ಸಹಾಯವಾಗುವುದು ಮಾತ್ರವಲ್ಲದೆ, ಕೈಗಾರಿಕೆಗೂ ಹೆಚ್ಚಿನ ಉತ್ತೇಜನವು ದೊರೆಯುವುದು.

The Commonwealth Assurance Company, Ltd.,

ಮೇಲಿನ ವಿಮಾ ಸಂಸ್ಥೆಯು ೧೯೨೯ರಲ್ಲಿ ಪೂನಾ ನಗರದಲ್ಲಿ ಸ್ಥಾಪಿಸಲ್ಪಟ್ಟು ಇಂದಿಗೆ ಎಂಟು ವರ್ಷಗಳಲ್ಲಿ ಬಹಳ ಸೊಗಸಾದ ವ್ಯವಹಾರವನ್ನು ಮಾಡಿಕೊಂಡು ಬಂದಿರುತ್ತದೆ. ಕಂಪೆನಿಯ ೮ನೇ ವರ್ಷದ ವ್ಯವಹಾರದ ವರದಿ ಪಟ್ಟಿಯನ್ನು ನೋಡಿದರೆ, ಪ್ರಾರಂಭದ ವರ್ಷದಲ್ಲಿ ದಾಖಲಾದ ವಿಮಾ ಸಂಖ್ಯೆಯು ಸುಮಾರು ೭ ಲಕ್ಷದಷ್ಟಿದ್ದು ೧೯೩೬ಕ್ಕೆ ಅಂತ್ಯವಾಗುವ ವರ್ಷಕ್ಕೆ ಅದು ೮೦ಪಟ್ಟು ಹೆಚ್ಚಾಗಿರುವುದನ್ನು ನೋಡಿದರೆ ಸಂಸ್ಥೆಯ ಅಭಿವೃದ್ಧಿಯನ್ನು ಸುಲಭವಾಗಿ ತಿಳಕೊಂಡಂತಾಗುವುದು.

ವಿಮಾ ಕಂತುಗಳಿಂದಾಗುವ ಆದಾಯಕ್ಕಿಂತ ಕಳೆದ ವರ್ಷದ ಸಂಸ್ಥೆಯ ಖರ್ಚು ಸುಮಾರು ಶೇಕಡಾ ೪೫ಕ್ಕೆ ಕಮ್ಮಿಯಾಗಿರುತ್ತದೆಂಬ ವಿಷಯವು ಸಂಸ್ಥೆಯ ದೂರದರ್ಶಿತ ಮತ್ತು ಜಾಗರೂಕತೆಯ ಆಡಳಿತಕ್ರಮವನ್ನು ಸ್ಪಷ್ಟಪಡಿಸುತ್ತದೆ. ವಿಮೆ ಇಳಿಸುವಾಗ ಕಂಪೆನಿಯು ಬಹಳ ಜಾಗರೂಕತೆಯಿಂದಿರುತ್ತದೆ. ಕಳೆದ ವರ್ಷ ಸುಮಾರು ೩೮ ಸಾವಿರ ರೂಪಾಯಿಗಳ ಹಕ್ಕುಗಳಿಗಾಗಿ ಅರ್ಜಿಗಳು ಬಂದಿತ್ತು. ಅದರಲ್ಲಿ ೧೪ ಸಾವಿರಗಳಷ್ಟು ಅಗಲೇ ಹಕ್ಕುದಾರರಿಗೆ ಕೊಡಲ್ಪಟ್ಟವು. ಉಳಿದ್ದು ಅಂತಕ್ಕೆ ಬೇಕಾಗುವ ಅವಶ್ಯಕ ಪತ್ರಪಟ್ಟಿಗಳನ್ನು ಸಂಸ್ಥೆಯು ನಿರೀಕ್ಷಿಸುತ್ತಿದೆ. ೧೯೩೬—೩೭ನೇ ವರ್ಷವು ವ್ಯವಹಾರ ಬೆಲೆಯನ್ನು ನಿಷ್ಕರ್ಷಿಸುವ ವರ್ಷವಾದುದರಿಂದ ಕಂಪೆನಿಯು ತನ್ನ ಪಾಲುಗಾರರಿಗೆ ಶೇಕಡಾ ೬ರಂತೆ ಲಾಭವನ್ನು ಹಂಚಬೇಕೆಂದು ನಿರ್ಧರಿಸಿದೆ. ಅಲ್ಲದೆ ಎಂಡೋಮೆಂಟ್ ಪೋಲಿಸಿಯವರಿಗೆ ಶೇಕಡಾ ೧೦ರಂತೆಯೂ, ಹೋಲ್ ಲೈಫ್ ಪಾಲಿಸಿಯವರಿಗೆ ೧೫%ರಂತೆಯೂ ಬೋನಸ್ಸನ್ನು ಹಂಚುವ ಏರ್ಪಾಡು ಮಾಡಲಾಗಿದೆ. ಜನತೆಯ ವಿಶ್ವಾಸ ಭರವಸೆಯನ್ನು ಹೆಚ್ಚಿಸುವ ವ್ಯವಹಾರದ ಕುಶಲತೆಯನ್ನು ಬೆಳೆಸಬೇಕೆಂಬ ಉದ್ದೇಶದಿಂದ ಬೊಂಬಾಯಿ ಡಿಲ್ಲಿ ನಗರಗಳಲ್ಲಿ ಇವರ ಶಾಖೆಗಳು ತೆರೆಯಲಾಗಿವೆ. ಬೊಂಬಾಯಿಯ ಶಾಖೆಯನ್ನು ಪ್ರಸಿದ್ಧ ರಾಷ್ಟ್ರ ಮುಖಂಡರಾದ ಶ್ರೀ. ಕೆ. ಎಫ್. ನರಿಮನರು ತೆರೆದರು. ಇದರಿಂದ ಸಂಸ್ಥೆಯು ವಿಶೇಷ ರಾಷ್ಟ್ರೀಯ ಭಾವನೆಯಿಂದ ಕೂಡಿರುತ್ತದೆಂದು ತಿಳಿಯಬಹುದು. ಕೇಸರಿ ಮತ್ತು ಮರಾಠ ಪತ್ರಿಕೆಯ ಸಂಪಾದಕರೂ, ಮಹಾರಾಷ್ಟ್ರದ ಪ್ರಸಿದ್ಧ ಮುಖಂಡರೂ ಆದ ಎನ್. ಸಿ. ಕೇಳ್ಕರ ಇವರು ಈ ಸಂಸ್ಥೆಯ ಡೈರೆಕ್ಟರ್‌ರ್ ಮೇನರಾಗಿರುವರು. ಈ ಸಂಸ್ಥೆಯ ಸಿಟಿ ಡಿಸ್ಟ್ರಿಕ್ಟ್ ಮೈಸೂರು, ಕೊಡಗು ಮತ್ತು ದಕ್ಷಿಣ ಕನ್ನಡದ ಪ್ರಧಾನ ಏಜಂಟರಾದ ಬೆಂಗಳೂರಿನ ಗಣಪತ್‌ರಾವ್ ಎಂಡ್ ಸನ್ಸ್ ಇವರ ಕಡೆಯಿಂದ ಎಸ್. ಜಿ. ಗವಾಂಕರರು ಈಗ ಮಂಗಳೂರಿನಲ್ಲಿದ್ದಾರೆ. ಮೇಲ್ಕಂಡ ವಿಮಾಸಂಸ್ಥೆಯೊಂದಿಗೆ ವ್ಯವಹಾರ ಮಾಡಲಿಚ್ಛಿಸುವವರು, ಅವರನ್ನು ಇಲ್ಲಿನ ಕೃಷ್ಣಾ ಭವನ ಹೋಟೇಲಿನಲ್ಲಿ ಅವರ ರೂಮಿನಲ್ಲಿ ಕಾಣಬಹುದೆಂದೂ, ಅವರು ಒಂದು ವಾರದ ತನಕ ಇಲ್ಲಿರುವರೆಂದೂ ತಿಳಿಸಿರುವರು.

ತುರಿಸಿ, ತೊಂದರೆ ಕೊಡುವ ವ್ರಣ, ಕುರು ಇವುಗಳಿಂದ ಪಾರಾಗಿರಿ.

ಕುರುಹು ಜಾಗವು, ಕಲೆಯು ಅಥವಾ ಅರೆಯು ಎಷ್ಟೇ ಚಿಕ್ಕದಿರಲಿ, ಸಾಂಬಕನ್ನು ಅದರ ಮೇಲೆ ಮೆಲ್ಲನೆ ಸವರಿಬಿಡಿ. ಇದು ಕಜ್ಜಿ ತುರಿಕಜ್ಜಿ, ಮತ್ತು ಇತರ ದೀರ್ಘ ಚರ್ಮ ರೋಗಗಳನ್ನು ದೂರಪಡಿಸುತ್ತದೆ. ಅಮೂಲ್ಯ ವನಸ್ಪತಿಗಳಿಂದ ತಯಾರಿಸಲ್ಪಟ್ಟುದರಿಂದ ಸಾಂಬಕ್ಕು ಚರ್ಮರಂಧ್ರಗಳನ್ನು ಹೊಕ್ಕು ನೋವನ್ನು ಇಂದ್ರಜಾಲದಂತೆ ತಣ್ಣಗಿರಿಸಿ, ಕಲ್ಮಶವನ್ನು ಒಣಗಿಸುತ್ತದೆ. ಸಾಂಬಕ್ಕಿನಿಂದ ಗುಣವಾದ ಜಾಗದಲ್ಲಿ ಕಲೆಗಳು ಉಳಿಯುವುದಿಲ್ಲ. ಆದುದರಿಂದ ನಿಮ್ಮ ಎಲ್ಲ ಚರ್ಮವ್ಯಾಧಿಗಳಿಗೂ ಅದನ್ನುಪಯೋಗಿಸಲು ಮರೆಯಬೇಡಿ. ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲೂ ರೂ. 1 ಮತ್ತು 2—4—0ರಂತೆ ಮಾರಲ್ಪಡುತ್ತದೆ.

ಸಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ.

ಏಜಂಟರು: — ಮೆಸರ್ಸ್ ದಾಧಾ ಎಂಡ್ ಕೋ, ಪಿ. ಟಿ. ಮದ್ರಾಸು.

ಸಾಂಬಕ್

Zam Buk



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:— ಕಾಮತ್ಸ್ ಸ್ವದೇಶೀ ಎಂಪೋರಿಯಂ

ಸರಕಾರದಲ್ಲಿ ರಜಿಸ್ಟರ್ ಪಟ್ಟಿ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿವಂತವೈದ್ಯ

ರೋಗದ ನಾಮಗಳು — ಕ್ಷಯರೋಗ, ಬಾಣಂತಿರೋಗ ಹಳೆದ ಸಂಜು ದಮ್ಮು, ಅಜೀರ್ಣ ಕಾಲರಾ, (ಮಹಾರಿ) ಪ್ಲೇಗು ಅನ್ ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ ಗಂಡುಮಾಲೆ ನಾರಹುಣ್ಣು, ಪಕ್ಷವಾಯು, ಕಿವಿಶೂಲೆ ಮುಂತಾಗಿ ಮೊಳಗಿನ ಪಿನಸಿ ಮೊದಲಾದುವುಗಳು ಕಣ್ಣಿನೊಳಗೆ ಹೂವು ಬೀಳೋದು, ಅಜೀರ್ಣ ಹೊಟ್ಟೆ [illegible] ಹೊಟ್ಟೆ ದೊಡ್ಡದಾಗೋದು [illegible] ಮತ್ತು ಡಾಕ್ಟರರಿಗೂ ವೈದ್ಯರಿಗೂ [illegible] ಗುಣಬರುವುದು [illegible] ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ [illegible] ಕರ್ನಾಟಕದಲ್ಲೆಲ್ಲಾ ಹೋಗುತ್ತವೆ.

[illegible]

ನಮ್ಮ ವಿಳಾಸ — ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸ, ಪೋ ಶಹಾಪುರ [ಬೆಳಗಾಂವಿ]

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಞಂಗಾಡ್ ಪೆಸೆಂಜರು	ಬೆ 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 3.20	

ಬಹಳ ಕಡಿಮೆಯಾದ ಕ್ರಯ.

ಆಟೋಮಟಿಕ್ ಅಲಾರಂ ಪಿಸ್ತಲ್.



ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತಲಿನಂತಿರುವುದು ಇದರಿಂದ ಹತ್ತು ಸೆಕುಂಡಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು ಇದು ಒಂದು ನಮ್ಮಲ್ಲಿ ಇದ್ದರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದಲ್ಲಿ ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು ಇದನ್ನು ಉಪಯೋಗಿಸುವ ಕ್ರಮವುಳ್ಳ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲೆ ಹಾಕಿದ ಸ್ನಾರ್ಚ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತಲು ೧ಕ್ಕೆ ತೋಟಿಗಳ ಸಹಿತ [illegible] ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೩, ಇರುಳಪ್ಪನ ಬೀದಿ, ಮದ್ರಾಸು.

ಕಳೆದ 30 ವರ್ಷಗಳಿಂದಲೂ ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡುತ್ತಿರುವ— ಶ್ರೇಷ್ಠ ವಾರಪತ್ರಿಕೆಯಾದ

"ಸ್ವದೇಶಾಭಿಮಾನಿ"

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕಮಗಳೂರು ಮುಖ್ಯವಾಗಿ ಇನ್ನಿತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ ಬಿಡಿ ಸಂಚಿಕೆಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ ಶರ್ತಗಳಿಗಾಗಿ ಬರೆಕೊಳ್ಳಿರಿ

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

- ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ
- ಗರ್ಭಪಾಲ— ಗರ್ಭಶೂಲಿ, ಗರ್ಭಸ್ರಾವಕ್ಕೆ
- ಚಂದ್ರಮಸ್— ವಾಂತಿಭೇದಿ, ಅತಿಸಾರಕ್ಕೆ.
- ಕೃಷ್ಣಾರಕ್— ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
- ದ್ರಾಕ್ಷಾಸವ— ನಿತ್ರಾಣಕ್ಕೆ
- ಮಹಾಮದನ ಕಾಮೇಶ್ವರಿ ಲೇಹ್ಯ— ನಪುಂಸಕತ್ವ, ಧಾತುಕ್ಷೀಣತೆಗೆ
- ಭುವನಾಂಜನ ಪೈನ್ ಬಾಮ್— ಶಾರೀರಕ ನೋವುಗಳಿಗೆ.
- ರಸಬಿಂದು— ಸ್ತ್ರೀ ಸಂಬಂಧ ವ್ಯಾಧಿಗಳಿಗೆ.
- ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ವರುಷ ಸಂದಂತೆ ವ್ಯತ್ಯಾಸಗಳು ಅಧಿಕ ವಾಗುತ್ತಿವೆ. ನಿನ್ನೆ ಕಂಡಂತೆ ಇಂದು ಕಾಣಬರುವುದಿಲ್ಲ. ಹೇರೆತ್ತಿನ ಕಾಲವು ವಿಮಾನಕ್ಕೆ ತಿರುಗಿದೆ. ಕುದುರೆ ಸವಾರಿಯ ಮೂಲಕ ಹೋಗುತ್ತಿದ್ದ ಸುದ್ದಿಯು ಇಂದು ಯಾರಿಗೂ ಕಾಣಿಸದೆ ಗಾಳಿಯ ಮೂಲಕ ಜಗತ್ತಿನ ಒಂದೆಡೆಯಿಂದ ಇನ್ನೊಂದೆಡೆಗೆ ಸರಿಯುತ್ತಿದೆ. ಅಂತೆಯೇ ಒಂದೆಡೆಯ ಜನರ ಜೀವನಗಳು ಇಂದು ದೂರದ ನೆನಹಲ್ಲದೆ ಅಂತರದ ಆತಂಕಕ್ಕೆಡೆಯಾಗದೆ ಸರಿದು ಇನ್ನೊಂದೆಡೆಯ ಜನರ ಮನಕ್ಕೆ ಹರ್ಷವನ್ನೀಯುತ್ತಿರುತ್ತಿದೆ. ಅಂತಹ ಜನ ಜೀವನವನ್ನೇ ಜಗತ್ತಿನ ಹಲವು ಮೂಲೆಯ ಹಲವು ಮಂದಿಗೆ ತೋರಿ ಅವರನ್ನು ಜಾಗ್ರತರನ್ನಾಗಿ ಮಾಡುವ ಸಾಧನವೆ ಚಲನ ಚಿತ್ರವು

ಅಮೇರಿಕಾ ದೇಶದಿಂದ ಸಾವಿರಾರು ಮೈಲಿಗಳ ಅಂತರದಲ್ಲಿರುವ ನಾವು ಅಲ್ಲಿನ ಜನರ ಚಿತ್ರಗಳನ್ನಷ್ಟೆ ಕಾಣುತ್ತಿರುವುದಲ್ಲದೆ ಚಲನೆ ಮಾತು ವ್ಯವಹಾರ ನಡತೆಗಳನ್ನು ಕಾಣುತ್ತಿದ್ದೇವೆ ಅಮೇರಿಕಾ ದೇಶಕ್ಕೆ ಹೋಗಿ ಅಲ್ಲಿನ ವಿಷಯ ವಿಶೇಷತೆಗಳನ್ನು ಕಾಣುವುದಕ್ಕಿಂತ ಹೆಚ್ಚಾಗಿ ಇಂದು ಚಲನ ಚಿತ್ರಗಳ ಮೂಲಕ ನಾವು ಇಲ್ಲಿ ಕಾಣುತ್ತಿದ್ದೇವೆ. ಅಲ್ಲಿನ ಜನರನ್ನು ಚಿತ್ರದ ಮೂಲಕ ನಾವು ಇಲ್ಲಿ ಕಾಣುತ್ತಿದ್ದೇವೆ ಅಲ್ಲಿನ ಜನರನ್ನು ಚಿತ್ರದ ಮೂಲಕ ಸಾವಿರಾರು ಮೈಲುಗಳ ದೂರದಲ್ಲಿನ ನಮ್ಮ ನಾಡಿಗೆ ಕರೆದು ಅವರ ವಿಷಯ ವಿಶೇಷತೆಗಳನ್ನು ಕಂಡು ಆನಂದಗೊಳ್ಳುತ್ತಿದ್ದೇವೆ ಅಂತಹ ಚಲನಚಿತ್ರದ ಅದ್ಭುತವನ್ನು ನಮ್ಮ ನಾಡಿಗರಿಗೆ ತಿಳಿಯಪಡಿಸುವ ಮಹದುದ್ದೇಶವೇ ಈ ಚಲನಚಿತ್ರ ವಿಭಾಗದ ಧ್ಯೇಯ

ಚಲನ ಚಿತ್ರವನ್ನು ನೋಡುತ್ತಿರುವವರಿಗೆ ಮಾತ್ರ ಈ ಲೇಖನ ಮಾಲೆಯು ಸಹಾಯವನ್ನು ಮಾಡುವುದೇ ಅಲ್ಲದೆ ನೋಡದೆ ಇದ್ದ ಅಥವಾ ಒಂದೆರಡು ಬಾರಿ ನೋಡಿದ ವ್ಯಕ್ತಿಯೊಬ್ಬನಿಗೂ ಈ ಲೇಖನಮಾಲೆಯು ಚಲನಚಿತ್ರದ ಕುರಿತು ತಿಳಿಸುವುದೇ ಅಲ್ಲದೆ ಲೇಖನಮಾಲೆಯನ್ನು ಸದಾ ಓದುತ್ತಿದ್ದರೆ ಅದು ಚಿತ್ರದ ಅದ್ಭುತಕತೆಯನ್ನೂ ಸ್ವಜತೆಯನ್ನೂ ತಿಳಿಸಿ ಚಲನಚಿತ್ರ ಪ್ರಪಂಚದ ವಿಷಯಗಳನ್ನು ತಿಳಿಸದೆ ಇರದೆಂಬ ಭರವಸೆ ಈಯುತ್ತೇವೆ

ಇಂದು ಚಲನಚಿತ್ರ ಉದ್ಯೋಗವು ಜಗತ್ತಿನ 5ನೇ ಪ್ರಖ್ಯಾತ ಕೈಗಾರಿಕೆಯಾಗಿದೆ ಲಕ್ಷಾಂತರ ಜನರ ಉದ್ಯೋಗಕ್ಕೆ ಎಡೆಯಾಗಿದೆ ಮಿಲಿಯಾಂತರ ಹಣದ ಚಲಾವಣೆಯ ಕಾರಣಭೂತವಾಗಿದೆ ಇಂತಹ ಉದ್ಯೋಗದ ಇಂತಹ ಮಹತ್ತಾದ ಕಲಾ ವಿಶೇಷತೆಯ ಕುರಿತಾಗಿ ಕಲೆಯ ಬೆಳೆಗೆ ಕಾರಣಭೂತರಾದವರ ಕುರಿತಾಗಿ ನಾವೂ ತಿಳಿಯಬೇಕಾಗಿದೆ ಇಂದು ಚಲನ ಚಿತ್ರವು ಒಂದೆರಡೆಯಲ್ಲಿಲ್ಲ, ಜಗತ್ತಿನಲ್ಲೇ ಹಬ್ಬಿಕೊಂಡಿದೆ ಜಗತ್ತನ್ನೇ ತಬ್ಬಿಕೊಂಡಿದೆ

ಇದೀಗ ಜಗತ್ಪ್ರಖ್ಯಾತ ಹಾಸ್ಯಗಾರದ್ವಯರಾದ ಲಾರೆಲ್ ಮತ್ತು ಹಾರ್ಡಿ ಇವರ ಜೀವನಚರಿತ್ರೆಯನ್ನು ಕೊಡುವೆವು

ಸ್ಟೇನ್ ಲಾರೆಲ್ ೧

ಜಗತ್ತನ್ನೇ ನಗಿಸಲೆಂದು ಜನಿಸಿದ ಹಲಕೆಲವು ಪ್ರಖ್ಯಾತ ಹಾಸ್ಯಗಾರರಲ್ಲಿ ಲಾರೆಲ್ (Stan Laurel) ಒಬ್ಬನು 1895ನೇ ಇಸವಿಯಲ್ಲಿ ಇಂಗ್ಲೆಂಡ್ ದೇಶದ ಉಲ್ವರ್‌ಸ್ಟನ್ ನಗರದಲ್ಲಿ ಈತನ ಜನನವಾಯಿತು ಆಂಗ್ಲ ರಕ್ತವು ಹರಿಯುತ್ತಿರುವ ಈತನ ತಂದೆತಾಯಿಗಳಿಬ್ಬರೂ ರಂಗಭೂಮಿಯ ಮೇಲೆ ಪ್ರಖ್ಯಾತರಾಗಿದ್ದರು ಅಲ್ಲದೆ ತಂದೆಯು ಬ್ರಿಟಿಷ್ ಚಲನ ಚಿತ್ರ ಕೈಗಾರಿಕೆಯ ಉದ್ಧಾರ ಕರ್ತೃವೂ ಆಗಿದ್ದನು. ಚಲನಚಿತ್ರ ಪ್ರಪಂಚಕ್ಕಿಳಿದು ಪ್ರಖ್ಯಾತನಾಗುವ ವರೆಗೆ ಆತನು ಮನೆಯ ಸುಖವನ್ನು ಅನುಭವಿಸಿದವನಲ್ಲ ಉತ್ತಮವಾದ ಅಚ್ಚುಕಟ್ಟಾದ ಮನೆಯ ಜ್ಞಾನವೇ ಆತನಿಗಿರಲಿಲ್ಲ ಕಾರಣ ಆವನು ಸದಾ ಉಡುಪಿನ ಕೋಣೆಗಳಲ್ಲೊ, ನಾಟಕ ಮಂದಿರಗಳಲ್ಲೊ, ರೈಲ್ವೇ ಸ್ಟೇಶನ್‌ಗಳಲ್ಲೋ ಉಳಕೊಳ್ಳುವ ಪದ್ಧತಿ

ಚಲನಚಿತ್ರ ಪ್ರಪಂಚ

ಮಾಸ್ಟರ್ ವೆಂಕಣ್ಣ.

ಏನೋ ಕೆಲ ಸಮಯ ಮಾತ್ರ ಆತನ ತಂದೆಯು ಒಂದು ಸುಂದರ ಮನೆಯನ್ನೇರ್ಪಡಿಸಿ ಅದರ ಬಳಿಯಲ್ಲೇ ಮಕ್ಕಳಿಗಾಗಿ ಒಂದು ನಾಟಕ ಮಂದಿರವನ್ನು ಸ್ಥಾಪಿಸಿದುದರಿಂದ ಲಾರೆಲ್ ಅಲ್ಲೇ ಇದ್ದನು ಆತನೇ ಅಲ್ಲಿಗೆ ಬೇಕಾದ ನಾಟಕಗಳನ್ನು ಬರೆದು ನಿರ್ದೇಶಿಸಿ ನಟಿಸುವ ಕೆಲಸವನ್ನು ಮಾಡಬೇಕಾದ್ದರಿಂದ ತನ್ನ ಹೆಚ್ಚಿನ ಸಮಯವನ್ನೆಲ್ಲಾ ತನ್ನ ಪ್ರೀತಿಯ ಈ ಮಂದಿರದಲ್ಲೇ ಕಳೆದು ತನ್ನ ಮನೆಯಲ್ಲೇ ಉಳಕೊಳ್ಳುತ್ತಿದ್ದನು

ಲಾರೆಲ್ಲನ ವಿದ್ಯಾಭ್ಯಾಸವೇನೂ ಅಷ್ಟೊಂದು ಹೆಚ್ಚಿನದಲ್ಲವಾದರೂ ತನ್ನ ಸ್ವಯಂ ಪ್ರಯತ್ನದಿಂದ ಆತನು ಬೇಕಷ್ಟು ಜ್ಞಾನವನ್ನು ಸಂಪಾದಿಸಿದನು ಲಂಡನ್ ನಗರದ ಗಾನ ಮಂದಿರಗಳಲ್ಲೇ ಆತನ ಹೆಚ್ಚಿನ ಜ್ಞಾನೋದ್ದೀಪನವಾಯಿತು ಅಂತೆಯೆ " ಇಂದಿಗೆ ಆತನ ಮತ್ತು ಆತನ ಹಿರಿಯರ ಅಲ್ಲದೆ ಬಂಧುಗಳ ಜೀವನದ ಕುರಿತಾದ ವಿಷಯಗಳೂ ದೃಶ್ಯಗಳೂ ಕೂಡಿದ ಅನೇಕ ಪುಸ್ತಕಗಳು ಆತನ ಮನೆಯನ್ನು ತುಂಬಿಕೊಂಡಿವೆ

ತನ್ನ ಜೀವನವನ್ನು ತಾನೇ ನಡಿಸಿಕೊಳ್ಳಬೇಕೆಂಬ ಇಚ್ಛೆಯಿಂದ ಲಾರೆಲ್ ತನ್ನ 15ನೇ ಪ್ರಾಯದಲ್ಲಿ ಮನೆಯನ್ನು ಬಿಟ್ಟು ಹೊರಟನು ಹಾಗೆಯೆ " ಗಾನಮಂದಿರಗಳ, ನರ್ತನ ಕೂಟಗಳ, ನಾಟಕ ಮಂಡಳಿಗಳ ಜೊತೆಗೆ ಹಾಡುತ್ತಾ ನರ್ತಿಸುತ್ತಾ, ನಲಿಯುತ್ತಾ ಯುರೋಪ್ ಖಂಡವನ್ನು ಸಂಚರಿಸಿದನು. ಎರಡು ವರುಷಗಳ ಈ ತೆರನ ಜೀವನದ ನಂತರದಲ್ಲಿ ಈಗ ಚಾರ್ಲಿ ಚಾಪ್ಲಿನನು ಅಭಿನಯಿಸುತ್ತಿದ್ದ ಫ್ರೆಡ್ ಕಾರ್ನೋರ್ವಿನ ಲಂಡನ್ ಹಾಸ್ಯಗಾರರ ತಂಡವನ್ನು ಸೇರಿಕೊಂಡು ಅಮೇರಿಕಕ್ಕೆ ತೆರಳಿದನು ಈ ಕಂಪೆನಿಯು ತನ್ನ ಮೂರು ಮೂರುವರೆ ವರುಷಗಳ ಸಂಚಾರವನ್ನು ಮುಗಿಸಿದೊಡನೆಯೇ ಈ ಪುಟ್ಟ ಹಾಸ್ಯಗಾರನು ಚಲನಚಿತ್ರ ಪ್ರಪಂಚಕ್ಕೆ ಕಾಲಿಟ್ಟನು ಆದರೆ ಅದು ಮನಸ್ಸಿಗೆ ಸರಿಕಾಣದಿರಲು ಪುನಹ ರಂಗಭೂಮಿಗೆ ಮರಳಿದನು

ಆದರೆ 1922ರಲ್ಲಿ ಪುನಹ ಚಲನಚಿತ್ರ ಪ್ರಪಂಚವನ್ನು ಪ್ರವೇಶಿಸಿ 'ಹಾಲ್ ರೋಚ್' ರ ಪಂಗಡವನ್ನು ಸೇರಿದನು ಹಾಗೆಯೇ 1926ರಲ್ಲಿ ಓಲಿವರ್ ಹಾರ್ಡಿಯು ಭೇಟಿಯಾಗಿ ಜೊತೆಯಾದ ಒಂದು ವರ್ಷದಲ್ಲೇ ಜಗತ್ತನ್ನೇ ತಮ್ಮೆಡೆಗೆ ಸೆಳೆವಷ್ಟು ಸಾಹಸಿಕ ಹಾಸ್ಯಗಾರರಾದರು

ಲಾರೆಲ್ ಪ್ರತಿಯೊಂದ ವಿಷಯದಲ್ಲೂ ಆಂಗ್ಲೇಯನೇ ಆತನ ರೂಪ ಹಾವಭಾವ ರೀತಿ ನಡತೆಗಳೆಲ್ಲಾ ಆಂಗ್ಲೇಯ ಕಣ್ಣುಗಳ ನೀಲಿವರ್ಣ ಕೂದಲು ತುಸ ಕೆಂದುವರ್ಣದ್ದಾಗಿ ಯಾವ ತೆರನ ಅಂಕೆಗೂ ಸಿಲುಕದೆ ತನ್ನ ಇಚ್ಛೆ ಬಂದ ತೆರ ಗಾಳಿಗೆ ಹಾರಾಡುವಂಥ ಹದ್ದು ಆಂಗ್ಲ ಜೀವನ, ಅಮೇರಿಕೆಯ ಪ್ರಾಚೀನ ಚರಿತ್ರೆ ಸಾಹಸ ವಿಷಯಗಳನ್ನು ಕುರಿತಾಗಿ ಬರೆದ ಗ್ರಂಥಗಳನ್ನು ಓದುವುದೆಂದರೆ ಲಾರೆಲ್‌ಗೆ ಅದೇ ಅಕ್ಕರೆ ಪಾಶ್ಚಾತ್ಯ ಸಾಹಸಿಕ ಮತ್ತು ಸಮಾನ ಪ್ರೇಮಗಳ ಚಿತ್ರಗಳೆಂದರೆ ಬಲು ಪ್ರೀತಿ

ತನ್ನ ಸುಂದರ ಪುಟ್ಟಮನೆಯಲ್ಲಿ ವಾಸಿಸುತ್ತಿದ್ದು ಹೂಗಿಡ ಬಳ್ಳಿಗಳ ನಡುವೆ ಅಲೆಯುತ್ತಾ ಸದಾ ಆನಂದದಿಂದಿರುವನು ಇತ್ತೀಚೆಗೆ ಹಾಡೋಟದ ಸೌಂದರ್ಯಕ್ಕಾಗಿ ಉತ್ತಮ ಪಾರಿತೋಷಕವನ್ನು ಪಡೆದಿದ್ದನು ಮೀನು ಹಿಡಿಯುವುದು ಅಲ್ಲದೆ ಈಜಾಡುವುದೇ ಆತನ ಇಚ್ಛಿತ ಆಟಗಳು ಲಾರೆಲ್‌ನಿಗೆ ವಿವಾಹವಾಗಿ ಇದೀಗ ಚಿಕ್ಕ ಮಗಳೊಬ್ಬಳಿರುವಳು ಆವಳೆಂದರೆ ಲಾರೆಲ್‌ನಿಗೆ ಬಹಳ ಆದರ ಮತ್ತು ಹೆಮ್ಮೆ!

ತನ್ನ ಚಿತ್ರಗಳಲ್ಲೆಲ್ಲಾ ಆತನು ನಿರ್ದೇಶಕರಿಗೆ ಅನೇಕ ರೀತಿಯ ಸಲಹೆಗಳನ್ನು ಈಯುವುದಲ್ಲದೆ ನಿರ್ದೇಶಿಸಲು ಸಹಕಾರಿಯೂ ಆಗುವನು ಚಲನ ಚಿತ್ರ ಅಭಿನಯದ ಜೊತೆಗೆ ಈತನು ಬಹಳೇ ಮೇಧಾವಿಯಾಗಿದ್ದು ಚಲನ ಚಿತ್ರ ನಟರಲ್ಲೆಲ್ಲಾ ಅದೇ ಹೆಚ್ಚಿನ ವಿದ್ಯಾವಂತನೂ ಜ್ಞಾನಿಯೂ ಆಗಿರುತ್ತಾನೆ

ಇವನು ಹಾರ್ಡಿಯೊಡನೆ ಅಭಿನಯಿಸಿದ ಚಿತ್ರಗಳು, ಹಲವು ಇವುಗಳಲ್ಲಿ ಹಾಸ್ಯ ಕುಣುಕುಗಳೇ ಬಹಳ ಚಿಕ್ಕ ಚಿಕ್ಕ ಕಾಲು ತಾಸುಗಳ ಚಿತ್ರಗಳ ಜೊತೆಗೆ ಹಲಕೆಲವು ಒಂದೊಂದು ತಾಸುಗಳ ಚಿತ್ರಗಳಲ್ಲೂ ಇವನು ಅಭಿನಯಿಸಿ ಪ್ರಖ್ಯಾತನಾಗಿರುವನು ಜಗತ್ಪ್ರಖ್ಯಾತ ಹಾಸ್ಯಗಾರ ಚಾರ್ಲಿ ಚಾಪ್ಲಿನನಂತೆಯೇ ಈತನೂ ತನ್ನ ಜೊತೆಗಾರನಾದ ಹಾರ್ಡಿಯೊಂದಿಗೆ ಎಲ್ಲರ ಮೆಚ್ಚುಗೆಯುವನಾಗಿರುವನು ಹಾಸ್ಯ ಪ್ರಪಂಚದಲ್ಲಿ ಇವನ ಸಾಹಸದ ಪರಿಣಾಮವಾಗಿ ಎಲ್ಲರ ಮೆಚ್ಚಿಕೆಯನ್ನು ಗಳಿಸಿರುವನು

ಓಲಿವರ್ ಹಾರ್ಡಿ

ಜಗತ್ತಿನ ಪ್ರಖ್ಯಾತ ಹಾಸ್ಯಗಾರರಲ್ಲೊಬ್ಬನಾದ ಈತನ ವಕೀಲಿ ವಾಸ ಮಾಡಿ ಇದೀಗ ಹಾಸ್ಯನ್ಯಾಯದಿಂದ ಜನವ ನವನ್ನು ಗೆಲ್ಲಲೆಂದು ನಿಂತಿರುವನು ವಕೀಲು ವೃತ್ತಿಯಿಂದ ತನ್ನ ತಂದೆತಾಯಿಯರನ್ನು ತನ್ನ ಇಷ್ಟಮಿತ್ರರನ್ನೂ ಆನಂದೋತ್ಸಾಹಗಳಿಂದ ಹುರುಪುಗೊಳಿಸಿದ ಓಲಿವರ್ ಹಾರ್ಡಿಯು (Oliver Hardy)ರಲ್ಲಿ ಜೋರ್ಜಿಯಾ ಪ್ರದೇಶದ ಅಟ್ಲಾಂಟದಲ್ಲಿ ಜನಿಸಿ ವಕೀಲಿ ವೃತ್ತಿಯಲ್ಲಿ ಪ್ರಖ್ಯಾತನಾದನು ಜೋರ್ಜಿಯಾ ವಿಶ್ವವಿದ್ಯಾಲಯದಲ್ಲಿ ಅವನ ವಿದ್ಯಾಭ್ಯಾಸವಾಯಿತು ಶಾಲೆ ಕಲಿಯುತ್ತಿದ್ದಾಗ ರಜೆ ಇದ್ದಾಗಲೆಲ್ಲಾ ರಂಗಭೂಮಿಯಲ್ಲಿ ಅಭಿನಯಿಸಿ ಜನಮನರಂಜನೆ ಮಾಡುತ್ತಿದ್ದನು.

ವಕೀಲಿ ಪರೀಕ್ಷೆಯನ್ನು ಮುಗಿಸುವ ಹೊತ್ತಿಗೆ ಅವನ ಧ್ಯೇಯದ ವ್ಯತ್ಯಾಸವಾಯಿತ ವಕೀಲಿ ವೃತ್ತಿಯನ್ನು ಬಿಟ್ಟು ತಂದೆತಾಯಿಂದಿರ ಇಚ್ಛೆಗೆ ವಿರೋಧವಾಗಿ ರಂಗಭೂಮಿಯ ಪ್ರವೇಶವನ್ನು ಕೈಗೊಂಡನು ಮೊದಲನೆಯದಾಗಿ ಹಳ್ಳಿಯೊಂದರ ರಂಗಭೂಮಿಯ ಉಪವ್ಯವಸ್ಥಾಪಕನಾದನು ಅಲ್ಲಿ ಕೈತುಂಬ ಹಣದೊರೆಯುತ್ತಿದ್ದಿಲ್ಲವಾದರೂ ಮೈತುಂಬ ಕೆಲಸವೇನೋ ಇದ್ದೇ ಇದ್ದಿತು ಹಾರ್ಡಿಯು ಹಾಗೆಯೆ " ಸಂಗೀತಮಯ—ಹಾಸ್ಯಮಯ—ನರ್ತನಮಯ ನಾಟಕಗಳಲ್ಲಿ— ಅಭಿನಯಿಸಿ ಮುಂದೊತ್ತಿ ಹೆಸರನ್ನು ಗಳಿಸಿದನು

1918ರಲ್ಲಿ ಚಲನ ಚಿತ್ರದಲ್ಲಿ ಅಭಿನಯಿಸುವ ಮಹತ್ವಕ್ಕೆ ಇಚ್ಛಿಸಿ ರಂಗಭೂಮಿಯಿಂದ ಚಲನಚಿತ್ರ ಪ್ರಪಂಚಕ್ಕೆ ತೆರಳಿದನು ಈ ರೀತಿ ಹಾಸ್ಯ ಚಿತ್ರಗಳಲ್ಲಿ ಅಲ್ಪ ಪಾತ್ರಗಳನ್ನು ಅಭಿನಯಿಸುತ್ತಾ ಮುಂದೆ ಮುಖ್ಯ ಪಾತ್ರವನ್ನೇ ಅಭಿನಯಿಸುವ ಹಾಸ್ಯದ ಮುದ್ದೆಯಾದನು 1926ರಲ್ಲಿ 'ಹಾಲ್ ರೋಚ್' ಸಂಸ್ಥೆಯಲ್ಲಿ ಇವನಿಗೆ ಸ್ಟ್ಯಾನ್ ಲೊರೆಲ್‌ನ ಭೇಟಿಯಾಯಿತು ಇಬ್ಬರೂ ಒಂದಾದ ಒಂದು ವರುಷದೊಳಗೆ ಚಲನ ಚಿತ್ರ ಪ್ರಪಂಚವನ್ನೆ ಅಡಿಮೇಲಾಗಿರಿಸಲು ಯತ್ನಿಸಿದರು ಪ್ರತಿಯೊಂದೆಡೆಯಲ್ಲೂ ಇವರ ಹಾಸ್ಯಚಿತ್ರಗಳೆಂದರೆ ತಂಡತಂಡವಾಗಿ ಜನರು ಪ್ರದರ್ಶನ ಮಂದಿರಗಳೆಡೆ ನುಗ್ಗತೊಡಗಿದರು

ಇವರಿಬ್ಬರೂ ಒಟ್ಟಾಗಿ ಸುಮಾರು 70ಕ್ಕ ಮಿಕ್ಕ ಸಣ್ಣ ಸಣ್ಣ ಹಾಸ್ಯ ಚಿತ್ರಗಳಲ್ಲೂ ಹಲವು ದೊಡ್ಡ ಚಿತ್ರಗಳಲ್ಲೂ ಅಭಿನಯಿಸಿರುವರು ಇವರ ದೊಡ್ಡದಾದ ಒಂದೊಂದು ತಾಸಿನ ಚಿತ್ರಗಳಲ್ಲೆಲ್ಲಾ ಬೋನಿ ಸ್ಕೋಟ್‌ಲೇಂಡ್, ಸನ್ಸ್ ಒಫ್ ದಿ ಡಸರ್ಟ್ ಮುಂತಾದುವು ಅತೀ ಉತ್ತಮವಾದುವುಗಳು.

ಚಲನಚಿತ್ರದಲ್ಲಿ ಆನಂದಗೊಂಡವನೂ, ಉತ್ಸಾಹಿಯೂ, ಸ್ವಾರ್ಥಪರನೂ, ಹೆದ್ದನಂತೆಯೂ ಕಂಡರೂ ಕೂಡಾ ನಿಜವಾಗಿಯೂ ಆತನು ಬುದ್ಧಿವಂತನೂ ಎಲ್ಲರೊಡನೆ ಬೆರೆತುಕೊಳ್ಳತಕ್ಕವನೂ, ಮೇಧಾವಿಯೂ ಆಗಿರುವನು 'ಗೋಲ್ಫ್' ಆಟದ 'ಕ್ಲಬ್' ಒಂದನ್ನು ಸ್ಥಾಪಿಸಿ ಈತನೇ ಪ್ರಖ್ಯಾತ ಆಟಗಾರನಾದುದರಿಂದ ಆಟದಲ್ಲಿ ಭಾಗಿಗಳಾಗುವ ಎಲ್ಲಾ ನಟನಟಿಯರನ್ನು ಸೋಲಿಸಿ ತಾನೇ ಬಹುಮಾನ ಪಡೆಯುವ ಸಾಹಸಿ ಇವನು ಈತನ ಜಾಣ್ಮೆಯ ಉದಾಹರಣೆಗೆ ಆತನಿಗೆ ದೊರೆತ ಸುಮಾರು 40ಕ್ಕಿಂತ ಮಿಗಿಲಾದ ಬಹುಮಾನ ಕಪ್ಪಗಳೇ (cups) ಸಾಕ್ಷಿಯಾಗಿವೆ

ಹೆಚ್ಚಿನ ವಿಶ್ರಾಂತಿಯನ್ನು ಆತನು ತನ್ನ ಮನೆಯ ಕೋಣೆಯಲ್ಲೇ ಬೆಂಕಿ ಎದುರು ಕುಳಿತು ಹೊಗೆ ಓಟೆ (Pipe)ಯನ್ನು ಸೇದುತ್ತಾ ಪುಸ್ತಕಗಳನ್ನು ಓದುತ್ತಾ ಕಳೆಯುವನು ಕಾದಂಬರಿಗಳಾಗಲೀ ದೊಡ್ಡ ದೊಡ್ಡ ಯಾವದೇ ಗ್ರಂಥವಾಗಲೀ ಆ ತುಂಬಿದ ದೇಹದ ತುಂಬಿದ ಉತ್ಸಾಹವನ್ನು ಕುಂದಿಸುವುದಿಲ್ಲ ಆದರೆ ಚಿಕ್ಕ ಚಿಕ್ಕ ಜೀವನ ಚರಿತ್ರೆಗಳು ಅಥವಾ ಓಹೆಸ್ರಿಯ ಗ್ರಂಥಗಳೆಂದರೆ ಅವನಿಗೆ ತುಂಬಾ ಪ್ರೀತಿ

ಈತನು ಆರು ಅಡಿಗಳಷ್ಟೇ ಎತ್ತರವಾದರೂ ಸುಮಾರು ಇನ್ನೂರಐವತ್ತು ರಾತ್ತಲುಗಳ ಭಾರವುಳ್ಳ ಸಣ್ಣ ಪರ್ವತಿಯನಗಿರುವ ಆದರೂ ನಡಿಗೆಯನ್ನು ಬಹಳ ಜೋರಾಗಿ ನಡೆಯುವನು ಗಾಯನವೆಂದರೆ ಹಾರ್ಡಿಗೆ ಅತಿ ಪ್ರಿಯವಾದುದು ಮೊದಮೊದಲು ತುಂಬಾ ಹಾಡುತ್ತಾ ಆನಂದದಿ ದಿದ್ದವನೇ ವಕೀಲಿಯಾದುದರಿಂದ ಅದನ್ನೆಲ್ಲಾ ಬಿಡಬೇಕಾಗಿ ಬಂತು ಆದರೂ ಆತನ ರಂಗಭೂಮಿಯ ಮೇಲಿನ ಮಮತೆ ಅಧಿಕತರವಾದಂತೆ ಆತನನ್ನು ರಂಗಭೂಮಿಗೇನೇ ಮರಳಿ ಸೆಳೆಯಿತು.

ಅದರಿಂದಲೇ ಇಂದು ಹಾರ್ಡಿಯು ಜೂರಿಯವರನ್ನು ಕಣ್ಣೀರ ಸುರಿಸ ವಂತೆ ಮಾಡುವ ಬದಲು ಜಗತ್ತನ್ನೇ ಆನಂದ ಬಾಷ್ಪಗಳನ್ನು ಸುರಿಸುವಂತೆ ಮಾಡುತ್ತಿರುವನು

ನೋಟೀಸು

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಕೋರ್ಟಿನಲ್ಲಿ

S C No 35/34

S E P No 23/1937

ಯಂ ಕೇಶವ ಪ್ರಭು—ವಾದಿ—ಅಪೀಲ್

ಜನ್ಮ ಅರ್ಜಿದಾರ

ಮತ್ತು

1 ಪರಮೇಶ್ವರ ಹೊಳ್ಳ—ಸುಬ್ರಾಯ ಹೊಳ್ಳರ ಮಗ ಅಮಟಾಡಿ ಗ್ರಾಮದಲ್ಲಿ ಇರುವವನು ಹಾಲಿ ಮಂಗಳೂರು ತಾಲೂಕು ನರಿಕೊಂಬು ಗ್ರಾಮದಲ್ಲಿರುವ ನರಿಕೊಂಬು ರಾಮರಾಯರ ಮನೆಯಲ್ಲಿಯವ—2 ವಾಸುದೇವ ಹೊಳ್ಳ ಪ್ರತಿವಾದಿರು ರಸ್ಪೊಂಡೆಂಟರು.

ಸದ್ರಿ 1ನೇ ರಸ್ಪೊಂಡೆಂಟ ಪರಮೇಶ್ವರ ಹೊಳ್ಳಂಗೆ—

ಮೇಲ್ಕಂಡ ಅರ್ಜಿದಾರರು ಸದ್ರಿ ರಸ್ಪೊಂಡೆಂಟರ ಮೇಲೆ ಮೇಲ್ಕಂಡ ವ್ಯಾಜ್ಯದ ಡಿಕ್ರಿ ಮೇಲೆ Order 21 rules 22, 37 & 38 ನೇ ಪ್ರಕಾರ ಮೇಲ್ಕಂಡ ಅಮ್ಲಜ್ಯಾರಿ ದಾಖಲು ಮಾಡಿರುತ್ತಾರೆ ಮತ್ತು ಸದ್ರಿ ಅಮ್ಲಜ್ಯಾರಿಯು 1937ನೇ ಇಸವಿ ಮಾರ್ಚ ತಾರೀಕು 30ನೇ ಮಂಗಳವಾರ ಪೂರ್ವಾಹ್ನ ಗಂಟೆ 11 ಕ್ಕೆ ತನಿಖೆಗೆ ಇಟ್ಟಿದೆ ಮೇಲ್ಕಂಡ ತಾರೀಕಿನೊಳಗೆ ನಿಮ್ಮ ಆಕ್ಷೇಪಗಳು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡತಕ್ಕದ್ದು ತಪ್ಪಿದರೆ ನಿಮ್ಮನ್ನು ಶಿವಾಯ ಮಾಡಿ ಸದ್ರಿ ಅಮ್ಲಜ್ಯಾರಿ ಮುಂದರಿಸಲಾಗುವದು ತಿಳಿದಿರುವದು

ಮಂಗಳೂರು,
8—3—37

K P Gopalkrishna Rao,
Vakil for Petitioner.

ವಾರ್ಷಿಕ ಚಂದಾ: 2 ರೂಪಾಯಿ Regd. No. M. 8408 ಟಪ್ಪಾಲು ಹಾಸಲು ಸೇರಿ ರೂ 2-13-0.

ಸ್ವದೇಶಾಭಿಮಾನಿ

ಬಿಡಿ ಸಂಚಿಕೆಗೆ ಒಂದಾಣೆ ESTABLISHED 1906

SWADESHABHIMANI

ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.

ಪ್ರತಿ ಶುಕ್ರವಾರವು ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।೧।

ದೊರೆಯಲನುಪಮ ರತ್ನಗಳ್ ಸಾಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ ಘುಕ್ಕೆ ವಿಷವ ಸುಡುತ ಬರುತಿರುವ ॥

ನಿಲಲ್ಕೆ ವರಂಜಿದರೆ ಸುಧೆಯನು । ಪಡೆತು ಕ್ಷುದ್ರರ ತೆರದಿ ಭೀತರ್ ತೆರಳಬಲ್ಲರೆ ತೊರೆದು ಧೀರರ ನಿಶ್ಚಿತಾರ್ಥವನು ।೧॥

ಪುಸ್ತಕ ೩೧ ಮಂಗಳೂರು ತಾ ೧೯ನೇ ಮಾರ್ಚಿ ೧೯೩೭ (19-3-'37) ಸಂಚಿಕೆ ೧೧

Note ... ಟಿಪ್ಪಣಿ

ಸರಕಾರದ ನೋಕರರಲ್ಲಿ ಹೆಚ್ಚಿನವರು ಕೊಂಗ್ರೆಸಿನ ಉಮೇದುವಾರರಿಗೇ ವೋಟು ಕೊಟ್ಟರೆಂದು ವರದಿ ಬರುತ್ತಲೇ ಇದೆಯೆಂದು ಸರ್ ಹೆನ್ರಿ ಕ್ರೇಕರು ಎಸೆಂಬ್ಲಿಯಲ್ಲಿ ತಿಳಿಸಿದ್ದರು. ಇದೇಕೆಂದರೆ, ಸರಕಾರೀ ನೋಕರರು ಕೊಂಗ್ರೆಸಿಗೆ ವಿರುದ್ಧ ಕೆಲಸಮಾಡಿದ್ದ ಆರೋಪವನ್ನು ಅವರು ಚರ್ಚಿಸಬೇಕಾಗಿತ್ತು. ಅದಕ್ಕಾಗಿ ಸಮಾಧಾನ ಹೇಳಲಾಯಿತು ಈ ರೀತಿಯಲ್ಲಿ

೦ ೦ ೦

ಸರಕಾರದ ಉಪ್ಪನ್ನು ತಿಂದರೂ, ಈ ನೋಕರರಿಗೆ ಕೊಂಗ್ರೆಸ್ ಸರಕಾರವು ಉತ್ತಮವೆಂದು ತೋರುವಂತೆ, ಈಗ ನಡೆಯುವ ಸರಕಾರ ಕ್ರಮದಲ್ಲಿ ಏಕೆ ಅಸಮಾಧಾನವುಂಟಾಯಿತೆಂದು ಕ್ರೇಕರವರು ವಿಚಾರಿಸಬೇಡವೆ?

೦ ೦ ೦

ಹೀಗೆ ಸರಕಾರೀ ನೋಕರರು ಕೊಂಗ್ರೆಸಿಗೇ ಹೆಚ್ಚಾಗಿ ವೋಟುಕೊಟ್ಟವರಾದರೂ, ತಮಗೆ ವಿರುದ್ಧವಾಗಿ ನಾನಾ ಬಗೆಯಲ್ಲಿ ಆತಂಕಗಳನ್ನು ತಂದೊಡ್ಡಿದರೆಂದು ಕೊಂಗ್ರೆಸಿನವರೇಕೆ ದೂರು ನೀಡಿದರು? ಇದನ್ನೂ ವಿಚಾರಿಸಬೇಡವೆ?

೦ ೦ ೦ ೦

ಚುನಾವಣೆಯ ಕಾಲದಲ್ಲಿ ಯಾರಾದರೂ ನಿಮಗೆ ಹಾಗೆ ಹೀಗೆ ಮಾಡುತ್ತೇವೆಂದು ಬೆದರಿಸಿದ್ದರೂ, ಅದಕ್ಕೆಲ್ಲ ಬೆದರಬೇಕಾಗಿಲ್ಲ, ಸರಕಾರದ ಬೆಂಬಲ ನಿಮಗಿದೆ ಎಂದು ಸರಕಾರವು ಇವರೇ ನೋಕರರೆಲ್ಲರಿಗೆ ಅಭಯ ಹಸ್ತವನ್ನು ನೀಡಿರುವುದೇಕೆಂದು ಮದ್ರಾಸು ಮಧ್ಯಪ್ರಾಂತ್ಯಗಳ ಸರಕಾರವು ಇಸ್ತಿಹಾರು ಕೊಟ್ಟ ಪುರುಷಾರ್ಥವೇನೆಂದು ಕ್ರೇಕರು ವಿಚಾರಿಸಬೇಡವೆ?

೦ ೦ ೦ ೦

ರೆಡ್ಡಿ ಸಾಹೇಬರು ಕೊಂಗ್ರೆಸಿನ ಸದಸ್ಯತೆಯಿಂದ ಹೊರಬಿದ್ದರು ಇವರು ಆಗಾಗ ಅಲ್ಲಲ್ಲಿ ಸೇರುತ್ತಾ, ಆಗಾಗ ಹೊರಬೀಳುವ ಕ್ರಮವಿದ್ದೇ ಇದೆ ಅದು ಅವರ ಇಷ್ಟ ಆದರೆ ಯಾವಾಗಲೂ ಹೊರಬೀಳುವಾಗ ಒಂದೊಂದು ಕಾರಣ ಕೊಡುವ ಕ್ರಮವೂ ಇದೆ ಅದೂ ಅವರ ಇಷ್ಟ

೦ ೦ ೦

ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಕೊಂಗ್ರೆಸು ಸಾಧಿಸುವುದೆಂಬುದು ಅವರಿಗೆ ಈಗ ಸರಿಯಾಗಿಲ್ಲವೆಂದು ತೋರಿತು! ಕೊಂಗ್ರೆಸು ಆ ಧ್ಯೇಯವನ್ನು ಇಟ್ಟುಕೊಂಡುದು ಈ ವರ್ಷದಲ್ಲೇನೂ ಅಲ್ಲ ಇವರು ಸೇರುವಾಗಲೂ ಆ ಧ್ಯೇಯವೆತ್ತೆಂದೂ ಇವರಿಗೆ ಗೊತ್ತಿತ್ತು ಸುಮಾರು ಎರಡು ವರ್ಷಗಳಿಗೆ ಮಿಕ್ಕಿ ಆಲೋಚನೆ ಮಾಡುತ್ತಾ ಮಾಡುತ್ತಾ ಈಗ ತಾನೆ ಈ ತತ್ವವು ಮಹಾ ವಿವೇಕಿಗಳಾಗಿರುವ ರೆಡ್ಡಿಯವರಿಗೆ ಅದು ಹೇಗೋ ಮೂಡಿತು

೦ ೦ ೦

ಕೊಂಗ್ರೆಸಿಗೆ ಸೇರಿಯೇ ಮದ್ರಾಸು ಕೌನ್ಸಿಲಿಗೆ ಇವರು ಚುನಾವಣೆ ಹೊಂದಿದ್ದರು, ಜಿಲ್ಲಾ ಬೋರ್ಡು ಪ್ರೆಸಿಡೆಂಟರೂ ಆಗಿದ್ದರು ಇವೆರಡೂ ಹುದ್ದೆಗಳನ್ನು ಅವರು ತ್ಯಜಿಸಿ, ಆಂಧ್ರ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರರಾದರು.

೦ ೦ ೦

ಇವರ ವಿಚಾರವನ್ನು, ಮೊನ್ನೆ ಚುನಾವಣೆಗಳಾಗುವ ತನಕ, ಯಾವ ಮುಖಂಡರೂ ತೆಗೆದುಕೊಳ್ಳದೆ ಇದ್ದುದರಿಂದ, ಕೊಂಗ್ರೆಸಿನ ಧ್ಯೇಯದ ನೆನಪು ರೆಡ್ಡಿಯವರಿಗಾಯಿತು ಇವರ ವಿಚಾರ ತೆಗೆದುಕೊಂಡಿದ್ದಲ್ಲಿ ಇವರು ಚುನಾವಣೆ ಹೊಂದಿ, ಮುಂದೆ ತನ್ನನ್ನು ಮಂತ್ರಿಯಾಗಿ ಮಾಡಿಲ್ಲವೆಂದೂ ಇವರು ರಾಜೀನಾಮೆ ಕೊಡುತಿದ್ದರು. ಅದೀಗಲೇ ಹೊರಟಿತು

ದಮ್ಮಿನ ಪ್ರಕಾರ ಬಹಳ ಇವೆ.

ಆದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮನಾಗಿ ಗುಣಕಾರಿಯಾಗದು. ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ನೂರಾರು ದಮ್ಮಿನವರಿಗೆ ಪುರೋಹಿತ ಶ್ವಾಸಹಾರಿಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ತರದ್ದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢ ವಿಶ್ವಾಸವನ್ನು ವ್ಯಕ್ತಪಡಿಸುತ್ತಿರುವೆನು

ಎಫಿಡ್ರೀನಿನ ಗುಳಿಗೆ ಹೊಗೆಯ ಔಷಧ ಇಂಜಕ್ಷನ್‌ಗಳಂಥ ದಮ್ಮು ತಾತ್ಕಾಲಿಕ ನಿಲ್ಲಿಸುವ ಮುಷ್ಕಳ ಔಷಧಗಳ ನನಗೆ ಗೊತ್ತಿದ್ದು, ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸವಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ ಕಡೆಗೆ ಬರುವರು ಅವರೆಲ್ಲರಿಗೆ ದಮ್ಮನ್ನು ನಿಧಾನ ಆದರೂ ಪೂರ್ಣ ಗುಣಮಾಡುವಂಥ ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು ದಮ್ಮು, ಕಂಠದಾಹ ಮಾಡುವ ಹಳೇ ಕೆಮ್ಮು ಕೋಡಗಕೆಮ್ಮು ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ ಪುರೋಹಿತ ಶ್ವಾಸಹಾರಿ ಕ್ಲೀನ ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು ಅಲ್ಲದೆ ಆಮ್ಲ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಂಪೌಂಡ (ಕೆಂಪು ಪೇಕಿಂಗ್) ದ ಶಿಫಾರಸು ಮಾಡುವೆನು

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂಪಾಯಿ 2, ರೂ 3 8-0 ಮತ್ತು ರೂ 6 ಬೆಲೆಯ ಸಣ್ಣ, ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು

ಮುಂಬಯಿ ಏಜಂಟ್ಸ—

ಒರಿಯಂಟಲ್ ಮೆಡಿಕಲ್ ಸ್ಟೋರ್ಸ್,

ಪ್ರಿನ್ಸೆಸ್ ಸ್ಟ್ರೀಟ್ ಮುಂಬಯಿ 2

ಮಂಗಳೂರು ಏಜಂಟ್ಸ — ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

ಡಾ॥ ಪುರೋಹಿತ ಫಾರ್ಮಸಿ,

ಕೊಲ್ಹಾಪುರ

ಆದರೆ ಅವರು 'ಡಿ ಲಿಟ್' ಬಿರುದನ್ನು ಪಡೆದರು, ಬೊಬ್ಬಿಲಿಯ ರಾಜರೂ ಈ ಬಿರುದನ್ನು ಪಡೆದರು, ಕಳೆದ ವಾರ

೦ ೦ ೦

ಡಿ ಲಿಟ್ ಎಂದರೆ 'ಸಾಹಿತ್ಯಾಚಾರ್ಯ' ಎನ್ನಬಹುದು, ಡಿಲೀಟ್ ಎಂದರೆ ಅಳಿಸಿಬಿಡು, ಕೊಡೆದುಹಾಕು ಎಂದರ್ಥ ಒಂದರೊಡನೆ ಮತ್ತೊಂದನ್ನು ಗಲಿಬಿಲಿಯಿಂದಾಡಬಾರದು, ಜೋಕೆಯಿರಲಿ

೦ ೦ ೦

ಪ್ರಾಂತಿಕ ಗವರ್ನರರು ತಮಗಿರುವ ಅಧಿಕಾಧಿಕಾರಗಳನ್ನು ಉಪಯೋಗಿಸುವುದಕ್ಕೆ ಆಗುವಷ್ಟು ಹಿಂತೆಗೆವರೆಂದು ಎದಂತೆ ನಾವೇ ಹುಮತದಿಂದ ಆಳಿಕೊಳ್ಳಲು ಇಚ್ಛಿಸಿದರೆ, ಬ್ರಿಟಿಷರು ಯಾವಾಗಲೂ ಒಪ್ಪುವವರೇ ಸಂನಾವಾಗಿ ಅವರಿಗೆ ಕೆಲ ಅಧಿಕಾರಗಳನ್ನು ಬಳಸ ಹೇಳಿ, ನಮಗೆ ಬೇಕಾದಂತೆ ವರ್ತಿಸುವಾಗ ಅವರು ಸರಿಗೊಳಿಸಬಾರದೆಂದು ಹಿಂದೆ ಯಾರೂ ಹೇಳಿದ್ದರೇ?

೦ ೦ ೦ ೦

ಜಮೀನ್ದಾರರಿಗೆ ಹೊಸ ಶಾಸನಗಳ ಮೂಲಕ ಬುದ್ಧಿ ಕಲಿಸತೊಡಗಿದರೂ ಸರಕಾರವು ಮಾತೆತ್ತದು ಜಮೀನ್ದಾರರು ಸ್ವೇಚ್ಛಾ ಪ್ರವರ್ತನೆಯಿಂದ ಮಾಡಿರುವ ಕಂಟಕವನ್ನು ಕೊಂಗ್ರೆಸಿನವರು ತಿದ್ದತೊಡಗಿದಾಗ ಸರಕಾರವು ತಾನಾಗಿ ಏಕೆ ಹೆಸರು ಹಾಳುಮಾಡಿಕೊಂಡೀತು?

ಸುಖವಾದ ನಿದ್ರೆಯ ವಿಷಯವಾಗಿ ಖಾತ್ರಿಯಾಗಿರಿ.

ಸುಖವಾದ ಆರಾಮವುಳ್ಳ ನಿದೆಗೆ ಖಂತಿಯಾದ ದಾರಿ ಯೆಂದರೆ ಓವಲ್ಟಿನನ್ನು ... ಶಯನಸಮಯದಪಾನೀಯವನ್ನಾಗಿ ಉಪಯೋಗಿಸುವುದು ಅದು ನಿದ್ದೆಯ ವರಗಳಿಗೆ ಹೆಚ್ಚು ಪೌಷ್ಟಿಕ ಆಹಾರವನ್ನುಂಟುಮಾಡಿ ನಿಮಗೆ ಬೆಳಿಗ್ಗೆ ಏಳುವಾಗ ಚುರುಕಾಗಿ ಚೇತನವುಳ್ಳವರಾಗಿ ಮಾಡುವ ಆ ಗಾಢವಾದ ಶಾಂತ ನಿದ್ರೆಯನ್ನುಂಟುಮಾಡುತ್ತದೆ

ಓವಲ್ಟಿನನ್ನು ಪ್ರಕೃತಿಯಲ್ಲಿರುವ ಅಮೂಲ್ಯ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ, ದನದ ಹಾಲು ಕೆನೆಹಾಲಿನಿಂದಲೂ ಮಾಡಿದಾಗಿದ್ದು ಶ್ರೇಷ್ಠ ವಿಟಮಿನ್‌ಗಳಿಂದ ಕೂಡಿದ್ದಾಗಿರುತ್ತದೆ ಓವಲ್ಟಿನು ಪೌಷ್ಟಿಕಯುಕ್ತ ಸಂಪೂರ್ಣ ಗುಣದ ಆಹಾರವಾದ್ದರಿಂದ ನಿಮಗೆ ಅದು ಆರೋಗ್ಯ ಶಕ್ತಿ ಚೇತನ್ಯವನ್ನುಂಟು ಮಾಡಲಿಕ್ಕೆ ಬೇಕಾಗುವ ಎಲ್ಲಾ ಶಕ್ತಿವರ್ಧಕಗಳನ್ನು ಒದಗಿಸುತ್ತದೆ

ಅವಟ ಓವಲ್ಟಿನ್ ... ಗುಣದಲ್ಲಿ ... ಕ್ರಮದಲ್ಲಿಯೂ, ಇದರ ಸರಿಸಮಾನವಾದದ್ದು ಯಾವುದೂ ಇಲ್ಲ ಕೃತಕ ಬದಲಿಯಗಳನ್ನು ತ್ಯಜಿಸಿರಿ

ಓವಲ್ಟಿನ್ ಎಲ್ಲರ ವ್ಯಯಕ್ತಿಕ ರುಚಿಗೊಪ್ಪುವಂತಿರುತ್ತದ ಏಕೆ?

ಅನೇಕ ವರ್ಷಗಳ ವರೆಗೆ ಶಂಶೋಧನೆ ದಾದಾಗ ಓವಲ್ಟಿನ್ನಿನ ಸ್ವಾಭಾವಿಕ ರುಚಿಯು ಎಲ್ಲರ ಮನಸ್ಸಿಗೂ ಒಪ್ಪುವಂತಹುದಾಗಿದೆ ಎಂದು ತಿಳಿಯಲ್ಪಟ್ಟಿದೆ ಇತರ ಇಮಿಟೇಶನ್‌ಗಳಂತೆ ಓವಲ್ಟಿನ್‌ನಲ್ಲಿ ಅಳತೆಯನ್ನು ಹೆಚ್ಚಿಂದು ತೋರಿಸುವುದಕ್ಕಾಗಿ ಮತ್ತು ತಯಾರಿಕೆಯ ಖರ್ಚನ್ನು ಕಡಿಮೆಮಾಡುವುದಕ್ಕಾಗಿಯೂ ಸಕ್ಕರೆಯಂಥಾ ಅಗ್ಗ ಪದಾರ್ಥಗಳಲ್ಲಿ ... ರುಚಿಗೆ ಸಂಬಂಧಪಟ್ಟದ್ದು ಆದುದರಿಂದ ಓವಲ್ಟಿನ್ನಿಗೆ ಸಕ್ಕರೆಯನ್ನು ಬೇಕಾದರೆ ಮನೆಯಲ್ಲಿ ಉಪಯೋಗಿಸಬಹುದು ಸಕ್ಕರೆಗೆ ಆಹಾರ ಪಾನೀಯದ ಒಂದು ವಸ್ತುವೆಂದು ಯಾರೂ ಅದಕ್ಕೆ ಹೆಚ್ಚು ಬೆಲೆಯನ್ನು ಕೊಡಲೊಪ್ಪುವುದಿಲ್ಲ

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ಇದು ತಯಾರಿಕೆಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ

ಏಜಂಟರು — ಜೇಮ್ಸ್ ರೈಟ್ 85 ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತಾ.

ಬೊಂಬಾಯಿ ಮತ್ತು ಮದ್ರಾಸುಗಳಲ್ಲೂ ಸಿಗುತ್ತದೆ

ವಿಶೇಷ ವಾರ್ತೆಗಳು

ಹಿಂದೂ ದೇಶ

ಕಲ್ಕತ್ತದ ಗಿರಣಿಗಳಲ್ಲಿ ಮುಷ್ಕರ ಹೂಡಿಯುವ ಕೂಲಿಗಾರರ ಸಂಖ್ಯೆಯು ದಿನೇ ದಿನೇ ಏರುತ್ತಲಿದೆ.

ಕಳೆದ ೫ ವಾರಗಳಿಂದ ಮದರಾಸಿನಲ್ಲಿದ್ದ ತ್ರಿವಾಂಕೂರಿನ ಮಹಾರಾಜರೂ, ಮಹಾರಾಣಿ ಸೇತುಪಾರ್ವತಿಬಾಯಿಯವರೂ ಹಿಂತಿರುಗಿ ತಿರುವಾಂಕೂರಿಗೆ ದಯಮಾಡಿಸಿದರು

ಅಪ್ಪರ್ ಬರ್ಮಾದಲ್ಲಿ ಎರಡು ಕಡೆಗಳಲ್ಲಿ ಬೆಂಕಿಯು ಅನಾಹುತವಾಗಿ ತುಂಬಾ ನಷ್ಟವುಂಟಾಗಿದೆ ಒಂದು ಕಡೆ ೩೫೦ ಮನೆಗಳು ನಾಶವಾಗಿವೆ ಇನ್ನೊಂದು ಕಡೆ ೫೦೦ ಮನೆಗಳು ಭಸ್ಮವಾಗಿವೆ

ಮಧುರಾ ಜಿಲ್ಲಾ ಬೋರ್ಡನ್ನು ಇಬ್ಭಾಗ ಮಾಡುವುದಿಲ್ಲವೆಂದು ಮದ್ರಾಸು ಸರಕಾರವು ಕಡೇ ಸಲಕ್ಕೆ ನಿರ್ಧರಿಸಿದೆ

ಗಡಿನಾಡು ಪ್ರಾಂತ್ಯದಲ್ಲಿ ಡಾ। ಖಾನ್ ಸಾಹೇಬರು (ಅಬ್ದುಲ್ ಘಫರ್ ಖಾನರ ತಮ್ಮಂದಿರು) ಮಂತ್ರಿಮಂಡಲವನ್ನು ರಚಿಸುವ ಸಂಭವವಿದೆ

ಬಂಗಾಳ ಸರಕಾರವು ವಯಸ್ಕರ ವಿದ್ಯಾಭ್ಯಾಸದ ಬಗ್ಗೆ ಒಂದು ವ್ಯವಸ್ಥೆಯನ್ನು ಕೈಕೊಳ್ಳಲು ನಿಶ್ಚಯಿಸಿರುತ್ತದೆ ಗ್ರಾಮ ಪುನರುದ್ಧಾರ ಕಾರ್ಯಕ್ರಮಗಳಲ್ಲಿ ಇದೂ ಒಂದು ಅಂಗವಂತೆ

ಬರ್ಮಾ ಸೆಂಪೆಟ್‌ನಲ್ಲಿ ಒಬ್ಬಳೆ ಒಬ್ಬಳಾದ ಮಹಿಳಾ ಸದಸ್ಯಳಿದ್ದಾಳೆ ಡಾ। ಡಾ ಎಂದು ಅವಳ ಹೆಸರು ಇವಳು ಸರಕಾರದಿಂದ ನೇಮಿಸಲ್ಪಟ್ಟವಳು

ದಕ್ಷಿಣಭಾರತೀಯರಿಗೆ ಹಿಂದೀಭಾಷೆಯ ರಾಷ್ಟ್ರೀಯ ಶ್ರೇಷ್ಠತೆ ಮತ್ತು ಪ್ರಾಮುಖ್ಯತೆಯನ್ನು ಮನದಟ್ಟಾಗುವಂತೆ ತಿಳಿಸುವರೆ ಅಖಿಳ ಭಾರತ ಹಿಂದೀಪ್ರಚಾರ ಸಭೆಯವರು (ವಾರ್ಧಾ) ಈ ತಿಂಗಳ ಮಧ್ಯಭಾಗದಲ್ಲಿ ದಕ್ಷಿಣ ಭಾರತಕ್ಕೆ ಒಂದು ಡೆಲಿಗೇಶನ್ ಕಳಹಿಸುವರು

೧೯೩೬ನೇ ನವೆಂಬರ ೧೬ನೇ ತಾರೀಕಿನಿಂದ ೧೯೩೭ನೇ ಸಪ್ಟಂಬರ ೩೦ನೇ ತಾರೀಕಿನ ವರೇಗೆ ಕಾಂಗ್ರೆಸಿನ ಹಣಕಾಸಿನ ಆಯವ್ಯಯಗಳು ಈ ರೀತಿ ಇದೆ ಜನರಲ್ ಬಜೆಟ್ ವರಮಾನ ರೂ ೧೯೮೬೩ ಖರ್ಚು ರೂ ೨೨,೯೦೦, ವಿದೇಶಾದ ಇಲಾಖೆಯ ಬಗ್ಗೆ ಖರ್ಚು ೨೮೦೦, ದಿಲ್ಲಿಯಲ್ಲಿ ನಡೆಯುವ ನ್ಯಾಶನಲ್ ಕನ್ವೆನ್ಶನಿಗೆ ರೂ ೪೫೦, ಮಂಜೂರಾಗಿದೆ

ದಕ್ಷಿಣ ಹಿಂದೂಸ್ಥಾನಕ್ಕೆ ಬರಲಿರುವ ಹಿಂದೀ ಪ್ರಚಾರದ ಡಿಲಿಗೇಶನಿನ ಮುಂದಾಳತ್ವವನ್ನು ಆಚಾರ್ಯ ಕಾಕಾ ಕಾಲೇಳ್ಕರರವರು ವಹಿಸುವರು ಬಾಬು ಪುರುಷೋತ್ತಮದಾಸ್ ಟಾಂಡನ್, ಕಲ್ಕತ್ತದ ಪ್ರೊ। ರಾಮದಾಸ್ ಗೌರ್, ದೆಹಲಿಯ ಸೀತಾರಾಮ್‌ಜಿ ಸೆಕ್‌ಸೆರಿಯಾ, ಲಕ್ನೋದ ಪ್ರಕಸಲಾಲ್‌ಜಿ ವಿದ್ಯಾರ್ಥಿ ಮತ್ತು ವಾರ್ಧಾದ ಆಚಾರ್ಯ ದಾದಧರ್ಮಾಧಿಕಾರಿ ಇವರುಗಳೂ ಅದರಲ್ಲಿರುವರು

ಎಂ ಎನ್ ರಾಯ್‌ರವರು ತಮ್ಮ ಪತ್ನಿಯರಾದ ಮಿಸ್ ಎಲನ್ ಗೆಟ್‌ಚಾಕ್ ಇವರೊಂದಿಗೆ ದೆಹಲಿಗೆ ದಯಮಾಡಿಸಿರುವರು

ಲಕ್ನೋದ ಸಿವಿಲ್ ಲಿಬರ್ಟಿ ಯೂನಿಯನ್ನಿನ ಸ್ಥಾಪನೋತ್ಸವವು ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರುಗಳಿಂದ ಮಾಡಲ್ಪಟ್ಟಿತು

ಒಂದು ಪ್ರಾಂತ್ಯದಲ್ಲಿರುವ ಆರು ಜಿಲ್ಲೆಗಳ ಪೈಕಿ ಐದು ಜಿಲ್ಲೆಗಳು ಅಧಿಕಾರ ಸ್ವೀಕಾರಕ್ಕೆ ಬೆಂಬಲ ಕೊಟ್ಟಿರುತ್ತವೆ

ಸಂಯುಕ್ತ ಪ್ರಾಂತ್ಯಗಳ ಕಾಂಗ್ರೆಸ್ ಕಮಿಟಿಯು ಅಧಿಕಾರವನ್ನು ಧಿಕ್ಕರಿಸಬೇಕೆಂದು ನಿರ್ಣಯಿಸಿರುವುದು

ಕಳೆದ ಸ್ವಲ್ಪಸಮಯದಲ್ಲಿ ಪ್ರಾರಂಭವಾದ ಹೈದರಾಬಾದಿನ ಬಸ್, ಟೆಕ್ಸಿ ಕೆಲಸಗಾರರ ಮುಷ್ಕರವು ಇನ್ನೂ ಅಂತ್ಯವಾಗುವಂತೆ ತೋರುವುದಿಲ್ಲ.

ವಿದೇಶ.

ಇಂಗ್ಲೆಂಡಿನ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಒಂದು ಮಗುವಿಗೆ ವರ್ಷವೊಂದಕ್ಕೆ ಸುಮಾರು ೧೬ ಪೌಂಡುಗಳನ್ನು ಖರ್ಚುಮಾಡುತ್ತಿರುವರಂತೆ

ಇಂಗ್ಲೆಂಡಿನ ಪ್ರಖ್ಯಾತ ಬಟ್ಟೆ ತಯಾರಿಕೆ ಕೇಂದ್ರವಾದ ಲಂಕಶಯರಿನಲ್ಲಿ ಕಳೆದ ೧೯೩೫ ಆಗಸ್ಟ್ ತಿಂಗಳಿಂದ ೧೯೩೬ನೇ ಜುಲೈ ತಿಂಗಳಿನ ವರೆಗಿನ ಒಂದು ವರ್ಷದ ಭಾರತದ ೫೪೬,೦೦೦ ಚೀಲ ಹತ್ತಿಯು ಉಪಯೋಗಿಸಲ್ಪಟ್ಟಿದೆ

ಕಿರೀಟಧಾರಣ ಮಹೋತ್ಸವ ಸ್ಮಾರಕವಾಗಿ ಇಂಗ್ಲೆಂಡಿನಲ್ಲಿ ಹೊಸ ಸ್ಟಾಂಪುಗಳು ಸಿದ್ಧವಾಗುವುವು ಒಟ್ಟು ೨೫೦ ಮಿಲಿಯ ಸ್ಟಾಂಪುಗಳನ್ನು ಪ್ರಿಂಟ್ ಮಾಡಿದರಂತೆ

ಇಂಗ್ಲೆಂಡಿನ ಸುಪ್ರಸಿದ್ಧ ದಾನಶೂರರಾದ ಲಾರ್ಡ್ ನಫಿಲ್ಡ್‌ರವರು ಇದು ವರೆಗೂ ಮಾಡಿರುವ ದಾನವು ೭,೫೦೦,೦೦೦ ಪೌಂಡುಗಳಷ್ಟು ಆಗಿದೆ ಎಂದು ಲೆಕ್ಕ ಹಿಡಿದಿರುವರು ಇತ್ತೀಚೆಗೆ ಲಾರ್ಡ್ ನಫೀಲ್ಡ್‌ರು ಸೌತಾಲೀಗೆ ೩೦ ಸಾವಿರ ಪವನುಗಳನ್ನು ಕೊಟ್ಟರು

ಈಗ್ಗೆ ಎರಡು ಮೂರು ದಿನಗಳ ಕೆಳಗೆ ಅಮೇರಿಕದ ಕೆಲವು ಪಟ್ಟಣಗಳಲ್ಲಿ ಭೂಕಂಪದ ಘಾತಕವು ಟಾಗಿದೆಯಂತೆ

ಇಂಗ್ಲೆಂಡಿನ ಸುಪ್ರಸಿದ್ಧ ಕಲಾಕೋವಿದರೂ ಗ ಧರ್ಮಕರ್ತರ ... ಯಾಗ್ ಕೇಟನ್ ಕಾಲ್‌ತೇಟ್‌ರವರ ... ದರೆ

ಯಾವ ದೇಶದ ರಾಜರನ್ನಾಗಲೀ ಜನರನ್ನಾಗಲೀ ಮತ್ತವರ ಕ್ರಮ ಕಟ್ಟಳೆಗಳನ್ನಾಗಲೀ ಸಂಸ್ಥೆಗಳನ್ನಾಗಲೀ ಅವಹೇಳನ ಮಾಡುವ ಸಾಹಿತ್ಯವಾವುದನ್ನೂ ಪಬ್ಲಿಷ್ ಮಾಡಕೂಡದೆಂದು ಜರ್ಮನಿಯಲ್ಲಿ ರರಾವು ಪಾಸುಮಾಡಿರುತ್ತಾರೆ

ಅಟ್ಲಾಂಟಿಕ್ ಸಾಗರದ ಪ್ರಾಮುಖ್ಯ ಬಂದರುಗಳಲ್ಲಿ ಒಟ್ಟು ೧೫೦ ೦೦೦ ಟನ್ನುಗಳಷ್ಟು ಕಬ್ಬಿಣ ಚೂರುಗಳನ್ನು ಸೇರಿಸಿಟ್ಟಿರಲಾಗಿದೆ ಇವುಗಳಲ್ಲಿ ಅರ್ಧಭಾಗವು ಇಂಗ್ಲೆಂಡಿಗೂ, ಇನ್ನೊಂದರ್ಧ ಭಾಗವು ಜಪಾನಿಗೂ ಹೋಗುವುದು ರಾಷ್ಟ್ರಗಳ ಸಮರ ಸಿದ್ಧತೆಯು ಏರ್ಪಾಡಗಳಿಂದ ಬ್ರಿಟನ್ ಜಪಾನ್‌ಗಳಿಗೆ ದೊಡ್ಡ ದೊಡ್ಡ ಯುದ್ಧ ಸಾಮಾನುಗಳ ಆರ್ಡರು ಸಿಕ್ಕಿರುತ್ತದಂತೆ

ತಂಡೀಕು ೧೦ರಲ್ಲಿ ನಡೆದ ...ದನದಲ್ಲಿ ಸ್ಪೈನಿನ ದಂಗೆಗಾರರ ಕಡೆಯಲ್ಲಿ ೩೦೦೦ ಮಂದಿಗಳು ಹತರಾಗಿರುವರಂತೆ ಸ್ಪೈನಿನಲ್ಲಿ ಈಗ ...ಪರೀತ ಚಳಿಗಾಳಿಗಳಿಗೆ ಆರಂಭವಾಗಿದೆ

ನಾನ್ ಇಂಟರ್‌ವೆನ್ಶನ್ ಕಮಿಟಿಯು ಸ್ಪೈನಿನ ಕದನದಲ್ಲಿ ಯಾರೂ ಕೈಹಾಕಬಾರದೆಂದು ನಿರ್ಧರಿಸಿದ ಮೇಲೆ ಸ್ಪೈನ್ ಸರಕಾರ

ಹಳೆ ಕಬ್ಬಿಣ

ಜಪಾನು, ಬ್ರಿಟನು, ಇತ್ಯಾದಿ, ಇನ್ನೂ ಮುಂತಾದ ಯುದ್ಧಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿರುವ ಪ್ರಭುತ್ವದ ಜನಾಂಗಗಳು, ಜಗತ್ತಿನಲ್ಲಿರುವ ಹಳೆ-ಕಬ್ಬಿಣಕ್ಕಾಗಿ ಸಾಟಿ ಮಾಡುತ್ತಿದ್ದಾರೆ. ಹಳೆ ಕಬ್ಬಿಣದ ರಾಶಿಗಳೂ ಅಲ್ಲಲ್ಲಿನ ಬಂದರುಗಳಲ್ಲಿ ಜಪಾನಿಗೆ ಮತ್ತು ಬ್ರಿಟನಿಗೆ ಹೊರುವರೆ ಹಡಗುಗಳನ್ನು ಕಾಯುತ್ತಿದ್ದಾರಂತೆ

ಪ. ಜ ನೆಹರುಗಳು ಅಖಿಳ ಬರಿಸ್ತಾನ ವಿದ್ಯಾರ್ಥಿಗಳ ಸಮ್ಮೇಳನಕ್ಕೆ ಒಂದು ಸಂದೇಶವನ್ನು ಕಳುಹಿಸುತ್ತಾ, ವಿದ್ಯಾರ್ಥಿಗಳು ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳುವರೆ ವ್ಯವಸ್ಥೆಗಳನ್ನು ಏರ್ಪಡಿಸುವುದು ಅತ್ಯಾವಶ್ಯಕವೆಂದು ಸೂಚಿಸಿರುವರು

ಮೂರ್ಛೆಗೊಳಿಸುವ ಮರ

ಬಾಲ್ಯದಲ್ಲಿ ಕೇಳಿದ ಕಟ್ಟುಕಥೆಗಳು ನಮಗೆ ಆಶ್ಚರ್ಯವನ್ನುಂಟುಮಾಡುತ್ತಿದ್ದುವು ಅಂದ ಮೇಲೆ ನಿಜವಾದ ಸಂಗತಿಗಳನ್ನು ಕೇಳುವಾಗ ಎಷ್ಟರ ಮಟ್ಟಿಗೆ ಆಶ್ಚರ್ಯವಾಗಲಿಕ್ಕಿಲ್ಲ

ದಕ್ಷಿಣ ಅಮೇರಿಕದಲ್ಲಿ ಒಂದು ಜಾತಿಯ ಮರವಿರುವುದು. ಅದರಡಿಯಲ್ಲಿ ಯಾರಾದರೂ ಕುಳಿತರೆ ಕೂಡಲೇ ಮೂರ್ಛೆ ಹೋಗುವನಂತೆ ಕಾರಣ, ಆ ಮರದ ಹೂವುಗಳು ಒಂದು ತರದ ಸುವಾಸನೆಯುಕ್ತ ಗಾಳಿಯನ್ನು ಬಿಡುವುವಂತೆ ಈ ಮರದ ಮರ್ಮ ಅರಿಯಿಲ್ಲದವರು ಇದರ ಹೂವುಗಳು ಬಿಡುವ ಸುವಾಸನೆಗೆ ಆಕರ್ಷಿತರಾಗಿ ಅದರಡಿಯಲ್ಲಿ ಕೂಡುತ್ತಾರೆ ಆದರೆ ಕೆಲವೇ ಸಮಯದಲ್ಲಿ, ಕೂತವರು ಮೂರ್ಛೆಬೀಳುತ್ತಾರೆ ಯಾರಾದರೂ ಅವರ ಆರೈಕೆ ಮಾಡಿದಲ್ಲಿ ಅವರು ಮೃತಿ ಹೊಂದುವುದೇ ಸರಿ

ನೈಜಾಮರು ವಿಲಾಯತಿಗೆ

ಪ್ರಪಂಚದ ಅತೀ ಶ್ರೇಷ್ಠ ಶ್ರೀಮಂತರೆಂದ ಹೈದರಾಬಾದಿನ ನೈಜಾಮರು ಆಂಗ್ಲದೊರೆ ಆರನೇ ಜಾರ್ಜರ ಕಿರೀಟಧಾರಣೆ ಸಮಾರಂಭಕ್ಕೆ ಸಕುಟುಂಬ ಪರಿವಾರವಾಗಿ ಸದ್ಯದಲ್ಲಿ ಇಂಗ್ಲೆಂಡಿಗೆ ಪ್ರಯಣ ಬೆಳೆಸುವರು ಇದಕ್ಕಾಗಿ ಇವರು, ಒಂದು ದೊಡ್ಡ ಸ್ಟೀಮರಿನ 20 ದೊಡ್ಡ ಕೋಣೆಗಳನ್ನು ಗೊತ್ತುಮಾಡಿಕೊಂಡಿರುವರು ಎಪ್ರಿಲ್ ತಿಂಗಳ ಅಂತ್ಯಭಾಗಕ್ಕೆ ನೈಜಾಮರು ಇಂಗ್ಲೆಂಡನ್ನು ತಲುಪುವರು

ನೈಜಾಮರಿಗೆ ಈಗ ವಯಸ್ಸು ಐವತ್ತು ಆಗಿರುತ್ತದೆ ಇದು ಮೊದಲನೇ ಸರ್ತಿ ಇವರು ಇಂಗ್ಲೆಂಡಿಗೆ ಹೋಗುವುದರಿಂದ ತುಂಬಾ ಆದರ ಸತ್ಕಾರಗಳು ಇವರಿಗೆ ಸಲ್ಲುವುದಿವೆ ಜೊತೆಯಲ್ಲಿ ಇವರ ಈರ್ವ ಮಕ್ಕಳೂ ಅವರ ಪತ್ನಿಯರೂ ಮತ್ತು ಆಸ್ಥಾನದ ಅಧ್ಯರುಗಳು ಕೆಲವರೂ ಇರುವರು ಸುಮಾರು ೧ ಲಕ್ಷ ಪವನುಗಳ ಖರ್ಚು ತಗಲಬಹುದೆಂದು ಅಂದಾಜು ಹಿಡಿಯಲ್ಪಟ್ಟಿದೆ

ಸ್ಟೀಮರಿನ ಮೇಲೆ ವಿಶೇಷ ತರದ ಏರ್ಪಾಡುಗಳು ಮಾಡಲಾಗಿವೆ

ನೈಜಾಮರಿಗೆ ವ್ಯಾಯಾಮ ಮಾಡಲು ಪ್ರತ್ಯೇಕ ಸ್ಥಳವನ್ನು ಮೇಲಂತಸ್ತಿನಲ್ಲಿ ಏರ್ಪಡಿಸಿದೆ ಮಲಗುವ ಕೋಣೆಯ ಸುತ್ತಲೂ ಭದ್ರವಾದ ಕಾವಲು ಇದೆ ಅವರ ಪರಿವಾರದವರ ಉಪಯೋಗಿಸುವ ಉಪಹಾರದ ಪಾತ್ರೆಗಳು ಕುದಿಯುವ ನೀರಿನಲ್ಲೇ ತೊಳೆಯಲಾಗುವುವು

ನೈಜಾಮರು ಬಹಳ ಸರಳ ಮನೋಭಾವದವರಾಗಿದ್ದು ಆಡಂಬರಗಳಿಗೆ ಮನಸೋಲುವವರಲ್ಲವಾದರೂ ರಾಜರೀತಿಯನ್ನು ಎತ್ತಿ ಹಿಡಿಯುವುದಕ್ಕಾಗಿ ಅವರು ಕಿರೀಟಧಾರಣ ಉತ್ಸವ ಕಾಲದಲ್ಲಿ ತಮ್ಮ ಶ್ರೇಷ್ಠ ಆಭರಣ ಉಡುಪುಗಳನ್ನು ಧರಿಸಿಕೊಳ್ಳಲಿಕ್ಕಾಗಿ ಅವರು ತಮ್ಮ ವಜ್ರವೈಡೂರ್ಯಾದಿಗಳನ್ನು ಹತ್ತಿರ ಕೊಂಡುಹೋಗುವರು ನೈಜಾಮರಲ್ಲಿರುವ ಒಡವೆಗಳ ಬೆಲೆಯು ಸುಮಾರು ೫೦ ಮಿಲಿಯ ಪವನುಗಳಿರಬಹುದೆಂದು ಅಂದಾಜು ಮಾಡಿರುತ್ತಾರೆ

ಇಂಗ್ಲೆಂಡಿನಲ್ಲಿಳಿಯುತ್ತಲೇ ಅವರಿಗೆ ಸಕಲ ರಾಜಮರ್ಯಾದೆಗಳೂ ಸಲ್ಲಿಸಲಾಗುವುದೆಂದು ತಿಳಿಯಲಾಗಿದೆ.

ಇಂಗ್ಲೆಂಡಿನಲ್ಲಿ ಭದ್ರತೋಪಾಯ

ಬ್ರಿಟಿಷ್ ಸರಕಾರವು ಯುದ್ಧಕಾಲದ ಭದ್ರತೆಗಾಗಿ ೮ ಮಿಲಿಯ ಬಂದೂಕುಗಳ ತಯಾರಿಗೆ ಹುಕುಂ ಕೊಟ್ಟಿರುತ್ತದೆ ಈ ಬಂದುಕುಗಳಿಗೆ ವಿಶೇಷ ಏರ್ಪಾಡುಗಳಿದ್ದು, ಜೊತೆಗೆ ಬಹಳ ಅಂತರದಲ್ಲಿರುವ ಶತ್ರುಗಳನ್ನು ನೋಡಲನುಕೂಲವಾಗುವ ಹಾಗೆ ದುರ್ಬಿನಿನ ಏರ್ಪಾಡು ಕೂಡಾ ಇದೆ ಇಲಾಖೆಗಳ ಸೈನ್ಯಕ್ಕೆ ವಿಶೇಷ ತರದ ಮೆಶಿನ್‌ಗನ್ನುಗಳನ್ನೂ ಮತ್ತು ವಿಷಗಾಳಿ ಮುಖ ಮುಚ್ಚಳಗಳನ್ನೂ ತಯಾರಿಸಲಾಗುವುದು, ಖಜಾನೆ ಸಚಿವರು ಈ ನವೀನ ಯೋಜನೆಗಾಗಿ ೪೦೦ ಮಿಲಿಯ ಪವನುಗಳ ಸಾಲವನ್ನೆತ್ತುವರಂತೆ.

ಕೊಲೆಯ ದಾಖಲೆ

ಅಮೇರಿಕದ ಪ್ರಖ್ಯಾತ ಕಳ್ಳರು ಮಾಡುವ ಕೊಲೆಗಳ ವಿಚಾರವನ್ನು ಕೇಳುವಾಗ ನಮಗೆ ಭಯಾಶ್ಚರ್ಯಗಳುಂಟಾಗುತ್ತವೆ ಆದರೆ ನಮ್ಮ ದೇಶದವನೇ ಆದ ಹರನಾಲ್‌ಸಿಂಗ್ ಎಂಬ ತರುಣನೋರ್ವನು ಅವರನ್ನೆಲ್ಲಾ ಮಿಗಿಸುತ್ತಾನೆ ಮೊನ್ನೆ ಅವನಿಗೆ ಫಾಸಿ ಶಿಕ್ಷೆಯಾಯಿತು ಈತನು ೨೧ ಕೊಲೆಗಳನ್ನು ಮಾಡಿರುತ್ತಾನೆ ಇವನ ಪ್ರಾಯವು ಬರೇ ೨೮ ಮಾತ್ರ

ಮಳೆಯನ್ನುಂಟುಮಾಡಬಹುದು

ರಶ್ಯದ ವಿಜ್ಞಾನಿಗಳ ಕೂಟವೊಂದು ಕೃತಕ ಮಳೆಯನ್ನುಂಟುಮಾಡಬಹುದೆಂದು ಸಾರಿರುವರು ಅವರ ಸಂಶೋಧನೆಯು ಯಶಸ್ವಿಯಾಗಿರುತ್ತದೆ ಆಕಾಶವು ಸ್ವಚ್ಛವಾಗಿರುವಾಗ ಎತ್ತರ ಹಾರುವ ವಿಮಾನಗಳ ಸಹಾಯದಿಂದ ರಸಾಯನಿಕ ವಸ್ತುಗಳನ್ನು ಅಂತರಿಕ್ಷದಲ್ಲಿ ಚೆಲ್ಲುವರು ಆಗ ತನ್ನಷ್ಟಕ್ಕೆ ಮೋಡಗಳುಂಟಾಗುವುವು—ಸ್ವಲ್ಪ ಸಮಯದಲ್ಲೆ ಮಳೆಯುಂಟಾಗುವುದು

ಇದರ ಗುಟ್ಟನ್ನು ಪ್ರಪಂಚದ ಎಲ್ಲ ರಾಷ್ಟ್ರಗಳಿಗೆ ಕೊಟ್ಟರೆ ಜಗತ್ತಿನಲ್ಲಿರುವ ಎಲ್ಲಾ ಮರುಭೂಮಿಗಳು ಫಲವತ್ ಪ್ರದೇಶಗಳಾಗಿ ಕ್ಷಾಮ ಬಾಧೆಯ ಹೆದರಿಕೆ ಇಲ್ಲದಂತಾಗುತ್ತದೆ

ಕೆಂಪು ಮಳೆ

ನಾವು ಇಲ್ಲಿ ನೋಡುತ್ತಲಿರುವ ಸಾಧಾರಣದ ಮಳೆಯು ಕೆಲವು ಕಡೆಗಳಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಬೀಳುವುದು ಕಪ್ಪೆಗಳ, ಚಿಪ್ಪಿನ ಹುಳಗಳ ಮಳೆಯೊಂದಿಗೆ ಬೀಳುತ್ತವೆ ಕೆಲವು ಕಾಲ ಹಿಂದೆ ಗೋರಕ್‌ಪೂರಿನ ಹತ್ತಿರದ ಒಂದು ಹಳ್ಳಿ ಪ್ರದೇಶದಲ್ಲಿ ಬಿಡದೆ ಒಂದು ರಾತೆ ಕೆಂಪು ಮಳೆಯು ಬಿದ್ದಿರುತ್ತದೆ ಮರುದಿನ ಬೆಳಗ್ಗೆ ಅಲ್ಲಿನ ಕೆಲವು ಪ್ರದೇಶವು ರಕ್ತದಂತೆ ಕೆಂಪಾಗಿತ್ತು ಮಳೆಯಿಂದ ಒಂದು ತರದ ಕೆಂಪು ಮಣ್ಣು ಗಾಳಿಯಿಂದ ಅಂತರಿಕ್ಷಕ್ಕೆ ಒಯ್ಯಲ್ಪಟ್ಟು, ಮಳೆ ಬೀಳುವಾಗ ಈ ಮಣ್ಣು ನೀರಿನೊಂದಿಗೆ ಬೆರೆತು ಕೆಂಪಾಗಿ ಬೀಳುತ್ತದೆಂದು ವಿಜ್ಞಾನಿಗಳು ಊಹಿಸಿರುತ್ತಾರೆ

ಸರ್ಪ ಮುತ್ತಿಗೆ

ಆಸ್ಟ್ರೇಲಿಯದ ಕೀಮೂರ್ ಎಂಬ ಒಂದು ಸಣ್ಣ ಊರಿನ ನಿವಾಸಿಗರು ತಮ್ಮ ದಿನಗಳನ್ನು ನಿರತ ಭಯದಲ್ಲಿ ಕಳೆಯಬೇಕಾಗಿ ಬಂದಿದೆ- ಅಲ್ಲೆಲ್ಲಾ ಹಾವುಗಳು ತುಂಬಿಕೊಂಡಿರುತ್ತವೆ ರೈಲ್ವೆ ಸ್ಟೇಶನು, ಪೋಲಿಸ್ ಸ್ಟೇಶನು, ಅಂಚೆ ಆಫೀಸು ಇವುಗಳಲ್ಲೆಲ್ಲಾ ಹಾವುಗಳು ತುಂಬಿರುತ್ತವೆ ಒಂದೇ ದಿವಸದಲ್ಲಿ ೩೦೦ ಹಾವುಗಳು ಕೊಲ್ಲಲ್ಪಟ್ಟವೆಯಂತೆ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಅವು ಪಟ್ಟಣವನ್ನು ಮುತ್ತುತ್ತಿವೆಯಂತೆ. ಈ ಪಟ್ಟಣದಲ್ಲಿ ನೆರೆಯು ಬಂತು ಆ ಮೇಲೆ ಈಗ ವಿಪರೀತ ಬಿಸಿಲು ಕಾಯುವುದರಿಂದ ಈ ಹಾವುಗಳು ಹೀಗೆ ಹೊರಡಲು ಕಾರಣವಂತೆ



Distributors for South Kanara:—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲು	ಬೆಳಿಗ್ಗೆ 9-50	ಸಂಜೆ 4-20
ಎಕ್ಸ್‌ಪ್ರೆಸ್	„ 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಕಟಲ್	ಸಂಜೆ 5-25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 8.20	

ಬಹಳ ಕಡಿಮೆಯಾದ ಕ್ರಯ.

ಆಟೊಮೆಟಿಕ್ ಅಲಾರಂ ಪಿಸ್ತಲ್.



ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು. ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದು ನಮ್ಮಲ್ಲಿ ಇದ್ದರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದದರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೨ ಬೆಲ್ ಹಾಕಿದ ಸ್ಟಾರ್ಚ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತಲು ೧ಕ್ಕೆ ತೋಟೆಗಳ ಸಹಿತ ೭-೮-೦. ಟಪಾಲು ಖರ್ಚು ಪ್ರತ್ಯೇಕ.

ಸ್ವಾನ್ ಹೌಸ್,

ನಂ. ೪, ಇರುಳಪ್ಪನ ಬೀದಿ, ಮದ್ರಾಸು

ಸರಕಾರದಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಪ್ರಸಿದ್ಧವಾದ



ಸ್ಥಾಪನಾ 1909

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕ್‌ಶಫಾ ಅಥವಾ ಆರೋಗ್ಯಬಿಂದು.

ರೋಗದ ನಾಮಗಳು:—ಕ್ಷಯ ರೋಗ, ಬಾಣಂತಿರೋಗ, ಹಡೆದ ನಂಜು, ದಮ್ಮು, ಅಡಗ್ಗೆ ಕಾಲರಾ, (ಮಾರಿಕಾ,) ಪ್ಲೇಗು, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ, ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಕಿವಿಶೂಲೆ, ಮೂಗಿನೊಳಗಿನ ಪಿನಿಸಿ ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳು, ಆಮ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಕೋಣ ರೇವುಮ್ಮ ಹೊರಬೀಳೋಣ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವುದು. ಚೇಳು ಸರ್ಪ ಕಚ್ಚಿದ್ದಕ್ಕೆ ತತ್‌ಕ್ಷಣ ಗುಣಬರುವದು. ಅನೇಕ ರೋಗಗಳಿಗೆ ಒಂದೆ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು. ಅಂಥವರು ಒಂದು ಸಾರಿ ತಂದು ಮನಗಾಣಬೇಕು. ಸ್ಥಾಪನಾ ಆದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

೧೧ ತೊಲೆ ಬಾಟ್ಲಿ ಒಂದಕ್ಕೆ ರೂ. ೨. ನಮೂನೆ ಉದ್ದೇಶಿ ೩. ೮. ತೊಲೆಯ ಬಾಟ್ಲಿ ಒಂದಕ್ಕೆ ೮ ೮. ಚಿಕ್ಕ ಬಾಟ್ಲಿ ಒಂದೇ ಸಾರಿ ಒಂದು ಡಜನ್ ತರಿಸಿಕೊಳ್ಳುವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪಾಲು ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪ್ಪಾಲ ಖರ್ಚು ೧೧ ಆಣೆ. ೧೧ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು. ಟಪ್ಪಾಲ ಖರ್ಚು ೧೧ ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ ಕಳಿಸಲಾಗದು. ಟಪ್ಪಾಲ ಖರ್ಚು ೮ ಆಣೆ ಬರುವುದು. ಕನಿಷ್ಠ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ. ಟ. ಖರ್ಚು ೮ ಆಣೆ ಬೀಳುವುದು.

ತಕ್ಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು. ಬಾ. ಯ. ಕೂಡ ಕಳಿಸುವೆವು. ಔಷಧವು ಪೊಟ್ಟಾಗಿ ಹೋದರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು. ನಮ್ಮ ಅರ್ಕಶಫಾದಂತೆ ಬನಾವಟಿ ಮಾಲು ತಯಾರುಮಾಡುತ್ತಿದ್ದಾರೆ. ನಮ್ಮ ಫೋಟೋ ಮತ್ತು ಜಾಹಿರಾತ ನೋಡಿ ತಕ್ಕೊಳ್ಳಬೇಕು. ಏಜಂಟ ಮಸ್ತ್ರಿ ಯಾರೂ ಇಲ್ಲ. ಮಾಲು ಪರೀಕ್ಷೆ ಮಾಡಿ ತಕೊಳ್ಳಬೇಕು. ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲಿಷ ಇವುಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ, ಪೋಸ್ಟಾಫೀಸು, ತಾಲೂಕು, ಜಿಲ್ಲಾ, ಸ್ಟೇಟ ಎಲ್ಲ ಖುಲಾಸ ಬರೆಯಬೇಕು.

ನಮ್ಮ ವಿಳಾಸ:—ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೋ. ಶಹಾಪೂರ [ಬೆಳಗಾಂವಿ]

ಕಳೆದ 30 ವರ್ಷಗಳಿಂದಲೂ ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡುತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

'ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉದ್ಯಾವರ, ಕಟಪಾಡಿ ಮತ್ತು ಚಿಕ್ಕಮಗಳೂರು ಮುಖ್ಯವಾಗಿ ಇತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ 'ಬಿಡಿ ಸಂಚಿಕೆ'ಗಳನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಶರ್ತಗಳಿಗಾಗಿ ಬರೆಕೊಳ್ಳಿ.

ಸ್ವದೇಶಾಭಿಮಾನಿ ಕಾರ್ಯಾಲಯ,

ರಥಬೀದಿ, ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರದ ಚರ್ಮವ್ಯಾಧಿಗಳಿಗೆ.

ಮೃದ್ವೀಕಾಸವ—ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.

ಭುವನಾಂಜನ ಪೈನ್ ಬಾಮ್—ಶಾರೀರಿಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಶ್ರೀ ಸಾಧು ಟಿ. ಯಲ್. ವಾಸ್ವಾನಿಜಿಯುವರ ಭಾಷಣದ ಸಾರ

ಲೇಖಕ ವರ್ಧಮಾನ ಹೆಗ್ಡೆ ಹಿಂದೀ ಪ್ರಚಾರಕ ಪುತ್ತೂರು

ಜಗತ್ಪ್ರಸಿದ್ಧ ಉಪನ್ಯಾಸಕರಾದ ಆಚಾರ್ಯ ಶ್ರೀ ಸಾಧು ಟಿ. ಯಲ್. ವಾಸ್ವಾನಿಜಿಯುವರ ಪ್ರಭಾವಶಾಲಿ ಉಪನ್ಯಾಸ

ಇದನ್ನು ಕೇಳದವರೂ ಹಾಗೂ ಅವರ ಅಪೂರ್ವ ಗ್ರಂಥಗಳನ್ನು ಓದಿ ಹೆಚ್ಚಿನ ಆನಂದವನ್ನ ಪಡೆಯುವವರು ನಮ್ಮ ಹಿಂದೂಸ್ಥಾನದ ಶಿಕ್ಷಿತ ವರ್ಗದಲ್ಲಿ ಬಹಳ ಕಮ್ಮಿ ಕನ್ನಡಿಗರ ಹಿತಕ್ಕಾಗಿ ಅವರ ಅದರ ಭಾಷಣಗಳ ಸಾರಾಂಶವನ್ನು ಸ್ವಲ್ಪ ಮಾತಿನಲ್ಲಿ ಭಾಷಾಂತರಿಸಲ್ಪಟ್ಟಿದೆ ವಾಚಕರು ಅವರ ಪ್ರತಿ ಒಂದು ಮಹತ್ವಪೂರ್ಣ ವಾಕ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಚೆನ್ನಾಗಿ ವಿಚಾರಿಸಬೇಕಾಗಿ ಪ್ರಾರ್ಥನೆ ಈ ಕೆಳಗಿನ ಮಾತೇ ಅವರ ಮುಖದಿಂದ ಹೊರಟ ವಾಕ್ಯಗಳು —

“ಟಾಲ್ ಸ್ಟಾಯ್‌ಯವರ ಧ್ಯೇಯ ಅಂತಿಮ ಶಬ್ದವು—ತಪ್ಪಿಸಿಕೊಳ್ಳಿ! ತಪ್ಪಿಸಿಕೊಳ್ಳಿ, (Escape Escape) ಆಧುನಿಕದ ಆ ಕಾಂತಿಯಿಂದ ತಪ್ಪಿಸಿಕೊಳ್ಳಿಎಂದು. ಅಮೇರಿಕದ ದಾರ್ಶನಿಕ ಥಾರೋ ಇವರ ಅಭಿಪ್ರಾಯವು ಇದೇ ಆಗಿತ್ತು. ಈಗಿನ ಸಭ್ಯತೆಯು ಕೇವಲ (ಲಸ್ಟ್)ದುರಾಶೆಯ ಉಪಾಸಕವಾಗಿದೆ ಹಾಗೂ ಹಿಂಸಕ ಮತ್ತು ಕ್ರೂರ ಪರಿಣಾಮವನ್ನು ಹೆಚ್ಚಿಸುವುದಾಗಿದೆ. ಪಶ್ಚಿಮದ ಸಮಸ್ತ ರಾಷ್ಟ್ರಗಳು ಜಂಗಲಿ ಕ್ರಿಶ್ಚಿಯನ್ ಶುದ್ಧಿಕರಣ (Baptized Barbarism) ಸ್ವಭಾವದಿಂದ ತುಂಬಿವೆ ಕಳೆದ ಮಹಾಯುದ್ಧದಿಂದ ಈಗಿನ ಸಭ್ಯತೆಗೆ ಕ್ರೂರತೆಯ ಭಯಾನಕ ರೋಗವು ಪ್ರಾರಂಭವಾಗಿದೆ ಮಾತ್ರವಲ್ಲ ಅದು ದಿನೇ ದಿನೇ ಹೆಚ್ಚುತ್ತಾ ಹೋಗಿ ಅಸುರ ವಿಜ್ಞಾನ, ವಿಷಾಕ್ತ ಗೇಸ್‌ಗಳೂ, ಕುಟಿಲ ರಾಜನೀತಿ ಹೆಚ್ಚುತ್ತಾ ಸಭ್ಯ ಪುರುಷರಿಗೆ ನೀತಿ ಹೀನ ಸಾಹಿತ್ಯದಲ್ಲಿ ಪ್ರೇಮವನ್ನು ಹೆಚ್ಚಿಸುತ್ತಾ ಹೋಗುತ್ತಿದೆ ಪ್ರಾಚೀನ ಕಾಲದಲ್ಲಿಯೂ ಕೂಡಾ ಹಿಂಸೆಯಿತ್ತು. ಆದರೆ ಇಷ್ಟು ಸುವ್ಯವಸ್ಥಿತವಾಗಿದ್ದಿಲ್ಲ ಹಾಗೂ ಈಗಿನಂತೆ ವೈಜ್ಞಾನಿಕರು ರಾಜನೀತಿಜ್ಞರು ಅದರ ಸಂಚಾಲಕರಾಗುತ್ತಿರಲಿಲ್ಲ

ಈಗಿನ ವಿಜ್ಞಾನ ಧ್ಯೇಯವು ಸುಕೃತಿಯ ವಿಜಯ ಪ್ರಾಚೀನ ಋಷಿಗಳ ಧ್ಯೇಯವು ಪ್ರಕೃತಿಯೊಡನೆ ಸಹ ವಾಸವಾಗಿತ್ತು ಈಗಿನ ಸಭ್ಯತೆಯು ಮನುಷ್ಯನನ್ನು ಕೇವಲ ಒಂದು ಅಸಂಯಮಿ (Acquisitional) ಮನೋವಿಕಾರಿ, (Passional) ಮತ್ತು ಕೋಲಾಹಲ ಮಾಡುವ(Noisy) ಪ್ರಾಣಿಯನ್ನಾಗಿ ಮಾಡಿದೆ ಅಧಿಕ ಧನಸಂಚಯ ಮಾಡಿಕೊಂಡು ಮಹಾ ಸ್ವಾರ್ಥಿಯಾಗಿರುವುದು ಈ ಯುಗದ ಪ್ರವೃತ್ತಿಯಾಗಿದೆ ಶ್ರೀ। ಹರ್ಬರ್ಟ್ ಸ್ಪೆನ್ಸರ್ ಸಾಹೇಬರ ಹೇಳಿಕೆಯಂತೆ ಯುರೋಪ್ ತನ್ನ ಶಕ್ತಿಯ ದುರಾಶೆಯಿಂದ ಹಾಗೂ ಧನ ಲೋಲುಪ್ತಿಯಿಂದ ಪುನಃ ಜಂಗಲಿ ಸ್ವಭಾವ (Rebarbarised)ವನ್ನು ಧಾರಣ ಮಾಡುತ್ತಿದೆ

ಶ್ರೀ। ಸ್ಪೆಂಗ್ಲರ್ (Spengelor)ರವರು ತಮ್ಮ ಪ್ರಸಿದ್ಧ ಪುಸ್ತಕ “ಪಶ್ಚಿಮದ ನಾಶ” (Decay of the West) ಎಂಬ ಗ್ರಂಥದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆಂದರೆ ಪಶ್ಚಿಮದ ಸಭ್ಯತೆಯು ಮರಣೋನ್ಮುಖವಾಗಿ ಮುಂದರಿಯುತ್ತಿದೆ ಯಾವ ಸಭ್ಯತೆಗೆಯಾವದಾದರೊಂದು ಭವಿಷ್ಯದಲ್ಲಿ ಉತ್ತಮ ಸಿದ್ಧಿಯ ಧ್ಯೇಯವಿರುವುದಿಲ್ಲವೋ ಅಂತಹ ಸಭ್ಯತೆಯನ್ನು ಅನುಕರಣೆ ಮಾಡುವುದು ಬಹಳ ದೊಡ್ಡ ಮೂರ್ಖತೆಯಾಗಿದೆ.

ಯಧ್ಯಪಿ ಪಶ್ಚಿಮ ದೇಶಗಳು ರಸಾಯನ ಶಾಸ್ತ್ರದಲ್ಲಿಯೂ, ಭೌತಿಕ ವಿಜ್ಞಾನ, ಖಗೋಲ ವಿದ್ಯಾ, ಔಷಧಿ ಶಾಸ್ತ್ರ, ಸಮಾಜ ವಿಜ್ಞಾನ ಮತ್ತು ಸಾಹಿತ್ಯದಲ್ಲಿ ಬಹಳವಾಗಿ ಪಾರಂಗತವಾಗಿವೆ ಪರಂತು ಆತ್ಮ ವಿಜ್ಞಾನ, ಜೀವನ ವಿಜ್ಞಾನದ ವಿಷಯವಾಗಿ ಭಾರತದ ಮುಂದೆ ಅವು ಕೇವಲ ಅಬೋಧಶಿಶುಗಳಾಗಿವೆ ಸಫಲ ಜೀವನದ ಬೀಗದ ಕೈ ಇಷ್ಟರ ವರೆಗೆ ಅವರ ಕೈಗೆ ಸಿಕ್ಕಿಲ್ಲ “ಜೀವಿಸಿರು ಮತ್ತು ಇತರ ಪ್ರಾಣಿಗಳು ಜೀವಿಸಿರುವಂತೆ ಮಾಡು” ಎಂಬ ಸಿದ್ಧಾಂತ ಅವರಿಗೆ ಇನ್ನೂ ಕಲಿಯತಕ್ಕದ್ದಿದೆ ಇದರ ಹೊರತು ಅವರಿಗೆ ಎಂದೂ ಕಲ್ಯಾಣವಿಲ್ಲ ಹಾಗೂ ಮುಂದಿನ ಘೋರ ಪ್ರಳಯಂಕರ ವಿನಾಶದಿಂದ ತಪ್ಪಿಸುವ ದಾರಿ ಬೇರೆ ಇಲ್ಲ

ಒಂದು ದಿನ ಯಾಂತ್ರಿಕ ಮನುಷ್ಯನು ತನ್ನ ಕರ್ತಾ ನಿರ್ಮಾತನನ್ನೇ ತಿಂದುಹಾಕದಿರಲಾರನು. ಈ ಅಸುರಿ ಸಭ್ಯತೆಯು ತನ್ನ ಅಂತಿಮ ಹೊಂದವನ್ನು ತಾನೇ ಅಗಿಯುತ್ತಿದೆ.

ಆದಕಾರಣ ಭಾರತದ ನವಯುವಕರೇ ಸಂಯಮಶೀಲರಾಗಿರುವುದನ್ನು ಕಲಿಯಿ. ಬ್ರಹ್ಮಚರ್ಯ ವ್ರತ ಧರಿಸಿ ಇದರೊಡನೆ ಪದಾರ್ಥ (Matter)ಗಳ ಅವಹೇಲನೆ ಮಾಡಬೇಡಿ ಇದರೊಡನೆ ತಿರಸ್ಕಾರ ಭಾವನೆ ಇಟ್ಟ ಕಾರಣವೇ ಭಾರತವು ಅಧೋಗತಿಯನ್ನು ಪ್ರಾಪ್ತವಾದಬೇಕಾಯಿತು ಗೀತೆಯ ಮಧ್ಯವರ್ತಿ ಮಾರ್ಗವನ್ನು ಅನುಸರಿಸಿ ಮತ್ತು ಯಾವಾಗಲೂ ಆತ್ಮ ನಿರೀಕ್ಷಣೆ ಮಾಡುತ್ತಾ ತಾನು ಪರಮಾತ್ಮನ ಭಕ್ತಿಯಿಂದ ವಿಮುಖನಾಗದಂತೆ ಜಾಗ್ರತೆಯಲ್ಲಿರಿ ಈಗಿನ ಯುಗದಲ್ಲಿ ನಮಗೆ ಶಕ್ತಿ ಮತ್ತು ಭಕ್ತಿ ಎರಡೂ ವಸ್ತುಗಳ ಅತ್ಯಾವಶ್ಯಕವಿದೆ.

ತಾನು ಪರಮಾತ್ಮನ ಯಂತ್ರರೂಪವಾಗಿ ಆಗುವರೇ ಮನುಷ್ಯನಲ್ಲಿ ಆತ್ಮಶುದ್ಧಿ ನಿಸ್ವಾರ್ಥಪ್ರೇಮ ಮತ್ತು ಕರ್ಮಯಜ್ಞದ ಅತ್ಯಾವಶ್ಯಕವಿದೆ ಭಾರತೀಯ ನವಯುವಕರೇ! ನಮಗೆ ಪುನರ್ ನಿರ್ಮಾಣ ಮಾಡತಕ್ಕದ್ದಿದೆ, ಆದ್ದರಿಂದ ಈ ಧ್ಯೇಯದ ಪೂರ್ತಿಗಾಗಿ ಮೊದಲು ವಿಕಾಸವಾದ ತ್ರಿವಿಧ ಮಾರ್ಗಗಳ ಅನುಗಾಮಿಗಳಾಗಿರಿ

(೧) ಪಶುಗಳಾಗಿ ಸಶಕ್ತ ಉಪಯೋಗಿ ಪಶುಗಳಾಗಿ ಚೆನ್ನಾಗಿ ವ್ಯಾಯಾಮ ಮಾಡಿ ಶರೀರವನ್ನು ಸುದೃಢವಾಗಿ ಏವಂ ಸಹನಶೀಲವನ್ನಾಗಿ ಮಾಡಿ

(೨) ನಂತರ ಮನುಷ್ಯರಾಗಿ ಕ್ಷತ್ರಿಯರಾಗಿ—ಋಜುವಂತರಾಗ

(೩) ಕಡೆಗೆ ತನ್ನ ವ್ಯಕ್ತಿತ್ವವನ್ನು ಪರಮಾತ್ಮನಲ್ಲಿ ಲೀನವನ್ನಾಗಿ ಮಾಡಿ

ನಾನು ಈ ಹೊತ್ತು ಭಾರತದಲ್ಲಿ ನಿಜವಾದ ಧಾರ್ಮಿಕತ್ವವನ್ನು ನೋಡುವುದಿಲ್ಲ ನಮ್ಮಲ್ಲಿ ಶಕ್ತಿಯಿಲ್ಲ ಸ್ಫೂರ್ತಿ ಇಲ್ಲ ಜೀವನವಿಲ್ಲ ಯಥಾರ್ಥದ ಧರ್ಮವೇ ಜೀವನವು ಪ್ರಸಿದ್ಧ ಜರ್ಮನ್ ತತ್ವ ವೇತ್ತಾ ಮಾಸ್ಟರ್ ಎಕರೇ (Acre)ಯು ಒಂದಾವರ್ತಿ ತಾನು ಪಾತ್ರಗಳಿಗೆ ಪಾಲಿಷ್ ಮಾಡುತ್ತಾ ತನ್ನ ಪರಮಾತ್ಮನನ್ನು ಪಡೆಯುತ್ತೇನೆಂದು ಹೇಳಿದ್ದನು ಒಬ್ಬ ಕೃಷಕನು ಪರಮಾತ್ಮನನ್ನು ಹೊಲದಲ್ಲಿ ಕಾಣುತ್ತಾನೆ ಸಿಪಾಯಿಯು ಯುದ್ಧಕ್ಷೇತ್ರದಲ್ಲಿ ಕಾಣುತ್ತಾನೆ.

ಆತ್ಮ ಸಂಯಮ ಮತ್ತು ನೈತಿಕ ಬಲದ ಪ್ರಧಾನತೆಯಿಂದಲೇ ರಾಷ್ಟ್ರದ ಗೌರವವು ಹೆಚ್ಚುವುದು ನಾನು ಯುವಕರೊಡನೆ ಹೇಳುತ್ತೇನೆ ವಿಲಾಸ ಪ್ರಿಯತೆಯನ್ನು ದೂರಮಾಡಿ ಯೋಗಿಗಳಾಗಿ. ವಿಲಾಸಪ್ರಿಯರಾಗಿ ಸಮಯ ಕಳೆಯುವುದು ಮಾತೃದ್ರೋಹವಾಗಿದೆ ಭಾರತಮಾತೆಗೆ ಬಲವಂತ ಪುತ್ರರ ಆವಶ್ಯಕವಿದೆ. ಸರಳತೆಯೇ ನಿಜವಾದ ಸಭ್ಯತೆಯು ಆದ್ದರಿಂದ ಸರಳರಾಗಿ ಮನುಷ್ಯತ್ವವು ಇಂದ್ರಿಯ ತೃಪ್ತಿಯಲ್ಲಿ ಅಲ್ಲ. ಪರಂತು ಆತ್ಮ ಸಂಯಮದಿಂದೆ ಪ್ರಾಪ್ತವಾಗುವುದು. ಹಿಂದೂ ಧರ್ಮ ಗ್ರಂಥಗಳಲ್ಲಿ ತಪವೇ ಸಭ್ಯತೆಯು ಮತ್ತು ಜ್ಞಾನದ ಅಭಿವ್ಯಕ್ತತೆಯ ಆಧಾರವಾಗಿದೆ

ಏನು ಯುವಕರೇ! ನಿಮಗೆ ಈಗಲೂ ಮಹಾತ್ಮಾ ಬುದ್ಧ, ಮಹಾ ವೀರ ಇವರುಗಳ ಸಂಘದ ನೆನಪಿದೆಯೋ?! ನಮ್ಮ ರಾಷ್ಟ್ರವು ನಷ್ಟಭ್ರಷ್ಟವಾಗುತ್ತಿದೆ ನಮ್ಮ ಪೂಜ್ಯ ಭಾರತಮಾತೆಯು ದುಃಖದ ರಕ್ತಾಶ್ರುವನ್ನು ಸುರಿಸುತ್ತಿದ್ದಾಳೆ ಅವಳ ಸಂಕಟವನ್ನು ದೂರಮಾಡುವರೇ ಅವಳ ಪರಾಧೀನ ಬೇಡಿಯನ್ನು ತುಂಡು ಮಾಡುವರೇ, ಆರೋಗ್ಯ ದೃಢಕಾಯವುಳ್ಳ ಪವಿತ್ರಾತ್ಮಾಗಿ, ಕರ್ಮಠ, ಯುವಕರ ಆವಶ್ಯಕವಿದೆ ನಾನಾದರೋ ಪರಮಾತ್ಮನ ಒಂದು ತುಂಡು ಮಾತ್ರದಂತಿರುವೆನು ಆದಾಗ್ಯೂ ನನ್ನ ಆತ್ಮ ಹೃದಯದಲ್ಲಿ ಆಶೆ ಇದೆ ಶ್ರದ್ಧೆ ಇದೆ ಶಕ್ತಿದ್ವಾರವೇ ಬಿಡುಗಡೆಯ ಸಂಭವವಿದೆ ನಮ್ಮ ಹಿರಿಯರಾದ ಮಹರ್ಷಿಗಳ ಮತ್ತು ಸದ್ಗುರುಗಳ ಮೇಲೆ ಶ್ರದ್ಧೆ ಇರಿಸಿ ನನ್ನ ಆಶೆಯು ಯುವಕರ ಮೇಲೆ ಹೊಂದಿಕೊಂಡಿದೆ ಅವರೇ ಭವಿಷ್ಯದ ನಿರ್ಮಾತರಾಗಿರುವರು ಯೂನಾನ್ ದೇಶದಂತೆ ಈಗ ಭಾರತಕ್ಕೂ ಕೂಡಾ ವ್ಯಾಯಾಮಶೀಲ ಪ್ರವೃತ್ತಿ (Athletic Spirit)ಯು ಆವಶ್ಯಕತೆ ಇದೆ

ಶ್ರೀರಾಮ ಭಕ್ತ ಹನುಮಂತನ ವೀರತಾಪೂರ್ಣ ಕಾರ್ಯಗಳಿಂದ ನಿರಂತರ ಸ್ಫೂರ್ತಿಯನ್ನು ಗ್ರಹಣ ಮಾಡುತ್ತೀರಿ ಶರೀರ ನಿರ್ಮಾಣ (Body Building)ದ ಸಂದೇಶವನ್ನು ದೇಶದಲ್ಲೆಲ್ಲಾ ಹರಡಿಸಿರಿ ಶ್ರೀಕೃಷ್ಣ ಸನಾತನ ಯುವಾವಸ್ಥೆ (Eternal Youth)ಯ ಪ್ರತಿನಿಧಿ ಎಂದು ಅಂಕಿತವಾಗಿದೆ ಶರೀರವು ಒಂದು ಯಂತ್ರವಾಗಿದೆ ಕುಂಡಾದ ಯಂತ್ರವು ಕಾರ್ಯಸಿದ್ಧಿಗೆ ಒಂದು ದೊಡ್ಡ ವಿಘ್ನವಾಗಿದೆ ಶರೀರವು ಪರಮಾತ್ಮನ ಮಂದಿರವಾಗಿದೆ ಆರೋಗ್ಯವಂತರಾಗಿ ಸೂರ್ಯಪುತ್ರರೇ ಸೂರ್ಯನಂತಲೂ ತೇಜಸ್ವಿಗಳಾಗಿ ದೃಢಕಾಯವುಳ್ಳ ರಾಷ್ಟ್ರವೇ ಇಂದು ಜೀವಿಸಬಲ್ಲದು

ಭಾರತೀಯರಿಗೆ ಯೋಗ್ಯ ಮನುಷ್ಯರಾಗುವ (Man Making) ಶಿಕ್ಷಣೆಯ ಆವಶ್ಯಕತೆ ಇದೆ ತಪೋಶಕ್ತಿ, (Silent Service) ಭಾರತದ ನವೀನ ನಿರ್ಮಾಣವು ತಪೋಬಲದಿಂದ ಆಗಬೇಕು ತಪಸ್ಸಿನಿಂದಾದ ಶಕ್ತಿಯಿಂದ ಮತ್ತು ತಪಸ್ವಿ ರಾಜನೀತಿಜ್ಞರಿಂದಲೇ ಆಗತಕ್ಕದ್ದು ಶ್ರೀ ಸಾಕ್ರೆಟೀಸನು ಹೇಳುತ್ತಿದ್ದ ಆತ್ಮ ವಿಜಯಗಳಾಗಿ ಇದೇ ಭಾರತದ ಆದರ್ಶವು. ಇದರಿಂದಲೇ ಭಾರತವು ಈಗಿನ ವರೇಗೆ ಜೀವಿಸಿಕೊಂಡಿದೆ.

ಏಳ್ವೇಳಿ! ಎಚ್ಚರವಾಗಿ ಎಲೈ ಯುವಕರೇ ನನ್ನ ಪುತ್ರರೇ ಏಳಿ, ಎಚ್ಚರವಾಗಿ ಮತ್ತು ಕರ್ತವ್ಯ ಮಾರ್ಗದಲ್ಲಿ ಹೋಗಿ ದೃಢರಾಗಿ ಎಂಬುದು ಉಪನಿಷದ್ ಗ್ರಂಥಗಳ ಆದೇಶವಾಗಿದೆ. ಜೀವನದ ಉದ್ದೇಶವು ಪಚನಾತ್ಮಕ ಬಲಿದಾನವಾಗಿದೆ ಧ್ವನಿಕಾರಕದಲ್ಲಿ ವಿಚಾರವಂತರಾಗಿರಿ ಎಂಬುದೇ ಪಶ್ಚಿಮದ ಸಂದೇಶವು

ಭಾರತೀಯ ವಿದ್ಯಾರ್ಥಿಗಳಿಗೆ ಶ್ರೀ ವಾಸ್ವಾನಿಜೀಯವರು ಕೊಡುವ ಯುಗದರ್ಶಿ ನಿಯಮವು ನಿಮ್ನ ಪ್ರಕಾರವಾಗಿದೆ.

(1) ವಿದ್ಯಾರ್ಥಿಗಳು ಎಲ್ಲಕ್ಕಿಂತ ಮೊದಲು ಶಾರೀರಿಕ ಬಲವನ್ನು ಚೆನ್ನಾಗಿ ಪ್ರಾಪ್ತ ಮಾಡಿಕೊಳ್ಳತಕ್ಕದ್ದು ಇದರ ಹೊರತು ಅವರು ಲೋಕದ ಸೇವೆಯನ್ನು ಅಧಿಕ ಮಾಡಲು ಸಮರ್ಥರಾಗಲಾರರು ಭಾರತಮಾತೆಯು ಹೇಳುತ್ತಾಳೆ ಒಂದು ವೇಳೆ ನೀವು ನನ್ನ ಸೇವೆ ಮಾಡುವುದಕ್ಕೆ ಬಯಸುವುದಾದರೆ ಎಲ್ಲಕ್ಕಿಂತ ಮೊದಲು ಆರೋಗ್ಯವಂತರಾಗಿ, ಆಯುಷ್ಯವಂತರಾಗಿ, ಶರೀರವನ್ನು ಸುದೃಢಸಹನಶೀಲವನ್ನಾಗಿ ಮಾಡುವುದು ರಾಷ್ಟ್ರನಿರ್ಮಾಣ ಮಾಡಿದಂತೆಯೇ ಸರಿ ಆದ್ದರಿಂದ ಆತ್ಮನ ಈ ಮಂದಿರವನ್ನು ಸುಂದರ ದೃಢ ಮತ್ತು ದೀರ್ಘ ಜೀವಿಯನ್ನಾಗಿ ಮಾಡು

(2) ತಮ್ಮ ಮುಖಂಡರನ್ನು ಕಣ್ಣು ಮುಚ್ಚಿಕೊಂಡು ಅನುಸರಿಸಬೇಡ ಸ್ವತಂತ್ರ ವಿಚಾರವುಳ್ಳವನಾಗು

(3) ಅಧಿಕಮಾತಾಡುವವನಾಗಬೇಡ ಮೌನವಾಗಿದ್ದು ನಿಸ್ವಾರ್ಥ ದೃಷ್ಟಿಯಿಂದ ಸೇವಾ ಕಾರ್ಯವನ್ನು ಮಾಡುತ್ತಿರು ಅನೇಕ ಪ್ರಸ್ತಾವಗಳಲ್ಲಿಯೇ ವಿಶ್ವಾಸವಿಡಬೇಡ. ರಚನಾತ್ಮಕ ಕಾರ್ಯವನ್ನು ಮಾಡು

(4) ಖಾದಿಯನ್ನು ಧರಿಸಿರಿ ಅದು ದೇಶಸೇವೆಯ ಮುಖ್ಯ ಸ್ತಂಭವಾಗಿದೆ

(5) ಪತ್ಯೇಕ ರವಿವಾರಗಳಲ್ಲಿ ಬೇಸಿಗೆಯ ರಜೆಯಲ್ಲಿ ಯಾವುದಾದರೂ ದೇಶಹಿತ ಕಾರ್ಯಗಳನ್ನು ಮಾಡಿರಿ ಕೂಲಿಯಾಳು ಮತ್ತು ಕೃಷಕ (ರೈತ)ರಿಗೆ ಶಿಕ್ಷಾರ್ಥ ರಾತ್ರಿ ಪಾಠಶಾಲೆಗಳ ಸಂಚಾಲನೆ ಮಾಡಿ, ಕೆಲವು ಯುವಕರು ಸೇರಿ ಅವರಿಗೆ ಓದಿಸುವುದು ಬರೆಯಿಸುವುದು ಶುದ್ಧತೆ ಮತ್ತು ಮಗಳೇ ಮೊದಲಾದ ಉತ್ತಮ ಮಾತುಗಳನ್ನು ಪ್ರೇಮದಿಂದ ಕಲಿಸಿರಿ

(6) ಸ್ತ್ರೀಯರಲ್ಲಿಯೂ ಜಾಗ್ರತಿಯನ್ನುಂಟುಮಾಡಿ ಇದರಿಂದ ಸ್ವರಾಜ್ಯವು ಅಧಿಕ ಹತ್ತಿರವಾಗುವುದು. ಸ್ತ್ರೀಯರಲ್ಲಿ ವಿಲಕ್ಷಣವಾದ ಪಚಾರದ ಶಕ್ತಿ ಇರುತ್ತದೆ ಪ್ರತಿಯೊಂದು ಬೀದಿ ಗ್ರಾಮಗಳಲ್ಲಿ ಅವರಿಗೆ ಸಹಾಯ ಮಾಡಿ ಸಂಘಟನೆ ಮಾಡಿ ಮುನಿಸಿಪಾಲಿಟಿಯಿಂದ ಮೆಜಿಕ್ ಲೆಂಟರ್ನ್ ತೆಗೆದುಕೊಂಡು ಹೋಗಿ ಅವರಿಗೆ ಅಭಯ ಮತ್ತು ಕರ್ಮಣ್ಯರಾಗುವಂತೆ ಉಪದೇಶಿಸಿರಿ ರಾಮಾಯಣ ಮತ್ತು ಮಹಾ ಭಾರತದ ಸ್ಫೂರ್ತಿದಾಯಕವಾದ ಕಥೆಗಳ ಮೂಲಕ ಅವರಲ್ಲಿ ಜೀವನ ಮತ್ತು ಜಾಗ್ರತಿಯ ಸುಂದರ ಭಾವನೆಯನ್ನು ತುಂಬಿಸಿರಿ ಸ್ತ್ರೀಯರ ಹೀನತೆ ಸಂಬಂಧವಾದ ಕೆಟ್ಟ ವಿಚಾರಗಳನ್ನು ನಷ್ಟಪಡಿಸಿರಿ

(7) ಅಸ್ಪೃಶ್ಯರನ್ನು ತನ್ನ ಕಡೆಗೆ ಮಾಡಿಕೊಳ್ಳಿ ಅವರಿಗೆ ಎಲ್ಲಾ ತರಹದ ಸೇವೆಯನ್ನು ಮಾಡಿ ಅವರನ್ನು ಉದ್ಧರಿಸಿರಿ

(8) ಲೋಕಕ್ಕೆ ಹಿತಕರವಾದ ಕಾರ್ಯಗಳನ್ನು ಯಾವಾಗಲೂ ಮಾಡುತ್ತೀರಿ ಇದರಿಂದ ಯಾರಿಗಾದರೂ ಕಷ್ಟ ಉಂಟಾಗಬಹುದೆಂಬುದನ್ನು ಚಿಂತಿಸಬೇಡ.

ಮಾಸಿಕಪತ್ರ ಹಿಂದೀ 'ಮಾಧುರಿ'ಯಿಂದ

WANTED.

A capable account keeping shorthand typist clerk, preferably with business experience. Pay Rs. 20/— to 30/— according to qualifications. 1 month's trial wanted Apply with testimonials— K. RAMANAYAK GENERAL MERCHANT 1510/11 Court Road, Kasaragod

ಮದನಕಾಮಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಸಚಿತ್ರ ಪುಸ್ತಕದಲ್ಲಿ ಅಂದವಾಗಿ ವರ್ಣಿಸಿ, ಅದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಜಾತಿಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ನೃಭಾಗಂಗಳ ವಿನೋದಗಳು, ವೇಶ್ಯಾ ಕನ್ಯಗಳು ಸೇವಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂಡಿದ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1 ಇದರ ಸಂಗಡ ೧೦. ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್.

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೆ? ಹಾಗಾದರೆ,
ಶಾರದಾ ಛಾಪಖಾನೆ ಮಂಗಳೂರು,
ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

ESTED- 1931.

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾವಿಶಾರದ.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

೫ ಅಂಕಗಳ ಸ್ವಲ್ಪ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ.

ಬರೆದವರು:—ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ; ಸೂರ್ಯನೊಳಗಿಲ್ಲ; ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ:—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯಾರ್ಡ್ ಪಬ್ಲಿಷಿಂಗ್ ಹೌಸ್, ಸ್ಟೇರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೮ನೆಯ ಧಾತು ಸಂವತ್ಸರದ ಫಾಲ್ಗುಣ ಶು। ೮ ಶನಿವಾರದಿಂದ, ಫಾಲ್ಗುಣ ಶು। ೧೫ ಶುಕ್ರವಾರದ ವರೇಗಿನ ಪಂಚಾಂಗ. (೧೯೩೭ನೇಯ ಮಾರ್ಚ್ (ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ದಿನ	ವಿಶೇಷ
20	ಶನಿ	೮	೬	ಆರ್ದ್ರ	೩೯	೭	[illegible]
21	ರವಿ	೯	೫೬	ಪುನರ್ವಸು	೩೬	೮	
22	ಸೋ.	೧೧	೫೬	ಪುಷ್ಯ	೩೫	೯	
23	ಕುಜ	೧೨	೫೪	ಆಶ್ಲೇಷ	೩೬	೧೦	
24	ಬುಧ	೧೩	೫೪	ಮಘ	೩೭	೧೧	
25	ಗುರು	೧೪	೫೬	ಹುಬ್ಬ	೩೯	೧೨	
26	ಶುಕ್ರ†	೧೫	೫೮	ಉತ್ತರ	೪೩	೧೩	

THE

BANK OF MANGALORE LTD.,

MANGALORE.

ESTD. 1931

Branches:-
Pahemangalore, Mudabidri & Padubidri.

Chairman:—**Philip J. Chandran, Esq.,**
Retd. Dt. Registrar of Joint Stock Companies.

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.
Saving Bank deposit 3½% on daily balances
All kinds of banking business transacted.

U. R. PAI, N. U. PAI, *Managing Directors.*

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಬಾಸಿ ಅಕ್ಕಿ ...	3— 6	3—10
ಮಸ್ಸೂರಿ ...	3— 8	4— 4
ಗುಡ್ಡ ...	3—10	3—14
ಉದ್ದ ಅಪ್ಪಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ಗಳ್ಳೆ ...	7 — 0	7— 4
ಎಲ್ಲೂರು ಬೆ. ಮು. ಗಳ್ಳೆ ...	3—12	3—12
ಗೋಧಿ ಗೋಣಿ ಗಳ್ಳೆ ...	11 — 0	13— 0
ಕೊಗಲ ಗೋಣಿ ಗಳ್ಳೆ ...	9 — 8	12— 8
ಹುರುಳಿ ಗೋಣಿ ಗಳ್ಳೆ ...	5— 0	5 — 6
ಕಡಲೆ ಗೋಣಿ ಗಳ್ಳೆ ...	8 — 0	12 — 8
ತೊಗರಿಬೇಳೆ ಗೋಣಿ ಗಳ್ಳೆ ...	11— 0	19— 0
ಉದ್ದು ಗೋಣಿ ಗಳ್ಳೆ ...	9— 0	9 — 8
ಹೆಸರು ಗೋಣಿ ಗಳ್ಳೆ ...	7—12	8— 0
ಊರುಬೆಲ್ಲ ಖಂಡಿ ಗಳ್ಳೆ ...	30— 0	32— 8
ಉಪ್ಪು ಗೋಣಿ ಗಳ್ಳೆ ...	4— 2	5— 4
ಕೊಬ್ಬರಿ ಖಂಡಿ ಗಳ್ಳೆ ...	75— 0	84— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ ...	26 — 8	28— 8
ಎಳ್ಳಿಂಡಿ ಖಂಡಿ ಗಳ್ಳೆ ...	26 — 4	27 — 8
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ ...	6— 0	7 — 0
ಎಳ್ಳೆಣ್ಣೆ ಮುಡಿ ಗಳ್ಳೆ ...	7— 0	7— 0
ಚಿಪ್ಪಿಣಎಣ್ಣೆ ಪಟ್ಟಿಗೆ ಗಳ್ಳೆ ...	6— 5	7— 5
ಮೋರಿಸ ಸಕ್ಕರೆ ಮು. ಗಳ್ಳೆ ...	3— 2	3 — 4
ಮೆಣಸು ...	2— 8	5 — 0
ಸಾಸಿವೆ ಮುಡಿ ಗಳ್ಳೆ ...	5 — 4	5— 8
ಕಾಳುಮೆಣಸು ಖ. ಗಳ್ಳೆ ...	100— 0	120 0
ಯೇಲಕ್ಕಿ ಬೀಜ ಮಣ ಗಳ್ಳೆ ...	80— 0	85— 0
ಗೇರುಬೀಜ ಮು. ಗಳ್ಳೆ ...	3 — 4	3 — 8
ಕಲ್ಪಿರಾ ಖಂಡಿ ಗಳ್ಳೆ ...	35— 0	37— 8
ತಾಂಬ್ರ ತಗಡು ಮ. ಗಳ್ಳೆ ...	12— 4	12— 8
ತಾಂಬ್ರ ಪಾತ್ರಗಳು ಮ. ಗಳ್ಳೆ	12— 8	14— 0
ಚೀನಬೆಳ್ಳಿ ಸೇರು ಗಳ್ಳೆ ...	13— 8	15 — 0
ಹಿತ್ತಾಳೆ ತಗಡು ಮ. ಗಳ್ಳೆ ...	10— 0	10— 8
ಸತು ಗಳ್ಳೆ ...	22— 7	22— 8
ಹುಣಸೆ ಹುಳಿ ಖಂಡಿ ಗಳ್ಳೆ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳೆ	170— 0	180— 0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳೆ ...	175— 0	195— 0
ಮಡಿಕೇರಿ ಏಲಕ್ಕಿ ...	50— 0	55 — 0

Break Pills!

Take To-Night

Prepared by a Sage out of Amber Saffron Gold Musk with Himalayan Drugs recro it lost energy Strength Nervous Debility and all Disorders in Spinal Cord. Regains lost vitality Gives marvellous effect. 60 Pills Rs. 5. Sample 30 Pills Rs. 3. List Free.

Dr. A S. MURTHI, CHICACOLE.

ಬಿಳಿ ತೊನ್ನು ಮತ್ತು ಕುಷ್ಠರೋಗ.

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುವು. ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ. ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು. ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ನಿಘಾ ತೆಗೆದುಕೊಳ್ಳಲಾಗಲಿಕ್ಕಿಲ್ಲ.

Vaidyaraj Akil Kishore Ram,
No. 62 P. O. Katrisarai (Gaya)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಲ್ಕಟ್ಟಾ ಬಜಾರ್, ಮಂಗಳೂರು.

ಊಟಮಾಡಿದ ನಂತರ ಉದರವೇದನೆಯು ಬಾರದಂತೆ ಜಾಗ್ರತೆಯಿಂದಿರಿ.

ಊಟವೆಂದರೆ ನಿಮಗೆ ಹೆದರಿಕೆಯಾಗುತ್ತದೆಯೆ? ಇನ್ನು ಏನೊಂದು ಆತಂಕವಿಲ್ಲದೆ ಊಟವನ್ನುಂಡು ಮಾಡಬಹುದೆಂದು ನಿಮಗೆ ಅನಿಸುತ್ತದೆಯೆ? ನಿಮಗಾವಾಗಲೂ ಉದರಶೂಲೆ ಇದೆಯೆ?

ಪ್ರಸ್ತುತ, ಉದರ ವೇದನೆ ಎಂಬ ಮಹಾಮಾರಿಯಿಂದ ಎಲ್ಲೆಲ್ಲೂ ತಳವೂರಿದೆ. ಆದರೆ ಬುದ್ಧಿವಂತರಾದ ಕೆಲವರು ಕೂಡಲೆ, ಅದಕ್ಕೆ ಯುಕ್ತವಾದ ಮದ್ದನ್ನು ಸೇವಿಸಿ ಗುಣಪಡಿಸಿಕೊಳ್ಳುತ್ತಾರೆ. ಆದರೆ ಇನ್ನೂ ಕೆಲವು ನಾನಾ ನಮೂನೆಯ ಭವಣೆಗಳಲ್ಲಿ ಸಿಲುಕಿ ನರಳುತ್ತಾರೆ. ಅಂಥವರು ಈ ಬುದ್ಧಿವಂತರ ಮಾತುಗಳನ್ನು ಕೇಳಿ ತಮ್ಮ ವ್ಯಾಧಿಯನ್ನು ಗುಣಪಡಿಸಬಹುದು. ಎಲ್ಲರ ಮೆಚ್ಚುಗೆಗೆ ಪಾತ್ರವಾದ ಮೆಕ್ ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಿಬಹುದು.

ಹಲವು ನಮೂನೆಯ ಸಿದ್ಧಾಂತಗಳಿಂದ, ಈ ಮೆಕ್ ಲೀನ್ ಬ್ರೇಂಡ್ ಸ್ಟೋಮಕ್ ಪೌಡರು, ಇಂತಹ ಉದರವೇದನೆಯನ್ನು ಶಮನಗೊಳಿಸಲು ಯೋಗ್ಯವಾದ ಔಷಧಿಯೆಂದು ತಿಳಿಸಲ್ಪಟ್ಟಿದೆ. ಹಲಕೆಲವರು ತಮಗೆ ಸಿಕ್ಕಿದ ಗುಣಲಾಭವನ್ನು ಗುಣಗಾನ ಮಾಡಿದ್ದಾರೆ. ಆ ಪತ್ರಗಳಿಗೆ ಭಂಗಾರದಷ್ಟು ಬೆಲೆ ಕೊಡಬೇಕಾಗಿಯೂ ಇರುವುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಇತರರಿಗೆ ಸಿಕ್ಕಿದ ಲಾಭವು ನಿಮಗೂ ಸಿಕ್ಕಬಹುದು. ಬೇಗನೇ ಒಂದು ಸೀಸೆ ಖಂಡಿತ ಕಾಗದ ಬರೆಯಿರಿ. ನೋಡಿಲ್ಲನೇ ಸಾರಿ ಸೇವಿಸಿದೊಡನೆ ಅದರ ಬೆಲೆಯು ಉಚಿತವಾಗಬಹುದು. ಕೆಲವು ತಿಂಗಳುಗಳಿಗೆ ಅದನ್ನು ಸೇವಿಸಿದಿರೆಂದರೆ ಸಂಪೂರ್ಣ ಗುಣವನ್ನು ಪಡೆಯುವಿರಿ. ಅದರ ಕೊಂಡುಕೊಳ್ಳುವಾಗ ಜಾಗ್ರತೆಯಿಂದ

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ. ಇಂತಹ ನಮೂನೆಯ ಕಡಿಮೆ ದರದ ಪರಕೀಯ ಮಾಲನ್ನು ಪಡೆದು ಮೋಸಹೋಗಬೇಡಿ. ಅದು ಬಿಡಿಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಅಪ್ಪಲಿವುದಾದರೆ,

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,
ಇಲ್ಲಿಗೆ ಬರೆಯಿರಿ.



S No. 55

Memorandum of Association of the

GOKULDAS FARMS LIMITED.

(Continued from 18th Page)

concession, with any person or company engaged in or about to engage in any business or transaction, which this Company is authorised to carry on or to purchase and carry on the business of such person or company.

(u) To borrow, and raise money for the purpose of the Company's business by issuing Debentures or otherwise and for the same purpose, to make, draw, accept, endorse and and discount Bills of Exchange, Promissory Notes and to execute all necessary documents.

(v) To lend or invest the money of the Company

(w) To sell, manage, exchange, lease, Mortgage, dispose of, turn to account or otherwise deal with all or any part of the property and rights of the Company.

(x) To depute, Managing Director or any official of the Company to any part of India or abroad, for the purpose of promoting and conducting more profitably any business of the Company

(y) And to do all such other things as are incidental or conducive to the attainment of the above objects of the Company

4. The liability of the members is limited.

5. The share Capital of the Company is Rs.20,000 divided into 4000 shares of Rs. 5 with power for the Company to increase the Capital.

Mr. Kumble Raghavendra Rao shall be appointed as Managing Director of the Company for a period of fifteen years. Such appointment of the said Company as Managing Director is hereby further confirmed in consideration of the services rendered by him in forming and promoting the Company, upon the terms and powers as set forth in the Articles No 72 of the Articles of Association. The right of management shall not be at any time hereafter within the period aforesaid, be liable to be revoked or cancelled on any ground or for any reason whatsoever, save and except of his being found guilty of knowingly committing fraud or except if he resigns such office of his own free will

We the several persons whose names and addresses are subscribed are desirous of being formed into a Company in pursuance of this Memorandum of Association and we respectively agree to take the number of shares in the Capital of the Company set opposite to our respective names

	Name of Subscribers	Address and descriptions of Subscribers	Number of shares taken by each subscriber
1	B Vaikunta Baliga, B A, B L	Chairman Board of Directors, C P C Co, Ltd Vice President, Kalyanpur Sugar Mills Ltd and Director, Canara Banking Corporation Udipi Ltd and District Board Member Mangalore	10
2	M Peres	Exporter, Bunder, Mangalore	20
3	Dr. U Narasimha Nayak, L M & S	S R N Home, Mangalore	20
4	Aroor Lakshminarayan Rao, B A, B L	Municipal Chairman Advocate and Landlord, Udipi	5
5	Dr S K Pai M B B S	President, Canara Banking Corporation Udipi Ltd. and Director, Kalyanpur Sugar Mills Ltd and Hon Assist Surgeon, Govt Hospital Udipi	10
6	Pangal Gopal Nayak	Director Canara Banking Corporation Udipi Ltd Hon Magistrate and Landlord, Udipi	5
7	M Narasimha Bhat M A.	Lecturer St Agnes College, Mangalore	5

Total Shares 75 only

Dated this 2nd day of March 1937

Witness to above signatures

M. R Kudva,

C P. C Co. Ltd., Mangalore.

Canara Bank Ltd, Kasaragod

ಕೆನರಾ ಬೇಂಕ್ ಲಿಮಿಟೆಡ್ ಕಾಸರಗೋಡು

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಣ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಜಿಸ್ಟ್ರ ನೋಟೀಸುಗಳು ಜ್ಯಾರಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1937ನೇ ಇಸವಿ ಎಪ್ರಿಲ್ ತಾರೀಕು 17ನೇ ಶನಿವಾರದೊಳಗೆ ಪಾವತಿಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, ಇದೇ 1937ನೇ ಇಸವಿ ಎಪ್ರಿಲ್ ತಾರೀಕು 20ನೇ ಮಂಗಳವಾರ ದಿವಸ ಅಪರಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

1. ಜ.ನಂಬ್ರ ಲೋನ್ ನಂಬ್ರ L. 1343/32 ಹೆಸರು ವ ವಿಳಾಸ Abdulla S/o Hassan Kutty Keyur Melparambu Kalnad grama, Kalnad ಅಸ್ಲು ರೂ 30 0-0

2. ಜ ನಂಬ್ರ ಲೋನ್ ನಂಬ್ರ L 1809/34 ಹೆಸರು ವ ವಿಳಾಸ Kunhambu Nair N/o Ukkaram Nair, Cultivator, Chervathur, Nileshwar ಅಸ್ಲು ರೂ 30-0-0

3. ಜ ನಂಬ್ರ ಲೋನ್ ನಂಬ್ರ S L 271/33 ಹೆಸರು ವ ವಿಳಾಸ Moidin Kutty, S/o Soopi Cultivator, Kotikulam, Pallikere Bekal ಅಸ್ಲು ರೂ. 10-0-0

4. ಜ. ನಂಬ್ರ ಲೋನ್ ನಂಬ್ರ S. L. 516/35 ಹೆಸರು ವ ವಿಳಾಸ Mahamad S/o Bavikere Andru Merchant, Bavikere Kasaragod. ಅಸ್ಲು ರೂಪಾಯಿ 20-0-0.

5. ಜ. ನಂಬ್ರ ಲೋನ್ ನಂಬ್ರ L.919/35 ಹೆಸರು ವ ವಿಳಾಸ Abdulrahiman S/o Pallian Beary, Cultivator, Ubrangala grama, Kasaragod. ಅಸ್ಲು ರೂಪಾಯಿ 25-0-0.

6. ಜ. ನಂಬ್ರ ಲೋನ್ ನಂಬ್ರ L.973/35 Abdulrahiman S/o Pallian Beary Cultivator Ubrangala grama, Kasaragod. ಅಸ್ಲು ರೂ. 45-0-0.

Office of the Bank Kasaragod.

M. A. Bhat, Agent.

ಸನ್‌ಲೈಟ್ ಸಾಬೂನು

ಬಟ್ಟೆಗಳನ್ನು ಹೇಗೆ ಕಾಪಾಡುವುದೆಂಬುದನ್ನು ನೋಡಿರಿ!



ಸಿಕ್ಕಿದ ಸಾಬೂನುಗಳಿಂದ ಒಗೆಯುವ ಬಟ್ಟೆಗಳನ್ನು ಬಲವಾಗಿ ಉಜ್ಜಬೇಕಾಗಿರುವುದರಿಂದ ಬಟ್ಟೆಗಳು ಬೇಗನೆ ಹರಿದು ಹೋಗುವವು

ಸನ್‌ಲೈಟ್ ಸಾಬೂನಿನ ಹೇರಳವಾದ ನೊರೆಯು ಬಟ್ಟೆಗಳಲ್ಲಿರುವ ಕೊಳೆಯನ್ನು ಸುಲಭವಾಗಿ ಹೊರಪಡಿಸುವುದರಿಂದ ಬಟ್ಟೆಗಳಿಗೆ ಛೇದವಿಲ್ಲ

ಸನ್‌ಲೈಟ್ ಸೋಪಿನಿಂದ ಉಂಟಾಗುವ ಹೇರಳವಾದ ನೊರೆಯು ಬಟ್ಟೆಗಳಲ್ಲಿರುವ ಎಂಥಾ ಕೊಳೆಯನ್ನೂ ಅತಿ ಸೂಕ್ಷ್ಮವಾಗಿ ಹೊರಪಡಿಸುವುದು. ಎಂಥಾ ನಾಜೂಕಾದ ಬಟ್ಟೆಗಳಿಗೂ ಇದರಿಂದ ಹಾನಿಯಿಲ್ಲ. ಇದನ್ನು ನೀವು ಸಲವೆಗೆಲ್ಲಾ ಉಪಯೋಗಿಸಿದರೆ ನೀವು ಬಟ್ಟೆಗಳನ್ನು ಎತ್ತಿ ಬಲವಾಗಿ ಒಗೆಯುವುದೇ ಬೇಕಾಗಿಲ್ಲ. ಇದರಿಂದ ವಸ್ತ್ರಗಳೂ ಬಹಳಕಾಲ ಬಾಳಿಕೆಬರುವವು. ಇಲ್ಲಿ ತೋರಿಸಿರುವ ಈ ಎರಡು ಪರಗಳು ಅಗ್ಗವಾದ ಸೋಪಿನಿಂದ ಸಲವೆಮಾಡಿದ ಬಟ್ಟೆಗಳಿಗೂ, ಮತ್ತು ಸನ್‌ಲೈಟಿನಿಂದ ಸಲವೆ ಮಾಡಿದ ಬಟ್ಟೆಗಳಿಗೂ ಇರುವ ವ್ಯತ್ಯಾಸವನ್ನು ತೋರಿಸುತ್ತವೆ



SUNLIGHT SOAP



ಬೇಳಕುಭರಿತ್ಕ್ಯಾ ಬಟ್ಟೆಗಳ ಸಲವೆಗೂ.

LEVER BROTHERS (INDIA) LIMITED KANARESE

ನವರತ್ನಾ ಫಾರ್ಮಸಿ, ಕೊಚ್ಚಿ—ಇವರ

ಗೊನೋಕ್ಯೂರಿನ್

(ರಜಿಸ್ಟರ್ಡ್)

ಕೆಟ್ಟ ಜನರ ಸಂಭೋಗದಿಂದ ಜನನೇಂದ್ರಿಯದಲ್ಲಿ 'ಗೊನೂಕಾಯಿ' ಎಂಬ ಹೆಸರಿನ

ಸೂಕ್ಷ್ಮ ಜಂತುವಿನ ಪ್ರವೇಶವಾಗಿ ಈ ವಿಷದ ಪರಿಣಾಮವಾಗಿ ಅದರ ಗುಣದ ಪ್ರಕಾರ ತಕ್ಷಣ ಇಲ್ಲವೆ ೮-೧೦ ದಿನಗಳ ಮೇಲೆ ಇ... ದ ಮೇಲೆ ಕಲೆಬಿದ್ದು ಅದು ಬಾತು, ಅದರ ಮೇಲೆ ಸಣ್ಣ ಸಣ್ಣ ತೂತಗಳು ಬೀಳುತ್ತವೆ. ಉಷ್ಣ ಹೆಚ್ಚಾಗಿ ಮೂತ್ರ ಮಾಡುವಾಗ್ಯೆ ಅದ ಉರಿಯುವುದ ಮತ್ತು ಹ ಹಸಿವಾಗಿ ಮೂತ್ರವಾಗುವುದು. ಮುಂದೆ ಮೂತ್ರದ್ವಾರವು ಸಂಕುಚಿತವಾಗಿ, ಮೂತ್ರ ಬಂದಾಗುವುದರಿಂದ ಕೈಥೆಟಿರ (ನಳಿಕೆ) ಹಾಕಿ ಮೂತ್ರ ಮಾಡಿಸಬೇಕಾಗುವುದು. ಇಂಥಾ ರೋಗಿಗಳಿಗೆ ಸಕಾಲಕ್ಕೆ ಯೋಗ್ಯ ಔಷಧ ಸಿಗದಿದ್ದರೆ ಈ ವಿಕಾರವು ಇನ್ನೂ ಹೆಚ್ಚಾಗುವುದು. ಈ ರೋಗವಿದ್ದ ಸ್ತ್ರೀಯರಿಗಾದರೂ ಈ ವಿಕಾರವುಂಟಾಗುವುದು. ಮತ್ತು ಗರ್ಭಾಶಯವು ದೂಷಿತವಾದ್ದರಿಂದ ವಿಕಾರವಾಗಿ ಗರ್ಭಧಾರಣೆಯಾಗುವುದಿಲ್ಲ.

ಮುಂದೆ ಭಯಂಕರ ಪ್ರಾಣಘಾತಕ ರೋಗವುಂಟಾಗಿ ಆಯುಷ್ಯವು ಕಡಿಮೆಯಾಗುವುದು. ಆದುದರಿಂದ ತ ಡುವಿಗೇನೇ ನವರತ್ನಾ ಕಂಪೆನಿಯವರ 'ಗೊನೋಕ್ಯೂರಿನ್' ಉಪಯೋಗಿಸಿದರೆ ಈ ಎಲ್ಲಾ ಲಕ್ಷಣಗಳು ಕಡಮೆಯಾಗುವುವು.

ವಿಶೇಷ ಸೂಚನೆ:—ಸ್ವಲ್ಪ ಗುಣವಾದೊಡನೆ ರೋಗಿಯು ಔಷಧವನ್ನು ಬಿಡುತ್ತಾನೆ. ಆದರೆ ಈ ರೋಗವು ಕೂಡಲೇ ಗುಣವಾಗುವುದಿಲ್ಲೆಂಬುದು ಗೊತ್ತಿಲ್ಲದ ಕಾರಣ ಪುನಹ ಕಷ್ಟಕ್ಕೆ ಗುರಿಯಾಗುತ್ತಾನೆ. ಆದುದರಿಂದ 2 ಅಥವಾ 3 ಬಾಟಲಿಗಳನ್ನು ಒಂದೇ ಸಹನೆ ತೆಗೆದುಕೊಳ್ಳಬೇಕು.

ಕ್ರಯ:—ಹತ್ತು ತೊಲೆಗಳಿಗೆ ರೂ. 1-4-0 ಅಥವಾ ನಾಲ್ಕು ಟಿನ್ನುಗಳಿಗೆ ರೂ 1-4-0.

ತಯಾರಿಸುವವರು:— ನವರತ್ನಾ ಫಾರ್ಮಸಿ, ಕೊಚ್ಚಿ.

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣೆ, ಆಕಸ್ಮಿಕ ಅನಾಹುತ, ದುಸ್ಸಹವಾದ ನಿರಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

೩೦ ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ, ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ. ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ.

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪರ್ಮಾಸನ್ ಮಾತ್ರೆಗಳನ್ನು ಉಪಯೋಗಿಸಿರಿ.

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ. 4—0—0. ವಿ. ಪಿ. ಚಾರ್ಜು ಬೇರೆ.

ರೋಗಿಯ ಈ ಕುರಿತು ವಿವರಗಳನ್ನು ವಿಶದವಾಗಿ ಬರೆಯಿರಿ —

ಹೆಸರು, ವಿಳಾಸ, ಜಾತಿ, ಸ್ತ್ರೀಯಾ ಪುರುಷ ಪ್ರಾಯ, ದೇಹದ ಭಾರ, ವಿವಾಹಿತರೋ ಅಲ್ಲವೋ, ರೋಗದ ಲಕ್ಷಣ ನಿದ್ರೆ, ಆಹಾರ, ಮಲಶೋಧನೆ. ಅಲ್ಲದೆ ಉಬ್ಬಸ ಜ್ವರ, ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು.

ಪರ್ಮಾಸನ್ ಪ್ರೊಡಕ್ಸ್, (ಇಂಡಿಯಾ.)

ಬ್ರೆಂಚ್: ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್, 566, ಲೇಮಿಂಗ್ಟನ್ ರೋಡ್ ಮುಂಬಯಿ.

ಸಿ. ವಿ ಕಾಮತ್, ಒಸ್ಟಿಯೋಪತಿ ಎಂಡ್ ಇನ್ಸೆನಿಟಿ, ಎಕ್ಸ್‌ಪರ್ಟ್ ಮಾರ್ಕೆಟ್ ರೋಡ್, ಉಡುಪಿ

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in. — Watches, Clocks, Timepieces, Rolled Gold Jewellery & Sporting Materials etc,



Stockists of. West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones.

Japan 8 Inch Octegon	Rs. 6	0	0
„ 8 „ Regulator	„ 6	12	0
„ 10 „ Octegon	„ 6	8	0
„ 10 „ Regulator	„ 7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಷ್ಟು ಸದಾ ಸಿದ್ಧವಿರುವುವು. ವಾಚ, ಗಡಿಯಾರ, ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ, ಮಂಗಳೂರು

ಹೊಸ ವರ್ಷದ ರಿಯಾಯಿತಿ

ರಾಸ್ಕೋಪ್ ಲಿವರ್ ರೀಸ್ಟ್ ವಾಚುಗಳು.

(೫ ವರ್ಷಗಳ ಅಖಂಡ ಗ್ಯಾರಂಟಿ)



ರಜತ (ಬೆಳ್ಳಿ) ವರ್ಣದ ಕರಡಿಗೆ ರಾಸ್ಕೋಪ ಚಲನಾಕ್ರಮದ ಅತ್ಯಾಧುನಿಕ ಮಾದರಿಯ ಆಕೃತಿ ಘಟ್ಟಿಮುಟ್ಟಾದ ಯಂತ್ರ ಸಾಮಗ್ರಿಗಳಿಂದ ಕೂಡಿದುದರಿಂದ ತಪ್ಪಿಲ್ಲದ ಸಮಯವನ್ನು ಕೊಡುತ್ತದೆ ಹೊಸ ವರ್ಷದ ಮಾರಾಟಕ್ಕಾಗಿ ಅಗಾಧ ರಿಯಾಯಿತಿ ದರಗಳ

ಉರುಟಾದ ನಿಕ್ಕಲ್ ಕೇಸ್ ಇದ್ದುದಕ್ಕೆ	ರೂ. 3-6-0
ಉರುಟಾದ ಬಂಗಾರವರ್ಣದ ಕೇಸ್ ಇದ್ದುದಕ್ಕೆ	ರೂ 4-10-0
ಚೌಕ ಮತ್ತು ಆಯತ ಆಕಾರಗಳಿಗೆ	
ಕ್ರೋಮಿಯಂ ಕೇಸ್ ಇದ್ದುದಕ್ಕೆ	ರೂ 5-10-0
ಬಂಗಾರದಂಥಾ ಕೇಸ್ ಇದ್ದುದಕ್ಕೆ	ರೂ 6-10-0
ಹತ್ತು ವರ್ಷದ ಗ್ಯಾರಂಟಿ	
ರೋಲ್ಡ್‌ಗೋಲ್ಡ್ ಕೇಸ್ ಇದ್ದುದಕ್ಕೆ	ರೂ 11-8-0
9 ಕೆರೆಟ್ ಬಂಗಾರ ಕೇಸ್ ಇದುದಕ್ಕೆ	ರೂ 22-8 0

3 ವಾಚುಗಳನ್ನು ತರಿಸುವವರಿಗೆ ಟಪ್ಪಾಲು ಖರ್ಚು ಮುಫತ್ತಾಗಿ ಬಿಡಲಾಗುತ್ತದೆ

ವಾಚುಗಳು ಚೆನ್ನಾಗಿ ತೋರದಿದ್ದಲ್ಲಿ, ಹಣ ವಾಪಾಸು ಮಾಡುತ್ತೇವೆ

ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಿಂದಲೇ ಬರೆಕೊಳ್ಳಿ —

Modern Trading Co
119 urendianath Banerjee Road,
CALCUTTA.

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ್ ಕಟ್ಟಿನ, ಸುಪೀರಿಯರ ಟಿಂಟ್ಟಿನ ಕಳೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ.

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಶಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚಂಟ್,
ಬಡಗುಪೇಟೆ, ಉಡುಪಿ.

ಲಿವರ್ ವಾಚುಗಳು,

ಒಂದು ವಾರದ ತನಕ ಪರೀಕ್ಷೆಗಾಗಿ ನಿಮ್ಮಲ್ಲಿ ಇಟ್ಟುಕೊಳ್ಳಿ

ನಮ್ಮ ಈ ಗಡಿಯಾರವು ಇದರ ನಾಲ್ಕರಷ್ಟು ಬೆಲೆಯಿರುವ ವಾಚುಗಳಷ್ಟೆ ಬಾಳುವಿಕೆಯುಳ್ಳದ್ದು ಕಮ್ಮಿ ಬೆಲೆಯ ಲಿವರ್ ರಿಸ್ಟ್ ವಾಚುಗಳು 5 ವರ್ಷಗಳ ಅಖಂಡ ಗ್ಯಾರಂಟಿ ಕೊಡುತ್ತೇವೆ ಗ್ಯಾರಂಟಿ ತೃಪ್ತಿಯನ್ನೂ ಕೊಡುತ್ತದೆ ಸುಂದರವಾಗಿಯೂ ಚಿಕ್ಕದಾಗಿಯೂ, ಇರವುದಲ್ಲದೆ ಶ್ರೇಷ್ಠವಾದ ಲಿವರ್ ಯಂತ್ರ ಚಲನಾಕ್ರಮದಿಂದ ಕೂಡಿದ್ದಾಗಿರುತ್ತದೆ ಅನೇಕ ವರ್ಷಗಳ ವರೆಗೆ ರಿಪೇರಿ ಅವಶ್ಯಕತೆ ಇಲ್ಲದೆ ಬಾಳುವಿಕೆ ಬರುತ್ತದೆ ಮತ್ತು ಒಂದು ಸೆಕುಂಡಿಗೆ ತಪ್ಪದಂತೆ ಕಾಲವನ್ನು ತೋರಿಸುತ್ತದೆ

ರಿಯಾಯಿತಿ ದರಗಳು

ನಿಕ್ಕಲ್ ಕೇಸಿನ ರಿಸ್ಟ್‌ವಾಚು...	ರೂ 3-4 0
„ „ , ಶ್ರೇಷ್ಠವಾದುದು	„ 4-8-0
ಬಂಗಾರ ಗಿಲ್ಟಿನ ಶ್ರೇಷ್ಠವಾದ ಕೇಸುಳ್ಳದ್ದು	5-12-0
ಬಂಗಾರ ಗಿಲ್ಟ್ ಕೇಸುಳ್ಳ ಸುಂದರವಾದದ್ದು	5 12-0
ನಿಕ್ಕಲ್ ಕೇಸುಳ್ಳ ಆಯತಾಕಾರವುಳ್ಳ ಶ್ರೇಷ್ಠವಾದ ವಾಚು	5-0-0
ಬಂಗಾರ ಗಿಲ್ಟಿನ ಆಯತಾಕಾರದ್ದು	7-4-0
ಪಾಕೆಟ್ ವಾಚು	3-0-0
ಟೈಂಪೀಸು	2-8-0

ಟಪ್ಪಾಲು ಖರ್ಚು ಅಣೆ 7 ಪ್ರತ್ಯೇಕ

ಒಂದೇ ಸರ್ತಿ 3 ವಾಚುಗಳಿಗೆ ಆರ್ಡರು ಕೊಡುವವರಿಗೆ ಟಪ್ಪಾಲು ಖರ್ಚು ಇಲ್ಲ.

ಈ ವಿಳಾಸಕ್ಕೆ ಬರೆಯಿರಿ —

ಸೌತ್ ಇಂಡಿಯ ಎಕ್ಸ್‌ಪೊರ್ಟ್ ಏಜನ್ಸಿ,
5 ಅಪ್ಪರ್ ಚಿಟ್ಟ್‌ಪೂರ್ ರೋಡ್ ಸ್ಟ್ರೀಟ್,
ಪೋಸ್ಟು ಕಲ್ಕತ್ತಾ.

Whenever you require the service of

PAINTERS

Please call on or write to:—

Simon & Co.,
Painters,
Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸೈನ್ ಬೋರ್ಡು ಇತ್ಯಾದಿಗಳನ್ನೂ

ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

ಇಂಗ್ಲಾಂಡಿನಲ್ಲಿ ಯುದ್ಧ ಭೀತಿ!

ಇನ್ನೊಂದು ಯುದ್ಧವು ಅತೀ ಭೀಕರ ರೂಪವನ್ನು ತಾಳುವುದೆಂದು ಸಂಪೂರ್ಣ ಇಂಗ್ಲಾಂಡಿಗೆ ಭೀತಿಯುಂಟಾಗಿದೆ ನಗರಗಳು ಬರೇ ೨ ನಿಮಿಷಗಳಲ್ಲಿ ಸಂಪೂರ್ಣ ನಾಶವಾಗುವ ಸಂಭವಗಳು ಉಂಟಾಗಬಹುದಂತೆ. ಅದಕ್ಕಾಗಿ, ಯುದ್ಧ ಸಂಭವದಲ್ಲಿ ಜನರು ತಮ್ಮನ್ನು ರಕ್ಷಿಸಿಕೊಳ್ಳುವರೆ ಅನೇಕ ತರದ ಉಪಾಯಗಳನ್ನು ಕಂಡುಹಿಡಿದಿದ್ದಾರೆ ಇನ್ನೂ ಹೊಸ ಯೋಜನೆಗಳನ್ನು ಕಂಡುಹಿಡಿಯುವ ಪ್ರಯತ್ನಗಳು ನಡೆಯುತ್ತಾ ಇವೆ ಅನೇಕ ತರದ ವಿಷಕರ ಗೇಸುಗಳನ್ನು ಬೀರುವ ಬಾಂಬುಗಳು, ಆಧುನಿಕ ಯುದ್ಧ ವಿಮಾನಗಳ ಇತ್ಯಾದಿಗಳಿಂದ ಈ ಭಾವಿಯ ಯುದ್ಧವು ಅತಿ ಭಯಂಕರವೆನಿಸುವುದು ಮುಂಚಿನ ಮಹಾಯುದ್ಧವು ೪ ವರ್ಷಗಳ ಸಮಯ ನಡೆದಿತ್ತಾದರೆ, ಈ ಸಲದ ಯುದ್ಧವು ಬರೇ ಒಂದೆರಡು ತಿಂಗಳುಗಳಲ್ಲೇ ಕೊನೆಗೊಳ್ಳಬಹುದು ಕಾರಣ ನವೀನ ತರದ ಭಯಂಕರ ಯುದ್ಧೋಪಕರಣಗಳಿಂದ ಇದು ಸಾಧ್ಯವು ಆದುಕಾರಣದಿಂದಲೇ ಪಾಶ್ಚಾತ್ಯದ ಪ್ರಭುತ್ವದ ಜನಾಂಗಗಳು ಯುದ್ಧವನ್ನು ತಪ್ಪಿಸುವರೆ ಶಾಂತಿಪ್ರಿಯರಾಗಿರುವರು

ಜನರು, ಯುದ್ಧ ಸಮಯದಲ್ಲಿ ಹೇಗೆ ವರ್ತಿಸಬೇಕು, ರಕ್ಷಣೆಗಾಗಿ ಯಾವ ಬಗೆಯ ಉಪಾಯಗಳನ್ನು ನಡೆಸಬೇಕು ಎಂಬುಗರ ಕುರಿತು ಪ್ರಚಾರವು ಈಗ ಇಂಗ್ಲಾಂಡಿನಲ್ಲಿ ಮತ್ತು ಯುರೋಪ್ಯದ ಇತರ ದೇಶಗಳಲ್ಲಿ ನಡೆಯುತ್ತಿದೆ ಮುಂದಿನ ಯುದ್ಧಕ್ಕಾಗಿ ಬ್ರಿಟಿಷ ಸರಕಾರದವರು ೪೦೦ ಮಿಲಿಯ ಪವನುಗಳ ಒಂದು ಮಹಾ ಸಾಲವನ್ನು ಕರೆದಿರುವರು ಆಧುನಿಕ ಯುದ್ಧಕ್ರಮಗಳ ಎದುರು ಯಾವತ್ತು ಬಗೆಯ ರಕ್ಷಣೋಪಾಯಗಳು ವ್ಯರ್ಥವೆಂದು ಲಂಡನಿನ ಪೋನ್ ಬುಲ್ ಪತ್ರಿಕೆಯ ರೀತಿ

ಆಫ್ರಿಕಾದಲ್ಲೂ ಯುದ್ಧ ಸಿದ್ಧತೆಗಳು

ದಕ್ಷಿಣ ಆಫ್ರಿಕಾವು ಬ್ರಿಟಿಷ ಸಾಮ್ರಾಜ್ಯದಿಂದ ಹೊರಗಾಗುವ ಸಂಭವದಲ್ಲಿ ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಸಿದ್ಧತೆಗಳನ್ನು ಮಾಡುತ್ತಿದೆ

ಯುದ್ಧಸಿದ್ಧತೆಗಳನ್ನು ಮಾಡಲು, ಒಂದು ಕಾರ್ಯಕಾರೀ ಮಂಡಳವು ರಚನೆಯಾಗಿದೆ ಎಲ್ಲಾ ತರದ ಯುದ್ಧೋಪಕರಣಗಳನ್ನು ಸಿದ್ಧಪಡಿಸುವ ಕೈಗಾರಿಕೆಗಳನ್ನು ಹೊಂದಿಸುವ ಆಲೋಚನೆಗಳ ನಡೆಯುತ್ತಿದ್ದಾವೆ ಕಾರ್ಖಾನೆಗಳನ್ನು ಸ್ಥಾಪಿಸುವ ಕೆಲಸವು ಶೀಘ್ರದಲ್ಲೀ ನಡೆಯುವುದೆಂದು ತಿಳಿದುಬರುತ್ತದೆ

ದಕ್ಷಿಣಾಫ್ರಿಕವು ಬ್ರಿಟಿಷ ಸರಕಾರದಿಂದ ಬಹಳ ಸುಲಭ ದರದಲ್ಲಿ ೧೦೦ ವಿಮಾನಗಳನ್ನು ಪಡಕೊಂಡಿದೆ ವಿಮಾನ ೧ಕ್ಕೆ ಸರಾಸರಿಯಲ್ಲಿ ಬರೇ ೩೨೦೦ ರೂಪಾಯಿಗಳ ಬೆಲೆ ಹಿಡಿಯಲಾಗಿದೆ

ಗವರ್ನರರು ಮತ್ತು ಮಂತ್ರಿಗಳು

ನೂತನ ಇಂಡಿಯಾ ಆಕ್ಟಿನಲ್ಲಿ ಗವರ್ನರರು, ಪ್ರಾಂತ್ಯದ ಸರಕಾರದ ಆಡಳಿತೆ ವಿಚಾರದಲ್ಲಿ ತಮ್ಮದೆ ಇಷ್ಟಾರ್ಥಗಳನ್ನು ಉಪಯೋಗಿಸಬಹುದೆಂದಿದೆ. ಆದರೆ, ಈ ವಾಕ್ಯದ ಅರ್ಥವು ಒಂದು ಪ್ರಾಂತ್ಯದ ಗವರ್ನರರಿಗೆ ಸರಿಯಾಗಿ ಆಗದಿದ್ದುದರಿಂದ, ಅವರು ಕೆಳಗಿನ ರೀತಿ ವರ್ತಿಸಿದರು.

ಒಂದು ಪ್ರಾಂತ್ಯದಲ್ಲಿ ಎಡ್ವೊಕೇಟ್ ಜನರಲರ ನೇಮಕವಾಗಲಿತ್ತು. ಕೆಲವು ಹೆಸರುಗಳನ್ನು ಅವರು ಆರಿಸಿದ್ದರಂತೆ. ಆದರೆ, ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕ ಸ್ಥಾನಗಳನ್ನು ಪಡೆದುದರಿಂದ, ಗವರ್ನರರು ತಮ್ಮ ಈ ಮುಂಚಿನ ಆಲೋಚನೆಗಳನ್ನು ಬಿಟ್ಟು ಮಂತ್ರಿ ಮಂಡಲವು ರಚನೆಯಾದ ನಂತರ ಅ ನೇಮಕವನ್ನು ಮಾಡಬೇಕೆಂದು ನಿರ್ಧಾರ ಮಾಡಿರುವರು ಅಂದರೆ, ಗವರ್ನರರಿಗೆ ಸ್ವೇಚ್ಛಾಪರ ವರ್ತಿಸಲು ಅಧಿಕಾರವಿದ್ದರೂ, ಅವರು ಮಂತ್ರಿ ಮಂಡಲವನ್ನು ವಿಚಾರಿಸುವುದುತ್ತಮ ಎಂಬುದಾಗಿ ನೂತನ ಆಕ್ಟಿನ ಅಭಿಪ್ರಾಯವಾಗಿರಬಹುದು, ಎಂಬ ಅಭಿಪ್ರಾಯವು ಈ ಮೇಲಿನ ಗವರ್ನರರಿಗೆ ಆಗಿರಬಹುದು

'ಜರ್ಮನಿಯನ್ನು ಎದುರಾಯಿಸಲು ಸಿದ್ಧರಾಗಿರಿ'

"ರಷ್ಯಾ ಮತ್ತು ಫ್ರಾನ್ಸು ದೇಶದಿಂದ ಸಹಕಾರವನ್ನು ಪಡೆದು ಜರ್ಮನಿಯನ್ನು ಎದುರಾಯಿಸಲು ಸಿದ್ಧರಾಗಿರಿ' ಎಂಬುದಾಗಿ ಸೌಮ್ಯವಾಧ ಪ್ರಭುಗಳಾದ ಲೊಡ್ದ್ ಮಾರ್ಲೆಯವರು ಲಂಡನಿನಲ್ಲಿ ಒಂದೆಡೆ ಭಾಷಣ ಮಾಡಿದರು

"ರಷ್ಯಾ, ಫ್ರಾನ್ಸು ಮತ್ತು ಬ್ರಿಟನಿನ ಸೇನಾಮ ದಳಗಳ ನಾಯಕತ್ವವನ್ನು ಫ್ರೆಂಚ್ ಸೇನಾಪತಿಗೆ ಕೊಡಬೇಕು, ನೌಕಾ ಮಂಡಲದ ನಾಯಕತ್ವವು ಬ್ರಿಟನಿಗೆ ಕೊಡಬೇಕು, ವಾಯು ಬಲದ ನಾಯಕತ್ವವನ್ನು ರಷ್ಯಾದೇಶಕ್ಕೆ ಕೊಡಬೇಕು ಹೀಗಾದರೆ ನಮ್ಮ ಎದುರು ನಿಲ್ಲುವ ಜನಾಂಗವು ಯಾವುದು ಇದೆ? ಪಸಿಯಪ್ಪರನ್ನು ಎದುರಾಯಿಸಲು ಇದೇ ಅತ್ಯುತ್ತಮವಾದ ಐಕ್ಯವು ಜರ್ಮನಿಯನ್ನು ಎದುರಾಯಿಸಲು ಬ್ರಿಟನು, ಫ್ರಾನ್ಸ್, ರಷ್ಯಾದೇಶದ ಸಂಗ್ರಾಮಾಧಿಕಾರಿಗಳು ಬೇಗನೇ ಪರಿಷತ್ತು ಜರಗಿಸಿ ಆಲೋಚಿಸಬೇಕಾಗಿದೆ".

ಸಕ್ಕರೆಯ ಮೇಲೆ ಅಬಕಾರಿ ಸುಂಕ

ಇಂಡಿಯಾ ಸರಕಾರದ ನೂತನ ಬಜೆಟು ಸಿದ್ಧವಾಗಿ, ಉಂಟಾಗಬಹುದಾದ ನಷ್ಟಗಳನ್ನು ಭರ್ತಿ ಮಾಡುವರೆ ಕೆಲವು ಸುಂಕಗಳನ್ನು ಹೊರಿಸಬೇಕೆಂದಾಗಿದೆ ಅವುಗಳಲ್ಲಿ ದೇಶೀ ಸಕ್ಕರೆಯ ಮೇಲೆ ಅಬ್ಕಾರಿ ಸುಂಕಹೊರಿಸುವುದು ಒಂದಾಗಿರುತ್ತದೆ ಈ ಮೊದಲು, ೪ ಮಣಗಳಿಗೆ ರೂ ೧-೩-೦ ಇದ್ದ ಸುಂಕವನ್ನು ರೂ ೨ಕ್ಕೆ ಏರಿಸಲಾಗಿದೆ ಮೊದಲೇ ವಿದೇಶೀ ಸಕ್ಕರೆಯೊಡನೆ ಪ್ರತಿಸ್ಪರ್ಧೆಗೊಳಗಾಗಿ ನರಳುತ್ತಿರುವ ಹಿಂದೂದೇಶದ ಸಕ್ಕರೆ ಕೈಗಾರಿಕೆಯ ಮೇಲೆ ಇದೊಂದು ಹೊಸ ಹೊರೆಯುಂಟಾಗಿದೆ ಸರಕಾರದವರು ಆ ಕುರಿತು ಪರ್ಯಾಲೋಚಿಸುವರೆ, ವಿನಂತಿಸಲು, ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿ ಮಂಡಳವೊಂದು ಇಂಡಿಯಾ ಸರಕಾರದ ಆರ್ಥಿಕ ಸಚಿವರಾದ ಸರ್ ಜೇಮ್ಸ್ ಗ್ರಿಗ್ಗರನ್ನು ಕಾಣುವರಂತೆ

ಆಹಾರದ ವಿಚಾರ ನಿರ್ಲಕ್ಷ್ಯವಾಗಬಾರದು.

ಕಳೆದ ಮಹಾ ಯುದ್ಧದ ಕಾಲದಲ್ಲಿ ಬ್ರಿಟನಿನ ಮುಖ್ಯ ಮಂತ್ರಿಗಳಾಗಿದ್ದ ಲ್ಯಾಡ್ ಜಾರ್ಜರು, ತಮ್ಮ ದೇಶಕ್ಕೆ ಈ ಕೆಳಗಿನ ಎಚ್ಚರಿಕೆಯನ್ನು ಮಾಡಿರುವರು

"ಕಳೆದ ಮಹಾ ಯುದ್ಧದ ಸಮಯ, ಇಂಗ್ಲಾಂಡಿನ ಹೆಚ್ಚಿನ ಭೂಮಿಯ ಮೇಲೆ ಬೇಸಾಯ ನಡೆಯುವುದು ನಿಂತುಹೋದುದರಿಂದ ಯುದ್ಧದಿಂದಾಗಿ, ಆಹಾರವು ದೇಶದ ಹೊರಗಿನಿಂದ ಬರಲು ಸರಿಯಾದ ಅವಕಾಶಗಳಿಲ್ಲದುದರಿಂದ, ಸಮಸ್ತ ಬ್ರಿಟನು ಕೆಲ ಕಾಲ ನರಳಬೇಕಾಯಿತು ಬ್ರಿಟಿಷ ಸರಕಾರವು ಯುದ್ಧಸಿದ್ಧತೆಗಾಗಿ ಇಷ್ಟೊಂದು ಹಣ ವ್ಯಯಿಸುತ್ತಿರುವಾಗ, ಆಹಾರದ ಪರ್ಯಾಡಿನ ಕುರಿತು ಸರಿಯಾದ ವ್ಯವಸ್ಥೆ ಮಾಡಬೇಕಾಗಿದೆ ಆಹಾರದ ಬೆಸೆಯಿಂದಲೇ ಬ್ರಿಟನಿನ ಬೆನ್ನು ಮುರಿಯುವ ಸಂಭವಗಳುಂಟಾಗಬಹುದು. ಆದುದರಿಂದ ನಮ್ಮ ಸರಕಾರವು ಆಹಾರ ಸಮಸ್ಯೆಯ ಕುರಿತು ಒಳ್ಳೇ ಆಲೋಚನೆಯನ್ನು ಮಾಡಬೇಕಾಗಿ ನನ್ನ ವಿನಂತಿ".

ರಷ್ಯಾದೇಶವು ಯುದ್ಧಕ್ಕೆ ಸಿದ್ಧವಿದೆ

ಪೌರ್ವಾತ್ಯದಲ್ಲಿ ಜಪಾನಿಗೂ ರಷ್ಯಾಕ್ಕೂ ಬಹಳ ದಿನಗಳಿಂದ ಕಿತ್ತಾಟ ನಡೆಯುತ್ತಿತ್ತಷ್ಟೆ ಈಗ ಸ್ಥಿತಿಯು ವಿಪರೀತ ಹೋಗಿರುತ್ತದೆಂದೂ, ರಷ್ಯಾ ಜಪಾನು ಯುದ್ಧವು ಬೇಗನೇ ಪ್ರಾರಂಭವಾಗುವುದೆಂದು ಜಪಾನಿಯ ಸಂಗ್ರಾಮಾಧಿಕಾರಿಗಳು ಹೇಳುತ್ತಿದ್ದರೆಂದೂ ಬಲವಾದ ವಾರ್ತೆ ಬಂದಿದೆ

ಈ ಯುದ್ಧಕ್ಕೆ ರಷ್ಯಾದೇಶದಲ್ಲಿ ಏಕಾಧಿಪತಿ ಸ್ಟಾಲಿನ್ನನ ನಾಯಕತ್ವದಲ್ಲಿ ಎಲ್ಲವು ಸಿದ್ಧವಾಗಿದೆ ಜಪಾನೀಯರು ರಷ್ಯದ ಪ್ರಚಂಡ ಸೇನಾಮಂಡಳವನ್ನೂ ನೌಕಾ ಮಂಡಳವನ್ನೂ ವಿಮಾನ ತಂಡಗಳನ್ನೂ ಎದುರಾಯಿಸಬೇಕಾಗುವುದು

ಮಿ। ಲ್ಯಾಡ್ ಜೋರ್ಜರವರು

ಧರ್ಮಕ್ಕೆ ಜಯವಾಯಿತು

ಸೊವಿಯಟ್ ರಶ್ಯಾದಲ್ಲಿ ಧರ್ಮಗಳಿಗೆ ಎಡೆಯಿರಲಿಲ್ಲ ದೇವವಿರೋಧ ತಳವಳವು ಕೆಲ ವರ್ಷಗಳಿಂದ ನಡೆದುಬಂದಿದ್ದು, ಬಲವನ್ನು ಹೊಂದಿತ್ತು ಆದರೆ, ನೂತನ ರಷ್ಯ ಆಕ್ಟಿನಲ್ಲಿ ಧರ್ಮದ ಕುರಿತು ಯಾವತ್ತೂ ನಿರ್ಬಂಧ ಕಟ್ಟುಗಳು ಇಲ್ಲದುದರಿಂದ, ಹೆಚ್ಚಿನ ಜನರ ಮನಸ್ಸುಗಳು ಈಗ ಧರ್ಮ ದೇವರ ಮತ್ತು ಇಗರ್ಜಿಗಳ ಕಡೆಗೆ ತಿರುಗಿರುತ್ತದೆ ಜನರಿಗೆ ಆರಾಧಿಸಲು ಸ್ವಾತಂತ್ರ್ಯವಿರುವುದೆಂದು ನೂತನ ಆಕ್ಟಿನಲ್ಲಿದೆ

ಸಕ್ಕರೆ ಕಾರ್ಖಾನೆಗಳು ಮುಚ್ಚಲ್ಪಡುವವೆ?

ಸಂಯುಕ್ತ ಪ್ರಾಂತ್ಯದ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು, ಸಕ್ಕರೆಯ ಮೇಲೆ ಹೊರಿಸಲಾದ ಹೊಸ ಅಬಕಾರಿ ಸುಂಕವನ್ನು ಪ್ರತಿಕೂಲಿಸುವರೆ ಇದೇ ತಿಂಗಳ ೩೧ ನೆಯ ತಾರೀಕಿನೊಳಗಾಗಿ ಕಾರ್ಖಾನೆಗಳನ್ನು ಮುಚ್ಚಬೇಕಾಗಿ ನಿರ್ಧಾರ ಮಾಡಿರುವರು. ಅಂದರೆ, ಸದ್ಯದಲ್ಲಿ ಸಾಧಾರಣ ೪೦ ಕಾರ್ಖಾನೆಗಳು ಮುಚ್ಚಲ್ಪಡುವವು. ಹೊಸ ಸುಂಕದ ದೆಸೆಯಿಂದ ಬೆಲ್ಲವನ್ನು ಕೂಡಾ ತಯಾರಿಸುವದು ಲಾಭಕರವಲ್ಲವಾದುದರಿಂದ, ಕಬ್ಬನ್ನು ಗದ್ದೆಗಳಲ್ಲೇ ಧ್ವಂಸಪಡಿಸಬೇಕಾಗಿ ಬರಬಹುದೆಂಬ ಭೀತಿಯುಂಟಾಗಿದೆ.

ಸ್ಪೈಯಿನ್ ದಂಗೆ

ಸ್ಪೈಯಿನ್ ದಂಗೆಯು ಮುಂದುವರಿಯುತ್ತಿದೆ ಇತರ ಜನಾಂಗಗಳೂ ತಟಸ್ಥಭಾವ ಇತ್ಯಾದಿ ವಿಚಾರಗಳ ಮೇಲೆ ಆಲೋಚನೆಗಳನ್ನು ಮಾಡುತ್ತಿರುವರಷ್ಟೆ ದಂಗೆನಾಯಕನಾದ ಜನರಲ್ ಫ್ರೆಂಕೋ ಇವನು ಇಟೇಲಿ ಇತ್ಯಾದಿ ಪೆಸಿಯಷ್ಟ ಜನಾಂಗಗಳಿಂದ ಸಹಾಯವನ್ನು ಪಡೆದು ತನ್ನ ಸಾಹಸವನ್ನು ನಡೆಸುತ್ತಿದ್ದು, ಈಗ ಸಂಪೂರ್ಣ ಜಯಶಾಲಿಯಾಗುವ ಸಂಭವಗಳು ಉಂಟಾಗಿದೆ ದಂಗೆಖೋರರು ಸ್ಪೈಯಿನ ಹೆಚ್ಚಿನ ಪ್ರದೇಶಗಳನ್ನು ಈ ಮೊದಲೇ ಹಿಡಿದಿದ್ದು, ಈಗ ಮೆಡ್ರಿಡ್ ನಗರಕ್ಕೆ ಬಲವಾದ ಮುತ್ತಿಗೆ ಹಾಕಿರುವರು ಸರಕಾರಕ್ಕೆ ಅನೇಕ ಕಡೆಗಳಲ್ಲಿ ಸೋಲು ದೊರಕಿರುತ್ತದೆ ಇಷ್ಟರ ತನಕ ಬಹಳ ಸಾಹಸದಿಂದ ಮೆಡ್ರಿಡನ್ನು ರಕ್ಷಿಸಿದ ಸರಕಾರ ಸೈನ್ಯದಳವು ದಂಗೆಖೋರರ ಧಾಳಿಗೆ ಸೋತಿರುವರಂತೆ ಆದರೂ ಅವರು ತಮ್ಮ ಕೊನೆಯ ಪ್ರಯತ್ನಗಳನ್ನು ಮಾಡಲಿರುವರಂತೆ

ಚಿಲ್ಲಿಯಲ್ಲಿ ಕಾಂಗ್ರೆಸ್ಸಿಗಾಗಿ ಜನಾಧಾರ ದೊರಕುವಂತೆಯೂ, ಕಾಂಗ್ರೆಸ್ಸಿನಲ್ಲಿರುವ ಭಿದ್ರಗಳನ್ನು ತೆಗೆದುಹಾಕುವರೆ, ಕದಲೂರಿನ ಶ್ರೀ ಅಪ್ಪಾಜಿರಾಯರೆ ಬವರು ೨೧ ದಿನಗಳ ಉಪವಾಸಾಚರಣೆಯನ್ನು ಪ್ರಾರಂಭಮಾಡಿರುವರು.

CHEAPES
VALUE BACK IF ...
DECENT, STRONG, ACCURATE ... WATCHES, GTD 3 YEARS ...
NICKEL 2/14/- RADIUM DIAL
GOLDEN 3/14/-, SQUARE NICKEL ...
GOLDEN 4/14/-, RECTANGULAR ...
4/-, GOLDEN ... VERY ...
NICKEL ..., GOLDEN ... POST ...
... FREE ... 108 HANDKTOLA ...

ಕೊಚ್ಚಿನ್ ಭರಣಿಗಳನ್ನೇ



ಕೊಂಡುಕೊಳ್ಳಿರಿ.

ಪ್ರತಿ ಮನೆಗಳಲ್ಲಿಯ ಅಂಗಡಿಗಳಲ್ಲಿಯೂ ಉಪಯೋಗಿಸಬಹುದಾದ ವಿಶೇಲರರಲ್ಲಿ

ಸುಂದರ ಹಾಗೂ ಉತ್ತಮವಾದ ಭರಣಿಗಳು.

ಮುಖ್ಯ ಏಜಂಟರು. ಕೆ. ರಾಮ ನಾಯಕ್, ಜನರಲ್

ಕಾಸರಗೋಡು, ಮತ್ತು ಮಂಗಳೂರು, ಎಸ್ಕೆ.

ಅನುಕ್ರಮಣಿಕೆ

ಸೂಚನೆಗಳು
ಪರಿಷತ್ ಚುನಾವಣೆಗಳು
ಶ್ರೀ. ಸಾಧು. ಬಿ. ಎಲ್. ಕಾರಣ್ಯತೀರ್ಥರವರ ಭಾಷಣದ ಸಾರ
ವಿವಿಧ ಸಮಾಚಾರಗಳು
ಗ್ರಹಣ
ವೈಸ್ರಾಯರ ಭಾಷಣ
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ

ತಾ ೧೯ನೇ ಶುಕ್ರವಾರ ಮಾರ್ಚ ೧೯೩೭

ಸ್ವದೇಶಾಭಿಮಾನಿ.

ವೈಸ್ರಾಯರ ಭಾಷಣ.

ದೇಶಸೇವೆಗೆ ಅನುಕೂಲತೆಗಳು.

ಕೌನ್ಸಿಲ್ ಒಫ್ ಸ್ಟೇಟ್ (ವರಿಷ್ಠ ಸಭಾ) ಅಧ್ಯಕ್ಷರು ವೈಸ್ರಾಯರಿಗೊಂದು ಔತಣಕೊಟ್ಟರು. ಆ ಸಂದರ್ಭದಲ್ಲಿ, ೧೯೩೫ನೆ ಇಸವಿಯಲ್ಲಿ ಉಂಟಾದ ಹೊಸ ರಾಜ್ಯಾಂಗ ರಚನಾ ಕಾನೂನಿನಲ್ಲಿ ವೈಸ್ರಾಯರು ಅಪಾರಶ್ರದ್ಧೆಯಿಂದ ವರ್ತಿಸಿದ್ದುದರ ಲಕ್ಷಣಗಳು ತೋರುತ್ತವೆಂದೂ, ಆ ಕಾನೂನು ಸಧ್ಯದಲ್ಲೇ ಜ್ಯಾರಿಗೆ ಬರುವಂತೆ ಅವರ ಆಳಿಕೆಯಲ್ಲೇ ನಿರ್ದೇಶವಾಗಿರುವ ಕಾರಣ, ಆ ಕಾನೂನನ್ನು ಮುರಿಯಲೆತ್ನಿಸುವವರೂ ಇದ್ದಾರೆಂಬ ಮಾತೂ ಕೇಳ ಬರುತ್ತಿರುವುದಾದರೂ ಅಂತಹ ಬೆದರಿಕೆಗೆ ಅವಕಾಶವಿಲ್ಲೆಂಬ ಭರವಸೆಯೂ ಇದೆಯೆಂದೂ ತನ್ನ ೩೦ ವರ್ಷಗಳ ಅನುಭವವು ಕಂಡುಗೆರುವ ಶಾಸನದಿಂದಲಾದರೂ ಮುನ್ನಡೆಗೆ ಸಹಾಯಕವಾಗಿರುವ ಸಾಧನಗಳನ್ನು ನಾವು ಮಾಡಿಕೊಳ್ಳಬಹುದೆಂಬ ಪರಿಣಾಮವನ್ನು ಸೂಚಿಸಲೆಡೆಕೊಟ್ಟಿರುವುದೆಂದೂ ವೈಸ್ರಾಯರಿಗೆ ಸೂಚಿಸಲಾಯಿತು. ಜನಸೇವೆಗಾಗಿಯೇ ಕಾಂಗ್ರೆಸ್ಸಿನ ಅಥವಾ ಇತರ ಕೂಟಗಳ ಮಂತ್ರಿಗಳು ಪ್ರಯತ್ನಿಸಬೇಕಾಗಿದೆಯೆಂದೂ ಅಧಿಕಾರಿಗಳಾಗಲಿ ನವುಕರರಾಗಲಿ ಈಗ ದೊರೆತಿರುವ ಅನುಕೂಲತೆಗಳನ್ನು ಹಾಳುಮಾಡಿಕೊಳ್ಳದೆ ಒಪ್ಪ ದೇಶಭಕ್ತನ ಮನಸ್ಸಿನಲ್ಲಿರುವಂತೆ ಉ ಧ್ಯೇಯಗಳನ್ನೇ ಸಾಧಿಸಬೇಕೆಂದೂ ಅಧ್ಯಕ್ಷ ದಾದಾಭಾಯಿಯವರು ವಿಶದರು. ಸ್ಥಳೀಯ ರಾಜ್ಯಗಳ ಪ್ರಭುತ್ವಯ ತೊರೆದು ಫೆಡರೇಶನಿಗೆ ಒಪ್ಪುವರೆಂದೂ ಇವರ ಆಸೆ.

ಸಂದರ್ಭದಲ್ಲಿ ವಿಜಯಶೀಲವಾಗಿ ಗ್ರೆಸು ಏನುಮಾಡುವುದು? ಅಧಿಕರಿಸುವುದೇ? ಪರಿಪೂರ್ಣವಾದ ದ ಗೆಲ್ದ ಕಾಂಗ್ರೆಸ್ಸಿನಲ್ಲಿ ದೋಷ ಮತ್ಸರವನ್ನಾಗಲಿ ಯಾರೂ ಸೋತವರು ಸುಮ್ಮನಸ್ಕ್ಯಕ್ರಮ ಕಾಂಗ್ರೆಸ್ಸಿನಿಂದ ಕಲಿಯುವವರಾಗಲಿ ವಿನೇ ಏಂದರೂ, ಅಧಿಕಾರವನ್ನು ಸ್ವೀಕರಿಸಿದರೆ, ಕಾಂಗ್ರೆಸ್ ಮಂತ್ರಿ ಗೌರವ ಕೀರ್ತಿಗಳನ್ನು ಕಾಪಾ ಶಾಸನವನ್ನು ಜ್ಯಾರಿಗೆ ತರುವ ಬ ವಿಶ್ವಾಸವಿದೆ. ದೇಶೋದ್ಧಾರ ಗಳಾಗಿರುವ ಅನುಕೂಲತೆಗಳನ್ನು ಶಾಸನವನ್ನು ಕಾದಿರುವ ರಿಗೆ ಈಗ ತಾನೆ ಸಂದರ್ಭ ರುವಾಗ, ಆ ಶಾಸನವನ್ನು ಲವಿಲ್ಲ. ಯಾವ ಪ್ರಾಂತ್ಯ ಕ್ಷಗಳಾಗಬಹುದೋ ಆ ಡುವುದು; ಆದರೆ ಸಂಪ ದಕ್ಕೆ ಪ್ರಗತಿ ಇರಲಾ

ರದು. ಹೀಗಿರುವುದರಿಂದ ಸರ್ವರೂ ಧ್ಯೇಯವನ್ನು ಮರೆತು, ಒಂದಾಬ್ಬೊಬ್ಬರನ್ನು ಅಳಿದು, ಒಂದಾಗಿ ರಾಜ್ಯಭಾರದಲ್ಲಿ ಸೇರಿ, ಬ್ರಿಟಿಷ ಸ್ವೀಕಥತ್ರದ ಆಶ್ರಯದಲ್ಲಿ ನಮ್ಮ ಜನ್ಮಭೂಮಿಯು ಉದ್ಧಾರಹೊಂದುವಂತೆ ಪ್ರಯತ್ನಿಸಲು ಭಗವಂತನು ನಡೆಸಿ ಕೊಡಲಿ ಎಂದೂ ಅವರು ಪ್ರಾರ್ಥಿಸಿಕೊಂಡರು.

ವೈಸ್ರಾಯರು ಈ ಸಂದರ್ಭದಲ್ಲಿ ಉತ್ತರವಾಗಿ ಹೇಳಿರುವ ಮಾತುಗಳಲ್ಲಿ, ಮುಂದಣ ರಾಜ್ಯಭಾರ ಕ್ರಮವು ಜ್ಯಾರಿಗೆ ಬರುವಾಗ ವರಿಷ್ಠ ಮತ್ತು ಪ್ರಾಂತಿಕ ಸರಕಾರಗಳ ಮನಸ್ಸಿನ ಆಳದಲ್ಲಿ ಅಡಗಿರುವ ಕೆಲವು ಭಾವನೆಗಳನ್ನು ತಿಳಿಸಿದಂತಾಗಿದೆ. ಇನ್ನು ಒಂದು ಪಕ್ಷದೊಳಗೇ ಹೊಸ ವ್ಯವಸ್ಥೆಯನ್ನು ರೂಢಿಗೆ ತರುವಾಗ, ಇಷ್ಟರ ತನಕ ಇರುತ್ತಿದ್ದ ಕ್ರಮವೆಲ್ಲ ಮಾಯವಾಗಿ ಈಗ ಇರುವ ಹನ್ನೊಂದೂ ಪ್ರಾಂತ್ಯಗಳು ತಮಗೆ ತೋಚಿದಂತೆ ಹೊಸ ದಾರಿಯಲ್ಲಿ ಮುನ್ನಡೆಯಲು ಅನುಕೂಲವಾಗುವುದು. "ಇಂತಹ ಸುಮುಹೂರ್ತದಲ್ಲಿ ವರಿಷ್ಠ ಅಥವಾ ಪ್ರಾಂತಿಕ ಸರಕಾರಗಳ ಅಣ್ಣರು ಪಕ್ಷಗಳನ್ನು ಗಣನೆಗೆ ತಾರದೆ, ಚುನಾವಣೆಗಳಲ್ಲಿ ಗೆದ್ದವರ ಕಡೆಗೆ ಹೇಗೊ ಹಾಗೆಯೇ ಸೋತವರ ಕಡೆಗೂ ಸಮದೃಷ್ಟಿಯನ್ನು ಬೀರುತ್ತ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವರು. ಈ ಕರ್ತವ್ಯವನ್ನು ನೆನಪಿನಲ್ಲೇ ಇಟ್ಟುಕೊಂಡಿರುವೆನು" ಎಂದು ವೈಸ್ರಾಯರೆಂದರು. ಗೆದ್ದವರು ಸೋತವರು ಎಂದು ಸರಕಾರವು ಅಷ್ಟು ವಾತ್ಸಲ್ಯವನ್ನಾಗಲಿ ಕನಿಕರವನ್ನಾಗಲಿ ಪ್ರದರ್ಶಿಸಬೇಕಾಗಿಲ್ಲ. ದೇಶ ಜನಾಂಗ ವಿಂಬಿವೇ ಸರಕಾರದ ವಾತ್ಸಲ್ಯಕ್ಕಾಗಲಿ ಕನಿಕರಕ್ಕಾಗಲಿ ಅರ್ಹವಾದುವು ಎಂದು ಎಲ್ಲ ಪ್ರಜಾಸತ್ತೆಯುಳ್ಳ ರಾಜ್ಯಗಳಲ್ಲಿ ಕಂಡುಬರವುದು.

ಪ್ರತಿಯೊಂದು ಪ್ರಾಂತಿಕ ಸರಕಾರವು ಸ್ವತಂತ್ರವಾಗಿ ತನ್ನ ಗಡಿಯೊಳಗೆ ನಿರ್ದಿಷ್ಟವಾದ ಜವಾಬುದಾರಿ ತಿಳಿದು ರಕ್ಷಿಪನ್ನಾಳಬೇಕಾಗಿದೆ. ಆ ಪ್ರಾಂತ್ಯದೊಳಗಿನವರ ಸದಿಚ್ಛೆಗಳಿಗೆ ಅನುಕೂಲವಾಗಿ ಆಳತಕ್ಕದು. ಕೇಂದ್ರ ಸರಕಾರವು ಪ್ರಾಂತಿಕ ಸರಕಾರವನ್ನು ಹೇಗೆ ನಡಿಸಬೇಕೆಂಬುದಕ್ಕೂ ಮೇರೆಯಿದೆ; ಇದನ್ನು ಕೇಂದ್ರಸರಕಾರವು ತಿಳಿದೇ ಇದ್ದು ಮೇರೆಯೊಳಗೇ ಕೆಲಸಮಾಡುವುದು. ಆದರೆ, ಈ ಹೊಸ ಕ್ರಮಗಳು ರೂಢಿಗೆ ಬರುವ ತನಕ ಸ್ವಲ್ಪ ತೊಡಕುಗಳೂ ಕಷ್ಟಗಳೂ ತೋರಬಹುದು. ಏಕೆಂದರೆ, ಹಳೆಯ ಕ್ರಮಗಳನ್ನು ತಿದ್ದಿ ಹೊಸ ಕ್ರಮಗಳು ರೂಢಿಗೊಳ್ಳಲು ಸಮಯವೂ ಬೇಕು. ಅಧಿಕ ಪರಿಶ್ರಮವೂ ತೀವ್ರವಾಗಿ ನಡಿಯತಕ್ಕದಷ್ಟೆ. ಆದರೆ ಹೆಚ್ಚಿನ ವಿಳಂಬವಾಗದಂತೆ ವೈಸ್ರಾಯರು ನೋಡುವರಾಗಿ ಮಾತಿತ್ತಿರುವರು.

"ಪ್ರಯೋಜನಕಾರಿಗಳಾದ ಉಪಕಾರಗಳನ್ನು ಸಮಾಜಕ್ಕೆ (ಜನತೆಗೆ) ಮಾಡಲೂ ಪ್ರಾಂತಿಕ ಸರಕಾರಗಳಿಗೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ಈಗ ಅನುಕೂಲತೆಗಳಿವೆ. ಇಂತಹ ಅನುಕೂಲತೆಗಳನ್ನು ಉತ್ಸುಕತೆಯಿಂದ ಸಾರ್ವಜನಿಕ ಪ್ರಯೋಜನಕ್ಕೆ ಬಳಸುವಂತೆ ಈಗ ವೋಟರರು ಚುನಾಯಿಸಿ ಕೊಟ್ಟವರಲ್ಲಿ ಇಚ್ಛೆಯಿದೆ ಎಂದು ವಿಶ್ವಾಸಪಡುತ್ತೇನೆ" ಎಂದು ವೈಸ್ರಾಯರೆನ್ನುವಾಗ, ಚುನಾವಣೆ ಹೊಂದಿದವರು ಶಾಸನವನ್ನು ಸರ್ವ ಜನಾನುಕೂಲತೆಗಾಗಿ ಪ್ರಯತ್ನಿಸಲು ಹಿಂದೆಗೆಯಲಾರರೆಂಬ ಭರವಸೆಯನ್ನೆ ಅವರು ಕಟ್ಟಿಕೊಂಡಿರುವುದರಿಂದ, ಅಧಿಕಾರವನ್ನು ಕಾಂಗ್ರೆಸು ವಹಿಸಿಕೊಂಡರೆ ಉತ್ತಮ, ಬಿಟ್ಟರೆ ಹಾನಿ ಎಂಬ ಸೂಚನೆಯನ್ನೂ ಮಾಡಿದಂತಾಗಿದೆ. ಇನ್ನೊಂದು ವಾರದೊಳಗೆ ಎಲ್ಲ ಪ್ರಾಂತ್ಯಗಳು ಏನೆಂದು ನಿರ್ಧರಿಸುವುವೊ ತಿಳಿಯಬಹುದು. ಬಹುಮತವುಳ್ಳ ಪಕ್ಷಗಳು ಅಲ್ಲಲ್ಲಿ ಅಧಿಕಾರ ನಿರ್ವಹಿಸದೆ ಇರಲಾರವು ಎನ್ನಬಹುದು.

ಪ್ರಾಂತ್ಯಗಳಲ್ಲಿ ಉಂಟಾಗುವ ಮಂತ್ರಿ

ಸ್ಫುಟವಿಚಾರಗಳು

ಮ್ಯುನಿಸಿಪಾಲಿಟಿ ಎಂದರೇನು?

ಒಂದೇ ಸಮಾಜದಂತೆ ಜೀವಿಸುವವಗೆ, ಈಗಣ ಸುಧಾರಿತ ಜೀವನದಲ್ಲಿ ಆಗತ್ಯ ತೋರುವ ಸಮಸ್ತ ಸೌಕರ್ಯಗಳನ್ನೂ ಉಂಟುಮಾಡಿಕೊಳ್ಳುವುದಕ್ಕಾಗಿರುವ ಸುವ್ಯವಸ್ಥಿತ ಸಂಸ್ಥೆಯೇ ಮ್ಯುನಿಸಿಪಾಲಿಟಿ. ಆದರೆ ಎಲ್ಲ ಮ್ಯುನಿಸಿಪಾಲಿಟಿಗಳಿಗೂ ಈ ವಿವರವು ಅನ್ವಯಿಸುತ್ತಿದೆಯೆ? ಸಮಾಜದಲ್ಲಿ ಜೀವಿಸುವ ಎಲ್ಲರಿಗೆ ಅವರ ಜೀವನ ಸೌಕರ್ಯಕ್ಕಾಗಿ ಬೇಕಾಗಿರುವ ವಿಷಯಗಳನ್ನು ಸಂಸ್ಥೆಯ ಮಂಡಲಗಳೊಡನೆ ಅವುಗಳ ಮಹತ್ತರವಾದ ಜವಾಬುದಾರಿಯ ಕಾರ್ಯನಿರ್ವಹಣದಲ್ಲಿ, ಪ್ರಾಂತಿಕ ಅಧಿಕಾರಿಗಳು ಸಹಾನುಭೂತಿಯಿಂದಲೂ ಸಹಾಯದಿಂದಲೂ ಸಹಕಾರದಿಂದಲೂ ಒಂದಾಗಿ ಕಲೆತು ನಿರ್ವಹಿಸುವರು ಎಂದೂ ವೈಸ್ರಾಯರು ಅಪ್ಪಣೆ ಕೊಡಿಸಿರುವರು. ಈ ರೀತಿ ಅಧಿಕಾರಿಗಳು ಕಾರ್ಯನಿರ್ವಹಿಸುವುದು ಅವರ ಕರ್ತವ್ಯವಾಗಿದೆ; ಇಂಡಿಯಾ ಇಂಗ್ಲೆಂಡುಗಳ ಪ್ರತಿನಿಧಿಗಳು ಸೇರಿದ್ದ ಆ ವರ್ತುಲ ಪರಿಷತ್ತಿನಲ್ಲಿ ಇದೇ ರೀತಿ ರಾಜ್ಯಭಾರವು ಕ್ರಮಹೊಂದಬೇಕೆಂದೂ ಈ ಹೊಸ ಶಾಸನ ರಚನೆಹೊಂದಿದೆ. ಈ ಮಹಾ ಪ್ರಯತ್ನದಲ್ಲಿ ಸೇರುವ ಸರ್ವರೂ ವಿಶ್ವಾಸದಿಂದಲೂ ಧೈರ್ಯದಿಂದಲೂ ಕಾರ್ಯ ತೊಡಗಿ ಜನತೆಗೆ ಅತಿ ಹೆಚ್ಚಿನ ಪ್ರಯೋಜನವಾಗುವಂತಹ ಧ್ಯೇಯದಿಂದ ದುಡಿದರೆ, ಈಗ ಹಲವರ ಮನಸ್ಸಿನಲ್ಲಿ ಈ ಶಾಸನವನ್ನು ಕುರಿತಾಗಿ ಉಂಟಾಗಿರುವ ಸಂದೇಹಗಳು ಮಾಯವಾಗಬಹುದು ಎಂದು ವೈಸ್ರಾಯರ ನಂಬುಗೆ ಇದೆ. ಆದರೆ, ಇದೇ ಅಕ್ಷನ್ನೆ ತೊರೆದುಹಾಕಬೇಕೆಂದವರು ಅಂತಿರಲಿ, ಇದು ಪಾಪ ಕೆಲಸಕ್ಕೂ ಬಾರದೆಂದು ದೋಷಗಳನ್ನೆತ್ತಿ ಸಾರಿದ ಎಲ್ಲ ಪಂಗಡಗಳೂ ತಮ್ಮ ಮನಸ್ಸಿನ ಸಂದೇಹಗಳನ್ನು ಹೇಗೆ ಮರೆವರೋ ತಿಳಿಯದು. ಆಕ್ಟು ಪಸಾಹತ್ತಿನ ರಾಜ್ಯಭಾರ ಕ್ರಮವನ್ನಾದರೂ ಇಂಡಿಯಕ್ಕೆ ಕೊಡಲಾರದಲ್ಲಿ ಎಷ್ಟೆಂದರೂ ಅಸಮಾಧಾನಕರವೇ ಆಗಿದೆ.

ಆಕ್ಟಿಗೆ ರಕ್ಷಣಾಕವಚವೊಂದಿದೆ. ಆ ಕವಚದ ಬಿಸಿಯಿಂದ ಒಂದು ಕಡೆ ತೋರಿ ಬರುವ ಔದಾರ್ಯವು ಮತ್ತೊಂದು ಕಡೆ ಕಾಠಿಣ್ಯವಾಗಿ ಮಾರ್ಪಾಡಾಗುವ ಹಾಗಿದೆ. ಕವಚವನ್ನು ಕಳಚಿಟ್ಟರೆ ಮಾತ್ರ ಆಕ್ಟು ಸ್ವಲ್ಪವಾದರೂ ಶುದ್ಧ ಸಾಧುತ್ವವನ್ನು ಪ್ರದರ್ಶಿಸಲು ಅವಕಾಶವಿದೆ. ಆ ಭರವಸೆಯನ್ನು ವೈಸ್ರಾಯರು ಕೊಡುವರೇ? ದೇಶವಾಸಿಗಳ ಮಹಾಮತವನ್ನು ಯಾರು ಪಡೆದಿರುವರೋ ಅವರು ದೇಶಕ್ಕಾಗಿ ಎಂದೇ ಸೇವೆಮಾಡುವಾಗ ಅಗತ್ಯ ಕಾಣುವ ಬದಲಾವಣೆಗಳನ್ನು ಸೂಚಿಸಿದಲ್ಲಿ ಆಣ್ಣರು ಒಪ್ಪುವರೋ? ಇವೆರಡೂ ಪ್ರಶ್ನೆಗಳ ಮುಂದಣ ಆಕ್ಟಿನ ಪ್ರಯೋಗವು ಆಧರಿಸಿಯದೆ. ಈ ವಿಷಯ ಹೇಗೆ ಆಲೋಚನೆಗಳಾಗಬಹುದೊ ಈ ವಾರದಲ್ಲೇ ತಿಳಿಯುವೆವು.

ಗೋಚರಕ್ಕೆ ತಂದು ಅದನ್ನು ಒದಗಿಸಿಕೊಳ್ಳಲು ಪ್ರಯತ್ನಿಸುವುದಕ್ಕುಪಾಯಗಳಾವುವು ಇವೆ? ಅವನ್ನು ಅವರು ಸರಿಯಾಗಿ ಬಳಸುತ್ತಿದ್ದಾರೆಯೆ? ವೋಟಿನ ಮಹಿಮೆಯನ್ನು ಅದನ್ನು ವಿದಾಯಕವಾಗಿ, ಮಾಡುವ ವಿಚಾರವನ್ನು ವೋಟರರು ತಿಳಿದು ನಡೆದುಕೊಳ್ಳುವ ಹಾಗೆ ಅವರಿಗೆ ಯಾವ ಉಪಾಯಗಳಿವೆ? ತಿಳಿಗೆಗಳಾವುದಕ್ಕೆ, ಎಷ್ಟು, ಅವನ್ನು ವಿನಿಯೋಗಿಸುವ ವಿಧಾನ ಯಾವುದು? ಎಂಬಿತ್ಯಾದಿ ವಿಷಯಗಳನ್ನು ವೋಟರರಲ್ಲಿ ಪ್ರತಿಯೊಬ್ಬರೂ ತಿಳಿದುಕೊಳ್ಳುವ ಹಾಗೆ ಯಾವ ವಿಧಾನಗಳಿವೆ? ಮ್ಯುನಿಸಿಪಾಲಿಟಿಗಳು ಸರಿಯಾಗಿ ಕೆಲಸಮಾಡದಿರುವಲ್ಲಿ ಅದಕ್ಕೆ ಕಾರಣಗಳು ಯಾವುವು?—ಇವೇ ವಿಚಾರಗಳು ವೋಟರರಿಗೆ ಅಗತ್ಯವಾಗಿಯೂ ತಿಳಿದುಬರುವ ಹಾಗೆ ಪ್ರತಿಯೊಂದೂ ವಾರ್ಡಿನಲ್ಲಿ ವೋಟರರ ಸಂಘಗಳಿದ್ದು, ಮ್ಯುನಿಸಿಪಾಲಿಟಿಯ ಆಯವ್ಯಯಗಳನ್ನೆ ಮಾತ್ರವಲ್ಲದೆ, ಸಂಕಷ್ಟಗಳನ್ನೂ ಸಂಕಷ್ಟ ನಿವಾರಣೋಪಾಯಗಳನ್ನೂ ಚರ್ಚಿಸಿ, ತಮ್ಮ ಪ್ರತಿನಿಧಿಗಳಿಗೆ ಸೂಚಿಸಿ, ಅವರಿಂದ ಅಗತ್ಯವಾದ ಪರಿಹಾರಗಳನ್ನು ಮಾಡಿಕೊಳ್ಳಬೇಕಾಗಿದೆ ಎಂಬಿಷ್ಟಕ್ಕೆ ಇನ್ನಾದರೂ ಕಾಂಗ್ರೆಸ್ ಮೆಂಬರರೇ ಹೆಚ್ಚಿರುವ ಮ್ಯುನಿಸಿಪಾಲಿಟಿಗಳಲ್ಲಿ ವೋಟರರ ಸಂಘಗಳಾಗುವಂತೆ ಏರ್ಪಡಿಸುವುದು ಹಿತಕರವಾಗಿದೆ.

ಮುಸ್ಲಿಮಬಂಧುಗಳಿಗೆ ಆಮಂತ್ರಣ.

ಮದ್ರಾಸಿನ ಹಲವು ಮುಸ್ಲಿಮ ಮುಖಂಡರ, ಸ್ವಧರ್ಮ ಬಾಂಧವರನ್ನು ಕಾಂಗ್ರೆಸ್ಸಿಗೆ ಸೇರಬೇಕೆಂದೂ, ತಮ್ಮ ಸಮಾಜದ ಧ್ಯೇಯಗಳೂ ಕಾಂಗ್ರೆಸ್ಸಿನ ಧ್ಯೇಯಗಳೂ ಒಂದೇ ಆಗಿವೆಯೆಂದೂ, ತಾವು ಭಾರತವರ್ಷದ ಯಾವತ್ತು ನಿವಾಸಿಗಳ ಆಶಾಕಾಂಕ್ಷೆಗಳೇ ಉಳ್ಳವರಾಗಿದ್ದು ತಮ್ಮೆಲ್ಲರ ಅಭಿವೃದ್ಧಿಗೆ ಕಾಂಗ್ರೆಸ್ಸಿಗೆ ಸೇರಿ ಕೆಲಸಮಾಡಿದರೆ ಚೆನ್ನಾಗುವುದೆಂದೂ ಪ್ರಕಟಪಡಿಸಿರುವರು. ಮುಸ್ಲಿಮರಲ್ಲಿ ಪ್ರಗತಿಕಾಂಕ್ಷೆಯುಳ್ಳವರೆಲ್ಲರೂ ಕಾಂಗ್ರೆಸ್ಸಿಗೆ ಸೇರದವರಾಗಬೇಕೆಂದು ಬೊಂಬಾಯಿಯ ಮುಸ್ಲಿಮರೂ ಸೂಚಿಸಿದ್ದಾರೆ. ಮುಸ್ಲಿಮ ಜನಾಂಗದ ಹಿತವನ್ನು ಸಾಧಿಸುವುದಾದರೆ ಕಾಂಗ್ರೆಸ್ಸಿಗೆ ಸೇರುವಂತಾಗಲಿ ಎಂದು ಅವರ ಸೂಚನೆಯಾಗಿದೆ. ಇದಕ್ಕೆ ಮೊದಲನೆ ಪ್ರಯತ್ನವೆಂದರೆ, ಮಿ। ಜಿನ್ನಾರವರೇ ಮೊದಲಾದವರು ತಮ್ಮ ಪಂಗಡವನ್ನು ಕಟ್ಟಿಕೊಂಡು ಅದನ್ನು ಕಾಂಗ್ರೆಸ್ಸಿನ ಪ್ರತಿನಿಧಿಗಳಿಂದ ಕೌನ್ಸಿಲುಗಳಲ್ಲಿ ದೂರವಿಡುವ ಬದಲಾಗಿ, ಇತ್ತಂಡವೂ ಸೇರಿದರೆ, ಮುಸ್ಲಿಮರಿಗೆ ಕೆಡುಕಿಲ್ಲವೆಂದೂ ಜನಾಂಗಕ್ಕೆ ಹಿತವೆಂದೂ ಬೊಂಬಾಯಿಯ ಮುಖಂಡರ ಜ್ಯಾಹೀರಾತು ಪತ್ರಗಳಲ್ಲಿದೆ. ಮಿ। ಜಿನ್ನಾರವರೂ ತಮ್ಮ ಪಂಗಡಕ್ಕೂ ಕಾಂಗ್ರೆಸ್ಸಿಗೂ ಧ್ಯೇಯವೊಂದೇ: ಇರಬಹುದಾದ ತಾರತಮ್ಯಗಳು ಅತ್ಯಲ್ಪ ಎಂದೇ ಹೇಳುತ್ತಾರೆ. ಹೀಗಿರುವಾಗ ಮುಂದೆ ಬರಲಿರುವ ಮಹಾ ಪ್ರಯತ್ನಗಳ ಕಾಲದಲ್ಲಿ ಮಿ। ಜಿನ್ನಾರವರು, ಈಗ ಅವರು ತಮ್ಮ ಮುಸ್ಲಿಮ ಮೆಂಬರರನ್ನು ಇತರ ಮುಸ್ಲಿಮ ಮೆಂಬರರೊಡನೆ ಸೇರಿಸಿ ಒಂದೇ ಪರಿಚಯವಾಗುವ ಭರದಲ್ಲಿ, ಕಾಂಗ್ರೆಸ್ಸಿನೊಡನೆ ಸೇರಿಯೆ ಪ್ರಯತ್ನಿಸಿದರೆ ಅವರಿಗೂ ಮುಸ್ಲಿಮ ಸಮಾಜಕ್ಕೂ ಹೀಗಾಗಿ ಇಡೀ ಜನಾಂಗಕ್ಕೂ ಬಹಳ ಉಪಕಾರವಾಗುವುದಾಗಿ ಮುಸ್ಲಿಮ ಪತ್ರಿಕೆಗಳು ಅಭಿಪ್ರಾಯ ಕೊಟ್ಟಿವೆ.

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR
OWN DISTRICT.
available in 7lb and 14lb packets, at the
Office C. P. C. Co., Ltd.
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಕಾಂಗ್ರೆಸಿಗೆ ೨ ಕೋಟಿ ಮತಗಳು.

ಕಾಂಗ್ರೆಸಿನ ಚುನಾವಣೆ ಚಟುವಟಿಕೆಗಳ ಕುರಿತು ವರದಿಯೊಂದು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಿಂದ ಸಿದ್ಧವಾಗಿದೆ. ಇದರಲ್ಲಿ ಚುನಾವಣೆಯ ಕುರಿತು ಎಲ್ಲಾ ವಿಚಾರಗಳಿವೆ. ಚುನಾವಣೆಯಲ್ಲಿ ಎಷ್ಟು ಪಕ್ಷಗಳು ಭಾಗವಹಿಸಿದ್ದುವು, ಕಾಂಗ್ರೆಸ್ ಉಮೇದ್ವಾರರು, ಕೆಲವೆಡೆಗಳಲ್ಲಿ ಸೋಲಲು ಕಾರಣವೇನು?, ದೇಶದ ಸಹಾನುಭೂತಿಯು ಕಾಂಗ್ರೆಸ್ಸಿಗೆ ಎಷ್ಟಿದೆ? ಮುಸ್ಲಿಮ ಕಾಂ। ಉಮೇದ್ವಾರರು ಕಾಂ। ಹರಿಜನ ಉಮೇದ್ವಾರರು ಸೋಲಲು ಕಾರಣವೇನು? ಇವೆಲ್ಲಾ ಸಂಗತಿಗಳು ವರದಿಯಲ್ಲಿ ವಿವರವಾಗಿ ಕೊಟ್ಟಿರುವರು. ಈ ವರದಿಯ ಪ್ರಕಾರ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಎರಡು ಕೋಟಿ ಮತಗಳು ದೊರಕಿವೆಯೆಂದೂ ತಿಳಿದುಬರುತ್ತದೆ

ಕಾಂಗ್ರೆಸ್ ಚಟುವಟಿಕೆಗಳು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಡಿಲ್ಲಿಯಲ್ಲಿ ಸಭೆ ಸೇರುತ್ತದೆ. ಅಲ್ಲಿ ಅದು, ನ್ಯಾಯವಿಧಾಯಕ ಸಭೆಗಳಲ್ಲಿ ಕಾಂಗ್ರೆಸ್ಸಿನ ವರ್ತನೆಯ ಕುರಿತು ಕೆಲವು ಘನವಾದ ಇತ್ಯರ್ಥಗಳನ್ನು ಮಾಡಲಿದೆ. ಅಧಿಕಾರ ಸೂತ್ರವನ್ನು ವಹಿಸುವ ವಿಚಾರವು ಇಲ್ಲಿ ಇತ್ಯರ್ಥ ಹೊಂದುವುದು. ದೇಶದ ಧುರಿಯರುಗಳೆಲ್ಲಾ ಈಗ ಡೆಲ್ಲಿಯಲ್ಲಿ ಸೇರಿರುವರು. ಮಹಾತ್ಮಾಜಿಯವರು ಇಷ್ಟು ಘನತರದ ಕೆಲಸವು ಕಾಂಗ್ರೆಸ್ಸಿಗೆ ಇರುವಾಗ, ತಮ್ಮಿಂದ ಅದಷ್ಟು ಸಹಾಯಮಾಡಲು ಡಿಲ್ಲಿಗೆ ಬಂದು ಅಲ್ಲಿನ ಹರಿಜನ ಕೊಲೊನಿಯಲ್ಲಿ ಇಳಿದಿರುವರು. ಕಾಂಗ್ರೆಸ್ಸು ಅಧಿಕಾರ ಸೂತ್ರವನ್ನು ವಹಿಸುವ ವಿಚಾರವು ಚರ್ಚೆಯ ಮುಖ್ಯ ವಿಷಯ.

ಅಲ್ಲದೆ ಪ್ರಾಂತಿಕ ಎಸೆಂಬ್ಲಿಗಳಿಗೆ ಚುನಾಯಿತರಾದ ಸದಸ್ಯರ ರಾಷ್ಟ್ರೀಯ ಪರಿಷತ್ತು (ನೇಶನಲ್ ಕನ್ವೆನ್ಶನ್) ಡಿಲ್ಲಿಯಲ್ಲಿ ಸೇರಲಿದೆ. ಅಂದರೆ ಡಿಲ್ಲಿಯಲ್ಲಿ ಈಗ ಭಾರೀ ರಾಜಕೀಯ ಚಟುವಟಿಕೆಗಳು ನಡೆಯುತ್ತಿವೆ

ಮುಂದಿನ ಕಾಂಗ್ರೆಸ್ ಅಧಿವೇಶನ

ಮುಂದಿನ ಕಾಂಗ್ರೆಸ್ ಅಧಿವೇಶನವು ಗುಜರಾತಿನ ಒಂದು ಹಳ್ಳಿಯಲ್ಲಿ ನಡೆಯಬೇಕೆಂದಾಗಿದೆ. ಸಮರ್ಪಕವಾದ ಒಂದು ಹಳ್ಳಿಯನ್ನು ಗೊತ್ತುಮಾಡುವರೆ ಗುಜರಾತ್ ಕಾಂಗ್ರೆಸ್ ಕಮಿಟಿಯಿಂದ ನೇಮಕವಾದ ಸಬ್ ಕಮಿಟಿಯೊಂದು ಅಲ್ಲಿನ ಅನೇಕ ಹಳ್ಳಿಗಳ ಪ್ರವಾಸಗೈಯುತ್ತಿದೆ. ಈ ಸಬ್ ಕಮಿಟಿಯು ಬಾರ್ಡೋಲಿಗೆ ಹೋದಾಗ, ಅಲ್ಲಿನ ಹಳ್ಳಿಗರು ಸಾವಿರಗಟ್ಟಲೆಯಲ್ಲಿ ನೆರೆದು ಬಂದು, ಕಾಂಗ್ರೆಸ್ ಅಧಿವೇಶನವನ್ನು ಬಾರ್ಡೋಲಿಯಲ್ಲಿ ಜರಗಿಸುವಂತೆ ಒತ್ತಾಯಮಾಡಿದರು. ಕಾಂಗ್ರೆಸ್ಸಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನೂ ತಾವು ಒದಗಿಸಿಕೊಡುತ್ತೇವೆಂದು ಅವರಿಂದ ಭರವಸೆ ದೊರಕಿರುತ್ತದೆ. ಹಾಗೆಯೇ ಅನೇಕ ಹಳ್ಳಿಗಳಲ್ಲಿ ಈ ಸಬ್ ಕಮಿಟಿಗೆ ಇದೇ ತರದ ಭರವಸೆಗಳು ದೊರಕುತ್ತವೆ. ಕಾಂಗ್ರೆಸ್ಸನ್ನು ಹಳ್ಳಿಗಳಲ್ಲಿ ಜರಗಿಸಿ, ಕಾಂಗ್ರೆಸ್ ಭೂರಿ ಜನರ ಸಂಸ್ಥೆಯಾಗಿ ಮಾಡಬೇಕಾಗಿರುವ ಯೋಜನೆಯು ಬಹಳ ಯಶಸ್ವಿಯಾಗಿ ನಡೆಯುತ್ತಿದೆ

ಸಂ। ಪ್ರಾಂತ್ಯದ ಮಂತ್ರಿಗಳ ಮೇಲೆ ಪ್ರಾಣಾಪಹಾರ ಪ್ರಯತ್ನ.

ಕಾನ್‌ಪುರದ ಕ್ವೀನ್ಸ್ ಪಾರ್ಕಿನಲ್ಲಿ ನಡೆದ ಒಂದು ಕೂಟದಲ್ಲಿ ಭಾಗವಹಿಸಿ ಹಿಂತಿರುಗುವ ಸಮಯ, ಸಂಯುಕ್ತ ಪ್ರಾಂತ್ಯದ ವಿದ್ಯಾಮಂತ್ರಿಗಳಾದ ಶ್ರೀಚಕ್ರರವರ ಮೇಲೆ ಮೊನ್ನೆ ದಿನ ಪ್ರಾಣಾಪಹಾರ ಪ್ರಯತ್ನಗಳು ನಡೆದುವು. ಯಾವನೋ ಒಬ್ಬ ಅವಾನನು ಒಳ್ಳೇ ಉಡುಪುಗಳನ್ನು ಧರಿಸಿ ಶ್ರೀಚಕ್ರರು ತಮ್ಮ ಕಾರನ್ನು ಹತ್ತುವ ಸಮಯ ಭೇಟಿಮಾಡುವ ನೆಪದಲ್ಲಿ ಬಂದು ಅವರನ್ನು ಚೂರಿಯಿಂದ ತಿವಿಯಲು ಪ್ರಯತ್ನಿಸಿದನು. ದೈವವಶಾತ್, ಶ್ರೀಚಕ್ರರು ವಿನೊಂದೂ ಹಾನಿಯಿಲ್ಲದೆ ಈ ಅಪಘಾತದಿಂದ ಪಾರಾಗಿರುವರು. ಅಪರಾಧಿಯನ್ನು ಸೆರೆಹಿಡಿದಿರುವರು. ಆತನು ಕಾನ್ಪುರದ ಓರ್ವ ಬ್ರಾಹ್ಮಣ ಯುವಕನಂತೆ.

ಅಧಿಕಾರ ವಹಿಸುವ ವಿಚಾರ.

ಈ ಕುರಿತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಸಭೆ ಸೇರಿ ಚರ್ಚಿಸುತ್ತಿದೆ. ಇಷ್ಟರ ತನಕದ ಸ್ಥಿತಿಯ ವಾತಾವರಣವನ್ನು ನೋಡಿದ್ದಲ್ಲಿ, ಅಧಿಕಾರ ಸ್ವೀಕರಿಸುವುದಕ್ಕಾಗಿ ವಿಶೇಷ ರೀತಿಯಲ್ಲಿ ಮತ ದೊರಕಬಹುದೆಂದು ಊಹಿಸಲಾಗಿದೆ.

ಡಿಲ್ಲಿಗೆ ರಾಷ್ಟ್ರಪತಿಗಳ ಆಗಮನ.

ನೇಶನಲ್ ಕನ್‌ವೆನ್ಶನ್, ವರ್ಕಿಂಗ್ ಕಮಿಟಿಯ ಸಭೆ ಇವುಗಳಿಗಾಗಿ ಕಳೆದ ವಾರ ಡಿಲ್ಲಿಗೆ ತೆರಳಿದ ರಾಷ್ಟ್ರಪತಿ ಪಂಡಿತ ಜವಾಹರಲಾಲರಿಗೆ ಪ್ರಚಂಡ ತರದ ಸ್ವಾಗತವು ಕೊಡಲಾಯಿತು. ಜನಸ್ತೋಮವು ಕಿಕ್ಕಿರಿದು ನೆರೆದಿತ್ತು. ಮೆರವಣಿಗೆಯು ಸಾಧಾರಣ ಅರ್ಧಮೈಲು ಉದ್ದವಿತ್ತು. ನಗರಸಭೆಯ ಸದನದ ಹತ್ತಿರ ಅಲ್ಲಿ ಹೂಗ ಹಾಕಿದ ರಾಷ್ಟ್ರಧ್ವಜವನ್ನು ಪೋಲೀಸರಿಂದ ತೆಗೆಯಲ್ಪಟ್ಟುದರಿಂದ ಸಣ್ಣದೊಂದು ಕ್ಷೋಭೆಯು ನಡೆಯಿತು. ವಿಶೇಷಗಳೇನೂ ನಡೆದಿರಲಿಲ್ಲ.

ವಿದ್ಯಾರ್ಥಿಯ ಪ್ರಾಣತ್ಯಾಗ.

ಶಾಹಜಹಾನಪುರದ ಮಿಶನ್ ಹೈಸ್ಕೂಲಿನ ವಿದ್ಯಾರ್ಥಿಯೊಬ್ಬನು, ಮುಖ್ಯ ಉಪಾಧ್ಯಾಯರು ಆತನನ್ನು ಬೆತ್ತದಿಂದ ಹೊಡೆದುದಕ್ಕಾಗಿ ಮತ್ತು ಗದರಿಸಿದುದಕ್ಕಾಗಿ ಪ್ರಾಣತ್ಯಾಗ ಮಾಡಿಕೊಂಡಿರುವನಂತೆ. ಅಲ್ಲಿಗೆ ಚಿತ್ತೈಸಿದ ಜವಾಹರಲಾಲ ನೆಹರುರವರ ಭಾಷಣವನ್ನು ಕೇಳಿದುದಕ್ಕಾಗಿ ಮುಖ್ಯ ಉಪಾಧ್ಯಾಯರು ಆತನನ್ನು ಆ ರೀತಿ ಶಿಕ್ಷಿಸಿದಂತೆ. ಮುಖ್ಯ ಉಪಾಧ್ಯಾಯರು ತಾನು ಹಾಗೆ ಮಾಡಲಿಲ್ಲವೆಂದು ತಿಳಿಸಿರುವರು. ಈ ವಾರ್ತೆಯು ಶ್ರೀ ನೆಹರುಗಳ ಕಿವಿಗಳಿಗೆ ಬಿದ್ದು, ಆ ಕುರಿತು ಸಂಪೂರ್ಣ ವಿಚಾರಣೆಯಾಗಬೇಕೆಂದು ಅವರು ಕೇಳಿರುವರು.

ಕಾಂಗ್ರೆಸಿನ ವಿಜಯದ ನಂತರ

ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಕಾಂಗ್ರೆಸಿನ ವಿಜಯದಿಂದ ಉಂಟಾದ ವ್ಯಾಕುಲತೆಯನ್ನು ನಿವಾರಿಸುವರೆ ಸದ್ಯದಲ್ಲೆ ಒಂದು ಪ್ರಕಟಣೆಯನ್ನು ಮಾಡಲಿರುವರಂತೆ. ಈ ಬಾರಿಯ ಅಸೆಂಬ್ಲಿಯಲ್ಲಿ ಸರಕಾರ ಸದಸ್ಯರ ಮಾತಿನ ಸಂಬಂಧ ಇಂಗ್ಲಂಡಿನಲ್ಲಿ ಮಾಜಿ ವೈಸರಾಯರಾದ ಲಾರ್ಡ್ ಹಾಲಿಫೆಕ್ಸರ ಭಾಷಣ, ಇವುಗಳನ್ನು ನೋಡಿ ಸರಕಾರವು ಏನೋ ಕಾಂಗ್ರೆಸಿನೊಡನೆ ರಾಜಿಮಾಡಲಿದೆ ಎಂಬ ಊಹನೆಗಳು ಉಂಟಾಗಿವೆ

ಮುಸಲೋನಿಯ ಆಫ್ರಿಕಾಸಮ್ರಾಜ್ಯದ ಪ್ರವಾಸ

ವಿಕಾಫಿಕ ಮುಸಲೋನಿಯು ಆಫ್ರಿಕಾದ ಇಟಲಿಯನ ಸಾಮ್ರಾಜ್ಯದ ಪ್ರವಾಸಕ್ಕೆ ಹೊರಡಿರುವನು. ಆಫ್ರಿಕಾದ ಇಟೇಲಿಯಾನ ಸಾಮ್ರಾಜ್ಯದಲ್ಲಿ ಆತನನ್ನು ಸ್ವಾಗತೀಕರಿಸಲು ವಿಶೇಷತರದ ಏರ್ಪಾಡುಗಳಾಗಿವೆ. ಮುಸಲೋನಿಯು ಆಫ್ರಿಕಾದ ಇಸ್ಲಾಂ ಧರ್ಮದ ಮಿತ್ರನೆಂಬ ಘೋಷಣೆಗಳಿಂದ ಆತನಿಗೆ ಅಬಿಸೀನಿಯದಲ್ಲಿ ಸ್ವಾಗತೀಕರಿಸಬೇಕಾಗಿದೆ. ಆತನ ಅಬಿಸೀನಿಯಕ್ಕೆ ತೆರಳುವನೊ ಇಲ್ಲವೊ ಎಂಬುದು ಇಷ್ಟರ ವರೆಗೆ ಸರಿಯಾಗಿ ತಿಳಿದುಬಂದಿಲ್ಲ

ಎಬಿಸಿನಿಯಾದಲ್ಲಿ ಇಟೇಲಿಯಾನರು.

ಬಲಾತ್ಕಾರದಿಂದ ವಶಪಡಿಸಿದ ಎಬಿಸಿನಿಯಾದಲ್ಲಿ ಇಟೇಲಿಯಾನರು ಈಗ ಸಾಮ್ರಾಜ್ಯಸ್ಥಾಪನೆಯ ಪ್ರಯತ್ನಗಳನ್ನು ಮಾಡುತಿದ್ದಾರೆ. ದೇಶಭಕ್ತಿ ಸ್ವತಂತ್ರಪ್ರಿಯತೆಯನ್ನು ತೋರಿಸಿದ ಅನೇಕ ಹಬಸಿ ನಾಯಕರು ಕಾರಾಗೃಹವನ್ನೂ ಸ್ವರ್ಗಲೋಕವನ್ನೂ ಇತ್ತರೊಳಗೆ ಸೇರಿರುವರು. ಎಬಿಸಿನಿಯದ ಇಟೇಲಿಯಾನ ವೈಸರಾಯನಾದ ಗ್ರೆಜಿನಿಯ ಮೇಲೆ ಪ್ರಾಣಾಪಹಾರ ಪ್ರಯತ್ನಗಳು ಮೊನ್ನೆ ದಿನ ನಡೆದು ಆತನ ಸ್ಥಿತಿಯು ಕಠಿಣವೆನಿಸಿದೆ.

ಸರ್ ತೇಜ್ ಬಹದೂರ್ ಸಪ್ರೂಗಳು.

ಮುಸ್ಲಿಮರಿಗೂ ಕಾಂಗ್ರೆಸಿಗೂ ವ್ಯಾಸರಾಯರಿಗೂ ಸಂಧಾನವುಂಟಾಗುವರೆ ಮಧ್ಯಸ್ಥರಾಗುವರೆಂದು ಬಲವಾದ ವಾರ್ತೆಯಿದೆ. ಮೊನ್ನೆ ಅವರು ಲಾಹೋರಿಗೆ ಹೋಗುತ್ತಿರುವಾಗ ಹಾದಿಯಲ್ಲಿ ಡೆಲ್ಲಿಯಲ್ಲಿ ಉಳಿದು, ವ್ಯಾಸರಾಯರ ಅತಿಥಿಗಳಾಗಿದ್ದರಂತೆ. ಅಲ್ಲಿ ಈಗಿನ ರಾಜಕೀಯ ವಾತಾವರಣದ ಕುರಿತು ಚರ್ಚೆ ನಡೆದಿರಬಹುದೆಂದು ವೈಸರಾಯರ ಮನೋಭಾವವು ಅನುಕೂಲವಾಗಿದ್ದರೆ, ಅವರು ಮುಸ್ಲಿಮ್ಮ ವೈಸರಾಯ ಕಾಂಗ್ರೆಸ್ ಸಂಧಾನದ ಪ್ರಯತ್ನಗಳನ್ನು ಮಾಡುವವರಿದ್ದಾರಂತೆ. ಈ ಕುರಿತು ಸಪ್ರೂಗಳು ಮಹಾತ್ಮಾಜಿಯವರನ್ನು ಕೂಡ ಕಾಣುವರಂತೆ

ಅಧಿಕಾರ ಸ್ವೀಕಾರ—ಕಾಂಗ್ರೆಸ್ ತೀರ್ಮಾನ.

ಮಂತ್ರಿಮಂಡಲದ ಶರ್ತಗಳು.

ನವದಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಈ ಕೆಳಗಿನ ಠರಾವನ್ನು ಪಾಸುಮಾಡಿರುತ್ತದೆ

"ಜನತೆಯು ಕಾಂಗ್ರೆಸಿನ ಧ್ಯೇಯಗಳನ್ನು ತಿಳಿದು ಅದನ್ನು ಯಶಸ್ವಿಯಾಗಿ ಮಾಡಿ ತನ್ನ ಒಪ್ಪಿಗೆ ತೋರಿಸಿದ್ದಕ್ಕೆ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಹಳ ಆಭಾರಿಯಾಗಿದೆ. ಪೂರ್ಣ ಸ್ವಾತಂತ್ರ್ಯವನ್ನು ಗುರಿಯಲ್ಲಿಟ್ಟು, ನವರಾಜ್ಯಾಂಗ ರಚನೆಯನ್ನು ನಿರಾಕರಿಸಿ ಭಾರತೀಯರಿಗೆ ಒಪ್ಪುವ ಒಂದು ರಚನಾತ್ಮಕ ಆಡಳಿತ ಮಂಡಳಿಯನ್ನು ಸ್ಥಾಪಿಸಬೇಕೆಂಬುದ್ದೇಶದಿಂದ ಕಾಂಗ್ರೆಸ ಇಂದು ಚುನಾವಣೆಯ ರಂಗಭೂಮಿಯನ್ನು ಹೊಕ್ಕಿತು. ನವರಾಜ ಶಾಸನದೊಡನೆ ಹೋರಾಡಿ ಅದನ್ನು ಅಂತ್ಯಗೊಳಿಸುವುದೇ ಕಾಂಗ್ರೆಸಿನ ಅಧ್ಯ ಧೋರಣೆಯಾಗಿರುತ್ತದೆ. ಚುನಾವಣೆಗಳ ಪ್ರಚಂಡ ವಿಜಯವು ಜನತೆಯು ಕಾಂಗ್ರೆಸಿನ ಧೋರಣೆಯನ್ನು ಸಂಪೂರ್ಣ ಒಪ್ಪಿಕೊಂಡ ರೀತಿಯನ್ನು ತೋರಿಸುತ್ತದೆ. ಅಲ್ಲದೆ ಜನತೆಯು ನವರಾಜಶಾಸನವನ್ನು ನಿರಾಕರಿಸಿದ ವಿಷಯವು ಇದರಿಂದ ಸ್ಪಷ್ಟವಾಗುತ್ತದೆ. ಬ್ರಿಟಿಷರು ಸಾರುತ್ತಿದ್ದ ಪ್ರಜಾಪ್ರಭುತ್ವ ಧೋರಣೆಯ ತತ್ವಗಳಿಂದಲೇ ಇಂದು ಜನತೆಯು ನವರಾಜಶಾಸನವನ್ನು ನಿರಾಕರಿಸಿ ತಮ್ಮದೆ ಒಂದು ಸರಕಾರ ಮಂಡಳಿಯನ್ನು ಸ್ಥಾಪಿಸುವ ಇಚ್ಛೆಯನ್ನು ತೋರಿಸಿದಂತಾಯಿತು.

"ಈ ಪ್ರಯುಕ್ತ ವರ್ಕಿಂಗ್ ಕಮಿಟಿಯು ಭಾರತ ಜನಾಂಗದ ಪರವಾಗಿ ನವರಾಜಶಾಸನವನ್ನು ಹಿಂತೆಗೆದುಕೊಳ್ಳುವಂತೆ ಪ್ರತಿಪಾದಿಸುತ್ತದೆ

"ಬಹು ಸಂಖ್ಯಾತ ಜನತೆಗೆ ವಿರೋಧವೆನಿಸಿದ ಈ ನವರಾಜ ಶಾಸನವನ್ನು ಬ್ರಿಟಿಷ ಸರಕಾರವು ಹಿಂತೆಗೆಯದಿದ್ದರೆ, ವರ್ಕಿಂಗ್ ಕಮಿಟಿಯು, ಚುನಾಯಿತರಾದ ಅಸೆಂಬ್ಲಿಯ ಎಲ್ಲಾ ಕಾಂಗ್ರೆಸ ಸದಸ್ಯರಿಗೆ ಈ ಶಾಸನದೊಂದಿಗೆ ಹೋರಾಡುವ ಧ್ಯೇಯವನ್ನು ದಿಟವಾದದಾಗಿ ತಿಳಿಯಪಡಿಸುತ್ತದೆ. ಕಾಂಗ್ರೆಸ್ಸಿನ ಈ ನೋಟಿಸಿಯ ಒಡ ಬ್ರಿಟಿಷ್ ಸಾಮ್ರಾಜ್ಯಶಾಹೀ ಮತ್ತು ಭಾರತೀಯ ರಾಷ್ಟ್ರೀಯತೆಯ ತತ್ವಗಳೊಳಗೆ ಕಟ್ಟುಬಿಟ್ಟ ಇನ್ನೂ ಬಿರುಸಾಗಿ ನಡೆದು, ಅದರಿಂದ ಈ ನವರಾಜ್ಯಾಂಗ ಶಾಸನ ಸಹ ಕಾಲ ಪ್ರಭುತ್ವದ ಮತ್ತು ಪ್ರಜಾಪ್ರಭುತ್ವದ ವಿರೋಧ ಪ್ರಕ್ರಿಯೆಯು ಕೊನೆಗೊಳ್ಳಲಾಗುತ್ತದೆ

" ಮಂತ್ರಿಪದವಿ ಸ್ವೀಕಾರಕ್ಕೆ ಅಖಿಲ ಭಾರತ ಕಾಂ। ವರ್ಕಿಂಗ್ ಕಮಿಟಿಯು ತನ್ನ ಅಧಿಕಾರವನ್ನು ಕೊಡುತ್ತದೆ. ಅದರೆ ಒಂದು ಶರ್ತದ ಮೇಲೆ, ಅದೇನೆಂದರೆ- ಕಾಂಗ್ರೆಸ್ ಪಂಗಡವು ಬಹುಸಂಖ್ಯಾತವಿದ್ದ ಪ್ರಾಂತ್ಯಗಳಲ್ಲಿ ಮಂತ್ರಿಪದವಿಯನ್ನು ಸ್ವೀಕರಿಸಬಹುದು. ಅದರೆ, ಅಲ್ಲಿನ ಮಂತ್ರಿಮಂಡಲದ ಮುಖಂಡರು ನವ ರಾಜಶಾಸನದ ಶರ್ತಕ್ಕನುಕೂಲವಾಗಿ ವರ್ತಿಸುವಾಗ, ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಿಕೊಳ್ಳುವುದಿಲ್ಲವೆಂಬ ಭರವಸೆಯುಳ್ಳವರಾಗಿದ್ದಾರೆಂದು ಸಾರ್ವಜನಿಕವಾಗಿ ತಿಳಿಸಲು ಸಮರ್ಥರಾಗಿರಬೇಕು."

ಬರ್ಮಾದಲ್ಲಿ ಸ್ವಾಯತ್ತ ಆಡಳಿತವು ಜಾರಿಯಾಗಿ, ಮಂತ್ರಿಮಂಡಲವು ಮೊನ್ನೆ ಸ್ಥಾಪನೆಯಾಗಿ ಮಂತ್ರಿವರ್ಯರಿಗೆ ತಿಂಗಳು ಗಳ್ಗೆ ತಲಾ ೩೫೦೦ ಎಂದಾಗಿದೆ

ಮಿ। ರಾಘವೇಂದ್ರರಾಯರು

ಮಧ್ಯಪ್ರಾಂತ್ಯದ ಎಸೆಂಬ್ಲಿಗೆ ಸ್ವತಂತ್ರ ಪಕ್ಷದವರಾಗಿ ಚುನಾಯಿತರಾದ ಶ್ರೀ ರಾಘವೇಂದ್ರರಾಯರು ಕಾಂಗ್ರೆಸು ಅಧಿಕಾರಸೂತ್ರವನ್ನು ವಹಿಸಿದರೆ ತಾನು ವಿರೋಧಪಕ್ಷದ ಮುಂದಾಳುತನವನ್ನು ವಹಿಸುವರಂತೆ. ಇವರಿಗೆ ಸಾಧಾರಣ ೩೦ ಜನರ ಸಹಾನುಭೂತಿ ಇರಬಹುದಂತೆ.

ಮಹಾತ್ಮಾಜಿಯವರು ಈಗಲೂ ಮಾರ್ಗದರ್ಶಕರಾಗಿರುವರು.

ಡಿಲ್ಲಿಯಲ್ಲಿ ಈಗ ನಡೆಯುತ್ತಿರುವ ಪ್ರಾಂತಿಕ ಅಸೆಂಬ್ಲಿ ಸದಸ್ಯರ ರಾಷ್ಟ್ರೀಯ ಪರಿಷತ್ತಿಗಾಗಿ ೧೨೦೦೦ ಜನರಿಗಾಗಿ ಚಪ್ಪರ ಹಾಕಲಾಗಿದೆ. ಚಪ್ಪರದ ಒಳ ಸೇರುವವರು ಟಿಕೆಟ್‌ಗಳನ್ನು ಪಡಕೊಂಡಿರುವರು. ಈ ಹದಿನೆರಡು ಸಾವಿರ ಮಂದಿಗಳಿಗೂ, ಹೊರಗೆ ಸೇರಿದ ಇತರ ಮಂದಿಗಳಿಗೂ ಭಾಷಣಗಳು ಸರಿಯಾಗಿ ಕೇಳುವಂತೆ ದೊಡ್ಡ ಧ್ವನಿ ಉಪಕರಣ ಏರ್ಪಾಡುಗಳನ್ನು ಮಾಡಿರುವರು. ಇದು ಎಲ್ಲಾ ರೀತಿಯಲ್ಲಿ ಸಣ್ಣದೊಂದು ಕಾಂ। ಅಧಿವೇಶನವೆನಿಸುವುದು. ಈ ರಾಷ್ಟ್ರೀಯ ಪರಿಷತ್ತಿಗೆ (ನೇಶನಲ್ ಕನ್ವೆನ್ಶನ್‌ಗೆ) ಸಾಧಾರಣ ೨೦ ಸಾವಿರ ವ್ಯಯ ತಗಲಬಹುದಂತೆ. ಇಷ್ಟು ಹಣವು ಟಿಕೆಟ್ ಪಡಕೊಂಡ ಪ್ರೇಕ್ಷಕರಿಂದ ವಸೂಲಾಗುವುದೆಂದು ಊಹಿಸಲಾಗಿದೆ

ಚಪ್ಪರದಲ್ಲಿ ೩೦೦ ಮಂದಿ ಪುರುಷ ಮತ್ತು ೧೦೦ ಮಂದಿ ಸ್ತ್ರೀ ಸ್ವಯಂಸೇವಕರಿದ್ದಾರೆ

ಈ ಎಲ್ಲಾ ಕಾಂಗ್ರೆಸ್ ಚಟುವಟಿಕೆಯಲ್ಲಿ ಗಾಂಧಿಜೀಯವರೇ ಮುಖ್ಯ ಸೂತ್ರಧಾರಿಗಳಾಗಿರುವರು. ಅಲ್ಲಿ ನಡೆಯಬಹುದಾದ ಎಲ್ಲಾ ಇತ್ಯರ್ಥಗಳೂ ಮಹಾತ್ಮಾಜೀಯವರನ್ನು ಹೊಂದಿಕೊಂಡಿವೆ

LATEST NEWS

ಕಳೆದ ವಾರ ಸ್ಪೈನಿನ ಯುದ್ಧದಲ್ಲಿ ಸರಕಾರದವರು ಮಾಡಿದ ವಿಮಾನದಾಳಿಯ ಪರಿಣಾಮವಾಗಿ ೩೦೦೦ ಮಂದಿ ಬಂಡಾಯಗಾರರ ಕಡೆಯ ಇಟೇಲಿಯಾನರು ಮಡಿದರೆಂದೂ ಓರ್ವ ಅಮೇರಿಕ ವೈಮಾನಿಕರು ತಿಳಿಸುತ್ತಾರೆ

ಪ್ರಖ್ಯಾತ ಬ್ರಿಟಿಷ್ ರಾಜನೀತಿ ಪ್ರವೀಣರಾದ ಸರ್ ಆಸ್ಟಿನ್ ಚೇಂಬರ್ಲೇನರು ನಿಧನಹೊಂದಿದರು.

ಮುಸಲೋನಿಯು ತನ್ನ ಆಫ್ರಿಕ ಸಾಮ್ರಾಜ್ಯವನ್ನು ಪ್ರವೇಶಿಸಿದನು. ಟ್ರಿಪೋಲಿಯಲ್ಲಿ ಅವನಿಗೆ ಅಭೂತ ಸ್ವಾಗತಕೊಡಲಾಯಿತು

ಗವರ್ನರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಿಕೊಳ್ಳುವುದಿಲ್ಲವೆಂಬ ಭರವಸೆಯನ್ನು ಕೊಡುವುದಿಲ್ಲವೆಂದು ಸುದ್ದಿಯನ್ನು ಬ್ರಿಟಿಷ್ ಸರಕಾರದವರು ತಿಳಿಸುತ್ತಾರೆ

ಅಧಿಕಾರ ಸ್ವೀಕಾರಕ್ಕೆ ಅನುಕೂಲವಾದ ಠರಾವು ಪಾಸಾಯಿತೆಂದು ತಿಳಿಯಲಾಗಿ

ಅಬಿಸೀನಿಯದಲ್ಲಿ ಇಟೇಲಿಯನ್ ಸಿದ್ಧ ಮಾರ್ಶಲ್ ಗ್ರೆಜಿಯಾನಿಯವರ ಮೇಲೆ ನಡೆದ ಪ್ರಾಣಾಪಹಾರದ ಫಲವಾಗಿ ಗ್ರೆಜಿಯಾನಿ ... ಅಲ್ಲಿನ ಅನೇಕ ಜನರನ್ನು ಸ್ವೇಚ್ಛೆಯಾಗಿ ಕೊಲ್ಲುತ್ತಲಿರುವರು

"An ideal young progressive Life Office of India ... with or represent"

The Commonwealth Assurance

LTD., POONA.

TRIENNIAL BONUS! TRIENNIAL

ON ENDOWMENT Rs. 87½. ON WH...

Next VALUATION YEAR 1937

Join the Agency force on most Liberal Terms

Messrs. GAWANKAR & SONS

Chief Agents for Mysore state, Coorg, Ceded Districts

AHMED BUILDINGS, CHICKPET, BANGALORE

Branches:—Bombay, Calcutta, Delhi, Madras

...ವಾದ ... ಗ್ರಂಥ' ... ಪ್ರಶ್ನಭಾಗ, ...ಗ, ಇಂದ್ರ ...ಮಂತ್ರ, ಯಂತ್ರ ...ಳು ಇರುತ್ತವೆ. ...ಸ್ಥಳ ಸಾಲದು. ...ತಿಳಿದು. —೦—೦. ... ಸನ್ಸ್, ಗದಗ. ...ದಾರಕ್ಕೆ, ಬಿಣಾವಳೆ ...ಬುಕ್ಕ ಸೆಲರರಲ್ಲಿ ...ದ್ವರೆ ನಮಗೆ ಪತ್ರ ... & Sons.

ಪ್ರಖ್ಯಾತ ಪುರುಷರು

ಅದ್ಭುತ ಬಾಲ್ಯ ಚರಿತ್ರೆ.

ತಮ್ಮ ಅಸಾಧಾರಣ ಬುದ್ಧಿ ಕೌಶಲ್ಯ ದಿಂದ ಪ್ರಪಂಚವನ್ನು ಬೆರಗುಮಾಡಿದ ಅನೇಕಾನೇಕ ಮಹಾ ಪುರುಷರುಗಳ ಬಾಲ್ಯ ಜೀವನವು ಸಾರಸ್ಯವಾದ ವಿಷಯಾನುಭವಗಳಿಂದ ಕೂಡಿರುತ್ತದೆಂದು ಓದಲು ತುಂಬಾ ಅಭಿರುಚಿಯುಂಟಾಗುತ್ತದೆ.

ಇಟಲಿಯ ವಿಖ್ಯಾತ ಕವಿವರ್ಯನಾದ ಡೆಂಟೆಯು ಹತ್ತು ವರ್ಷದ ಬಾಲಕನಾಗಿರುವಾಗ ಯುರೋಪಿನ ಏಳು ಪ್ರಾಮುಖ್ಯ ಭಾಷೆಗಳಲ್ಲಿ ಒಂದು ಕಥೆಯನ್ನು ಬರೆದಿದ್ದನಂತೆ.

ಹದಿನೇಳನೇ ಶತಮಾನದಲ್ಲಿ ಪ್ರಪಂಚವನ್ನು ಬೆರಗುಗೊಳಿಸಿದ ಬ್ಲೆಸ್ ಪಾಸ್ಕಲ್ ಎಂಬ ಗಣಿತ ಶಾಸ್ತ್ರಜ್ಞ ವಿಜ್ಞಾನಿಯು ತನ್ನ ೧೦ನೇ ವರ್ಷದ ಬಾಲ್ಯದಲ್ಲಿ, ಶಬ್ದ ವಿಜ್ಞಾನದ ಮೇಲೆ ಒಂದು ಪುಸ್ತಕವನ್ನು ಬರೆದಿದ್ದನು. ಹದಿನೈದನೇ ವರ್ಷ ಪ್ರಾಯದಲ್ಲಿ ಈ ಮಹಾನುಭಾವನು ಶೋಧನೆ ಗಣಿತಕ್ಕೆ ಸಂಬಂಧಪಟ್ಟ ತ್ರಿಕೋಣ, ಚೌಕ ಮತ್ತು ಕೇಂದ್ರ ಇವುಗಳ ತತ್ವವನ್ನೊಳಗೊಂಡ ಒಂದು ಪುಸ್ತಕವನ್ನು ಬರೆದಿದ್ದನು. ಇಂದು ಅವನ ಆ ತತ್ವಗಳು ಪ್ರತಿ ಗಣಿತ ಶಾಸ್ತ್ರದ ವಿದ್ಯಾರ್ಥಿಯೂ ಅಭ್ಯಾಸಿಸುತ್ತಿರುವನು.

ಕ್ರಿ. ಪೂ. ... ನೂರನೇ ಶತಮಾನದಲ್ಲಿ ವಾಸಿಸಿದ್ದ ... ಯೂ...ಸ್ ವಿಸ್ಕೊಂಟಿ ಎಂಬ ರೋಮನ್ ಕವಿಯು ತನ್ನ ಭಾಷಾಜ್ಞಾನದಿಂದ ಜಗತ್ತಿನ ಮನ್ನಣೆಗೆ ಪಾತ್ರನಾಗಿರುವನು. ಕೇವಲ ಐದು ವರ್ಷದ ಮಗುವಿರುವಾಗಲೇ ಈತನು ಹಿಬ್ರೂ, ಗ್ರೀಕ್, ಮತ್ತು ಲೇಟಿನ್ ಭಾಷೆಗಳಲ್ಲಿ ನಿಪುಣನಿದ್ದನಂತೆ. ಇನ್ನು ಐದು ವರ್ಷಗಳೊಳಗೆ ಅವನು ಸಿರಿಯನ್, ಅರಬಿ, ಮತ್ತು ಚೊಲ್ಡಿಯನ್ ಎಂಬೀ ಮೂರು ಭಾಷೆಗಳನ್ನು ಅಭ್ಯಾಸಮಾಡಿದನು. ನಿಜವಾಗಿಯೂ ನಾಲ್ಕು ವರ್ಷದವನಿರುವಾಗಲೇ ಇವನು ತತ್ವಶಾಸ್ತ್ರದ ಮೇಲೆ ಬೋಧಪರ ಭಾಷಣಗಳನ್ನು ಕೊಡುತ್ತಿದ್ದನಂತೆ.

ತನ್ಮೂಲಕ ದೇಶದ ಶಾಂತತೆಯು ನೆಲೆಗೊಳ್ಳುವಂತೆ ಮಾಡಬೇಕಾಗಿ ಕಾಳಿದಾಸ ನಾಗರು ಟೋಕ್ಯೊ ಪಿ. ಇ. ಎನ್. ಕ್ಲಬ್ಬಿನಲ್ಲಿ ತಮ್ಮ ಗೌರವಾರ್ಥವಾಗಿ ನೆರೆದ ಒಂದು ಸತ್ಕಾರದಲ್ಲಿ ಭಾಷಣಮಾಡಿದರು. ಭಾಷಣದ ಸಾರಾಂಶವೇ ಲೀಗ್ ಒಫ್ ನೇಶನಿನ ಪ್ರಾಮುಖ್ಯ ಉದ್ದೇಶವಾಗಿದೆ. ವಿಚಾರಶೀಲರು ಇಂಥಾ ಸಂಸ್ಥೆಗಳನ್ನು ಏರ್ಪಡಿಸಿ ಕಾರ್ಯಸಾಧನೆಮಾಡುವ ಕೆಲಸವು ಅಷ್ಟೊಂದು ಕಷ್ಟಕರವಲ್ಲ. ದೇಶದ ಜನಾಂಗಗಳು ಅನ್ಯೋನ್ಯ ಪ್ರೀತಿಯಿಂದ ಇರುವುದೇ ಶಾಂತಿಸ್ಥಾಪನೆಯ ಅಡಿಗಲ್ಲು ಆಗಿರುವುದು.

ವಿಚಿತ್ರ ರೋಗ.

ಸಂಯುಕ್ತ ಅಮೇರಿಕಾದಿಂದ ಬಂದ ವರ್ತಮಾನವೊಂದು ಅಲ್ಲಿನ ಒಬ್ಬ ರೈತನ ಪತ್ನಿಯ ವಿಚಿತ್ರ ಆಕಳಿಕೆಯ ರೋಗದ ವಿಷಯವನ್ನು ತಿಳಿಸುತ್ತದೆ. ಪ್ರತಿಕ್ಷಣಕ್ಕೆ ಅವಳಿಗೆ ಆಕಳಿಗೆ ಬರುವುದು. ಅನಿರೀಕ್ಷಿತವಾಗಿ ಉಂಟಾದ ಈ ಅವಸ್ಥೆಗೆ ವೈದ್ಯರು ಗುಣದ ದಾರಿ ಕಾಣದಾದರು. ಒಂಭತ್ತು ದಿವಸಗಳ ತನಕ ಈ ರೋಗವು ಇದ್ದು ೧೦ನೇ ದಿವಸ ಬೆಳಗ್ಗೆ ಅದು ಬಂದ ಹಾಗೇ ಅನಿರೀಕ್ಷಿತವಾಗಿ ನಿಂತು ಹೋಯಿತು. ಈ ಒಂಭತ್ತು ದಿವಸಗಳಲ್ಲಿ ಆ ಮಹಿಳೆಯು ೧೫೦,೦೦೦ ಸಾರಿ ಆಕಳಿಸಿರುವಳಂತೆ.

ಐದನೇ ಸಲ ಪರಾರಿ

ಅಹಮದಾಬಾದಿನ ಬಂದಿಖಾನೆಯಲ್ಲಿ ಕ್ರಿಮಿನಲ್ ಸಜೆಯನ್ನನುಭವಿಸುತ್ತಿದ್ದ ಕೈದಿಯೊಬ್ಬನು, ಕಾವಲುಗಾರನೊಬ್ಬನಿಗೆ ಒಂದು ಚಟ್ಟಿ ನೀರು ತರುವಂತೆ ಹೇಳಿದನು. ಕಾವಲುಗಾರನು ನೀರನ್ನು ತರಲಿಕ್ಕೆ ಹೋದೊಡನೆ ಒಂದು ಕಿಟಕಿಯ ಮಾರ್ಗವಾಗಿ ಕೈದಿಯು ಕೆಳಗೆ ಹಾರಿ ಓಡಿದನು. ಇತರ ಕಾವಲುಗಾರರು ಗಂಟೆಯನ್ನು ಬಾರಿಸಿದರು. ಕಾವಲುಗಾರನು ಆತನನ್ನು ಹಿಡಿಯಲು ತುಂಬಾ ಪ್ರಯತ್ನಮಾಡಿದರೂ ನಿಷ್ಪ್ರಯೋಜನವಾಯ್ತು. ಇದು ಕೈದಿಯ ಐದನೇ ಸಲದ ಪೋಲೀಸರ ಕಣ್ಣಿಗೆ ಮಣ್ಣೆರಚಿದ ಹಂಚಿಕೆಯಾಗಿರುತ್ತದೆ.

ಡಾಕ್ಟರರು ಸುಭಾಸ ಬಾಬುಗಳ ಅಸ್ವಸ್ಥತೆಯೇನೆಂದು ಪರೀಕ್ಷಿಸಲು ಅನರ್ಹರಾದರು

ಸರ್ ನೀಲರತ್ನ ಸರ್ಕಾರ್ ಮತ್ತು ಲೆಫ್ಟಿನೆಂಟ್ ಕರ್ನಲ್ ವೇರ್‌ಹೋಜ್ ಎಂಬವರಿಬ್ಬರು ...ಚಂದ್ರ ಭೋಸರನ್ನು ಪರೀಕ್ಷಿಸಿ, ...ವೇನೆಂದು ತಿಳಿಯದಿರುವರು. ಸರ್ ... ಇವರು ಬಹುಶ್ಯ ಸುಭಾಸ್ ಬಾಬು ...ಯರೋಗಕ್ಕೆ ತುತ್ತಾಗಿರಬೇಕಾಗಿ ...ರೆ. ವೆನೀಸಿನ ಪ್ರಖ್ಯಾತ ಕ್ಷಯ ...ಸ್ಪೆಶಲಿಸ್ಟರಾದ ಪ್ರೊ। ನ್ಯೂಮನರ ...ದ ಅದೇ ಆಗಿರುತ್ತದೆ. ಕರ್ನಲ್ ...ವರು ಕೋಶದಲ್ಲಿನ ಅಕ್ರಮವೇ ...ಸೊಸೈಟಿ ಕಾರಣವೆಂದು ತಿಳಿಸು... ...ಂಗ್ರೆಸ್ಸಿಸಿ ರೋಗವು ಯಾವ ಚಿಕಿತ್ಸೆ ...ವಿನೇ ಏಗುಣಮುಖವಾಗದಿರುವುದು ...ಕರಿಸಿರ ಸಂಗತಿಯಾಗಿದೆ.

...ಗೌರ...

...ಶಾಸನಕರುಗಳ ಸ್ಮಾರಕ.

...ವಿಶ್ವಾಸ್ಯ ಮಿಶ್ರ ಅಲ್ಲಹಾಬಾದ ...ಕ್ಕಾಗಿರುವ...ಗಳ ಸ್ಮಾರಕಕ್ಕಾಗಿ ಕಟ್ಟಿ... ...ಶ ಜಮೆಯಾಗಿರುವುದಾಗಿ ...ರಿಗೆ...

...ರುವ...

...ಫೆಡರೇಶನಗಳು.

...ಕ್ಕಗ್ ...ಲೋಚನೆ.

...ಡು...ದ ಫೆಡರೇಶನು ಕೇಂದ್ರ...

ನಗ್ನರೂಪ ಪ್ರಚಾರ

ನ್ಯೂಯೊರ್ಕಿನಲ್ಲಿರುವ ನಗ್ನಕೂಟದವರು ಬರುವ ಸೆಕೆಗಾಲ ಸಮಯಕ್ಕೆ ಭಾರಿ ಪ್ರಚಾರ ಕಾರ್ಯವನ್ನು ನಾಡಿ ಇದೇ ಅಮೇರಿಕವನ್ನು ನಗ್ನವೇಶದಲ್ಲಿ ಮುಳುಗಿಸುವಂತೆ ಮಾಡುವ ಪ್ರಯತ್ನಮಾಡುತ್ತದೆಂದು ಸುದ್ದಿಯಿದ್ದದೆ. ಈಗ ಅಲ್ಲಿ ೭೮,೦೦೦ ನಗ್ನ ತತ್ವಾವಲಂಭಿಗಳಿರುವರಂತೆ. ಮುಖಂಡರು ತಮ್ಮ ಕಛೇರಿಗಳಲ್ಲಿ ಸಭೆಸೇರಿಸಿ ಪರ್ಯಾಲೋಚನೆ ನಡೆಸುತ್ತಲಿದ್ದಾರೆ. ಶಾಲೆಗಳ ಮೇಲಿನ ತರಗತಿಗಳಲ್ಲಿ ನಗ್ನ ತತ್ವಪಾಠವನ್ನು ಕಡ್ಡಾಯವಾಗಿ ಕಲಿಸುವಂತೆ ಇವರು ಪ್ರಯತ್ನಮಾಡಿರುವರು. ಅಲ್ಲದೆ ಪ್ರಪಂಚದ ಎಲ್ಲಾ ಭಾಗಗಳಲ್ಲಿದ್ದ ಕೂಟದವರೊಳಗೆ ಒಂದು ಐಕ್ಯವನ್ನು ತಂದೊಡ್ಡುವ ಯೋಚನೆಯೂ ನಡೆಯುತ್ತಲಿದೆ.

ವರ್ಣಗಳೂ ವೃಕ್ಷಗಳೂ—ವಿಜ್ಞಾನ ಶೋಧೆ.

ವಿಜ್ಞಾನಿಗಳು ಪ್ರಕೃತಿಯನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವ ಶೋಧೆಗಳನ್ನು ಪರಿಪೂರ್ಣಗೊಳಿಸಿರುವರು. ಈಗ ವೃಕ್ಷಗಳಿಗೂ, ಗಿಡಲತೆಗಳಿಗೂ, ಅವುಗಳ ಹೂವುಗಳಿಗೂ

ಸಾರಸ್ಯ ಸಂಗತಿಗಳು

ಫ್ರಾನ್ಸಿನಲ್ಲಿ ೬೦ ವರ್ಷಕ್ಕೆ ಮೇಲ್ಪಟ್ಟವರ ಸಂಖ್ಯೆಯು ಪ್ರಪಂಚದ ಎಲ್ಲಾ ದೇಶಗಳಲ್ಲಿರುವುದಕ್ಕಿಂತಲೂ ಹೆಚ್ಚಾಗಿರುತ್ತದೆ. ಐಯರ್ಲೆಂಡು ಈ ವಿಚಾರದಲ್ಲಿ ಎರಡನೇ ಸ್ಥಾನ ಪಡೆಯುತ್ತದೆ.

ಹುಟ್ಟಿದ ಮಗುವು ೭ ರಾತ್ಲು ಭಾರವಿದ್ದರೆ, ೧೦ ದಿವಸಗಳಲ್ಲಿ ಅದರ ಭಾರವು ೭॥ ಆಗಿ ಹನ್ನೊಂದನೇ ದಿವಸದಲಿ ೧೧ ರಾತ್ಲುಗಳಷ್ಟಾಗುತ್ತದೆ.

ಪ್ರಪಂಚದಲ್ಲಿ ಓದಬಲ್ಲವರ ಸಂಖ್ಯೆಯಲ್ಲಿ ಶೇಕಡಾ ೨೭ರಷ್ಟು ಮಂದಿಗಳು ದೃಷ್ಟಿ ಅಭಾವತೆಯುಳ್ಳವರಾಗಿದ್ದಾರೆ.

ರಷ್ಯದ ಮಾಜೀ ಜಾರ್‌ನ ಕೈಕೆಳಗೆ ಕೆಲಸಕ್ಕಿದ್ದ ಫೆಡರ್ ವೊಸಿಲೆಫ್ ಎಂಬವನಿಗೆ ಪೆನ್‌ಶನ್ ಕಾಲದಲ್ಲಿ ೮೩ ಮಕ್ಕಳಿದ್ದವಂತೆ.

ಮನುಷ್ಯ ರಕ್ತದ ನೂರನೇ ೭೭ ರಷ್ಟು ನೀರು ಇದೆ. ೬ ರಷ್ಟು ವೀರ್ಯ ಪದಾರ್ಥವಿದೆ, ೧೪ ರಷ್ಟು ವರ್ಣ ವಸ್ತುವಿದೆ. ... ರಷ್ಟು ಲವಣ ಪದಾರ್ಥವಿದೆಯೆಂದು ವಿಜ್ಞಾನಿಗಳ ವಿನಂತಿಸಿದಾರೆ.

ಮನುಷ್ಯನು ೨೪ ತಾಸಿನಲ್ಲಿ ... ಕೊಳ್ಳುವ ಗಾಳಿಯಲ್ಲಿ ೧೭ ಟನ್ನಷ್ಟು ... ಗಾಳಿಯಿರುತ್ತದಂತೆ.

ಪೈಬೆಪರಿನಲ್ಲಿ 99½ ನೀರು ಮತ್ತು ಉಳಿದ ಅಂಶವು ಲವಣ ವಸ್ತುವಿರುತ್ತದೆ.

ರಷ್ಯದ ... ಜನಸಂಖ್ಯೆಯು ದ್ವಿಗುಣವಾಗಿದೆ.

ಗುಲಾಬಿಹೂವು ಕಪ್ಪಾಗಿ ಬೆಳೆಯುವಂತೆಯೂ ತಾವರೆಯು ಹಸರುಬಣ್ಣವನ್ನು ತಾಳುವಂತೆಯೂ ಇಲ್ಲವೆ ಬಾಳೆಗಿಡಗಳು ಕೆಂಪಾಗಿ ಬೆಳೆಯುವಂತೆಯೂ ಮಾಡಬಹುದು. ಮರಗಿಡ ಗಿಡಲತೆಗಳ ಬೇರುಗಳಿಗೆ ತೂತಗಳನ್ನು ಕೊರೆದು, ರಬ್ಬರ್ ನಳಿಗೆಗಳ ಮುಖಾಂತರ ಬೇಕಾದ ಬಣ್ಣಗಳ ನೀರನ್ನು ವೃಕ್ಷಕಾಂಡದ ತಿರುಳಿನ ತನಕ ... ಏರ್ಪಾಡನ್ನು ಅವರು ಮಾಡುತ್ತಾರೆ. ಕೆಲವು ಸಮಯದೊಳಗೆನೇ ಮರದ ಕಾಂಡವೂ ಹೂವುಗಳೂ ಬಣ್ಣಗಳನ್ನು ಬದಲಾಯಿಸಲು ಹತ್ತು ರಾತ್ಲುಗಳಷ್ಟು ಬಣ್ಣ ಬೇಕಾಗುವುದು.

ಯುರೋಪಿನಲ್ಲಿ ೫೦,೬೦೫,೦೦೦ ಮನೆಗಳಿವೆ. ಆದರೆ ಸಂಯುಕ್ತ ಅಮೇರಿಕಾದಲ್ಲಿ ೧೩,೪೦೦,೦೦೦ ಇವೆ.

ಬಾಲ್ಯದಲ್ಲಿ ನಾಡಿಯು ಮಿನಿಟಿಗೆ ೧೩೦ ಹೊಡೆಯುತ್ತದೆ. ದೊಡ್ಡವರಲ್ಲಿ ೮೦ರಂತೆಯೂ, ಮುದುಕರಿಗೆ ೬೦ರಂತೆಯೂ ಹೊಡೆಯುತ್ತದೆ.

ಗುಡುಗಿನಿಂದ ಹುಚ್ಚು ನಿವಾರಣೆಯಾಯಿತು

ರ್ಯುಹಿಕಾಸೆ ಎಂಬ ಜಪಾನಿಯೋರ್ವನು ಅನೇಕ ವರ್ಷಗಳಿಂದ ಹುಚ್ಚನಾಗಿದ್ದನು. ಒಂದು ದಿನ ಅವನು ಬೆಂದು ಬೆಟ್ಟದ ಬಳಿಯಲ್ಲಿ ತಿರುಗಾಡುತ್ತಲಿದ್ದನು. ಆಗ ಭಯಂಕರವಾದ ಗುಡುಗು ಮಿಂಚು ಬಂತು. ಸಿಡಿಲಿನ ಪ್ರಚಂಡ ಶಬ್ದವೊಂದು ರ್ಯುಹಿಕಾಸೆನ ತಲೆಯ ಮೇಲ್ಗಡೆಯೇ ಉತ್ಪನ್ನವಾಯಿತು. ಒಂದು ಕ್ಷಣಕ್ಕೆ ಅವನ ಹೆದರಿಕೆಯಿಂದ ತತ್ತರಿಸುವವನಂದನು. ಮರು ಕ್ಷಣಕ್ಕೆ ಅವನ ಹುಚ್ಚು ಸಂಪೂರ್ಣ ಅದರಿಂದ ತೊಲಗಿಹೋಗಿತ್ತು. ವೈದ್ಯರ ... ಹುಚ್ಚು ಗುಣಪಡಿಸುವಂತಹುದಲ್ಲವೆಂದ ... ಪಟ್ಟಿರುವರು.

ನೋಟೀಸು.

ಉಡ್ಪಿ ಡಿಮು ಕೋರ್ಟಿನಲ್ಲಿ

O P No 16/37

1 ತೊನ್ಸೆ ಗೋಪಾಲಕೃಷ್ಣ ಪೈ 2 ತೊನ್ಸೆ ರಾಮ ಕೃಷ್ಣ ಪೈ 3 ತೊನ್ಸೆ ಕೇಶವ ಪೈ— ತೊನ್ಸೆ ... ಪೈ ಮಕ್ಕಳು

1ನೇ ಅರ್ಜಿದಾರ ಉಡ್ಪಿ ತಾಲ್ಲೂಕು ಹಂದಾಡಿ ಗ್ರಾಮ 2ನೇ 3ನೇ ಅರ್ಜಿದಾರರು ಉಡ್ಪಿ ಕಸಬಾ—ಅರ್ಜಿದಾರರ

ಅರ್ಜಿದಾರರ ಸಹೋದರ ಮೃತಪಟ್ಟ ತೊನ್ಸೆ ವಿ ಕಟೀಶ ಪೈ ಬಾಬ್ತು ಆತಗೆ The Empire of India Life Assurance Co Ltd Bombay ಈ ಕಂಪೆನಿಯಿಂದ Insurance Policy N 188840ನೇ ಪೋಲಿಸಿ ಬಾಬ್ತು ... 1006 6 0ನ್ನು ... ಅರ್ಜಿದಾರರಿಗೆ ಸಕ್ಸೆಸನ್ ಸರ್ಟಿಫಿಕೇಟು ... ಅರ್ಜಿದಾರರ ದಾಖಲುಮಾಡಿದ ಸದ್ರಿ ಅರ್ಜಿಯು ತಾ 25-3-1937ರಲ್ಲಿ ಇಡಿಸಲಾಗಿರುವುದರಿಂದ ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ದಿವಸ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಹಾಜರುಪಡಿಸತಕ್ಕದ್ದು.

Udipi 19 3 37 — K Ramanath Pai, Pleader for Petitioner

ಶೀತ ಕೆಮ್ಮುಗಳು ಇಂದ್ರಜಾಲದಂತೆ ಗುಣಮಾಡಲ್ಪಡುತ್ತವೆ

ಸುವಾಸನೆಯುಳ್ಳ ಪೆಪ್ಸ್ ವಿಷಹಾರಿ ಗುಳಿಗೆಗಳು ಕೆಮ್ಮು, ಶೀತ, ಶೀತಜ್ವರಗಳನ್ನು ಗುಣಪಡಿಸುವುದಂಬುದರಲ್ಲಿ ಖಾತ್ರಿಯಾಗಿರಿ. ಇದರಿಂದ ಬ್ರಾಂಕೈಟಿಸ್, ನಿಮೋನಿಯಾ ಮತ್ತು ಕ್ಷಯಗಳ ಭಯವಿರುವುದಿಲ್ಲ. ಪೆಪ್ಸನ್ನು ನುಂಗುತ್ತಿರುವಾಗ ಅದು ಬಿಡುವ ಔಷಧಸಾರವು ಅಂಟು ರೋಗಾಣುಗಳನ್ನು ನಾಶಪಡಿ, ಗಂಟಲನ್ನು ತಣ್ಣಗೆ ಮಾಡುತ್ತದಲ್ಲದೆ ಶ್ವಾಸಕೋಶಗಳ ವೇದನೆಯನ್ನೂ ನಿಲ್ಲಿಸುತ್ತದೆ. ಗಂಟಲು ಶ್ವಾಸಕೋಶಗಳ ತೊಂದರೆಗಳನ್ನು ಗುಣಪಡಿಸಲಿಕ್ಕೆ ಪೆಪ್ಸ್ ಗುಳಿಗೆಗೆ ಸರಿಸಮಾನವಾದುದು ಇನ್ನೊಂದಿಲ್ಲ.



ಎಲ್ಲಾ ಔಷಧಿ ಮಾರುವವರಲ್ಲಿಯೂ ಸಿಗುತ್ತದೆ

ಸೀಸೆ ಒಂದಕ್ಕೆ ರೂ 1 ಮಾತ್ರ

ಪೆಪ್ಸ್ ಗುಳಿಗೆಗಳನ್ನು ತೆಗೆದುಕೊಳ್ಳಿರಿ

ಏಜಂಟರು - ಮೆಸರ್ಸ್ ದಾಥಾ ಎಂಡ್ ಕೊ, ಪಿ ಟಿ ಮದ್ರಾಸು.

ಪೆಪ್ಸ್ PEPS

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH

No 16

Sale Rs 6–15–0
SMART LEVER MOVEMENT
Strong & Durable at Low Price



UNIQUE OPPORTUNITY ONLY FOR ONE MONTH
Available Roman or Arabic Figures
Plain Silver Dial

Guaranteed for 5 Years. Lever Pocket Watch Rs 1–15–9
No 19 Chromium 4 Jewels Rs 8–8–0
14 „ 7 „ „ 10–8–0
„ 15 „ 15 „ „ 12–8–0
„ 17 Rolled Gold 15 „ 16–8–0
Rs 1/- Extra for Radium Dial. Postage & Packing Extra
BAPALAL & CO (s) 116 Abdul Rehman Street Bombay 3



ಮೂರು ಕೈಗಡಿಯಾರಗಳು ಮತ್ತು 195
ವಿವಿಧ ವಸ್ತುಗಳಿಗೆ ರೂ. 2–8–0 ಮಾತ್ರ.

ನಮ್ಮ ಸುಗಂಧ ಒಟೋರೋಸಿನ ಹತ್ತು ಗುಳಿಗೆಗಳನ್ನು ರೂ 2–8–0ಗೆ ಒಸ್ಸಿಗೆ ಪಡೆಕೊಳ್ಳುವಲ್ಲಿ ಈ ಕೆಳಗಿನ ವಸ್ತುಗಳು ಪುಕ್ಕಟೆಯಾಗಿ ಸಿಕ್ಕುವವು. ಬಂಗಾರ ಗಿಲಿಟಿನ ದಮ್ಮಿ ಕೈಗಡಿಯಾರ 1 ಲೆಂಡು, 1 ಥೈಲಿ ಜೇಬು ದಮ್ಮಿ ಗಡಿಯಾರ 1, ಸೇಫ್ಟಿ ರೇಜರ್ 1 ಸೋಪು 1, ಬ್ರಶ್ 1 ಕನ್ನಡಿ 1, ಬಾಚಣಿಕೆ 1, ಪಕಟು ಪೌಡರು 1, ಕ್ಲಿಪ್ ಸಮೇತ ಪೆನ್ಸಿಲ್ 1, ಸಿಗ್ರೇಟು ಪೆಟ್ಟಿಗೆ 1, ಸಿಗ್ರೇಟು ಲ್ಯಾಟ್ 1 ಕೈವಸ್ತ್ರ 1, ಉಂಗುರ 1 ಕತ್ತರಿ 1, ಚೈನ್ ಸಮೇತ ಜೇಗಡಕ್ಕೆ ಹಾಕುವ ಉಂಗುರ 1 ಪೆನ್ಸಿಲ್ ಸರ್ಪ್ 1 555 ಫೀಟು ದೂರಕ್ಕೆ ಬೀಳುವ ಫೋಕಸಿಂಗ್ ಟೋರ್ಚ್‌ಲ್ಯಾಟು 1, ಅಥವಾ ಜರ್ಮನ್ ಬಿ ಮಾರ್ಕಿನ ಗಟ್ಟಿಮುಟ್ಟಾದ ರೂಪಾಯಿಯುಳ್ಳ 3 ವರ್ಷ ಗ್ಯಾರಂಟಿ ಇರುವ ಟ್ರ್ಯಾಪ್ ಪೀಸು 1 ಟಪಾಲು ಪ್ಯಾಕಿಂಗ್ ಹಾಸಲು ಆಣೆ 14 ಪ್ರತ್ಯೇಕ.

DUTTA & Co, 15/1 Joymitter Street. *P O Baikhola Calcutta*

ಪ್ರಚಂಡ ವಿಜಯ! ಪ್ರಚಂಡ ವಿಜಯ!

ಎಲ್ಲೆಲ್ಲಿಯೂ ಭಾರಿ ಬಹುಮತ.

ಸ್ವದೇಶದ { ಸ್ವಾತಂತ್ರ್ಯಕ್ಕಾಗಿ / ಅಭಿಮಾನಕ್ಕಾಗಿ / ಪ್ರೇಮದಿಂದ } ಜನರೆಲ್ಲರೂ ತಮ್ಮ ಓಟನ್ನು

REGD NO 3012

ಮಹಾಳಿ' ಪಂಪು ಸ್ಪ್ರೈಯರಿಗೇನೇ ಕೊಟ್ಟಿರುವರು.

ಅಡಿಕೆಯ ಕೊಳೆರೋಗದ ಕಾಳಗಕ್ಕೆ ಅತ್ಯುತ್ಕೃಷ್ಟವಾದ ಪಂಪು ಸ್ಪ್ರೈಯರು ಮಾತ್ರ ಸಾಕಷ್ಟು ಕಾರ್ಯಕಾರಿಯಾಗುವುದು. ಕ್ರಯವು ಅಗ್ಗವಾಗಿದ್ದರೂ ಹೂನಗೆ ತಗ್ಗ 'ಮಹಾಳಿ ಸ್ಪ್ರೈಯರು ಶ್ರೇಷ್ಠತರದ ಆಧುನಿಕ ಯೋಗ್ಯ ಯೋಜನಗಳಿಂದೊಡಗೂಡಿಕೊಂಡಿದ್ದು ಕೃಷಿ ಇಲಾಖೆಯು ಹಾಗೂ ಅನೇಕಾನೇಕ ಕೋವಿದರಾದ ತೋಟಗಾರರಿಂದಲೂ, ಕಾಫಿ ಪ್ಲಾಂಟರುಗಳಿಂದಲೂ, ಶ್ರೇಷ್ಠ ವರ್ಗದ್ದೆಂಬ ಶಿಫಾರಸು ಪಡೆದಿದೆ. ಸ್ವದೇಶಿ ಒಡವೆಯಾದರೂ, ಗುಣ, ಸಾಮರ್ಥ್ಯ, ಕಾರ್ಯಶಕ್ತಿ, ರಚನಾಕ್ರಮಗಳಲ್ಲಿ ಎಲಾ ವಿಲಾಯತಿ, ಪರದೇಶಿ, ಸ್ಪ್ರೈಯರುಗಳೊಡನೆ ವಿಜಯಾರ್ಥಿಯಾಗಿ ಸ್ಪರ್ಧಿಸುವ ಪಂಪು ಸ್ಪ್ರೈಯರೆಂದರೆ 'ಮಹಾಳಿ' ಯೇ ಸರಿ

ಆದುದರಿಂದ ಬಹುಮತದಂತೆ ನಿಮ್ಮ ಆಯ್ಕೆಯೂ 'ಮಹಾಳಿ" ಸ್ಪ್ರೈಯರಿಗೇ ಇರಲಿ

ಹೆಚ್ಚಿನ ಅನುಭವಕ್ಕೆ ಈ ಕೆಳಗಿನ ವಿಳಾಸದವರನ್ನು ವಿಚಾರಿಸಿರಿ:—

1 ಪುತ್ತೂರು ಡಿವಿಜನ ಮಹಾಳಿ ನಿವಾರಣಾ ಸಹಕಾರ ಸಂಘ, ಲಿಮಿಟೆಡ್ ಪುತ್ತೂರು
2 ಎಲ್ಲಾಡ ಟ್ರೇಡಿಂಗ ಕಂಪೆನಿ, ಮಂಗಳೂರು
3 ಬಾಸೆಲ್ ಮಿಶ್ಯನ್ ಬುಕ್ ಡಿಪೋ, ಮಂಗಳೂರು

ಚಿಂತಾರತ್ನ.

ಇದರಲ್ಲಿ—೧ ಸಬೂ ರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ ೩ ಕಾಶ್ಮೀರ ಸೋಡಾ ತಯಾರಿಸುವುದು ೪ ಬಿಸ್ ಕ್ಯೂಟ ತಯಾರಿಸುವುದು ೫ ಪರಿಮಳ ತಯಾರ ಮಾಡುವುದು ೬ ಪೆಪ್ಪರಮೆಂಟು ಮಾಡುವುದು ೭ ದೂಪದ ಘಟ್ಟಿ ಮಾಡುವುದು ೮ ಭಂಗಾರ ಮಾಡುವುದು ೯ ಬೆಳ್ಳಿ ತಯಾರ ಮಾಡುವುದ ೧೦ ಜರ್ಮನ್ ಶಿಲ್ವರ್ ಧಾತುವಮಾಡುವದು ೧೧ ಊದಿನ ಕಡ್ಡಿ ತಯಾರಮಾಡುವುದು ೧೨ ಕಾಗದಿನಶಾಟಿ ತಯಾರಮಾಡುವುದು ೧೩ ಕುಂಕುಮ ವನ್ನು ತಯಾರಿಸುವುದು ೧೪ ಹಸಿಕುಂಕುಮವನ್ನು ತಯಾರಿಸುವುದು ೧೫ ಗೋಡೆ ಸುಣ್ಣ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು ೧೭ ಮೊಸರು ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅತ್ತರಗಂಧ ಸಾಮಾನುಗಳು ೧೯ ಥರ್ಮ ತಯಾರಮಾಡುವುದು ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನ ಮಾಡುವುದು, ೨೨ ಮೆಂಥೇಲ ಎಣ್ಣೆ ತಯಾರಿಸುವುದು, ೨೩ ಕನ್ನಡಿಯ ಮೇಲೆ ಬರೆಯುವುದು ೨೪ ದಂತಮಂಜನ ಮಾಡುವುದು ೨೫ ರಕ್ತಶುದ್ಧಿ ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು, ೨೭ ಕುಟಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು ೨೯ ಶಿಶ್ನವೃದ್ಧಿಗೆ ಔಷಧ ೩೦ ಸರಬತ್ತು ಮಾಡುವುದು ೩೧ ಚಳಿ—ಜ್ವರದ ಗುಳಿಗೆ ಮಾಡುವುದು ೩೨ ಬೂಟಪಾಲಿಶ ಮಾಡುವುದು ೩೩ ಮನೆ, ಪಗಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು ೩೪ ಹುರುಕು ತುಚ್ಚಿ ಮುಲಾಮು ೩೫ ನಾಸೀಪುಡಿಮಾಡುವುದು ಇತ್ಯಾದಿ ೧೫೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ)
ವಿಳಾಸ—ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ—೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ, ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ, ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲಾಫಲಾರ (ಹಾಕಿ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೫೦ ವಿಷಯಗಳು ಇರುತ್ತವೆ,

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ.)
ವಿಳಾಸ.—ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

—. ಇದು :—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ

ಇದರಲ್ಲಿ ವೈದ್ಯಶಾಸ್ತ್ರ, ಕಾಮಶಾಸ್ತ್ರ ಪ್ರಶ್ನಭಾಗ, ಶಕುನಭಾಗ ಕೈಗಾರಿಕೆ ವಿಷಯ, ಕಾಯದೇಭಾಗ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ, ತಂತ್ರ, ಮಂತ್ರ, ಯಂತ್ರ ವಶೀಕರಣ ಇತ್ಯಾದಿ ಅನೇಕ ಮರ್ಮವಿದ್ಯೆಗಳು ಇರುತ್ತವೆ ಎಲ್ಲ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೌಲ್ಯ ಗ್ರಂಥದ ಬೆಲೆ ೧—೦—೦
ವಿಳಾಸ—ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers—
S. C. Salimath & Sons,
GADAG.

ಪತ್ರವ್ಯವಹಾರ

ಚಾಪ್ಟಾಧರ
ಕಾಂಗ್ರೆಸ್ಸಿಗರಿಗೆ ನಾವು ಹಾಕುತ್ತಿರಲ್ಲ. ಕ—ಸ್ವ

ಮಹಾರಾಜಶ್ರೀ ಸ್ವದೇಶಾಭಿಮಾನಿ ಪತ್ರಿಕೆಯ ಸಂಪಾದಕರವರ ಸನ್ನಿಧಾನಕ್ಕೆ — ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರಿಗೂ ಕುಂಬಳೆ ಸೇರಿನ ಬಿಟರಂಥ ಕಾರ್ಯಕರ್ತರ ಬಗ್ಗೆ ನಿಮ್ಮ ಸೇವಕ ರಲ್ಲೊಬ್ಬ ಬಿಟೆರನಾದ ನಾನು ವಿಜ್ಞಾಪಿಸಿಕೊಳ್ಳುತ್ತಿದ್ದೇನೆ —

ನಮ್ಮ ಫರ್ಕಿಯಲ್ಲಿ ಕುಂಬಳೆ ಪೇಟೆಯಲ್ಲಿಯೇ ವಿದ್ಯಾಭ್ಯಾಸಮಾಡಿ ನಂತರ ೮ ವರ್ಷದ ವರೆಗೆ ಜವುಳಿ ವ್ಯಾಪಾರ, ಅಕ್ಕಿ, ಭತ್ತ ಧಂಧೆ ... ತಾಲೂಕುಬೋರ್ಡು ಕಂಟ್ರಾಕ್ಟರ್ ಮತ್ತು ನೇಶನಲ್ ಲೈಫ್ ಇನ್ಶೂರೆನ್ಸ್ ಏಜೆಂಟರಾಗಿಯೂ, ನೊಸ್ಯಾಟಿಯ ಕಮಿಟಿ ಮೆಂಬರರಾಗಿಯೂ, ಅನೇಕ ದೊಡ್ಡವರ ಬಳಿ ವರ ಪ್ರೀತಿಗೆ ಪಾತ್ರರಾಗಿಯೂ, ಕುಂಬಳೆಯಲ್ಲಿ ವ್ಯಾಪಾರದಲ್ಲಿ ಸಾವಿರಾರು ರೂಪಾಯಿ ನಷ್ಟಪಟ್ಟು ಅನೇಕ ಸ್ವಜಾತಿ ಬಂಧುಗಳ ಶಾಹಿಯವರಿಗೆ ಸಾಹಿರಗಟ್ಟಿಯಲ್ಲಿ ಬಾಕಿಮಾಡಿ ಬಡವರಾದವರಿಗೆ ವಾಗ್ಲೆ ಡಲ್ಲಿ ... ಬರ್ಮಾದೇಶದ ರಂಗೂನಿನಲ್ಲಿ ಬರ್ಮದೇಶದ ಕಾಂಗ್ರೆಸ್ ಕಮಿಟಿ ಮೆಂಬರರಲ್ಲೊಬ್ಬರಾದ ಡಾಕ್ಟರ್ ಕೆ ಯು ಪಿ. ರಾಯರ ಸಹಾಯದಿಂದ ಅಲ್ಲಿ ಅನೇಕ ನಮೂನೆಯ ವ್ಯಾಪಾರಮಾಡಿ ಬರ್ಮಾ ಕಾಂಗ್ರೆಸಿನ ಮೆಂಬರರಾಗಿಯೂ, ಬರ್ಮಾ ಇಂಡಿಯನ್ ಎಸೋಸಿಯೇಶನಿನ ಮೆಂಬರರಾಗಿಯೂ ಗಜೆಟೆಡ್ ಆಫೀಸರರು ಇರುವಂಥ ಕ್ಲಬ್ಬಿನಲ್ಲಿಯೂ ಕೇರಳ ಎಸೋಸಿಯೇಶನ ಕ್ಲಬ್ಬಿನಲ್ಲಿಯೂ ಕಮಿಟಿ ಮೆಂಬರರಾಗಿಯೂ, ರಾಮಕೃಷ್ಣ ಮಿಶನ್ ಮೊದಲಾದ ಸಾರ್ವಜನಿಕ ಸಂಘಗಳಲ್ಲಿ ಮೆಂಬರರಾಗಿಯೂ ಕೆಲಸಮಾಡಿದವರಲ್ಲದೆ ಬರ್ಮೀಯ ರಿಗೂ ಇಂಡಿಯಾ ಕೂಲಿಯವರಿಗೂ ಜಗಳವಾದಾಗ ಇಂಡಿಯಾ ಕೂಲಿಯವರಿಗೆ ಅನೇಕ ವಿಧದಿಂದ ಸಹಾಯ ಮಾಡಿದಕ್ಕೆ ರಂಗೂನಿನ ರೇಬರ್ ಗಜೆಟೆಡ ಆಫೀಸರರಾದ ರಾಮದಾಸ ನಾಯುಡುಗಳವರ ಪ್ರೀತಿಗೆ ಪಾತ್ರರಾಗಿದ್ದರು. ರಂಗೂನಿನಿಂದ ಗುರುವಾಯೂರು ಸತ್ಯಾಗ್ರಹ, ಬೊಂಬಾಯಿ ಗಾಂಧಿಸೇವಾಸಂಘ, ಧಾರವಾಡ ಕರ್ನಾಟಕ ಪ್ರೊವಿನ್ಸಿಯಲ್ ಕಾಂಗ್ರೆಸಿಗೂ ದಕ್ಷಿಣ ಕನ್ನಡಾ ಕಾಂಗ್ರೆಸಿಗೂ ಹಣ ಜಮೆಮಾಡಿ ಕಳುಹಿಸಿಕೊಟ್ಟ ಬಹಳ ಉತ್ಸಾಹಪಟ್ಟದ್ದೂ ಅನೇಕ ಜನರಿಗೆ ತಿಳಿದಿರಬಹುದು ಅಲ್ಲದೆ ಬೊಂಬಾಯಿಯ ಗಿರಗಾಂ ವಾರ್ಡು ಡಿಕ್ಟೇಟರರಾಗಿ ಎರಡನೇ ಇಸವಿಯಲ್ಲಿ ಎರಡಾವರ್ತಿ ಜೈಲು ವಾಸ ಅನುಭವಿಸಿದ್ದಾರೆ ಹೈದರಾಬಾದ್ ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀಗೋವಿಂದ ನಾಯಕರ ಸಹಾಯ ಪಡೆದು ಮಹಾತ್ಮಾಜಿಯವರ ಬಳಿಗೆ ಪೀಕಾಕ್ ರೇಟ್ ಭಿಗೂ ಕೆಲಸಮಾಡಲಿಕ್ಕೆ ಹೋಗಿದ್ದರು ಕರಾಚಿಯಲ್ಲಿ ಒಬ್ಬ ಸಾಹುಕಾರನ ಸ್ನೇಹದಿಂದ ವ್ಯಾಪಾರ ಸಹಾಯ ದೊರೆತಿರುವಾಗ ಕೂಡಾ ಆ ಸಹಾಯವನ್ನು ಕೈಬಿಟ್ಟು ಮಹಾತ್ಮಾ ಗಾಂಧಿಜಿಯವರು ಉಪವಾಸ ಮಾಡುವಾಗ ಪೂನೆಯ ಪರ್ಣಕುಟೀರಕ್ಕೆ ಬಂದು ಅಲ್ಲಿ ಅನೇಕ ದಿವಸ ಇದ್ದರು ಬೊಂಬಾಯಿಯಲ್ಲಿ ಮಹಾರಾಷ್ಟ್ರ ನಡೆದಾಗ ಕಿಸಾನ್‌ ಫ್ರಂಟ್‌ನಲ್ಲಿ ಕೆಲಸಮಾಡಿ ಮ ರಾ ಮೊಹರಾಳಿಯವರಿಂದಲೂ ಸರ್ಟಿಫಿಕೇಟು ಪಡೆದವರಾಗಿರುತ್ತಾರೆ ಮತ್ತು ಬೊಂಬಾಯಿ ಪ್ರೊವಿನ್ಸಿಯಲ್ ಕಾಂಗ್ರೆಸಿನ ಜನರಲ್ ಸೆಕ್ರೆಟರಿಯವರಿಂದಲೂ ಸರ್ಟಿಫಿಕೇಟು ಪಡೆದಿರುತ್ತಾರೆ ಕಾರವಾರ ರೈತರ ರಿಲೀಫ್ ಕೆಲಸದಲ್ಲಿಯೂ ಬೊಂಬಾಯಿ ಕರ್ನಾಟಕ ಕ್ಲಬ್ಬಿನಲ್ಲಿಯೂ ಕೆಲಸಮಾಡಿರುತ್ತಾರೆ ಕಾಂಗ್ರೆಸ ಕೆಲಸದಲ್ಲಿ ನೂರಾರು ರೂಪಾಯಿ ನಷ್ಟಪಟ್ಟವರಲ್ಲದೆ, ಡಿಲ್ಲಿಯಿಂದ ರಾಮೇಶ್ವರದ ವರೆಗೆ ಅನೇಕ ಊರು ಸಂಚಾರಮಾಡಿದವರಾಗಿಯೂ, ಫ್ರೆಂಚ್ ಇಂಡಿಯಾ ಬ್ರಿಟಿಷ್ ಇಂಡಿಯಾ ಪೋರ್ಚುಗೀಸ್ ಇಂಡಿಯಾ ಗವರ್ನಮೆಂಟಿನ ಕಷ್ಟದಲ್ಲಿ ಕೂಡಾ ಬದ್ಧರಿಗೆ ಕೊಡುವ ಪಾಸನ್ನು ಸ್ವತಃ ಅನುಭವಿಸಿದವರಾಗಿರುತ್ತಾರೆ

ರಂಗೂನಿನಿಂದ ೧೭೫ ಮೈಲು ದೂರ ಹೋಗಿ ಒಬ್ಬ ಕಳ್ಳನನ್ನು ತನ್ನ ಕೈಯಿಂದ ಹಿಡಿದು ಪೋಲೀಸಿನವರಿಗೆ ಹಿಡಿದುಕೊಟ್ಟವರಾಗಿಯೂ, ೧೯೩೦ನೆ ಇಸವಿ ಲ್ರಾಬಾದುಕ ಸ್ವರ್ಗಸ್ಥರಾದ ಬೊಂಬಾಯಿ ವಿಠಲಭಾಯಿ ... ತಾಲೂಕು ಬೋರ್ಡಿನಲ್ಲಿ ಸಂತ ... ಮಾಜಿ ತಾಲೂಕುಬೋರ್ಡು ಪ್ರೆಸಿಡೆಂಟ ರಾದ ಶ್ರೀ ಚಟ್ಟ ಭಂಡಾರಿಯವರು, ಶ್ರೀ ಮಂಜಿರೆ ಕೃಷ್ಣ ಶೆಟ್ಟರು ಪಟ್ಲ ...ರವರು ಚಾರ್ಮಾಡಿ ... ಕುಂಬಳೆ ಫರ್ಕಾ ... ಪಟೇಲರು, ... ಸಮಯದಲ್ಲಿ ವಿಚಾರ ... ಅನವರ್ಶದಿಂದ ಕೆಲಸಮಾಡಿದವರಾಗಿಯೂ, ಶ್ರೀ ಎ ಬಿ. ಶೆಟ್ಟಿ ಮತ್ತು ಶ್ರೀ ಕಾರ್ನಾಡ ಸದಾಶಿವರಾಯರವರ ನ್ಯಾಯವಿಧಾಯಕ ಸಭೆಯ ಇಲೆಕ್ಷನಿನಲ್ಲಿ ಕುಂಬ್ಳೆಯ ಏಜೆಂಟರಾಗಿಯೂ, ಶ್ರೀ ರಾಮಕೃಷ್ಣ ಕಾರಂತರ ಎಸೆಂಬ್ಲಿ ಇಲೆಕ್ಷನಿನಲ್ಲಿಯೂ ಕೆಲಸಮಾಡಿದವರಲ್ಲದೆ, ರಂಗೂನು ಬೊಂಬಾಯಿಯ ಎಸೆಂಬ್ಲಿ ಕೌನ್ಸಿಲುಗಳ ಇಲೆಕ್ಷನಿನ ಸಮಯಕ್ಕೆ ಕೆಲಸಮಾಡಿದವರಾಗಿರುತ್ತಾರೆ ಈಗ ಕಾಸರಗೋಡು ತಾಲೂಕಿನ ಕಾಂಗ್ರೆಸ್ ಕಮಿಟಿ ಮೆಂಬರರಾಗಿಯೂ, ನಮ್ಮ ಕುಂಬಳೆ ಸರ್ಕಲಿನ ಜಸ್ಟಿಸ್ ಪಾರ್ಟಿಯವರನ್ನು ನಮ್ಮ ಜಿಲ್ಲೆಯ ಒಂದು ರಾಷ್ಟ್ರಪತ್ರಿಕೆಯು ಅವಮಾನ ಮಾಡಿದಕ್ಕೆ, ಅವರು ಪರ ದೇಶದಲ್ಲಿ ಇದ್ದಾಗ್ಯೂ ಆ ಪತ್ರಿಕೆಯವರ ತಪ್ಪನ್ನು ತಿದ್ದುವ ... ಇದ್ದಿಕೆಯ ... ದೇಶಕ್ಕೆ ಅಳ್ಳರು ಕಾಂಗ್ರೆಸಿನ ಅಜ್ಞೆಗೆ ಸರಿಯಾಗಿ ನಡೆಯುವವರೆಂಬ ಭರವಸೆ ಸಾಧ್ಯಾಂತ ಎಲ್ಲರಿಗೂ ತಿಳಿದ ವಿಷಯವಾದ್ದರಿಂದ ಬರುವ ಡಿಸ್ಟ್ರಿಕ್ಟ್‌ಬೋರ್ಡ್ ಇಲೆಕ್ಷನಿನಲ್ಲಿ ಅವರನ್ನು ನಿಲ್ಲುವಂತೆ ದಕ್ಷಿಣ ಕನ್ನಡ ಕಾಂಗ್ರೆಸ್ ಪಾರ್ಲಿಮೆಂಟರಿನವರೂ ಕುಂಬಳೆ ಸರ್ಕಲಿನ ಓಟರರೂ ಗಮನಿಸಬೇಕಾಗಿ ನಿಮ್ಮಲ್ಲಿ ನನ್ನ ಕೂಡ ದೈನ್ಯಭಾವದಿಂದ ಪ್ರಾರ್ಥಿಸುತ್ತೇನೆ

ಇತಿ,
ಓಟರರಲ್ಲೊಬ್ಬ

ರಾಮೇಶ್ವರದಲ್ಲಿ ಕೋದಂಡರಾಮ ಸ್ವಾಮಿ ದೇವಾಲಯದ ಪ್ರತಿಷ್ಠೆ

ಹದಿನಾಲ್ಕು ವರ್ಷಗಳ ದೀರ್ಘ ಅವಧಿಯ ಕಾಲ ನಮ್ಮ ಜಿಲ್ಲೆಗೆ ಪಯಣಮಾಡಿ ಹಾವು ಜಾಜ್ಞೊದ್ಧಾರ ಮಾಡಲು ನಿರ್ಧರಿಸಿರುವ ರಾಮೇಶ್ವರದಲ್ಲಿರುವ ಶ್ರೀ ಕೋದಂಡರಾಮ ಸ್ವಾಮಿ ದೇವಾಲಯದ ಸಹಾಯಾರ್ಥವಾಗಿ ಕಿಷ್ಕಿಂದಗಳವರಿಂದ ಯಥೇಷ್ಟ ಸಹಾಯ ಪಡೆದು ಅದರನ್ನು ಅತೀರ್ಣವಾಗಿ ಸಂಗೀತಕೀರ್ತನ ರಥೋತ್ಸವದ ನಂತರ ಪುನಃ ರಾಮೇಶ್ವರಕ್ಕೆ ದಯಮಾಡಿಸಿದ ಶ್ರೀಮದ್ವರದೇಂದ್ರ ತೀರ್ಥ ಶ್ರೀಪಾದ ಪರಮಹಂಸರ ಶ್ರೀ ಮತ್ ಸುಕೃತೀಂದ್ರ ಶ್ರೀ ಪಾದಂಗಳವರು ಇದೇ ಕಳೆದ ತಾ. ೧೫ರಲ್ಲಿ ೧೩ ತಾ ಶಿಕ್ಕೆ ನಡೆಯುವ ಮಿಥುನ ಲಗ್ನದಲ್ಲಿ ಅಪರಾಹ್ನ ಗಂಟೆ ೧ ರ ಸಕ್ಕೆ ಸದಿ ಕೋದಂಡ ರಾಮ ಮಠದ ಪ್ರವೇಶೋತ್ಸವವನ್ನು ಶಾಸ್ತ್ರೋಕ್ತ ವಿಧಿಗಳಿಗನುಸಾರವಾಗಿ ಕೂಡಿದ ಶಿಷ್ಯವರ್ಗದ ಎದುರಿನಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಿದರು ರಾಮೇಶ್ವರಕ್ಕೆ ದೈವ್ಯೇಯವರು ಶಿಲ್ಪಯಂತ್ರ ದೇಗಳನ್ನು ಇಟ್ಟದ್ದರಿಂದ ನಮ್ಮ ಜಿಲ್ಲೆಯಿಂದಲೂ ಮತ್ತಿತರ ಸ್ಥಳಗಳಿಂದಲೂ ಗೌಡ ಸಾರಸ್ವತ ಶಿಷ್ಯವರ್ಗವು ರಾಮೇಶ್ವರದಲ್ಲಿ ತಮ್ಮ ಒಂದೇ ಒಂದಾದ ಈ ಮಠದ ಪ್ರವೇಶ ಪ್ರತಿಷ್ಠೋತ್ಸವಗಳನ್ನು ನೋಡಲು ನೆರೆದಿದ್ದರು

ಅಂದು ತಾ. ೧೫ರಲ್ಲಿ ದೇವಸ್ಥಾನದ ಜೊತೆ ಕಟ್ಟಿದ ವಿಶೇಷವಾಗಿ ಶೃಂಗರಿಸಲ್ಪಟ್ಟದ್ದು ಮೂವತ್ತೇಳ ವೃಕ್ಷವನ್ನುಂಟು ಮಾಡುತ್ತಾ ಎಲ್ಲಾ ಕಾರ್ಯಗಳಲ್ಲಿಯೂ ಶ್ರೀ ಶ್ರೀಯವರು ಬಹಳ ಉತ್ಸಾಹದಿಂದ ಭಾಗವಹಿಸಿದ್ದರು

ಇಂದು ತಾ ೧೯ನೇ ರ ಶುಕ್ರವಾರ ಅಪರಾಹ್ನ ಗಂಟೆ ೧—೩೦ಕ್ಕೆ ನಡೆಯುವ ಮಿಥುನ ಲಗ್ನದಲ್ಲಿ ಶ್ರೀಕೋದಂಡರಾಮ ದೇವರ ಮೂರ್ತಿಯೂ ಮತ್ತು ಲಕ್ಷ್ಮೀನಾರಾಯಣ ಹಾಗೂ ಆಂಜನೇಯರ ನವೀನ ವಿಗ್ರಹಗಳನ್ನು ಶ್ರೀ ಶ್ರೀಯವರು ಪ್ರತಿಷ್ಠಿಸುವರು

In the court of the Subordinate Judge of South Kanara.

Small cause suit No 23/37

P Gajanan Rao—Plaintiff

by

1 Pandeshwar Srinivas Upadhaya

2 Kamalakshi Amma & another Defendants

The Defendants above named are hereby given notice that the plaintiff has filed a suit for recovery of Rs 335-12-9 plus costs & the amount due by defendants on a d. p. note the suit is posted to 31-3-1937 If the defendants do not appear before the court on that date they will be placed ex parte and the suit will be proceeded with

Mangalore, 10-3-37. U Rama Rao, Vakil for Pltf.

ಕರ್ನಾಟಕ ಟಾಕೀಸ್, ಲಿ., ಧಾರವಾಡ.

'ಚಿರಂಜೀವಿ'

ಭಕ್ತಿರಸ ಪ್ರಧಾನವುಳ್ಳ ಪೌರಾಣಿಕ ಕನ್ನಡ ಪ್ರಥಮ ವಾಕ್ಪಟ.

ಧಾರವಾಡ ಕರ್ನಾಟಕ ಟಾಕೀಜದವರು ತಮ್ಮ ಮೊದಲನೇಯ ಕನ್ನಡ ವಾಕ್ಪಟವಾದ 'ಚಿರಂಜೀವಿ' ಯನ್ನೂ ರಸಿಕ ಕನ್ನಡಿಗರಿಗೆ ಅರ್ಪಿಸಲು ಅಣಿಮಾಡಿದ್ದಾರೆಂದು ತಿಳಿಸಲು ಆನಂದವೆನಿಸುತ್ತದೆ ಚಿರಂಜೀವಿ—ಇದು ಚಿರಂಜೀವಿಯಾದ ಮಾರ್ಕಂಡೇಯನ ಚರಿತ್ರೆಯು. ಭಕ್ತಿರಸ ಪ್ರಧಾನವಾದ ಈ ಕಥೆಯನ್ನು ಕನ್ನಡದಲ್ಲಿ ಪ್ರಸಿದ್ಧ ಲೇಖಕರಾದ ಬೆಂಗಳೂರಿನ ಶ್ರೀ ದೇವುಡು ನರಸಿಂಹ ಶಾಸ್ತ್ರಿ ಎಂ. ಎ ಇವರು ವಿಶಟಕ್ಕಾಗಿ ಬಲು ಸೊಗಸಾಗಿ ಬರೆದಿದ್ದಾರೆ, ಕಥಾ ವಸ್ತುವೆಂದರೆ ಭಕ್ತಾಗ್ರೇಸರನಾದ ಮಾರ್ಕಂಡೇಯನು ತನ್ನ ತಪಃಪ್ರಭಾವದಿಂದ ಪರಮೇಶ್ವರನಿಂದ ಅಮರತ್ವವನ್ನು ಪಡೆದ. ಚಿರಂಜೀವಿಯಾದದ್ದು ತಪಸ್ವಿ ಮೃಕಂಡುಸಾಧ್ವಿಯಾದ ಮರುದ್ವತಿ ಇವರು ಪುತ್ರಾಪೇಕ್ಷೆಯಿಂದ ಪರಶಿವನನ್ನು ಒಪ್ಪಿಸಿ ಅಲ್ಪಾಯುವಾದ ಮಾರ್ಕಂಡೇಯನನ್ನು ಪಡೆದರು ... ಅಲ್ಪಾಯು ಎಂಬುದನ್ನು ತಿಳಿದು ಶೋಕಿಸುವ ... ಯನ್ನು ನೋಡಿ ಮಾರ್ಕಂಡೇಯನು ಚಿರಂಜೀವಿಯಾಗಲು ಪರಮೇಶ್ವರನಲ್ಲಿ ತಪವನ್ನಾಚರಿಸುವನು ... ತಾನು ಅಮರತ್ವವನ್ನು ಪಡೆದು ಚಿರಂಜೀವಿಯಾಗುವೆನೆಂದು ಅಭಯವನ್ನು ಕೊಡುವನು. ಮಾರ್ಕಂಡೇಯನ ಆಯುಷ್ಯ ತೀರುವ ಅವಧಿಯ ... ಧರ್ಮಾಧಿಕಾರಿಯಾದ ಯಮಧರ್ಮನು ಅವನ ... ನ್ನು ಭಂಗವಾಡಲು ಹೋರಡುವನು. ಯಮಧರ್ಮನಿಗೆ ಮಾರ್ಕಂಡೇಯನ ತಪೋಭಂಗಮಾಡಲು ... ವಾಗದೆ ಇರಲು ಪರಮೇಶ್ವರನು ಪ್ರತ್ಯಕ್ಷನಾಗಿ ಮಾರ್ಕಂಡೇಯನಿಗೆ ಅಮರತ್ವವನ್ನು ದಯಪಾಲಿಸುವನು ಕಥಾ ಪ್ರಾರಂಭದಿಂದ ಮಂಗಳಾಂತ ವರೆಗೂ ತ್ರಿಲೋಕ ಸಂಚಾರಿಯಾದ ನಾರದನ ತನ್ನ ಸಂಚಾರದನು ನಡೆಸುವನು ... ಪೌರಾಣಿಕ ಭಕ್ತಿರಸ ಪ್ರಧಾನವುಳ್ಳ ಈ ಆದರ್ಶ ಕಥೆಯನ್ನು ಅತಿ ಬೋಧಪ್ರದವಾಗಿ ಕರ್ನಾಟಕ ಟಾಕೀಜದವರು ವಾಕ್ಪಟದಲ್ಲಿ ಪ್ರದರ್ಶಿಸಿರುವರು

ಇದರಲ್ಲಿ ಮುಖ್ಯ ಪಾತ್ರಗಳನ್ನು ವಹಿಸಿದವರು ಕನ್ನಡ ರಂಗಭೂಮಿಯಲ್ಲಿ ಸುರಿತ ನಟನಟಿಯರು. ಶ್ರೀ ದೇವುಡು, ಇವರು ಮೃಕಂಡುವಿನ ಪಾತ್ರವನ್ನು ವಹಿಸಿರುವರು, ಕನ್ನಡ ರಂಗಭೂಮಿಯ ನಿಸ್ಸೀಮ ಸೇವಕರಾದ ಹಾಗೂ ವೃತ್ತಪತ್ರಿಕಾ ಪ್ರಪಂಚದಲ್ಲಿ ಅಖಿಲ ಕನ್ನಡನಾಡಿನಲ್ಲಿ ಹೆಸರುಪಡೆದ, ಕನ್ನಡಿಗರ ಮುಂದಾಳುವಾದ ಶ್ರೀ ಮ ಎರಡನೆ ಕೃಷ್ಣರಾಯರು ಯಮಧರ್ಮನ ಪಾತ್ರವನ್ನು ವಹಿಸಿರುವರು ವಾಕ್ಪಟದಲ್ಲಿ ಕೆಲಸಮಾಡಿರುವ ಶ್ರೀ ಬಸವರಾಜ ಮನಸೂರ ಇವರು ನಾರದನ ಪಾತ್ರವನ್ನು ಬಲು ಮನೋಹರವಾಗಿ ಅಭಿನಯಿಸಿರುವರು ಕನ್ನಡ ರಂಗಭೂಮಿಯಲ್ಲಿ ಸಹಕರಿಸುವಿನ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿದ ಬೆಂಗಳೂರಿನ ಕುಮಾರ ನಾರಾಯಣನು ಬಾಲಕ ಮಾರ್ಕಂಡೇಯನ ಪಾತ್ರವನ್ನು ಅಭಿನಯಿಸಿರುವನು ಮರುದ್ವತಿಯ ಪಾತ್ರವನ್ನು ಗ್ರಾಮಫೋನ್ ರೆಕಾರ್ಡುಗಳಲ್ಲಿ ಹಾಡಿ ಪ್ರಸಿದ್ಧಿಯನ್ನು ಹೊಂದಿದ ಹಾಗೂ ರಂಗಭೂಮಿಯಲ್ಲಿ ಪಾತ್ರವನ್ನು ವಹಿಸಿ ನಾಟಕ ನಟಿಯರಾದ ಶ್ರೀಮತಿ ಸುಂದರಮ್ಮನವರು ಮನೋವೇಧಕವಾಗಿ ಅಭಿನಯಿಸಿರುವರು ಹಿಂದೀ ಚಿತ್ರಪಟಗಳಲ್ಲಿ ಅಭಿನಯಿಸಿದ ವಿಜಾಪುರದ ಅವರ ಕರ್ನಾಟಕ ಇವರ ಹಾಡುಗಳು ಕರ್ಣಮಧುರವಾಗುವವು ಶ್ರೀ ಕೆ ಸುಂದರಮ್ಮನವರ ಹಾಡುಗಾರಿಕೆಯು ಶಾಸ್ತ್ರೋಕ್ತವಾಗಿಯೂ ಮಧುರವಾಗಿಯೂ ಇದೆಯೆಂದು ಹೆಮ್ಮೆಯಿಂದ ಹೇಳಬಹುದು ಸಂಗೀತದ ಏರ್ಪಾಟುಗಳು ದಿವಂಗತ ನಾಟಕಶಿರೋಮಣಿ ವರದಾಚಾರ್ಯರ ಪ್ರಿಯ ಶಿಷ್ಯರಾದ ಬೆಂಗಳೂರಿನ ಹಾರ್ಮೋನಿಯಂ ... ಶೇಷಗಿರಿಯರು ಶಾಸ್ತ್ರೋಕ್ತ ಸಂಗೀತ ವಿಪುಣ ನಟನೆಯಿಂದ ದೊರೆತಿದ ಈ ವಾಕ್ಪಟವು ಕನ್ನಡ ವಾಕ್ಪಟಗಳಲ್ಲಿ ಪ್ರಥಮಸ್ಥಾನವನ್ನು ಪಡೆಯುವದೆಂದು ಎದೆತಟ್ಟಿ ಹೇಳಬಹುದು

ಧಣಿಯ ಸರಸ್ವತೀ ಸ್ಟುಡಿಯೋದಲ್ಲಿ ಈ ಚಿತ್ರಪಟವು ತಯಾರಾಗಿರುತ್ತದೆ. ಅಲ್ಲಿಯ ಡಿರೆಕ್ಟರ್ ದಿಗ್ದರ್ಶಕರಾದ ಶ್ರೀ ಕೆ ಪಿ ಭಾವೆಯವರು ಈ ವಾಕ್ಪಟಕ್ಕೆ ದಿಗ್ದರ್ಶಕರಾಗಿ ದೊರೆತದ್ದು ಕನ್ನಡಿಗರ ಸುದೈವವೇ ಸರಿ

ಕನ್ನಡಿಗರ ಸಂತಸದ ಫಲವಾದ ಈ ಸರ್ವೋತ್ಕೃಷ್ಟವಾದ ವಾಕ್ಪಟವು ಇದೇ ಯುಗಾದಿ ಪ್ರತಿಪದೆಯ ದಿನ ದಕ್ಷಿಣ ಕನ್ನಡಿಗರಾಗಿ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಪ್ರದರ್ಶಿಸಲ್ಪಡುವುದು ಕನ್ನಡಿಗರೆಲ್ಲರೂ ಈ ಸಾಹಸಕ ಬೆಂಬಲಕೊಡಬೇಕಾಗಿದೆ

THE PIE-MONEY BANK LTD,

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 7% 1 Year 6% For 6 months 5% 3 months 4½%

Auction Chit Funds ranging from Rs 100—0—0 run regularly on systematic lines Unique Banking facilities to Businessmen and interested Public

Apply for particulars— K. R. GURU, *Managing Director*

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಯುರವರ

ಬಾಲಭಾಸ್ಕರ.

(ಗವರ್ನಮೆಂಟ್ ರಿಜಿಸ್ಟರ್ಡ್)



ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್ ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ದಕ್ಷಿಣ ಕನ್ನಡದ ಏಜಂಟರು —ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

Combined Booking Agency
AND
Joint Booking Office.

ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ
ಮತ್ತು
ಜ್ಯೊಂಟ್ ಬುಕ್ಕಿಂಗ್ ಆಫೀಸು.

ಬಸ್ಸು ಸರ್ವೀಸುಗಳ ಮೇಲಾಟವನ್ನು ಹೋಗಲಾಡಿಸಿ
ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಿ
ಜನಸೇವೆಯನ್ನು ಮಾಡುವ ಉದ್ದೇಶದಿಂದ,
ನಾವೆಲ್ಲರೂ ಕೂಡಿ ಸರ್ವೀಸುಗಳ ವ್ಯವಸ್ಥೆಗಳನ್ನು ಮಾಡಿದ್ದೇವೆ
ಪ್ರಯಾಣಿಕರಿಗೆ ಯಾವುದೊಂದು ಅನಾನುಕೂಲವು ಒದಗಿದ್ದಾದರೆ,
ಅಥವಾ
ಪ್ರಯಾಣ ಸೌಕರ್ಯದ ಉದ್ದೇಶದಿಂದ ಯಾರೊಬ್ಬರಿಗ ಯಾವುದೊಂದು ಸೂಚನೆ ಕೊಡಲಿದ್ದರೆ,
ಅವುಗಳನ್ನು ತಿಳಿಯಲು ನಾವು ಆತುರಪಡುತ್ತೇವೆ

ಮೇಲಿನ ಸಂಸ್ಥೆಗಳ ಜ್ಯಾಂಟ್ ಮೆನೇಜರ (Joint Manager) ಕೊಡನೆ ಅಥವಾ ಕೆಳಗೆ ಹೆಸರು ಕಾಣಿಸಿದಯಾರೊಡನೆಯಾದರೂ
ಪತ್ರವ್ಯವಹಾರವನ್ನು ನಡೆಸಬಹುದು

The Canara Public Conveyance Co. Ltd.
The Hanuman Transport Co., Ltd.
The Shanker Vittal Motor Co., Ltd.
The Durga Parameshwari Motor Service.
The Popular Motor Service Ltd.
The P. V. Motor Service.
The Modern Motor Service of Mysore Ltd.
The Superb Motor Service.
The Mahalaxmi Motor Service.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.
Estd. 1908
Church Gate Street, Fort - - BOMBAY.

SPECIAL FEATURES.

1. Rebate on yearly payment of policies
2. Rebate for larger assurances
3. Accident Risk covered on small extra premiums
4. Attractive Bonuses

It pays you to represent this Company.
Wanted Agents in unrepresented parts.

Apply to —

Messrs Kochikar Brothers,
Madras Branch Secretaries.

1936
OUR VALUATION YEAR

Take a BOMBAY LIFE Policy now, and share in the profits



Branches at-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No 4

ಮಂಗಳೂರು.

ಶ್ರೀ ದುರ್ಗಾ ಪರಮೇಶ್ವರಿ ಮೋಟರ್ ಸರ್ವಿಸು ಕಂಪೆನಿಯು ಬುಕ್ಕಿಂಗ್ ಏಜೆನ್ಸಿಯೊಡನೆ ಸೇರಿರುವುದರಿಂದ ಮೋಟರು ಕಂಪೆನಿಗಳೊಳಗಿನ ಸ್ಪರ್ಧೆಯು ನಿಂತು ಮೋಟಾರು ದರಗಳನ್ನು ಸರ್ವಾನುಕೂಲವು ಮಿತವಾಗಿ ಇಳಿಸಲ್ಪಟ್ಟಿವೆ, ಪ್ರಯಾಣ ಸೌಕರ್ಯವು ಎಂದಿಗಿಂತ ಹೆಚ್ಚಿನದೇ ಇರುವಂತೆ ಅಧಿಕಾರಿಗಳ ಪ್ರಯತ್ನವಿದೆ, ಪ್ರಯಾಣಿಕರು ಯಾವ ವಿಧದಿಂದಲೂ ತೊಂದರೆಗೀಡಾಗದೆ ಪ್ರಯಾಣಮಾಡಲು ಅತಂಕವಿರುವುದಿಲ್ಲ.

ನಮ್ಮ ಮುನಿಸಿಪಾಲಿಟಿಗೆ ರಸ್ತೆಗಳ ಬಗ್ಗೆ ಡಾಮರು ಹಾಕಿಸುವರೆ ಮದ್ರಾಸು ಸರಕಾರವು ಮಂಜೂರು ಮಾಡಲ್ಪಟ್ಟ ದಿವೇಜು ರೂ. ಒಂದೂವರೆ ಲಕ್ಷವೆಂತ ತಿಳಿದು ಬರುತ್ತದೆ. ಈ ದಿವೇಜು ಇದೇ ತಿಂಗಳೊಳಗೆ ದೊರೆತು ಬೇಗನೇ ಡಾಮರು ಹಾಕುವ ಕಾರ್ಯವು ಪ್ರಾರಂಭವಾಗುವುದು. ಪ್ರಾಮುಖ್ಯ ರಸ್ತೆಗಳಿಗೆ ಎಲ್ಲಕ್ಕಿಂತ ಮೊದಲು ಡಾಮರು ಹಾಕಿಸುವ ಯೋಜನೆ ಮಾಡಲಾಗಿದೆ.

ದ. ಕ ಜಿಲ್ಲಾ ಗ್ರಾಮ ಉದ್ಯೋಗ ಸಂಘದ ವಾರ್ಷಿಕ ಮಹಾಸಭೆಯು ಇದೇ ತಾ. ೨೮—೩—೩೭ನೇ ಆದಿತ್ಯವಾರ ದಿನ ಸಾಯಂಕಾಲ ಗಂಟೆ ೫ಕ್ಕೆ ಮಂಗಳೂರು ಕಾಂಗ್ರೆಸ್ ಕಛೇರಿಯಲ್ಲಿ ಜರಗುವುದು. ಎಲ್ಲಾ ಸದಸ್ಯರೂ ಬರಬೇಕಾಗಿ ವಿನಂತಿ. ವಿಷಯಗಳು ವಾರ್ಷಿಕ ವರದಿ ಮತ್ತು ಜಮಾಖರ್ಚಿನ ಲೆಕ್ಕ ೨ ಕಾರ್ಯಕಾರಿ ಮಂಡಲ ಮತ್ತು ಅಧಿಕಾರಿಗಳ ಚುನಾವಣೆ. ೩ ಮುಂದಿನ ಕಾರ್ಯಕ್ರಮ ಮತ್ತು ಆಯವ್ಯಯಗಳ ಅಂದಾಜುಪಟ್ಟಿ ೪. ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು

ತಾ. ೭—೩—೩೭ನೇ ಸಾಯಂಕಾಲ ಸೇರಿದ ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ ಈ ಕೆಳಗಿನ ನಿರ್ಣಯವು ಮಂಜೂರಾಗಿರುತ್ತದೆ

"ಕಾಂಗ್ರೆಸ್ ಉಮೇದ್ವಾರರನ್ನು ಪ್ರಚಂಡ ಬಹುಮತದಿಂದ ವಿಜಯಹೊಂದುವಂತೆ ಮಾಡಿದ ಬಗ್ಗೆ ಜಿಲ್ಲೆಯ ಮಹಾಜನರನ್ನೂ ಕೆಲಸಗಾರರನ್ನೂ ಈ ಸಭೆಯು ಅಭಿನಂದಿಸುತ್ತದೆ ಅಲ್ಲದೆ, ವಿಜಯ ಹೊಂದಿದ ಕಾಂಗ್ರೆಸ್ ಉಮೇದ್ವಾರರನ್ನು ಅಭಿವಂದಿಸುತ್ತದೆ".

ಮಂಗಳೂರು ತಾಲೂಕಿನ ಮಹಾಜನರು ಮತ್ತು ಓಟರು ಮಹಾಶಯರಿಗೆ ಅಭಿವಂದನೆಗಳು —ಕಾಂಗ್ರೆಸ ಸಂಸ್ಥೆಯ ಮೇಲೆ ಅಭಿಮಾನವಿಟ್ಟು ಆ ಸಂಸ್ಥೆಯವರಿಂದ ನೇಮಿಸಲ್ಪಟ್ಟ ನನ್ನನ್ನು ಮದ್ರಾಸು ಎಸೆಂಬ್ಲಿಗೆ ಪ್ರಚಂಡ ಬಹುಮತದಿಂದ ಆರಿಸಲ್ಪಡುವಂತೆ ಸಹಾಯ ಮಾಡಿದ ಎಲ್ಲಾ ಮಹಾಜನರಿಗೂ, ಓಟರರಿಗೂ, ಮಾತ್ರವಲ್ಲದೆ ಈ ಕಾರ್ಯದಲ್ಲಿ ಸಹಕರಿಸಿದ ಎಲ್ಲಾ ಕಾಂಗ್ರೆಸ ಕೆಲಸಗಾರರಿಗೂ ಈ ಮೂಲಕ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ

ಬಿ. ವೆಂಕಟ್ರಾಯ ಬಾಳಿಗ.

ಪುತ್ತೂರು, ಕಾಸರಗೋಡು, ತಾಲೂಕುಗಳ ಜನರಲ್ ಸಮುದಾಯದ ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿಗೆ ಮತಕೊಟ್ಟ ವ ಕೆಲಸಮಾಡಿದ ಬಂಧುಭಗಿನಿಯರಿಗೆ — ಕಳೆದ ಎಸೆಂಬ್ಲಿ ಚುನಾವಣೆಯಲ್ಲಿ ತಾವುಗಳು ನನಗೆ ಸಂಪೂರ್ಣ ಬೆಂಬಲವನ್ನಿತ್ತು ಮಾಡಿದ ಯಾವತ್ತು ಸಹಾಯಕ್ಕೆ ನಾನು ತುಂಬಾ ಕೃತಜ್ಞನಾಗಿರುವೆನು ಇನ್ನು ಮುಂದೆಯೂ ಕೂಡಾ ನನ್ನಿಂದ ನ್ಯಾಯವಿಧಾಯಕ ಸಭೆಯಲ್ಲಿ ವ ಹೊರಗೆ ಆಗಬೇಕಾದ ಯಾವತ್ತು ಕಾರ್ಯಗಳಲ್ಲಿ ತಾವು ಪ್ರೀತಿಪೂರ್ವಕವಾಗಿ ಅದೇ ರೀತಿ ಸಹಾಯವನ್ನು ಮಾಡಬೇಕಾಗಿ ಅಪೇಕ್ಷಿಸುವ

ಕೋಟಿ ರಾಮಕೃಷ್ಣ ಕಾರಂತ.

ನಿನ್ನೆ ತಾ ೧೮ರಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಬಜೆಟ್ ಮೀಟಿಂಗಿನ ಸಭೆಯು ಸೇರಿ, ಮುಖ್ಯವಾಗಿ ಚರ್ಚಿಸಿದ ವಿಷಯಗಳಲ್ಲಿ ಶಾಲಾ ಉಪಾಧ್ಯಾಯರುಗಳ ವೇತನದ ಕಡಿತವನ್ನು ತೆಗೆದುಹಾಕಬೇಕೆಂಬುದರ ಮೇಲೆ ತುಂಬಾ ಚರ್ಚೆಯಾಯಿತು ಉಪಾಧ್ಯಾಯರುಗಳ ವೇತನ ಕಡಿತವನ್ನು ತೆಗೆದುಹಾಕಿ ಮಹಿಳಾ ಉಪಾಧ್ಯಾಯಿನಿಯರ ವೇತನದಲ್ಲಿ ಕಡಿತಮಾಡಬಾರದೆಂಬ ಠರಾವು ಒಟ್ಟಿಗೆ ಧಾಕಲಾಗಿ ಬಹುಮತದಿಂದ ಅಂಗೀಕರಿಸಲಾಯಿತು ಸದ್ಯಕ್ಕೆ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ವೇತನ ಕಡಿತದ ಹೆದರಿಕೆಯು ತಪ್ಪಿದಂತಾಯಿತು.

ಎಪ್ರಿಲ್ ತಾರೀಕು ೧ನೇ ದಿನ ದೇಶದಲ್ಲೆಲ್ಲಾ ಹರತಾಳ ಆಚರಿಸಲ್ಪಡುವುದು!

ತಾಲೂಕುಗಳಿಂದ

ಮೂಲ್ಕಿ:—ಸ್ಥಳೀಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ತಾ. ೨೦—೩—೩೭ನೇ ಶನಿವಾರ ಯಥಾ ಸಮಯಕ್ಕೆ ಹೆಜಮಾಡಿ ಬೋ॥ ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವುದು.

ಮೂಲ್ಕಿ ಹೈಸ್ಕೂಲಿನ ಪರವಾಗಿ ಏರ್ಪಡಿಸಿದ ಸೇಲ್ಸಿಯಲ್ಲಿ ಪಡೆದ ಬಹುಮಾನಗಳನ್ನು ಇದೇ ಬರುವ ತಾ. ೩೦—೪—೩೭ರ ಒಳಗೆ ಪಡೆಯುವ ವ್ಯವಸ್ಥೆಯನ್ನು ಮಾಡಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸಲಾಗುತ್ತದೆಂದು ಸದರಿ ಸೇಲ್ಸ್ ಕಮಿಟಿಯ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಸ್ಥಳೀಯ ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ನೆರವೇರತಕ್ಕ ಕಾಲಾವಧಿ ಜಾತ್ರೆಯ ಪೂರ್ವಸಿದ್ಧತೆ ಎಂಬಂತೆ ತಾ ೧೬—೩—೩೭ಕ್ಕೆ ಬಲಿ ಹೊರಟಿದೆ, ಇನ್ನು ಇದೇ ಬರುವ ತಾ. ೨೫ನೇ ಗುರುವಾರ ಧ್ವಜಾರೋಹಣ, ತಾ ೨೬ನೇ ಶುಕ್ರವಾರ ಅಯನೋತ್ಸವ, ತಾ. ೨೭ನೇ ಶನಿವಾರ ಬೇಟೆಸವಾರಿ, ತಾ ೨೮ನೇ ರವಿವಾರ ಕೆರೆಪ್ಪಲ ಸವಾರಿ, ತಾ ೨೯ನೇ ಸೋಮವಾರ ದಾಕಿಮಾರು ದೀಪ, ತಾ ೩೦ನೇ ಮಂಗಳವಾರ ಕೆರೆದೀಪ, ತಾ. ೩೧ನೇ ಬುಧವಾರ ರಥಾರೋಹಣ ಮತ್ತು ತಾ ೧—೪—೩೭ನೇ ಗುರುವಾರ ರಥೋತ್ಸವ ಮತ್ತು ಅವಭೃತ—ಈ ರೀತಿ ಉತ್ಸವಗಳು ನಡೆಯುವುದು ಭಕ್ತಾದಿಗಳು ಬಂದು ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವಿಯ ಕೃಪಾಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ.

ಇಲ್ಲಿ ಸ್ವೀಮರು ಬಂದರು ಆಗುವ ಕುರಿತು ಮುಂದಿನ ಒಕ್ಟೋಬರ ತಿಂಗಳಿಗೆ ಮುಂದರಿಸಿದುತ್ತಾರೆಂದು ತಿಳಿದುಬರುತ್ತದೆ

ಈ ಊರಿನ ಮೆಡಿಕಲ್ ಆಫೀಸರರಾದ ಶ್ರೀಯುತ ಎಂ. ಉಮೇಶರಾವ್ ಅವರ್ಗಳ್ ಎಲ್. ಎಂ. ಎಂಡ್ ಎಸ್ ರವರು ನ್ಯೂಡಿಲ್ಲಿಯ "ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಕಿಂಗ್ ಜೋರ್ಜ್ V ಥೇಂಕ್ಸ್‌ಗೀವಿಂಗ್ ಫಂಡಿನಿಂದ ಕಲ್ಕತ್ತೆಯ ಆಲ್ ಇಂಡಿಯಾ ಇನ್ಸ್‌ಟ್ಯೂಟ್ ಓಫ್ ಹ್ಯಾಜಿನ್ ಮತ್ತು ಪಬ್ಲಿಕ್ ಹೆಲ್ತ್ ಎಂಬ ಸಂಸ್ಥೆಯಲ್ಲಿ ಕ್ಷಯರೋಗ ಚಿಕಿತ್ಸಾ ಕ್ರಮಗಳಲ್ಲಿ ತರಬೇತು ಹೊಂದುವರೆ ಆರಿಸಲ್ಪಟ್ಟು, ಅಲ್ಲಿ ಕ್ಷಯರೋಗ ಚಿಕಿತ್ಸಾ ಸಮ್ಮಂಧವಾದ ಎಲ್ಲಾ ಹೊಸ ಕ್ರಮಗಳಲ್ಲಿ ತರಬೇತು ಹೊಂದಿದವರಾಗಿ, ಹಿಂತಿರುಗಿ ಬಂದು ಕಳೆದ ತಿಂಗಳಲ್ಲಿ ಕೆಲಸಕ್ಕೆ ಹಾಜರಾಗಿರುತ್ತಾರೆ ಹೀಗೆ ತರಬೇತು ಹೊಂದಿದವರು ನಮ್ಮ ಜಿಲ್ಲೆಯಲ್ಲಿ ಇವರೇ ಪ್ರಥಮವಾದುದರಿಂದ ಇಡೀ ಜಿಲ್ಲೆಯವರು ತುಂಬಾ ಅಭಿಮಾನ ಪಡಬಹುದಾಗಿದೆ. ಅವರಿಗೆ ನಮ್ಮ ಧನ್ಯವಾದಗಳನ್ನು ಈ ಮೂಲಕ ಅರ್ಪಿಸುತ್ತೇವೆ

ಇದೇ ತಾ. ೮—೩—೩೭ನೇ ಸೋಮವಾರ ಅಪರಾಹ್ನ ಗಂಟೆ ೩–೩೦ಕ್ಕೆ ಮೂಲ್ಕಿಯ ಆಸ್ಪತ್ರೆಯಲ್ಲಿ ನಿರಾಶ್ರಿತ ಫಂಡಿನ ಕಾರ್ಯನಿರ್ವಾಹಕ ಕಮಿಟಿಯ ಸಭೆಯು ಕೂಡಿ ಬರುವ ಮೇ ತಿಂಗಳ ೨ನೇ ಹಪ್ತೆಯಲ್ಲಿ ನಿರಾಶ್ರಿತ ಫಂಡಿನ ವಾರ್ಷಿಕ ಸಾರ್ವಜನಿಕ ಸಭೆಯನ್ನು ಜರಗಿಸುವುದೆಂತಲೂ ಮತ್ತು ಆ ಸಭೆಗೆ ಈ ವರ್ಷ ಎಂ. ಎಲ್ ಎ ಗೆ ಹೊಸತಾಗಿ ಚುನಾಯಿಸಲ್ಪಟ್ಟ ಶ್ರೀಯುತ ವೆಂಕಟ್ರಾಯ ಬಾಳಿಗ ಅವರ್ಗಳ್ ಬಿ ಎ ಬಿ ಎಲ್ ಅವರನ್ನು ಅಧ್ಯಕ್ಷಸ್ಥಾನಕ್ಕೆ ಬರುವರೆ ಕೇಳಿಕೊಳ್ಳುವುದೆಂತಲೂ ನಿರ್ಣಯಿಸಲಾಯಿತು ಅದಲ್ಲದೆ ಈಚೆಗೆ ನಡೆದ ಎಂ ಎಲ್ ಸಿ ಮತ್ತು ಎಂ ಎಲ್ ಎ ಚುನಾವಣೆಗಳಲ್ಲಿ ಬಹುಮತದಿಂದ ಚುನಾಯಿಸಲ್ಪಟ್ಟವ ಫಂಡಿನ ಕಾರ್ಯನಿರ್ವಾಹಕ ಕಮಿಟಿಯ ಸದಸ್ಯರಾದ ಶ್ರೀಯುತ ಎ ಬಿ ಶೆಟ್ಟಿ ಅವರ್ಗಳವರಿಗೂ ಮತ್ತು ಇತರ ಮಹನೀಯರಿಗೂ ತಮ್ಮ ಧನ್ಯವಾದಗಳನ್ನು ಅರ್ಪಿಸಬೇಕೆಂತಲೂ ನಿರ್ಣಯಿಸಲಾಯಿತು

ಮಾಂತಿಬೇಥಿಯ ಸೋಂಕು ಅಡಗಿದಂತೆ ತಿಳಿದು ಬರುತ್ತದೆ

ಮದ್ರಾಸು ಪ್ರಾಂತ್ಯದಲ್ಲಿ ಕಾಂಗ್ರೆಸ್ ಪರವಾಗಿ ನಿಂತು ಆಸೆಂಬ್ಲಿಗೆ ಆರಿಸಿ ಬಂದ ಮಹನೀಯರುಗಳೆಲ್ಲ ಸಭೆಸೇರಿ ಶ್ರೀ॥ ಸಿ ರಾಜಗೋಪಾಲಾಚಾರ್ಯರನ್ನು ನಾಯಕರಾಗಿ ಆರಿಸೀರುವರು ಅಧಿಕಾರ ಸ್ವೀಕಾರ ಮಾಡಬೇಕೆಂಬ ಠರಾವಾಗಿದೆ ಇದು ರಾಷ್ಟ್ರೀಯ ಸಮಿತಿಯಲ್ಲಿ ಮಂಜೂರಾದರೆ ನಮ್ಮ ಸಂಸ್ಥಾನದಲ್ಲಿ ಸಿ ರಾಜಗೋಪಾಲಾಚಾರ್ಯರು ಮಂತ್ರಿ ಪದವಿಯನ್ನು ಅಲಂಕರಿಸಲಿಕ್ಕಿರುವರು

ಇದೇ ಕಳೆದ ತಾ ೧೫ರಲ್ಲಿ ಮುನಿಸಿಪಾಲಿಟಿಯ ಮೀಟಿಂಗು ಜರಗಿತು

ಮಂಗಳೂರು ಶ್ರೀ ಶಾಂತೀಶ್ವರ ಸ್ವಾಮಿ ಚೈತ್ಯಾಲಯದಲ್ಲಿ ನಡೆಯುವ ವರ್ಷಾವಧಿ ಮಹೋತ್ಸವವು ಇದೇ ಶ್ರೀ ಮಹಾವೀರ ೨೪ ವರ್ಷ ೨೪೬೩ಕ್ಕೆ ಸರಿಯಾದ ಧಾತೃನಾಮ ಸಂವತ್ಸರದ ಫಾಲ್ಗುಣ ಮಾಸ ದಿನ ೧೨ನೇ ಸೀ ವ ಫಾಲ್ಗುಣ ಬ॥ ೧೪ಯು ಗುರುವಾರ ತಾ. ೨೫—೩—೩೭ರಲ್ಲಿ ಪ್ರಾರಂಭವಾಗಿ ತಾ. ೨೬ನೇ ಶುಕ್ರವಾರ ಮಹೋತ್ಸವದೊಡನೆ ೧೦೮ ಕಲಶ ಮಹಾಭಿಷೇಕ ಮತ್ತು ೨೭—೩—೩೭ನೇ ಶನಿವಾರ ಪಂಚಾಮೃತ ಅಭಿಷೇಕ ಸಂಘ ಸಂತರ್ಪಣೆ ಇತ್ಯಾದಿ ಶ್ರೀ ಸನ್ನಿಧಿಯಲ್ಲಿ ನಡೆಯುವುದರಿಂದ ತಾವು ಸರ್ವರೂ ತಮ್ಮ ಇಷ್ಟಮಿತ್ರರೊಡಗೂಡಿ ಬಂದು ಶ್ರೀದೇವರ ಸೇವೆಯನ್ನು ಚಂದಾಗಾಣಿಕೆ ಶ್ರೀ ಜಿನಗಂಧೋದಕವನ್ನು ಸ್ವೀಕರಿಸಿ ನಮಗೆಲ್ಲರಿಗೂ ಕೊಡಿಸಬೇಕಾಗಿ ಧರ್ಮಬಂಧು ಕಟ್ಟೆಮಾರು ರಘುಚಂದ್ರ ಬಲ್ಲಾಳರು ತಿಳಿಸುತ್ತಾರೆ

ಕನ್ನಡಿಗರಲ್ಲಿ ವಿಜ್ಞಾಪನೆ—ಇದೇ ತಾ ೬ನೇ ಆದಿತ್ಯವಾರ ಮಂಗಳೂರು ಕಾಂ ಕಚೇರಿಯಲ್ಲಿ ಸೇರಿದ ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾ ಸಭೆಯಲ್ಲಿ ದಿ॥ ದೇಶಭಕ್ತ ಕಾರ್ನಾಡು ಸದಾಶಿವರಾಯರ ಸ್ಮಾರಕ ನಿಧಿಯನ್ನು ಸಂಗ್ರಹಿಸಬೇಕಾಗಿಯೂ, ಈ ನಿಧಿಯನ್ನು ದಿವಂಗತರು ತನ್ನ ಸ್ವಂತದ ಮನೆಮಠ ಐಶ್ವರ್ಯ ಮೊದಲಾದ ಎಲ್ಲ ಸಂಪತ್ತನ್ನು ದಕ್ಷಿಣ ಕನ್ನಡದ ಕಾಂಗ್ರೆಸ್ ಪ್ರಚಾರ ಕಾರ್ಯಕ್ಕಾಗಿ ಹೇಗೆ ವ್ಯಯಿಸಿದರು, ಹಾಗೆಯೇ ಇದನ್ನು ಸಾರ್ವಜನಿಕ ಕಾರ್ಯಕ್ಕೆ ವಿನಿಯೋಗಿಸಬೇಕಾಗಿಯೂ ಈ ಬಗ್ಗೆ ದಕ್ಷಿಣ ಕನ್ನಡ ಹಾಗೂ ಅಖಿಲ ಕರ್ನಾಟಕ ಬೊಂಬಾಯಿ ವ ಇತರ ಸ್ಥಳಗಳಲ್ಲಿ ನೆಲಸಿರುವ ಕನ್ನಡಿಗರು ಮಾತ್ರವಲ್ಲದೆ, ಇತರರು ಜಾತಿ, ಮತವೆಂಬ ಭೇದಭಾವವಿಲ್ಲದೆ ಸರ್ವರೂ ತಂತಮ್ಮ ಯಥಾಶಕ್ತಿ ಹಣ ಸಹಾಯಮಾಡಿ ನಿಧಿಯನ್ನು ಸಂಗ್ರಹಿಸಬೇಕಾಗಿ ಶ್ರೀ॥ ಎ ಬಿ. ಶೆಟ್ಟಿ, ಎಂ.ಎಲ್.ಎ ಇವರು ವಿನಂತಿಸುತ್ತಾರೆ ಈ ನಿಧಿಯನ್ನು ಸಂಗ್ರಹಿಸುವ ಬಗ್ಗೆ ನಾಟಕ, ವಿನೋದ ವ ಇತರ ಪ್ರದರ್ಶನ ಮೊದಲಾದುವುಗಳನ್ನು ಪ್ರದರ್ಶಿಸಿ ಹಣ ಕೂಡಿಸುವವರಿಂದಲೂ,' ವ ವಂತಿಗೆಯಿತ್ತವರಿಂದಲೂ ಆದಷ್ಟು ಅಲ್ಪಕಾಲದ ಒಳಗಾಗಿ ಈ ಕೆಲಸವು ಕೈಗೂಡುವುದಾಗಿ ಭರವಸೆಯಿದೆ.

ಮೂಡಬಿದ್ರಿ —ಈ ಸೆಂಟರಿನ ಉಪಾಧ್ಯಾಯ ಸಂಘದ ವಾರ್ಷಿಕ ವರ್ಧಂತಿಯ ಉತ್ಸವವು ಇದೇ ಮಾರ್ಚಿ ತಾ ೧೩ನೇ ಶನಿವಾರ ೩॥ ಗಂಟೆಗೆ ಇಲ್ಲಿಯ ಹುಡುಗರ ಶಾಲೆಯಲ್ಲಿ ಕಾರ್ಕಳ ರೇಂಜ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ರಾ॥ ರಾ॥ ಬಿ ವೆಂಕಟ್ರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ೬೩ ಮೆಂಬರರ ಪೈಕಿ, ೩೯ ಮೆಂಬರರು ಹಾಜರಿದ್ದರು ೧೯೩೭ ೩೮ರ ಹೊಸ ಕಾರ್ಯಕಾರಿ ಮಂಡಳಿಗೆ ಈ ಕೆಳಗಣ ಸದಸ್ಯರನ್ನು ಚುನಾಯಿಸಲ್ಪಟ್ಟಿತು ೧ ಪಿ ಕೃಷ್ಣಯ್ಯ ೨ ಪಿ ಮೆನೇಜಸ್, ೩. ಎಂ ನರಸಿಂಹ ಶೆಟ್ಟಿ, ೪ ಡಿ ಅಬ್ದುಲ ರಹಿಮಾನ್ ಸಾಹೇಬ್ ೫ ಬಿ ಮಂಜುನಾಥಯ್ಯ, ೬. ವಿ ಟಿ ಕುಷ್ಟ ೭ ಸಬ್ಬೊಡ್ಮೀರ್ ಸೋಜ ೮ ಕೆ ಮಹಮ್ಮದ ಸಾಹೇಬ್, ೯ ಪಿ. ರಮಾನಾಥರಾವ್ ಬೋರ್ಡು ಎಲಿಮೆಂಟರಿ ಶಾಲಾ ಮತ್ತು ದಿಗಂಬರ ಜೈನ್ ಶಾಲಾ ಮಕ್ಕಳ ಕಥಾನಟನೆ ಮತ್ತು ಕೋಲಾಟದ ನಂತರ ಅಧ್ಯಕ್ಷರು ಸಂಘದ ಅಭಿವೃದ್ಧಿಯನ್ನು ಬಯಸಿ, ಉಪಯುಕ್ತ ಮಾತುಗಳಿಂದ ತಮ್ಮ ಸ್ವಾನುಭವವನ್ನು ವ್ಯಕ್ತಪಡಿಸಿದರು. ಬರುವ ಸಭೆಯು ಎಪ್ರಿಲ್ ೧೭ಕ್ಕೆ ಇಲ್ಲಿಯ ಬೋರ್ಡು ಹುಡುಗರ ಶಾಲೆಯಲ್ಲಿ ಜರುಗಿಸಲ್ಪಡುವುದು

ಕುಂದಾಪುರ — ಈ ತಾಲೂಕಿನ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವ ಶ್ರೀ॥ ಬಿ. ಮಹಾಬಲ ಹೊಳ್ಳರು ತಮ್ಮ ಅಧ್ಯಕ್ಷಪದವಿಗೆ ರಾಜಿಯಿತ್ತಿರುವರೆಂದು ಕೆಲವು ಪತ್ರಿಕೆಗಳು ಪ್ರಕಟಿಸಿರುತ್ತವೆ. ಈ ಪ್ರಕಟನೆಯು ಸರಿಯಲ್ಲ, ಶ್ರೀ॥ ಹೊಳ್ಳರು ಅಧ್ಯಕ್ಷಪದವಿಗೆ ರಾಜಿಕೊಟ್ಟಿದ್ದಿಲ್ಲವೆಂದು ಈ ಮೂಲಕ ತಿಳಿಸಬೇಕಾಗಿದೆ ಎಂದು ಕಾರ್ಯದರ್ಶಿ ಜಿಲ್ಲಾ ಕಮಿಟಿ ಇವರು ತಿಳಿಸುತ್ತಾರೆ

ಪುತ್ತೂರು:—ಇದೇ ತಾ ೫—೩ ೩೭ನೇ ಶುಕ್ರವಾರ ಸಾಯಂಕಾಲ ಪುತ್ತೂರು ಕೋ-ಓಪರೇಟಿವ್ ಬಿಲ್ಡಿಂಗಿನಲ್ಲಿ ಚತುರ್ಥ ಹಿಂದೀ ಪ್ರಮಾಣ ಪತ್ರ ವಿತರಣೋತ್ಸವವು ಶ್ರೀ॥ ದಿ ಮಂಗೇಶರಾವ್ ವಕೀಲ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು ಸುಮಾರು ೬೦ ಜನ ಮಹನೀಯರೂ ಮಹಿಳೆಯರೂ ಬಂದಿದ್ದರು; ಪ್ರಥಮ ದೇವರ ಪ್ರಾರ್ಥನೆಯಾದ ನಂತರ ಹಿಂದೀಯಲ್ಲಿ ತಯಾರುಮಾಡಿದ ರಿಪೋರ್ಟು ಓದಲಾಯಿತು ತದನಂತರ ವಿದ್ಯಾರ್ಥಿಗಳಿಗೆ ಅವರವರ ಸರ್ಟಿಫಿಕೇಟುಗಳೂ ಮತ್ತು ಇನಾಮು ಹಂಚಲಾಯಿತು ಆ ಮೇಲೆ ಹಿಂದೀ ಭಾಷೆಯ ಮಹತ್ವ ಮತ್ತು ಅದರ ಪ್ರಚಾರದ ಆವಶ್ಯಕತೆ ಕುರಿತು ವಕೀಲ್ ಪದ್ಮರಾಜಯ್ಯನವರು ಕನ್ನಡದಲ್ಲೂ ರಾಮಕುಂಜ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಪಂಡಿತ್ ನಾರಾಯಣಾಚಾರ್ಯರು ಹಿಂದೀಯಲ್ಲಿ ಭಾಷಣಮಾಡಿದರು ಕಡೆಗೆ ಮಾನ್ಯ ಅಧ್ಯಕ್ಷರು ಕೂಡಾ ಹಿಂದೀಯ ಮಹತ್ವದ ಕುರಿತು ಕೆಲವು ಮಾತುಗಳನ್ನು ಹೇಳಿ ಯಾವ ರೀತಿ ಕಲಿಸತಕ್ಕದ್ದೂ ಎಂಬುದನ್ನು ಚೆನ್ನಾಗಿ ತಿಳಿಸಿದರು ತದನಂತರ ಸಭೆಗೆ ಬಂದಿದ್ದವರೆಲ್ಲರ ಗ್ರೂಫ್ ಫೋಟೋ ತೆಗೆಯಲಾಗಿ ಸಭೆಯು ಮುಕ್ತಾಯವಾಯಿತು

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಹುಡುಗರ ಶಾಲೆಯ ಈ ವರ್ಷದ ವರ್ಧಂತಿ ಉತ್ಸವವು ಇದೇ ಬರುವ ೩. ೨೨ನೇ ಸೋಮವಾರ ಜರಗಲಿಕ್ಕಿರುವುದಾಗಿ ಮುಖ್ಯ ಉಪಾಧ್ಯಾಯರು ತಿಳಿಸುತ್ತಾರೆ ತಾ ೨೧, ೨೨ ಈ ಎರಡು ದಿವಸ ಶಾಲಾ ಕಾರ್ಯಕ್ರಮಗಳು ಜರಗುವವು

For your Advertisemets Please consult:-

The Canara Advertising Service,
Hampankatta MANGALORE S K

ಈ ಇಂದ್ರಜಾಲ ಔಷಧಿಯು ನವ ಚರ್ಮವನ್ನು ಬೆಳೆಸುತ್ತದೆ.

ಆಕಸ್ಮಿಕ ಅವಘಡಗಳಿಗಾಗಿ ಝಾಂಬಕನ್ನು ಉಪಯೋಗಿಸಿರಿ

ಅವಘಡಗಳು ಸಂಭವಿಸುತ್ತಲೇ ಇರುತ್ತವೆ ಆದರೆ ಝಾಂಬಕನ್ನು ನೀವು ಪ್ರಯೋಗಿಸಿದಲ್ಲಿ ಯಾವ ಗಾಯ ನೋವುಗಳಾದರೂ ಅಪಾಯಕರವಾಗಲಾರವು ಮೇಲಿನ ಚಿತ್ರದಲ್ಲಿ ಒಂದು ಮಗುವಿನ ತಲೆ ಗಾಯವಾದುದನ್ನೂ ಝಾಂಬಕಿನ ಪ್ರಯೋಗವು ಆ ಗಾಯವನ್ನು ಬಲು ಬೇಗನೆ ಗುಣಪಡಿಸುತ್ತದೆಂಬುದರಿಂದ ತಾಯಿ ಮುಖ್ಯಳಾದ ಸಂತೋಷವನ್ನೂ ಕಾಣಬಹುದು ನೀವು ಕೂಡಾ, ಇದೇ ಮಾದರಿಯನನುಸರಿಸಿದರೆ, ನಿಮ್ಮ ನಿಮ್ಮ ಚರ್ಮದೋಷಗಳೂ ಗಾಯಗಳೂ ವಿಕಾರರೂಪವಾಗಿ ಪರಿಣಮಿಸಲಾರವು. ಝಾಂಬಕ್ಕು ವೇದನೆಯನ್ನು ಇಂದ್ರಜಾಲದಂತೆ ಗುಣಮಾಡಿ, ಕಲೆಯಿಲ್ಲದಂತೆ ಮಾಡುತ್ತದೆ ಔಷಧಿ ವ್ಯಾಪಾರಿಗಳಲ್ಲೆಲ್ಲಾ ಝಾಂಬಕನ್ನು ಪೆಟ್ಟಿಗೆಗೆ 1 ರೂಪಾಯಿ 2—4—0ಗಳಂತೆ ಸಿಗುತ್ತದೆ

ಏಜಂಟರು — ಮೆಸರ್ಸ್ ರಾಧಾ ಎಂಡ್ ಕೊ.,
ಪಿ ಬಿ. ಮದ್ರಾಸು.

ಝಾಂಬಕಿನಲ್ಲಿ ಕೊಬ್ಬಿನ ಮಿಶ್ರವಿಲ್ಲ.

ಝಾಂಬಕ್

Zam Buk

ESTD: 1906

CANARA BANK

LIMITED.

INCORPORATED IN BRITISH INDIA

Member, Reserve Bank of India.
Member, Clearing House Bombay

Subscribed Capital	6,00,000
Paid up Capital	3,33,240
Reserves	4,50,000
Deposits	79,64,000
Total Resources	98,00,000

Offices:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKAMAGALUR
ERNAKULAM	ARSIKERE
COCHIN	DAVANAGERE
CALICUT	HUBLI
CANNANORE	DHARWAR, Etc, Etc

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂವಿನಾಕಟ್ಟೆ
ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆನಾತಂಗ್ರಿದೆ ರುಚಿಗೂ, ಆರೋಗ್ಯಕ್ಕೆ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ

CITY BISCUIT WORKS,
Flower Market South, Mangalore

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿಯಾದದ್ದು.

ದೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ ಅಂಡ್ ಕೋ,
ಆಯುರ್ವೇದಿಕ ಸಮಾಜ, ಪೆರ್ಡೇಪಿ
P O Perdepi (ನೆಲ್ಲೂರು ಜಿ)

'Dil Roz' (Regd)

Dil Roz' is a sure cure for Oriental sores local sores all kinds of deep-rooted sores Itch eruptions Pimples Eczema Ringworm Sinus Fistula axillary Abscess
Th[illegible] dressing [illegible] prohibited
Price Rs 2
Postage extra
TAHIR DIN
Anarkali LAHORE

ಒಂದು ತೊಟ್ಟು ಕೂಡಾ ಇಲ್ಲ!

ಖಡ್ಗದಿಂದ ಕತ್ತರಿಸಿದರೂ ಒಂದು ತೊಟ್ಟು ರಕ್ತ ಕೂಡಾ ಬರುವುದಿಲ್ಲ ಅಷ್ಟು ನಿರಕ್ತ

ನೀವು 'ಅಮೃತ'ವನ್ನು ತೆಗೆದುಕೊಳ್ಳುತ್ತಿದ್ದರೆ ದೇಹದೊಳಗಿನ ರಕ್ತ [illegible] ಚೈತನ್ಯದ ಅಭಾವಗಳು ದೂರ ಸರಿಯುತ್ತವೆ ನಿಮ್ಮ ದೇಹದೊಳಗೆ ಅತ್ಯುತ್ತಮ ವಾದ ರಕ್ತವು ಉಂಟಾಗಿ ಚೈತನ್ಯ ಯುಕ್ತವಾದ ಆರೋಗ್ಯವೂ ಶಕ್ತಿಯುತವಾದ ದೇಹಬಲವೂ ಉಂಟಾಗುತ್ತದೆ

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ

ತಯಾರಿಸುವವರು — ಕೇಸರಿ ಕುಟೀರಂ, ಎಗ್ಮೋರ್, ಮದರಾಸು
ಮಂಗಳೂರ ಪ್ರವರ್ತಕರು — ದಿ. ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಸಹಜ ಸೌಂದರ್ಯಮಯವಾದ ಮೇನಕೆಯ ರೂಪವು ಕಾಂತಯ್ಯನನ್ನು ಧಂಗುಬಡಿಯಿತು. ಪ್ರಶಾಂತವಾದ ಸಾಗರವು ಅನಿರೀಕ್ಷಿತ ಸಂದರ್ಭಗಳಿಂದ ಅಲ್ಲೋಲಕಲ್ಲೋಲವಾಗುವಂತೆ ಕಾಂತಯ್ಯನ ಮನಸ್ಸಾದರೂ ಕಳವಳಕ್ಕೀಡಾಯಿತು. ಇಷ್ಟರ ತನಕ ತನ್ನ ಸಂಸಾರ, ತನ್ನಗಾಡಿ ತನ್ನೂರು ಇವುಗಳಲ್ಲಿ ಬಲು ಹೆಮ್ಮೆಪಟ್ಟು ಸರಳ ಜೀವನವನ್ನು ನಡೆಸಿಕೊಂಡು ಬಂದ ಕಾಂತಯ್ಯನು ಮೇನಕೆಯಂಥ ಕನ್ಯಾರತ್ನದ ಸಹವಾಸವನ್ನು ಬೆಳೆಸಿಕೊಂಡಿರುವುದಾದರೂ ಎಲ್ಲವನ್ನೂ ಮಿಗಿಸುವ ಹೆಮ್ಮೆಯ ವಿಷಯವೆಂದೇ ಈಗ ತಿಳಿಗೊಂಡನು ಪುರಿ ಜಗನ್ನಾಥನ ರಥೋತ್ಸವವಾದುದರಿಂದ ಅಂದವನು ಯಾವ ಕೆಲಸಕ್ಕೂ ಹೋಗದೇ ಸ್ವತಂತ್ರನಾಗಿರಬೇಕೆಂದು ಮನಸ್ಸು ಮಾಡಿದ್ದರೂ ಕಡೆಗೆ ಸರಕಾರೀ ಅಧೀಸರರ ಜವಾನನೊಬ್ಬನು ಇವನ ಗಾಡಿಯನ್ನು ಸವಾರಿಗಾಗಿ ಕೇಳಿದಾಗ ಸ್ವಇಚ್ಛೆಗೆ ವಿರೋಧವಾಗಿಯೂ ಅವನು ಒಪ್ಪಬೇಕಾಯಿತು. ಸರಕಾರಿ ನೌಕರರ ಮೆಚ್ಚುಗೆಗೆ ಪಾತ್ರನಾಗಿರಬೇಕೆಂದಿದ್ದ ಅವನ ಕಾಂಕ್ಷೆಯು ಆಗಲಾದರೂ ಪೂರೈಸಬಹುದೆಂದು ಅವನು ಕೋರಿದನು. ಮೇನಕೆಯನ್ನು ನೋಡಿದ ಮಾತ್ರದಿಂದ ತಾನು ಬಂದ ಕಾರ್ಯವು ಸಾರ್ಥಕವಾಯಿತೆಂದು ಅವನು ಹಿಗ್ಗಿದನು

ಜವಾನನು ತಂದ ವಾಹನವು ನೀಲಕಾಂತ ಸೇನರಿಗೆ ತೃಪ್ತಿಯುಂಟುಮಾಡಲಿಲ್ಲ ಆದರೆ ಎತ್ತಿನ ಗಾಡಿಯಲ್ಲಿ ಸವಾರಿ ಮಾಡಬೇಕೆಂಬ ಆಶೆ ಇಟ್ಟುಕೊಂಡಿದ್ದ ತನ್ನ ಮಗಳಾದ ಮೇನಕೆಯನ್ನು ನಿರುತ್ಸಾಹಗೊಳಿಸಲು ಸೇನರು ಮನಸ್ಸು ಮಾಡದಾದರು ಹೇಗೂ ಹಾಳಾದ ಅವರ ಮೋಟಾರುಕಾರು ಇನ್ನು ಕಲ್ಕತ್ತೆಗೆ ಹೋದ ಮೇಲೆಯೇ ರಿಪೇರಿಯಾಗಬೇಕು ಮೇನಕೆಯು ಆಗಲೇ ಗಾಡಿಯಲ್ಲಿ ಓಡಿಹೋಗಿ ಕುಳಿತಿದ್ದಳು ಇನ್ನೇನು ಸೇನರು ಹತ್ತಿಯೇ ಬಿಟ್ಟರು ಅದರಲ್ಲಿಯೂ ಗಾಡಿಯಾದರೂ ಅಷ್ಟೇನು ಹಳೆದಾಗಿ ಕಾಣದೆ ಆಧುನಿಕ ಮಾದರಿ ಮೇಲೆಯೇ ಕಟ್ಟಿದ್ದುದರಿಂದ ಸರಕಾರಿ ಘನತೆಗೆ ಅಷ್ಟೇನು ಕೊರತೆ ಬಂದಂತಾಗುತ್ತಿರಲಿಲ್ಲ ಇತ್ತ ಕಾಂತಯ್ಯನು ಮೊದಲೇ ಮೇನಕೆಯ ರೂಪಿಗೆ ದಂಗು ಬಡಿಯಲ್ಪಟ್ಟವನಾಗಿದ್ದನು, ಅದರ ಮೇಲೆ ಅದೇ ಮೇನಕೆಯು ತನ್ನ ಗಾಡಿಯಲ್ಲಿ ಅದೂ ತನ್ನ ಪಕ್ಕದಲ್ಲಿಯೇ ಮಂಡಿಸಿದಾಗಂತೂ ಅವನು ಒಂದು ಕ್ಷಣಕ್ಕೆ ಪ್ರಜ್ಞೆ ಮರೆತಂತಾದನು ಅಂತೂ ಗಾಡಿ ಬಿಟ್ಟನು. ಎತ್ತುಗಳು ರಥಬೀದಿಯ ಕಡೆಗೆ ಧಾವಿಸತೊಡಗಿದವು

ಪುರಿಯ ಪವಿತ್ರತೆಯನ್ನು ಅರಿಯದ ಭಾರತೀಯನಿಲ್ಲ, ಹಿಂದೂಗಳಿಗಂತೂ ಅದು ವೈಕುಂಠವೇ ಸರಿ ಬದರಿ ಮ ಜುನಾಥ, ಕಾಶೀ ವಿಶ್ವನಾಥ, ಪುರಿಯ ಜಗನ್ನಾಥ ಶ್ರೀಮನ್ನಾರಾಯಣನ ಅವತಾರಗಳಾದ ಈ ಮೂರು ದೇವರುಗಳ ಸಾನಿಧ್ಯವನ್ನು ಹೊಂದಲು ಅದೆಷ್ಟು ಹಿಂದೂಗಳು ಹಾತೊರೆಯುವುದಿಲ್ಲ ಅಂದಮೇಲೆ ಭಾರತದ ಎಲ್ಲಾ ಕಡೆಗಳಿಂದಲೂ ತಂಡತಂಡವಾಗಿ ಪುರಿಯಲ್ಲಿ ಮೆರೆಯುವ ಜಗನ್ನಾಥನ ಜಾತ್ರೆಗಾಗಿ ಅಂದಲ್ಲಿ ಸೇರಿದ್ದರು ಪುರಿಯಲ್ಲಿಂದು ಎಲ್ಲೆಲ್ಲೂ ಕೋಲಾಹಲ ಜಗನ್ನಾಥ ಸ್ವಾಮಿಯು ತನ್ನ ಭವ್ಯವಾದ ರಥವನ್ನೇರಿದ್ದನು. ಅದೇ ಸಮಯಕ್ಕೆ ಕಾಂತಯ್ಯನ ಗಾಡಿಯು ರಥಬೀದಿಯ ಒಂದು ಉಪರಸ್ತೆಯು ಕೂಡುವ ಸ್ಥಳದಲ್ಲಿ ಬಂದು ನಿಂತಿತು. ಗಾಡಿಯನ್ನು ನಿಲ್ಲಿಸಿ ಕಾಂತಯ್ಯನು ನಿಂತಲ್ಲೆ ಜಗನ್ನಾಥನನ್ನು ಸಾಷ್ಟಾಂಗ ವಂದಿಸಿದನು. ಅಷ್ಟರಲ್ಲಿ ರಥದಲ್ಲಿ ಪೂಜೆಗಾರಂಭವಾಯಿತು. ಅಗಾಧ ಯಾತ್ರಿಕರ ಕೈಗಳು ಆ ಪರಮಾತ್ಮನನ್ನು ನಮಸ್ಕರಿಸಲು ಎತ್ತಲ್ಪಟ್ಟವು. ಕಾಂತಯ್ಯನು ಸ್ಫೂರ್ತಿಗೊಂಡವನಾದನು. ಹಿಂತಿರುಗಿ ನೋಡಿದಾಗ ಮೇನಕೆಯು ತಿರಸ್ಕಾರ ಭಾವವನ್ನು ತಾಳಿ ಸುಮ್ಮಗೆ ನಿಂತು ಕಾಂತಯ್ಯನನ್ನೆ ನೋಡುತ್ತಿದ್ದಳು ಆಗವನ ಅಂದವಾದ ಕಂದುವರ್ಣದ ದೇಹವ ಕತಿಯು ಉಬಿತು.

"ಜಗನ್ನಾಥನ ಮಹಿಮೆಯನ್ನು ನೀವು ಗಳು ಅರಿಯದಿರಬಹುದು " ಕಾಂತಯ್ಯನು ಭಾಷಣ ಪ್ರಾರಂಭಿಸಿದನು.

"ಅದೇನು ಅಂತಹ ಮಹಿಮೆ" ಮೊದಲೇ ಕಾಂತಯ್ಯನೊಡನೆ ಮಾತನಾಡಲು ಸಮಯ ಕಾಯುತ್ತಿದ್ದ ಮೇನಕೆಯು ಕೇಳಿದಳು.

"ಅಯ್ಯೋ! ಮಹಿಮೆಯೆ! ಏನೇಳಲಿ, ಜಗನ್ನಾಥನ ಮಹಿಮೆಯನ್ನು ಹೇಳಲು ಒಂದು ನಾಲಿಗೆ ಸಾಲದು."

"ಕಾರಣ?" ಪುನಃ ಪ್ರಶ್ನಿಸುವಳು

"ನಮ್ಮಪ್ಪ, ಅವನಪ್ಪ ಎಲ್ಲರೂ ಆ ಶ್ರೀಹರಿಯ ಸಾನಿಧ್ಯವನ್ನು ಸೇರಿರುವರು " ಕಾಂತಯ್ಯನು ಆ ವೇದ ಭರಿತನಾಗಿದ್ದನು

"ಅದೇನೆ? ಅದೇಗೆ?" ಮೇನಕೆಯು ಬಹಳ ಕಾತುರತೆಯಿಂದ ಕೇಳುವಳು ರಥವು ಎಳೆಯಲ್ಪಡುವಾಗ ಅದರ ಚಕ್ರಗಳಡಿಯಲ್ಲಿ ನಮ್ಮ ಪಾಪಿ ದೇಹಗಳನ್ನು ಬೀಳಬಿಟ್ಟು, ಅದರ ಸಂಪರ್ಕದಿಂದ ಪಾಪಗಳನ್ನು ನಾಶ ಮಾಡಿ ವೈಕುಂಠ ಧಾಮವನ್ನು ಸೇರಿರುವರು ಅದಕ್ಕಿಂತಲೂ ಇನ್ನೇನು?"

ನಾನ – '

"ನೀನೇನ , ಹ, ಹ?"

"ಸರಕಾರಿ ಕಾನೂನು ಇಲ್ಲದೆ ಇರುತ್ತಿದ್ದರೆ ನಾನೂ ಅದರಡಿಯಲ್ಲಿ ಬಿದ್ದು — ಹಾಹಾ ಆ ವೈಕುಂಠ — ಹಾ ಹಾ ಆ ಹರಿಯ ಸಾನಿಧ್ಯ ಪಡೆಯುತ್ತಿದ್ದೆನ ಆದರೆ ಪಾಪಿಷ್ಟರು ನಾವು ' ಕಾಂತಯ್ಯನು ತನ್ನನು ಮರೆತನು ಒಂದು ಕ್ಷಣ ಅವನು ಕಣ್ಣುಗಳನ್ನು ಮುಚ್ಚಿಬಿಟ್ಟು ಅದೇನೋ ಸುಖವನ್ನ ಅನುಭವಿಸುತ್ತಿದ್ದನು

ಮೇನಕೆಯ ಆಗಿನ ಮನೋಭಾವಗಳು ವರ್ಣಿಸಲಸದಳವಾಗಿದ್ದುವು ಕಾಂತಯ್ಯನಂತೆ ಅವಳೂ ತನ್ನನ್ನು ಒಂದು ಕ್ಷಣಕ್ಕೆ ಮರೆತಳು ಮರುಕ್ಷಣಕ್ಕೆ ತನ್ನ ಜನತೆಯ ನೆನಪುಮಾಡಿಕೊಂಡವಳು ಮನಸ್ಸಿನ ಒತ್ತಾಟವನ್ನು ತಡೆಯುತಿದ್ದಳು ಕಾಂತಯ್ಯನು ಅವಳನ್ನು ದಿಟ್ಟಿಸಿ ನೋಡುತ್ತಿದ್ದನು ಅವಳು ಅವನ ಮೇಲಿನ ದೃಷ್ಟಿಯನ್ನು ಕದಲಿಸಲಿಲ್ಲ ಇಬ್ಬರೂ ಮೌನವಾಗಿದ್ದರ ಎರಡು ದೇಹಗಳೂ ಒಂದರಲ್ಲೊಂದ ಆತುರವಾಗ ವಂತೆ ಹತ್ತಿರ ಬರುತ್ತಿದ್ದುವು ಕೂಡಲೇ ಇರ್ವರೂ ಚೇತರಿಸಿಕೊಂಡರು ಆ ಸಮಯಕ್ಕೆ ಮೇನಕೆಯು ಎದುರಿದ್ದಳು "ಜಗನ್ನಾಥನು ರಥದಲ್ಲಿಲ್ಲ, ಅವನಿರುವುದಾದರೆ ಅದು ಕಾಂತಯ್ಯನ, ಹೃದಯದಲ್ಲಿ" ಎಂದವಳ ಮಾತುಗಳನ್ನು ಯಾರೂ ಕೇಳಲಿಲ್ಲ

ಅಂದು ಮೇನಕೆಯು ತನ್ನ ತಂದೆಯು ಉಳಕೊಂಡ ಬಂಗ್ಲೆಯನ್ನು ಸೇರಿದಳು ಕಾಂತಯ್ಯನು ಊರ ಹೊರಗಿನ ತನ್ನ ಮನೆಯನ್ನು ಸೇರಿದನು ಈರ್ವರ ಪ್ರಕೃತಿಯು ಸಂಪೂರ್ಣ ಬದಲಾಗಿತ್ತು ಕೆಲವು ತಿಂಗಳುಗಳ ಹಿಂದೆ ಮದುವೆಮಾಡಿಕೊಂಡಿದ್ದ ಕಾಂತಯ್ಯನ ಹೆಂಡತಿಯು ಇಂದು ತನ್ನ ಗಂಡನು ಎಂದು ಇಲ್ಲದ ಭಾರ ಮನಸ್ಸಿನಿಂದಿರುವುದನ್ನು ಕಂಡು ಅದರ ಮರ್ಮವನ್ನು ತಿಳಿಯದಾದಳು. ಅದರ ವಿಚಾರ ಪ್ರಶ್ನೆಗಳನ್ನು ಮಾಡಿ ಉತ್ತರ ಪಡೆಯುವಷ್ಟು ಧೈರ್ಯವು ಅವಳಲ್ಲಿಲ್ಲ. ಕಾಂತಯ್ಯನು ಅಂದು ಊಟಮಾಡಿ ಮಲಗಿದನು ಅಷ್ಟೆ. ಒಂದು ಶಬ್ದವೂ ಅವನ ಬಾಯಿಯಿಂದ ಬರಲಿಲ್ಲ.

ಪ್ರಾತಃಕಾಲ ನೀಲಕಾಂತ ಸೇನರ ಜವಾನನು ಕಾಂತಯ್ಯನನ್ನು ಎಬ್ಬಿಸಿದನು. ಅವನ ಆಶ್ಚರ್ಯಕ್ಕೆ ಅಂದೂ ಅವನಿಗೆ ಸೇನರ ಕಡೆಯಿಂದ ಗಾಡಿ ಸವಾರಿಯ ಕರೆ ಇತ್ತು. ಅವನ ಉತ್ಸಾಹಗಳು ಮತ್ತೆ ಚುರುಪುಗೊಂಡವು. ಕ್ಷಣಕಾಲದಲ್ಲಿ ಗಾಡಿಯನ್ನು ಕಟ್ಟಿ ಅವನು ಅಣಿಯಾದನು, ಅವನ ಹೆಂಡತಿಯು ಏನೊ ಸ್ವಲ ಸಂಶಯಪಟವಳಾದಳು ಧಾತೆಯೆಲಾ ಪಿಟ್ಟಿಂದು ಮಾತನಾಡದೆ ಖಿನ್ನ ಮನಸ್ಕನಾಗಿದ್ದ ಕಾಂತಯ್ಯನು ಸೇನರ ಮನೆಯ ಜವಾನನು ಸವಾರಿಗೆ ಬರಬೇಕೆಂದು ಕೇಳಿದಾಗ ಅವನಲ್ಲಿ ಅಷ್ಟು ಚಟುವಟಿಕೆಗಳುಂಟಾಗಲು ಕಾರಣವೇನು? ಅಂತೂ ಅವಳ ಮುಗ್ಧ ಮನಸ್ಸಿನಲ್ಲಿ ಒಂದು ಸಂಶಯವು ಹುಟ್ಟಿಯೇ ಬಿಟ್ಟಿತು ಆದರೂ ಪತಿಯಲ್ಲ ವೇವಿಕಾವಿಕಿ ಅದೇಗೆ ಪ್ರಶ್ನಿಸಬಹುದು ಪತೀ ದೇವರೆಂದು ಸುಮ್ಮಗಿದ್ದಳು. ತನ್ನ ದಿನನಿತ್ಯದ ಹೊಲ ಕೆಲಸಗಳಿಗೆ ಹೋಗುವವಳಾದಳು.

ಪುರಿಯಿಂದ ಹನ್ನೊಂದು ಮೈಲುಗಳ ದೂರದಲ್ಲಿ ಒಂದು ಚಿಕ್ಕ ಅರಣ್ಯ ಮಧ್ಯದಲ್ಲಿ ಕಾಂತಯ್ಯನ ಗಾಡಿಯು ನಿಂತಿರುವುದು ನೀಲಕಾಂತ ಸೇನರು ಅಲ್ಲಿರುವ ಸರಕಾರಿ ಬಂಗ್ಲೆಯ ಜವಾನನೊಡನೆ ಒಳಗೆ ಯಾರಿರುವರೆಂದು ವಿಚಾರಿಸುತ್ತಿರುವರು ಮೇನಕೆಯು ಅಲ್ಲೇ ಪಕ್ಕದಲ್ಲಿ ನಿಂತಿದ್ದಳು ಕಾಂತಯ್ಯನು ಗಾಡಿಯಲ್ಲಿಯೇ ಬೆಪ್ಪನಂತೆ ಕುಳಿತಿದ್ದು ಮೇನಕೆಯ ಸೌಂದರ್ಯ ಮಧುವನ್ನು ಹೀರುತ್ತಿದ್ದನು ಆಗಲೇ ಅಲ್ಲಿರುವ ಬಂಗ್ಲೆಯಿಂದ ಓರ್ವ ಯುವಕನು ಹೊರಗಡೆಗೆ ಬಂದು, ನಿಂತಿದ್ದ ಆ ಗುಂತುಕರನ್ನು ನೋಡಿ ನಕ್ಕನು ಸೇನರಿಗೆ ಆತನ ಪರಿಚಯವಾಗಲಿಲ್ಲವಾದರೂ ಯುವಕನು ತಾನು ಪ್ರೇಮಾನಂದ ಚಟ್ಟರ್ಜಿಯವರ ಕುವರನೆಂದು ಹೇಳಿದ ಮೇಲೆ ಸೇನರು ಅವನನ್ನು ಅಪ್ಪಿಕೊಂಡು "ಪ್ರೇಮಾನಂದರು ನನ್ನ ಬಾಲ್ಯಗೆಳೆಯರು ನೀನು ಅವರ ಕುವರನೇ? ಸರಿ ನಾನು ಹಾಗೆ ಅಂದಾಜು ಮಾಡಿದೆ ಆದರೆ—ಇವಳು ನನ್ನ ಮಗಳು ಮೇನಕೆ—ಮಗಳೇ, ನಾನು ಆಗಾಗ್ಗೆ ಇವನ ತಂದೆಯ ವಿಚಾರ ನಿನ್ನ ತಾಯಿಯ ಹತ್ತಿರ ಮಾತಾಡುತ್ತಿದ್ದ ವಿಚಾರ ನಿನಗೆ ತಿಳಿದಿರಬಹುದು. "ಎಂದು ಕಡೆಗೆ ಮಗಳನ್ನು ಕೇಳಿದನು ಮೇನಕೆಯು ನಂದಾಲಾಲನೊಡನೆ ಹಸ್ತ ಲಾಘವಮಾಡಿ, ಸ್ವಾಭಾವಿಕ ಲಜ್ಜೆಯಿಂದ ಅವನನ್ನು ಓರೆಗಣ್ಣಿನ ನೋಟದಿಂದ ನೋಡುವವಳಾದಳು

ಕಲ್ಕತ್ತೆಗೆ ಹೊರಟ ನಂದಾಲಾಲನು ಸೇನರ ಒತ್ತಾಯದ ಮೇಲೆ ಅಲ್ಲಿಯೇ ಶಿಕಾರಿಗಾಗಿ ನಿಲ್ಲಲು ಒಪ್ಪಿಕೊಂಡನು ಒಂದೊಂದು ಸಲ ಸೇನರ ಮಗಳನ್ನು ನಂದಾಲಾಲನ ಜವಾಬುದಾರಿ ಕೈಯಲ್ಲಿ ಬಿಟ್ಟು ಕೆಲವು ಮೈಲುಗಳ ತನಕ, ಕಾಂತಯ್ಯನ ಗಾಡಿಯಲ್ಲಿ ಶಿಕಾರಿಗಾಗಿ ಹೋಗುತ್ತಿದ್ದರು. ಮೇನಕೆ ನಂದಾಲಾಲರೊಳಗಣ ಸ್ನೇಹವು ಬೆಳೆದು ಪ್ರೇಮವಾಗಿ ಪ್ರಣಯಕ್ಕೆ ಇಳಿಯಿತು ಈ ತನ್ಮಧ್ಯೆ ಕಾಂತಯ್ಯನ ಅವಸ್ಥೆಯನ್ನು ಹೇಳಿ ತೀರದು. ಅವನು ಒಂದು ಸಲಕ್ಕೆ ತನ್ನ ಹೃದಯವೇದನೆಯನ್ನು ತಾನು ಪೂಜಿಸುವ ದೇವತೆ, ಆ ಮೇನಕೆಯೊಡನೆ ನಿವೇದಿಸಬೇಕೆಂದಿದ್ದರೂ, ನಂದಾಲಾಲನು ಅವಳ ಜೊತೆಯನ್ನು ಬಿಡುತಿರಲಿಲ್ಲವಾದುದರಿಂದ ಇವನಿಗೆ ಅನುಕೂಲತೆಯೇ ಆಗಲಿಲ್ಲ ಆಗ ಕಾಂತಯ್ಯನಿಗೆ ತೋರಿತು ತಪ್ಪು ಅವನಿಗೆ ತಿಳಿಯಿತು ಮರುಗಿದನು ತನ್ನ ಪ್ರಶಾಂತ ಜೀವನವನ್ನು ಕಳವಳಕ್ಕೀಡು ಮಾಡಿಕೊಂಡ ದಾರಿಯನ್ನು ತಿಳಿದು, ಮರುಗಿದನು ತನ್ನ ಮೂಢತನಕ್ಕಾಗಿ ಮರುಗಿದನು ಪಕ್ಕನೆ ಅವನಿಗೆ ಮೇನಕೆಯು ದೂರದಲ್ಲಿ ಕಾಣಿಸಿಕೊಂಡಳು ಜೊತೆಯಲ್ಲಿ ನಂದಾಲಾಲನೂ ಇದ್ದನು ಪುನಃ ಅವನಲ್ಲಿ ಅನುರಾಗ ಹುಟ್ಟಿತು. ಆ ದೇವತೆಯ ಸಾನಿಧ್ಯ, ಅವಳ ಸ್ನೇಹ ಸುಖವನ್ನು ಪಡೆದು ವೈಕುಂಠ ಧಾಮವನ್ನು ಪಡೆಯಬೇಕೆಂಬ ಇಚ್ಛೆಯು ಅವನಲ್ಲಿ ಇಮ್ಮಡಿಯಾಯಿತು. ಆದರೆ ಅವನ ದುರಾದೃಷ್ಟಕ್ಕೆ ಅವನಿಗೆ ತನ್ನ ಹೃದಯವನ್ನು ಮೇನಕೆಯ ಮುಂದೆ ಬಿಚ್ಚಲು ಸರಿಯಾದ ಸಮಯವೇ ದೊರೆಯಲಿಲ್ಲ. ಅದೂ ಆ ನಂದಲಾಲನಿಂದ—ಅವರಿ ಆವೇನು ಹೃದಯ ಬಿಚ್ಚುವುದು. ತಾನೊಂದು ಬರಿ ಗಾಡಿಯಾಳು—...ಕೆಲವು ದಿನಗಳ ನಂತರ ಅವರು ಹಿಂತಿರುಗಿದರು.

ಇಂದು ಕಾಂತಯ್ಯನ ಜೀವಮಾನದಲ್ಲಿ ಒಂದು ಜಾತ್ರೆ. ಇವನ ಹೃದಯದ ದೇವತೆಯು, ಅವನನ್ನು ಬಿಟ್ಟು ಕಲ್ಕತ್ತೆಗೆ ಹೋಗುವಳು ಅಂದು ಸಾಯಂಕಾಲ ಕಾಂತಯ್ಯನಿಗೆ ಸೇನರು ಭಕ್ಷಿಸಿಗಾಗಿ ರೈಲ್ವೆ ನಿಲ್ದಾಣಕ್ಕೆ ಬರಹೇಳಿದ್ದರು. ಕಾಂತಯ್ಯನ ವಿಚಾರವನ್ನು ಅವನ ಸ್ನೇಹಿತನೊಬ್ಬನು ತಿಳಿದು ಅವನ ಹೆಂಡತಿಯು ಬಳಿಯಲ್ಲಿ ಸರಿಯಾಗಿ ತಿಳಿಸಿದ್ದನು. ಸಾಯಂಕಾಲವಾಗುತ್ತಲೆ ಅವಳು ಕಾಂತಯ್ಯನೊಡನೆ ಬೇಡಿಕೊಂಡಳು. ಅವನು ಎಲ್ಲೂ ಹೋಗದಂತೆ ಬೇಡಿಕೊಂಡಳು. ಕಾಂತಯ್ಯನು ಅವಳ ಮಾತುಗಳನ್ನು ಕಿವಿ ಮೇಲೆ ಹಾಕಲಿಲ್ಲ ತನ್ನ ಗಾಡಿಯನ್ನು ಕಟ್ಟಿ ಹೊರಟೇ ಹೋದನು ಆ ತರಳೆಯು ಅತ್ತಳು ನೊಂದಳು ಬೆಂದಳು ತನ್ನ ಪತಿಯನ್ನು ಮಂಕುಗೊಳಿಸಿದ ಆ ಬಿಳಿ ದೇವತೆಯನ್ನು ಶಪಿಸಿದಳು ತನ್ನ ಜೀವನವನ್ನು ಮಣ್ಣುಗೂಡಿಸ ನೋಡಿದ ಆ ಮೋಹನಾಂಗಿಯನ್ನು ಶಪಿಸಿದಳು ಆದರೆ ಬಡವರ ಗೋಳು ಕೇಳುವವರಾರು?

ರೈಲು ಬಿಡಲು ಇನ್ನೇನು ಕೆಲವೇ ನಿಮಿಷಗಳಿವೆ ಕಾಂತಯ್ಯನು ನಿಲ್ದಾಣದಲ್ಲಿ ಅತ್ತಿತ್ತ ತಿರುಗಾಡುತ್ತಿದ್ದನು ಅಲ್ಲಿ ನೆರೆದ ಗುಂಪಿನ ಅರಿವೇ ಅವನಿಗಿರಲಿಲ್ಲ ಅಂದವನು ಜಗನ್ನಾಥನ ದರ್ಶನಕ್ಕಾಗಿ ಹಾತೊರೆದನು ಇಂದವನು ಓರ್ವ ದೇವತೆಯ ದರ್ಶನಕ್ಕಾಗಿ ಹಾತೊರೆಯುತ್ತಿರುವನು ಅವನ ದೇವತೆಯು ಆಧುನಿಕ ಯಂತ್ರಯುಗದ ಫಲವಾದ ಒಂದು ಉಗಿಯಂತ್ರ ರಥದಲ್ಲಿ ಅಲಂಕೃತಳಾಗಿದ್ದಳು ಅವಳೊಂದು ಎರಡನೇ ತರಗತಿಯ ಕಿಟಕಿಯಿಂದ ಹೊರನೋಡುತ್ತಿದ್ದು ಏನನ್ನೋ ಯೋಚಿಸುತ್ತಿದ್ದಳು ನಂದಾಲಾಲನ ಅಲ್ಲಿಯೇ ಕೆಲವು ಸ್ನೇಹಿತರೊಡನೆ ನಿಂತಿದ್ದನು ಕಾಂತಯ್ಯನು ಮೇನಕೆಯನ್ನು ನೋಡಿದನು ಈಗ ನಮಸ್ಕರಿಸಲಿಲ್ಲ—ಅವನ ಕೈಗಳು ಅವಳ ಆಲಿಂಗನ ಮಾಡುವುದಕ್ಕಾಗಿ ಮುಂದುವರಿದುವು ಅಷ್ಟಕ್ಕೆ ಮೂರನೇ ಘಂಟೆಯು ಬಾರಿಸಲ್ಪಟ್ಟಿತು ಕಾಂತಯ್ಯನು ಹತ್ತಿರ ಹತ್ತಿರ ಬಂದನು ರಥವು ಎಳೆಯಲ್ಪಡಲು ಸಿದ್ಧವಾಯಿತು ಉಗಿಯ ಶಬ್ದವಾಯಿತು ಚಕ್ರಗಳು ನಡಿಸಲ್ಪಟ್ಟವು—ಅವು ಮೆಲ್ಲನೆ ತಿರುಗಲಾರಂಭಿಸಿದುವು ಬಂಡಿಯು ಮುಂದರಿತು. ಕಾಂತಯ್ಯನ ಹೃದಯದೊಳಗಿನ ಹೋರಾಟವು ಹೆಚ್ಚಿತು ತನ್ನ ದೇವತೆಯು ಅವಳ ಮಿತ್ರನನ್ನು ಆಲಿಂಗಿಸಿ ಕೊಂಡಿದ್ದಳು ರೈಲಿನ ಹಿಂದೆ ಕಾಂತಯ್ಯನು ಓಡತೊಡಗಿದನು ಅದರ ವೇಗವು ಹೆಚ್ಚಿತು ಕಾಂತಯ್ಯನೂ ಭರದಿಂದ ಓಡಿದನು "ಮೇನಕಾ, ಮೇನಕಾ" ಎಂದು ಕೂಗಿದ್ದನು ಆ ಉಗಿಬಂಡಿಯ ಶಬ್ದದಲ್ಲಿ ಇವನ ಮಾತು ಅದಾರಿಗೆ ಕೇಳಿಸಬಹುದು.

ಕಾಂತಯ್ಯನಿಗೆ ಎಲ್ಲವೂ ಸರ್ವಶೂನ್ಯವಾಗಿ ತೋರಿತು ವೈಕುಂಠಧಾಮವೇ ಅವನಿಗೆ ತಕ್ಕ ಮಾರ್ಗವಾಗಿ ಕಾಣಿಸಿತು "ಜೈ ಜಗನ್ನಾಥ ಪ್ರಭೂ" ಎಂಬಿಷ್ಟು ಮಾತುಗಳು ಅವನಿಂದ ಕೇಳಬಂದುವು ರೈಲು ನಿಲ್ಲಿಸಲ್ಪಟ್ಟಿತು. ಕಾಂತಯ್ಯನ ಶವವು ಅನೇಕ ಚೂರುಗಳಾಗಿದ್ದುವು ದೇವತೆಯ ರಥದ ಕೆಳಗೆ ಅವನ ದೇಹವು ಅರ್ಪಿಸಲ್ಪಟ್ಟಿತು. ಅವಳ ವಂಚಕ ರೂಪವು ಓರ್ವ ಸರಳ ಜೀವಿಯನ್ನು ಕೊಂದಿತು. ಮೇನಕೆಗೆ ವಿಷಯಗಳೆಲ್ಲ ತಿಳಿಯದೇ ಇಲ್ಲ. ಅವಳೇನು ಮಾಡುವಳು ಸೌಂದರ್ಯವು ಕಾಂತಯ್ಯನನ್ನು ಮೋಹಗೊಳಿಸಿತು—ಕಾಂತಯ್ಯನು ಅದಕ್ಕೆ ಬಲಿಬಿದ್ದನು—ಉರಿಯುವ ದೀಪ ಜ್ವಾಲೆಯನ್ನು ಮೋಹಿಸಿ, ಕೀಟಗಳು ಉರಿದು ಹೋಗುವಂತೆ ಕಾಂತಯ್ಯನ ಅವಸ್ಥೆಯಾದರೂ ಆಯಿತು

ಪದ್ಮ.

ಕುಟುಂಬದ ಸುಖಕ್ಕಾಗಿ ಸ್ತ್ರೀಪುರುಷರ ಪ್ರೇಮರಹಸ್ಯಗಳು — ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಅವರುಗಳ ಫೋಟೋಗಳ ಸಹಿತ ತೋರಿಸಿ, ಮಲಗುವ ಮನೆಯಲ್ಲಿ ನೃತ್ಯಗಾರರ ವಿನೋದಗಳು, ವೇಶ್ಯಾ ಕನ್ನೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೩ ಫೋಟೋಗಳನ್ನು ನೋಡುತ್ತಾ ಓದುತ್ತಾ, ಕವಿತೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1

ಇದರ ಸಂಗಡ ೧೩ ಫ್ರೆಂಚ್ ಲವ್ಲಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ 287 ಮದರಾಸ್.

ವಿವಾಹ, ಉಪನಯನ, ಲಗ್ನಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೆ? ಹಾಗಾದರೆ,
ಶಾರದಾ ಛಾಪಖಾನೆ ಮಂಗಳೂರು,
ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಹಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTED- 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾವಿಶಾರದ.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ ಅ
ದಾಶಿ ಅಕ್ಕಿ	3— 6	3— 10
ಮುಸ್ತಿ	3— 8	4— 4
ಗುಡ್ಡು	3—10	3—14
ಊರ ಅವ್ವಲ್ ಬೆಳ್ತಿಗೆ	4— 0	4— 4
ರಂಗೂನು ಬೆ. ಗೋ. ಒಕ್ಕ	7 — 0	7— 4
ವಿಲ್ಲಾರು ಬೆ. ಮು. ಒಕ್ಕ	3—12	3—12
ಗೋದಿ ಗೋಣಿ ಒಕ್ಕ ...	11 — 0	13— 0
ತೊಗರಿ ಗೋಣಿ ಒಕ್ಕ ...	9 — 8	12— 8
ಹುರುಳಿ ಗೋಣಿ ಒಕ್ಕ ...	5— 0	5 — 6
ಕಡಲೆ ಗೋಣಿ ಒಕ್ಕ ...	8 — 0	12 — 8
ತೊಗರಿಬೇಳೆ ಗೋಣಿ ಒಕ್ಕ...	11— 0	19— 0
ಉದ್ದು ಗೋಣಿ ಒಕ್ಕ	9— 0	9 — 8
ಹೆಸರು ಗೋಣಿ ಒಕ್ಕ	7—12	8— 0
ಊರುಬೆಲ್ಲ ಖಂಡಿ ಒಕ್ಕ	30— 0	32— 8
ಉಪ್ಪು ಗೋಣಿ ಒಕ್ಕ	4— 2	5— 4
ಕೊಬ್ರಿ ಖಂಡಿ ಒಕ್ಕ	75— 0	84— 0
ಕೊಬ್ರಿ ಹಿಂಡಿ ಖಂಡಿ ಒಕ್ಕ	26 — 8	28— 8
ಎಳ್ಳಿಂಡಿ ಖಂಡಿ ಒಕ್ಕ	26 — 4	27 — 8
ಕೊಬ್ರಿ ಎಣ್ಣೆ ಮುಡಿ ಒಕ್ಕ	6— 0	7 — 0
ಎಳ್ಳೆಣ್ಣೆ ಮುಡಿ ಒಕ್ಕ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕ.	6— 5	7— 5
ಮೋರಿಸ ಸಕ್ಕರೆ ಮು. ಒಕ್ಕ .	3— 2	3 — 4
ಮೆಣಸು	2— 8	5— 0
ಸಾಸಿವೆ ಮುಡಿ ಒಕ್ಕ	5 — 4	5— 8
ಕಾಳುಮೆಣಸು ಖಂ. ಒಕ್ಕ	100— 0	120 0
ಯೇಲಕ್ಕಿಬೀಜ ಮಣಒಕ್ಕ	80— 0	80— 0
ಗೇರುಬೀಜ ಮು. ಒಕ್ಕ	3 — 4	3 — 8
ಕಪ್ಪಿಬ ಖಂಡಿ ಒಕ್ಕ	35— 0	37— 8
ತಾಂಬ್ರುಕಗಡು ಮ. ಒಕ್ಕ	12— 4	12— 8
ತಾಂಬ್ರುಪಾತ್ರಗಳು ಮ. ಒಕ್ಕ	12— 8	14— 0
ಜೇನುಬೆಳ್ಳಿ ಸೇರು ಒಕ್ಕ	13— 8	15— 0
ಹಿತ್ತಾಳೆ ಕಗಡು ಮ. ಒಕ್ಕ	10— 0	10 — 8
ಹವನು ಒಕ್ಕ	22— 7	24— 8
ಮಣಸೆ ಹುಳಿ ಖಂಡಿ ಒಕ್ಕ	40— 0	45— 0
ನೇಟಿವ್ ಕಾಫಿ ಖಂಡಿ ಒಕ್ಕ	170— 0	180— 0
ಫಿಟೇರಿ ಕಾಫಿ ಖಂಡಿ ಒಕ್ಕ	175 0	195— 0
ಮಡಿಕೇರಿ ಏಲಕ್ಕಿ	50— 0	55 — 0

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ ವೆಂಕಟೇಶ ಬಾಳಿಗ,
ಗೋಲಿಕಟ್ಟಾ ಬಜಾರ್, ಮಂಗಳೂರು

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

೬ ಅಂಕಗಳ ಸ್ವಲ್ಪ) ಭಕ್ತಶಿಖಾಮಣಿ ದಾಮಾಜಿಪಂತ (ಸಂಗೀತ ನಾಟಕ.

ಬರೆದವರು — ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ॥
ಎನ್ನ ಭಕ್ತರು ಎಲ್ಲಿ ಪಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರಾ॥"

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳನ್ನೂ ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ — 12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಲ್ಯಾಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೮ನೆಯ ಧಾತು ಸಂವತ್ಸರದ ಫಾಲ್ಗುಣ ಬ। ೧ ಶನಿವಾರದಿಂದ, ಫಾಲ್ಗುಣ ಬ। ೬ ಶುಕ್ರವಾರದ ವರೇಗಿನ ಪಂಚಾಂಗ (೧೯೩೭ನೇಯ ಮಾರ್ಚ (ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
27	ಶನಿ	೧	೬೦	ಹಸ್ತ	೪೭	೧೪	
28	ರವಿ	೧	೨	ಚಿತ್ರ	೫೩	೧೫	
29	ಸೋಮ	೨	೬	ಸ್ವಾತಿ	೫೯	೧೬	
30	ಕುಜ	೩	೧೧	ವಿಶಾಖ	೬೦	೧೭	
31	ಬುಧ	೪	೧೬	ವಿಶಾಖ	೬	೧೮	
1	ಗುರು	೫	೨೧	ಅನುರಾಧ	೧೨	೧೯	
2	ಶುಕ್ರ†	೬	೨೧	ಜ್ಯೇಷ್ಠ	೧೮	೨೦	

Break Phlsi

Take To-Night

Prepared by a Sage out of Amber Saffron Gold Musk with Himalayan Drugs recruit lost energy strength Nervous Debility and all Disorders in Spinal Cord Regains lost vitality Gives marvellous effect 60 Pills Rs 5 Sample 30 Pills Rs 3 List Free

Dr A S MURTHI CHICACOLE

4 ವರ್ಷಗಳಿಂದ ಉದರವೇದನೆಯಿಂದ ಬಳಲುತಿದ್ದೆ,

ಈಗ ಸೌಖ್ಯದಿಂದಿರುವೆನು.

ನಿಮಗೆ ದುರವಸ್ಥೆಯಾದ ಹೊಟ್ಟೆನೋವು ಇದ್ದರೆ, ಹೊಟ್ಟೆಯಲ್ಲಿ ಜಠರಾಗ್ನಿ ರಸವು ಹೆಚ್ಚಾಗಿ ನಿಮ್ಮನ್ನು ಬಳಲಿಸುತ್ತಿದ್ದರೆ ವಾಯು ಸಂಚರಿಸಿ ಯಾ ಅಜೀರ್ಣದಿಂದ ಹೊಟ್ಟೆ ನೋಯುತ್ತಿದ್ದರೆ ಮಿ। ಡಬ್ಲ್ಯು. ಎಚ್. ಎಂ ಎಂಬವರು ಬರೆದ ಪತ್ರವನ್ನು ಓದಿ ಆಶ್ಚರ್ಯಪಡುವಿರಿ

"ನಾಲ್ಕು ವರುಷಗಳಿಂದಲೂ ನಾನು ಉದರವೇದನೆಯಿಂದ ಬಳಲುತ್ತಿದ್ದೆ. ನಾನು ಒಂದು ಆಫೀಸಿನಲ್ಲಿ ಚಾಕರಿಯವನಾಗಿದ್ದೆ. ಆದುದರಿಂದ ದಿನಕ್ಕೆ 12 ಅಥವಾ 14 ಗಂಟೆ ಕೆಲಸ ಮಾಡುತ್ತಿದ್ದಾಗ ನನ್ನ ಅವಸ್ಥೆಯು ಹೇಗಾಗುತ್ತಿತ್ತೆಂಬುದನ್ನು ನೀವೇ ಎಣಿಸಿರಿ. ಕೆಲವೊಂದು ವೇಳೆ ಎಲ್ಲರೂ ಹಾಜರಿದ್ದ ಸಮಯ ನನ್ನ ಹೊಟ್ಟೆನೋವನ್ನು ತಡೆಯಲಾರದೆ ಕೂಗಿಕೊಂಡಿದ್ದೆನು. ಆದರೂ ಓತ್ಸಾಹದಿಂದ ಅದನ್ನು ಅಡಗಿಸಿ ನನ್ನ ಕೆಲಸವನು ಮಾಡಿದೆನು. ಪ್ರತಿ ಬಾರಿ ನೋವು ಆಗಾಗ ನನಗೆ ರಜೆಯನ್ನು ಪಡೆಯಬೇಕಾಗುತಿತ್ತು. ಕೆಲವು ದಿನಗಳ ಹಿಂದೆ ನಿಮ್ಮ ಪೌಡರಿನ ಸೀಸೆಯೊಂದನ್ನು ಪಡೆದೆನು. ಅದನ್ನು ಸೇವಿಸಿದಂದಿನಿಂದ ನನ್ನ ನೋವು ಶಮನವಾಗುತ್ತ ಬಂತು. ಈಗ ನಾನು ಸಂಪೂರ್ಣ ಸುಖಿಯು."

ಇಂತಹ ... ಕಾಗದಗಳನ್ನು ಮೆ ಕ್ಲೀನ್ ಬ್ರೇಂಡ ಸ್ಟಮಕ್ ಪೌಡರ ತಯಾರಿಸುವವರು ಪಡೆದಿರುತ್ತಾರೆ. ಇಂತಹ ಬೇನೆಗಳಿಂದ ಬಳಲಿ ಜೀವನ ಸಾರವನ್ನು ಕಳೆದ ಎಷ್ಟೋ ಮಂದಿ ಜನರಿಗೆ ಈ ಮದ್ದನ್ನು ಪಡೆದು ತುಂಬಾ ಗುಣಲಾಭವನ್ನು ಪಡೆದಿರುತ್ತಾರೆ. ಆದುದರಿಂದ ನಿಮಗೂ ಇಂತಹ ನೋವಿದ್ದರೆ ಕೂಡಲೆ



ಎಂಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ. ಇಂತಹ ನಮೂನೆಯು ಕಡಿಮೆ ದರದ ಪರಕೀಯ ಪ್ಯಾಕೆಟನ್ನು ಪಡೆದು ನೋಡಬೋಗಬೇಡಿ, ಅದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ.

S No 52

THE
BANK OF MANGALORE LTD.,
MANGALORE

ESTD 1931

Branches-
Panemangalore Mudabidri & Padubidri

Chairman—**Philip J. Chandran, Esq.,**
Retd Dt Registrar of Joint Stock Companies

On & from 1st of January 1937,
Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly
Saving Bank deposit 3½% on daily balances
All kinds of banking business transacted
U. R. PAI, N. U. PAI, *Managing Directors*

ಬಿಳಿ ತೊನ್ನು ಮತ್ತು ಕುಷ್ಠರೋಗ

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ವನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುದು ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ. ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು. ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ನಿಘಾ ತೆಗೆದುಕೊಳ್ಳಲಾಗಲಿಕ್ಕಿಲ್ಲ.

Vaidyaraj Akil Kishore Ram,
No 62 P O Katrisarai (Gaya)



CHEAPEST RATE
VALUE BACK IF DISAPPROVED
DECENT, STRONG, ACCURATE & STYLISH ... GTD 3 YEARS. ROUND NICKEL 2/14/-, RADIUM DIAL 3/12/-, GOLDEN 3/14/-. SQUARE NICKEL 4/.../- GOLDEN 4/.../-. RECTANGULAR NICKEL 5/4/-, GOLDEN 6/-. VERY SMALL ROUND NICKEL 6/-, GOLDEN 6/.../-. POSTAGE ...

ದಿ ಕರ್ನಾಟಕ ಟಾಕೀಜ ಲಿಮಿಟೆಡ್, ಧಾರವಾಡ.

The Karnataka Talkies, Limited, DHARWAR.

A Mythological Masterpiece.

CHIRANJEEVI

(A KANNADA TALKIE)

AWAIT RELEASE

Apply —

MOHAN & CO, DHARWAR

ಭಕ್ತಿರಸಪ್ರಧಾನ

ಪೌರಾಣಿಕ

ಕನ್ನಡ ವಾಕ್ಪಟ

ಚಿರಂಜೀವಿ

ಮಾರ್ಕಾಂಡೇಯ

ಕಥಾಲೇಖಕಃ-

ಶ್ರೀ. ದೇವುಡು ನರಸಿಂಹ ಶಾಸ್ತ್ರಿ, M A

ಸಂಗೀತ ನಿರ್ದೇಶಕ —

ಶ್ರೀ ಎಚ್ ಕೆ ಶೇಷಗಿರಿ ರಾಯರು

ದಿಗ್ದರ್ಶಕಃ-

ಶ್ರೀ. ಕೆ ಪಿ ಭಾವೆ

ಸ್ಟುಡಿಯೋ:—

ಸರಸ್ವತಿ ಸಿನೆಟೋನ್ ಪುಣೆ

ಮುಖ್ಯ ಪಾತ್ರಗಳು —

ಮಾರ್ಕಾಂಡೇಯ — ಕುಮಾರ ನಾರಾಯಣ

ಮೃಕಂಡು: — ಶ್ರೀ ದೇವುಡು. M A.

ಮರುದ್ವತಿ - ಶ್ರೀಮತಿ ವ್ಹಿ ಸುಂದರಮ್ಮ.

ಪರಮೇಶ್ವರ:— ಶ್ರೀ ಆರ್ ಎಸ್. ಮೂರ್ತಿ

ನಾರದ — ಶ್ರೀ ಬಸವರಾಜ ಮನಸೂರ

ಪಾರ್ವತಿ: ಶ್ರೀಮತಿ ಪಾರ್ವತಿ.

ಶ್ರೀ ಮುದವೀಡು ಕೃಷ್ಣರಾಯರು, ಶ್ರೀ ಶೇಷಾದ್ರಿ, ಮಿಸ್ ಲೀಲಾ, ಮಿಸ್ ಗಂಗೂ, ಕುಮಾರಿ ಶಾರದಾ, ಕರ್ನಾಟಕ ಕೋಕಿಲ ಅಮೀರಬಾಯಿ ಕರ್ನಾಟಕಿ ಮೊದಲಾದವರು ಪಾತ್ರವಹಿಸಿರುವರು

ಪ್ರದರ್ಶಿಸುವ ದಿನವನ್ನು ಎದುರುನೋಡಿರಿ!

ವಿವರಗಳಿಗೆ ಬರೆಯಿರಿ —

ಮೋಹನ ಮತ್ತು ಕಂಪೆನಿ, ಬ್ಯಾಂಕು ಬೀದಿ, ಧಾರವಾಡ.

ಏಳು ಲಕ್ಷದ [ಪ್ರಚಂಡ] ಹೊರಹೊಯ್ಲು!

೧ ಬಸ್ಸಿಗೆ ವರ್ಷ ೧ಕ್ಕೆ ಖರ್ಚಿನ ಕಲಮುಗಳು	ಜುಮ್ಲಾ ಖರ್ಚು	ಪೈಕಿ ಜಿಲ್ಲೆಯೊಳಗೆ ಉಳಿಯುವ ಅಂಶ
ಪೆಟ್ರೋಲ್ ಈಗಿನ ಧ್ಯಾನ್ ಬೆಲೆ	2277	ಇಲ್ಲಾ
ಎಣ್ಣೆ ,,	146	,,
ಟಾಯರುಗಳು ,,	900	,,
ಗ್ರೀಸು, ವೇಸ್ಟು ಮೊದಲಾದ ಚಿಲ್ಲರೆಗಳು	50	12
ರಿಪೇರಿ ಸಾಮಾನುಗಳ ಧ್ಯಾನ್ ಬೆಲೆ	250	ಇಲ್ಲಾ
ರಿಪೇರಿ ಮಜೂರಿ	200	200
ನೌಕರರ ಪಗಾರ	720	720
ಟೆಕ್ಸುಗಳು ಎಲ್ಲಾ	1448	947
ಡಿಪ್ರಿಸಿಯೇಶನ್	600	ಇಲ್ಲಾ
ಜುಮ್ಲಾ...	6591	1879

ಒಂದು ಬಸ್ಸಿನ ಮೂಲಕ ಜಿಲ್ಲೆಯಿಂದ ಹೊರಹೋಗುವ ರೂಪಾಯಿ 4712

ನಮ್ಮ ಜಿಲ್ಲೆಯ 150 ಬಸ್ಸುಗಳ ಮೂಲಕ ಜಿಲ್ಲೆಯಿಂದ ಹೊರ ಹರಿಯುವ ರೂಪಾಯಿ

ಏಳು ಲಕ್ಷ!

ಬಸ್ಸುಗಳ ಅನಾವಶ್ಯಕ ಓಡಾಟಗಳನ್ನು ಕಡಿಮೆಮಾಡಿ ಜಿಲ್ಲೆಯ ಸಂಪತ್ತನ್ನು ಉಳಿಸಿರಿ

ಈ ಮೇಲೆ ಕೊಟ್ಟ ಸಂಖ್ಯೆಗಳನ್ನು ಚೆನ್ನಾಗಿ ಪರಿಶೀಲಿಸಿದ್ದಲ್ಲಿ, ನಮ್ಮ ಜಿಲ್ಲೆಯಲ್ಲಿ ಓಡಾಡುವ ಪ್ರತಿಯೊಂದು ಮೋಟಾರು ಬಸ್ಸಿಗೆ ತಗಲುವ ಖರ್ಚು, ಅದರಲ್ಲಿ ನಮ್ಮ ಜಿಲ್ಲೆಯಲ್ಲಿ ಮಾತ್ರ ಉಳಿಯುವ ಮೊಬಲಗಿನ ಅಂದಾಜೂ ತಿಳಿಯಬಹುದು. ಬಸ್ಸಿಗೆ ತಗಲುವ ಖರ್ಚಿನ ಸುಮಾರು ¾ ಅಂಶವು ಪರದೇಶಕ್ಕೆ ಹೋಗುತ್ತದೆ ¼ನೇ ಅಂಶವು ಮಾತ್ರ ನಮ್ಮ ಜಿಲ್ಲೆಯಲ್ಲಿ ಉಳಿಯುತ್ತದೆ. ಈ ಪ್ರಕಾರ ನಮ್ಮ ಜಿಲ್ಲೆಯೊಳಗೆ ಚಲಾವಣೆಯಲ್ಲಿದ್ದ 150 ಬಸ್ಸುಗಳಿಂದಾಗಿ ಸುಮಾರು 7 ಲಕ್ಷ ರೂಪಾಯಿಗಳಷ್ಟು ಪ್ರತಿ ವರ್ಷ ಹೊರಗೆ ಹೋಗುತ್ತಿರುವುದಾದರೆ, ಈ ನಷ್ಟವು ನಮ್ಮ ಜಿಲ್ಲೆಯವರ ಮೇಲೆಯೇ ಬಿದ್ದಂತಾಗುತ್ತದೆ ಈ ಮೋಟಾರು ಸಂಸ್ಥೆಗಳು ಒಟ್ಟುಗೂಡಿ ಸಹಕಾರದಿಂದ ಕೆಲಸ ಮಾಡುವಂತಾಗಿ, ಅನಾವಶ್ಯಕವಾಗಿ ಓಡಾಡುತ್ತಿದ್ದ ಅನೇಕ ವಾಹನಗಳನ್ನೂ ಕಡಿಮೆಮಾಡಲಾಗಿದೆ. ಇದರಿಂದ ನಮ್ಮ ಜಿಲ್ಲೆಯಿಂದ ಹೊರ ಹೋಗಬಹುದಾದ ತುಂಬಾ ಹಣವು ಕಡಿಮೆಯಾದಂತಾಯಿತು. ಹಣಕಾಸಿನ ಮುಗ್ಗಟ್ಟಿನಿಂದ ಪಾರಾಗಲು ದೇಶದಲ್ಲೆಲ್ಲಾ ಚಳವಳ ನಡೆಯುತ್ತಿದ್ದಾಗ, ನಮ್ಮ ಜಿಲ್ಲೆಯ ಮೋಟಾರು ಸಂಸ್ಥಾ ಮಾಲೀಕರು ಸಕಾಲದಲ್ಲಿ ಒಟ್ಟುಗೂಡಿದ್ದು ಪ್ರಶಂಸನೀಯವಾಗಿದೆ.

Before giving your Advertisements Please consult us And we shall do all the needful on your behalf

For Dailies, Bi-weeklies, weeklies, monthlies, English and Kanarese Journals visit our stall

BUY ENJOY & BE SATISFIED

MOST EFFICIENT AND UP-TO-DATE SERVICE IS RENDERED BY US.

For particulars please apply to

The Manager,

The Kanara Advertising Service,

Advertising Consultants & News Agents

Hampankatta—MANGALORE S K

"An ideal young progressive Life Office of India to Insure with or represent

The Commonwealth Assurance Co.

LTD., POONA.

TRIENNIAL BONUS! ON ENDOWMENT Rs. 37½.

TRIENNIAL BONUS! ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to —

Messrs. GAWANKAR & SONS,

Chief Agents for Mysore state, Coorg, Ceded Districts & S. Kanara

AHMED BUILDINGS, CHICKPET, BANGALORE CITY.

Branches: — Bombay, Calcutta, Delhi, Madras & Nagpur.

Local Representatives.—THE MODERN TRADING CO., Mangalore

ನೋಟೀಸು

ದ. ಕನ್ನಡ ಉಡುಪಿ, ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 4/36

R. I. A. No. 177/1937

ಕಮಲಸೆಟ್ಟಿ ಗಾರ್ತಿ—ಬಿ. ಸೇಸು ಸೆಟ್ಟಿಗಾರರ ವಿಧವೆ—ಮಂಗಳೂರು ತಾಲೂಕು ಸುರತಕಲ್ಲು ಗ್ರಾಮ—ಅರ್ಜಿದಾರಳು

ಮತ್ತು

ಗಂಗುಸೆಟ್ಟಿ ಗಾರ್ತಿ—ಅಪ್ಪಯ್ಯ ಸೆಟ್ಟಿಗಾರರ ವಿಧವೆ—ಉಡುಪಿ ತಾಲೂಕು ಕಡೇಕಾರು ಗ್ರಾಮದ ಕಿನ್ನಿಮೂಲ್ಕಿ—ಎದ್ರಳು

ಇವರೊಳಗೆ—ಸದ್ರಿ ಎದ್ರೀಗೆ ಮತ್ತು ಇತರ ಸಮಸ್ತರಿಗೆ ಸಹಾ

ಅರ್ಜಿದಾರಳ ಗಂಡ ವ ಎದ್ರಳ ಮಗ ಮೃತ—ಬಿ. ಸೇಸು ಸೆಟ್ಟಿಗಾರರಿಗೆ ಬರತಕ್ಕ ಸದ್ರಿ R. I. A. ನಂಬ್ರ 177/37ನೇ ಅರ್ಜಿಯಲ್ಲಿ ವಿವರಿಸಿದ ಸಾಲಗಳನ್ನು ವಸೂಲು ಮಾಡುವರೇ ಸದ್ರಿ O. P. ನಂಬ್ರ 4/36ನೇ ಅರ್ಜಿ ವ್ಯವಹರಣೆಯಲ್ಲಿ ತಾ. 26-3-36ರಲ್ಲಿ ಆದ ಹುಕುಂ ಪ್ರಕಾರ ಅರ್ಜಿದಾರಳಿಗೆ ಕೊಡೋಣಾದ ಸಕ್ಸೆಶನ್ ಸರ್ಟಿಫಿಕೇಟನ್ನು extend ಮಾಡಬೇಕಾಗಿ ವಗೈರೆ ಅರ್ಜಿದಾರಳು ಕೊಟ್ಟ ಸದ್ರಿ R. I. A. ನಂಬ್ರ 177/37ನೇ ಅರ್ಜಿಯು ತಾ. 15-4-37ಕ್ಕೆ ತನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನಿಖೆ ಸಮಯ ಸದ್ರಿ ಕೋರ್ಟು ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ

Udipi, South Kanara
20-3-1937

M. Damodar Kamath,
Advocate for Petr

(೧ನೇ ಪುಟದಿಂದ ಮುಂದುವರಿದುದು.)

ವರು, ಆಡಳಿತದ ಖರ್ಚನ್ನು ಕಡಿಮೆ ಮಾಡಲು ಕಾಂಗ್ರೆಸ್ಸಿನವರು ಒಂದು ಮಾರ್ಗವನ್ನು ಕಟ್ಟಬೇಕೆಂದು ಕೇಳಿಕೊಂಡರು.

ಮದ್ರಾಸಿನ ಪ್ರೊ. ರಂಗಾರವರು ರೈತರ ಸಾಲಗಳನ್ನು ಕಂತುಗಳ ಮೂಲಕ ಒಂದು ನಿರ್ದಿಷ್ಟ ವಾಯಿದೆಯೊಳಗೆ ಸಲ್ಲಿಸುವಂತೆ ಒಂದು ಕಾನೂನು ಜಾರಿಗೆ ತರಬೇಕೆಂದು ಸೂಚಿಸಿದರು.

ಸದ್ಯಕ್ಕೆ ಈ ಪ್ರಾಮುಖ್ಯ ತತ್ವಗಳನ್ನೆ ಈ ಸಭೆಯು ಅಸೆಂಬ್ಲಿ ಸದಸ್ಯರ ಮುಂದಿಟ್ಟಿರುವುದರಿಂದ ಇನ್ನು ಸವಿಸ್ತಾರವಾದ ಕಾರ್ಯಕ್ರಮವನ್ನು ಕಾಂಗ್ರೆಸ್ಸು ಕೈಕೊಳ್ಳಲಿರುವುದರಿಂದ ಪ್ರೊ. ರಂಗಾರವರ ಸೂಚನೆಯು ಸದ್ಯಕ್ಕೆ ಅಗತ್ಯವಿಲ್ಲವೆಂದು ಪ. ನೆಹರುಗಳು ತಿಳಿಸಿದರು. ಆದರೆ ಅವರ ಸೂಚನೆಯನ್ನು ಅವರು ತುಂಬಾ ಶ್ಲಾಘಿಸಿದರು

ಮಾಲವೀಯರ ಸ್ಫೂರ್ತಿದಾಯಕ ಭಾಷಣ

ಪಂ. ಮದನ್ ಮೋಹನ್ ಮಾಲವೀಯರು ೩ನೇ ಠರಾವನ್ನು ತಂದರು "ಶಾಸನ ಸಭೆಗಳೊಳಗೆ ಮಾತ್ರವೇ ಅಲ್ಲ, ಅದರ ಹೊರಗೆ ಕೂಡಾ ಬೇಕಾದ ಚಳವಳವನ್ನು ಮಾಡುವಂತೆ ಈ ಪರಿಷತ್ತು ಅದರ ಸದಸ್ಯರಿಗೆ ಸೂಚಿಸುತ್ತದೆ

ಶಾಸನ ಸಭೆಯೊಳಗೆ ಯಾವ ಕೆಲಸ ಮಾಡುವುದಾದರೂ ಅದಕ್ಕೆ ಜನತೆಯ ಸಮ್ಮತಿಯನ್ನು ಪಡೆಯಬೇಕು. ಅವರು ಅಖಿಲ ಭಾರತ ಮತ್ತು ಪ್ರಾಂತಿಕ ಕಾಂಗ್ರೆಸ್ ಸಭೆಗಳ ಅಪ್ಪಣೆಯನ್ನು ಸರ್ವದಾ ನಿರ್ವಹಿಸುತ್ತಿರಬೇಕು" ಇದು ಮಾಲವೀಯಾಜಿಯವರ ಠರಾವಿನ ಸಾರಾಂಶ

ಅವರು ತಮ್ಮ ಭಾಷಣದಲ್ಲಿ, ಬ್ರಿಟಿಷರ 150 ವರ್ಷ ಕಾಲದ ಆಳಿಕೆಯಲ್ಲಿ ಭಾರತವು ಬಡಸ್ಥಿತಿಗೆ ಬಂದಿರುವದೆಂಬ ವಿಷಯವನ್ನು ಹೇಳಿ, ಹಳ್ಳಿ ಹಳ್ಳಿಗಳಲ್ಲಿ ಪಂಚಾಯಿತಿ ಸಭೆಗಳನ್ನು ಸ್ಥಾಪಿಸಿ, ಒಬ್ಬನೇ ಹಳ್ಳಿಗನಾದರೂ ಉಪವಾಸ ಬೀಳದಂತೆ ನೋಡುವ ಜವಾಬುದಾರಿಯನ್ನು ನೋಡುತ್ತಿರಬೇಕೆಂದು ಒತ್ತಿ ಹೇಳಿದರು. ಪರಿಷತ್ತಿನ ಮುಂದಿಟ್ಟ ಮೂರು ಠರಾವುಗಳು ಬಹುಮತದಿಂದ ಅನುಮೋದಿಸಲಾದುವು

ನವರತ್ನಾ ಫಾರ್ಮಸಿ, ಕೊಚ್ಚಿ—ಇವರ

ಗೊನೋಕ್ಕೊಡೊನ್

(ರಿಜಿಸ್ಟರ್ಡ್)

ಕೆಟ್ಟ ಜನರ ಸಂಭೋಗದಿಂದ ಜನನೇಂದ್ರಿಯದಲ್ಲಿ 'ಗೊನೋರಾಯಿ' ಎಂಬ ಹೆಸರಿನ

ಸೂಕ್ಷ್ಮ ಜಂತುವಿನ ಪ್ರವೇಶವಾಗಿ ಈ ವಿಷದ ಪರಿಣಾಮವಾಗಿ ಅದರ ಗುಣಧರ್ಮ ಪ್ರಕಾರ ತತ್ಕಾಲ ಇಲ್ಲವೆ ೪-೮ ದಿನಗಳ ಮೇಲೆ ಇಂದ್ರಿಯದ ಮೇಲ್ಭಾಗ ಕಲೆಬಿದ್ದು ಅದು ಬಾತು, ಅದರ ಮೇಲೆ ಸಣ್ಣ ಸಣ್ಣ ತೂತುಗಳು ಬೀಳುತ್ತವೆ. ಉಷ್ಣತೆ ಹೆಚ್ಚಾಗಿ ಮೂತ್ರ ಮಾಡುವಾಗ್ಗೆ ಅದು ಉರಿಯುವುದು ಮತ್ತು ಹನಿಹನಿಯಾಗಿ ಮೂತ್ರವಾಗುವುದು. ಮುಂದೆ ಮೂತ್ರದ್ವಾರವು ಸಂಕುಚಿತವಾಗಿ, ಮೂತ್ರ ಬಂದಾಗುವುದರಿಂದ ಕೈಥೆಟರ (ನಳಿಕೆ) ಹಾಕಿ ಮೂತ್ರ ಮಾಡಿಸಬೇಕಾಗುವುದು. ಇಂಥಾ ರೋಗಿಗಳಿಗೆ ಸಕಾಲಕ್ಕೆ ಯೋಗ್ಯ ಔಷಧ ಸಿಗದಿದ್ದರೆ ಈ ವಿಕಾರವು ಇನ್ನೂ ಹೆಚ್ಚಾಗುವುದು. ಈ ರೋಗವಿದ್ದ ಸ್ತ್ರೀಯರಿಗಾದರೂ ಈ ವಿಕಾರವುಂಟಾಗುವುದು. ಮತ್ತು ಗರ್ಭಾಶಯವು ದೂಷಿತವಾದ್ದರಿಂದ ವಿಕಾರವಾಗಿ ಗರ್ಭಧಾರಣೆಯಾಗುವುದಿಲ್ಲ.

ಮುಂದೆ ಭಯಂಕರ ಪ್ರಾಣಘಾತಕ ರೋಗವುಂಟಾಗಿ ಆಯುಷ್ಯವು ಕಡಿಮೆಯಾಗುವುದು. ಆದುದರಿಂದ ಶರುವಿಗೇನೇ ನವರತ್ನಾ ಕಂಪೆನಿಯವರ 'ಗೊನೊಕ್ಕೊಡೊನ್' ಉಪಯೋಗಿಸಿದರೆ ಈ ಎಲ್ಲಾ ಲಕ್ಷಣಗಳು ಕಡಿಮೆಯಾಗುವುವು

ವಿಶೇಷ ಸೂಚನೆ:—ಸ್ವಲ್ಪ ಗುಣವಾದೊಡನೆ ರೋಗಿಯು ಔಷಧವನ್ನು ಬಿಡುತ್ತಾನೆ ಆದರೆ ಈ ರೋಗವು ತೊಡಲೇ ಗುಣವಾಗುವುದಿಲ್ಲೆಂಬುದು ಗೊತ್ತಿಲ್ಲದ ಕಾರಣ ಪುನಹ ಕಷ್ಟಕ್ಕೆ ಗುರಿಯಾಗುತ್ತಾನೆ. ಆದುದರಿಂದ 2 ಅಥವಾ 3 ಬಾಟಲಿಗಳನ್ನು ಒಂದೇ ಸವನೆ ತೆಗೆದುಕೊಳ್ಳಬೇಕು

ಕ್ರಯ:—ಹತ್ತು ತೊಲೆಗಳಿಗೆ ರೂ. 1-4-0 ಅಥವಾ ನಾಲ್ಕು ಔನ್ಸುಗಳಿಗೆ ರೂ 1-4-0.

ತಯಾರಿಸುವವರು —
ನವರತ್ನಾ ಫಾರ್ಮಸಿ ಕೊಚ್ಚಿ.

ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

ಅಧ್ಯಕ್ಷ ನೆಹರುಗಳ ಸ[illegible] ಉಪಸಂಹಾರ ಭಾಷಣವಾಯಿತು [illegible] ಯದ ಕಾಂಗ್ರೆಸ್ ಪಾರ್ಲಿಮೆಂಟರಿಗಳಿಗೆ ಪರಸ್ಪರ ಐಕ್ಯ ತಿಳುವಳಿಕೆಗಳನ್ನು ಉಂಟುಮಾಡಲು ಸಹಾಯ ಮಾಡಿದ ಈ ಪರಿಷತ್ತನ್ನು ಸದ್ಯಕ್ಕೆ ಮುಕ್ತಾಯಗೊಳಿಸುವುದಾದರೂ, ಅದು ತಾತ್ಕಾಲಿಕವಾಗಿರುವುದರಿಂದ ಮುಂದೆ ಅವಶ್ಯಕತೆ ಬಿದ್ದಾಗ ಅದನ್ನು ಪುನಃ ಕರೆಯಲಾಗುವುದೆಂದರು. ನಾವೀಗ ನಮ್ಮ ರಾಷ್ಟ್ರೀಯ ಚಳವಳದೊಂದಿಗೆ ಮುಂದೊತ್ತಿ ರಾಷ್ಟ್ರಾಭ್ಯುದಯವನ್ನುಂಟು ಮಾಡಬೇಕೆಂದು ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದರು

Most Reliable New Model 1937.

GENUINE SWISS WATCHES OFFERED AT HALF PRICE.
CHROMIUM CASE RECTANGULAR LEVER WRIST WATCH
No 16

Sale Rs. 6-15-0
SMART LEVER MOVEMENT
Strong & Durable at Low Price



UNIQUE OPPORTUNITY ONLY FOR ONE MONTH
Available Roman or Arabic Figures
Plain Silver Dial

Guaranteed for 5 Years — Lever Pocket Watch Rs 1-15-0

No 12 Chromium 4 Jewels Rs 8-8-0
,, 14 ,, 7 ,, ,, 10-8-0
,, 15 ,, 15 ,, ,, 12-8-0
,, 17 Rolled Gold 15 ,, ,, 16-8-0

Rs 1/- Extra for Radium Dial — Postage & Packing Extra

BAPALAL & CO (s) 116, Abdul Rehman Street Bombay 3



ಮೂರು ಕೈಗಡಿಯಾರಗಳು ಮತ್ತು 195 ವಿವಿಧ ವಸ್ತುಗಳಿಗೆ ರೂ. 2-8-0 ಮಾತ್ರ.

ನಮ್ಮ ಸುಗಂಧ ಎಣ್ಣೆ ಪರಿಮಳದ ಚಕ್ಕೆ ಗುಳಿಗೆಗಳನ್ನು ರೂ. 2-8-0 ಒಟ್ಟಿಗೆ ಪಡೆಕೊಳ್ಳುವಲ್ಲಿ ಈ ಕೆಳಗಿನ ವಸ್ತುಗಳು ಪುಕ್ಕಟೆಯಾಗಿ ಸಿಕ್ಕುವವು. ಬಂಗಾರ ಕಲಿಟಿನ ದಪ್ಪ ಕೈಗಡಿಯಾರ 1, ಚೆಂಡು 1, ರೈಲ್ವೆ ಜೇಬು ದಪ್ಪ ಗಡಿಯಾರ 1, ಸೇಫ್ಟಿ ರೇಜರ್ 1, ಸೋಪು 1, ಬ್ರಶ್ 1, ಕನ್ನಡಿ 1, ಬಾಚಣಿಗೆ 1, ಪಾಕೆಟ್ ಚಾಕು 1, ಕ್ಲಿಪ್ ಸಮೇತ ಪೆನ್ಸಿಲ್ 1, ಸಿಗರೇಟು ಪೆಟ್ಟಿಗೆ 1, ಸಿಗರೇಟು ಲೈಟರ್ 1, ಕೈವಸ್ತ್ರ 1, ಉಂಗುರ 1, ಕಪ್ಪಂ 1, ಚೈನ್ ಸಮೇತ ಬಿಗಿದಕ್ಕೆ ಹಾಕುವ ಉಂಗುರ 1, ಪೆನ್ಸಿಲ್ ಸ್ಯಾಂಡ್ 1, 150 ಪೀಸು ದೂರಕ್ಕೆ ಬೀಳುವ ಪೋಕಿಟಿಂಗ್ ಟೋರ್ಚ್ ಲೈಟು 1, ಅಥವಾ ಜರ್ಮನ್ ಬಿ ಮಾರ್ಕಿನ ಗಟ್ಟಿಯಾದ ಕೇಸನ್ನುಳ್ಳ 5 ವರ್ಷ ಗ್ಯಾರಂಟಿ ಇರುವ ಟ್ರ್ಯಾಮ್ ಪೀಸು 1. ಟಪ್ಪಾಲು ಪ್ಯಾಕಿಂಗ್ ಹಾಸಲು ಆಣೆ 14 ಪ್ರತ್ಯೇಕ

DUTTA & Co.,
15 1 Joymitter Street P O Halkhola Calcutta (S M M)

ಚಿಂತಾರತ್ನ

ಇದರಲ್ಲಿ—೧ ಸಕ್ಕರೆಯನ್ನು ತಯಾರಿಸುವ ರೀತಿ, ೨ ಮೇಣಬತ್ತಿ ತಯಾರಿಸುವ ರೀತಿ, ೩ ಕಾಸ್ಟಿಕ್ ಸೋಡಾ ತಯಾರಿಸುವುದು ೪ ಬಿಸ್ಕತ್ತು ತಯಾರಿಸುವುದು ೫ ದಶಾಂಗ ತಯಾರ ಮಾಡುವುದು ೬ ಚಿತ್ರವನ್ನು ಮಾಡುವುದು ೭ ರೂಪದ ಛಟ್ಟ ಮಾಡುವುದು ೮ ಭಂಗಾರ ಮಾಡುವುದು, ೯ ಬೆಳ್ಳಿ ತಯಾರ ಮಾಡುವುದು, ೧೦ ಜರ್ಮನ್ ಸಿಲ್ವರ್ ಧಾತು ಮಾಡುವದು. ೧೧ ಊದಿನ ಕಡ್ಡಿ ತಯಾರಮಾಡುವುದು, ೧೨ ಕಾಗದಿನ ಹಾಳೆ ತಯಾರ ಮಾಡುವುದು ೧೩ ಕುಂಕುಮವನ್ನು ತಯಾರಿಸುವುದು, ೧೪ ಹಲ್ಲುಪುಡಿಯನ್ನು ತಯಾರಿಸುವುದು. ೧೫ ಗೋಡೆ ಸರಿ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು, ೧೭ ಹಾಲು ಸರಿ ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಮಾನುಗಳು ೧೯ ಭರ್ಜಿ ತಯಾರಮಾಡುವುದು ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಇಂಗ್ಲಿಷ್ ಮಾಡುವುದು, ೨೨ ಮೆಂಥೀಲ ಎಣ್ಣೆ ತಯಾರಿಸುವುದು, ೨೩ ಕಸ ದಿಮ ಮೇಲೆ ಬರೆಯುವುದು, ೨೪ ದಂತಮಂಜನ ಮಾಡುವುದು,೨೫ ರಕ್ತ ವೃದ್ಧಿ, ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು ೨೭ ಕುಷ್ಠರೋಗಕ್ಕೆ ಔಷಧ ೨೮ ಬಾಲಾಮೃತ ಮಾಡುವುದು. ೨೯ ಶಿಶ್ನವೃದ್ಧಿಗೆ ಔಷಧ,೩೦ ಹರಳುಪ್ಪು ಮಾಡುವುದು, ೩೧ ಜ್ವರದ ಗುಳಿಗೆ ಮಾಡುವುದು ೩೨ ಟೊಮೆಟೋ ಪಾಲಿಶ ಮಾಡುವುದು. ೩೩ ಹುಣಸೆ, ಪಚ್ಚಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು, ೩೪ ಹುರುಕು ಹಚ್ಚ ಮುಲಾಮು ೩೫ ನಾಟೀಪುಡಿಮಾಡುವುದು ಇತ್ಯಾದಿ ೧೭೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ. (ವಿ. ಪಿ ಖರ್ಚು ಬೇರೆ)
ವಿಳಾಸ:—ಎಸ್. ಸಿ ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ—೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ, ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯರು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲಾಫಲ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೩ ಭೋಗಕ್ಕೆ ಯೋಗ್ಯಸ್ಥಳ, ೨೪ ಭೋಗಕ್ಕೆ ಅಯೋಗ್ಯ ಸ್ಥಳ, ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೭೦ ವಿಷಯಗಳು ಇರುತ್ತವೆ,

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ.)
ವಿಳಾಸ.—ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

—: ಇದು :—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ

ಇದರಲ್ಲಿ ವೈದ್ಯಶಾಸ್ತ್ರ, ಕಾಮಶಾಸ್ತ್ರ, ಪ್ರಶ್ನಭಾಗ, ಶಕುನಭಾಗ ಕೈಗಾರಿಕೆ ವಿಷಯ, ಕಾಯಿದೇಭಾಗ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ, ತಂತ್ರ, ಮಂತ್ರ,ಯಂತ್ರ ವಶೀಕರಣ, ಇತ್ಯಾದಿ ಅನೇಕ ಮರ್ಮವಿದ್ಯೆಗಳು ಇರುತ್ತವೆ ಎಲ್ಲ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೌಲ್ಯ ಗ್ರಂಥದ ಬೆಲೆ ೧—೦—೦

ವಿಳಾಸ -ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ,

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ ಸೇಲರರಲ್ಲಿ ದೊರೆಯುತ್ತವೆ. ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers—
S. C. Salimath & Sons,
GADAG.

ಶಿಕ್ಷಿತರ ಒರಟು ಮನೋವರ್ತನೆಗೆ ಕಾರಣವೇನು?

ಅವರೇಕೆ ಸ್ವಾತಂತ್ರ್ಯವನ್ನು ಇಚ್ಛಿಸುವುದಿಲ್ಲ?

ರಾಷ್ಟ್ರಪತಿ ಪಂಡಿತ ಜವಾಹರಲಾಲರು ವಿವರಿಸುತ್ತಾರೆ:

"ಸ್ವಾತಂತ್ರ್ಯವು ನಮ್ಮ ದೇಶಕ್ಕೆ ಯೋಗ್ಯವಲ್ಲವೆಂದು ತರ್ಕಿಸುವ ಭಾರತೀಯರನೇಕ ಮಂದಿಗಳಿಂದ್ದಾರೆ. ಇವರ ಈ ತರದ ಮನಸೀಕ ವೃತ್ತಿಯು ನನಗೆ ಖೇದಾಶ್ಚರ್ಯಗಳನ್ನು ಉಂಟುಮಾಡುತ್ತದೆ" ವರ್ಲ್ಡ್ ರಿವ್ಯೂ ಎಂಬ ಇಂಗ್ಲೆಂಡಿನ ಪತ್ರಿಕೆಯೊಂದು ಜವಾಹರಲಾಲರ ಈ ಭಾಷಣಾಂಶವನ್ನು ಉಲ್ಲೇಖಿಸುತ್ತದೆ. ಮುಂದುವರಿಯುತ್ತಾ ನೆಹರುಗಳು ಹೀಗೆ ಹೇಳುತ್ತಾರೆ.

"ಶಿಕ್ಷಣದಲ್ಲಿ ತುಂಬಾ ಹಿಂದ ಬಿದ್ದ ದೇಶವಾದ ಅಫಘಾನಿಸ್ಥಾನಕ್ಕೆ ಹೋದರೆ ಅಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯವೇನೆಂದು ಸುಲಭವಾಗಿ ಅರಿಯದೆ ಇರುವ ಒಬ್ಬ ಮನುಷ್ಯನಾದರೂ ಸಿಗಲಿಕ್ಕಿಲ್ಲ. ಯಾಕೆಂದರೆ, ಅಲ್ಲಿಯ ಪ್ರತಿಯೋರ್ವನೂ ಪದೇ ಪದೇ ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಿರುವುದರಿಂದ ಸ್ವಾತಂತ್ರ್ಯದ ರುಚಿಯನ್ನು ಅವರು ಚೆನ್ನಾಗಿ ಸವಿದಿರುವರು ಮತ್ತು ಅದರಿಂದಲೇ ಇಂದು ಬ್ರಿಟಿಷರಲ್ಲಿ ಎಷ್ಟು ಸುಸಜ್ಜಿತ ಸೈನ್ಯಬಲವಿದ್ದರೂ ಅಫಘಾನಿಸ್ಥಾನವನ್ನು ಮಾತ್ರ ಬಗಲೊಳಗೆ ಹಾಕಲು ಅವರಿಗೆ ಸಾಧ್ಯವಾಗುವುದಿಲ್ಲ'

"ಅಫಘಾನಿಸ್ಥಾನದ ಜನರು ಸ್ವಾತಂತ್ರ್ಯವೇನೆಂಬುದನ್ನು ಸುಲಭವಾಗಿ ತಿಳಿದುಕೊಂಡು ಅದಕ್ಕಾಗಿ ಹೋರಾಡುವರು. ಆದರೆ, ನಮ್ಮ ದೇಶದಲ್ಲಿ ಚೆನ್ನಾಗಿ ಶಿಕ್ಷಿತರೆನಿಸಿದ ನಮ್ಮ ಸ್ನೇಹಿತರುಗಳು ಕೂಡಾ ಸ್ವಾತಂತ್ರ್ಯವೆಂಬ ಮಾತೆತ್ತಿದ ಕೂಡಲೇ ಕಕ್ಕಾಬಿಕ್ಕಿಯಾಗುತ್ತಾರೆ. ಸ್ವಾತಂತ್ರ್ಯವೇನೆಂದು ತಿಳಿದುಕೊಳ್ಳುವ ವಿಷಯವು ತೀರ ಸುಲಭವಾದುದು ಎಂದ ಮೇಲೆ, ಶಿಕ್ಷಿತರೆನಿಸಿದವರ ಶಿಕ್ಷಣವು ತಪ್ಪಾಗಿದ್ದಿರಬಹುದು, ಇಲ್ಲವೇ, ಅದರಿಂದ ಅವರ ಬುದ್ಧಿಶಕ್ತಿಯು ಒರಟಾಗಿರಬಹುದು"

"ಇಲ್ಲದಿದ್ದರೆ, ಅನೇಕ ಶಿಕ್ಷಿತರೂ ಬುದ್ಧಿವಂತರೂ ಎನಿಸಿದವರಿಗೆ ಸ್ವಾತಂತ್ರ್ಯವೆಂಬ ವಿಷಯವು ಏಕೆ ತಿಳಿಯುವುದಿಲ್ಲ? ಕೆಲವು ಸಂದರ್ಭಗಳಲ್ಲಿ ನಾವು ಸ್ವಾತಂತ್ರ್ಯ ಯೋಜನೆಯನ್ನು ಬಿಟ್ಟರೆ ನಮ್ಮೊಡನೆ ಅವರು ಕೂಡುವವೆಂದು ಕೂಡಾ ಹೇಳುತ್ತಾರೆ. ಏಕೆ?

"ಈ ಮನೋಭಾವವು ಹೇಗುಂಟಾಗುತ್ತದೆಂದು ತಿಳಿಯಲು ನಾನು ತುಂಬಾ ಪ್ರಯತ್ನಪಟ್ಟೆನು. ದೀರ್ಘಕಾಲದ ಗುಲಾಮಗಿರಿ ಮತ್ತು ಪರಕೀಯ ಆಡಳಿತೆಯು ಈ ಮನೋವೃತ್ತಿಯನ್ನುಂಟು ಮಾಡುತ್ತದೆಂದು ಖಂಡಿತವಾಗಿ ತಿಳಿದುಕೊಂಡೆನು"

ಶ್ರೀ ಸುಭಾಷ್ಚಂದ್ರಬೋಸರು.

ಇಂದಿಗೆ ಒಹಳ ಸಮಯದಿಂದ ಪರದೇಶದಲ್ಲಿ ಭಾರತದ [illegible] ಪ್ರಚಾರಕಾರ್ಯ ನಡೆಸುತ್ತಲಿದ್ದು ಕಳೆದ ಕಾಂಗ್ರೆಸ್ ಅಧಿವೇಶನ ಸಮಯದಲ್ಲಿ, ಅದರಲ್ಲಿ ಭಾಗವಹಿಸಲೋಸುಗ ಭಾರತಕ್ಕೆ ಬಂದಾಗ ಕೈದುಮಾಡಲ್ಪಟ್ಟು ಬಂಧನದಲ್ಲಿರಿಸಲ್ಪಟ್ಟಿದ್ದರು. ಕಳೆದ ವಾರ ಇವರನ್ನು ವಿಮುಕ್ತಗೊಳಿಸಿರುವರು. ಶ್ರೀಯುತರಿಗೆ ಆಂತರಿಕ ಜ್ವರದ ಬಾಧೆಯಿರುವುದರಿಂದ ಸಂಪೂರ್ಣ ವಿಶ್ರಾಂತಿಯನ್ನು ಪಡೆಯಬೇಕೆಂದು ವೈದ್ಯರು ಎಚ್ಚರಿಸಿದರು. ಕೆಲವು ವಾರಗಳ ವಿಶ್ರಾಂತಿಯ ನಂತರ ಇವರು ಪುನಃ ರಾಜಕೀಯದಲ್ಲಿ ಭಾಗವಹಿಸುವರೆಂದು ತಿಳಿಯಲಾಗಿದೆ

ಸಲ್ಲಾ ಹದಿಮೂರು, ಆದರೂ ಕೆಟ್ಟದ್ದಾಗಲಿಲ್ಲ.

ಸಂಯುಕ್ತ ಅಮೇರಿಕದ ಹದಿಮೂರು ಪ್ರಾಂತ್ಯಗಳು ಒಟ್ಟು ಸೇರಿ ಬ್ರಿಟಿಷರನ್ನು ತಮ್ಮ ದೇಶದಿಂದ ಹೊರಗೆ ಹಾಕಿದ ಮೇಲೆ ಅಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎಂಬ ಸ್ವತಂತ್ರ ರಾಜ್ಯಾಡಳಿತ ಕ್ರಮವು ಸ್ಥಾಪಿತವಾಯಿತು. ಅಂದಿನಿಂದ ಬ್ರಿಟಿಷ್ ಜನಾಂಗಿಕರಿಗೆ 13ನೇ ಸಂಖ್ಯೆ ಎಂದರೆ ಅಪಶಕುನದ ಸಂಖ್ಯೆಯೆಂದು ಭಾವಿಸಲ್ಪಟ್ಟಿದೆ. ಈಗಲೂ ಬ್ರಿಟಿಷರು 13 ಸಂಖ್ಯೆಗಳುಳ್ಳದ್ದನ್ನು ಹೆಚ್ಚು ಪ್ರೋತ್ಸಾಹಿಸುವುದಿಲ್ಲ. ಆದರೂ ಬ್ರಿಟನಿನ ಹೆಂಪ್‌ಶಾಯರ್ ಎಂಬ ಪಟ್ಟಣದ ಜಾನ್ ನ್ಯಾಟ್ ಎಂಬಾತನು ಮೊದಲನೇ ಸಲಕ್ಕೆ ಓರ್ವ ಯುವತಿಯ ಪ್ರಣಯಕ್ಕೆ ಪಾತ್ರನಾದನು. ಇದಾದ 13 ತಿಂಗಳ ಮೇಲೆ ಅವನು ತನ್ನ ಪ್ರೇಯಸಿಯನ್ನು ಮದುವೆಯಾದನು. ದಂಪತಿಗಳೀರ್ವರೂ ಅದೇ ತಿಂಗಳ ೧೩ನೇ ತಾರೀಕಿನಿಂದ ಲಂಡನಿಗೆ ಪ್ರಯಾಣ ಬೆಳಸಿದರು. ರೈಲುಬಂಡಿಯ ೧೩ನೇ ಗಾಡಿಯಲ್ಲಿ ಅವರು ಪ್ರಯಾಣಮಾಡಿ, ಲಂಡನ್ ನಗರದ ೧೩ನೇ ರೈಲ್ವೆ ನಿಲ್ದಾಣದಲ್ಲಿ ಇಳಿದರು.

ಕಳೆದ ವರ್ಷದ ಎಪ್ರಿಲ್ ೧೩ನೇ ತಾರೀಕಿಗೆ ಮದುವೆಯು ನಿಶ್ಚಿತವಾಗಿದ್ದಿತು. ಇದನ್ನು ತಪ್ಪಿಸಲು ಅವರು ಲಗ್ನವನ್ನು ಒಂದು ದಿನಕ್ಕೆ

ಕ್ರೈಸ್ತ ಪಾದ್ರಿಗಳಿಗೆ ಗಾಂಧಿಜಿಯವರ ಭರವಸೆ.

"ಕೊಮ್ಯುನಿಸಂ ತತ್ವವು ಬೇಕು—ಆದರೆ ಹಿಂಸಾತ್ಮಕವಿರಬಾರದು"

"ಕೊಂಗ್ರೆಸು, ಕೊಮ್ಯುನಿಸಂ ತತ್ವದ ಸುತ್ತಲೂ ತಿರುಗುತ್ತಿರುವುದೇ? ಹಾಗೇನು ನನಗೆ ಕಂಡುಬರುವುದಿಲ್ಲ. ಒಂದು ವೇಳೆ ಅದು ನಿಜವಾದರೆ, ಮತ್ತು ಅದು ರಷ್ಯದ ಕೊಮ್ಯುನಿಸಂನ್ನಿನ ಮಾದರಿಯದಲ್ಲವಾದರೆ ನನಗೇನೂ ಅದರಿಂದ ಭಯವಿಲ್ಲ" ಈ ಉತ್ತರವನ್ನು ಗಾಂಧಿಜಿಯವರು ಓರ್ವ ಕ್ರೈಸ್ತ ಪಾದ್ರಿಗೆ ಕೊಟ್ಟಿರುವರು. ಪಾದ್ರಿಗಳು ಪ್ರಸ್ತುತ ಸಮಸ್ಯೆಗಳ ಮೇಲೆ ತುಂಬಾ ಪ್ರಶ್ನೆಗಳನ್ನು ಕೇಳುತ್ತಲಿದ್ದರು.

ಕೊಮ್ಯುನಿಸಮ್ಮಿನ ವಿಷಯವಾಗಿ ಮಾತನಾಡುತ್ತಾ ಮಹಾತ್ಮರು, ಅದನ್ನು ವಿಸ್ತಾರವಾಗಿ ವರ್ಣಿಸಿದರು. "ಕೊಮ್ಯುನಿಸಂ ಅಂದರೆ ಮೇಲು ಕೀಳು ಭಾವನೆಗಳಿಲ್ಲದ ಒಂದು ಸಮಾಜ. ಇದನ್ನು ಎಲ್ಲರೂ ಪಡೆಯಲೆಳಸುವರು. ಆದರೆ, ಕೊಮ್ಯುನಿಸಮ್ಮಿನ ಈ ಗುರಿಯನ್ನು ಪಡೆಯಲು ಬಲತ್ಕಾರವನ್ನು ಉಪಯೋಗಿಸಿದರೆ, ನಾನದರಿಂದ ದೂರವಿರುವೆನು. ನಾವೆಲ್ಲರೂ ಸಮಾನತೆಯಿಂದ ಹುಟ್ಟಿರುವೆವು. ಆದರೆ ಕಳೆದ ಅನೇಕ ಶತಮಾನಗಳಿಂದ ದೈವೇಚ್ಛೆಗೆ ವಿರೋಧವಾದ ಕೀಳು ಮೇಲು ಎಂಬೀ ಭಾವನೆಗಳನ್ನಿಟ್ಟುಕೊಂಡು ಕಾಲ ಕಳೆದೆವು. ಮೇಲು ಕೀಳೆಂಬ ಈ ಭಾವನೆಯು ಶುದ್ಧ ಸೈತಾನರೂಪಿಯಾದದ್ದು. ಹಾಗಿದ್ದರೂ ಮಾನವ ಹೃದಯದೊಳಗಿದ್ದ ಆ ಪಿಶಾಚಿ ಭಾವನೆಯನ್ನು ಖಡ್ಗಧಾರೆಯಿಂದ ಹೊರಗೆಳೆಯನೋಡುವುದು ನನಗಾಗುವುದಿಲ್ಲ. ಮನುಷ್ಯ ಹೃದಯವು ಅಂತಹುದಕ್ಕೆ ಬಗ್ಗುವಂಥದ್ದಲ್ಲ"

ಆಗ ಒಬ್ಬ ಜರ್ಮನ್ ಕ್ರೈಸ್ತ ಪಾದ್ರಿಗಳು ಗಾಂಧಿಜಿಯವರಿಗೆ ಒಂದು ಪ್ರಶ್ನೆಯನ್ನು ಮುಂದರಿಸಿದರು. ಆದರೆ ಅವರ ಆಶ್ಚರ್ಯಕ್ಕೆ ಅಲ್ಲಿ ೧೩ ಮಂದಿ ವಧುವಿನ ಸಖಿಯರು ಮಾತ್ರ ಇದ್ದರು.

ಅವರಿಗೆ ಮಗು ಹುಟ್ಟಿದ ತಾರೀಕು ಫೆಬ್ರವರಿ ೧೩, ಆ ದಿವಸಕ್ಕೆ ಮಗುವಿನ ತಾಯಿಯ ೨೧ನೆ ಜನ್ಮದಿನವಾಗಿ ೧೩ನೇ ದಿನವಾಗಿತ್ತು. ಅಂತೂ ಕಡೇ ತನಕ ಅವರಿಗೆ ೧೩ ತಪ್ಪಲಿಲ್ಲ. ಆದರೆ ಅದರಿಂದೇನೂ ಕೇಡು ಕೂಡ ಆಗಲಿಲ್ಲ.

ಕೇಳಿದರು:–ಹಿಂದೂಮತವು ಅಧಿಕಾರಯುಕ್ತವಾದಾಗ, ಹಿಂದೂಗಳೆಲ್ಲರೂ ಕ್ರೈಸ್ತಮತಕ್ಕೆ ವಿರೋಧ ನಿಲ್ಲರೆ?" ಆ ಸಮಯದಲ್ಲಿ ಹಿಂದೂ ಕ್ರೈಸ್ತರೊಳಗೆ ಕಲಹವುಂಟಾಗಿ ಸ್ಪೈನಿನೊಳಗಾದಂತೆ ಇಲ್ಲಿಯೂ ಆಗಬಹುದೆಂದು ಆ ಪಾದ್ರಿಗಳು ಅಭಿಪ್ರಾಯಪಟ್ಟರು.

ಗಾಂಧಿಜಿಯವರು ಉತ್ತರವೀಯುತ್ತಾ, "ನೀವು ಹೇಳುತ್ತಿರುವುದು ಶುದ್ಧ ಅಸಾಧ್ಯದ ಮಾತು. 'ಹಿಂದೂ ಆಡಳಿತ'ವೆಂಬ ಸಂಗತಿಯೇ ಉಂಟಾಗುವುದಿಲ್ಲ. ಒಂದು ವೇಳೆ ಹಿಂದೂಗಳು ಕ್ರೈಸ್ತರನ್ನು ನಾಶಮಾಡಲು ನೋಡಿದರೆ, ಭಾರತದಲ್ಲಿ ಮುಸಲ್ಮಾನರು ಕೂಡಾ ಇಲ್ಲವೆ? ಅಂದ ಮೇಲೆ ಅವರಿಗೂ ಆ ಹೆದರಿಕೆ ಹುಟ್ಟದೆ? ನಾನು ನಿಮಗೆ ಧೈರ್ಯವಾಗಿ ಹೇಳುತ್ತೇನೇನೆಂದರೆ, ಯಾವ ಹಿಂದುವು ಕೂಡಾ ಇಂತಹ ಯೋಚನೆಯನ್ನು ಮಾಡಲಾರನು. ಹಾಗೇನಾದರೂ ಆದರೆ ಹಿಂದುವು ತನ್ನ ಆತ್ಮಹತ್ಯೆ ಮಾಡಿಕೊಂಡ ಹಾಗಾಗದಲ್ಲದೆ ಬೇರೇನೂ ಇಲ್ಲ.

'ಹಿಂದೂಗಳ ಭಾರತಕ್ಕೆ ಬಂದ ಮೊದಲನೇ ಕ್ರೈಸ್ತರನ್ನು ನಾಶಮಾಡಬಹುದಿತ್ತು. ಅವರೇಕೆ ಅದನ್ನು ಮಾಡಲಿಲ್ಲ. ಹಿಂದೂಗಳು ಅಷ್ಟು ಸಹನಾಶಕ್ತಿಯುಳ್ಳವರು. [illegible] ರಿನ ಉದಾಹರಣೆಯು ಈ ಸಂದರ್ಭದಲ್ಲಿ ಚೆನ್ನಾಗಿರುತ್ತದೆ. [illegible] ತಿರುವಾಂಕೂರಿನಲ್ಲಿದ್ದಾಗ, ಸೈಂಟ್ ಥಾಮಸರ ಸ್ಥಾಪಿಸಿದ ಕ್ರೈಸ್ತ ದೇವಾಲಯವನ್ನು, ಅದರೊಳಗಿನ ಶಿಲುಬೆಯನ್ನೂ ನೋಡಿ [illegible] ಆಗಿನ ಹಿಂದೂಗಳ ಅದನ್ನು ಅಲ್ಲಿ ಸ್ಥಾಪಿಸಲು ಏಕೆ ಬಿಡುತ್ತಿದ್ದರು [illegible] ಹೆದರಿಕೆಗಳ [illegible]' ಹೀಗೆಂದು ಮಹಾತ್ಮರು [illegible].

'ಮಹಾತ್ಮರ ಉತ್ತರವು ಯೋಗ್ಯವಾದುದು. ನಾನು ಈಗ ನನ್ನ ಒಸರಿಗೆ ಮಹಾತ್ಮರ ಹೆಸರಿನಲ್ಲಿ [illegible]

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂದಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳು ಸಿಗಲಾರವು

ಲೋಹ ವಿಷದಿಂದ
(Metal-poisoning)
ಉಂಟಾಗುವ ಭಾದೆಯು ಇಲ್ಲ.

ಅನೇಕ ತರಹ ಮತ್ತು ಪ್ರಮಾಣಗಳಿವೆ.

ಮುಖ್ಯ ಏಜಂಟರು

ಕೆ. ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು

ಪರಿವಿಡಿ
[illegible]
[illegible] ಕಾಂಗ್ರೆಸ್ಸು
[illegible]
ವಿಶಿಷ್ಟ ಸಮಾಚಾರಗಳು
ಅಗ್ರಲೇಖ
ಹಿಲ್ಲ ದರ್ಬಾರನ್ನು ಮುಂದುವರಿಸಲು ಕಾರಣವೇನು ೭
[illegible] ಮನೋವರ್ತನೆಗೆ ಕಾರಣವೇನು ೯
ಸಮಾಜೋನ್ನತಿ ೧೦
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ

ತಾ ೨೬ನೇ ಶುಕ್ರವಾರ ಮಾರ್ಚಿ ೧೯೩೭

ಸ್ವದೇಶಾಭಿಮಾನಿ

ಸಮಾಜೋನ್ನತಿ

ಎರಡು ಶತಮಾನಗಳ ಹಿಂದೆ ಸರಕಾರಗಳು ಸಮಾಜೋನ್ನತಿಗಾಗಿ ಪ್ರಯತ್ನಿಸುತ್ತಿದ್ದುದಕ್ಕಿಂತ ಈಗ ಹೆಚ್ಚಾಗಿ ಪರಿಶ್ರಮಪಡುತ್ತಿವೆ. ಹೀಗೆ ಪ್ರಯತ್ನಿಸುವಾಗ ಜನಗಳ ಮನೋಭಾವವನ್ನು ವಿರೋಧಿಸದೆ ಕಠಿನ ಹೃದಯವನ್ನೂ ತೋರಿಸಿಕೊಳ್ಳದೆ ಶಾಸನಗಳಾಗಬೇಕಾಗಿದೆ.

ಹಿಂದೆ ಸರಕಾರಗಳು, ಮೆಲ್ಲನೆ ಮುಂದರಿಸುವ ಮತ್ತು ಗಡಿಬಿಡಿಯಿಲ್ಲದೆ ಕಾಲಿಡುವ ಪ್ರಯತ್ನಗಳಿಂದ ಸಮಾಜದ ಪ್ರಗತಿ ಸ್ಥಾಪಿಸುತ್ತಿದ್ದುವು. ಜನರನ್ನು ಕಾಪಾಡುವುದೇ ತಮ್ಮ ಕರ್ತವ್ಯ ಹೊರತಾಗಿ, ಅವರನ್ನು ಉದ್ಧಾರ ಮಾಡುವುದು ತಮ್ಮ ಕರ್ತವ್ಯವಲ್ಲವೆಂದೇ ಆಗ ಸರಕಾರಗಳು ನಂಬಿದ್ದುವು. ಸಮಾಜೋನ್ನತಿಯ ಸಾಧನೆಗಳೆಲ್ಲ ತಾನು ಸಹಜಗತಿಯಾಗಿಯೇ ನಡೆಯಬೇಕಾಗಿದ್ದಿತು. ಕ್ರಮೇಣ, ಕೈಗಾರಿಕೆಗಳು ಮುಂದರಿದಂತೆ, ಸರ್ವರಿಗಾಗಿಯೂ ಉನ್ನತಿ ಸಾಧಿಸಬೇಕೆಂಬ ತತ್ವವನ್ನು ಹಿಡಿದು ಧನಿಗಳು ಆಳುಗಳು ಎಂಬ ತರಗತಿಗಳೊಳಗೆ ವೈಮನಸ್ಸು ಉಂಟಾಗದ ರೀತಿಯಲ್ಲಿ ಅವರಿಬ್ಬರ ಅಭಿವೃದ್ಧಿಗೂ ನೆಮ್ಮದಿಗೂ ಸಹಾಯಕವಾದ ಶಾಸನಗಳು ಆಗತೊಡಗಿದುವು. ಜನಗಳಲ್ಲಿ ಕೆಲವರು ಸಾಮುದಾಯಿಕ ರಕ್ಷಣೆಯಾಗಬೇಕೆಂದೂ ಕೆಲವರು ಪ್ರತಿಯೊಬ್ಬನ ಗೌರವ ಪಾಲನೆಗೆ ಸರಕಾರವು ಯತ್ನಿಸಬೇಕೆಂದೂ ಚಳವಳಿಸಿದರು.

ಸರಕಾರವೇ ಎಲ್ಲವನ್ನು ಮಾಡುತ್ತಿದ್ದರೆ ಪ್ರತಿಯೊಬ್ಬನು ತನ್ನ ಕರ್ತವ್ಯಗಳನ್ನು ತನಗೆ ಬೇಕಾಗ ಎಂತೆ ಕಂಡುಹಿಡಿದು ಮಾಡಲಾರದಂತಾಗುವುದೆಂದು ಕೆಲವರು ಹಳಿದರು. ಒಬ್ಬೊಬ್ಬರೊಂದೊಂದು ಬಗೆ ಉನ್ನತಿಗೆಂದು ತೊಡಗಿ ರಾಜತ್ವಕ್ಕೇ ಹಾನಿಯಾಗುವಂತಾಯಿತು. ಮತ್ತೂ ಕೆಲವರು ಜನೋಪಯೋಗಿಯಾಗಿರುವ ಕಾರ್ಯಗಳನ್ನಷ್ಟೆ ಸರಕಾರವು ಕೈಗೊಳ್ಳಬೇಕೆಂದರು. ಹೀಗೆ ನಾನಾ ವಿಧವಾಗಿ ಸಮಾಜೋನ್ನತಿಯ ಸಾಧನೆಗಳು ನಡೆದುದರಲ್ಲಿ, — ಧ್ಯೇಯವಾದ ಮತ್ತು ಉಪಕಾರಿಕ ರೀತಿ ಇವೆರಡನ್ನು ಒದಗಿಸಿ ನಡೆದಲ್ಲಿ ಸಮಾಜವು ಸತ್ವವಾಗಿಯೂ ಸುಖಹೊಂದುವುದಾಗಿ ಈಗ ತಿಳಿದುಬರುವ ಹಾಗಿದೆ.

ಸಮಾಜಸಂಸ್ಕರಣಕ್ಕಾಗಿ ಕೈಯಿಕ್ಕುವಾಗ ವಾಸ್ತವಿಕ ಸ್ಥಿತಿಯನ್ನು ಚೆನ್ನಾಗಿ ವಿಮರ್ಶಿಸಿದ ಬಳಿಕವೇ, ಧ್ಯೇಯಕ್ಕೂ ಅದಕ್ಕೂ ಇರುವ ಸಂಬಂಧವನ್ನು ಕಂಡುಹಿಡಿಯಬೇಕಾಗಿದೆ. ಕಾನೂನನ್ನೇ ಮಾಡುವುದಾದರೂ ಅದನ್ನು ತಟ್ಟನೆ ಸೃಷ್ಟಿಸುವುದು ಒಂದು ಭೂಕಂಪದಷ್ಟೆ ದುಷ್ಪರಿಣಾಮಗಳನ್ನು ಉಂಟುಮಾಡಬಹುದು.

ವೇಶ್ಯಾ ವೃತ್ತಿಯ ನಿರ್ಮೂಲನದಂತಹ ವಿಷಯದಲ್ಲಿ, — ಮನೆಗಳ ಸ್ಥಿತಿ, ಜನರ ದುಡಿತ ಅವಕಾಶಕಾಲದ ಸದ್ವಿನಿಯೋಗ, ಸಮಸ್ತರಲ್ಲಿ ಉತ್ತಮ ಅರಿವು ಮುಂತಾದವನ್ನು ಬಹಳವಾಗಿ ಪರಾಮರ್ಶಿಸಬೇಕಾಗುವುದು. ವೇಶ್ಯಾ ವೃತ್ತಿಯ ದುಷ್ಪರಿಣಾಮಗಳ ವಿಷಯವಾಗಿ ಸಮಸ್ತ ಜನರಲ್ಲೂ ಯಥಾರ್ಥವಾದ ತಿಳುವಳಿಕೆಯುಂಟಾದರೆ, ನಂತರ-ತಾನೆ ಸುಲಭವಾಗಿ ಹಿಂದು ಯೋಗ್ಯ ಕಾನೂನನ್ನು ಹೂಡಬಹುದು. ಜನಾಭಿಪ್ರಾಯದ ಬೆಂಬಲವಿಲ್ಲದಿರುವಲ್ಲಿ, ಶಾರದಾ ಕಾನೂನು ಸಹ, ಎಷ್ಟು ನಿಷ್ಪ್ರಯೋಜಕವಾಗಿ ಉಳಿಯುವುದು! ಪ್ರತಿಯೊಂದೂ ವಿಷಯಕ್ಕೆ ಒಂದೊಂದು ಕಾನೂನು ಆಗತ್ಯವಿಲ್ಲ. ಸ್ವಸಹಾಯಕ್ಕಾಗಿ ಯಾರು ಹೋರಾಡುವರೋ ಅವರಿಗೆ ಸಹಾಯಕ್ಕಾಗಿ ಮಾತ್ರ ಕಾನೂನು ಉಂಟಾಗತಕ್ಕದು. ಏಕೆಂದರೆ, ಸರಕಾರವು ಎಲ್ಲ ವಿಷಯಗಳಲ್ಲೂ ಕಾನೂನು ಮಾಡುತ್ತ ಬಂದರೆ ಅದು ಯಂತ್ರದಂತೆ ಕಾರ್ಯನಿರ್ವಹಿಸಿ, ಮನುಷ್ಯನು ಜೀವಿಯೆಂಬುದನ್ನು ಮರೆತು, ಯಾಂತ್ರಿಕ ಕ್ರಿಯೆಯಿಂದ ತಾನೆ ಹಾನಿಯುಂಟಾಗುವುದು.

ಹಾಗೆಂದು ಎಲ್ಲ ಸಮಾಜೋದ್ಧಾರದ ಕಾನೂನುಗಳನ್ನು ಕೇಂದ್ರ ಸರಕಾರವೇ ಮಾತ್ರ ಮಾಡಲಿ ಎಂದು ಇತರ ಅಧಿಕೃತ ಸಂಸ್ಥೆಗಳು ಸುಮ್ಮನಿರುವುದು ಸರಿಯಾಗದು. ಮ್ಯುನಿಸಿಪಾಲಿಟಿಗಳೂ ಜಿಲ್ಲಾ ಬೋರ್ಡುಗಳೂ ಜನತೆಯ ಹಿತಕ್ಕಾಗಿ ಎಷ್ಟೆಲ್ಲ ಪ್ರಯತ್ನಗಳನ್ನು ಮಾಡಬಹುದು! ಇಲ್ಲಿ ಜನಸಂಘವು ಕಿರಿದಾಗಿರುವ ಪ್ರಯುಕ್ತ, ಪ್ರತಿನಿಧಿಗಳು ಸುಲಭವಾಗಿ ಅಗತ್ಯ ವಿಷಯಗಳನ್ನು ಗೊತ್ತುಮಾಡಿಕೊಂಡು ಪ್ರಗತಿ ಸಾಧಕವಾಗಿರುವ ಕಟ್ಟಳೆಗಳನ್ನು ಮಾಡಬಹುದು.

ಎಷ್ಟೋ ವೇಳೆ ಎಸೆಂಬ್ಲಿ ಕೌನ್ಸಿಲುಗಳಿಗೆ ಹೋಗುವ ಪ್ರತಿನಿಧಿಗಳು ಹೊಸ ಕಾನೂನು ರಚನೆಗೆ ತೊಡಗಿ, ತಾವು ಅಲ್ಲಿಗೆ ಸೇರಿದುದರ ಸ್ಮಾರಕವನ್ನು ಮಾಡಲೆಳಸುವರು. ಈ ಭಾಗದಲ್ಲಿ ಅವರಿಗೆ ಸರಕಾರದ ಮತ್ತು ಖಾಸಗಿ ಜನಗಳ ಸಹಾಯವು ತುಂಬಾ ಬೇಕಾಗುವುದು. ಜನರಲ್ಲೇ ಉಂಟಾಗಿರುವ ದೋಷಗಳನ್ನು ಜನರೇ ಮೊದಲಾಗಿ ತಿದ್ದಿಕೊಳ್ಳಲು ಯತ್ನಿಸಿದರೆ, ಮುಂದೆ ಅಗತ್ಯಕಂಡಂತೆ ಕಾನೂನನ್ನು ಮಾಡಲೂ ಸುಲಭವಾಗುವುದು. ಮಹಾತ್ಮರಂತಹ ಒಬ್ಬರು ಹರಿಜನೋದ್ಧಾರದ ಕಾರ್ಯಕ್ಕೆ ಕೈಹಚ್ಚಿದ ಬಳಿಕ ತಾನೆ ಹರಿಜನೋದ್ಧಾರಕ್ಕಾಗಿ ಎಲ್ಲ ಕಡೆಗಳಿಂದಲೂ ಸಾಕಷ್ಟು ಪ್ರೋತ್ಸಾಹ ದೊರೆವಂತಾಯಿತೆಂಬುದನ್ನು ಮರೆಯಲಾರೆವು. ಇದೇ ರೀತಿಯಾಗಿ ಜಾತಿಕೂಟಗಳೂ ಸುಧಾರಣೆ ಮಾಡಲು ತೊಡಗಿದರೆ, ಮುಂದೆ ಇಡೀ ಜನಾಂಗದ ಸುಧಾರಣೆಯ ಮಟ್ಟವು ಒಂದೇ ಆಗುವಂತೆ ಮಾಡಲು ಸರಕಾರಕ್ಕೆ ಅನುಕೂಲವೂ ಸುಲಭವೂ ಆಗುವುದು.

ಬೋರ್ಡು ಮ್ಯುನಿಸಿಪಾಲಿಟಿಗಳಲ್ಲಿ ಇಂತಹ ಕಾನೂನುಗಳನ್ನು ಮಾಡುವುದಕ್ಕೆ ಇದುವರೆಗೆ ಕಂಡುಬಂದಿರುವ ತಡೆಗಳೆಂದರೆ, — ರಾಜಕೀಯ ಪಕ್ಷಗಳೊಳಗಣ ವಿರೋಧ, ಪಂಗಡಗಳು, ಹೆಚ್ಚಿಗೆ ತೆರಿಗೆ ವಿಧಿಸಲು ಆಕ್ಷೇಪ ಅಥವಾ ಅನಿಚ್ಛೆ ಇಂತಹದೇ. ಅಧಿಕೃತ ಸಂಘಗಳು ಹೊಸ ಕಾನೂನುಗಳನ್ನು ಈ ವಿಷಯಗಳಲ್ಲಿ ಮಾಡುತ್ತಲಿದ್ದರೂ ಜನತೆಯ ಇಚ್ಛೆಗೆ ವಿರುದ್ಧವಾಗಿ ಇವು ಉಂಟಾದಲ್ಲಿ, ಅವು ಮೆಚ್ಚುಗೆಗೆ ಪಾತ್ರವಾಗುವುದಿಲ್ಲ. ವ್ಯಕ್ತಿಜೀವನಕ್ಕೆ ಆತಂಕವುಂಟಾಗದ ರೀತಿಯಲ್ಲಿ ಸುಧಾರಣೆಗಳನ್ನು ಮಾಡಿದರೆ ಸರ್ವರೂ ಒಪ್ಪುವವರೇ. ಸರಿ ರಷ್ಯ ಜರ್ಮನಿ, ಇತ್ಯಾದಿ ರಾಜ್ಯಗಳಲ್ಲಿ ನಡೆಯುತ್ತಿರುವುವೆಂಬ ಸುಧಾರಣೆಗಳನ್ನು ನಾವು ಕೇಳುತ್ತಿದ್ದೇವಾದರೂ ಅಲ್ಲಿನ ಜನರೇ ಈ ಸುಧಾರಣೆಗಳ ಪಕ್ಷವಾಗಿ ಒಳ್ಳೆಯ ಅಭಿಪ್ರಾಯವುಳ್ಳವರಾಗಿಲ್ಲ. ಜನಾಂಗದ ಜೀವನವನ್ನೆಲ್ಲ ಅಧಿಕಾರಿಯು ತನ್ನ ಕೈಯೊಳಗೆ ಇಟ್ಟುಕೊಂಡು, ಪ್ರತಿಯೊಬ್ಬನೂ ತನ್ನ ನಿರ್ದೇಶದಂತೆ ನಡೆಯುವ ಹಾಗೆ ಕಾನೂನು ಮಾಡಿರುವುದನ್ನು ಸರ್ವಸಮ್ಮತವಾದ ಕಾನೂನೆಂದು ಯಾರೂ ಒಪ್ಪಲಾರರಷ್ಟೆ.

ಎಷ್ಟೇ ಮನಸ್ಸಿದ್ದರೂ, ಸಮಾಜದ ಅಭ್ಯುದಯವನ್ನು ಸಾಧಿಸುವುದಕ್ಕೆ ಮೊದಲಾಗಿ, ಇದ್ದ ಹಣವನ್ನೆಲ್ಲ 'ರಾಜ್ಯದ ರಕ್ಷಣೆಗೆಂದು ಯುದ್ಧ ಸನ್ನಾಹದ ಹುಚ್ಚಿಗೆ ಒಪ್ಪಿಸಿ ಎಷ್ಟು ದಿನಗಳ ತನಕ ರಾಷ್ಟ್ರಗಳು ಈ ಹುಚ್ಚನ್ನು ತಿಳಿಯದಿರುವುವೊ, ಅಷ್ಟು ದಿನಗಳ ತನಕ ದೇಶಾಭ್ಯುದಯವೆಂಬುದು ಮಾಯಾಬಜಾರದಂತೆ ಕಾಣುವುದಲ್ಲದೆ, ನಿಜವಾಗಿ ಮುಂದರಿಯುವುದು ಸಾಧ್ಯವಲ್ಲ. ಒಂದು ದಿನದ ಮಹಾಯುದ್ಧದ ಖರ್ಚಿಗಿಂತ, ಒಂದು ಜನಾಂಗದ ಮಹಿಳೆಯರ ಬಾಣಂತಿತನದ ಶುಶ್ರೂಷೆಯ ನೂರು ವರ್ಷದ ಖರ್ಚು ಕಡಿಮೆಯಾಗುವುದಾಗಿ ಅಂದಾಜು ಹೇಳುವರು.

ಮುಖ್ಯವಾಗಿ ಬೇಕಾದುದು ಜನಾಭಿಪ್ರಾಯ. ಜನರು ಉತ್ತಮಾಭಿಪ್ರಾಯವುಳ್ಳವರಾಗಿ ಸಮಾಜಕ್ಕೆ ಅಭ್ಯುದಯವುಂಟಾಗುವಂತೆ ಯತ್ನಿಸಬೇಕೆಂದು ಹಟಹಿಡಿದರೆ, ಅವರಿಗೆ ಸಾಧ್ಯವೆಷ್ಟು, ಅಸಾಧ್ಯವೆಷ್ಟು, ಆತಂಕವೆಷ್ಟು ಎಂಬುದನ್ನು ತಿಳಿದು ಸರಕಾರಕ್ಕೂ ತಿಳಿಸಿ, ಅಗತ್ಯವಾದ ಕಾನೂನನ್ನು ಮಾಡಿಕೊಳ್ಳಲು ಸಾಧ್ಯವಾಗುವುದು. ಇಲ್ಲದಿರುವಲ್ಲಿ, ಸಮಾಜೋನ್ನತಿ ಎಂಬುದು ವಿಜೃಂಭಣೆಗಾಗಿ ಮಾತ್ರವೆಂದು ತಿಳಿಯಬಹುದೇ ವಿನಾ, ಜನಾಭ್ಯುದಯಕ್ಕಾಗಿ ಸರಕಾರದ ಮೂಲಕವೂ ಸತ್ಯವಾಗಿಯೂ ಸಾಧ್ಯವಾಗಲಾರದು.

ಸ್ಫುಟವಿಚಾರಗಳು

ದಬ್ಬಾಳಿಕೆಯ ಕಾನೂನುಗಳು

ಎಷ್ಟು ಕಾಲ ಜ್ಯಾರಿಯಲ್ಲಿರುವುವೊ ಅಷ್ಟು ಕಾಲ ಸೆರೆಮನೆಗಳಲ್ಲಿ ವಿಚಾರಣೆಗೊಳಪಡಿಸದೆ ಜನರನ್ನಿಡಲು ಅನುಕೂಲ. ಆದಕಾರಣ, ಆ ಕಾನೂನುಗಳನ್ನು ರದ್ದುಗೊಳಿಸಿ, ಹಾಗೆ ಸೆರೆಯಲ್ಲಿಟ್ಟವರನ್ನು ಬಿಡುಗಡೆಮಾಡಬೇಕಾಗಿ ರಾಜಕೀಯ ಕೈದಿಗಳ ಪರವಾಗಿ ಸೇರಿದ ಒಂದು ಪರಿಷತ್ತು ಸೂಚನೆಮಾಡಿರುವುದು. ಇವೆರಡೂ ವಿಚಾರಗಳು ಒಂದೇ ಸಲ ನಡೆಯಬೇಕು. ಕೈದಿಯನ್ನು ಈಗಲೆ ಬಿಡುಗಡೆಮಾಡಿ, ಪುನಃ ಆಗಲೆ ಅವನನ್ನು ಕೈದುಮಾಡುವರೆ ಕಾನೂನು ಇದೆ. ಕಾನೂನನ್ನು ರದ್ದುಪಡಿಸೋಣವೆಂದರೆ ಈ ಕೈದಿಗಳಲ್ಲಿ ಹಲವರು ಮಾಡಿರಬಹುದಾದ ಅತ್ಯಾಚಾರಗಳೆಂಬುವುಗಳ ರಿಕಾರ್ಡು ಸರಕಾರದ ವಶದಲ್ಲಿದೆ. ಸ್ವಾತಂತ್ರ್ಯದ ಪ್ರೇಮವು ಜನರಲ್ಲಿ ವಾಯುವಾಗಿ ಇದ್ದಿದ್ದರೆ, ಸ್ವಾತಂತ್ರ್ಯಕ್ಕಾಗಿ ನಾನಾ ವಿಧಗಳಲ್ಲಿ ಜನರು ಚಳವಳ ನಡೆಸುತ್ತಿರಲಿಲ್ಲ. ಹೀಗೆ ಸಾಧಿಸುವವರನ್ನು ಬಂದೀಖಾನೆಗಳಲ್ಲಿ ಇಡಬೇಕಾಗುತ್ತದೆ. ಬ್ರಿಟಿಷರ ಸ್ವಾತಂತ್ರ್ಯಪ್ರಿಯತೆಯ ಚಿಹ್ನವಾಗಿ ಎಂಬಂತೆ ಈ ಡಿಟೆನ್ಯೂಗಳನ್ನು ಆಟವಾಡಿಸಲು ಕಾಯಿದೆಯು ಈ ಕಾರಾಗೃಹಗಳೂ ಇರುವುದೆ ನ್ಯಾಯವೆ? ಜನತೆಯು ಸಂರಕ್ಷಣೆಗಾಗಿ ವಿನಃ ಈ ಕಾನೂನುಗಳಲ್ಲ. ಸರಕಾರಕ್ಕೆ ಪೀಡಿಸುವ ಸ್ವಾತಂತ್ರ್ಯಪ್ರಿಯರನ್ನು ತಡೆಗಟ್ಟುವುದಕ್ಕಾಗಿ ಮಾತ್ರ ಇವು ಇವೆ. ಈ ಕಾನೂನುಗಳಿಂದಾದರೂ ಫಲವಾಗಿಲ್ಲ. ಇಡೀ ಕಾಂಗ್ರೆಸು ಈಗ ಸ್ವಾತಂತ್ರ್ಯದ ಧ್ಯೇಯವನ್ನೆ ಹಿಡಿದಿದೆಯಲ್ಲ. ಈ ಧ್ಯೇಯವು ಅಷ್ಟು ಧೈರ್ಯದಿಂದ ಇರುವಂತೆ ಸಹಾಯವಾದಿರುದು ಈ ಕಾನೂನುಗಳು ದಬ್ಬಾಳಿಕೆಯಿಂದ ಉದ್ರೇಕತೆ ಹೆಚ್ಚುವುದು. ಸ್ವಾತಂತ್ರ್ಯ ಧ್ಯೇಯವುಳ್ಳ ಕಾಂಗ್ರೆಸು ಈಗ ಅಧಿಕಾರ ವಹಿಸುವಾಗ ಸ್ವಾತಂತ್ರ್ಯ ಸಾಧನೆಗಾಗಿ ಜೈಲುಪಾಲಾದವರ ಹೊರಬೀಳುವುದು ಅಗತ್ಯವಲ್ಲವೆ? ಇಂತಹ ಕಾರಣಗಳನ್ನು ವಿವರಿಸಿ ಈ ಸೂಚನೆಗಳಾಗಿವೆ. ಪರಿಣಾಮವೇನಾಗುವುದೋ ನೋಡಬೇಕು.

ವೈಸ್ರಾಯರ ಸೆರ್ಟಿಫಿಕೇಟು.

ಸಹಾಯ, ಸಹಾನುಭೂತಿ ಸಹಕಾರಗಳಿಂದ ಮುಂದೆ ಮಂತ್ರಿಗಳೊಡನೆ ಸೇರಿ ರಾಜ್ಯಭಾರಮಾಡುವೆನೆಂದ ವೈಸ್ರಾಯರು ಪ್ರತಿಯೊಂದ ಭಾಗದಲ್ಲೂ ಎಸೆಂಬ್ಲಿಯು ಆಕ್ಷೇಪಿಸಿದ್ದ ಫೈನೆನ್ಸ್ ಬಿಲ್ಲನ್ನು ಸರ್ಟಿಫಿಕೇಟು ಮೂಲಕವಾಗಿ ಮಂಜೂರಾಗುವಂತೆ ಮಾಡಿರುವುದು ಕೀರ್ತಿಕರವೆ? ಆ ಮಾತುಗಳನ್ನು ವೈಸ್ರಾಯರು ಹೇಳಿದಾಗ ನಾವು ಕೃತಜ್ಞತೆಯಿಂದ ವೈಸ್ರಾಯರನ್ನು ವಂದಿಸಿದೆವು, ಹೊಸ ಯುಗದ ಸೂರ್ಯನು ಮೂಡುವಾಗ ಹಿಂದಣ ಮಬ್ಬೆಲ್ಲ ಮಾಯವಾಗುವುದಾಗಿ ಅವರೂ ಎಂದಂತೆ ನಾವೂ ನಂಬಿದೆವು. ನಂಬಿಕೆ ವಂದನೆ ಎರಡನ್ನೂ ಹಾಗೇ ಬಿಟ್ಟು, ವೈಸ್ರಾಯರು ಮಾತ್ರ ಸರ್ಟಿಫಿಕೇಟಿಗೆ ಕೈಹಚ್ಚಿದರು. ಇದಕ್ಕೆ ಕಾರಣರು ಅವರೇ? ಅವರ ಕೈಹಿಡಿದು ಯಾರೂ ಸಹಿಹಾಕಿಸಿಕೊಂಡರೇ? ಸಕ್ಕರೆಯ ಮೇಲಣ ಸುಂಕದ ಮತ್ತು ಕಾರ್ಡುಗಳ ಬೆಲೆಯ ವಿಚಾರವಾಗಿದ್ದ ಮುಖ್ಯ ಎರಡು ವಿಷಯಗಳನ್ನಾದರೂ ಎಸೆಂಬ್ಲಿಯ ಆಕ್ಷೇಪ ತಿಳಿದು, ಸಹಕರಿಸಿದ್ದರೆ ವೈಸ್ರಾಯರಿಗೆ ಈ ದೇಶವು ಎಷ್ಟು ಕೃತಜ್ಞವಾಗುತ್ತಿತ್ತು! ಏಕೆಂದರೆ, ೨೦೦ ಕೋಟಿ ರೂ.ಗಳ ವೆಚ್ಚದಲ್ಲಿ ೧೬೫ ಲಕ್ಷ ರೂಪಾಯಿ ಮಾತ್ರವೇ ಇವೆರಡು ಆಕ್ಷೇಪಗಳನ್ನು ಅಂಗೀಕರಿಸಿದಲ್ಲಿ ವೆಚ್ಚದ ಪಾಲಿಗೆ ಕಡಿಮೆ ಸಿಗುತ್ತಿತ್ತು. ಎಸೆಂಬ್ಲಿಯ ಮೆಂಬರರೇ ಮಾತ್ರವಲ್ಲದೆ, ಇಡೀ ದೇಶವೇ ಈ ಆಕ್ಷೇಪಗಳನ್ನು ಒತ್ತಿ ಹೇಳಿರುವುದು. ಸರಕಾರ ಪಕ್ಷವು ಎಷ್ಟೆಂದರೂ, ಉದಾರ ಭಾವದ ಮಾತುಗಳನ್ನು ಅಂತಹ ಹೇಳಿಕೆಗೆ ಅನುಕೂಲವಾಗಿ ಶೈಲಿಯನ್ನು ಬದಲಿಸಬಲ್ಲ ಇಂಗ್ಲಿಷಿನಲ್ಲೇ ಹೇಳಬಲ್ಲುದಾದರೂ, ಶತಮಾನಗಳಿಂದಲೂ ಸ್ವೇಚ್ಛೆಯಾಗಿ ನಡೆದುಬರುವ ಕೈಗಳ ಆಡಿದ ನಾಲಗೆಗೆ ಅನುಕೂಲವಾಗಿ ಮಾಡಲೂ ಬಲ್ಲವೆಂಬುದನ್ನು ತೋರಿಸಕೊಡದಾಯಿತು. ಮನಸೋಲುವ ನುಡಿಗಳು ರಾಜಕಾರಣದಲ್ಲಿ ದಕ್ಷತೆಯ ಸೂಚಕವಾಗುವುದೆಂದಿಗೆ?

ಭಾರತೀಯ ಸಾಹಿತ್ಯ ಪರಿಷತ್ತು

ಇದು ಹಿಂದೀ ಪ್ರಚಾರಸಭೆಗಳ ಧ್ಯೇಯವನ್ನಿಟ್ಟುಕೊಂಡಿಲ್ಲ. ಹಿಂದೀ ಪ್ರಚಾರ ಮತ್ತು ಹರಿಜನೋದ್ಧಾರ ಎಂಬುವು ಎಲ ಜನತೆಯನ್ನು ಒಂದಾಗಿಸಲು ಎರಡು ಉದ್ಯಮಗಳು. ಹಿಂದೀ ಪ್ರಚಾರ ಎಂದೊಡನೆ ಪ್ರಾಂತಿಕ ಭಾಷೆಗಳನ್ನು ಮಣ್ಣುಗೂಡಿಸಲು ಪ್ರಯತ್ನವೇ ಅಲ್ಲ. ಈ ಭಾಷೆಗಳನ್ನು ಇನ್ನಷ್ಟು ಪುಷ್ಟೀಕರಿಸಲು ಹಿಂದೀ ಪ್ರಚಾರವು ಸಹಾಯಕವಾಗಬಹುದು. ಇದರಿಂದ ಸ್ವರಾಜ್ಯಭಾವನೆಯ ಹೆಚ್ಚುವುದು ಎಲ್ಲ ಪ್ರಾಂತಿಕ ಮತ್ತು ದೇಶೀಯ ಭಾಷೆಗಳಲ್ಲಿನ ಉತ್ಕೃಷ್ಟವಾದ ಸಾಹಿತ್ಯವಾವುದೊ ಅದನ್ನು ಒಂದಾಗಿಸಿ ಪುಷ್ಟೀಕರಿಸಲೂ ಭಾರತೀಯ ಸಾಹಿತ್ಯ ಪರಿಷತ್ತಿನ ಉದ್ದೇಶವಾಗಿದೆ. ಕಲಾದೃಷ್ಟಿಯಿಂದ ದೂಷಿತವೆನಿಸಿರುವ ಅನಾವಶ್ಯಕವಾಗಿರುವ ಸಾಹಿತ್ಯವನ್ನು ಅಳಿಸಿಬಿಡುವುದಕ್ಕೆ ಇದೊಂದ ಸಾಧನ. ಭಿನ್ನಭಾವಗಳನ್ನು ಇನ್ನಷ್ಟು ಭಿನ್ನಗೊಳಿಸಿ ರಾಷ್ಟ್ರದಲ್ಲಿ ಭಿನ್ನತೆಯನ್ನೆ ಹೆಚ್ಚಿಸುವ ಸಾಹಿತ್ಯವನ್ನು ಊರ್ಜಿತವಿರದಂತೆಯೂ ಈ ಪರಿಷತ್ತಿನ ಪರಿಣಾಮವಾಗಬಹುದು. ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿನ ಭಾಷಾಸಾಹಿತ್ಯಗಳಲ್ಲಿ ಇರುವ ರತ್ನಗಳನ್ನು ಏಕರೂಪತೆಗೆ ತಂದು ಒಂದು ಕಡೆ ಕೂಡಿಸಿದ ಪ್ರಯತ್ನಗಳನ್ನೂ ಈ ಪರಿಷತ್ತು ಮಾಡುವುದಾಗಿದೆ ಎಂದ ಆಚಾರ್ಯ ಕಾಲೇಲಕರರು ಪರಿಷತ್ತಿನ ಉದ್ದೇಶಸಾಧನೆಗಳನ್ನು ವಿವರಿಸುತ್ತಾರೆ.

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
Available in 7lb and 14lb packets at the
Office C. P C Co., Ltd
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಮಂಗಳೂರು.

ಇದೇ ತಿಂಗಳ ತಾ. ೧೮ನೇ ಗುರುವಾರ ಸಾಯಂಕಾಲ ೩ಕ್ಕೆ ಮ॥ ರಾ॥ ರಾ॥ ಬಂಟ್ವಾಳ ವೆಂಕಟ್ರಾಯ ಬಾಳಿಗ್ಯ, ಎಂ ಎಲ್. ಎ. ಇವರು ಮಂಗಳೂರು ಪೆಂಟ್ ಲೆಂಡ್‌ಪೇಟೆ ಮಲ್ಕಿ ವಿಟ್ಟಪ್ಪ ಪ್ರಭುಗಳವರ ಮಾಳಿಗೆಯಲ್ಲಿ ಹೊಸತಾಗಿ ಸ್ಥಾಪಿತವಾದ "ದಿ ಜವಾಹರ್ ಬೇಂಕ್" ಎಂಬ ಬೇಂಕಿಂಗ್ ಸಂಸ್ಥೆಯನ್ನು ಸ್ವಹಸ್ತದಿಂದ ತೆರೆದರು. ಈ ಕಲ ಸಂದರ್ಭದಲ್ಲಿ ಊರಿನ ಪ್ರಮುಖರೆಲ್ಲರೂ ನೆರೆದಿದ್ದರು. ಈ ಬೇಂಕಿನ ಮ್ಯಾನೆಜರು ಎ. ವಿ. ಪ್ರಭು ಮತ್ತು ಕೆ. ಜಿ. ಶೆಣೈ ಇವರು ಎಂದು ತಿಳಿಯುತ್ತೇವೆ.

ಕೆನರಾ ಹೈಸ್ಕೂಲು ಬಳಿಯ ರಾಘವೇಂದ್ರ ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ವಿವೇಕಾನಂದ ಸಂಘದ ನೇತೃತ್ವದಲ್ಲಿ ಇದೇ ಬರುವ ತಾ. ೨೬ನೇ ಆದಿತ್ಯವಾರ ಬೆಳಗ್ಗೆ ಗಂಟೆ ೮ಕ್ಕೆ ಶ್ರೀಯುತ ಎಂ. ಆರ್. ಭಟ್ಟರವರು "ನವದೃಷ್ಟಿಯಿಂದ ಗೀತೆಯ ಅರ್ಥ" ಎಂಬ ವಿಷಯದ ಕುರಿತು ಕೊಂಕಣಿ ಭಾಷೆಯಲ್ಲಿ ವ್ಯಾಖ್ಯಾನ ಮಾಡುವರು. ಎಲ್ಲರಿಗೂ ಸುಸ್ವಾಗತವಿದೆಯೆಂತ ಸಂಘದ ಕಾರ್ಯದರ್ಶಿಗಳು ನಮಗೆ ತಿಳಿಸಿರುತ್ತಾರೆ.

ಇದೇ ತಾ. ೩೧ನೇ ಬುಧವಾರ ಮಂಗಳೂರು ಮ್ಯುನಿಸಿಪಾಲಿಟಿಯ ಮೀಟಿಂಗು ಜರುಗಲಿರುವುದು.

ವೈದಿಕ ಧರ್ಮ ಪ್ರಚಾರ ಸಂಘ ಇವರಿಂದ ಹೊರಡಿಸಲ್ಪಟ್ಟ ವೇದಗಳ ಮಹತ್ವವೆಂಬ ಒಂದು ಪುಸ್ತಕವು ನಮ್ಮ ಕೈಸೇರಿದೆ. ಧರ್ಮವು ನಶಿಸಿದ ಈ ಕಾಲದಲ್ಲಿ ಜನರಲ್ಲಿ ಜಾಗ್ರತಿಯನ್ನುಂಟುಮಾಡುವ ಇಂತಹ ಪುಸ್ತಕಗಳ ಆವಶ್ಯಕತೆಯು ಒದಗುತ್ತದೆ. ಇವುಗಳ ಸದುಪಯೋಗವನ್ನು ಇನ್ನಾದರೂ ಪಡೆದು ಹಿಂದೂ ಧರ್ಮದ ಏಳಿಗೆಯನ್ನು ಮಾಡುವರೆಂಬ ಭರವಸೆಯು ಇದೆ.

ವಿಕ್ಟೋರಿಯಾ ಜುಬಿಲಿ ವೇತನದ ಪರೀಕ್ಷೆಯು ಇದೇ ಬರುವ ಜೂನ್ ತಾ. ೩ಕ್ಕೆ ಗವರ್ನಮೆಂಟು ಕಾಲೇಜಿನಲ್ಲಿ ನಡೆಯುವುದು. ಆ ಸಮ್ಮಂಧ ಅರ್ಜಿಗಳು ಜೂನು ತಾ. ೧ನೇ ಒಳಗೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಂಗೀಕರಿಸಲ್ಪಡುವವು. ಆಮೇಲೆ ಯಾವ ಅರ್ಜಿಗಳನ್ನೂ ಸ್ವೀಕರಿಸಲಿಕ್ಕಿಲ್ಲ. ಅರ್ಜಿ ಫೋರ್ಮುಗಳನ್ನು ಒಂದು ಮತ್ತು ಎರಡು ಆಣೆಗಳನ್ನು ಕೊಟ್ಟು ಕೋರ್ಟು ಸಮಯಗಳಲ್ಲಿ ಪಡೆಯಬಹುದು. ಈ ವೇತನವನ್ನು ಒಬ್ಬ ಬಾಹ್ಮಣ ವಿದ್ಯಾರ್ಥಿಗೂ ಒಬ್ಬ ಕ್ರೈಸ್ತ ವಿದ್ಯಾರ್ಥಿಗೂ ಕೊಡಲ್ಪಡುವುದು. ಬ್ರಾಹ್ಮಣರಲ್ಲಿ ಗೌಡ ಸಾರಸ್ವತ ಕೊಂಕಣಿ ಕೇನರಾ ಸಾರಸ್ವತ ದೇಶಸ್ಥ ಕರ್ನಾಟಕ ಶಿವಳ್ಳಿ ಕೋಟ ಈ ವರ್ಗದವರು ಕ್ರೈಸ್ತ ಪಂಥದವರಾಗಿರುವ ಸ್ವಾನ್ನಿಕ್ಕೆ ಕೆಥೋಲಿಕರು ಪ್ರೊಟೆಸ್ಟಂಟರೂ ಸ್ಪರ್ಧಿಸಬಹುದು.

ಕುಂದಾಪುರ ಸರ್ಕಲಿಂದ ಡಿ. ಬೋರ್ಡಿಗೆ ಸ್ಥಾನ ಖಾಲಿ ಬಿದ್ದಿದ್ದು — ಕುಂದಾಪುರ ಸರ್ಕಲಿನಿಂದ ಒಬ್ಬ ಸದಸ್ಯರನ್ನು ಜಿಲ್ಲಾ ಬೋರ್ಡಿಗೆ ಆರಿಸಬೇಕಾಗಿದೆ. ಈ ಬಗ್ಗೆ ನಾಮಪತ್ರಗಳು ಎಪ್ರಿಲ್ ೩೦ರ ವರೆಗೆ ಸ್ವೀಕರಿಸಲ್ಪಡುವವು. ಎಪ್ರಿಲ್ ತಾ. ೩ರಲ್ಲಿ ಶೋಧನೆ. ಸರಿಯಾದ ನಾಮಪತ್ರಗಳ ಪ್ರಕಟನೆ ತಾ. ೬ರಲ್ಲಿ. ಚುನಾವಣೆಯಾಗುವ ತಾರೀಕು ಎಪ್ರಿಲ್ ೨೭. ತಾ. ೨೦ರಲ್ಲಿ ಪ್ರಕಟನೆ ತಾ. ೨೧ರಲ್ಲಿ ಎಂದು ಜಿಲ್ಲಾ ಪಂಚಾಯತ ಅಧಿಕಾರರು ತಿಳಿಸುತ್ತಾರೆ.

ಇದೇ ತಾ. ೧೫ಕ್ಕೆ ಜರಗಿದ ನಗರಸಭೆಯಲ್ಲಿ ಈ ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟವು — ಮಂಗಳೂರು ಮುಸ್ಲಿಂ ಫೋರ್ಥ ಎಲಿಮೆಂಟರಿ ಶಾಲೆಗಳಲ್ಲಿ ವೋಟರುಗಳನ್ನು ತೆರೆಯುವ ಸೂಚನೆಯನ್ನು ಸೂಚಿಸಲಾಯಿತು. ಈ ವಿಷಯವನ್ನು ವಿದ್ಯಾ ಇಲಾಖೆಯ ಗಮನಕ್ಕೆ ತರಬೇಕೆಂದು ನಿರ್ಧರಿಸಲಾಯಿತು. ಮಿ॥ ತಲ್ಲೇರಿ ರಂಗರಾಯರು ೩ ಠರಾವುಗಳನ್ನು ಕೌನ್ಸಿಲಿನ ಮುಂದಿರಿಸಿದರು. (a) ಮಂಗಳೂರಿನ ಕೆಲವು ರಸ್ತೆಗಳ ಚರಂಡಿಗಳನ್ನು ಕೇವಲ ೪ ದಿನಗಳಿಗೊಮ್ಮೆ ಶುಚಿಮಾಡುವುದು ಒಳ್ಳೇಯದಲ್ಲ. ಕನಿಷ್ಟಪಕ್ಷಕ್ಕೆ ೨ ದಿನಗಳಿಗೊಂದಾವರ್ತಿಯಾದರೂ ಶುಚಿಮಾಡಬೇಕು. ಕೌನ್ಸಿಲಿನವರು ಈ ಬಗ್ಗೆ ಹೆಚ್ಚು ಕೂಲಿಗಳನ್ನು ನೇಮಕಮಾಡಬೇಕಾಗುವುದೆಂದೂ ನೀರಿನ ಸರಬರಾಯಿಯ ವ್ಯವಸ್ಥೆಯಿಲ್ಲದೆ ಇದರಿಂದ ಪ್ರಯೋಜನವಿಲ್ಲವೆಂದೂ ಅಭಿಪ್ರಾಯಪಟ್ಟರು. (b) ಹಿಂದೊಮ್ಮೆ ಕೌನ್ಸಿಲು ಮೆಂಬರರಾಗಿದ್ದ ದಿವಂಗತ ಕಾರ್ನಾಡು ಸದಾಶಿವರಾಯರ ಸ್ಮರಣಾರ್ಥವಾಗಿ ಅವರ ಭಾವಚಿತ್ರವನ್ನು ಭವನದಲ್ಲಿ ಅನಾವರಣ ಮಾಡಬೇಕು. ಈ ಬಗ್ಗೆ ಸರಕಾರದ ಅನುಮತಿ ನಿರೀಕ್ಷೆಯಿಂದ ೬೦ ರೂಪಾಯಿಯನ್ನು ವಿನಿಯೋಗಿಸುವುದೆಂದು ನಿರ್ಧಾರ ಮಾಡಾಯಿತು. (c) ಒಂದು ಮುಖ್ಯ ಬೀದಿಯನ್ನು ಅವರ ಹೆಸರಿನಿಂದ ಕರೆಯಬೇಕೆಂದೂ ಈ ವಿಷಯವನ್ನು ಮುಂದಿನ ಸಂಚಿಕೆಯಲ್ಲಿಯೂ ಚರ್ಚಿಸಲ್ಪಡಬೇಕೆಂದೂ ಮಂಜೂರಾಯಿತು. ಅನಂತರ ಚಾಲ್ತಿ ವರ್ಷದಲ್ಲಿ ನಗರ ಇಲಾಖೆಗೆ ಟಾಯರುಗಳನ್ನೂ ಪೆಟ್ರೋಲ್ ಎಣ್ಣೆಯನ್ನೂ ಒದಗಿಸುವ ವಿಷಯ ಚರ್ಚೆಯಾಗಿ ಈ ಬಗ್ಗೆ ಟೆಂಡರುಗಳನ್ನು ಸ್ವೀಕರಿಸುವುದೆಂದು ನಿಶ್ಚಯಮಾಡಿದರು.

ಮಂಗಳೂರು ಬಸ್ಸು ಮೊಟೋರ್ಸ್ ಲಿಮಿಟೆಡ್ ಇವರು ಸಿಟಿ ಸರ್ವಿಸ್ ಇಡುವ ಬಗ್ಗೆ ಲೈಸನ್ಸಿಗಾಗಿ ಬರೆದ ಅರ್ಜಿಗೆ ಆದಷ್ಟು ಬೇಗ ಉತ್ತರ ಕೊಡಬೇಕೆಂದು ನಿರ್ಧರಿಸಿದರು. ಒಮ್ಮೆಗೆ ಸಿಟಿ ಸರ್ವಿಸಿಗೆ ಅನುಮತಿ ಕೊಡುವಲ್ಲಿ ಜಟ್ಕಗಳಿಂದಲೇ ಜೀವನ ನಡೆಸುತ್ತಿರುವ ಸುಮಾರು ೧೫೦ ಮಂದಿ ಜಟ್ಕಾಗಾಡಿ ಹೊಡೆಯುವವರು ಅಲ್ಲದೆ ಕುದುರೆಗಳಿಗೆ ಹುಲ್ಲು ಒದಗಿಸಿ ಜೀವನ ತೆಗೆಯುವ ಕೂಲಿಯವರೂ ನಿರುದ್ಯೋಗಿಗಳಾಗುವರು. ಆದುದರಿಂದ ಅವರಿಗೆ ಜೀವನಕ್ಕೆ ಬೇರೆ ಅನುಕೂಲ ಮಾಡುವರೆಯೂ ಅವರವರ ಜಟ್ಕಾಗಳ ಮಾರಾಟದ ವ್ಯವಸ್ಥೆಯನ್ನು ಮಾಡುವತನಕವೂ ಈಶ್ವರ ಕೌನ್ಸಿಲಿನವರು ಬಡವರ ಮೇಲೆ ದಯೆ ಇಟ್ಟು ಸಿಟಿ ಸರ್ವಿಸಿಗೆ ಸ್ವಲ್ಪ ಸಮಯದ ಮೇಲೆ ಲೈಸನ್ಸು ಕೊಡಬೇಕೆಂದೂ ಜಟ್ಕಾದವರ ಪರವಾಗಿ ಸಭೆಯ ಮುಂದೆ ಪ್ರಾರ್ಥಿಸಲಾಯಿತು. ಈ ವಿಷಯದ ಕುರಿತು ಒಂದು ಉಪಸಮಿತಿಯನ್ನು ನೇಮಕಮಾಡಿದರು.

ಇದೇ ತಾ. ೨೩ನೇ ರಾತ್ರಿ ಬಿಜೈ ಟೋಲ್‌ಗೇಟಿನ ಸಮೀಪ ತೋಟದೊಳಗೆಯೂ ಕಳ್ಳು ಕುಡಿದು ಹೊಡೆದಾಡಿದ ಪರಿಣಾಮವಾಗಿ ನಾರಾಯಣನೆಂಬವನು ಚೂರಿಯ ಏಟಿನಿಂದ ಅಂದೇ ರಾತ್ರಿ ಮೃತಪಟ್ಟಿರುವನು. ಕೊಲೆಯ ಆಪಾದಿತನೆಂಬವನಿಗೂ ವಿಶೇಷ ಗಾಯಗಳಾಗಿರುವವು. ಪೋಲೀಸ್ ಖಾತೆಯವರು ತನಿಖೆ ನಡೆಸುತ್ತಿರುವರು. ಸ್ತ್ರೀ ಸಮ್ಮಂಧದ ಕಲಹವೇ ಇದಕ್ಕೆ ಕಾರಣವಾಗಿರುವುದಾಗಿ ತಿಳಿದುಬರುತ್ತದೆ.

ಶಂಕರದೇವ ಎಸ್. ಕಾರ್ನಾಡ ಸಂಗೀತ ಸ್ಪರ್ಧೆ ಈ ವರ್ಷದ ಸ್ಪರ್ಧೆಯು ಎಪ್ರಿಲ್ ೩೦ನೇ ೧೬ಕ್ಕೆ ನಡೆಯುವುದು. ಸ್ಪರ್ಧಿಸುವವರು ಎಪ್ರಿಲ್ ತಾ. ೨೫ರೊಳಗೆ ತಮ್ಮ ಹೆಸರುಗಳನ್ನು ಕೊಡತಕ್ಕದ್ದು. ೧೮ ವರ್ಷಕ್ಕಿಂತ ಕೆಳಗಿನ ವಿದ್ಯಾರ್ಥಿನಿಯರೆಲ್ಲರೂ ಇದರಲ್ಲಿ ಭಾಗವಹಿಸಬಹುದು. ಇತರ ಮಾಹಿತಿಗಳಿಗೆ ಸೆಕ್ರೆಟರಿ ಫಿಯೊಲೊಸೊಫಿಕಲ್ ಸೊಸೈಟಿ ಕೊಡಿಯಾಲಬೈಲ್ ಮಂಗಳೂರು ಇವರಿಗೆ ಬರೆಯತಕ್ಕದ್ದು.

ತಾಲೂಕುಗಳಿಂದ

ಕೊಲ್ಲೂರು — ಇಲ್ಲಿಯ ಬೋರ್ಡ್ ಶಾಲೆಗೆ ಕಳೆದ ಎಪ್ರಿಲ್ ತಾ. ೧೬ಕ್ಕೆ ವರ್ಗವಾಗಿ ಬಂದಿರುವ ಮ. ರಾ. ಜಿ. ವೆಂಕಟ್ರಮಣ ಶೆಟ್ಟಿಯವರಿಗೆ ಇದೇ ಮಾರ್ಚ್ ೩೦ ತಾರೀಕು ಈ ಶಾಲೆಯಿಂದ ಉಡುಪಿ ತಾಲೂಕು ಕಲ್ಯಾಣಪುರ ಬೋರ್ಡ್ ಶಾಲೆಗೆ ವರ್ಗವಾಯಿತೆಂದು ತಿಳಿದು ನಾವೆಲ್ಲರೂ ಬಹಳ ಪಶ್ಚಾತ್ತಾಪಪಡುತ್ತೇವೆ. ಆದರೆ ಇತ್ತೀಚೆಗೆ ಮೂರು ತಿಂಗಳಿಂದ ವಿಶೇಷ ಜ್ವರದ ಪರಿಣಾಮವೇ ಇವರ ವರ್ಗಾವರ್ಗಿಗೆ ಕಾರಣವಾಗಿರಬಹುದು. ಅವರಿಗೆ ಊರಿನ ಹತ್ತಿರವೇ ಆದದ್ದಕ್ಕಾಗಿ ನಮಗೆಲ್ಲರಿಗೂ ಸಂತೋಷವೆ. ಆದರೆ ಇವರು ಎಷ್ಟು ತರುಣ ಉತ್ಸಾಹಿಗಳಾಗಿ, ಸೌಶೀಲ್ಯಾದಿ ಗುಣಗಳಿಂದ ತುಂಬಿದವರಾಗಿದ್ದು, ಗ್ರಾಮಸ್ಥರಿಗೂ ಶಿಷ್ಯವರ್ಗದ ಕಡೆಗೆ ಒಳ್ಳೇ ಬೋಧನೆ ಇತ್ತು ಶಾಲೆಯನ್ನು ಅಭಿವೃದ್ಧಿಗೆ ತಂದಿರುವರು. ಅಲ್ಲದೆ ವಿರಾಮ ಕಾಲಗಳಲ್ಲಿ ವಿದೇಶ ವ್ಯಾಖ್ಯಾನಗಳನ್ನೂ ಹಳ್ಳಿಯ ಏಳಿಗೆಗೆ ಅನುಕೂಲವಾಗುವಂಥಾ ಕೃಷಿ ಕೈಗಾರಿಕೆಯ ವಿಷಯಗಳನ್ನು ಗ್ರಾಮಸ್ಥರಿಗೆ ಬೋಧಿಸುತ್ತಿದ್ದರು. ಸದರಿಯವರಿಗೆ ಹಳೇ ವಿದ್ಯಾರ್ಥಿಗಳ ಸಂಗಡದವರೂ ಸ್ವಜಾತಿ ಬಂಧುವರೂ ಕ್ಷೇತ್ರಪುರೋಹಿತರೂ ಕೂಡಿ ಆಮಂತ್ರಣವಿತ್ತು ಸತ್ಕಾರಕೂಟಗಳನ್ನು ಏರ್ಪಡಿಸಿದ್ದರಲ್ಲದೆ ಸದರಿಯವರು ತಾ. ೧೬—೪—೩೬ನೇ ದಿನ ದೇವಿಯ ಸನ್ನಿಧಿಯಲ್ಲಿ ಪಂಚಪೂಜೆ ವಗೈರೆ ವಿನಿಯೋಗಗಳನ್ನು ನಡೆಸಿ ಈ ದಿನ ಮಧ್ಯಾಹ್ನವೇ ಹೊರಟು ಪ್ರಯಾಣಬೆಳೆಸಿರುವರು. ಇವರಿಗೆ ಶುಭವಾಗಲಿ. ಇದರಿಗೂ ಇವರ ಬಳಗಕ್ಕೂ ಸಹಾ ಶ್ರೀ ದೇವಿಯು ಅನುಗ್ರಹಿಸಲೆಂದು ಪ್ರಾರ್ಥನೆ—ಎಂದೊಂದು ಬಾತ್ಮಿ.

ಪೊಳಲಿ — ಇಲ್ಲಿಯ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಾಲಯದಲ್ಲಿ ವರ್ಷಾವಧಿ ಪದ್ಧತಿಯಂತೆ ತಾ. ೧೨—೪—೩೬ನೇ ಶನಿವಾರ ಧ್ವಜಾರೋಹಣವಾಗಿ ೨೮ ದಿವಸಗಳ ಪರ್ಯಂತ ಉತ್ಸವವಿರುತ್ತದೆ. ತಾ. ೪—೫—೩೬ನೇ ರವಿವಾರ ಚೆಂಡು ಪ್ರಾರಂಭ. ತಾ. ೬—೫—೩೬ನೇ ಬುಧವಾರ ಚಂದ್ರಮಂಡಲ ಮಹೋತ್ಸವ. ತಾ. ೮—೫—೩೬ನೇ ಗುರುವಾರ ಕಡೆ ಚೆಂಡು ಮಹಾ ಮಹೋತ್ಸವವು ಮಹಾ ವಿಜೃಂಭಣೆಯಿಂದ ಜರಗಲಿರುವುದು. ಅನಂತರ ತಾ. ೯—೫—೩೬ನೇ ಶುಕ್ರವಾರ ರಥೋತ್ಸವ, ಮರುದಿನ ಅವಭೃತ. ಭಕ್ತಜನಾದಿಗಳೆಲ್ಲರೂ ಸನ್ನಿಧಿಗೆ ಚಿತ್ತೈಸಬೇಕಾಗಿ ವಿನಂತಿ.

ಮೂಲ್ಕಿ — ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ತಾ. ೨೦—೪—೩೬ನೇ ಶನಿವಾರ ಅಪರಾಹ್ನ ಗಂಟೆ ೨ ೩೦ಕ್ಕೆ ಹೆಜಮಾಡಿ ಬೋ॥ ಎ॥ ಶಾಲೆಯಲ್ಲಿ ಕೂಡಿಬಂದು ಮೂಲ್ಕಿ ಬೋರ್ಡ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀ॥ ಬಿ. ಭೋಜರಾಯರು ಅಂದು ಸಭಾಧ್ಯಕ್ಷರಾಗಿದ್ದರು. ಹಾಜರಿಯು ಸಾಕಷ್ಟು ಸಮಾಧಾನಕರವಾಗಿತ್ತು. ಯಥಾಪ್ರಕಾರ ಕಾರ್ಯಕ್ರಮಗಳಿದ್ದವು. ಮುಂದಿನ ಸಭೆಯು ಇದೇ ಬರುವ ತಾರೀಕು ೧೦—೫—೩೬ನೇ ಶನಿವಾರ ನಿರ್ಧಿಷ್ಟ ಸಮಯಕ್ಕೆ ಸೆಂಟರ್ ಸ್ಕೂಲಲ್ಲಿ ಜರಗಲಿರುವುದು.

ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆಯಲ್ಲಿ ಎಂದಿನಂತೆ ಈ ವರ್ಷವೂ ಮಹಾ ಶಿವರಾತ್ರಿ ಸಂಬಂಧ ಭಜನೆ ಪೂಜೆ ಇತ್ಯಾದಿಗಳು ನಡೆದುವು. ಸದರಿ ಶಾಲೆಯ ವರ್ಷಾವಧಿ ಪರೀಕ್ಷೆಯು ಇದೇ ಕಳೆದ ತಾ. ೧೬—೪—೩೬ರಲ್ಲು ಮಂಗಳೂರು ರೇಂಜ್ ಶಾಲೆಗಳ ಎಡಿಷನಲ್ ಜ್ಯೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಮ॥ ರಾ॥ ರಾ॥ ಟಿ. ಕೃಷ್ಣ ಅವರ್ಗಳ್ ಬಿ. ಎ. ಎಲ್. ಟಿ. ರವರಿಂದ ಜರಗಿಸಲ್ಪಟ್ಟಿತು. ಶಾಲಾಭಿವೃದ್ಧಿಯು ಚೆನ್ನಾಗಿದೆ ಎಂದು ಸದರಿಯವರು ಅಭಿಪ್ರಾಯಪಟ್ಟಿರುವರಾಗಿ ತಿಳಿದುಬರುತ್ತದೆ. ಮುಂಬೈಯಲ್ಲಿರುವ ಶೆಟ್ಟಿ ಬ್ರದರ್ಸರು ಸದರಿ ಶಾಲೆಗೆ (ಅಲ್ಲಿ ಸೋಡ್ತಿಯಲ್ಲಿ ತಮಗೆ ಸಿಕ್ಕಿದ ಹಣದಲ್ಲಿ) ರೂ. ೧೫—೮ ರಷ್ಟು ಒಂದು ಪೆಟ್ರೋಮೆಕ್ಸ್ ದೀಪದ ಬಗ್ಗೆ ದಾನಮಾಡಿರುವುದು ಸ್ತುತ್ಯವಾಗಿದೆ. ಸದರಿಯವರಿಗೆ ಶ್ರೀ ಪಂಚದುರ್ಗೆಯು ಶ್ರೇಯೋಭಿವೃದ್ಧಿಯನ್ನು ಕರುಣಿಸಲಿ.

ವಂದನೋಕ್ತಿಗಳು— ಸ್ಥಳೀಕ ಹೈಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸಿದ್ದ ಸೋಡ್ತಿಯನ್ನು ಯಶಸ್ವಿಯಾಗಿ ಕೊನೆಗಾಣಿಸುವಲ್ಲಿ ಸಂಪೂರ್ಣ ಸಹಕಾರ ಪ್ರೋತ್ಸಾಹಗಳನ್ನು ಕೊಟ್ಟು ನಡೆಸಿದ ಎಲ್ಲಾ ಮಹಾಶಯರಿಗೂ ಟಿಕೇಟು ಮಾರಾಟದಲ್ಲಿ ಪಟ್ಟಿನ ಶ್ರಾಸ್ತ್ರ ಪಟ್ಟು ಕೆಲಸಮಾಡಿದ ಸಕಲ ವಿದ್ಯಾರ್ಥಿಗಳಿಗೂ ಟಿಕೇಟು ಪಡಕೊಂಡು ಸಹಾಯವಿತ್ತ ಸಜ್ಜನರಿಗೂ ಸೋಡ್ತಿ ತೆಗೆಯುವ ದಿನ ಹಗಲು ರಾತ್ರಿ ವಿರಾಮವಿಲ್ಲದೆ ಸಹಾಯ ಕೊಟ್ಟು ನಡೆಸಿದ ಸ್ವಯಂಸೇವಕರೆಲ್ಲರಿಗೂ ಸೋಡ್ತಿ ತೆಗೆಯುವ ದಿನಗಳಲ್ಲಿ ಸಹಕರಿಸಿದ ಎಲ್ಲಾ ವಿದ್ಯಾಭಿಮಾನಿಗಳಿಗೂ ಕಾರ್ಯಕಾರಿ ಮಂಡಲಿಯವರ ತಮ್ಮ ಹೃತ್ಪೂರ್ವಕ ಅಭಿವಂದನವನ್ನು ಸಲ್ಲಿಸುತ್ತಾರೆ. ಸೋಡ್ತಿಯಲ್ಲಿ ಮಹಾಲಕ್ಷ್ಮಿ ಜ್ಯುಯೆಲ್ಸ್ ಎ. ೩೮ ೬೦೦ರಲ್ಲಿ ಇನಾಮು ಹಂಚೋಣದ ಬಗ್ಗೆ ಮತ್ತು ಟಿಕೇಟಿನ ಬಗ್ಗೆ ರೂ. ೧೫೪೦೦ ಹೋಗಲು ೬ ಲಾ ಫಂಡಿಗೆ ರೂ. ೧೫೩೦೦ ದೊರೆಯುವ ಹಾಗೆ ಅಂದಾಜು ಮಾಡಲಾಗಿದೆ. ಸೋಡ್ತಿಯ ಲೆಕ್ಕಪತ್ರಗಳು ಸರ್ಟಿಫೈಡ್ ಆಡಿಟರಿಂದ ತನಿಖೆ ನಡೆಸಿ ವಿವರ ಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವುದು ಎಂದು ಬಿ. ಭೋಜರಾವ್ ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಕಾಸರಗೋಡು — ಇದೇ ಕಳೆದ ೩ ನೇ ಆದಿತ್ಯವಾರ ಅಪರಾಹ್ನ ೩ ೩೦ಕ್ಕೆ ಸ್ಥಳೀಯ ಶಾಲಾ ಕಟ್ಟಡದಲ್ಲಿ ಹಿಂದೂ ಯುವಕ ಸಂಘದ ಸಹಾಯದಿಂದ ಒಂದು ಸಾರ್ವಜನಿಕ ಸಭೆಯು ಜರಗಿತು. ಇಲ್ಲಿಯ ಪ್ರಸಿದ್ಧ ಕಾಂಗ್ರೆಸ್ ದಂಡಾಳುಗಳಾದ ಮ॥ ರಾ॥ ಎಂ. ಉಮೇಶರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮಂಗಳೂರಿನ ಸದ್ಧರ್ಮ ಪ್ರಚಾರಕ ಪತ್ರಿಕೆಯ ಸಂಪಾದಕರಾದ ಶ್ರೀ॥ ವಿ. ಲಕ್ಷ್ಮಣದೇವ ವಿದ್ಯಾರ್ಥಿಯವರು "ಭಾರತ ಮಹಿಳೆಯರ ಪ್ರಾಚೀನ ಗೌರವ" ಎಂಬ ಕುರಿತು ಒಂದು ದೀರ್ಘ ಭಾಷಣವಿತ್ತರು. ಶ್ರೀಯುತರು ತಮ್ಮ ಭಾಷಣದಲ್ಲಿ ಭಾರತ ಮಹಿಳೆಯರ ಪ್ರಾಚೀನ, ಮಧ್ಯಕಾಲೀನ ಮತ್ತು ವರ್ತಮಾನಕಾಲದ ಪರಿಸ್ಥಿತಿಯನ್ನು ಚೆನ್ನಾಗಿ ವಿವರಿಸಿ ಮಾತಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಹಿಳೆಯರ ಸ್ಥಿತಿಗತಿಗಳು ದೇಶಕಾಲ ಪರಿಸ್ಥಿತಿಯನ್ನನುಸರಿಸಿ ಸುಧಾರಣೆ ಹೊಂದುವುದು ಅಗತ್ಯವೆಂಬುದನ್ನು ವಿವರಿಸಿದರು. ಇದಾದ ಮೇಲೆ ಸಂಘದ ಕಾರ್ಯದರ್ಶಿಯವರಿಂದ ಧನ್ಯವಾದ ಸಮರ್ಪಣೆಯಾದ ನಂತರ ಸಭೆಯು ಮುಕ್ತಾಯವಾಯಿತು. ಸಭೆಗೆ ಸ್ತ್ರೀಯರೂ ತುಂಬಾ ಬಂದಿದ್ದರು.

ಗಿಳಿಯಾರು— ಇಲ್ಲಿಯ ಶ್ರೀ ಶಾಂಭವಿ ವಿದ್ಯಾದಾಯಿನಿ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಇದೇ ಎಪ್ರಿಲ್ ತಾ. ೧೨ಕ್ಕೆ ಪ್ರಾರಂಭವಾಗಿ ಮರುದಿನ ತಾ. ೧೩ಕ್ಕೆ ಕೊನೆಗೊಳ್ಳುವುದು. ಶಾಲೆಯ ಎಲ್ಲಾ ಆಟ ಪಾಟಗಳೂ ನಡೆಯಲಿರುವವು.

ಉಚ್ಚಿಲ— ಕಳೆದ ತಾರೀಕು ೧೪ರಲ್ಲಿ ಜರಗಿದ ಉಚ್ಚಿಲ ರಥೋತ್ಸವದಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಈ ಸಮಯದಲ್ಲಿ ಕೆ. ಡಿ. ಅಣ್ಣಪ್ಪನೆಂಬವನು ಒಂದು ಮಗುವಿನ ಕಂಠದಿಂದ ಸುಮಾರು ೧॥ ಪವನು ಬೆಲೆಬಾಳುವ ಒಂದು ಸರವನ್ನು ಕಳವುಮಾಡಿ ಪಲಾಯನವಾದನು. ಸರದಿಯವನನ್ನು ಹುಡುಕಿ ವಿಚಾರಿಸಿದ್ದಲ್ಲಿ ಹಾರವು ಪತ್ತೆಯಾಗಲಿಲ್ಲ.

ರಾತ್ರಿ ಉತ್ಸವದಲ್ಲಿ ಸದರಿ ಸ್ಥಳದಲ್ಲಿ ಒಬ್ಬ ದೊಡ್ಡವನ ಕುತ್ತಿಗೆಯಿಂದ ಒಂದು ಹಾರವನ್ನು ತುಂಡುಮಾಡಿ ಎಳೆದುಕೊಂಡು ಓಡಿಹೋಗುವಾಗ ಕಳ್ಳನನ್ನು ಜನರು ಹಿಡಿದರು. ಹಾರವು ಎರಡು ತುಂಡಾಗಿ ಸಿಕ್ಕಿತು.

ಹಿಲಾರು— ಒಬ್ಬನು ರಾತ್ರಿಕಾಲದಲ್ಲಿ ಬಾಳೆ ತೋಟಕ್ಕೆ ಹೋಗಿ ಒಂದು ಬಾಳೆಗೊನೆಯನ್ನು ಕಡಿದು ಹೊತ್ತುಕೊಂಡು ಬರುವಾಗ ಅವನಿಗೆ ಏನೋ ಕಚ್ಚಿದಂತಾಯಿತು. ಆದರೆ ಅವನು ಅದನ್ನು ಲಕ್ಷ್ಯಮಾಡಲಿಲ್ಲ. ಗೊನೆಯನ್ನು ಮನೆಗೆ ತಂದು ಇಟ್ಟು ಮಲಗಿದನು. ಮಲಗಿದವನು ಮತ್ತೆ ಏಳಲೇ ಇಲ್ಲ. ಇದಕ್ಕೆ ಕಾರಣವೇನೆಂದು ವಿಚಾರಿಸುವಾಗ ಆತನು ತಂದಿಟ್ಟ ಬಾಳೆಗೊನೆಯಲ್ಲಿ ಒಂದು ಹಾವು ಕಂಡುಬಂತು. ಇಲಿಯನ್ನು ಹಿಡಿಕೊಂಡು ಹೋದ ಹಾವು ಸಾಯಂಕಾಲವಾದುದರಿಂದ ಮರದಲ್ಲಿಯೇ ಇತ್ತು.

ಕಿನ್ನಿಗೋಳಿ— ಇಲ್ಲಿಯ ಪಂಚಾಯತ ಬೋರ್ಡಿನವರು ಸಧ್ಯದಲ್ಲಿಯೇ ಮೊನ್ನೆಬೆಟ್ಟು ಮತ್ತು ಕವಾಡಿ ಗ್ರಾಮಗಳಲ್ಲಿ ಸಣ್ಣ ಸಣ್ಣ ಕೋಣೆಗಳಿಗೆ ಸೇತುವೆಗಳನ್ನು ಕಟ್ಟಿಸುವ ಏರ್ಪಾಡು ಮಾಡುವ ಆಲೋಚನೆ ಮಾಡಿದ್ದಾಗಿ ತಿಳಿದುಬರುತ್ತದೆ.



ಈ ಇಂದ್ರಜಾಲದಂತಹ ಗುಣಕಾರಿ ಔಷಧಿಯು ಎಲ್ಲರಿಗೂ ಅಗತ್ಯ

ಚರ್ಮ ವ್ಯಾಧಿಗಳಿಗೂ ಗಾಯಗಳಿಗೂ ಸಾಂಬಕನ್ನು ಪಯೋಗಿಸಿರಿ

ನಿಮಗೆ ಹಾದಿ ಪೆಟ್ಟುಗಳು ಬಿದ್ದಿದ್ದರೆ ನೀವು ವ್ಯವಹಾರದಿಂದಲೂ ಸುಡುವುದರಿಂದಲೂ ಮತ್ತು ತುರಿಕಜ್ಜಿಯಿಂದಲೂ ಪೀಡಿತರಾದರೆ, ಸಾಂಬಕ್ ಅವನ್ನು ಸರಿಯಾಗಿ ಗುಣಮಾಡುತ್ತದೆ. ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಈ ಔಷಧಿಯು ಚರ್ಮರಂಧ್ರಗಳನ್ನು ಹೊಕ್ಕು ಕೆಲಸಮಾಡುತ್ತದೆ. ಇದು ದೇಹದೊಳಗಿನ ವಿಷ ಮತ್ತು ರೋಗ ವಸ್ತುಗಳನ್ನು ಹೊರದೆಗೆದು ಚರ್ಮಕೋಶಗಳನ್ನು ಪುನಃ ಬೆಳೆಯುವಂತೆ ಗಾಯಗಳನ್ನು ಮಾಸುವಂತೆ ಮಾಡುತ್ತದೆ. ಮಡವೆ, ಕಜ್ಜಿ, ಚರ್ಮಕ್ಷತ, ಹುಣ್ಣು ಮತ್ತು ದೊಡ್ಡ ದೊಡ್ಡ ಗಾಯಗಳಿಗೆ ಸಾಂಬಕ್ ಉಪಯೋಗಿಸಲ್ಪಟ್ಟ ಔಷಧಿ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ ರೂ. 1 ಮತ್ತು ರೂ. 2—4—0ರಂತೆ ದೊರೆಯುತ್ತದೆ.

ಏಜಂಟರು —ಮೆಸರ್ಸ್ ದಾಧಾ ಎಂಡ್ ಕೊ, ಪಿ. ಟಿ. ಮದ್ರಾಸು.

ಇವರಲ್ಲದೆ ಪ್ರಾಂತಗಳ ಕೊಟ್ಟಿನ ವಿಲ್ಲ.

ಸಾಂಬಕ್

Zam Buk

ದರ್ಬಾರನ್ನು ಮುಂದುವರಿಸಲು ಕಾರಣವೇನು?

ರಾಜರೇ? ರಾಣಿಯವರೇ? ಅಥವಾ ಕೊಂಗ್ರೆಸ್ಸೋ?

ಅಮೇರಿಕನ್ ಪತ್ರಿಕೆಗಳ ಊಹಾಪೋಹೆಗಳು.

ಬರುವ ಮೇ ತಿಂಗಳಲ್ಲಿ ನಡೆಯಲಿದ್ದ ಆರನೇ ಜಾರ್ಜರ ದಿಲ್ಲಿ ದರ್ಬಾರನ್ನು ಅದೇಕೆ ಮುಂದರಿಸಿದರು? ಲಂಡನಿನಲ್ಲಿರುವ ಅಮೇರಿಕನ್ ಪತ್ರಿಕಾಪ್ರತಿನಿಧಿಗಳು ಈ ವಿಚಾರವನ್ನು ಕೂಲಂಕುಶವಾಗಿ ತಿಳಕೊಳ್ಳಲು ಪ್ರಯತ್ನಪಟ್ಟು ಕೆಲವು ಸ್ವಾರಸ್ಯವಾದ ಸಂಗತಿಗಳನ್ನು ಅವರು ಪ್ರಕಟಿಸುವರು.

ದಿಲ್ಲಿ ದರ್ಬಾರಿನ ಮುಂದುವರಿತದ ಕುರಿತು ಮೊದಲನೇ ಪ್ರಕಟಣೆಯನ್ನು ಸೆಕ್ರೆಟರಿ ಆಫ್ ಸ್ಟೇಟ್‌ರಾದ ಲಾರ್ಡ್ ಜೆಟ್‌ಲೆಂಡರು ಪ್ರಕಟಿಸಿದರು. ಅದರಲ್ಲಿ ರಾಣಿ ಎಲಿಜಬೆತ್‌ರ ಆರೋಗ್ಯ ಸಂಬಂಧ ಅದು ಮುಂದು ವರಿಸಲಾಗಿದೆ ಎಂದು ತಿಳಿಸಿತ್ತು.

ಇದರ ಮೇಲೆ ಟೀಕಿಸುತ್ತಾ ಒಂದು ಅಮೇರಿಕನ್ ಪತ್ರಿಕೆಯು ಹೀಗೆ ಬರೆಯುತ್ತದೆ. ‘ಇಂತಹ ಒಂದು ಡಜನ್ ದಿಲ್ಲಿ ದರ್ಬಾರುಗಳನ್ನು ಮಾಡಿಕೊಂಡು ಬರುವಷ್ಟು ಟೈಕ್ಕನ್ನು ವುಳ್ಳ ರಾಣಿ ಎಲಿಜಬೆತ್‌ರ ವಿಚಾರವಾಗಿ ಆದ ಇಂತಹ ಪ್ರಕಟಣೆಯನ್ನು ಪ್ರಧಾನಮಂತ್ರಿ ಬಾಲ್ಡವಿನ್ನರ ಕಡೆಯವರು ಕೂಡಾ ನಂಬಲರ್ಹವಾದ ಮಾತಲ್ಲ’. ವಿಷಯ ಹೀಗಿರುವುದರಿಂದ ಪತ್ರಿಕಾ ಪ್ರತಿನಿಧಿಗಳು ನಿಜ ಸಂಗತಿಯನ್ನು ಇಂಡಿಯಾ ಕಛೇರಿಯಲ್ಲಿ ವಿಚಾರಿಸಿದರು.

‘ದಿಲ್ಲಿ ದರ್ಬಾರಿನ ಏರ್ಪಾಟುಗಳನ್ನು ಇಲ್ಲಿ ಮಾಡಲು ಬಂದಿದ್ದ ಆರನೇ ಜಾರ್ಜರ ಪ್ರೈವೇಟ್ ಸೆಕ್ರೆಟರಿಗಳಾದ ಸರ್ ಅಲೆಕ್ಸಾಂಡರ್ ಹಾರ್ಡಿಂಜ್ ಇವರು ಏನು ಮಾಡಿದರು? ಅವರು ಈಗ ಏನು ಮಾಡುತ್ತಿರುವರು?’ ಎಂದು ಇನ್ನೊಂದು ಪತ್ರಿಕೆಯು ಪ್ರಶ್ನಿಸುತ್ತದೆ.

‘ಬಹುಶ್ಯ ಅದು ಆರನೇ ಜಾರ್ಜರ ಆರೋಗ್ಯದ ವಿಷಯವಾಗಿರಬಹುದೊ?’ ಎಂದು ಇನ್ನೊಂದು ಪತ್ರಿಕೆಯು ಕೇಳುತ್ತಿದೆ ಮುಂದುವರಿಯುತ್ತಾ ಆ ಪತ್ರಿಕೆಯು ಹೀಗೆ ಬರೆಯುತ್ತದೆ:— ಮಹಾತ್ಮಾ ಗಾಂಧಿಜಿಯವರ ಮತ್ತು ಅವರ ಅರೆಹೊಟ್ಟೆಯ ಖಿಲಿಯಾಪದಿಗಳದಾದ ಕೊಂಗ್ರೆಸ್ಸಿನ ವಿಚಾರವೇನು? ಮತ್ತು ಅದರ ನವರಾಜ್ಯಾಂಗ ರಚನೆಯ ನಿರಾಕರಣೆಯ ಸಂಗತಿಯೇನು? ಅಲ್ಲವೆ, ಕಿರೀಟಧಾರಣೋತ್ಸವ ಸಂಬಂಧಪಟ್ಟ ಸಮಾರಂಭಗಳ ಬಹಿಷ್ಕಾರ ಮಾಡಿದ ಕಾಂಗ್ರೆಸ್ಸಿನ ವಿಚಾರವಿರಬಹುದೊ?’

ಕಿರೀಟಧಾರಣೆ ಸಮಾರಂಭಕ್ಕೆ ಯಾವ ರಾಜಕೀಯ ಸಮ್ಮಂಧಾರ್ಥವೂ ಇಲ್ಲವೆಂದು ಇಂಡಿಯಾ ಆಫೀಸು ಪ್ರಕಟಿಸಿರುವುದು. ಇದರ ಅರ್ಥವೇನಿರಬಹುದು?

ಬ್ರಿಟಿಷ್ ಸರಕಾರವು ಇಂಡಿಯಾ ಆಫೀಸ್ ಮೂಲಕ ಪ್ರಕಟಿಸಿದ ಮೊದಲನೇ ಪ್ರಕಟನೆಯಲ್ಲಿ ರಾಣಿ ಎಲಿಜಬೆತ್‌ರ ಆರೋಗ್ಯ ಸಮ್ಮಂಧ ಕಾರಣಗಳನ್ನು ಕೊಟ್ಟಿದ್ದಿತು. ಕಡೆಯ ಪ್ರಕಟಣೆಯಲ್ಲಿ ‘ಅರಸರ ಆಳಿಕೆಯ ಮೊದಲನೇ ವರ್ಷದಲ್ಲಿಯೇ ಅವರು ಹೆಚ್ಚು ಸಮಯದ ತನಕ ಪರದೇಶದ ಪ್ರವಾಸವನ್ನು ಮಾಡುವುದು ಸರಿಯಲ್ಲ’ವೆಂಬ ಈ ಕಾರಣವನ್ನು ಕೊಟ್ಟಿರುತ್ತದೆ. ಬ್ರಿಟಿಷ್ ಸರಕಾರದ ಈ ವಿಷಯದ ಮುಚ್ಚಳಿಕೆಯು ಏನೆಂದು ತಿಳಿಯಲಾಗುವುದಿಲ್ಲ ಎಂದು ಒಂದು ಪತ್ರಿಕೆಯು ಬರೆಯುತ್ತದೆ.

ವಯಸ್ಸು ಹದಿಮೂರು, ಎತ್ತರ ಆರು.

ಜೀವನ ಸಮಸ್ಯೆಯ ಪರಿಹಾರವು ಕಷ್ಟಕರವಾದುದು. ಆದರೆ ಡಲ್‌ವಿಚ್‌ನ ಸಿಡ್ನಿ ವೆಲ್‌ಬ್ರೂಕ್ ಎಂಬ ಇಂಗ್ಲಿಷ್ ವಿದ್ಯಾರ್ಥಿಗೆ ಈ ಸಮಸ್ಯೆಯು ಇನ್ನೂ ಕಷ್ಟವೆನಿಸಿದೆ ಕಾರಣ ಅವನಿಗೆ ವಯಸ್ಸು ಬರೀ ಹದಿಮೂರು ಸಂವತ್ಸರಗಳಷ್ಟಿದ್ದರೂ ಅವನ ಎತ್ತರವು ೬ ಅಡಿ ೩ ಅಂಗುಲಗಳಷ್ಟಿದ್ದು, ಇನ್ನೂ ಬೆಳೆಯುತ್ತಲೇ ಇದ್ದಾನೆ. ಶಾಲೆಯಲ್ಲಿ ಅವನು ತನ್ನ ತರಗತಿಯ ಹಿಂದಿನ ಬೆಂಚಿಯಲ್ಲಿ ಕುಳಿತಿರಬೇಕು. ‘ನನಗೆ ಉದ್ದವಾಗಿರಬೇಕೆಂಬ ಆಶೆಯಿದೆ. ಆದರೂ ಇಷ್ಟು ಚಿಕ್ಕ ಪ್ರಾಯದಲ್ಲಲ್ಲ. ನನ್ನ ಉಪಾಧ್ಯಾಯರು ನನ್ನ ಹೆಗಲಿಗೂ ಕೂಡ ತಗಲಲಾರರು. ಅಂದ ಮೇಲೆ ನನ್ನ ಪ್ರಾಯದ ಹುಡುಗಿಯರೊಂದಿಗೆ ತಿರುಗಾಡುವುದೆಂದರೆ ಅಶಕ್ಯದ ಮಾತು. ನನ್ನ ಎತ್ತರದವರೊಂದಿಗೆ ತಿರುಗಾಡೋಣವೆಂದರೆ ನಾನು ಹುಡುಗನು ಅವರು ಪ್ರಾಯಹೋದವರು’’ ಹೀಗೆಂದು ಅವನು ಹೇಳುತ್ತಿರುವನು. ಪೋಲಿಸ್ ಕೆಲಸವನ್ನು ನೋಡಬೇಕೆಂಬುದೇ ಅವನ ಉದ್ದೇಶವಿರುತ್ತದಂತೆ.

ಧೀರ್ಘ ನಿದ್ರೆ

ನಿದ್ರೆಯ ಪಟ್ಟಿಗೆ ದಾಖಲೆಯನ್ನು ಮಾಡಿಟ್ಟ ಹೆಮ್ಮೆಯು ಇಟೇಲಿಗೆ ಸಲ್ಲತಕ್ಕದ್ದು. ಅಲ್ಲಿನ ವಿಯಾರೆಜಿಯೊ ಎಂಬ ಹಳ್ಳಿಯೊಂದರಲ್ಲಿರುವ ಬೆಟಿನಾ ಪಿಯರಿ ಎಂಬೋರ್ವಳಿಗೆ ನಿದ್ರಾರೋಗವು ೧೮೩೪ನೇ ಇಸವಿಯಲ್ಲುಂಟಾಯಿತು. ಆಗ ಅವಳಿಗೆ ಕೇವಲ ೧೫ ವರ್ಷಗಳ ಯೌವನ ಅಂದ. ಆರಂಭವಾದ ಅವಳ ನಿದ್ರೆಯು ಇನ್ನೂ ನಿಲ್ಲಲೆ ಇಲ್ಲ. ಕೆಲವು ಸಮಯಗಳಲ್ಲಿ ಮಾತ್ರ ಅವಳಿಗೆ ಜಾಗ್ರತೆಯಾಗಿತ್ತಂತೆ ಅದೂ ಅಲ್ಪ ಕಾಲದ ವರೆಗೆ ಅಷ್ಟೆ ಈ ೭೩ ವರ್ಷಗಳ ನಿದ್ರಾಜೀವನದಲ್ಲಿ ಆಕೆಯ ದೇಹಪ್ರಕೃತಿಯು ಸಂಪೂರ್ಣ ಬದಲಾಗಿದ್ದು, ಚರ್ಮವು ರೇಷ್ಮೆಯಂತಾಗಿರುತ್ತದೆ ಕೂದಲು ರಜತವರ್ಣದ್ದಾಗಿರುತ್ತದೆ ಮೂಢ ನಂಬಿಕೆಯ ಹಳ್ಳಿಗರು ಅವಳ ದರ್ಶನಕಾಂಕ್ಷಿಗಳಾಗಿ ಬರುತ್ತಿರುವರಂತೆ ಅವಳ ದೇಹವು ಸೊರಗಿ ಕಡ್ಡಿಯಾಗಿರುತ್ತದೆ

ಬಹಳೇ ಪುರಾತನ ಮನುಷ್ಯನ ಮಿದುಳು.

ಪ್ರೇಗ್ ನಗರದ ಬೇಂಕಿನಲ್ಲಿ ಈ ಮಿದುಳು ಭದ್ರವಾಗಿರಿಸಲ್ಪಟ್ಟಿರುವುದು ಒಂದು ನೂರು ಸಾವಿರ ವರ್ಷಗಳ ಹಿಂದೆ ಈ ಪೃಥ್ವಿಯಲ್ಲಿ ಜೀವಿಸಿದ್ದ ಮನುಷ್ಯನ ಮಿದುಳು ಇದಾಗಿರಬೇಕೆಂದು ವಿಜ್ಞಾನಿಗಳು ಊಹಿಸಿರುವರು ಜ್ಲಾರೊಸ್ಲಾರ್ ಪೆಡ್ರೂಬೆಚ್ ಎಂಬವನಿಗೆ ಇದು ಸಿಕ್ಕಿತು. ಈ ಮಿದುಳು ಸಿಕ್ಕಿರುವ ಜಾಗವು ವಿಚಿತ್ರವಾದ ರಸಾಯನಿಕ ಪದಾರ್ಥಗಳಿಂದ ಕೂಡಿದ್ದಾಗಿರುತ್ತದೆ ಒಂದು ನೂರು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಮನುಷ್ಯನೊಬ್ಬನು ಆ ಸ್ಥಳದ ನೀರು ಕುಡಿದು ಅಲ್ಲಿಯೇ ಮಡಿದನು. ಆದರೆ ನೀರಿನೊಳಗೂ ಮತ್ತು ಮಣ್ಣಿನೊಳಗೂ ಇದ್ದ ರಸಾಯನಿಕ ವಸ್ತು ಸಾರಗಳು ಅವನ ದೇಹಭಾಗಗಳನ್ನು ಕೊಳೆಯಬಿಡಲಿಲ್ಲ. ಭೂಗರ್ಭ ಶಾಸ್ತ್ರಜ್ಞರು ಈಗ ಆ ಮಿದುಳಿನ ಮೇಲೆ ಪರಿಶೋಧನೆ ನಡೆಸುತ್ತಿರುವರು.

ಮಿಸ್ ಮೇಯೋಳೂ ಬಾಲ್ಯವಿವಾಹ ಪದ್ಧತಿಗಳೂ.

ಅಮೇರಿಕಾ ಇಂಗ್ಲೆಂಡುಗಳಲ್ಲಿನ “ಬಾಲ ವಧುಗಳು”

೧೪ ವಯಸ್ಸಿನ ಬಿಳಿ ಹುಡುಗಿಯು ೬೪ ವರ್ಷದ ನಿಗ್ರೋವನ್ನು ಮದುವೆಯಾದಳು.

ಮಿಸ್ ಮೇಯೋ.

ಮಿಸ್ ಮೇಯೊಳು ಹಿಂದೂಸ್ಥಾನದ ವಿಚಾರವಾಗಿ ಬರೆದ ತನ್ನ ‘ಮದರ್ ಇಂಡಿಯಾ’ ಎಂಬ ಪ್ರಸ್ತಾಪದಲ್ಲಿ ನಮ್ಮ ದೇಶದ ಆಚಾರ ವಿಚಾರಗಳನ್ನು ತೀಕ್ಷ್ಣವಾಗಿ ಟೀಕಿಸಿರುವಳು ಮೇಯೊಳು ಅಮೇರಿಕಾಕ್ಕೆ ಸೇರಿದವಳಿರುವುದರಿಂದ ಅವಳ ಭಾರತದ ವಿಷಯಗಳನ್ನು ಮಾತ್ರವೇ ಪರ್ಯಾಲೋಚಿಸಿದಳೇ ವಿನಹ ತನ್ನ ಸ್ವಂತ ದೇಶ ವಿಚಾರಗಳು ಅವಳ ಮನಸ್ಸಿಗೆ ಹೋದಂತಾಗಲೀ ಅವಳ ಗಮನಕ್ಕೆ ಬಂದ ಹಾಗೆ ಕಾಣುವುದಿಲ್ಲ ಮಿಸ್ಸ್ ಅವಳು ಇಲ್ಲಿಯ ವಿವಾಹ ಪದ್ಧತಿಗಳನ್ನು ಬಹಳ ವ್ಯಂಗವಾಗಿ ನಿರೂಪಿಸಿದ್ದಾಳು ಭಾರತ ವಿಚಾರ ಅವಳು ವರ್ಣಿಸಿದ ಚಿತ್ರವು ಬಹಳ ಅವಮಾನಕರವಾದ ರೀತಿಯೊಂದಿದೆ ಆದರೆ ಅಮೇರಿಕದ ವೃತ್ತಪತ್ರಿಕೆಗಳಲ್ಲಿನ ಕೆಲವು ಸಾರಸ್ಯವಾದ ವರ್ತಮಾನಗಳು ಮಿಸ್ ಮೇಯೊಳ ಪಕ್ಷಪಾತ ಬುದ್ಧಿಯನ್ನು ತೋರಿಸುತ್ತದೆ

ಅಮೇರಿಕದ ನ್ಯೂ ಟೆನಸೆ ಪ್ರಾಂತ್ಯದಲ್ಲಿ ೮ ವರ್ಷದ ಹುಡುಗಿಯನ್ನು ೨೨ ವರ್ಷದ ಯುವಕನಿಗೆ ಲಗ್ನಮಾಡಿದರು, ನ್ಯೂಯೊರ್ಕಿನಲ್ಲಿ ೧೨ ವರ್ಷದ ಬಾಲಕಿಯೋರ್ವಳನ್ನು ೫೦ ವರ್ಷದ ಮುದುಕನೊಬ್ಬನು ವಿವಾಹ ಮಾಡಿಕೊಂಡಿರುತ್ತಾನೆ ಅಲ್ಲಿಯ ವೃತ್ತಪತ್ರಿಕೆಗಳನ್ನು ಈ ಸಂಗತಿಗಳನ್ನು ತಮ್ಮ ಪತ್ರಿಕೆಯ ಹಾಸ್ಯಭಾಗದಲ್ಲಿ ಸೇರಿಸಿಕೊಂಡವು. ಮಿಸ್ ಮೇಯೊಳಿಗೆ ಭಾರತದಲ್ಲಿ ಮಾತ್ರ ಬಾಲ್ಯ ವಿವಾಹದ ನಿದರ್ಶನಗಳು ಸಿಕ್ಕಿದುವು ಇರಲಿ, ಇನ್ನೊಂದು ನಿದರ್ಶನ ಅಮೇರಿಕದ ನಿಯೊರ್ಕ್ಸ ನಗರದಲ್ಲಿ ಬರೀ ೨೧ ವರ್ಷ ಪ್ರಾಯದ ಯುವತಿಯೋರ್ವಳು ನಾಲ್ಕು ಜನರನ್ನು ಮದುವೆಯಾಗಿ ನಾಲ್ವರನ್ನೂ ಬಿಟ್ಟುಬಿಟ್ಟಿದ್ದು ಈಗ ಐದನೇ ಗಂಡನನ್ನು ಹುಡುಕುತ್ತಿರುವಳಂತೆ ಮಿಸ್ ಮೇಯೊಳು ಈ ವಿಷಯಗಳನ್ನೆತ್ತಿ ಇನ್ನೊಂದು ಗ್ರಂಥವನ್ನೇಕೆ ಬರೆದು ಹಣಗಳಿಸಬಾರದಿತ್ತು ಎಂದು ಅ. ಬ. ಪತ್ರಿಕೆಯು ಕೇಳುತ್ತದೆ.

‘ಬಾಲವಧು’ಗಳ ಸಂಖ್ಯೆಯು ಇಂಗ್ಲೆಂಡಿನಲ್ಲಿಯಾದರೂ ಕಮ್ಮಿ ಇರುವುದಿಲ್ಲ ನಮ್ಮ ದೇಶದಲ್ಲಿ ಜಾರಿಗೆ ಬಂದಿಷ್ಟೆ ಶಾರದಾ ಕಾನೂನು ಇಂಗ್ಲೆಂಡಿನಲ್ಲಿರುತ್ತಿದ್ದರೆ, ಅಲ್ಲಿ ೧೯೩೫ರಲ್ಲಿ ಮದುವೆಯಾದ ೧೯ ಹುಡುಗರು ಮತ್ತು ೮೧೪ ಹುಡುಗಿಯರು ಶಿಕ್ಷೆಗೆ ಒಳಗಾಗಬೇಕಿತ್ತು ಕಾರಣ, ಮದುವೆಯಾದ ಇಷ್ಟು ಮಂದಿಗಳೂ ೧೬ ವಯಸ್ಸಿನ ಕೆಳಗಿನವರಿದ್ದರು ಕೆಲವು ಹುಡುಗಿಯರ ಗಂಡಂದಿರು ೧೬ರಿಂದ ೪೫ ವರ್ಷ ಪ್ರಾಯದವರಾಗಿದ್ದರು ೫ ದಂಪತಿಗಳು ೧೬ ವರ್ಷಗಳ ಸಮಾನ ವಯಸ್ಕರಾಗಿದ್ದರು ಮಿಸ್ ಮೇಯೊಳು ಈ ವಿಚಾರಗಳನ್ನು ತಿಳಕೊಂಡಿದ್ದರೆ ಅವಳು ‘ಮದರ್ ಇಂಡಿಯಾ’ ಪುಸ್ತಕವನ್ನು ಬರೆಯುವ ಸಾಹಸಕ್ಕೆ ಹೋಗುತ್ತಿದ್ದಿಲ್ಲವೆಂದು ಹಿಂದೂಸ್ಥಾನ ಟೈಮ್ಸ್ ಪತ್ರಿಕೆಯು ಬರೆಯುತ್ತದೆ

ಇನ್ನೊಂದು ನಿದರ್ಶನ

ಯುನೈಟೆಡ್ ಸ್ಟೇಟ್ಸಿನ ಸೀಟಲ್ ಪ್ರಾಂತ್ಯದಲ್ಲಿ ಡೆಲ್ಲಾ ಪಾಮರ್ ಎಂಬ ೧೪ ವರ್ಷದ ಬಾಲೆಯು ಜಾನ್ ಮಿನ್‌ಕೀಲ್ಡ್ ಎಂಬ ೩೮ ವಯಸ್ಸಿನೋರ್ವನನ್ನು ಮದುವೆಯಾದಳು ಇದರ ಮೇಲೆ ಇಡೀ ಅಮೇರಿಕಾದ ಮಹಿಳಾಲೋಕವು ರೇಗಿಕೊಂಡಿತು ಅದರಲ್ಲಿಯೂ ಮದುವೆಯಾದ ದಂಪತಿಗಳಲ್ಲಿ ಹುಡುಗಿಯು ಬಿಳಿಯವಳಾಗಿದ್ದು ಅವಳ ಗಂಡನು ನಿಗ್ರೋ ಜನಾಂಗಿಕನಾಗಿರುವ ಸಂಗತಿಯನ್ನು ಕೇಳಿದಾಕ್ಷಣವೇ ಇಡೀ ಅಮೇರಿಕಾವೇ ಉಗ್ರರೂಪವನ್ನು ತಾಳಿತು ಹುಡುಗಿಯ ಪ್ರಾಯವನ್ನು ತಪ್ಪಾಗಿ ಕೊಟ್ಟದಕ್ಕಾಗಿ ಪೋಲೀಸಧಿಕಾರಿಗಳು ಅವಳ ತಂದೆತಾಯಿಗಳನ್ನು ಬಂಧನದಲ್ಲಿಟ್ಟಿರು ವಿಚಾರಿಸಿದಾಗ, ಹುಡುಗಿಯ ತಾಯಿಯು ಹೀಗೆ ಹೇಳಿದಳು — ‘ಅವರೀರ್ವರೊಳಗಿನ ಪ್ರೇಮವೇ ಇದಕ್ಕೆ ಕಾರಣವಾಯಿತು ಈಗಲೂ ಅವರೊಳಗೆ ತುಂಬಾ ಪ್ರೀತಿಯಿದೆ ಅವರ ಸುಖವನ್ನು ಯಾಕೆ ಕೆಡಿಸಬೇಕು?’

ಇಂಗ್ಲೆಂಡಿನ ಡೈಲಿಮಿರರ್ ಪತ್ರಿಕೆಯು ಬಾಲ್ಯವಿವಾಹದ ವಿರೋಧ ಚಳವಳ ನಡೆಸುತ್ತಿರುವುದು ಅಮೇರಿಕಾದ ಮಹಿಳಾ ಜನಾಂಗವನ್ನು ಸ್ಫೂರ್ತಿಗೊಳಿಸಿತು ಈಗ ಅವರು ಮದುವೆ ಕಾನೂನುಗಳನ್ನು ತಿದ್ದುಪಡಿ ಮಾಡಲು ಚಳವನ್ನು ಮಾಡುತ್ತಿದ್ದಾರೆ ಟೆನಸೆ ಪ್ರಾಂತ್ಯದ ಸ್ಮೀಡ್‌ವಿಲ್ ಪಟ್ಟಣದಲ್ಲಿ ೯ ವರ್ಷದ ಯೂನಿಸ್ ವಿನ್ಸ್‌ಸ್ಟೆಡ್ ಎಂಬ ಬಾಲೆಯು ಆರಡಿ ಎತ್ತರದ, ೨೨ ವರ್ಷದ ಚಾರ್ಲ್ಸ್ ಜಾನ್ಸ್ ಎಂಬವನನ್ನು ಮದುವೆಯಾದ ವಿಷಯದಿಂದ ಅಲ್ಲಿನ ಚಳವಳಕ್ಕೆ ಇನ್ನೂ ಹುರುಪು ಉಂಟಾಗಿರುತ್ತದೆ

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for paticulars— **K. R. GURU,** *Managing Director*

Combined Booking Agency
AND
Joint Booking Office.

ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ
ಮತ್ತು
ಜೊಯಿಂಟ್ ಬುಕ್ಕಿಂಗ್ ಆಫೀಸು.

ಬಸ್ಸು ಸರ್ವೀಸುಗಳ ಮೇಲಾಟವನ್ನು ಹೋಗಲಾಡಿಸಿ,
ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಿ,
ಜನಸೇವೆಯನ್ನು ಮಾಡುವ ಉದ್ದೇಶದಿಂದ,
ನಾವೆಲ್ಲರೂ ಕೂಡಿ ಸರ್ವೀಸುಗಳ ವ್ಯವಸ್ಥೆಗಳನ್ನು ಮಾಡಿದ್ದೇವೆ.
ಪ್ರಯಾಣಿಕರಿಗೆ ಯಾವುದೊಂದು ಅನಾನುಕೂಲವು ಒದಗಿದ್ದಾದರೆ,
ಅಥವಾ
ಪ್ರಯಾಣ ಸೌಕರ್ಯದ ಉದ್ದೇಶದಿಂದ ಯಾರೊಬ್ಬರಿಗೆ ಯಾವುದೊಂದು ಸೂಚನೆ ಕೊಡಲಿದ್ದರೆ,
ಅವುಗಳನ್ನು ತಿಳಿಯಲು ನಾವು ಆತುರಪಡುತ್ತೇವೆ.

ಮೇಲಿನ ಸಂಸ್ಥೆಗಳ ಜೊಯಿಂಟ್ ಮೆನೇಜರ (Joint Manager) ರೊಡನೆ ಅಥವಾ ಕೆಳಗೆ ಹೆಸರು ಕಾಣಿಸಿದ ಯಾರೊಡನೆಯಾದರೂ ಪತ್ರವ್ಯವಹಾರವನ್ನು ನಡೆಸಬಹುದು.

The Canara Public Conveyance Co. Ltd.
The Hanuman Transport Co., Ltd.
The Shanker Vittal Motor Co., Ltd.
The Durga Parameshwari Motor Service.
The Popular Motor Service Ltd.
The P. V. Motor Service.
The Modern Motor Service of Mysore Ltd.
The Superb Motor Service.
The Mahalaxmi Motor Service.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.
Estd 1908
Church Gate Street, Fort - - BOMBAY.

SPECIAL FEATURES.

1 Rebate on yearly payment of policies.
2 Rebate for larger assurances.
3. Accident Risk covered on small extra premiums.
4 Attractive Bonuses

It pays you to represent this Company.
Wanted Agents in unrepresented parts.

Apply to:—

Messrs Kochikar Brothers,
Madras Branch Secretaries.

—1936—
OUR VALUATION YEAR

Take a BOMBAY LIFE Policy now, and share in the profits



Branches at:-	P. B. 387, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4.

ಅಸೆಂಬ್ಲಿಯಲ್ಲಿ ಫೈನಾನ್ಸ್ ಬಿಲ್ಲಿನ ಖಂಡನೆ.

ವೈಸ್ರಾಯರ ಶಿಫಾರಸು ಬರೇ ಒಂದು ಫಾರ್ಸ್

ಭುಲಾಭಾಯಿಯವರ ಉಗ್ರ ಭಾಷಣ.

ಟಪಾಲು ಕಾರ್ಡು ಮತ್ತು ಸಕ್ಕರೆಯ ಮೇಲಿನ ಕರಗಳನ್ನು ಕಮ್ಮಿಮಾಡಬೇಕೆಂದು ಅಸೆಂಬ್ಲಿ ಸದಸ್ಯರು ನಿರ್ಧರಿಸಿದ ಮೇಲೆ ಮಾನ್ಯ ವೈಸರಾಯರು ಹಾಗೆ ಮಾಡದೆ ಇರುವುದು ಒಳಿತೆಂದೂ, ಅದರಿಂದ ಖಜಾನೆಗೆ ತುಂಬಾ ನಷ್ಟವುಂಟಾಗುವುದೆಂತಲೂ, ಹೇಳಿ ಶಿಫಾರಸು ಮಾಡಿ ಕಳುಹಿಸಿದ ಫೈನಾನ್ಸ್ ಬಿಲ್ಲನ್ನು ಹಣಕಾಸಿನ ಸಚಿವರಾದ ಸರ್ ಜೇಮ್ಸ್ ಗ್ರಿಗ್ಗ್‌ರವರು, ತಾ ೨೦ ರಲ್ಲಿ ಸೇರಿದ ಅಸೆಂಬ್ಲಿ ಅಧಿವೇಶನದ ಮುಂದೆ ತಂದರು.

ಬಿರುಗಾಳಿಯ ಪ್ರಚಂಡತೆಯಿಂದ ಉಕ್ಕೇರಿ ಅಪ್ಪಳಿಸುವ ಮಹಾ ಸಾಗರದಂತೆ ಇಡೀ ಅಸೆಂಬ್ಲಿಯೇ ಗ್ರಿಗ್ಗರ ಎದುರು ನಿಂತಿತು. ವೈಸ್ರಾಯರ ಶಿಫಾರಸನ್ನು ಪುಷ್ಟೀಕರಿಸಿ ಹೆಚ್ಚು ಮಾತನ್ನಾಡಲೂ ಅವರಿಗೆ ಯೋಗ್ಯ ಕಾರಣಗಳೇ ಸಿಗದಂತಾಯಿತು. ಮುಂದಿನ ಸ್ಥಾನಗಳಲ್ಲಿ ಕುಳಿತಿದ್ದ ಎದುರುಪಕ್ಷದ ಮುಖಂಡರು ಒಬ್ಬರ ನಂತರೊಬ್ಬರಂತೆ, ಬಿರುಸಾಗಿ ಅದನ್ನು ಖಂಡಿಸಿದರು. ಭುಲಾಭಾಯಿದೇಸಾಯಿಯವರಂತೂ ನಾರಸಿಂಹ ರೂಪವನ್ನೆ ತಳೆದಂತಿದ್ದು ಆ ಬಿಲ್ಲನ್ನು ಖಂಡಿಸಿ "ನಾಗರಿಕತೆಯ ನವ ನಿರಂಕುಶ ದಬ್ಬಾಳಿಕೆ" ಎಂದರು.

"ರಾಜೀನಾಮೆ ಕೊಡಿ" "ಮನೆಗೆ ಹೋಗಿ" "ನೀವು ನಿಮ್ಮ ಜೀವಮಾನದಲ್ಲಿ ಒಂದೆ ಒಂದು ಫೈನಾನ್ಸ್ ಬಿಲ್ಲನ್ನು ಅನುಮೋದಿಸಿಕೊಂಡದ್ದುಂಟೆ?" ಇವೇ ಮೊದಲಾದ ಕೂಗುಗಳು ಅಸೆಂಬ್ಲಿಯ ನಾನಾ ಕಡೆಗಳಿಂದ ಕೇಳಬಂದುವು. ವಿಭಾಗಿಸಲಾಗಿ ೨೭ ವೋಟುಗಳಿಂದ ವೈಸ್‌ರಾಯರ ಶಿಫಾರಸು ಬಿದ್ದುಹೋಯಿತು. ಚುನಾಯಿತರಾದ ಭಾರತೀಯ ಸದಸ್ಯರಾರೂ ಅವರ ಪರವಾಗಿ ವೋಟುಮಾಡಲಿಲ್ಲ. ಮಿ। ರೆಮ್ಸಿಸ್ಕಾಟ್ ಎಂಬ ಯುರೋಪಿಯನ್ ಸದಸ್ಯರು ಕೂಡಾ ವಿರೋಧಿಗಳಾಗಿದ್ದರು.

ವೈಸ್ರಾಯರ ಶಿಫಾರಸನ್ನು ಖಂಡಿಸುವುದರಲ್ಲಿ ಪ್ರತಿಯೊಬ್ಬ ಭಾಷಣಗಾರರೂ ಭಾಗವಹಿಸಿದರು. "ಫಾಯಿಗೊಂಡವರಿಗೆ ಅಪಮಾನ ಮಾಡಿದಂತಿದೆ" ಎಂದು ಭುಲಾಭಾಯಿಯವರು ಹೇಳಿದರು.

ಸರ್ ಜೇಮ್ಸ್ ಗ್ರಿಗ್‌ರಿಗೆ ಮಾತನಾಡಲು ಬಾಯಿ ಬರಲಿಲ್ಲ. "ತಮ್ಮ ಹೇಳಿದ್ದು, ತೃಪ್ತಿಯಾಗಿ ಸರಿಯಾ ಗುತ್ತೆ" ಎಂಬರ್ಥದ ಗಾಥೆಯನ್ನು ಹೇಳಿ ಮುಗಿಸಿಬಿಟ್ಟರು. ಎದುರುಪಕ್ಷದ ಮುಖಂಡರಾದ ಶ್ರೀ ಭುಲಾಭಾಯಿ ದೇಸಾಯಿಯವರು ಹೃದಯದ್ರಾವಕವೂ ಮರ್ಮಭೇದಕವೂ ಮತ್ತು ಚರಿತ್ರಾರ್ಹವೂ ಆದ ಒಂದು ಅತ್ಯುಗ್ರ ಭಾಷಣವನ್ನು ಮಾಡಿದರು.

ಅಸೆಂಬ್ಲಿಯು ಕಣ್ಣು ಕಟ್ಟು ಮತ್ತು ತಾರ್ಸಿನ ಒಂದು ಮನೆಯೆಂದು ಟೀಕಿಸಿ ದೇಸಾಯಿಯವರು "ಹಣದ ಈ ದುರ್ವ್ಯಯವು ಏಕೆ? ನನ್ನ ಬಡ ದೇಶವು ಈ ನೀಚ ತಮಾಷೆಯ ಭೋಗಾಸಕ್ತತೆಗೆ ಹೇಳಿದುದಲ್ಲ. ಈ ವಂಚನೆಯನ್ನು ಅನುಮೋದಿಸುವುದಕ್ಕಿಂತಲೂ ಈ ಅಸೆಂಬ್ಲಿಯನ್ನು ಮುಚ್ಚಿಬಿಡುವುದು ಒಳ್ಳೇದು" ಎಂದು ಗರ್ಜಿಸಿದರು.

ಆಗಲೇ ಉಪವಾಸದಿಂದ ನರಳುತ್ತಿರುವ ಜನತೆಯಿಂದಲೇ ಹಣವನ್ನು ಹೀರಲು ಪ್ರಯತ್ನಪಡುವ ಅಧಿಕಾರಿಗಳ ವರ್ತನೆಯನ್ನು ಖಂಡಿಸಿ, "ಅಸೆಂಬ್ಲಿ ಸದಸ್ಯರ ಹೇಳಿಕೆಗೆ ಅವರು ಗಮನಕೊಡದೆ ಕ್ರೂರ ಮನೋಭಾವದಿಂದ ಕಾಡಿರೆಂದು ಟೀಕಿಸಿದರು. "ಒಂದೋ ನೀವು ನಿಜವಾದ ಸೇವೆಯನ್ನು ಮಾಡಬೇಕು, ಅಥವಾ ಈ ತಮಾಷೆಯು ಅಂತ್ಯವಾಗಬೇಕು" ಎಂದರು.

ಯಾವಾಗಲೂ ಸರಕಾರದ ಕಡೆಯನ್ನು ಬೆಂಬಲಿಸುವ ಸರ್ ಆ ಜಹಾಂಗೀರರೂ ಕೂಡಾ ವೈಸ್‌ರಾಯರ ವರ್ತನೆಯ ಕುರಿತು ಖೇದಪಟ್ಟರು.

ವೈಸ್‌ರಾಯರ ವರ್ತನೆಯೂ ಅವರ ಹಿಂದೆ ಕೊಟ್ಟ ಭಾಷಣದಲ್ಲಿ ನಿರೂಪಿಸಿದ ಭರವಸೆಗೆ ತಕ್ಕುದಾಗಿಲ್ಲವೆಂದು ಹೆಚ್ಚಿನ ಮೆಂಬರರು ಅಭಿಪ್ರಾಯಪಟ್ಟರು. ಸಕ್ಕರೆ ಮತ್ತು ಟಪ್ಪಾಲು ಕಾರ್ಡಿನ ಮೇಲಿನ ಕಡಿತದಿಂದಾಗುವ ೧೩೫ ಲಕ್ಷರೂಪಾಯಿಗಳ ಇಳಿತದಿಂದ ಹೆಚ್ಚು ನಷ್ಟವಾಗಲಾರದೆಂದೂ, ಆತಂಕದ ಖರ್ಚು ಕಡಿಮೆಮಾಡಿದರೆ ಇದು ಸರಿಹೋಗುವುದೆಂದೂ ಹೆಚ್ಚಿನವರು ಸೂಚಿಸಿದರು.

ಆಶ್ರಮಗಳು ಹಿಂದೆ ಕೊಡಲಾದವು.

ಕಳೆದ ಅಸಹಕಾರ ಚಳವಳದ ಸಮಯ, ನ್ಯಾಯಪರ ಸಂಸ್ಥೆಗಳಲ್ಲವೆಂಬುದಾಗಿ ಮುಂಬಾಯಿ ಪ್ರಾಂತ್ಯದ ಸೂರತ್ ಜಿಲ್ಲೆಯಲ್ಲಿ ಆರು ಆಶ್ರಮಗಳು ಸರಕಾರದವರಿಂದ ವಶಮಾಡಲ್ಪಟ್ಟಿದ್ದವು. ಅವುಗಳನ್ನೀಗ ಹಿಂದೆ ಕೊಡಬೇಕಾಗಿ ಮುಂಬಾಯಿ ಸರಕಾರದವರು ಸೂರತ್ ಜಿಲ್ಲಾ ಕಲೆಕ್ಟರರಿಗೆ ಅಜ್ಞಾಪಿಸಿರುವರು. ಕಾಂಗ್ರೆಸ್ಸಿನೊಡನೆ ಮೈತ್ರಿ ಬೆಳೆಸುವ ವಿಚಾರದಲ್ಲಿ ಇದೊಂದು ಪ್ರಥಮ ಸೂಚನೆಯಾಗಿರುತ್ತದೆ.

ಪ್ರಾಂತ್ಯಗಳಲ್ಲಿ ಮಂತ್ರಿಮಂಡಳ ರಚನೆ

ಮದ್ರಾಸು ಗವರ್ನರರು, ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರೊಡನೆ ಮದ್ರಾಸು ಸರಕಾರದ ಮಂತ್ರಿಮಂಡಳವನ್ನು ರಚಿಸುವರೆ ಆಹ್ವಾನಮಾಡಿರುವರು.

ಸಂಯುಕ್ತ ಪ್ರಾಂತ್ಯದಲ್ಲಿ ಮಂತ್ರಿಮಂಡಳವನ್ನು ರಚಿಸಲು, ಅಲ್ಲಿನ ಗವರ್ನರರು ಕಾಂಗ್ರೆಸ್ ಪಾರ್ಟಿಯ ನಾಯಕರಾದ ಶ್ರೀ। ಗೋವಿಂದ ವಲ್ಲಭ ಪಂತರೊಡನೆ ಕೇಳಿಕೊಂಡಿರುವರು.

ಮುಂಬಾಯಿ ಪ್ರಾಂತ್ಯದಲ್ಲಿ ಗವರ್ನರರು ಮಂತ್ರಿಮಂಡಲದ ರಚನೆಯ ಕುರಿತಾಗಿ ಕಾಂಗ್ರೆಸ್ ಪಾರ್ಟಿಯ ಮುಖಂಡರಾದ ಶ್ರೀ। ಬಿ. ಜಿ. ಖೇರ್‌ರವರನ್ನು ಕಂಡು ಮಾತನಾಡಲಿರುವರು. ಅಂತೆಯೇ, ಬಿಹಾರದಲ್ಲಿ ಕಾಂ। ನಾಯಕರಾದ ಶ್ರೀ। ಕೃಷ್ಣಾ ಸಿನ್ಹರಿಗೆ ಮಂತ್ರಿಮಂಡಲವನ್ನು ರಚಿಸುವರೆ ಗವರ್ನರರ ಆಮಂತ್ರಣ ಹೋಗಿರುವುದಾಗಿ ತಿಳಿದುಬಂದಿದೆ. ಹೀಗೆ ಕಾಂಗ್ರೆಸ್ಸು ಅಧಿಕಸ್ಥಾನಗಳನ್ನು ಪಡೆದ ಆರು ಪ್ರಾಂತ್ಯಗಳಲ್ಲಿ ಸರಕಾರ ರಚನೆಯನ್ನು ಮಾಡುವುದು. ಕಾಂಗ್ರೆಸ್ಸು ಮಂತ್ರಿಮಂಡಳ (ಕೆಬಿನೆಟ್) ವನ್ನು ರಚಿಸುವ ಪ್ರಾಂತ್ಯಗಳಲ್ಲಿ ಈ ಕೆಳಗಿನಂತೆ ಮಂತ್ರಿವರ್ಯರನ್ನು ಆರಿಸುವರು. ಸಂಯುಕ್ತ ಪ್ರಾಂತ್ಯಗಳಲ್ಲಿ ೬, ಬಿಹಾರ ೪, ಮಧ್ಯಪ್ರಾಂತ್ಯಗಳು ೪, ಮುಂಬಾಯಿ ೬, ಮದ್ರಾಸ್ ೭ ಯಾ ೮, ಒರಿಸ್ಸಾ ೩, ವಾಯುವ್ಯ ಗಡಿಪ್ರಾಂತ್ಯ ೨ ಯಾ ೩.

ಗಡಿನಾಡಿನಲ್ಲಿ ಗಲಭೆ

ಗಡಿನಾಡು ಪ್ರಾಂತ್ಯದ ವಾಯುವ್ಯ ಸರಹದ್ದಿನ ಬೆಟ್ಟ ನಿವಾಸಿಗಳ ಪಂಗಡಗಳು, ಅಲ್ಲಿನ ನಗರಗಳಲ್ಲಿ ಹೆಚ್ಚು ದರೋಡೆಗಳನ್ನು ನಡೆಸುತ್ತಿರುವ ವಿಷಯವು ಸರಕಾರಿ ಸೈನ್ಯ ಖಾತೆಯವರಿಗೆ ತಿಳಿಯಲಾಗಿ ಅವರು ರಕ್ಷಣೆ ಏರ್ಪಾಡು ಮಾಡುತ್ತಿರುವಾಗ ಅಲ್ಲಿಂದಗಳೊಳಗೆ ಭಾರೀ ಕದನವಾಗಿದೆ. ಈ ಬೆಟ್ಟ ನಿವಾಸಿಗಳಲ್ಲಿ ನಿರ್ಮೂಲಿಸಲು ಇಂಡಿಯಾ ಸರಕಾರವು ಸೈನ್ಯಖಾತೆಗೆ ಅಪ್ಪಣೆಕೊಟ್ಟಿರುತ್ತದೆಂದು ಒಂದು ಅಸಾಧಾರದ ವಾರ್ತೆ.

ಶಾಲೆಯಲ್ಲಿ ಭಯಂಕರ ಸ್ಫೋಟನ.

ಸಂಯುಕ್ತ ಅಮೇರಿಕಾದ ಟೆಕ್ಸಾಸ್ ಪ್ರಾಂತ್ಯದ ಟೈಲರ್ ಎಂಬಲ್ಲಿ, ಶಾಲೆಯೊಂದರ ಕಟ್ಟಡದಲ್ಲುಂಟಾದ ಭಯಂಕರ ಸ್ಫೋಟನೆದಿಂದಾಗಿ ಐನೂರಕ್ಕೂ ಮಿಕ್ಕಿದ ಮರಣಗಳುಂಟಾಗಿವೆ. ಸ್ಫೋಟನವಾಗುವ ಸಮಯ ಆ ಶಾಲೆಯಲ್ಲಿ ೭೫೦ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಇದ್ದುದರಿಂದ ಬರೇ ೧೦೦ ಮಂದಿಗಳು ಮಾತ್ರ ಜೀವಿತರಿರುವರಂತೆ. ಆ ಶಾಲೆಯಲ್ಲಿ ೧೫೦೦ ವಿದ್ಯಾರ್ಥಿಗಳಿದ್ದರೆಂದೂ, ಮುಕ್ಕಾಲು ಮಡಿಯುತ್ತಿದ್ದಾರೆಂದೂ, ಡಾಕ್ಟರರೂ ನರ್ಸುಗಳೂ ಸುತ್ತುಮುತ್ತಲಿನಿಂದ ಧಾವಿಸಿಬಂದರೆಂದೂ ಇನ್ನೊಂದು ವಾರ್ತೆ. ಆ ಶಾಲೆಯ ಕಟ್ಟಡದಲ್ಲಿ ಎರಡು ವಿಭಾಗಗಳು ಇದ್ದುವಂತೆ. ಅದರಲ್ಲಿ ಒಂದು ಬಾಗವು ಮಾತ್ರ ಸಂಪೂರ್ಣ ಧ್ವಂಸವಾಗಿರುತ್ತದೆ. ಈ ವಿಭಾಗದಲ್ಲಿ ೭೦೦ ಮಂದಿ ವಿದ್ಯಾರ್ಥಿಗಳ ಕ್ಲಾಸುಗಳು ಆಗ ನಡೆಯುತ್ತಿದ್ದುವಂತೆ. ಶಾಲೆಯ "ಬೊಯ್ಲರ್" ಕೋಣೆಯಲ್ಲಿ ಗೇಸ್ ತುಂಬಿದುದೇ ಸ್ಫೋಟನಕ್ಕೆ ಕಾರಣವಂತೆ. ಈ ಶಾಲಾ ವಿದ್ಯಾರ್ಥಿಗಳೆಲ್ಲಾ ಅಲ್ಲೇ ಹತ್ತಿರದಲ್ಲಿರುವ ಟೆಕ್ಸಾಸು ಆಯಿಲ್ ಸಂಸ್ಥೆಯ ನೌಕರರ ಮಕ್ಕಳಂತೆ.

ಚುನಾವಣೆಗಳ ಪ್ರತಿಧ್ವನಿ

ಡಿಪ್ಯೂಟಿ ತಹಶಿಲ್‌ದಾರರಿಗೆ ಶಿಕ್ಷೆ!

ಮೂರು ಸರಕಾರಿ ಅಧಿಕಾರಿಗಳಿಗೆ ಡಿಸ್‌ಮಿಸ್ ಆಯಿತು.

ಸುಳ್ಳು ಸರ್ಟಿಫಿಕೇಟುಗಳನ್ನು ಕೊಡಿದ ತಪ್ಪಿಗಾಗಿ, ಚುನಾವಣೆ ಕೆಲಸದಲ್ಲಿದ್ದ ಮುಸ್ಲಿಮರೂಮಿನ ಡಿಪ್ಯೂಟಿ ತಹಶಿಲ್ದಾರರಾದ ಮಿ। ಜಹಿರುದ್ದೀನ್ ಸಾಹೇಬರನ್ನೂ, ಶ್ರೀ। ನಾರಾಯಣ ಮೂರ್ತಿ ಎಂಬ ರೆವಿನ್ಯೂ ಇನ್ಸಪೆಕ್ಟರರನ್ನೂ ಕೆಲಸದಿಂದ ರದ್ದುಮಾಡಿರುತ್ತಾರೆ. ಮೇಲಿನವರು ರಿಟರ್ನಿಂಗ್ ಅಧಿಕಾರಿಗಳು ಬೆಜ್ವಾಡದಲ್ಲಿ ಒಟು ಕ್ಷನ್ ಅರ್ಜಿಗಳನ್ನು ವಿಚಾರಿಸುತ್ತಿರುವಾಗ, ಕೆಲವು ಅರ್ಜಿದಾರರಿಗೆ ಸುಳ್ಳು ಸರ್ಟಿಫಿಕೇಟುಗಳನ್ನು ಕೊಟ್ಟಿರುವ ಅಪಾದನೆಗೆ ಒಳಗಾಗಿದ್ದರು. ಅವರ ವಿಚಾರಣೆಯಲ್ಲಿ ಅನೇಕ ಸಾಕ್ಷಿಗಳ ಪರೀಕ್ಷೆಯು ನಡೆದಿತ್ತು.

ಆಫ್ರಿಕಾದಲ್ಲಿ ಏಷ್ಯಾ ನಿವಾಸಿಗಳು.

ಒಂದಲ್ಲ ಒಂದು ಕಾರಣವನ್ನು ಮುಂದಿಕ್ಕುತ್ತ ಏಷ್ಯಾದೇಶದ ಜನರನ್ನು ಆಫ್ರಿಕಾದಿಂದ ಹೊರಗಿಟ್ಟು ತಮ್ಮದೇ ಕೈಮೇಲಾಗುವಂತೆ ಆಫ್ರಿಕಾದ ಯೂನಿಯನ್ ರಾಜ್ಯಗಳಲ್ಲಿ ಬಿಳೇ ಜನರು ಕಾರ್ಯಸಾಧಿಸುತ್ತಿದ್ದಾರೆ. ಏಷ್ಯಾ ಖಂಡದವರಿಗೆ ವಿರೋಧವೆನಿಸುವ ಅನೇಕ ಕಾನೂನುಗಳು ಅಲ್ಲಿ ಸದ್ಯದಲ್ಲೇ ಮಂಜೂರಾಗುವವಂತೆ. ಅವುಗಳನ್ನು ಪ್ರತಿಕೂಲಿಸಲು, ಆಫ್ರಿಕಾದಲ್ಲಿ ಭಾರತೀಯ ಇತ್ಯಾದಿ ಏಷ್ಯಾ ನಿವಾಸಿಗಳ ಹಿತರಕ್ಷಣೆಗಾಗಿ ಒಂದು ಪ್ರಾತಿನಿಧ್ಯ ಮಂಡಳವು ಅಲ್ಲಿನ ಯೂನಿಯನ್ ಸರಕಾರಕ್ಕೊಂದು ಭಿನ್ನಪವನ್ನು ಮಾಡಿರುತ್ತದೆ. ಭಾರತೀಯರು ಬರೇ ಕೆಲಸಕ್ಕಲ್ಲದೆ, ಅವರಿಗೆ ತಮ್ಮೊಡನೆ ಸರಿಸಮಾನವಾದ ಸ್ಥಾನಮಾನಗಳನ್ನು ಕೊಡಲು ಆಫ್ರಿಕಾದ ಜನರಿಗೆ ಇಷ್ಟವಿಲ್ಲ.

ಇಂಗ್ಲಾಂಡಿನಲ್ಲಿ ಹಿಂದೂದೇಶ

ಹಿಂದೂದೇಶದಲ್ಲಿ ಇತ್ತೀಚೆಗೆ ಅನೇಕ ಪ್ರಾಮುಖ್ಯ ರಾಜಕೀಯ ಘಟನೆಗಳು ನಡೆದುಬಿಟ್ಟವು. ಚುನಾವಣೆ ಕ್ಷೇತ್ರದಲ್ಲಿ ಕಾಂಗ್ರೆಸ್ಸು ಮಹಾ ಜಯಹೊಂದಿತು. ಕಾಂಗ್ರೆಸ್ಸು ಸಂಸ್ಥೆಯು ಭಾರತೀಯರ ಒಂದು ಮಹಾ ಸಂಸ್ಥೆಯು. ಅದರೆ ಭಾರತೀಯ ಕಾಂಗ್ರೆಸ್ಸಿನ ಕುರಿತು ಭಾರತೀಯರ ಕುರಿತು ಸರಿಯಾದ ವಾರ್ತೆಯನ್ನು ಹರಡಿಸುವುದು ಆಂಗ್ಲೇಯ ಪತ್ರಿಕೆಗಳಿಗೆ ಒಪ್ಪದು. ಇವತ್ತಿಗೆ ಬಹಳ ಸಮಯದಿಂದ ಪ್ರಚಾರಕಾರ್ಯವನ್ನು ನಡೆಯಿಸಿ, ಹಿಂದೂದೇಶದ ಕುರಿತು ಇಂಗ್ಲಾಂಡಿನಲ್ಲೆಲ್ಲಾ ಹೀನ ಅಭಿಪ್ರಾಯವನ್ನು ಉಂಟುಮಾಡಿರುತ್ತದೆ. ಈ ಪತ್ರಿಕೆಗಳಿಗೆ ಹಿಂದೂದೇಶದಿಂದ ನಿವೃತ್ತರಾಗಿ ಹೋದ ಜನರ ಸಹಾಯವು ದೊರೆಕುತ್ತದೆ. ಕಾಂಗ್ರೆಸ್ಸೆಂದರೆ ಅದೊಂದು ಅಲ್ಪ ಸಂಸ್ಥೆಯೆಂಬ ಅಭಿಪ್ರಾಯವು ಆಂಗ್ಲೇಯ ಪತ್ರಿಕೆಗಳಿಂದ ಈ ವರೆಗೂ ಕೊಡಲಾಗಿತ್ತು.

ಈಗ ಕಾಂಗ್ರೆಸ್ಸಿಗೆ ದೊರೆತ ಜಯವಾಗಿರಲು, ಈ ಅಲ್ಪಸಂಸ್ಥೆಯು ಒಬ್ಬತ್ತರದೆಂದು ಹೇಳುವ ದಿವಸವು ಮೂಡಿರುತ್ತದೆ.

ಸ್ಪೆಯಿನಿನ ಸರಕಾರದ ವಿಜಯ.

ಕಳೆದ ವಾರ ಕೆಲವು ಸೋಲುಗಳನ್ನು ಅನುಭವಿಸಿದ ಸ್ಪೆಯಿನ್ ಸರಕಾರವು ಈ ವಾರ ಅನೇಕ ಕಡೆಗಳಲ್ಲಿ ಮಹಾಜಯಗಳನ್ನು ಹೊಂದಿರುತ್ತದೆ. ದಂಗೆಕೋರರ ಅನೇಕ ಸೇನಾಪತಿಗಳು ಸೆರೆಹಿಡಿಯಲ್ಪಟ್ಟಿವೆ. ದಂಗೆಕೋರರ ಕಡೆಯಲ್ಲಿ ೭೦ ಸಾವಿರ ಆಫ್ರಿಕಾದ ಸೈನಿಕರೂ, ೨೫ ಸಾವಿರ ಜರ್ಮನ್ ಸೈನಿಕರೂ ೭೨ ಸಾವಿರ ಇಟೇಲಿಯಾದ ಸೈನಿಕರೂ ಮತ್ತು ೧೨ ಸಾವಿರ ಐರಿಸ್ ಇತ್ಯಾದಿ ಇತರ ಸೈನಿಕರಿರುವರೆಂದು ತಿಳಿದುಬರುತ್ತದೆ. ಒಂದೆಡೆಯಲ್ಲಿ ದಂಗೆಕೋರರಿಗೆ ಸಂಪೂರ್ಣ ದೊರೆಕುತ್ತದೆ. ಈಗಿನ ಶೀತವಾಯು ಹವಾಗುಣದಿಂದ ಯುದ್ಧಕಾರ್ಯವು ಸ್ವಲ್ಪ ಕಷ್ಟವಾಗಿದ್ದರೂ ಇಕ್ಕಡೆಯವರೂ ಬಹಳ ಸಾಹಸದಿಂದ ರಣರಂಗದಲ್ಲಿ ಕಾದಾಡುತ್ತಿದ್ದಾರೆ. ಮೆಕಸಿಕೋನಿಯು ಸ್ಪೆಯಿನಿನ ಕಾದಾಡುವ ತನ್ನ ಜನರಿಗೆ ಅವರ ಜಯವನ್ನು ಕೋರಿ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿರುವನೆಂದು ಒಂದು ವಾರ್ತೆ. ಇಟೇಲಿ, ಜರ್ಮನಿ ಇತ್ಯಾದಿ ಜನಾಂಗಗಳು ಸ್ಪೆಯಿನಿನ ದಂಗೆಯ ಕುರಿತು, ತಟಸ್ಥಭಾವ ಸಮಿತಿ ಸದಸ್ಯರಾಗಿದ್ದು, ತಟಸ್ಥಭಾವ ಯೋಗ್ಯವಾದ ರೀತಿಯಲ್ಲಿ ನಡೆಯುವಂತೆ ಒಂದೆಡೆಯಲ್ಲಿ ಸಾಧಿಸುತ್ತಿದ್ದರೂ ಈ ಜನಾಂಗಗಳು ವಂಚನೆ ನಡೆಸಿದ ಅನೇಕ ದೃಷ್ಟಾಂತಗಳನ್ನು ಕಂಡುಹಿಡಿದಿರುವರು.

ಐರೋಪ್ಯದಲ್ಲಿ ಯುದ್ಧವೇ?

ಐರೋಪ್ಯದಲ್ಲಿ ಬೇಗನೆ ಒಂದು ಮಹಾಯುದ್ಧವು ಉಂಟಾಗುವುದೆಂದು ಪತ್ರಿಕೆಗೆ ಬಹಳ ಸಮಯದಿಂದ ವಾರ್ತೆಗಳು ಹೊರಡುತ್ತಲ್ಲದೆ, ಯುದ್ಧವು ಇನ್ನೂ ಪ್ರಾರಂಭವಾಗುವ ಹಾಗಿಲ್ಲ. ಜರ್ಮನಿಯು ಯುದ್ಧಕ್ಕೆ ಇಳಿಯುವುದು, ಸ್ಪೆಯಿನಿನ ದಂಗೆಕೋರನಾದ ಜನರಲ್ ಫ್ರೆಂಕೊವಿನ ಜಯದ ಮೇಲೆ ಹೊಂದಿಕೊಂಡಿದೆ. ಇಟೇಲಿಯೂ ಕೂಡ ಹಾಗೆನೆ. ಫ್ರಾನ್ಸು, ರಷ್ಯಾ, ಇತ್ಯಾದಿ ಮಿತ್ರ ರಾಷ್ಟ್ರಗಳು ಭಾರಿ ಯುದ್ಧಸಿದ್ಧತೆಗಳನ್ನು ಮಾಡಿ ಯುದ್ಧಸನ್ನಾಹಿತರಾಗಿಯೆ ಇರುವರು. ಈ ಮಧ್ಯೆ ಜಪಾನ್ ಜರ್ಮನ್ ಕರಾರಿನಿಂದ ಪೌರ್ವಾತ್ಯದಲ್ಲಿ ಬೇಗನೆ ರಷ್ಯಾ ಜಪಾನ್ ಯುದ್ಧ ಪ್ರಾರಂಭವಾದರೆ, ಈ ಯುದ್ಧಾಗ್ನಿಯು ಐರೋಪ್ಯದಲ್ಲೂ ಹರಡಲೂಬಹುದು.

ಈ ಮಧ್ಯೆ ಜರ್ಮನಿಯು ಮಿತ್ರ ರಾಷ್ಟ್ರಗಳೊಡನೆ ಕೆಲವೊಂದು ಶರ್ತಗಳನ್ನು ಹಿಡಿದು, ಯುದ್ಧವಾಗದಂತೆ ಕೆಲವು ಮಾತುಕತೆಗಳನ್ನು ನಡೆಯಿಸುತ್ತಿದೆ.

ಬ್ರಿಟನೂ ಮಹಾಯುದ್ಧ ಸಿದ್ಧತೆಗಳನ್ನು ಮಾಡಲು ಮಹಾ ಸಾಲಗಳನ್ನು ಪಡೆಕೊಂಡಿದೆ.

ಗವರ್ನರರ ಅಧಿಕಾರಗಳು

"ಮೆಂಚೆಸ್ಟರ್ ಗಾರ್ಡಿಯನ್" ಎಂಬ ಆಂಗ್ಲೇಯ ಪತ್ರಿಕೆಯಲ್ಲಿ ಈ ಕೆಳಗಿನ ಟೀಕೆಯೊಂದಿದೆ.

ಕಾಂಗ್ರೆಸ್ ಮಂತ್ರಿಮಂಡಳದ ಕಾರ್ಯಕ್ರಮವು ಸರಿಯಾಗಿ ನಡೆಯುವುದರ ಮೇಲೆ ಹೆಚ್ಚಿನದು ಹೊಂದಿಕೊಂಡಿದೆ. ಅದು ಸಿವಿಲ್ ನೌಕರರ ಸಂಬಳವನ್ನು ಕಡಿಮೆಮಾಡುವರೆ ಯತ್ನಿಸಿದರೆ, ಆಗ ಗವರ್ನರರೊಡನೆ ತಿಕ್ಕಾಟ ಉಂಟಾಗಬಹುದು. ಶ್ರೀ ನೆಹರೂರವರ ಸಾಮ್ಯವಾದದಿಂದ ಪ್ರಾಂತ್ಯಗಳ ಶಾಂತಿರಕ್ಷಣೆಗಾಗಿ ಗವರ್ನರರು ತಮ್ಮ ಅಧಿಕಾರವನ್ನು ಉಪಯೋಗಿಸಬಹುದು. ಆದರೆ ಕಾಂಗ್ರೆಸ ಯುಕ್ತಿಯುತ್ತರವಾದ ಸುಧಾರಣೆಗಳಿಗಾಗಿ ಪ್ರಾತಿನಿಧ್ಯ ಸೂತ್ರವನ್ನು ಪಡೆಯಬಲ್ಲ ಜನಾಂಗದ ಪ್ರಾರಂಭದ ಕಾರ್ಯಕ್ರಮವು ಕಾಂಗ್ರೆಸ್ಸಿನ ಯುಕ್ತಿಯಿಂದ ಕಾರ್ಯ ನಡೆಯುವುದಾದರೆ ಅದಕ್ಕೆ ಸುಧಾರಣೆಗಳನ್ನು ನಡೆಸುವರೆ ಉತ್ಸಾಹವಿದ್ದರೆ ಅದಕ್ಕೆ ಕಾನೂನು ಯೋಗ್ಯತೆಯಿದ್ದರೆ ಅದಕ್ಕೆ ಯಾರೂ ಅಡ್ಡಿಮಾಡಲಾರರು. ಹಾಗೆ ಅಡ್ಡಿಗಳನ್ನು ಮಾಡುವುದರಿಂದ ಏನೂ ಸಾರ್ಥಕವಾಗುವ ಹಾಗಿಲ್ಲ.

ಆಸ್ಟ್ರಿಯಾ-ಜರ್ಮನ್ ಸಂಬಂಧ

ಕೆಲ ಸಮಯದ ಹಿಂದೆ ನಡೆದ ಆಸ್ಟ್ರಿಯಾ-ಜರ್ಮನ್ ಒಪ್ಪಂದವು ಈಗ ಕಳಚಿಹೋಗುವಂತೆ ಕಾಣುತ್ತದೆ. ಕೆಲ ದಿವಸಗಳ ಹಿಂದೆ ಆಸ್ಟ್ರಿಯಾದ ಹೊಸ ಚಾನ್ಸಲರ್, ಅಧ್ಯಕ್ಷರಾಗಿರುವರು. ಆಸ್ಟ್ರಿಯಾದ ಸ್ವಾತಂತ್ರ್ಯರಕ್ಷಣೆ ಮಾಡುವುದೆ ಅವರ ಮುಖ್ಯ ಉದ್ದೇಶವಾಗಿರುತ್ತದೆ.

ಆಸ್ಟ್ರಿಯಾದ ಸರಕಾರ ಮಂಡಲದಲ್ಲಿರುವ ಕೆಲವು ನಾಜಿಗಳು ಜರ್ಮನಿಗೆ ಹಿತವಾಗುವ ರೀತಿಯಲ್ಲಿ ಅಲ್ಲಿ ಕಾರ್ಯಕಲಾಪಗಳನ್ನು ನಡೆಯಿಸುತ್ತಿದ್ದರು. ಇದರಿಂದಲೆ ಆಸ್ಟ್ರಿಯಾ ಜರ್ಮನ್ ಒಪ್ಪಂದವಾಗಲು ಕಾರಣವಂತೆ. ಈ ನಾಜಿಗಳು ಇನ್ನೂ ಹೆಚ್ಚಿನ ಕರದ ಹಾನಿಗೆ ಕಾರಣರಾಗದಂತೆ ಅವರನ್ನು ಕೆಲಸದಿಂದ ನಿವೃತ್ತಗೊಳಿಸುವ ಕಾರ್ಯವನ್ನು ನೂತನ ಅಧ್ಯಕ್ಷರು ಹಿಡಿದಿರುವರು. ಫಿಹರ್ ವ್ಯವಹಾರ ಖಾತೆಗೆ ನಾಜಿಗಳೊಬ್ಬರು ಮುಖ್ಯ ಅಧಿಕಾರಿಗಳಾಗಿದ್ದರು. ಅವರು ಮೊನ್ನೆ ನಿವೃತ್ತಹೊಂದಿರುವರು. ಈಗ ಫಿಹರ್ ವ್ಯವಹಾರ ಖಾತೆಯನ್ನು ಅಧ್ಯಕ್ಷರೇ ನೋಡುತ್ತಿದ್ದಾರೆ.

LATEST NEWS

ಶ್ರೀ ಗೋವಿಂದ ವಲ್ಲಭ ಪಂತರವರು ಸಂಯುಕ್ತ ಪ್ರಾಂತ್ಯದ ಗವರ್ನರರಲ್ಲಿ ಮಂತ್ರಿಪದವೀ ವಿಚಾರ ಪ್ರಸ್ತಾಪಮಾಡಿದರು, ಅಲ್ಲಿಯ ಗವರ್ನರರು ಕಾಂಗ್ರೆಸ್ ಕೇಳಿದ ಭರವಸೆಗಳನ್ನು ಕೊಡಲು ಸಿದ್ಧರಿರುವರೆಂದು ಒಂದು ವಾರ್ತೆಯಿದೆ!

ಪಂಡಿತ ಜವಾಹರ್‌ಲಾಲರು ಢಿಲ್ಲಿಯನ್ನು ಬಿಡುವ ಮೊದಲು ಕರ್ನಲ್ ಲಿಂಡ್‌ಬರ್ಗ್ ದಂಪತಿಗಳಿಗೆ ಭೇಟಿ ಕೊಟ್ಟು ಅಲ್ಲಹಾಬಾದಿಗೆ ಹಿಂತಿರುಗಿದರು.

ಎಪ್ರಿಲ್ ತಾ ೧ನೇ ದಿನ ಪ್ರಚಂಡ ಹರತಾಳವನ್ನು ಆಚರಿಸುವಂತೆ ರಾಷ್ಟ್ರಪತಿ ನೆಹರೂರವರು ಅಪ್ಪಣೆಮಾಡಿರುವರು.

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣೆ, ಆಕಸ್ಮಿಕ ಅನಾಹುತ, ದುಸ್ಸಹವಾದ ನಿರಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

30 ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ. ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪರ್ಮಾಸನ್ ಮಾತ್ರೆಗಳನ್ನು ಉಪಯೋಗಿಸಿರಿ

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ. 4—0—0 ವಿ. ಪಿ. ಚಾರ್ಜು ಬೇರೆ

ರೋಗಿಯ ಈ ಕುರಿತು ವಿವರಗಳನ್ನು ವಿಶದವಾಗಿ ಬರೆಯಿರಿ —

ಹೆಸರು, ವಿಳಾಸ, ಜಾತಿ, ಸ್ತ್ರೀಯಾ ಪುರುಷ ಪ್ರಾಯ ದೇಹದ ಭಾರ ವಿವಾಹಿತನೋ ಅಲ್ಲವೋ ರೋಗದ ಲಕ್ಷಣ ನಿದ್ರೆ, ಆಹಾರ ಮಲಶೋಧನೆ ಜಲ್ಲದ ಉಬ್ಬಸ ಜ್ವರ ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು

ಪರ್ಮಾಸನ್ ಪ್ರೊಡಕ್ಟ್ಸ್, (ಇಂಡಿಯಾ)

ಬ್ರೆಂಚ್. ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್, 356, ಲೇಮಿಂಗ್ಟನ್ ರೋಡ್ ಮುಂಬಯಿ

ಪಿ. ವಿ. ಕಾಮತ್, ಹಿಸ್ಟೀರಿಯಾ ಎಂಡ್ ಇನ್ಸೆನಿಟಿ ಎಕ್ಸ್‌ಪರ್ಟ್ ಮಾರ್ಕೆಟ್ ರೋಡ್ ಉಡುಪಿ

KANARA WATCH WORKS

WATCH MAKERS & GENERAL MERCHANTS

Hampankatta MANGALORE

Dealers in— Watches, Clocks, Timepieces, Rolled Gold Jewellery & Sporting Materials etc,



Stockists of West End Zenith Meridian, Swiss Watches of latest designs & tastes

Repairers — Watches, Clocks, Timepieces and Gramophones.

Japan 8 Inch Octegon	Rs	6	0	0
„ 8 „ Regulator	„	6	12	0
„ 10 „ Octegon		6	8	0
„ 10 „ Regulator	„	7	8	0

ಇವುಗಳು ಆಧುನಿಕ ಯುಕ್ತಿ, ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಷ್ಟು ಸದಾ ಸಿದ್ಧವಿರುವುವು. ವಾಚು, ಗಡಿಯಾರ, ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೊದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!

BEST BRILLIANCY

K. R. K. SHET,

Near Mission High School,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಉಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು

ಸೂತಿಕಾವಾಯು ಅಪಸ್ಮಾರ, 10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

“ವಾಯುಮುಕ್ತಾ”

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಪೀಡಿತರಾಗಿದ್ದಾರೆ ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ಬಡಬಡಿಕೆ ಕೂಗು, ಹೊರಳಾಟ ಬಲಹೀನತೆ, ತಲೆತಿರುಗುವಿಕೆ ಶೀತ, ಎಳೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ವೇಳೆ ಟಗಳು 24 ತಾಸುಗಳಲ್ಲಿ ನಿಲ್ಲುವುವು ಸ್ಮೃತಿ ಇಲ್ಲದಿರುವಿಕೆ ಅಪಸ್ಮಾರ ಒಡ್ಡಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ 10 ದಿನಗಳ ಔಷಧಿಗೆ ರೂ 2 0 0 ಮತ್ತು 60 ದಿನಗಳ ಔಷಧಿಗೆ ರೂ 5 ಪೋಸ್ಟೇಜು ಅಲಾಯಿದಾ

C L Namawala,

Palace Road BARODA

ತುಸು ನಗು.

ಉಪಾಧ್ಯಾಯ—ರಾಮು! ನಿನ್ನ ತಂದೆ ತಿಂಗಳೊಳಗೆ ಕಷ್ಟಪಟ್ಟು ಇಪ್ಪತ್ತು ರೂಪಾಯಿ ತಂದರೆ ನಿನ್ನ ತಾಯಿ ಅದರಲ್ಲಿ ಮುಕ್ಕಾಲು ಪಾಲು ಸೀರೆಗಾಗಿ ತೆಗೆದುಕೊಂಡ ಮೇಲೆ ಆತನಲ್ಲಿ ಏನು ಉಳಿಯುವುದು?

ರಾಮು ಹೃದಯಶೂಲೆ ಸರ್!

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ನಂಬಿರಿಯದ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನ ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,

ಸರಾಫ ಮತ್ತು ಮೆಟಲ್ ಮರ್ಚೆಂಟ್,

ಬಡಗುಪೇಟೆ, ಉಡುಪಿ.

ಲಿವರ್ ವಾಚುಗಳು,

ಒಂದು ವಾರದ ತನಕ ಪರೀಕ್ಷೆಗಾಗಿ ನಿಮ್ಮಲ್ಲೆ ಇಟ್ಟುಕೊಳ್ಳಿ

ನಮ್ಮ ಈ ಗಡಿಯಾರವು ಇದರ ನಾಲ್ಕರಷ್ಟು ಬೆಲೆಯಿರುವ ವಾಚುಗಳಷ್ಟೆ ಬಾಳುವಿಕೆಯುಳ್ಳದ್ದು ಕಮ್ಮಿ ಬೆಲೆಯ ಲಿವರ್ ರಿಸ್ಟ್ ವಾಚುಗಳು 5 ವರ್ಷಗಳ ಅಖಂಡ ಗ್ಯಾರಂಟಿ ಕೊಡುತ್ತೇವೆ ಗ್ಯಾರಂಟಿ ತೃಪ್ತಿಯನ್ನೂ ಕೊಡುತ್ತದೆ ಸುಂದರವಾಗಿಯೂ ಚಿಕ್ಕದಾಗಿಯೂ, ಇರುವುದಲ್ಲದೆ ಶ್ರೇಷ್ಠವಾದ ಲಿವರ್ ಯಂತ್ರ ಚಲನಾಕ್ರಮದಿಂದ ಕೂಡಿದ್ದಾಗಿರುತ್ತದೆ ಅನೇಕ ವರ್ಷಗಳ ವರೆಗೆ ರಿಪೇರಿ ಅವಶ್ಯಕತೆ ಇಲ್ಲದೆ ಬಾಳುವಿಕೆ ಬರುತ್ತದೆ ಮತ್ತು ಒಂದು ಸೆಕಂಡಿಗೆ ತಪ್ಪದಂತೆ ಕಾಲವನ್ನು ತೋರಿಸುತ್ತದೆ

ರಿಯಾಯತಿ ದರಗಳು

ನಿಕ್ಕಲ್ ಕೇಸಿನ ರಿಸ್ಟ್‌ವಾಚು—	ರೂ. 3–4 0
„ „ ಶ್ರೇಷ್ಠವಾದುದು ,	4–8–0
ಬಂಗಾರದ ಗಿಲ್ಟಿನ ಶ್ರೇಷ್ಠವಾದ ಕೇಸುಳ್ಳದ್ದು	5-12 0
ಬಂಗಾರದ ಗಿಲ್ಟ್ ಕೇಸುಳ್ಳ ಸಾಧಾರಣದ್ದು	5–12–0
ನಿಕ್ಕಲ್ ಕೇಸುಳ್ಳ ಆಯತಾಕಾರವುಳ್ಳ ಶ್ರೇಷ್ಠವಾದ ವಾಚು	5–0–0
ಬಂಗಾರದ ಗಿಲ್ಟಿನ ಆಯತಾಕಾರದ್ದು	7 4–0
ಪಾಕೆಟ್ ವಾಚು	8–0–0
ಟ್ರಾಂಪೀಸು	2–8–0

ಟಪ್ಪಾಲು ಖರ್ಚು ಆಣೆ 7 ಪ್ರತ್ಯೇಕ

ಒಂದೇ ಸಾರಿ 4 ವಾಚುಗಳಿಗೆ ಆರ್ಡರು ಕೊಡುವವರಿಗೆ ಟಪ್ಪಾಲು ಖರ್ಚು ಇಲ್ಲ

ಈ ವಿಳಾಸಕ್ಕೆ ಬರೆಯಿರಿ —

ಸೌತ್ ಇಂಡಿಯ ಎಕ್ಸ್‌ಪೋರ್ಟ್ ಏಜನ್ಸಿ,

5 ಅಪ್ಪರ್ ಚಿಟ್ಪುರ್ ರೋಡ್ ಕಾಲಿಘಾಟ್, ಪೋಸ್ಟು ಕಲ್ಕತ್ತಾ

Whenever you require the service of

PAINTERS

Please call on or write to:—

Simon & Co ,

Painters,

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸೈನ್ ಬೋರ್ಡು ಇತ್ಯಾದಿಗಳನ್ನೂ

ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಾಃ ಯಾ ಬರೆದು ತಿಳಕೊಳ್ಳಬಹುದು

ಬೇಗನೇ ಮಹಾ ಯುದ್ಧವಾಗುವುದೆ?

ಜೆಕೊಸ್ಲೊವೆಕಿಯಾದಲ್ಲಿ ಇನ್ನೊಂದು 'ಸ್ಪೈಯಿನ್'

ಹರ್ ಹಿಟ್ಲರನ ಪ್ಲೇನ್.

ಬ್ರಿಟಿಷ ಗುಪ್ತಾಚಾರರು ಈ ಕುರಿತಾಗಿ ಒಂದು ಮಹಾ ಗುಟ್ಟನ್ನು ರಟ್ಟುಮಾಡಿರುವರು. ಹಿಟ್ಲರನು, ಯುರೋಪ್ಪದ ಮಧ್ಯದಲ್ಲಿ ಅಂದರೆ, ಜೆಕೊಸ್ಲೊವೆಕಿಯಾದಲ್ಲಿ ಇನ್ನೊಂದು ಸ್ಪೈಯಿನನ್ನು ರಚಿಸಲು ಪ್ಲೇನುಗಳನ್ನು ನಡೆಯಿಸುತ್ತಿದ್ದಾನೆ. ಈ ಪ್ಲೇನು, ಸರಿಯಾದ ತಾರೀಕು, ಇತ್ಯಾದಿಗಳನ್ನೆಲ್ಲಾ ಬ್ರಿಟಿಷ ಗುಪ್ತಾಚಾರರು ಕಂಡು ಹಿಡಿದಿರುವರು. ಸ್ಥಿತಿಯು ಹೀಗಾದುದರಿಂದ ಬ್ರಿಟಿಷ ಬಾಹ್ಯ ವ್ಯವಹಾರದ ಶಾಖೆಯಲ್ಲಿ ಚಟುವಟಿಕೆಯು ಪ್ರಾರಂಭವಾಗಿದೆ.

ಬರುವ ಮೇ ತಿಂಗಳ ೧೨ರಿಂದ ಜೂನ್ ೫ರ ಒಳಗಾಗಿ, ಜೆಕೊಸ್ಲೊವೆಕಿಯಾದಲ್ಲಿರುವ ಜರ್ಮನ್ ಅಲ್ಪಸಂಖ್ಯಾಕರು ದಂಗೆ ಪ್ರಾರಂಭ ಮಾಡಬೇಕಾಗಿ ನಿಶ್ಚಯವಾಗಿದೆ. ಜೆಕೊಸ್ಲೊವೆಕಿಯಾ ಸರಕಾರದವರು ಈ ದಂಗೆಯನ್ನು ಎದುರಾಯಿಸಲು ತಕ್ಕ ಸಿದ್ಧತೆಗಳನ್ನು ಮಾಡಿರುತ್ತದೆ. ಜರ್ಮನ್ ದಂಗೆಖೋರರಿಗೆ ಬೇಕಾದ ಯುದ್ಧ ಸಾಮಗ್ರಿ, ಸೇನಾ ಸಹಾಯ ಇತ್ಯಾದಿಗಳು ಜರ್ಮನಿಯಿಂದ ಒದಗಿಸಲಾಗುವುದು. ಜರ್ಮನರನ್ನು ರಕ್ಷಿಸುವ ನೆವದಿಂದ ಹಿಟ್ಲರನು ಜೆಕೊಸ್ಲೊವೆಕಿಯಾಕ್ಕೆ ತನ್ನದೊಂದು ಮಹಾ ಸೈನ್ಯ ಮಂಡಳವನ್ನು ಕಳುಹುವವನಿದ್ದಾನೆ.

ಬ್ರಿಟಿಷ ಕಾರನೇಶನಿನ ಸಮಯವೇ ಈ ದಂಗೆಯ ದಿನವನ್ನಾಗಿ ಮಾಡಿದುದರಲ್ಲಿ ಒಂದು ಮಹಾ ಉದ್ದೇಶವಿದೆ. ಸಮಸ್ತ ಬ್ರಿಟನು ಕಾರನೇಶನ್ ಗಲಾಟೆಯಲ್ಲಿ ಮಗ್ನವಾಗಿರುವಾಗ, ತನ್ನ ಕಾರ್ಯಸಾಧನೆಗೆ ಅವರಿಂದ ಯಾವತ್ತೂ ಅಡ್ಡಂತರಗಳು ಬರಲಾರವೆಂದು ಹಿಟ್ಲರನ ನಂಬಿಕೆಯಾಗಿರುತ್ತದೆ.

ಬ್ರಿಟಿಷರು ಮುಂದೆ ಬಾರದಿದ್ದರೆ, ಜರ್ಮನಿಗೆ ಜೆಕೊಸ್ಲೊವೆಕಿಯಾದ ರಾಜಧಾನಿಯಾದ ಪ್ರೇಗಿನಲ್ಲಿ, ಸಂಗ್ರಾಮ ಮಂಡಳವು ಕೂಡಿ ಬಂದು, ಜರ್ಮನ್ ಯುದ್ಧಶಸ್ತ್ರಗಳು ತಮ್ಮ ದೇಶವನ್ನು ಸೇರುವಂತೆ ಮಾಡುವ ಏರ್ಪಾಡುಗಳನ್ನು ನಡೆಯಿಸಬೇಕೆಂದೂ, ಇನ್ನಿತರ ಸಿದ್ಧತೆಗಳನ್ನು ಮಾಡಬೇಕೆಂದೂ ನಿರ್ಣಯಿಸಿರುವರು.

ಫ್ರೆಂಚ್ ಸರಕಾರದವರು ತಾವು ಜೆಕೊಸ್ಲೊವೇಕಿಯಾ ಸರಕಾರಕ್ಕೆ ಸಹಾಯವೀಯುವೆವೆಂದು ವಾಗ್ದಾನಮಾಡಿರುತ್ತಾರೆ. ಹಿಟ್ಲರನು ಜೆಕೊಸ್ಲೊವೇಕಿಯಾವನ್ನು ನುಂಗಿದರೆ, ತಮಗೆ ಮುಂದಕ್ಕೆ ಸುಖವಿರಲಿಕ್ಕಿಲ್ಲವೆಂಬ ಭಾವನೆಯಿಂದ ರಷ್ಯಾ, ಫ್ರಾನ್ಸು ದೇಶಗಳು ಜೆಕೊಸ್ಲೊವೆಕಿಯಾಕ್ಕೆ ತಮ್ಮ ಸಹಕಾರವನ್ನು ಕೊಡುವವಂತೆ.

ಹಿಟ್ಲರನ ಆಜ್ಞೆ ಮೇರೆಗೆ ಜರ್ಮನಿಯಲ್ಲಿ ಜೆಕೊಸ್ಲೊವೇಕಿಯಾಕ್ಕೆ ವಿರೋಧವಾಗಿ ಪ್ರಸಾರಣೆಯು ಪ್ರಾರಂಭವಾಗಿರುತ್ತದೆ. ಜರ್ಮನಿಯು ಜೆಕೊಸ್ಲೊವೆಕಿಯಾದ ಗಡಿಯನ್ನು ಭದ್ರಪಡಿಸುವ ಕಾರ್ಯವನ್ನು ಪ್ರಾರಂಭಿಸಿರುತ್ತದೆ.

ಡ್ಯೂಕ್ ಒಫ್ ವಿಂಡ್ಸೊರರು.

ಮಾಜಿ ಚಕ್ರವರ್ತಿಯರು, ಇಂಗ್ಲಾಂಡಿನಲ್ಲಿರುವ ತಮ್ಮದೆ ಆಗಿರುವ ಆಸ್ತಿಯನ್ನು ಬಿಟ್ಟುಕೊಡಬೇಕೆಂದಾಗಿದೆ. ಈ ಬಗ್ಗೆ ದಸ್ತವೇಜುಗಳನ್ನು ತಯಾರಿಸಲು ರಾಜ ವಕೀಲರು ಅವರೀಗಿರುವ ವಿಯನ್ನಾ ಪಟ್ಟಣಕ್ಕೆ ತೆರಳಿದ್ದರು. ಈ ಆಸ್ತಿಯ ಬದಲಾಗಿ ಡ್ಯೂಕ್‌ರಿಗೆ ರಾಜಕುಟುಂಬದಿಂದ ಹಣವು ಕೊಡುವ ಏರ್ಪಾಡು ಮಾಡಲಾಗಿದೆ. ಡ್ಯೂಕ್‌ರು ವಿಯನ್ನಾದ ಹತ್ತಿರ ಒಂದು ಆಸ್ತಿಯನ್ನು ಪಡಕೊಳ್ಳುವರಾಗಿ ತಿಳಿದುಬರುತ್ತದೆ.

ರೂಸವೆಲ್ಟರಿಂದ ಪ್ರಪಂಚ ಶಾಂತಿರಕ್ಷಣೆ.

ಸಂಯುಕ್ತ ಅಮೇರಿಕಾದ ಅಧ್ಯಕ್ಷರಾದ ರೂಸವೆಲ್ಟರಿಂದ ಯುರೋಪ್ಪದ ಮತ್ತು ಸಮಸ್ತ ಜಗತ್ತಿನ ಶಾಂತಿರಕ್ಷಣೆಯು ಸಾಧಿಸಲಾಗುವುದೆಂದೂ, ಆ ಕುರಿತು ಅವರು ಬೇಗನೆ ಪಾಶ್ಚಾತ್ಯ ಜನಾಂಗಗಳ ಪರಿಷತ್ತೊಂದನ್ನು ಕರೆಯಲಿರುವರೆಂದೂ ಈ ಮೊದಲು ಒಂದು ವಾರ್ತೆಯು ಹರಡಿತ್ತಷ್ಟೆ. ರೂಸ್‌ವೆಲ್ಟರು ತನ್ನ ಕೈಲಾದ ಮಟ್ಟಿಗೆ ಪ್ರಯತ್ನಮಾಡುವರೆಂದೂ, ಪಾಶ್ಚಾತ್ಯದ ಜನಾಂಗಗಳ ಪರಿಷತ್ತಿಗಾಗಿ ಅವರು ಸಿದ್ಧತೆಗಳನ್ನು ಮಾಡುತ್ತಿದ್ದಾರೆಂದೂ, ತನ್ನ ದೇಶದಲ್ಲಿರುವ ಫ್ರೆಂಚ್, ಬ್ರಿಟಿಷ್, ಜರ್ಮನ್ ಇತ್ಯಾದಿ ಜನಾಂಗಗಳ ಪ್ರತಿನಿಧಿಗಳಿಗೆ ತನ್ನ ಇಚ್ಛೆಯನ್ನು ತಿಳಿಸಿರುವರೆಂದೂ, ತಾನು ಯುರೋಪ್ಪಕ್ಕೆ ಸಾಲಕೊಟ್ಟ ಜನಾಂಗವಾದುವರಿಂದ, ಇನ್ನೊಂದು ಯುದ್ಧವಾಗುವ ಮೊದಲು, ತನ್ನಿಂದ ಪಡಕೊಂಡ ಸಾಲಗಳ ಮರುಪಾವತಿಯಾಗಬೇಕೆಂದೂ ರೂಸವೆಲ್ಟರು ಒತ್ತಾಯಪಡಿಸುವರೆಂಗು ಬಲವಾಗಿ ವಾರ್ತೆಯಿದೆ. ರೂಸವೆಲ್ಟರು ಜರ್ಮನ ಇತ್ಯಾದಿ ಜನಾಂಗಗಳಿಗೆ ತನಗೆ ಬರಬೇಕಾದ ಸಾಲದ ಕುರಿತು ಗದರಿಕೆಯನ್ನು ಮಾಡಿರುತ್ತದೆ. ಅಲ್ಲದೆ ಇಟೇಲಿಗೂ ಒಂದು ತರದ ಎಚ್ಚರಿಕೆಯನ್ನು ಕೊಟ್ಟಿರುತ್ತದೆ. ಇದರಿಂದ ಹಿಟ್ಲರನಿಗೆ ಸ್ವಲ್ಪ ಗಾಬರಿಯುಂಟಾಗಿದೆ ಎಂದೂ ಮೊನ್ನೆ ಆತನು ಮಾಡಿದ ಒಂದು ಭಾಷಣದಿಂದ ತಿಳಿದುಬರುತ್ತದೆಂತೆ. ಪರಿಷತ್ತಿಗಾಗಿ ಆಹ್ವಾನಗಳು ಬೇಗನೆ ಹೋಗಲಿವೆ. ಈ ಪರಿಷತ್ತು ಅಮೇರಿಕಾದ ರಾಜಧಾನಿಯಾದ ವಾಶಿಂಗ್ಟನಿನಲ್ಲಿ ಜರಗುವುದಾಗಿ ತಿಳಿದುಬರುತ್ತದೆ.

---

೫ ಸಾವಿರ ವರ್ಷಗಳ ಹಿಂದಿನ ಗೋದಿ ಕಾಳುಗಳು!

ಪ ಜಾಬ ಪ್ರಾಂತ್ಯದ ಒಂದು ಕಡೆಯಲ್ಲಿ ನೆಲವನ್ನು ಅಗೆಯುತ್ತಿದ್ದಾಗ ಒಂದು ಗೋರಿಯು ಸಿಕ್ಕಿತು. ಅದರಲ್ಲಿ ಕೆಲವು ಗೋದಿ ಕಾಳುಗಳೂ ದೊರೆತವು. ಭೂಗರ್ಭಶಾಸ್ತ್ರ ನಿಪುಣರು ಆ ಕಾಳುಗಳು ಐದು ಸಾವಿರ ವರ್ಷಗಳ ಹಿಂದಿನದೆಂದು ಅಂದಾಜುಮಾಡಿರುವರು. ಕೆಪ್ಟನ್ ರಿಕೆಟ್ ಎಂಬ ಆಸ್ಟ್ರೇಲಿಯಾ ದೇಶಸ್ಥರೊಬ್ಬರು ಈ ಕಾಳುಗಳನ್ನು ತಮ್ಮ ಊರಿಗೆ ಕೊಂಡೊಯ್ದು, ಕೆಲವು ನವೀನ ವಿಧಾನಗಳನ್ನುಪಯೋಗಿಸಿ ಅವನ್ನು ಭೂಮಿಯಲ್ಲಿ ಬಿತ್ತಿದರು. ಅದು ಈಗ ಮೊಳೆಕೆಬಂದು ಸಸಿಯಾಗಿರುತ್ತದೆ. ಹೀಗೆಯೇ ಪ್ರಯತ್ನಪಟ್ಟ ಇನ್ನೂ ಕೆಲವರು ಯಶಸ್ವಿಗಳಾಗಲಿಲ್ಲ.

ಪ್ರಪಂಚದ ದೊಡ್ಡ ಮಗು

ಲಾಸ್ಪೊಕ್ಸ್ ಪಟ್ಟಣದ ಬೌಲಿಸ್ ದಂಪತಿಗಳ ಮಗುವೇ ಪ್ರಪಂಚದಲ್ಲಿ ದೊಡ್ಡದೆಂದು ಊಹಿಸಲಾಗಿದೆ. ಅದು ಹುಟ್ಟಿ ೨ ವರ್ಷ ೯ ತಿಂಗಳುಗಳಾಗಿದೆಯಷ್ಟೆ. ಅದರ ಭಾರವು ೧೦೫ ರಾತ್ಲುಗಳಷ್ಟಿದೆಯಂತೆ. ಎತ್ತರ ೩ ಅಡಿ. ಹುಟ್ಟುವಾಗ ಅದರ ಭಾರವು ಬರೇ ೭ ರಾತ್ಲುಗಳಾಗಿತ್ತು. ಆರು ತಿಂಗಳುಗಳಾಗುತ್ತಲೇ ಮಗುವಿನ ಭಾರವು ೩೦ ರಾತ್ಲುಗಳಿಗೆ ಏರಿದ್ದು, ೨ ವರ್ಷವಾಗುತ್ತಲೇ ೬೭ ರಾತ್ಲುಗಳಿಗೆ ಮಿಕ್ಕಿತು. ಆ ಮಗುವಿನ ಮೈಯೊಳಗೆ ವಿಪರೀತ ಕೊಬ್ಬು ಇರುವುದರಿಂದಲೇ ಅಷ್ಟು ಭಾರ ಏರಲು ಕಾರಣವೆಂದು ವೈದ್ಯರ ಅಭಿಪ್ರಾಯ.

ಇದಕ್ಕೆ ವಿರುದ್ಧವೆಂಬಂತಿದ್ದ ಒಂದು ವರ್ತಮಾನವು ಸೊಮರ್‌ಸೆಟ್‌ನಿಂದ ಬರುತ್ತದೆ. ಅಲ್ಲಿಯ ಒಂದು ಹೆಣ್ಣು ಮಗುವು ಹುಟ್ಟುವಾಗ ಬರೇ ೩೦ ತೊಲೆಗಳಷ್ಟು ತೂಕವಿತ್ತಂತೆ.

ಗಾಂಧೀ-ವ್ಯಾಸರಾಯರ ಭೇಟಿಯಾಗುವುದೇ?

ಗಾಂಧಿ-ವ್ಯಾಸ್ರಾಯರ ಭೇಟಿಯು ಬೇಗನೆ ನಡೆಯುವುದೆಂದೂ, ಈ ಮೊದಲು ಹರಡಿದ್ದ ವಾರ್ತೆಯಲ್ಲಿ ಸತ್ಯಾಂಶವಿಲ್ಲವೆಂದೂ ಅನೇಕ ಪತ್ರಿಕೆಗಳು ಹೇಳುತ್ತಿದ್ದರೂ, ಮುಂಬಾಯಿ ಕೈಸರ್‌ಹಿಂದ್ ಪತ್ರಿಕೆಯಲ್ಲಿ ಈ ತರದ ಭವಿಷ್ಯವಾಣಿಯೊಂದಿದೆ.

ಗಾಂಧಿ-ವ್ಯಾಸ್ರಾಯ ಮಾತುಕತೆಗಳು ನಡೆಯಲು ಎಲ್ಲಾ ಸಿದ್ಧತೆಗಳಾಗಿವೆ. ಇತ್ತೀಚೆಗೆ ವಾರ್ಧಾದಲ್ಲಿ ಮಹಾತ್ಮಾಜಿಯವರೊಡನೆ ಎರಡು ತಾಸುಗಳ ತನಕ ಸಂಭಾಷಣೆ ನಡೆಯಿಸಿ ಶ್ರೀ ಜಿ. ಡಿ. ಬಿರ್ಲಾರವರು ಡಿಲ್ಲಿಗೆ ಬಂದವರು, ಶ್ರೀ ಭುಲಾಭಾಯಿ ದೇಸಾಯಿಯವರ ಭೇಟಿಮಾಡಿ ನಂತರ ವ್ಯಾಸ್ರಾಯರ ಭೇಟಿ ಮಾಡಿದರಂತೆ.

ಕಾಂಗ್ರೆಸ್ಸು ವಿಜಯದಿಂದ ಉಂಟಾದ ರಾಜಕೀಯ ಜಿಗುಪ್ಸೆಯನ್ನು ನಿವಾರಿಸುವರೆ, ಶ್ರೀ ಬಿರ್ಲಾರವರು ಮಧ್ಯವರ್ತಿಗಳಾಗಬಹುದೆಂದು ಊಹಿಸಲಾಗಿದೆ. ಕಾಂಗ್ರೆಸ್ ವಿಜಯಿಯಾದಂದಿನಿಂದ, ರಾಜಧಾನಿ ಡಿಲ್ಲಿಗೂ ಲಂಡನಿನ ವೈಟ್ ಹಾಲಿಗೂ ಬಹಳ ಸಂಭಾಷಣೆ ನಡೆಯುತ್ತಿದೆ. ಎರಡು ಕಡೆಗಳಲ್ಲೂ ಹಿಂದೂ ದೇಶದ ಮುಂದಿನ ರಾಜಕೀಯ ವಿಚಾರವಾಗಿ ಭಾರಿ ಚಟುವಟಿಕೆಗಳು ನಡೆಯುತ್ತಿವೆ.

ಆದರೆ ವೈಸ್ರಾಯರು ಅತಿ ಜಾಗರೂಕರಾಗಿ ವರ್ತಿಸುತ್ತಿದ್ದಾರೆ. ಅವರು ವಿಚಾರಗಳಲ್ಲಿ ತನ್ನ ಒಡೆಯರನ್ನು ಕೇಳುತ್ತಿದ್ದಾರೆ. ಚುನಾವಣೆಯ ಫಲಿತಾಂಶದಿಂದ, ತಮ್ಮ ಈ ಮೊದಲಿನ ವರ್ತನೆಯನ್ನು ಬದಲಾಯಿಸಬೇಕೆಂದು ಡಿಲ್ಲಿಯಲ್ಲೂ ಲಂಡನಿನಲ್ಲೂ ಒಂದು ತರದ ನವೀನ ಮನೋಭಾವವು ಉಂಟಾಗಿರುತ್ತದೆ.

ಆದರೆ ರಾಜಕೀಯ ವಿಚಾರದಲ್ಲಿ ಯಾವತ್ತೂ ಪ್ರಕಟಣೆಗಳನ್ನು ಮಾಡುವರೆ ವೈಸ್ರಾಯರಿಗೆ ಯಾ ಗವರ್ನರರಿಗೆ ಅಧಿಕಾರವಿರುವುದಿಲ್ಲ. ಅವರ ಆ ತರದ ಪ್ರಕಟಣೆಗಳನ್ನು ಬ್ರಿಟಿಷ ಸರಕಾರದ ಪರವಾಗಿ ಮಾತ್ರ ಮಾಡಬಹುದು.

ಒಟ್ಟಿನ ಮೇಲೆ ಈಗ ಪರದೆಯ ಹಿಂದೆ ಅನೇಕ ಪ್ರಾಮುಖ್ಯ ಘಟನೆಗಳು ನಡೆಯುತ್ತಿವೆ. ವೈಸ್ರಾಯರೂ ಅನೇಕ ಗವರ್ನರರನ್ನು ಕರೆದು ಮಾತಾಡಿರುವರು. ಶ್ರೀ ಡಿ. ಜಿ. ಬಿರ್ಲಾರಿಗೂ ಭೇಟಿಕೊಟ್ಟಿರುವರು. ಎಲ್ಲವೂ ಹೋದರೆ, ಬೇಗನೆ ಗಾಂಧಿ-ವೈಸ್ರಾಯರ ಭೇಟಿಯು ನಡೆಯುವುದು.

ಮುಂಬಾಯಿಯ ಕಾಂಗ್ರೆಸ್ ಸರಕಾರ

೧೯೩೧-೩೨ರಲ್ಲಿ ಅಸಹಕಾರ ಚಳವಳದಲ್ಲಿ ಭಾಗಿಗಳಾದುದಕ್ಕಾಗಿ ಸರಕಾರದವರು ವಶಪಡಿಸಿ ಹರಾಜುಮಾಡಿದ ಜಮೀನುಗಳು ಮತ್ತೊಮ್ಮೆ ಅವರಿಗೆನೆ ಕೊಡಲು, ಮುಂಬಾಯಿಯಲ್ಲಿ ನವೀನವಾಗಿ ರಚನೆಯಾಗಲಿರುವ ಕಾಂಗ್ರೆಸ್ಸ ಸರಕಾರವು ಯತ್ನಿಸುವುದೆಂದೂ, ಆ ಸಂದರ್ಭದಲ್ಲಿ ಹೇಗೆ ವರ್ತಿಸಬೇಕೆಂಬುದರ ಕುರಿತು ಮುಂಬಾಯಿಯ ಗವರ್ನರರಾದ ಲಾರ್ಡ್ ಬ್ರೆಬೋರ್ನರಿಗೂ, ವೈಸ್ರಾಯರಿಗೂ ಮೊನ್ನೆ, ಮೊದಲಿನವರು ರಾಜಧಾನಿಗೆ ತೆರಳಿದ್ದಾಗ ಮಾತುಕತೆಗಳು ನಡೆದಿರುತ್ತವೆಂದೂ, ಈ ಕುರಿತು ಹೇಗಿರುವುದೆಂದೂ ನೋಡಲು ಮುಂಬಾಯಿಯ ಪ್ರಸಿದ್ಧ ವಕೀಲರೊಬ್ಬರು ನೇಮಕಹೊಂದಿರ ವರೆಂದೂ ತಿಳಿದುಬರುತ್ತದೆ.

ಮುಂಬಾಯಿ ಕಾಂಗ್ರೆಸ್ ಕಮಿಟಿ.

ಮುಂಬಾಯಿ ಪ್ರಾಂತ್ಯದ ಅಸೆಂಬ್ಲಿಗೆ ಚುನಾಯಿತ ಕಾಂಗ್ರೆಸ್ ಸದಸ್ಯರ ನಾಯಕತನವು ಶ್ರೀ ಕೆ. ಜಿ. ಕ್ಹಾರೆ ಎಂಬವರಿಗೆ ಕೊಡಲಾಗಿದೆ. ಅದು ನ್ಯಾಯವಾಗಿಯೂ ಶ್ರೀ ನರಿಮ್ಯಾನರಿಗೆ ಸಲ್ಲಬೇಕಾದುದು, ಕಾಂಗ್ರೆಸ್ ಈ ಆರಿಸುವಿಕೆಯಲ್ಲಿ ಪಕ್ಷಪಾತದಿಂದ ವರ್ತಿಸಿತ್ತೆಂಬುದಾಗಿ ಮುಂಬಾಯಿಯ ಪತ್ರಿಕೆಗಳಲ್ಲಿ ಪ್ರಚಾರವು ನಡೆಯಿತು. ಆದರೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಈ ಕುರಿತು ಸರಿಯಾದ ವಿಚಾರಣೆಯನ್ನು ನಡೆಸಿ, ಶ್ರೀ ನರಿಮ್ಯಾನರನ್ನು ವಿಚಾರಿಸಿ ಪತ್ರಿಕೆಗಳು ನಡೆಯಿಸಿದ ಪ್ರಚಾರವು ಕೇವಲ ಸುಳ್ಳು ಪ್ರಚಾರವೆಂದೂ ನಾಯಕನ ಆರಿಸುವಿಕೆಯಲ್ಲಿ ಯಾವತ್ತೂ ತರದ ಪಕ್ಷಪಾತವು ನಡೆಯಲಿಲ್ಲವೆಂದೂ ರಾಷ್ಟ್ರಪತಿಗಳ ಪ್ರಕಟಣೆಯು ಹೊರಡಿರುತ್ತದೆ.

ಮಾರ್ಚ ೨೧ಕ್ಕೆ ಅಂತ್ಯವಾಗುವ ವಾರದೊಳಗೆ ಹಿಂದೂಸ್ಥಾನದಿಂದ ೩೮,೮೮,೮೮೭ ರೂಪಾಯಿಗಳ ಮೌಲ್ಯದ ಬಂಗಾರವು ಪರದೇಶಕ್ಕೆ ಹೋಗಿರುತ್ತದೆ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಯರವರ

ಬಾಲಭಾಸ್ಕರ.

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ದಕ್ಷಿಣ ಕನ್ನಡದ ಏಜೆಂಟರು — ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ESTD: 1906

CANARA BANK

LIMITED.

INCORPORATED IN BRITISH INDIA.

Member, Reserve Bank of India.
Member, Clearing House Bombay.

Subscribed Capital	6,00,000
Paid up Capital	3,33,240
Reserves	4,50,000
Deposits	79,64,000
Total Resources	98,00,000

Offices:

BOMBAY-FORT.	MANGALORE.
BOMBAY-MANDVI.	BANGALORE.
ALLEPPEY.	CHIKAMAGALUR.
ERNAKULAM.	ARSIKERE.
COCHIN.	DAVANAGERE.
CALICUT.	HUBLI
CANNANORE	DHARWAR, Etc., Etc.

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಯ್ಯ ಕರಣೀಕ ರಸ್ತೆ, ಹೂಮಾರ್ಕೆಟು
ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡಿಸಿರಿ.

CITY BISCUIT WORKS,
Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿಯಾದದ್ದು.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದೀಯ ಸಮಾಜ, ಪೆರ್ಡೇಲ
P O Peridopi (ನೆಲ್ಲೂರು ಡಿ)

'Dil Roz' (Regd)

'Dil Roz' is a sure cure for Oriental sores local sores all kinds of deep-rooted sores skin eruptions, Pimples, Eczema, Ringworm, Sinus, Fistula auxillary-Abscess

There is no need of dressing the wounds nor are baths prohibited

Price Rs. 2
Postage extra

TAHIR DIN,
Anarkali, LAHORE.

ಒಂದು ತೊಟ್ಟು ಕೂಡಾ ಇಲ್ಲ!

ಖಡ್ಗದಿಂದ ಕತ್ತರಿಸಿದರೂ ಒಂದು ತೊಟ್ಟು ರಕ್ತ ಕೂಡಾ ಬರುವುದಿಲ್ಲ. ಅಷ್ಟು ನಿರಕ್ತ.

ನೀವು 'ಅಮೃತ'ವನ್ನು ತೆಗೆದುಕೊಳ್ಳುತ್ತಿದ್ದರೆ ದೇಹದೊಳಗಿನ ರಕ್ತ ಮತ್ತು ಚೈತನ್ಯದ ಅಭಾವಗಳು ದೂರ ಸರಿಯುತ್ತವೆ ನಿಮ್ಮ ದೇಹದೊಳಗೆ ಅತ್ಯುತ್ತಮವಾದ ರಕ್ತವು ಉಂಟಾಗಿ ಚೈತನ್ಯಯುಕ್ತವಾದ ಆರೋಗ್ಯವೂ ಶಕ್ತಿಯುತವಾದ ದೇಹಬಲವೂ ಉಂಟಾಗುತ್ತದೆ.

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ

ತಯಾರಿಸುವವರು – ಕೇಸರಿ ಕುಟೀರಂ, ಎಗ್ಮೋರ್, ಮದರಾಸು
ಮಂಗಳೂರ ಪ್ರವರ್ತಕರು – ದಿ. ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

TEST YOUR EYES

By the Electro Ophthalmoscope



All Varities of Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE.

BEHAR CHEMICAL WORKS, BHAGALPUR.

ಗೊನೊಕ್ಯೂರು

ಕೆಟ್ಟ ಚಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ರಸಕರ್ಪೂರವಿಲ್ಲದ ಔಷಧವಾಗಿದೆ ಒಂದೇ ದಿನದ ಔಷಧ ಉಪಯೋಗದಿಂದ ಗುಣ ಕಂಡುಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ–ಧಾತು ದಪ್ಪವಿದ್ದು ಹಳದಿ ಬಣ್ಣವಾಗಿ ಹೋಗುವುದು. ಶಕ್ತಿಗಂಧಿಗಳ ಸಂಬಂಧವಾಗಿ ಆಳೀಯವಿದ ಗುಳ್ಳೆಗಳು ವಿಶೇಷ ಮೂತ್ರವಾಗುವಾಗ್ಗೆ ಉರಿಯುವುದು, ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧಿ ಸೀಸೆ 1ಕ್ಕೆ ರೂ 2—0—0

ವ್ಯಾಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ. ವಿದ್ಯಾರ್ಥಿಗಳು ಚಿಕ್ಕ ಪ್ರಾಯದಲ್ಲಿಯೇ ಅಶಕ್ತರಾಗಿದ್ದು, ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಿಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು, ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ, ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ, ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಶಕ್ತಿ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ. 2-0-0.

ಏಜೆಂಟರು.—ಷಾ ಕಂಪೆನಿ,
ಗವರ್ನಮೆಂಟ್ ಕೊಲೇಜ್ ಎದುರು
ಮಂಗಳೂರು.

ಮೊಣಕಾಲಿನ ಗಂಟು ಮರದ ಹಲಿಗೆಯಂತೆ ಆಗಿತ್ತು.

ನಡೆಯಲಸಮರ್ಥವಾದ ನಡುಪ್ರಾಯದ ಮನುಷ್ಯ

'ಕ್ರುಶನ್ ಲವಣವನ್ನು ತೆಗೆದುಕೊಳ್ಳುವನು—ಈಗ ದಿನಕ್ಕೆ ಹದಿನಾಲ್ಕು ಮೈಲುಗಳಷ್ಟು ನಡೆಯುವನು.

ಅವನು ತನ್ನ ಮೊಣಕಾಲುಗಂಟಿಗೆ ಏಟಾಗಿತ್ತೆಂದೂಹಿಸಿ ಅದಕ್ಕೆ ತಕ್ಕ ವೈದ್ಯಕೀಯ ಉಪಚಾರಗಳನ್ನು ಮಾಡಿದಾಗ್ಯೂ, ಯಾವ ಗುಣವೂ ಸಿಗಲಿಲ್ಲ. ನಿಜಸ್ಥಿತಿಯೇನೆಂದರೆ ಮೂತ್ರದೋಷದ ವಿಷವಸ್ತುಗಳು ಅವನ ಗಂಟುಗಳಲ್ಲಿದ್ದವು. ಕ್ರುಶನ್ ಲವಣವು ಅವನಿಗೆ ಯಥಾಪ್ರಕಾರ ನಡೆಯುವ ಸಾಮರ್ಥ್ಯವನ್ನು ಕೊಟ್ಟಿತು. ಈಗಾಗಲೇ ಅವನಿಗೆ ನಡುಪ್ರಾಯವಾಗಿದೆ. ಅವನು ಹೀಗೆ ಹೇಳುತ್ತಾನೆ:—

ಕೆಲವು ವರ್ಷಗಳ ಹಿಂದೆ ನನಗೊಂದು ವಿಪರೀತ ಗಂಟುನೋವು ಪ್ರಾರಂಭವಾಯಿತು. ಕ್ರಮೇಣ ಗಂಟುಗಳು ಕಟ್ಟಿಕೊಂಡು ಬಂದುವು. ನೋವು ಸಹಿಲಸಾಧ್ಯವಿದ್ದುದರಿಂದ ನಡೆಯಲಸಾಧ್ಯನಾಯಿತು. ನಾನು ಆ ಗಂಟನ್ನು ಎಕ್ಸರೇ ಮೂಲಕ ಪರೀಕ್ಷಿಸಿದರೂ ಅದರಲ್ಲೇನೂ ಕಂಡುಬರಲಿಲ್ಲ. ಆಗ ನಾನು ಕ್ರುಶನ್ ಲವಣದ ವಿಚಾರ ಕೇಳಿ, ಒಂದು ಸೀಸೆಯನ್ನು ಪಡಕೊಂಡೆ. ಒಂದು ಸೀಸೆಯನ್ನು ತೆಗೆದುಕೊಂಡ ನಂತರ ಕಟ್ಟಿಕೊಂಡ ಗಂಟು ಸಡಿಲಾಯಿತು. ಈಗ ಈಗ ನಾನು ಕ್ರುಶನ್ ಲವಣವನ್ನು ಪ್ರತಿನಿತ್ಯ ಪ್ರಾತಃಕಾಲ ಸೇವಿಸುವೆನು ಮತ್ತು ನಾನೀಗ 12ರಿಂದ 14 ಮೈಲುಗಳ ತನಕ ನಡೆಯಬಲ್ಲೆನು—ನಾನು ನಡುವಯಸ್ಕನಿರುವೆನು.

ಎ. ಎಂ.



ನಿಮ್ಮ ಸ್ನಾಯುಗಳಲ್ಲೂ, ಗಂಟುಗಳಲ್ಲೂ ಕಟ್ಟುಬೀಳುವಂತೆ ಮಾಡುವ ಆ ವಿಷಪದಾರ್ಥಗಳನ್ನು ಕ್ರುಶನ್ ಲವಣವು ಹೊರಗೆ ಹಾಕಿ ರಕ್ತಶುದ್ಧ ಮಾಡುತ್ತದೆ. ಎಂದು ಈ ವಿಷವಸ್ತುಗಳು ಹೋಗುತ್ತವೋ ಅಂದೇ ನಿಮ್ಮ ದೇಹದೊಳಗಿನ ನೋವೂ, ವಾತದ ನೋವೂ ಹೋಗುತ್ತದೆಂಬುದರಲ್ಲಿ ಸಂಶಯವಿಲ್ಲ. ಭಯಂಕರ ವಾತರೋಗಗಳು ಕ್ರುಶನ್ ಲವಣದ ಸೇವನೆಯಿಂದ ಬಲುಬೇಗನೇ ಗುಣಹೊಂದಿರುತ್ತವೆ.

ಎಲ್ಲಾ ಸ್ಟೋರುಗಳಲ್ಲಿಯೂ, ಅಂಗಡಿಗಳಲ್ಲೂ, ಬಜಾರುಗಳಲ್ಲೂ

ಕ್ರುಶನ್ ಲವಣವು ಮಾರಲ್ಪಡುತ್ತದೆ.

GODREJ

CHAVI BRAND

ಟಾಯ್ಲೆಟ್ ಸಾಬೂನುಗಳು



ನನ್ನ ಮುಖವನ್ನು ಸ್ವಲ್ಪ ನೋಡಿ. ಅದೆಷ್ಟು ಅಸಹ್ಯ ಕಾಣುತ್ತದೆ?

ಚರ್ಮಕ್ಕೆ ಕೆಡುಕನ್ನುಂಟುಮಾಡಿ ಬೆವರಿನ ಬರುವಿಕೆಯನ್ನು ತಡೆಕಟ್ಟುವ ಅನಿರ್ಮಲ ಮತ್ತು ಅಪಾಯಕರ ಸಾಮಾನುಗಳಿಂದ ತಯಾರಿಸಲ್ಪಟ್ಟ ಅಗ್ಗಬೆಲೆಯ ಸಾಬೂನುಗಳನ್ನು ಉಪಯೋಗಿಸಿದುದೇ ನನ್ನ ಈ ಅವಸ್ಥೆಗೆ ಕಾರಣವಾಗಿರುತ್ತದೆ.

ಆದರೆ ಅದೇ ಮುಖವನ್ನು ಈಗ ನೋಡಿ-ಎಂಥಾ ಬದಲಾವಣೆಗಳು!

ಇದು ನಿರ್ಮಲವಾದ ಸಸ್ಯ ತೈಲಗಳಿಂದಲೇ ತಯಾರಿಸಲ್ಪಟ್ಟ ಗೊದ್ರೆಜ ಸಾಬೂನುಗಳ ಉಪಯೋಗದಿಂದಾದುದು. ಗೊದ್ರೆಜ ಸಾಬೂನಿನ ಸುವಾಸನೆಯು ಮೃದು ನೊರೆಯು ಚರ್ಮರಂಧ್ರಗಳನ್ನು ಹೊಕ್ಕು ದೇಹದ ಮೇಲಿನ ಎಲ್ಲ ಕಲ್ಮಶಗಳನ್ನು ನಿರ್ಮೂಲಿಸಿ ಮೋಹಕವಾದ ಶುಭ್ರ ಮೈಬಣ್ಣವನ್ನು ಕೊಡುತ್ತದೆ.

ಗೊದ್ರೆಜ್ ಟ್ವಾಲೆಟ್ ಸಾಬೂನುಗಳು

ನಂ 1 ಮತ್ತು 2

ಮನುಷ್ಯನ ಚರ್ಮಕ್ಕೆ ಚಿಕ್ಕದ ಸ್ನಿಗ್ಧ ಪದಾರ್ಥ ವಸ್ತುಗಳಿಂದ ಪ್ರಪಂಚದ ವೈದ್ಯವಿಜ್ಞಾನಿಗಳಿಂದ ಪುರಸ್ಕರಿಸಲ್ಪಟ್ಟ ಸಂಶೋಧನೆಗಳ [illegible] ಗೋದ್ರೆಜ [illegible] ತಯಾರಿಸಿದುದು

ಎಲ್ಲಾ ನಮೂನೆಯ ಗೋದ್ರೆಜ್ ಸಾಬೂನು ಖಾತ್ರಿಯಾಗಿ ಪ್ರಾಣಿಚರ್ಬಿರಹಿತವಾಗಿರುತ್ತದೆ

ನಕಲಿಗಳಿಗೆ ಮೋಸ ಹೋಗದಿರಿ

ಪೆಟ್ಟಿಗೆಯ ಮೇಲೆ ಚಾವಿ ಗುರುತಿಲ್ಲದ ಯಾವ ತಯಾರಿಕೆಯೂ ಶ್ರೇಷ್ಠ ಗೋದ್ರೆಜ್ ತಯಾರಿಕೆಯಾಗಿರಲಾರದು

ಪ್ರಾಮುಖ್ಯ ಪ್ರತಿನಿಧಿಗಳು —

ನಾದಿರ್ ಷಾ ಪ್ರಿಂಟರ್ ಎಂಡ್ ಕೊ. ಬೊಂಬಾಯಿ.

ಕಾರ್ಖಾನೆ—ಗೋದ್ರೆಜ್ ಸೋಪ್ಸ್ ಲಿಮಿಟೆಡ್

316 ಡಿ ಲಿಸ್ಲಿ ರೋಡ್ ಬೊಂಬಾಯಿ 11

ಪ್ರಕಾಶ ಸೂಸುವ ಮಹಿಳೆ

ಯೂರೋಪು ಖಂಡದ ಪಿರಾನೋ ಎಂಬಲ್ಲಿ ಓರ್ವ ಮಹಿಳೆಯು ರಾತ್ರಿ ಹೊತ್ತು ಮಲಗಿರುವಾಗ ಅವಳ ಎದೆಭಾಗದಿಂದ ನೀಲವರ್ಣವುಳ್ಳ ಒಂದು ಪ್ರಕಾಶವು 8 ಸೆಕೆಂಡುಗಳ ತನಕ ಕಾಣಸಿಕೊಳ್ಳುತ್ತದೆ. ಎದೆಭಾಗದಿಂದ ಬಂದ ಈ ಪ್ರಕಾಶವು ಅವಳ ಇಡೀ ದೇಹವನ್ನೆ ಬೆಳಗುಗೊಳಿಸುತ್ತದಂತೆ. ಅವಳ ದೇಹದಲ್ಲಿರುವ ಕೆಲವು ಬೆಳಕು ಬಿಡುವ ಪದಾರ್ಥಗಳಿಂದ ಈ ವಿಚಿತ್ರ ಉಂಟಾಗುತ್ತದೆಂದು ವೈದ್ಯರು ಅಭಿಪ್ರಾಯಪಟ್ಟರು.

ಒಂದು ರಾತ್ರಿಯಲ್ಲಿ 3 ಚಂದ್ರಗಳು

ಕಾನಾಡಾದ ಮೊಂಟ್ರಿಲ್ ನಗರ ನಿವಾಸಿಕರು ಕೆಲವು ಸಮಯಗಳ ಹಿಂದೆ ಒಂದು ರಾತ್ರಿಯಲ್ಲಿ ಮೂರು ಚಂದ್ರ ಬಿಂಬಗಳನ್ನು ನೋಡಿ ಕೌತುಕಪಟ್ಟರು. ಅಲ್ಲಿನ ನಾಗರಿಕರೆಲ್ಲರೂ ... ಅಲ್ಲಿನ ಮಾರ್ಗದಲ್ಲಿ ನಿವಾಸಿಗಳೆಲ್ಲರೂ ತುಂಬಿ ಈ ವಿಶ್ವ ಆಶ್ಚರ್ಯವನ್ನು ನೋಡುತ್ತಿದ್ದರು. ಚಂದ್ರನ ಬೆಳಕು ನೀರಿನ ತ್ಯಾವವಿದ್ದ ಮೋಡಗಳಲ್ಲಿ ವಕ್ರೀಕರಣಹೊಂದಿ ಪ್ರತಿಬಿಂಬಿತವಾಗಿದ್ದೆ ಇದಕ್ಕೆ ಕಾರಣವೆಂದು ವಿಜ್ಞಾನಿಗಳು ಹೇಳಿರುವರು.

ನಿಮ್ಮ ಮಿತ್ರರನ್ನು 'ಸ್ವದೇಶಾಭಿಮಾನಿ'ಯ ಚಂದಾದಾರರನ್ನಾಗಿ ಮಾಡಿರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ದುರ್ಬಲತೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3—0—0 (ಮೂರು) ವಿ. ಪಿ. ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N JASANI,** Vithalbhai Patel Road, BOMBAY 4.

'ಕಾಂತಾರಿಡ್ಯಾನ್ ಹೇರ್ ಒಯಿಲ್'

ಶಾಸ್ತ್ರೀಯರೀತ್ಯಾ ತಯಾರಿಸಿದ
ಉತ್ತಮ ಹೇರ್ ಟಾನಿಕ್

ಈ ಎಣ್ಣೆಯು ಕೂದಲುದುರುವಿಕೆ, ಬೋಳಾಗುವಿಕೆ, ಬೊಟ್ಟುಕಲೆ, ಮೊದಲಾದ ಯಾವತ್ತು ಶಿರ ವ್ಯಾಧಿಗಳಿಗೆ ರಾಮಬಾಣ.

ಅದಲ್ಲದೆ ಇದರಲ್ಲಿ ಮಿದುಳ ವೃದ್ಧಕ ರಸಾಯನಿಕ ಪದಾರ್ಥಗಳಿವೆ.

ತಲೆಗೆ ಉಪಯೋಗಿಸಲು ಇದು ಒಂದೇ ಎಣ್ಣೆ ಕೂಡಲೇ ಉಪಯೋಗಿಸಿ ನವಯೌವನವನ್ನು ಪಡೆಯಿರಿ. ಬೆಲೆ ಆಣೆ 0 12 6 ಮಾತ್ರ

ಜೆ ಬಿ. ಡಿ. ಇವರ

ಫೌಂಟನ್ ಪೆನ್ ಶಾಯಿ

ಅಂದೂ ಉತ್ತಮವು, ಇಂದೂ ಉತ್ತಮವು

ಎಂದೆಂದಿಗೂ ಉತ್ತಮವಾಗಿರುವ ಶಾಯಿ ಅಂದರೆ ಇದೊಂದೇ.

ನೀವು ಎಂದೂ ಇದಕ್ಕಿಂತ ಉತ್ತಮ ಶಾಯಿ ಯನ್ನು ಪಡೆಯಲಾರಿರಿ

ಸಾವಿರಾರು ಜನರು ಇದನ್ನು ಉಪಯೋಗಿಸಿ ಖಾತ್ರಿಪಟ್ಟಿರುವರು.

ನಯವಾಗಿದ್ದು ಬರೆಯಲು ಅತೀ ಉತ್ತಮವಾಗಿರುವುದು

ಬಾಟ್ಲಿ 1ಕ್ಕೆ ಆಣೆ 8 ಮಾತ್ರ ಬಾಟ್ಲಿ 1ಕ್ಕೆ ಆಣೆ 8 ಮಾತ್ರ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Manufactured by:—

J. B Dutt & Co, Calcutta,

Sole agent:—

ಪೊಪ್ಯುಲರ್ ಸ್ಟೋರ್ಸ ಮಂಗಳೂರು.

ಡೋಂಗರೇ ಇವರ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನು
ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಆದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ಸಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳ ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಪಥ್ಯರಹಿತವಾದುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಘಾಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ ಗುಳ್ಳೆ, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(1906ರಲ್ಲಿ ಸ್ಥಾಪಿತವಾದುದು.)

ಪ್ರಕಟಣೆ

ಈ ಬ್ಯಾಂಕಿನ ಶಾಖೆಗಳು ತಾ. 19-3-1937ರಲ್ಲಿ (1) ವೆಲ್ಲೂರು (ಉತ್ತರ ಆರ್ಕಾಡು ಜಿಲ್ಲೆ) ಮತ್ತು (2) ಬೈಂದೂರು (ದಕ್ಷಿಣ ಕನ್ನಡ ಜಿಲ್ಲೆ)

ಈ ಎರಡೂ ಸ್ಥಳಗಳಲ್ಲಿ ತೆರೆಯಲ್ಪಟ್ಟಿರುವವು ಈ ಬ್ಯಾಂಕಿನ ಉಡುಪಿಯಲ್ಲಿರುವ ರಿಜಿಸ್ಟರ್ಡ್ ಆಫೀಸನ್ನು ತಾ 19-3-1937ನೇ ಶುಕ್ರವಾರ ಮಸೀದಿ ರಸ್ತೆಯಲ್ಲಿರುವ ನಮ್ಮ ಭವ್ಯವಾದ ಕಟ್ಟಡಕ್ಕೆ (ದಿವಂಗತ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬರು ವಾಸ್ತವಿಸಿದ್ದ ಕಟ್ಟಡ) ಒಯ್ಯಲಾಗಿರುತ್ತದೆ.

Office of the Corporation,
UDIPI,
19th March 1937

M. Srinivas Prabhu,
Manager.

Best Cheap Durable

Use only 515 Red & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by –

The West Coast Soap Factory

ನಮ್ಮ 515 ಕೆಂಪು ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಹೆಮ್ಮೆ. ಅವುಗಳು ೩೦ ವರ್ಷಗಳ ಅನುಭವಸ್ಥರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು! ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agents

Panchmal Krishnaya Shenoy & Son,
Bunder MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯ ಬಾರದು ಎಂದು [illegible] ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುಗಮವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ [illegible] ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮತ್ತು ಸರ್ಟಿಫಿಕೇಟು ಡಾ॥ ಪಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೊಟ್ಟಿರುತ್ತಾರೆ. ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೬-೦-೦ ವಿ. ಪಿ. ಅಣೆ ೮

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಸ್ತುರಿ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ 1-8-0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2 ಶ್ರೀರಾಮ ಸ್ಟೋರ್ಸ್ ಹೌಸ್ ಶ್ರೀರಾಮ ಪೇಟೆ, ಕಾಸರಗೋಡು. 8 ಮೆಸರ್ಸ್ ಕಾಮತ್ ಎಂಡ್ ಕೋ, [illegible] 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲನ್ನು ನಿರೀಕ್ಷಿಸಿರಿ!

?

ಗಿರಾಕಿಗಳಿಗೆ ಒಳ್ಳೇ ಸುಸಂದರ್ಭ!

Sole Agents: The Kerala Tea Syndicate,

PONANI—(S. Malabar.)

Edited Printed & Published By A. S. Kamath at the Sharada Press, Car Street, Mangalore.